ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು

(ಸಮಕಾಲೀನ ಹಿನ್ನೆಲೆಯ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಸಂತೋಷ ಕುಮಾರ ಹೆಚ್.ಬಿ.

ಮಾರ್ಗದರ್ಶಕರು
ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩೨೭೬
೨೦೧೨

ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು

(ಸಮಕಾಲೀನ ಹಿನ್ನೆಲೆಯ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಸಂತೋಷ ಕುಮಾರ ಹೆಚ್.ಬಿ.

ಮಾರ್ಗದರ್ಶಕರು
ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಸಂಶೋಧಕರ ಪ್ರಮಾಣ ಪತ್ರ

ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು (ಸಮಕಾಲೀನ ಹಿನ್ನೆಲೆಯ ಅಧ್ಯಯನ) ಎಂಬ ಮಹಾಪ್ರಬಂಧವನ್ನು ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಸಹಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಚರಿತ್ರೆ ವಿಭಾಗ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Santhosh

ಸ್ಥಳ : ವಿದ್ಯಾರಣ್ಯ

ದಿನಾಂಕ : 13.09.2012

(ಸಂತೋಷ ಕುಮಾರ ಹೆಚ್.ಬಿ.)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು (ಸಮಕಾಲೀನ ಹಿನ್ನೆಲೆಯ ಅಧ್ಯಯನ) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಂತೋಷ ಕುಮಾರ ಹೆಚ್.ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 13.09.2012

(ಡಾ. ಎನ್. ಚಿನ್ನಸ್ವಾಮಿ ಸೋಸಲೆ)
ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಾ.ಎನ್.ಚಿನ್ನಸ್ವಾಮಿ ಸೋಸಲೆ
ಅಸೋಸಿಯೇಟ್ ಪ್ರೊಫೆಸರ್
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ, ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಪ್ರಸ್ತಾವನೆ, ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಯಾವುದೇ ಒಂದು ರಾಷ್ಟ್ರದ ಇತಿಹಾಸವನ್ನು ಅವಲೋಕಿಸಿದಾಗ ಆಯಾ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ಸಮಸ್ಯೆಗಳ ಕಾರಣಗಳಿಂದಾಗಿ ಚಳವಳಿಗಳು ಹುಟ್ಟಿಕೊಂಡು ನಿರಂತರವಾಗಿ ನಡೆದು ಬಂದಿರುವುದು ಕಂಡು ಬರುತ್ತದೆ. ಪ್ರತಿಯೊಂದು ಚಳವಳಿಯೂ ಆಯಾ ದೇಶದ ಆಯಾ ಭಾಗಗಳ ಧರ್ಮ, ಜಾತಿ ಸಮುದಾಯಗಳ ಹಿನ್ನೆಲೆಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿಗಾಗಿ ನಡೆದಿವೆ. ತಮ್ಮ ತಮ್ಮ ಸಮುದಾಯಗಳ ಅಸ್ತಿತ್ವದ ಉಳಿವಿಗಾಗಿ, ಸಮಾನತೆಗಾಗಿ ಹೋರಾಟಗಳು ನಿರಂತರವಾಗಿರುತ್ತವೆ. ಸಮಾಜದಲ್ಲಿನ ಅಸಮಾನತೆಯನ್ನು, ಅನ್ಯಾಯವನ್ನು, ಶೋಷಣೆಯನ್ನು ಪ್ರತಿಭಟಿಸಿ ತಮ್ಮ ಅಗತ್ಯಗಳನ್ನು ಪಡೆಯುವಲ್ಲಿ ಸೈದ್ಧಾಂತಿಕವಾಗಿ ಹೋರಾಟಗಳು ಸೃಷ್ಟಿಗೊಳ್ಳುತ್ತವೆ ಮತ್ತು ಪ್ರತಿಯೊಂದು ಹೋರಾಟಗಳು ತಮ್ಮದೇ ಆದ ಸಿದ್ಧಾಂತ, ಗುರಿ ಮಾರ್ಗವನ್ನು ಉದ್ದೇಶಗಳನ್ನಿಟ್ಟುಕೊಂಡು ಸಾಗುತ್ತವೆ. ಹೀಗೆ ಸಾಗುವ ಪ್ರಕ್ರಿಯೆಯಲ್ಲಿ ಹಲವು ಸ್ವರೂಪಗಳನ್ನು ಪಡೆದು ಹಲವು ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಅದರಲ್ಲೂ ಭಾರತದ ಸಂದರ್ಭದಲ್ಲಿ ಸ್ವಾತಂತ್ರ್ಯದ ಚಳವಳಿ ಮತ್ತು ಸಾಮಾಜಿಕ ಚಳವಳಿಗಳು ಬೇರೆ ಬೇರೆ ಸ್ತರದಲ್ಲಿ ನಡೆದಿವೆ. ಈ ರೀತಿ ನಡೆದ ಹೋರಾಟಗಳಿಂದ, ಚಳವಳಿಗಳಿಂದ ಭಾರತದ ಸ್ವಾತಂತ್ರ್ಯ ಸಂಘರ್ಷ ಇಂದು ಒಂದು ಘಟ್ಟ ಮುಟ್ಟಿದೆ.

ನಮ್ಮ ರಾಷ್ಟ್ರದ ಸ್ವತಂತ್ರ ಸಾರ್ವಭೌಮ ಜೀವನವನ್ನು ಕಟ್ಟುವ ಸುವರ್ಣಸಂಧಿ ನಮಗಿಂದು ಒದಗಿ ಬಂದಿದೆ. ಇದೊಂದು ಸುವರ್ಣಾವಕಾಶ ಆಗಿರುವಂತೆಯೇ ಒಂದು ಗಂಭೀರ ಸವಾಲು ಕೂಡಾ ಆಗಿದೆ. ನಮ್ಮ ಜೀವನವನ್ನು ಯಾವ ಆದರ್ಶದ ಬೆಳಕಿನಲ್ಲಿ, ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಬೇಕೆನ್ನುವ ಸವಾಲಿಗೆ ನಾವಿಂದು ಉತ್ತರಿಸಬೇಕಾಗಿದೆ. ಅದರಲ್ಲೂ ಭಾರತದಂತಹ ವೈವಿಧ್ಯಮಯ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಪಾತ್ರ ಅತ್ಯಂತ ಮಹತ್ವವನ್ನು ಪಡೆದಿದೆ. ಸಮಾಜದ ಕಟ್ಟ ಕಡೆಯ ಮನುಷ್ಯ ಕೂಡಾ ನೆಮ್ಮದಿಯಿಂದ ಬದುಕಬೇಕೆನ್ನುವುದು ಪ್ರಜಾಪ್ರಭುತ್ವದ ಆಶಯ. ಆದರೆ ಜಾರಿಯಲ್ಲಿರುವ ವ್ಯವಸ್ಥೆ, ಜಾತಿ, ಪ್ರದೇಶ, ಬಡತನ, ಧರ್ಮ ಇತ್ಯಾದಿಗಳ ಆಧಾರದ ಮೇಲೆ ಹರಡಿ

ಹಂಚಿ ಹೋಗಿರುವ ದುರ್ಬಲ ಸಮುದಾಯಗಳು ನಿರಾತಂಕವಾಗಿ ಬದುಕುವುದಕ್ಕೆ ಈ ಅಂಶಗಳು ಅಡ್ಡಿಯಾಗಿವೆ. ಇಂತಹ ಅವ್ಯವಸ್ಥೆಗಳನ್ನು ನಿವಾರಿಸಿ ಸಮಾನತೆಯನ್ನು ಸ್ವಾತಂತ್ರ್ಯವನ್ನು ಜಾರಿಗೆ ತರುವ ಧ್ಯೇಯದಿಂದ ಅನೇಕ ಹೋರಾಟಗಳು ಚಳವಳಿಗಳು ನಡೆದಿವೆ ಮತ್ತು ನಡೆಯುತ್ತಿವೆ. ಇಂತಹ ಚಳವಳಿಗಳ ಸಾಲಿನಲ್ಲಿ ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ಭಿನ್ನತೆಯೊಂದಿಗೆ ಚಳವಳಿಯಲ್ಲಿ ತೊಡಗಿಕೊಂಡಿರುವ ಪ್ರದೇಶವೇ ಹೈದರಾಬಾದ್ ಕರ್ನಾಟಕ.

ಕರ್ನಾಟಕದ ಒಂದು ಭಾಗವಾಗಿರುವ ಹೈದರಾಬಾದ್ ಕರ್ನಾಟಕ ಪ್ರದೇಶವು ಇತ್ತೀಚಿಗೆ ಅತ್ಯಂತ ಹೆಚ್ಚು ಚರ್ಚೆಗೆ ಗಂಭೀರವಾದ ಚಿಂತನೆಗೆ ಪ್ರಾದೇಶಿಕ ಅಸಮಾನತೆಗೆ ಒಳಗಾಗಿರುವ ಪ್ರದೇಶವಾಗಿದೆ. ಹಾಗೆಯೇ ಕರ್ನಾಟಕದ ಅತ್ಯಂತ ಹಿಂದುಳಿದಿರುವ ಪ್ರದೇಶವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ೧೯೪೭ ಆಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯ ಗಳಿಸಿ ರಾಷ್ಟ್ರದಾದ್ಯಂತ ಸ್ವಾತಂತ್ರ್ಯೋತ್ಸವನ್ನು ಆಚರಿಸಿದ ದಿನವಾಗಿದೆ. ಆದರೆ ಅಂದು ಹೈದಾರಾಬಾದಿನ ನಿಜಾಮ ಮಾತ್ರ ಭಾರತದಲ್ಲಿ ವಿಲೀನವಾಗದೇ ಹೈದರಾಬಾದ್ ಕರ್ನಾಟಕಕ್ಕೆ ಸ್ವಾತಂತ್ರ್ಯ ನೀಡಲಿಲ್ಲ. ಆಗ ಭಾರತದ ಅಂದಿನ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರು ಸೈನಿಕ ಕಾರ್ಯಾಚರಣೆ ಮೂಲಕ ೧೯೪೮ ಸೆಪ್ಟೆಂಬರ್ ೧೭ ರಂದು ಹೈದರಾಬಾದ್ ಕರ್ನಾಟಕವನ್ನು ಮುಕ್ತಿಗೊಳಿಸಿದರು. ಅಂದಿನಿಂದ ಪ್ರತಿ ವರ್ಷ ಆಗಸ್ಟ್ ೧೫ರ ಬದಲಾಗಿ ಸೆಪ್ಟೆಂಬರ್ ೧೭ ರಂದು 'ಹೈದರಾಬಾದ್ ಕರ್ನಾಟಕ ವಿಮೋಚನಾ ದಿನ' ಎಂದು ಆಚರಿಸಲಾಗುತ್ತಿದೆ. ಹೀಗೆ ತನ್ನ ಅಸ್ತಿತ್ವವನ್ನೇ ವಿಭಿನ್ನವಾಗಿ ಗುರುತಿಸಿಕೊಂಡಿರುವಂತಹ ಕರ್ನಾಟಕದ ಒಂದು ಭಾಗವೇ ಹೈದರಾಬಾದ್ ಕರ್ನಾಟಕ.

ಸ್ವಾತಂತ್ರ್ಯಪೂರ್ವದ ಕೊನೆಯ ಎರಡೂವರೆ ದಶಕಗಳ ಅವಧಿಯಲ್ಲಿ ಆಳಿದ ನಿಜಾಮರ ಅಧೀನದಲ್ಲಿದ್ದ ಬೀದರ್, ಗುಲಬರ್ಗಾ (ಅವಿಭಜಿತ), ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನೊಳ ಗೊಂಡ ಈ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುತ್ತದೆ. ಆಡಳಿತಾತ್ಮಕ ಅನುಕೂಲಕ್ಕಾಗಿ ಏಕೀಕರಣ ಸಂದರ್ಭದಲ್ಲಿ ಮದ್ರಾಸ್ ಪ್ರಾಂತ್ಯದಿಂದ ವರ್ಗಾವಣೆಯಾಗಿ ಕರ್ನಾಟಕವನ್ನು ಸೇರಿದ ಬಳ್ಳಾರಿ ಜಿಲ್ಲೆಯನ್ನು ಸಹಾ ಗುಲಬರ್ಗಾ ವಿಭಾಗಕ್ಕೆ ಸೇರಿಸಲಾಗಿದೆ. ಭಾಷಾವಾರು ಪ್ರಾಂತ್ಯಗಳು ರಚನೆಯಾದ ಸಂದರ್ಬದಲ್ಲಿ, ೧೯೫೬ ನವೆಂಬರ್ ೧ ರಂದು ಫಜಲ್‌ಅಲಿ ವರದಿಯಂತೆ ಬೀದರ್, ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಅಖಂಡ ಮೈಸೂರು ರಾಜ್ಯದಲ್ಲಿ ಸೇರಿಕೊಂಡವು. ೧೯೭೩ರಲ್ಲಿ ಆಗಿನ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸ್ ಅವರ ಸರಕಾರವು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವ ಮೂಲಕ ಒಂದು ದಿಟ್ಟ ಹಾಗೂ ಐತಿಹಾಸಿಕ ಕ್ರಮಕೈಗೊಂಡರು. ಏಕೀಕರಣಗೊಂಡು ಹಲವಾರು ದಶಕಗಳೇ ಗತಿಸಿದರೂ ಇಂದಿಗೂ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ಭಾಗವನ್ನು ನಾವು ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಗುರುತಿಸಿಕೊಂಡಿದ್ದೇವೆ. ಮೂಲದಲ್ಲಿ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ್ದ ಹಾಗೂ ಮೈಸೂರು ಪ್ರಾಂತ್ಯಕ್ಕೆ ಸೇರಿದ್ದ ಪ್ರದೇಶಗಳು ತಮ್ಮ ಮೂಲ ನಾಮಗಳನ್ನು ಕಳಚಿಕೊಂಡಿದ್ದರೆ,

ಹೈದರಾಬಾದ್ ಕರ್ನಾಟಕ ಭಾಗದ ಪ್ರದೇಶಗಳು ಮಾತ್ರ ಮೂಲ ಹೆಸರನ್ನು ಕಳಚಿಕೊಳ್ಳದೇ ಹಾಗೆಯೇ ಮುಂದುವರೆದಿದೆ. ಹೈದರಾಬಾದ್ ನಿಜಾಮನ ಪ್ರಭುತ್ವದಿಂದ ಪ್ರಜಾಪ್ರಭುತ್ವದ ಜನ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರಗೊಂಡಾಗ ಅಖಂಡ ಕರ್ನಾಟಕ ಮತ್ತು ಅದರ ಸಮೃದ್ಧಿಯ ಕನಸು ಕಂಡ ಈ ಭಾಗದ ಜನರಿಗೆ ಬದಲಾವಣೆಯು ನೆಮ್ಮದಿ ಮತ್ತು ಸುಧಾರಣೆಯನ್ನು ತರಲಿಲ್ಲ. ಬದಲಾಗಿ ನಿಜಾಂ ಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ನಡೆದು ಬಂದ ದಾರಿ ಅಸಮಾನತೆಯ ದಾರಿಯಾಯಿತು ಇಲ್ಲಿನ ಜನರ ಬದುಕು ಅಭಿವೃದ್ಧಿಯ ಚಾಲನೆಗೆ ಒಳಪಡದೆ ನಿಂತ ನೀರಾಯಿತು. ಭಾಷಾವಾರು ರಾಜ್ಯ ರಚನೆಯಾಗಿ ಅರ್ಧಶತಮಾನದ ನಂತರವೂ ಇಂದು ರಾಜ್ಯದ ಒಂದು ಭಾಗವು ಪ್ರಗತಿ ಹೊಂದಿ ಸಮರ್ಥವಾಗಿದ್ದರೆ ಅದೇ ರಾಜ್ಯದ ಇನ್ನೊಂದು ಭಾಗವು ಅಭಿವೃದ್ಧಿಯಿಂದ ವಂಚಿತವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಅತೀ ಹಿಂದುಳಿದಿದ್ದು ಇನ್ನೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ.

ಹೈದರಾಬಾದ್ ನಿಜಾಮನ ಪ್ರಾಂತ್ಯದಿಂದ ಕರ್ನಾಟಕಕ್ಕೆ ವರ್ಗಾವಣೆಯಾದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಪ್ರದೇಶಗಳು ನಿಜಾಮನ ಆಳ್ವಿಕೆಗೆ ಒಳಪಟ್ಟಾಗಲೇ ನಿರ್ಲಕ್ಷ್ಯಕ್ಕೆ ಅಸಮಾನತೆಗೆ ಒಳಪಟ್ಟಿದ್ದವು. ವಿಶಾಲ ಕರ್ನಾಟಕಕ್ಕೆ ಸೇರ್ಪಡೆ ಆದ ನಂತರವೂ ಈ ಪ್ರದೇಶಗಳ ಅಭಿವೃದ್ಧಿಯಲ್ಲಿ ಸ್ಥಾನಮಾನದಲ್ಲಿ ಬದಲಾವಣೆ ಆಗದೆ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಪಡೆದುಕೊಂಡಿದೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ನಿಸರ್ಗದತ್ತ ಅಂಶಗಳ ಜೊತೆಗೆ ಮಾನವ ನಿರ್ಮಿತ ಅಂಶಗಳು ಬಹುಮಟ್ಟಿಗೆ ಗೋಚರಿಸುತ್ತವೆ. ಆಳಿದ ಸರಕಾರಗಳ ಜನಪ್ರತಿನಿಧಿಗಳ ಪ್ರಾಮಾಣಿಕ ಕಾಳಜಿ ಹಾಗೂ ಸಂಕಲ್ಪದ ಕೊರತೆಯಿಂದ ಸಂವಿಧಾನಬದ್ಧವಾಗಿ ದೊರಕಬಹುದಾದ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲವಾಗಿದೆ. ಇಲ್ಲಿನ ಅಭಿವೃದ್ಧಿಗಾಗಿ, ಅಸಮಾನತೆಯ ನಿವಾರಣೆಗಾಗಿ ಸರಕಾರದಿಂದ ೧೯೯೧ರಲ್ಲಿ 'ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಲಾಯಿತು. ನಂತರ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ಅಧ್ಯಯನ ಮಾಡಿ ಅವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಸೂಚಿಸಲು ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರಿ ಸಮಿತಿಯನ್ನು (೨೦೦೨) ರಚಿಸಿ, ಅದರ ವರದಿಯನ್ನು ಪಡೆಯಲಾಯಿತು. ಆದರೆ ಇಂತಹ ಕ್ರಮಗಳಿಂದ ತ್ವರಿತ ಬದಲಾವಣೆ, ಅಭಿವೃದ್ಧಿ ಕಾಣದೆ ಅಸಮಾಧಾನಗೊಂಡ ಕೆಲವು ಮುಖಂಡರು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನಿಟ್ಟು ಹೋರಾಟ ಮಾಡುವ ಹಾದಿಯಲ್ಲಿದ್ದರು. ಹಾಗೆಯೇ ಸಂವಿಧಾನದ ೩೭೧ನೇ ಕಲಂನ ಪ್ರಯೋಜನ ಪಡೆಯುವ ಬಗ್ಗೆಯೂ ಹೋರಾಟವು ಆರಂಭವಾಗಿ ಇಂದು ಅದರ ಪ್ರಯೋಜನ ಪಡೆಯುವ ಹಂತದಲ್ಲಿದೆ.

ಹೀಗೆಯೇ ಹೈದರಾಬಾದ್ ಕರ್ನಾಟಕದ ಆರ್ಥಿಕ ಪರಿಸ್ಥಿತಿಯ ಚಿತ್ರಣವನ್ನು ನೀಡುವ ಮೂಲಕ ಇಲ್ಲಿನ ಅಸಮಾನತೆಗೆ ಹಿಂದುಳಿದಿರುವಿಕೆಗೆ ಕಾರಣಗಳೇನು ದುಡಿಯುವ ವರ್ಗ ಉದ್ಯೋಗ ಅರಸಿ ವಲಸೆ ಹೋಗುತ್ತಿರುವುದೇಕೆ ಸಾಮಾಜಿಕವಾಗಿ ಪೂರ್ಣ ಹಿಂದುಳಿದಿರಲು ಕಾರಣಗಳೇನು ಎನ್ನುವ ಅಂಶಗಳ ಬಗ್ಗೆ ಸಂಶೋಧನೆ ಅತ್ಯಗತ್ಯವಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲೂ ಸಹ ಇಲ್ಲಿ ವಿವಿಧ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ಗಮನಿಸಿದರೆ ಸಾಕ್ಷರತೆಯ ಪ್ರಮಾಣ ಇಳಿಮುಖವಾಗುತ್ತಿರುವುದು, ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುವುದು, ನೀರಾವರಿ ಯೋಜನೆಗಳು ಅಪೂರ್ಣವಾಗಿರುವುದು ಹಾಗೂ ಇಂತಹ ಅನೇಕ ಅಂಶಗಳು ಇಲ್ಲಿನ ಹಿಂದುಳಿದಿರುವಿಕೆಗೆ ಕಾರಣವಾಗಿರುವುದನ್ನು ಗಮನಿಸಬಹುದಾಗಿದೆ. ಹಾಗೆಯೇ ಈ ಪ್ರದೇಶದಲ್ಲಿ ಪ್ರಬಲ ಜಾತಿ ವರ್ಗವು ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಹೇಗೆ ಪ್ರಭುತ್ವದ ಜೊತೆ ಹೊಂದಾಣಿಕೆಯನ್ನು ಮಾಡಿಕೊಂಡಿತು ಹಾಗೂ ಇಂತಹ ವ್ಯವಸ್ಥೆಯಲ್ಲಿ ಪ್ರಯೋಜನ ಪಡೆದ ವರ್ಗ ಯಾವುದು ಮತ್ತು ಶೋಷಣೆಗೆ ಒಳಗಾದ ವರ್ಗ ಯಾವುದು ಎನ್ನುವ ವಿಷಯ ಸಂಶೋಧನೆಗೆ ಸೂಕ್ತವಾಗಿದೆ.

ತೀರಾ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳ ಪಾತ್ರದ ಬಗ್ಗೆ ಪ್ರಸ್ತುತ ಅಧ್ಯಯನ ಮಾಡಬೇಕಾದ ಅವಶ್ಯಕತೆ ಬಹಳ ಇದೆ. ಬಡತನ ಅನಕ್ಷರತೆ ನಿರುದ್ಯೋಗ, ಜಾತಿ ಪ್ರಾಬಲ್ಯ ಮತ್ತು ಜಮೀನ್ದಾರಿ ಪದ್ಧತಿಗಳು ಇಂದಿಗೂ ಜಾರಿಯಲ್ಲಿರುವ ಈ ಪ್ರದೇಶದಲ್ಲಿ ವಿವಿಧ ಮಾದರಿಯ, ವಿವಿಧೋದ್ದೇಶದ, ವಿವಿಧ ಸ್ವರೂಪದ ಚಳವಳಿಗಳು ಹಾಗೂ ಪ್ರಜಾಪ್ರಭುತ್ವವಿರುವ ಇಂದಿನ ಹಂತದಲ್ಲಿ ಚಳವಳಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಇಲ್ಲಿ ಸಮಯ ಸಂದರ್ಭಕ್ಕೆ ಹಾಗೂ ಆಯಾ ಸನ್ನಿವೇಶಕ್ಕೆ ತಕ್ಕಂತೆ ಚಳವಳಿಗಳು ತಲೆ ಎತ್ತಿ ಕಾಲಕ್ರಮೇಣ ತನ್ನ ಚುರುಕುತನ ಕಳೆದುಕೊಂಡಿದ್ದರೆ ಇನ್ನೂ ಕೆಲವು ಚಳವಳಿಗಳು ಜೀವಂತವಾಗಿದ್ದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಸಾಗುತ್ತಿವೆ. ಇಂತಹ ಪ್ರದೇಶದಲ್ಲಿ ಅಸಮಾನತೆ, ಶೋಷಣೆ, ದೌರ್ಜನ್ಯ, ನಿರ್ಲಕ್ಷ್ಯಗಳನ್ನು ವಿರೋಧಿಸಿ ಆರಂಭವಾದ ಹೋರಾಟಗಳು ಅದರಲ್ಲೂ ಕಾರ್ಮಿಕ, ರೈತ, ದಲಿತ ಹಾಗೂ ಮಹಿಳಾ ಚಳವಳಿಗಳ ಹುಟ್ಟು, ಬೆಳವಣಿಗೆ ಮತ್ತು ಇವುಗಳ ಪರಿಣಾಮಗಳನ್ನು ಅಧ್ಯಯನ ಮಾಡುವ, ವಿಶ್ಲೇಷಿಸುವ ಅವಶ್ಯಕತೆ ಇದೆ. ಹಾಗೆಯೇ ಚಳವಳಿಗಳು ಸಾಮಾಜಿಕ ಬದಲಾವಣೆ ತರುವಲ್ಲಿ ನಿರ್ವಹಿಸಿದ ಪಾತ್ರ ಇತಿಹಾಸ ದಾಖಲಾತಿಗೆ ಅರ್ಹವಾಗಿದೆ. ಸ್ವಾತಂತ್ರ್ಯದ ನಂತರವೂ ಚಳವಳಿಗಳು ನಿರೀಕ್ಷಿತ ಮಟ್ಟದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜಾಗೃತಿಯನ್ನು ಏಕೆ ಮೂಡಿಸಿಲ್ಲ ಎನ್ನುವ ಅಂಶವೂ ಸಂಶೋಧಕರಿಗೆ ವಸ್ತು ವಿಷಯವಾಗಿದೆ. ಇಂತಹ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ಚಳವಳಿಗಳ ಬಗ್ಗೆ ಇದುವರೆಗೆ ಆಗಿರುವ ಅಧ್ಯಯನಗಳು ಯಾವುವು, ಇದುವರೆಗೆ ಈ ವಿಷಯದ ಬಗ್ಗೆ ಯಾವ ದೃಷ್ಟಿಕೋನದಲ್ಲಿ ಅಧ್ಯಯನಗಳಾಗಿವೆ. ಪ್ರಸ್ತುತ ಸಂಶೋಧನೆಯ ದೃಷ್ಟಿಕೋನ ಏನು ಎನ್ನುವುದರ ತುಲನಾತ್ಮಕ ಅಧ್ಯಯನವನ್ನು ಕೈಗೊಳ್ಳಲು ಪ್ರಯತ್ನಿಸಲಾಗಿದೆ.

ಹಾಗೆಯೇ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಾಮಾಜಿಕ ಚಳವಳಿಗಳಿಗೆ ಕಾರಣವೇನು, ಇಂತಹ ಚಳವಳಿಗಳ ಹುಟ್ಟು, ಬೆಳವಣಿಗೆ ಮತ್ತು ಪರಿಣಾಮಗಳು ಏನು ಎನ್ನುವುದರ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹಾಗೆಯೇ ಇಲ್ಲಿನ ಚಳವಳಿಗಳು ಎಷ್ಟರಮಟ್ಟಿಗೆ ಯಶಸ್ವಿಯಾಗಿವೆ, ಎಷ್ಟರಮಟ್ಟಿಗೆ ಸಮಾಜ ಪರಿವರ್ತನೆಗೆ ಕಾರಣವಾಗಿವೆ ಮತ್ತು ಇಲ್ಲಿನ ಚಳವಳಿಗಳು ಯಾವ ಅಂಶದಲ್ಲಿ ವಿಫಲವಾಗಿವೆ

ಮತ್ತು ವಿಫಲವಾಗಲು ಕಾರಣವೇನು ಮತ್ತು ಯಾರು ಕಾರಣರು ಎನ್ನುವುದಾಗಿದೆ. ಸ್ವಾತಂತ್ರ್ಯದ ನಂತರ ಚಳವಳಿಗಳು ಯಾವ ಹಂತದಲ್ಲಿ ಸೋತಿವೆ, ವಿಫಲತೆಗೆ ಕಾರಣ ಜನ ನಾಯಕರೇ, ಸಂಘ-ಸಂಸ್ಥೆಗಳೇ ಮತ್ತು ಪ್ರಸ್ತುತ ಚಳವಳಿಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಮತ್ತು ಸಾಗಬೇಕಾಗಿದೆ ಎನ್ನುವ ವಿಷಯವ ನ್ನಾಧರಿಸಿ, ಪ್ರತಿಯೊಂದು ಅಂಶವನ್ನು ವಿಮರ್ಶೆಗೆ ಒಳಪಡಿಸಿ, ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ.

ಚಳವಳಿಗಳ ಬಗ್ಗೆ ಅಧ್ಯಯನ ಮತ್ತು ಚರ್ಚೆ ಮಾಡುವಾಗ ಎದುರಾಗುವ ಮೊದಲ ಪ್ರಶ್ನೆ ಚಳವಳಿ ಎಂದರೇನು ಎನ್ನುವುದಾಗಿದೆ. ಚಳವಳಿಯ ಹಿಂದೆ ಹೋರಾಟ, ಹೋರಾಟದ ಹಿಂದೆ ಅಸಮಾಧಾನ, ಅಸಹನೆ ಮತ್ತು ಆಕ್ರೋಶಗಳಿರುತ್ತವೆ. ಇವಲ್ಲದೆ ಪ್ರತಿರೋಧ, ಪ್ರತಿಭಟನೆಗಳಿಲ್ಲದೆ ಚಳವಳಿಗಳು ಹುಟ್ಟುವುದಿಲ್ಲ. ಇಲ್ಲಿ ಶೋಷಣೆ ಮತ್ತು ಪ್ರತಿರೋಧ ಎನ್ನುವುದು ಕ್ರಿಯೆಗೆ ಪ್ರತಿಕ್ರಿಯೆ ಎಂಬ ನಿಸರ್ಗ ನಿಯಮದಂತಿದೆ ಹಾಗೂ ಇದು ನಿಸರ್ಗ ನಿಯಮವಷ್ಟೇ ಅಲ್ಲ, ಸಾಮಾಜಿಕ ನಿಯಮವು ಹೌದು.

'ಚಳವಳಿ' ಎಂಬುದು ಇಂಗ್ಲೀಷಿನ 'ಮೂವ್‌ಮೆಂಟ್' ಪದದ ಅನುವಾದ ಕನ್ನಡ ಪದವಾಗಿದೆ. ಹಳೆಯ ಫ್ರೆಂಚ್ ಭಾಷೆಯ ಕ್ರಿಯಾಪದವಾದ 'ಮೂವಿಅರ್' ಎಂಬುದರಿಂದ 'ಮೂವ್‌ಮೆಂಟ್' ಎನ್ನುವ ಇಂಗ್ಲೀಷ್ ಪದವು ಉತ್ಪತ್ತಿಯಾಗಿದೆ. ಆಕ್ಸ್‌ಫರ್ಡ್ ಇಂಗ್ಲೀಷ್ ಶಬ್ದಕೋಶದಲ್ಲಿ 'ಮೂವ್‌ಮೆಂಟ್' ಪದವನ್ನು ನಿರ್ದಿಷ್ಟಗೊಳಿಸಿದ ವಿಶೇಷ ಗುರಿಯ ಕಡೆಗೆ ತಲುಪಲು ವ್ಯಕ್ತಿಗಳ ಗುಂಪೊಂದು ನಿರಂತರವಾಗಿ ನಡೆಸುವ ಚಟುವಟಿಕೆಗಳೇ ಸಾಮಾಜಿಕ ಚಲನೆಗಳಾಗಿವೆ ಎಂದು ಅರ್ಥೈಸಲಾಗಿದೆ. 'ಚಳವಳಿ' ಎನ್ನುವ ಪದವನ್ನು ಕಾಲಕ್ಕೆ ತಕ್ಕಂತೆ, ಸಂದರ್ಭಕ್ಕೆ ತಕ್ಕಂತೆ ವಿಭಿನ್ನ ಅರ್ಥಗಳಲ್ಲಿ ಬಳಸಲಾಗುತ್ತದೆ. ಚಳವಳಿ ಎನ್ನುವ ಪದವೇ ವಿಶೇಷವಾಗಿದ್ದು, ಇಡೀ ವ್ಯವಸ್ಥೆಯನ್ನೇ ಅಲುಗಾಡಿಸಿ ಪರ್ಯಾಯ ಆಲೋಚನೆ ಮೂಲಕ, ಪರ್ಯಾಯ ವ್ಯವಸ್ಥೆ ಕಟ್ಟುವ ಮಹತ್ತರ ಶಕ್ತಿಯನ್ನು ಹೊಂದಿದೆ. ಹೀಗಾಗಿಯೇ ಚಳವಳಿಯು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹಕ್ಕೋತ್ತಾಯದ ಅಸ್ತ್ರವಾಗಿ ಮಹತ್ವ ಪಡೆದಿದೆ. ಹೀಗೆ ಸಾಮಾಜಿಕ ಚಳವಳಿ ಹುಟ್ಟಿಕೊಂಡ ಪ್ರದೇಶದ ಇಡೀ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ.

ಸಾಮಾಜಿಕ ಚಳವಳಿಗಳ ಉಗಮಕ್ಕೆ ಮೂಲಭೂತ ಕಾರಣವೇನೆಂದರೆ ಜನರಲ್ಲಿ ತಮ್ಮ ಪರಿಸ್ಥಿತಿಯ ಬಗ್ಗೆ ಹುಟ್ಟುವ ಅಸಂತೋಷ ತಮಗೆ ಮೂಲಭೂತವಾಗಿ ಸಿಗಬೇಕಾಗಿದ್ದ, ನ್ಯಾಯಯುತವಾಗಿ ದೊರಕ ಬೇಕಾಗಿದ್ದುದು ದೊರಕದಿದ್ದಾಗ ತಮಗೆ ವಂಚನೆಯಾಗಿದೆ ಎಂದು ಅರಿವಾದಾಗ ಪ್ರತಿಭಟನೆ, ಹೋರಾಟ, ಚಳವಳಿ ಆರಂಭವಾಗಲು ಕಾರಣವಾಗುತ್ತವೆ. ವೈವಿಧ್ಯಮಯ ಭಾಷೆ, ಧರ್ಮ ಜಾತಿಗಳನ್ನು ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಸಾಮಾಜಿಕ ಚಳವಳಿಗಳ ವರ್ಗೀಕರಣವನ್ನು ಹಲವಾರು ಅಂಶಗಳನ್ನಾಧರಿಸಿ ಮಾಡಬೇಕಾಗುತ್ತದೆ. ಚಳವಳಿಯೊಂದು ಹುಟ್ಟಿಕೊಂಡ ಮೂಲ ಸನ್ನಿವೇಶಗಳನ್ನು ಆಧರಿಸಿ ಈ ಚಳವಳಿ ಗಳನ್ನು ಗುರುತಿಸುವಿಕೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗುತ್ತದೆ. ಹಾಗೆಯೆ ಚಳವಳಿಯೊಂದು ಏಕೆ ಹುಟ್ಟಿಕೊಳ್ಳುತ್ತದೆ ಅದಕ್ಕೆ ಪ್ರೇರಣೆ ನೀಡಿದ ಶಕ್ತಿಗಳಾವುವು ಚಳವಳಿಯೊಂದರ ಹುಟ್ಟಿನ ಹಿಂದೆ ಇರುವ

ಸಿದ್ಧಾಂತಗಳಾವುವು, ಯಾವ ಆದರ್ಶಗಳ ಹಿನ್ನೆಲೆಯಲ್ಲಿ ಯಾವ ನಾಯಕರ ನೇತೃತ್ವದಲ್ಲಿ ಚಳವಳಿ ನಡೆಯಿತು ಎನ್ನುವುದನ್ನು ನೋಡಿದಾಗ ಚಳವಳಿಯ ಉಗಮ ಮತ್ತು ಸ್ವರೂಪ ತಿಳಿದು ಬರುತ್ತದೆ.

ಪ್ರತಿಯೊಂದು ಚಳವಳಿಗಳು ಕೆಲವು ತತ್ವಾದರ್ಶನಗಳನ್ನು ಹೊಂದಿರುತ್ತವೆ. ತತ್ವಾದರ್ಶಗಳಿಲ್ಲದೆ ಚಳವಳಿಗಳು ಹುಟ್ಟಲಾರವು. ಚಳವಳಿಯ ಉದ್ದೇಶವೇನು, ಈಗಿರುವ ವ್ಯವಸ್ಥೆಯ ಉದ್ದೇಶಗಳೇನು, ದೋಷರಹಿತ ಸಮಾಜವನ್ನು ಸ್ಥಾಪಿಸುವುದು ಹೇಗೆ ಎಂಬುದನ್ನು ತಿಳಿಸಿ ತತ್ವಾದರ್ಶಗಳು ಜನರಿಗೆ ಮಾರ್ಗದರ್ಶನ ಮಾಡುತ್ತವೆ. ಎಲ್ಲಾ ಜನರನ್ನು ತತ್ವಾದರ್ಶಗಳಿಂದ ಬಂಧಿಸಿ, ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತವೆ. ಸಾಮಾಜಿಕ ಚಳವಳಿಯ ಉದ್ದೇಶವು ಜಾಗೃತಿಯ ಮುಖಾಂತರ ಸಮಾಜವನ್ನು ಸುಧಾರಣೆಯತ್ತ ಒಯ್ಯುವ ಉದ್ದೇಶ ಹೊಂದಿರುತ್ತವೆ. ಹಾಗೆಯೇ ಜಾತಿರಹಿತ, ಶೋಷಣೆರಹಿತ, ವರ್ಗರಹಿತ ಸಮಾಜ ಕಟ್ಟುವ ಮತ್ತು ಸಾಮಾನ್ಯ ಜನರ ಅದರಲ್ಲೂ ವಿಶೇಷವಾಗಿ ಹಿಂದುಳಿದ ಮತ್ತು ದಲಿತರ ಹಕ್ಕುಗಳನ್ನು ಸಂರಕ್ಷಿಸಿ ಮಾನವೀಯತೆ ಮತ್ತು ಆಧುನಿಕರಣದತ್ತ ಸಮಾಜವನ್ನು ಕೊಂಡೊಯ್ಯುವುದು ಚಳವಳಿಯ ಉದ್ದೇಶವಾಗಿರುತ್ತದೆ.

ಚಳವಳಿಗಳ ಗುರಿ ತತ್ವ ಉದ್ದೇಶಗಳ ಆಧಾರದ ಮೇಲೆ ಅವುಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ಪ್ರಸ್ತುತ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮೂಲನೆಗೊಳಿಸಿ ಹೊಸ ವ್ಯವಸ್ಥೆಯನ್ನು ತರುವ ಉದ್ದೇಶ ಹೊಂದಿರುವ ಪ್ರಕಾರದ ಹೋರಾಟವನ್ನು ಕ್ರಾಂತಿಕಾರಿ ಚಳವಳಿ ಎಂದು ಕರೆದರೆ, ಪ್ರಸ್ತುತ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳನ್ನು ತರುವ ಉದ್ದೇಶ ಹೊಂದಿರುವ ಪ್ರಕಾರದ ಹೋರಾಟಗಳನ್ನು ಸುಧಾರಣಾವಾದಿ ಚಳವಳಿಗಳೆನ್ನುತ್ತಾರೆ. ೧೭೮೯ರ ಫ್ರಾನ್ಸ್ ಕ್ರಾಂತಿ, ೧೯೧೭ರ ರಷ್ಯಾದ ಕ್ರಾಂತಿ, ಚೀನಾದ ಕಮುನಿಸ್ಟ್ ಕ್ರಾಂತಿ, ಭಾರತದ ಸ್ವಾತಂತ್ರ್ಯ ಚಳವಳಿ ಇವೆಲ್ಲವೂ ಕ್ರಾಂತಿಕಾರಕ ಚಳವಳಿಗೆ ಉದಾಹರಣೆಗಳಾದರೆ, ಮಹಿಳಾ ವಿಮೋಚನಾ ಚಳವಳಿ, ಅಸ್ಪೃಶ್ಯತಾ ನಿವಾರಣಾ, ವಚನ, ಪರಿಸರ ಸಂರಕ್ಷಣೆ, ಪಾನ ನಿರೋಧ, ರೈತ, ಕಾರ್ಮಿಕರ ಚಳವಳಿಗಳೆಲ್ಲ ಸುಧಾರಣಾವಾದಿ ಚಳವಳಿಗೆ ಕೆಲವು ಉದಾಹರಣೆಗಳಾಗಿವೆ.

ಸಾಮಾಜಿಕ ಚಳವಳಿಯ ಪರಿಕಲ್ಪನೆ ಆಧುನಿಕ ಕಾಲದ ಪರಿಕಲ್ಪನೆಯಾಗಿದ್ದರೂ, ಆಧುನಿಕ ಪೂರ್ವ ಸಮಾಜವೂ ಕೂಡ ಸಾಮಾಜಿಕ ಬದಲಾವಣೆಗೆ ತೊಡಗಿಸಿಕೊಂಡಿದ್ದು ಕಂಡು ಬರುತ್ತದೆ. ಸಾಮಾಜಿಕ ಚಳವಳಿಗಳು ಮಾನವ ಸಮಾಜದ ಅವಿಭಾಜ್ಯ ಅಂಗಗಳಾಗಿವೆ ಹಾಗೂ ಅವು ಮಾನವನ ಇತಿಹಾಸದ ಜೊತೆ ಜೊತೆಯೇ ಸಾಗಿ ಬಂದಿವೆ. ಕ್ರಿ.ಶ. ೧೮ನೇ ಶತಮಾನದ ನಂತರ ನಡೆದ ಸಾಮಾಜಿಕ ಚಳವಳಿಗಳು ಸಾಮಾಜಿಕ ವ್ಯವಸ್ಥೆ ಹಾಗೂ ಜೀವನದ ಮೇಲೆ ಅಪಾರ ಬದಲಾವಣೆ ಉಂಟು ಮಾಡಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿಗಳು ನಡೆಯುವುದು ಸಹಜ. ಪ್ರಜಾಪ್ರಭುತ್ವ ಜೀವಂತವಾಗಿರಲು ಯಶಸ್ವಿಯಾಗಲು ಚಳವಳಿಗಳು ಅನಿವಾರ್ಯ. ಪ್ರಜಾವ್ಯವಸ್ಥೆಯಲ್ಲಿ ರಾಜ್ಯದ ಪ್ರಭುತ್ವ ನಿರಂಕುಶದತ್ತ ಸಾಗಿದಾಗ ಮಾನವ ಹಕ್ಕುಗಳನ್ನು ಸಂರಕ್ಷಿಸಲು ಮತ್ತು ಸಮಾಜದ ಪರಿವರ್ತನೆಗಾಗಿ ಹುಟ್ಟಿಕೊಳ್ಳುವುದೇ ಚಳವಳಿ.[೧] ಹೀಗಾಗಿ

ಚಳವಳಿ ಸಮಾಜದ ಒಟ್ಟು ಬದುಕಿನ ಪರಿವರ್ತನೆಗೆ ಸಂಬಂಧಿಸಿದ್ದಾಗಿರುತ್ತದೆ. ಚಳವಳಿಯು ಸಾಮುದಾಯಿಕ ರಾಜ್ಯದ ಸಂಘಟನಾತ್ಮಕ ಕ್ರಿಯೆಯಾಗಿದೆ ಇವು ಕೆಲವೊಮ್ಮೆ ಹೋರಾಟ ದಂಗೆ ಕ್ರಾಂತಿ ಆಂದೋಲನ ಚಳವಳಿಯ ಅರ್ಥರೂಪವನ್ನು ಪಡೆದಿವೆ. ಈ ಎಲ್ಲಾ ಪದಗಳಿಗೆ ಅವುಗಳ ಹಿಂದಿನ ದೃಷ್ಟಿಕೋನದಿಂದ ತನ್ನದೇ ಆದ ಅರ್ಥವಿದೆ. ಮಾರ್ಕ್ಸಿಸ್ಟ್ ಧೋರಣೆಯ ಹಿನ್ನೆಲೆಯಲ್ಲಿ ಇದು ಕ್ರಾಂತಿ ಹೋರಾಟದ ಪದ ರೂಪ ಪಡೆದರೆ ಆಂದೋಲನ, ಚಳವಳಿ ಪದಗಳನ್ನು ಸಮಾಜವಾದಿ ಚಿಂತಕರು ಬಳಸುತ್ತಾರೆ.

ಸಾಮಾಜಿಕ ಚಳವಳಿಗಳ ಅಧ್ಯಯನಕ್ಕೆ ನಾಂದಿ ಹಾಡಿದ ಚಿಂತಕರೆಂದರೆ ಹರ್ಬರ್ಟ್ ಬ್ಲೂಮರ್, ರುಡೊಲ್ಫ - ಹರ್ಬರ್ಲೆ ಮೊದಲಾದವರು. ಇವರು ಚಳವಳಿಗಳನ್ನು ಅನೇಕ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಹರ್ಬರ್ಟ್ ಬ್ಲೂಮರ್ ಪ್ರಕಾರ ಹೊಸ ಜೀವನ ಕ್ರಮವನ್ನು ರೂಢಿಸುವುದಕ್ಕಾಗಿ ಮಾಡುವ ಸಾಮುದಾಯಿಕ ಪ್ರಯತ್ನವೇ ಚಳವಳಿಯಾಗಿದೆ.[೨] ಕಿಲ್ಲಿಯನ್‌ರ ಪ್ರಕಾರ, ಒಂದು ಜನಸಮೂಹವು ತಾನಿರುವ ಸಮಾಜದಲ್ಲಿ ಪರಿವರ್ತನೆಯನ್ನು ತರುವುದು ಮಾತ್ರವಲ್ಲ ಅಂತಹ ಪರಿವರ್ತನೆಯನ್ನು ತಡೆಯಲು ಬಯಸುವುದು ಹಾಗೆಯೇ ಪರಿವರ್ತನೆಯನ್ನು ಬಯಸುವ ಅಥವಾ ತಡೆಯಲು ನಡೆಸುವ ನಿರಂತರ ಚಟುವಟಿಕೆಗಳು ಕೂಡ ಚಳವಳಿ ಎನಿಸುವುದು.[೩] ಕ್ರೇನ್ ಬ್ರೆಂಟನ್ ಪ್ರಕಾರ, ಪ್ರತಿಯೊಂದು ಚಳವಳಿ ಕೆಲವು ತತ್ವಾದರ್ಶಗಳನ್ನು ಪ್ರೇರೇಪಿಸುತ್ತವೆ. ಇಂತಹ ತತ್ವಾದರ್ಶಗಳಿಲ್ಲದೇ ಸಾಮಾಜಿಕ ಚಳವಳಿಗಳು ಹುಟ್ಟಲಾರವು ತತ್ವಾದರ್ಶಗಳಿಲ್ಲದಿದ್ದರೆ, ಚಳವಳಿಗಳೇ ಇಲ್ಲ.[೪] ಎಂ.ಎಸ್.ಎ. ರಾವ್ ಪ್ರಕಾರ, 'ಸಾಮಾಜಿಕ ಚಳವಳಿಗೆ ಮೂಲಭೂತ ಕಾರಣವೇನೆಂದರೆ ಜನರಲ್ಲಿ ತಮ್ಮ ಪರಿಸ್ಥಿತಿಯ ಬಗ್ಗೆ ಹುಟ್ಟುವ ಅಸಂತೋಷ. ತಮಗೆ ನ್ಯಾಯವಾಗಿ ಸಿಗಬೇಕಾದದ್ದು ಸಿಗುತ್ತಿಲ್ಲವೆಂದೂ ತಮಗೆ ವಂಚನೆ ಮಾಡಲಾಗುತ್ತಿದೆಯೆಂದೂ ಜನರು ತಿಳಿದಿರುತ್ತಾರೆ.[೫] ಭಾರತದ ಚಳವಳಿಗಳ ಬಗ್ಗೆ ಹಲವು ಮೌಲಿಕ ಅಧ್ಯಯನ ನಡೆಸಿರುವ ಟಿ.ಕೆ. ಓಮನ್, ಪ್ರಕಾರ "ಪರಿಧಿಯಲ್ಲಿರುವ ಮನುಷ್ಯನು ಕೇಂದ್ರದೆಡೆಗೆ ಚಲಿಸಲು ವ್ಯವಸ್ಥಿತವಾಗಿ ರೂಪಿಸಿಕೊಳ್ಳುವ ಸಾಮೂಹಿಕ ಕ್ರಿಯೆಯನ್ನು ಚಳವಳಿ" ಎಂದು ಕರೆಯುತ್ತಾರೆ.[೬]

ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಾಮಾಜಿಕ ಚಳವಳಿಗಳ ಇತಿಹಾಸವನ್ನು ಅವಲೋಕಿಸಿದಾಗ ಅಮೇರಿಕ ಮತ್ತು ಫ್ರಾನ್ಸ್‌ನ ಮಹಾಕ್ರಾಂತಿಗಳನ್ನು ಮಾನವ ಇತಿಹಾಸದ ಎರಡು ಮಹತ್ವದ ಘಟನೆಗಳೆಂದು ಪರಿಗಣಿಸಲಾಗಿದೆ. ಹಾಗೆಯೇ ೧೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾದ ಧಾರ್ಮಿಕ ಚಳವಳಿ, ಇಟಲಿ ಸ್ಪೇನ್‌ಗಳಲ್ಲಿ ನಡೆದ ರೈತ ದಂಗೆಗಳು ಸಾಮಾಜಿಕ ಚಳವಳಿಯ ಪ್ರಮುಖ ಘಟ್ಟಗಳಾಗಿವೆ. ೧೯ನೇ ಶತಮಾನದ ಕಾರ್ಮಿಕ ಚಳವಳಿ ೧೯೧೭ರ ರಷ್ಯಾದ ಕ್ರಾಂತಿಗಳು ಐತಿಹಾಸಿಕ ಘಟನೆಗಳಾದವು. ನಂತರ ೨೦ನೇ ಶತಮಾನವು ಚಳವಳಿಗಳ ಶತಮಾನವೆಂದೇ ಪ್ರಸಿದ್ಧಿಯಾಗಿದೆ.[೭] ಈ ಶತಮಾನದಲ್ಲಿ ಭಾರತದಲ್ಲಿ ಕಾರ್ಮಿಕ, ರೈತ, ದಲಿತ ಆದಿವಾಸಿ ಹಿಂದುಳಿದವರ ಹಾಗೂ ಸ್ವಾತಂತ್ರ್ಯ ಚಳವಳಿಗಳು ಸಾಮಾಜಿಕ ಪರಿವರ್ತನೆಯನ್ನು ಮತ್ತು ಪ್ರಭುತ್ವ ಬದಲಾವಣೆಯ ಗುರಿ ಇಟ್ಟುಕೊಂಡು ಚಳವಳಿಗಳು ಹೊಸ ಆಯಾಮ ಪಡೆದವು.

ಕರ್ನಾಟಕದಲ್ಲಿ ನಡೆದ ಸಾಮಾಜಿಕ ಚಳವಳಿಗಳಿಗೆ ತನ್ನದೇ ಆದ ವೈಶಿಷ್ಟ್ಯತೆಯಿದೆ. ಏಕೆಂದರೆ ಇಲ್ಲಿ ಕಾಣಿಸಿಕೊಂಡಂತಹ, ನಡೆದಂತಹ ವಿಶಿಷ್ಟವೆನಿಸುವ ಸದೃಶ ಚಳವಳಿಗಳು ಬೇರೆಲ್ಲೂ ಕಾಣಿಸಿ ಕೊಂಡಂತಿಲ್ಲ. ಉದಾಹರಣೆಗೆ ೧೨ನೇ ಶತಮಾನದ ವಚನಕಾರರ ಚಳವಳಿ, ಸೂಫಿ, ದಾಸ ತತ್ವಪದಕಾರರ ಪರಂಪರೆಗಳು ಇದಕ್ಕೆ ಉತ್ತಮ ನಿದರ್ಶನ. ನಂತರ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳವಳಿ, ಹೈದರಾಬಾದ್ ನಿಜಾಮನ ವಿರುದ್ಧ ವಿಮೋಚನಾ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳವಳಿ ಪ್ರಮುಖವೆನಿಸಿವೆ. ಹಾಗೆಯೇ ಸ್ವಾತಂತ್ರ್ಯದ ನಂತರ ನಡೆದ ಮತ್ತು ನಡೆಯುತ್ತಿರುವ ದಲಿತ, ರೈತ ಹಿಂದುಳಿದ ಕಾರ್ಮಿಕ ಮಹಿಳಾ ಚಳವಳಿಗಳು ತನ್ನದೇ ಆದ ಪ್ರಭಾವವನ್ನು ಬೀರಿವೆ.

ಉದ್ದೇಶ

ಹೈದರಾಬಾದ್ ಕರ್ನಾಟಕ ಪ್ರದೇಶವು ಇಂದು ಹೆಚ್ಚು ಚರ್ಚೆಗೆ, ಚಿಂತನೆಗೆ ಒಳಪಟ್ಟಿರುವ ಹಾಗೂ ಪ್ರಸ್ತುತ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ಹೋರಾಟ ಕೈಗೊಂಡಿರುವ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಲು ಕಾರಣವಾಗುವ ಅಂಶಗಳನ್ನು ಹುಡುಕುವ ಮತ್ತು ಅಧ್ಯಯನ ಮಾಡಿ ದಾಖಲಿಸುವ ಉದ್ದೇಶವನ್ನು ಹೊಂದಲಾಗಿದೆ. ಹೈದರಾಬಾದ್ ನಿಜಾಮನ ಆಳ್ವಿಕೆಯಿಂದ ಬಿಡುಗಡೆ ಹೊಂದಲು ಈ ಭಾಗದಲ್ಲಿ ಆರಂಭಿಸಿದ ಚಳವಳಿಯು ನಂತರ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲೂ ವಿವಿಧ ಕಾರಣಗಳಿಂದಾಗಿ ನಿರಂತರವಾಗಿ ಮುಂದುವರೆದಿದೆ. ಹೀಗಾಗಿ ಇಂತಹ ಪ್ರದೇಶದಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಸಮಕಾಲೀನ ಸಂದರ್ಭದವರೆಗೆ ಚಳವಳಿಗಳು ಹುಟ್ಟಲು ಕಾರಣ ಮತ್ತು ಯಾವ ಸಂದರ್ಭದಲ್ಲಿ ಇವು ಕ್ರಿಯಾಶೀಲವಾಗಿದ್ದವು ಯಾವ ಸಂದರ್ಭದಲ್ಲಿ ಚಲನರಹಿತ ವಾದವು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಇವು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಮತ್ತು ಸಾಗಬೇಕಾಗಿದೆ ಎನ್ನುವ ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಳ್ಳುವ ಉದ್ದೇಶ ಹೊಂದಲಾಗಿದೆ.

ಇದೇ ಸಂದರ್ಭದಲ್ಲಿ ಇಲ್ಲಿ ನಡೆದ ಚಳವಳಿಗಳ ಮಿತಿಯನ್ನು ಗುರುತಿಸಲು ಪ್ರಯತ್ನಿಸುತ್ತಾ, ಎಷ್ಟರಮಟ್ಟಿಗೆ ಚಳವಳಿಗಳು ಸಫಲವಾಗಿವೆ ಮತ್ತು ಯಾವ ಕಾರಣಗಳಿಂದ ಚಳವಳಿಗಳು ವಿಫಲವಾಗಿವೆ, ಇದಕ್ಕೆ ಇತರ ಕಾರಣಗಳು ಏನು ಎನ್ನುವ ಹಾಗೂ ಇಲ್ಲಿನ ಚಳವಳಿಗಳಿಂದ ಆದ ಪರಿವರ್ತನೆಗಳೇನು ಎನ್ನುವ ಕಾರಣಗಳನ್ನು ಹುಡುಕುವ ಮತ್ತು ಇಂತಹ ಹುಡುಕಾಟವನ್ನು ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳಲ್ಲಿ ಹಾಗೂ ಇತರ ಯಾವ ಸ್ಥಿತಿಗತಿಗಳಲ್ಲಿ ಹುಡುಕಬೇಕು ಎನ್ನುವ ಚಿಂತನೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ಏಕೆಂದರೆ ರಾಜಕಾರಣ ಮತ್ತು ಆರ್ಥಿಕತೆ ಎನ್ನುವುದು ನಿರಂತರ ಬದಲಾವಣೆಯನ್ನು ಹೊಂದಿರುವಂತಹದ್ದಾಗಿದೆ. ಇಂತಹ ಬದಲಾವಣೆಗಳನ್ನು ಗುರುತಿಸುತ್ತಾ ಏರು-ಇಳಿವುಗಳನ್ನು ತಿಳಿದುಕೊಳ್ಳುತ್ತಾ ಚಳವಳಿಗಳ ಹುಟ್ಟು ಬೆಳವಣಿಗೆ, ತೀವ್ರತೆ, ಸಫಲತೆ, ವಿಫಲತೆಗಳನ್ನು ತಿಳಿಯುವ ಉದ್ದೇಶ ಹೊಂದಲಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಐತಿಹಾಸಿಕ ಸತ್ಯತೆ ಮತ್ತು ಪಾರದರ್ಶಕತ್ವವನ್ನು ಪಾಲಿಸಲು ಹಾಗೂ ವಸ್ತುನಿಷ್ಟ ಅಧ್ಯಯನವನ್ನು ಮಾಡುವ ಉದ್ದೇಶದಿಂದ, ಸಾಮಾಜಿಕ ಚಳವಳಿಗಳ ಕುರಿತು ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ. ಇದರಲ್ಲಿ ಸಾಮಾಜಿಕ ಚಳವಳಿ ಎಂದರೇನು, ಚಳವಳಿಗಾರರು ಯಾರು, ಈ ಚಳವಳಿಗಳ ಸ್ವರೂಪ ಏನು, ಚಳವಳಿಯನ್ನು ಸಮಾಜದ ಯಾವ ವರ್ಗ ಪ್ರತಿನಿಧಿಸುತ್ತದೆ ಎನ್ನುವ ವಿಷಯಗಳನ್ನು ಅಧ್ಯಯನಕ್ಕೆ ಒಳಪಡಿಸುವುದಾಗಿದೆ. ಹಾಗೆಯೇ ಸರಕಾರದಿಂದ ಜಾರಿಯಾದ ಯೋಜನೆಗಳು ಸಮಾಜದ ಯಾವ ವರ್ಗಗಳಿಗೆ ತಲುಪುತ್ತಿವೆ, ಯಾವ ವರ್ಗಗಳು ಇದರ ಸಂಪೂರ್ಣ ಲಾಭ ಪಡೆಯುತ್ತಿವೆ ಯಾವ ವರ್ಗಗಳು ಈ ಸೌಲಭ್ಯಗಳಿಂದ ವಂಚಿತವಾಗುತ್ತಿವೆ ಇದರಲ್ಲಿ ರಾಜಕೀಯ ಪಕ್ಷಗಳ, ಆಳುವ ಸರಕಾರಗಳ, ಬಂಡವಾಳಶಾಹಿ ಗಳ ಪಾತ್ರವೇನು ಎನ್ನುವ ಸಂಕೀರ್ಣ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಇವೆಲ್ಲವುಗಳನ್ನು ಒಂದು ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸಿ ವಿವರಿಸುವ ಉದ್ದೇಶ ಹೊಂದಲಾಗಿದೆ.

ಇದುವರೆಗೆ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳಿಗೆ ಸಂಬಂಧಪಟ್ಟಂತೆ ಅನೇಕ ಕೃತಿಗಳು, ಗ್ರಂಥಗಳು, ಲೇಖನಗಳು, ಸಂಶೋಧನಾ ನಿಬಂಧಗಳು ಹಾಗೂ ಪ್ರಬಂಧಗಳು ಪ್ರಕಟಗೊಂಡಿವೆ. ಆದರೆ ಈ ಎಲ್ಲಾ ಅಧ್ಯಯನಗಳು, ವಿವರಗಳ ಹಾಗೂ ಮಾಹಿತಿ ಸಂಗ್ರಹಣೆಗೆ ಮಾತ್ರ ಮಿತಿಗೊಳಿಸಲ್ಪಟ್ಟವು ಗಳಾಗಿವೆ. ಆದರೆ ಇವರ ಸಂಶೋಧನಾ ವಿಧಾನಕ್ಕಿಂತ ಪ್ರಸ್ತುತ ಅಧ್ಯಯನದ ದೃಷ್ಟಿಕೋನ, ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆ ಭಿನ್ನವಾಗಿದೆ. ಹೇಗೆಂದರೆ, ಇದುವರೆಗೆ ಬಂದಿರುವ ಕೃತಿಗಳು, ನಡೆದಿರುವ ಅಧ್ಯಯನಗಳು ಹೆಚ್ಚಾಗಿ ಮಾಹಿತಿ ಪ್ರಧಾನವುಗಳಾಗಿವೆ. ನಿರ್ದಿಷ್ಟವಾಗಿ ಇಲ್ಲಿನ ಸಾಮಾಜಿಕ ಆರ್ಥಿಕ ವಿಚಾರಗಳಿಗೆ ಸಂಬಂಧಪಟ್ಟ ವಿಶ್ಲೇಷಣಾತ್ಮಕ ಕೃತಿಗಳು ಹಾಗೂ ಅಧ್ಯಯನಗಳು ಬಂದಿರುವುದು ಬಹಳ ಕಡಿಮೆ. ಹಾಗೆಯೇ ಸರಕಾರಕ್ಕೆ ವರದಿ ಸಲ್ಲಿಸಲು ಬೇಕಾದಂತಹ ಮಾಹಿತಿಗಳನ್ನೊಳಗೊಂಡ ದಾಖಲೆಗಳು ಬಹಳಷ್ಟು ಇವೆ. ಆದರೆ ಇಂತಹ ಮಾಹಿತಿಗಳ ಬಗ್ಗೆ ವಿಶ್ಲೇಷಣೆ ಮಾಡುವ ಕೆಲಸ ಆಗಿಲ್ಲ. ಹೀಗಾಗಿ ಇಂತಹವುದರ ಬಗ್ಗೆ ತಳಸ್ಪರ್ಷಿ ಅಧ್ಯಯನ ಆಗಬೇಕಾಗಿದೆ. ಹೀಗಾದಾಗ ಮಾತ್ರ ವಾಸ್ತವ ಅಂಶಗಳನ್ನು ಹೊರತರಲು ಸಾಧ್ಯವಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹಾಗೆಯೇ ಈ ರೀತಿಯ ಅಧ್ಯಯನ ಕೈಗೊಳ್ಳುವಾಗ ಹೈದರಾಬಾದ್ ಕರ್ನಾಟಕ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಭೌಗೋಳಿಕತೆಯನ್ನು ಮೊದಲು ಅರ್ಥಮಾಡಿಕೊಳ್ಳಬೇಕು ಹಾಗೂ ಇವುಗಳ ಮೂಲಕ ಅಲ್ಲಿನ ಜನರ ಬದುಕನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಇಂತಹ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಂದರೆ ನಿಬಂಧದ ಸಂಶೋಧನೆಯಲ್ಲಿ ತುಲನಾತ್ಮಕ ಅಧ್ಯಯನ ಕೈಗೊಂಡು ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಸಮಗ್ರವಾಗಿ ಅಧ್ಯಯನ ಮಾಡುವುದರ ಜೊತೆಗೆ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳನ್ನು ಕುರಿತು ಬಿಡಿ ಬಿಡಿಯಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಅದರಲ್ಲೂ ರೈತ ದಲಿತ, ಹಿಂದುಳಿದ ಕಾರ್ಮಿಕ ಮತ್ತು ಮಹಿಳಾ ಚಳವಳಿಗಳನ್ನು ಅಧ್ಯಯನ ಮಾಡುವ

ಸಮಯದಲ್ಲಿ ಕೆಳಸ್ತರದ, ನಿರ್ಲಕ್ಷಿತರ ಹಾಗೂ ಸಮಾಜದ ಮುಖ್ಯವಾಹಿನಿಗೆ ಬಾರದವರ ಸಮಸ್ಯೆಗಳನ್ನು ಅಧ್ಯಯನ ಮಾಡುವುದರೊಂದಿಗೆ ಪ್ರಸ್ತುತ ಇವರ ಸ್ಥಿತಿಗತಿಗಳು ಹಾಗೂ ಇವರು ಎದುರಿಸುತ್ತಿರುವ ಮತ್ತು ಎದುರಿಸಬೇಕಾದ ಸವಾಲುಗಳನ್ನು ಅಭ್ಯಸಿಸುವ ಹಾಗೂ ವಿಶ್ಲೇಷಿಸುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಹೈದರಾಬಾದ್ ಕರ್ನಾಟಕದ ರೈತರ, ದಲಿತರ, ಹಿಂದುಳಿದವರ, ಕಾರ್ಮಿಕರ, ಮಹಿಳೆಯರ ಸ್ಥಿತಿಗತಿಗಳನ್ನು, ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸಲಾಗಿದೆ ಹಾಗೂ ಇಲ್ಲಿನ ರಾಜಕೀಯ ಸ್ಥಿತ್ಯಂತರಗಳಿಂದ ಅವರ ಜೀವನದ ಮೇಲಾದ ಪರಿಣಾಮ ಬದಲಾವಣೆ ಶೋಷಣೆ ಹಾಗೂ ಇವುಗಳನ್ನು ಅವರು ಎದುರಿಸಿದ ರೀತಿ, ಕೈಗೊಂಡ ಹೋರಾಟಗಳು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಇವರು ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳು, ಅವರ ಸ್ಥಿತಿಗತಿಗಳು ಹಾಗೂ ಯಾವ ದಿಕ್ಕಿನಲ್ಲಿ ಈ ಹೋರಾಟಗಳು ಆಗಬೇಕು, ಯಾವ ಸುಧಾರಣೆಗಳು ಆಗಬೇಕು ಎನ್ನುವ ಅಂಶಗಳನ್ನು ಗುರುತಿಸುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಮೊದಲನೆ ಹಂತದಲ್ಲಿ, ಸಂಶೋಧನೆಗೆ ಅವಶ್ಯವಾದ ಮಾಹಿತಿಯನ್ನು ಕಲೆ ಹಾಕುವ, ಆಕರಗಳ ನಿರ್ಮಾಣದ ಕಾರ್ಯವನ್ನು ಕೈಗೊಳ್ಳಲಾಗಿದೆ. ಎರಡನೆಯ ಹಂತದಲ್ಲಿ ಕಲೆ ಹಾಕಿದ ಮಾಹಿತಿ ಗಳನ್ನು ವಿಶ್ಲೇಷಣೆ ಮಾಡುವ ಕಾರ್ಯ ಕೈಗೊಳ್ಳಲಾಗಿದೆ. ಮೂರನೆಯ ಹಂತದಲ್ಲಿ ಕಲೆ ಹಾಕಿದ ಮಾಹಿತಿಗಳನ್ನು ಹಲವಾರು ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡುವ ಹಾಗೂ ಮೌಲ್ಯಮಾಪನ ಮಾಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯವು ಐತಿಹಾಸಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ವೈಚಾರಿಕತೆಗಳ ದೃಷ್ಟಿಯಿಂದ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಹೀಗಾಗಿ ಪ್ರಸ್ತುತ ಸಂಶೋಧನಾ ಲೇಖನವು ವಿಶಾಲತೆಯಿಂದ ಸೂಕ್ಷ್ಮತೆಯೆಡೆಗೆ ನಡೆದಿದೆ. ಅಧ್ಯಯನದಲ್ಲಿ ಇತ್ತೀಚಿಗೆ ವಿದ್ವಾಂಸರು, ಚರಿತ್ರೆಕಾರರು ಕೆಳಹಂತದ, ಜನಸಾಮಾನ್ಯರ, ನಿರ್ಲಕ್ಷಿತರ, ಶೋಷಿತರ ಬದುಕು ಮತ್ತು ಹೋರಾಟಗಳೇನು ಎಂಬುದರತ್ತ ಗಮನಹರಿಸಿದ್ದಾರೆ. ಇದನ್ನೇ ಸಬಾಲ್ಟರ್ನ್ ಅಧ್ಯಯನ ಎಂದು, 'ಸಬಾಲ್ಟರ್ನ್ ಪಂಥ' ಎಂದು ಕರೆಯಲಾಗಿದೆ. ಇಂತಹ ಪಂಥವನ್ನು ಆಧಾರವಾಗಿಟ್ಟುಕೊಂಡು ಸಮಾಜದಲ್ಲಿನ ನಿರ್ಲಕ್ಷಿತರ, ಶೋಷಿತರ, ಕೆಳವರ್ಗದವರ ಜೀವನ ಮತ್ತು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸಂಶೋಧನೆ ಮಾಡುವ ಉದ್ದೇಶ ಅಧ್ಯಯನದ್ದಾಗಿದೆ. ಈ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಮುಖ್ಯ ಹೆಜ್ಜೆ ಗುರುತುಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಇದಕ್ಕಾಗಿ ಅನೇಕ ಕೃತಿಗಳನ್ನು, ಅಪ್ರಕಟಿತ ದಾಖಲೆಗಳನ್ನು, ಮೌಖಿಕ ಸಂದರ್ಶಗಳನ್ನು, ಹೋರಾಟಗಾರರ ಹೇಳಿಕೆಗಳನ್ನು, ಅಭಿಪ್ರಾಯ ಗಳನ್ನು, ವಿವಿಧ ಸಂಘಟನೆಗಳ ಸಂಚಿಕೆಗಳನ್ನು, ಸರಕಾರದ ವರದಿಗಳನ್ನು, ಹೀಗೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆಯಿಂದಾಗಿ ಭಾಷೆ ಹಾಗೂ ಸಂಸ್ಕೃತಿಯಲ್ಲಿ ಇವರ ಆಳ್ವಿಕೆಯ ಪ್ರಭಾವ ಎದ್ದು ಕಾಣುತ್ತದೆ. ಇಲ್ಲಿ ಇನ್ನೂ ಕೂಡ ಊಳಿಗಮಾನ್ಯ ವ್ಯವಸ್ಥೆ ಜೀವಂತ ವಾಗಿದ್ದು, ಶೋಷಣೆ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದ ಸಂಘಟನೆಗಳು ತಲೆ ಎತ್ತಲು ಅವಕಾಶವಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಈ ಪ್ರದೇಶವು ಹಿಂದುಳಿದಿರುವಿಕೆಯ ಹಣೆಪಟ್ಟಿಯನ್ನು ಕಟ್ಟಿಕೊಂಡಿರುವುದೇಕೆ, ಸಾಮಾಜಿಕವಾಗಿ ಅಸಮಾನತೆ, ಬಡತನ, ನಿರುದ್ಯೋಗ ತಾಂಡವಾಡುತ್ತಿರಲು ಕಾರಣಗಳೇನು, ಪ್ರಜಾ ಆಳ್ವಿಕೆ ಪ್ರಾರಂಭವಾಗಿ ೬೪ ವರ್ಷಗಳು ಕಳೆದರೂ ಸಾಕ್ಷರತೆಯ ಪ್ರಮಾಣ ಗಣನೀಯವಾಗಿ ಇಳಿಮುಖವಾಗಲು ಹಾಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿಯಲು ಕಾರಣಗಳೇನು, ಇಲ್ಲಿ ಚಳವಳಿಗಳು ವಿಫಲವಾಗಲು ಹಾಗೂ ತಮ್ಮ ತೀವ್ರತೆಯನ್ನು ಕಳೆದುಕೊಳ್ಳಲು ಕಾರಣಗಳು ಹಾಗೂ ಈ ಪ್ರಾಂತ್ಯದಲ್ಲಿ ಅಭಿವೃದ್ಧಿ ಎನ್ನುವುದು ಏಕೆ ಇನ್ನೂ ಸಾಧ್ಯವಾಗಿಲ್ಲ ಎನ್ನುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಉದ್ದೇಶ ಹೊಂದಲಾಗಿದೆ.

ಹಾಗೆಯೇ ೧೯೪೭ ರಿಂದ ಪ್ರಸ್ತುತದವರೆಗೆ ಹೈದರಾಬಾದ್ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನಡೆದ ಮತ್ತು ನಡೆಯುತ್ತಿರುವ ಕಾರ್ಮಿಕ, ರೈತ, ದಲಿತ, ಮಹಿಳಾ ಮುಂತಾದ ಚಳವಳಿಗಳ ಕೂಲಂಕುಶ ಅಧ್ಯಯನ ಮಾಡುವುದರ ಜೊತೆಗೆ ಇಲ್ಲಿ ಚಳವಳಿಗಳನ್ನು ನಡೆಸುತ್ತಿರುವ ವಿವಿಧ ಸಾಮಾಜಿಕ ಸಂಘಟನೆ ಗಳ, ಸಂಘ-ಸಂಸ್ಥೆಗಳ, ಮುಖಂಡರ, ಸಾಹಿತಿಗಳ, ವಿದ್ಯಾರ್ಥಿಗಳ, ರಾಜಕೀಯ ಮುಖಂಡರ ವಿಚಾರಗಳನ್ನು ಚರ್ಚಿಸುತ್ತಾ ಸತ್ಯವನ್ನು ವಾಸ್ತವವನ್ನು ಹೊರತರುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಸಂಶೋಧನೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ಅನುಭವಿಸುತ್ತಿರುವ ಅಸಮಾನತೆಯ, ಹಿಂದುಳಿದಿರುವಿಕೆಯ, ಶೋಷಣೆಯ ವಾಸ್ತವಿಕತೆಯನ್ನು ಅಭಿವ್ಯಕ್ತಿಸುವ ಉದ್ದೇಶ ಹೊಂದಲಾಗಿದೆಯೆ ಹೊರತು, ಒಕ್ಕೂಟ ಸ್ವರೂಪದ ವ್ಯವಸ್ಥೆಯನ್ನು ಪ್ರಶ್ನಿಸಿ ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಉದ್ದೇಶವಿಲ್ಲ. ಬದಲಾಗಿ ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸಂವಿಧಾನಬದ್ಧವಾಗಿ ಸಿಗಬೇಕಾಗಿದ್ದ ಹಾಗೂ ಸಿಗಬೇಕಾಗಿರುವ ಸ್ಥಾನಮಾನ, ಸಾಮಾಜಿಕ ಸಾಂಸ್ಕೃತಿಕ ಗೌರವಗಳನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಲಾಗಿದೆ.

ಸಾಮಾಜಿಕ ಚಳವಳಿಯಂತಹ ಅಂಶಗಳನ್ನು, ಇತಿಹಾಸ ರಚನೆಕಾರರು ಹಾಗೂ ಸಂಶೋಧಕರು ಆಗಾಗ ಪುನರ್‌ವಿಶ್ಲೇಷಣೆಗೆ ಒಳಪಡಿಸಿ, ಸತ್ಯವನ್ನು ಪ್ರತಿಪಾದಿಸಬೇಕು ಮತ್ತು ಇಂದು ಇತಿಹಾಸದಂತಹ ವ್ಯಾಪಕ ಶಾಸ್ತ್ರವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅಗತ್ಯತೆ ಮತ್ತು ಅನಿವಾರ್ಯತೆ ಇದೆ. ತಾತ್ವಿಕ ಹಾಗೂ ವ್ಯವಸ್ಥಿತ ತಂತ್ರಗಳ ಮೂಲಕ ನೂತನ ವಾಸ್ತವಾಂಶಗಳನ್ನು ಕಂಡು ಹಿಡಿಯುವುದು ಅಥವಾ ಹಳೆಯ ವಾಸ್ತವಾಂಶಗಳನ್ನು ಪರೀಕ್ಷಿಸುವುದು ಹಾಗೂ ಒಂದು ಯುಕ್ತವಾದ ಪರಾಮರ್ಶಕ ಚೌಕಟ್ಟಿನೊಳಗೆ ಅನುಮಾನಿಸಲಾದ ಅವುಗಳ ಅನುಕ್ರಮ, ಪರಸ್ಪರ ಸಂಬಂಧ ಮತ್ತು ಕಾರ್ಯಕಾರಣ ಸಂಬಂಧಗಳ ವಿವರಣೆಗಳನ್ನು ವಿಶ್ಲೇಷಿಸುವುದು ಆಧುನಿಕ ಅಧ್ಯಯನದ ಕ್ರಮ. ಈ ದೃಷ್ಟಿಯಿಂದ ಪ್ರಸ್ತುತ ಸಂಶೋಧನೆಯು ಚದುರಿದ ದತ್ತಾಂಶಗಳನ್ನು ಕ್ರಮಬದ್ಧಗೊಳಿಸಿ ಮತ್ತು ಕಾಲಮಿತಿಗೆ ಒಳಪಡಿಸಿ,

ವೈಜ್ಞಾನಿಕ ವಿಮರ್ಶೆಯಿಂದ ವಾಸ್ತವಿಕತೆಯನ್ನು ತಿಳಿಸುವುದೇ ಪ್ರಮುಖವಾಗಿದೆ. ಸತ್ಯಾನ್ವೇಷಣೆಯೇ ಸಂಶೋಧನೆಯ ನೈಜ ಅರ್ಥವನ್ನು ಹೊಂದಿರುವಾಗ, ಪ್ರಸ್ತುತ ಚಳವಳಿಯ ಅಂಶಗಳನ್ನು ಮತ್ತು ಹೋರಾಟಗಳ ಹೆಜ್ಜೆಯ ಜಾಡನ್ನು ಹಿಡಿದು ಪ್ರಸ್ತುತ ಚಳವಳಿಗಳಿಗೆ ಐತಿಹಾಸಿಕ ಮಹತ್ವವನ್ನು ದೊರಕಿಸಿಕೊಡುವುದು ಸಂಶೋಧನೆಯ ಉದ್ದೇಶವಾಗಿದೆ.

ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ವಿಷಯವು ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ವೈಚಾರಿಕತೆಗಳ ದೃಷ್ಟಿಯಿಂದ ಅತೀವ ಮಹತ್ವವನ್ನು ಪಡೆದಿದೆ. ಅಧ್ಯಯನದಲ್ಲಿ ವಿಭಿನ್ನ ಮುಖಗಳಿಂದ ಅಂದರೆ ೧೨ನೇ ಶತಮಾನದಲ್ಲಿ ಪ್ರಾರಂಭವಾದ ವಚನ ಸಾಹಿತ್ಯ, ಸೂಫಿ ಪಂಥ, ನಂತರ ದಾಸ ಪರಂಪರೆಗಳು ಬೀರಿದ ಪ್ರಭಾವ ಹಾಗೂ ಸಾಮಾಜಿಕ ಚಳವಳಿಗಳ ಹುಟ್ಟು ಬೆಳವಣಿಗೆ ಮತ್ತು ಪರಿಣಾಮಗಳ ಹಿನ್ನೆಲೆಯನ್ನು ಚರ್ಚಿಸಿ ವಿಶ್ಲೇಷಿಸಲಾಗಿದೆ. ಅದೇ ರೀತಿಯಾಗಿ ಸ್ವಾತಂತ್ರ್ಯೋತ್ತರ ಕರ್ನಾಟಕದಿಂದ ಸಮಕಾಲೀನ ಕಾಲಘಟ್ಟದವರೆಗಿನ ರೈತ, ದಲಿತ, ಹಿಂದುಳಿದ, ಕಾರ್ಮಿಕ ಮತ್ತು ಮಹಿಳಾ ಚಳವಳಿಗಳ ಹುಟ್ಟು ಬೆಳವಣಿಗೆ, ಇವುಗಳ ಗುರಿ, ಉದ್ದೇಶ, ಮಹತ್ವ ಹಾಗೂ ಪ್ರಸ್ತುತ ಸಮಾಜದ ಜನರ ಮೇಲೆ ಬೀರಿದ ಪ್ರಭಾವ ಕುರಿತು ಇಲ್ಲಿ ಚರ್ಚಿಸಲಾಗಿದೆ. ಇದರ ಜೊತೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಭುತ್ವ ಮತ್ತು ಸಮಾಜದ ನಡುವಿನ ಸಂಬಂಧವನ್ನು ಅಧ್ಯಯನ ಮಾಡುತ್ತಾ, ಸಾಮಾಜಿಕ ಸಮಾನತೆಗಾಗಿ, ಆರ್ಥಿಕ ಪ್ರಬಲತೆಗಾಗಿ, ಸಮಾನ ಸ್ಥಾನಮಾನಗಳಿಗಾಗಿ ಆರಂಭವಾದ ಚಳವಳಿಗಳು ಯಾವುವು, ಸ್ವಾತಂತ್ರ್ಯದ ನಂತರ ಹುಟ್ಟಿಕೊಂಡ ಸಂಘಟನೆಗಳು ಯಾವುವು, ಸಂಘಟನೆಗಳ ಗುರಿ ಏನಾಗಿದೆ, ಇವುಗಳ ಹೋರಾಟದ ಯಶಸ್ಸು ಮತ್ತು ವಿಫಲತೆಯ ಅಂಶಗಳು ಯಾವುವು, ಸಫಲ ಮತ್ತು ವಿಫಲತೆಗೆ ಕಾರಣ ಏನು ಎನ್ನುವ ಅಂಶಗಳ ಆಧಾರದ ಮೇಲೆ ಅಧ್ಯಯನ ಕೈಗೊಳ್ಳಲಾಗಿದೆ.

ಸ್ವರೂಪ

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಅಧ್ಯಯನದ ಸಂದರ್ಭದಲ್ಲಿ ಈ ಪ್ರದೇಶದ ಜೊತೆಗೆ ಮುಂದುವರೆದ ಪ್ರಾಂತ್ಯಗಳೆಂದೇ ಗುರುತಿಸಿಕೊಂಡಿರುವ ಮೈಸೂರು ಪ್ರಾಂತ್ಯ ಹಾಗೂ ಇತರ ಪ್ರಾಂತ್ಯಗಳೊಡನೆ ತುಲನೆ ಮಾಡಿ ಆ ಪ್ರಾಂತ್ಯಗಳ ಹಿನ್ನೆಲೆ, ಸ್ಥಿತಿಗತಿಗಳು, ಬೆಳವಣಿಗೆ ಅಭಿವೃದ್ಧಿಯ ಕಾರಣಗಳೊಂದಿಗೆ ಹೈದರಾಬಾದ್ ಕರ್ನಾಟಕದ ಪ್ರಾಂತ್ಯವನ್ನು ಹೋಲಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿ ಚರ್ಚೆಗೆ, ವಿಮರ್ಶೆಗೆ ಒಳಪಡಿಸಲೇ ಬೇಕಾದ ವಿಷಯವೆಂದರೆ ಹಿಂದುಳಿದ ಭಾಗವಾದ ಹೈದರಾಬಾದ್ ಕರ್ನಾಟಕದಲ್ಲಿ ಅತ್ಯಂತ ತೀವ್ರವಾದ ಪರಿಣಾಮಕಾರಿಯಾದ ಚಳವಳಿಗಳು ಹೋರಾಟಗಳು ನಡೆಯಬೇಕಿತ್ತು. ಆದರೆ ಇಲ್ಲಿ ಇಂತಹ ಹೋರಾಟಗಳು ನಡೆದಿರುವುದೇ ಬಹು ವಿರಳ ಅಥವಾ ನಡೆದಿದ್ದರೂ ಅವು ವಿಫಲವಾಗಿದ್ದೇ ಹೆಚ್ಚು ಆದರೆ ಮೈಸೂರು ಪ್ರಾಂತ್ಯದ ಹಿನ್ನೆಲೆಯನ್ನು ಗಮನಿಸಿದಾಗ ಸಂಸ್ಥಾನವು ವಸಾಹತು ಕಾಲಘಟ್ಟದಿಂದಲೇ ಮಾದರಿ ಸಂಸ್ಥಾನವಾಗುವ ಹಾದಿಯಲ್ಲಿ ಸಾಗಿತ್ತು.

೧೭ನೇ ಶತಮಾನದಲ್ಲಿ ಮೈಸೂರು ಪ್ರಾಂತ್ಯವು ಭೂ ಹಿಡುವಳಿದಾರರ ಹಿಡಿತದಿಂದ ಬರಗಾಲದಿಂದ, ಕ್ಷಾಮದಿಂದ 'ಕತ್ತಲ ಪ್ರದೇಶ'ವೆಂದೇ ಹೆಸರು ಪಡೆದಿತ್ತು. ಒಡೆಯರ್ ಆಳ್ವಿಕೆಯ ಕಾಲದಿಂದ ಈ

ಪ್ರಾಂತ್ಯವು ತನ್ನದೇ ಆದ ಅಸ್ತಿತ್ವ ಹೊಂದಲು, ಗುರುತಿಸಿಕೊಳ್ಳಲು ಆರಂಭ ಮಾಡಿತ್ತು. ಆದರೆ ಟಿಪ್ಪುವಿನ ಮರಣದ ನಂತರ ಶ್ರೀರಂಗಪಟ್ಟಣ ಒಪ್ಪಂದದಂತೆ, ಮೈಸೂರನ್ನು ೪ ಭಾಗಗಳಾಗಿ ವಿಂಗಡಿಸಿ ಅದರ ಪ್ರದೇಶಗಳನ್ನು ಬ್ರಿಟಿಷರು, ನಿಜಾಮ ಮತ್ತು ಮರಾಠರು ಹಂಚಿಕೊಂಡು ಉಳಿದ ಮೈಸೂರು ರಾಜ್ಯದ ಭಾಗಗಳನ್ನು ಒಡೆಯರ ಆಡಳಿತಕ್ಕೆ ಒಳಪಡಿಸಿದರು. ಹಾಗೆಯೇ ಬ್ರಿಟೀಷರು ಒಡೆಯರ್‌ರೊಡನೆ ಸಹಾಯಕ ಸೈನ್ಯ ಒಪ್ಪಂದವನ್ನು ಮಾಡಿಕೊಂಡರು. ಹೀಗೆ ಬ್ರಿಟಿಷರ ಪರೋಕ್ಷ ಆಡಳಿತಕ್ಕೆ ಒಳಪಟ್ಟ ಮೈಸೂರು ಪ್ರಾಂತ್ಯವು ಬ್ರಿಟಿಷರ ಪ್ರಭಾವಕ್ಕೆ ಒಳಗಾಯಿತು. ನಂತರ ಬ್ರಿಟಿಷ್ ಕಮೀಷನರುಗಳ ಆಳ್ವಿಕೆಗೆ ಒಳಪಟ್ಟು, ಬ್ರಿಟಿಷ್ ಮಾದರಿ ಪಡೆಯಲಾರಂಭಿಸಿತು. ಇವರ ಕಾಲದಲ್ಲಿ ಬ್ರಿಟಿಷ್ ಮಾದರಿ ಆಡಳಿತ ಪದ್ಧತಿ, ಶಾಲೆಗಳು, ಕಾಲೇಜುಗಳ ಸ್ಥಾಪನೆ, ಕೃಷಿ, ನೀರಾವರಿ ವ್ಯವಸ್ಥೆ, ಅಣೆಕಟ್ಟುಗಳು ರಸ್ತೆ, ರೈಲ್ವೆ, ಸೇತುವೆಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಂದಾಗಿ ಮೈಸೂರು ಸಂಸ್ಥಾನದ ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಚಿತ್ರಣವೇ ಬದಲಾಗುತ್ತಾ ಸಾಗಿತು. ಮುಂದೆ ದಿವಾನರ ಆಳ್ವಿಕೆ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಂತೂ ಮೈಸೂರು ಸಂಸ್ಥಾನವು ಹೊಸ ಹೊಸ ಆಧುನಿಕ ವಿಚಾರಗಳೊಂದಿಗೆ ನಿರ್ಮಾಣ ಕಾರ್ಯಗಳೊಂದಿಗೆ ಅಭಿವೃದ್ಧಿಯತ್ತ ಸಾಗಿತ್ತು.

ಉದಾಹರಣೆಗೆ ೧೮೮೧ರಲ್ಲಿಯೇ ಮೈಸೂರು ಸಂಸ್ಥಾನದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯನ್ನು ಸ್ಥಾಪಿಸಲಾಯಿತು. ದೇಶಿಯ ಸಂಸ್ಥಾನಗಳಲ್ಲಿ ಇಂತಹ ಪ್ರಜಾಸಂಸ್ಥೆಯನ್ನು ಹೊಂದಿದ ಮೊದಲ ಸಂಸ್ಥಾನ ಎಂಬ ಕೀರ್ತಿಗೆ ಮೈಸೂರು ಪಾತ್ರವಾಗಿತ್ತು. ಇದು ಪ್ರಜಾ ಸರಕಾರದ ಬೆಳವಣಿಗೆಗೆ ಸಹಕಾರಿಯಾಗಿ ಇಡೀ ದೇಶಕ್ಕೆ ಮಾದರಿಯಾಯಿತು. ಬ್ರಿಟಿಷ್ ಆಡಳಿತಕ್ಕೊಳಪಟ್ಟ ಇತರ ಸಂಸ್ಥಾನಗಳಲ್ಲಿ ಆಗ ಪ್ರಜಾಸಂಸ್ಥೆಗಳಿಗೆ ಅವಕಾಶವಿರಲಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಕ್ರಾಂತಿಯೇ ಉಂಟಾಯಿತು. ಒಟ್ಟಿನಲ್ಲಿ ಆಗ ಮೈಸೂರು ಸಂಸ್ಥಾನವು ದೇಶದಲ್ಲೇ ಮಾದರಿ ಸಂಸ್ಥಾನವಾಗಿ ಗುರುತಿಸಿಕೊಂಡಿತ್ತು.

ಆದರೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಬೆಳವಣಿಗೆಗಳನ್ನು ನೋಡಿದಾಗ, ೧೨ನೇ ಶತಮಾನ ದಂತ ಸಾಂಪ್ರದಾಯಿಕ ಕಾಲದಲ್ಲಿಯೇ ಸಮಾಜದ ವ್ಯವಸ್ಥೆ, ಮೂಢನಂಬಿಕೆ, ಕಂದಾಚಾರ, ಶೋಷಣೆ ಅಸಮಾನತೆಯನ್ನು ದಿಕ್ಕರಿಸಿ ಇಡೀ ಸಮಾಜವನ್ನೇ ಬೆರಗುಗೊಳಿಸಿ, ಹಳೆಯ ವ್ಯವಸ್ಥೆಯನ್ನು ಕಿತ್ತು ಹಾಕಿ, ಹೊಸ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನ ಇಲ್ಲಿ ನಡೆದಿತ್ತು. ಬಸವೇಶ್ವರರ ನೇತೃತ್ವದಲ್ಲಿ ನಡೆದ ವಚನ ಚಳವಳಿಯು ಆಗಿನ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಕ್ರಾಂತಿ ಉಂಟು ಮಾಡಿ ಹೊಸ ಬೆಳಕನ್ನೇ ಚೆಲ್ಲಿತ್ತು. ನಂತರ ಸೂಫಿಪಂಥ, ದಾಸ ಸಾಹಿತ್ಯದಿಂದ ಸಾಮಾಜಿಕ, ಧಾರ್ಮಿಕ ಚಳವಳಿಗಳು ನಡೆದು ಹೈದರಾಬಾದ್ ಕರ್ನಾಟಕ ಭಾಗವು ವೈಚಾರಿಕತೆಯ ಕೇಂದ್ರವಾಗಿತ್ತು. ಆದರೆ ನಿಜಾಮರ ಆಳ್ವಿಕೆ

ಮತ್ತು ವಸಾಹತು ಕಾಲಘಟ್ಟದಲ್ಲಿ ವ್ಯವಸ್ಥೆಯ ಬದಲಾವಣೆಯೊಂದಿಗೆ ಪ್ರದೇಶವು ಸಂಪೂರ್ಣ ಕತ್ತಲಿನೆಡೆಗೆ ನಡೆಯಿತು. ನಿಜಾಮನ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಯು ಸಂಪೂರ್ಣವಾಗಿ ಭಿನ್ನವಾಗಿತ್ತು. ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಪ್ರದೇಶಗಳು ಬ್ರಿಟಿಷ್ ಆಡಳಿತದ ಯಾವುದೇ ಅನುಕೂಲಗಳನ್ನು ಪಡೆದುಕೊಳ್ಳಲಿಲ್ಲ ಹಾಗೂ ಜಾತಿ, ಭಾಷೆ, ವೃತ್ತಿ ಆಧಾರದ ವರ್ಗೀಕೃತ ಸಮಾಜ ವ್ಯವಸ್ಥೆಯಿಂದ ಪ್ರದೇಶಗಳು ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟವು. ಜೊತೆಗೆ ನಿಜಾಮನ ನಿರಂಕುಶ ಮತ್ತು ಅಸಮರ್ಥ ಆಳ್ವಿಕೆಯಿಂದ ಜನಹಿತ ಕಾರ್ಯಗಳು ನಿರ್ಲಕ್ಷಿಸಲ್ಪಟ್ಟು ಯಾವುದೇ ಅಭಿವೃದ್ಧಿಯನ್ನು ಹೊಂದಲಿಲ್ಲ. ರಸ್ತೆ, ರೈಲ್ವೆ, ಸೇತುವೆ, ಸಾರಿಗೆ ಸಂಪರ್ಕ, ಕೃಷಿ, ನೀರಾವರಿ, ವ್ಯಾಪಾರ, ಉದ್ದಿಮೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸ್ವಲ್ಪವೂ ಬದಲಾವಣೆಯಾಗಲಿಲ್ಲ. ಬರಗಾಲ, ಪ್ಲೇಗು, ನಿರುದ್ಯೋಗ ಬಂಜರು ಭೂಮಿ ಹಾಗೂ ಅನಕ್ಷರತೆ ಅಜ್ಞಾನದಿಂದಾಗಿ ಈ ಪ್ರದೇಶ ಹಿಂದುಳಿಯುತ್ತಲೇ ಸಾಗಿತ್ತು.

ಸಮಾಜದಲ್ಲಿ ಒಂದಿಂಚು ಭೂಮಿ ಇಲ್ಲದೇ ಒಪ್ಪೊತ್ತಿನ ಊಟಕ್ಕೆ ಪರದಾಡುತ್ತಿದ್ದ ವರ್ಗ ಒಂದು ಕಡೆ ಆದರೆ, ನೂರಾರು ಎಕರೆ ಭೂಮಿಗಳನ್ನು ಹೊಂದಿದ್ದ ಭೂಮಾಲೀಕರ ವರ್ಗ ಇನ್ನೊಂದು ಕಡೆ ಇತ್ತು. ಜನಸಾಮಾನ್ಯರ ಸ್ಥಿತಿ ಹೀಗಾದರೆ ನಿಜಾಮರ ಸ್ಥಾನವು ವಿಭಿನ್ನವಾಗಿತ್ತು. ನಿಜಾಮರು ಸಕಲ ಅಧಿಕಾರ ಮತ್ತು ಸವಲತ್ತುಗಳನ್ನು ಪಡೆದಿದ್ದರು. ಆಡಳಿತದಲ್ಲಿ ತಮ್ಮದೇ ಆದ ಸೈನ್ಯ, ನಾಣ್ಯ, ಸಾರಿಗೆ, ರೇಲ್ವೆ, ಅಂಚೆ, ಆಕಾಶವಾಣಿ, ಶಿಕ್ಷಣ ಮುಂತಾದವುಗಳನ್ನು ಸ್ವತಂತ್ರವಾಗಿ ನಡೆಸುತ್ತಿದ್ದರು. ಒಂದು ಪೈಸೆಯಿಂದ ಹಿಡಿದು ನೂರು ರೂಪಾಯಿಗಳವರೆಗಿನ ನಾಣ್ಯಗಳ ಮೇಲೆ ನಿಜಾಮನ ಚಿತ್ರ ಮುದ್ರಿಸಲಾಗಿತ್ತು. ಆದರೆ ನಿಜಾಮ ಯಾವುದೇ ಸುಧಾರಣೆ ತರುವುದರತ್ತ ಗಮನಹರಿಸಲಿಲ್ಲ. ಹೀಗೆ ನಿಜಾಮರ ನಿರ್ಲಕ್ಷ್ಯ ಮತ್ತು ನಿರಂಕುಶ ಆಡಳಿತದಿಂದ ಹೈದರಾಬಾದ್ ಕರ್ನಾಟಕ ಪ್ರದೇಶವು ರಾಜಕೀಯ ಸಂಘರ್ಷ, ಸಾಮಾಜಿಕ ಅಸಮಾನತೆಗೆ ಈಡಾಗಿ ಅಭದ್ರತೆ ಹೆಚ್ಚಾಗುತ್ತಾ ಹೋಯಿತು. ಸ್ವಾತಂತ್ರ್ಯದ ನಂತರವೂ ಪರಿಸ್ಥಿತಿ ಬದಲಾಗದೆ ಹಾಗೆ ಮುಂದುವರಿದಿದ್ದುದು ಚಳವಳಿಗಳಿಗೆ ದಾರಿಯಾಯಿತು.

ಪ್ರಸ್ತುತ ಅಧ್ಯಯನದಲ್ಲಿ ಚಿಂತನೆ ಮಾಡಲೇ ಬೇಕಾದ ಸಂಗತಿ ಎಂದರೆ, ಹಿಂದುಳಿದ ಭಾಗವಾದ ಹೈದರಾಬಾದ್ ಕರ್ನಾಟಕದಲ್ಲಿ, ಅಸಮಾನತೆಯ, ಹಿಂದುಳಿದಿರುವಿಕೆಯ ವಿರುದ್ಧ ಅತ್ಯಂತ ತೀವ್ರವಾದ, ಪರಿಣಾಮಕಾರಿಯಾದ ಹೋರಾಟಗಳು ಆರಂಭವಾಗಬೇಕಿತ್ತು. ಆದರೆ ಇಂತಹ ಹೋರಾಟಗಳು ನಡೆದುದೇ ಬಹು ವಿರಳ. ಅಥವಾ ನಡೆದಿದ್ದರೂ ಅವು ವಿಫಲವಾಗಿದ್ದೇ ಹೆಚ್ಚು. ಆದರೆ ಅದೇ ಮೈಸೂರು ಪ್ರಾಂತ್ಯದ ಸ್ಥಿತಿಗತಿಗಳನ್ನು ನೋಡಿದಾಗ ಅಭಿವೃದ್ಧಿ ಹೊಂದುತ್ತಾ ಮಾದರಿ ಸಂಸ್ಥಾನವಾಗುತ್ತಾ ಸಾಗಿತ್ತು. ಅಂದರೆ ಅಭಿವೃದ್ಧಿ ಹೊಂದಿದ್ದ ಪ್ರಾಂತ್ಯವು ಮತ್ತಷ್ಟು ತ್ವರಿತಗತಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಸಾಗಿದರೆ ಹೈದರಾಬಾದ್ ಕರ್ನಾಟಕದಲ್ಲಿ ಸಮಸ್ಯೆಗಳು ಹೆಚ್ಚಾಗುತ್ತಾ ಅಭಿವೃದ್ಧಿಯ ವಿರುದ್ಧ ದಿಕ್ಕಿನಲ್ಲಿ ಸಾಗಿತು. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲೂ ಸಹ ಅಸಮಾನತೆಯ, ಅನಭಿವೃದ್ಧಿಯ ಸುಳಿಯಿಂದ ಇನ್ನೂ ಹೊರಬರ ಬೇಕಾಗಿದೆ, ಅಲ್ಲದೇ ನಿಂತ ಜಾಗದಲ್ಲಿ ನಿಂತಿದೆ. ಪ್ರಗತಿಯ, ವೈಚಾರಿಕತೆಯ, ಹೋರಾಟದ ಚಳವಳಿಗಳ

ಗುಣಗಳನ್ನು ಬೆಳೆಸಿಕೊಂಡು ಹೋಗಬೇಕಾಗಿದ್ದ ಪ್ರದೇಶದಲ್ಲಿ ಹೆಚ್ಚಿನ ಅಭಿವೃದ್ಧಿ ಆಗದೇ ಚಟುವಟಿಕೆಗಳು ನಿಧಾನಗೊಂಡಿದ್ದು ಪ್ರಾಂತ್ಯದ ಮಹಾ ದುರಂತ. ವಾಸ್ತವವಾಗಿ ಸ್ವಾತಂತ್ರ್ಯದ ನಂತರ ಹೊಸ ವಿಚಾರಗಳನ್ನು, ಗುರಿಗಳನ್ನು ಹೊಂದಿದ ನಾಯಕರ ಮಾರ್ಗದರ್ಶನ ಸಂಘ-ಸಂಸ್ಥೆಗಳ ಮುಂದಾಳತ್ವ ಮತ್ತು ಹೋರಾಟ ಅತ್ಯವಶ್ಯಕವಾಗಿತ್ತು. ಆದರೆ ಇಂತಹ ಯಾವುದೇ ಬೆಳವಣಿಗೆಗಳು ತ್ವರಿತಗತಿಯಲ್ಲಿ ಮತ್ತು ಸರಿಯಾದ ನಿಟ್ಟಿನಲ್ಲಿ ಆಗದೇ ಇದ್ದದ್ದು ಇಲ್ಲಿನ ದುರಂತ ಎನ್ನಬಹುದು. ಅಷ್ಟೇ ಏಕೆ ಇನ್ನೊಂದು ಆಶ್ಚರ್ಯಕರ ಆದರೆ ಸತ್ಯವಾದ ಸಂಗತಿ ಏನೆಂದರೆ ಇಂದಿಗೂ ಇಲ್ಲಿನ ಚಳವಳಿಯ ನೇತೃತ್ವವನ್ನು ಇತರ ಭಾಗಗಳ ನಾಯಕರೇ ವಹಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಉದಾಹರಣೆಗೆ 'ಕರ್ನಾಟಕ ವಿಮೋಚನಾ ರಂಗ' ಎನ್ನುವ ಸಂಘಟನೆಯು ಗುಲಬರ್ಗಾದಲ್ಲಿ ತನ್ನ ಶಾಖೆಯನ್ನು ಸ್ಥಾಪಿಸಿಕೊಂಡು ಹೋರಾಟ ನಡೆಸುತ್ತಿರುವುದನ್ನು ಕಾಣಬಹುದಾಗಿದೆ.

ನಿಜಾಮನ ಆಳ್ವಿಕೆಯ ದರ್ಪ ಹಾಗೂ ದೌರ್ಜನ್ಯಗಳಿಂದ ತತ್ತರಿಸಿ ಹೋಗಿದ್ದ ಇಲ್ಲಿನ ಜನತೆ ಹೈದರಾಬಾದ್ ಕರ್ನಾಟಕಕ್ಕೆ, ವಿಮೋಚನೆ ದೊರೆತಾಗ ದೊಡ್ಡದೊಂದು ನಿಟ್ಟುಸಿರು ಬಿಟ್ಟಿದ್ದರು. ಭಾಷಾವಾರು ಪ್ರಾಂತ್ಯಗಳು ರಚನೆಯಾಗಿ ಹೈದರಾಬಾದ್ ಕರ್ನಾಟಕ ವಿಭಾಗವು ಅಂದಿನ ಮೈಸೂರು ರಾಜ್ಯದಲ್ಲಿ ಸೇರ್ಪಡೆಗೊಂಡಾಗ ಇಲ್ಲಿನ ಜನರು ತುಂಬಾ ಹರ್ಷಭರಿತರಾಗಿದ್ದರು. ತಮ್ಮ ಪ್ರದೇಶದ ಅಭಿವೃದ್ಧಿ ಆಗುವುದೆಂಬ ಹಿರಿದಾಸೆಯನ್ನು ಮನದಲ್ಲಿ ತುಂಬಿಕೊಂಡು ಸಂಭ್ರಮದಿಂದ ವಿಲೀನವನ್ನು ಆಚರಿಸಿದ್ದರು. ಇನ್ನು ಮುಂದೆ ತಮ್ಮ ಬದುಕು ಹಸನಾಗುವುದೆಂಬ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ನಂತರದ ವರ್ಷಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆಗಳು ಕಾಣದೇ ಬದಲಾವಣೆಗಳು ಘಟಿಸದೆ, ಮತ್ತದೇ ಅಸಮಾನತೆಯ ಪರಿಸ್ಥಿತಿ ಮುಂದುವರೆಯಿತು. ಇಂತಹ ಪರಿಸ್ಥಿತಿಗೆ ಹಲವಾರು ಕಾರಣಗಳಿವೆ. ರಾಜ್ಯದಲ್ಲಿ ಇದುವರೆಗೆ ಅಧಿಕಾರ ನಡೆಸುತ್ತಾ ಬಂದ ಪ್ರತಿಯೊಂದು ಸರಕಾರಗಳು ಈ ಭಾಗವನ್ನು ಅತ್ಯಂತ ನಿರ್ಲಕ್ಷ್ಯ ಮತ್ತು ತಾತ್ಸಾರದಿಂದಲೇ ನೋಡುತ್ತಾ ಬಂದವು. ರಾಜ್ಯದ ಯಜಮಾನಿಕೆಯ ಕೇಂದ್ರಗಳಾಗಿರುವ ಬೆಂಗಳೂರು ಮತ್ತು ಮೈಸೂರು ಪ್ರದೇಶಗಳನ್ನೇ ಕೇಂದ್ರವಾಗಿಟ್ಟುಕೊಂಡು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಯಿತು. ಹೀಗಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವು ಅನಾಥವಾಯಿತು. ಇಂತಹ ಅಜಗಜಾಂತರ ಅಸಮಾನತೆಯ ಚಿತ್ರಣವನ್ನು ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿ ಸಾಕ್ಷಿ ಒದಗಿಸುತ್ತದೆ. ಅಭಿವೃದ್ಧಿ ಸಂಬಂಧಿ ಅಂತರಗಳು ಹೈದರಾಬಾದ್ ಕರ್ನಾಟಕದ ಜನರ ಆತಂಕಗಳಿಗೆ ಕಾರಣಗಳಾಗಿವೆ ಮತ್ತು ಇಂತಹ ಆತಂಕಗಳೇ ಸರಕಾರದ ವಿರುದ್ಧ, ವ್ಯವಸ್ಥೆಯ ವಿರುದ್ಧ, ಸಮಾಜದ ವಿರುದ್ಧ, ಆಕ್ರೋಶಗಳಾಗಿ ರೂಪಾಂತರಗೊಂಡು ಚಳವಳಿಗಳಾಗಿ ಹೊರಹೊಮ್ಮಲು ಕಾರಣಗಳಾಗಿವೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿ ಮಂದಗತಿಯಲ್ಲಿ ಸಾಗಲು ಮತ್ತೊಂದು ಪ್ರಬಲ ಕಾರಣವೆಂದರೆ ಇದು ಬರಗಾಲ ಪೀಡಿತ ಪ್ರದೇಶವಾಗಿದ್ದು, ಕೃಷಿಯೇ ಜನರ ಆದಾಯದ ಮೂಲವಾಗಿದೆ. ಸಿಮೆಂಟ್ ಉದ್ದಿಮೆ ಮಾತ್ರ ಹೆಸರಿಸಬಹುದಾದ ಒಂದು ಪ್ರಮುಖ ಉದ್ಯಮವಾಗಿದೆ. ಬೇರೆ

ಉದ್ದಿಮೆಗಳ ಬೆಳವಣಿಗೆಗೆ ಬೇಕಾಗುವ ಬಂಡವಾಳ, ಉದ್ಯಮಿ ಸಾಹಸಿತನ ಹಾಗೂ ಮಾರುಕಟ್ಟೆ ಕೊರತೆಯ ಜೊತೆಗೆ, ಮೂಲಸೌಕರ್ಯಗಳಾದ ವಿದ್ಯುಚ್ಛಕ್ತಿ, ಸಾರಿಗೆ ಸಂಪರ್ಕ ಮುಂತಾದ ಸಮಸ್ಯೆಗಳಿವೆ. ಬೆಳೆಯುತ್ತಿರುವ ಜನಸಂಖ್ಯೆ ಸಾಂಪ್ರದಾಯಿಕ ಸಮಾಜ, ಬಡತನ, ನಿರುದ್ಯೋಗ, ಅರೆ-ಉದ್ಯೋಗ, ಹಾಗೂ ಕಡಿಮೆ ಉತ್ಪಾದನಾ ಶಕ್ತಿ, ಕಡಿಮೆ ಕೂಲಿ ದರ ಹೀಗೆ ಅನೇಕ ಸಮಸ್ಯೆಗಳಿವೆ. ಇಲ್ಲಿ ಮಾನವ ಸಂಪನ್ಮೂಲದ ಕೊರತೆ ಇದೆ ಸಾಕ್ಷರತಾ ಪ್ರಮಾಣ ಕಡಿಮೆ ಇದೆ ಶಿಕ್ಷಣದ ಗುಣಮಟ್ಟ ಕೆಳಮಟ್ಟದಲ್ಲಿದೆ ಮಾನವಾಭಿವೃದ್ಧಿಯಲ್ಲಿ ಇಲ್ಲಿನ ಜಿಲ್ಲೆಗಳು ಕೆಳಮಟ್ಟದ ಸ್ಥಾನಗಳಲ್ಲಿವೆ, ಜನರಿಗೆ ಆರೋಗ್ಯ, ಕುಡಿಯುವ ನೀರು, ಶೌಚಾಲಯ, ವಸತಿ ಮುಂತಾದ ನಾಗರಿಕ ಮೂಲ ಸೌಕರ್ಯಗಳ ಕೊರತೆಯಿದೆ. ಹೀಗಾಗಿ ಹೈದರಾಬಾದ್ ಕರ್ನಾಟಕದ ಚಿಂಚೋಳಿ, ಜೇವರ್ಗಿ, ದೇವದುರ್ಗ ತಾಲೂಕುಗಳು ಅತ್ಯಂತ ಹಿಂದುಳಿದ ತಾಲೂಕುಗಳಾಗಿವೆ. ಡಾ. ಡಿ.ಎಂ. ನಂಜುಂಡಪ್ಪ ವರದಿಯ ಪ್ರಕಾರ ರಾಜ್ಯದ ೧೭೫ ತಾಲೂಕುಗಳಲ್ಲಿ, ಅಭಿವೃದ್ಧಿಯಲ್ಲಿ ಚಿಂಚೋಳಿ ೧೭೩ನೇ ಸ್ಥಾನ, ಜೇವರ್ಗಿ ೧೭೪ನೇ ಸ್ಥಾನ ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ೧೭೫ನೇ ಸ್ಥಾನದಲ್ಲಿವೆ (ರಾಜ್ಯದಲ್ಲಿಯೆ ಕೊನೆಯ ಸ್ಥಾನ).

ಇಂತಹ ಪ್ರದೇಶದಲ್ಲಿ ಸ್ವಾತಂತ್ರ್ಯಾನಂತರ ಆರಂಭಗೊಂಡ ವಿವಿಧ ಸಾಮಾಜಿಕ ಚಳವಳಿಗಳು, ಅವುಗಳ ಉದ್ದೇಶ ಅವುಗಳ ಸಫಲತೆ ವಿಫಲತೆ ಹಾಗೂ ಪ್ರಸ್ತುತ ಚಳವಳಿಗಳ ಸ್ಥಿತಿಗತಿಗಳನ್ನು ನೋಡಿದಾಗ ಇಲ್ಲಿ ಅಭಿವೃದ್ಧಿಗಾಗಿ ಸಮಗ್ರ ಬದಲಾವಣೆಗಾಗಿ ಜನರು ಉಗ್ರ ಸ್ವರೂಪದ ಚಳವಳಿಗಳನ್ನು ಇದುವರೆಗೂ ಹಮ್ಮಿಕೊಂಡಿಲ್ಲವೆಂದೆನಿಸುತ್ತದೆ. ಆದರೆ ಕಾರ್ಮಿಕರ, ರೈತರ, ದಲಿತರ ಮತ್ತು ಮಹಿಳಾ ಸಂಘಟನೆಗಳು ಕೆಲವು ಹೋರಾಟಗಳನ್ನು ಚಳವಳಿಗಳನ್ನು ನಡೆಸುತ್ತಾ ಬಂದಿರುವುದನ್ನು ಗುರುತಿಸಬಹುದು. ಹೀಗಾಗಿ ಇಂತಹ ಹೋರಾಟಗಳನ್ನು ಅಧ್ಯಯನ ಮಾಡಿ ವಿಶ್ಲೇಷಣೆಗೆ ಒಳಪಡಿಸಿ ದಾಖಲು ಮಾಡುವ ಉದ್ದೇಶ ಹೊಂದಲಾಗಿದೆ.

ಅಧ್ಯಾಯಗಳು

ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ವಿಷಯವು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ವೈಚಾರಿಕತೆಗಳ ದೃಷ್ಟಿಯಿಂದ ತನ್ನದೇ ಆದ ವಿಶೇಷತೆಯನ್ನು ಮಹತ್ವವನ್ನು ಪಡೆದಿದೆ. ಕರ್ನಾಟಕದ ಒಂದು ಭಾಗವಾಗಿರುವ ಹೈದರಾಬಾದ್ ಕರ್ನಾಟಕ ಪ್ರದೇಶವು ಪ್ರಸ್ತುತ ಇಲ್ಲಿರುವ ಹಲವಾರು ಸಮಸ್ಯೆಗಳಿಂದಾಗಿ ಅತ್ಯಂತ ಹೆಚ್ಚು ಚರ್ಚೆಗೆ ಗಂಭೀರವಾದ ಚಿಂತನೆಗೆ ಒಳಗಾಗಿರುವ ಪ್ರದೇಶವಾಗಿದೆ. ಹಾಗೆಯೇ ಪ್ರಾದೇಶಿಕ ಅಸಮಾನತೆಯಿಂದಾಗಿ ಅತ್ಯಂತ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡು ಹಲವಾರು ಚಿಂತನೆಗಳಿಗೆ, ವಿಮರ್ಶೆಗಳಿಗೆ ದಾರಿ ಮಾಡಿಕೊಟ್ಟಿದೆ. ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿ ರೈತ, ದಲಿತ, ಹಿಂದುಳಿದ, ಕಾರ್ಮಿಕ, ಮಹಿಳಾ ಚಳವಳಿಗಳು ನಡೆಯುತ್ತಿವೆ. ಹೀಗಾಗಿ ಸಂಶೋಧನೆಯ ಸಮಗ್ರ ಸಾರವನ್ನು ಆರು ಅಧ್ಯಾಯಗಳಲ್ಲಿ ಕ್ರಮಬದ್ಧವಾಗಿ ಮತ್ತು ಗುಣಾತ್ಮಕತೆಯಿಂದ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ, ಪ್ರಸ್ತಾವನೆ, ಸಂಶೋಧನೆಯ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಇಲ್ಲಿಯವರೆಗೆ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಕುರಿತು ಆಗಿರುವ ಸಂಶೋಧನೆಗಳ ಸಮಗ್ರ ಮಾಹಿತಿಯನ್ನು ಕ್ರೂಢೀಕರಿಸಿ ವೈಜ್ಞಾನಿಕ ವಿಮರ್ಶೆಗೆ ಒಳಪಡಿಸಲಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶವು ನಿಜಾಮನ ಆಳ್ವಿಕೆಯಿಂದ ಜನಪ್ರತಿನಿಧಿಗಳಿಗೆ ಹೇಗೆ ಹಸ್ತಾಂತರವಾಯಿತು ನಂತರ ಇದು ಹೇಗೆ ನಿರ್ಲಕ್ಷ್ಯಕ್ಕೆ ಅಸಮಾನತೆಗೆ ಈಡಾಯಿತು ಇದಕ್ಕೆ ಕಾರಣರು ಯಾರು ಮತ್ತು ಇದರಿಂದ ಅನ್ಯಾಯಕ್ಕೊಳಗಾದವರು ಯಾರು ಎನ್ನುವುದನ್ನು ಚರ್ಚಿಸಲಾಗಿದೆ. ಹಾಗೆಯೇ ಒಂದು ಕಡೆ ಆಗಿನ ಮೈಸೂರು ಪ್ರಾಂತ್ಯ ಅಭಿವೃದ್ಧಿಯತ್ತ ಮುಖ ಮಾಡಿ ಸಾಗುತ್ತಿದ್ದರೆ, ಹೈದರಾಬಾದ್ ಕರ್ನಾಟಕ ಹೇಗೆ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ವಿರುದ್ಧ ದಿಕ್ಕಿನಲ್ಲಿ ಸಾಗಿತು ಎನ್ನುವುದರ ತುಲನಾತ್ಮಕ ಅಧ್ಯಯನ ಕೈಕೊಳ್ಳಲಾಗಿದೆ. ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಮೇಲೆ ಇದುವರೆಗೆ ಆಗಿರುವ ಅಧ್ಯಯನಗಳು ಯಾವುವು, ಇಲ್ಲಿಯವರೆಗೆ ಆಗಿರುವ ಅಧ್ಯಯನಗಳಿಗಿಂತ ಪ್ರಸ್ತುತ ಅಧ್ಯಯನ ಹೇಗೆ ಭಿನ್ನವಾಗಿದೆ, ಯಾವ ದೃಷ್ಟಿಕೋನ ಇಟ್ಟುಕೊಳ್ಳಲಾಗಿದೆ ಎನ್ನುವುದನ್ನು ಸ್ಪಷ್ಟಪಡಿಸಲಾಗಿದೆ. ಹಾಗೆಯೇ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿ ಆರಂಭವಾದ ಚಳವಳಿಗಳು ಯಾವುವು, ಇವು ಎಷ್ಟರಮಟ್ಟಿಗೆ ಸಫಲತೆ ಮತ್ತು ವಿಫಲತೆಯನ್ನು ಕಂಡವು, ಸಫಲತೆ ವಿಫಲತೆಗೆ ಕಾರಣವೇನು ಹಾಗೂ ಪ್ರಸ್ತುತ ಚಳವಳಿಗಳು ಯಾವ ದಿಕ್ಕಿನಲ್ಲಿ ಸಾಗಿವೆ ಎನ್ನುವುದರ ವಿಶ್ಲೇಷಣೆ ಕೈಗೊಳ್ಳಲಾಗಿದೆ ಮತ್ತು ಸಂಶೋಧನೆಗೆ ಬಳಸಿಕೊಂಡಿರುವ ವಿವಿಧ ಮೂಲಾಧಾರಗಳ ವಿವರ ಕೊಡಲಾಗಿದೆ. ಅಧ್ಯಾಯದಲ್ಲಿ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಕುರಿತು ಸಮಗ್ರ ಮಾಹಿತಿಯನ್ನು ಕ್ರೂಢೀಕರಿಸಿ ವಿಮರ್ಶೆಗೆ ಒಳಪಡಿಸಿ, ಚಳವಳಿಗಳ ಗತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಎರಡನೇ ಅಧ್ಯಾಯದಲ್ಲಿ, "ಹೈದರಾಬಾದ್ ಕರ್ನಾಟಕದ ಸ್ಥಿತಿಗತಿ ಹಾಗೂ ಸಮಸ್ಯೆಗಳು" ಎನ್ನುವ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿದೆ. ಹೈದರಾಬಾದ್ ಕರ್ನಾಟಕದ ಭೌಗೋಳಿಕತೆಯನ್ನು ವಿವರಿಸುತ್ತಾ ಹೈದರಾಬಾದ್ ಕರ್ನಾಟಕ ಎನ್ನುವ ಪ್ರದೇಶವು ರೂಪಗೊಂಡಿದ್ದು ಯಾವಾಗ, ಹೈದರಾಬಾದ್ ಕರ್ನಾಟಕ ಒಳಗೊಂಡಿರುವ ಪ್ರದೇಶಗಳ ವಿವರ ಹಾಗೂ ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಯಾವ ಯಾವ ಪ್ರದೇಶಗಳು ನಿಜಾಮನ ಪ್ರಾಂತ್ಯದಿಂದ ಕರ್ನಾಟಕಕ್ಕೆ ಸೇರಿದವು ಎನ್ನುವ ವಿಷಯವನ್ನು ವಿವರಿಸಲಾಗಿದೆ. ಈಗ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಬರುವ ಬೀದರ್, ಗುಲಬರ್ಗಾ, ಯಾದಗಿರಿ, ರಾಯಚೂರು ಕೊಪ್ಪಳ ಬಳ್ಳಾರಿ ಜಿಲ್ಲೆಗಳ ವಿಸ್ತೀರ್ಣ, ಜನಸಂಖ್ಯೆ, ವಾಯುಗುಣ, ಸಾಕ್ಷರತೆ, ತಲಾ ವರಮಾನಗಳ ಬಗ್ಗೆ ವಿವರಿಸಲಾಗಿದೆ.

ಹೈದರಾಬಾದ್ ಕರ್ನಾಟಕದ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಚರ್ಚಿಸುತ್ತಾ, ದಕ್ಷಿಣದಲ್ಲಿ 'ಅಸಾಫಿಯಾ' ವಂಶದ ಸ್ಥಾಪನೆ, ನಿಜಾಮರ ಆಳ್ವಿಕೆ ಹಾಗೂ ಇವರ ಆಳ್ವಿಕೆಯಲ್ಲಿ ಹೈದರಾಬಾದ್ ರಾಜ್ಯದಲ್ಲಿ ಆದ ಜನಪರ ಕಾರ್ಯಗಳು, ಜಾರಿಯಾದ ಮುಲ್ಕಿ ಕಾನೂನು ಹಾಗೂ ರಜಾಕಾರರ ಸಂಘಟನೆ,

ನಿಜಾಮ ರಾಜಶಾಹಿಯಿಂದ ಭಾರತದ ಒಕ್ಕೂಟದ ಪ್ರಜಾಶಾಹಿಗೆ ಸೇರಲು ನಡೆದ ವಿಮೋಚನಾ ಹೋರಾಟ, ವಿಮೋಚನೆಯ ನಂತರ ರಾಜ್ಯದ ಸ್ಥಿತಿಗತಿಗಳು ಹೀಗೆ ಸಮಗ್ರವಾಗಿ ಹೈದರಾಬಾದ್ ಕರ್ನಾಟಕದ ರಾಜಕೀಯ ಸ್ಥಿತಿಗತಿಗಳನ್ನು ವಿವರಿಸಲಾಗಿದೆ.

ಹಾಗೆಯೇ ಹೈದರಾಬಾದ್ ಕರ್ನಾಟಕ ಪ್ರದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಹೇಗೆ ಸಂಪತ್ಭರಿತವಾಗಿತ್ತು, ಇಲ್ಲಿನ ಕೃಷಿ, ನೀರಾವರಿ ಯೋಜನೆಗಳು, ಬೆಳೆಗಳು, ಮಳೆಯ ಪ್ರಮಾಣ, ಬಡತನ, ನಿರುದ್ಯೋಗ ಹಾಗೂ ವರಮಾನ, ಆದಾಯದ ಮೂಲಗಳ ಬಗ್ಗೆ ವಿವರ ನೀಡಲಾಗಿದೆ. ಸಾಮಾಜಿಕವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವು ಹೇಗೆ ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಕೇಂದ್ರವಾಗಿದ್ದರ ಬಗ್ಗೆ ಹಾಗೂ ಇಲ್ಲಿ ಬೆಳವಣಿಗೆಯಾದ ಉರ್ದು, ದಖ್ಖನೀ ಭಾಷೆಗಳು, ವಿವಿಧ ಜಾತಿ, ಪಂಥ ಹೀಗೆ ವಿಭಿನ್ನ ಸಂಸ್ಕೃತಿಯಿಂದ ಕರ್ನಾಟಕದಲ್ಲಿಯೇ ತನ್ನ ಸ್ಥಾನವನ್ನು ಹೇಗೆ ವಿಭಿನ್ನವಾಗಿ ಗುರುತಿಸಿಕೊಂಡಿದೆ ಎನ್ನುವುದನ್ನು ವಿವರಿಸಲಾಗಿದೆ ಹಾಗೂ ಧಾರ್ಮಿಕವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವು ಹೇಗೆ ಅನೇಕ ಧರ್ಮಗಳ ನೆಲೆಯಾಗಿದೆ, ಸಮಾನತೆ ಹಾಗೂ ನಿಸ್ವಾರ್ಥತೆಯ ತತ್ವಗಳನ್ನು ಆಧರಿಸಿ ಇಲ್ಲಿನ ಧರ್ಮಗಳು ಹೇಗೆ ನೆಲೆ ನಿಂತಿವೆ ಮತ್ತು ಸಾಮಾಜಿಕ ಸಾಮರಸ್ಯ ಮೂಡಿಸುವಲ್ಲಿ ವೈಚಾರಿಕಾ ಕ್ರಾಂತಿಯಲ್ಲಿ, ದಾಸೋಹ ಕ್ಷೇತ್ರಗಳಲ್ಲಿ ಇಲ್ಲಿನ ಮಠಗಳು, ಮಸೀದಿಗಳು, ಹೇಗೆ ಮಾದರಿ ಕೇಂದ್ರಗಳಾಗಿವೆ ಎನ್ನುವ ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, 'ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಚಾರಿತ್ರಿಕ ನೋಟ' ಎನ್ನುವ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ನಡೆದ ವಚನ, ಸೂಫಿ, ದಾಸ ಹಾಗೂ ತತ್ವಪದಕಾರರ ಪರಂಪರೆಯನ್ನು ಹಾಗೂ ಇವುಗಳು ಈ ಭಾಗದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಬೀರಿದ ಪ್ರಭಾವಗಳೇನು ಎಂಬುದನ್ನು ಚರ್ಚಿಸಲಾಗಿದೆ.

ಆರಂಭದಲ್ಲಿ ವಚನ ಪರಂಪರೆಯ ಬಗ್ಗೆ ವಿವರಿಸುತ್ತಾ ಬಸವಣ್ಣ ಹಾಗೂ ಇತರ ಶರಣರಿಂದ ಪ್ರಾರಂಭವಾದ ವಚನ ಚಳವಳಿಯು ಹೈದರಾಬಾದ್ ಕರ್ನಾಟಕದ ಜನಜೀವನದ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಹಾಗೂ ಸ್ತ್ರೀಪರ ದಲಿತಪರ ಎನ್ನುವ ಬಸವಣ್ಣನ ವಿಚಾರಗಳು ಇಂದಿನ ಸ್ತ್ರೀ ಮತ್ತು ದಲಿತ ಚಳವಳಿಗೆ ಎಷ್ಟರಮಟ್ಟಿಗೆ ಸಮಂಜಸವಾಗಿದೆ ಎನ್ನುವ ವಿಶ್ಲೇಷಣೆಯನ್ನು ಮಾಡಲಾಗಿದೆ. ಎರಡನೇ ಭಾಗದಲ್ಲಿ ಸೂಫಿ ಪರಂಪರೆ ಬಗ್ಗೆ ಅಧ್ಯಯನ ಮಾಡುತ್ತಾ ಶರಣರ ನಂತರ ಭೂಮಿಕೆಯನ್ನು ಪ್ರವೇಶಿಸಿದ ಸೂಫಿಗಳು ಶರಣರ ಪರಂಪರೆಯನ್ನು ಹೇಗೆ ಮುಂದುವರೆಸಿದರು ಹಾಗೂ ತಮ್ಮದೇ ಆದ ಮಾರ್ಗದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಯನ್ನು ಆರಂಭಿಸಿದರು ಮತ್ತು ಇದರ ಪ್ರಭಾವವೇನು ಎನ್ನುವುದರ ವಿವರಣೆ ನೀಡಲಾಗಿದೆ. ಮೂರನೇ ಭಾಗದಲ್ಲಿ ದಾಸ ಪರಂಪರೆ ಬಗ್ಗೆ ಅಧ್ಯಯನ ಮಾಡುತ್ತಾ ದಾಸರುಗಳು ಹಾಗೂ ಇವರ ಕೀರ್ತನೆಗಳಿಂದಾಗಿ ಹೈದರಾಬಾದ್ ಕರ್ನಾಟಕ ಭಾಗದ ಜನರ ಮೇಲೆ ಬೀರಿದ ಪ್ರಭಾವಗಳೇನು ಎನ್ನುವುದನ್ನು ಹಾಗೂ ನಾಲ್ಕನೇ ಭಾಗದಲ್ಲಿ ತತ್ವಪದಕಾರರ ಪರಂಪರೆಯನ್ನು ಅಧ್ಯಯನ

ಮಾಡುತ್ತಾ, ತತ್ವಪದಕಾರರು ಆಗ ಸಮಾಜದಲ್ಲಿದ್ದ ಬಡತನ, ಶೋಷಣೆ ಅಸಮಾನತೆಯ ವಿರುದ್ಧ ಹಾಗೂ ಆಗಿನ ಜ್ವಲಂತ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಿದ ಅಂಶಗಳನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ, 'ಸ್ವಾತಂತ್ರ್ಯೋತ್ತರ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳು' ಎನ್ನುವ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಇಲ್ಲಿ ನಡೆದ ರೈತ, ದಲಿತ, ಹಿಂದುಳಿದ, ಕಾರ್ಮಿಕ ಹಾಗೂ ಮಹಿಳಾ ಚಳವಳಿಗಳು ಹಾಗೂ ಸಮಕಾಲೀನ ಸಂದರ್ಭದಲ್ಲಿ ಇವರ ಸಮಸ್ಯೆಗಳು ಮತ್ತು ಸ್ಥಿತಿಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.

ಇದೇ ಅಧ್ಯಾಯದ ಮೊದಲನೇ ಭಾಗದಲ್ಲಿ ಸ್ವಾತಂತ್ರ್ಯೋತ್ತರ ರೈತ ಚಳವಳಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಮೊದಲು ರೈತ ಎಂದರೆ ಯಾರು ಎಂಬುದನ್ನು ಚರ್ಚಿಸುತ್ತಾ, ರೈತಸಂಘ ರೈತ ಚಳವಳಿಯ ಪ್ರಜ್ಞೆ, ಸಂಘಟನೆ, ಜಾಗೃತಿ ಮತ್ತು ಹೋರಾಟಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಹಾಗೆಯೇ ಹೈದರಾಬಾದ್ ಕರ್ನಾಟಕದಲ್ಲಿ ರೈತ ಚಳವಳಿಗಳು ಆರಂಭವಾಗಲು ಕಾರಣಗಳೇನು, ಹೋರಾಟ ಕೈಗೊಂಡವರ್‍ಯಾರು, ಪ್ರಮುಖ ಹೋರಾಟಗಳ್ಯಾವುವು ಇವರ ಹೋರಾಟದ ಗತಿ ಯಾವ ರೀತಿ ಇತ್ತು, ಹೋರಾಟಗಳಿಂದ ಪ್ರತಿಫಲ ಪಡೆದ ವರ್ಗ ಯಾವುದು, ಹೋರಾಟಗಳು ಎಲ್ಲಿ ಸೋತಿವೆ ಮತ್ತು ಪ್ರಸ್ತುತ ಇಲ್ಲಿನ ರೈತರು ಎದುರಿಸುತ್ತಿರುವ ಸಮಸ್ಯೆಗಳೇನು, ಅವರ ಸ್ಥಿತಿಗತಿಗಳೇನು ಎನ್ನುವ ಅಂಶಗಳನ್ನು ಇಲ್ಲಿ ದಾಖಲಿಸುತ್ತಾ ವಿಶ್ಲೇಷಣೆ ಕೈಗೊಳ್ಳಲಾಗಿದೆ.

ಇದೇ ಅಧ್ಯಾಯದ ಎರಡನೇ ಭಾಗದಲ್ಲಿ, ಸ್ವಾತಂತ್ರ್ಯೋತ್ತರ ದಲಿತ ಚಳವಳಿಯ ಬಗ್ಗೆ ಅಧ್ಯಯನ ಮಾಡುತ್ತಾ ದಲಿತ ಎಂದರೆ ಯಾರು ದಲಿತತ್ವ ಎಂದರೇನು, ಸಮಾಜದಲ್ಲಿ ದಲಿತರ ಸ್ಥಾನಮಾನಗಳೇನು ಎಂಬುದನ್ನು ಆರಂಭದಲ್ಲಿ ವಿವರಿಸಲಾಗಿದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ದಲಿತರ ಉದ್ಧಾರಕ್ಕಾಗಿ ಬೆಳಕಾಗಿ, ದಲಿತ ಹೋರಾಟಕ್ಕೆ ಜೀವ ತಂದು ಕೊಟ್ಟವರು ಯಾರು ಹಾಗೂ ಹೈದರಾಬಾದ್ ಕರ್ನಾಟಕದ ಮೇಲೆ ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಭಾವ ಮತ್ತು ಈ ಭಾಗದವರೆ ಆದ ಬಿ. ಶ್ಯಾಮಸುಂದರ್ ಅವರಿಂದ ಭೀಮಸೇನೆಯ ಸ್ಥಾಪನೆ, ನಂತರ ದಲಿತ ಸಂಘರ್ಷ ಸಮಿತಿಯ ಸ್ಥಾಪನೆ ಹಾಗೂ ಇತರ ಸಂಘಟನೆಗಳ ನೇತೃತ್ವದಲ್ಲಿ ದಲಿತರ ಮೇಲೆ ನಡೆದ, ನಡೆಯುತ್ತಿದ್ದ ಹಲ್ಲೆಗಳು, ಶೋಷಣೆಗಳನ್ನು ವಿರೋಧಿಸಿ ನಡೆದ ಪ್ರತಿಭಟನೆ ಮತ್ತು ಹೋರಾಟಗಳನ್ನು ಚರ್ಚಿಸಲಾಗಿದೆ. ಹಾಗೆಯೇ ವಿಶೇಷವಾಗಿ ದಲಿತರ ಭೂ ಹೋರಾಟಗಳು, ಜಾತಿವಾದಿಗಳ ವಿರುದ್ಧ, ಮಹಿಳೆಯರ ದೌರ್ಜನ್ಯದ ವಿರುದ್ಧ, ಬೆತ್ತಲಸೇವೆ ವಿರುದ್ಧ ನಡೆದ ಹೋರಾಟಗಳು, ಅವುಗಳ ಸಫಲತೆ ವಿಫಲತೆಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾ ದಾಖಲಿಸಲಾಗಿದೆ. ಹಾಗೆಯೇ ಪ್ರಸ್ತುತ ಇಲ್ಲಿನ ದಲಿತರ ಸಮಸ್ಯೆಗಳಾದ ಅಸ್ಪೃಶ್ಯತೆ, ದೌರ್ಜನ್ಯ, ದಲಿತರಲ್ಲಿ ಎಡಗೈ-ಬಲಗೈ ವಿವಾದ, ದಲಿತ ಸಂಘಟನೆಗಳ ಒಡಕು ಹಾಗೂ ದಲಿತರ ಮುಂದಿರುವ ಸವಾಲುಗಳು ಹಾಗೂ ಪ್ರಸ್ತುತ ದಲಿತ ಚಳವಳಿಗಳು ಸಾಗಬೇಕಾಗಿರುವ ದಿಕ್ಕುದೆಸೆಗಳ ಬಗ್ಗೆ ಚರ್ಚಿಸಲಾಗಿದೆ.

ಇದೇ ಅಧ್ಯಾಯದ ಮೂರನೇ ಭಾಗದಲ್ಲಿ, ಸ್ವಾತಂತ್ರ್ಯೋತ್ತರ ಹಿಂದುಳಿದ ವರ್ಗಗಳ ಚಳವಳಿಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಹಿಂದುಳಿದ ವರ್ಗಗಳ ಚಳವಳಿಯ ವಿಭಿನ್ನತೆ, ಇದರ ಪ್ರಾಮುಖ್ಯತೆ ಬಗ್ಗೆ ವಿವರಿಸಲಾಗಿದೆ. ಇಲ್ಲಿ ವಿವಿಧ ಉಪ ಜಾತಿಗಳಿಗೆ ಸೇರಿದ ಮೂಲ ನೆಲೆಯಿಲ್ಲದ ಅಸಂಘಟಿತರಾಗಿರುವ ಮೂಲ ಸೌಲಭ್ಯಗಳಿಂದ ವಂಚಿತರಾಗಿರುವ ಜನಾಂಗಗಳು ಹೆಚ್ಚಾಗಿದ್ದರೂ ಹಿಂದುಳಿದ ವರ್ಗಗಳ ಹೋರಾಟಗಳು ತೀವ್ರ ಸ್ವರೂಪ ಪಡೆದುಕೊಳ್ಳದಿರಲು ತನ್ನದೇ ಆದ ಕಾರಣಗಳಿರುವುದನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಹಾಗೆಯೇ ಒಂದು ಕಡೆ ಜಾತಿ ಸಂಘರ್ಷ, ಅನಕ್ಷರತೆ, ಬಡತನ, ಸಾಮಾಜಿಕ ಅಸಮಾನತೆ ಕಾಡುತ್ತಿದ್ದರೆ, ಇನ್ನೊಂದೆಡೆ ಸರಕಾರ ಮತ್ತು ಇಲ್ಲಿನ ಜನ ಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಹಿಂದುಳಿದ ವರ್ಗಗಳು ಸಂಘಟಿತರಾಗಿ ಸರಕಾರದ ಮೇಲೆ ಮತ್ತು ಆಯೋಗಗಳ ಮೇಲೆ ಒತ್ತಡ ಹೇರುವಲ್ಲಿ ವಿಫಲವಾಗುತ್ತಿವೆ ಎನ್ನುವುದನ್ನು ಹಾಗೂ ಹೋರಾಟಗಳು ಒಂದು ಸ್ಪಷ್ಟ ರೂಪದಲ್ಲಿ ನಿರಂತರವಾಗಿ ನಡೆಯುತ್ತಿಲ್ಲ ಎನ್ನುವುದನ್ನು ಗುರುತಿಸುತ್ತಾ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಇದೇ ಅಧ್ಯಾಯದ ನಾಲ್ಕನೇ ಭಾಗದಲ್ಲಿ, ಸ್ವಾತಂತ್ರ್ಯೋತ್ತರ ಕಾರ್ಮಿಕ ಚಳವಳಿಗಳ ಬಗ್ಗೆ ಅಧ್ಯಯನ ಮಾಡುತ್ತಾ, ಕಾರ್ಖಾನೆಗಳಲ್ಲಿ ಕಡಿಮೆ ವೇತನ, ಮಾಲೀಕರ ಶೋಷಣೆ, ನಿರ್ಲಕ್ಷ್ಯ, ವಸತಿ ಸಮಸ್ಯೆ ಮುಂತಾದವುಗಳನ್ನು ವಿರೋಧಿಸಿ ಆರಂಭಿಸಿದ ಪ್ರತಿಭಟನೆಗಳಿಂದ ಹಿಡಿದು ಕಾರ್ಮಿಕರ ಹಿತರಕ್ಷಣೆಗಾಗಿ ಸ್ಥಾಪಿಸಲ್ಪಟ್ಟ ಕಾರ್ಮಿಕ ಸಂಘಟನೆಗಳು, ಕಮುನಿಸ್ಟ್ ಸಿದ್ಧಾಂತವುಳ್ಳ ಪಕ್ಷಗಳ ನೇತೃತ್ವದಲ್ಲಿ ನಡೆದ ಹೋರಾಟಗಳು, ಅವುಗಳ ಸಫಲತೆ ಮತ್ತು ವಿಫಲತೆಗಳನ್ನು ಅವಲೋಕಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಪ್ರಸ್ತುತ ಕಾರ್ಮಿಕರ ಸಮಸ್ಯೆಗಳು ಸ್ಥಿತಿಗತಿಗಳು ಸರಕಾರದ ಧೋರಣೆ ಮತ್ತು ಕಾರ್ಮಿಕರ ಹೋರಾಟಗಳು ಯಾವ ದಿಕ್ಕಿನಲ್ಲಿ ಸಾಗಿವೆ ಎನ್ನುವುದನ್ನು ಚರ್ಚಿಸಲಾಗಿದೆ.

ಇದೇ ಅಧ್ಯಾಯದ ಐದನೇ ಭಾಗದಲ್ಲಿ, ಸ್ವಾತಂತ್ರ್ಯೋತ್ತರ ಮಹಿಳಾ ಚಳವಳಿಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಕರ್ನಾಟಕದಲ್ಲಿ ನಡೆದ ಮತ್ತು ನಡೆಯುತ್ತಿರುವ ಮಹಿಳಾ ಚಳವಳಿಗಳಿಗಿಂತ ಇಲ್ಲಿನ ಚಳವಳಿಗಳು ವಿಭಿನ್ನವಾಗಿರುವುದನ್ನು ಗುರುತಿಸಲಾಗಿದೆ. ಮಹಿಳೆಯರ ಮೇಲೆ ಅನೇಕ ಕಟ್ಟುಪಾಡುಗಳಿದ್ದಾಗ, ಬಂಡಾಯ ಸಾಹಿತ್ಯದಿಂದಾಗಿ, ಮಹಿಳೆಯರ ಮೇಲೆ ಉಂಟಾದ ಪ್ರಭಾವ ಹಾಗೂ ಈ ದಿಸೆಯಲ್ಲಿ ಹುಟ್ಟಿಕೊಂಡ ಮಹಿಳಾ ಸಂಘಟನೆಗಳು, ಅವುಗಳ ಬೇಡಿಕೆಗಳು ಪ್ರಮುಖ ಹೋರಾಟಗಳು, ಹೋರಾಟಗಳ ಸಫಲತೆ ಮತ್ತು ವಿಫಲತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಪ್ರಸ್ತುತ ಇಲ್ಲಿನ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಸ್ಥಿತಿಗತಿಗಳು ಹಾಗೂ ಮಹಿಳಾ ಹೋರಾಟಗಳು ತಮ್ಮದೇ ಆದ ನೆಲೆಯನ್ನು ಕಂಡುಕೊಳ್ಳುವಲ್ಲಿ ಅಷ್ಟೊಂದು ಯಶಸ್ವಿಯಾಗದೆ ಇರುವುದಕ್ಕೆ ಕಾರಣಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ, 'ಸಾಮಾಜಿಕ ಚಳವಳಿಗಳಲ್ಲಿ ಧರ್ಮ ಮತ್ತು ಸರಕಾರಗಳ ಪಾತ್ರ' ಎನ್ನುವ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿದೆ. ಅನೇಕ ಧರ್ಮಗಳ ನೆಲೆವೀಡಾಗಿರುವ ಈ ಪ್ರದೇಶದಲ್ಲಿ ಮಠಗಳು, ಮಸೀದಿಗಳು, ಚರ್ಚ್‌ಗಳು ಎಲ್ಲಾ ವರ್ಗದ ಜನರಿಗೆ ಆಶ್ರಯ ನೀಡುತ್ತಾ

ಮತೀಯ ಸಾಮರಸ್ಯ ಕಾಪಾಡುತ್ತಾ, ಸರಕಾರಗಳು ಮಾಡಲಾರದಂತಹ ಅಥವಾ ಸರಕಾರಕ್ಕೆ ಮಾಡಲು ಸುಲಭ ಸಾಧ್ಯವಾಗದಂತಹ ಎಷ್ಟೋ ಸಾಮಾಜಿಕ ಕಾರ್ಯಗಳನ್ನು ಇವು ಕೈಗೊಂಡಿರುವುದನ್ನು ಹಾಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಿಂದಿನಿಂದಲೂ ತಮ್ಮನ್ನು ತೊಡಗಿಸಿಕೊಂಡು ಇಂದಿಗೂ ಸಮಾಜದ ಏಳಿಗೆಯಲ್ಲಿ, ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಇದೇ ಅಧ್ಯಾಯದ ಎರಡನೇ ಭಾಗದಲ್ಲಿ 'ಸಾಮಾಜಿಕ ಚಳವಳಿಗಳು ಮತ್ತು ಸರಕಾರ' ಎನ್ನುವುದರಲ್ಲಿ ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ, ಅಭಿವೃದ್ಧಿಗಾಗಿ ಜನರ ಪ್ರತಿಭಟನೆಗಳಿಗೆ ಸ್ಪಂದಿಸಿ ಸರಕಾರಗಳು ಕೈಗೊಂಡಿರುವ ಯೋಜನೆಗಳು ಹಾಗೂ ಡಾ. ಡಿ.ಎಂ. ನಂಜುಂಡಪ್ಪ ನೇತೃತ್ವದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ನೇಮಕ ಹಾಗೂ ಸಮಿತಿ ಮಾಡಿರುವ ಶಿಫಾರಸ್ಸುಗಳು ಹಾಗೂ ಇದರಿಂದಾದ ಬದಲಾವಣೆಗಳು ಮತ್ತು ಸುಧಾರಣೆಗಳು ಹಾಗೂ ಇನ್ನೂ ಉಳಿದಿರುವ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ.

ಹಾಗೆಯೇ ಹೈದರಾಬಾದ್ ಕರ್ನಾಟಕ ಭಾಗದ ಜನರ ಹಲವಾರು ದಶಕಗಳ ಬೇಡಿಕೆಯಾಗಿರುವ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ವಿವರವಾಗಿ ಚರ್ಚಿಸುತ್ತಾ, ಸಂವಿಧಾನದ ೩೭೧ನೇ ಕಲಂ ಎಂದರೇನು, ಇದರ ಅನುಬಂಧಗಳು ಹಾಗೂ ಇದುವರೆಗೆ ಈ ಕಲಂನ ಪ್ರಯೋಜನ ಪಡೆದ ಪ್ರದೇಶಗಳಾವುವು ಮತ್ತು ಸ್ವಾತಂತ್ರ್ಯದ ನಂತರ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಿಗೆ ಈ ಕಲಂ ಏಕೆ ಅನ್ವಯವಾಗಲಿಲ್ಲ ಎನ್ನುವ ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಇತ್ತೀಚಿಗೆ ೩೭೧ನೇ ಕಲಂ ಜಾರಿ ಕುರಿತು ಇಲ್ಲಿನ ತೀವ್ರ ಹೋರಾಟಗಳಿಗೆ ಸ್ಪಂದಿಸಿ, ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳಿಗೆ (ಬೀದರ್, ಗುಲಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ) ವಿಶೇಷ ಸ್ಥಾನಮಾನ ಕಲ್ಪಿಸುವುದಕ್ಕಾಗಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ತರಲು ಕೇಂದ್ರ ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿರುವ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ೩೭೧ನೇ ಕಲಂ ಜಾರಿಯಿಂದಾಗಿ ಫಲಾನುಭವಿ ವರ್ಗಗಳಾವುವು, ಕೆಳವರ್ಗದವರ ನಿರ್ಲಕ್ಷಿತರ ಬಡವರ ಬದುಕಿನಲ್ಲಿ ಇದು ಎಷ್ಟರಮಟ್ಟಿಗೆ ಬದಲಾವಣೆ ತರಬಲ್ಲದು ಎಂಬುವುದರ ಕುರಿತು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ, 'ಉಪಸಂಹಾರ'ದ ಶೀರ್ಷಿಕೆಯಡಿ ಒಟ್ಟಾರೆಯಾಗಿ ಸಂಶೋಧನಾ ಫಲಿತಾಂಶಗಳನ್ನು ಕಂಡುಕೊಂಡ ಸಮಗ್ರ ಮಾಹಿತಿಯನ್ನು ನೀಡಲಾಗಿದೆ. ಇಡೀ ಸಂಶೋಧನಾ ಅವಧಿಯಲ್ಲಿ ಕಂಡುಕೊಂಡ ಫಲಿತಗಳು, ಅಧ್ಯಯನಕ್ಕೆ ಹೊರಟಾಗ ಎದುರಾದ ಸಮಸ್ಯೆಗಳು, ಕ್ಷೇತ್ರಕಾರ್ಯದಲ್ಲಿ ತೊಡಗಿಸಿಕೊಂಡಾಗ ವಿವಿಧ ಕ್ಷೇತ್ರದಲ್ಲಿ ಎದುರಾದ ರಾಜಕೀಯ, ಸಾಮಾಜಿಕ ಹಾಗೂ ಜಾತಿ ಸಮಸ್ಯೆಗಳು ಹಾಗೂ ಅವುಗಳನ್ನು ಎದುರಿಸಿದ ಬಗ್ಗೆ ಮತ್ತು ಸಂಶೋಧನೆಯಲ್ಲಿ ಕಂಡುಕೊಂಡ ವಾಸ್ತವಗಳ ಬಗ್ಗೆ

ತಿಳಿಸಲಾಗಿದೆ. ಹಾಗೆಯೇ ವ್ಯಕ್ತಿಗಳ ಸಂದರ್ಶನ ಹಾಗೂ ದಾಖಲೆಗಳ ಮಾಹಿತಿಗಳಿಂದ ದೊರೆತ ಹೊಸ ವಿಚಾರಗಳು, ದ್ವಂದ್ವಗಳು ಹಾಗೂ ಇಲ್ಲಿಯವರೆಗೆ ದಾಖಲಾಗದಂತಹ ಹೋರಾಟಗಳು, ಘಟನೆಗಳು ಹಾಗೂ ವಿಶೇಷವಾಗಿ ತಳವರ್ಗಗಳ ಬಗ್ಗೆ ಮಾಹಿತಿಯನ್ನು ಮತ್ತು ಅವುಗಳ ಮೌಲ್ಯಗಳನ್ನು ಮತ್ತು ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ವಸ್ತುನಿಷ್ಠವಾಗಿ ದಾಖಲಿಸಲಾಗಿದೆ. ಜೊತೆಗೆ ಪ್ರಸ್ತುತ ಸಂಶೋಧನೆಯಲ್ಲಿ ಕಂಡುಕೊಂಡ ಹೊಸ ಫಲಿತಾಂಶಗಳನ್ನು ದಾಖಲಿಸುವುದರೊಂದಿಗೆ ಮುಂದೆ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಬಗ್ಗೆ ಸಂಶೋಧನೆಯನ್ನು ಯಾವ ದಿಕ್ಕಿನಲ್ಲಿ, ನಿಟ್ಟಿನಲ್ಲಿ ಮಾಡಬಹುದು ಎಂಬುದನ್ನು ಚರ್ಚಿಸಲಾಗಿದೆ.

ಸಂಶೋಧನಾ ಅಧ್ಯಯನದ ಮೂಲಾಧಾರಗಳು

'ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು' (ಸಮಕಾಲೀನ ಹಿನ್ನೆಲೆಯ ಅಧ್ಯಯನ) ಎಂಬ ಸಂಶೋಧನಾ ಅಧ್ಯಯನಕ್ಕೆ ಹಲವಾರು ಮೂಲಾಧಾರಗಳನ್ನು ಬಳಸಿಕೊಳ್ಳಲಾಗಿದೆ. ಇತಿಹಾಸದ ಸಂಶೋಧನೆಯು ಮೂಲಾಧಾರಗಳನ್ನು ಆಧರಿಸಿದ ಜ್ಞಾನವಾಗಿರುವುದರಿಂದ ಲಭ್ಯ ಮಾಹಿತಿಗಳನ್ನು ಆಧರಿಸಿ ಬರೆಯಲಾಗಿದೆ. ಮೂಲಾಧಾರಗಳೇ ಸಂಶೋಧನೆಯ ಬೆನ್ನುಲುಬಾಗಿರುವುದರಿಂದ ಗುಣಾತ್ಮಕವಾದ ಮೂಲಾಧಾರಗಳನ್ನು ಪತ್ತೆ ಹಚ್ಚುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ವಿಷಯಕ್ಕನುಗುಣವಾಗಿ ಪ್ರಕಟಿತ ಕೃತಿಗಳು, ಗ್ರಂಥಗಳು, ಸಂಶೋಧನಾ ನಿಬಂಧಗಳು, ಕಂದಾಯ ಇಲಾಖೆಯ ದಾಖಲೆಗಳು, ಪತ್ರಗಾರದ ದಾಖಲಾತಿಗಳು, ಸಂಘ ಸಂಸ್ಥೆಗಳ ಮಾಹಿತಿಗಳು, ಸ್ಮರಣ ಸಂಚಿಕೆಗಳು, ಲೇಖನಗಳು, ಸಂದರ್ಶನಗಳು, ರಾಷ್ಟ್ರೀಯ ಮತ್ತು ಪ್ರಾದೇಶಿಕ ವೃತ್ತ ಪತ್ರಿಕೆಗಳು, ವಿವಿಧ ಸಮಿತಿಯ ವರದಿಗಳು, ಅಭಿವೃದ್ಧಿ ವಿಭಾಗಗಳ ವರದಿಗಳು, ಹೇಳಿಕೆಗಳು ಹೀಗೆ ಹಲವಾರು ಮಾಹಿತಿಗಳ ಆಧಾರದ ಮೇಲೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಹೀಗೆ ವಿವಿಧ ಮೂಲಾಧಾರಗಳನ್ನು ಆಧರಿಸಿ, ಕ್ರಮಬದ್ಧವಾದ ಮತ್ತು ಗುಣಾತ್ಮಕ ವಿಷಯ ವಿಶ್ಲೇಷಣೆಯನ್ನು ಮಾಡಲಾಗಿದೆ.

ಹೈದರಾಬಾದ್ ಕರ್ನಾಟಕ ಮತ್ತು ಸಾಮಾಜಿಕ ಚಳವಳಿಗಳ ಬಗ್ಗೆ ಅನೇಕ ಅಧ್ಯಯನಗಳು ನಡೆಯುತ್ತಾ ಬಂದಿವೆ. ನಡೆದಿರುವ ಮುಖ್ಯ ಅಧ್ಯಯನಗಳಲ್ಲಿ, ನಾಗೇಶ ಚಡಗ ಅವರ 'ಹೈದರಾಬಾದ್-ಕರ್ನಾಟಕ'[೮], ಎಂ.ಬಿ. ಪಾಟೀಲ ಸಂಪಾದಕತ್ವದ 'ಕರ್ನಾಟಕ ರಾಜ್ಯ ಗ್ಯಾಸೆಟಿಯರ್- ಗುಲಬರ್ಗಾ ಜಿಲ್ಲೆ,[೯] ಅಮರೇಶ ನುಗಡೋಣಿ ಅವರ 'ಹೈದರಾಬಾದು ಕರ್ನಾಟಕ ಹಾಡು ಪಾಡು,[೧೦] ಬಸವರಾಜ ಟಿ. ಕುಮ್ಮೂರ ಅವರ 'ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ,[೧೧] ವೈಜನಾಥ ಪಾಟೀಲರ 'ಹೈದ್ರಾಬಾದ್ ಕರ್ನಾಟಕ-ಅಸಮಾನತೆಯ ಒಂದು ನೋಟ[೧೨] ಹಾಗೂ 'ಹೈದರಾಬಾದ್ ಕರ್ನಾಟಕ ಪರ ಹೋರಾಟ ಏಕೆ', 'ಕೆ. ವೆಂಕಟೇಶ್ ಮತ್ತು ಬಿ. ಸರೋಜಾ ಸಂಪಾದಕತ್ವದ 'ಹೈದ್ರಾಬಾದ್ ಕರ್ನಾಟಕ-ವರ್ತಮಾನದ ತಲ್ಲಣಗಳು,[೧೩] ಬಿ.ಸಿ. ಮಹಾಬಲೇಶ್ವರಪ್ಪ ಅವರ 'ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು,[೧೪] ಎಚ್.ಎಸ್. ಪಾಟೀಲ ಮತ್ತು ಅಲ್ಲಮಪ್ರಭು ಬೆಟ್ಟದೂರು ಸಂಪಾದಕತ್ವದ

‘ವಿಮೋಚನೆ’,[೧೫] ಎಂ. ಉಷಾ ಅವರ ‘ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು,[೧೬] ಜಾಗೀರ್‌ದಾರ್ ಆರ್.ಜೆ. ಲಿಂಗಸೂಗೂರು ವಿಠಲರಾವ್ ‘ಹೈದರಾಬಾದ್ ಕರ್ನಾಟಕ,[೧೭] ಲಕ್ಷ್ಮಣ ದಸ್ತಿ ಅವರ ‘ನಮ್ಮ ಇತಿಹಾಸ ಕೈಫಿಯತ್,[೧೮] ಜಗನ್ನಾಥ ಸಿಂಧೆ ಅವರ ‘ದಲಿತ ಚಿಂತಕ ಬಿ. ಶ್ಯಾಮಸುಂದರ’, ಹೆಚ್.ಟಿ. ಪೋತೆ ಮತ್ತು ಜಗನ್ನಾಥ ಸಿಂಧೆ ಅವರ ಬಿ. ಶ್ಯಾಮಸುಂದರ,[೧೯] ನಾಗೇಶ್ ಎಚ್.ವಿ. ಅವರ ‘ಸಾಮಾಜಿಕ ಚಳವಳಿಗಳು’,[೨೦] ವೀರಸಂಗಯ್ಯ ಜೆ.ಎಂ. ‘ರೈತರ ಆತ್ಮಹತ್ಯೆ ತಡೆ ಹೇಗೆ’,[೨೧] ಲಕ್ಷ್ಮಣ್ ತೆಲಗಾವಿ ಅವರ ‘ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು,[೨೨] ತಂಬಂಡ ವಿಜಯ್ ಪೂಣಚ್ಚರ ‘ರೈತರ ಚಳವಳಿಗಳು’,[೨೩] ರಹಮತ್ ತರೀಕೆರೆ ಅವರ ‘ಕರ್ನಾಟಕದಲ್ಲಿ ಸೂಫಿಗಳು’,[೨೪] ನಾಗಭೂಷಣ ಡಿ.ಎಸ್. ಅವರ ‘ರೈತ ಭಾರತ : ಅವಸಾನದ ಅಂಚಿನಲ್ಲಿ’, ಮುಜಾಫರ್ ಅಸ್ಸಾದಿ ಅವರ ‘ರೈತ ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿಗಳು’,[೨೫] ನಾಗರಾಜ ಟಿ. ಅವರ ‘ಸಾಮಾಜಿಕ ಚಳವಳಿಗಳು’, ಬಸವರಾಜ ಸಬರದ ಅವರ ‘ವಚನಕಾರರು ಮತ್ತು ದಲಿತ ಸಂವೇದನೆ’,[೨೬] ಗಾಯಿತ್ರಿ ಎನ್. ಅವರ ‘ಮಹಿಳಾ ಚಳವಳಿಯ ಮಜಲುಗಳು’,[೨೭] ಚಂದ್ರಶೇಖರ ಟಿ.ಆರ್.ರವರ ‘ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ,[೨೮] ಮೀನಾಕ್ಷಿ ಬಾಳಿ ಅವರ ‘ಚಿವುಟದಿರಿ ಚಿಗುರು’ (ಹೆಣ್ಣು ಭ್ರೂಣ ಹತ್ಯೆ ಕುರಿತು ಲೇಖನಗಳು),[೨೯]. ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಸಂಪಾದಿಸಿರುವ ‘ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು’[೩೦] ಎನ್ನುವ ಕೃತಿಗಳು, ಡಾ. ಆರ್.ಗೋಪಾಲ್ ಸಂಪಾದಕತ್ವದ ‘ಗುಲ್ಬರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ’[೩೧] ಮಂತಾದವುಗಳಿವೆ.

ಹೈದರಾಬಾದ್ ಕರ್ನಾಟಕ ಮತ್ತು ಸಾಮಾಜಿಕ ಚಳವಳಿಗೆ ಸಂಬಂಧಪಟ್ಟಂತೆ ಪಿಎಚ್.ಡಿ. ಪ್ರಬಂಧ ಮತ್ತು ಎಂ.ಫಿಲ್ ನಿಬಂಧಗಳಾದ, ರಾಜ ಎಂ. ಅವರ ‘ಫ್ರೀಡಮ್ ಫೈಟರ್ಸ್ ಆಫ್ ಗುಲಬರ್ಗಾ ಡಿಸ್ಟ್ರೀಕ್ಟ್’,[೩೨] ಮಂಜುಳಾ ಬಿ. ಚಿಂಚೋಳಿ ಅವರ ‘ಡಿಪ್ರೆಸ್‌ಡ್ ಕ್ಲಾಸಸ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ’,[೩೩] ಸಂಘಸೇನಾವರ್ಧನ್ ಅವರ ‘ಕರ್ನಾಟಕದಲ್ಲಿ ಬೌದ್ಧಧರ್ಮದ ಪುನರುಜ್ಜೀವನ’ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ),[೩೪] ಹಾಗೂ ಶರಣಬಸವೇಶ್ವರ ವೀರಭದ್ರಪ್ಪ ಡಾಣಿ ಅವರ ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್,[೩೫] ದೇಶಮನ್ಯ ಜಗಾತಿ ಬಿ., ‘ಎ ಸ್ಟಡೀ ಆಫ್ ಫಿಮೇಲ್ ಅಗ್ರಿಕಲ್ಚರಲ್ ಲೇಬರ್ಸ್ ಇನ್ ಗುಲಬರ್ಗಾ ಡಿಸ್ಟ್ರೀಕ್ಟ್’,[೩೬] ಮಹೇಶ್‌ಕುಮಾರ್ ಎಸ್. ಸುಂಕನೂರು ಅವರ ‘ಗುಲಬರ್ಗಾ ಎಂ.ಎಸ್.ಕೆ. ಮಿಲ್,[೩೭] ವಿಜಯಲಕ್ಷ್ಮೀ ಅವರ ‘ಹಟ್ಟಿ ಚಿನ್ನದ ಗಣಿ : ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ’,[೩೮] ಶಶಿಕಾಂತ ಅಮಲಪ್ಪ ಬಿಲ್ಲವ ಅವರ ‘ರಾಯಚೂರು ಪ್ರದೇಶದ ಸಾಮಾಜಿಕ ಚಳವಳಿಗಳು’[೩೯], ಶ್ರೀದೇವಿ ಎಸ್. ಹರ್‌ವಾಲ ಅವರ ‘ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇನ್ ಗುಲಬರ್ಗಾ ಡಿಸ್ಟ್ರೀಕ್ಟ್’[೪೦] ಇನ್ನು ಮುಂತಾದವುಗಳಿವೆ.

ವಿಶ್ಲೇಷಣೆ

ಮೇಲಿನ ಎಲ್ಲಾ ಕೃತಿಗಳು, ಲೇಖನಗಳು, ನಿಬಂಧಗಳು, ಪ್ರಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕಂಡು ಬರುವುದೇನೆಂದರೆ, ‘ಹೈದರಾಬಾದ್ ಕರ್ನಾಟಕದ ಸಾಮಾಜಿಕ, ರಾಜಕೀಯ,

ಆರ್ಥಿಕತೆಯ ಮೇಲೆ ಸಮಗ್ರವಾಗಿ ಅಧ್ಯಯನಗಳು ನಡೆದಿಲ್ಲದಿರುವುದು ಕಂಡುಬರುತ್ತದೆ. ಇವುಗಳಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಒಂದೊಂದು ವಿಚಾರಗಳನ್ನು ಇಟ್ಟುಕೊಂಡು ಮೇಲ್ನೋಟಕ್ಕೆ ಕಾಣುವ ಅಂಶಗಳನ್ನು ಇಟ್ಟುಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಇನ್ನಿತರ ಕೆಲವು ಕೃತಿಗಳು ಹೈದರಾಬಾದ್ ಕರ್ನಾಟಕ ಚಿತ್ರಣ ನೀಡುವ ರೀತಿಯಲ್ಲಿ ಪ್ರಕಟಗೊಂಡಿವೆ. ಆದರೆ ಇಲ್ಲಿನ ಸ್ಥಿತಿಗತಿಗಳು, ರಾಜಕೀಯ ಸ್ಥಿತ್ಯಂತರಗಳು ಇದರಿಂದಾದ ಬದಲಾವಣೆಗಳು ಮತ್ತು ಅಸಮಾನತೆ, ಹೋರಾಟಗಳು, ಸಫಲತೆ, ವಿಫಲತೆಗಳ ಬಗ್ಗೆ ಬೆಳಕು ಚೆಲ್ಲುವ ಅಧ್ಯಯನಗಳು ಹೆಚ್ಚಾಗಿ ಆಗಿಲ್ಲ. ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗವು ಪ್ರಸ್ತುತ ಇಷ್ಟೆಲ್ಲಾ ಚರ್ಚೆಗೆ ಒಳಪಟ್ಟಿರುವ ಸಂದರ್ಭದಲ್ಲಿ, ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ಇದರ ಕುರಿತು ಅಧ್ಯಯನಗಳು ಹೊರಬರುತ್ತಿಲ್ಲ, ಹೀಗಾಗಿ ಇಂತಹ ದೃಷ್ಟಿಕೋನ ಇಟ್ಟುಕೊಂಡು ವಿಭಿನ್ನವಾದ ಸಾಮಾಜಿಕ ಚಳವಳಿಗಳನ್ನು, ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗೆ (ಸಮಕಾಲೀನ ಹಿನ್ನೆಲೆಯ ಅಧ್ಯಯನ) ಸೀಮಿತವಾಗಿದೆ. ಅದರಲ್ಲೂ ಸ್ವಾತಂತ್ರ್ಯೋತ್ತರ ಸಾಮಾಜಿಕ ಚಳವಳಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆದರೂ ಅಧ್ಯಯನವನ್ನು ಮಾಡುವ ಸಂದರ್ಭದಲ್ಲಿ ಕಳೆದ ನಾಲ್ಕು, ಐದು ದಶಕಗಳಲ್ಲಿ ಆಗಿ ಹೋದ ವಿದ್ಯಮಾನಗಳ ವಿಶ್ಲೇಷಣೆ ನಡೆಸಿದರೆ ಮಾತ್ರ ಸಾಮಾಜಿಕ ಚಳವಳಿಯ ವ್ಯಾಪ್ತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯ. ಸಾಮಾಜಿಕ ಚಳವಳಿಯು ಒಂದು ವರ್ಗಕ್ಕೆ ಸೀಮಿತವಾಗಿರದೆ, ಜಾತಿ-ವರ್ಗ, ಮೇಲು-ಕೀಳು, ಬಡವ-ಶ್ರೀಮಂತ, ಮತ-ಧರ್ಮ ಹಾಗೂ ಪ್ರದೇಶದ ಭೌಗೋಳಿಕತೆ, ವಸ್ತುಸ್ಥಿತಿ, ರಾಜಕೀಯ, ಆಡಳಿತ ಮುಂತಾದ ಅಂಶಗಳೆಲ್ಲಾ ಸಾಮಾಜಿಕ ಚಳವಳಿಯಲ್ಲಿ ಸೇರಿಕೊಂಡಿವೆ. ಈ ಕಾರಣಕ್ಕಾಗಿಯೇ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ವ್ಯಾಪ್ತಿಯನ್ನು ವಿಸ್ತರಿಸಿ ವಿಶಾಲಾರ್ಥದಲ್ಲಿ ನಿರ್ವಚಿಸುವುದು ಅನಿವಾರ್ಯವಾಗಿದೆ. ಅದೇ ರೀತಿ ಸಂಪ್ರದಾಯ ಮತ್ತು ಆಧುನಿಕತೆಗಳ ಪರಸ್ಪರ ಸಂಘರ್ಷ ಮತ್ತು ಒಡಂಬಡಿಕೆಗಳಿಗೂ ಸಾಮಾಜಿಕ ಚಳವಳಿಗಳು ವೇದಿಕೆಗಳಾಗಿರುವುದು ಸಮಾಜ ವ್ಯವಸ್ಥೆ ಇನ್ನಷ್ಟು ಸಂಕೀರ್ಣಗೊಳ್ಳುವುದಕ್ಕೆ ಕಾರಣವಾಗಿದೆ. ಇಂತಹ ಅಂಶಗಳ ವಾಸ್ತವ ಅಧ್ಯಯನ ನಡೆಸುವುದೂ ಅವಶ್ಯಕವಾಗಿದೆ.

ಹೀಗಾಗಿ ಹೈದರಾಬಾದ್ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಭೌಗೋಳಿಕ ಪರಿಸರದ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸುತ್ತಾ, ಹೈದರಾಬಾದ್ ನಿಜಾಮರ ಆಳ್ವಿಕೆ, ಏಕೀಕರಣೋತ್ತರ ಕರ್ನಾಟಕದಿಂದ ಇಂದಿನವರೆಗಿನ ಅಂಶಗಳನ್ನು ಚರ್ಚೆಗೆ ಒಳಪಡಿಸಿ ತುಲನಾತ್ಮಕ ಅಧ್ಯಯನ ಕೈಗೊಳ್ಳಲಾಗಿದೆ. ಹಾಗೆಯೇ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಹಿನ್ನೆಲೆಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ೧೨ನೇ ಶತಮಾನದ ವಚನ ಚಳವಳಿ, ಸೂಫಿ ಚಳವಳಿ, ದಾಸ ಪರಂಪರೆ, ವಸಾಹತು ಆಳ್ವಿಕೆ, ನಿಜಾಮರ ಆಳ್ವಿಕೆ ಹಾಗೂ ಪ್ರಜಾಪ್ರಭುತ್ವದವರೆಗಿನ ಕಾಲಾವಧಿಯಲ್ಲಿನ

Ge page 24

ಪ್ರಭುತ್ವ, ಆಡಳಿತ, ಧರ್ಮ, ಭಾಷೆ, ಸಾಹಿತ್ಯ ಮತ್ತು ಸಮಾಜಗಳ ನಡುವಿನ ಸಂಬಂಧವನ್ನು ಚರ್ಚಿಸಲಾಗಿದೆ. ಸಾಮಾಜಿಕ ಚಳವಳಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಚಳವಳಿಗಳ ಅರ್ಥ, ಸ್ವರೂಪವನ್ನು ಚರ್ಚಿಸುತ್ತಾ ಹೈದರಾಬಾದ್ ಕರ್ನಾಟಕದಲ್ಲಿನ ರೈತ, ದಲಿತ, ಹಿಂದುಳಿದ, ಕಾರ್ಮಿಕ ಮಹಿಳಾ ಚಳವಳಿಗಳು ಹಾಗೂ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ನಡೆಯುತ್ತಿರುವ ಹೋರಾಟಗಳನ್ನೊಳಗೊಂಡಂತೆ ಪ್ರಸ್ತುತ ಹೋರಾಟಗಳವರೆಗಿನ ಅಂಶಗಳನ್ನು ಪರಿಗಣಿಸಲಾಗಿದೆ. ಒಟ್ಟಾರೆ ಪ್ರಬಂಧದ ಅಧ್ಯಯನದ ವ್ಯಾಪ್ತಿಯು ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಅಂದರೆ ೧೯೪೭ ರಿಂದ ಇಂದಿನ ಕಾಲಘಟ್ಟವು ಅಧ್ಯಯನ ವ್ಯಾಪ್ತಿಗೆ ಬರುತ್ತದೆ.

ಅಡಿಟಿಪ್ಪಣಿಗಳು

೧. ಹರೀಶ್ ಕೆ.ಪುರಿ., ಪರಮಜಿತ್ ಎಸ್. ಜಡ್ಜ್., ಸೋಷಿಯಲ್ ಅಂಡ್ ಪೋಲಿಟಿಕಲ್ ಮೂವ್‌ಮೆಂಟ್, ಪುಟ ೦೯.

೨. ಹರ್ಬಟ್ಸ್ ಬ್ಲೂಮರ್, ಸೋಷಿಯಲ್ ಮೂವ್‌ಮೆಂಟ್ಸ್ ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ, ಪುಟ ೧೭.

೩. ಲೀವಿಸ್ ಕಿಲ್ಲಿಯನ್, ಸೋಶಿಷಿಯಲ್ ಮೂವ್‌ಮೆಂಟ್ ಹ್ಯಾಂಡ್ ಬುಕ್ ಆಫ್ ಮಾಡರನ್ ಸೋಷಿಯಾಲಜಿ, ಪುಟ ೪೨೯.

೪. ವಾಂಡರ್ ಝುಂಡನ್ ಜಿ. ಡಬ್ಲ್ಯು, ಸೋಷಿಯಾಲಜಿ, ಪುಟ ೨೪೪ ರಿಂದ ೨೪೮.

೫. ರಾವ್ ಎಂ.ಎಸ್.ಎ.(ಸಂ), ಸೋಷಿಯಲ್ ಮೂವ್‌ಮೆಂಟ್ಸ್, ಇನ್ ಇಂಡಿಯಾ, ಪುಟ ೩೮ ರಿಂದ ೪೦.

೬. ಓಮನ್ ಟಿ.ಕೆ., ಪ್ರೊಟೆಸ್ಟ್ ಅಂಡ್ ಚೇಂಜ್, ಪುಟ ೬೯.

೭. ನಾಗರಾಜ ಟಿ., ಸಾಮಾಜಿಕ ಚಳವಳಿಗಳು, ಪುಟ ೦೧.

೮. ನಾಗೇಶ ಚಡಗ, ಹೈದರಾಬಾದ್ ಕರ್ನಾಟಕ, ರೋಹಿತ್ ಪ್ರಕಾಶನ, ಬೆಂಗಳೂರು, ೨೦೦೮.

೯. ಪಾಟೀಲ ಎಂ.ಬಿ. (ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ, ಬೆಂಗಳೂರು, ೧೯೯೭.

೧೦. ಅಮರೇಶ ನುಗಡೋಣಿ, ಹೈದರಾಬಾದು ಕರ್ನಾಟಕ ಹಾಡು ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೧. ಬಸವರಾಜ ಟಿ. ಕುಮ್ನೂರು, ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ, ಶುಭಕಿರಣ ಪ್ರಕಾಶನ, ಗುಲಬರ್ಗಾ, ೨೦೦೭.

೧೨. ವೈಜನಾಥ ಪಾಟೀಲ, ಹೈದ್ರಾಬಾದ ಕರ್ನಾಟಕ ಅಸಮಾನತೆಯ ಒಂದು ನೋಟ, ಕರ್ನಾಟಕ ಸಾಂಸ್ಕೃತಿಕ ಪರಿಷತ್ತು ಕಲಬುರ್ಗಿ, ೨೦೦೫.

೧೩. ವೆಂಕಟೇಶ ಕೆ., ಸರೋಜಾ ಬಿ. (ಸಂ), ಹೈದರಾಬಾದ್ ಕರ್ನಾಟಕ ವರ್ತಮಾನದ ತಲ್ಲಣಗಳು, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೬.

೧೪. ಮಹಾಬಲೇಶ್ವರಪ್ಪ ಬಿ.ಸಿ., ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

೧೫. ಪಾಟೀಲ ಎಚ್.ಎಸ್., ಅಲ್ಲಮಪ್ರಭು ಬೆಟ್ಟದೂರು, ವಿಮೋಚನೆ, ಜಿಲ್ಲಾ ಆಡಳಿತ ಕೊಪ್ಪಳ, ೧೯೯೯.

೧೬. ಉಷಾ ಎಂ., ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೭. ಜಾಗೀರ್‌ದಾರ್ ಆರ್.ಜಿ, ಲಿಂಗಸೂಗೂರು ವಿಠಲರಾವ್., ಹೈದರಾಬಾದ್ ಕರ್ನಾಟಕ, ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್, ೧೯೪೭.

೧೮. ಲಕ್ಷ್ಮಣ ದಸ್ತಿ, ನಮ್ಮ ಇತಿಹಾಸ ಕೈಫಿಯತ್, ಹೈದರಾಬಾದ್ ಕರ್ನಾಟಕ ವಿಮೋಚನಾ ಮತ್ತು ಅಭಿವೃದ್ಧಿ ಸಮಿತಿ, ೨೦೦೯.

೧೯. ಪೋತೆ ಹೆಚ್.ಟಿ., ಜಗನ್ನಾಥ ಸಿಂಧೆ., ಬಿ. ಶ್ಯಾಮಸುಂದರ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೨೦. ನಾಗೇಶ್ ಹೆಚ್.ವಿ., ಸಾಮಾಜಿಕ ಚಳವಳಿಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೨೧. ವೀರಸಂಗಯ್ಯ ಜಿ.ಎಂ., ರೈತರ ಆತ್ಮಹತ್ಯೆ ತಡೆ ಹೇಗೆ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಹಗರಿಬೊಮ್ಮನಹಳ್ಳಿ, ೨೦೦೭.

೨೨. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೩. ತಂಬಂಡ ವಿಜಯ್ ಪೂಣಚ್ಚ, ರೈತ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೪. ರಹಮತ್ ತರೀಕೆರೆ, ಕರ್ನಾಟಕದಲ್ಲಿ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೫. ಮುಜಾಫರ್ ಅಸ್ಸಾದಿ, ರೈತ ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೯.

೨೬. ಬಸವರಾಜ ಸಬರದ, ವಚನಕಾರರು ಮತ್ತು ದಲಿತ ಸಂವೇದನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೭. ಗಾಯಿತ್ರಿ ಎನ್., ಮಹಿಳಾ ಚಳವಳಿಯ ಮಜಲುಗಳು, ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭.

೨೮. ಚಂದ್ರಶೇಖರ ಟಿ.ಆರ್., ಕರ್ನಾಟಕ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ, ೨೦೦೮.

೨೯. ಮೀನಾಕ್ಷಿ ಬಾಳಿ (ಸಂ), ಚಿವುಟದಿರಿ ಚಿಗುರು (ಹೆಣ್ಣು ಭ್ರೂಣಹತ್ಯೆ ಕುರಿತು ಲೇಖನಗಳು), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಗುಲಬರ್ಗಾ, ೨೦೦೫.

೩೦. ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ), ಚಿನ್ನಸ್ವಾಮಿ ಸೋಸಲೆ ಎನ್. (ಸಂ.ಸಂ), ಸಮಕಾಲೀನ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೩೧. ಗೋಪಾಲ್ ಆರ್. (ಸಂ), ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೭.

೩೨. ರಾಜ ಎಂ., ಫ್ರೀಡಮ್ ಫೈಟರ್ಸ್ ಆಫ್ ಗುಲಬರ್ಗಾ ಡಿಸ್ಟ್ರಿಕ್ಟ್, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೬.

೩೩. ಮಂಜುಳಾ ಬಿ., ಚಿಂಚೋಳಿ, ಡಿಪ್ರೆಸ್ಡ್ ಕ್ಲಾಸಸ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ, ಪಿಎಚ್.ಡಿ. ಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೯.

೩೪. ಸಂಘಸೇನಾವರ್ಧನ್, ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ), ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೫. ಶರಣಬಸವೇಶ್ವರ ವೀರಭದ್ರಪ್ಪ ಡಾಣಿ, ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ ಬಸವ ಅಂಬೇಡ್ಕರ್, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೬. ದೇಶಮನ್ಯ ಜಗ್ರುತಿ ಬಿ., ಎ ಸ್ಟಡೀ ಆಫ್ ಫಿಮೇಲ್ ಅಗ್ರೀಕಲ್ಚರಲ್ ಲೇಬರರ್ಸ್ ಇನ್ ಗುಲಬರ್ಗಾ ಡಿಸ್ಟ್ರೀಕ್ಟ್, ಅಪ್ರಕಟಿತ. ಎಂ.ಫಿಲ್. ನಿಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೧.

೩೭. ಮಹೇಶ್‌ಕುಮಾರ್ ಎಸ್. ಸುಂಕನೂರು, ಗುಲಬರ್ಗಾ ಎಂ.ಎಸ್.ಕೆ. ಮಿಲ್ : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೮. ವಿಜಯಲಕ್ಷ್ಮಿ, ಹಟ್ಟಿ ಚಿನ್ನದ ಗಣಿ : ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೯. ಶಶಿಕಾಂತ ಅಮಲಪ್ಪ ಬಿಲ್ಲವ, ರಾಯಚೂರು ಪ್ರದೇಶದ ಸಾಮಾಜಿಕ ಚಳವಳಿಗಳು, ಅಪ್ರಕಟಿತ ಎಂ.ಫಿಲ್. ನಿಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪೦. ಶ್ರೀದೇವಿ ಎಸ್. ಹರ್‌ವಾಲ, ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇನ್ ಗುಲಬರ್ಗಾ ಡಿಸ್ಟ್ರೀಕ್ಟ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೪.

□□□

ಅಧ್ಯಾಯ ಎರಡು

ಹೈದರಾಬಾದ್ ಕರ್ನಾಟಕದ ಸ್ಥಿತಿಗತಿ ಹಾಗೂ ಸಮಸ್ಯೆಗಳು

೨.೧. ಹೈದರಾಬಾದ್ ಕರ್ನಾಟಕದ ಭೌಗೋಳಿಕತೆ

೨.೨. ಹೈದರಾಬಾದ್ ಕರ್ನಾಟಕದ ರಾಜಕೀಯ ಸ್ಥಿತಿಗತಿಗಳು

೨.೩. ಹೈದರಾಬಾದ್ ಕರ್ನಾಟಕದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳು

೨.೪ ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳು

ಅಧ್ಯಾಯ ಎರಡು

ಹೈದರಾಬಾದ್ ಕರ್ನಾಟಕದ ಸ್ಥಿತಿಗತಿ ಹಾಗೂ ಸಮಸ್ಯೆಗಳು

ಪ್ರಸ್ತಾವನೆ

ಕರ್ನಾಟಕದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಭಾವೈಕ್ಯತೆಗೆ ಹೆಸರಾಗಿರುವ ಈ ಪ್ರದೇಶವು ಅನೇಕ ಸಮನ್ವಯಗಳನ್ನು ಸಾಧಿಸಿದ್ದು ವಿವಿಧ ಭಾಷೆ, ವಿವಿಧ ಧರ್ಮ ಹಾಗೂ ಅನೇಕ ಜನಾಂಗಗಳ ಜನರು ಇಲ್ಲಿ ನೆಲೆಸಿ ಸೌಹಾರ್ದಯುತವಾಗಿ ಬಾಳಿದ್ದಾರೆ ಹಾಗೂ ಬಾಳುತ್ತಿದ್ದಾರೆ. ಆದರೆ ಇಲ್ಲಿನ ರಾಜಕೀಯ ಸ್ಥಿತ್ಯಂತರಗಳು ಹಾಗೂ ಭೌಗೋಳಿಕತೆ ಐತಿಹಾಸಿಕ ಪರಂಪರೆಯ ವಿಭಿನ್ನತೆಗೆ ಕಾರಣವಾಗಿದೆ. ಬಹುಮನಿ ಸುಲ್ತಾನರು, ಅದಿಲ್‌ಷಾಹೀಗಳು ನಂತರ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶದ ಧರ್ಮ ಸಂಸ್ಕೃತಿ, ಸಾಹಿತ್ಯ ಮತ್ತು ಭಾಷೆಗಳ ಮೇಲೆ ಅನ್ಯರ ಪ್ರಭಾವ ದಟ್ಟವಾಗಿದೆ. ಹೀಗಾಗಿ ಇಂದಿಗೂ ಕೆಲವೊಂದು ವಿಚಾರಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ಕರ್ನಾಟಕದ ಇತರ ಭಾಗಗಳಿಗಿಂತ ಭಿನ್ನವಾಗಿರುವುದನ್ನು ಗುರುತಿಸಬಹುದಾಗಿದೆ.

೧೫ನೇ ಆಗಸ್ಟ್ ೧೯೪೭ರಂದು ಇಡೀ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೆ, ಹೈದರಾಬಾದ್ ನಿಜಾಮನ ಅಧೀನದಲ್ಲಿದ್ದ ಗುಲಬರ್ಗಾ, ಬೀದರ್, ರಾಯಚೂರು ಇಂದಿನ ವ್ಯಾಪ್ತಿಯಂತೆ ಕೊಪ್ಪಳ, ಯಾದಗಿರಿ ಪ್ರದೇಶಗಳಿಗೆ ಮಾತ್ರ ಸ್ವಾತಂತ್ರ್ಯ ಸಿಗಲಿಲ್ಲ. ಅಂದರೆ ಹೈದರಾಬಾದಿನ ನಿಜಾಮ ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಒಪ್ಪದಿದ್ದಾಗ ಆ ಸಮಯದಲ್ಲಿ ಭಾರತದ ಅಂದಿನ ಗೃಹಸಚಿವರಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರು ಸೈನಿಕ ಕಾರ್ಯಾಚರಣೆ ಮೂಲಕ ನಿಜಾಮನ ಆಳ್ವಿಕೆಯನ್ನು ಕೊನೆಗೊಳಿಸಿ ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಿದರು. ಹೀಗಾಗಿ ಬೀದರ್, ಗುಲಬರ್ಗಾ, ರಾಯಚೂರು ಪ್ರದೇಶಗಳು ೧೭ನೇ ಸೆಪ್ಟೆಂಬರ್ ೧೯೪೮ರಂದು ಸ್ವಾತಂತ್ರ್ಯವನ್ನು ಪಡೆದ ಕಾರಣಕ್ಕಾಗಿ ಆ ದಿನವನ್ನು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಆದರೆ ಸ್ವಾತಂತ್ರ್ಯ ಪಡೆದ ದಿನದಿಂದ ಇಂದಿನವರೆಗೆ ಹೈದರಾಬಾದ್ ಕರ್ನಾಟಕ ಪ್ರದೇಶವು ಪ್ರಾದೇಶಿಕ ಅಸಮಾನತೆ, ಬಡತನ, ಅಜ್ಞಾನ, ಬರಗಾಲದಿಂದ ತತ್ತರಿಸಿ ಕರ್ನಾಟಕದಲ್ಲಿಯೇ ಅತ್ಯಂತ

ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಹೀಗಾಗಿ ಈ ಪ್ರದೇಶದ ಸ್ಥಿತಿಗತಿಯನ್ನು ತಿಳಿಯಬೇಕಾದರೆ ಇಲ್ಲಿನ ಭೌಗೋಳಿಕತೆ, ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳು ಮತ್ತು ಇವುಗಳಿಂದಾದ ಬದಲಾವಣೆಗಳನ್ನು ಗುರುತಿಸುತ್ತಾ ಅಧ್ಯಯನ ಮಾಡಬೇಕು, ಇದರ ಮೂಲಕ ಇಲ್ಲಿನ ಜನರ ಬದುಕನ್ನು ಸಮಸ್ಯೆಗಳನ್ನು ವಾಸ್ತವ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಹೀಗೆ ಹೈದರಾಬಾದ್ ಕರ್ನಾಟಕದ ಭೌಗೋಳಿಕತೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಗಳ ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

೨.೧. ಹೈದರಾಬಾದ್ ಕರ್ನಾಟಕದ ಭೌಗೋಳಿಕತೆ

ಸ್ವಾತಂತ್ರ್ಯಪೂರ್ವದ ಕೊನೆಯ ಎರಡೂವರೆ ದಶಕಗಳ ಅವಧಿಯಲ್ಲಿ ಆಳಿದ ನಿಜಾಮರ ಅಧೀನದಲ್ಲಿದ್ದ ಬೀದರ್, ಗುಲಬರ್ಗಾ (ಅವಿಭಜಿತ) ರಾಯಚೂರು, ಕೊಪ್ಪಳ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುತ್ತದೆ. ಸುಮಾರು ೨೨೪ ವರ್ಷಗಳ ಕಾಲ ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದರ ಪ್ರಭಾವದಿಂದಾಗಿ ಈ ಪ್ರದೇಶವನ್ನು ಈಗಲೂ ಸಹ ಹೈದರಾಬಾದ್ ಕರ್ನಾಟಕವೆಂದೇ ಗುರುತಿಸಲಾಗುತ್ತಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಭೌಗೋಳಿಕ ವಿಸ್ತೀರ್ಣ ೪೪,೧೩೮ ಚ.ಕಿ.ಮೀ. ಕರ್ನಾಟಕ ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೨೩ರಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಹೊಂದಿದೆ. ಇಲ್ಲಿನ ಒಟ್ಟು ಜನಸಂಖ್ಯೆ ೯೪,೯೩,೧೮೨. ಜಿಲ್ಲಾವಾರು ಜನಸಂಖ್ಯೆಯಲ್ಲಿ ಗುಲಬರ್ಗಾ ೩೧,೨೪,೮೫೮ ಗರಿಷ್ಟ ಜನಸಂಖ್ಯೆ ಹೊಂದಿದ್ದರೆ, ಕೊಪ್ಪಳ ೧೧,೨೩,೪೬೬ರಷ್ಟು ಕನಿಷ್ಟ ಜನಸಂಖ್ಯೆ ಹೊಂದಿದೆ. ಜನಸಾಂದ್ರತೆ ೨೧೫ ಆಗಿದ್ದು, ಕರ್ನಾಟಕ ರಾಜ್ಯದ ಜನ ಸಾಂದ್ರತೆಗಿಂತ (೨೭೫) ಕಡಿಮೆಯಾಗಿದೆ. ಲಿಂಗಾನುಪಾತ ಏಕರೂಪವಾಗಿರದೆ ಲೈಂಗಿಕ ಅನುಪಾತದಲ್ಲಿ ಕೊಪ್ಪಳ ಜಿಲ್ಲೆ ಗರಿಷ್ಟ, ಬೀದರ್ ಜಿಲ್ಲೆ ಕನಿಷ್ಟ ಅನುಪಾತ ಹೊಂದಿದೆ ಹಾಗೂ ಹೈದರಾಬಾದ್ ಕರ್ನಾಟಕದಲ್ಲಿ ಶೇ. ೨೬ರಷ್ಟು ಜನಸಂಖ್ಯೆ ಮಾತ್ರ ನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ.[೧] ಹೈದರಾಬಾದ್ ಕರ್ನಾಟಕದ ಭೌಗೋಳಿಕತೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಇದರ ವ್ಯಾಪ್ತಿಯಲ್ಲಿರುವ ಬೀದರ್ ಗುಲಬರ್ಗಾ (ಅವಿಭಜಿತ) ರಾಯಚೂರು ಕೊಪ್ಪಳ ಬಳ್ಳಾರಿ ಜಿಲ್ಲೆಗಳ ಭೌಗೋಳಿಕತೆಯನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವುದು ಅತ್ಯವಶ್ಯಕವಾಗಿದೆ.

ಬೀದರ್ ಜಿಲ್ಲೆ

ಕರ್ನಾಟಕದ ನಕಾಶೆಯಲ್ಲಿ ಮೇಲ್ಭಾಗದ ತುತ್ತತುದಿಯಲ್ಲಿ ಬೀದರ್ ಜಿಲ್ಲೆಯಿದೆ. ರಾಜ್ಯದ ರಾಜಧಾನಿ ಬೆಂಗಳೂರಿನಿಂದ ಅತ್ಯಂತ ದೂರದಲ್ಲಿ ಇರುವುದು ಭೌಗೋಳಿಕ ಮಾತ್ರವಲ್ಲ, ಮಾನಸಿಕವಾದದ್ದು ಕೂಡ. ಈ ಕಾರಣಕ್ಕಾಗಿ ಬೀದರ್ ಬಗ್ಗೆ ರಾಜ್ಯದ ಜನತೆಗೆ ವಾಸ್ತವಕ್ಕಿಂತ ಕಾಲ್ಪನಿಕ ಚಿತ್ರವೇ ಕಣ್ಮುಂದೆ ಬರುತ್ತದೆ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಬೀದರನ್ನು ಮೂರು ರಾಜ್ಯಗಳಲ್ಲಿ ಹಂಚಲಾಯಿತು. ಅದಕ್ಕೆ ಜಿಲ್ಲೆಯ ಭಾಷಾ ವೈವಿಧ್ಯತೆಯೇ ಕಾರಣ.

೧೯೫೬ರಲ್ಲಿ 'ವಿಶಾಲ ಮೈಸೂರು' ರಾಜ್ಯದಲ್ಲಿ ಸೇರ್ಪಡೆಯಾಗುವ ಮೊದಲು ಬೀದರ್ ಹೈದರಾಬಾದ್ ಪ್ರಾಂತ್ಯದಲ್ಲಿದ್ದು ೯ ತಾಲೂಕುಗಳನ್ನು ಹೊಂದಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಯ ಸಮಯದಲ್ಲಿ ತೆಲುಗು ಭಾಷಿಕರು ಹೆಚ್ಚಾಗಿರುವ ನಾರಾಯಣಖೇಡ, ಜಹೀರಾಬಾದ್, ಆಂಧ್ರಪ್ರದೇಶಕ್ಕೆ ಸೇರಿದರೆ, ಮರಾಠಿ ಮಾತನಾಡುವ ಜನರು ಹೆಚ್ಚಿದ್ದ ಉದ್ಗೀರ್, ಅಹ್ಮದಪುರ, ನಿಲಂಗಾ, ಮಹಾರಾಷ್ಟ್ರಕ್ಕೆ ಸೇರ್ಪಡೆಯಾದವು. ಇನ್ನು ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ ಹೆಚ್ಚಿದ್ದ ಬೀದರ್, ಔರಾದ್, ಭಾಲ್ಕಿ ಮತ್ತು ಹುಮನಾಬಾದ್ ತಾಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಏಕೀಕರಣದ ನಂತರ ಹುಮನಾಬಾದ್ ತಾಲೂಕನ್ನು ವಿಭಜಿಸಿ 'ಬಸವಕಲ್ಯಾಣ' ಎಂಬ ಹೊಸ ತಾಲೂಕು ರಚಿಸಲಾಯಿತು. ಪ್ರಸಕ್ತ ಬೀದರ್ ಜಿಲ್ಲೆಯಲ್ಲಿ ಒಟ್ಟು ೫ ತಾಲೂಕುಗಳಿವೆ. ಬೀದರ್ ಜಿಲ್ಲೆಯ ಒಟ್ಟು ಭೌಗೋಳಿಕ ಕ್ಷೇತ್ರ ೫೪೧೭ ಚದರ ಕಿ.ಮೀ. ಅರಣ್ಯ ಪ್ರದೇಶ ೨೭,೭೦೭ ಹೆಕ್ಟೇರ್, ಕೃಷಿ ಸಾಗುವಳಿ ಕ್ಷೇತ್ರ ೩,೭೨,೮೦೩ ಹೆಕ್ಟೇರ್. ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಜನಸಂಖ್ಯೆ ೧೫.೦೧ ಲಕ್ಷ. ಆ ಪೈಕಿ ೭.೭೧ ಲಕ್ಷ ಪುರುಷರು ಮತ್ತು ೭.೩೦ ಲಕ್ಷ ಮಹಿಳೆಯರಿದ್ದಾರೆ ಲಿಂಗ ಅನುಪಾತ ರಾಜ್ಯದ ಸರಾಸರಿಗಿಂತಲೂ ಕಡಿಮೆ ಇದೆ. ಪ್ರತಿ ಸಾವಿರ ಪುರುಷರಿಗೆ ಮಹಿಳೆಯರ ಪ್ರಮಾಣ ೯೮೪. ಆದರೆ ರಾಜ್ಯದ ಸರಾಸರಿ ಅನುಪಾತ ೧೦೦೦ ಪುರುಷರಿಗೆ ೯೬೪ ಮಹಿಳೆಯರು.[೨]

'ಬೀದರ್' ಎಂಬ ಹೆಸರಿನ ಮೂಲವನ್ನು ನೋಡಿದಾಗ, ಹಿಂದೆ ಇದು ಬಿದಿರು ಬೆಳೆಯುವ ಪ್ರದೇಶವಾಗಿದ್ದರಿಂದ ಆರಂಭದಲ್ಲಿ ಇದಕ್ಕೆ 'ಬಿದಿರು' ಎಂದು ನಂತರ 'ಬಿದರೂರು' ಎಂದು, ನಂತರ 'ಬಿದಿರೆ' ಎಂದೂ ಆನಂತರ 'ಬೀದರ್' ಎಂದು ಹೆಸರಾದ ಬಗ್ಗೆ ದಾಖಲೆಗಳು ದೊರೆಯುತ್ತವೆ. ಕನ್ನಡ ನಾಡಿನ ಉತ್ತರದ ತುದಿಯಲ್ಲಿರುವ ಬೀದರ್ ಒಂದು ವಿಶಿಷ್ಟವಾದ ಜಿಲ್ಲೆ. ಇಲ್ಲಿನ ಭಾಷೆ, ನೆಲ, ಜಲ, ಧರ್ಮ, ಸಾಮಾಜಿಕ ಪರಿಸರ, ಸಂಪ್ರದಾಯ ಹಾಗೂ ಸಂಸ್ಕೃತಿ ಎಲ್ಲವೂ ವೈವಿಧ್ಯಮಯ. ಭೌಗೋಳಿಕ ಕಾರಣಗಳಿಂದಾಗಿ ಹಲವು ಭಾಷೆಗಳನ್ನಾಡುವ ಜನ ಜಿಲ್ಲೆಯಲ್ಲಿದ್ದಾರೆ. ಕನ್ನಡ, ಉರ್ದು, ಮರಾಠಿ, ತೆಲುಗು ಮಾತನಾಡುವ ಜನ ಜಿಲ್ಲೆಯಲ್ಲಿದ್ದಾರೆ. ತಮ್ಮ ಮನೆಯಲ್ಲಿ ಕನ್ನಡವನ್ನು ಮಾತೃಭಾಷೆಯಾಗಿ ಬಳಸುವ ಜನರು ಹೊರಗಡೆ ಸಂಪರ್ಕ ಭಾಷೆಯಾಗಿ ಹಿಂದಿ - ಉರ್ದು ಮಿಶ್ರಿತ 'ದಖನಿ' ಭಾಷೆಯನ್ನು ಬಳಸುತ್ತಾರೆ. ಭಾಷಾ ಮತ್ತು ಕೋಮು ಸೌಹಾರ್ದತೆ ಬೀದರ್‌ನ ಪ್ರಮುಖ ಲಕ್ಷಣ.

೧೨ನೆಯ ಶತಮಾನವು ಬೀದರ್ ಜಿಲ್ಲೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸದ ಮಹೋನ್ನತ ಕಾಲ. ಕಲ್ಯಾಣದಲ್ಲಿ ಶರಣರ ಕ್ರಾಂತಿಯಾದ ಕಾಲ. ಮಹಾಪುರುಷ ಬಸವಣ್ಣ, ಅಲ್ಲಮಪ್ರಭು, ಸಿದ್ದರಾಮ, ಅಕ್ಕಮಹಾದೇವಿ ಮೊದಲಾದ ಅನೇಕ ಶರಣ-ಶರಣೆಯರು ಸೇರಿ ಸಾಂಸ್ಕೃತಿಕ ಬದುಕನ್ನು ಚರ್ಚಿಸಿ, ನವೋದಯವನ್ನು ಸೃಷ್ಟಿಸಿದ ಕಾಲ. ಇಂತಹ ಪ್ರದೇಶದಲ್ಲಿ ಚಾಲುಕ್ಯರ ಪತನನಂತರ, ಯಾದವರು ಆಳ್ವಿಕೆ ಯನ್ನು ಮಾಡಿದರು. ದೆಹಲಿ ಸುಲ್ತಾನರು ದಕ್ಷಿಣದಲ್ಲಿ ರಾಜ್ಯ ವಿಸ್ತರಣೆ ಮಾಡುವ ಹಾಗೂ ಸಂಪತ್ತನ್ನು ದೋಚುವ ಉದ್ದೇಶದಿಂದ ಈ ಪ್ರದೇಶದ ಮೇಲೆ ದಾಳಿ ಮಾಡಿ ಹಿಂದೂ ಸರದಾರರನ್ನು ಪತನಗೊಳಿಸಿ

ಬೀದರನ್ನು ಒಳಗೊಂಡಂತೆ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ದಖನ್ನಿನ ಮೇಲೆ ನಿಯಂತ್ರಣ ಸಾದಿಸಿದರು. ಆದರೆ ೧೪ನೇ ಶತಮಾನದ ಮಧ್ಯಭಾಗದಲ್ಲಿ ದಖನ್ನಿನಲ್ಲಿದ್ದ ಸುಲ್ತಾನನ ಅಧಿಕಾರಿಗಳು ದಂಗೆ ಎದ್ದು ಸ್ವತಂತ್ರ ಆಳ್ವಿಕೆಯನ್ನು ಆರಂಭಿಸುವ ಪ್ರಯತ್ನ ಕೈಗೊಂಡರು ಪರಿಣಾಮವಾಗಿ ಹಸನ್‌ಗಂಗು ಎನ್ನುವ ಅಧಿಕಾರಿ ಸ್ವತಂತ್ರಗೊಂಡು ೧೩೪೭ರಲ್ಲಿ ಬಹುಮನಿ ರಾಜ್ಯ ಸ್ಥಾಪಿಸಿದ್ದರಿಂದಾಗಿ ಗುಲಬರ್ಗಾ ಬಹುಮನಿಗಳ ಆರಂಭದ ರಾಜಧಾನಿಯಾಗಿತ್ತು. ಆದರೆ ೧೪೨೯ರಲ್ಲಿ ಅಹಮದ್ ಶಾ ಬೀದರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಆರಂಭಿಸಿದನು. ೧೪೮೧ರಲ್ಲಿ ಮಹಮದ್ ಗವಾನನ ಕೊಲೆಯಾದ ನಂತರ, ಅಸಮರ್ಥ ಸುಲ್ತಾನರ ಆಳ್ವಿಕೆಯಿಂದಾಗಿ ಬೀದರ್ ಐದು ಚಿಕ್ಕ ರಾಜ್ಯಗಳಾಗಿ ಒಡೆದು ಬೀದರ್‌ನಲ್ಲಿ ಬರೀದ್‌ಶಾಹಿಗಳು ಎನ್ನುವ ವಂಶದವರು ಆಳ್ವಿಕೆಯನ್ನು ಕೈಗೊಂಡರು. ಆದರೆ ೧೭ನೇ ಶತಮಾನದ ಮಧ್ಯಭಾಗದಲ್ಲಿ ಔರಂಗಜೇಬ್ ದಖನ್ ಪ್ರದೇಶವನ್ನು ಆಕ್ರಮಿಸಿದ್ದರಿಂದಾಗಿ ಬೀದರ್ ಮೊಗಲರ ಅಧಿಪತ್ಯಕ್ಕೆ ಒಳಗಾಯಿತು. ನಂತರ ಕೆಲವು ವರ್ಷಗಳಲ್ಲಿ ಈ ಪ್ರದೇಶ ಮರಾಠರ ಮತ್ತು ಹೈದರಾಬಾದಿನ ನಿಜಾಮರ ಆಳ್ವಿಕೆಗೆ ಒಳಪಟ್ಟಿತು ಹೀಗೆ ನಿರಂತರವಾಗಿ ವಿಭಿನ್ನ ಆಳ್ವಿಕೆಗೆ, ಪ್ರಭುತ್ವಕ್ಕೆ ಸಿಕ್ಕ ಬೀದರ್ ಪ್ರದೇಶವು ಕ್ರಮೇಣ ದುಸ್ಥಿತಿಗೆ ಒಳಗಾಗಬೇಕಾಯಿತು ಹಾಗೂ ಇಂತಹ ಅಧಿಪತ್ಯವು ಇಲ್ಲಿನ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕನ್ನು ಸ್ಥಿತ್ಯಂತರಗೊಳಿಸಿತು. ಅದರಲ್ಲೂ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಾಗಲಂತೂ ನಿರ್ಲಕ್ಷ್ಯಕ್ಕೆ ಶೋಷಣೆಗೆ ಒಳಗಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಬೇಕಾಯಿತು. ಇಂತಹ ಸಂದರ್ಭದಲ್ಲಿ ಗಾಂಧೀಜಿಯವರ ಪ್ರಭಾವ ಹಾಗೂ ಇಲ್ಲಿಯೇ ಆರಂಭವಾದ ಆರ್ಯ ಸಮಾಜದ ಪ್ರಭಾವದಿಂದಾಗಿ ಹೋರಾಟ ತೀವ್ರ ಸ್ವರೂಪ ಪಡೆಯಿತು. ಅದರಲ್ಲೂ ರಜಾಕಾರರ ಹಾವಳಿಯನ್ನು ಧೈರ್ಯದಿಂದ ಎದುರಿಸಿ ಪ್ರತಿಭಟಿಸಿ ನಿಂತ ಆರ್ಯ ಸಮಾಜದ ಕಾರ್ಯಕರ್ತರು ಸ್ವಾತಂತ್ರ್ಯ ಬರುವವರೆಗೆ ಇಲ್ಲಿಯ ಬಹುಸಂಸ್ಕೃತಿಯನ್ನು ಕಾಪಾಡಿದರು. ಕೊನೆಗೆ ನಿಜಾಮನ ಆಳ್ವಿಕೆಯಿಂದ ಬಿಡುಗಡೆ ಹೊಂದಿ ೧೭.೦೯.೧೯೪೮ರಂದು ಈ ಜಿಲ್ಲೆ ಸ್ವತಂತ್ರಗೊಂಡು ಕರ್ನಾಟಕಕ್ಕೆ ಸೇರಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲೂ ಬೀದರ್ ಜಿಲ್ಲೆಯ ಸ್ಥಿತಿಗತಿಗಳು ಬದಲಾಗಲಿಲ್ಲ. ಜನರ ಕೈಗೆ ಕೆಲಸ ನೀಡುವ ಉದ್ದಿಮೆಗಳು ಇಲ್ಲಿ ಸ್ಥಾಪನೆ ಆಗಲಿಲ್ಲ. ಹೀಗಾಗಿ ಆದಾಯದ ಮೂಲಗಳು ಸೀಮಿತವಾಗಿವೆ. 'ಮಧ್ಯಮ ವರ್ಗವು ಅಲ್ಪಸಂಖ್ಯಾತ ಆಗಿರುವುದರಿಂದ ಸಾಂಸ್ಕೃತಿಕ ವಾತಾವರಣವು ಬಹುತೇಕ ಶೂನ್ಯವಾಯಿತು' ಸಮಾಜದಲ್ಲಿ ಚಲನಶೀಲತೆ ತರುವ, ಚಳವಳಿಗಳ ಮೂಲಕ ಆರೋಗ್ಯಕರ ಸಮತೋಲನ ತರುವ, ಕಾಪಾಡುವ, ಕಾರ್ಯಗಳು, ಅಂಶಗಳು ಕಡಿಮೆ ಇವೆ. ಜಿಲ್ಲೆಯಲ್ಲಿ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಾಗೂ ಎಂಟು ಖಂಡಸಾರಿ ಸಕ್ಕರೆ ಕಾರ್ಖಾನೆಗಳಿವೆ. ಇವುಗಳನ್ನು ಹೊರತುಪಡಿಸಿದರೆ, ಬೇರೆ ಕೈಗಾರಿಕೆಗಳ ಪಾಲು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇದೆ. ಜಿಲ್ಲೆಯ ಒಟ್ಟು ಆದಾಯದಲ್ಲಿ ಕೃಷಿ ಮತ್ತು ಕೃಷಿ ಆಧಾರಿತ ಕ್ಷೇತ್ರದ ಪಾಲು ಶೇ. ೩೫ ಇದ್ದರೆ, ಕೈಗಾರಿಕೆ ಮತ್ತು ಗಣಿಗಾರಿಕೆ ಕ್ಷೇತ್ರದ

ಪಾಲು ಶೇ. ೧೬ ಇದೆ. ಇನ್ನು ಸೇವಾ ಕ್ಷೇತ್ರವು ಗರಿಷ್ಠ ಅಂದರೆ ಶೇ. ೪೮ರಷ್ಟನ್ನು ಸಂದಾಯ ಮಾಡುತ್ತದೆ. ತಲಾವಾರು ಆದಾಯ ೧೧,೭೧೩ ರೂಪಾಯಿಗಳಾಗಿದ್ದು ಇದು ರಾಜ್ಯದ ತಲಾವಾರು ಆದಾಯಕ್ಕಿಂತ ಕಡಿಮೆ ಇದೆ.[೩]

ಇರಾನ್‌ನಿಂದ ಬಂದ 'ಬಿದ್ರಿ ಕಲೆ' ಬೀದರ್‌ನ ಕಲಾ ಶೈಲಿಯ ವೈಶಿಷ್ಟ್ಯ. ಸತು ಮತ್ತು ಮಿಶ್ರಿತ ಲೋಹದ ವಸ್ತುವಿನ ಮೇಲೆ ಚಿತ್ತಾರ ಕೊರೆಯಲಾಗುತ್ತದೆ ಹಾಗೆ ಕೊರೆದ ಪ್ರತಿ ಭಾಗದಲ್ಲಿಯೂ ಬೆಳ್ಳಿಯ ತಂತಿ ಅಳವಡಿಸಿ, ಬೆಳ್ಳಿ ಕೂಡಿಸಿದ ಕಡೆ ಮಾತ್ರ ಹೊಳೆಯುವಂತೆ ಮಾಡಿ ಇಡೀ ಲೋಹವನ್ನು ಕಪ್ಪಾಗಿಸಲಾಗುತ್ತದೆ. ಈ ಕಲೆಯಿಂದ ಮಾಡಿದ ಹೂಜಿಗಳು, ಶಿಲ್ಪಗಳು ಕಲಾ ಕೃತಿಗಳು ದೇಶ ವಿದೇಶದಲ್ಲೆಲ್ಲ ಹೆಸರುವಾಸಿಯಾಗಿವೆ.[೪] ಇದಕ್ಕಾಗಿಯೇ ಈ ಕಲೆಗೆ ಪ್ರಾದೇಶಿಕ ಪೇಟೆಂಟ್ ಕೂಡ ಸಿಕ್ಕಿದೆ.

ಶೈಕ್ಷಣಿಕವಾಗಿ ಬೀದರ್ ಜಿಲ್ಲೆಯ ಸ್ಥಾನವನ್ನು ನೋಡಿದಾಗ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಫಲಿತಾಂಶಗಳಲ್ಲಿ ಬೀದರ್ ಕೊನೆಯ ಸ್ಥಾನಗಳಲ್ಲಿ ಇರುತ್ತದೆ. ಕಳೆದ ಬಾರಿ ಪಿ.ಯು.ಸಿ. ಫಲಿತಾಂಶದ ಪ್ರಮಾಣ ಕೇವಲ ಪ್ರತಿಶತ ೧೫ ಆಗಿದ್ದು ಇಲ್ಲಿ ಗುಣಮಟ್ಟದ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ. ಅದಾಗ್ಯೂ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ಉನ್ನತ ಶಿಕ್ಷಣದ ಕೇಂದ್ರಗಳು ಸ್ಥಾಪನೆಯಾಗಿದ್ದು ರಾಜ್ಯದ ಅತ್ಯಂತ ಹಳೆಯ ಪಶುವೈದ್ಯಕೀಯ ಕಾಲೇಜುಗಳಲ್ಲಿ ಇದು ಒಂದಾಗಿದೆ. ಜಿಲ್ಲೆಯಲ್ಲಿ ಮೂರು ಎಂಜಿನಿಯರಿಂಗ್ ಕಾಲೇಜುಗಳಿದ್ದು, ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ತೊಡಗಿವೆ. ಭಾರತ ಸರಕಾರದ ವಾಯುಪಡೆಯ ತರಬೇತಿ ಕೇಂದ್ರ ಇಲ್ಲಿದೆ. ಅತ್ಯಾಧುನಿಕ 'ಹಾಕ್ ಎಂ.ಕೆ. ೧೩೨' ಯುದ್ಧ ವಿಮಾನ ಹಾರಾಟದ ತರಬೇತಿ ನೀಡುವ ದೇಶದ ಏಕೈಕ ಕೇಂದ್ರ ಬೀದರ್‌ನಲ್ಲಿದೆ. ಬೀದರ್ ಪ್ರಸಿದ್ಧ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿದ್ದು ಅನೇಕ ಐತಿಹಾಸಿಕ ಸ್ಮಾರಕಗಳನ್ನು ಮತ್ತು ಧಾರ್ಮಿಕ ಕಟ್ಟಡಗಳನ್ನೊಳಗೊಂಡಿದೆ. ಇಲ್ಲಿರುವ ಪ್ರಸಿದ್ಧ ಸಿಖ್ ಗುರುದ್ವಾರ ಮತ್ತು ಗುರನಾನಕ್ ಝರಾ ಸಿಖ್‌ರ ಪವಿತ್ರ ಕೇಂದ್ರವಾಗಿದ್ದು ಇದು ಅಮೃತಸರದಲ್ಲಿರುವ ಸುವರ್ಣ ಮಂದಿರ ಮಾದರಿಯಲ್ಲಿದೆ. ಇಲ್ಲಿಗೆ ಭೇಟಿ ನೀಡಿದಾಗ ಸಿಖ್‌ರ ಧಾರ್ಮಿಕ-ಸಾಂಸ್ಕೃತಿಕ ವಾತಾವರಣವೇ ಕಾಣಬರುತ್ತದೆ. ಹಾಗೆಯೇ ಇಲ್ಲಿರುವ ನರಸಿಂಹ ಝರಾ, ಪಾಪಿನಾಶಿಕ ಕೇಂದ್ರ ಮತ್ತು ಮಹಮದ್ ಗವಾನನ ಕಾಲದ 'ಮದರಸ' ಎನ್ನುವ ವಿದ್ಯಾಕೇಂದ್ರವು ಪ್ರಸಿದ್ಧವಾಗಿದ್ದು ಬೀದರ್‌ನಲ್ಲಿರುವ ಕೋಟೆ, ಕೊತ್ತಲ, ಗೋರಿ, ಮಸೀದಿ, ಗುಮ್ಮಟ ಕಮಾನುಗಳು ಗತಕಾಲದ ಇತಿಹಾಸವನ್ನು ಸಾರುತ್ತವೆ.

ಗುಲಬರ್ಗಾ ಜಿಲ್ಲೆ

ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಮತ್ತೊಂದು ಪ್ರಮುಖ ಪ್ರದೇಶವೇ ಗುಲಬರ್ಗಾ. ಗುಲಬರ್ಗಾ ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದ್ದು ೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ

ಒಂದಾಗಿದೆ. ಜಿಲ್ಲೆಯ ವಿಶಾಲ ಸಮತಟ್ಟಾದ ಪ್ರದೇಶವು ೭೬°-೦೪' ಮತ್ತು ೭೭°-೪೨' ಪೂರ್ವ ರೇಖಾಂಶ ಹಾಗೂ ೧೬°-೧೨' ಮತ್ತು ೧೭°-೪೬' ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ. ಗುಲಬರ್ಗಾ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶವು ೧೬,೨೨೪ ಚ.ಕಿ.ಮೀ. ಇದ್ದು ರಾಜ್ಯದ ಶೇ. ೮.೪೬ರಷ್ಟು ಪ್ರದೇಶವನ್ನು ಒಳಗೊಂಡಿದೆ. ವಿಸ್ತೀರ್ಣದಲ್ಲಿ ಇದು ರಾಜ್ಯದ ಎರಡನೆಯ ದೊಡ್ಡ ಜಿಲ್ಲೆಯಾಗಿದ್ದು ಪ್ರತಿ ಚ.ಕಿ.ಮೀ. ಪ್ರದೇಶದಲ್ಲಿ ೧೬೦ ಜನರು ವಾಸಿಸುತ್ತಿದ್ದಾರೆ.[೫]

ಗುಲಬರ್ಗಾವನ್ನು ಕಲಬುರ್ಗಿ, ಕಲ್ಬುರ್ಗಿ ಮತ್ತು ಗುಲ್ಬರ್ಗಾ ಎಂಬ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಈ ಹೆಸರುಗಳ ಮೂಲವನ್ನು ಹುಡುಕುತ್ತಾ ಹೋದರೆ, ಸುಮಾರು ಕ್ರಿ.ಶ. ೧೩ನೇ ಶತಮಾನದ ಚಿನ್ಮಳ್ಳಿ ಶಿಲಾಶಾಸನದಲ್ಲಿ 'ಕಲಂಬರಿಗೆ' ಎಂದು ಉಲ್ಲೇಖಿತಗೊಂಡಿದ್ದು, ಬೀದರ್ ಜಿಲ್ಲೆಯ ಶಾಸನ ಒಂದರಲ್ಲೂ ಇದೆ ರೂಪ ದಾಖಲಾಗಿದೆ. ಕ್ರಿ.ಶ. ೧೫೩೭ರಲ್ಲಿ ರಚಿತವಾದ ಶಿರವಾಳದ ಶಿಲಾಶಾಸನಗಳಲ್ಲೂ 'ಕಲಬರಗೆ' ಹಾಗೂ 'ಕಲಬುರಿಗೆ' ಎಂದು ದಾಖಲಾಗಿದೆ. ವಿಜಯನಗರಕ್ಕೆ ಬಂದಿದ್ದ ಪರ್ಶಿಯನ್ ರಾಯಭಾರಿ ಅಬ್ದುಲ್ ರಜಾಕ್‌ನು ಇದನ್ನು 'ಕಲಬುರ್ಗಾ' ಎಂದೇ ಕರೆದಿದ್ದಾನೆ. ಕ್ರಿ.ಶ. ೧೬ನೇ ಶತಮಾನದವರೆಗೂ ಇದೇ ಹೆಸರು ರೂಢಿಯಲ್ಲಿದ್ದು, ನಂತರ ಮುಸ್ಲಿಂರ ಆಡಳಿತದ ಪ್ರಭಾವದಿಂದಾಗಿ ನಂತರದಲ್ಲಿ 'ಗುಲಬರ್ಗಾ' ಎಂಬ ರೂಪವನ್ನು ಪಡೆದಿದೆಯೆಂದು ಅಭಿಪ್ರಾಯಪಡಲಾಗಿದೆ.[೬] ಪ್ರಸ್ತುತ ಗುಲಬರ್ಗಾ ಜಿಲ್ಲೆಯು ಅಫಜಲಪುರ, ಆಳಂದ, ಸೇಡಂ, ಚಿಂಚೋಳಿ, ಚಿತ್ತಾಪುರ, ಜೇವರ್ಗಿ, ಗುಲಬರ್ಗಾ ಎಂಬ ಏಳು ತಾಲೂಕುಗಳನ್ನು ಒಳಗೊಂಡಿದೆ.

ಗುಲಬರ್ಗಾ ಜಿಲ್ಲೆಯು ಸುದೀರ್ಘವಾದ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಪರಂಪರೆಯನ್ನು ಹೊಂದಿದೆ. ಕರ್ನಾಟಕದ ಇತಿಹಾಸದುದ್ದಕ್ಕೂ ಪ್ರಮುಖ ಪಾತ್ರವಹಿಸಿರುವ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಳಚೂರ್ಯರು, ಬಹುಮನ್‌ಶಾಹಿಗಳು ಹಾಗೂ ಬಿಜಾಪುರದ ಆದಿಲ್‌ಶಾಹಿಗಳು ಸತತವಾಗಿ ಆಳ್ವಿಕೆ ಮಾಡಿರುವರು. ೧೩೪೭ರಲ್ಲಿ ಬಹುಮನಿ ವಂಶವನ್ನು ಸ್ಥಾಪಿಸಿದ ಅಲಾವುದ್ದೀನ್ ಬಹಮನ್ ಷಾ, ಕಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದನು. ಬಹುಮನ್‌ಶಾಹಿಗಳ ಆಳ್ವಿಕೆ ಅವನತಿಗೊಂಡ ಮೇಲೆ ಇದು ಹೈದರಾಬಾದ್ ನಿಜಾಮರ ಸಂಸ್ಥಾನವಾಗಿ ಮುಂದುವರೆದು ಆನಂತರ ಪರೋಕ್ಷವಾಗಿ ಬ್ರಿಟಿಷರ ಹತೋಟಿಯಲ್ಲಿ ಮುಂದುವರೆಯಿತು.

ಗುಲಬರ್ಗಾ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಅನೇಕ ವಿಧದಲ್ಲಿ ಸ್ಥಿತ್ಯಂತರಗಳನ್ನು ಕಾಣುತ್ತ ಬಂದುದನ್ನು ಕಾಣಬಹುದು. ಸ್ವಾತಂತ್ರ್ಯಪೂರ್ವದಲ್ಲಿ ಇದು ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದರಿಂದ ಇಲ್ಲಿನ ಭಾಷೆ, ಧರ್ಮ, ಸಂಸ್ಕೃತಿ, ಸಂಸ್ಕಾರಗಳ ಮೇಲೆ ಮುಸ್ಲಿಂ ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಆಗಿತ್ತು. ಉರ್ದು ಭಾಷೆಯಲ್ಲಿಯೇ ಇಲ್ಲಿನ ಎಲ್ಲಾ ವ್ಯವಹಾರಗಳು ನಡೆಯುತ್ತಿದ್ದವು. ರಜಾಕಾರರ ಹಾವಳಿಯಿಂದಾಗಿ ಜಿಲ್ಲೆಯ ಜನ ತತ್ತರಿಸಿ ಹೋದರು. ಆನಂತರ ಸರ್ದಾರ್ ವಲ್ಲಭಬಾಯಿ

ಪಟೇಲ ಅವರ ಪ್ರಯತ್ನದ ಫಲವಾಗಿ ಹೈದರಾಬಾದ್ ಕರ್ನಾಟಕ ಭಾಗವು ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾಗುವುದರೊಂದಿಗೆ ನಿಜಾಮನ ಆಡಳಿತವು ಕೊನೆಗೊಂಡಿತು.

ನಾಡಿನ ಜನ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದು, ಸದಾ ತಮ್ಮನ್ನು ತಾವು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಂತರು, ಶರಣರು, ದಾಸರು, ಸೂಫಿಗಳು ನಡೆದಾಡಿದ ನೆಲ ಇದಾಗಿರುವುದರಿಂದ ಅದೇ ಪರಂಪರೆ ಬೆಳೆದುಬಂದಿದೆ. ಈ ಭಾಗದ ತತ್ತ್ವಪದಕಾರರು, ವಚನಕಾರರು, ಜನಪದ ಹಾಡುಗಾರರು, ಭಜನೆ, ಗೀಗಿ ಪದ ಹಾಡುಗಾರರಲ್ಲಿ ದಲಿತರದ್ದೆ ಸಿಂಹಪಾಲು ಆಗಿದೆ ಎನ್ನುವುದು ವಿಶೇಷವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಕಾಲಾನುಕಾಲದಿಂದ ಬಂದಿರುವ ಸಮಾಜದಲ್ಲಿನ ಮೌಢ್ಯತೆ, ಅಂಧಶ್ರದ್ಧೆ, ಜಾತೀಯತೆ, ಅಸ್ಪೃಶ್ಯತೆ, ಆರ್ಥಿಕ, ಅಸಮಾನತೆ, ಧಾರ್ಮಿಕ ಅಂಧಾನುಕರಣೆ ಹೆಣ್ಣು-ಗಂಡೆಂಬ ಭೇದಭಾವಗಳನ್ನು ತೊಲಗಿಸಲು ತತ್ತ್ವಪದಗಳು, ಗೀಗಿ ಪದಗಳು, ಜಾನಪದ ಹಾಡುಗಳನ್ನು ಹಾಡುತ್ತ ದಲಿತರು ಪ್ರಗತಿಶೀಲರು ತಮ್ಮ ವೈಚಾರಿಕತೆಯನ್ನು ಮೆರೆದರು.

ಗುಲಬರ್ಗಾ ಜಿಲ್ಲೆಯು ಅನೇಕ ದೇವಾಲಯಗಳು, ಸ್ಮಾರಕಗಳಿಗೂ ಹೆಸರಾಗಿದೆ. ಬಹುಮನಿ ಸುಲ್ತಾನರ ಕಾಲದಲ್ಲಿ ನಿರ್ಮಿಸಿದ ಕೋಟೆ, ಅರಮನೆ, ಗೋರಿ, ಮಸೀದಿಗಳು ಇಂದಿಗೂ ಪ್ರವಾಸಿ ತಾಣಗಳಾಗಿವೆ. ಹಾಗೆಯೇ ಗುಲಬರ್ಗಾದಲ್ಲಿ ಹೆಸರುವಾಸಿಯಾದ ಶ್ರೀ ಶರಣಬಸವೇಶ್ವರರ ಭವ್ಯ ದೇವಾಲಯವಿದ್ದು ಇದೊಂದು ಸುಕ್ಷೇತ್ರವಾಗಿದೆ. ಪ್ರತಿ ವರ್ಷವೂ ವಿಜೃಂಭಣೆಯಿಂದ ದೊಡ್ಡ ಜಾತ್ರೆ ನಡೆಯುತ್ತದೆ. ದೇವಾಲಯವು ಕೇಂದ್ರ ಸರಕಾರದಿಂದ ರಾಷ್ಟ್ರೀಯ ಪ್ರವಾಸಿ ಕೇಂದ್ರವೆಂದು ಪರಿಗಣಿಸಲ್ಪಟ್ಟಿದ್ದು ಡಾ. ಶರಣಬಸವಪ್ಪ ಅಪ್ಪಾ ಅವರು ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಮಹಾದಾಸೋಹದ ಪೀಠಾಧಿಪತಿಗಳಾಗಿದ್ದಾರೆ ಹಾಗೂ ಇವರು ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಶ್ರೀ ಶರಣಬಸವೇಶ್ವರ ಸಂಸ್ಥೆಯಿಂದ ಅನೇಕ ಶಾಲೆ, ಕಾಲೇಜುಗಳು ನಡೆಯುತ್ತಿದ್ದು ಅಪ್ಪಾ ಅವರ ಸೂಕ್ತ ಮಾರ್ಗದರ್ಶನದಲ್ಲಿ 'ಅನುಭವ ಮಂಟಪ', 'ಕಾಯಕ ಇಂಟರ್‌ನ್ಯಾಶನಲ್', 'ವೀರಶೈವ ಮ್ಯೂಸಿಯಂ ಮುಂತಾದ ನವೀನ ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ.

ಗುಲಬರ್ಗಾ ನಗರದಲ್ಲಿರುವ ಇನ್ನೊಂದು ಪವಿತ್ರ ಸ್ಥಳವೆಂದರೆ 'ಹಜರತ್ ಖಾಜಾ ಬಂದೇ ನವಾಜರ ದರ್ಗಾ'. ಇದು ಹಜರತ್ ಖಾಜಾ ಬಂದೇ ನವಾಜರ ಸಮಾಧಿ, ಹಜರತ್ ಖಾಜಾ ಬಂದೇ ನವಾಜರು ಒಬ್ಬ ಸಂತರು, ಮಹಾತ್ಮರು, ಜಾತಿ, ಮತ, ಪಂಥ ಯಾವ ಭೇದ-ಭಾವಗಳಿಲ್ಲದೆ ಎಲ್ಲಾ ಜನರೂ ಅವರನ್ನು ಗೌರವಿಸುತ್ತಾರೆ. ಇಲ್ಲಿರುವ ದರ್ಗಾವು ಇಡೀ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಯಾಗಿದ್ದು ಧಾರ್ಮಿಕ ಪರಂಪರೆಗೆ ಹೆಸರಾಗಿದೆ. ಹಾಗೆಯೇ ಗುಲಬರ್ಗಾ ನಗರದಲ್ಲಿ ಇತ್ತೀಚಿಗೆ ನಿರ್ಮಿಸಲ್ಪಟ್ಟಿರುವ 'ಬುದ್ಧವಿಹಾರ'ವು ಕರ್ನಾಟಕದಲ್ಲೇ ಅತ್ಯಂತ ವಿಶಿಷ್ಟವಾದ ಬೌದ್ಧ ಕೇಂದ್ರವಾಗಿದೆ. ಇದನ್ನು ಸಂಪೂರ್ಣ ಬಿಳಿ ಅಮೃತಶಿಲೆಯಿಂದ ನಿರ್ಮಿಸಿದ್ದು ಬೃಹತ್ ಕಟ್ಟಡದೊಳಗೆ ಬುದ್ಧನ ಕಂಚಿನ ವಿಗ್ರಹವನ್ನು ಪ್ರತಿಷ್ಠಾಪಿಸ ಲಾಗಿದೆ. ಹಾಗೆ ನೋಡಿದರೆ ಜಿಲ್ಲೆಗೆ ಬೌದ್ಧವಿಹಾರವು ಹೊಸದೇನಲ್ಲ. ಸನ್ನತಿಯಲ್ಲಿ ಕ್ರಿ.ಪೂ.ದಲ್ಲಿಯೇ

ಬೌದ್ಧವಿಹಾರಗಳನ್ನು ನಿರ್ಮಿಸಿರುವುದನ್ನು ಇಂದಿಗೂ ನೋಡಬಹುದಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಇನ್ನೂ ಅನೇಕ ಪ್ರಾಚೀನ ದೇವಾಲಯಗಳು, ಸ್ಮಾರಕಗಳು, ವಿದ್ಯಾಕೇಂದ್ರಗಳಿದ್ದು, ಶಿಲ್ಪಕಲಾ ವೈಭವಕ್ಕೆ ಹೆಸರುವಾಸಿಯಾದ ಕಾಳಗಿ, ರಾಷ್ಟ್ರಕೂಟರ ನೃಪತುಂಗನ ರಾಜಧಾನಿಯಾಗಿದ್ದ ಮಳಖೇಡ, ಪ್ರಾಚೀನ ವಿದ್ಯಾಕೇಂದ್ರ ಘಟಿಕಸ್ಥಾನ 'ನಾಗಾಯಿ' ದಕ್ಷಿಣದ ಕಾಶಿ ಎಂದೇ ಹೆಸರಾಗಿತ್ತು

ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆಯು ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದ ಪ್ರದೇಶವಾಗಿದೆ. ಭಾರತದ ಚರಿತ್ರೆಯಲ್ಲಿ ಹಾಗೂ ಕರ್ನಾಟಕದ ಚರಿತ್ರೆಯಲ್ಲಿ ರಾಯಚೂರು ಜಿಲ್ಲೆಯು ವಹಿಸಿದ ಪಾತ್ರವು ಸ್ಮರಣೀಯ ವಾಗಿದೆ. ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯು ಕ್ರಿ.ಪೂ. ೨೦೦೦ ವರ್ಷಗಳಷ್ಟು ಪ್ರಾಚೀನವಾಗಿದ್ದು, ಹಳೆಯ ಶಿಲಾಯುಗದ ಸಂಸ್ಕೃತಿಯಿಂದ ಪ್ರಾರಂಭವಾಗಿ ಕರ್ನಾಟಕದ ಎಲ್ಲಾ ಮುಖ್ಯ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದು ಬರುತ್ತದೆ. ಬ್ರಿಟಿಷರ ವಿರುದ್ಧ ಹಾಗೂ ಹೈದರಾಬಾದ್ ನಿಜಾಮನ ಆಳ್ವಿಕೆ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಯಚೂರು ಮುಖ್ಯ ಪಾತ್ರವನ್ನು ವಹಿಸಿದ್ದು ಜಿಲ್ಲೆಯ ಅನೇಕ ಭಾಗಗಳಲ್ಲಿ ದೊರೆತ ಶಿಲಾಶಾಸನಗಳು, ಅಳಿದುಳಿದು ನಿಂತಿರುವ ಕೋಟೆಗಳು, ದೇವಾಲಯಗಳು ಜಿಲ್ಲೆಯ ಇತಿಹಾಸವನ್ನು ಹೇಳುತ್ತವೆ. ರಾಯಚೂರು ಜಿಲ್ಲೆಯು ಕೃಷ್ಣ ಮತ್ತು ತುಂಗಭದ್ರ ನದಿಗಳ ಅಂಗಳವಾಗಿದ್ದು, 'ದೋಅಬ್' ಎಂದೇ ಗುರುತಿಸಿಕೊಂಡಿರುವ ಪ್ರದೇಶವಾಗಿದೆ. 'ದೋಅಬ್' ಎಂದರೆ ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಿನ ಫಲವತ್ತಾದ ಪ್ರದೇಶ.

ರಾಯಚೂರಿಗೆ ಹಿಂದೆ ರಾಚವೂರು, ಪೆರ್ಮನರಾಚೂರು ಹಾಗೂ 'ರಾಚನೂರು' ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದ್ದು, ಅನೇಕ ಬದಲಾವಣೆಗಳಾಗಿ 'ರಾ' ಮತ್ತು ಚೂರುಗಳ ಮಧ್ಯೆ 'ಯು' ಸೇರಿಕೊಂಡು ರಾಯಚೂರಾಗಿ ಮಾರ್ಪಾಡಾಗಿದೆ. ಭಾರತ ಸರಕಾರದ ಕೇಂದ್ರ ಅಂಕಿಸಂಖ್ಯೆಗಳ ಪ್ರಕಾರ ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತಾರವು ೧೪,೦೧೩ ಚದರ ಕಿ.ಮೀ.ಗಳಾಗಿವೆ. ಕರ್ನಾಟಕ ರಾಜ್ಯದ ಜಿಲ್ಲೆಗಳ ಭೂ ವಿಸ್ತಾರದಲ್ಲಿ ರಾಯಚೂರು ಜಿಲ್ಲೆಯು ಮೂರನೇ ಸ್ಥಾನವನ್ನೂ ಹಾಗೂ ಜನಸಂಖ್ಯೆಯಲ್ಲಿ ಹತ್ತನೆಯ ಸ್ಥಾನವನ್ನೂ ಹೊಂದಿದೆ. ಪ್ರಸ್ತುತ ಈ ಜಿಲ್ಲೆಯು ಲಿಂಗಸೂಗೂರು, ಮಾನ್ವಿ, ಸಿಂಧನೂರು, ದೇವದುರ್ಗ ಹಾಗೂ ರಾಯಚೂರು ಎಂಬ ಐದು ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯು ಬಂಡೆಗಲ್ಲುಗಳಿಂದ ಪರ್ವತಗಳಿಂದ, ಗಿಡಮರಗಳಿಲ್ಲದ ಬಯಲು ಭೂಮಿಯಿಂದ ಒಣಹವೆ ಹಾಗೂ ಕಪ್ಪುಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಸಮುದ್ರ ತಳದಿಂದ ಸು. ೧೩೧೧ ಅಡಿ ಎತ್ತರದಲ್ಲಿರುವುದರಿಂದ ಉಷ್ಣಹವೆ ಹಾಗೂ ಅತಿಯಾದ ಬಿಸಿಲು ಇಲ್ಲಿರುತ್ತದೆ. ಜಿಲ್ಲೆಯು ಉತ್ತರದಲ್ಲಿ ಗುಲಬರ್ಗಾ, ಪಶ್ಚಿಮದಲ್ಲಿ ವಿಜಾಪುರ ಹಾಗೂ ಧಾರವಾಡ, ಪೂರ್ವದಲ್ಲಿ ಆಂಧ್ರ ಪ್ರದೇಶದ ಮೆಹಬೂಬನಗರ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಆಂಧ್ರದ ಕರ್ನೂಲ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಆವೃತವಾಗಿದ್ದು ಕೃಷ್ಣಾ ನದಿಯು ಜಿಲ್ಲೆಯ ಉತ್ತರ ಹಾಗೂ ತುಂಗಭದ್ರಾ ನದಿಯು ದಕ್ಷಿಣದ ಮೇರೆಗಳಾಗಿವೆ.[೬]

ರಾಯಚೂರು ಜಿಲ್ಲೆಯ ಇತಿಹಾಸವು ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ಜಿಲ್ಲೆಯ ಲಿಂಗಸೂಗೂರ ತಾಲೂಕಿನ ಮಸ್ಕಿ ಹಾಗೂ ಪಾಲ್ಕಿಗುಂಡಗಳಲ್ಲಿ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ದೊರಕಿವೆ. ಕ್ರಿ.ಶ. ೧೯೧೫ರಲ್ಲಿ ಪ್ರೊ. ಬೇಡನ್ ಎಂಬ ಇಂಜಿನಿಯರ್ ಮಸ್ಕಿಯ ಶಾಸನವನ್ನು ಹಾಗೂ ೧೯೩೧ರಲ್ಲಿ ಕೊಪ್ಪಳ ನಾರಾಯಣ ಶಾಸ್ತ್ರಿಗಳು ಹಾಗೂ ಹೈದರಾಬಾದ್ ಪ್ರಾಚ್ಯವಸ್ತು ಸಂಶೋಧನಾ ಕಛೇರಿಯ ನಿರ್ದೇಶಕರಾದ ಜಿ. ಯಜದಾನಿಯವರು ಗವಿಮಠ ಹಾಗೂ ಪಾಲ್ಕಿಗುಂಡ ಶಾಸನಗಳನ್ನು ಸಂಶೋಧಿಸಿದ್ದಾರೆ. ಅಶೋಕನ ಶಾಸನಗಳಲೆಲ್ಲಾ ಮಸ್ಕಿ ಶಾಸನವು ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಏಕೆಂದರೆ ಚರಿತ್ರಕಾರರಿಗೆ ಸವಾಲಾಗಿದ್ದ 'ದೇವಾನಾಂಪ್ರಿಯ ಪ್ರಿಯದರ್ಶಿ' ಬಿರುದುಗಳನ್ನು ಹೊಂದಿದ್ದ ದೊರೆ ಮೌರ್ಯ ಚಕ್ರವರ್ತಿ ಅಶೋಕನೆ ಎಂದು ಪ್ರಥಮ ಬಾರಿಗೆ ಮಸ್ಕಿ ಶಾಸನದಿಂದ ತಿಳಿದು ಬಂದಿತು.

ಇತಿಹಾಸ ಕಾಲದಿಂದಲೂ ಎಡ ದೊರೆ ನಾಡೆಂದು ಪ್ರಸಿದ್ಧಿಯನ್ನು ಪಡೆದಿರುವ ರಾಯಚೂರು ಜಿಲ್ಲೆ ಕೃಷ್ಣ-ತುಂಗಭದ್ರೆಯರ ನಡುವಿನ ಫಲವತ್ತಾದ ಭೂಮಿ. ಇದು ಚಿನ್ನದ ನಾಡು, ಹತ್ತಿಯ ಕಣಜ, ಜೋಳ, ಭತ್ತ, ಸಜ್ಜೆ, ಸೂರ್ಯಕಾಂತಿ ಬೆಳೆಗೆ ಪ್ರಸಿದ್ಧವಾಗಿದೆ. ಇಲ್ಲಿನ ಭತ್ತ ವಿದೇಶಗಳಿಗೆ ರಫ್ತಾಗುತ್ತದೆ. ತುಂಗಭದ್ರಾ ನದಿಗೆ ಕಟ್ಟಿರುವ ಆಣೆಕಟ್ಟಿನಿಂದಾಗಿ ಜಿಲ್ಲೆಯ ಕೆಲವು ಭಾಗ ಇಂದು ನೀರಾವರಿಗೆ ಒಳಪಟ್ಟಿದ್ದು, ಹೆಚ್ಚಾಗಿ ಭತ್ತ, ಕಬ್ಬು ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯ ಹಟ್ಟಿಯಲ್ಲಿ ಬಂಗಾರದ ಗಣಿ ನಿಕ್ಷೇಪಗಳಿದ್ದು, ಹಟ್ಟಿ ಚಿನ್ನದ ಗಣಿಯು ದೇಶದ ಮುಖ್ಯ ಬಂಗಾರ ಉತ್ಪಾದನಾ ಕೇಂದ್ರವಾಗಿದೆ. ಆದಾಗ್ಯೂ ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ರಾಯಚೂರು ಜಿಲ್ಲೆ ಹಿಂದುಳಿದ ಪ್ರದೇಶವೆಂದೇ ಗುರುತಿಸಿಕೊಂಡಿದೆ.

ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಿನ 'ದೋಆಬ್' ಎಂದು ಕರೆಯಲ್ಪಡುವ ಫಲವತ್ತಾದ ಪ್ರದೇಶದ ಮೇಲೆ ಒಡೆತನ ಸ್ಥಾಪಿಸಲು ವಿಜಯನಗರದ ಅರಸರು ಮತ್ತು ಬಹುಮನಿ ಸುಲ್ತಾನರ ನಡುವೆ ಸತತ ಯುದ್ಧಗಳಾದವು. ರಕ್ಕಸ-ತಂಗಡಿಯ ಯುದ್ಧದ ನಂತರ ಇದು ಬಿಜಾಪುರದ ಆದಿಲ್‌ಶಾಹಿ ಅರಸರ ವಶವಾಯಿತು. ಅವರ ಆಡಳಿತದಲ್ಲಿ ರಾಯಚೂರು ಜಿಲ್ಲೆ ಯಾವುದೇ ಪ್ರಗತಿಯನ್ನು ಕಾಣಲಿಲ್ಲ. ಕ್ರಿ.ಶ. ೧೬೮೭ರಲ್ಲಿ ಮೊಗಲ್ ದೊರೆ ಔರಂಗಜೇಬನು ಬಿಜಾಪುರದ ಅರಸರನ್ನು ಸೋಲಿಸಿ 'ನಿಜಾಮ್‌ಮುಲ್ಕ ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದನು. ಆಗ ಹೈದರಾಬಾದ್ ಕೇಂದ್ರ ಸ್ಥಾನವಾಗಿದ್ದ ಆ ಪ್ರಾಂತ್ಯದಲ್ಲಿ ರಾಯಚೂರು ಸೇರಿತ್ತು. ಔರಂಗಜೇಬನ ಮರಣದ ನಂತರ ಅವನ ಉತ್ತರಾಧಿಕಾರಿಗಳ ದೌರ್ಬಲ್ಯವನ್ನು ಅರಿತು ನಿಜಾಮ್‌ಮುಲ್ಕನು ಸ್ವಾತಂತ್ರ್ಯ ಘೋಷಿಸಿಕೊಂಡನು. ಮುಂದೆ ಬ್ರಿಟಿಷ್ ರಾಜ ಸತ್ತೆಯ ಜೊತೆಗೆ ರಾಜಿ ಮಾಡಿಕೊಂಡು, ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಹಾಕಿ ಬ್ರಿಟಿಷರ ಗುಲಾಮಗಿರಿಯನ್ನು ಒಪ್ಪಿಕೊಂಡನು. ಹೀಗಾಗಿ ಇಲ್ಲಿನ ಜನ ತಮ್ಮತನವನ್ನೆಲ್ಲ ಕಳೆದುಕೊಂಡು ಗುಲಾಮನ ಗುಲಾಮರಾಗಿ ಬಾಳಬೇಕಾಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದು, ಜಿಲ್ಲೆಯು ಭಾರತದ ಒಕ್ಕೂಟಕ್ಕೆ ಸೇರುವವರೆಗೆ ಎಲ್ಲಾ

ರೀತಿಯ ಶೋಷಣೆಯನ್ನು ಅನುಭವಿಸಬೇಕಾಯಿತು. ಕೊನೆಗೆ ಸೈನಿಕ ಕಾರ್ಯಾಚರಣೆ ಮೂಲಕ ೧೯೪೭ ಸೆಪ್ಟೆಂಬರ್ ೧೭ರಂದು ಈ ಕರಾಳ ಅಧ್ಯಾಯ ಮುಕ್ತಾಯವಾಯಿತು.

ಸ್ವಾತಂತ್ರ್ಯೋತ್ತರ ಕಾಲದ ನಂತರ ಜಿಲ್ಲೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಹೊಸ ಯೋಜನೆಗಳು ಜಾರಿಗೊಂಡು ಸುಧಾರಣೆಗಳು ಕಾರ್ಯರೂಪಕ್ಕೆ ಬರುತ್ತಿವೆ. ತುಂಗಭದ್ರಾ ಎಡದಂಡೆ ಕಾಲುವೆ ಮೂಲಕ ಜಿಲ್ಲೆಯ ಬಹುಭಾಗ ನೀರಾವರಿಗೆ ಒಳಪಟ್ಟು ಹಸಿರಾಗಿದೆ. ನಾರಾಯಣಪುರ ಬಲದಂಡೆ ಕಾಲುವೆ ಪ್ರಗತಿಯಲ್ಲಿದೆ. ಮಸ್ಕಿನಾಲಾ ಯೋಜನೆ, ರಾಂಪುರ ಏತ ನೀರಾವರಿ ಮುಂತಾದವುಗಳು ಜಿಲ್ಲೆಯ ಪ್ರಮುಖ ನೀರಾವರಿ ಯೋಜನೆಗಳಾಗಿವೆ. ರಾಯಚೂರು ಶಾಖೋತ್ಪನ್ನ ಕೇಂದ್ರ ಮತ್ತು ಹಟ್ಟಿಯ ಚಿನ್ನದ ಗಣಿ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿವೆ. ಓಪೆಕ್ ಆಸ್ಪತ್ರೆ ಜಿಲ್ಲೆಯ ಜನರ ಆರೋಗ್ಯ ಸುಧಾರಣೆಗೆ ಆಸರೆಯಾಗಿದೆ. ಇನ್ನು ಈ ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಯಲ್ಲಿ ತಾರಾನಾಥ ಶಿಕ್ಷಣ ಸಂಸ್ಥೆ, ಎಲ್.ವಿ.ಡಿ. ಕಾಲೇಜ್, ಬಿ.ಆರ್.ಬಿ. ವಾಣಿಜ್ಯ ಮಹಾವಿದ್ಯಾಲಯ, ಟಾಗೋರ ಸ್ಮಾರಕ ಶಿಕ್ಷಣ ಸಂಸ್ಥೆಗಳು ರಾಯಚೂರಿನ ಜನತೆಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಕೊಪ್ಪಳ ಜಿಲ್ಲೆ

ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಸೇರಿದ ಕೊಪ್ಪಳ ಜಿಲ್ಲೆಯು ಹೈದರಾಬಾದ್ ನಿಜಾಮರ ಪ್ರಧಾನಮಂತ್ರಿಯಾಗಿದ್ದ ಸಾಲಾರಜಂಗನ ಜಹಗೀರಾಗಿದ್ದಿತು. ೧೯೪೯ರಲ್ಲಿ ಜಹಗೀರುಗಳ ರದ್ಧತಿಯಿಂದಾಗಿ ಜಹಗೀರು ತಾಲೂಕುಗಳಾದ ಕೊಪ್ಪಳ ಮತ್ತು ಯಲಬುರ್ಗಾ ತಾಲೂಕುಗಳು ರಾಯಚೂರು ಜಿಲ್ಲೆಗೆ ಸೇರಿದ್ದವು. ನಂತರ ೧೯೯೭ರಲ್ಲಿ ಹೊಸ ಜಿಲ್ಲೆಗಳ ರಚನೆ ಮತ್ತು ಮರುವಿಂಗಡಣೆಯಾದಾಗ ಕೊಪ್ಪಳ ಪ್ರತ್ಯೇಕ ಜಿಲ್ಲೆಯಾಯಿತು. ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿ ಗಂಗಾವತಿ, ಯಲಬುರ್ಗಾ, ಕುಷ್ಟಗಿ, ಕೊಪ್ಪಳ ಎಂಬ ನಾಲ್ಕು ತಾಲೂಕುಗಳು ಇವೆ.

ಕೊಪ್ಪಳಕ್ಕೆ ಸುಮಾರು ೨೦೦೦ಕ್ಕೂ ಹೆಚ್ಚು ವರ್ಷಗಳ ಸುದೀರ್ಘ ಪರಂಪರೆಯಿದೆ. ಇಲ್ಲಿನ ಕೋಟೆ ಮತ್ತು ಅಶೋಕ ಚಕ್ರವರ್ತಿಯ ಶಾಸನಗಳು ಇದರ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡ ಎಂಬಲ್ಲಿ ಅಶೋಕನಿಗೆ ಸಂಬಂಧಪಟ್ಟ ಶಿಲಾಶಾಸನಗಳಿವೆ. ಮಲೆ ಮಲ್ಲೇಶ್ವರ ಗುಡ್ಡದಲ್ಲಿರುವ ಗವಿಗಳು ಬೌದ್ಧರ ವಿಹಾರವಾಗಿದ್ದವು ಎಂದು ತಿಳಿದು ಬರುತ್ತದೆ. ಕೊಪ್ಪಳ ಹೆಸರಿನ ಐತಿಹಾಸಿಕ ಹಿನ್ನೆಲೆ ನೋಡಿದಾಗ, ಶಾಸನಗಳಲ್ಲಿ ಕೊಪ್ಪಳವನ್ನು 'ಆದಿತೀರ್ಥವೆಂದು, ಮಹಾತೀರ್ಥವೆಂದೂ ವರ್ಣಿಸಲ್ಪಟ್ಟಿದೆ. ಸಾಹಿತ್ಯ ಆಧಾರಿತ ಮೂಲಗಳ ಪ್ರಕಾರ ಕವಿರಾಜಮಾರ್ಗ ಕೃತಿಯಲ್ಲಿ ಕೊಪ್ಪಳವನ್ನು 'ಕೊಪಣ'ನಗರವೆಂದೂ, ರಾಘುವಾಂಕನ ಸೋಮನಾಥ ಚಾರಿತ್ರದಲ್ಲಿ 'ಕೊಪಣ' ಎಂದೂ ಕೊನೆಗೆ ೧೬ನೇ ಶತಮಾನದ ಹೊತ್ತಿಗೆ ಕೊಪ್ಪಳ ಎಂದು ಕರೆಸಿಕೊಂಡಿದೆ.[೮] ಇಷ್ಟೆಲ್ಲಾ ಚಾರಿತ್ರಿಕ ಹಿನ್ನೆಲೆ ಇರುವ ಕೊಪ್ಪಳವು ಮೌರ್ಯರ, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಗಂಗರ, ಕಲ್ಯಾಣ ಚಾಲುಕ್ಯರ ಆಡಳಿತಕ್ಕೊಳಪಟ್ಟ

ಪ್ರದೇಶವಾಗಿತ್ತು. ಮುಂದೆ ಮರಾಠರ, ಬಹುಮನಿ ಸುಲ್ತಾನರ, ಅದಿಲ್‌ಶಾಹಿಗಳ, ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಆಡಳಿತಕ್ಕೊಳಪಟ್ಟ ಅಂಶವು ಚರಿತ್ರೆಯಿಂದ ತಿಳಿದು ಬರುತ್ತದೆ.

ಬಿಜಾಪುರದ ಅದಿಲ್‌ಷಾನ ಕಾಲದಲ್ಲಿ ಇದನ್ನು ಮುಜಫರ್ ನಗರವೆಂದು ಕರೆಯಲ್ಪಟ್ಟಿತು. ಮರಾಠ ನಾಯಕ ಶಿವಾಜಿ ಇದರ ಮೇಲೆ ದಾಳಿ ಮಾಡಿ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡು, 'ಸುಭಾನಜಿ ರಾವ್' ಎನ್ನುವವನಿಗೆ ನೀಡಿದನು. ತರುವಾಯ ಇದು ಹೈದರ್‌ಅಲಿ ಮತ್ತು ಮರಾಠರ ವಶವಾಯಿತು. ಟಿಪ್ಪುಸುಲ್ತಾನನು ಮರಾಠರೊಂದಿಗೆ ಹೋರಾಡಿ ವಶಪಡಿಸಿಕೊಂಡ ನೆನಪಿಗಾಗಿ ನಗರವನ್ನು 'ಸುಲ್ತಾನಗಡ' ಎಂದು ಕರೆದನು. ನಂತರ ೧೮೫೭ರಲ್ಲಿ ಕೊಪ್ಪಳದ ಪ್ರಸಿದ್ಧ ಜಮೀನುದಾರನಾದ ವೀರಪ್ಪನು ಬ್ರಿಟಿಷರ ವಿರುದ್ಧ ದಂಗೆ ಎದ್ದು ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡಿದ್ದನು. ಕೊಪ್ಪಳವನ್ನು ಪುನಃ ಪಡೆಯಲು ಬ್ರಿಟಿಷರು ಮರಾಠವಾಡ ಹಾಗೂ ಸಿಕಂದರಾಬಾದ್‌ನ ಸೈನ್ಯ ತರಿಸಿ ವೀರಪ್ಪನನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡಿದ್ದರು. ೧೮೫೭ರಲ್ಲಿ ಸಿಪಾಯಿ ದಂಗೆಯ ಪ್ರಭಾವದಿಂದ ಪ್ರೇರಿತರಾದ ಮುಂಡರಗಿ ಭೀಮರಾಯ ಮತ್ತು ಹಮ್ಮಿಗಿ ಕೆಂಚನಗೌಡ ದೇಸಾಯಿ ಇವರು ಬ್ರಿಟಿಷರಿಂದ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡಿದ್ದರು. ಸ್ವಾತಂತ್ರ್ಯ ಪ್ರಿಯರಾದ ಕೊಪ್ಪಳದ ಜನರು ಭೀಮರಾಯರನ್ನು ಬೆಂಬಲಿಸಿ ಅವರ ನಾಯಕತ್ವದ ಹೋರಾಟದಲ್ಲಿ ಕೈಜೋಡಿಸಿದ್ದರು. ಕೊಪ್ಪಳವನ್ನು ಪುನಃ ವಶಪಡಿಸಿಕೊಳ್ಳಬೇಕೆಂಬ ಛಲತೊಟ್ಟ ಬ್ರಿಟಿಷರು ನಾನಾ ಕಡೆಯಿಂದ ಸೈನ್ಯ ತರಿಸಿ ಹೋರಾಟಕ್ಕಿಳಿದರು. ಆದರೆ ಕೊಪ್ಪಳದ ಕೋಟೆ ಗೆಲ್ಲುವುದು ಅಸಾಧ್ಯವಾಗಿತ್ತು, ಕೊನೆಗೆ ಬ್ರಿಟಿಷರು ಕೋಟೆ ಬಾಗಿಲಿನ ಕಾವಲುಗಾರರೊಂದಿಗೆ ಒಳಸಂಚು ರೂಪಿಸಿ ಕೋಟೆ ಒಳಗಡೆ ನುಗ್ಗುವಲ್ಲಿ ಯಶಸ್ವಿಯಾದರು. ಆದರೆ ಸ್ವಾಭಿಮಾನಿಯಾದ ಭೀಮರಾಯರು ವೈರಿಗಳ ಕೈ ವಶವಾಗದೆ ತಾವೇ ತಮ್ಮ ಬಂದೂಕಿನಿಂದ ಗುಂಡು ಹಾರಿಸಿಕೊಂಡು ವೀರ ಮರಣವನ್ನಪ್ಪಿದರು. ಹೀಗೆ ಕೊಪ್ಪಳವನ್ನು ವಶಪಡಿಸಿಕೊಂಡ ಬ್ರಿಟಿಷರು ೧೮೬೧ರಲ್ಲಿ ಕೊಪ್ಪಳವನ್ನು ಸಾಲಾರಜಂಗನಿಗೆ ಜಹಗೀರಾಗಿ ನೀಡಿದರು. ಹೀಗಾಗಿ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಕೊಪ್ಪಳವು ಸಾಲಾರಜಂಗರ ಅಧೀನದಲ್ಲೇ ಇತ್ತು.

ಸ್ವಾತಂತ್ರ್ಯದ ನಂತರ ಕೊಪ್ಪಳ ಜಿಲ್ಲೆಯು ಸರಕಾರದ ನಿರ್ಲಕ್ಷ್ಯಕ್ಕೆ ಈಡಾಗಿ ಪ್ರಾದೇಶಿಕ ಅಸಮಾನತೆಗೆ ಮತ್ತು ಹಿಂದುಳಿದಿರುವಿಕೆಗೆ ಕಾರಣವಾಯಿತು. ಡಾ. ಡಿ.ಎಂ. ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ವರದಿಯಂತೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳು ಅತ್ಯಂತ ಹಿಂದುಳಿದ ತಾಲೂಕುಗಳ ಪಟ್ಟಿಯಲ್ಲಿವೆ. ಸಾಕ್ಷರತೆಯಲ್ಲಿ ಕೊಪ್ಪಳ ಜಿಲ್ಲೆಯು ರಾಜ್ಯದಲ್ಲಿ ೨೪ನೇ ಸ್ಥಾನದಲ್ಲಿದ್ದು ೨೦೦೧ರ ಜನಗಣತಿ ಪ್ರಕಾರ ಕೊಪ್ಪಳ ಜಿಲ್ಲೆಯ ಸಾಕ್ಷರತೆ ಶೇ. ೫೫.೦೨ ಇದೆ. ಅದರಲ್ಲಿ ಪುರುಷರ ಸಾಕ್ಷರತೆ ೬೯.೧೫ ಹಾಗೂ ಮಹಿಳಾ ಸಾಕ್ಷರತೆ ೩೯.೬ ಇದೆ. ರಾಜ್ಯಮಟ್ಟದಲ್ಲಿ ಅತ್ಯಂತ ಹೆಚ್ಚು ಶಾಲೆ ಬಿಡುವ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣದಲ್ಲಿ ಮೊದಲ ಮೂರು ಜಿಲ್ಲೆಗಳಲ್ಲಿ ಕೊಪ್ಪಳ ಜಿಲ್ಲೆ ಕೂಡಾ ಒಂದಾಗಿದೆ. ಕೃಷಿಗೆ ಸಂಬಂಧಿಸಿದಂತೆಯೂ

ಜಿಲ್ಲೆಯ ಸ್ಥಿತಿಗತಿ ತೃಪ್ತಿದಾಯಕವಾಗಿಲ್ಲ. ಒಟ್ಟು ನಿವ್ವಳ ನೀರಾವರಿ ಪ್ರದೇಶ ಶೇ. ೨೭ರಷ್ಟಿದೆ. ನೀರಾವರಿ ಆಯೋಗ ಗುರುತಿಸಿದ ರಾಜ್ಯದ ಬರ ಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಕೊಪ್ಪಳ ಜಿಲ್ಲೆಯ ಮೂರು ತಾಲೂಕುಗಳು ಬರುತ್ತವೆ. ಜಿಲ್ಲೆಯಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ಕೇವಲ ಶೇ. ೫.೩೩ರಷ್ಟಿದ್ದು ಇಲ್ಲಿ ಒಣಭೂಮಿ ಬೇಸಾಯದ ಪ್ರಮಾಣವೇ ಅಧಿಕವಾಗಿದೆ. ಕೈಗಾರಿಕೆಗಳ ದೃಷ್ಟಿಯಿಂದ ಕೊಪ್ಪಳ ಜಿಲ್ಲೆಯು ಬಹಳ ಹಿಂದುಳಿದ ಜಿಲ್ಲೆಯಾಗಿದ್ದು ಇತ್ತೀಚಿಗೆ ಜಿಲ್ಲೆಯಲ್ಲಿ ಅನೇಕ ಬೃಹತ್ ಕೈಗಾರಿಕೆಗಳ ಸ್ಥಾಪನೆ ಆಗುತ್ತಿದ್ದರೂ ಸ್ಥಳೀಯರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಅವಕಾಶಗಳು ಬಹಳ ಕಡಿಮೆ ಇರುವುದು ಕಂಡು ಬರುತ್ತದೆ. ಇಲ್ಲಿನ ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆಯಿಂದ ಜಿಲ್ಲೆಗೆ ಸೇರಿದ ಏಷ್ಯಾದಲ್ಲಿಯೇ ಎರಡನೆಯ ಅತಿ ದೊಡ್ಡದಾದ ಗಂಗಾವತಿ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿದೆ. ನೀರಾವರಿಗೆ ಮುಖ್ಯ ಮೂಲವಾಗಿರುವ ತುಂಗಭದ್ರ ಎಡದಂಡೆ ಕಾಲುವೆಯು ದುರ್ಬಲವಾಗಿದ್ದು ರೈತರು ಆತಂಕಗೊಂಡು ಹೋರಾಟಕ್ಕಿಳಿದಿದ್ದಾರೆ.

ಆದರೂ ಇಂದು ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳವು ನಿಧಾನವಾಗಿ ನಗರೀಕರಣಗೊಳ್ಳುತ್ತಿದೆ. ಹೆಚ್ಚುತ್ತಿರುವ ಸಂಚಾರ ದಟ್ಟಣೆಗೆ ಅನುಗುಣವಾಗಿ ಕೊಪ್ಪಳದ ರಸ್ತೆಗಳು ಅಗಲೀಕರಣದೊಂದಿಗೆ ದುರಸ್ತಿಗೊಳ್ಳುತ್ತಿವೆ. ಹೊಸ ಜಿಲ್ಲಾಡಳಿತ ಕೇಂದ್ರ ಕಟ್ಟಡ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೊಪ್ಪಳದ ನಾಗರಿಕರು ತಮ್ಮನ್ನು ತಾವು ಹಲವಾರು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದು, ಇಲ್ಲಿರುವ ರೈಲ್ವೆ ಸೌಲಭ್ಯವು ವ್ಯಾಪಾರ, ವ್ಯವಹಾರಗಳು ಚುರುಕುಗೊಳ್ಳಲು ಕಾರಣವಾಗಿದೆ. ಇಲ್ಲಿನ ಪ್ರಸಿದ್ಧ ಶ್ರೀಗವಿಸಿದ್ಧೇಶ್ವರ ಮಠವು ಸಾಮಾಜಿಕ, ಧಾರ್ಮಿಕ ಕಾರ್ಯಗಳ ಜೊತೆಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಸೌಲಭ್ಯಗಳನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರವಹಿಸಿದೆ. ಶ್ರೀ ಗವಿಮಠದ ಅನ್ನ ದಾಸೋಹ, ಜ್ಞಾನ ದಾಸೋಹದ ಸೌಲಭ್ಯ ಪಡೆದ ಈ ಭಾಗದ ಸಹಸ್ರಾರು ವಿದ್ಯಾರ್ಥಿಗಳು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

ಬಳ್ಳಾರಿ ಜಿಲ್ಲೆ

ಬಳ್ಳಾರಿಯು ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ನಿಜಾಮನ ರಾಜ್ಯದ ಭಾಗವಾಗಿರದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಭಾಷಾವಾರು ಪ್ರಾಂತ್ಯಗಳ ಪುನರ್‌ರಚನೆಯ ಸಂದರ್ಭದಲ್ಲಿ ಬಳ್ಳಾರಿಯನ್ನು ೧೯೫೩ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಹಾಗೂ ಆಡಳಿತದ ಅನುಕೂಲಕ್ಕಾಗಿ ಬಳ್ಳಾರಿ ಜಿಲ್ಲೆಯನ್ನು ಗುಲಬರ್ಗಾ ವಿಭಾಗಕ್ಕೆ ಸೇರಿಸಲಾಯಿತು. ಹೀಗಾಗಿ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯಲ್ಲಿ ಗುರುತಿಸಿಕೊಂಡಿರುವ ಬಳ್ಳಾರಿ ಜಿಲ್ಲೆಯ ಭೌಗೋಳಿಕತೆಯನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ನಿರಂತರವಾಗಿ ಅಧಿಕಾರದ ಹಸ್ತಾಂತರಗಳು, ಜಿಲ್ಲೆಯ ಅವೈಜ್ಞಾನಿಕ ವಿಂಗಡಣೆ, ತಾಲೂಕುಗಳ ಸೇರ್ಪಡೆ ಮತ್ತು ಬೇರ್ಪಡಿಸುವಿಕೆಗಳಂಥ ಆಡಳಿತ ವ್ಯವಸ್ಥೆಯಿಂದ ಬ್ರಿಟಿಷ್ ಆಡಳಿತದ ಏಕಸ್ವಾಮ್ಯಕ್ಕೆ ಒಳಗಾಗದೆ ಸ್ಥಿರ ಆಡಳಿತಕ್ಕೂ ಒಳಪಡದೆ ಅರಾಜಕತೆಯನ್ನು ಅನುಭವಿಸುತ್ತಾ ಬಂದಿದೆ. ಹೀಗೆ ಜಿಲ್ಲೆಯ

ಮದ್ರಾಸ್ ಪ್ರಾಂತ್ಯದ ಭಾಗಗಳು, ದೇಶೀಯ ಸಂಸ್ಥಾನದ ಭಾಗಗಳು ಹಾಗೂ ನಿಜಾಮರ ಆಳ್ವಿಕೆಯ ಗಡಿ ಭಾಗಗಳ ಮಿಶ್ರಣದಿಂದ ರೂಪುಗೊಂಡಿದೆ. ಜಿಲ್ಲೆಯು ೭೫°.೪೪ ಮತ್ತು ೭೮°.೯೯ ರೇಖಾಂಶ ಹಾಗೂ ೧೩°.೪೦ ಮತ್ತು ೧೫°.೫೮ ಅಕ್ಷಾಂಶಗಳ ನಡುವೆ ಹರಡಿಕೊಂಡಿದೆ ಹಾಗೂ ಸಮುದ್ರಮಟ್ಟದಿಂದ ಸುಮಾರು ೮೦೦ ರಿಂದ ೧೦೦೦ ಅಡಿ ಎತ್ತರದಲ್ಲಿದೆ.' ೧೯೯೧ರ ಜನಗಣತಿಯ ಹೊತ್ತಿಗೆ ಭೌತಿಕವಾಗಿ ಮತ್ತು ಭೌಗೋಳಿಕವಾಗಿ ಹಲವಾರು ಆಯಾಮಗಳನ್ನು ಪಡೆದುಕೊಂಡಿದೆ. ಜಿಲ್ಲೆ ಒಟ್ಟು ೮,೧೩,೯೬ ಹೆಕ್ಟೇರ್ ಭೂಪ್ರದೇಶ ಹೊಂದಿದೆ. ಪ್ರಸ್ತುತ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ, ಸಿರಗುಪ್ಪ, ಹೂವಿನಹಡಗಲಿ, ಸಂಡೂರು ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕುಗಳನ್ನು ಒಳಗೊಂಡಿದೆ.

ಬಳ್ಳಾರಿ ಜಿಲ್ಲೆ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ವಾಸಸ್ಥಳವಾಗಿದೆ. ಸಿರಗುಪ್ಪ ತಾಲೂಕಿನ ಉದಯಗೊಳ ಮತ್ತು ನಿಟ್ಟೂರುಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಮೌರ್ಯರಿಂದ ಹಿಡಿದು ವಿಜಯನಗರ ಅರಸರ ಆಳ್ವಿಕೆಯನ್ನು ಹಾಗೂ ಬ್ರಿಟಿಷರ ಆಳ್ವಿಕೆಯನ್ನು ಕಂಡಿದೆ. ಹೀಗಾಗಿ ಪರಂಪರೆ ಮತ್ತು ಸ್ಥಿತ್ಯಂತರಗಳ ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಸಮೀಕ್ಷಿಸುವುದು ತುಂಬಾ ಸಂಕೀರ್ಣವಾದದ್ದು. ಜಿಲ್ಲೆಯು ಭೌಗೋಳಿಕ, ನೈಸರ್ಗಿಕ ಸ್ವರೂಪದಿಂದ ಹಾಗೂ ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ಎಷ್ಟೊಂದು ವೈವಿಧ್ಯತೆಯನ್ನು ಹೊಂದಿದೆಯೋ ಅಷ್ಟೇ ಆಧುನಿಕವಾದ ಸ್ಥಿತ್ಯಂತರಗಳಿಗೂ ಒಳಗಾಗುತ್ತ ಬಂದಿದೆ. ಪ್ರಾಕೃತಿಕ ಸಂಪತ್ತು, ಚಾರಿತ್ರಿಕ ಸ್ವರೂಪ, ದ್ವಿಭಾಷಿಕ ಪರಿಸರ, ಆಧುನಿಕವಾದ ಅಣೆಕಟ್ಟು, ಬೃಹತ್ ಕಾರ್ಖಾನೆಗಳ ಪೈಪೋಟಿ, ಗಣಿ ಸಂಪತ್ತು ಮತ್ತು ಗಣಿಗಾರಿಕೆ ಹಾಗೂ ಜಾನಪದ ದೇಶಿ ಪರಂಪರೆ ಹೀಗೆ ಹಲವು ನಿಟ್ಟಿನಲ್ಲಿ ಬಳ್ಳಾರಿ ವಿಭಿನ್ನ ನೆಲೆಯಾಗಿದೆ.

ಬಳ್ಳಾರಿಯ ಪ್ರಾಕೃತಿಕ ಸಂಪತ್ತಿನಲ್ಲಿ ಬೆಟ್ಟಗಳ ಶ್ರೇಣಿಗೆ ಸಿಂಹಪಾಲು ಸಲ್ಲುತ್ತದೆ. ಉಳಿದ ಭಾಗ ತುಂಗಭದ್ರಾ ನದಿಗೆ ಸಂಬಂಧಿಸಿದೆ. ಹೊಸಪೇಟೆ, ಸಂಡೂರು, ತಾರಾನಗರ, ದೇವಗಿರಿ ಪ್ರದೇಶಗಳ ಬೆಟ್ಟಗಳಲ್ಲಿ ಖನಿಜ ನಿಕ್ಷೇಪಗಳಿದ್ದು ಇವು ಅಂತರ್‌ರಾಷ್ಟ್ರೀಯ ಮಟ್ಟದ ಗುಣಾತ್ಮಕ ಮಾನ್ಯತೆಯನ್ನು ಹೊಂದಿವೆ. ಬೆಟ್ಟ ಪ್ರದೇಶಗಳ ಗಿರಿ ಕಂದರಗಳಲ್ಲಿ ವಾಸಿಸುವ ಪ್ರಾಣಿ ಸಂಪತ್ತು, ಸಂರಕ್ಷಿತ ದರೋಜಿ ಕರಡಿ ಧಾಮ ಇವು ಜೈವಿಕ ಸಂಪತ್ತಿನ ಭಾಗವಾಗಿವೆ. ತುಂಗಭದ್ರಾ ನದಿಯ ಜೊತೆಗೆ ಹಗರಿ, ಚಿಕ್ಕಹಗರಿ, ಚಿನ್ನಹಗರಿ, ಹಗರನೂರುಹಳ್ಳ, ನಾರೀಹಳ್ಳ ಮುಂತಾದ ಜಲಸಂಪತ್ತು ಇದೆ. ತುಂಗಭದ್ರಾ ಅಣೆಕಟ್ಟಿನ ಜಲವಿದ್ಯುತ್ ಸ್ಥಾವರಗಳು, ಕಾಲುವೆಗಳ ನೀರಾವರಿ ವ್ಯವಸ್ಥೆಯು ರೈತರ ಭೂಮಿಯನ್ನು ಹಸಿರಾಗಿಸಿದೆ. ಆದರೆ ಗಣಿಗಾರಿಕೆ ಮತ್ತು ನೀರಾವರಿ ಸೌಲಭ್ಯಗಳು ರೈತರನ್ನು, ಕೂಲಿಕಾರ್ಮಿಕರನ್ನು ಅಭಿವೃದ್ಧಿಯೆಡೆಗೆ ಕರೆದುಕೊಂಡು ಹೋಗುವ ನೆಲೆಗಿಂತ ಹೆಚ್ಚಾಗಿ ಬಂಡವಾಳಶಾಹಿಯನ್ನು, ಮಧ್ಯಮ ದಲ್ಲಾಳಿ ವ್ಯಾಪಾರೀಕರಣ ವನ್ನು ಬಲಪಡಿಸುವ 'ಸಾಮ್ರಾಜ್ಯಶಾಹಿ'ಯನ್ನು ಪೋಷಿಸುವ ಸ್ವರೂಪವನ್ನು ಪಡೆಯುತ್ತಿರುವುದು ಚರ್ಚೆಗೆ ಮತ್ತು ಚಿಂತನೆಗೆ ಕಾರಣವಾಗಿದೆ.

ಬಳ್ಳಾರಿಯಲ್ಲಿ ಜಾತಿ ಮತ್ತು ವರ್ಗ ಕಾರಣದಿಂದಾಗಿ ಬಡತನ, ಅನಕ್ಷರತೆ, ನಿರುದ್ಯೋಗದಂತಹ ಅನೇಕ ಸಮಸ್ಯೆಗಳಿವೆ. ಬಳ್ಳಾರಿ ಜಿಲ್ಲೆಯ ಜನತೆಯ ಮೂಲ ಜೀವನಾಧಾರ ಕೃಷಿಯಾಗಿದೆ. ಅದರಲ್ಲಿ

ಒಟ್ಟು ನಿವ್ವಳ ಪ್ರದೇಶದಲ್ಲಿ ಶೇ. ೩೨ರಷ್ಟು ಭೂಮಿ ಮಾತ್ರ ನೀರಾವರಿಗೆ ಒಳಪಟ್ಟಿದ್ದು, ಉಳಿದ ಪ್ರದೇಶ ಮಳೆಯಾಧಾರಿತ ಪ್ರದೇಶವಾಗಿದೆ. ಆದರೆ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ೧೯೯೩ರಲ್ಲಿ ಮಳೆಯ ಪ್ರಮಾಣ ೬೪೪ ಮಿ.ಮಿ. ಆಗಿದ್ದು, ೨೦೦೩ರಲ್ಲಿ ೨೧೧ ಮಿ.ಮಿ. ಆಗಿದೆ.[೧೦] ಹೀಗೆ ನಿರೀಕ್ಷೆಗಿಂತಲೂ ಮಳೆಯ ಪ್ರಮಾಣದಲ್ಲಿ ಕುಸಿತ ಕಂಡು ಬಂದಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೧೨ರಷ್ಟಿದ್ದ ಅರಣ್ಯ ಪ್ರದೇಶದ ಪ್ರಮಾಣವು ಕಡಿಮೆಯಾಗುತ್ತಿದೆ.[೧೧] ಇಲ್ಲಿನ ಬೆಳೆಗಳಲ್ಲಿ ಪ್ರಮುಖವಾಗಿ ಭತ್ತ, ಜೋಳ, ಹತ್ತಿ, ನೆಲಗಡಲೆ, ಸಜ್ಜೆ, ಮೆಕ್ಕೆಜೋಳ, ದ್ವಿದಳ ಧಾನ್ಯಗಳು ಮುಖ್ಯವಾಗಿವೆ. ತುಂಗಭದ್ರಾ ನದಿ ಪ್ರದೇಶದಲ್ಲಿ ಕಬ್ಬು, ಭತ್ತ, ಬಾಳೆ ಪ್ರಮುಖ ಬೆಳೆಗಳಾಗಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುತ್ತಿರುವುದು ಕಂಡು ಬರುತ್ತದೆ. ಅದರಲ್ಲಿ ತೋರಣಗಲ್ ಬಳಿಯ 'ಜಿಂದಾಲ್' ಉಕ್ಕು ಕಾರ್ಖಾನೆ ಹಾಗೂ ಸರಕಾರಿ ಸ್ವಾಮ್ಯದ ಎನ್‌ಎಂಡಿಸಿ. ಜೊತೆಗೆ ಕುಡಿತಿನಿ ಬಳಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಡಾಣಾಪುರದ ಬಳಿ ಬಿಎಂಎಂ ಕಾರ್ಖಾನೆ, ಹೀಗೆ ಅನೇಕ ಕೈಗಾರಿಕೆಗಳು ಸ್ಥಾಪನೆ ಆಗಿವೆ. ಇತ್ತೀಚಿನ ಎಂಟು ಹತ್ತು ವರ್ಷಗಳಲ್ಲಿ ಜಿಲ್ಲೆಯಲ್ಲಿ ಗಣಿಗಾರಿಕೆ ಮತ್ತು ಗಣಿ ಉದ್ದಿಮೆ ಗಣನೀಯವಾಗಿ ಬೆಳವಣಿಗೆಯಾಗಿದ್ದು, ಹಲವಾರು ಕ್ಷೇತ್ರಗಳ ಮೇಲೆ ಇದರ ಪರಿಣಾಮ ಉಂಟಾಗಿರುವುದರ ಜೊತೆಗೆ ಹಲವಾರು ಸಮಸ್ಯೆಗಳಿಗೆ ಎಡೆಮಾಡಿ ಕೊಟ್ಟಿರುವುದನ್ನು ವಿಶೇಷವಾಗಿ ಗಮನಿಸಬಹುದಾಗಿದೆ.

ಇನ್ನು ಬಳ್ಳಾರಿಯನ್ನು ಭಾಷಿಕ ನೆಲೆಯಿಂದ ನೋಡಿದರೆ ಪ್ರಾಚೀನ ಕಾಲದಿಂದಲೂ ಇಲ್ಲಿ ಬಹುಭಾಷಿಕ ಪರಂಪರೆ ಬೆಳೆದು ನಿಂತಿದೆ. ಅದರಲ್ಲೂ, ತುಂಗಭದ್ರಾ ಅಣೆಕಟ್ಟಿನ ನಿರ್ಮಾಣದ ಸಮಯದಲ್ಲಿ ಬಂದಿದ್ದ ತಮಿಳು ಭಾಷಿಕರು, ನೀರಾವರಿ ಕೃಷಿ ಮಾಡಲು ವಲಸಿಗರಾಗಿ ಬಂದ ಆಂಧ್ರದ ಭೂಮಾಲಿಕರು, ಪ್ರವಾಸಿ ತಾಣ ಹಂಪಿಗೆ ಬರುವ ಆಂಗ್ಲ ಭಾಷಿಕರು ಇಲ್ಲಿನ ಬಹುಭಾಷಾ ಸಂಸ್ಕೃತಿಯ ಭಾಗವಾಗಿ ಹೋಗಿದ್ದಾರೆ. ಹೀಗಾಗಿ ಇಲ್ಲಿ ಕನ್ನಡ, ತೆಲುಗು, ತಮಿಳು, ಇಂಗ್ಲೀಷ್ ಭಾಷೆಗಳು ಬಳಕೆಯಲ್ಲಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಪರಂಪರೆಯು ವ್ಯಾಪಕವಾಗಿದೆ. ಸರಕಾರದ ಶಾಲಾ ಕಾಲೇಜುಗಳ ಜೊತೆ ವೀರಶೈವ ವಿದ್ಯಾವರ್ಧಕ ಸಂಘ, ತೆಗ್ಗಿನಮಠ ವಿದ್ಯಾಸಂಸ್ಥೆಯಂಥ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾಗಿವೆ. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಆರಂಭಗೊಂಡ ನಂದಿಹಳ್ಳಿ ಕೇಂದ್ರವು ಇಂದು ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಕೆಲಸ ನಿರ್ವಹಿಸುತ್ತಿದೆ. ಬಳ್ಳಾರಿ ಸ್ನಾತಕೋತ್ತರ ಕೇಂದ್ರ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿದೆ. ೧೯೯೧ರಲ್ಲಿ ಕಾರ್ಯಾರಂಭ ಮಾಡಿದ ಕನ್ನಡ ವಿಶ್ವವಿದ್ಯಾಲಯವು ಇಲ್ಲಿನ ಜನಸಮುದಾಯದ ಪ್ರಜ್ಞಾ

ವಿಕಾಸಕ್ಕೆ ಬಹುಮುಖ್ಯ ನೆಲೆಯಾಗಿದೆ. ಇಲ್ಲಿನ ಸಂಶೋಧನೆಗಳು ಹಾಗೂ ಬೌದ್ಧಿಕ ಚಿಂತನೆಗಳು ವಿಶ್ವವಿದ್ಯಾಲಯದ ಚಹರೆಯನ್ನೆ ಪ್ರಖ್ಯಾತಗೊಳಿಸಿದೆ.

೨.೨. ಹೈದರಾಬಾದ್ ಕರ್ನಾಟಕದ ರಾಜಕೀಯ ಸ್ಥಿತಿಗತಿಗಳು

ವಸಾಹತು ಭಾರತವು ಸ್ಥೂಲವಾಗಿ ಎರಡು ರೀತಿಯ ಆಡಳಿತಕ್ಕೆ ಒಳಪಟ್ಟಿತ್ತು. ಶೇಕಡ ಅರವತ್ತಕ್ಕೂ ಹೆಚ್ಚಿನ ಪ್ರದೇಶಗಳು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿದ್ದರೆ, ಉಳಿದ ಭಾಗಗಳು ದೇಶೀ ರಾಜರುಗಳು ಅಥವಾ ಸಂಸ್ಥಾನಗಳ ನಡುವೆ ಹಂಚಿ ಹೋಗಿ ಅವರ ಅರಸೊತ್ತಿಗೆಯಲ್ಲಿತ್ತು. ದೇಶೀ ಸಂಸ್ಥಾನಗಳ ಸಂಖ್ಯೆ ಐದು ನೂರ ಅರವತ್ತೈದರಷ್ಟಿತ್ತು. ಸಂಸ್ಥಾನಗಳಲ್ಲೆಲ್ಲಾ ಹೈದರಾಬಾದ್ ನಿಜಾಮನ ಸಂಸ್ಥಾನ ಇಡೀ ದೇಶದಲ್ಲಿಯೇ ಬಹು ದೊಡ್ಡ ಸಂಸ್ಥಾನವಾಗಿದ್ದು, ಇದು ೮೨೦೦೦ ಚದುರ ಮೈಲಿಗಳ ವಿಸ್ತೀರ್ಣ ಹೊಂದಿದ್ದು, ಸುಮಾರು ಒಂದು ಕೋಟಿ ಅರವತ್ತು ಲಕ್ಷದಷ್ಟು ಜನಸಂಖ್ಯೆ ಇತ್ತು. ೧೯೪೮ರವರೆಗೆ ಅಂದರೆ ೨೨೫ ವರ್ಷಗಳವರೆಗೆ ಇಸ್ಲಾಂ ಧರ್ಮದ 'ಆಸಫ್‌ಜಹಾ' ವಂಶದ ಏಳು ಜನ ರಾಜರು ಆಳಿದ್ದಾರೆ.

ಹೈದರಾಬಾದ್ ಕರ್ನಾಟಕದ ರಾಜಕೀಯ ಹಿನ್ನೆಲೆ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಕ್ರಿ.ಶ. ೧೭೦೭ರಲ್ಲಿ ಮೊಗಲರ ದೊರೆ ಔರಂಗಜೇಬ್‌ನ ಮರಣದ ನಂತರ ಮೊಗಲ್ ಸಾಮ್ರಾಜ್ಯ ಅವನತಿಯತ್ತ ಸಾಗಿತು. ಈ ಸಂದರ್ಭದಲ್ಲಿ ದೇಶದಲ್ಲಿ ಅನೇಕ ಸಣ್ಣ ಪುಟ್ಟ ರಾಜ್ಯಗಳು ತಲೆ ಎತ್ತಿದವು. ಔರಂಗಜೇಬನ ಮರಣದ ನಂತರ ಸುಮಾರು ೧೭೧೩ರಲ್ಲಿ ಅವನ ನೆಚ್ಚಿನ ದಂಡನಾಯಕನಾದ 'ನಿಜಾಮ್-ಉಲ್-ಮುಲ್ಕ'(ಮೀರ್ ಕಮುರಿದ್ದೀನ್ ಖಾನ್)ದಖನ್ನಿನ ಸುಭೇದಾರನಾಗಿ ನೇಮಕಗೊಂಡನು. ಮೊಗಲರ ಸಾಮಂತನಾಗಿ ದಖನ್ ಪ್ರದೇಶವನ್ನು ಆಳುತ್ತಿದ್ದ ಅಸಫ್‌ಜಾಹಿ ವಂಶ ಅಥವಾ ನಿಜಾಮ ವಂಶದ ಮೀರ್ ಖಮುರುದ್ದೀನ್ ಖಾನನು ಮೊಗಲ್ ಅರಸರ ಅಸಮರ್ಥತೆಯ ಲಾಭ ಪಡೆದು ಸ್ವತಂತ್ರನೆಂದು ಘೋಷಣೆ ಮಾಡಿಕೊಂಡು ೧೭೨೪ರಲ್ಲಿ ನಿಜಾಮ ರಾಜ್ಯವನ್ನು ಸ್ಥಾಪಿಸಿದ.[೧೨] ೧೭೨೪ರಲ್ಲಿ ಸ್ಥಾಪನೆಯಾದ ಆಸಫ್‌ಜಾಹಿ ಮನೆತನವು ಹಲವಾರು ಏಳು-ಬೀಳುಗಳನ್ನು ಕಂಡಿತು. ಹೈದರಾಬಾದ್ ನಿಜಾಮನು ತನ್ನ ಪ್ರಾಂತ್ಯವನ್ನು ತೆಲಂಗಾಣ ಮತ್ತು ಮರಾಠವಾಡ ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಿದ್ದನು. ಕನ್ನಡ ಭಾಷೆಯ ಮೂರು ಜಿಲ್ಲೆಗಳಾದ ರಾಯಚೂರು, ಗುಲಬರ್ಗಾ, ಬೀದರ್‌ಗಳು ಮರಾಠವಾಡಕ್ಕೆ ಸೇರಿದ್ದವು. ನಾಲ್ಕನೇ ಆಂಗ್ಲೋ ಮೈಸೂರು ಕದನದಲ್ಲಿ ಟಿಪ್ಪು ಮರಣ ಹೊಂದಿದ ನಂತರ ೧೮೦೦ರಲ್ಲಿ ನಿಜಾಮನಿಗೂ ಬ್ರಿಟಿಷರಿಗೂ ಆದ ಒಪ್ಪಂದದ ಪ್ರಕಾರ ರಾಯಚೂರು, ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳು ನಿಜಾಮನ ಪಾಲಿಗೆ ಲಭಿಸಿದವು.[೧೩] ಹೀಗಾಗಿ ಕನ್ನಡ, ಮರಾಠಿ, ತೆಲುಗು ಭಾಷೆಗಳ ಒಟ್ಟು ೧೬ ಜಿಲ್ಲೆಗಳು ನಿಜಾಮನ ಸಂಸ್ಥಾನದ ಆಡಳಿತಕ್ಕೆ ಸೇರಿದವು.

ಕ್ರಿ.ಶ. ೧೭೨೪ರಲ್ಲಿ ಸ್ಥಾಪನೆಯಾದ ನಿಜಾಮ ರಾಜ್ಯವು ೧೯೪೮ರವರೆಗೆ ಆಡಳಿತ ನಡೆಸಿತು. ಆರಂಭದಲ್ಲಿ ಕೆಲವು ಕಾಲ ಔರಂಗಾಬಾದ್‌ನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಇವರು ನಂತರ

ಹೈದರಾಬಾದ್ ನಗರವನ್ನು ನಿಜಾಮ ರಾಜ್ಯದ ಶಾಶ್ವತ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರು. ಸುಮಾರು ೨೨೪ ವರ್ಷಗಳ ದೀರ್ಘಾವಧಿ ಕಾಲದವರೆಗೆ, 'ಆಸಫ್‌ಜಾಹಿ' ವಂಶಕ್ಕೆ ಸೇರಿದ ಏಳು ಜನ ನಿಜಾಮರ ಹೆಸರುಗಳನ್ನು ಹಾಗೂ ಆಡಳಿತದ ಕಾಲಾವಾಧಿಯನ್ನು ಕೆಳಗಿನಂತೆ ದಾಖಲಿಸಲಾಗಿದೆ.

೧. ಮೀರ್‌ಕಮುರುದ್ದೀನ್ ರೆಲೀಚ್‌ಖಾನ್ : ೧೭೨೪ ರಿಂದ ೧೭೪೮(ನಿಜಾಮ್ - ಉಲ್ - ಮುಲ್ಕ್).

೨. ಎರಡನೇ ನಿಜಾಮ, ನವಾಬ್ ಮೀರ್ ನಿಜಾಮ ಅಲೀಖಾನ್ : ೧೭೬೯ ರಿಂದ ೧೮೦೩.

೩. ಮೂರನೇ ನಿಜಾಮ, ಸಿಖಂದರ್‌ಜಾಹ : ೧೮೦೩ ರಿಂದ ೧೮೨೯.

೪. ನಾಲ್ಕನೇ ನಿಜಾಮ, ನಾಸಿರುದ್ದೌಲ ಬಹಾದ್ದೂರ್ : ೧೮೨೯ ರಿಂದ ೧೮೫೭.

೫. ಐದನೇ ನಿಜಾಮ, ಅಫಜುಲುದ್ದೌಲಾ ಬಹಾದ್ದೂರ್ : ೧೮೫೭ ರಿಂದ ೧೮೬೯.

೬. ಆರನೇ ನಿಜಾಮ, ಮೀರ್ ಮೆಹಬೂಬ್ ಆಲಿ : ೧೮೬೯ ರಿಂದ ೧೯೧೧.

೭. ಏಳನೇ ನಿಜಾಮ, ಮೀರ್ ಉಸ್ಮಾನ್ ಆಲೀಖಾನ್ : ೧೯೧೧ ರಿಂದ ೧೯೪೮.

೧೭೪೮ ರಿಂದ ೧೭೬೨ರವರೆಗೆ ಅಧಿಕಾರಕ್ಕಾಗಿ ನಡೆದ ಕಚ್ಚಾಟದಲ್ಲಿ ನಾಸಿರ್‌ಜಂಗ್, ಮುಜಫರ್‌ಜಂಗ್ ಹಾಗೂ ಸಲಾಬತ್‌ಜಂಗ್ ಕೊಲೆಯಾದರು. ಆದ್ದರಿಂದ ನಿಜಾಮ್-ಉಲ್-ಮುಲ್ಕ್‌ನ ಮೂರನೇ ಮಗ ನವಾಬ್ ಮೀರ್ ನಿಜಾಮ ಅಲೀಖಾನ್‌ನನ್ನೇ ಎರಡನೇ ನಿಜಾಮನೆಂದು ಪರಿಗಣಿಸಲಾಗಿದೆ.[೧೪]

ಹೈದರಾಬಾದ್ ನಿಜಾಮ್ ರಾಜ್ಯದ ಆಡಳಿತ ವ್ಯವಸ್ಥೆ

ಹೈದರಾಬಾದ್ ರಾಜ್ಯವನ್ನು ೫ ಸುಭಾಗಳನ್ನಾಗಿ ೧೬ ಜಿಲ್ಲೆಗಳನ್ನಾಗಿ ವಿಂಗಡಿಸಲಾಗಿತ್ತು. ನಿಜಾಮನ ರಾಜ್ಯದಲ್ಲಿ ತೆಲಂಗಾಣದ ಎಂಟು ಜಿಲ್ಲೆಗಳು, ಮರಾಠವಾಡದ ಐದು ಜಿಲ್ಲೆಗಳು ಮತ್ತು ಕರ್ನಾಟಕದ ಮೂರು ಜಿಲ್ಲೆಗಳಿದ್ದವು. ಈ ರಾಜ್ಯದಲ್ಲಿ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ನಾಂದೇಡ, ಪರಭಾಣಿ, ಉಸ್ಮಾನಾಬಾದ್, ಔರಂಗಬಾದ್, ಭೀಡ, ಆಂಧ್ರಪ್ರದೇಶದ ವಾರಂಗಲ್, ನಲಗುಂದ, ಮಹೆಬೂಬ ನಗರ, ಕರೀಂನಗರ, ಮೇದಕ್, ನಿಜಾಮಾಬಾದ್, ಅದಿಲಾಬಾದ್, ಆತ್‌ರಾಷ, ಬಲ್ಹಾ ಪ್ರಮುಖ ಪಟ್ಟಣಗಳಾಗಿದ್ದವು. ಕೊಪ್ಪಳ ಮತ್ತು ಯಲಬುರ್ಗಾ ಪ್ರಧಾನಮಂತ್ರಿ ಸಾಲಾರ್‌ಜಂಗನ ಜಹಗೀರುಗಳಾಗಿದ್ದವು.[೧೫]

ಬೇರೆ ಸಂಸ್ಥಾನಿಕರಿಗೆ ಇಲ್ಲದ ಒಂದು ಬಗೆಯ 'ಆಂತರಿಕ ಸ್ವಾಯತ್ತತೆ' ಮತ್ತು ಕೆಲವು ಸೌಲಭ್ಯಗಳನ್ನು ಹೈದರಾಬಾದ್ ಸಂಸ್ಥಾನದ ನಿಜಾಮರು ಪಡೆದುಕೊಂಡು, ತಮ್ಮದೇ ಆದ ನಾಣ್ಯ, ಸೈನ್ಯ, ಪೊಲೀಸ್, ಅಂಚೆ ವ್ಯವಸ್ಥೆ, ಆಕಾಶವಾಣಿ, ರೇಲ್ವೆ, ರಸ್ತೆ, ಸಾರಿಗೆ ಮುಂತಾದ ಎಲ್ಲಾ ಅನುಕೂಲತೆ ಗಳನ್ನು ಪಡೆದು, ಬಲಿಷ್ಟ ಸ್ವಾಯತ್ತ ರಾಜ್ಯವಾಗಿತ್ತು. ನಿಜಾಮರ ಆಡಳಿತ ವ್ಯವಸ್ಥೆಯಲ್ಲಿ ಮಂತ್ರಿಗಳನ್ನು,

ಕಾರ್ಯದರ್ಶಿಗಳನ್ನು ಅವರವರ ಯೋಗ್ಯತೆಯಂತೆ ನೇಮಕ ಮಾಡಿಕೊಳ್ಳುತ್ತಿದ್ದರು. ರಾಜ್ಯಾಡಳಿತದಲ್ಲಿ ಪ್ರಧಾನಮಂತ್ರಿಗೆ ಹೆಚ್ಚಿನ ಅಧಿಕಾರ ನೀಡಿದ್ದರು.[೧೬] ನಿಜಾಮ ರಾಜ್ಯದ ಅಧಿಕಾರಾವಧಿಯಲ್ಲಿ ಅನೇಕ ಪ್ರಧಾನ ಮಂತ್ರಿಗಳು ಆಗಿ ಹೋದರು. ಅವರಲ್ಲಿ ಪ್ರಭಾವಶಾಲಿ, ಪರಿಣಾಮಕಾರಿ ಮತ್ತು ದಕ್ಷ ಪ್ರಧಾನಿಗಳೆಂದು ಗುರುತಿಸಿಕೊಂಡವರಲ್ಲಿ ಸರ್ ಸಾಲಾರಜಂಗ್, ಕಿಶನ್‌ಪ್ರಸಾದ್, ಸರ್ ಮಿರ್ಜಾ ಎಂ. ಇಸ್ಮಾಯಿಲ್ ಪ್ರಮುಖರಾಗಿದ್ದರು. ಕೊಪ್ಪಳ ಪ್ರದೇಶವನ್ನು 'ಜಹಗೀರ್' ಎಂದು ಪಡೆದ ಸಾಲಾರಜಂಗ್ ಇದಕ್ಕೊಂದು ಜಿಲ್ಲೆಯ ಸ್ಥಾನಮಾನ ಕೊಟ್ಟು ಹೈದರಾಬಾದ್‌ನಿಂದಲೇ ಆಡಳಿತ ನಡೆಸುತ್ತಿದ್ದರು. ಅಂದು ಸುಮಾರು ೮ ಲಕ್ಷ ರೂಪಾಯಿ ವಾರ್ಷಿಕ ಉತ್ಪನ್ನವಿದ್ದ ಜಹಗೀರನ್ನು ನವಾಬ ಸಾಲಾರಜಂಗರು ಅಧಿಕ ಧನವನ್ನು ತಮ್ಮ ವಿದೇಶ ಯಾತ್ರೆಗಳ ಸುತ್ತಾಟಕ್ಕೆ ಬಳಸುತ್ತಿದ್ದರು. ವಿವಿಧ ದೇಶಗಳಲ್ಲಿ ಕಂಡ ಅತ್ಯುತ್ತಮ ಕಲಾಕೃತಿ, ಶ್ರೇಷ್ಠ ಶಿಲ್ಪ ಮಾದರಿ, ಗೋಡೆ ಗಡಿಯಾರಗಳು, ಉಡುಪುಗಳು, ಹೀಗೆ ಹತ್ತಾರು ವಸ್ತುಗಳನ್ನು ಸಂಗ್ರಹಿಸಿ ತರುತ್ತಿದ್ದರು. ಅವರ ಇಂತಹ ಹವ್ಯಾಸದಿಂದ ಅದ್ಭುತ ಮತ್ತು ಅಭೂತಪೂರ್ವ ವಸ್ತುಗಳ ಒಂದು ಬಹುದೊಡ್ಡ ರಾಶಿಯೇ ಸಂಗ್ರಹಗೊಂಡಿತು. ಅದೇ ಇಂದು ಹೈದರಾಬಾದ್ ನಗರದ ಒಂದು ಸಾಂಸ್ಕೃತಿಕ ಆಸ್ತಿಯಾಗಿರುವ ಜಗದ್ವಿಖ್ಯಾತ ಸಾಲಾರಜಂಗ್ ಮ್ಯೂಸಿಯಂ ಆಗಿದೆ.[೧೭]

ನಿಜಾಮರ ಆಡಳಿತ ಅವಧಿಯಲ್ಲಿ ಹೈದರಾಬಾದ್ ರಾಜ್ಯದಲ್ಲಿ ಅನೇಕ ಜನಪರ ಕಾರ್ಯಗಳು ಕೈಗೊಂಡರುವುದು ಇತಿಹಾಸದಿಂದ ಗೊತ್ತಾಗುತ್ತದೆ. ಹಳ್ಳಿಗಳಲ್ಲಿ ನೀರಿಗಾಗಿ ಬಾವಿಗಳನ್ನು ತೋಡಿಸುವುದು, ಕೆರೆಗಳ ನಿರ್ಮಾಣ ಹಾಗೂ ಗಿಡ ನೆಡುವ ಕಾರ್ಯಕ್ರಮ ಮುಂತಾದ ಮೂಲಭೂತ ಸೌಕರ್ಯಗಳಂತ ಕಾರ್ಯಗಳಿಗೆ ವಿಶೇಷ ಆದ್ಯತೆ ನೀಡಿದ್ದರು. ರಾಜ್ಯದಲ್ಲಿ ಅನೇಕ ವಿಧದ ಕಾರ್ಖಾನೆಗಳ ಸ್ಥಾಪನೆಗೆ ಕ್ರಮಕೈಗೊಂಡಿದ್ದರಿಂದಾಗಿ ಸಕ್ಕರೆ ಕಾರ್ಖಾನೆಗಳು, ಬಟ್ಟೆಯ ಕಾರ್ಖಾನೆಗಳು, ಗುಲಬರ್ಗಾದ ಎಂ.ಎಸ್.ಕೆ. ಮಿಲ್, ವಾರಂಗಲ್‌ನಲ್ಲಿ ಆಜಾಂಶಾಹಿ ಮಿಲ್ ಮುಂತಾದ ಉದ್ಯಮಗಳನ್ನು ಸ್ಥಾಪಿಸಿದ್ದರು. ಹೈದರಾಬಾದ್ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಚಾಲನೆ ನೀಡಲಾಗಿತ್ತು. ನಲ್ಲಿಗಳ ಮೂಲಕ ನೀರು ಸರಬರಾಜಿಗೆ ಆದ್ಯತೆ ನೀಡಲಾಗಿತ್ತು. ನಗರ ಪ್ರದೇಶಗಳ ಸೌಂದರ್ಯಕರಣಕ್ಕೆ ಕ್ರಮಕೈಗೊಂಡಿದ್ದರು. ಆರೋಗ್ಯ ಸೇವೆಗಾಗಿ ಅನೇಕ ಆಸ್ಪತ್ರೆಗಳು, ನೀರಾವರಿ ಸವಲತ್ತಿಗೆ ಅಣೆಕಟ್ಟುಗಳು ನಿರ್ಮಾಣವಾದವು. ಹೈಕೋರ್ಟ್, ಆಕಾಶವಾಣಿ ಕೇಂದ್ರ ಸ್ಥಾಪನೆಯಾಗಿದ್ದವು. ಒಟ್ಟಾರೆ ನಿಜಾಮನ ಆಳ್ವಿಕೆಯಲ್ಲಿ ಆಧುನಿಕ ಜಗತ್ತಿನಲ್ಲಿ ಸಿಗುವ ಅವಶ್ಯಕತೆಗಳು ಹಾಗೂ ಸೌಲಭ್ಯಗಳನ್ನೆಲ್ಲಾ ರಾಜ್ಯ ಹೊಂದಿತ್ತು.[೧೮]

ನಿಜಾಮರು ತಮ್ಮ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಆದ್ಯತೆ ನೀಡಿದ್ದರು. ಭಾರತ ದೇಶದಲ್ಲಿ ಮೊದಲ ಬಾರಿಗೆ ದೇಶೀ ಉರ್ದು ಭಾಷೆಯಲ್ಲಿ ಶಿಕ್ಷಣ ಮಾಧ್ಯಮವನ್ನು ಆರಂಭಿಸಿದರಲ್ಲದೇ ರಾಜ್ಯದಲ್ಲೆ ದೊಡ್ಡ ಭಾಷಾಂತರ ಇಲಾಖೆಯನ್ನು ಸ್ಥಾಪಿಸಿದರು. ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯ ಮಟ್ಟದವರೆಗೂ ಉರ್ದು ಭಾಷೆಯ ಮೂಲಕ ಶಿಕ್ಷಣ ನೀಡಲಾಗುತ್ತಿತ್ತು. ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣವನ್ನು ಸಹ ಉರ್ದು ಭಾಷೆಗೆ ತುರ್ಜಮೆ ಮಾಡಿ ಶಿಕ್ಷಣ ನೀಡಲಾಗುತ್ತಿತ್ತು. ಹೈದರಾಬಾದ್

ನಗರದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಆ ಮೂಲಕ ವೈದ್ಯಕೀಯ, ತಾಂತ್ರಿಕ, ಕಾನೂನು, ಕಲಾ, ವಾಣಿಜ್ಯ, ವಿಜ್ಞಾನ ಮುಂತಾದ ಎಲ್ಲಾ ಕೋರ್ಸುಗಳನ್ನು ಕಲಿಯಲು ಅವಕಾಶ ಮಾಡಿಕೊಡಲಾಗಿತ್ತು. ಸ್ತ್ರೀ ಶಿಕ್ಷಣ ವ್ಯವಸ್ಥೆಯನ್ನು ಸಹ ಜಾರಿ ಮಾಡಿದ್ದರು. ಕ್ರಮೇಣ ಇಂಗ್ಲೀಷ್ ಮಾದರಿಯ ಶಿಕ್ಷಣ ಪದ್ಧತಿಯನ್ನು ಸಹ ಜಾರಿಗೆ ತಂದರು.

ಮುಲ್ಕೀ ಕಾನೂನು

ನಿಜಾಮ ಸಂಸ್ಥಾನದಲ್ಲಿ ಆಡಳಿತ ಭಾಷೆ ಉರ್ದು ಆಗಿದ್ದು, ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಬಹಳಷ್ಟು ಅಧಿಕಾರಿಗಳು ಮತ್ತು ಇತರೆ ಕೆಲಸಗಾರರು ದೆಹಲಿ, ಲಕ್ನೋ ಮುಂತಾದ ಕಡೆಯವರಾಗಿರುತ್ತಿದ್ದರು. ಅದರಲ್ಲೂ ಅಲಿಘರ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರೆ ಹೆಚ್ಚಾಗಿ ಇದ್ದರು. ಹಾಗೆಯೇ ವೃತ್ತಿಪರ ಇಂಜಿನಿಯರಿಂಗ್, ಮೆಡಿಕಲ್ ಮುಂತಾದ ಕೋರ್ಸುಗಳ ಪ್ರವೇಶದಲ್ಲಿಯೂ ಸಹ ಹೊರರಾಜ್ಯದವರೆ ಅಧಿಕ ಸಂಖ್ಯೆಯಲ್ಲಿ ಇರುತ್ತಿದ್ದರು. ಇದರಿಂದ ಸ್ಥಳೀಯರು ಪ್ರವೇಶ ಪಡೆಯುವಲ್ಲಿ, ಉದ್ಯೋಗದ ನೇಮಕಾತಿಗಳಿಂದ ವಂಚಿತರಾಗಿ ಅನ್ಯಾಯಕ್ಕೆ ಒಳಗಾಗಿದ್ದರು. ಪರಿಸ್ಥಿತಿಯನ್ನು ಮನಗೊಂಡ ಮೀರ್ ಉಸ್ಮಾನ್ ಆಲಿಖಾನ್ ಅವರು, ಸುಮಾರು ೧೯೧೯ರಲ್ಲಿ ಮುಲ್ಕೀ ಕಾನೂನನ್ನು ಜಾರಿಗೆ ತಂದರು. ಮುಲ್ಕೀ ಕಾನೂನಿನ ಪ್ರಕಾರ, ಹೈದರಾಬಾದ್ ರಾಜ್ಯದ ಎಲ್ಲಾ ನೇಮಕಾತಿಗಳಲ್ಲಿ ಮತ್ತು ಶೈಕ್ಷಣಿಕ ಪ್ರವೇಶಗಳಲ್ಲಿ ಸ್ಥಳೀಯರಿಗೆ ಶೇ. ೮೫ರಷ್ಟು ಮೀಸಲಾಯಿತಿಯನ್ನು ನೀಡಿ ಸ್ಥಾನಗಳನ್ನು ಕಾಯ್ದಿರಿಸುವ ಕಾನೂನನ್ನು ಜಾರಿಗೆ ತಂದರು. ಇದೇ 'ಮುಲ್ಕೀ ರೂಲ್' ಎಂದು ಹೆಸರಾಯಿತು. ಮುಲ್ಕೀ ಎಂದರೆ ಸ್ಥಳೀಯರು ಎಂದರ್ಥ. ಸ್ಥಳೀಯರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಸ್ಥಾನಗಳನ್ನು ಮೀಸಲಾಗಿಡುವ ಕಾನೂನು ಇದಾಗಿದೆ. ಮುಲ್ಕೀ ಕಾನೂನಿನ ಆಧಾರದ ಮೇಲೆಯೇ ಇಂದು ಆಂಧ್ರಪ್ರದೇಶದ ಜನತೆ, ಮಹಾರಾಷ್ಟ್ರದ ಜನತೆ ಸಂವಿಧಾನದ ೩೭೧ನೇ ಕಲಂನಂತೆ ಸವಲತ್ತು ಪಡೆಯುತ್ತಿದ್ದಾರೆ.

ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ

ಬ್ರಿಟಿಷರ ಸಾಮ್ರಾಜ್ಯಶಾಹಿ ನೀತಿಯಿಂದ ದಬ್ಬಾಳಿಕೆಗೆ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾದ ಭಾರತೀಯರು ಬ್ರಿಟಿಷರ ವಿರುದ್ಧ ಪ್ರತಿರೋಧ ಮನೋಭಾವ ತಾಳಿ, ಪರಕೀಯರ ದಾಸ್ಯದಿಂದ ದೇಶವನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಹೋರಾಟಗಳು ಆರಂಭಗೊಂಡವು. ಈ ದೆಸೆಯಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ಆರಂಭವಾದ ಸ್ವಾತಂತ್ರ್ಯ ಸಂಗ್ರಾಮವು ತನ್ನದೇ ಆದ ದಾರಿ ತುಳಿಯಿತು. ಹೈದರಾಬಾದ್ ಸಂಸ್ಥಾನದಲ್ಲಿ ರಾಷ್ಟ್ರೀಯತೆ ಭಾವನೆ ಬೆಳೆಯಲು ಹಾಗೂ ಪ್ರಜೆಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಲು ಅನೇಕ ಅಂಶಗಳು ಕಾರಣವಾಗಿವೆ.

ಗುಲಬರ್ಗಾದಲ್ಲಿ ೧೯೨೪-೨೫ರಲ್ಲಿ 'ಆರ್ಯ ಸಮಾಜ'ವು ಸ್ಥಾಪನೆಯಾಯಿತು. ಭಾಯಿ ಶ್ಯಾಮಲಾಜಿ ಇದರ ಸ್ಥಾಪಕರು. ಸಂಸ್ಥೆ ಅನೇಕ ಮಹಾನ್ ನಾಯಕರನ್ನು ನೀಡಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಪುನರುದ್ಧಾರಕ್ಕೆ ಕೊಡುಗೆ ನೀಡಿದೆ. ಇದು ಗುಲಬರ್ಗಾ ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ

ಪ್ರಾಮಾಣಿಕವಾದ ಪ್ರಯತ್ನವನ್ನು ನಡೆಸಿತು. ಮುಂದೆ ಸ್ವಾತಂತ್ರ್ಯ ಸಂಗ್ರಾಮದ ಸೂತ್ರದಾರ ತುಕರಾಮಜೀ ಅವರ ನೇತೃತ್ವದಲ್ಲಿ 'ಆರ್ಯವೀರದಳ' ನಿಜಾಮಶಾಹಿಯ ವಿರುದ್ಧ ಬಂಡಾಯ ಹೂಡಿತು."

ಹೈದರಾಬಾದ್ ರಾಜ್ಯದಲ್ಲಿ ನಿಜಾಮನ ಅಧಿಪತ್ಯದ ವಿರುದ್ಧ ಜನರನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಂಘಟಿಸಿ ಚಳವಳಿಯ ರೂಪ ಕೊಡುವಲ್ಲಿ ಆರ್ಯ ಸಮಾಜವು ಪ್ರಮುಖ ಪಾತ್ರವಹಿಸಿತು. ಹಿಂದೂಗಳ ವಿರುದ್ಧ ನಿಜಾಮ ಹೊರಡಿಸಿದ ಶಾಸನಗಳು ಹಾಗೂ ಹಿಂದೂ ವಿರೋಧಿ ನೀತಿಗಳನ್ನು ಸಹಿಸದ ಆರ್ಯ ಸಮಾಜವು ಹಿಂದೂಗಳ ರಕ್ಷಣೆಗೆ ಮುಂದಾಯಿತು. ಹೀಗಾಗಿ ಹೈದರಾಬಾದ್ ಸಂಸ್ಥಾನದಲ್ಲಿ ಆರ್ಯ ಸಮಾಜದ ಚಳವಳಿಯು ರಾಜಕೀಯ ಸ್ವರೂಪ ಪಡೆದುಕೊಂಡಿತು. ಹಾಗೆಯೇ ಬಾಲಗಂಗಾಧರ ತಿಲಕರು ನೀಡಿದ್ದ ಮಂತ್ರ 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಅದನ್ನು ನಾನು ಪಡೆದೇ ತೀರುತ್ತೇನೆ' ಎನ್ನುವುದು ಹೈದರಾಬಾದ್ ಕರ್ನಾಟಕ ಪ್ರದೇಶದ ಯುವಕರ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ತಿಲಕರು ಬೋಧಿಸಿದ್ದ ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯದಂತಹ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಮುಂದಾದರು. ಸಾಮಾನ್ಯ ಜನರನ್ನು ಸಂಘಟಿಸುವ ದೃಷ್ಟಿಯಿಂದ ತಿಲಕರು ಗಣಪತಿಹಬ್ಬ ಹಾಗೂ ಶಿವಾಜಿ ಉತ್ಸವ ಮುಂತಾದ ಉತ್ಸವಗಳನ್ನು ಸಂಘಟಿಸತೊಡಗಿದರು. ಇದರಿಂದ ಹೈದರಾಬಾದ್ ರಾಜ್ಯದ ಸಾಮಾನ್ಯ ಜನರು ರಾಜಕೀಯ ಉದ್ದೇಶವಾದ ನಿಜಾಮನ ಕ್ರೂರ ಆಳ್ವಿಕೆ ವಿರುದ್ಧ ಸಿಡಿದೇಳುವ ಕಾರ್ಯಕ್ಕೆ ದಾರಿ ಮಾಡಿಕೊಟ್ಟಿತು.

ಹೈದರಾಬಾದ್ ನಿಜಾಮನ ಆಡಳಿತದಲ್ಲಿ ಸಾಮಾಜಿಕ, ರಾಜಕೀಯ, ಸಂಘಟನೆಗಳ ಮೇಲೆ ನಿಷಿದ್ಧ ಹೇರಿದ್ದರಿಂದ ಹಾಗೂ ಸಾರ್ವಜನಿಕ ಸಮಾರಂಭಗಳಿಗೆ ಅನುಮತಿ ಇಲ್ಲದಿದ್ದುದರಿಂದ ಜನರು ಹೈದರಾಬಾದ್ ಸಂಸ್ಥಾನದ ಹೊರಗೆ ನಡೆಯುತ್ತಿದ್ದ ರಾಜಕೀಯ ಸಮಾವೇಶಗಳಲ್ಲಿ ಭಾಗವಹಿಸುತ್ತಿದ್ದರು. ಇಂತಹ ಪ್ರಥಮ ಹೈದರಾಬಾದ್ ರಾಜಕೀಯ ಸಮಾವೇಶವು ೧೯೨೩ರಲ್ಲಿ ಕಾಕೀನಾಡದಲ್ಲಿ ಸರೋಜಿನಿ ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾವೇಶದಲ್ಲಿ ವಲ್ಲಭಬಾಯಿ ಪಟೇಲರಂತಹ ರಾಷ್ಟ್ರೀಯ ನಾಯಕರು ಭಾಗವಹಿಸಿದ್ದರಿಂದಾಗಿ ಇಲ್ಲಿನ ಜನರ ಭಾವನೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಹೀಗೆ ಪ್ರೇರಣೆಗೆ ಒಳಗಾದ ಸ್ವಾತಂತ್ರ್ಯ ಪ್ರಿಯರು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡರು.

ರಜಾಕಾರರ ವಿರುದ್ಧ ಚಳವಳಿ

ಹೈದರಾಬಾದ್ ಸಂಸ್ಥಾನವನ್ನು ಆಳಿದ ಕೊನೆಯ ನಿಜಾಮ ಮೀರ್ ಉಸ್ಮಾನ್ ಅಲಿ ಖಾನ್ ಅವರ ಅಧಿಕಾರವಧಿಯಲ್ಲಿ ಅನೇಕ ಪ್ರಗತಿಪರ ಕಾರ್ಯಗಳು ಜರುಗಿದವು. ಅಭಿವೃದ್ಧಿ ಕಾರ್ಯಗಳ ಜೊತೆಗೆ, ಧಾರ್ಮಿಕ ವಿಷಯದಲ್ಲಿಯೂ ಸಹ ಪರಮತಸಹಿಷ್ಣುತೆ ನೀತಿಯನ್ನು ಹೊಂದಿದವನಾಗಿದ್ದನು. ೧೯೨೯ರವರೆಗೂ ಎಲ್ಲಾ ಜನರನ್ನು ಸಮಾನತೆಯಿಂದ ಕಾಣುತ್ತಿದ್ದನು ಹಾಗೂ ನನ್ನ ರಾಜ್ಯದಲ್ಲಿರುವ ಹಿಂದೂ-ಮುಸಲ್ಮಾನರು ನನ್ನ ಎರಡು ಕಣ್ಣುಗಳಿದ್ದಂತೆ ಎಂದು ಹೇಳಿಕೊಂಡಿದ್ದನು. ಆದರೆ ಸಂಸ್ಥಾನದ

ಇತಿಹಾಸದ ಧಾರ್ಮಿಕ ನೀತಿಯಲ್ಲಿ ಅತ್ಯಂತ ತಿರುವು ಪಡೆದ ಘಟನೆ ಎಂದರೆ ೧೯೨೮ರಲ್ಲಿ 'ರಜಾಕಾರ' ಸಂಘಟನೆ ಹುಟ್ಟಿಕೊಂಡಿದ್ದು. ಸಂಘಟನೆಯ ಸ್ಥಾಪಕನೆಂದರೆ ನಿವೃತ್ತ ಅಧಿಕಾರಿಯಾಗಿದ್ದ ಮಹಮ್ಮದ್ ನವಾಜಖಾನ್. ಸಂಘಟನೆಯ ನಿಜವಾದ ಹೆಸರು 'ಮಜಲೀಸ್-ಎ-ಇತ್ತೇಹಾದ್-ಉಲ್-ಮುಸಲ್‌ಮೀನ್' ಎನ್ನುವುದಾಗಿತ್ತು. ಹೈದರಾಬಾದ್ ರಾಜ್ಯದಲ್ಲಿ ಮತೀಯ ಶಕ್ತಿಯನ್ನು ಬೆಳೆಸಿ ಕೋಮುಭಾವವನ್ನು ಹರಡುವ ಮೂಲಕ ತನ್ನದೇ ಆದ ಬಲಿಷ್ಠ ಅಸ್ತಿತ್ವವನ್ನು ಸ್ಥಾಪನೆ ಮಾಡುವುದು ಸಂಘಟನೆಯ ಮುಖ್ಯ ಉದ್ದೇಶವಾಗಿತ್ತು. ರಜಾಕಾರ ಎನ್ನುವ ಪದ ದೇವರ ಸೇವೆಗೆ ಮೀಸಲಾದ ಸ್ವಯಂಸೇವಕ ಎಂದು ಅರ್ಥ ಕೊಡುತ್ತದೆ. ಹೈದರಾಬಾದ್ ಸಂಸ್ಥಾನದ ವಿಲೀನ ಚಳವಳಿಯಲ್ಲಿ ರಜಾಕಾರರ ಹಾವಳಿ ಒಂದು ಭಯಾನಕ ಹಾಗೂ ನಿರ್ಣಾಯಕ ಅಧ್ಯಾಯವಾಗಿದೆ.

೧೯೪೬ರಲ್ಲಿ ಕಾಸಿಂ ರಜ್ವಿ, ಸಂಘಟನೆಯ ಮುಖ್ಯಸ್ಥನಾಗಿ ಅಧಿಕಾರ ವಹಿಸಿಕೊಂಡನು. ಈತನು ರಜಾಕಾರ ಸಂಘಟನೆಯ ಮುಖ್ಯಸ್ಥನಾದ ನಂತರ ಸಂಘಟನೆಯು ಶಕ್ತಿಯುತ ಹಾಗೂ ಪ್ರಭಾಯುತವಾಗಿ ಬೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಇದರೊಂದಿಗೆ ಸಂಸ್ಥಾನದ ಆಡಳಿತ ನೀತಿ ಮತ್ತು ಆಡಳಿತ ಸೂತ್ರದಲ್ಲಿ ಅನೇಕ ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿತು. ಈ ಬದಲಾವಣೆಯ ಪರಿಣಾಮವಾಗಿ ಸಂಸ್ಥಾನವು ಕ್ರಮೇಣ ಅವನತಿಯತ್ತ ಸಾಗಿತು. ಕಾಸಿಂ ರಜ್ವಿ ಮೂಲತಃ ಹೈದರಾಬಾದ್ ರಾಜ್ಯದ ಲಾತೂರು ನಗರದವನಾಗಿದ್ದನು. ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಕಾನೂನು ಪದವೀದರನಾಗಿದ್ದ ಇವನು ವಕೀಲ ವೃತ್ತಿ ಮಾಡುತ್ತಿದ್ದನು. ಹಾಗೂ ರಾಜ್ಯದಲ್ಲಿ ಗುಂಡಾ ಪ್ರವೃತ್ತಿಯ ಸಂಘಟನೆಗಳಿಗೆ ಕಾನೂನು ಸಲಹೆ ನೀಡುತ್ತಿದ್ದನು. ಒಳ್ಳೆಯ ಮಾತುಗಾರನಾಗಿದ್ದ ಇವನು ಹೈದರಾಬಾದ್ ರಾಜ್ಯದೆಲ್ಲೆಡೆ ಸಂಚರಿಸುತ್ತಾ, ಕ್ರಾಂತಿಕಾರಿ ಭಾಷಣಗಳನ್ನು ಮಾಡುತ್ತಾ ಒಂದು ಕೋಮಿನ ಜನರಲ್ಲಿ ಕೋಮು ಭಾವನೆಯನ್ನು ಕೆರಳಿಸುವ ಮತ್ತು ಹುರಿದುಂಬಿಸುವ ಕಾರ್ಯದಲ್ಲಿ ನಿರತನಾಗಿದ್ದನು. ಇವನ ಸ್ವಭಾವದ ಬಗ್ಗೆ, ಗೋಪಾಲರಾವ್ ಹೇಜೀಬ್ ಅವರು ತಮ್ಮ ಕೃತಿಯಲ್ಲಿ 'ಮಹಮದ್ ಘಜ್ನಿ, ಚಂಗೇಜ್‌ಖಾನ್ ಮತ್ತು ಔರಂಗಜೇಬನ ತರುವಾಯ ಭೂಮಿಯ ಮೇಲೆ ನಡೆದು ಹೋದ ಅಂಥದೇ ದುಷ್ಟ ಶಕ್ತಿ ಕಾಸಿಂ ರಜ್ವಿ. ಘಜ್ನಿಯ ಆಕ್ರೋಶ, ಚಂಗೇಜ್‌ಖಾನಾನ ಕ್ರೌರ್ಯ ಮತ್ತು ಔರಂಗಜೇಬನ ಮತಾಂಧತೆ, ಈ ಎಲ್ಲಾ ದುರ್ಗುಣಗಳು ಕಾಸಿಂರಜ್ವಿಯಲ್ಲಿ ಸಮಾವೇಶಗೊಂಡಿದ್ದವು. ಹಿಂದೂಗಳನ್ನು ದ್ವೇಷಿಸುತ್ತಿದ್ದ ಅವನ ನಡವಳಿಕೆ, ವಿಕೃತ ಕಲ್ಪನೆಗಳನ್ನು ಹೊಂದಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ.[೨೦]

ಕಾಸಿಂ ರಜ್ವಿಯು ಉತ್ತಮ ಸಂಘಟನಾಕಾರನಾಗಿದ್ದು, ಸುಮಾರು ೨ ಲಕ್ಷ ರಜಾಕಾರರನ್ನು ಸಂಘಟಿಸಿ ಅವರಿಗೆ ಎಲ್ಲಾ ರೀತಿಯ ಶಸ್ತ್ರಾಸ್ತ್ರ ತರಬೇತಿ ನೀಡುವುದರ ಮೂಲಕ ರಾಜ್ಯದಲ್ಲಿ ತನ್ನದೇ ಆದ ಪರ್ಯಾಯ ಸೈನ್ಯವನ್ನು ಕಟ್ಟಿದನು. ಇವನ ಸಂಘಟನಾ ಶಕ್ತಿ ಮತ್ತು ಸೈನ್ಯ ಶಕ್ತಿಯನ್ನು ನೋಡಿ ನಿಜಾಮನೇ ಭಯಪಟ್ಟಿದ್ದನು. ಈತನು ಇಷ್ಟೊಂದು ಶಕ್ತಿಯುತವಾಗಿ ಬೆಳೆಯಲು ಮೀರ್-ಉಸ್ಮಾನ್ ಆಲಿ ಖಾನ್‌ರವರು ಆರಂಭದಲ್ಲಿ ಇವನಿಗೆ ನೀಡಿದ ಸಲಿಗೆಯೆ ಕಾರಣವಾಗಿತ್ತು. ೧೯೪೭ರ ವೇಳೆಗೆ ಕಾಸಿಂ

ರಜ್ವಿ ಎಷ್ಟರಮಟ್ಟಿಗೆ ಶಕ್ತಿಶಾಲಿ ವ್ಯಕ್ತಿಯಾಗಿದ್ದನೆಂದರೆ ಸ್ವತಃ ನಿಜಾಮನೇ ಅವನ ಮಾತನ್ನು ಮೀರು ವಂತಿರಲಿಲ್ಲ. ರಾಜ್ಯದ ಎಲ್ಲಾ ನಿರ್ಧಾರಗಳು ಇವನ ಇಚ್ಛೆಯಂತೆ ನಡೆಯುತ್ತಿದ್ದವು. ಈತನು ಸೂಚಿಸಿದ ವ್ಯಕ್ತಿಗಳನ್ನೇ ನಿಜಾಮನು ಉನ್ನತ ಹುದ್ದೆಗೆ ನೇಮಿಸಬೇಕಾಗಿತ್ತು. ಹೀಗೆ ಕಾಸಿಂ ರಜ್ವಿಯ ಸೂಚನೆಯಂತೆ, ಅವನ ಆಪ್ತನಾದ ಲಾಯಕ್ ಆಲಿಯನ್ನು ಪ್ರಧಾನಮಂತ್ರಿಯನ್ನಾಗಿ ಹಾಗೂ ಇತರರನ್ನು ಮಂತ್ರಿಗಳನ್ನಾಗಿ ನೇಮಿಸಲಾಗಿತ್ತು. ಹೀಗೆ ಕಾಸಿಂ ರಜ್ವಿಯು ೧೯೪೭ರ ವೇಳೆಗೆ ಹೈದರಾಬಾದ್ ರಾಜ್ಯದ ಮುಸ್ಲಿಂ ಸಮುದಾಯ ಮತ್ತು ಸರಕಾರದ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಿದ್ದನು. ನಿಜಾಮನು ಕೂಡ ರಾಜ್ಯದಲ್ಲಿ ತನ್ನ ಸುಗಮ ಆಡಳಿತಕ್ಕೆ ಯಾವ ಅಡ್ಡಿ ಆತಂಕಗಳು ಬಾರದಂತೆ ನೋಡಿಕೊಳ್ಳುವ ಉದ್ದೇಶದಿಂದ, ಆರಂಭದಲ್ಲಿ ರಜ್ವಿಯ ಸಂಘಟನೆಯನ್ನು ತನ್ನ ಸ್ವಾರ್ಥಕ್ಕೆ ಮತ್ತು ಬೆಂಬಲಕ್ಕೆ ಬಳಕೆ ಮಾಡಿಕೊಳ್ಳುವ ತಂತ್ರ ಪಾಲಿಸಿದನು. ಆದರೆ ಕೊನೆಗೆ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿತೆಂದರೆ ಕಾಸಿಂ ರಜ್ವಿಯೇ ತನ್ನ ಕಾರ್ಯಸಾಧನೆಗೆ ನಿಜಾಮರನ್ನು ಬಳಸಿಕೊಳ್ಳುವ ಸ್ಥಿತಿ ನಿರ್ಮಾಣವಾಯಿತು. ಹೀಗಾಗಿ ನಿಜಾಮನು ಕಾಸಿಂ ರಜ್ವಿಯ ಕೈಗೊಂಬೆಯಾದನು. ಇಡೀ ನಿಜಾಮನ ಆಡಳಿತ ಮತ್ತು ಮಂತ್ರಿಮಂಡಲವು ರಜ್ವಿಯ ಇಚ್ಛೆಯಂತೆ ನಡೆಯುತ್ತಿತ್ತು ಹಾಗೂ ತನ್ನ ಆಪ್ತನಾದ ಲಾಯಕ್ ಆಲಿ ಪ್ರಧಾನಿ ಆದ ನಂತರ ಅವನ ಬೆಂಬಲದಿಂದ, ರಜ್ವಿಯು ತನ್ನ ರಜಾಕಾರ ಸಂಘಟನೆಯ ಚಟುವಟಿಕೆಗಳನ್ನು ತೀವ್ರಗೊಳಿಸಿದನು. ಮತ್ತು ಹೈದರಾಬಾದ್ ರಾಜ್ಯದಲ್ಲೆಲ್ಲಾ ಪ್ರಚೋದನಾಕಾರಿ ಭಾಷಣಗಳನ್ನು ಮಾಡುತ್ತಾ ಮತೀಯ ಹಾಗೂ ಕೋಮುವಾದದ ವಿಷ ಬೀಜ ಬಿತ್ತುವುದರ ಮೂಲಕ ರಾಜ್ಯದಲ್ಲಿ ಸಾಮಾಜಿಕ ಸಾಮರಸ್ಯವನ್ನು ಹಾಳು ಮಾಡಿದ.

ಇವನ ಧೋರಣೆಗಳಿಗೆ ವಿರೋಧಿಸುವ ಎಲ್ಲಾ ಸಂಘಟನೆಗಳ ಹಾಗೂ ಪಕ್ಷಗಳ ಮುಖಂಡರನ್ನು ಸೆರೆಮನೆಗೆ ತಳ್ಳಲಾಯಿತು. ರಾಜ್ಯದಲ್ಲಿ ಗಾಂಧೀ ಟೋಪಿ, ಭಾರತದ ರಾಷ್ಟ್ರಧ್ವಜ, ವಂದೇ ಮಾತರಂ ಗೀತೆ ಹಾಗೂ ರಾಷ್ಟ್ರದ ನಾಯಕರ ಭಾವಚಿತ್ರಗಳ ಮೇಲೆ ನಿಷೇಧ ಹಾಕಿ, ಇಡೀ ರಾಜ್ಯದ ಆಡಳಿತವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದನು. ಇಂತಹ ಪರಿಸ್ಥಿತಿಯಲ್ಲಿ ನಿಜಾಮನು ರಜ್ವಿಯ ರಾಜಕೀಯ ಚಕ್ರವ್ಯೂಹದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಅವನು ಹೇಳಿದಂತೆ ಕೇಳುವ ಅನಿವಾರ್ಯ ಪರಿಸ್ಥಿತಿ ಉಂಟಾಗಿತ್ತು.

ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವಾಗ, ಭಾರತದ ಸಂಸ್ಥಾನಗಳು ಭಾರತದ ಒಕ್ಕೂಟಕ್ಕೆ ಅಥವಾ ಪಾಕಿಸ್ತಾನಕ್ಕೆ ಸೇರಬಹುದು ಅಥವಾ ಸ್ವತಂತ್ರವಾಗಿಯಾದರೂ ಉಳಿಯಬಹುದು ಎನ್ನುವ ಆಯ್ಕೆಯನ್ನು ನೀಡಿದ್ದರು. ನಿಜಾಮನು ಕಾಸಿಂ ರಜ್ವಿಯ ಸಲಹೆ ಮತ್ತು ಸೂಚನೆಯಂತೆ ೧೯೪೭ ಜೂನ್ ೨೬ರಂದು ಫರ್ಮಾನನ್ನು ಹೊರಡಿಸಿ ಹೈದರಾಬಾದ್ ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರುವುದಿಲ್ಲ ಮತ್ತು ಸಂಸ್ಥಾನವು ಸ್ವತಂತ್ರವಾಗಿ ಮುಂದುವರೆಯುವುದು ಎಂದು ಅಧಿಕೃತವಾಗಿ ಘೋಷಿಸಿದನು. ಇಂತಹ ಘೋಷಣೆಯಿಂದ ಇಡೀ ಹೈದರಾಬಾದ್ ರಾಜ್ಯದ ಜನತೆ ನಿರಾಶರಾಗಿ ಆಕ್ರೋಶಗೊಂಡು ಪ್ರತಿರೋಧಿಸ ತೊಡಗಿದರು. ಪ್ರತಿರೋಧವನ್ನು ಹತ್ತಿಕ್ಕಲು ಕಾಸಿಂ ರಜ್ವಿ ತನ್ನ ರಜಾಕಾರ ಸಂಘಟನೆ ಮೂಲಕ ಹಿಂಸೆ,

ಲೂಟಿ, ಅತ್ಯಾಚಾರ, ದೌರ್ಜನ್ಯ ಮುಂತಾದ ದಮನ ನೀತಿಯನ್ನು ಅನುಸರಿಸಿದನು. ಭಾರತದ ವಿಲೀನವನ್ನು ವಿರೋಧಿಸಿ ಸ್ವಾತಂತ್ರ್ಯ ಯೋಧರ ಮೇಲೆ ದಾಳಿ ಎಸಗಲು ರಜಾಕಾರರಿಗೆ ಶಸ್ತ್ರಾಸ್ತ್ರ ಮತ್ತು ಮದ್ದು-ಗುಂಡುಗಳನ್ನು ಒದಗಿಸಿದನು.[೨೧] ಇವನ ಧೋರಣೆಗಳನ್ನು ವಿರೋಧಿಸಿದವರನ್ನು ಗುಂಡಿಟ್ಟು ಕೊಲೆ ಮಾಡಲಾಗುತ್ತಿತ್ತು. 'ಇಮ್ರೋಜ್ ಪತ್ರಿಕೆಯ' ಸಂಪಾದಕರಾಗಿದ್ದ ಶೋಯೇಬುಲ್ಲಾಖಾನ್‌ರವರು ರಜಾಕಾರ ಸಂಘಟನೆಯ ಕುಕೃತ್ಯಗಳ ಬಗ್ಗೆ ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಗ ಅವರನ್ನು ರಸ್ತೆಯಲ್ಲಿಯೇ ಗುಂಡಿಟ್ಟು ಕೊಲ್ಲಲಾಯಿತು. ಹೀಗೆ ರಜಾಕಾರ ಸಂಘಟನೆಯ ಚಟುವಟಿಕೆಗಳನ್ನು ವಿರೋಧಿಸುವ ಯಾವ ಧರ್ಮದ ವ್ಯಕ್ತಿಯಾದರೂ ಸರಿ ಅವನನ್ನು ಕೊಲ್ಲಲಾಗುತ್ತಿತ್ತು.[೨೨] ಕಾಸಿಂ ರಜ್ವಿಯ ನೇತೃತ್ವದಲ್ಲಿ ರಜಾಕಾರರು ಹಳ್ಳಿ, ಹಳ್ಳಿಗಳಿಗೆ ಹೋಗಿ, ಅಮಾಯಕ ಜನರನ್ನು ಹಿಂಸಿಸುವ ಲೂಟಿ ಮಾಡುವ, ಕೊಲೆ ಮಾಡುವ ಕ್ರೂರ ಕೃತ್ಯಗಳ ಮೂಲಕ ದೌರ್ಜನ್ಯವನ್ನು ಪ್ರದರ್ಶಿಸಿದರು. ಇವರ ದೌರ್ಜನ್ಯ ಅತೀಯಾದಾಗ ಜನರು ಸಂಘಟಿತರಾಗಿ ಪ್ರತಿರೋಧ ಒಡ್ಡಲು ಶುರು ಮಾಡಿದರು. ರಾಜ್ಯದ ಗಡಿ ಪ್ರದೇಶಗಳಾದ ಕೊಪ್ಪಳ, ಮುಂಡರಗಿ, ಗದಗ, ಮುಂತಾದ ಪ್ರದೇಶಗಳಲ್ಲಿ ಶಿಬಿರಗಳನ್ನು ಸ್ಥಾಪಿಸಿಕೊಂಡು ರಜಾಕಾರರ ವಿರುದ್ಧ ಹೋರಾಟ ನಡೆಸಿದರು. ನೊಂದ ನಾಗರಿಕರು ಮತ್ತು ಸ್ವತಂತ್ರ್ಯ ಪ್ರೇಮಿಗಳು ಸಂಘಟಿತರಾಗಿ, ನಿಜಾಮ ರಾಜಶಾಹಿಯಿಂದ ವಿಮೋಚನೆ ಹೊಂದುವ ಚಳವಳಿಯನ್ನು ಆರಂಭಿಸಿದರು.

ವಿಮೋಚನಾ ಹೋರಾಟ

೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದರೂ, ನಿಜಾಮರ ಅಧೀನದಲ್ಲಿದ್ದ ಹೈದರಾಬಾದ್ ಸಂಸ್ಥಾನ ಮಾತ್ರ ನಿಜಾಮರ ಆಡಳಿತದ ಸಾರ್ವಭೌಮತ್ವದ ಭ್ರಮೆಗಳಿಂದಾಗಿ ಸ್ವತಂತ್ರ ಸಂಸ್ಥಾನವಾಗಿಯೇ ಉಳಿಯಿತು. ಇಡೀ ರಾಷ್ಟ್ರ ಬ್ರಿಟಿಷರ ಶತ ಶತಮಾನಗಳ ಗುಲಾಮಗಿರಿಯಿಂದ ಮುಕ್ತವಾಗಿ, ಸ್ವಾತಂತ್ರ್ಯದ ಪರಿಸರದಲ್ಲಿ ತಲೆಯೆತ್ತಿದರೆ ಹೈದರಾಬಾದ್ ಸಂಸ್ಥಾನದ ಜನ ಸಮುದಾಯ ಮಾತ್ರ ಗುಲಾಮರಾಗಿ ಮುಂದುವರೆಯಬೇಕಾದಂಥ ಒಂದು ಅಸಹನೀಯ ರಾಜಕೀಯ ಪರಿಸ್ಥಿತಿ ಉಂಟಾಯಿತು. ಹೈದರಾಬಾದ್ ನಿಜಾಮನು ೧೯೪೭ ಜನವರಿ ೨೬ರಂದು ಹೈದರಾಬಾದ್ ರಾಜ್ಯ ಸ್ವತಂತ್ರವಾಗಿ ಮುಂದುವರಿಯುವ ಬಗ್ಗೆ ಫರ್ಮಾನು ಹೊರಡಿಸಿದ ನಂತರ ಕಾಸಿಂ ರಜ್ವಿ ನೇತೃತ್ವದ ರಜಾಕಾರರ ದೌರ್ಜನ್ಯಗಳು, ಮಿತಿಮೀರಿ ಹೈದರಾಬಾದ್ ರಾಜ್ಯದಲ್ಲೆಲ್ಲಾ ಅಶಾಂತ ವಾತಾವರಣ ಸೃಷ್ಟಿಯಾಯಿತು. ಇಂತಹ ಸ್ಥಿತಿಯಲ್ಲಿ ರಜಾಕಾರರ ವಿರುದ್ಧ ಹೋರಾಡಲು ಹೈದರಾಬಾದ್ ರಾಜ್ಯದ ಅನೇಕ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಪ್ರೇಮಿಗಳು ಸಂಘಟಿತರಾಗತೊಡಗಿದರು. ಅದರಲ್ಲಿ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮನೆ, ಮಠ ತೊರೆದು ಬೀದಿಗಿಳಿದು ಹೋರಾಟ ನಡೆಸಿದರು. ಇವರಿಗೆಲ್ಲಾ ಸ್ವಾಮಿ ರಮಾನಂದ ತೀರ್ಥರು ಪ್ರೇರಕ ಶಕ್ತಿಯಂತಿದ್ದರು. ಅಲ್ಲದೆ ರಮಾನಂದರು ಸನ್ಯಾಸಿಯಾಗಿದ್ದರೂ ತಮ್ಮ ಸಾತ್ವಿಕ ವೃತ್ತಿಗೆ ವಿರುದ್ಧವಾಗಿ ರಾಜಕೀಯಕ್ಕಿಳಿದವರು.[೨೩]

ಹೀಗೆ ರಜಾಕಾರರ ಹಿಂಸಾ ಕೃತ್ಯಗಳು ಹೆಚ್ಚಾದಂತೆ ಸ್ವತಂತ್ರ ಹೋರಾಟಗಾರರ ಸಂಘಟನೆಯೂ ಸಹ ಬಲಿಷ್ಠವಾದವು. ರಜಾಕಾರರ ಅಮಾನವೀಯ ಹಿಂಸಾ ಕೃತ್ಯಗಳನ್ನು ಎದುರಿಸಲು ಸ್ವಾತಂತ್ರ್ಯ ಹೋರಾಟಗಾರರು ಹೈದರಾಬಾದ್ ರಾಜ್ಯದ ಗಡಿ ಸುತ್ತಲೂ ಸುಮಾರು ೧೦೦ ಶಿಬಿರಗಳನ್ನು ಪ್ರಾರಂಭಿಸಿದರು. ಒಂದೊಂದು ಶಿಬಿರದಲ್ಲಿ ಕನಿಷ್ಟ ೨೫ ರಿಂದ ೧೨೫ ಸ್ವತಂತ್ರ ಸೇನಾನಿಗಳು ಕಾರ್ಯನಿರ್ವಹಿಸುತ್ತಿದ್ದರು. ಒಂದೊಂದು ಶಿಬಿರಕ್ಕೆ ಒಬ್ಬ ಶಿಬಿರಾಧಿಪತಿ ಇರುತ್ತಿದ್ದನು ಶಿಬಿರಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಕೆಲವು ಪ್ರಮುಖರು ಶಿಬಿರಾಧಿಪತಿಗಳಾಗಿದ್ದರು. ಅವರುಗಳಲ್ಲಿ ಪ್ರಮುಖರಾದವರೆಂದರೆ, ಸರದಾರ ಶರಣಗೌಡ ಇನಾಂದಾರ, ನಾರಾಯಣರಾವ್ ಕಾನಿಹಾಳ್, ರಾಜಾ ವೆಂಕಟಪ್ಪನಾಯಕ, ಅಳವಂಡಿ ಶಿವಮೂರ್ತಿ ಸ್ವಾಮಿ, ದತ್ತಾತ್ರೇಯ ಅವರಾದಿ, ರಾಮಚಂದ್ರ ವೀರಪ್ಪಾ, ಡಾ. ಚುರ್ಚಿಹಾಳ್ ಮಠ, ಅಮರಸಿಂಹ ರಾಠೋಡ, ಚಂದ್ರಶೆಖರ ಪಾಟೀಲ್, ಮಟಮಾರಿ ನಾಗಪ್ಪ, ವಿ.ವಿ. ಪಾಟೀಲ್ ಮುಂತಾದವರು ಪ್ರಮುಖರಾಗಿದ್ದು, ಸಿಂಧಗಿ, ಗಜೆಂದ್ರಗಡ, ಕೆಸರಜವಾಳಗಾಗ, ಇಟಗಿ, ಮುಂಡರಗಿ, ದುಧನಿ, ತಾಳಿಕೋಟೆ ಗಳಲ್ಲಿ ಶಿಬಿರಗಳನ್ನು ಸಂಘಟಿಸಲಾಗಿತ್ತು.

ಇಂತಹ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶಿಬಿರಾರ್ಥಿಗಳಲ್ಲಿ ಕೆಲವರು ಆಯುಧ ದಾರಿಗಳು ಇನ್ನು ಕೆಲವರು ನಿರಾಯುಧ ಸೇನಾನಿಗಳಿದ್ದರು. ನಿರಾಯುಧದಾರಿಗಳು ವಿವಿಧ ಮಾರುವೇಷಗಳಲ್ಲಿ ಸಂಚರಿಸುತ್ತಾ, ರಜಾಕಾರರ ಮತ್ತು ನಿಜಾಮನ ಸೈನ್ಯ ಮತ್ತು ಪೊಲೀಸರ ಚಟುವಟಿಕೆಗಳ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಹೋರಾಟಗಾರರಿಗೆ ರವಾನಿಸುತ್ತಿದ್ದರು. ರಜಾಕಾರ ಸೈನ್ಯದ ದೌರ್ಜನ್ಯವನ್ನು ಸಮರ್ಥವಾಗಿ ಎದುರಿಸುವ ಮತ್ತು ಹತ್ತಿಕ್ಕುವ ದೃಷ್ಟಿಯಿಂದ ಸ್ವಾತಂತ್ರ್ಯ ಸೇನಾನಿಗಳು ಸಶಸ್ತ್ರಗಳನ್ನು ಉಪಯೋಗಿಸಲೇಬೇಕಾದ ಅನಿವಾರ್ಯತೆ ಉಂಟಾಯಿತು. ಹೀಗಾಗಿ ಆಯುಧದಾರಿ ಸ್ವಾತಂತ್ರ್ಯ ಸೇನಾನಿಗಳು ರಾತ್ರಿಯ ವೇಳೆಯಲ್ಲಿ ರಜಾಕಾರರ ಕೇಂದ್ರಗಳ ಮೇಲೆ ಹಾಗೂ ಪೊಲೀಸ್ ಠಾಣೆಗಳ ಮೇಲೆ ದಾಳಿ ಮಾಡಿ ಅಲ್ಲಿದ್ದ ಆಯುಧಗಳನ್ನು ಮತ್ತು ಸಂಪತ್ತನ್ನು ಲೂಟಿ ಮಾಡಿ ಹೋರಾಟಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಕ್ರಮೇಣ ಒಂದೊಂದೇ ಹಳ್ಳಿಗಳನ್ನು ಹಂತ ಹಂತವಾಗಿ ರಜಾಕಾರರ ಹಿಡಿತದಿಂದ ಬಿಡುಗಡೆಗೊಳಿಸಿ ತಮ್ಮ ವಶಕ್ಕೆ ತೆಗೆದುಕೊಂಡು ಸ್ವಾತಂತ್ರ್ಯ ಘೋಷಣೆ ಮಾಡುತ್ತಾ ನಿಜಾಮರ ಆಡಳಿತವನ್ನು ದಿಕ್ಕರಿಸಿದರು. ಹೀಗೆ ಸೇನಾನಿಗಳು ೧೯೪೮ರ ಜನವರಿ ವೇಳೆಗೆ ಸುಮಾರು ೬೯ ಹಳ್ಳಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸ್ವಾತಂತ್ರ್ಯ ಘೋಷಿಸಿದರು.

ಹೀಗೆ ಶಿಬಿರಗಳನ್ನು ಸ್ಥಾಪಿಸಿ ರಜಾಕಾರರ ವಿರುದ್ಧದ ಹೋರಾಟಗಳು ಯಶಸ್ವಿಯತ್ತ ಸಾಗಿದ್ದವು. ಸ್ವಾತಂತ್ರ್ಯ ಹೋರಾಟಗಾರರು ರಮಾನಂದ ತೀರ್ಥರ ನೇತೃತ್ವದಲ್ಲಿ ಮಾಡು ಇಲ್ಲವೆ ಮಡಿ ಎನ್ನುವ ಸಂದೇಶದೊಂದಿಗೆ ವಿಮೋಚನಾ ಹೋರಾಟ ಸಾಗಿದ್ದ ಸಮಯದಲ್ಲಿ ಹೈದರಾಬಾದ್ ರಾಜ್ಯದಲ್ಲಿ ಉಂಟಾಗಿದ್ದ ಭಯಾನಕ ಸ್ಥಿತಿಯನ್ನು ಗಮನಿಸಿದ ಭಾರತ ಸರಕಾರ ತಕ್ಷಣವೇ ಹಿಂಸಾಕೃತ್ಯವನ್ನು ನಿಲ್ಲಿಸುವಂತೆ

ಹಾಗೂ ಭಾರತದ ಒಕ್ಕೂಟದಲ್ಲಿ ವಿಲೀನವಾಗುವಂತೆ ನಿಜಾಮನಿಗೆ ಎಚ್ಚರಿಕೆಯ ಕರೆ ನೀಡಿತು. ಇಂತಹ ಎಚ್ಚರಿಕೆಯಿಂದ ಯಾವುದೇ ಪರಿಣಾಮ ಆಗದ ಕಾರಣ ಭಾರತ ಸರಕಾರದ ಆಗಿನ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರು ಸೈನಿಕ ಕಾರ್ಯಾಚರಣೆಗೆ ಆದೇಶ ನೀಡಿದರು. ಇದರಿಂದ ದಿನಾಂಕ ೧೩.೦೯.೧೯೪೮ರಂದು ಭಾರತದ ಸೈನ್ಯ, ಸೊಲ್ಲಾಪುರದ ಮುಖಾಂತರ ಹೈದರಾಬಾದಿನತ್ತ ಸಾಗಿತು. ಆ ದಿನವೇ ಸಾಯಂಕಾಲ ಅಹ್ಮದ್‌ನಗರ, ಮಧ್ಯಪ್ರಾಂತ, ಮದ್ರಾಸ್ ಮತ್ತು ಮೈಸೂರು ಕಡೆಯಿಂದಲೂ ಅನೇಕ ಸೈನಿಕ ತುಕಡಿಗಳು ಹೈದರಾಬಾದ್ ಗಡಿಯನ್ನು ಪ್ರವೇಶಿಸಿ ನಾಲ್ಕು ದಿಕ್ಕಿನಿಂದಲೂ ಹೈದರಾಬಾದ್ ರಾಜ್ಯದ ಮೇಲೆ ಮುತ್ತಿಗೆ ಹಾಕಲಾಯಿತು.[೨೮] ಐದು ದಿನಗಳ ಕಾಲ ನಡೆದ ಸೈನಿಕ ಕಾರ್ಯಾಚರಣೆಯಿಂದ ರಜಾಕಾರರ ಸೈನ್ಯ ಮತ್ತು ನಿಜಾಮನ ಸೈನ್ಯವು ಸಂಪೂರ್ಣವಾಗಿ ಹತ್ತಿಕ್ಕಲ್ಪಟ್ಟಿತು. ಇಂತಹ ಪರಿಸ್ಥಿತಿಯಲ್ಲಿ ನಿಜಾಮನು ೧೯೪೮ ಸೆಪ್ಟೆಂಬರ್ ೧೭ರಂದು, ಹೈದರಾಬಾದ್ ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರಿದೆ ಎಂದು ಘೋಷಿಸಿ, ಒಪ್ಪಂದಕ್ಕೆ ಸಹಿ ಹಾಕಿದನು. ಇದರಿಂದ ದಿಕ್ಕು ಕಾಣದೆ ಕಾಸಿಂ ರಜ್ವಿ ಮತ್ತು ಅವನ ಸಹಚರರು ಪಾಕಿಸ್ತಾನಕ್ಕೆ ಪಲಾಯನ ಮಾಡಿದರು. ಹೀಗೆ ಹೈದರಾಬಾದ್ ಸಂಸ್ಥಾನವು ೧೯೪೮ ಸೆಪ್ಟೆಂಬರ್ ೧೭ ರಂದು, ವಿಮೋಚನೆಗೊಂಡು ಭಾರತದ ಒಕ್ಕೂಟದಲ್ಲಿ ವಿಲೀನವಾಗಿ ಭಾರತ ದೇಶದ ಒಂದು ರಾಜ್ಯವಾಗಿ ಹೊರಹೊಮ್ಮಿತು.

೧೯೪೮ ಸೆಪ್ಟೆಂಬರ್ ೧೭ ರಂದು ಹೈದರಾಬಾದ್ ಸಂಸ್ಥಾನವು ವಿಮೋಚನೆ ಹೊಂದಿ ಭಾರತದ ಒಕ್ಕೂಟಕ್ಕೆ ಸೇರ್ಪಡೆ ಆದ ನಂತರ, ಸೈನಿಕ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸೈನ್ಯದ ಮುಖ್ಯಸ್ಥ ಜೆ.ಎನ್. ಚೌಧರಿಯವರು ರಾಜ್ಯ ಸರಕಾರದ ಮುಖ್ಯಸ್ಥರಾಗಿ ೧೯೪೮ ಸೆಪ್ಟೆಂಬರ್‌ನಿಂದ ೧೯೪೯ರವರೆಗೆ ಕಾರ್ಯ ನಿರ್ವಹಿಸಿದರು.

ಬ್ರಿಟಿಷರ ಆಳ್ವಿಕೆಯಿಂದ ಭಾರತವು ಮುಕ್ತವಾಗಿ ಸ್ವಾತಂತ್ರ್ಯ ಪಡೆದ ನಂತರ, ಭಾರತದ ಒಕ್ಕೂಟಕ್ಕೆ ಹೈದರಾಬಾದ್ ಸಂಸ್ಥಾನ ವಿಲೀನವಾಗದೆ ಪ್ರತ್ಯೇಕತೆಯನ್ನು ಮುಂದುವರೆಸಿತ್ತು. ಇಂತಹ ಪ್ರತ್ಯೇಕತೆಯು ಅಖಂಡ ಭಾರತದ ನಿರ್ಮಾಣಕ್ಕೆ ತೊಡಕಾಗಿತ್ತು ಮತ್ತು ಮುಂದೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸುವ ಸಂಭವವು ಇತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯ ಪ್ರಿಯರ, ಹೈದರಾಬಾದ್ ಕರ್ನಾಟಕದ ಜನರ ಹೋರಾಟ, ತ್ಯಾಗ ಮತ್ತು ಸರ್ದಾರ ವಲ್ಲಭಬಾಯಿ ಪಟೇಲರ ಸೈನಿಕ ಕಾರ್ಯಾಚರಣೆಯಂತಹ ದಿಟ್ಟ ಕ್ರಮದಿಂದಾಗಿ ಹೈದರಾಬಾದ್ ನಿಜಾಮನ ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರುವಂತಾಯಿತು. ಒಂದು ವೇಳೆ, ಹೈದರಾಬಾದ್ ಸಂಸ್ಥಾನದ ವಿರುದ್ಧ ಸ್ವಾತಂತ್ರ್ಯ ಯೋಧರು ಹೋರಾಟ ನಡೆಸದೆ ಹೋಗಿದ್ದರೆ ಹಾಗೂ ಭಾರತ ಸರಕಾರವು ಸೈನಿಕ ಕಾರ್ಯಾಚರಣೆಯನ್ನು ಜಾರಿಗೊಳಿಸದೆ ಇದ್ದಿದ್ದರೆ ಭಾರತದ ಒಕ್ಕೂಟದ ಹೃದಯ ಭಾಗದಲ್ಲಿ ಪಾಕಿಸ್ತಾನದಂತ ಇನ್ನೊಂದು ವಿದೇಶಿ ರಾಷ್ಟ್ರವು ನಿರ್ಮಾಣವಾಗಿ ಭಾರತಕ್ಕೆ ನಿರಂತರ ಸಮಸ್ಯೆಗಳನ್ನು, ಅಪಾಯಗಳನ್ನು ತಂದೊಡ್ಡುವ ಸಾಧ್ಯತೆಗಳಿತ್ತು. ಈ ಹಿನ್ನೆಲೆಯಲ್ಲಿ ಹೈದರಾಬಾದ್

ರಾಜ್ಯದ ಇತಿಹಾಸದಲ್ಲಿ ವಿಮೋಚನಾ ಹೋರಾಟವು ಒಂದು ಚಾರಿತ್ರಿಕ ಹಾಗೂ ಅವಸ್ಮರಣೀಯ ಘಟನೆಯಾಗಿದೆ.

೨.೩. ಹೈದರಾಬಾದ್ ಕರ್ನಾಟಕದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳು

ಹೈದರಾಬಾದ್ ಕರ್ನಾಟಕ ಪ್ರದೇಶವು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಕೇಂದ್ರವಾಗಿದೆ. ಇದು ಅನೇಕ ರಾಜ ಮನೆತನಗಳನ್ನು ಮತ್ತು ರಾಜಕೀಯ ಏರಿಳಿತಗಳನ್ನು ಕಂಡಿದೆ. ಇಲ್ಲಿ ಕನ್ನಡ, ಉರ್ದು, ತೆಲುಗು, ಮರಾಠಿ, ಹಿಂದಿ ಮುಂತಾದ ಭಾಷೆಗಳನ್ನಾಡುವ ಜನರಿದ್ದಾರೆ. ಹಿಂದೂಗಳು, ಮುಸ್ಲಿಮರು, ಜೈನರು, ಬೌದ್ಧರು, ಬ್ರಾಹ್ಮಣರು ಹೀಗೆ ವಿವಿಧ ಪಂಥದ ಜನರಿದ್ದಾರೆ. ಇವರೆಲ್ಲರೂ ಸಮಾಜದ ಎಲ್ಲಾ ಕಾರ್ಯಗಳಲ್ಲಿ ಅನೋನ್ಯವಾಗಿ ಬೆರೆತು ಬಾಳುತ್ತಾ ಬಂದಿದ್ದಾರೆ. ಹೈದರಾಬಾದ್ ಕರ್ನಾಟಕ ನೆಲದಲ್ಲಿ ಆಡಳಿತ ನಡೆಸಿದ ಅನೇಕ ರಾಜಮನೆತನಗಳ ಹಾಗೂ ನವಾಬರ ಕಾಲದಿಂದಲೂ ನಡೆದು ಬಂದ ಸಾಮಾಜಿಕ ಸಾಮರಸ್ಯವನ್ನು ಇಂದಿಗೂ ಸಹ ಇಲ್ಲಿನ ಎಲ್ಲಾ ಜನರಲ್ಲಿ ಗುರುತಿಸಬಹುದಾಗಿದೆ. ವಿವಿಧ ಭಾಷೆ, ಜಾತಿ, ಪಂಥ, ವಿಭಿನ್ನ ಸಂಸ್ಕೃತಿಯಿಂದ ಕೂಡಿದ ಈ ಪ್ರದೇಶವು ಕರ್ನಾಟಕದಲ್ಲಿಯೇ ತನ್ನ ಸಾಮಾಜಿಕ ಸ್ಥಾನವನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದೆ. ಹಾಗೆಯೇ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಇದರ ಸಾಮಾಜಿಕ ಆರ್ಥಿಕ, ಧಾರ್ಮಿಕ ಜೀವನವನ್ನು, ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕಾದರೆ ಇಲ್ಲಿನ ರಾಜಕೀಯ ಸ್ಥಿತ್ಯಂತರ ಗಳು, ಧಾರ್ಮಿಕ, ವೈವಾಹಿಕ, ಕೌಟುಂಬಿಕ ಜೀವನವನ್ನು ಅವಲೋಕಿಸಬೇಕಾಗುತ್ತದೆ.

ಸಾಮಾಜಿಕ ಸ್ಥಿತಿಗತಿಗಳು

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿವಿಧ ಜಾತಿ, ಪಂಥ, ಭಾಷೆ, ಸಂಸ್ಕೃತಿಗಳು ನೆಲೆಯೂರಲು ಇಲ್ಲಿನ ರಾಜಕೀಯ ಸ್ಥಿತ್ಯಂತರಗಳೇ ಕಾರಣವಾಗಿವೆ. ರಾಜ್ಯ ವಿಸ್ತರಣಾ ನೀತಿಯಿಂದ ದಖನ್ ಪ್ರಾಂತ್ಯದ ಮೇಲೆ ಅಲಾವುದ್ದೀನ್ ಖಿಲ್ಜಿ, ಮಲ್ಲಿಕಾಫೂರ್, ಮಹಮದ್ ಬಿನ್ ತೊಗಲಕ್ ಇವರ ದಾಳಿಗಳು ನಡೆದಾಗಲೆಲ್ಲಾ, ವಿವಿಧ ಜನಾಂಗದವರು ಇವರ ಜೊತೆ ದಕ್ಷಿಣದ ಕಡೆ ಬಂದು ನೆಲೆಸತೊಡಗಿದರು. ಹೀಗೆ ಬಂದವರಲ್ಲಿ ಅರಬರು, ಟರ್ಕರು, ಆಫ್ಘನ್ನರು, ಪರ್ಶಿಯನ್ನರು ಮತ್ತು ಮೊಗಲರು ಇದರಲ್ಲಿ ಸೇರಿದ್ದರು. ಹಾಗೆಯೇ ಇವರಲ್ಲಿ ಸಾಮಾನ್ಯ ಸೈನಿಕನಿಂದ ಹಿಡಿದು, ಆಡಳಿತಗಾರರು, ವಿದ್ವಾಂಸರು, ಸೂಫಿಗಳು, ಕುಶಲಕರ್ಮಿಗಳು, ವ್ಯಾಪಾರಿಗಳು ಇದ್ದು ಇವರೆಲ್ಲಾ ವಾಪಸ್ ಹೋಗದೆ ಶಾಹಿರಾಜ್ಯದಲ್ಲಿ ಆಶ್ರಯ ಪಡೆದರು. ಹೀಗೆ ಉತ್ತರದಿಂದ ಬಂದ ನಾನಾ ವರ್ಗದ ಜನರು ಬೀದರ್, ಗುಲಬರ್ಗಾ, ರಾಯಚೂರು ನಗರಗಳಲ್ಲಿ ನೆಲೆಸಿದರು. ಹೀಗಾಗಿ ದಖನ್ ಪ್ರಾಂತ್ಯದ ಭಾಷೆಗಳು, ಧರ್ಮಗಳು ಮತ್ತು ಸಂಸ್ಕೃತಿಗಳು ಇಸ್ಲಾಮಿನೊಡನೆ ಮುಖಾಮುಖಿಯಾದವು. ಮರಾಠಿ, ಕನ್ನಡ, ತೆಲುಗು ಭಾಷಿಗರು ಪ್ರಭುತ್ವದ ಭಾಷೆಗಳೊಡನೆ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಸಂದರ್ಭಗಳು ನಿರ್ಮಾಣವಾದವು. ಹೀಗಾಗಿ ಹಿಂದೂ-ಮುಸ್ಲಿಮ್ ಜನ ಸಮುದಾಯಗಳು ಅನೇಕ ಕಾರಣಗಳಿಗಾಗಿ ಒಂದು ಕಡೆ ಬೆರೆಯುವ ಒತ್ತಡಗಳಿಗೆ ಒಳಗಾದವು.

ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಸುಲ್ತಾನರು ಜನರ ಮೇಲೆ ಒತ್ತಾಯವಾಗಿ ಇಸ್ಲಾಂನ್ನು ಹೇರಲು ಪ್ರಯತ್ನಿಸುತ್ತಿದ್ದುದ್ದು ಒಂದಡೆಯಾದರೆ, ಇಸ್ಲಾಂ ಧರ್ಮವನ್ನು ಹರಡಬೇಕೆಂಬ ಗುರಿಯನ್ನು ಹೊತ್ತು ಬಂದಿದ್ದ ಸೂಫಿಗಳು, ತಮ್ಮದೇ ಮುಕ್ತ ಧಾರ್ಮಿಕ ನೀತಿಯಿಂದ, ವ್ಯಕ್ತಿತ್ವದಿಂದ, ಸ್ಥಳೀಯ ಕೆಳವರ್ಗದವರನ್ನು ಆಕರ್ಷಿಸಿ ಸಹಬಾಳ್ವೆಯನ್ನು ರೂಢಿಸಿದರು. ಸ್ಥಳೀಯರು ಅದರಲ್ಲೂ ಕೆಳವರ್ಗದವರು ಮೇಲ್ವರ್ಗಗಳ ಧರ್ಮ, ಧಾರ್ಮಿಕ ಆಚರಣೆಗಳು ಹಾಗೂ ಜಾತಿ ಪದ್ಧತಿಯಿಂದ ಬೇಸತ್ತಿದ್ದರು. ಅಸ್ಪೃಶ್ಯರು ಅವಮಾನಿತರಾಗಿ ಬದುಕುವ ಕ್ರಮದಿಂದ ಬಿಡುಗಡೆಯಾಗಲು ಬಯಸುತ್ತಿದ್ದರು. ಸಾಮಾನ್ಯ ಜನರ ಇಂತಹ ಹಂಬಲಗಳು ಮತಾಂತರಿಗಳಿಗೆ ಪ್ರಚೋದನೆ ನೀಡಿದವು. ಇಸ್ಲಾಂ ಧರ್ಮಕ್ಕೆ ಸೇರುವುದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಲಾಭ ಪಡೆಯುವುದರೊಂದಿಗೆ ಉತ್ತಮ ಬಾಳು ನಡೆಸುವ ಅವಕಾಶಗಳನ್ನು ಪಡೆಯುತ್ತಿದ್ದರು. ಬಿ. ಷೇಕ್ ಆಲಿಯವರು ಅಭಿಪ್ರಾಯ ಪಟ್ಟಿರುವಂತೆ 'ಒಬ್ಬ ವ್ಯಕ್ತಿಯು ಇಸ್ಲಾಂ ಧರ್ಮದ ತೆಕ್ಕೆಗೆ ಬಂದನೆಂದರೆ ಅವನಿಗೆ ಉತ್ತಮ ಉದ್ಯೋಗಾವಕಾಶ ದೊರೆಯುತ್ತಿತ್ತು. ಹಾಗೂ ಅವನ ಸಾಮಾಜಿಕ ಸ್ಥಾನಮಾನ ಮೇಲೇರುತ್ತಿದ್ದುದು ಮಾತ್ರವಲ್ಲದೆ, ಸರಕಾರಿ ಉದ್ಯೋಗದಿಂದಲೋ ಇಲ್ಲವೆ ಯಾವುದಾದರೂ ಕಲೆಯನ್ನೋ, ಕಸುಬನ್ನೋ, ಕಲಿಯುವ ಮೂಲಕವಾಗಿ ಅವನು ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಿತ್ತು. ಆ ಮೊದಲು ಅವನು ಕೇವಲ ಒಬ್ಬ ಜೀತದಾಳು ಆಗಿರುತ್ತಿದ್ದನು".[೨೫]

೧೪ ಮತ್ತು ೧೫ನೇ ಶತಮಾನದಲ್ಲಿ ಈ ಪ್ರಾಂತ್ಯದಲ್ಲಿ ಕಾಣಿಸಿಕೊಂಡ ಮತ್ತೊಂದು ಪ್ರಮುಖ ಬೆಳವಣಿಗೆ ಎಂದರೆ ದಖನಿ ಉರ್ದು ಭಾಷೆಯ ಹುಟ್ಟು ಮತ್ತು ಬೆಳವಣಿಗೆ. ಉತ್ತರದಿಂದ ದಖನ್ ಪ್ರಾಂತ್ಯಕ್ಕೆ ಬಂದ ಸೈನಿಕರ ಜೊತೆಗೆ ಅರಬರು, ಟರ್ಕಿಗಳು, ಆಫ್ಘನ್ನರು, ಪರ್ಶಿಯನ್ನರು ಮತ್ತು ಅನೇಕ ಜನಾಂಗಕ್ಕೆ ಸೇರಿದ ವಿವಿಧ ಬಗೆಯ ಜನವರ್ಗದವರು ಬಂದು ನೆಲೆಸತೊಡಗಿದರು. ಇವರಲ್ಲಿ ಸೈನಿಕರು, ಸೂಫಿ ಸಂತರು, ವ್ಯಾಪಾರಿಗಳು, ವೃತ್ತಿಗಾರರು, ಅಧಿಕಾರಿಗಳು ಕವಿಗಳು ಕಲಾವಿದರು ಇದ್ದರು. ಅರಬ್ಬಿ, ತುರ್ಕಿ, ಫಾರ್ಸಿ, ಪುಷ್ಟು ಮುಂತಾದ ವಿವಿಧ ಭಾಷೆಗಳನ್ನು ಮಾತನಾಡುವವರಾಗಿದ್ದ ಇವರೆಲ್ಲರೂ ಒಂದೆಡೆ ಒಟ್ಟಿಗೆ ಬಾಳಬೇಕಾಯಿತು. ಜೊತೆಗೆ ಇವರಿಗೆ ಸ್ಥಳೀಯ ಭಾಷಿಗರಾದ ಮರಾಠಿ, ಕನ್ನಡ, ತೆಲುಗು ಭಾಷಿಗರ ಜತೆ ಒಡನಾಟ ಅನಿವಾರ್ಯವಾಯಿತು. ಉತ್ತರದಿಂದ ಬಂದ ಭಿನ್ನ ಭಾಷಿಗರ ನಡುವೆ ಸ್ಥಳೀಯ ಭಾಷಿಗರು ವ್ಯವಹರಿಸುವಾಗ ಭಾಷೆಯ ತೊಡಕು ಉಂಟಾಯಿತು. ಸುಮಾರು ವರ್ಷಗಳ ಕಾಲ ಭಿನ್ನ ಭಾಷಿಗರು ಒಟ್ಟಿಗೆ ಇಲ್ಲಿದ್ದು, ಒಡನಾಡಿದ ಫಲವಾಗಿ ಇವರೆಲ್ಲರ ಭಾಷೆಗಳ ಮಿಶ್ರಣದ ಶೈಲಿಯ 'ದಖನಿ' ಎಂಬ ಭಾಷೆಯನ್ನು ಸೃಷ್ಟಿಸಿಕೊಂಡರು. ದಖನಿ ಭಾಷೆ ೧೫ ಮತ್ತು ೧೬ನೇ ಶತಮಾನದಲ್ಲಿ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿ ಪರಿಣಮಿಸಿತು ಮತ್ತು ಸೈನಿಕರು, ವ್ಯಾಪಾರಿಗಳು, ಸೂಫಿಗಳು ಮುಜುಗರವಿಲ್ಲದೆ ದಖನಿ ಭಾಷೆಯನ್ನು ಬಳಸತೊಡಗಿದರು. ಮತಾಂತರಿಗಳಿಗೂ ದಖನಿ ಭಾಷೆ ಹೆಚ್ಚು ಅನುಕೂಲವಾಯಿತು. ಕಾಲಕ್ರಮೇಣ ಉತ್ತರ ಭಾರತದ ದೆಹಲಿ, ಲಖನೌಗಳಲ್ಲಿ ದಖನಿ ಭಾಷೆ ಪರಿಷ್ಕಾರಗೊಂಡು ಉರ್ದು ಭಾಷೆಯಾಗಿ ಜನಪ್ರಿಯವಾಯಿತು. ಹೀಗೆ ಔರಂಗಬಾದ್, ಹೈದರಾಬಾದ್ ನಗರಗಳಲ್ಲಿ

ದಖನಿಭಾಷೆ ನೆಲೆಗೊಂಡಿತು. ಹಾಗೆಯೇ ಉರ್ದು ಭಾಷೆಯು ಸಾಹಿತ್ಯ, ಕಲೆ, ಸಂಸ್ಕೃತಿಯ ಭಾಷೆಯಾಗಿ ಬೆಳೆಯಿತು.[೨೬]

ಹೈದರಾಬಾದ್ ಕರ್ನಾಟಕ ಭಾಗದ ಸಾಮಾಜಿಕ ಜನಜೀವನದ ಪ್ರಮುಖ ಲಕ್ಷಣವೆಂದರೆ ಅವಿಭಕ್ತ ಕುಟುಂಬ ಪದ್ಧತಿ. ಹಿಂದೂಗಳಲ್ಲಿ ತೀರಾ ಇತ್ತೀಚಿನವರೆಗೂ ಅವಿಭಕ್ತ ಕುಟುಂಬ ಪ್ರಧಾನವಾಗಿತ್ತು. ಇಂದಿಗೂ ಕೆಲವು ಮನೆತನಗಳು ಯಾವುದೇ ಪ್ರಶ್ನೆ ಮಾಡದೇ ಇಂತಹ ಪದ್ಧತಿಯನ್ನು ಒಪ್ಪಿಕೊಂಡು ಕುಟುಂಬದ ಯಜಮಾನನಿಗೆ ಸೂಕ್ತ ಗೌರವ ನೀಡುತ್ತಾ ಸಾಮರಸ್ಯದಿಂದ ಬಾಳುತ್ತಿದ್ದಾರೆ. ಹಲವಾರು ತಲೆಮಾರುಗಳಿಂದ ಸಾಂಸ್ಕೃತಿಕವಾಗಿ ಬಂದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಅವಿಭಕ್ತ ಕುಟುಂಬಗಳು ಮಹತ್ವದ ಪಾತ್ರವಹಿಸಿವೆ. ಆದರೆ ಇತ್ತೀಚೆಗೆ ಸಮಾಜದಲ್ಲಿ ನಗರೀಕರಣದಿಂದ, ಔದ್ಯೋಗೀಕರಣದಿಂದ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಬದಲಾವಣೆ ಉಂಟಾಗುತ್ತಿವೆ. ಇಂದು ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗಿ ಪ್ರಾಥಮಿಕ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿವೆ.

ಹೈದರಾಬಾದ್ ಕರ್ನಾಟಕ ಭಾಗದ ಸಾಮಾಜಿಕ ಜೀವನದ ಬಗ್ಗೆ ಅಧ್ಯಯನ ಮಾಡುವಾಗ ತಿಳಿದು ಬರುವಂತೆ ಈ ಭಾಗದಲ್ಲಿ ಸುಮಾರು ೨೯ ಜಾತಿಗಳಿವೆಯೆಂದು ಸಾಹಿತ್ಯಿಕ ಮೂಲಗಳು, ಶಾಸನಗಳು ಹಾಗೂ ಮುಂತಾದ ದಾಖಲೆಗಳಿಂದ ತಿಳಿದುಬರುತ್ತದೆ. ಇಲ್ಲಿ ಕಂಡು ಬರುವ ಮುಖ್ಯ ಜಾತಿ ಸಮೂಹ ಗಳೆಂದರೆ ಬ್ರಾಹ್ಮಣ, ಲಿಂಗಾಯತ, ಮರಾಠ, ರಜಪೂತ, ಬೇಡ, ಪಂಚಾಳ, ಮಡಿವಾಳ, ದೇವಾಂಗ, ರೆಡ್ಡಿ, ಕುರುಬ, ವಡ್ಡರ, ಮಾದಿಗ, ಗೌಳಿ ಮುಂತಾದವುಗಳಾಗಿವೆ. ಬ್ರಾಹ್ಮಣರಲ್ಲಿ ಮುಖ್ಯವಾಗಿ ಮಾಧ್ವ ಬ್ರಾಹ್ಮಣರು ಹೆಚ್ಚಾಗಿ ನೆಲೆಸಿರುವರು. ಇವರು ಉತ್ತರಾಧಿ ಮಠದ ಅನುಯಾಯಿಗಳಾಗಿದ್ದಾರೆ. ಬ್ರಾಹ್ಮಣ ರಲ್ಲಿ ಸ್ಮಾರ್ತ ಬ್ರಾಹ್ಮಣರದ್ದು ಇನ್ನೊಂದು ಗುಂಪಿದ್ದು, ಇವರು ಅದ್ವೈತ ತತ್ವದ ಅನುಯಾಯಿಗಳಾಗಿದ್ದು, ಬಹುತೇಕ ಭಾಗಗಳಲ್ಲಿ ಕಂಡು ಬರುತ್ತಾರೆ. ಇವರು ಹೆಚ್ಚಾಗಿ ಸಂಕೇಶ್ವರ ಮಠ, ಸುರಪೂರ ಮಠ, ಹಂಪಿ ಮಠ ಮತ್ತು ಶೃಂಗೇರಿ ಮಠದ ಅನುಯಾಯಿಗಳಾಗಿದ್ದಾರೆ. ಈ ಕುಟುಂಬಗಳಲ್ಲಿ ಶ್ರಾದ್ಧ, ಸಂಧ್ಯಾವಂದನೆ, ಪಂಚಮಹಾಯಜ್ಞ ಮುಂತಾದ ಧಾರ್ಮಿಕ ವಿಧಿಗಳನ್ನು ನಿಯಮಾನುಸಾರ ಆಚರಿಸುತ್ತಾರೆ.

ವೀರಶೈವ ಲಿಂಗಾಯತರದು ಇಲ್ಲಿನ ಮತ್ತೊಂದು ಮಹತ್ವದ ಪಂಗಡ. ಇವರು ಸಾಮಾನ್ಯವಾಗಿ ಎಲ್ಲಾ ಕಡೆ ನೆಲೆಸಿದ್ದಾರೆ. ವೀರಶೈವ ಧರ್ಮದ ಆಚಾರ, ವಿಚಾರಗಳಿಗೆ ಅನುಗುಣವಾಗಿ ಎಲ್ಲಾ ವಿಧಿ, ವಿಧಾನಗಳನ್ನು ತಮ್ಮ ನಿತ್ಯಜೀವನದಲ್ಲಿ ಆಚರಿಸುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕೂಡ ಇಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆಯು ಇಲ್ಲಿನ ಒಟ್ಟು ಜನಸಂಖ್ಯೆಯ ಶೇ. ೨೦ರಷ್ಟಿದೆ. ಅದರಲ್ಲೂ ಬಳ್ಳಾರಿ, ಸುರಪುರ, ರಾಯಚೂರುಗಳಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ. ಮುಸ್ಲಿಂರು ಇನ್ನೊಂದು ಪ್ರಮುಖ ಜಾತಿಯವರಾಗಿದ್ದಾರೆ. ಬಹುಮನಿ ಕಾಲದಿಂದ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಉನ್ನತ ಹುದ್ದೆಯಲ್ಲಿದ್ದು, ಇಂದಿಗೂ ತನ್ನದೇ ಆದ ಪ್ರಭಾವ ಹೊಂದಿದ ಜನಾಂಗವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ವಿವಾಹ ಸಂಬಂಧಗಳಲ್ಲಿ ವಿವಿಧ ಜಾತಿ, ಜನಾಂಗಗಳಲ್ಲಿ ತಮ್ಮದೇ ಆದ ಆಚಾರ ಪದ್ಧತಿಗಳು, ರೀತಿ, ನೀತಿ, ವಿಧಿ, ವಿಧಾನಗಳು ಹಾಗೂ ಕಟ್ಟುಪಾಡುಗಳನ್ನು ಪಾಲಿಸಲಾಗುತ್ತದೆ. ವಿವಾಹ ಸಾಮಾಜಿಕ ಜೀವನದ ಮಹತ್ವದ ವಿಧಿವಿಧಾನವಾಗಿದೆ. ವಿವಾಹವು ಕೇವಲ ದೈಹಿಕ ಬಂಧನವಾಗಿರದೆ ನೈತಿಕ ಹಾಗೂ ತಾತ್ವಿಕ ಸಂಬಂಧವೆಂದು ನಂಬಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ವಿವಾಹ ಸಂಸ್ಕಾರವನ್ನು ಪಡೆಯಲೇಬೇಕೆಂಬ ನಿಯಮವು ಕಡ್ಡಾಯವಾಗಿದೆ. ಸಾಮಾನ್ಯವಾಗಿ ಗಂಡು ಮಕ್ಕಳು ಅಕ್ಕನ ಮಗಳನ್ನು ಅಥವಾ ಸೋದರಮಾವನ ಮಗಳನ್ನು ವಿವಾಹವಾಗುವುದು ಹೆಚ್ಚು ರೂಢಿಯಲ್ಲಿದೆ. ಸಾಮಾನ್ಯವಾಗಿ ಮದುವೆಯ ಸಮಾರಂಭಗಳು ೨, ೩ ದಿನಗಳು ನಡೆಯುತ್ತವೆ. ಬ್ರಾಹ್ಮಣರಲ್ಲಿ ನಡೆಯುವ ಮದುವೆಗಳಲ್ಲಿ ಇಲ್ಲಿಗೂ ಇತರ ಭಾಗಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಲಿಂಗಾಯತರ ಮದುವೆಗಳಲ್ಲಿ ಅಗ್ನಿಕುಂಡ ಇರುವುದಿಲ್ಲ. ಬದಲಾಗಿ ಪಂಚಕಲಶಗಳನ್ನು ಹೂಡುತ್ತಾರೆ. ಬ್ರಾಹ್ಮಣರಲ್ಲಿ ಅಗ್ನಿ, ಕುಂಡಗಳ ಪೂಜೆ ಮಹತ್ವ ಪಡೆದುಕೊಂಡಿದೆ.

ಕ್ರಿಶ್ಚಿಯನ್ನರು ತಮ್ಮ ಮದುವೆಗಳನ್ನು ಚರ್ಚುಗಳಲ್ಲಿ ನಡೆಸುತ್ತಾರೆ. ಪಾದ್ರಿ ಅಥವಾ ಅವರಿಗಿಂತ ಮೇಲುಮಟ್ಟದ ಧರ್ಮಗುರುಗಳು ಮದುವೆಯ ವಿಧಿ, ವಿಧಾನಗಳನ್ನು ನೆರವೇರಿಸುವರು. ಮದುವೆಗೆ ಸಂಬಂಧಿಸಿದ ವಿಧಿ, ವಿಧಾನಗಳನ್ನು ಮುಗಿಸಿ, ಸರ್ವೀಸ್ ಓದಿದ ಮೇಲೆ ವಧು, ವರರು ಪರಸ್ಪರ ವಿವಾಹ ಬಂಧನಕ್ಕೆ ಸಮ್ಮತಿಸಿದ್ದಾರೆಯೇ ಎಂದು ಕೇಳಲಾಗುವುದು. ವಧು, ವರರ ಒಪ್ಪಿಗೆಯ ನಂತರ ವಿವಾಹವನ್ನು ಪವಿತ್ರೀಕರಿಸಲಾಗುತ್ತದೆ.[೨೨] ಮುಸ್ಲಿಂಮರ ವಿವಾಹ ಪದ್ಧತಿಯು ತನ್ನದೇ ಆದ ಆಚಾರ, ವಿಚಾರಗಳನ್ನು ಪಾಲಿಸುತ್ತಾ ಬಂದಿದೆ. ಕನ್ಯೆಯನ್ನು ಅವಳ ಸೋದರಮಾವನಿಗೆ ಮದುವೆ ಮಾಡಿ ಕೊಡುವುದನ್ನು ಕೆಲವು ಮುಸ್ಲಿಂ ಪಂಗಡದವರು ನಿಷೇಧಿಸುತ್ತಾರೆ. ಚಿಕ್ಕಪ್ಪ, ದೊಡ್ಡಪ್ಪಂದಿರ ಮಕ್ಕಳ ನಡುವೆ ಮದುವೆ ಮಾಡುವುದನ್ನು ಕೆಲವು ಮುಸ್ಲಿಂ ಪಂಗಡದವರು ಸಮ್ಮತಿಸುತ್ತಾರೆ. ಇಸ್ಲಾಂ ಧರ್ಮದ ಕೆಲವು ಮಿತಿಗನುಗುಣವಾಗಿ ಬಹುಪತ್ನಿತ್ವಕ್ಕೆ ಅವಕಾಶವಿದೆ. ಖಾಜಿಯು ನಿಕಾವನ್ನು ಓದುತ್ತಾನೆ ಮತ್ತು ಕಾರ್ಯಕಲಾಪಗಳನ್ನು ದಾಖಲಿಸಲಾಗುತ್ತದೆ. ಕುರಾನಿನ ಒಂದು ಅಧ್ಯಾಯವನ್ನು ಪಠಿಸಲಾಗುತ್ತದೆ.

ಮಹಿಳೆಯರ ಸಾಮಾಜಿಕ ಸ್ಥಾನಮಾನ

ಹೈದರಾಬಾದ್ ಕರ್ನಾಟಕ ಭಾಗದಲ್ಲಿ, ಮಹಿಳೆಯರ ಸ್ಥಾನಮಾನ ಸಾಮಾನ್ಯವಾಗಿ ಸ್ವಲ್ಪ ಕೆಳಮಟ್ಟದಲ್ಲಿರುವುದು ಕಂಡು ಬರುತ್ತದೆ. ಇದಕ್ಕೆ ಸಾಮಾಜಿಕ ಹಿನ್ನೆಲೆಯು ಪ್ರಮುಖ ಕಾರಣವಾಗಿದೆ. ೧೨ನೆಯ ಶತಮಾನದಲ್ಲಿ ನಡೆದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯಿಂದ ಎಚ್ಚೆತ್ತ ಮಹಿಳೆಯರು ಶರಣ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಆದರೆ ಮುಂದೆ ಇಲ್ಲಿ ಮುಸ್ಲಿಂ ಆಡಳಿತ ಬಂದಾಗ ಮಹಿಳೆಯರ ಸ್ಥಿತಿಗತಿಯು ಪುನಃ ಕೆಳಮುಖವಾಗುತ್ತಾ ಬಂದಿತು. ಮುಸ್ಲಿಂ ಮಹಿಳೆಯರು ಇನ್ನೂ ಬುರ್ಖಾ ಪದ್ಧತಿಯನ್ನು ಪಾಲಿಸುತ್ತಾರೆ. ಅವರ ಮುಕ್ತ ಸಂಚಾರದ ಮೇಲೆ ಹಲವಾರು ಇನ್ನೂ ನಿರ್ಬಂಧನಗಳಿವೆ. ಅವರಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಬಹಳ ಕಡಿಮೆ ಇದ್ದು ಇತ್ತೀಚೆಗೆ ಸ್ವಲ್ಪ

ಸುಧಾರಣೆ ಕಾಣುತ್ತಿದೆ. ಮನೆಯಲ್ಲಿ ಲಿಂಗ-ತಾರತಮ್ಯ ಅಧಿಕವಾಗಿ ಕಂಡು ಬರುತ್ತದೆ. ಹೆಣ್ಣಿನ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲ, ಹಾಗೂ ಹೆಚ್ಚಿನ ಅಥವಾ ವಿಶೇಷ ಸೌಲಭ್ಯಗಳು ದೊರಕುತ್ತಿಲ್ಲ. ಬಡತನದಿಂದಾಗಿ ಹೆಣ್ಣಿನ ಸ್ಥಾನಮಾನ ಯಾವ ಮಟ್ಟದಲ್ಲಿದೆಯೆಂದರೆ, ಹೆಣ್ಣು ಶಿಶುವನ್ನು ಮಾರಾಟ ಮಾಡುವ ಪ್ರಕರಣಗಳು ಬೆಳಕಿಗೆ ಬಂದಿವೆ. ಗಂಡು ಮಗುವಿನ ಆಸೆ ಪ್ರಬಲವಾಗಿರುವುದರ ಜೊತೆಗೆ ಧಾರ್ಮಿಕ ಮೌಢ್ಯಗಳು ಕಾರಣವಾಗಿವೆ. ವರದಕ್ಷಿಣೆ ಸಾವುಗಳು ಇಲ್ಲಿ ಅಧಿಕವಾಗಿವೆ. ೧೯೯೯ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಸಾವಿನ ಪ್ರಮಾಣದ ಸರಾಸರಿ ರಾಜ್ಯದಲ್ಲಿ ೧೦೦೦ಕ್ಕೆ ೭೪ ಇದೆ. ಆದರೆ ಗುಲಬರ್ಗಾದಲ್ಲಿ ಇದರ ಪ್ರಮಾಣ ೨೪೮ ಇದೆ. ಬಡಕುಟುಂಬಗಳಲ್ಲಿ ಕುಟುಂಬದ ಭಾರ ಮಹಿಳೆಯರ ಮೇಲೆ ಅಧಿಕವಾಗಿದೆ. ಆದರೆ ಮಹಿಳೆಯರು ದುಡಿಮೆಯಲ್ಲಿ ತಾರತಮ್ಯಕ್ಕೆ ಒಳಗಾಗಿದ್ದಾರೆ. ಅವರಿಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಆದರೆ ಇತ್ತೀಚಿಗೆ ಸರ್ಕಾರ ಜಾರಿಗೊಳಿಸಿರುವ ಕೆಲವು ಯೋಜನೆಗಳಿಂದಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸ ಬೆಳೆಯುತ್ತಿದೆ. ಸ್ವ-ಸಹಾಯ ಗುಂಪಿನ ಸದಸ್ಯರಾದ ಮಹಿಳೆ ಹೊಸ ಅನುಭವಗಳನ್ನು, ಜೀವನವನ್ನು ಪಡೆಯುತ್ತಿದ್ದಾಳೆ.[೨೮]

ಆರ್ಥಿಕ ಸ್ಥಿತಿಗತಿಗಳು

ಯಾವುದೇ ಪ್ರದೇಶದ ಆರ್ಥಿಕ ವ್ಯವಸ್ಥೆಯು ಆ ಪ್ರದೇಶದ ಭೌಗೋಳಿಕ ಹಾಗೂ ಔದ್ಯೋಗಿಕ ಸ್ಥಿತಿಗತಿಗಳೊಂದಿಗೆ ನೇರ ಸಂಬಂಧ ಹೊಂದಿರುತ್ತದೆ. ಅದೇ ರೀತಿ ಹೈದರಾಬಾದ್ ಕರ್ನಾಟಕದ ಆರ್ಥಿಕ ಸ್ಥಿತಿಗತಿಗಳು ಅಲ್ಲಿನ ಭೌಗೋಳಿಕ ಪರಿಸ್ಥಿತಿಯ ಮೇಲೆ ರೂಪುಗೊಂಡಿದೆ. ಸಾಧಾರಣವಾಗಿ ಹೈದರಾಬಾದ್ ಕರ್ನಾಟಕ ಎಂದಾಕ್ಷಣ ಎಲ್ಲರಿಗೂ ನೆನಪಾಗುವುದು ಬಿಸಿಲು, ಬರಗಾಲ, ಬಡತನ, ನಿರುದ್ಯೋಗ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವ ಗ್ರಾಮಗಳು, ನಗರಗಳು, ಅಸಮರ್ಪಕ ಸಾರಿಗೆ ವ್ಯವಸ್ಥೆ, ಕುಡಿಯುವ ನೀರಿನ ಅಭಾವ ಹೀಗೆ ಅನೇಕ ಅಂಶಗಳ ಜೊತೆಗೆ ಕರ್ನಾಟಕದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ ಕಣ್ಣಮುಂದೆ ಬರುತ್ತವೆ. ಇಲ್ಲಿನ ಇಂತಹ ಸ್ಥಿತಿಗತಿಗೆ ಅನೇಕ ಕಾರಣಗಳಿವೆ. ವಸಾಹತುಶಾಹಿ ಆಡಳಿತದ ಅನುಕೂಲ ಪಡೆಯದ ಪ್ರದೇಶ ಇದಾಗಿದ್ದರಿಂದ ಅನೇಕ ಸೌಲಭ್ಯಗಳಿಂದ ವಂಚಿತವಾಯಿತು. ನಿಜಾಮರ ಆಳ್ವಿಕೆ ಕಾಲದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಯಿತು. ಸ್ವಾತಂತ್ರ್ಯದ ನಂತರವೂ ಆಳಿದ ಸರಕಾರಗಳ ಜನಪ್ರತಿನಿಧಿಗಳ ನಿರ್ಲಕ್ಷ್ಯ ಧೋರಣೆ ಮುಂತಾದ ಕಾರಣಗಳಿಂದ ಇದು ಕರ್ನಾಟಕದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶ ಎಂದು ಕರೆಯಿಸಿಕೊಳ್ಳುವಂತಾಯಿತು. ಹೀಗೆ ಒಟ್ಟು ಪ್ರದೇಶ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದರಿಂದಾಗಿ ಅದು ಈ ಭಾಗದ ಆರ್ಥಿಕ ಪ್ರಗತಿಯ ಮೇಲೂ ದುಷ್ಪರಿಣಾಮ ಬೀರಿದೆ ಎನ್ನಬಹುದು.

ಹೈದರಾಬಾದ್ ಕರ್ನಾಟಕ ಭಾಗದ ಜನರ ಪ್ರಮುಖ ಉದ್ಯೋಗ ಕೃಷಿಯಾಗಿದೆ. ಶೇ. ೭೦ರಿಂದ ೭೫ರಷ್ಟು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಇಲ್ಲಿನ ಕಪ್ಪು ಮಣ್ಣು ಮತ್ತು ವಾಯುಗುಣ ಹತ್ತಿ, ತೊಗರಿ, ಎಣ್ಣೆಕಾಳು ಬೆಳೆಗಳಿಗೆ ಅನುಕೂಲವಾಗಿದೆ. ಕೃಷ್ಣಾ, ಭೀಮಾ, ಕಾಗಿಣಾ, ಅಮರ್ಜಾ,

ಬೆಣ್ಣೆತೊರೆ, ಮುಲ್ಲಾಮಾರಿ, ತುಂಗಭದ್ರಾದಂತ ಅನೇಕ ದೊಡ್ಡ ಮತ್ತು ಉಪನದಿಗಳು, ಹಳ್ಳಗಳು, ಕೆರೆಗಳು ಇಲ್ಲಿವೆ. ಆದರೆ ನೀರಾವರಿ ಪ್ರದೇಶ ಮಾತ್ರ ಕಡಿಮೆಯಿದೆ. ಇದಕ್ಕೆ ಕಾರಣ ಅನೇಕ ದಶಕಗಳಿಂದ ಮುಗಿಯದ ನೀರಾವರಿ ಯೋಜನೆಗಳು ಹಾಗೂ ಮಳೆಗಾಲದ ನಂತರ ಅವುಗಳ ನೀರು ಬಹಳ ಬೇಗ ಖಾಲಿಯಾಗಿ ಜಲಾಶಯಗಳು ಬತ್ತಿ ಹೋಗುವ ಸಂಭವವೇ ಹೆಚ್ಚು. ಹೀಗಾಗಿ ಮಳೆಯಾಧಾರಿತ ಕೃಷಿಯ ಮೇಲೆ ಹೆಚ್ಚು ಜನ ಅವಲಂಬಿತರಾಗಿದ್ದಾರೆ.

ಇಲ್ಲಿಯ ಮಣ್ಣು ವಿವಿಧ ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. ಗುಲಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕಪ್ಪು ಮಣ್ಣು ಹೆಚ್ಚಿದ್ದು ತೊಗರಿ, ಜೋಳ, ಹತ್ತಿ, ಎಣ್ಣೆ ಬೀಜಗಳು, ನೆಲಗಡಲೆಗಳನ್ನು ಪ್ರಮುಖವಾಗಿ ಬೆಳೆದರೆ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಪ್ರದೇಶದಲ್ಲಿ ಭತ್ತ, ಕಬ್ಬು ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಾರೆ. ಇದರ ಜೊತೆಗೆ ಹತ್ತಿ, ಜೋಳ, ಮೆಕ್ಕೆಜೋಳ, ನೆಲಗಡಲೆ, ಹೊಗೆಸೊಪ್ಪು ಸಜ್ಜೆ, ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ.

ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಕೃಷಿ ಪ್ರಗತಿ ಕುರಿತಂತೆ ಇತ್ತೀಚೆಗೆ ಹಲವಾರು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಗುಲಬರ್ಗಾ ಒಳಗೊಂಡಂತೆ ಅನೇಕ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ. ಗುಲಬರ್ಗಾ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ ೭೧೨.೬ ಮಿ.ಮೀ. ಇದ್ದರೆ, ಬಳ್ಳಾರಿಯಲ್ಲಿ ೬೨೪ ಮಿ.ಮೀ. ಇದೆ. ಆದರೆ ಇದು ಸಹ ಸರಿಯಾದ ಪ್ರಮಾಣ ಹಾಗೂ ಸಕಾಲದಲ್ಲಿ ಬರುತ್ತಿಲ್ಲ. ಜೊತೆಗೆ ಆಗಾಗ ಉಂಟಾಗುವ ಅತೀವೃಷ್ಟಿ, ಅನಾವೃಷ್ಟಿ ವೈಪರಿತ್ಯಗಳಿಂದ ಉತ್ಪಾದನೆ ಕಡಿಮೆಯಾಗಿದೆ. ಇಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮ, ಸಿಂಟಾಲೂರು ಏತ ನೀರಾವರಿ ಯೋಜನೆ, ಚಂದ್ರಂಪಳ್ಳಿ ನೀರಾವರಿ ಯೋಜನೆ, ಹತ್ತಿಕುಣಿ, ಸೌದಾಗರ್ ಆಣೆಕಟ್ಟು, ಬೆಣ್ಣೆತೊರೆ, ಅಮರ್ಜಾ ಯೋಜನೆಗಳು ಹಲವಾರು ವರ್ಷಗಳಿಂದ ನಿಧಾನಗತಿಯಲ್ಲಿ ಸಾಗಿವೆ. ಹೀಗಾಗಿ ಸಪ್ತನದಿಗಳ ನಾಡಿನಲ್ಲಿ ಜನ ನೀರಿಗಾಗಿ ಪರಿತಪಿಸುವಂತಾಗಿದೆ. ಇಂತಹ ಅನೇಕ ಸಮಸ್ಯೆಗಳು ಇಲ್ಲಿನ ಆರ್ಥಿಕ ಬೆಳವಣಿಗೆಯ ಹಿನ್ನಡೆಗೆ ಪರೋಕ್ಷ ಕಾರಣಗಳೆನ್ನಬಹುದಾಗಿದೆ.

ಹೈದರಾಬಾದ್ ಕರ್ನಾಟಕದ ಭೂ ಮಾಲೀಕತ್ವವು ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಹಿಡಿತದಲ್ಲಿದ್ದು ಭೂ ಒಡೆತನವು ಅಸಮಾನತೆಯಿಂದ ಹಂಚಿಕೆಯಾಗಿದ್ದು ಅದು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ. ಇದರಿಂದಾಗಿ ಭೂಮಾಲೀಕರ ಕೆಳಗೆ ಕೆಲಸ ನಿರ್ವಹಿಸುವ ಸಾಮಾನ್ಯ ರೈತರು ಅಥವಾ ಕೃಷಿಕಾರ್ಮಿಕರಲ್ಲಿ ಹೆಚ್ಚು ಶ್ರಮಪಟ್ಟು ಹೆಚ್ಚು ಬೆರೆಯಬೇಕೆನ್ನುವ ಹುಮ್ಮಸ್ಸು ಕಾಣಬರುವುದಿಲ್ಲ. ಪರಿಣಾಮವಾಗಿ ಕೃಷಿ ಉತ್ಪನ್ನ ಕುಂಟಿತವಾಗುವುದು ಕಂಡುಬರುತ್ತದೆ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಹಾಗೂ ಕೃಷಿ ಅಲ್ಲದೇ ಇತರ ಆದಾಯ ಮೂಲಗಳನ್ನು ಹೊಂದಿರುವ ಭೂಮಾಲಿಕರು ಕೃಷಿಯಲ್ಲಿ ಬಂದಷ್ಟು ಬರಲಿ ಎನ್ನುವ ಧೋರಣೆ ಹೊಂದಿದ್ದು, ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ತೊಡಗಿಸುವ ಮನೋಭಾವ ಹೊಂದಿರುತ್ತಾರೆ.

ಹೈದರಾಬಾದ್ ಕರ್ನಾಟಕದಲ್ಲಿ ಕೈಗಾರಿಕೆಗಳು ಅಷ್ಟು ಬೆಳವಣಿಗೆಯಾಗಿಲ್ಲ. ಇತ್ತೀಚೆಗೆ ಹೆಚ್ಚಾಗಿ ಕೈಗಾರಿಕರಣಗೊಂಡಿರುವ ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿದರೆ ಕೈಗಾರಿಕೆಯಲ್ಲಿ ಇತರ ಜಿಲ್ಲೆಗಳು ಹಿಂದುಳಿದಿವೆ. ಬೀದರ್ ೧೯೮೦ರವರೆಗೆ ಉದ್ದಿಮೆ ಇಲ್ಲದ ಜಿಲ್ಲೆ ಎಂದೇ ಘೋಷಿಸಲ್ಪಟ್ಟಿತ್ತು. ಗುಲಬರ್ಗಾ ಜಿಲ್ಲೆಯಲ್ಲಿ ಹಿಂದಿನಿಂದಲೂ ಹತ್ತಿ ಬಟ್ಟೆ, ಸಿಮೆಂಟ್ ಮತ್ತು ಕಲ್ಲು ಪಾಲಿಶ್ ಮಾಡುವ ಕಾರ್ಖಾನೆಗಳಿವೆ. ಗುಲಬರ್ಗಾ ಜಿಲ್ಲೆಯ ಸುತ್ತಮುತ್ತ ಉತ್ತಮ ಗುಣಮಟ್ಟದ ಹತ್ತಿ ಬೆಳೆಯುತ್ತಿದ್ದುದರಿಂದ ೧೮೮೪ರಲ್ಲಿ ಗುಲಬರ್ಗಾದಲ್ಲಿ ಎಂ.ಎಸ್.ಕೆ. ಮಿಲ್ ಸ್ಥಾಪನೆಯಾಗಿತ್ತು. ಇಲ್ಲಿ ತಯಾರಾದ ಹತ್ತಿ ಬಟ್ಟೆಯನ್ನು ವಿದೇಶಗಳಿಗೂ ರಫ್ತು ಮಾಡಲಾಗುತ್ತಿತ್ತು. ಆದರೆ ಈಗ ನಷ್ಟದ ಕಾರಣ ಮಿಲ್‌ನ್ನು ಮುಚ್ಚಲಾಗಿದೆ. ಇನ್ನು ಇಲ್ಲಿನ ಎಸಿಸಿ, ವಾಸವದತ್ತಾ, ರಾಜಶ್ರೀ ಸಿಮೆಂಟ್ ಕಾರ್ಖಾನೆಗಳು ಇಡೀ ಭಾರತಕ್ಕೆ ಸಿಮೆಂಟ್‌ನ್ನು ಪೂರೈಸುತ್ತಿದ್ದವು. ಹಾಗೆಯೇ ಇಲ್ಲಿ ಹೆಚ್ಚಾಗಿ ಸುಣ್ಣದ ಕಲ್ಲು ಏರಕದ ಮರಳು, ಚಿನ್ನ, ಕೆಂಪು ಕಾವಿಮಣ್ಣು, ತಾಮ್ರ, ಜಿಪ್ಸಮ್, ಸುಣ್ಣದ ಶಿಲೆ ಮುಂತಾದ ಖನಿಜ ನಿಕ್ಷೇಪಗಳು ಗುಲಬರ್ಗಾ ಜಿಲ್ಲೆಯ ಸುತ್ತಮುತ್ತಾ ಇದೆ. ಆದರೆ ಬಂಡವಾಳದ ಅಭಾವ, ಮೂಲಸೌಕರ್ಯಗಳ ಅಲಭ್ಯತೆ, ಅನಕ್ಷರತೆ, ಬಡತನದಿಂದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಹೀಗಾಗಿ ಇಂದು ಗುಲಬರ್ಗಾ ಬೀದರ್ ಜಿಲ್ಲೆಗಳಲ್ಲಿ ಹಲವಾರು ಉದ್ದಿಮೆಗಳು ಇಂದು ಬೆಳೆಯುತ್ತಿರುವ ಮಾರುಕಟ್ಟೆಯನ್ನು ಸ್ಪರ್ಧೆಯನ್ನು ಎದುರಿಸಲಾರದೆ ನಷ್ಟದಿಂದ ಮುಚ್ಚಿ ಹೋಗಿವೆ. ಪ್ರಸ್ತುತ ರಾಯಚೂರು ಸಮೀಪದ ಹಟ್ಟಿ ಚಿನ್ನದ ಗಣಿ ಪ್ರತಿವರ್ಷ ಲಾಭಗಳಿಸುತ್ತಾ ಅನೇಕ ಕಾರ್ಮಿಕರಿಗೆ ಜೀವನ ಒದಗಿಸಿಕೊಟ್ಟಿದೆ.

ಇಲ್ಲಿನ ಅನೇಕ ಉದ್ದಿಮೆಗಳ ಆರ್ಥಿಕ ಚಟುವಟಿಕೆಗಳಿಂದ ಅನೇಕ ಜನರಿಗೆ ಕೂಲಿ, ಜೀವನ ದೊರೆತರೂ, ಬಂಡವಾಳಗಾರರು, ಮಾಲೀಕರು ಉದ್ಧಾರವಾಗುತ್ತಿದ್ದಾರೆಯೇ ಹೊರತು ಸಾಮಾನ್ಯ ಜನರ ಆರ್ಥಿಕ ಸ್ಥಿತಿ, ಜೀವನಮಟ್ಟ ಸುಧಾರಿಸಲು ಸಾಧ್ಯವಾಗಿಲ್ಲ. ಇಲ್ಲಿರುವ ಅವಕಾಶಗಳನ್ನು ಹೊರ ರಾಜ್ಯದ ಉದ್ಯಮಿಗಳು ಬಂದು ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿರುವ ಬೃಹತ್ ಕೈಗಾರಿಕೆಗಳು ಹೊರ ರಾಜ್ಯದವರ ಒಡೆತನದಲ್ಲಿವೆ. ಹೀಗೆ ಇಲ್ಲಿನ ಸಂಪನ್ಮೂಲಗಳು ಬೇರೆಯವರ ಪಾಲಾಗಿ ಹೋಗುತ್ತಿದೆ. ಇತ್ತೀಚೆಗೆ ಸಣ್ಣಪುಟ್ಟ ಉದ್ಯಮಗಳಿಗೆ ಸರಕಾರ ನೀಡುವ ಪ್ರೋತ್ಸಾಹ, ಸಾಲ ಸೌಲಭ್ಯ, ಸಬ್ಸಿಡಿಗಳಿಂದಾಗಿ ಇಲ್ಲಿ ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಹಾಲು ಉತ್ಪಾದನೆ, ಬೀಜಗಳ ಉತ್ಪಾದನೆ ಮುಂತಾದ ಉದ್ದಿಮೆಗಳು ನಿಧಾನವಾಗಿ ಅಭಿವೃದ್ಧಿಯಾಗುತ್ತಿವೆ.

ಆದರೆ ಹೈದರಾಬಾದ್ ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ಇಡೀ ರಾಜ್ಯಕ್ಕೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕ ಅತ್ಯಂತ ಕೆಳಮಟ್ಟದಲ್ಲಿದೆಯಲ್ಲದೆ ಅನೇಕ ಆರ್ಥಿಕ ಸಮಸ್ಯೆಗಳನ್ನು, ಅಸಮಾನತೆಯನ್ನು ಎದುರಿಸುತ್ತಿದೆ. ಹೈದರಾಬಾದ್ ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ಅನೇಕ ಅಧ್ಯಾಯಗಳು ದೃಢಪಡಿಸಿವೆ. ಕರ್ನಾಟಕ ಸರ್ಕಾರದ ಯೋಜನೆ ಇಲಾಖೆಯು ಪ್ರಕಟಿಸಿರುವ ಕರ್ನಾಟಕದ ಮಾನವ ಅಭಿವೃದ್ಧಿ ಕುರಿತು ೧೯೯೯ ಮತ್ತು ೨೦೦೬ರ ವರದಿಗಳು ಇಂದು ನಮ್ಮ ಮುಂದಿವೆ. ಹಾಗೆಯೇ ಪ್ರಾದೇಶಿಕ ಅಸಮಾನತೆ ಕುರಿತಂತೆ ಅಧ್ಯಯನ ನಡೆಸಲು ಸರಕಾರವು ೨೦೦೦ರಲ್ಲಿ ನೇಮಿಸಿದ್ದ ಉನ್ನತಾಧಿಕಾರಿ ಸಮಿತಿಯು ಪ್ರದೇಶದ ಅಸಮಾನತೆಯನ್ನು ದೃಢಪಡಿಸಿದೆ.

ಡಾ. ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ತೋರಿಸಿದಂತೆ ಇಲ್ಲಿನ ೩೪ ತಾಲೂಕುಗಳ ಪೈಕಿ ೨೮ ತಾಲೂಕುಗಳು ಹಿಂದುಳಿದಿವೆ. ಹೀಗಾಗಿ ಇಲ್ಲಿ ಇಂದಿಗೂ ಅನಕ್ಷರತೆ, ನಿರುದ್ಯೋಗ, ಬಡತನ ತಾಂಡವಾಡುತ್ತಿದ್ದು, ತಲಾವರಮಾನ ಅತ್ಯಂತ ಕಡಿಮೆಯಿದೆ. ಉದಾಹರಣೆಗೆ,

ವಿಭಾಗವಾರು ಒಟ್ಟು ಕೆಲಸಗಳಲ್ಲಿ ಕೃಷಿ ಕಾರ್ಮಿಕರು

ಕ್ರ.ಸಂ.	ವಿಭಾಗ	ಒಟ್ಟು ಕೆಲಸಗಾರರಲ್ಲಿ ಕೃಷಿಕಾರ್ಮಿಕರ ಪ್ರಮಾಣ
೧.	ಗುಲಬರ್ಗಾ	೪೦.೬
೨.	ಬೆಳಗಾಂ	೩೩.೦
೩.	ಬೆಂಗಳೂರು	೧೯.೮
೪.	ಮೈಸೂರು	೧೮.೭

(ಬಸವರಾಜ ಟಿ. ಕುಮ್ಮೂರ, ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ, ಪು. ೨೧)[೨೯]

ಬಡತನ ರೇಖೆಗಿಂತ ಕೆಳಗಿರುವ ತಾಲೂಕುಗಳು

ಕ್ರ.ಸಂ.	ವಿಭಾಗ	ಒಟ್ಟು ತಾಲುಕು	ಬಡತನದ ತಾಲೂಕುಗಳ ಸಂಖ್ಯೆ
೧.	ಗುಲಬರ್ಗಾ	೩೪	೨೮
೨.	ಬೆಳಗಾಂ	೪೯	೨೦
೩.	ಬೆಂಗಳೂರು	೫೧	೨೧
೪.	ಮೈಸೂರು	೪೪	೦೯

(ಬಸವರಾಜ ಟಿ. ಕುಮ್ಮೂರ, ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ, ಪು. ೮)[೩೦]

ತಲಾ ವರಮಾನ

ಕ್ರ.ಸಂ.	ಜಿಲ್ಲೆಗಳು	ತಲಾವರಮಾನ (ರೂ.ಗಳಲ್ಲಿ)
೧.	ಬೀದರ್	೯,೯೦೨
೨.	ಗುಲಬರ್ಗಾ	೧೨,೨೫೯
೩.	ರಾಯಚೂರು	೧೦,೪೦೩

೪.	ಕೊಪ್ಪಳ	೧೨,೫೪೮
೫.	ಬಳ್ಳಾರಿ	೧೫,೭೬೦
೬.	ಬೆಂಗಳೂರು	೨೭,೯೮೪
೭.	ದಕ್ಷಿಣಕನ್ನಡ	೩೪,೨೯೬
೮.	ರಾಜ್ಯದ್ದು	೧೬,೬೫೪

(ಬಸವರಾಜ ಟಿ. ಕುಮ್ನೂರ, ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ, ಪು. ೭ ಮತ್ತು ೮)[೨೧]

ಆದರೂ, ಇತ್ತೀಚೆಗೆ ಸರಕಾರ ಕೈಗೊಂಡಿರುವ ಕಾರ್ಯಕ್ರಮಗಳು, ವಿಶೇಷ ಯೋಜನೆಗಳಿಂದ, ಅನುಷ್ಠಾನಗೊಂಡಿರುವ ಸಾರಿಗೆ ಸಂಪರ್ಕ, ನೀರಾವರಿ, ವಿದ್ಯುತ್‌ಚ್ಛಕ್ತಿ, ಬಾಂಕುಗಳು, ಶಿಕ್ಷಣ, ಆರೋಗ್ಯ ಮುಂತಾದ ಸೌಕರ್ಯಗಳು ಜನರಿಗೆ ಲಭ್ಯವಾಗುತ್ತಿವೆ. ಅದರಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಪ್ರತಿವರ್ಷ ದೊರಕುವ ವಿಶೇಷ ಅನುದಾನವನ್ನು ಬಳಸಿಕೊಂಡು ಹೊಸ ಹೊಸ ಯೋಜನೆಗಳನ್ನು ರೂಪಿಸಿ ಪ್ರದೇಶದ ಅಭಿವೃದ್ಧಿಯಲ್ಲಿ ತೊಡಗಿದೆ.

ಧಾರ್ಮಿಕ ಸ್ಥಿತಿಗತಿಗಳು

ಹೈದರಾಬಾದ್ ಕರ್ನಾಟಕ ಪ್ರದೇಶ ಅನೇಕ ಧರ್ಮಗಳ ನೆಲೆವೀಡಾಗಿದೆ. ಬಹುತೇಕ ಜನರ ಬಾಳನ್ನು ರೂಪಿಸುವಲ್ಲಿ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳನ್ನು ಸಂಘಟಿಸುವಲ್ಲಿ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಪ್ರತಿಯೊಂದು ಧರ್ಮವೂ ತನ್ನದೇ ಆದ ಪಾತ್ರವನ್ನು ವಹಿಸಿದೆ. ಇಲ್ಲಿ ವಾಸಿಸುವವರಲ್ಲಿ ಬಹುಪಾಲು ಜನರು ಹಿಂದೂಗಳು, ಮುಸ್ಲಿಂರು, ಬ್ರಾಹ್ಮಣರು, ನಾಯಕರು, ವಡ್ಡರು, ಉಪ್ಪಾರರು, ಗಾಣಿಗರು, ಮರಾಠರು, ರಜಪೂತರು, ರೆಡ್ಡಿಗಳು, ಕುರುಬರು, ಹೊಲೆಯರು ಮುಂತಾದ ಜಾತಿಗೆ ಸೇರಿದವರಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸಹ ಹೆಚ್ಚಾಗಿದ್ದಾರೆ. ಹೆಚ್ಚಾಗಿ ೧೨ನೇ ಶತಮಾನದಲ್ಲಿ ಶರಣರು ಮಾಡಿದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯಿಂದಾಗಿ, ಆಯಾ ರಂಗದಲ್ಲಿ ಬದಲಾವಣೆಗಳಾದವು ಹಾಗೂ ಅವರ ಪ್ರಭಾವ ತದನಂತರದ ಜನಜೀವನದ ಮೇಲೆ ಸಾಕಷ್ಟಾಗಿದೆ. ಇತರ ಧರ್ಮದವರಾದ ಮುಸ್ಲಿಂರು, ಕ್ರೈಸ್ತರು, ಫಾರಸಿಗಳು, ಯಹೂದಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಲ್ಲಿಸಿದ್ದಾರೆ. ಮುಸ್ಲಿಮರು ಗುಲಬರ್ಗಾ, ಯಾದಗಿರಿ, ಚಿತ್ತಾಪುರ, ಜೇವರ್ಗಿ, ಕೊಪ್ಪಳ, ಬೀದರ್, ಬಳ್ಳಾರಿಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಕ್ರಿಶ್ಚಿಯನ್ನರು ಹೆಚ್ಚಾಗಿ ಗುಲಬರ್ಗಾ ನಗರ, ಯಾದಗಿರಿ, ಬಳ್ಳಾರಿ, ಹೊಸಪೇಟೆಯಲ್ಲಿ ನೆಲೆಸಿದ್ದಾರೆ. ಬೀದರ್‌ನಲ್ಲಿ ಸಿಖ್‌ರ ಜನಸಂಖ್ಯೆಯು ಹೆಚ್ಚಾಗಿದ್ದು ಕೆಲವು ಕ್ಷೇತ್ರಗಳಲ್ಲಿ ಅವರ ಪ್ರಭಾವ ಎದ್ದು ಕಾಣುತ್ತದೆ.

ಜೈನ ಧರ್ಮದವರ ಜನಸಂಖ್ಯೆ ತೀರಾ ಕಡಿಮೆ ಇದೆ. ಸೇಡಮ್ ನಗರವು ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು. ಇದು ಜೈನ ಧರ್ಮದ ನೆಲೆಗಟ್ಟು ಆಗಿತ್ತೆಂಬುದಕ್ಕೆ

ಅಲ್ಲಿ ಸಿಗುವ ಅಳಿದುಳಿದ ಜಿನಮಂದಿರಗಳು, ಜಿನಬಿಂಬಗಳು, ಯಕ್ಷ, ಯಕ್ಷಿಣಿಯರ ವಿಗ್ರಹಗಳು ಸಾಕ್ಷಿಯಾಗಿವೆ. ಇಲ್ಲಿರುವ ಅನೇಕ ಶಾಸನಗಳಲ್ಲಿ ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿ ಇನ್ನಿತರ ಜಿನಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ. ಆಳಂದದಲ್ಲೂ ಜೈನರು ಹೆಚ್ಚಾಗಿ ನೆಲೆಸಿದ್ದಾರೆ. ಇವರು ಹೆಚ್ಚಾಗಿ ವ್ಯಾಪಾರ ಮತ್ತು ವಾಣಿಜ್ಯ ವೃತ್ತಿಯಲ್ಲಿ ತೊಡಗಿದ್ದಾರೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಬೌದ್ಧಧರ್ಮದ ಅನುಯಾಯಿಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇತ್ತು. ಆದರೆ ಇತ್ತೀಚೆಗೆ ಕೇಂದ್ರ ಕಾರ್ಮಿಕ ಸಚಿವರಾದ ಹಿರಿಯ ರಾಜಕಾರಣಿಗಳಾದ ಡಾ. ಎಂ. ಮಲ್ಲಿಕಾರ್ಜುನ ಖರ್ಗೆ ಅವರ ಆಸಕ್ತಿ ಹಾಗೂ "ಸಿದ್ಧಾರ್ಥ ವಿಹಾರ ಟ್ರಸ್ಟ್"ನ ನೇತೃತ್ವದಲ್ಲಿ ಗುಲಬರ್ಗಾ ನಗರದ ಹೊರವಲಯದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಸಮೀಪ "ಬುದ್ಧ ವಿಹಾರ"ವನ್ನು ನಿರ್ಮಿಸಲಾಗಿದೆ. ಈ ಬುದ್ಧವಿಹಾರವು ಏಷ್ಯಾದ ಬೃಹತ್ ವಿಹಾರಗಳಲ್ಲಿ ಒಂದಾಗಿದೆ. ಬುದ್ಧ ವಿಹಾರದ ಸ್ಥಾಪನೆ ನಂತರ ಅನೇಕ ಬೌದ್ಧ ಸನ್ಯಾಸಿಗಳು ಅನುಯಾಯಿಗಳು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಇನ್ನು ಕೆಲವರು ಇಲ್ಲಿಯೇ ಬಂದು ನೆಲೆಸಿದ್ದಾರೆ. ಅಲ್ಲದೆ ಸ್ವಲ್ಪ ಪ್ರಮಾಣದಲ್ಲಿ ಕೆಲವು ಹಿಂದುಳಿದ ವರ್ಗದವರು ಸಾಮಾಜಿಕ ಸ್ಥಾನಮಾನ ಪಡೆಯಲು ಬೌದ್ಧ ಧರ್ಮಕ್ಕೆ ಮತಾಂತರವಾಗುತ್ತಿದ್ದಾರೆ. ಹೀಗಾಗಿ ಬೌದ್ಧಧರ್ಮದ ಅನುಯಾಯಿಗಳು ಅಲ್ಲಲ್ಲಿ ಕಂಡು ಬರುತ್ತಾರೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಹಿಂದೂಗಳ, ಮುಸ್ಲಿಂರ ಹಬ್ಬಗಳು ಆಚರಣೆಯಲ್ಲಿವೆ. ಜೊತೆಗೆ ಸಂಪ್ರದಾಯ ಮತ್ತು ಮೂಢನಂಬಿಕೆ ಆಧಾರಿತ, ಅರಳಿ ಮರ ಹಾಗೂ ಬನ್ನಿ ಮರಕ್ಕೆ ಪೂಜೆ ಸಲ್ಲಿಸುವ, ನಾಗಪೂಜೆ, ಮಾರಿಮಸಣಿ ಮೊದಲಾದ ಗ್ರಾಮದೇವತೆಗಳ ಹರಕೆ ಹೊತ್ತು ಆರಾಧಿಸುವ ಸಾಂಪ್ರದಾಯಿಕ ಆಚರಣೆಗಳು ಬಹಳ ಪ್ರಾಚೀನ ಕಾಲದಿಂದಲೂ ಇಲ್ಲಿ ರೂಢಿಯಲ್ಲಿವೆ. ಅನೇಕ ಭಿನ್ನ ಮತಧರ್ಮಗಳ ಅನುಯಾಯಿಗಳು ಜಿಲ್ಲೆಯಲ್ಲಿದ್ದರೂ ಕೂಡಾ ಈ ಭಾಗವು ಮತಸಹಿಷ್ಣುತೆಗೆ ಹೆಸರಾಗಿದೆ. ಇಲ್ಲಿ ಸರ್ವಧರ್ಮ ಸಮನ್ವಯ ಕ್ಷೇತ್ರಗಳು ಇವೆ. ಗುಲಬರ್ಗಾ ನಗರದಲ್ಲಿರುವ ಶರಣಬಸವೇಶ್ವರ ದೇವಾಲಯ, ಖಾಜಾ ಬಂದೇ ನವಾಜರ ದರ್ಗಾ, ಹಿಂದೂ-ಮುಸ್ಲಿಂರ ಐಕ್ಯತೆಯ ತಾಣಗಳಾಗಿವೆ. ಪ್ರತಿ ವರ್ಷವೂ ಇಲ್ಲಿ ನಡೆಯುವ ಶರಣಬಸವೇಶ್ವರರ ಜಾತ್ರೆ ಮತ್ತು 'ಉರುಸ್' - ಹಬ್ಬಗಳು ಹಿಂದೂ, ಮುಸ್ಲಿಂ ಹಾಗೂ ಎಲ್ಲಾ ಜನಾಂಗದ ಸಮನ್ವಯತೆಗೆ ಸಾಕ್ಷಿಯಾಗಿವೆ. ಈ ಎರಡು ಧಾರ್ಮಿಕ ಕೇಂದ್ರಗಳು ಧರ್ಮ ಸೌಹಾರ್ದತೆಗೆ ಮಾದರಿ ಕೇಂದ್ರಗಳಾಗಿವೆ.

ಹಾಗೆಯೇ ಬೀದರ್‌ನ ಸಿಖ್‌ರ ಗುರುದ್ವಾರ ಎಲ್ಲಾ ವರ್ಗದವರನ್ನು ಆಕರ್ಷಿಸುವ ಧಾರ್ಮಿಕ ಕೇಂದ್ರವಾಗಿದೆ. ಅದೇ ರೀತಿ ಬಸವಕಲ್ಯಾಣದ ಭಾಲ್ಕಿಯ ಪಟ್ಟಾಧ್ಯಕ್ಷರಾದ ಡಾ. ಚನ್ನಬಸವ ಪಟ್ಟದೇವರು ಹಾಗೂ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಶಿವಯೋಗಿಗಳು, ಶ್ರೀ ಗವಿಮಠ, ಸಾಮಾಜಿಕ ಸಾಮರಸ್ಯ ಮೂಡಿಸುವಲ್ಲಿ ವೈಚಾರಿಕ ಕ್ರಾಂತಿ ಪ್ರಸರಿಸುವ ಕಾರ್ಯಗಳಲ್ಲಿ ನಿರತರಾಗಿದ್ದಾರೆ.

೨.೪. ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ

ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಅತ್ಯಂತ ಪ್ರಾಚೀನ ಸ್ಥಳವೆಂದರೆ ಗುಲಬರ್ಗಾ ಜಿಲ್ಲೆಯ ಇಂದಿನ ಚಿತ್ತಾಪುರ ತಾಲೂಕಿನ 'ನಾಗಾಯಿ'. ಕ್ರಿ.ಶ. ೮, ೯ನೇ ಶತಮಾನದ ಪೂರ್ವಾರ್ಧದಲ್ಲಿ ನಾಗಾಯಿ ವಿಶ್ವವಿದ್ಯಾಲಯವು ಉನ್ನತಮಟ್ಟದ ಶಿಕ್ಷಣ ಸಂಸ್ಥೆಯಾಗಿತ್ತು. ಹಾಗೂ ವಿಶ್ವಮಟ್ಟದ ಜ್ಞಾನ ಪ್ರಸಾರದ ಕೇಂದ್ರವಾಗಿತ್ತು. ನಂತರ ಮಧ್ಯಯುಗದಲ್ಲಿ ಮಹಮ್ಮದೀಯ ಅರಸರ ಆಳ್ವಿಕೆಯಲ್ಲಿ ಇಲ್ಲಿ ಇಸ್ಲಾಂ ಮಾದರಿಯ ಶಿಕ್ಷಣ ವ್ಯವಸ್ಥೆ ಜಾರಿಯಾಯಿತು. ಬೀದರ್‌ನ ಬಹುಮನಿ ಸುಲ್ತಾನರ ಪ್ರಧಾನಮಂತ್ರಿಯಾಗಿದ್ದ ಮಹಮದ್ ಗವಾನ್ ಶಿಕ್ಷಣ ಪ್ರೇಮಿಯಾಗಿದ್ದು ಅನೇಕ 'ಮಕ್ತಾಬ'(ಪ್ರಾಥಮಿಕ ಶಿಕ್ಷಣ)ಗಳನ್ನು ತೆರೆದನು. ಬೀದರ್‌ನಲ್ಲಿ ಉನ್ನತ ಶಿಕ್ಷಣ ನೀಡುವ ಮದರಸ ಅಥವಾ ಕಾಲೇಜು ಪ್ರಾರಂಭಿಸಿದನು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಶಿಕ್ಷಣ ಕೇವಲ ಮಹಮ್ಮದೀಯರಿಗೆ ಮಾತ್ರ ಲಭ್ಯವಿತ್ತು. ಹಿಂದುಗಳು ತಮ್ಮ ತಮ್ಮ ನಿವಾಸಗಳಲ್ಲೋ ಅಥವಾ ಮಠ ಮಾನ್ಯಗಳಲ್ಲೋ ಜ್ಞಾನಾರ್ಜನೆ ಮಾಡಿಕೊಳ್ಳುತ್ತಿದ್ದರು. ಮಹಿಳಾ ಶಿಕ್ಷಣ ಆ ಕಾಲದಲ್ಲಿ ತೀರಾ ಅಪರೂಪ ವಾಗಿತ್ತು. 'ಪರ್ದಾ' ಪದ್ಧತಿ ಜಾರಿಯಲ್ಲಿದ್ದು ಕೇವಲ ರಾಜಮನೆತನದ ಹಾಗೂ ಅವರ ಬಂಧುಗಳಾದ ಸ್ತ್ರೀಯರಿಗೆ ಮಾತ್ರ ಶಿಕ್ಷಣ ಅವರವರ ನಿವಾಸಗಳಲ್ಲಿ ದೊರೆಯುತ್ತಿತ್ತು.

ಶೈಕ್ಷಣಿಕ ಪ್ರಗತಿಯ ವರದಿಗಳಲ್ಲಿ ಒಂದಾದ ೧೮೫೪ರ ಚಾರ್ಲ್ಸ್‌ವುಡ್ ವರದಿಯ ಅಂಶಗಳು ಹೈದರಾಬಾದ್ ರಾಜ್ಯದಲ್ಲೂ ಜಾರಿಯಾದ ಪರಿಣಾಮವಾಗಿ ೧೮೬೯ರಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ಸ್ವತಂತ್ರವಾದ 'ಶಿಕ್ಷಣ ಇಲಾಖೆ' ಪ್ರಾರಂಭವಾಯಿತು. ಇದರ ಅಡಿಯಲ್ಲಿ ಪ್ರತಿ ತಾಲೂಕಿಗೆ ಎರಡರಂತೆ ಜಿಲ್ಲಾ ಕೇಂದ್ರದಲ್ಲಿ ಒಂದರಂತೆ ಉರ್ದು ಮಾಧ್ಯಮದ ಶಾಲೆಗಳು ಸ್ಥಾಪನೆಗೊಂಡವು. ೧೮೭೫ರಲ್ಲಿ ಗುಲಬರ್ಗಾದಲ್ಲಿ 'ಆಂಗ್ಲ-ದೇಸೀಯ' ಮಾಧ್ಯಮದ ಶಾಲೆಯೊಂದು ತೆರೆಯಲ್ಪಟ್ಟಿತು. ಈ ಶಾಲೆಯಲ್ಲಿ ಉರ್ದು ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿದ್ದು ಆಂಗ್ಲ ಭಾಷೆಯನ್ನು ಒಂದು ವಿಷಯವನ್ನಾಗಿ ಬೋಧಿಸಲಾಗುತ್ತಿತ್ತು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೊಟ್ಟಮೊದಲ ಪ್ರೌಢ ಶಾಲೆ ೧೮೮೫-೮೬ರಲ್ಲಿ ಗುಲಬರ್ಗಾದಲ್ಲೂ ಹಾಗೂ ೧೮೯೧ರಲ್ಲಿ ಬೀದರ್‌ನಲ್ಲೂ ಆರಂಭವಾದವು. ೧೮೯೦ ರಿಂದ ಉನ್ನತ ಪ್ರಾಥಮಿಕ ಹಂತದ ಶಿಕ್ಷಣದ ನಂತರ ವಿಶೇಷ 'ಮುಲ್ಕೀ' ಪರೀಕ್ಷೆ ನಡೆಸುವ ವ್ಯವಸ್ಥೆ ಪ್ರಾರಂಭವಾಯಿತು. ೧೯೦೪ರಲ್ಲಿ ತಾಂತ್ರಿಕ ಮತ್ತು ಇಂಜಿನಿಯರಿಂಗ್ ಸ್ವರೂಪದ ಸಂಸ್ಥೆಗಳು ಪ್ರಾರಂಭವಾಗುವುದರ ಮೂಲಕ ಪ್ರಪ್ರಥಮವಾಗಿ ಇಲ್ಲಿನ ಜನತೆಗೆ ವೃತ್ತಿಪರ ಶಿಕ್ಷಣ ದೊರೆಯಿತು. ೧೯೦೧ರಲ್ಲಿ ನಿಜಾಮರ ರಾಜ್ಯದಲ್ಲಿ ಮೆಟ್ರಿಕುಲೇಷನ್ ಬೋರ್ಡ್ ಅಸ್ತಿತ್ವಕ್ಕೆ ಬಂದಿತು. ಈ ಭಾಗದ ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಂದು ಪ್ರಮುಖ ಹೆಜ್ಜೆ ಎಂದರೆ ೧೯೧೮ರಲ್ಲಿ ಹೈದರಾಬಾದಿನಲ್ಲಿ 'ಉಸ್ಮಾನಿಯ ವಿಶ್ವವಿದ್ಯಾಲಯ' ಸ್ಥಾಪನೆಗೊಂಡಿತು. ಹೈದರಾಬಾದಿನ ನಿಜಾಮರ ಆಡಳಿತ ಭಾಷೆ ಉರ್ದು ಆಗಿದ್ದರಿಂದ ಶಿಕ್ಷಣವನ್ನು ಉರ್ದು ಭಾಷೆಯಲ್ಲೇ ನೀಡಲಾಗುತ್ತಿತ್ತು. ಇದರಿಂದಾಗಿ ಹಿಂದೂಗಳು ಖಾಸಗಿಯಾಗಿ ಮೋಡಿ ಅಥವಾ ಮರಾಠಿ ಭಾಷೆಯಲ್ಲಿ ಕಲಿಯಬೇಕಾಗಿತ್ತು.

೨೦ನೇ ಶತಮಾನದ ಪ್ರಾರಂಭದಲ್ಲಿ ಇಲ್ಲಿ ವ್ಯವಸ್ಥಿತವಾದ ಖಾಸಗಿ ಶಿಕ್ಷಣವೂ ಕೂಡ ಜಾರಿಗೊಂಡಿತು. ಇಲ್ಲಿನ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿದ್ದ ಅನೇಕ ಜನನಾಯಕರ ಶ್ರಮ ಹಾಗೂ ಮುಂದಾಲೋಚನೆಯಿಂದ ಹಲವಾರು ವಿದ್ಯಾ ಸಂಸ್ಥೆಗಳು ತೆರೆಯಲ್ಪಟ್ಟವು. ಅವುಗಳಲ್ಲಿ ಮುಖ್ಯವೆಂದರೆ "ನೂತನ ವಿದ್ಯಾಲಯ ಸಂಸ್ಥೆ ಮತ್ತು ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ. ೧೯೦೭ರಲ್ಲಿ ನೂತನ ವಿದ್ಯಾಲಯ ಸಂಸ್ಥೆ ಸ್ಥಾಪನೆಗೊಂಡು ಅದೇ ವರ್ಷ ಮರಾಠಿ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಿತು. ಹೀಗಾಗಿ ಖಾಸಗಿಯಾಗಿ ದೇಶೀಯ ಮಾಧ್ಯಮದಲ್ಲಿ ಪ್ರಪ್ರಥಮವಾಗಿ ಶಾಲೆಯನ್ನು ತೆರೆದ ಶ್ರೇಯಸ್ಸು ಈ ಸಂಸ್ಥೆಗೆ ಸಲ್ಲುತ್ತದೆ. ಹಾಗೆಯೇ ೧೯೧೪ರಲ್ಲಿ ಶರಣಬಸವೇಶ್ವರ ಸಂಸ್ಥಾನದ ೭ನೇ ಪೀಠಾಧಿಪತಿಯಾದ ಪೂಜ್ಯ ದೊಡ್ಡಪ್ಪ ಅಪ್ಪನವರು ಜಿಲ್ಲಾ ಕೇಂದ್ರದಲ್ಲಿ ಸಾರ್ವಜನಿಕ ವಾಚನಾಲಯ ಒಂದನ್ನು ತೆರೆದರು. ಹಾಗೂ ಇಲ್ಲಿನ ಜನತೆಯಲ್ಲಿ ಶೈಕ್ಷಣಿಕ ಹಾಗೂ ರಾಜಕೀಯ ಪ್ರಜ್ಞೆ ಮೂಡಿಸುವ ಉದ್ದೇಶಕ್ಕಾಗಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಶೈಕ್ಷಣಿಕ ಬೆಳವಣಿಗೆಗೆ ದಾರಿ ಮಾಡಿದರು.

ಇದೇ ಸಮಯದಲ್ಲಿ ರಾಯಚೂರಿನಲ್ಲಿ, ಶಿಕ್ಷಣ ತಜ್ಞರೂ, ಶಿಕ್ಷಕರು ಸಮಾಜ ಸುಧಾರಕರೂ, ಸ್ವಾತಂತ್ರ್ಯ ಹೋರಾಟಗಾರರು ಆದ ಪಂಡಿತ ತಾರಾನಾಥರು ೧೯೨೦ರಲ್ಲಿ ತಾರಾನಾಥ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಇದರ ಆಶ್ರಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಮುಂದೆ ಇದೇ ಸಂಸ್ಥೆಯ ಅಡಿಯಲ್ಲಿ ಹಮದರ್ದ್ ಪ್ರೌಢಶಾಲೆ, ಎಲ್.ವಿ.ಡಿ. ಮಹಾವಿದ್ಯಾಲಯ, ಬಿ.ಆರ್.ಬಿ. ವಾಣಿಜ್ಯ ಮಹಾವಿದ್ಯಾಲಯ, ಎಸ್.ಎಸ್.ಆರ್.ಜಿ. ಮಹಿಳಾ ಮಹಾವಿದ್ಯಾಲಯ ಮುಂತಾದವು ಸ್ಥಾಪನೆಯಾದವು. ಪೂಜ್ಯ ದೊಡ್ಡಪ್ಪ ಅಪ್ಪನವರು ಗುಲಬರ್ಗಾದಲ್ಲಿ ೧೯೩೪ರಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡ ಮಾಧ್ಯಮದಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ಈ ಭಾಗದ ಸ್ತ್ರೀ ಶಿಕ್ಷಣದ ಹರಿಕಾರರೆಂದೇ ಹೆಸರಾಗಿದ್ದಾರೆ. ಹೀಗೆ ಹೈದರಾಬಾದ ಕರ್ನಾಟಕದಲ್ಲಿ ಶಿಕ್ಷಣದ ಮಟ್ಟ ಹೆಚ್ಚುತ್ತಾ ಹೋಯಿತು. ಸುಮಾರು ೧೯೬೧ರವರೆಗೆ ಹೈದರಾಬಾದ್ ಕರ್ನಾಟಕದ ಸಾಕ್ಷರತಾ ಪ್ರಮಾಣವು ಕೆಳಗಿನಂತಿದೆ.

೧೯೬೧ ರವರೆಗೆ ಕರ್ನಾಟಕದ ವಿವಿಧ ಪ್ರಾಂತಗಳ ಸಾಕ್ಷರತೆ

೧.	ಕೊಡಗು ಕರ್ನಾಟಕ	೨೭.೨
೨.	ಮದ್ರಾಸ್ ಕರ್ನಾಟಕ	೨೩.೩
೩.	ಮುಂಬೈ ಕರ್ನಾಟಕ	೨೨.೩
೪.	ಮೈಸೂರು ಕರ್ನಾಟಕ	೨೦.೬
೫.	ಹೈದರಾಬಾದ್ ಕರ್ನಾಟಕ	೮.೫

(ಮೂಲ : ವೈಜನಾಥ ಪಾಟೀಲ, ಹೈದ್ರಾಬಾದ ಕರ್ನಾಟಕ ಅಸಮಾನತೆಯ ನೋಟ, ಪು. ೧೬)[೩೨]

ಹೈದರಾಬಾದ್ ಕರ್ನಾಟಕದಲ್ಲಿ ಸ್ತ್ರೀ-ಪುರುಷರ ಸಾಕ್ಷರತಾ ಪ್ರಮಾಣ

ಕ್ರ.ಸಂ.	ವರ್ಷ	ಪುರುಷರು (ಪ್ರತಿಶತ)	ಸ್ತ್ರೀಯರು (ಪ್ರತಿಶತ)
೧.	೧೯೨೧	೨.೮	೦.೨
೨.	೧೯೩೧	೫.೮	೧.೨
೩.	೧೯೪೧	೧೨.೪	೩.೧
೪.	೧೯೫೧	೧೪.೭	೭.೬
೫.	೧೯೬೧	೧೯.೨	೧೦.೦೦

(ಮೂಲ : ಸೆನ್ಸ್‌ಸ್ ಆಫ್ ಇಂಡಿಯಾ, ೧೯೭೧, ಸೀರೀಸ್ ೧೪, ಪಾರ್ಟ್ II ಎ, ಜನರಲ್ ಪಾಪುಲೇಶನ್ ಟೇಬಲ್ಸ್, ಮೈಸೂರು)[೩೩]

೧೯೬೧ರ ಜನಗಣತಿಯ ಸಮಯದಲ್ಲಿ ರಾಜ್ಯದ ಇತರೆಡೆ ಮಹಿಳಾ ಸಾಕ್ಷರತೆ ಶೇ. ೧೮ ರಿಂದ ೧೯ ರಷ್ಟು ಇದ್ದ ಸಮಯದಲ್ಲೇ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೇವಲ ೧೦ರಷ್ಟು ಮಹಿಳೆಯರು ಸಾಕ್ಷರರಾಗಿದ್ದರು. ಅಂದರೆ ಉಪ-ಸಹಾರಾ ಆಫ್ರಿಕನ್ ದೇಶಗಳಲ್ಲಿರುವ ಮಹಿಳಾ ಮತ್ತು ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ, ಇಲ್ಲಿನ ಸಾಕ್ಷರತಾ ಪ್ರಮಾಣ ಕಡಿಮೆಯಿದೆ.

ಉದಾ :-

ಮಹಿಳಾ ಮತ್ತು ಪುರುಷರ ಸಾಕ್ಷರತಾ ದರ (೧೯೬೧)

ಕ್ರ.ಸಂ.	ಜಿಲ್ಲೆಗಳು	ಪುರುಷರು (ಪ್ರತಿಶತ)	ಸ್ತ್ರೀಯರು (ಪ್ರತಿಶತ)
೧.	ಸಹಾರ ಆಫ್ರಿಕನ್	೬೩.೯೯	೪೦.೦೦
೨.	ಬೀದರ್	೫೯.೦೦	೩೧.೦೦
೩.	ಗುಲಬರ್ಗಾ	೫೨.೦೦	೨೪.೦೦
೪.	ರಾಯಚೂರು	೫೦.೦೦	೨೨.೦೦

(ಮೂಲ : ಸೆನ್ಸ್‌ಸ್ ಆಫ್ ಇಂಡಿಯಾ, ೧೯೭೧, ಸೀರೀಸ್ ೧೪, ಜನರಲ್ ಪಾಪುಲೇಶನ್ ಟೇಬಲ್ಸ್, ಮೈಸೂರು)[೩೪]

ರಾಜ್ಯಗಳ ಪುನರ್‌ವಿಂಗಡಣೆಯ ನಂತರ ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ಅನೇಕ ಶಾಲಾ-ಕಾಲೇಜುಗಳು ಸ್ಥಾಪಿತವಾದವು. ಗುಲಬರ್ಗಾದಲ್ಲಿ ನೂತನ ವಿದ್ಯಾಲಯ, ಶರಣಬಸವೇಶ್ವರ ಸಂಸ್ಥೆ. ಹೆಚ್.ಕೆ.ಇ. ಸಂಸ್ಥೆ, ಪೀಪಲ್ಸ್ ಶಿಕ್ಷಣ ಸಂಸ್ಥೆ, ರೋಟರಿ ಕ್ಲಬ್, ವಿಜಯ ವಿದ್ಯಾಲಯ, ೧೯೮೧ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಸ್ಥಾಪನೆ ಹಾಗೂ ಯಾದಗಿರಿಯಲ್ಲಿ ಚಂದ್ರಶೇಖರ ಎಜ್ಯುಕೇಶನ್ ಸೊಸೈಟಿ, ೧೯೮೦ರಲ್ಲಿ ಸೇಡಂನಲ್ಲಿ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ, ಖಾಜಾ ಎಜ್ಯುಕೇಶನ್ ಸೊಸೈಟಿ ಮತ್ತು ರಾಯಚೂರಿನಲ್ಲಿ ತಾರಾನಾಥ ಶಿಕ್ಷಣ ಸಂಸ್ಥೆಯ ಜೊತೆಗೆ ಟಾಗೋರ್ ಸ್ಮಾರಕ ಸೀತಾ ಸುಬ್ಬರಾಜು ಸ್ಮಾರಕ ವಿದ್ಯಾಲಯ, ಹೆಚ್.ಸಿ.ಎಂ.ಎಸ್.ಕೆ., ಮೆಥೋಡಿಸ್ಟ್ ಸಂಸ್ಥೆ, ಶ್ರೀ ಸೂಗೂರೇಶ್ವರ ಸೇವಾ ಸಮಿತಿ ಟ್ರಸ್ಟ್, ಸ್ಥಾಪನೆಯಡಿ ಶಾಲಾ ಕಾಲೇಜುಗಳು ಆರಂಭವಾದವು. ಇನ್ನು ಕೊಪ್ಪಳದಲ್ಲಿ ಶ್ರೀ ಗವಿಸಿದ್ಧೇಶ್ವರ ಶಿಕ್ಷಣ ಸಂಸ್ಥೆಯಡಿಯಲ್ಲಿ ಶಾಲೆ, ಕಾಲೇಜುಗಳು, ಆಯುರ್ವೇದ ಕಾಲೇಜು ಪ್ರಾರಂಭಗೊಂಡವು. ಬಳ್ಳಾರಿ ಜಿಲ್ಲೆಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘ, ಉಜ್ಜನಿಯ ಶ್ರೀಜಗದ್ಗುರ ಸದ್ಧರ್ಮ ಸಿಂಹಾಸನ ಜ್ಞಾನ ಗುರು ವಿದ್ಯಾಪೀಠ, ಟಿ.ಎಂ.ಎ.ಇ. ಸಂಸ್ಥೆ ಹರಪನಹಳ್ಳಿ, ಹೊಸಪೇಟೆಯ ಥಿಯೋಸಾಫಿಕಲ್ ಸೊಸೈಟಿ, ಎಸ್.ಇ.ಎಸ್. ಶಿಕ್ಷಣ ಸಂಸ್ಥೆ ಸಂಡೂರು ಹಾಗೂ ಶ್ರೀ ಸಿದ್ಧಲಿಂಗೇಶ್ವರ ಶಿಕ್ಷಣ ಸಂಸ್ಥೆ ಕಾನಮಡುಗು ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ಶಿಕ್ಷಣದ ಬೆಳವಣಿಗೆಗೆ ಕಾರಣವಾಗಿವೆ. ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯ ಜನರಲ್ಲಿ, ಹೊಸ ಪೀಳಿಗೆಯ ಯುವಕರಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಮಹಿಳೆಯರಲ್ಲಿ ಶಿಕ್ಷಣದ ಮಹತ್ವದ ಅರಿವು, ಜಾಗೃತಿ ಮೂಡುತ್ತಿರುವುದನ್ನು ಗಮನಿಸಬಹುದಾಗಿದೆ. ಎಲ್ಲಾ ವರ್ಗದ ಜನರಲ್ಲಿ ಜ್ಞಾನಾರ್ಜನೆಯ ಹಸಿವು ಹೆಚ್ಚಾದಂತೆ ಹೊಸ ಹೊಸ ವಿದ್ಯಾ ಸಂಸ್ಥೆಗಳು, ಶಾಲಾ ಕಾಲೇಜುಗಳು, ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜುಗಳು ತಲೆ ಎತ್ತುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಕ್ರಾಂತಿ ಎನ್ನಬಹುದು. .

ಹೈದರಾಬಾದ್ ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆ ಶೈಕ್ಷಣಿಕವಾಗಿ ಮುಂದುವರೆದಿದೆ ಎಂದು ಹೇಳಬಹುದು. ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಹಾಗೂ ಬ್ರಿಟಿಷ್ ಆಡಳಿತದ ಪ್ರಭಾವದಿಂದಾಗಿ ಕ್ರೈಸ್ತರ ಕಾನ್ವೆಂಟ್‌ಗಳು, ಸರ್ಕಾರಿ ಬೋರ್ಡ್ ಶಾಲೆಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಪ್ರಸಾರದಲ್ಲಿ ತೊಡಗಿದ್ದರಿಂದ ಪ್ರಾಥಮಿಕ ಹಂತದಿಂದಲೇ ಶಿಕ್ಷಣಕ್ಕೆ ಉತ್ತಮ ಅಡಿಪಾಯ ದೊರೆತಂತಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿಯೇ ಸ್ಥಾಪಿಸಲ್ಪಟ್ಟ ಬೋರ್ಡ್ ಮತ್ತು ಮುನಿಸಿಪಲ್ ಶಾಲೆಗಳು ನಂತರ ಸರಕಾರಿ ಶಾಲೆಗಳಾಗಿ ಪರಿವರ್ತನೆಗೊಂಡು ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆಗೆ ಭದ್ರ ಬುನಾದಿಯಾಗಿವೆ. ಸಾಮಾನ್ಯರಿಗೂ ಶಿಕ್ಷಣ ದೊರಕಲು ಸಾಧ್ಯವಾಗುವಂತೆ ಮಾಡಿವೆಯಲ್ಲದೇ ಪ್ರಸ್ತುತ ಇಂದಿಗೂ ಈಶಾಲೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಉದಾಹರಣೆಗೆ ಬಳ್ಳಾರಿಯಲ್ಲಿರುವ ಹಳೇ ಮುನಿಸಿಪಲ್ ಶಾಲೆ, ಸರಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಉತ್ತಮ ಫಲಿತಾಂಶ ನೀಡುತ್ತಿವೆ. ಇದರ ಜೊತೆಗೆ ವಿಮ್ಸ್ ಎಂದು ಕರೆಯಲ್ಪಡುವ ಸರಕಾರಿ ವೈದ್ಯ ಶಿಕ್ಷಣ ಕಾಲೇಜು, ತಾರಾನಾಥ ಆಯುರ್ವೇದಿಕ್ ಕಾಲೇಜು, ಸರಕಾರಿ ಪಾಲಿಟೆಕ್ನಿಕ್, ಶಿಕ್ಷಕರ ತರಬೇತಿ ಕೇಂದ್ರಗಳು,

ಹಲವಾರು ದಶಕಗಳಿಂದ ಜಿಲ್ಲೆಯಲ್ಲಿ ಶೈಕ್ಷಣಿಕ ರಂಗದ ಮೂಲಕ ಶಿಕ್ಷಣ ಸೇವೆಯ ಮೂಲಕ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ.

ಶತಮಾನೋತ್ಸವ ಆಚರಿಸುವ ಅಂಚಿನಲ್ಲಿರುವ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘವು ೧೯೧೮ರಿಂದಲೇ ಶೈಕ್ಷಣಿಕ ಪ್ರಸಾರ ಕೈಗೊಂಡಿದ್ದು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಸೇರಿದಂತೆ ಮಹಿಳಾ ಶಾಲೆ ಕಾಲೇಜುಗಳು, ವೃತ್ತಿಪರ ಸಂಸ್ಥೆಗಳು, ತಾಂತ್ರಿಕ ಕಾಲೇಜುಗಳು, ತರಬೇತಿ ಸಂಸ್ಥೆಗಳು ಸೇರಿದಂತೆ ಸುಮಾರು ೪೦ ಸಂಸ್ಥೆಗಳನ್ನು ನಡೆಸುತ್ತಾ ಶಿಕ್ಷಣ ಪ್ರಸಾರದ ಮೂಲಕ ಸಮಾಜ ಪರಿವರ್ತನೆ ಕಾರ್ಯದಲ್ಲಿ ತನ್ನದೇ ಪಾತ್ರ ವಹಿಸಿದ್ದು ಗುಣಮಟ್ಟದ ಶಿಕ್ಷಣವನ್ನು ಸಾಮಾನ್ಯರಿಗೂ ನೀಡುತ್ತಾ ಸಾಮಾಜಿಕ ಪ್ರಗತಿಗೆ, ಸುಧಾರಣೆಗೆ ದಾರಿ ಮಾಡಿಕೊಡುತ್ತಿದೆ.

೧೯೭೧ ರಿಂದ ೨೦೧೧ ರವರೆಗೆ, ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣದ ಸ್ಥಿತಿಗತಿಗಳು ಹಾಗೂ ಜಿಲ್ಲೆಗಳ ಅಂಕಿ-ಅಂಶಗಳನ್ನು ಅವಲೋಕಿಸಿದಾಗ, ರಾಜ್ಯದಲ್ಲಿಯೇ ಅತಿ ಹೆಚ್ಚು ಅನಕ್ಷರಸ್ಥರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿರುವುದು ಕಂಡು ಬರುತ್ತದೆ. ಹೈದರಬಾದ್ ಕರ್ನಾಟಕ ಪ್ರದೇಶದ ರಾಯಚೂರು ಜಿಲ್ಲೆ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಸಾಕ್ಷರತಾ ಪ್ರಮಾಣ ಹೊಂದಿರುವ ಜಿಲ್ಲೆಯಾಗಿದೆ. ಗುಲಬರ್ಗಾ ವಿಭಾಗದ ಸಾಕ್ಷರತಾ ಪ್ರಮಾಣವು ಉಳಿದೆಲ್ಲಾ ವಿಭಾಗಗಳಿಗಿಂತ ಕೆಳಮಟ್ಟದಲ್ಲಿದೆ. ಸ್ವಾತಂತ್ರ್ಯನಂತರ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಕ್ಷರತಾ ಪ್ರಮಾಣದ ಅಂಕಿ-ಅಂಶಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಸಾಕ್ಷರತಾ ಪ್ರಮಾಣ

ಕ್ರ.ಸಂ.	ಜಿಲ್ಲೆಗಳು	೧೯೭೧	೧೯೮೧	೧೯೯೧	೨೦೦೧	೨೦೧೧
೦೧.	ಕರ್ನಾಟಕ (ರಾಜ್ಯ)	೩೧.೫೯	೩೮.೪೬	೫೬.೦೪	೬೭.೦೪	೭೫.೬೦
೦೨.	ಬೆಂಗಳೂರು	೩೫.೩೧	೪೩.೪೨	೬೧.೫೦	೨೩.೨೫	೭೮.೨೯
೦೩.	ಮೈಸೂರು	೩೨.೪೪	೪೦.೦೪	೫೮.೪೯	೬೯.೬೨	೭೨.೫೬
೦೪.	ಬೀದರ್	೨೦.೦೨	೨೯.೬೪	೪೫.೧೧	೬೧.೯೮	೭೧.೦೧
೦೫.	ಗುಲಬರ್ಗಾ	೧೮.೭೪	೨೪.೯೪	೩೮.೫೪	೫೦.೬೫	೬೫.೬೫
೦೬.	ರಾಯಚೂರು	೩೦.೩೦	೩೭.೭೨	೩೫.೯೬	೪೯.೫೪	೬೦.೪೬
೦೭.	ಬಳ್ಳಾರಿ	೨೫.೧೨	೩೦.೬೪	೪೫.೫೭	೬೦.೬೪	೬೭.೮೫

(ಮೂಲ : ಸೆನ್ಸ್‌ಸ್ ಆಫ್ ಇಂಡಿಯಾ, ೧೯೯೧, ಸೀರೀಸ್ ೧೧, ಕರ್ನಾಟಕ ಪಾರ್ಟ್ II.ಬಿ. ಪ್ರೈಮರಿ ಸೆನ್ಸ್‌ಸ್ ಅಬ್‌ಸ್ಟ್ರ್ಯಾಕ್ಟ್, ಡೈರಕ್ಟೊರೇಟ್ ಆಫ್ ಸೆನ್ಸ್‌ಸ್ ಆಪರೇಷನ್ಸ್, ಕರ್ನಾಟಕ.
ಸೆನ್ಸ್‌ಸ್ ಆಫ್ ಇಂಡಿಯಾ, ೨೦೧೧, ಆಫೀಸ್ ಆಫ್‌ದ ರಿಜಿಸ್ಟರ್ ಜನರಲ್ ಅಂಡ್ ಸೆನ್ಸ್‌ಸ್ ಕಮೀಶನರ್ ಇಂಡಿಯಾ)[೩೫]

ಹೀಗೆ ಹೈದರಾಬಾದ್ ಕರ್ನಾಟಕ ಸಾಕ್ಷರತಾ ಪ್ರಮಾಣವು ರಾಜ್ಯ ಮತ್ತು ಉಳಿದೆಲ್ಲಾ ವಿಭಾಗಗಳಿಗಿಂತ ಕೆಳಮಟ್ಟದಲ್ಲಿದೆ.

೨೦೦೧ರ ಜನಗಣತಿಯ ಅಂಕಿಅಂಶಗಳಂತೆ ಹೈದರಾಬಾದ್ ಕರ್ನಾಟಕದ ಮಹಿಳೆ ಮತ್ತು ಪುರುಷರ ನಡುವಿನ ಸಾಕ್ಷರತಾ ಪ್ರಮಾಣವು ಕೆಳಗಿನಂತಿದೆ.

ಹೈದರಾಬಾದ್ ಕರ್ನಾಟಕದ ಸ್ತ್ರೀಯರು ಹಾಗೂ ಪುರುಷರ ಸಾಕ್ಷರತಾ ಪ್ರಮಾಣ (ಶೇಕಡವಾರು)

ಕ್ರ.ಸಂ.	ಜಿಲ್ಲೆಗಳು	೨೦೦೧		೨೦೧೧	
		ಪುರುಷರು (ಸಾಕ್ಷರತೆ)	ಸ್ತ್ರೀಯರು (ಸಾಕ್ಷರತೆ)	ಪುರುಷರು (ಸಾಕ್ಷರತೆ)	ಸ್ತ್ರೀಯರು (ಸಾಕ್ಷರತೆ)
೦೧.	ಕರ್ನಾಟಕ (ರಾಜ್ಯ)	೭೬.೭೯	೫೭.೪೫	೮೨.೮೫	೬೮.೧೩
೦೨.	ಮೈಸೂರು	೭೭.೦೨	೬೧.೬೪	೭೮.೪೪	೬೬.೫೯
೦೩.	ಬೀದರ್	೭೩.೨೯	೫೦.೦೦	೭೯.೯೪	೬೧.೬೬
೦೪.	ರಾಯಚೂರು	೬೨.೦೨	೩೬.೮೪	೭೧.೩೫	೪೯.೫೬
೦೫.	ಗುಲಬರ್ಗಾ	೬೬.೫೧	೪೧.೯೨	೭೫.೧೧	೫೫.೮೭
೦೬.	ಬಳ್ಳಾರಿ	೬೯.೫೯	೪೬.೧೬	೭೭.೨೪	೫೮.೨೮
೦೭.	ಕೊಪ್ಪಳ	೬೯.೧೫	೪೦.೭೬	೭೮.೨೧	೫೬.೨೨

(ಮೂಲ : ಸೆನ್ಸ್‌ಸ್ ಆಫ್ ಇಂಡಿಯಾ, (೧೯೯೧-೨೦೦೧) ಮತ್ತು ೨೦೦೧, ಸೆನ್ಸ್‌ಸ್ ಆಫೀಸ್ ಆಫ್ ದ ರಿಜಿಸ್ಟ್ರರ್ ಜನರಲ್ ಅಂಡ್ ಸೆನ್ಸೆಸ್ ಕಮೀಶನರ್, ಇಂಡಿಯಾ)[೬೬]

೨೦೦೧ ಮತ್ತು ೨೦೧೧ರ ಜನಗಣತಿಯ ಅಂಕಿಅಂಶಗಳನ್ನು ಗಮನಿಸಿದಾಗ, ಹೈದರಾಬಾದ್ ಕರ್ನಾಟಕ ಪ್ರದೇಶವು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವಾಗಿದೆ. ಸಾಕ್ಷರತೆಯ ದೃಷ್ಟಿಯಿಂದ ಬೀದರ್ ಮತ್ತು ಬಳ್ಳಾರಿ ಉತ್ತಮ ಸ್ಥಿತಿಯಲ್ಲಿದ್ದರೆ ರಾಯಚೂರು ರಾಜ್ಯದಲ್ಲಿಯೇ ಕೊನೆಯ ಸ್ಥಾನದಲ್ಲಿದೆ.

ಇನ್ನು ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಶಿಕ್ಷಣದಲ್ಲೂ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಹಿಂದುಳಿದಿವೆ. ಅದರಲ್ಲೂ ಪದವಿಪೂರ್ವ ಶಿಕ್ಷಣವು ಉನ್ನತ ಶಿಕ್ಷಣಕ್ಕೆ ಒಂದು ಹೆಬ್ಬಾಗಿಲಾಗಿದೆ. ಆದರೆ ಈ ಭಾಗದಲ್ಲಿ ಎಷ್ಟೋ ಕಡೆಗೆ ಮೂಲಭೂತ ಸೌಲಭ್ಯಗಳೇ ಇಲ್ಲ. ಕಾಲೇಜುಗಳಿದ್ದರೂ ಹಲವು ಕಡೆಗೆ ಉಪನ್ಯಾಸಕರ ಕೊರತೆ ಇದೆ. ಶಿಕ್ಷಕರು ಮತ್ತು ಉಪನ್ಯಾಸಕರ ನೇಮಕಾತಿಯಲ್ಲಿ ಇಲ್ಲಿನವರು ಹೆಚ್ಚಾಗಿ ಆಯ್ಕೆಯಾಗದೇ, ಬೇರೆ ಕಡೆಯಿಂದ ಬಂದವರು ಆಯ್ಕೆಯಾಗುತ್ತಾರೆ. ಆದರೆ ಇವರು ಸ್ವಲ್ಪ ದಿನದಲ್ಲಿ ವರ್ಗ ಮಾಡಿಸಿಕೊಂಡು ಹೋಗುವುದರ ಪರಿಣಾಮ ಶಿಕ್ಷಕರ ಕೊರತೆಗೆ ಕಾರಣವಾಗುತ್ತದೆ. ಹೀಗಾಗಿ ಇಲ್ಲಿ ಪರೀಕ್ಷಾ ಫಲಿತಾಂಶಗಳಲ್ಲಿ ನಿರೀಕ್ಷೆಯಂತೆ ಪ್ರಗತಿ ಕಾಣುತ್ತಿಲ್ಲ.

ಉದಾ:-

೨೦೧೦-೧೧ ಹಾಗೂ ೨೦೧೧-೧೨ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ

ಕ್ರ.ಸಂ.	ಜಿಲ್ಲೆಗಳು	೨೦೧೦-೧೧	೨೦೧೧-೧೨
		ಫಲಿತಾಂಶ (ಶೇ.)	
೧.	ಮೈಸೂರು	೭೯.೭೯	೮೨.೬೨
೨.	ಬೆಂಗಳೂರು	೮೭.೪೩	೭೮.೪೧
೩.	ರಾಯಚೂರು	೭೭.೭೯	೭೯.೦೯
೪.	ಬಳ್ಳಾರಿ	೭೫.೫೦	೭೮.೨೮
೫.	ಕೊಪ್ಪಳ	೭೮.೪೩	೭೮.೦೦
೬.	ಗುಲಬರ್ಗಾ	೭೪.೫೩	೭೩.೦೨
೭.	ಯಾದಗಿರಿ	೭೫.೬೮	೬೯.೭೯
೮.	ಬೀದರ್	೫೩.೦೦	೬೩.೩೨

(ಮೂಲ : ವಿಜಯಕರ್ನಾಟಕ ೧೩.೦೫.೨೦೧೧[೩೭] ಹಾಗೂ ವಿಜಯಕರ್ನಾಟಕ ೧೮.೦೫.೨೦೧೨)[೩೮]

೨೦೧೦-೧೧ ಹಾಗೂ ೨೦೧೧-೧೨ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶ

ಕ್ರ.ಸಂ.	ಜಿಲ್ಲೆಗಳು	೨೦೧೦-೧೧	೨೦೧೧-೧೨
		ಫಲಿತಾಂಶ (ಶೇ.)	
೧.	ಬೆಂಗಳೂರು	೬೭.೪೫	೬೧.೭೯
೨.	ಮೈಸೂರು	೫೮.೦೭	೬೦.೭೬
೩.	ಬಳ್ಳಾರಿ	೫೪.೮೫	೪೯.೫೫
೪.	ಕೊಪ್ಪಳ	೩೭.೪೭	೪೨.೯೯
೫.	ರಾಯಚೂರು	೩೯.೦೯	೪೧.೨೩
೬.	ಬೀದರ್	೪೫.೨೩	೪೦.೩೨
೭.	ಗುಲಬರ್ಗಾ	೪೬.೨೭	೩೮.೨೫
೮.	ಯಾದಗಿರಿ	೨೯.೯೨	೩೨.೨೧

(ಮೂಲ : ವಿಜಯಕರ್ನಾಟಕ ೧೧.೦೫.೨೦೧೧[೩೯] ಹಾಗೂ ವಿಜಯಕರ್ನಾಟಕ ೨೪.೦೫.೨೦೧೨)[೪೦]

ಮೇಲಿನ ಅಂಕಿ-ಅಂಶಗಳನ್ನು ನೋಡಿದಾಗ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶದಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ಕೊನೆಯ ಸ್ಥಾನದಲ್ಲಿ ಹೈದರಾಬಾದ್ ಕರ್ನಾಟಕದ

ಜಿಲ್ಲೆಗಳು ಸ್ಥಾನ ಪಡೆದಿವೆ. ೨೦೧೧-೧೨ನೇ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ರಾಯಚೂರು ೨೩ನೇ ಸ್ಥಾನ, ಬಳ್ಳಾರಿ ೨೫ನೇ, ಕೊಪ್ಪಳ ೨೬ನೇ, ಗುಲಬರ್ಗಾ ೩೦ನೇ, ಯಾದಗಿರಿ ೩೩ನೇ, ಬೀದರ್ ೩೪ನೇ ಸ್ಥಾನ ಪಡೆದಿವೆ(ಬೀದರ್ ರಾಜ್ಯದಲ್ಲಿಯೇ ಕೊನೆಯ ಸ್ಥಾನ). ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶದಲ್ಲಿ ಕೊಪ್ಪಳ ೨೬ನೇ ಸ್ಥಾನ, ರಾಯಚೂರು ೨೭ನೇ ಸ್ಥಾನ, ಬೀದರ್ ೨೮ನೇ ಸ್ಥಾನ, ಗುಲಬರ್ಗಾ ೩೦ನೇ ಸ್ಥಾನ ಯಾದಗಿರಿ ೩೧ನೇ(ರಾಜ್ಯದಲ್ಲಿಯೇ ಕೊನೆಯ ಸ್ಥಾನ) ಸ್ಥಾನವನ್ನು ಪಡೆದು ಕೊನೆಯ ಸ್ಥಾನದಲ್ಲಿವೆ. ಹೀಗಾಗಿ ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಗೆ ಅನೇಕ ಮೂಲಭೂತ ಸೌಲಭ್ಯಗಳ ಜೊತೆಗೆ ಶಿಕ್ಷಣದ ಅರಿವು, ಅವಕಾಶ, ಉತ್ತಮ ಶಿಕ್ಷಕರು ಮತ್ತು ಹೆಚ್ಚಿನ ಅನುದಾನವನ್ನು ಒದಗಿಸುವುದು ಅತ್ಯವಶ್ಯವಾಗಿದೆ. ಈ ನಿಟ್ಟಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಡಾ. ಡಿ.ಎಂ. ನಂಜುಂಡಪ್ಪ ವರದಿಯ ಅನುಷ್ಠಾನ, ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನದಂತಹ ಕಾರ್ಯಕ್ರಮಗಳನ್ನು ಸರಕಾರ ತ್ವರಿತವಾಗಿ, ಕೈಗೊಂಡಲ್ಲಿ ಹೈದರಾಬಾದ್ ಕರ್ನಾಟಕ ಭಾಗವು ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ಧಿಯತ್ತ ಮುಖ ಮಾಡಲು ಸ್ವಲ್ಪವಾದರೂ ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

೧. ಮಾಣಿಕ್‌ರಾವ್, ಹೈದರಾಬಾದ್ ಕರ್ನಾಟಕ ಜಾಗೃತಿ, ಪುಟ ೧೮.

೨. ಪ್ರಜಾವಾಣಿ, ಕರ್ನಾಟಕ ದರ್ಶನ, ೨೯.೦೧.೨೦೦೯.

೩. ಮೇಲಿನದೆ.

೪. ಸೋಮನಾಥ ಯಾಳವಾರ, ಪ್ರೇಮಾ ಸಿರ್ಶೆ (ಸಂ), ಬೀದರ್ ಜಿಲ್ಲಾ ದರ್ಶನ, ಪುಟ ೭.

೫. ಪಾಟೀಲ್ ಎಂ.ಬಿ. (ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಗುಲಬರ್ಗಾ ಜಿಲ್ಲೆ, ೧೯೯೭, ಪುಟ ೨.

೬. ಮೇಲಿನದೆ., ಪುಟ ೨.

೭. ಮೃತ್ಯುಂಜಯ ಹೊರಕೇರಿ., ಬಸವಲಿಂಗ ಸೊಪ್ಪಿಮಠ (ಸಂ), ರಾಯಚೂರು ಜಿಲ್ಲಾ ದರ್ಶನ, ಪುಟ ೨, ೩.

೮. ಅಲ್ಲಮಪ್ರಭು ಬೆಟ್ಟದೂರು, ಪಾಟೀಲ ಹೆಚ್.ಎಸ್., ಕೊಪ್ಪಳ ಜಿಲ್ಲಾ ದರ್ಶನ, ಪುಟ ೭.

೯. ಫ್ರಾನ್ಸಿಸ್ ಡಬ್ಲ್ಯೂ, ಬಳ್ಳಾರಿ ಗ್ಯಾಸೆಟಿಯರ್, ೨೦೦೪, ಪುಟ. ೧

೧೦. ಮಂತ್‌ಲೀ ರಿವೀವ್ ಆಫ್ ಕರ್ನಾಟಕ ಏಕಾನಮಿ, ೨೦೦೪, ಪುಟ ೧೯.

೧೧. ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳು, ೧೯೯೯-೨೦೦೦, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬಳ್ಳಾರಿ.

೧೨. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕದ ಆಂದೋಲನ, ಪುಟ ೭೧.

೧೩. ಗೋಪಾಲರಾವ್ ಹೆಚ್.ಎಸ್., ಕರ್ನಾಟಕದ ಏಕೀಕರಣ ಇತಿಹಾಸ, ಪುಟ ೫೦.

೧೪. ಗೋಪಾಲರಾವ್ ಹೇಜೀಬ್, ಹೈದರಾಬಾದ್ ಮುಕ್ತಿ ಸಂಘರ್ಷ, ಪುಟ ೯.

೧೫. ಮಂಜುಳಾ ಬಿ. ಚಿಂಚೋಳಿ, ಡಿಪ್ರೆಸ್ಡ್ ಕ್ಲಾಸಸ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ, ಪುಟ ೬.

೧೬. ಭಾನುಮತಿ ರಂಗರಾವ್, ಡೆವಲಪ್‌ಮೆಂಟ್ ಆಫ್ ಲೋಕಲ್ ಗವರ್ನ್‌ಮೆಂಟ್ ಇನ್ ದ ನಿಜಾಮ್ಸ್ ಡಾಮಿನಿಯನ್ಸ್, ಪುಟ ೧.

೧೭. ಪಾಟೀಲ್ ಹೆಚ್.ಎಸ್., ಅಲ್ಲಮಪ್ರಭು ಬೆಟ್ಟದೂರು (ಸಂ), ವಿಮೋಚನೆ, ಪುಟ ೧೪೩.

ಅಧ್ಯಾಯ ಮೂರು

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಚಾರಿತ್ರಿಕ ನೋಟ

ಅಧ್ಯಾಯ ಮೂರು

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಚಾರಿತ್ರಿಕ ನೋಟ

ಮಾನವ ನಾಗರಿಕನಾದಂತೆ ಅವನ ಸಾಮಾಜಿಕ ವ್ಯವಸ್ಥೆ ಕೂಡ ವಿಶಾಲವಾಗುತ್ತಾ ಸಾಗುತ್ತದೆ. ಇಂತಹ ಪ್ರಕ್ರಿಯೆಯಲ್ಲಿ ಸಮಾಜದಲ್ಲಿ ಬದಲಾವಣೆಯಾಗುವುದು ಮತ್ತು ಲೋಪದೋಷಗಳು ಉದ್ಭವವಾಗುವುದು ಸಹಜ. ಲೋಪದೋಷಗಳು ನಿವಾರಣೆ ಆದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ. ಕೆಲವೊಮ್ಮೆ ಸಾಮಾಜಿಕ ಕಟ್ಟುಪಾಡುಗಳು ಹಾಗೂ ಧಾರ್ಮಿಕ ನಂಬಿಕೆಗಳು ಜಟಿಲವಾದಾಗ ಸಮಾಜದ ಪ್ರಗತಿ ಕುಂಠಿತವಾಗುತ್ತದೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ, ಸಮಾಜದ ಆಯಾ ಕಾಲಘಟ್ಟದಲ್ಲಿ ಕಂಡು ಬರುವ ಸಾಮಾಜಿಕ ಪಿಡುಗುಗಳನ್ನು ನಿವಾರಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು, ಹಲವಾರು ದಾರ್ಶನಿಕರು, ಧರ್ಮ ಬೋಧಕರು ಮತ್ತು ಸಮಾಜ ಸುಧಾರಕರು ಅವತರಿಸಿ ನಾಡಿನ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ ಹಾಗೂ ಸರಿದಾರಿಯಲ್ಲಿ ತರುವ ಪ್ರಯತ್ನವನ್ನು ಮಾಡಿರುವುದು ಕಂಡು ಬರುತ್ತದೆ. ಇಂತಹುದೇ ಮಹತ್ಕಾರ್ಯವನ್ನು ೧೨ನೇ ಶತಮಾನದ ಶಿವಶರಣರು ಆನಂತರ ಸೂಫಿ ಸಂತರು ಹಾಗೂ ಹರಿದಾಸರು ಸಮಾಜವನ್ನು ಸುಧಾರಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದರು.

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅತ್ಯಂತ ಅವಶ್ಯವಾಗಿ ಅಧ್ಯಯನ ಮಾಡಬೇಕಾದ ಮತ್ತು ವಿಶ್ಲೇಷಣೆಗೆ ಒಳಪಡಿಸಬೇಕಾದ ವಿಷಯವೆಂದರೆ ಇಲ್ಲಿ ನಡೆದಂತಹ ಚಾರಿತ್ರಿಕ ಚಳವಳಿಗಳು ಮತ್ತು ಅವುಗಳು ಬೀರಿದ ಪ್ರಭಾವಗಳು. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಸುತ್ತಮುತ್ತಲಿನ ಭಾಗದಲ್ಲಿ ನಡೆದ ವಚನ ಚಳವಳಿ, ಸೂಫಿ ಚಳವಳಿ ಹಾಗೂ ದಾಸ ಚಳವಳಿಗಳು ತಮ್ಮದೇ ಆದ ಪ್ರಾಮುಖ್ಯತೆ ಮತ್ತು ವೈಶಿಷ್ಟ್ಯತೆಯನ್ನು ಹೊಂದಿದ್ದು, ಚಾರಿತ್ರಿಕ ದಾಖಲೆಗೆ ಅರ್ಹವೆನಿಸಿವೆ ಹಾಗೂ ಇವು ಇಲ್ಲಿನ ಧರ್ಮ ಮತ್ತು ಸಮಾಜದ ಮೇಲೆ ತಮ್ಮದೇ ಆದ ಪ್ರಭಾವ ಬೀರಿವೆ ಮತ್ತು ಬೀರುತ್ತಲೂ ಇವೆ.

ಕ್ರಿ.ಶ. ೧೨ನೇ ಶತಮಾನದಲ್ಲಿ ವಿಶ್ವದ ಯಾವುದೇ ಮೂಲೆಯಲ್ಲೂ ಕಂಡು ಬರದಂತಹ ವಿಶಿಷ್ಟವಾದ ಚಳವಳಿಯೇ ವಚನ ಚಳವಳಿ ಎಂದು ಗುರುತಿಸಲ್ಪಟ್ಟಿದೆ. ೧೨ನೇ ಶತಮಾನದಲ್ಲಿಯೇ ಯಜಮಾನಿಕಾ

ಸಂಸ್ಕೃತಿಯನ್ನು, ಮೌಢ್ಯತೆಯನ್ನು, ವರ್ಣವಿಭಜನೆಯನ್ನು ಧಿಕ್ಕರಿಸಿ ಸಮಾನತೆಯ ತತ್ವವನ್ನು ಜಾರಿಗೆ ತರಲು ಪ್ರಯತ್ನಪಟ್ಟಂತಹ ಚಳವಳಿ ಇದಾಗಿದೆ. ಬಸವಣ್ಣ ಹಾಗೂ ಇನ್ನಿತರ ಶರಣರು ವಚನಗಳ ಮೂಲಕ ಮಂಡಿಸಿದ ವಿಚಾರಗಳು ಇಡೀ ಮಾನವ ಕುಲಕ್ಕೆ ಅನ್ವಯವಾಗುವಂತಿದ್ದು ಇಂದಿಗೂ ಪ್ರಸ್ತುತವಾಗಿವೆ.

ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ಚಳವಳಿಯೆಂದರೆ ಸೂಫಿ ಚಳವಳಿ. ನಿರಂಕುಶತೆಯನ್ನು, ಧಾರ್ಮಿಕ ಒತ್ತಡಗಳನ್ನು ಧಿಕ್ಕರಿಸಿ ಸರಳ ತತ್ವಗಳೊಂದಿಗೆ ಪ್ರಚಾರಕ್ಕಿಳಿದ ಪಂಥವೇ ಸೂಫಿ ಪಂಥ. ಹೈದರಾಬಾದ್ ಕರ್ನಾಟಕ ಪ್ರದೇಶದ ಸಮಾಜದಲ್ಲಿ ಇಂದಿಗೂ ಸೂಫಿಗಳ ಪ್ರಭಾವ ಮತ್ತು ಸೂಫಿ ಸಂಪ್ರದಾಯವನ್ನು ಬಿಂಬಿಸುವ ಸಮೂಹಗಳು ಕಂಡು ಬರುತ್ತವೆ. ಧಾರ್ಮಿಕ ಹಾಗೂ ಸಾಮಾಜಿಕ ಸಾಮರಸ್ಯ ತರಲು ಪ್ರಯತ್ನ ಪಟ್ಟಂತವರೆ ಸೂಫಿ ಸಂತರು. ಹೈದರಾಬಾದ್ ಕರ್ನಾಟಕ ಭಾಗದ ಸಮಾಜದ ಸುಧಾರಣೆಯಲ್ಲಿ, ಸೂಫಿಗಳ ಪಾತ್ರ ಅತ್ಯಂತ ಸ್ಮರಣೀಯ ಮತ್ತು ಅನುಸರಣೀಯವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಸಾಮಾಜಿಕ ಚಳವಳಿಗೆ ಮತ್ತೊಂದು ಕೊಡುಗೆ ಹರಿದಾಸರು. ಭಕ್ತಿ ಚಳವಳಿಯ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ ದಾಸ ಪಂಥದ ಪ್ರವರ್ತಕರೆ ಹರಿದಾಸರು. ದಾಸಕೂಟದಲ್ಲಿ ಅಚ್ಚ ಕನ್ನಡದಲ್ಲಿ ಸರಳವಾಗಿ ಕೀರ್ತನೆಗಳನ್ನು ಕಟ್ಟಿ ಜನಮನವನ್ನು ಸಂಸ್ಕರಿಸಿ, ಆ ಮೂಲಕ ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ ಹಾಗೂ ಅನಿಷ್ಟಗಳನ್ನು ತೊಡೆದು ಹಾಕಲು ಹರಿದಾಸರು ಪ್ರಯತ್ನಿಸಿದರು. ಈ ನಿಟ್ಟಿನಲ್ಲಿ ವಚನ ಚಳವಳಿ, ಸೂಫಿ ಹಾಗೂ ದಾಸ ಪರಂಪರೆಯನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

೩.೧. ವಚನ ಪರಂಪರೆ

೧೨ನೇ ಶತಮಾನದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆ ಹಾಗೂ ಸಾಮರಸ್ಯಕ್ಕಾಗಿ ಬಸವಣ್ಣ ಕಲ್ಯಾಣದಲ್ಲಿ ನಡೆಸಿದ ಕ್ರಾಂತಿಯು ಕರ್ನಾಟಕದ ಇತಿಹಾಸದಲ್ಲಿ ಹಾಗೂ ಮಾನವ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲು. ಏಕೆಂದರೆ ೮೦೦ ವರ್ಷಗಳ ಹಿಂದೆಯೇ ಸ್ವಾತಂತ್ರ್ಯ, ಸಮಾನತೆ, ವಿಶ್ವಬಾಂಧವ್ಯದಂತ ಆದರ್ಶಗಳನ್ನು ಬಸವಣ್ಣನ ತತ್ವಗಳು ಒಳಗೊಂಡಿದ್ದವು. ಸ್ವರ್ಗ ನರಕಗಳನ್ನು ಅಲ್ಲಗಳೆದು, ಬಹುದೈವತ್ವ ಹಾಗೂ ಮೂರ್ತಿ ಪೂಜೆಯನ್ನು ತಿರಸ್ಕರಿಸಿ, ಆಚಾರ ವಿಚಾರಗಳಿಗೆ ಪ್ರಾಧಾನ್ಯತೆ ನೀಡಿ ಕಾಯಕವೇ ಕೈಲಾಸವೆಂದು ಸಾರಿ ಲಿಂಗಭೇದ, ವರ್ಗಭೇದ, ಜಾತಿಭೇದಗಳನ್ನು ತಿರಸ್ಕರಿಸಿದ ಬಸವಣ್ಣ ಧಾರ್ಮಿಕ ಸಾಮಾಜಿಕ ಸಮಾನತೆಯ ಮೇಲೆ ಹೊಸ ಸಮಾಜವನ್ನು ಕಟ್ಟ ಬಯಸಿದ್ದನು. ಜಡವಾಗಿದ್ದ ಸಮಾಜವನ್ನು ಜಾಗೃತಗೊಳಿಸಿ, ನಾನಾ ಚಟುವಟಿಕೆಗಳಿಗೆ ಒಳಪಡಿಸಿ ಹೊಸ ದೃಷ್ಟಿಕೋನದಿಂದ, ಹೊಸ ವಿಚಾರಗಳಿಂದ ಜೀವನದ ಸ್ವರೂಪವನ್ನೇ ರೂಪಾಂತರಿಸಿದ ಹಂತ ಇದಾಗಿದೆ. ವಚನ ಚಳವಳಿಯ ಪ್ರಭಾವದಿಂದಾಗಿ ಹೊಸ ತತ್ವಗಳ ಹಾಗೂ ಚಿಂತನೆಯ ಮೂಲಕ ಬದುಕಿನ ಸ್ವರೂಪ ಇಲ್ಲಿ ಹೊಸ ರೂಪ

ಪಡೆಯಿತು. ಹೀಗಾಗಿಯೇ ಹನ್ನೆರಡನೆಯ ಶತಮಾನದ ಶರಣರ ಚಳವಳಿಯಲ್ಲಿ ದಲಿತ ಚಳವಳಿಯ ಬೇರುಗಳನ್ನು ಬಂಡಾಯದವರು ಗುರುತಿಸಿದರೆ, ಭಾಷೆ ಈ ಹಂತದಲ್ಲಿ ಹೊಸ ಆಯಾಮ ಪಡೆದುದನ್ನು ಸಾಹಿತ್ಯದ ವಿದ್ಯಾರ್ಥಿಗಳು ಗಮನಿಸುತ್ತಾರೆ. ಹಾಗೆಯೇ ಸಮಾಜಶಾಸ್ತ್ರಜ್ಞರು ಧರ್ಮ ಹಾಗೂ ಆರ್ಥಿಕತೆಯ ನಡುವೆ ಇರುವ ಸಂಬಂಧದ ಎಳೆಗಳನ್ನು ಜೋಡಿಸುವ ಯತ್ನ ಮಾಡುತ್ತಾರೆ. ಇನ್ನು ಕೆಲವರು ಇದನ್ನು ಶ್ರಮಿಕರ ಹೋರಾಟವೆಂದೂ ಅಭಿಪ್ರಾಯ ಪಡುತ್ತಾರೆ. ಕಾಯಕ ಜೀವಿಗಳ ಹೋರಾಟದಲ್ಲಿ 'ಕಾಯಕವೇ ಕೈಲಾಸ' ಎಂದು ಘೋಷಿಸಲಾಯಿತು. ಹೀಗೆ ೧೨ನೇ ಶತಮಾನ ಕನ್ನಡಿಗರ ಬದುಕಿನಲ್ಲಿ ಬಹುರೂಪಿ ಪ್ರಭಾವ ಬೀರಿದೆ.[೧]

ಬಸವಣ್ಣ ಒಂದು ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ತನಗೆ ಲಭ್ಯವಿದ್ದ ಪ್ರತಿಷ್ಠೆ, ಹಣ, ಅಧಿಕಾರವನ್ನು ತನಗೆ ಶ್ರೇಷ್ಠವೆನಿಸಿದ ತತ್ವಗಳನ್ನು ಆಚರಣೆಯಲ್ಲಿ ತರಲು ಬಳಸಿದನು. ಅದರಿಂದಾಗಿ ಆ ಕಾಲದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳಲ್ಲಿ ಮಹತ್ತರವಾದ ಬದಲಾವಣೆಗಳು ಬರಲಾರಂಭಿಸಿದವು. ದೂರ ದೂರದಿಂದ ಸಹಸ್ರಾರು ಸಂಖ್ಯೆಯಲ್ಲಿ ಅನುಯಾಯಿಗಳು ಆ ಪ್ರದೇಶಕ್ಕೆ ಬರಲಾರಂಭಿಸಿದರು. ಸ್ಥಳೀಯ ಬಹುಪಾಲು ಜನರು ಬಸವಣ್ಣನ ಕ್ರಾಂತಿಕಾರಿ ವಿಚಾರಗಳನ್ನು ಒಪ್ಪಿಕೊಂಡು ಆಚರಣೆಯಲ್ಲಿ ತರಲಾರಂಭಿಸಿದರು. ಇದರಿಂದ ಮೇಲ್ಜಾತಿ ಮತ್ತು ಕೆಳಜಾತಿಯ ವರ್ಗೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯ ಗಾಳಿ ಬೀಸತೊಡಗಿತು. ಶತಮಾನಗಳಿಂದ ತುಳಿಯಲ್ಪಟ್ಟ ಕೆಳವರ್ಗದ ಜನ ಮುಕ್ತ ಸಮಾಜದ ಕನಸು ಕಾಣತೊಡಗಿದರು.

ಇದರಿಂದ ಜಾತಿ ವಿನಾಶ ಅಷ್ಟೇ ಅಲ್ಲ. ಲಿಂಗಭೇದವು ಕಡಿಮೆಯಾಗಿ ಸ್ತ್ರೀಯರು ಪುರುಷರೊಂದಿಗೆ ಆಚಾರ ವಿಚಾರಗಳಲ್ಲಿ ಸಮಪಾಲು ಪಡೆಯಲಾರಂಭಿಸಿದರು. ಸಮಾಜದಲ್ಲಿ ಆದ ಬದಲಾವಣೆಯಿಂದಾಗಿ ಮೇಲ್ಜಾತಿಯವರಿಗೆ ಕಸಿವಿಸಿಯಾಯಿತು. ಪಟ್ಟಭದ್ರ ಹಿತಾಸಕ್ತಿಗಳು ಕೋಪಗೊಂಡು ಬಸವಣ್ಣನವರ ಸಮಾಜ ಪರಿವರ್ತನೆಯ ಕಾರ್ಯಕ್ಕೆ ವಿರೋಧ ಉಂಟು ಮಾಡಿದರು. ಇಂತಹ ಘರ್ಷಣೆ ಕೊನೆಗೆ ವಿಕೋಪಕ್ಕೆ ಹೋಗಿ ರಕ್ತಕ್ರಾಂತಿಯಾಯಿತು, ರಾಜನ ಕೊಲೆಯಾಯಿತು, ಅನೇಕ ಶರಣರು ಕೊಲೆಯಾದರು, ಕೆಲವರು ಓಡಿ ಹೋದರು. ಬಸವಣ್ಣ ಕಲ್ಯಾಣದಿಂದ ಕೂಡಲಸಂಗಮಕ್ಕೆ ಬಂದು ನೆಲೆಸಿದನಾದರೂ ಕೆಲದಿನದಲ್ಲೇ ದೈವಾಧೀನರಾದರು. ಇಂತಹ ಆಕಸ್ಮಿಕ ಬೆಳವಣಿಗೆಗಳಿಂದಾಗಿ ಕ್ರಾಂತಿಕಾರಿಗಳಿಗೆ ಹಿನ್ನಡೆಯಾಯಿತು. ಆದರೆ ಅವರು ಬಿತ್ತಿದ ಕ್ರಾಂತಿಯ ಬೀಜಗಳು ನಾಡಿನಾದ್ಯಂತ ಹಬ್ಬಿದವು. ಹೀಗೆ ವಚನ ಚಳವಳಿಯು ಸಮಾಜ ಪರಿವರ್ತನೆಯ ಮಹತ್ವದ ಪ್ರಯೋಗವಾಗಿ ಮಾರ್ಪಟ್ಟಿತು. ಇಂತಹ ಸಾಮಾಜಿಕ ಪ್ರಯೋಗದ ಮಹತ್ವವೇನು, ಇದು ಸಫಲವಾಯಿತೇ, ವಿಫಲವಾಯಿತೇ ಅಥವಾ ಮುಂದಿನ ಸಾಮಾಜಿಕ ಚಳವಳಿಗೆ ನಾಂದಿಯಾಯಿತೆ ಹಾಗೂ ಜಾಗತಿಕ ಮಟ್ಟದಲ್ಲಿ, ವಿಕಾಸವಾದದಲ್ಲಿ, ಹೈದರಾಬಾದ್ ಕರ್ನಾಟಕದ ಜನರ ಮೇಲೆ ಹಾಗೂ ಸಮಾಜದ ಮೇಲೆ ಚಳವಳಿ ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎನ್ನುವ ವಿಶ್ಲೇಷಣೆ ಅತ್ಯವಶ್ಯಕವಾಗಿದೆ.

ಕ್ರಿ.ಶ. ೧೨ನೇ ಶತಮಾನದಲ್ಲಿ ಬಸವಣ್ಣ ಆರಂಭಿಸಿದ ವಚನ ಚಳವಳಿಯ ಮತ್ತೊಂದು ವಿಶೇಷವೆಂದರೆ ಹಿಂದೆಂದೂ ನಡೆಯದಿದ್ದ ಸಮಾಜದ ಎಲ್ಲ ಸ್ತರಗಳ ಜನರನ್ನು ಒಳಗೊಂಡ

ಚಳವಳಿಯಾಗಿದೆ. ವಚನ ಚಳವಳಿಯಲ್ಲಿ ಸಂಶೋಧಕರು ಗುರುತಿಸಲೇಬೇಕಾದ ವಿಶೇಷ ಅಂಶವೆಂದರೆ ಅದು ಕೇವಲ ಮೇಲ್ವರ್ಗದವರ ವಚನಗಳನ್ನು ಮಾತ್ರ ಒಳಗೊಂಡಿಲ್ಲ. ಅಲ್ಲಿ ಹಲವು ದಲಿತ ವಚನಕಾರರ ಅಂತರಾಳದ ಭಾವನೆಗಳು ಕಂಡುಬರುತ್ತವೆ. ಏಕೆಂದರೆ ದಲಿತರಿಗೆ ದನಿ ಕೊಟ್ಟ ಸಂದರ್ಭ ಇದಾಗಿದೆ. ದಲಿತರು, ಶೋಷಿತರು, ಕೆಳವರ್ಗದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ.

ಕನ್ನಡ ಸಾಹಿತ್ಯವು ಪಂಡಿತರ ಕಪಿಮುಷ್ಠಿಯಿಂದ ಪಾರಾಗಿ ಅರಮನೆಯಿಂದ ಹೊರಬಂದು ಸಹಜವಾಗಿ ಉಸಿರಾಡಿದ್ದು, ಹಾಗೂ ನೆಲದ ಮಾತಿನಲ್ಲಿ ನಳನಳಿಸಿದ್ದು ವಚನಕಾರರಲ್ಲಿ. ಜಾತಿ ಮತ ಪಂಥಗಳನ್ನು ಬಿಟ್ಟು ದೇಶ-ಭಾಷೆ ವಯಸ್ಸುಗಳ ಅಂತರವನ್ನು ಮರೆತು ಮೇಲುಕೀಳೆಂಬ ತಾರತಮ್ಯವನಳಿದು, ಸಾಮಾನ್ಯ ಜನತೆ ಮೊದಲ ಬಾರಿಗೆ ತಮ್ಮನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡು ಸಾರ್ವಕಾಲಿಕ ಮೌಲ್ಯದ ಸಾಹಿತ್ಯವನ್ನು ಕೊಟ್ಟದ್ದು ಗಮನಿಸಬೇಕಾದ ಸಂಗತಿಯಾಗಿದೆ.[೨] ಹೀಗಾಗಿ ವಚನ ಚಳವಳಿಯನ್ನು ನಮ್ಮ ದೇಶದ ಮೊಟ್ಟ ಮೊದಲ ಜನತಾ ಚಳವಳಿ ಎಂದು ಕರೆಯುತ್ತಾರೆ.

ವಚನಗಳು ಬಸವಾದಿ ಶರಣರ ಹೃದಯದಿಂದ ಹೊರಹೊಮ್ಮಿದ ಅನುಭಾವ ಸಂಪತ್ತು. ಇವುಗಳಲ್ಲಿ ಸಾಮಾನ್ಯ ವ್ಯಕ್ತಿಗಳನ್ನು ಆಧ್ಯಾತ್ಮಿಕದ ತುತ್ತತುದಿಗೆ ಕರೆದೊಯ್ಯುವಂತಹ ಹಾಗೂ ಮನುಷ್ಯನ ಆಧ್ಯಾತ್ಮಿಕತೆಯ ಹಸಿವನ್ನು ಹಿಂಗಿಸುವಂತಹ ಮಹಾಶಕ್ತಿ ಅಡಗಿದೆ. ಬಸವಣ್ಣ ತಮ್ಮ ವಿಚಾರಧಾರೆ, ಸಾಮಾಜಿಕ ಕಳಕಳಿ, ಧಾರ್ಮಿಕ ಚಿಂತನೆ, ಆಧ್ಯಾತ್ಮಿಕ ಸಿದ್ಧಿ, ಹೃದಯ ವೈಶಾಲತೆ ಮೂಲಕ ಎಲ್ಲರನ್ನು ಆಕರ್ಷಿಸಿ ಸಾವಿರಾರು ಅನುಯಾಯಿಗಳನ್ನು ಸಂಪಾದಿಸಿ, ಸಮಾನವಾದ ಶರಣ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದನು. ಅನುಭವಮಂಟಪವನ್ನು ಸ್ಥಾಪಿಸಿ ಅಲ್ಲಿ ಶರಣರಾದ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ಜೇಡರದಾಸಿಮಯ್ಯ ಮುಂತಾದ ವಿವಿಧ ವರ್ಗದ ಜನರನ್ನು ಒಂದೆಡೆ ಸೇರಿಸಿ, ಆಧ್ಯಾತ್ಮಿಕತೆಯ ಪರಿಸರ ಸೃಷ್ಟಿಸಿ, ವಾಸ್ತವಿಕ ಜೀವನದ ಸತ್ಯಗಳನ್ನು ಹೊರಗೆಡಹಿಸಿದನು. ಶರಣರ ದೃಷ್ಟಿಯಲ್ಲಿ ಮೇಲು ಕೀಳು, ಬಡವ ಬಲ್ಲಿದರೆಂಬ ಭೇದವಿರಲಿಲ್ಲ. ಆಸೆ ಆಮಿಷಗಳಿಗೆ ಅವಕಾಶವಿರಲಿಲ್ಲ. ಕ್ರೋಧ, ಮದ, ಮತ್ಸರಗಳ ಸುಳಿವಿರಲಿಲ್ಲ. ಮನುಷ್ಯ ಗುಣವನ್ನು ಮೀರಿ ಶರಣತತ್ವವನ್ನು ಪಾಲಿಸಿ ಪರಮಾತ್ಮನನ್ನು ಸೇರಿದವರು ಆ ಮಹಾಶರಣರು. ಇಂತಹ ಶರಣರು ಮಾನವ ಜನಾಂಗಕ್ಕೆ ದಾರಿದೀಪವಾಗಿದ್ದಾರೆ.[೩]

೧೨ನೇ ಶತಮಾನದ ಸಮಾಜ ವ್ಯವಸ್ಥೆಯು ಶತಮಾನಗಳಿಂದ ಒಪ್ಪಿಕೊಂಡು ಬಂದಿದ್ದ ಮೌಲ್ಯಗಳನ್ನು ಪ್ರಶ್ನಿಸುವುದರ ಮೂಲಕ ವಚನಕಾರರ ಸಮಾಜ ಸುಧಾರಣಾ ಚಳವಳಿ ಪ್ರಾರಂಭವಾಗುತ್ತದೆ. ಹಾಗೆಯೇ ಅವರು ತಮ್ಮ ಸಮಕಾಲೀನ ವ್ಯವಸ್ಥೆಯ ಹಿಂದಿರುವುದನ್ನು ಅಧ್ಯಯನ ಮಾಡುವುದರೊಂದಿಗೆ, ಚರ್ಚಾ ಗೋಷ್ಠಿಗಳ ಮೂಲಕ ಹೊಸ ವಿಚಾರವನ್ನು ಅವರು ಹುಟ್ಟು ಹಾಕಿದ್ದಾರೆ.

ಉದಾಹರಣೆಗೆ,

‘ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಲಸಂಗಮದೇವಾ ಎನಗಿದೇ ದಿಬ್ಯ.’

ಬಸವಣ್ಣ[೪]

‘ಕೆಂಡಕೆಟ್ಟು ಕೆಂಡವಾಗಬಲ್ಲುದಲ್ಲದೆ ಬೂದಿಯಾಗಿ ಬೂದಿ ಹೊತ್ತಬಲ್ಲುದೆ
ಸೂತಕ-ಸೂತಕಕ್ಕೊಳಗಪ್ಪುದಲ್ಲದೆ, ಭಸ್ಮ ಮೇಲೆ ಕೆಂಡವೊಳಗಡಗುವುದಲ್ಲದೆ
ಕಾಷ್ಠ ಮೇಲೆ ಕೆಂಡವೊಳಗಡಗಿದುದುಂಟೆ
ಅರಿದ ಅರಿವು ಮರವಿಂಗಪ್ಪುದೆ.’

ಮಾದಾರ ಧೂಳಯ್ಯ.[೫]

‘ಕಿರಿಯರಾದರೇನು ಹಿರಿಯರಾದರೇನು,
ಅರಿವಿಗೆ ಹಿರಿದು ಕಿರಿದುಂಟೆ.’

ಅಲ್ಲಮಪ್ರಭು[೬]

ಬಸವಣ್ಣನಿಂದ ಸ್ಥಾಪಿಸಲ್ಪಟ್ಟ ‘ಅನುಭವ ಮಂಟಪ’ವು ನಾಲ್ಕು ಗೋಡೆಗಳ ಸಾಮಾನ್ಯ ಕಟ್ಟಡ ಮಾತ್ರವಾಗಿರಲಿಲ್ಲ. ಕೇವಲ ಕಲ್ಲು ಕಂಬಗಳಿಂದ ಇರುವ ಆಲಯವಲ್ಲ, ಅನುಭವಮಂಟಪ ಸ್ಥಾವರವಲ್ಲ, ಅದು ಜನಸಮುದಾಯದ ಚಾಲಕ ಶಕ್ತಿಯಂತಿತ್ತು. ಸಾಮಾನ್ಯ ಜನತೆಯ ಅನುಭವಗಳನ್ನು ವಚನಗಳ ಮೂಲಕ ಪ್ರಸಾರ ಮಾಡಿದ ಜನಸಮುದಾಯದ ಪ್ರಥಮ ಮಾಧ್ಯಮವಾಗಿತ್ತು. ಶೋಷಿತ ಜನರೆಲ್ಲ ಒಂದೆಡೆ ಕೂಡಿ, ಶತಮಾನಗಳ ಶೋಷಣೆಯ ವಿರುದ್ಧ ಬಂಡೆದ್ದ ಇತಿಹಾಸದ ಮೊದಲ ಪ್ರಯತ್ನವಾಗಿತ್ತು. ಅಲ್ಲಿ ಪ್ರಕಟಗೊಂಡಂತ ಅನುಭವ ರಾಜನದು ಅಥವಾ ಪಂಡಿತನದಾಗಿರದೆ ಸಾಮಾನ್ಯ ಜನರದ್ದಾಗಿತ್ತು. ಹಾಗೆಯೇ ಅದು ಸುಖದ ಸುಪ್ಪತ್ತಿಗೆಯ ಅನುಭವವಲ್ಲ. ಬದಲಾಗಿ ಬದುಕಿನ ನೋವಿನ ಪರಿಚಯವಿತ್ತು ಅನುಭವ, ಆಲೋಚನೆ, ಚರ್ಚೆಗಳಿಗೆ ಮುಕ್ತ ಅವಕಾಶವಿತ್ತು. ಹೀಗೆ ಅನುಭವ ಮಂಟಪ ವಚನಕಾರರ ಪ್ರಯೋಗ ಶಾಲೆಯಾಗಿತ್ತು. ಜಾತಿ ವರ್ಗ, ವರ್ಣಭೇದ ಕಾಯಕ ಭೇದವನ್ನು ತೊಡೆದು, ಶರಣ ಶರಣೆಯರೆಲ್ಲ ಒಟ್ಟಿಗೆ ಕಲೆತು ಮಾಡಿದ ವೈಚಾರಿಕ ಮಂಥನದಲ್ಲಿ ಹುಟ್ಟಿದ ನವನೀತವೇ ವಚನ ಸಾಹಿತ್ಯವಾಗಿತ್ತು.[೭]

ಹೀಗೆ ಅನುಭವ ಮಂಟಪದಂತಹ ಮುಕ್ತ ಹಾಗೂ ಸಮಾನತೆಯ ವೇದಿಕೆಯ ಮುಖಾಂತರ ವಚನಕಾರರು ತಮ್ಮ ವ್ಯಕ್ತಿತ್ವದ ವಿಕಸನದ ಜೊತೆಗೆ ಸಮಾಜದ ಸಹಸ್ರಾರು ಸಾಮಾನ್ಯ ಜನತೆಯ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣರಾದರು. ಇವತ್ತಿನ ಬದುಕಿಗೂ ಇಂತಹ ಅನುಭವ ಮಂಟಪದ ಬೆಳಕು, ವಚನಕಾರರ ಹೋರಾಟ ಪ್ರಸ್ತುತವಾಗುತ್ತವೆ.

ಶರಣರು ಹುಟ್ಟು ಹಾಕಿ ಬಳಸಿದ ಕಾಯಕ ಎನ್ನುವ ಶಬ್ದದಲ್ಲಿ ಸಾಕಷ್ಟು ತತ್ವ, ಮೌಲ್ಯ, ವಿಚಾರಗಳು ಅಡಗಿವೆ. ಕಾಯಕ ಸಾಮಾಜಿಕ ಏಕತೆ ಸಾಧಿಸಲು ಶರಣರು ರೂಪಿಸಿದ ಹೊಸ ಪರಿಕಲ್ಪನೆ. ಕಾಯಕ ಸಾಮಾಜಿಕ ಏಕತೆಯನ್ನು ಸಾಧಿಸುವುದರ ಜೊತೆಗೆ, ಧಾರ್ಮಿಕ ಸಮಾನತೆಯನ್ನು ತಂದು ಕೊಡುತ್ತದೆ. ಕಾಯಕ ಎಂದರೆ ಕೇವಲ ದುಡಿಮೆಯಲ್ಲ. ಅಲ್ಲಿ ಉದಾತ್ತವಾದ ಧ್ಯೇಯವಿದೆ, ನಿಸ್ವಾರ್ಥವಿದೆ. ಶರಣರ ಕಾಯಕ ಚಳವಳಿಯಲ್ಲಿ ನಿಜವಾದ ಸಮತಾವಾದದ ಆಶಯವಿದೆ. ಇಲ್ಲಿ ಶ್ರದ್ಧೆ, ನಿಸ್ವಾರ್ಥದಂತಹ ಮೌಲ್ಯಗಳೊಂದಿಗೆ ತ್ಯಾಗ, ವಿಶಾಲತೆಯಂತಹ ಮೌಲ್ಯಗಳು ಸೇರಿಕೊಂಡಿವೆ.[೮]

ಶರಣರು ಕಾಯಕದಲ್ಲಿ ಎಷ್ಟೊಂದು ತಮ್ಮನ್ನು ತೊಡಗಿಸಿಕೊಂಡಿದ್ದರೆಂದರೆ, ಆಯ್ದಕ್ಕಿ ಮಾರಯ್ಯನು, ತನ್ನ ವಚನದಲ್ಲಿ 'ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರು ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು' ಎಂದಿದ್ದಾರೆ.[೯] ಕಾಯಕ ತತ್ವದ ಇನ್ನೊಂದು ಮುಖವೇ ದಾಸೋಹ ತತ್ವ. ಇದರ ಮೂಲಕವೇ ಬಸವಣ್ಣ ಸಮತಾವಾದ ತರಲು ಪ್ರಯತ್ನಿಸಿದ. ಎಲ್ಲರೂ ಪ್ರಾಮಾಣಿಕವಾಗಿ ದುಡಿಯುವುದು ಕಾಯಕ ತತ್ವವಾದರೆ, ದುಡಿದ ಫಲವನ್ನು ಎಲ್ಲರೂ ಸಮಾನತೆಯಿಂದ, ಪ್ರೀತಿಯಿಂದ ಹಂಚಿಕೊಂಡು ತಿನ್ನುವುದು ದಾಸೋಹ ತತ್ವ. ೧೨ನೇ ಶತಮಾನದಲ್ಲಿ ಬಸವಣ್ಣ ಹೇಳಿದ ಸಮತಾವಾದವನ್ನು ಇಪ್ಪತ್ತನೆಯ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್ ವೈಜ್ಞಾನಿಕ ರೀತಿಯಲ್ಲಿ ಹೇಳಿದ. ಇವರಿಬ್ಬರ ಮೂಲಭೂತ ಕಾಳಜಿ ಮತ್ತು ಉದ್ದೇಶ ಒಂದೇ ಆಗಿತ್ತು.[೧೦] ಹೀಗೆ ಶರಣರ ಸಮಾಜದ ಸ್ವರೂಪ ಕಾಲದೃಷ್ಟಿಯಿಂದ ಪ್ರಾಚೀನವಾದರೂ ಮೌಲ್ಯದ ದೃಷ್ಟಿಯಿಂದ ಆಧುನಿಕವೆಂದು ಸ್ಪಷ್ಟವಾಗುತ್ತದೆ. ಮೂಢನಂಬಿಕೆಗಳನ್ನು ನಂಬಿ, ಅಂಧ ಸಂಪ್ರದಾಯಗಳ ಕತ್ತಲಲ್ಲಿ ಬದುಕುತ್ತಿದ್ದ ಅಂದಿನ ಜನತೆಯನ್ನು ಶರಣರು ವೈಚಾರಿಕತೆಯ ಬೆಳಕಿನತ್ತ ಕರೆ ತಂದರು. ಒಂದು ಕಡೆ ವೈದಿಕ ಶೋಷಣೆ ಮತ್ತೊಂದು ಕಡೆ ಅತಿಯಾದ ಅಜ್ಞಾನದಂಥ ಸಂದಿಗ್ಧ ಸ್ಥಿತಿಯಲ್ಲಿದ್ದ ಅಂದಿನ ಜನತೆಯನ್ನು ಪ್ರಜ್ಞಾವಂತರನ್ನಾಗಿ, ವಿಚಾರವಂತರನ್ನಾಗಿ ಮಾಡಿದುದು ಶರಣರ ಬಹುಮುಖ ಪ್ರಯತ್ನಕ್ಕೆ ಸಾಕ್ಷಿಯಾಗಿದೆ. ಮಾಟ, ಮಂತ್ರಗಳಂಥ ಮೂಢನಂಬಿಕೆಗಳನ್ನು ನಂಬಿಕೊಂಡು ಕತ್ತಲಲ್ಲಿ ಬಾಳುತ್ತಿದ್ದ ಅಂದಿನ ಪರಿಸರಕ್ಕೆ ಹೊಸ ದಿಕ್ಕು ತೋರಿಸಿ ಸಕಲರಿಗೂ ಉನ್ನತವಾದ ಬದುಕು ಕಲ್ಪಿಸಿಕೊಟ್ಟಿದ್ದು ಶರಣರ ಕ್ರಾಂತಿಯ ಸಫಲತೆಯ ಸೂಚಕವಾಗಿದೆ.[೧೧]

೧೨ನೇ ಶತಮಾನದ ಚಳವಳಿ ಮೇಲ್‌ನೋಟಕ್ಕೆ ಧಾರ್ಮಿಕ ಚಳವಳಿಯಾಗಿ ಕಂಡರೂ ಇದು ಶೂದ್ರರ ಹಾಗೂ ದಲಿತರ ಹೋರಾಟವಾಗಿತ್ತು. ಕೆಳವರ್ಗದವರು ತಮ್ಮ ಉನ್ನತಿಗಾಗಿ ತಾವೇ ಕೈಗೊಂಡ ಆಂದೋಲನವಾಗಿತ್ತು.[೧೨] ಬಸವಣ್ಣ ಕೇವಲ ಮೇಲ್ಜಾತಿಗಳ ಬದುಕಿನ ಶೈಲಿ ಮಾತ್ರವಲ್ಲ, ಕೆಳವರ್ಗದ ಜನರ ಚಿಂತನಾಶೈಲಿಯ ಸ್ವರೂಪದಲ್ಲೂ ಬದಲಾವಣೆ ತಂದರು. ಪ್ರಶ್ನೆ ಕೇಳುವುದೇ ಗೊತ್ತಿರದ ಅಂದಿನ ಜನಸಮುದಾಯಕ್ಕೆ ಪ್ರಶ್ನೆ ಕೇಳುವ ತಾಕತ್ತನ್ನು ವಚನಕಾರರು ತಂದು ಕೊಟ್ಟರು. ಆತ್ಮಸ್ಥೈರ್ಯ ತುಂಬಲು 'ನಾನು ಬ್ರಾಹ್ಮಣನಲ್ಲ, ಯಾರಾದರೂ ನನ್ನನ್ನು ಬ್ರಾಹ್ಮಣ ಎಂದರೆ ನನ್ನ ಆರಾಧ್ಯ ದೈವ ಕೂಡಲಸಂಗಮ ನಗುವನಯ್ಯ' ಎಂದು ಹೇಳಿ ಕೆಳಜಾತಿಯ ಜನರಲ್ಲಿ ಆತ್ಮಸ್ಥೈರ್ಯ ತುಂಬಿದ ಕೀರ್ತಿ ಬಸವಣ್ಣನಿಗೆ ಸಲ್ಲುತ್ತದೆ.

ಜನನದಿಂದ ಉತ್ತಮಿಕೆ ಬರುವುದಿಲ್ಲ ಎಂದು ಹೇಳುತ್ತಲೇ ಜನನದಿಂದಲೆ ಜಾತಿ ಹಾಗೂ ಸ್ಥಾನ ನಿರ್ಧಾರವನ್ನು ಶರಣರು ನಿರಾಕರಿಸಿದರು. ತಳವರ್ಗದ ಜನರು ಚಳವಳಿಗೆ ಗಾಂಭೀರ್ಯವನ್ನು ಧೀಮಂತಿಕೆಯನ್ನು ತಂದುಕೊಟ್ಟರು. ಅಲ್ಲಮನಿಂದ ಸೂಳೆ ಸಂಕವ್ವೆಯವರೆಗೆ ಕೆಳಜಾತಿಯವರು ಇದ್ದರು. ಇವರು ತಮ್ಮ ಜನನ ಸೂತಕದಿಂದ ಮುಕ್ತರಾಗಿ ಹೊಸ ಜೀವನವನ್ನು ಮಾಡುವ ಆಸೆ ಹೊಂದಿದ್ದರು. ಬಸವಣ್ಣ 'ಆಚಾರವೇ ಸ್ವರ್ಗ, ಅನಾಚರವೇ ನರಕ' ಎಂದರೆ ಮಾದರಾ ಚೆನ್ನಯ್ಯ 'ಆಚಾರವೇ ಕುಲ, ಅನಾಚಾರವೇ ಹೊಲೆಯ' ಎಂದು ಹೇಳುತ್ತಾರೆ. 'ವಚನ ರಚಿಸಿದ ಪ್ರಥಮ ದಲಿತ ಮಹಿಳೆ ಕಾಳವ್ವೆ ಗೋಮಾಂಸ ತಿನ್ನುವುದು ಕೀಳು ಎನ್ನುವ ಕಲ್ಪನೆಯನ್ನು ಪ್ರಶ್ನಿಸುತ್ತಾಳೆ.[೧೩] ಅಂದರೆ ಸಂಸ್ಕೃತೀಕರಣವಾದ ನಿರಾಕರಣೆ ಇಲ್ಲಿ ಇರುವುದನ್ನು ಕಾಣಬಹುದು.

ಜೇಡರ ದಾಸಿಮಯ್ಯ ಹಸಿವಿನ ಸುತ್ತ ಹುಟ್ಟುವ ಸಮಸ್ಯೆಗಳನ್ನು ದೇವರಿಗೆ ವಿವರಿಸುತ್ತಾ ಮನುಷ್ಯನಾಗಿ ಹೊಟ್ಟೆಯನ್ನಿಟ್ಟುಕೊಂಡು ಬಂದು ನೋಡು, ನಮ್ಮ ಕಷ್ಟ ಅರ್ಥವಾಗುತ್ತದೆ ಎಂದು ಹೇಳುತ್ತಾನೆ.[೧೪] ಹೀಗೆ ಮೇಲಿನ ಜಾತಿಯ ವಚನಕಾರರಲ್ಲಿ ಕಾಡುವ ಪ್ರಶ್ನೆ ಹಾಗೂ ತಳವರ್ಗದವರಲ್ಲಿ ಕಾಡುವ ಪ್ರಶ್ನೆ ಸಮಸ್ಯೆ ಭಿನ್ನವಾಗಿವೆ.

ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಎಲ್ಲಾ ಸವಲತ್ತುಗಳಿಂದಲೂ ವಂಚಿತರಾಗಿದ್ದ ದಲಿತರ ಬದುಕು ಇದ್ದೂ ಸತ್ತಂತೆಯೇ ಇತ್ತು. ಬಸವಣ್ಣ ತನ್ನ ಸಾಮೂಹಿಕ ಚಳವಳಿಯಲ್ಲಿ ಸಮಾನತೆ ತರುವುದರ ಮೂಲಕ ದಲಿತರಿಗೆ ಹೊಸ ಬದುಕು ಕಟ್ಟಿ ಕೊಟ್ಟ, ಸ್ಪರ್ಶದ ಸುಖ ಕೊಟ್ಟ, ದುಡಿಮೆಯ ಅವಕಾಶ ಕೊಟ್ಟ, ಅಪ್ಪನು ಮಾದಾರ ಚನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಎಂದು ಹೇಳುವುದರ ಮೂಲಕ ಶೋಷಿತ ವರ್ಗಕ್ಕೆ ಪ್ರಥಮ ಸ್ಥಾನ ಕಲ್ಪಿಸಿಕೊಟ್ಟ. ಶತಮಾನಗಳಿಂದ ಮೂಕರಾಗಿದ್ದ ದಲಿತರಿಗೆ ದನಿ ಕೊಟ್ಟ.[೧೫] ಕೆಳವರ್ಗದವರು ಮಾತನಾಡುವುದೇ ಅಪರಾಧವಾಗಿದ್ದ ಅಂದಿನ ವ್ಯವಸ್ಥೆಯಲ್ಲಿ ದಲಿತರು ದುಡಿವ ವರ್ಗದವರು ಮೊಟ್ಟ ಮೊದಲು ಬಾಯಿ ತೆರೆದು, ದನಿಯೆತ್ತಿ ಮಾತನಾಡಿದ್ದು, ಚರ್ಚಿಸಿದ್ದು, ನಮಗಿಂದು ಬಹಳ ಮುಖ್ಯವಾಗುತ್ತವೆ. ಒಂದು ಸಮಾಜ ವ್ಯವಸ್ಥೆಯನ್ನು ಮತ್ತು ಅದರ ರಕ್ಷಕ ಶಕ್ತಿಗಳನ್ನು ವಿರೋಧಿಸಿ ಕ್ರಾಂತಿಕಾರಕವಾಗಿ ಮಾತನಾಡುವ ಕೆಚ್ಚು ಜನಸಾಮಾನ್ಯರಲ್ಲಿ ಮೂಡಿದ್ದು, ಬಸವಣ್ಣನ ನಿಜವಾದ ಸಾಧನೆಯಾಗುತ್ತದೆ.

ದಲಿತನಾಗಿ ಹುಟ್ಟಿ ದಲಿತರಿಗಾಗಿ ಹೋರಾಟ ನಡೆಸುವುದು ಸುಲಭ. ಆದರೆ ದಲಿತೇತರನಾಗಿ ಹುಟ್ಟಿ ದಲಿತಪರ ಹೋರಾಟದ ಮಂಚೂಣಿಯಲ್ಲಿರುವುದು ತುಂಬಾ ಕಷ್ಟದ ಕೆಲಸ. ಬಸವಣ್ಣ ಇಂತಹ ಕಷ್ಟದ ಸವಾಲುಗಳನ್ನು ಎದುರಿಸಿದ. ಅಂತರ್‌ಜಾತಿಯ ವಿವಾಹವು ವಚನ ಚಳವಳಿಯ ಮತ್ತೊಂದು ಪ್ರಣಾಳಿಕೆಯಾಯಿತು. ಎಂ. ಚಿದಾನಂದಮೂರ್ತಿಯವರು ಚನ್ನಬಸವಣ್ಣನ ಬಗ್ಗೆ ಪ್ರಕಟಿಸಿರುವ ತಮ್ಮ ಪ್ರಬಂಧದಲ್ಲಿ ಬಸವಣ್ಣನು ಅಂತರ್‌ಜಾತಿಯ ವಿವಾಹದ ಬಗ್ಗೆ ತಳೆದ ಪ್ರಗತಿಶೀಲ ನಿಲುವಾದ, ಶಿವಭಕ್ತನಾದ

ಮೇಲೆ ಅವನು ಎಲ್ಲರಿಗೂ ಸಮಾನ. ಅವನ ಜೊತೆ ಭಕ್ತರೆಲ್ಲರೂ ವೈವಾಹಿಕ ಸಂಬಂಧ ಮಾಡಬಹುದು ಮತ್ತು ಮಾಡಬೇಕು ಎಂಬ ನಿಲುವನ್ನು ಶ್ಲಾಘಿಸಿದ್ದಾರೆ.[೧೬]

ಪುರುಷರು ಮಹಿಳೆಯನ್ನು ಧಾರ್ಮಿಕ ಕ್ಷೇತ್ರದಿಂದ ದೂರವಿಟ್ಟಿದ್ದ ಸಮಯದಲ್ಲಿ, ವಚನಕಾರರು ಧಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಪ್ರಧಾನ ಸ್ಥಾನ ಕೊಡುವುದರ ಮೂಲಕ ಅವಳನ್ನು ಸಮಾಜದ ಬಹುಮುಖಿಗೆ ತಂದರು. ಅಕ್ಕಮಹಾದೇವಿ ಒಬ್ಬ ಶಿವಶರಣೆಯಾಗಿದ್ದಳು, ವಿಭೂತಿ ರುದ್ರಾಕ್ಷಿ ಧರಿಸುತ್ತಿದ್ದಳು ಎನ್ನುವುದರ ಜೊತೆ ಆಕೆ ಅನುಭವ ಮಂಟಪದ ಅನಿವಾರ್ಯ ಅಂಗವಾಗಿದ್ದಳು ಎಂಬುದು ತುಂಬಾ ಮುಖ್ಯವಾಗುತ್ತದೆ. ಅಕ್ಕ ಇರಲಾರದೆ ಅನುಭವ ಮಂಟಪಕ್ಕೆ ಅಸ್ತಿತ್ವವೆಂಬುದಿಲ್ಲ ಎನ್ನುವಂತಾಯಿತು. ಹೀಗೆ ಧಾರ್ಮಿಕ ಕ್ಷೇತ್ರದಿಂದ ದೂರವಾಗಿದ್ದ ಮಹಿಳೆ ಅದೇ ಧಾರ್ಮಿಕ ಕ್ಷೇತ್ರಕ್ಕೆ ಅನಿವಾರ್ಯವಾಗಿರುವುದು ತುಂಬಾ ಮುಖ್ಯವಾಗುತ್ತದೆ. ಅದೇ ರೀತಿಯಾಗಿ ಗಂಡು ಹೆಣ್ಣೆಂಬ ಭೇದವನ್ನು ತೊಡೆದು ಸಮಾನತೆಯನ್ನು ಒತ್ತಿ ಹೇಳಿದ ಕಾಳವ್ವೆ, ಗೊಗ್ಗವ್ವೆ, ಸೂಳೆ ಸಂಕವ್ವೆ ಮುಂತಾದ ವಚನಕಾರ್ತಿಯರು ಸಾಮಾಜಿಕ ಸಿದ್ಧಾಂತಗಳನ್ನು ಹುಟ್ಟು ಹಾಕಿದ ಹರಿಕಾರರಾಗಿದ್ದಾರೆ. ಮೋಳಿಗೆ ಮಹಾದೇವಮ್ಮ ಮಹಾರಾಣಿಯಾಗಿದ್ದವಳು. ವಚನ ಸಂಸ್ಕೃತಿಗೆ ಮಾರು ಹೋಗಿ ಗಂಡ ಹೆಂಡತಿಯರಿಬ್ಬರೂ ಪ್ರಭುತ್ವವನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದವರು. ಕಲ್ಯಾಣದಲ್ಲಿ ಗಂಡನ ಜೊತೆ ಈಕೆ ಕಟ್ಟಿಗೆ ಮಾರುವ ಕಾಯಕದಲ್ಲಿ ತೊಡಗಿದಳು. ವೈರಾಗ್ಯ ಹಾಗೂ ಸನ್ಯಾಸ ಜೀವನ ಪುರುಷರಿಗೆ ಮಾತ್ರ ಮೀಸಲಾಗಿದ್ದ ಕಾಲದಲ್ಲಿ ಅಕ್ಕಮಹಾದೇವಿಯು ಸಂಸಾರ ಗಂಡ ಕುಟುಂಬವನ್ನು ತ್ಯಜಿಸಿ ಕೇಶಾಂಬರೆಯಾಗಿ ಸಮಾಜ ಸುಧಾರಣೆಗೆ ಇಳಿದಿದ್ದು ಚಳವಳಿಯ ಮಹತ್ವವನ್ನು ತೋರಿಸುತ್ತದೆ.[೧೭]

ಅಕ್ಕಮಹಾದೇವಿ ಎರಡು ನೆಲೆಯಲ್ಲಿ ಹೋರಾಟ ನಡೆಸಿದಂತೆ ಕಾಣುತ್ತದೆ. ಶಿವಶರಣೆಯಾಗಿ ವಚನ ಸಂಸ್ಕೃತಿಯ ನೆಲೆಯಲ್ಲಿ ಆಕೆಯದು ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರುವುದು ಒಂದು ನೆಲೆಯ ಹೋರಾಟವಾದರೆ ಆಕೆ ಹೆಣ್ಣಾಗಿ ನಡೆಸಿದ ಹೋರಾಟದ ನೆಲೆ ಬೇರೊಂದು. ಹೆಣ್ಣಾಗಿ ಆಕೆ ಎದುರಿಸಿದ ತಾರತಮ್ಯ, ಲಿಂಗಸಂಬಂಧಿ ಆಕ್ರಮಣ, ಲೈಂಗಿಕವಾದ ದಬ್ಬಾಳಿಕೆಯ ವಿರುದ್ಧ ತನ್ನ ವಚನಗಳಲ್ಲಿ ಧ್ವನಿ ಎತ್ತಿದ್ದಾಳೆ. ಉದಾಹರಣೆಗೆ ಮಹಾದೇವಿಯ ರೂಪಕ್ಕೆ ಮರುಳಾಗಿ, ಆಕೆಯ ಮೇಲೆ ಲೈಂಗಿಕ ಆಕ್ರಮಣ ಮಾಡಿದ ಕಿನ್ನರಿ ಬೊಮ್ಮಯ್ಯ ಕೊನೆಗೆ ಆಕೆಯ ಸಿದ್ಧಿ ಸಾಧನೆಗಳ ಅರಿವಾಗಿ ಮರುಗುತ್ತಾನೆ. 'ಹುಲಿಯ ನೆಕ್ಕಿ ಬದುಕಿದೆನು' ಎಂದು ಉದ್ಗಾರ ತೆಗೆಯುತ್ತಾನೆ.[೧೮] ಅಕ್ಕಮಹಾದೇವಿ ಬಾಳಿ ಬದುಕಿದ್ದು, ಸಮಾಜ ಸುಧಾರಣಾ ಕಾರ್ಯದಲ್ಲಿ ತೊಡಗಿದ್ದು ೮೦೦ ವರ್ಷಗಳ ಹಿಂದೆಯಾದರೂ, ತಮ್ಮ ವಚನಗಳ ಮೂಲಕ ಇಂದು ಸಹಾ ಆಕೆ ನಮ್ಮೊಡನಿದ್ದಾಳೆ ಮತ್ತು ಸ್ತ್ರೀ ಚಳವಳಿಗಾರರ ಧ್ವನಿಯಲ್ಲಿ ಆಕೆ ಪ್ರತಿಧ್ವನಿಸುತ್ತಿದ್ದಾಳೆ. ವಚನಗಳ ಮೂಲಕ ನಮ್ಮ ಜೊತೆ ಹಾಗೂ ಸಮಾಜದ ಜೊತೆ ಮಾತನಾಡುತ್ತಿದ್ದಾಳೆ. ಮಹಿಳೆಯರಲ್ಲಿ ಅಜ್ಞಾನ, ಮೌಢ್ಯ, ಕೀಳರಿಮೆ ಮೊದಲಾದುವನ್ನು ಹೋಗಲಾಡಿಸಿ ಸ್ವಾವಲಂಬನೆ ಮತ್ತು ಸಮಾನತೆಯನ್ನು ತಂದುಕೊಟ್ಟಿದುದ್ದು ಅವರ ಮಹತ್ತರ ಸಾಧನೆಯಾಗಿದೆ. ಅದು ಇಂದಿಗೂ ಪ್ರಸ್ತುತ.

ಇಂದು ಕರ್ನಾಟಕದಲ್ಲಿ ಆರಂಭವಾಗಿರುವ ಸ್ತ್ರೀಶಕ್ತಿ ಕಾರ್ಯಕ್ರಮಗಳಿಗೆ ಬಸವಣ್ಣನ ಸಮಾನತೆಯ ಮತ್ತು ಕಾಯಕದ ವಿಚಾರಗಳೇ ಸ್ಫೂರ್ತಿದಾಯಕವಾಗಿವೆ ಎನ್ನಬಹುದು.

ಬಸವಣ್ಣ ಸಾಮಾಜಿಕ ಬೆಳವಣಿಗೆಗಾಗಿ ರೂಪಿಸಿದ ಮತ್ತೊಂದು ಕಾರ್ಯಕ್ರಮ ದಾಸೋಹ. ಆ ಮೂಲಕ ಶೈಕ್ಷಣಿಕ ಬೆಳವಣಿಗೆಗೆ ದಾರಿ ಮಾಡಿಕೊಟ್ಟರು. ಮೇಲಾಗಿ ಅಸಹಾಯಕ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಯಿತು. ಇಂದಿನ ವೃದ್ಧಾಶ್ರಮ ಪರಿಕಲ್ಪನೆಯ ಮೂಲವನ್ನು ಅಲ್ಲಿ ಕಾಣಬಹುದಾಗಿದೆ. ಬಸವಣ್ಣನ ಅನುಭವ ಮಂಟಪವು ವಚನಕಾರರ ಪ್ರಯೋಗ ಶಾಲೆಯಾಗಿತ್ತು. ಜಾತಿ, ವರ್ಗ, ವರ್ಣಭೇದ ಕಾಯಕ ಭೇದ ತೊಡೆದು ಶರಣರೆಲ್ಲಾ ಒಟ್ಟಾಗಿ ಕಲೆತು ಮಾಡಿದ ವೈಚಾರಿಕ ಮಂಥನದ ಫಲವೇ ವಚನಗಳ ಸಾರವಾಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸುವುದಾದಲ್ಲಿ ಬಸವಣ್ಣನ ಕಾಯಕ ಆಧಾರಿತ ಸಾಮಾಜಿಕ ಸುಧಾರಣೆ ಭೂ ಒಡೆತನದ ವಿರೋಧಿಯಾಗಿದ್ದು ರೈತ ಸ್ವಾವಲಂಬನೆಯ ಪರವಾಗಿದ್ದಿತು. ಸಾಮಾಜಿಕ ದೂಷಣೆಗಳಲ್ಲೊಂದಾದ ಜಾತಿ ಪದ್ಧತಿಯನ್ನು ತೊಡೆದು ಹಾಕಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಇಂತಹ ಮಹತ್ಕಾರ್ಯವನ್ನು ಇಂದಿನ ಸಂಘ-ಸಂಸ್ಥೆಗಳು, ಮಠ ಮಾನ್ಯಗಳು, ರಾಜಕೀಯ ಪಕ್ಷಗಳು ಪ್ರಾಮಾಣಿಕವಾಗಿ ಮುಂದುವರಿಸಬೇಕಾದುದು ಪ್ರಸ್ತುತವಾಗಿದೆ.

ಹೈದರಾಬಾದ್ ಕರ್ನಾಟಕದ ಜನರು, ಸಮಾಜದ ಮೇಲೆ ಹಾಗೂ ಇಲ್ಲಿನ ಸಾಮಾಜಿಕ ಸುಧಾರಣೆ ಯಲ್ಲಿ ವಚನ ಚಳವಳಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎನ್ನುವುದನ್ನು ಹಾಗೂ ಬಸವಣ್ಣನ ತತ್ವಗಳು ಮತ್ತು ಚಿಂತನೆಗಳು ಇಂದು ಎಷ್ಟರಮಟ್ಟಿಗೆ ಅನುಸರಣೆಯಲ್ಲಿವೆ ಎಂದು ವಿಶ್ಲೇಷಿಸಿದರೆ, ಧನಾತ್ಮಕ ಮತ್ತು ಋಣಾತ್ಮಕ ಅಂಶಗಳು ಕಂಡುಬರುತ್ತವೆ. ಬಸವಣ್ಣನ ತತ್ವಗಳನ್ನು ಒಪ್ಪಿಕೊಂಡ ಕೆಲವು ಜನರು, ಸಂಘಟನೆಗಳು ಇಲ್ಲಿನ ಸಮಾಜ ಸುಧಾರಣೆಗೆ ಕಾರ್ಯೋನ್ಮುಖರಾಗಿದ್ದಾರೆ. ನಿಜಾಮನ ಆಳ್ವಿಕೆ ವಿರುದ್ಧ ರಜಾಕಾರರ ದಬ್ಬಾಳಿಕೆಯ ವಿರುದ್ಧ ಹೋರಾಟ ಮಾಡಿದ ಪ್ರಮುಖರಲ್ಲಿ ಹೆಚ್ಚಾಗಿ ಬಸವಣ್ಣನ ತತ್ವಗಳನ್ನು ಒಪ್ಪಿಕೊಂಡಿದ್ದ, ಅನುಸರಿಸುತ್ತಿದ್ದ ವೀರಶೈವ ಪಂಗಡಗಳು, ಮಠಗಳು, ಆರ್ಯಸಮಾಜ ಪ್ರತಿಭಟನೆ ನಡೆಸಿದ್ದು ಕಂಡುಬರುತ್ತದೆ.

ವಚನ ಚಳವಳಿಯ ಪ್ರಭಾವಕ್ಕೆ ಒಳಗಾಗಿದ್ದ ಶ್ರೀ ರಾಘವೇಂದ್ರರಾಯರು, ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಎಲ್ಲಾ ವರ್ಗದವರಿಗಾಗಿ ಗುರುಕುಲ ಎನ್ನುವ ರಾಷ್ಟ್ರೀಯ ಶಾಲೆಯನ್ನು ಕುಕನೂರಿನಲ್ಲಿ ಸ್ಥಾಪಿಸಿ ರಾಷ್ಟ್ರಭಕ್ತಿಯನ್ನು ಸಾರುತ್ತಾ, ರಾಜಕೀಯ, ಸಾಮಾಜಿಕ ಸುಧಾರಣೆಗೆ ಪ್ರಯತ್ನಿಸಿದರು. ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಬಸವಣ್ಣನ ತತ್ವಗಳ ಪರಿಪಾಲಕನಾಗಿದ್ದ ಜೇವರ್ಗಿ ತಾಲೂಕಿನ ಕುಳಗೇರಿ ಗ್ರಾಮದ ಚನ್ನಬಸಪ್ಪ ಕುಳಗೇರಿ ತಮ್ಮ ಗ್ರಾಮದ ದಲಿತರಿಗೆ ದೇವಾಲಯದ ಪ್ರವೇಶ ಕೊಡಿಸಲು ಬಯಸಿ ಗ್ರಾಮದ ಪ್ರಮುಖರನ್ನು ಎಲ್ಲಾ ಜಾತಿ ಧರ್ಮದ ಹಿರಿಯರನ್ನು ಮನವೊಲಿಸಿ ಎಲ್ಲಾ ಗ್ರಾಮ

ಪ್ರಮುಖರೊಂದಿಗೆ ದಲಿತರಿಗೆ ದೇವಸ್ಥಾನ, ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮಾಡಿಸಿದ್ದು ಕ್ರಾಂತಿಕಾರಕ ಸಾಧನೆ ಎನ್ನಬಹುದು.

ಬಸವಣ್ಣನ ಚಿಂತನೆಗಳನ್ನು, ಕಾಯಕ ತತ್ವವನ್ನು, ವಚನ ಚಳವಳಿಯ ಸಂದೇಶವನ್ನು ಮುಂದುವರೆಸಿ ಕೊಂಡು ಹೋಗುತ್ತಿರುವ ಗುಲಬರ್ಗಾದ ಶ್ರೀ ಶರಣಬಸವೇಶ್ವರ ಸಂಸ್ಥಾನದ ಹಿಂದಿನ ಪೀಠಾಧಿಪತಿಗಳಾಗಿದ್ದ ಮಹಾ ದಾಸೋಹಿ ದೊಡ್ಡಪ್ಪ ಅಪ್ಪ ಮತ್ತು ಅವರ ಅನುಯಾಯಿಗಳು ಸ್ವಾತಂತ್ರ್ಯ ಸಂಗ್ರಾಮ ಹಾಗೂ ಕರ್ನಾಟಕ ಏಕೀಕರಣದ ಕೇಂದ್ರಬಿಂದುವಾಗಿದ್ದರು. ಅನಾಥರಿಗೆ, ಬಡವರಿಗೆ, ಹೆಣ್ಣುಮಕ್ಕಳಿಗೆ, ಶಾಲೆಗಳನ್ನು ತೆರೆದು ಅನ್ನ, ಅಶ್ರಯದ ಜೊತೆಗೆ ಜ್ಞಾನ ದಾಸೋಹವನ್ನು ನೀಡಿದರು. ಜೋಳಿಗೆ ಭಿಕ್ಷೆಯಿಂದ ಬಂದ ಹಣ, ಧಾನ್ಯದಿಂದ ವಿದ್ಯಾರ್ಥಿಗಳಿಗೆ ಉಣಬಡಿಸಿದರು. ಈ ಮೂಲಕ ದಲಿತರ, ಮಹಿಳೆಯರ ವಿಮೋಚನ ಕಾರರಾಗಿ ಗುಲಬರ್ಗಾವನ್ನು ಆಧ್ಯಾತ್ಮಕ ಕಲ್ಯಾಣವನ್ನಾಗಿಸಿದರು. ರಜಾಕಾರರ ಹಾವಳಿ ಸಂದರ್ಭದಲ್ಲಿ ಗುಲಬರ್ಗಾದ ಸುತ್ತಮುತ್ತಲಿನ ಜನರೆಲ್ಲಾ ತಮ್ಮ ಪ್ರಾಣ ರಕ್ಷಣೆಗೆ ಮನೆ, ಆಸ್ತಿ ಬಿಟ್ಟು ಬಂದಾಗ ಸುಮಾರು ಮೂವತ್ತು ನಲವತ್ತುಸಾವಿರ ನಿರಾಶ್ರಿತರಿಗೆ ಜಾತಿ, ವರ್ಗ ಎಂದು ನೋಡದೆ ಅನ್ನ ಆಶ್ರಯದ ವ್ಯವಸ್ಥೆ ಮಾಡಿದರು. ಅದರಲ್ಲಿನ ಕೆಲ ಹುಡುಗರಿಗೆ ಮಠದಲ್ಲಿ ವಿದ್ಯಾರ್ಜನೆ ಆರಂಭಿಸಲು ಅವಕಾಶ ನೀಡಿದರು ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಶ್ರೀ ಶರಣಬಸವೇಶ್ವರ ಸಂಸ್ಥಾನ ಕೇಂದ್ರ ತಾಣವಾಗಿತ್ತು.

ಬಸವಣ್ಣನ ತತ್ವಗಳ ಪರಿಪಾಲಕರಾಗಿರುವ ಅನೇಕ ಮಠಗಳು, ವೀರಶೈವ ಪಂಗಡಗಳು, ಸಂಸ್ಥೆಗಳು, ಹೈದರಾಬಾದ್ ಕರ್ನಾಟಕದಲ್ಲಿ ಅನಾಥರಿಗೆ ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ವಿದ್ಯಾ ದಾನ ಮಾಡುತ್ತಾ ಆಸರೆಯಾಗಿವೆ. ಶರಣ ಸಾಹಿತ್ಯ ಶಿವಾನುಭವ, ಮಹಾಮನೆ, ಅನುಭವ ಮಂಟಪ, ವಚನ ಪೀಠ ಸ್ಥಾಪನೆ, ವಚನಗಳನ್ನು ವಿವಿಧ ಭಾಷೆಗಳಿಗೆ ತುರ್ಜುಮೆ, ಸಾಮೂಹಿಕ ವಿವಾಹಗಳು, ಲಿಂಗದೀಕ್ಷೆ, ಜಾತ್ರೆಗಳು, ಹರಿಕಥೆಗಳ ಮೂಲಕ ಎಲ್ಲಾ ವರ್ಗದ ಜಾತಿಯ ನಡುವೆ ಸಾಮರಸ್ಯ ತರಲು ಪ್ರಯತ್ನಿಸುತ್ತಿವೆ. ಇಲ್ಲಿ ಸ್ಥಾಪಿತವಾಗಿರುವ ವೀರಶೈವ ಶಿಕ್ಷಣ ಸಂಸ್ಥೆಗಳು, ಸಂಘಟನೆಗಳು ಶಿಕ್ಷಣದಿಂದ ವಂಚಿತವಾಗಿರುವ ನಿರ್ಲಕ್ಷಿತರಿಗೆ, ಕೆಳವರ್ಗದವರಿಗೆ ಶಿಕ್ಷಣದ ಅವಕಾಶ ಮಾಡಿಕೊಟ್ಟಿವೆ. ಸಮಾಜದ ಏಳಿಗೆಗೆ ಸಾಮರಸ್ಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡಿವೆ.

ಬಸವಣ್ಣನ ತತ್ವ ಸಿದ್ಧಾಂತಗಳನ್ನು ಇಂದಿನ ಸಮಾಜದಲ್ಲಿ ಜನರಾಗಲಿ, ಮಠಗಳಾಗಲಿ ಯಥಾವತ್ತಾಗಿ ಪಾಲಿಸುತ್ತಿರುವುದು ವಿರಳವಾಗಿದ್ದರೂ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಕೆಲವು ತತ್ವಗಳನ್ನು ಪಾಲಿಸುವಷ್ಟರಮಟ್ಟಿಗೆ ಪ್ರಭಾವವನ್ನು ಕಾಣಬಹುದು. ಈ ನಿಟ್ಟಿನಲ್ಲಿ ವೀರಶೈವ ವಿರಕ್ತ ಮಠಗಳಲ್ಲಿ ಸ್ವಲ್ಪ ಬದಲಾವಣೆ ಕಂಡುಬಂದಿದ್ದು, ಜಾತ್ಯಾತೀತವಾಗಿ ಅನ್ನ ಮತ್ತು ಜ್ಞಾನ ದಾಸೋಹದಲ್ಲಿ ತೊಡಗಿ ರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಕೊಪ್ಪಳದ ಶ್ರೀ ಗವಿಮಠ. ಇಲ್ಲಿ ಹಿಂದೂ, ದಲಿತ,

ಮುಸ್ಲಿಂ ಹೀಗೆ ಎಲ್ಲಾ ವರ್ಗದ ಬಡ ವಿದ್ಯಾರ್ಥಿಗಳಿಗೆ ಉಚಿತ ಆಶ್ರಯ, ಊಟ, ಶಿಕ್ಷಣ ನೀಡುತ್ತಿದೆ. ಹೀಗೆ ಇನ್ನೂ ಅನೇಕ ಮಠಗಳು, ಸಂಸ್ಥೆಗಳ ಕಾರ್ಯಗಳಲ್ಲಿ ವಚನ ಚಳವಳಿಯ ಪ್ರಭಾವ ಎದ್ದು ಕಾಣುತ್ತದೆ.

ಹಾಗೆಯೆ ಹೈದರಾಬಾದ್ ಕರ್ನಾಟಕದ ಸಮಾಜದ ಇನ್ನೊಂದು ಮುಖವನ್ನು ನೋಡಿದಾಗ ಬಸವಣ್ಣನ ತತ್ವಗಳೇನು, ಆದರ್ಶಗಳೇನು, ಅವುಗಳನ್ನು ಅನುಸರಿಸುತ್ತಿದ್ದೇವೆಯೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಏಕೆಂದರೆ ಇನ್ನೂ ಕೂಡ ವೀರಶೈವ ಸಂಘಟನೆಗಳಿಗೆ, ಪ್ರಜ್ಞಾವಂತ ಸಮಾಜಕ್ಕೆ ತಳಸ್ಪರ್ಶಿಯಾದ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ಸಬಾಲ್ಟರ್ನ್ ಚರಿತ್ರೆಗೆ ಮುನ್ನುಡಿ ಬರೆದಿದ್ದೆ ಬಸವಣ್ಣನ ವಚನಗಳು. ಆದರೆ ಇಂದು ತಳವರ್ಗದವರನ್ನು ಒಪ್ಪಿಕೊಳ್ಳುವ ಅಪ್ಪಿಕೊಳ್ಳುವ ಮನೋಭಾವ ಇಲ್ಲಿ ಮೂಡುತ್ತಿಲ್ಲ. ಬಸವಣ್ಣನ ಸಂದೇಶಗಳನ್ನು ಒಪ್ಪಿಕೊಂಡು ಆಚರಣೆಗೆ ತಂದಿದ್ದ ಪಕ್ಷದಲ್ಲಿ ಇಲ್ಲಿ ಬೇರೆ ಧರ್ಮಗಳ ಪ್ರಸಾರಕ್ಕೆ ಅವಕಾಶವಿರುತ್ತಿರಲಿಲ್ಲ. ಇಂದು ಇಲ್ಲಿ ನಡೆಯುತ್ತಿರುವ ಮತಾಂತರ ಪ್ರಕ್ರಿಯೆ ನಡೆಯುತ್ತಿರಲಿಲ್ಲ. ಜಾತೀಯತೆಗೆ, ಅಸಮಾನತೆಗೆ ಅವಕಾಶವಿರುತ್ತಿರಲಿಲ್ಲ. ಪ್ರತಿ ಊರಲ್ಲಿ ಇರುವ ದಲಿತರ ಕೇರಿಗಳು ಇರಬಾರದಾಗಿತ್ತು. ಅಷ್ಟೇ ಏಕೆ ಬಸವಾದಿ ತತ್ವಗಳು ನಿಜವಾಗಿ ಪ್ರಚಾರಕ್ಕೆ ಬಂದಿದ್ದರೆ ಇಲ್ಲಿ ದಲಿತ ಎನ್ನುವುದೇ ಇರಬಾರದಾಗಿತ್ತು.

ಆದರೆ ಇಂದು ಹೈದರಾಬಾದ್ ಕರ್ನಾಟಕದ ವಾಸ್ತವ ಪರಿಸ್ಥಿತಿಯನ್ನು ನೋಡಿದರೆ, ೧೨ನೇ ಶತಮಾನದಲ್ಲಿ ಸಾಮಾಜಿಕ ಧಾರ್ಮಿಕ ಕ್ರಾಂತಿಯಾಗಿದ್ದು, ಬಸವಣ್ಣ ಓಡಾಡಿದ್ದು ಇದೇ ನೆಲದಲ್ಲಿಯೆ ಎನ್ನುವ ಅನುಮಾನ ಮೂಡುತ್ತದೆ. ಏಕೆಂದರೆ ಜಾತೀಯತೆಯ ಅವಮಾನ, ಅಸ್ಥಿರತೆಯನ್ನು ತಾಳಲಾರದೇ ಅತೀ ಹೆಚ್ಚು ದಲಿತರು, ಕ್ರೈಸ್ತ ಮತ್ತು ಬೌದ್ಧ ಧರ್ಮಗಳಿಗೆ ಮತಾಂತರವಾಗುತ್ತಿರುವುದು ಹೈದರಾಬಾದ್ ಕರ್ನಾಟಕದಲ್ಲಿಯೇ, ಜಾತಿ ಸಂಘರ್ಷಗಳು ಆಗುತ್ತಿರುವುದು ಇಲ್ಲಿಯೇ. ಮನುಷ್ಯ ಮನುಷ್ಯನನ್ನೇ ಕೀಳಾಗಿ ನೋಡುವ ನಡೆಸಿಕೊಳ್ಳುವ ಪದ್ಧತಿ ಇರುವುದು ಇಲ್ಲಿಯೇ. ಬಸವಣ್ಣ ಜಾತಿಯತೆ, ಮಡಿವಂತಿಕೆ, ಅಸ್ಪೃಶ್ಯತೆ ವಿರೋಧಿಸಿ ವರ್ಗರಹಿತ ಜಾತಿರಹಿತ ಸಮಾಜದ ಕನಸು ಕಂಡಿದ್ದ. ಆದರೆ ಇಲ್ಲಿ ಇಂದು ಇವುಗಳನ್ನು ತೊಡೆದು ಹಾಕುವುದರ ಬದಲಾಗಿ ಧರ್ಮವೇ ಒಡೆದು ಹೋಗಿ ಅನೇಕ ಪಂಗಡಗಳಾಗಿರುವುದನ್ನು ಕಾಣಬಹುದಾಗಿದೆ. ಲಿಂಗಾಯತರಲ್ಲಿಯೇ ಪಂಚಾಚಾರ್ಯ, ಬಣಜಿಗ, ಸಾದರ, ಶಿವಸಂಪಿಗೆ, ಗಾಣಿಗ ಹೀಗೆ ಅನೇಕ ಪಂಗಡಗಳಾಗಿ ಒಡೆದು ಹೋಗಿವೆ. ಒಂದೊಂದು ಪಂಗಡದವರು ಇನ್ನೊಂದು ಪಂಗಡದೊಡನೆ ವೈವಾಹಿಕ, ಧಾರ್ಮಿಕ, ಸಂಬಂಧಗಳನ್ನು ಬೆಳೆಸಿಕೊಳ್ಳದಷ್ಟು ಅಂತರ ಸೃಷ್ಟಿಸಿಕೊಂಡು ಬಿಟ್ಟಿದ್ದಾರೆ. ಯಾವ ಸಾಮಾಜಿಕ ಅಸಮಾನತೆಯನ್ನು ಬಸವಣ್ಣ ತೊಡೆದು ಹಾಕಲು ಪ್ರಯತ್ನಿಸಿದನೋ, ಯಾವ ಪಂಗಡಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದನೋ ಆ ಪಂಗಡಗಳು ಇಂದು ಗಟ್ಟಿಯಾಗುತ್ತಿರುವುದು ನಿಜಕ್ಕೂ ಶೋಚನೀಯವಾಗಿದೆ.

ಇಂದು ಬಸವಣ್ಣನ ತತ್ವಗಳನ್ನು, ಆದರ್ಶಗಳನ್ನು ಇಟ್ಟುಕೊಂಡು ಲೇಖನಗಳನ್ನು ಪ್ರಕಟಿಸಿ ಹೆಸರು ಮಾಡುತ್ತಿದ್ದಾರೆ. ಇವರ ತತ್ವಗಳ ಕುರಿತು ಭಾಷಣಗಳು, ಚಿಂತನ ಮಂಥನಗಳು, ಗೋಷ್ಠಿಗಳು

ನಿರಂತರವಾಗಿ ನಡೆಯುತ್ತಿವೆ. ಅದೇ ಬಸವಣ್ಣನ ತತ್ವಗಳ ಆಚರಣೆಗಳ ಪ್ರಶ್ನೆ ಬಂದಾಗ ಸಮಾಜ ಯಥಾವತ್ತಾಗಿ ಮುಂದುವರಿದಿದೆ. ಆಚಾರಗಳು ನಿಷ್ಫಲವಾಗುತ್ತಿವೆ. ಕೆಲವು ವೀರಶೈವರು ಬಸವಣ್ಣನ ತತ್ವಗಳನ್ನು ತಾವೂ ಆಚರಿಸಲಿಲ್ಲ, ಓದಲಿಲ್ಲ ಹಾಗೂ ಓದುವವರಿಗೂ ಕೊಡಲಿಲ್ಲ, ಹೊರಗಡೆ ಹರಡಲು ಬಿಡಲಿಲ್ಲ. ಭಾರತದ ಸಬಾಲ್ಟರ್ನ್ ಚರಿತ್ರೆಗೆ ಮುನ್ನುಡಿ ಬರೆದಂತ ಬಸವಣ್ಣನ ವಚನಗಳನ್ನು ಒಂದು ವರ್ಗಕ್ಕೆ ಸೀಮಿತಗೊಳಿಸಿ ಅದನ್ನು ಹರಡದಂತೆ ನೋಡಿಕೊಳ್ಳುತ್ತಿರುವುದು ಸಮಾಜದಲ್ಲಿ ಒಳ್ಳೇಯ ಬೆಳವಣಿಗೆಯಲ್ಲ. ಆದರೆ ಇದಕ್ಕೆ ಕಾರಣ ಏನು ಹಾಗೂ ಕಾರಣರಾದವರು ಯಾರು ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸುವುದು ಅಷ್ಟು ಸುಲಭವಲ್ಲ.

ಒಟ್ಟಿನಲ್ಲಿ ಬಸವಣ್ಣನ ತತ್ವಗಳು, ಚಿಂತನೆಗಳು, ಸಂದೇಶಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ಅದರಲ್ಲೂ ೨೧ನೇ ಶತಮಾನದಲ್ಲಿ ವೈಜ್ಞಾನಿಕತೆ, ತಾಂತ್ರಿಕತೆಯಿಂದ ಜಗತ್ತೇ ಒಂದು ಮನೆಯಂತೆ ಆಗುತ್ತಿದೆ. ಆದರೆ ಮನುಷ್ಯನ ಆಲೋಚನೆಗಳಲ್ಲಿ ಮಾತ್ರ ಸ್ವಾರ್ಥ, ದ್ವೇಷ, ಮೇಲು, ಕೀಳು, ಶ್ರೀಮಂತ, ಬಡವ ಎಂಬ ಭಾವನೆಗಳು ಹೆಚ್ಚಾಗಿ ಸಮಾಜದ ಸ್ವಾಸ್ಥವೇ ಹಾಳಾಗುತ್ತಿದೆ. ಇನ್ನಾದರೂ ಬಸವಣ್ಣನ ತತ್ವಗಳನ್ನು ಒಮ್ಮೆ ಪುನರ್ ನೆನಪು ಮಾಡಿಕೊಂಡು, ಅದರಂತೆ ಸ್ವಲ್ಪ ಭಾಗವಾದರೂ ನಡೆಯಲು ಪ್ರಯತ್ನಿಸಿದರೆ ಬಸವಣ್ಣನ ಪ್ರಯತ್ನಕ್ಕೆ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುತ್ತದೆ.

೩.೨. ಸೂಫಿ ಪರಂಪರೆ

ಸೂಫಿ ಎಂಬುದು ೧೧ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ಅನುಭಾವಿ ಪಂಥವಾಗಿದೆ. ಇದು ತನ್ನದೇ ಆದ ತತ್ವಗಳ ಮೂಲಕ ಜನಪ್ರಿಯವಾಗಿ ಬೆಳೆಯಿತು. ಸಮಾಜ ಸುಧಾರಣೆ ಕಾರ್ಯದಲ್ಲಿ ಶರಣರ ನಂತರ ಭೂಮಿಕೆಯನ್ನು ಪ್ರವೇಶಿಸಿದ ಸೂಫಿಗಳು ಶರಣರ ಪರಂಪರೆಯನ್ನು ಮುಂದುವರೆಸುವುದರ ಜೊತೆಗೆ ತಮ್ಮದೇ ಆದ ಹಾದಿಯಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಯನ್ನು ಆರಂಭಿಸಿದರು. ಇಸ್ಲಾಮಿನ ಮೂಲಭೂತವಾದದ ವಿರುದ್ಧ ತಾತ್ವಿಕವಾಗಿ ಬಂಡೆದ್ದ ಸೂಫಿಗಳು ತಮ್ಮದೇ ಆದ ಪರ್ಯಾಯ ಚಿಂತನೆಗಳನ್ನು ಮಾಡುತ್ತಾ, ಏನೆಲ್ಲಾ ಮಾಡಬಹುದು, ಸಾಧ್ಯವಾಗಿಸಬಹುದು ಎಂಬುದನ್ನು ತೋರಿಸಿಕೊಟ್ಟ ಅವರ ಶೈಲಿ ಸಂಶೋಧಕರಿಗೆ ಕುತೂಹಲವಾಗಿ ಕಾಣುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಸೂಫಿ ಚಳವಳಿಯ ಪ್ರಭಾವವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ, ಮೊದಲು 'ಸೂಫಿಸಂ' ಎಂದರೇನು, ಸೂಫಿಗಳು ಎಲ್ಲಿಂದ ಬಂದರು, ಬಂದ ಉದ್ದೇಶವೇನು, ಹೈದರಾಬಾದ್ ಕರ್ನಾಟಕ ಭಾಗದಲ್ಲೇ ಹೆಚ್ಚಾಗಿ ನೆಲೆಯೂರಲು ಕಾರಣವೇನು, ಅವರು ಮಾಡಿದ ಪ್ರಚಾರ ಎಂತಹುದು, ಇದರಿಂದ ಸಮಾಜದ ಮೇಲಾದ ಪರಿಣಾಮವೇನು ಎನ್ನುವುದನ್ನು ಅಧ್ಯಯನ ಮಾಡಬೇಕಾಗುತ್ತದೆ. ನಂತರ ಸಮಕಾಲೀನ ಸಮಾಜಕ್ಕೆ ಸೂಫಿ ಚಿಂತನೆಗಳು ಎಷ್ಟರಮಟ್ಟಿಗೆ ಪ್ರಸ್ತುತವಾಗುತ್ತವೆ ಮತ್ತು ಅವಶ್ಯಕವಾಗಿವೆ ಹಾಗೂ ಆ ಚಿಂತನೆಗಳನ್ನು ಅಳವಡಿಸಿಕೊಳ್ಳುವುದರಿಂದ ಆಗುವ ಬದಲಾವಣೆಗಳೇನು ಎನ್ನುವುದರ ವಿಶ್ಲೇಷಣೆ ಮಾಡಬೇಕಾಗುತ್ತದೆ.

'ಸೂಫಿ' ಎಂದರೆ ಯೋಗಿ, ಸಿದ್ಧ, ಅನುಭಾವಿ ಎಂದರ್ಥ. 'ಸೂಫಿಸಂ' ಎಂದರೆ ಇಸ್ಲಾಂ ಧರ್ಮದಲ್ಲಿನ ಆಧ್ಯಾತ್ಮಿಕ ತತ್ತ್ವೋಪದೇಶಕ್ಕೆ ಇರುವ ಮತ್ತೊಂದು ಹೆಸರು. ಹಿಂದೂ ಧರ್ಮದ ಭಕ್ತಿ ಮತ್ತು ಆಂದೋಲನಕ್ಕೆ ಸಮಾನವಾದ ಮುಸ್ಲಿಂ ಅನುಭಾವಿ ಸಂತರ ಆಂದೋಲನವೇ ಸೂಫಿ ಚಳವಳಿಯಾಗಿದೆ. ಸೂಫಿಸಂ ಮೂಲತಃ ಒಂದು ತತ್ತ್ವವಾಗಿದೆ. ಅನುಭಾವ ಪಂಥವಾಗಿದೆಯೇ ಹೊರತು ಅದು ಸಾಂಪ್ರದಾಯಿಕ ಇಸ್ಲಾಂ ಧರ್ಮವಲ್ಲ, ಸೂಫಿಗಳು ತಮ್ಮನ್ನು ತಾವು ಹಿಂದೂಗಳೂ ಅಲ್ಲ ಮತ್ತು ಮುಸ್ಲಿಮರೂ ಅಲ್ಲ ಎನ್ನುತ್ತಾರೆ. ಸೂಫಿ ಪಂಥವು ಮಧ್ಯ ಏಷಿಯಾದ ಇಸ್ಲಾಮೀ ಜಗತ್ತಿನಲ್ಲಿ ಹುಟ್ಟಿದ ಒಂದು ಪಂಥವಾಗಿದೆ. ಹೀಗಾಗಿ ಸಾಮಾನ್ಯವಾಗಿ ಸೂಫಿ ಪಂಥವನ್ನು ಇಸ್ಲಾಮಿನ ಅನುಭಾವಿ ಶಾಖೆ ಎಂದೇ ವ್ಯಾಖ್ಯಾನಿಸಿಕೊಂಡು ಬರಲಾಗಿದೆ. ಕೆಲವೊಮ್ಮೆ ಇವರನ್ನು ಇಸ್ಲಾಂನ ಧರ್ಮ ವಿರೋಧಿಗಳು ಎಂದು ಟೀಕಿಸಲಾಗಿದೆ. ಆಧುನಿಕ ಮೂಲಭೂತವಾದಿಗಳು ಸೂಫಿಗಳ ಅನುಭಾವ ಪರಿಕಲ್ಪನೆಯನ್ನು ಇಸ್ಲಾಂನ ವಿರೋಧಿ ಎಂದು ಮುಲಾಜಿಲ್ಲದೆ ಘೋಷಿಸುತ್ತಾರೆ.[೧೯]

ಸೂಫಿ ಚರಿತ್ರೆಯಲ್ಲಿಯೂ ಸಹಾ ಇಸ್ಲಾಮನ್ನು ಕಟ್ಟುನಿಟ್ಟಾಗಿ ಪಾಲಿಸುವ ಧರ್ಮಭೀರುಗಳು, ಧರ್ಮಪ್ರಸಾರ ಮಾಡುವ ಮಿಶನರಿಗಳು, ಧರ್ಮರಕ್ಷಣೆಗಾಗಿ ಶಸ್ತ್ರಾಧಾರಿಗಳಾದ ಸೂಫಿಗಳು ಇರುವುದು ಕಂಡು ಬರುತ್ತದೆ. ಆದರೆ ತಸವ್ವುಫ್ (ಅನುಭಾವಿ) ಅನುಸರಿಸುವ ಸೂಫಿಗಳು ಮಾತ್ರ ಸಾಂಸ್ಥಿಕ ಧರ್ಮ ಹೇಳುವ ಕಂದಾಚಾರಿಗಳಿಗಿಂತ ಭಿನ್ನವಾಗಿ ಬದುಕಿದವರು. ಸಂಪ್ರದಾಯಸ್ಥರು ಎಳೆದ ಗೆರೆಯನ್ನು ದಾಟಿ ಹೋಗಿ ಕಾವ್ಯ, ಸಂಗೀತ, ಚಿತ್ರಕಲೆ, ತತ್ತ್ವಶಾಸ್ತ್ರ, ಸೃಜನಶೀಲ ಫಲಗಳನ್ನು ಮಾನವಕುಲಕ್ಕೆ ಕೊಟ್ಟವರಾಗಿದ್ದಾರೆ.

ಸೂಫಿ ಒಂದು ತತ್ತ್ವವಾಗಿ ಇಸ್ಲಾಮಿಗಿಂತ ಮೊದಲೇ ಅರಬ್ಬೀಸ್ಥಾನದಲ್ಲಿತ್ತು. ಸೂಫಿ ದರ್ಶನಶಾಸ್ತ್ರದ ಚರಿತ್ರೆಯಲ್ಲಿ ಗ್ರೀಕ್ ತತ್ತ್ವಜ್ಞಾನಿ ಪ್ಲೇಟೋನ ಗಾಢ ಪ್ರಭಾವ ಬೀರಿರುವುದು ಗೋಚರಿಸುತ್ತದೆ. ಹೀಗಾಗಿ ಗ್ರೀಕ್ ತತ್ತ್ವಶಾಸ್ತ್ರದ 'ಸೋಫಿಸ್ಟ'ರಿಂದ ಸೂಫಿ ಎಂಬ ಶಬ್ದ ಬಂದಿತೆಂಬ ವಾದವೂ ಇದೆ. ಇಸ್ಲಾಂನ ಉದಯದ ನಂತರ ಅವರಿಗೆ ಮಹಮ್ಮದ್ ಪೈಗಂಬರ್‌ರವರ ಚೈತನ್ಯವೂ ಸೇರಿಕೊಂಡಿತು. ಆನಂತರ, ಸೂಫಿಗಳ ಉತ್ಸಾಹಕ್ಕೆ ನಿಜವಾಗಿಯೂ ಆಸರೆ ಒದಗಿಸಿದ್ದು ಭಾರತ. ಇಲ್ಲಿನ ಭಾರತದ ಉಪನಿಷತ್ತು, ಅದ್ವೈತ ದರ್ಶನ ಮತ್ತು ಯೋಗ.[೨೦] ಕೆಲವು ಸೂಫಿಗಳ ಪ್ರಕಾರ ಪ್ರವಾದಿ ಮಹಮ್ಮದ್ ಸೂಫಿಸಂನ ಮೂಲವೆಂದು ಹೇಳುತ್ತಾರೆ. ಹೀಗಾಗಿ ಇವರು ಪ್ರವಾದಿ ಮಹಮದರು ನುಡಿದ 'ಒಬ್ಬನ ಹೊರತು ದೇವರಿಲ್ಲ' ಎಂಬ ಮೂಲಮಂತ್ರವೇ ಸೂಫಿಸಂನ ಸಾರಭೂತ ರಹಸ್ಯವೆಂದು ಇವರು ನಂಬುತ್ತಾರೆ. ಆದರೆ ಇನ್ನೂ ಕೆಲವರು ಮಹಮದ್ ಪೈಗಂಬರ್ ಸೂಫಿಸಂನ ಪ್ರವಾದಿ ಎನ್ನುವುದನ್ನು ಒಪ್ಪುವುದಿಲ್ಲ. ಏಕೆಂದರೆ ಸೂಫಿ ತತ್ತ್ವದ ಅಡಿಗಲ್ಲೇ ಪ್ರೇಮ, ಕರುಣೆ ಮತ್ತು ಸಾಮರಸ್ಯವಾಗಿದೆ. ಹಾಗಿದ್ದಲ್ಲಿ ಭಯ ಮೂಲವಾದ ಧಾರ್ಮಿಕತೆಯನ್ನು ಪ್ರತಿಪಾದಿಸಿದ ಮಹಮದ್ ಪೈಗಂಬರ್ ಸೂಫಿಯಾಗುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸುತ್ತಾರೆ. ಇನ್ನು ಪರ್ಷಿಯಾದ ಷಿಯಾಗಳು ಹೇಳುವಂತೆ, ಧರ್ಮಶಾಸ್ತ್ರದ ಮೂಲಕ ಹೇಳಲಾಗದ ಗುಪ್ತ ವಿದ್ಯೆಯು, ಪೈಗಂಬರ್ ಮೂಲಕ ಆತನ ಅಳಿಯ ಅಲಿಗೆ ಬೋಧನೆಯಾತು. ಹೀಗಾಗಿ ಅಲಿಯೇ ಮೊದಲ ಸೂಫಿ. ಹೀಗಾಗಿ ಹೆಚ್ಚಿನ ಸೂಫಿ ಪಂಥಗಳು ಅಲಿಯನ್ನು ಮೊದಲ ಗುರು ಎಂದು ಭಾವಿಸುತ್ತಾರೆ.[೨೧]

ಒಟ್ಟಾಗಿ ಸೂಫಿಸಂನ್ನು ಇಸ್ಲಾಮೆಂಬ ಮರದಲ್ಲಿ ಒಡೆದ ಕುಡಿ ಎಂದು ಕರೆಯುತ್ತಾರೆ. ಇಸ್ಲಾಂ ಮತ್ತು ಸೂಫಿಗಳ ನಡುವೆ ಕರುಳ ಸಂಬಂಧವಿದೆ ಎಂದೂ ಹೇಳುತ್ತಾರೆ. ಆದರೆ ಸೂಫಿಗಳು ಶರೀಯತ್‌ನ ವಿರೋಧಿಗಳೆಂದು ಮುಸ್ಲಿಂರು ಹೇಳುತ್ತಾರೆ. ಉಲೇಮಾರನ್ನು ಜ್ಞಾನದ ಮಾರಾಟಗಾರರೆಂದು ಸೂಫಿಗಳು ತೆಗಳುತ್ತಾರೆ. ಹೀಗೆ ಬೇರೆ ಬೇರೆ ಕಾಲ ಸಂದರ್ಭಗಳಲ್ಲಿ ಸೂಫಿಗಳು ಇಸ್ಲಾಮ್ ಧರ್ಮದ ಜತೆ ಪೂರಕ ಮತ್ತು ವಿರೋಧ ಸಂಬಂಧಗಳನ್ನು ಇರಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಸೂಫಿಗಳ ನೆಲೆಯನ್ನು ನೋಡಿದಾಗ, ಕನ್ನಡ, ಮರಾಠಿ, ಉರ್ದು, ತೆಲುಗು ಭಾಷೆಗಳಿರುವ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಮೂರು ಭಾಷಿಕ ರಾಜ್ಯಗಳ ಒಳಗೆ ಹರಿಯುವ ಕೃಷ್ಣಾ, ತುಂಗಭದ್ರೆ ಮತ್ತು ಭೀಮಾ ನದಿಗಳ ಕರ್ನಾಟಕದ ಪ್ರದೇಶಗಳು ಸೂಫಿಗಳ ನಿಜವಾದ ಭೂಮಿಕೆಯೆನ್ನಬಹದು.[೨೨] ಸೂಫಿ ಸಂತರ ಚರಿತ್ರೆಯನ್ನು ಕಟ್ಟುವುದೆಂದರೆ ಹುಟ್ಟಿಲ್ಲದ ದೋಣಿಯಲ್ಲಿ ಹರಿವ ನದಿಯಲ್ಲಿ ಪಯಣ ಹೊರಟಂತೆ. ಸೆಳೆವು ಬಂದತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದಡೆ ಹೋಗಲಾಗದ ಸಮಸ್ಯೆಯೂ ಇದೆ. ಏಕೆಂದರೆ ಸೂಫಿಗಳು ಎಲ್ಲೋ ಹುಟ್ಟಿ, ತಮ್ಮ ಜೀವಿತದ ಬಹುಕಾಲವನ್ನು ಇನ್ನೆಲ್ಲೋ ಕಳೆದು ಕರ್ನಾಟಕಕ್ಕೆ ಬಂದು ನೆಲೆಸಿದವರಿದ್ದಾರೆ. ಉದಾಹರಣೆ; ಗುಲಬರ್ಗಾದ ಖಾಜಾ ಬಂದೇ ನವಾಜರಿದ್ದಂತೆ. ಇನ್ನೂ ಕೆಲವು ಸೂಫಿಗಳು ಕರ್ನಾಟಕದಲ್ಲಿ ಬೆಳೆದು, ಬೇರೆಲ್ಲೋ ಹೋಗಿ ನೆಲೆಸಿದವರಿದ್ದಾರೆ. ಉದಾಹರಣೆ - ಟಿಪ್ಪು ಜೌಲಿಯನಂತೆ. ಎಲ್ಲಿಂದಲೋ ಹೊರಟು ಎಲ್ಲಿಗೋ ತಲುಪುವಾಗ ನಡುವೆ ಕರ್ನಾಟಕವನ್ನು ಹಾದು ಹೋದವರಿದ್ದಾರೆ.[೨೩]

೧೭ನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಫ್ರೆಂಚ್ ಪ್ರವಾಸಿಗನಾದ ಬೆರ್ನೈಯು ತನ್ನ ಟಿಪ್ಪಣಿಗಳಲ್ಲಿ, ಮಹಾಜ್ಞಾನಿಗಳಾದ ಕೆಲವು ಜೋಗಿಗಳು ಹಾಗೂ ಸೂಫಿಗಳು ಇದ್ದಾರೆಂದು ಕೇಳಿದ್ದೇನೆ. ಬೇಕೆಂದಾಗ ಅವರು ಸಮಾಧಿ ಸ್ಥಿತಿಯನ್ನು ಪಡೆಯಬಲ್ಲರು. ಸಮಾಧಿ ಸ್ಥಿತಿಯನ್ನು ಪಡೆಯುವುದು ಮತ್ತು ಆ ಸ್ಥಿತಿಯಲ್ಲಿ ಆನಂದಪರವಶರಾಗುವುದು ಜೋಗಿ ಮತ್ತು ಸೂಫಿ ಪಂಥಗಳ ಮಹಾಯೋಗ ರಹಸ್ಯಗಳೆಂದು ಕಾಣುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.[೨೪]

ಸೂಫಿ ಪಂಥವು ಇಸ್ಲಾಂ ಧರ್ಮದ ಆಧ್ಯಾತ್ಮಿಕತೆಯ ಇನ್ನೊಂದು ಹೆಸರು. ಸೂಫಿ ಪಂಥಕ್ಕೆ ಕುರಾನ್ ಮೂಲಾಧಾರವಾದರೂ, ಜೋರಾಸ್ಟ್ರೀಯ, ಕ್ರೈಸ್ತಮತ, ಬೌದ್ಧಧರ್ಮ ಹಾಗೂ ಹಿಂದೂ ಧರ್ಮಗಳ ಹಲವಾರು ಉತ್ತಮ ಅಂಶಗಳನ್ನು ತನ್ನೊಳಗೆ ಒಳಗೊಂಡಿದೆ. ಸೂಫಿಗಳು ಇಸ್ಲಾಂಯೇತರ ಅನುಭಾವಿ ಪಂಥಗಳಿಂದ ಚಿಂತನೆ ಹಾಗೂ ಆಚರಣೆಗಳನ್ನು ಪಡೆದುಕೊಳ್ಳುವ ಪರಂಪರೆಯನ್ನು ಹೊಂದಿದ್ದರು.[೨೫]

ಸೂಫಿ ಸಂತರ ಧೇಯೋದ್ದೇಶಗಳಲ್ಲಿ ಮೋಕ್ಷ ಸಾಧನೆಯೂ ಒಂದಾಗಿತ್ತು. ಸಾಧನೆಯನ್ನು ಮಾಡಲು ಅವರು ಮೂರು ತತ್ವಗಳನ್ನು ಬೋಧಿಸಿದರು. ಮೊದಲನೆಯದಾಗಿ, ಸನ್ಮಾರ್ಗ, ದೇವರಲ್ಲಿ ಅಚಲನಂಬಿಕೆ ಮತ್ತು ಸಂಪೂರ್ಣ ಶರಣಾಗುವಿಕೆ, ಶುದ್ಧ ಜೀವನ, ಪ್ರಾರ್ಥನೆ, ತೀರ್ಥಯಾತ್ರೆ, ಉಪವಾಸ ಮತ್ತು ಸಹನೆಯಿಂದ ಜೀವನ ನಡೆಸುವುದು. ಎರಡನೆಯದಾಗಿ, ಆಸೆ, ಆಕಾಂಕ್ಷೆ, ಮೋಹಗಳನ್ನು ತ್ಯಜಿಸಿ ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಳ್ಳುವುದು. ಮೂರನೆಯದಾಗಿ, ಪರಮಾತ್ಮನಲ್ಲಿ ಲೀನವಾಗುವುದು. ಪಂಥದ ಸಂತರು ತಮ್ಮನ್ನೇ ಸತ್ಯವೆಂದು ಕರೆದುಕೊಂಡಿದ್ದರು ಹಾಗೂ ಮಸೀದಿಗೆ ಹೋಗಲು

ನಿರಾಕರಿಸುತ್ತಿದ್ದರು. ಸೂಫಿ ಸಂತರ ಮತ್ತೊಂದು ವಿಶೇಷತೆ ಎಂದರೆ ಇವರ ವಿಭಿನ್ನವಾದ ಜೀವನ ಶೈಲಿ. ಕೆಲವು ಸೂಫಿಗಳು ಇದ್ದ ಸಂಪತ್ತನ್ನೆಲ್ಲಾ ದಾನ ಮಾಡಿ, ಭಿಕ್ಷೆ ಬೇಡಿ ಸರಳ ಜೀವನ ಸಾಗಿಸುತ್ತಿದ್ದರು. ಮತ್ತೆ ಕೆಲವರು ಜಾಗೀರು, ಜಮೀನುಗಳನ್ನು ಹೊಂದಿದ್ದು ಜೊತೆಗೆ ಸಂಸಾರಿಗಳೂ ಆಗಿದ್ದು, ಮದರಸಗಳೆಂಬ ಧಾರ್ಮಿಕ ಪಾಠಶಾಲೆಗಳನ್ನು ನಡೆಸುತ್ತಿದ್ದರು.

ಕರ್ನಾಟಕದ ಸೂಫಿಗಳಲ್ಲಿ ಅತ್ಯಂತ ಪ್ರಸಿದ್ಧರಾದವರೆಂದರೆ 'ಖ್ವಾಜಾ ಬಂದೇ ನವಾಜ್‌ರು'. ಬಂದೇ ನವಾಜ್ ಎಂದರೆ ದೇವರ ಸೇವಕನೆಂದರ್ಥ. ಇವರ ಮೊದಲ ಹೆಸರು ಅಬ್ದುಲ್ ಫತಾ. ಹೀರತ್ ಇವರ ಮೂಲ ಸ್ಥಾನವಾಗಿದ್ದು ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಕೈರೋದ ಹೆಸರಾಂತ ಅರೇಬಿಕ್ ವಿಶ್ವವಿದ್ಯಾಲಯದಲ್ಲಿ (ಈಜಿಪ್ಟ್) ಉನ್ನತ ವ್ಯಾಸಂಗ ಮುಗಿಸಿ ಅರೇಬಿಕ್, ಪರ್ಶಿಯನ್, ತರ್ಕಶಾಸ್ತ್ರ, ಧರ್ಮಶಾಸ್ತ್ರಗಳನ್ನು ಅಧ್ಯಯನ ಮಾಡಿ ವಿದ್ವತ್ತನ್ನು ಸಂಪಾದಿಸಿದರು. ತೊಗಲಕರ ಕಾಲದಲ್ಲಿ ದೆಹಲಿಗೆ ವಲಸೆ ಬಂದು ನೆಲೆಸಿದರು. ಅಲ್ಲಿ ನಿಜಾಮ್‌ವುದ್ದೀನ್ ಚಿಸ್ತಿಯವರ ಶಿಷ್ಯರಾದರು. ನಂತರ ಫಿರೋಜ್ ಬಹಮನ್ ಷಾ ಕಾಲದಲ್ಲಿ ಗುಲಬರ್ಗಾಕ್ಕೆ ಬಂದು ನೆಲೆಸಿದ ಬಂದೇ ನವಾಜರು ಸೂಫಿ ಸಂತರಾಗಿ ಪ್ರಸಿದ್ಧರಾದರು. ಜೊತೆಗೆ ಶ್ರೀಮಂತರು ಮತ್ತು ಬಡವರ ಕಷ್ಟಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸಿ ಜನಾನುರಾಗಿಯಾಗಿದ್ದರಲ್ಲದೇ ಪವಾಡ ಪುರುಷರೆನಿಸಿಕೊಂಡು, ತಮ್ಮ ಹೆಚ್ಚು ಸಮಯವನ್ನು ಅಧ್ಯಯನ ಹಾಗೂ ಬರವಣಿಗೆಗಳಲ್ಲಿ ಕಳೆಯುತ್ತಿದ್ದರು. ಇವರಿಂದ ದಖನಿ ಉರ್ದು ಸಾಹಿತ್ಯ ಆರಂಭಗೊಂಡು ಬೆಳವಣಿಗೆ ಆಯಿತು. ಇವರು ಬರೆದ ಸುಮಾರು ೧೦೫ ಕೃತಿಗಳು ದಖನಿ ಉರ್ದು ಸಾಹಿತ್ಯಕ್ಕೆ ಆಧಾರ ಸ್ತಂಭಗಳಾಗಿವೆ ಇವುಗಳ ಜೊತೆಗೆ ಖವಾಲಿಗಳು, ಗಜಲ್‌ಗಳು ಮತ್ತು ಷಾಯಿರಿಗಳನ್ನು ರಚಿಸಿದ್ದಾರೆ. ಹಿಂದೂ, ಮುಸ್ಲಿಂ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಗ್ರಂಥಗಳನ್ನು, ಪಾರ್ಸಿ ಮತ್ತು ದಖನಿ ಉರ್ದು ಭಾಷೆಗಳಲ್ಲಿ ರಚಿಸಿದರು. ಈ ಕೃತಿಗಳಲ್ಲಿ ಉಪನಿಷತ್ತುಗಳ ಅನೇಕ ಶ್ಲೋಕಗಳನ್ನು ಅನುವಾದ ಮಾಡಿ ವ್ಯಾಖ್ಯಾನಿಸಿದ್ದಾರೆ. ಅದರಲ್ಲೂ ಹಿಂದೂ ಮುಸ್ಲಿಂರಲ್ಲಿ ಭ್ರಾತೃತ್ವ ಉಂಟು ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು.

ಅಲ್ಲದೆ ತಮ್ಮ ಸೂಫಿ ಕೃತಿಗಳಲ್ಲಿ ಹಿಂದೂ ಆಧ್ಯಾತ್ಮದ ಭಾವನೆಗಳನ್ನು ಅಳವಡಿಸಿಕೊಂಡಿದ್ದಾರೆ. 'ಅಲಕ್ ನಿರಂಜನ್' ಅಂದರೆ ದೇವರು ಅಗೋಚರನು, ಅವ್ಯಕ್ತನು ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ. ಹಟಯೋಗವನ್ನು ಕುರಿತ ರಚಿಸಿದ 'ಅಮೃತಖಾಂಡ' ಎಂಬ ಸಂಸ್ಕೃತ ಗ್ರಂಥವನ್ನು ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗೆ ಅನುವಾದಿಸಿದರು. ಇದು ಸೂಫಿ ಸಂತರಲ್ಲಿ ಅತ್ಯಂತ ಜನಪ್ರಿಯವಾಯಿತು. ಬಂದೇ ನವಾಜರ ಸ್ಪರ್ಶದಿಂದಲೇ ರೋಗಗಳು ವಾಸಿಯಾಗುತ್ತವೆ ಎನ್ನುವ ನಂಬಿಕೆ ಜನರಲ್ಲಿ ಮೂಡಿತ್ತು. ಇವರ ಪ್ರಭಾವದಿಂದ ಅನೇಕ ಮುಸ್ಲಿಮರು ಸಸ್ಯಹಾರಿಗಳಾಗಿ ಬದಲಾಗಿದ್ದರು. ಇವರ ಕಾಲದಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ಎಂದೂ ಕಾಣದ ಸಾಮರಸ್ಯ ಮೂಡಿತು. ಸಾಮರಸ್ಯ ಎಷ್ಟರಮಟ್ಟಿಗೆ ಮುಂದುವರಿದುಕೊಂಡು ಬಂದಿದೆಯೆಂದರೆ, ಇಂದಿಗೂ ಗುಲಬರ್ಗಾದಲ್ಲಿ ನಡೆಯುವ ಶರಣಬಸವೇಶ್ವರ ರಥೋತ್ಸವ ಮತ್ತು ಖ್ವಾಜಾ ಬಂದೇ ನವಾಜರ 'ಉರುಸ್'ಗಳಲ್ಲಿ ಹಿಂದೂ ಮುಸ್ಲಿಮರು ಉತ್ಸಾಹದಿಂದ

ಭಾಗವಹಿಸುವುದನ್ನು ಕಾಣುತ್ತಿದ್ದೇವೆ. ಇಂತಹ ಸಾಮರಸ್ಯ ಹೈದರಾಬಾದ್ ಕರ್ನಾಟಕ ಪ್ರದೇಶಗಳನ್ನು ಹೊರತುಪಡಿಸಿ ಇತರ ಭಾಗಗಳಲ್ಲಿ ಕಾಣಬರುವುದು ವಿರಳವಾಗಿದೆ.

ಕಾಯಿಲೆಗಳಿಗೆ ತಾಯತ, ದೆವ್ವಗಳ ಉಚ್ಚಾಟನೆ, ಬಂಜೆತನ ನಿವಾರಣೆ, ಹುಚ್ಚು ಬಿಡಿಸುವುದು, ಕಳೆದು ಹೋದ ದನಕರುಗಳನ್ನು ಪತ್ತೆ ಹಚ್ಚುವುದು, ಕಾಯಿಲೆಗಳಿಗೆ ಚಿಕಿತ್ಸೆ ಹೀಗೆ ಮುಂತಾದ ಪವಾಡಗಳ ಮೂಲಕ ದೀನ ದಲಿತರ ಉದ್ಧಾರಕರಾಗಿ ಸೂಫಿಗಳು ಹೆಸರಾಗಿದ್ದರು. ಉದಾಹರಣೆಗೆ ಗುಲಬರ್ಗಾದ ಶರಣ ಬಸವೇಶ್ವರ ಮಠದ ಉತ್ಸವಗಳು ಸೂಫಿ ಸಂತರ ಮೂಲಕ ಉದ್ಘಾಟಿತವಾಗುತ್ತಿದ್ದವು. ಅದೇ ರೀತಿ ಬಂದೇ ನವಾಜ್ ದರ್ಗಾದ 'ಉರುಸ್' ಎಂಬ ಉತ್ಸವಗಳನ್ನು ವೀರಶೈವರ ಅಂದರೆ ಶರಣ ಬಸವೇಶ್ವರ ಪೀಠಾಧಿಪತಿಗಳಿಂದ ಉದ್ಘಾಟಿಸುವ ಪರಂಪರೆ ಬೆಳೆದು ಬಂದಿದೆ. ಅನೇಕ ವೀರಶೈವ ಮಠಗಳಲ್ಲಿ ದೈನಂದಿನ ಭಜನೆ, ಉತ್ಸವ ಮೊದಲಾದ ಕಾರ್ಯಗಳಲ್ಲಿ ಸೂಫಿಗಳು ಹಾಗೂ ಸೂಫಿ ಪಂಥದ ಭಕ್ತರು ಪಾಲ್ಗೊಳ್ಳುತ್ತಾರೆ. ಹಾಗೆಯೇ ದರ್ಗಾಗಳ ಉತ್ಸವಗಳಲ್ಲಿ ಹಿಂದುಗಳು ಭಾಗವಹಿಸುತ್ತಾರೆ. ಗುಲಬರ್ಗಾದ ಕೊಡೇಕಲ್ ಬಸವೇಶ್ವರರ ಮಠದಲ್ಲಿ ಇಂದಿಗೂ ವೀರಶೈವ ಮತ್ತು ಸೂಫಿ ಸಂತರ ಒಡನಾಟ ಬಹಳ ಸಾಮರಸ್ಯದಿಂದ ಕೂಡಿದೆ. ಇದರಿಂದ ಆ ಭಾಗದಲ್ಲಿ ಇಂದಿಗೂ ಹಿಂದೂ ಮುಸ್ಲಿಂರ ಸೌಹಾರ್ದತೆ ಉಳಿದ ಕಡೆಗಳಿಗಿಂತಲೂ ಗಾಢವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ಜನಸಮೂಹದ ಮೇಲೆ ಸೂಫಿಗಳ ಪ್ರಭಾವವನ್ನು ನೋಡಿದಾಗ ಈ ಭಾಗದ ಕನ್ನಡಿಗರ ಸಾಂಸ್ಕೃತಿಕ ಅವಸ್ಥೆಯನ್ನು ಕಪಟರಾಳ ಕೃಷ್ಣರಾವರು ತಮ್ಮ ಕೃತಿಯಲ್ಲಿ, 'ದೇವರ ಮಾರ್ಗವನ್ನು ತೋರಿಸುವ ಗುರುವು ಸ್ವತಃ ತಾನೇ ದೇವರಾಗಿ ಜನರ ಮನಸ್ಸಿನಲ್ಲಿ ಪ್ರತಿಷ್ಠಿತನಾದನು. ಮುಸಲ್ಮಾನ ಫಕೀರರು ಗುರುಗಳಾದರು. ವೇದವು ಕುರಾನ್ ಒಂದೇಯಾಯಿತು, ಫಕೀರರ ಗೋರಿಗಳೆ ದೇವಸ್ಥಾನಗಳಾದವು. ಕನ್ನಡಿಗರಿಗೆ ಗೋರಿಗಳು ಕುಲದೈವತಗಳಾದವು. ಹೀಗೆ ಜಾತಿ ಸಂಸ್ಥೆಯಂಥ ಭದ್ರವಾದ ಕೋಟೆಯು ಸಮಾಜವನ್ನು ಸಂರಕ್ಷಿಸದಿದ್ದರೆ ಕನ್ನಡಿಗರು ಏನಾಗಿ ಉಳಿಯುತ್ತಿದ್ದರೋ ಏನೋ.'[೨೨]

ಹೈದರಾಬಾದ್ ಕರ್ನಾಟಕದ ಸೂಫಿ ಸಂತರ ದರ್ಗಾಗಳು

ಖ್ವಾಜಾ ಬಂದೇ ನವಾಜ್ ದರ್ಗಾ	-	ಗುಲಬರ್ಗಾ
ಅಹಸಾನುದ್ದೀನ್ ಖಾದ್ರಿ ದರ್ಗಾ	-	ಗುಲಬರ್ಗಾ
ಅಕ್ರಮ್ ಸಾಹೇಬ ಸುಲ್ತಾನಪುರ ದರ್ಗಾ	-	ರಾಯಚೂರು
ಅಂಕುಸ್ ಖಾನ್ ವಲಿ ದರ್ಗಾ	-	ಶಿರಹಟ್ಟಿ
ಅಬುಲ್ ಖಾದರ್ ಮಹಮದ್ ಹುಸ್ಸೈನಿ ದರ್ಗಾ	-	ಬೀದರ್
ಅಹಮದ್ ಶಾ ವಲಿ ದರ್ಗಾ	-	ಅಷ್ಟೂರ (ಬೀದರ್)
ಖಲೀಫತುರ್ ರಹಮಾನ್ ಖಾದ್ರಿ	-	ಮಾಳಖೇಡ
ಸೈಯದ್ ಅಮೀರ ದರ್ಗಾ	-	ಕೊಪ್ಪಳ
ಅನ್ವರ್ ಶಾ ವಲಿ ದರ್ಗಾ	-	ಬಳ್ಳಾರಿ[೨೩]

ಸೂಫಿ ಪ್ರಭಾವದ ಸಂತರು ಹಾಗೂ ಮಠಗಳು

ಅಲ್ಲಮಪ್ರಭು (ಸುಲ್ತಾನ ಪಾಶಾ)	-	ಮಾಡ್ಯಾಳಾ
ಅಲ್ಲಮಪ್ರಭು	-	ಅಳಂದ
ಈರಪ್ಪಯ್ಯ	-	ನಾಗಾಯಿ (ಚಿತ್ತಾಪುರ)
ಕೊಡೇಕಲ್ಲ ಬಸವಣ್ಣ	-	ಕೊಡೇಕಲ್ಲು (ಸುರಪುರ)
ರಾಮದಾಸ್ ಬಡೇಸಾಬ	-	ರಾಯಚೂರು
ಸಿದ್ದಪ್ಪ ಕುಸನೂರು	-	ಗುಲಬರ್ಗಾ

ಸೂಫಿ ಸಂತರ ಪ್ರಭಾವದಿಂದ ಹಿಂದೂ ಮುಸ್ಲಿಮರ ನಡುವೆ ಧಾರ್ಮಿಕ ಸಾಮರಸ್ಯ ಬೆಳೆದ ರೀತಿಯಲ್ಲಿ ಹಿಂದೂ ಸಂತರು ಮತ್ತು ಸೂಫಿ ಸಂತರ ನಡುವೆ ಧಾರ್ಮಿಕ ಗೆಳೆತನವು ಬೆಳೆಯಿತು. ಇದು ಎಷ್ಟರಮಟ್ಟಿಗೆ ಧರ್ಮ, ಆಚರಣೆಯಲ್ಲಿ ಬೆರೆತು ಹೋಯಿತೆಂದರೆ ಸೂಫಿ ಸಂತರ ಉರುಸ್‌ಗಳಲ್ಲಿ 'ದೋಸ್ತಾರದೀನ್' ಎಂಬ ಘೋಷವನ್ನು ಮಾಡಲಾಗುತ್ತದೆ. 'ದೋಸ್ತಾರದೀನ್' ಎಂದರೆ ಧಾರ್ಮಿಕ ಗೆಳೆತನ. ದೋಸ್ತಾರ ಸಾಮಾನ್ಯವಾಗಿ ಗುರುವಿನ ಹೆಸರಿನಲ್ಲಿರುತ್ತದೆ. ಉದಾಹರಣೆಗೆ ಸಾಮಾನ್ಯವಾಗಿ ಸಾವಳಗಿ ಶಿವಲಿಂಗನ ಜಾತ್ರೆಯಲ್ಲಿ ಬಂದೇ ನವಾಜರ ಬಗ್ಗೆ ಘೋಷಣೆಯನ್ನು, ಶಿರಹಟ್ಟಿ ಫಕೀರೇಶನ ಉತ್ಸವದಲ್ಲಿ ಖಾಜಾ ಅಮೀನರ ಹೆಸರನ್ನು, ವಡಬಾಳದ ನಾಗನಾಥನ ಉತ್ಸವದಲ್ಲಿ ನಾಸಿರುದ್ದೀನ್ ಚಿರಾಗರ ಹೆಸರು ಹಿಡಿದು ಕೂಗಲಾಗುತ್ತದೆ.

ಮಹಿಳಾ ಸೂಫಿಗಳು

ಸೂಫಿ ಪರಂಪರೆಯಲ್ಲಿ ಕೇವಲ ಪುರುಷರಲ್ಲದೇ ಕೆಲವು ಮಹಿಳೆಯರು ಸಹ ಸೂಫಿಗಳಾಗಿದ್ದ ಉದಾಹರಣೆಗಳು ಕಂಡು ಬರುತ್ತದೆ. ಮಹಿಳಾ ಸೂಫಿಗಳು ದೊಡ್ಡ ಪ್ರಮಾಣದಲ್ಲಿ ಕಂಡು ಬರದಿದ್ದರೂ, ಕೆಲವು ಪ್ರದೇಶಗಳಲ್ಲಿ ಹೆಸರಾಂತ ಮಹಿಳಾ ಸೂಫಿಗಳಿದ್ದರೆನ್ನುವುದನ್ನು ಗುರುತಿಸಬಹುದಾಗಿದೆ. ಅದರಲ್ಲಿ ಮುಖ್ಯವಾಗಿ ಖ್ವಾಜಾ ಮೊಯಿನುದ್ದೀನ್ ಚಿಸ್ತಿ ಅವರ ಮಗಳು 'ಬೇಗಂ ಹಫೀಜ್ ಜಮಾಲ್', ಬೆಂಗಳೂರಿನ 'ಹಮಿನಾ ಬೀಬಿ', ಹೈದರಾಬಾದಿನ ಫಿಕೀಕಿ ಬೀಬಿ ಪ್ರಮುಖರಾಗಿದ್ದಾರೆ.[೨೮] ಅನೇಕ ಪುರುಷ ಸೂಫಿಗಳು ಇವರ ಶಿಷ್ಯರಾಗಿದ್ದುದು ಕಂಡುಬರುತ್ತದೆ. ಆದರೆ ಒಂದು ಕಡೆ ಸಾಮಾಜಿಕ ಸಂಪ್ರದಾಯಗಳನ್ನು ಹಾಗೆಯೇ ಇನ್ನೊಂದು ಕಡೆ ಧಾರ್ಮಿಕ ನಂಬಿಕೆಗಳನ್ನ ಎದುರು ಹಾಕಿಕೊಂಡು ಮಹಿಳೆಯರಿಗೂ ಅಂದಿನ ಕಾಲದಲ್ಲಿ ಸೂಫಿಗಳಾಗುವುದು ಅಷ್ಟೊಂದು ಸುಲಭದ ಕಾರ್ಯವಾಗಿರಲಿಲ್ಲ. ಹೀಗಾಗಿ ಅಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಸೂಫಿಗಳು ಕಂಡು ಬರದೇ ಇರಲು ಕಾರಣವಾಗಿರಬಹುದು.

ವಚನ ಚಳವಳಿಯ ಮೂಲಕ ಶರಣರು ಧರ್ಮ ಜಾಗೃತಿಯನ್ನು ಉಂಟು ಮಾಡಿದಂತೆ ಮುಸ್ಲಿಮರಲ್ಲಿ ಸೂಫಿ ಸಂತರು ಧರ್ಮ ಜಾಗೃತಿಯನ್ನುಂಟು ಮಾಡಿ ಹಿಂದೂ ಮುಸ್ಲಿಂರ ಏಕತೆಗಾಗಿ

ಶ್ರಮಿಸಿದರು. ಭಗವಂತನಿಗೆ ಸಂಪೂರ್ಣ ಶರಣಾಗುವಿಕೆ ಸೂಫಿ ಪಂಥದ ಮೂಲ ಉದ್ದೇಶವಾಗಿದೆ. ಮೋಕ್ಷ ಪಡೆಯಲು ಗುರುವಿನ ಮಾರ್ಗದರ್ಶನ ಅವಶ್ಯಕ ಎನ್ನುವುದು ಇವರ ತತ್ತ್ವ. ಮಾನವನ ಮನಸ್ಸು ಚಂಚಲವಾಗಿರದೇ ಸಂಪೂರ್ಣವಾಗಿ ಸರ್ವೇಶ್ವರನಲ್ಲಿ ತನ್ಮಯನಾಗಿರಬೇಕೆಂಬುದು ಅವರ ಧ್ಯೇಯವಾಗಿತ್ತು.

ಸೂಫಿ ಸಂತರ ಸರಳ ಜೀವನ, ಆಧ್ಯಾತ್ಮಿಕತೆ, ಬಹಳ ಬೇಗ ಜನರನ್ನು ಆಕರ್ಷಿಸಿತು. ಇವರ ಕರುಣೆ, ಪ್ರೀತಿ, ಸಹನೆ, ಭ್ರಾತೃತ್ವ, ಸ್ವಭಾವ, ಸಮಾನತೆ, ಸರಳತೆ, ಅನೇಕ ಹಿಂದೂಗಳನ್ನು ಆಕರ್ಷಿಸಿತು. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದ ಕೆಳವರ್ಗದವರು ಬಹುಬೇಗ ಇವರ ಅನುಯಾಯಿಗಳಾದರು. ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಹಿಂದುಳಿದ ವರ್ಗದವರಿಗೆ ಸೂಫಿ ಸಂತರು ಹೊಸ ಭರವಸೆ ಮೂಡಿಸಿದರು. ಹಾಗೆಯೇ ಸೂಫಿ ಸಂತರ ಉದಾರನೀತಿ, ಮತೀಯ ಸಾಮರಸ್ಯ ಮುಂತಾದ ವಿಶಾಲ ಗುಣಗಳು ಭಾರತೀಯರಿಗೆ ಮುಸ್ಲಿಮರ ಬಗ್ಗೆ ಇದ್ದ ದ್ವೇಷವನ್ನು ಕಡಿಮೆ ಮಾಡುವಲ್ಲಿ ಮಹತ್ತರ ಪಾತ್ರವಹಿಸಿದವು. ಹಿಂದೂ ಮುಸ್ಲಿಮರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಗೌರವದ ಭಾವನೆಗಳು ಬೆಳೆಯಲು ಪ್ರಾರಂಭಿಸಿದವು. ಮುಸ್ಲಿಮರು ಹಿಂದೂ ಸಂತರನ್ನು ಹಾಗೂ ಹಿಂದೂಗಳು ಮುಸ್ಲಿಂ ಸಂತರನ್ನು ಗೌರವದಿಂದ ಕಾಣಲು ಪ್ರಾರಂಭಿಸಿದರು. ಹೀಗೆ ಸೂಫಿ ಸಂತರು ಭಕ್ತಿಮಾರ್ಗದ ಸಂತರಂತೆ ಸಮಾಜದ ನ್ಯೂನತೆಗಳನ್ನು ಖಂಡಿಸಿ ಸರಳ ಶುದ್ಧ ಸಚ್ಚಾರಿತ್ರ್ಯದ ಜೀವನಕ್ಕೆ ಮಹತ್ವವನ್ನು ಕೊಟ್ಟಿದ್ದಾರೆ. ಹಿಂದೂ ಮತ್ತು ಮುಸ್ಲಿಮರಲ್ಲಿ ಪರಸ್ಪರ ಪ್ರೀತಿ, ಗೌರವಾದರಗಳು ಬೆಳೆಯಲು ಇವರ ಕೊಡುಗೆ ಅಪಾರವಾಗಿದೆ. ಇವರ ತತ್ವವು ಎಲ್ಲಾ ಧರ್ಮಗಳ ಸಾರರೂಪದಲ್ಲಿದ್ದು ಎಲ್ಲರ ಕ್ಷೇಮವನ್ನು ಬಯಸುತ್ತದೆ.

ಸಮಾಜದಲ್ಲಿ ದ್ವೇಷ ಭಾವನೆ, ಅತೃಪ್ತಿ ಹಾಗೂ ನಿರಾಶೆ ಹರಡಿದ್ದ ಸಮಯದಲ್ಲಿ ಸೂಫಿಗಳು ತಮ್ಮ ತತ್ವಗಳ ಮೂಲಕ ಪರಮತಸಹಿಷ್ಣುತಾ ಭಾವನೆಯನ್ನು ಪ್ರಚಾರ ಮಾಡಿ ಸಮಾಜವನ್ನು ಸುಧಾರಿಸಲು ಪ್ರಯತ್ನಿಸಿದ್ದು ಸ್ಮರಣೀಯ ಮತ್ತು ಅನುಕರಣೀಯವಾಗಿದೆ. ಹೀಗಾಗಿಯೇ ಇಂದಿಗೂ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಹಿಂದೂ ಮುಸ್ಲಿಂರಲ್ಲಿ ಕೋಮುಭಾವನೆಗಳಿರದೆ, ಎಲ್ಲರೂ ಸೇರಿ ಜಾತ್ರೆಗಳನ್ನು ಉರುಸ್‌ಗಳನ್ನು ಆಚರಿಸುತ್ತಾ ಸಾಮಾಜಿಕ ಸಾಮರಸ್ಯಕ್ಕೆ ಕಾರಣರಾಗಿದ್ದಾರೆ. ಹೀಗೆ ಸೂಫಿ ಸಂಸ್ಕೃತಿಯು ನಮ್ಮ ಸಮಾಜವು ಹೇಗಿರಬೇಕು ಎಂಬ ಕಲ್ಪನೆಯನ್ನು ಕೂಡಿ ಬಾಳುವ ಹಂಬಲವನ್ನು ತಿಳಿಸುತ್ತದೆ. ಧರ್ಮದ ಹೆಸರಲ್ಲಿ ಸಮಾಜವನ್ನು ವಿಭಜಿಸುವ ರಾಜಕೀಯ ವಿಚಾರಗಳು ಮೇಲುಗೈ ಪಡೆಯುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಚಿಂತನೆಗಳು ದಾಖಲಾರ್ಹವಾಗಿದ್ದು ಮುಂದಿನ ಜನಾಂಗಕ್ಕೆ ಮಾರ್ಗ ಸೂಚಿಯಾಗಲಿವೆ.

೩.೩. ದಾಸ ಪರಂಪರೆ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಮೊದಲು ಹಾಗೂ ಆನಂತರದ ಚಾರಿತ್ರಿಕ ಬೆಳವಣಿಗೆಯಲ್ಲಿ ವಚನ ಹಾಗೂ ದಾಸ ಚಳವಳಿಗಳು ಅತ್ಯಂತ ಮಹತ್ವ ಪಡೆದುಕೊಂಡಿವೆ. ಶೈವ ಪಂಥೀಯರಲ್ಲಿ ಕಾಣಿಸಿಕೊಂಡ ಪ್ರಗತಿಪರ ನಿಲುವುಗಳು 'ವಚನ ಚಳವಳಿ' ರೂಪದಲ್ಲಿ ಹೊರಹೊಮ್ಮಿದರೆ ವೈಷ್ಣವರಲ್ಲಿ ಅದು 'ದಾಸ ಚಳವಳಿ'ಯಾಗಿ ಹೊರಹೊಮ್ಮಿತು. ಎರಡೂ ಚಳವಳಿಗಳ ಆಶಯ ಮತ್ತು ಗುರಿ ಒಂದೇ

ಆಗಿತ್ತು. ದಾಸರು ಸರಳವಾದ ಭಾಷೆಯಲ್ಲಿ ಕೀರ್ತನೆಗಳನ್ನು ಹಾಡುತ್ತಾ, ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ, ಅನಿಷ್ಟಗಳನ್ನು ತೊಡೆದು ಹಾಕಿ, ಸಮಾಜದಲ್ಲಿ ನೆಮ್ಮದಿಯನ್ನು ತಂದು ಕೊಡಲು ಪ್ರಯತ್ನಿಸಿದರು. ಕರ್ನಾಟಕದಲ್ಲಿ ನಡೆದ ಭಕ್ತಿ ಚಳವಳಿಯಲ್ಲಿ ಶಿವಶರಣರ ನಂತರ ಹರಿದಾಸರು ಮಹತ್ತರವಾದ ಪಾತ್ರವನ್ನು ನಿರ್ವಹಿಸಿದರು. ಶಿವಶರಣರಂತೆ ಹರಿದಾಸರು ಕೂಡ ಭಗವತ್‌ಪ್ರೇಮ, ಮಾನವಪ್ರೇಮ, ನೀತಿಪರತೆ, ಹೃದಯಶುದ್ಧಿ ಸರ್ವಸಮಾನತೆಯ ತತ್ವಗಳನ್ನು ಬೋಧಿಸುತ್ತಾ ಮಾನವ ಜೀವನದ ಮಹತ್ವವನ್ನು ತಿಳಿಸಿಕೊಟ್ಟರು. ಭಗವಂತನನ್ನು ಒಲಿಸಿಕೊಳ್ಳುವುದೇ ಮಾನವನ ಜೀವನದ ಪರಮೋಚ್ಛ ಧ್ಯೇಯವೆಂದೂ, ಅದನ್ನು ಪರಿಶುದ್ಧಿ ಭಕ್ತಿಯಿಂದ ಸಾಧಿಸಬಹುದೆಂದೂ ಸಾರಿದರು. ಶಿವಶರಣರಂತೆ ಹರಿದಾಸರು ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಯನ್ನು ಕೈಗೊಂಡರು. ಹರಿದಾಸರಲ್ಲಿ ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಶ್ರೀನಿವಾಸದಾಸರು, ದಾಸಚಾರ್ಯರು, ಜಗನ್ನಾಥದಾಸರು ಪ್ರಮುಖರಾಗಿದ್ದಾರೆ.

ಹರಿದಾಸರ ಕೀರ್ತನೆಗಳು ಕನ್ನಡನಾಡಿನ ಜನತೆಯ ಮೇಲೆ ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದ ಜನರ ಮೇಲೆ ಅಪಾರ ಪ್ರಭಾವ ಬೀರಿದವು. ಸಂಸಾರದಲ್ಲಿದ್ದುಕೊಂಡು, ಅನುದಿನವೂ ಬರುವ ಕಷ್ಟ-ಕೋಟಲೆಗಳನ್ನು ತಾಳ್ಮೆಯಿಂದ ಸಹಿಸಿ ನಿರಂತರವಾದ ದೇವರ ಧ್ಯಾನದಿಂದ ಮುಕ್ತಿಯನ್ನು ಸಾಧಿಸುವ ರೀತಿಯನ್ನು ಹರಿದಾಸರು ಸಾಮಾನ್ಯ ಜನರಿಗೂ ತಿಳಿಯುವ ಹಾಗೆ ಬೋಧಿಸಿದರು. ಹರಿದಾಸರು ಹರಿಯ ಅವತಾರಗಳನ್ನು ಒಪ್ಪಿಕೊಂಡ ವಿಷ್ಣು ಪಂಥೀಯರಾಗಿದ್ದು, ಶ್ರೀ ವಿಷ್ಣುವಿನ ದಾಸರಾಗಿದ್ದುಕೊಂಡು, ಆತನೇ ಪರದೈವವೆಂದು ತಿಳಿದು ಅವನ ಸ್ಮರಣೆಯೇ ತನ್ನ ಮುಕ್ತಿಗೆ ಸಾಧನವೆಂದು ಪರಿಗಣಿಸಿ ನಡೆದುಕೊಳ್ಳುವವರನ್ನು ಹರಿದಾಸರೆಂದು ಕರೆಯಲಾಗಿದೆ.

ಹರಿಯನ್ನು ಆರಾಧಿಸುವ ದಾಸರಲ್ಲೂ ಎರಡು ಪ್ರಮುಖ ಬಣಗಳಾದವು. ಅವುಗಳನ್ನು 'ವ್ಯಾಸಕೂಟ' ಹಾಗೂ 'ದಾಸಕೂಟ'ಗಳೆಂದು ಗುರುತಿಸಲಾಗಿದೆ. ವ್ಯಾಸಕೂಟದವರು ಸಂಸ್ಕೃತ ಶ್ಲೋಕಗಳ ಮೂಲಕ ಹರಿಯನ್ನು ಧ್ಯಾನಿಸುತ್ತಿದ್ದರೆ, ದಾಸ ಕೂಟದವರು ಅಚ್ಚ ಕನ್ನಡದಲ್ಲಿ ಸರಳವಾಗಿ ಕೀರ್ತನೆಗಳನ್ನು ಕಟ್ಟಿ ಜನಮನವನ್ನು ಸಂಸ್ಕರಿಸಿದರು. ದಾಸಕೂಟ ಪರಂಪರೆಯಲ್ಲಿ ಬರುವವರೆ ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು, ವೈಕುಂಠದಾಸರು. ಈ ಹರಿದಾಸರು ಭಗವಂತನ ದಾಸರು. ಸದಾ ಹರಿಧ್ಯಾನದಲ್ಲಿ ನಿರತರಾಗಿದ್ದು, ಹರಿಯೇ ಇವರಿಗೆ ಸರ್ವಸ್ವವಾಗಿದ್ದು ಇವರ ಜೀವನವೇ ಹರಿಮಯವಾಗಿದ್ದರಿಂದ, ಹರಿಯ ದಾಸನೇ ಹರಿದಾಸ ಎಂಬ ನಾಮ ಅನ್ವಯವಾದಂತಿದೆ. ಹರಿದಾಸರು ಅಂದಿನ ಸಮಾಜದಲ್ಲಿದ್ದ ಸಮಸ್ಯೆಗಳು, ಕಷ್ಟ ಕಾರ್ಪಣ್ಯಗಳನ್ನು ತಮ್ಮ ಕೀರ್ತನೆಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಪ್ರೇಮ ತ್ಯಾಗಗಳ ಮೂಲಕ ಸಮಾನತೆಯ, ಸುಧಾರಣೆಯ ರಾಜ್ಯ ನಿರ್ಮಾಣವಾಗಬೇಕೆಂದು ಹರಿದಾಸರು ಬಯಸಿದ್ದರು. ಜನರೆಲ್ಲಾ ಒಂದಾಗಿ ದೈವಭಕ್ತಿಯಲ್ಲಿ ಪ್ರೇರಿತರಾಗಿ ವಿಶ್ವಕಲ್ಯಾಣವನ್ನು ಸಾಧಿಸಬೇಕೆಂದು ನಿರಂತರವಾಗಿ ಉಪದೇಶಿಸಿದರು.[೫] ಇಂತಹ ಹಿನ್ನೆಲೆಯಲ್ಲಿ ದಾಸ ಪರಂಪರೆಯು ತನ್ನ ಹಾಡುವ ದಾಟಿ, ಲಯದಿಂದ ಹೊಸ ಸಂಗೀತ ಶೈಲಿಯೊಂದನ್ನೆ ಹುಟ್ಟು ಹಾಕಿತು ಹಾಗೂ ಸಂಗೀತ ಕ್ಷೇತ್ರದಲ್ಲಿ ಈ ಪ್ರಕಾರವು ಕರ್ನಾಟಕ ಸಂಗೀತ ಎಂದೇ ಹೆಸರಾಯಿತು.

ರಾಜಕೀಯ ಅನಿಶ್ಚಯತೆ, ಪರಕೀಯ ಮತಧರ್ಮಗಳ ಆಕ್ರಮಣ, ಸಾಮಾಜಿಕ ಅಸ್ಥಿರತೆ ಅನ್ಯಸಂಸ್ಕೃತಿಗಳ ಪ್ರಭಾವ ಆಡಂಬರದ ಜೀವನ, ಅರ್ಥವಿಲ್ಲದ ರೂಢಿ, ಸಂಪ್ರದಾಯಗಳಿಂದ ಜರ್ಝರಿತವಾಗಿದ್ದ ಸಮಾಜದ ಮೇಲೆ ದಾಸ ಪರಂಪರೆ ಬೀರಿದ ಪ್ರಭಾವವನ್ನು ಹಾಗೂ ಇದರಿಂದ ಆರಂಭವಾದ ಹೊಸ ಶಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಮುಕ್ತಿಗೆ ಭಗವಂತನ ಅನುಗ್ರಹ ಅತ್ಯವಶ್ಯ. ಅದನ್ನು ಸರಳ ಮತ್ತು ಸುಲಭ ಮಾರ್ಗವಾದ ಅನನ್ಯ ಭಕ್ತಿಯಿಂದ ಪಡೆಯಬೇಕೆಂಬುದೇ ಹರಿದಾಸ ಚಳವಳಿಯ ಸಾರವಾಗಿದೆ. ಸಮಾಜವನ್ನು ರೂಪಿಸುವ ಮತ್ತು ಸುಧಾರಿಸುವ ವಿಷಯದಲ್ಲಿ ಹರಿದಾಸರು ಮಾಡಿದ ಸೇವೆ ಅಪಾರವಾದುದು. ಸಮಾಜದಲ್ಲಿ ನೈತಿಕ ಉನ್ನತಿಯನ್ನು ಸಾಧಿಸುವುದೇ ಎಲ್ಲಾ ದಾಸರ ಗುರಿಯಾಗಿತ್ತು. ಹೀಗಾಗಿ ಅವರ ಕೀರ್ತನೆಗಳಲ್ಲಿ ಮತ ಪ್ರಚಾರಕ್ಕಿಂತ ನೀತಿಬೋಧನೆ, ಶುದ್ಧಾಚರಣೆ, ಹರಿಭಕ್ತಿ ಮುಂತಾದವುಗಳೇ ಪ್ರಮುಖವಾಗಿ ಗೋಚರಿಸುತ್ತವೆ.[೨೦] ಹರಿದಾಸರು ಸಮಾಜದಲ್ಲಿ ಡಂಬಾಚಾರಿಕೆಯ ಜನರನ್ನು ಕಂಡಾಗ 'ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ, ಮಡಿ ಮಾಡುವ ಬಗೆ ಬೇರುಂಟು ಎಂದು ಪ್ರಚಾರ ಮಾಡಿದರು.[೨೧]

ದಾಸ ಪಂಥದಲ್ಲಿ ಅತ್ಯಂತ ಶ್ರೇಷ್ಠರು, ಮಹಾಮಹಿಮರು ಭಕ್ತಿಗೆ ಹೆಸರಾದವರು ಹಾಗೂ ಅಗ್ರಗಣ್ಯರು ಎಂದರೆ ಪುರಂದರದಾಸರು. ಅವರು ತಮ್ಮ ಸಂಪತ್ತನ್ನೆಲ್ಲಾ ದಾನ ಮಾಡಿ ಪರಮ ವಿರಕ್ತರಾಗಿ ಶ್ರೀನಿವಾಸರಾಯರನ್ನು ಕಂಡು ಅವರಿಂದ ಅಂಕಿತ ಪಡೆದು ಹರಿದಾಸರಾದರೆಂದು ತಿಳಿದುಬರುತ್ತದೆ.[೨೨]

ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಸಮಾಜದ ವಿಮರ್ಶೆಯನ್ನು ಮಾಡುತ್ತಾ, ಅನೀತಿ, ಅನಾಚಾರ, ಸುಳ್ಳು, ಕಪಟ, ಬೂಟಾಟಿಕೆ, ಆಡಂಬರಗಳನ್ನು ಕಟುವಾಗಿ ಟೀಕಿಸಿದರು. ಸರಳ ಭಾಷೆಯಲ್ಲಿ ವಾಸ್ತವ ವಿಚಾರಗಳನ್ನು ಜನರಿಗೆ ಮನದಟ್ಟಾಗುವಂತೆ ಹೇಳುತ್ತಿದ್ದರು. 'ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ ಎಂಬ ಕೀರ್ತನೆಯು ಸರಳತೆಗೆ, ಸಹಜತೆಗೆ ಸಾಕ್ಷಿಯಾಗಿದೆ. ಡಾಂಭಿಕ ಭಕ್ತರ ಭಕ್ತಿಯನ್ನು ಕುರಿತು, 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ. ತನುವ ನೀರೊಳಗದ್ದಿ ಫಲವೇನು, ಬೇವು ಬೆಲ್ಲದೊಳಿಡಲೇನು ಫಲ, ಹೊಲೆಯ ಹೊರಗಿಹನೆ ಊರೊಳಗಿಲ್ಲವೆ' ಮುಂತಾದ ಅವರ ಕೀರ್ತನೆಗಳು ಸಮಾಜವನ್ನು ತಿದ್ದುವ ವಿಚಾರ, ವಿಮರ್ಶೆಯಿಂದ ಕೂಡಿವೆ. ಸತ್ಯ, ಧರ್ಮ, ಪ್ರಾಮಾಣಿಕತೆ ಜನರಲ್ಲಿ ಬೆಳೆಯಬೇಕು ಎಂಬ ಕಳಕಳಿಯಿದೆ. 'ಈಸಬೇಕು ಇದ್ದು ಜೈಸಬೇಕು. ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎನ್ನುವ ಇವರ ಕೀರ್ತನೆಗಳಲ್ಲಿ ಜೀವನದ ಸಾರ್ಥಕತೆಯನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಹೀಗೆ ಪುರಂದರದಾಸರು ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟ ಬಯಸಿದ ಮಹಾನುಭಾವರು. ಕುಲ-ಗೋತ್ರಗಳಿಗೆ ಪ್ರಾಧಾನ್ಯತೆಯನ್ನು ನೀಡದೇ ಸಕಲ ಗುಣವಂತರೆ ಉತ್ತಮರು ಎಂಬ ಉದಾತ್ತ ಮತ್ತು ಉದಾರ ಕಲ್ಪನೆಯನ್ನು ಹೊಂದಿದ್ದರು. ಇದು ಅವರ ಜಾತ್ಯಾತೀತ ಸಮಾಜದ ಕಲ್ಪನೆಯಾಗಿತ್ತು. ಪುರಂದರದಾಸರು ತಮ್ಮ ಕೀರ್ತನೆಗಳ ಮೂಲಕ ಸಾಹಿತ್ಯವನ್ನು ಜನಪ್ರಿಯಗೊಳಿಸಿದಂತೆ ಸಂಗೀತವನ್ನು ಜನಸಾಮಾನ್ಯರಿಗೆ ಮುಟ್ಟಿಸಿದರು. ಹಾಗೆಯೇ ಸುಲಭವಾದ ಸಂಗೀತ ಶಿಕ್ಷಣ ಕ್ರಮವನ್ನು ರೂಪಿಸಿ 'ಕರ್ನಾಟಕ ಸಂಗೀತ ಪಿತಾಮಹ'ರೆಂದು

ಪ್ರಖ್ಯಾತಿಯಾಗಿದ್ದಾರೆ. 'ದಾಸರೆಂದರೆ ಪುರಂದರದಾಸರಯ್ಯ ಎಂಬುದಾಗಿ ತಮ್ಮ ಗುರುಗಳಾದ ವ್ಯಾಸರಾಯರಿಂದ ಪ್ರಶಂಸೆ ಪಡೆದ ಮಹಾಪುರುಷರಾಗಿದ್ದಾರೆ.

ಪುರಂದರದಾಸರು ಆ ಕಾಲದಲ್ಲಿಯೇ ತಮ್ಮ ಸರಳ ಕೀರ್ತನೆಗಳ ಮೂಲಕ ಜನರ ಮನ ಪರಿವರ್ತನೆ ಮಾಡಿ ಉತ್ತಮ ಸಮಾಜ ಕಟ್ಟುವ ಕಾರ್ಯವನ್ನು ಮಾಡಿರುವುದನ್ನು ಗುರುತಿಸಬಹುದಾಗಿದೆ. ಅವರ ಕೀರ್ತನೆಗಳಲ್ಲಿರುವ ತತ್ವಸಾರಗಳು ಎಲ್ಲಾ ಕಾಲಕ್ಕೂ ಎಲ್ಲಾ ಸಮಾಜಕ್ಕೂ ಪ್ರಸ್ತುತವೆನಿಸುತ್ತವೆ. ಆದ್ದರಿಂದಲೇ ಮಠ, ಮಾನ್ಯಗಳು, ಸಂಘ ಸಂಸ್ಥೆಗಳು ಸಂಗೀತ ಕೇಂದ್ರಗಳು ಅವರ ಕೀರ್ತನೆಗಳನ್ನು ಪ್ರಚಾರ ಮಾಡುವ ಕಾರ್ಯವನ್ನು ಇಂದಿಗೂ ಕೈಗೊಂಡಿದ್ದಾರೆ. ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೆಲವು ಧಾರ್ಮಿಕ ಸಂಸ್ಥೆಗಳಿಂದ ಪುರಂದರ ಆರಾಧನೆ ಹಾಗೂ ಪುರಂದರ ಉತ್ಸವ ಆಚರಣೆ ಮೂಲಕ ಅವರ ಕೊಡುಗೆಯನ್ನು ಸ್ಮರಿಸುವ ಹಾಗೂ ಸಮಾಜವನ್ನು ಪರಿವರ್ತಿಸುವ ಕೆಲಸ ಇಂದಿಗೂ ನಡೆದಿದೆ. ಹಂಪಿಯ ತುಂಗಭದ್ರಾ ನದಿ ದಂಡೆಯಲ್ಲಿ ಧ್ಯಾನಾಸಕ್ತರಾಗಿ ಪುರಂದರದಾಸರು ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ಇಂದಿಗೂ 'ಪುರಂದರ ಮಂಟಪ' ಎಂದೇ ಕರೆಯಲಾಗುತ್ತಿದೆ. ಇಂದಿಗೂ ಹಂಪಿಯಲ್ಲಿ ಪ್ರತಿವರ್ಷ ಪುರಂದರದಾಸರ ಸ್ಮರಣೆ, ಸಂಗೀತ ಕಾರ್ಯಕ್ರಮಗಳು ಜರುಗುತ್ತಲಿವೆ.

ಕರ್ನಾಟಕದ ಹರಿದಾಸ ಪಂಥದಲ್ಲಿ ಮತ್ತೊಬ್ಬ ಅಗ್ರಗಣ್ಯ ಹಾಗೂ ಭಕ್ತ ಶ್ರೇಷ್ಠರೆಂದರೆ ಕನಕದಾಸರು. ಸಂಕಷ್ಟದಲ್ಲಿದ್ದ ಸಮಯದಲ್ಲಿ ತಿಮ್ಮಪ್ಪನಿಗೆ ಭೂಗತವಾಗಿದ್ದ ನಿಧಿ ಸಿಕ್ಕರೂ, ತನ್ನದಲ್ಲದ ಹಣವನ್ನು ಅವರು ದೀನ-ದಲಿತರಿಗೆ ಹಂಚಿದರೆಂದು ತಿಳಿದು ಬರುತ್ತದೆ. ಹೀಗಾಗಿ ಇವರು ಕನಕನಾಯಕನೆಂದು ಪ್ರಸಿದ್ಧಿಗೆ ಬಂದರು.[11] ಕ್ರಮೇಣ ಇವರು ವೈರಾಗ್ಯ ತಾಳಿ, ಭಕ್ತಿಯ ಮೂಲಕ ಸರಳ ಜೀವನದ ಬೋಧನೆಯಲ್ಲಿ ತೊಡಗಿ ಕನಕದಾಸರೆಂದೇ ಹೆಸರುವಾಸಿಯಾದರು ಹಾಗೂ ಒಮ್ಮೆ ಇವರ ಕನಸಿನಲ್ಲಿ ಕಾಣಿಸಿಕೊಂಡ ದೈವ ಆದಿಕೇಶವ ಇವರಲ್ಲಿ ವ್ಯಕ್ತಪಡಿಸಿದ ಇಚ್ಛೆಯಂತೆ, ಇವರು ತಮ್ಮ ಹುಟ್ಟೂರಿನ ನಿರ್ಲಕ್ಷ್ಯ ಸ್ಥಳವೊಂದರಲ್ಲಿ ಮೂಲೆಗುಂಪಾಗಿ ಬಿದ್ದಿದ್ದ ಆದಿಕೇಶವನ ವಿಗ್ರಹವನ್ನು ಕಾಗಿನೆಲೆ ಎಂಬಲ್ಲಿಗೆ ತಂದು ಪ್ರತಿಷ್ಠಾಪಿಸಿದರು. ಈ ಕಾರಣದಿಂದಲೇನೊ, ಕನಕದಾಸರ ಕೃತಿಗಳೆಲ್ಲವೂ 'ಬಾಡ', 'ಕಾಗಿನೆಲೆ' ಕ್ಷೇತ್ರಗಳ ಕ್ಷೇತ್ರನಾಥ ಆದಿಕೇಶವನಿಗೆ ಅಂಕಿತವಾಗಿವೆ. ಕಾಗಿನೆಲೆಯ ಹೆಗ್ಗೆರೆಯ ದಂಡೆಯ ಮೇಲೆ ಕನಕದಾಸರ ಸಮಾಧಿಯಿತ್ತೆಂದು ಹೇಳುವ ಸ್ಥಳದಲ್ಲಿಯೇ ಇತ್ತೀಚೆಗೆ ಬೆಂಗಳೂರಿನ 'ಅಖಿಲ ಕರ್ನಾಟಕ ಕುರುಬರ ಸಂಘ'ದಿಂದ ಕಟ್ಟಡವೊಂದು ನಿರ್ಮಾಣಗೊಂಡಿದ್ದು, ಈಗ ಇದು ಕನಕಮಂದಿರವೆಂದು ಪ್ರಸಿದ್ಧಿಯಾಗಿದೆ.

ಕನಕದಾಸರ ಬೋಧನೆಯ ಒಂದು ವೈಶಿಷ್ಟ್ಯವೆಂದರೆ ಅವರು ಮಾಡುತ್ತಿದ್ದ ಕಾರ್ಯಗಳನ್ನು ಹಾಗೂ ಚಿಂತಿಸುತ್ತಿದ್ದ ವಿಚಾರಗಳನ್ನೆಲ್ಲಾ ಕೀರ್ತನೆಗಳ ರೂಪದಲ್ಲಿ ಪೋಣಿಸಿ ಹೇಳುತ್ತಿದ್ದ ವಿಧಾನ ಮನಸ್ಸಿಗೆ ನಾಟುವಂತಿರುತಿತ್ತು. ಅವರ ಕೀರ್ತನೆಗಳ ಕೊನೆಯಲ್ಲಿ ಆದಿಕೇಶವನ ಹೆಸರನ್ನು ಸ್ಮರಿಸುತ್ತಿದ್ದುದರಿಂದ ಮುಂದೆ 'ಶ್ರೀ ಆದಿಕೇಶವ' ಅವರ ಎಲ್ಲ ಕೀರ್ತನೆಗಳ ಅಂಕಿತನಾಮವಾಗಿ ಉಳಿಯಿತು. ಇವರು ಆ ಕಾಲದಲ್ಲಿ ಅನೇಕ ಭಾವಪೂರ್ಣ ಕೀರ್ತನೆಗಳನ್ನು ರಚಿಸಿರುವರಲ್ಲದೆ ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧ್ಯಾನ ಚರಿತ್ರೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕನಕದಾಸರ ಹಾಡುಗಳು

ಅತ್ಯಂತ ಸರಳವಾಗಿದ್ದು ಸಾಮಾನ್ಯ ಜನರು ಸುಲಭವಾಗಿ ಅರ್ಥಮಾಡಿಕೊಳ್ಳುವಂತಿದ್ದವು. ಇವರು ಕೀರ್ತನೆಗಳನ್ನು ರಚಿಸಿ ಹಾಡಿದ ಹರಿದಾಸರು ಮಾತ್ರವಲ್ಲದೆ ಕಾವ್ಯಗಳನ್ನು ರಚಿಸಿರುವ ಕವಿಯೂ, ಹೌದು ಹಾಗೂ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳಾಗಿದ್ದ ಜಾತಿ, ಕುಲಗಳ ಮೂಲವನ್ನು ಬಯಲಿಗೆಳೆದ ಸುಧಾರಕರೂ ಆಗಿದ್ದಾರೆ. ಈ ಮೂಲಕ ಅಂದಿನ ಸಾಮಾಜಿಕ ನ್ಯೂನತೆಗಳನ್ನು ಖಂಡಿಸಿ, ಹೊಸ ಸಮಾಜ ವೊಂದರ ಪ್ರಗತಿಗೆ ತಮ್ಮದೇ ಆದ ಕೊಡುಗೆ ಸಲ್ಲಿಸಿದ್ದಾರೆ.[೨೪]

ಕನಕದಾಸರ ಕೀರ್ತನೆಗಳಲ್ಲಿ 'ಬಾಗಿಲನು ತೆರೆದು ಸೇವೆಯನು ಕೊಡುಹರಿಯೆ' ಎನ್ನುವ ಹಾಗೂ ಕುಲ - ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಹಾಗೂ ಇನ್ನೊಂದು ಕೀರ್ತನೆ ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎನ್ನುವ ಕೀರ್ತನೆಗಳು ವಿಶಿಷ್ಟವಾಗಿವೆ. ಕೀರ್ತನೆಗಳ ಮೂಲಕ ಸಮಾಜದ ಅಂಕು ಡೊಂಕುಗಳನ್ನು ಮುಕ್ತವಾಗಿ ಟೀಕಿಸಿ, ಜನರನ್ನು ಎಚ್ಚರಿಸುತ್ತಾರೆ. ದೀನ ದಲಿತರ ಮೌಢ್ಯ, ರೂಢಿ ಸಂಪ್ರದಾಯಗಳನ್ನು ಬಯಲಿಗೆಳೆದು ಕಳಕಳಿಯಿಂದ ಕಳವಳ ಪಡುತ್ತಾರೆ. ಅಂದಿನ ಜಾತಿ ಭೇದಗಳನ್ನು ಖಂಡಿಸಿ ಸರ್ವಧರ್ಮ ಸಮನ್ವಯವನ್ನು ಎತ್ತಿಹಿಡಿದಿದ್ದಾರೆ. ಹೀಗೆ ಕನಕದಾಸರು ಒಬ್ಬ ನಾಯಕನಾಗಿ, ಭಕ್ತನಾಗಿ, ಉಪದೇಶಕನಾಗಿ ಸಂತನಾಗಿ ಪವಾಡ ಪುರುಷನಾಗಿ ಸಮಾಜಕ್ಕೆ ಇವರು ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾಗಿದೆ. ಇವರ ಜೊತೆಗೆ ಗೋಪಾಲದಾಸ, ವಿಜಯದಾಸ, ಶ್ರೀರಾಘವೇಂದ್ರ ಸ್ವಾಮಿಗಳ ಕೊಡುಗೆಗಳು ದಾಸ ಪರಂಪರೆಯ ಅಧ್ಯಯನದಲ್ಲಿ ಪ್ರಮುಖವಾಗಿ ಕಂಡು ಬರುತ್ತವೆ.

ವಚನಕಾರರ ವಚನಗಳು ಸರಳ ಭಾಷೆಯಲ್ಲಿದ್ದು ಜನಸಾಮಾನ್ಯರಿಗೆ ಬಹುಬೇಗ ತಲುಪಿ ಪರಿಣಾಮ ಬೀರಿದಂತೆ, ಹರಿದಾಸರ ಕೀರ್ತನೆಗಳು ಅದೇ ರೀತಿ ಎಷ್ಟರಮಟ್ಟಿಗೆ ಜನಸಾಮಾನ್ಯರಿಗೆ ತಲುಪಿದವು ಮತ್ತು ತಲುಪದೇ ಇರಲು ಕಾರಣಗಳೇನು ಎನ್ನುವ ಅಂಶವನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸುವುದು ಅವಶ್ಯಕವಾಗಿದೆ. ವಚನಕಾರರಂತೆ ಹರಿದಾಸರು ಸಹಾ ಸಂಸ್ಕೃತವನ್ನು ಬಿಟ್ಟು ತಮ್ಮ ಅನುಭವ, ತತ್ವಗಳನ್ನು ಪ್ರಚಾರ ಮಾಡಲು ಆಡು ನುಡಿ ಕನ್ನಡವನ್ನು ಮಾಧ್ಯಮವನ್ನಾಗಿ ಬಳಸಿದರೂ ಸಹ ಅದು ಹೆಚ್ಚಿನ ಜನತೆಯೊಂದಿಗೆ ಅರ್ಥಪೂರ್ಣ ಸಂಬಂಧವನ್ನು ಹೊಂದುವುದು ಕಷ್ಟವಾಯಿತು. ಅದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ, ಹರಿದಾಸ ಸಾಹಿತ್ಯ ರಚನೆಯಾಗಿರುವುದು ಸಂಗೀತಶಾಸ್ತ್ರದ ತಳಹದಿಯ ಮೇಲೆ ಮತ್ತು ಸಾಹಿತ್ಯ ವಿಶೇಷವಾಗಿ ಬ್ರಾಹ್ಮಣ ವಲಯದಲ್ಲೇ ಬೆಳೆಯಿತು. ಹೀಗಾಗಿ ಈ ಸಾಹಿತ್ಯ ಕೇವಲ ಸಮಾಜದ ಮೇಲ್ವರ್ಗಗಳಲ್ಲೇ ಸುತ್ತುತ್ತಾ ಸಮಾಜದ ತಳಭಾಗದಲ್ಲಿ ತನ್ನ ಪ್ರಭಾವ ಬೀರುವಲ್ಲಿ ಅಷ್ಟೊಂದು ಸಫಲವಾಗಲಿಲ್ಲ ಎನ್ನುವ ಅಭಿಪ್ರಾಯವು ಕೇಳಿ ಬರುತ್ತದೆ.[೨೫]

ಅಪವಾದಗಳನ್ನು ಬದಿಗೊತ್ತಿ, ಹರಿದಾಸರ ಕೀರ್ತನೆಗಳು ಯಾವ ತತ್ವಗಳನ್ನು ಒಳಗೊಂಡಿವೆ. ಆ ತತ್ವ ಚಿಂತನೆಗಳು ಈಗಲೂ ಎಷ್ಟೊಂದು ಪ್ರಸ್ತುತ ಎನ್ನುವ ವಿಚಾರವನ್ನು ಗಮನಿಸಿದಾಗ, ಹರಿದಾಸರ ಸಾಹಿತ್ಯದಲ್ಲಿ ಅಂದಿನ ಸಮಾಜದ ಲೋಪ ದೋಷಗಳ ಚಿತ್ರಣ ದೊರೆಯುತ್ತದೆ. ಹರಿದಾಸರು ತಮ್ಮ ಕಣ್ಮುಂದೆ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ ಅನೀತಿಗಳನ್ನು ಬಹಿರಂಗಗೊಳಿಸಿ ಖಂಡಿಸುತ್ತಾರೆ.

ಹರಿದಾಸ ಪರಂಪರೆಯ ಎಲ್ಲಾ ದಾಸರೂ ಪ್ರಮುಖವಾಗಿ ದ್ವೈತ ಮತದ ತತ್ವಗಳನ್ನು ನಂಬಿದವರು. ಶ್ರೀಹರಿ ಸರ್ವೋತ್ತಮ, ಸರ್ವಸ್ವತಂತ್ರ, ಈ ಜಗತ್ತು ಸತ್ಯ ಎಂದು ಬೋಧಿಸಿರುವುದು ವಿಶೇಷವಾಗಿದೆ.

ಮಾನವನು ಸಮಾಜದ ಜೀವಿಯಾಗಿರುವುದರಿಂದ ಇತರರೊಡನೆ ಅವನು ಹೇಗೆ ಬಾಳಬೇಕೆಂಬುದನ್ನು ದಾಸರು ಒತ್ತಿ ಹೇಳಿದ್ದಾರೆ. ಅವರ ಕೀರ್ತನೆಗಳು ನೀತಿಯ ನೆಲೆಗಟ್ಟಿನ ಮೇಲೆ ನಿಂತಿವೆ. ಅದರಲ್ಲೂ ಸ್ತ್ರೀಪರವಾದ ಅವರ ಧ್ವನಿಯನ್ನು ಗುರುತಿಸಬಹುದಾಗಿದೆ. ಸ್ತ್ರೀಯನ್ನು ತಾಯಿಯಾಗಿ, ಮಡದಿಯಾಗಿ, ಸೊಸೆಯಾಗಿ, ಮಗಳಾಗಿ, ಅಕ್ಕ ತಂಗಿಯಾಗಿ ಸಮಾಜದಲ್ಲಿ ಸ್ತ್ರೀ ವಹಿಸುವ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ವಸ್ತುನಿಷ್ಠವಾಗಿ ಪ್ರಸ್ತುತಪಡಿಸಿದ್ದುದು ಇಂದಿಗೂ ಅನುಸರಣೀಯವಾಗಿದೆ. ಜೊತೆಗೆ ಮೇಲು ಕೀಳು, ಶ್ರೀಮಂತ ಬಡವ ಎಂಬ ಸಂಕುಚಿತ ಮನೋಭಾವದ ಅಂದಿನ ಸಮಾಜವನ್ನು ತಿದ್ದಲು ದಾಸರು ಪ್ರಯತ್ನಿಸಿದ್ದಾರೆ. ಜಾತಿ ಭೇದಗಳನ್ನು ಖಂಡಿಸಿ ಸಾಮಾಜಿಕ ಸಮಾನತೆಯನ್ನು ಎತ್ತಿಹಿಡಿದಿದ್ದಾರೆ. ಸಮಾಜದಲ್ಲಿ ಯಾವುದೇ ಸಂಘರ್ಷಗಳಿಗೆ, ಎಡೆಮಾಡಿಕೊಡದೆ, ಯಾವುದೇ ಒತ್ತಾಯವಿಲ್ಲದೆ, ವಿರೋಧವಿಲ್ಲದೆ, ಸಮಾಜವೊಂದರ ಪ್ರಗತಿಗೆ ಪ್ರಯತ್ನಿಸಿದ್ದು ದಾಸ ಪರಂಪರೆಯ ನಿಜವಾದ ಸಾಧನೆ ಆಗಿದೆ. ಇಂತಹ ಪರಂಪರೆ ಇಂದಿನ ಸಮಾಜದ ಸುಧಾರಣೆಗೂ ಮಾರ್ಗದರ್ಶನದಂತಿದೆ.

ದಾಸರು ಸಮಾಜದ ಉದ್ಧಾರಕ್ಕಾಗಿ, ಸಮಾಜದಲ್ಲಿ ಸಮಾನತೆಯ ಸ್ಥಾಪನೆಗಾಗಿ, ಜಾತೀಯತೆಯ ನಿರ್ಮೂಲನೆಗಾಗಿ, ಶ್ರೀಮಂತ ಬಡವರ ನಡುವಿನ ಅಂತರದ ನಿರ್ಮೂಲನೆಗಾಗಿ ತಮ್ಮ ಆಸ್ತಿ, ಸಂಪತ್ತು, ಸುಖ, ಜೀವನವನ್ನೇ ತ್ಯಾಗ ಮಾಡಿ ಸರಳ ಶ್ರದ್ಧಭಕ್ತಿಯ ಜೀವನ ನಡೆಸಿದರು. ಜನಸೇವೆಯೇ ಜನಾರ್ಧನನ ಸೇವೆ ಎನ್ನುವ ಹಾದಿಯಲ್ಲಿ ನಡೆದರು.

ಆದರೆ ಇಂದು ಇಂತಹ ಶ್ರೇಷ್ಠ ವ್ಯಕ್ತಿಗಳನ್ನು ಒಂದು ಜಾತಿಗೆ, ಸಮೂಹಕ್ಕೆ ಮೀಸಲಾಗಿಸಿ ಸಮಾಜದಿಂದಲೇ ಪ್ರತ್ಯೇಕಿಸಲಾಗುತ್ತಿದೆ. ಉದಾಹರಣೆಗೆ ಕನಕದಾಸರನ್ನು ಕೇವಲ ಕುರುಬ ಸಮಾಜದ ನಾಯಕ ಎನ್ನುವ ರೀತಿಯಲ್ಲಿ ವೈಭವೀಕರಿಸುತ್ತಾ, ಅವರನ್ನು ಆದರ್ಶ ವ್ಯಕ್ತಿಯನ್ನಾಗಿ ನೋಡುವ ಬದಲಾಗಿ ಗುರು, ದೈವೀಪುರುಷರನ್ನಾಗಿ ನೋಡಲಾಗುತ್ತಿದೆ. ಕನಕದಾಸರು ತಮ್ಮ ಹಾಡು ಕೀರ್ತನೆಗಳಲ್ಲಿ ಪ್ರತಿಪಾದಿಸಿದ ತತ್ವಗಳು ಎಲ್ಲಾ ಜಾತಿ ಮತ ಧರ್ಮದವರಿಗೆ ಸಂಬಂಧಿಸಿದವಾಗಿದ್ದವು. ಅದರಲ್ಲೂ ಬಾಗಿಲನು ತೆರೆದು ಸೇವೆಯನು ಕೊಡು... ಎನ್ನುವ ಹಾಡಿನಲ್ಲಿ ಎಲ್ಲಾ ಕೆಳವರ್ಗದವರ ಕೂಗು ಇದೆ. ಇಂತಹ ವ್ಯಕ್ತಿಯನ್ನು ಒಂದು ಜಾತಿಗೆ ಸೀಮಿತಗೊಳಿಸಿ ಕನಕದಾಸರೆಂದರೆ ಕುರುಬ ಸಮಾಜದ ಗುರುಗಳು, ಗುರುಪೀಠ, ಕನಕ ಪೀಠ ಮುಂತಾದವುಗಳಿಂದ ಗುರುತಿಸಲಾಗಿದೆ. ಅವರ ತತ್ವ ಸಿದ್ಧಾಂತಗಳನ್ನು ಗಾಳಿಗೆ ತೂರಲಾಗುತ್ತಿದೆ.

ಸಮಾನಾಧಾರಕ ಅಂಶವೆಂದರೆ ಇತ್ತೀಚೆಗೆ ಕನಕ ಜಯಂತಿ ಅಂತಹ ಕಾರ್ಯಕ್ರಮವನ್ನು ಸಂಘ ಸಂಸ್ಥೆಗಳ ಜೊತೆಗೆ ಸರ್ಕಾರವೂ ಆಚರಿಸುತ್ತಿದ್ದು ಕನಕದಾಸರ ನೆನಪು ಚರಿತ್ರೆಯಲ್ಲಿ, ಜನರಲ್ಲಿ ಅಚ್ಚಳಿಯದೇ ಉಳಿಯಲು ಕನಕ ಜಯಂತಿಯಂದು ಸರ್ಕಾರಿ ರಜಾ ಘೋಷಣೆ ಮಾಡಲಾಗಿದೆ. ಆದರೆ ಕನಕ

ಜಯಂತಿಯಂತಹ ಕಾರ್ಯಕ್ರಮಗಳು ಅವರ ತತ್ವ, ಸಿದ್ಧಾಂತಗಳನ್ನು ನೆನಪಿಸಿ ಹೆಚ್ಚು ಪ್ರಸಾರ ಮಾಡಿ ಎಲ್ಲಾ ಸಮುದಾಯದವರಿಗೂ ಮುಟ್ಟಿ ಸಮಾಜದ ಸುಧಾರಣೆಗೆ ಏಳಿಗೆಗೆ ದಾರಿಯಾಗಬೇಕಾಗಿದೆ.

೩.೪. ತತ್ವಪದಕಾರರ ಪರಂಪರೆ

ಕರ್ನಾಟಕ ರಾಜ್ಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಶರಣರ ಮತ್ತು ದಾಸರ ಕಾರ್ಯಕ್ಷೇತ್ರವಾದ ಪ್ರದೇಶ ತತ್ವಪದಕಾರರ ತಾಣವೂ ಆಗಿದೆ. ವಚನ ಹಾಗೂ ಕೀರ್ತನೆಗಳಂತಹ ವಿಶಿಷ್ಟ ಸಾಹಿತ್ಯವನ್ನು ನೀಡಿದ ಈ ಪ್ರದೇಶವು ಸಮಾಜದ ಎಲ್ಲಾ ವರ್ಗದ ಜನರನ್ನು ಸೆಳೆಯುವ ತತ್ವಪದಗಳನ್ನು ಕೊಟ್ಟಿದೆ. ಸಾಹಿತ್ಯ ಕ್ಷೇತ್ರದಲ್ಲಿ ಭಕ್ತಿ ಚಳವಳಿಯಲ್ಲಿ ಮತ್ತು ಸಮಾಜ ಸುಧಾರಣಾ ಚಳವಳಿಯಲ್ಲಿ ತತ್ವಪದಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ವಚನಗಳು ಮತ್ತು ಕೀರ್ತನೆಗಳಂತೆ ತತ್ವಪದಗಳು ಸಹಾ ಭಕ್ತಿ ಸಾಹಿತ್ಯದ ಸ್ತೋತ್ರಗಳಾಗಿವೆ. ತತ್ವಪದಗಳಲ್ಲಿ ಗಾಢವಾದ ಅನುಭಾವ, ಆಧ್ಯಾತ್ಮಿಕತೆ, ಭಕ್ತಿಯ ತೀವ್ರತೆ, ನೀತಿ ಬೋಧನೆ, ಕಾವ್ಯಗುಣ ಮೊದಲಾದ ಸತ್ವ ಹಾಗೂ ತತ್ವಗಳು ಅಡಗಿವೆ.

ತತ್ವಪದಗಳ ಉದಯ ಮತ್ತು ಬೆಳವಣಿಗೆಯ ಹಿನ್ನಲೆಯನ್ನು ಅಧ್ಯಯನ ಮಾಡಿದಾಗ ಕಂಡು ಬರುವ ಚಾರಿತ್ರಿಕ ಅಂಶಗಳೆಂದರೆ, ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಅದಿಲ್‌ಶಾಹಿಗಳ ಆಳ್ವಿಕೆ ಕೊನೆಗೊಳ್ಳುತ್ತಿದ್ದಂತೆ ಇಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಅರಾಜಕತೆಗಳು ಹುಟ್ಟಿಕೊಂಡವು. ಯಾವುದೇ ಧರ್ಮವು ಜನಸಮುದಾಯಗಳನ್ನು ಮುನ್ನಡೆಸುವಷ್ಟು ಕ್ರಿಯಾಶೀಲವಾಗಿರಲಿಲ್ಲ. ಲಿಂಗಾಯತರು, ಮುಸ್ಲಿಮರು ತಮ್ಮ ನಿರ್ದಿಷ್ಟ ವಲಯದೊಳಗೆ ಬದುಕುತ್ತಿದ್ದರು. ಬಡವರನ್ನು, ಕೆಳವರ್ಗದವರನ್ನು, ಆಕರ್ಷಿಸಿದ್ದ ಸೂಫಿಗಳ ಪ್ರಭಾವವು ಇಳಿಮುಖವಾಗಿತ್ತು. ದಾಸರ ಪದಗಳು ಹೆಚ್ಚಾಗಿ ಬ್ರಾಹ್ಮಣರ ವಲಯದಲ್ಲಿ ಮಾತ್ರ ಹೆಚ್ಚಾಗಿ ಇದ್ದವು. ಇಂತಹ ಸಮಯದಲ್ಲಿ ೧೭ ರಿಂದ ೧೯ನೇ ಶತಮಾನದಲ್ಲಿ ತಮ್ಮ ಅನುಭಾವಿಕ ವ್ಯಕ್ತಿತ್ವದಿಂದಲೇ, ಹಾಡುಗಳಿಂದಲೇ ಜನಸಾಮಾನ್ಯರನ್ನು ಆಕರ್ಷಿಸಿ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗೆ ಕಾರಣರಾದವರನ್ನೇ ತತ್ವಪದಕಾರರೆಂದು ಹಾಗೂ ಅವರು ಕಟ್ಟಿ ಹಾಡಿದ ಹಾಡುಗಳನ್ನೆ ತತ್ವಪದಗಳೆಂದು ಪ್ರಸಿದ್ಧಿಯಾದವು. 'ತತ್ವ' ಎಂದರೆ ಸಿದ್ಧಾಂತ. ಇನ್ನೊಬ್ಬರಿಗೆ ಕೇಡನ್ನು ಬಗೆಯದ ರೀತಿಯಲ್ಲಿ ಸಮಾಜ ನಿರೂಪಿಸಿಕೊಂಡಿರುವ ಒಂದು ಚೌಕಟ್ಟು. ತತ್ವವನ್ನು ಪರ್ಯಾಯವಾಗಿ ದೇವರು ಎಂದು ಗ್ರಹಿಸಿಕೊಳ್ಳಲಾಗುತ್ತದೆ. 'ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದವೆನ್ನುತ್ತಾರೆ.'[೩೬]

ತತ್ವಪದದ ಹಾಡುಗಾರರೆಲ್ಲರು ದೈವ ಭಕ್ತರು. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಸಲುವಾಗಿ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದರು. ಹಾಡುಗಳನ್ನು ಏಕಾಂತದಲ್ಲಿ ಕುಳಿತು ಧ್ಯಾನ ಮಗ್ನರಾಗಿ ಹಾಡುತ್ತಿದ್ದರು. ಇಂತಹ ಹಾಡುಗಳು ಸಮೂಹದ ಮಧ್ಯದಲ್ಲಿ ಬಂದಾಗ ಭಜನೆಯ ಪದಗಳಾದವು ಹಾಗೂ ಅನುಭವದ ಹಾಡುಗಳಾದವು. ತತ್ವಪದಗಳನ್ನು ವಿಶಾಲಾರ್ಥದಲ್ಲಿ ಧಾರ್ಮಿಕ ಪಠ್ಯಗಳೆನ್ನಬಹುದು. ಇವು ಭಕ್ತಿ ಚಳವಳಿಯ ಚಿಂತನೆ, ತತ್ವ ಮತ್ತು ಮೌಲ್ಯಗಳನ್ನು ವ್ಯಾಪಕವಾಗಿ ಹರಡುವುದಕ್ಕೆ ರಚನೆಯಾದವುಗಳಾಗಿವೆ.

ತತ್ವಪದಗಳನ್ನು ತತ್ವಪದಕಾರರೆ ರಚಿಸಿ ಹಾಡಿದ ಹಾಡುಗಳಾಗಿವೆಯಲ್ಲದೆ ವಚನ ಸಾಹಿತ್ಯದಷ್ಟೆ ಜನಪ್ರಿಯವಾಗಿದ್ದಾವೆ. ೨೦ನೇ ಶತಮಾನದವರೆಗೂ ತತ್ವಪದಗಳು ಜನಸಮುದಾಯಗಳ ನಾಲಿಗೆ ಮೇಲಿದ್ದವು. 'ಹಳ್ಳಿ ಹಳ್ಳಿಗಳಲ್ಲಿ ತತ್ವಪದಗಳ ಹಾಡು ಹಾಗೂ ತಂಬೂರಿಯ ನಾದ ಬತ್ತಿದ ದಿನಗಳಿಲ್ಲ' ಎಂಬ ಮಾತಿನಲ್ಲಿ ಉತ್ಪ್ರೇಕ್ಷೆಯಿದ್ದಿಲ್ಲ.[೨೨] ೧೮ನೇ ಶತಮಾನದಿಂದ ಆರಂಭವಾದ ಸಾಹಿತ್ಯವನ್ನು ಕಟ್ಟಿದವರಲ್ಲಿ ರಾಮಪುರದ ಬಕ್ಕಪ್ಪಯ್ಯ, ಕೂಡಲೂರು ಬಸವಲಿಂಗಪ್ಪ, ಕಡಕೋಳ ಮಡಿವಾಳಪ್ಪ, ಮೊಟ್ನಹಳ್ಳಿ ಹಸನ್‌ಸಾಬ, ನಿಡವುಂಚಿ ಭದ್ರೇಶ್ವರ ಮುಂತಾದ ಸಂತರಿದ್ದಾರೆ. ಇಂದಿಗೂ ಜನಸಮುದಾಯವೇ ತತ್ವಪದಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಪೋಷಿಸುತ್ತಾ ಬಂದಿದೆ.

ಇಂತಹ ಸಂತರಿಂದ ರಚನೆಗೊಂಡ ತತ್ವಪದಗಳು, ಲಿಖಿತ ಹಾಗೂ ಮೌಖಿಕ ಪರಂಪರೆಯಲ್ಲಿ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಮಠಮಾನ್ಯಗಳ ಆಶ್ರಯದಲ್ಲಿ ಗುರು ಪರಂಪರೆಯಲ್ಲಿದ್ದಂತಹ ಯೋಗಿಗಳು ಮತ್ತು ಗೀಗೀ ಹಾಡಿನ ವೃತ್ತಿಗಾಯಕರ ಪದಗಳು ಲಿಖಿತ ರೂಪದಲ್ಲಿ ದಾಖಲಾದವು. ದಲಿತರ, ಅಲ್ಪಸಂಖ್ಯಾತರ ಬಡವರ್ಗದವರ ಹಾಡುಗಳು ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡವು. ಇಂತಹ ಹಾಡುಗಳನ್ನು ದಲಿತರ ಭಜನೆ ಮತ್ತು ಇತರ ಭಜನೆಗಳಲ್ಲಿ ಕಾಣಬಹುದು. ಹೀಗೆ ಎಲ್ಲಾ ಜಾತಿಯ ತತ್ವಪದಕಾರರು ತತ್ವಪದಗಳನ್ನು ರಚನೆ ಮಾಡಿದರು ಎನ್ನುವುದು ವಿಶೇಷವಾದ ಅಂಶವಾಗಿದೆ.

ತತ್ವಪದಗಳು ಒಂದು ಅನುಭವದ ಘಟನೆಯಿಂದ ಹುಟ್ಟುತ್ತವೆ. ಆ ಘಟನೆಗಳ ತತ್ವವನ್ನು ಭೇದಿಸುವುದರ ಮೂಲಕ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಸಂತರ ಅಥವಾ ಅವರ ಶಿಷ್ಯರ ಬದುಕಿನ ಘಟನೆಗಳೇ ತತ್ವಪದಗಳಿಗೆ ವಿವರಣೆಯಾಗುತ್ತವೆ. ತತ್ವಪದಗಳನ್ನು ರಚಿಸುವವರಿಗೆ ಅನುಭಾವಿ ಕವಿಗಳೆಂದು ಕರೆದರೆ, ತತ್ವಪದಗಳನ್ನು ಪ್ರಸಾರ ಮಾಡುವವರಿಗೆ ಭಜನೆ ಮೇಳಗಳೆಂದು ಗುರುತಿಸಲಾಗಿದೆ. ತತ್ವಪದದ ಪರಂಪರೆಯಲ್ಲಿ ತತ್ವಪದ ರಚನಾಕಾರರೇ ಅದರ ಹಾಡುಗಾರರಾಗಿರುವುದು ವಿಶಿಷ್ಟವಾಗಿದೆ.[೨೮] ತತ್ವಪದಕಾರರ ಒಡನಾಟ ಮುಖ್ಯವಾಗಿ ಸಾಮಾನ್ಯ ಜನರೊಂದಿಗಿತ್ತು. ಜನಸಾಮಾನ್ಯರ ಆಸೆ ಆಕಾಂಕ್ಷೆ, ಅನಿಸಿಕೆ, ಅವರ ಬೇಕು ಬೇಡ, ಸುಖ, ದುಃಖ ಎಲ್ಲವನ್ನು ತಿಳಿದುಕೊಂಡು ಅವರಿಗೆ ಬದುಕಲು ಕಲಿಸಿದರು. ಪರಧರ್ಮ ಹೆಚ್ಚಿನದು ಇದು ಬೆಳೆದರೆ ಸಮಾಜದ ಆರೋಗ್ಯ ಚೆನ್ನಾಗಿರುವುದೆಂದು ಸಾರಿದರು. ದೈವವಾದವನ್ನು ಅಳಿಸಿ, ಮಾನವತಾವಾದವನ್ನು ಬೆಳೆಸಿದರು. ಇವರ ನುಡಿಗಳಿಂದ ಮೂಢನಂಬಿಕೆಗಳು ಹೋಗಿ ಜನರಲ್ಲಿ ಶುದ್ಧವಾದ ಅರಿವು ಮೂಡಲು ಸಾಧ್ಯವಾಯಿತು. ಸ್ವರ್ಗ ನರಕ, ಕೈಲಾಸ, ವೈಕುಂಠ ಮುಂತಾದ ಅವೈಜ್ಞಾನಿಕ ಅಪ್ರಬುದ್ಧ ವಿಚಾರಗಳನ್ನು ಅಳಿಸಿ ಇವು ಎಲ್ಲಿಯೂ ಇಲ್ಲ, ನಮ್ಮ ಜೀವನ ದಲ್ಲಿಯೇ ಇವೆಯೆಂಬುದನ್ನು ತಿಳಿಸಿದರು. ಜೊತೆಗೆ ಭೂಮಿಯನ್ನು ಕೈಲಾಸವೆಂದು ನಂಬಿ ಬೋಧಿಸಿದರು. ಅಲ್ಲದೆ ಜಾತಿಯ ಕಟ್ಟಳೆಗಳನ್ನು ತಿರಸ್ಕರಿಸುತ್ತಾ, ವಿವಿಧ ಜಾತಿ ಧರ್ಮಗಳಲ್ಲಿ ಸಹಬಾಳ್ವೆಯನ್ನು ಸಾಧಿಸಲು ತತ್ವಪದಕಾರರು ಪ್ರಯತ್ನಿಸಿದ್ದಾರೆ.

ಹೈದರಾಬಾದ್ ಕರ್ನಾಟಕದ ತತ್ವಪದಕಾರರಲ್ಲಿ, ಜೇವರ್ಗಿ ತಾಲೂಕಿನ ರಾಮಪುರದ ಬಕ್ಕಪ್ಪ ಮೊಟ್ಟ ಮೊದಲನೆಯ ತತ್ವಪದಕಾರನಾಗಿದ್ದಾನೆ. ಈತ ಕ್ರಿ.ಶ. ೧೬೧೦ರಿಂದ ೧೭೦೦ರ ಅವಧಿಯಲ್ಲಿದ್ದಿರ ಬಹುದೆಂದು ತಿಳಿದು ಬರುತ್ತದೆ. ಈತನ ಸುಮಾರು ಇಪ್ಪತ್ತೆರೆಡು ತತ್ವಪದಗಳು ಹಾಗೂ ಒಂದು ನೂರಾ ಏಳು ತ್ರಿಪದಿಗಳು ದೊರೆತಿವೆ. ಬಕ್ಕಪ್ಪ ವಿರಕ್ತನಾಗಿದ್ದು ಯೋಗಿಯಾಗಿದ್ದನೆಂದು ತಿಳಿದುಬರುತ್ತದೆ. ಇನ್ನು 'ಕಡಕೋಳ ಮಡಿವಾಳಪ್ಪ' ಹೈದರಾಬಾದ್ ಕರ್ನಾಟಕ ಪ್ರದೇಶದ ಬಹುಮುಖ್ಯ ತತ್ವಪದಕಾರ. ಈತನ ಕಾಲ ಸು. ಕ್ರಿ.ಶ. ೧೭೬೫ರಿಂದ ೧೮೪೦ರ ಅವಧಿ ಎಂದು ತಿಳಿದುಬರುತ್ತದೆ. ಮಡಿವಾಳಪ್ಪ ತನ್ನ ಮೇಲಾಗುತ್ತಿದ್ದ ಜಾತಿ ನಿಂದನೆಯಿಂದ ಬೇಸತ್ತು, ದಾಸೋಹಮೂರ್ತಿ ಶರಣಬಸಪ್ಪನ ಆಶ್ರಯ ಪಡೆದನು. ನಂತರ ಅವರ ಮಾರ್ಗದರ್ಶನದಲ್ಲಿ ಕಲಕೇರಿ ಮರುಳಾರಾಧ್ಯರಿಂದ ಲಿಂಗದೀಕ್ಷೆ ಪಡೆದು ಮುಂದೆ ಅನುಭಾವಿಯಾಗಿ ಬೆಳೆದು ನಿಂತನು. ಶರಣಬಸಪ್ಪ ಅನ್ನದಾಸೋಹಕ್ಕೆ ಹೆಸರಾದರೆ, ಮಡಿವಾಳಪ್ಪ ಜ್ಞಾನದಾಸೋಹಕ್ಕೆ ಕಾರಣನಾಗಿದ್ದಾನೆ. ಹೀಗೆ ಮಡಿವಾಳಪ್ಪ ಅನೇಕ ಅಪವಾದಗಳನ್ನೆದುರಿಸಿ ಹೋರಾಟದ ಜೀವನ ನಡೆಸುತ್ತಾನೆ. ಆಸ್ತಿ, ಅಂತಸ್ತು, ಜಾತಿ ಮತ ಮೇಲು ಕೀಳು ಈ ಎಲ್ಲ ಭೇದ ಭಾವಗಳನ್ನಳಿಸಲು ಪ್ರಯತ್ನಿಸಿದ ಮಡಿವಾಳಪ್ಪ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾನೆ. 'ಮಹಾಂತ' ಅಂಕಿತನಾಮ ದಲ್ಲಿ ಸಾವಿರಾರು ತತ್ವಪದಗಳನ್ನು ರಚಿಸಿದ್ದಾನೆ. ಉದಾಹರಣೆಗೆ,

ಬಾಯಿಲೊಂದು ಆಡ್ತೀರಿ
ಮನಸಿನೊಳಗೊಂದು ಮಾಡ್ತೀರಿ
ಬರೆದಿಟ್ಟಿದು ಓದಿಕೊಂಡು
ಭ್ರಾಂತಿಗೆಟ್ಟು ಹೋಗತೀರಿ
ಶೀಲವಂತರಂತೀರಿ ಸುಳ್ಳೆಶೀಲ ಮಾಡ್ತೀರಿ
ಸಂತ್ಯಾನಲಿಂಗ ಕಟ್ಟಿಕೊಂಡು
ಸತ್ತ್ಯಾನಾಸ್ಯಾಗಿ ಹೋಗತೀರಿ.[೩೯]

ಕರ್ನಾಟಕದ ಮೊಟ್ಟಮೊದಲ ಮುಸ್ಲಿಂ ತತ್ವಪದಕಾರರೆಂದರೆ 'ಚೆನ್ನೂರ ಜಲಾಲಸಾಹೇಬ'. ಇವರು ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಅಣಕಸೂಗೂರು ಗ್ರಾಮದಲ್ಲಿ ಕ್ರಿ.ಶ. ೧೭೭೦ರಲ್ಲಿ ಜನಿಸಿದರು. ಆ ಕಾಲದ ಅನುಭಾವ ಪಂಥದ ಪ್ರಭಾವಿ ವ್ಯಕ್ತಿಯಾಗಿದ್ದ ಮಡಿವಾಳಪ್ಪನ ಪ್ರಭಾವಕ್ಕೆ ಒಳಗಾಗಿ ಅವರ ಶಿಷ್ಯವರ್ಗದಲ್ಲಿ ಒಬ್ಬರಾದರು. ನಂತರ ಕೂಡಲೂರು ಬಸವಲಿಂಗ ಶರಣರ ಶಿಷ್ಯನಾಗಿ ಹನ್ನೆರೆಡು ವರ್ಷ ಕಾಲ ಗುರು ಸೇವೆ ಮಾಡಿ ವೀರಶೈವ ಸಿದ್ಧಾಂತದಲ್ಲಿ ಪರಿಣಿತಿ ಪಡೆದು ಅನುಭಾವಿಯಾಗಿ ಬೆಳೆದು ತತ್ವಪದಗಳನ್ನು ರಚಿಸಿದ. ಜಲಾಲಸಾಹೇಬ ವಿವಾಹಿತನಾಗಿದ್ದು ಸಂಸಾರದಲ್ಲಿದ್ದುಕೊಂಡೇ ಅನುಭಾವದೆತ್ತರವನ್ನು ಮುಟ್ಟಿದ. ಇವರು ಈಶ್ವರ್ ಅಲ್ಲಾ ಒಂದೇ ಎಂದು ಸಾರುತ್ತಾ ಹಿಂದೂ ಮುಸ್ಲಿಂ ಭಾವೈಕ್ಯತೆಯನ್ನು ಬೆಳೆಸಿದ್ದಾರೆ. ಜಲಾಲಸಾಹೇಬರು 'ಗುರುಮಡಿವಾಳ' ಎಂಬ ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದರು. ಕನ್ನಡ ಉರ್ದು ಮಿಶ್ರಿತ ಆಡುನುಡಿ ಇವರ ತತ್ವಪದಗಳ ಆಕರ್ಷಣೆಯಾಗಿದೆ.

'ಸಬ್ ಕಹತೇ ಈಶ್ವರ ಅಲ್ಲಾ
ಇದರ ಭೇದ ಯಾರಿಗೂ ತಿಳಿಯಲಿಲ್ಲ
ನಿರಂಕಾರಸೇ ಆಕಾರ ಹೂವೇ
ವೇದಶಾಸ್ತ್ರಕ್ಕೆ ನಿಲುಕಿಲ್ಲ
ಹಿಂದೂ ಮುಸ್ಲಿಂ ಶಾಸ್ತ್ರಪಡತೇ ಹೈ
ಗುರುಮನಿ ಕೀಲಿ ಸಿಗಲಿಲ್ಲ...........'[೪೦]

ಹೈದರಾಬಾದ್ ಕರ್ನಾಟಕ ಪ್ರದೇಶದ ಸೌಹಾರ್ದ ಬದುಕಿಗೆ, ಸಮನ್ವಯ ಆಚರಣೆಗಳಿಗೆ ತತ್ವಪದಗಳು ಸಾಕಷ್ಟು ಪ್ರಭಾವವನ್ನು ಬೀರಿವೆ. ಇದರ ಪ್ರಭಾವವು ಇಂದಿಗೂ ಇಲ್ಲಿ ಉಳಿದುಕೊಂಡು ಬಂದಿರುವುದನ್ನು ಕಾಣುತ್ತಿದ್ದೇವೆ. ಗುಲಬರ್ಗಾ ಜಿಲ್ಲೆಯ ಚೆನ್ನೂರ ಜಲಾಲಸಾಹೇಬ, ಮೋಟನಹಳ್ಳಿ ಹಸನ್‌ಸಾಹೇಬ, ನರೋಣಾದ ಹೈದರಲಿ, ದೇಗಾವದ ಹಜರತ್ ಸಾಹೇಬ, ಮಹಾಗಾಂವದ ಅಮೀರ ಸಾಹೇಬ ಮುಂತಾದವರು ಮುಸ್ಲಿಂ ಜನಾಗಂದಲ್ಲಿ ಹುಟ್ಟಿ ಮೋಡಿ ಉರ್ದುವಿನಲ್ಲಿ ಅಭ್ಯಾಸ ಮಾಡಿ ಕನ್ನಡದಲ್ಲಿ ತತ್ವಪದ ರಚಿಸಿದ್ದು ಬಹುಮುಖ್ಯ ಸಂಗತಿಯಾಗುತ್ತದೆ. ಇವರೆಲ್ಲಾ ತಮ್ಮ ಪದಗಳಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಜಾತಿ ತೃಣಸಮಾನವೆಂದು ಸಾರಿ ಹೇಳಿದ್ದಾರೆ.

ಕೂಡಲೂರ ಬಸವಲಿಂಗ ಶರಣರು 'ಏಕಲ್ ಖಾಜಾ ಸಾಕ್ಷಾತ್ ಶಿವನು ಹಾನ ಆತ್ಮದೊಳಗೆ ಎಂದು ಹಾಡಿದರು. ಹೀಗಾಗಿ ಇಂದಿಗೂ ಕೂಡ ಈ ಭಾಗದಲ್ಲಿ ಹಿಂದೂ ಮುಸ್ಲಿಮರು ಸಾಮರಸ್ಯದ ಬದುಕು ಸಾಗಿಸುತ್ತಿದ್ದಾರೆ. ಹಿಂದೂ ದೇವಾಲಯಗಳಿಗೆ ಅನೇಕ ಮುಸ್ಲಿಮರು ದೇಣಿಗೆ ಕೊಟ್ಟಿದ್ದಾರೆ. ಅದೇ ರೀತಿ ಮಸೀದಿಗಳಿಗೆ ಅನೇಕ ಹಿಂದೂಗಳು ದಾನ ನೀಡಿದ್ದಾರೆ. ಇನ್ನೂ ವಿಶೇಷವೆಂದರೆ ಹಿಂದೂಗಳಿಗೆ ಮುಸ್ಲಿಮರ ಹೆಸರಿಟ್ಟಿರುವ ಹಾಗೂ ಮುಸ್ಲಿಮರಿಗೆ ಹಿಂದೂಗಳ ಹೆಸರಿಟ್ಟಿರುವ ಉದಾಹರಣೆಗಳಿವೆ. ಮುಸ್ಲಿಮರ ಹಸನ್‌ಸಾಬ್ ಹಸನಪ್ಪನಾಗಿ, ಹುಸನ್‌ಸಾಬ-ಹುಸೇನಪ್ಪನಾಗಿ, ಕರೀಮ್‌ಸಾಬ್ ಕರೀಮಪ್ಪನಾಗಿ, ರಾಜಾಸಾಬ ರಾಜಪ್ಪನಾಗಿ ಹೆಸರಿಟ್ಟುಕೊಂಡರೆ ಹಿಂದೂಗಳ ಹೆಸರಾದ ಅಣ್ಣೆಪ್ಪ ಅಣ್ಣಾ ಸಾಬನಾಗಿ, ಹುಚ್ಚಪ್ಪ ಹುಚ್ಚೇಸಾಬನಾಗಿ ಬುಡ್ಡಪ್ಪ ಬುಡ್ಡೇಸಾಬನಾಗಿ ಕರೆಸಿಕೊಳ್ಳುತ್ತಾರೆ. ಹೀಗೆ ತತ್ವಪದಕಾರರ ಸಾಮರಸ್ಯದ ಸಮನ್ವಯದ ಬದುಕು ಇಲ್ಲಿ ತೀವ್ರ ಪರಿಣಾಮವನ್ನುಂಟು ಮಾಡಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮುಸ್ಲಿಂ ತತ್ವಪದಕಾರರ ಕೊಡುಗೆ ಪ್ರಮುಖವಾದುದಾಗಿದೆ. ಈ ಭಾಗದ ಎಲ್ಲಾ ಮುಸ್ಲಿಂ ತತ್ವಪದಕಾರರಿಗೂ ಹಿಂದೂಗಳೇ ಗುರುಗಳಾಗಿದ್ದುದು ಗಮನಿಸಬೇಕಾದ ಸಂಗತಿಯಾಗಿದೆ. ಇವರಿಗೆ ವೀರಶೈವ ಮಠ ಮಾನ್ಯಗಳ ಆಶ್ರಯ ದೊರೆತ್ತಿದ್ದರಿಂದ ಗುರೂಪದೇಶ ಪಡೆದು ವೀರಶೈವ ತತ್ವಕ್ಕೆ ಬದ್ಧರಾಗಿ ತಮ್ಮ ತತ್ವಪದಗಳನ್ನು ರಚನೆ ಮಾಡಿದರು. ಜಾತಿಯಿಂದ ಮುಸ್ಲಿಮರಾಗಿದ್ದರೂ ಅವರ ನಡವಳಿಕೆಯಲ್ಲಿ ಹಿಂದೂ ಧರ್ಮದ ಪ್ರಭಾವವನ್ನು ಕಾಣುತ್ತೇವೆ. ಮುಸ್ಲಿಂ ತತ್ವಪದಕಾರನಾದ ಮೋಟ್ನಳ್ಳಿ ಹಸನ್‌ಸಾಬ ಹಿಂದೂ ಮುಸಲ್ಮಾನರನ್ನು ಸಮಾನವಾಗಿ ಕಾಣುತ್ತಾರೆ. ಹಿಂದೂ ಮುಸ್ಲಿಮರು ಕೋಮು

ಸಾಮರಸ್ಯದ ಬದುಕನ್ನು ಬದುಕಲು ಕರೆಕೊಟ್ಟರು. ಹಿಂದೂ ಮುಸ್ಲಿಂ ಯಾರೇ ಆಗಿರಲಿ ಅವರೆಲ್ಲರಿಗೂ ಪರಮಾತ್ಮ ಒಬ್ಬನೇ ಎಂದು ಮುಸ್ಲಿಂ ತತ್ವಪದಕಾರರ ಅಭಿಪ್ರಾಯವಾಗಿತ್ತು.

ಭಾವೈಕ್ಯತೆ, ಮತೀಯ ಸೌಹಾರ್ದತೆ, ಜಾತ್ಯಾತೀತ ಪರಿಕಲ್ಪನೆಯ ತತ್ವಪದಕಾರರಲ್ಲಿ ಮುಸ್ಲಿಮರ ಜೊತೆಗೆ ದಲಿತರು ಹಾಗೂ ಮಹಿಳೆಯರು ಸೇರಿದ್ದಾರೆ. ದಲಿತ ತತ್ವಪದಕಾರರಲ್ಲಿ 'ಹನುಮೇಶಪ್ಪ' ಪ್ರಮುಖರಾಗಿದ್ದಾರೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ರಾಜೂರ ಗ್ರಾಮದ ನಿವಾಸಿಯಾಗಿದ್ದ ಇವರು ದಲಿತ ತತ್ವಪದಕಾರರಿಗೆ ಗುರುವಾಗಿದ್ದರು. ರಾಯಚೂರು, ಯಲಬುರ್ಗಾದ ಸುತ್ತಮುತ್ತಲಿನ ಅನೇಕ ತತ್ವಪದಕಾರರು ಇವರ ಶಿಷ್ಯರಾಗಿದ್ದರು. ಅವರಲ್ಲಿ ಯರಮಾರೆಪ್ಪ, ತಿಪ್ಪಣ್ಣತಾತ ಪ್ರಮುಖರಾಗಿದ್ದಾರೆ. ಗುಲಬರ್ಗಾದ ಇನ್ನೊಬ್ಬ ದಲಿತ ತತ್ವಪದಕಾರರೆಂದರೆ 'ಜಂಬಗಿ ಶರಣಬಸಪ್ಪ'. ಜಂಬಗಿ ಗ್ರಾಮದ ದಲಿತ ಕುಟುಂಬದಲ್ಲಿ ಜನಿಸಿದ ಇವರು ಜಾತಿ ವ್ಯವಸ್ಥೆಯಿಂದ ಬೇಸರಗೊಂಡು ವೈರಾಗ್ಯ ತಾಳಿದನು. ಕೊನೆಗೆ ಆಧ್ಯಾತ್ಮದಲ್ಲೂ ಸಾಧನೆ ಮಾಡಿ 'ಬೋಧಾಮೃತ' ಎಂಬ ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ನಡೆಸುತ್ತಿದ್ದನೆಂದು ತಿಳಿದುಬರುತ್ತದೆ. ಈತ ಅನೇಕ ಪವಾಡಗಳನ್ನು ಮಾಡುತ್ತಾ ಜನಾನುರಾಗಿಯಾಗಿದ್ದ ಇಂದಿಗೂ ಜಂಬಗಿ ಗ್ರಾಮದಲ್ಲಿ ಶರಣಪ್ಪನ ಜಾತ್ರಾ ಮಹೋತ್ಸವ ನಡೆಯುತ್ತದೆ. 'ಜಂಬಗಿ ಶರಣ' ಈತನ ಅಂಕಿತನಾಮ. ಈತನು ತನ್ನ ತತ್ವಪದಗಳಲ್ಲಿ ಬಸವಣ್ಣನ ಕಲ್ಪನೆಯ ಜಾತ್ಯಾತೀತ ಸಮಾಜದ, ಸಮಾನತೆಯ ತತ್ವಗಳನ್ನು ಹೇಳುತ್ತಾನೆ. ಇದೇ ರೀತಿ ಹೊಸೂರ ತಿಪ್ಪಣ್ಣ ಮತ್ತು ಕಲ್ಮಲಾ ತಾಯಣ್ಣ ಮೊದಲಾದ ದಲಿತ ತತ್ವಪದಕಾರರ ಕೊಡುಗೆ ಅಮೂಲ್ಯವಾದುದಾಗಿದೆ.

ಸಮಕಾಲೀನ ಸಂದರ್ಭದ ದಲಿತ ತತ್ವಪದಕಾರರನ್ನು ನೋಡುವುದಾದರೆ, ಹೈದರಾಬಾದ್ ಕರ್ನಾಟಕದ ಹಿರಿಯ ಮತ್ತು ಪ್ರಮುಖ ತತ್ವಪದಕಾರರೆಂದರೆ ಕಾಶೀನಾಥ ಪಂಚಶೀಲ ಗವಾಯಿಗಳು. ಅಂಧರಾಗಿದ್ದ ಗವಾಯಿಗಳು ಕವಿ, ಗಾಯಕ, ಸಂಗೀತಗಾರ ಹಾಗೂ ಸಮಾಜ ಸುಧಾರಣ ಹೋರಾಟಗಾರರಾಗಿದ್ದರು. ನೂರಾರು ತತ್ವಪದಗಳನ್ನು ಹಾಡಿ ಜನರನ್ನು ಜಾಗೃತಗೊಳಿಸಿದರು. ಅವರ ತತ್ವಪದಗಳಲ್ಲಿ ಪ್ರಗತಿಪರ ನಿಲುವು ಹಾಗೂ ಪ್ರಖರ ವೈಚಾರಿಕತೆಯು ಗಮನ ಸೆಳೆಯುತ್ತವೆ. ಐವತ್ತು ಮತ್ತು ಅರವತ್ತರ ದಶಕದಲ್ಲಿಯೇ ಬುದ್ಧ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ತಮ್ಮ ಹಾಡುಗಾರಿಕೆ ಮೂಲಕ ದಲಿತರ ಮನೆ ಮನೆಗೆ ತಲುಪಿಸಿದ ಕೀರ್ತಿ ಗವಾಯಿಗಳಿಗೆ ಸಲ್ಲುತ್ತದೆ. ಸುಮಾರು ಐದು ದಶಕಗಳ ಕಾಲ ದಲಿತರ ಉದ್ಧಾರಕ್ಕಾಗಿ ಸುಧಾರಣೆಗಾಗಿ ಗವಾಯಿಗಳು ಶ್ರಮಿಸಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ವಾದಿಗಳಾಗಿದ್ದ ಕಾಶೀನಾಥ ಗವಾಯಿಗಳು ಅಸಮಾನತೆಯ, ಜಾತಿವಾದದ, ಅಸ್ಪೃಶ್ಯತೆಯ ವಿರೋಧಿಗಳಾಗಿದ್ದರು ಹಾಗೂ ಸಾಮಾನತೆಯ ಪ್ರಬಲ ಪ್ರತಿಪಾದಕರಾಗಿದ್ದರು. ೭೦ರ ದಶಕದಲ್ಲಿ ಜಾತಿ ಆಚರಣೆ ಕಠಿಣವಾಗಿದ್ದ ಕಾಲದಲ್ಲಿ ಕಾಶೀನಾಥ ಗವಾಯಿಗಳು ದೇವಾಲಯಗಳಿಗೆ ಪ್ರವೇಶ ನಿರ್ಬಂಧ ಮತ್ತು ಹೋಟೆಲ್‌ಗಳಲ್ಲಿಯ ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸಿದರು. ವಿಶೇಷವಾಗಿ ಹಳ್ಳಿಯ ಹೋಟೆಲ್‌ಗಳಲ್ಲಿ ದಲಿತರಿಗೆ ಮೇಲಿನಿಂದ ನೀರು ಕೊಡುವುದು. ಅವರಿಗಾಗಿ

ಪ್ರತ್ಯೇಕ ಲೋಟ ಇಟ್ಟು ಅಸ್ಪೃಶ್ಯತೆಯನ್ನು ಆಚರಿಸುವುದರ ವಿರುದ್ಧ ಅವರ ಹಾಡುಗಳಲ್ಲಿ ಜಾತಿ ಖಂಡನೆ ಇರುತ್ತಿತ್ತು. ಇಂತಹ ಒಂದು ಪದವೆಂದರೆ,

'ಹಳ್ಳಿ ಜನರ ಮಳ್ಳ ವಿಚಾರ
ಇನ್ನು ಬಿಟ್ಟಿಲ್ಲಪ್ಪ ಕಳ್ಳಾಟ ಚೋರ
ಹಳ್ಳಿ ಹೋಟೆಲ ಕಪ್ಪು-ಬಸಿ ಬ್ಯಾರ
ಕುಲ ಕೇಳ್ತಾರೋ ನೀವು ಯಾತರವರ
ತಾಯಿ ಹಾರೂರಕಿ ತಂದೆ ಜೈಭೀಮ ದೇವರ
ಯಾವುದು ಹೇಳಬೇಕರಿ ಭೂಮಿ ಬೀಜ ಬ್ಯಾರ'[೪೧]

ಎಂದು ಹಾಡಿ ಅಸ್ಪೃಶ್ಯತೆಯನ್ನು ಆಚರಿಸುವ ಅವಿವೇಕಿತನವನ್ನು ಬಿಟ್ಟು ಕೊಡಲು ಹೇಳಿದ್ದಾರೆ.

ಗವಾಯಿಗಳ ಹಾಡಿನ ಪ್ರೇರಣೆಯಿಂದಾಗಿ ಅನೇಕ ಹಳ್ಳಿಗಳಲ್ಲಿ ದಲಿತರು ಜಾಗೃತಗೊಂಡು ಅಸಮಾನತೆಯನ್ನು ವಿರೋಧಿಸತೊಡಗಿದರು. ಇದರ ಪರಿಣಾಮವಾಗಿ ಕೆಲವು ಊರುಗಳಲ್ಲಿ ದಲಿತರಿಗಾಗಿ ಹೋಟೆಲ್‌ಗಳಲ್ಲಿ ಪ್ರತ್ಯೇಕವಾಗಿ ಲೋಟಗಳನ್ನು ಇಡುವ ಪದ್ಧತಿ ನಿಂತಿತು. ಅನೇಕ ಸ್ಥಳಗಳಲ್ಲಿ ಇತರರೊಂದಿಗೆ ದಲಿತರೂ ಸಹ ಸಾರ್ವಜನಿಕ ಕೆರೆ, ಬಾವಿ, ಕೊಳವೆ ಬಾವಿಯ ನೀರು ಬಳಸಲು ಸಾಧ್ಯವಾಯಿತು. ಹಾಗೆಯೇ ಡಾ. ಬಿ.ಆರ್. ಅಂಬೇಡ್ಕರ್ ಅವರು ಕೈಗೊಂಡ ಹೋರಾಟಗಳನ್ನು ಕಾಶೀನಾಥ ಗವಾಯಿಗಳು ತಮ್ಮ ಹಾಡುಗಳಲ್ಲಿ ಕೆಳಗಿನಂತೆ ದಾಖಲಿಸಿದ್ದಾರೆ.

'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶುದ್ರನೆಂಬ ಕ್ಷುದ್ರವ ಕಳೆದಿ
ಸರ್ವರು ಸರಿಸಮನಂದಿ, ಹಿಂದುಕೋಡ್ ಬಿಲ್ ತಂದಿ....
ಶೂದ್ರ ಇದ್ದ ಮಹಿಳೆಯರಿಗೆ ಪ್ರತಿಯೊಂದರಲ್ಲಿ ಸ್ಥಾನವ ಮಾಡಿದಿ
ಮಹಾಡ ಸತ್ಯಾಗ್ರಹ ಮುಗಿಸಿ, ಚೌಡರ ಕೆರೆ ನೀರ ಕುಡಿಸಿದಿ
ನಾಸಿಕ ಸತ್ಯಾಗ್ರಹ ಮಾಡಿ , ನಾ ಎಂಬುವರ ನಾಶವ ಮಾಡಿದಿ
ಸತ್ಯಾಗ್ರಹದೊಳು ಜಯಸಿ, ಸತ್ತ ಜನಕ ಸಂಜೀವ ತಂದಿ
ಕಾಳ ರಾಮಮಂದಿರ ತೆರದಿ, ಗುಡಿ ಗೋಪುರ ಭೇದ್ಯಾಕಂದಿ'[೪೨]

ಹೀಗೆ ಡಾ. ಬಿ.ಆರ್. ಅಂಬೇಡ್ಕರ್ ಕೈಗೊಂಡ ವಿವಿಧ ಹೋರಾಟಗಳ ಪಟ್ಟಿ ನೀಡಿದ್ದಲ್ಲದೆ ಸ್ತ್ರೀಯರಿಗೆ ಮಾಡಿಕೊಟ್ಟ ಸವಲತ್ತುಗಳನ್ನು ತಮ್ಮ ಹಾಡಿನಲ್ಲಿ ತಿಳಿಸಿದ್ದಾರೆ.

ಇತರ ತತ್ವಪದಕಾರರಂತೆ ಆತ್ಮ ಪರಮಾತ್ಮಕಷ್ಟೇ ಜೋತು ಬೀಳದೆ ಸಮಕಾಲೀನ ಬದುಕಿನ ಸಮಸ್ಯೆ ಕುರಿತು ರಚಿಸಿ ಹಾಡಿದ ತತ್ವಪದಗಳಿಗೆ ವೈಚಾರಿಕ ಸ್ಪರ್ಷವನ್ನು ನೀಡಿದ್ದು ವಿಶೇಷ ಗಮನ ಸೆಳೆಯುತ್ತದೆ. ಇವರಷ್ಟು ಆಳವಾಗಿ ಬದುಕನ್ನು ಅನ್ವೇಷಿಸಿದ ಸಾಧಕರು ಬಹಳ ಕಡಿಮೆ. ಸಮಾಜದ

ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸಿದ ಚಿಂತಕರಿವರು. ಸಾಧಕರ ಪಟ್ಟಿಯಲ್ಲಿ ಇವರ ಹೆಸರನ್ನು ಚರಿತ್ರೆಯ ಪುಟಗಳಲ್ಲಿ ಪುನಃ ದಾಖಲಿಸುವ ಅಗತ್ಯವಿದ್ದು ಇವರ ಚಿಂತನೆಗಳು ಹಾಗೂ ತತ್ವಗಳು ದಲಿತರ ಉದ್ಧಾರಕ್ಕೆ ದಾರಿ ದೀಪವಾಗಲಿವೆ.

ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುವ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಲಾವಣಿ ಪದಗಳು ಮತ್ತೊಂದು ಪ್ರಮುಕ ಸಾಹಿತ್ಯವಾಗಿದೆ. ಅನಾದಿಕಾಲದಿಂದಲೂ ಪ್ರಸ್ತುತದವರೆಗೆ ಪೌರಾಣಿಕ ವ್ಯಕ್ತಿಗಳ ಪ್ರಮುಖ ಹೋರಾಟಗಾರರ ಚರಿತ್ರೆಯನ್ನು ಲಾವಣಿಕಾರರು ತಮ್ಮ ಸೂಕ್ಷ್ಮ ಸಂವೇದನೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಲಾವಣಿಕಾರರು ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಬೇಕಾಗುವ ಅಂಶವನ್ನು ತಮ್ಮ ಲಾವಣಿಗಳಲ್ಲಿ ಅಳವಡಿಸಿಕೊಂಡಿರುತ್ತಾರೆ. ಉದಾಹರಣೆಗೆ ದಲಿತ ಓಣಿಗಳಲ್ಲಿ ಹಾಡಲು ನಿಂತರೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆಗೆ ಸಂಬಂಧಿಸಿದ ಹಾಡನ್ನೇ ಹಾಡುತ್ತಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಚರಿತ್ರೆ, ಅವರಿಂದ ದಲಿತರಿಗೆ ದೊರೆತ ನ್ಯಾಯದ ವಿಷಯವು ಓದು, ಬರಹ ಬಲ್ಲವರಿಗೆ ಮಾತ್ರ ಗೊತ್ತಿರುತ್ತದೆ. ಆದರೆ ಲಾವಣಿಕಾರರು ಅನಕ್ಷರಸ್ಥ ಜನರಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಜ್ಞಾನವನ್ನು ಸಾಮಾನ್ಯ ಜನರ ಮನೆ ಬಾಗಿಲಿಗೆ ಮುಟ್ಟಿಸುವ ಶ್ರಮ ಮೆಚ್ಚುವಂತದ್ದಾಗಿದೆ. ಆ ರೀತಿಯ ಒಂದು ಗೀಗೀ ಪದ ಕೆಳಗಿನಂತಿದೆ.

'ದಲಿತ ಖಣಿ ದಲಿತ ಧ್ವನಿ ದಲಿತ ಶ್ರೇಷ್ಠಾದ ತೆನಿ
ಹುಸಿ ಆಗಲಿಲ್ಲ ಅಂಬೇಡ್ಕರರ ವಾಣಿಯೂ
ಅಸ್ಪೃಶ್ಯತೆಯೊಳು ತೇಲದುಕಂಡು ಭಾರತ ಧರಣಿಯೂ
ಶೋಷಣೆ ನಾಶ ಮಾಡದಕ್ಕಾಗಿ ಹಿಡಿದ ಲೆಕ್ಕಣಿಯೂ
ಬುದ್ಧ ಬಸವನ ನೀತಿಯಿಂದ ಸಂವಿಧಾನ ಗ್ರಂಥ ಬರೆದು ತಂದ
ಅಖಂಡ ಭಾರತದೊಳು ಅಂಬೇಡ್ಕರರ ಸ್ಮರಣೆಯೂ
ದಲಿತರಿಗಿ ಸಿಗುವ ಹಕ್ಕು ತೆರೆದು ಇಟ್ಟ ಬಂಗಾರ ಭರಣಿಯೂ ||ಗೀ ಗೀ||'[೪೩]

ಹೈದರಾಬಾದ್ ಕರ್ನಾಟಕದ ಇನ್ನೊಂದು ಪ್ರಮುಖ ಪ್ರಕಾರವೆಂದರೆ ಜನಪದ ಸಾಹಿತ್ಯ. ಜನಪದರು ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ ಹಾಗೂ ಜನಪದ ಗೀತ ಸಾಹಿತ್ಯದಲ್ಲಿ ವೀರತನದ ಪರಿಕಲ್ಪನೆ ಒಳಗೊಂಡಿರುತ್ತವೆ. ಹೈದರಾಬಾದ್ ಕರ್ನಾಟಕದ ಜನಪದ ಹಾಡುಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ರಮಾನಂದ ತೀರ್ಥರ ಬಗ್ಗೆ ರಜಾಕಾರರ ದಬ್ಬಾಳಿಕೆ, ಹೈದರಾಬಾದ ವಿಮೋಚನೆ ಮುಂತಾದವು ಹೆಚ್ಚಾಗಿ ಕಂಡುಬರುತ್ತವೆ.

ಹೈದರಾಬಾದ್ ಸ್ವಾತಂತ್ರ್ಯದ ಸೂರ್ಯನೆಂದೇ ಕರೆಯಿಸಿಕೊಂಡ ಶ್ರೀ ರಾಮಾನಂದ ತೀರ್ಥರು, ಹೈದರಾಬಾದ್ ವಿಮೋಚನೆಗೆ ಒಂದು ಮಹಾನ್ ಶಕ್ತಿಯಾಗಿ ನಿಂತು ಮಾಡಿದ ಹೋರಾಟವನ್ನು ಲಾವಣಿಕಾರ ಕೆಳಗೆ ಕಾಣಿಸಿದ ಪದದಲ್ಲಿ ಹಾಡಿದ್ದಾರೆ.

'ಹತ್ತಂಬೊತ್ತನೂರಾ ನಾಲ್ವತ್ತೆಂಟನೆಯ ಜನವರಿ ತಿಂಗಳ ಕಡೆ ಮೊದಲು
ಕೊಲೆಗಾರಂಭವಾದಾಯಿತು ಹೈದರಾಬಾದಿನ ಹಿಂದೂ ಜನತೆಯೊಳು
ಮೂರುನೂರು ಐವತ್ಮೂರು ಹಳ್ಳಿಗಳ ಸುಟ್ಟ ಸುಲಿದ ಚಿನ್ನಾಟಗಳು
ಸಿರಿವಂತರ ಮನೆ ಲೂಟಿಸಿ ಜಗ್ಗಿದ ಕೋಟ್ಯಾವಧಿ ಧನ-ನಾಣ್ಯಗಳು
ಹರಿದು ಹೋಗತಿರೆ ಸ್ವಾಮಿ ರಮಾನಂದರು ಕೇಳ್ದರು ನಾಡಿನಗೋಳು' ‖ [೪೪]

ಹೈದರಾಬಾದ್ ಸಂಸ್ಥಾನದ ಮೇಲೆ ನಡೆದ ಸೈನಿಕ ಕಾರ್ಯಾಚರಣೆಯಲ್ಲಿ ನಿಜಾಮನು ಸೋಲು ಅನುಭವಿಸಿದ್ದು ಹಾಗೂ ಅವನು ಕಟ್ಟಿಕೊಂಡಿದ್ದ ಕನಸುಗಳೆಲ್ಲ ನುಚ್ಚು ನೂರಾದ ಕುರಿತು,

'ಕಡೆಗಾಣದ ನೈಜಾಮರು ಕೊನೆಯಲ್ಲಿ ಶರಣಾಗತಿಯನ್ನು ಸಾರಿದರು |
ಸಡಿಲಿದ ಹೈದರಾಬಾದಿನ ಶಕ್ತಿಯ ಪತನದ ವಾರ್ತೆಯ ಕೇಳಿದರು |
ತಡಮಾಡದೆ ಭಾರತ ಸೇರ್ಪಡೆಯಾಗಲು ಎಂಡ್ರಸನ್‌ರಟ್ಟಿದರು |
....
ನುಡಿದರು ಜಯ ಜಯ ಹಿಂದ ಎಂದು ಜೈ ದನಿಯಲಿ ಹಿಂದಿ ಸೈನಿಕರು'‖[೪೫]

ಹೈದರಾಬಾದ್ ಕರ್ನಾಟಕದಲ್ಲಿ ಜನಜಾಗೃತಿ ಹಾಗೂ ಸಮಾಜ ಸುಧಾರಣೆ ಕಾರ್ಯದಲ್ಲಿ ಸಾಹಿತ್ಯ ಪ್ರಕಾರಗಳು, ಗೀ ಗೀ ಪದಗಳು, ಸ್ಥಳೀಯ ಚರಿತ್ರೆಯನ್ನು ಕಟ್ಟುವಲ್ಲಿ ಬಹಳ ಪ್ರಮುಖ ಮೂಲಾಧಾರ ಗಳಾಗಿವೆ. ಹಳ್ಳಿಗಳಲ್ಲಿ ದಿನನಿತ್ಯ ಕಂಡುಬರುವ ಪದಗಳಲ್ಲಿ ಬರಗಾಲ, ಶೋಷಣೆ, ದಬ್ಬಾಳಿಕೆ, ಕೆಳವರ್ಗ ದವರ ಬದುಕಿನ ದುಮ್ಮಾನಗಳು ಮುಂತಾದ ಅನೇಕ ವಿಚಾರಗಳನ್ನು ತಿಳಿಯಪಡಿಸುತ್ತವೆ. ಹಾಗೆಯೇ ಒಂದು ಪ್ರದೇಶದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಯನ್ನು ಪ್ರತಿಬಿಂಬಿಸುವ ಪದಗಳು ಇಂದಿಗೂ ಜನಪದದಲ್ಲಿ ಕೇಳಿ ಬರುತ್ತಿವೆ.

ತತ್ವಪದಕಾರರ ಪರಂಪರೆಯಲ್ಲಿ ಕೆಲವು ಮಹಿಳೆಯರು ತತ್ವಪದಗಳನ್ನು ರಚಿಸಿರುವುದು ವಿಶೇಷವಾಗಿದೆ. ಅದರಲ್ಲಿ ರಾಯಚೂರಿನ ಹನುಮಂತವ್ವ ಮಹಿಳಾ ಅನುಭಾವಿ ಕವಿಯಾಗಿ ಮೂರು ನೂರು ತತ್ವಪದಗಳನ್ನು ರಚಿಸಿದ್ದಾಳೆ. ಹೈದರಾಬಾದ್ ಕರ್ನಾಟಕ ಪ್ರದೇಶವಷ್ಟೇ ಅಲ್ಲ ಇಡೀ ಕರ್ನಾಟಕ ದಲ್ಲಿಯೇ ಮಹಿಳೆಯೊಬ್ಬಳು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ತತ್ವಪದಗಳನ್ನು ರಚಿಸಿರುವುದು ಕಂಡುಬಂದಿಲ್ಲ. ಇನ್ನು ವಸಾಹತುಶಾಹಿ ಹಿನ್ನೆಲೆಯಲ್ಲಿ ತತ್ವಪದಕಾರರನ್ನು ನೋಡಿದಾಗ ಇನ್ನೂ ವಿಶಿಷ್ಟವಾಗಿ ಕಾಣಿಸುತ್ತಾರೆ. ಸಾಮಾನ್ಯವಾಗಿ ನಾವು ಚಾತುರ್‌ವರ್ಣ ವ್ಯವಸ್ಥೆ ಹೇರಿದ್ದ ಸಾಂಸ್ಕೃತಿಕ ವಸಾಹತುಶಾಹಿ ಹಾಗೂ ಬ್ರಿಟಿಷರ ಹಾಗೂ ಇಲ್ಲಿಯ ಸಂಸ್ಥಾನಿಕರ ವಸಾಹತುಶಾಹಿ ಬಗ್ಗೆ ಮಾತನಾಡಿದರೆ, ತತ್ವಪದಕಾರರು ಮನುಷ್ಯನ ಮನಸ್ಸಿನಲ್ಲಿ ಕುದಿಯುತ್ತಿರುವ ಸ್ವಾರ್ಥದ ಮನಸ್ಸಿನ ವಿರುದ್ಧ ಅಂತರಂಗದ ಹೋರಾಟ ನಡೆಸಿದ್ದಾರೆ. ಮನುಷ್ಯನ ಮನಸ್ಸಿನೊಳಡಗಿರುವ ಸ್ವಾರ್ಥ, ಸಣ್ಣತನ ಮತ್ಸರದಂತಹ ವಸಾಹತುಶಾಹಿ

ಹೆಚ್ಚು ಅಪಾಯಕಾರಿ ಎಂಬುದನ್ನರಿತು ಇವರು ಅದರ ವಿರುದ್ಧ ಹೋರಾಡುತ್ತಾ ಬಂದರು. ಹೀಗಾಗಿಯೇ ಎಲ್ಲಾ ತತ್ವಪದಕಾರರು ಚಾತುರ್ವರ್ಣ ಪದ್ಧತಿಯನ್ನು ತಿರಸ್ಕರಿಸಿದವರಾಗಿದ್ದಾರೆ ಮತ್ತು ತತ್ವಪದಕಾರರು ಕೆಳವರ್ಗದಿಂದ, ದುಡಿವ ವರ್ಗದಿಂದ, ಜಾನಪದ ಸಂಸ್ಕೃತಿಯಿಂದ ಬಂದವರಾಗಿದ್ದಾರೆ.

ಹೀಗೆ, ತತ್ವಪದಕಾರರ ಹೋರಾಟವು ಸಾಮಾಜಿಕ ಮತ್ತು ರಾಜಕೀಯ ಹೋರಾಟಕ್ಕಿಂತ ಅಂತರಂಗಕ್ಕೆ ಹೆಚ್ಚು ಸೀಮಿತವಾಗಿದೆ. ಇವರಲ್ಲಿ ಅನೇಕರು ಸಮಾಜದಲ್ಲಿದ್ದೂ ಇರದಂತಿರುತ್ತಾರೆ. ಬಡತನದ ವಿರುದ್ಧ, ಅಸಮಾನತೆಯ ವಿರುದ್ಧ, ಶೋಷಣೆಯ ವಿರುದ್ಧ ಹಾಗೂ ಆಗಿನ ಜ್ವಲಂತ ಸಮಸ್ಯೆಗಳ ವಿರುದ್ಧ ಇವರು ಮಾತನಾಡುವುದಿಲ್ಲ. ಬದಲಾಗಿ ನೆಲ, ನೆಲೆಯನ್ನು ನಿರಾಕರಿಸಿ, ಹೆಂಡತಿ ಮಕ್ಕಳನ್ನು ಬಿಟ್ಟು ಕೈವಲ್ಯವೊಂದೇ ಪರಮ ಸಾಧನವೆಂದು ನಂಬಿದ ವಿಚಾರಗಳು ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಮಿತಿಗಳಾಗಿ ಕಾಣಿಸಬಹುದು ಹಾಗೂ ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ಬಯಸದೆ ಕೇವಲ ಮನುಷ್ಯನಲ್ಲಿ ಮಾತ್ರ ಬದಲಾವಣೆಯಾಗಬೇಕೆಂದು ಬಯಸುವ ಇವರ ಹೋರಾಟ ಮುಖ್ಯವಾಗಿ ಕಾಣಲಾರದು.

ಆದರೆ ಅವರು ಪ್ರಚಾರ ಮಾಡಿದ ರಾಷ್ಟ್ರೀಯ ಭಾವೈಕ್ಯತೆ, ಮತೀಯ ಸಹಿಷ್ಣುತೆ, ಸಾಂಸ್ಕೃತಿಕ ಸಮನ್ವಯತೆಯ ದೃಷ್ಟಿಯಿಂದ ತತ್ವಪದಗಳು ಇಂದಿಗೂ ಕೂಡ ಬಹುಮುಖ್ಯವಾಗಿವೆ. ದೇಸಿ ನೆಲೆಯನ್ನು ಮರೆತು ಕೇವಲ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿರುವ, ಮುಕ್ತ ಆರ್ಥಿಕ ನೀತಿಯ ನೆಪದಲ್ಲಿ ನವ ವಸಾಹತುಶಾಹಿಯನ್ನು ಸ್ವಾಗತಿಸುತ್ತಿರುವ, ಜಾತಿ ಜಾತಿಗಳ ನಡುವೆ ಕಂದಕಗಳುಂಟಾಗಿ ಜಾತಿ ಆಧಾರದ ಮೇಲೆ ಸಮಾಜ ನಿರ್ಮಾಣವಾಗುತ್ತಿರುವ ಇಂದಿನ ಸಂದರ್ಭದಲ್ಲಿ ತತ್ವಪದಕಾರರ ವಿಚಾರಗಳು, ಅಧ್ಯಯನಕ್ಕೆ ಹಾಗೂ ಸಮಾಜದಲ್ಲಿ ಅಳವಡಿಸಿಕೊಳ್ಳಲಿಕ್ಕೆ ಯೋಗ್ಯವೆಂದೆನಿಸುತ್ತವೆ.

ಭಕ್ತಿ ಚಳವಳಿಯ ಕೇಂದ್ರವಸ್ತು ದೈವದಲ್ಲಿ ಅನನ್ಯವಾದ ಭಕ್ತಿಯಾದರೂ ಆ ಭಕ್ತಿಯಲ್ಲಿ ಯಾವುದೇ ಲಿಂಗಭೇದ, ಜಾತಿಭೇದ ಇರಬಾರದು ಎಂಬುದೇ ಬಹುತೇಕರ ತತ್ವವಾಗಿತ್ತು. ಹೊಸ ಧರ್ಮವನ್ನು ಸ್ಥಾಪಿಸುವುದು ಯಾವುದೇ ಭಕ್ತಿ ಚಳವಳಿಗಳ ಧ್ಯೇಯವಾಗಿರಲಿಲ್ಲ. ಇರುವ ಧರ್ಮವನ್ನೇ ಉತ್ತಮಗೊಳಿಸಿ ಜನರ ಬಾಳನ್ನು ಉತ್ತಮಗೊಳಿಸುವುದು ಅವುಗಳ ಮುಖ್ಯ ಧ್ಯೇಯವಾಗಿತ್ತು. ಹೀಗೆ ವಚನ, ಸೂಫಿ, ದಾಸ ತತ್ವಪದಕಾರರ ಹೋರಾಟವನ್ನು ಗಮನಿಸಿದಾಗ, ರಾಜಪ್ರಭುತ್ವ ಅಸ್ತಿತ್ವದಲ್ಲಿದ್ದ ಸಮಯದಲ್ಲಿ ಹಾಗೂ ಸಂಪ್ರದಾಯಸ್ಥ ಶತಮಾನದಲ್ಲಿ ಪ್ರತಿರೋಧವನ್ನು ಎದುರಿಸಿ ಪ್ರಜಾಪ್ರಭುತ್ವದ ನೆಲೆಯಲ್ಲಿ ಜಾಗೃತಿಯನ್ನು ಮೂಡಿಸಿ, ಜನಮುಖಿ ನೆಲೆಯಲ್ಲಿ ಹೋರಾಟ ಮಾಡಿದ್ದು ಇವರ ಸಾಧನೆಯಾಗಿದೆ. ಹೀಗೆ ತಮ್ಮ ಚಿಂತನೆಗಳ ಮೂಲಕ ನವಸಿದ್ಧಾಂತಗಳನ್ನು ಮುಂದಿನ ಜನಾಂಗಕ್ಕೆ ಕೊಟ್ಟು ಹೋದರು. ಅದರ ಫಲಶ್ರುತಿಯೆ ಇಂದು ಚಳವಳಿಯಾಗಿ ಮಾರ್ಪಟ್ಟಿದೆ.

ಅಡಿಟಿಪ್ಪಣಿಗಳು

೧. ಮಹೇಶ ತಿಪ್ಪಶೆಟ್ಟಿ (ಸಂ), ಬಸವತತ್ವ ಸಾಮಾಜಿಕ ಬದಲಾವಣೆ, ಪುಟ ೧.

೨. ಬಸವರಾಜ ಸಬರದ, ವಚನ ಚಳವಳಿ, ಪುಟ ೩.

೩. ಅಲ್ಲಮಪ್ರಭು ಸ್ವಾಮೀಜಿ (ಸಂ), ವಚನ ಸಂಚಯನ, ಪುಟ ೧೨೬.

೪. ರಂಜಾನ್‌ದರ್ಗಾ, ಬಸವಧರ್ಮದ ವಿಶ್ವಸಂದೇಶ, ಪುಟ ೧೭.

೫. ರಾಮ್ಯಕೃಷ್ಣೇಗೌಡ ಕೊ.ವೆಂ. (ಸಂ), ಕನ್ನಡನುಡಿ, ಪುಟ ೧೩.

೬. ಭೂಸನೂರಮಠ ಸಂ.ಶಿ. (ಸಂ), ವಚನ ಸಾಹಿತ್ಯ ಸಂಗ್ರಹ, ಪುಟ ೬೩.

೭. ರಾಮಕೃಷ್ಣೇಗೌಡ, ಕೋ.ವೆಂ. (ಸಂ), ಕನ್ನಡನುಡಿ, ಪುಟ ೪.

೮. ಶಿವರುದ್ರ ಮಹಾಸ್ವಾಮಿ (ಸಂ), ಬಸವ ಪಥ, ಪುಟ ೨೧.

೯. ಬಸವರಾಜ ಸಬರದ, ವಚನ ಚಳವಳಿ, ಪುಟ ೪೪.

೧೦. ಶಿವಪ್ರಕಾಶ್ (ಲೇ), ಕನ್ನಡನುಡಿ, ಪುಟ ೧೭.

೧೧. ತಿಪ್ಪೇರುದ್ರಸ್ವಾಮಿ ಹೆಚ್., ವಚನ ಸಾಹಿತ್ಯ, ಪುಟ ೨೯.

೧೨. ಮಹೇಶ ತಿಪ್ಪಶೆಟ್ಟಿ (ಸಂ), ಬಸವತತ್ವ ಸಾಮಾಜಿಕ ಬದಲಾವಣೆ, ಪುಟ ೧.

೧೩. ಚಂದ್ರಶೇಖರ ಟಿ.ಆರ್., ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಪುಟ ೧೫.

೧೪. ಮಹೇಶ ತಿಪ್ಪಶೆಟ್ಟಿ (ಸಂ), ಬಸವತತ್ವ ಸಾಮಾಜಿಕ ಬದಲಾವಣೆ, ಪುಟ ೧೨.

೧೫. ಬಸವರಾಜ ಸಬರದ, ವಚನ ಚಳವಳಿ, ಪುಟ ೫.

೧೬. ಚಿದಾನಂದಮೂರ್ತಿ ಎಂ., ಚನ್ನಬಸವಣ್ಣ, ಸಂಶೋಧನಾ ಲೇಖನ, ಪು. ೨೭೭ ರಿಂದ ೨೯೨.

೧೭. ಶೌತನ್ ಜೆ.ಪಿ., ರೆವೊಲ್ಯುಶನ್ ಆಫ್ ಮಿಸ್ಟಿಕ್ಸ್, ಪುಟ ೧೪೯.

೧೮. ಚಂದ್ರಶೇಖರ್ ಟಿ.ಆರ್., ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಪುಟ ೨೩.

೧೯. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪುಟ ೨೪, ೨೫.

೨೦. ಅಥರ್ ಜಿ. ಆರ್‌ಬೆರ್ರಿ., ಹಿಸ್ಟರಿ ಆಫ್ ಸೂಫಿಸಂ, ಪುಟ ೩೧.

೨೧. ರಹಮತ್ ತರೀಕೆರೆ, ಕರ್ನಾಟಕ ಸೂಫಿಗಳು, ಪುಟ ೨೭.

೨೨. ಮೇಲಿನದೆ., ಪುಟ ೧೭.

೨೩. ಮೇಲಿನದೆ., ಪುಟ ೨೩.

೨೪. ಪುಟ್ಟಪ್ಪ ಕೆ.ವಿ. (ಪ್ರ.ಸಂ.), ನಾಗೇಗೌಡ ಹೆಚ್.ಎಲ್. (ಸಂ.ಸಂ.), ಪ್ರವಾಸಿ ಕಂಡ ಇಂಡಿಯಾ, ಸಂ. ೫, ಪುಟ ೨೨೭.

೨೫. ಸಯೀದ್ ಅತ್ತರ್ ಅಬ್ಬಾಸ್ ರಿಜ್ವಿ, ಎ ಹಿಸ್ಟರಿ ಆಫ್ ಸೂಫಿಸಂ ಇನ್ ಇಂಡಿಯಾ, ವಾಲ್ಯೂಮ್-II.

೨೬. ಕಪಟರಾಳ ಕೃಷ್ಣರಾವ್, ಕರ್ನಾಟಕದ ಸಂಸ್ಕೃತಿ ಸಂಶೋಧನೆ, ಪುಟ ೧೨೨.

೨೭. ರಹಮತ್ ತರೀಕೆರೆ, ಕರ್ನಾಟಕ ಸೂಫಿಗಳು, ಪುಟ ೨೬೧ ರಿಂದ ೨೭೨.

೨೮. ಫಕೀರ್ ಮಹಮದ್ ಪಟ್ಕಾಡಿ, ಸೂಫಿ ಮಹಿಳೆಯರು, ಪುಟ ೭೮.

೨೯. ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಎಂ.ಎ. ಪ್ರಥಮ, ಪತ್ರಿಕೆ-೪, ಪುಟ ೧೩೫, ೧೩೬.

೩೦. ಕೃಷ್ಣಶರ್ಮ ಬೆಟಗೇರಿ, ಕನಕದಾಸರ ಹಾಡುಗಳು, ಪುಟ ೧೦.

೩೧. ವರದರಾಜರಾವ್ (ಸಂ), ಹರಿದಾಸ ಸಾಹಿತ್ಯ ಸಮೀಕ್ಷೆ, ಪುಟ ೫೬.

೩೨. ವರದರಾಜರಾವ್ ಜಿ., ಪುರಂದರದಾಸರು, ಪುಟ ೧೩.

೩೩. ನಾಗರತ್ನ ಟಿ.ಎನ್., ಕನಕದಾಸ, ಪುಟ ೧.

೩೪. ಮಳಲಿ ವಸಂತ್‌ಕುಮಾರ್, ಕನಕದಾಸ, ಪುಟ ೬೭.

೩೫. ವರದರಾಜರಾವ್ ಜಿ. (ಸಂ), ಹರಿದಾಸ ಸಾಹಿತ್ಯ ಸಮೀಕ್ಷೆ, ಪುಟ ೫೪.

೩೬. ಭಾಸ್ಕರ್ ಟಿ.ಎಂ., ರಾಜಶೇಖರ ಹತಗುಂದಿ (ಸಂ), ಕಲಬುರ್ಗಿ ಜಿಲ್ಲಾ ದರ್ಶನ, ಪುಟ ೧೨೩.

೩೭. ಅಮರೇಶ ನುಗಡೋಣಿ, ಹೈದರಾಬಾದು ಕರ್ನಾಟಕ ಹಾಡುಪಾಡು, ಪುಟ ೩೮.

೩೮. ವಾಸುದೇವ ಅಗ್ನಿಹೋತ್ರಿ (ಸಂ), ಕೀರ್ತನೆ ತತ್ವಪದಗಳ ಸಂಗ್ರಹ, ಪ್ರಸ್ತಾವನೆ.

೩೯. ಬಸವರಾಜ ಸಬರದ, ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪುಟ ೧೫.

೪೦. ಮೇಲಿನದೆ., ಪುಟ ೧೯.

೪೧. ಮಲ್ಲಿಕಾರ್ಜುನ ಜೆ. ಅಮ್ಮೆ, ದಲಿತ ತತ್ವಪದಕಾರ, ಪು. ೩೪.

೪೨. ಮೇಲಿನದೆ, ಪು. ೪೯, ೫೦.

೪೩. ಹರಿಶ್ಚಂದ್ರ ದಿಗ್ಸಂಗಿಕರ್, ಚಾರಿತ್ರಿಕ ಲಾವಣಿಗಳು, ಪುಟ. ೧೨೫.

೪೪. ನಿಂಗಣ್ಣ ಸಣ್ಣಕ್ಕಿ, ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು, ಪು. ೭೭.

೪೫. ಮೇಲಿನದೆ, ಪು. ೭೯.

❑❑❑

ಅಧ್ಯಾಯ ನಾಲ್ಕು

ಸ್ವಾತಂತ್ರ್ಯೋತ್ತರ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳು

೪.೧. ರೈತ ಚಳವಳಿ

  ೪.೧.೧. ಸ್ವಾತಂತ್ರ್ಯೋತ್ತರ ರೈತ ಚಳವಳಿಗಳು

  ೪.೧.೨. ಸಮಕಾಲೀನ ಸಂದರ್ಭದಲ್ಲಿ ರೈತರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

೪.೨. ದಲಿತ ಚಳವಳಿ

  ೪.೨.೧. ಸ್ವಾತಂತ್ರ್ಯೋತ್ತರ ದಲಿತ ಚಳವಳಿಗಳು

  ೪.೨.೨. ಸಮಕಾಲೀನ ಸಂದರ್ಭದಲ್ಲಿ ದಲಿತರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

೪.೩. ಹಿಂದುಳಿದ ವರ್ಗಗಳ ಚಳವಳಿ

  ೪.೨.೧. ಸ್ವಾತಂತ್ರ್ಯೋತ್ತರ ಹಿಂದುಳಿದ ವರ್ಗಗಳ ಚಳವಳಿಗಳು

  ೪.೨.೨. ಸಮಕಾಲೀನ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

೪.೪. ಕಾರ್ಮಿಕ ಚಳವಳಿ

  ೪.೪.೧. ಸ್ವಾತಂತ್ರ್ಯೋತ್ತರ ಕಾರ್ಮಿಕ ಚಳವಳಿಗಳು

  ೪.೪.೨. ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

೪.೫. ಮಹಿಳಾ ಚಳವಳಿ

  ೪.೫.೧. ಸ್ವಾತಂತ್ರ್ಯೋತ್ತರ ಮಹಿಳಾ ಚಳವಳಿಗಳು

  ೪.೫.೨. ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಅಧ್ಯಾಯ ನಾಲ್ಕು

ಸ್ವಾತಂತ್ರ್ಯೋತ್ತರ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳು

ಸಾಮಾಜಿಕ ಚಳವಳಿಗಳು ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ ೧೯೭೦ರ ದಶಕವು ಚಳವಳಿಗಳ ಬೆಳವಣಿಗೆ ದೃಷ್ಟಿಯಿಂದ ವಿಶಿಷ್ಟವಾದ ಮತ್ತು ಗಮನಾರ್ಹವಾದ ದಶಕವಾಗಿದೆ. ಏಕೆಂದರೆ ಈ ದಶಕದಲ್ಲಿ ಸಾಮಾಜಿಕ ಚಳವಳಿಗಳು ಹೊಸ ಉದ್ದೇಶಗಳೊಂದಿಗೆ ಹಾಗೂ ಚಿಂತನೆಗಳೊಂದಿಗೆ ರೂಪುಗೊಳ್ಳುತ್ತಾ ಸಾಮಾಜಿಕ ಚೌಕಟ್ಟಿನೊಳಗೆ ಭದ್ರವಾಗಿ ನೆಲೆಯೂರಲು ಪ್ರಯತ್ನಿಸಿದವು. ೭೦ರ ದಶಕದಲ್ಲಿ ರೈತ, ದಲಿತ, ಹಿಂದುಳಿದ, ಕಾರ್ಮಿಕ ಮತ್ತು ಮಹಿಳಾ ಹೋರಾಟಗಳ ಹುಟ್ಟು ಮತ್ತು ಚಿಂತನೆಗಳಲ್ಲಿ ವೈವಿಧ್ಯವಿದೆ. ವಿಶೇಷವಾಗಿ ಇದೇ ಕಾಲದಲ್ಲಿ ಹುಟ್ಟಿ ಬಂದ ಎಡಪಂಥೀಯ ಚಿಂತನೆಗಳೂ ಸಹ ಸಾಮಾಜಿಕ ಚಳವಳಿಗಳಲ್ಲಿ ಅದರಲ್ಲೂ ಮುಖ್ಯವಾಗಿ ರೈತ, ದಲಿತ, ಹಿಂದುಳಿದ, ಕಾರ್ಮಿಕ ಮತ್ತು ಮಹಿಳಾ ಚಳವಳಿಗಳ ಮೇಲೆ ಹೆಚ್ಚು ಕೇಂದ್ರೀಕೃತಗೊಂಡವು. ಕೆಲವು ಚಿಂತಕರು ಸಾಮಾಜಿಕ ಹೋರಾಟಗಳನ್ನು ಜಾತಿ ಮತ್ತು ವರ್ಗದ ಮೂಲಕ ಅಭ್ಯಸಿಸಲು ಪ್ರಯತ್ನಿಸಿದರೆ ಮತ್ತೆ ಕೆಲವರು ಈ ಹೋರಾಟಗಳ ರೂಪರೇಷೆಗಳ ವಿಶ್ಲೇಷಣೆಯಲ್ಲಿ ತೊಡಗಿದರು.

ಇಂತಹ ಬೆಳವಣಿಗೆಯ ಜೊತೆಗೆ, ಇಲ್ಲಿಯವರೆಗೆ ಶೋಷಣೆ, ಅಸಹಾಯಕತೆ, ಹಿಂಸೆ, ದೌರ್ಜನ್ಯ ಮತ್ತು ಅವಮಾನ, ನೋವು ಹತಾಶೆಗಳನ್ನು ಅನುಭವಿಸುತ್ತಾ ಬಂದಿದ್ದ ವರ್ಗಗಳು, ಕ್ರಮೇಣ ತಮ್ಮ ಪರಿಸ್ಥಿತಿಯ ಸುಧಾರಣೆಗಾಗಿ ಧ್ವನಿ ಎತ್ತತೊಡಗಿದ ಕಾಲವಾಗಿದೆ. ನೊಂದ ಜನರು ಸಂಘಟನೆಯ ಪ್ರಜ್ಞೆಯನ್ನು ಬೆಳೆಸಿಕೊಂಡು ಜಾಗೃತರಾಗಿ ಹೋರಾಟಕ್ಕಿಳಿದರು. ಕ್ರಮೇಣ ಹೋರಾಟ ಸ್ಫೋಟಗೊಳ್ಳುತ್ತಾ ಚಳವಳಿಗಳಾಗಿ ರೂಪಗೊಂಡವು. ಹೋರಾಟಗಳ ಮನೋಭಾವ, ಉಗ್ರ ಪ್ರತಿಭಟನೆ ಮತ್ತು ಸಂಘಟನಾಶಕ್ತಿಯ ಮನೋಭಾವಗಳು ಪ್ರಮುಖವಾಗಿ ರೈತ, ದಲಿತ, ಕಾರ್ಮಿಕ ಮತ್ತು ಮಹಿಳಾ ವರ್ಗಗಳಲ್ಲಿ ಕಂಡು ಬಂದು, ಇಲ್ಲಿಂದ ಇವರ ಹೋರಾಟಗಳು ರೈತ ಚಳವಳಿ, ದಲಿತ ಚಳವಳಿ, ಕಾರ್ಮಿಕ ಮತ್ತು ಮಹಿಳಾ ಚಳವಳಿಗಳೆಂದು ಹೊಸ ರೂಪದಲ್ಲಿ ಗುರುತಿಸಿಕೊಳ್ಳುವಂತಾದವು ಹಾಗೂ ತಮ್ಮ ಮುಂದಿನ ಹೋರಾಟಗಳಿಗೆ ತಮ್ಮದೇ ನೆಲೆಯನ್ನು, ಹೋರಾಟದ ಗುರಿ ಉದ್ದೇಶಗಳನ್ನು ಕಂಡುಕೊಂಡವು. ಹೀಗೆ ೭೦ ಮತ್ತು ೮೦ರ

ದಶಕದಲ್ಲಿ ಚಳವಳಿಗಳು ಎಷ್ಟು ತೀವ್ರತೆಯನ್ನು ಪಡೆದುಕೊಂಡವೆಂದರೆ, ರೈತ ಅಥವಾ ದಲಿತ ಚಳವಳಿಗಳು ಆರಂಭವಾದರೆ ಸರಕಾರವೇ ನಡುಗುವಷ್ಟು, ಮಂತ್ರಿಗಳ ಅಧಿಕಾರದ ಅಳಿವು ಉಳಿವನ್ನು ನಿರ್ಧರಿಸುವಷ್ಟು ಪ್ರಬಲವಾಗತೊಡಗಿದವು. ಚಳವಳಿಗಳ ಮೂಲಕ ಇದುವರೆಗೂ ಸೌಲಭ್ಯ ವಂಚಿತರಾಗಿದ್ದ ಕೆಲವು ವರ್ಗಗಳ ಜನರು ಕೆಲವು ಸೌಲಭ್ಯಗಳನ್ನು ಪಡೆಯುವಲ್ಲಿ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ನೂರಾರು ವರ್ಷಗಳ ಪ್ರಯತ್ನದಲ್ಲಿ ಪಡೆಯದಿದ್ದುದನ್ನು ಕೆಲವೇ ವರ್ಷಗಳಲ್ಲಿ ಪಡೆದರು. ಚಳವಳಿಗಳನ್ನು ಮುನ್ನಡೆಸಿದ ನಾಯಕರು ಎಷ್ಟು ಪ್ರಬಲವಾಗಿ ಜನಬೆಂಬಲ ಪಡೆದರೆಂದರೆ, ರಾಜಕೀಯ ಪಕ್ಷಗಳು ಇಂತಹ ನಾಯಕರನ್ನು ಓಲೈಸಿ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಪೈಪೋಟಿಗಿಳಿದರು. ಹೀಗೆ ಈ ದಶಕದ ಚಳವಳಿಗಳು ಮುಂದೆ ಕ್ರಾಂತಿಕಾರಕ ಬದಲಾವಣೆಗೆ ಮಾರ್ಗಸೂಚಿಯಾಗಿ ದಾರಿ ಮಾಡಿಕೊಡುತ್ತವೆ ಎನ್ನುವ ಭರವಸೆಯನ್ನು ಹುಟ್ಟಿಸಿದ್ದವು.

ಪ್ರಸ್ತುತ ಅಧ್ಯಯನದಲ್ಲಿ ವಿಶೇಷವಾಗಿ ಗುರುತಿಸಿರುವ ಅಂಶವೆಂದರೆ, ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಸಾಮಾಜಿಕ ಚಳವಳಿಗಳು ಬೇರೆ ಪ್ರದೇಶಗಳಲ್ಲಿ ನಡೆದ ಸಾಮಾಜಿಕ ಚಳವಳಿಗಳಿಗಿಂತ ಭಿನ್ನವಾಗಿವೆ. ಏಕೆಂದರೆ ಹೈದರಾಬಾದ್ ಕರ್ನಾಟಕ ಪ್ರದೇಶವು ಭೌಗೋಳಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ತನ್ನದೇ ಆದ ವಿಭಿನ್ನ ಸ್ಥಾನಮಾನ ಹೊಂದಿದೆ. ಇಲ್ಲಿನ ಪರಿಸ್ಥಿತಿಗಳು ಮತ್ತು ಸಮಸ್ಯೆಗಳು ಬೇರೆ ಪ್ರದೇಶಕ್ಕಿಂತ ವಿಭಿನ್ನವಾಗಿವೆ. ಇಲ್ಲಿ ಜಮೀನ್ದಾರಿ ಪದ್ಧತಿ ಇನ್ನು ಜೀವಂತವಾಗಿರುವುದನ್ನು, ಬಂಡವಾಳಶಾಹಿಗಳ ಪ್ರಾಬಲ್ಯವಿರುವುದನ್ನು, ಜಾತಿ ವ್ಯವಸ್ಥೆಯೇ ನಿರ್ಧಾರಕ ಅಂಶವಾಗಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಈ ಭಾಗದಲ್ಲಿ ಶೋಷಕರು ಯಾರು, ಶೋಷಿತರ ಸ್ಥಿತಿಗತಿಗಳು ಹೇಗಿದ್ದವು, ಅಜ್ಞಾನದಿಂದ ಮತ್ತು ತಮ್ಮ ಹಕ್ಕುಗಳ ಅರಿವಿಲ್ಲದೆ ಶೋಷಣೆಯ ವಿರುದ್ಧ ಧ್ವನಿ ಎತ್ತಲಿಕ್ಕೆ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದಾಗ, ಸಂಘಟನೆಗಳ ಬಲವಿಲ್ಲದಿದ್ದಾಗ, ಅಸಹಾಯಕರಾಗಿ ಅನುಭವಿಸಿದ ಜನರ ನೋವು, ಶೋಷಣೆ, ಹಿಂಸೆ, ದೌರ್ಜನ್ಯಗಳು ಎಂತಹವು ಮತ್ತು ಇಂತಹ ನೋವುಗಳನ್ನು ವ್ಯಕ್ತಪಡಿಸಲು ಬಲವಿಲ್ಲದೆ ಅದುಮಿಟ್ಟುಕೊಂಡು ಅನುಭವಿಸಿದ ಸಂಕಟ ಎಂತಹದು ಎನ್ನುವುದನ್ನು ಗುರುತಿಸುವ ಉದ್ದೇಶ ಹೊಂದಲಾಗಿದೆ. ನಂತರ ಕಾಲದ ಬದಲಾವಣೆಯಲ್ಲಿ, ಪ್ರಜ್ಞಾವಂತರ ಸಂಘಟನೆಗಳ ಹಾಗೂ ಕಾನೂನಿನ ಬೆಂಬಲ ಪಡೆದು, ಜಾಗೃತರಾಗಿ ಹೋರಾಟಕ್ಕಿಳಿದ ಅಂಶಗಳನ್ನು ಗುರುತಿಸುವ ಮತ್ತು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರೈತ, ದಲಿತ, ಕಾರ್ಮಿಕ ಮತ್ತು ಮಹಿಳೆಯರ ಮೇಲೆ ಹಿಂದೆ ನಡೆದ ಶೋಷಣೆಯ ಸ್ವರೂಪ ಎಂತಹದು, ದೌರ್ಜನ್ಯಗಳು ಯಾವುವು ಮತ್ತು ಇವುಗಳನ್ನು ವಿರೋಧಿಸಿ ಇವರು ಕೈಗೊಂಡ ಹೋರಾಟಗಳು ಯಾವುವು, ಹೋರಾಟಗಳು ಪಡೆದ ಮತ್ತು ಪಡೆಯುತ್ತಿರುವ ಯಶಸ್ಸು ಹಾಗೂ ವಿಫಲತೆಗಳ ವಿಶ್ಲೇಷಣೆಯನ್ನು ಮಾಡುತ್ತಾ, ಪ್ರಸ್ತುತ ಈ ಪ್ರದೇಶದ ಸ್ಥಿತಿಗತಿಗಳು ಏನು, ಸಮಸ್ಯೆಗಳು ಯಾವುವು ಹಾಗೂ ಚಳವಳಿಗಳು ಯಾವ ದಿಕ್ಕಿನಲ್ಲಿ ಹೊರಟಿವೆ ಎನ್ನುವ ಅಧ್ಯಯನ ಕೈಗೊಳ್ಳಲಾಗಿದೆ.

೪.೧. ರೈತ ಚಳವಳಿ

ಭಾರತ ಕೃಷಿ ಪ್ರಧಾನವಾದ ದೇಶವಾಗಿದ್ದು, ಗ್ರಾಮೀಣ ಪ್ರದೇಶಗಳೇ ಹೆಚ್ಚಿರುವ ಇಲ್ಲಿ ಅಂದಾಜು ಶೇ. ೭೭ಕ್ಕಿಂತ ಹೆಚ್ಚು ಜನರು ಕೃಷಿಯನ್ನೆ ಅವಲಂಬಿಸಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಕೃಷಿಯನ್ನು ಅವಲಂಬಿಸಿದ್ದರೂ ಉತ್ಪಾದನೆ ಮತ್ತು ರೈತರ ಬದುಕು ಮಾತ್ರ ಅಸ್ಥಿರವಾಗಿದೆ. ಏಕೆಂದರೆ ಅರ್ಥಶಾಸ್ತ್ರಜ್ಞರು ಹೇಳುವಂತೆ, 'ಭಾರತದಲ್ಲಿ ವ್ಯವಸಾಯವು ಮಳೆಯೊಂದಿಗೆ ಜೂಜಾಟದಂತಿದೆ ಮತ್ತು ಭಾರತದ ರೈತ ಬಡತನದಲ್ಲಿ ಹುಟ್ಟಿ ಬಡತನದಲ್ಲಿ ಬದುಕಿ ಬಡತನದಲ್ಲೇ ಸಾಯುತ್ತಾನೆ ಎನ್ನುವ ಮಾತು ಇಂದಿಗೂ ಪ್ರಸ್ತುತವೆನಿಸುತ್ತದೆ. ಹೀಗೆ ರೈತ ಎಲ್ಲಾ ವಿಧದಲ್ಲಿಯೂ ಒಂದಲ್ಲಾ ಒಂದು ಸಮಸ್ಯೆಯನ್ನು ಎದುರಿಸುತ್ತಿರುವುದು ಸಾಮಾನ್ಯವಾಗಿದೆ. ರೈತನು ತನ್ನ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರವೂ ಸ್ಪಂದಿಸದಿದ್ದಾಗ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದಾನೆ. ಏಕೀಕರಣ ಪೂರ್ವದ ರೈತ ಚಳವಳಿಗಳು ರೈತರಲ್ಲಿ ರಾಜಕೀಯ ಪ್ರಜ್ಞೆ ಮತ್ತು ಹಕ್ಕಿನ ಪ್ರಜ್ಞೆಯನ್ನು ಸ್ವಲ್ಪಮಟ್ಟಿಗೆ ಮೂಡಿಸುವಲ್ಲಿ ಯಶಸ್ವಿಯಾದರೂ ಅದು ಸಂಪೂರ್ಣವಾಗಿ ಗಟ್ಟಿಯಾಗಲಿಲ್ಲ. ಆದರೆ ಕೆಲವು ರೈತ ಹೋರಾಟಗಳು ಪ್ರಭಾವಿತವಾಗಿದ್ದವು.

ರೈತ ಚಳವಳಿಯು ಸಾಗಿ ಬಂದ ದಾರಿಯನ್ನು ಅವಲೋಕಿಸಿದಾಗ, ಚಳವಳಿಯು ಭಾರತದ ವಿಭಿನ್ನ ಭಾಗಗಳಲ್ಲಿ ೧೯೮೦ರ ದಶಕದಲ್ಲಿ ತೀವ್ರವಾಗಿದ್ದನ್ನು ಗಮನಿಸಬಹುದು. ಅವುಗಳಲ್ಲಿ ಪ್ರಮುಖ ಸಂಘಟನೆ ಗಳೆಂದರೆ, ಮಹಾರಾಷ್ಟ್ರದಲ್ಲಿ ಶೇತ್ಕರಿ ಸಂಘಟನೆ, ಕರ್ನಾಟಕದಲ್ಲಿ ರೈತ ಸಂಘ, ಉತ್ತರ ಪ್ರದೇಶದಲ್ಲಿ ಭಾರತೀಯ ಕಿಸಾನ್ ಯೂನಿಯನ್ ಪ್ರಮುಖವಾದವುಗಳಾಗಿವೆ. ಆಗ ರೈತ ಚಳವಳಿಗಳು ತೀವ್ರವಾಗಲು ಅನೇಕ ಕಾರಣಗಳಲ್ಲಿ ಜಾಗತೀಕರಣವು ಒಂದು. ೧೯೮೦ರ ತನಕ ಜಾಗತೀಕರಣ ವಿಷಯವು ಪ್ರಧಾನ ವಾಗಿರಲಿಲ್ಲ, ಬದಲಾಗಿ ಆಂತರಿಕ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳು ಪ್ರಮುಖವಾಗಿದ್ದವು. ಅಂದರೆ ಸಾಲ ಸೌಲಭ್ಯ, ಸಾಲ ಮನ್ನಾ ಮತ್ತು ಬೆಂಬಲ ಬೆಲೆಯಂಥ ಬೇಡಿಕೆಗಳು ಪ್ರಮುಖವಾಗಿದ್ದವು. ಆದರೆ ೧೯೯೦ರ ದಶಕದಲ್ಲಿ ಭಾರತ ಸರಕಾರ ಅಳವಡಿಸಿಕೊಂಡ ಉದಾರೀಕರಣ ನೀತಿಯಿಂದಾಗಿ ರೈತ ಹೋರಾಟಕ್ಕೆ ನಿಜವಾದ ತಿರುವು ಬಂದಿತು.

ಭಾರತವನ್ನು ಒಂದು ನವ ವಸಾಹತುವನ್ನಾಗಿ ಪರಿವರ್ತಿಸುವ, ಬಹುತಂತ್ರಗಳ ರೂಪದಲ್ಲಿ ಜಾಗತೀಕರಣವನ್ನು ನೋಡಲಾಯಿತು. ಜೈವಿಕ ತಂತ್ರಜ್ಞರು, ಪರಿಸರವಾದಿಗಳು, ರೈತರ ಪರ ನಿಂತರು ಹೀಗಾಗಿ ರೈತರ ಬೇಡಿಕೆಗಳು ಮತ್ತು ಹೋರಾಟಗಳು ಹೊಸ ದಾರಿಯನ್ನು ಹಿಡಿದವು. ಇನ್ನು ಜಾಗತೀಕರಣದ ಸಮಯದಲ್ಲಿ ಬಂದ ಡಂಕೆಲ್ ಪ್ರಸ್ತಾವನೆಯು ನಮ್ಮ ರಾಷ್ಟ್ರೀಯ ಕಾನೂನುಗಳಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿತು ಇದರಿಂದ ರಾಜ್ಯ ಪಟ್ಟಿಯಲ್ಲಿರುವ ಮೂವತ್ತು ವಿಷಯಗಳನ್ನೆ ಬದಲಾಯಿಸ ಬೇಕಾಗುತ್ತದೆ.[೧] ಹೀಗೆ ಸ್ವಾತಂತ್ರ್ಯಪೂರ್ವದಿಂದ ಇಂದಿನವರೆಗೆ ರೈತ ಚಳವಳಿಗಳು ಅನೇಕ ಘಟ್ಟಗಳನ್ನು ದಾಟಿ ಮುಂದೆ ಸಾಗುತ್ತಿವೆ ಹಾಗೂ ಆಯಾ ಕಾಲದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಆಯಾ ಪರಿಸ್ಥಿತಿಗೆ ತಕ್ಕಂತೆ ಪ್ರತಿಭಟನೆಗಳನ್ನು ಮಾಡುತ್ತಾ ಬಂದಿದೆ.

ರೈತ ಚಳವಳಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಮೊದಲು ರೈತ ಎಂದರೆ ಯಾರು ಎಂಬುದನ್ನು ಅರ್ಥೈಸುವುದು ಬಹಳ ಮುಖ್ಯವಾಗಿದೆ. ಯಾರು ತನ್ನ ಭೂಮಿಯನ್ನು ಸ್ವತಃ ಉಳುತ್ತಾನೋ ಅವನೇ ರೈತ ಹಾಗೂ ಯಾರು ಕೃಷಿಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾರೋ ಅಥವಾ ಕೃಷಿಯಿಂದಲೇ ಬದುಕುತ್ತಿದ್ದಾರೋ ಅವರು ರೈತರು.

ರೈತ ಸಂಘ

ಕರ್ನಾಟಕದ ರೈತ ಹೋರಾಟಕ್ಕೆ ಒಂದು ರೀತಿಯ ಸಮಗ್ರತೆಯನ್ನು, ಶಕ್ತಿಯನ್ನು ನೀಡಿದ್ದು ರೈತ ಸಂಘ. ರೈತ ಸಂಘದ ಹುಟ್ಟು, ಬೆಳವಣಿಗೆ ಮತ್ತು ಸೈದ್ಧಾಂತಿಕ ನಿಲುವುಗಳು ಮತ್ತು ಹೋರಾಟದ ಮಾದರಿಗಳು ಆಧುನಿಕ ಕರ್ನಾಟಕದ ರೈತ ಚಳವಳಿಯ ಮುಖ್ಯವಾದ ಮೈಲುಗಲ್ಲಾಗಿದೆ. ಆತ್ಮವಿಶ್ವಾಸ, ಆತ್ಮಸ್ಥೈರ್ಯ, ಸ್ವಾಭಿಮಾನಗಳನ್ನು ರೈತರಲ್ಲಿ ತಂದುದು ರೈತಸಂಘ. ರೈತ ಸಂಘವು ಮಾರ್ಕ್ಸ್‌ವಾದದ ವರ್ಗ ಸಂಘರ್ಷದ ಮಾದರಿಯಲ್ಲಿ ರೈತ ವರ್ಗಕ್ಕೆ ವೈಚಾರಿಕ ಚಿಂತನೆಯನ್ನು, ಪ್ರಜ್ಞೆಯನ್ನು, ಸಂಘಟನೆಯನ್ನು ರೂಪಿಸಿಕೊಟ್ಟಿತು.[೨]

ರೈತ ಸಂಘದ ಉದಯವನ್ನು ೧೯೮೦ರಲ್ಲಿ ನಡೆದ ಮಲಪ್ರಭಾ ರೈತರ ಹೋರಾಟದ ಘಟನೆಯೊಂದಿಗೆ ಗುರುತಿಸಬಹುದಾಗಿದೆ. ಈ ಹೋರಾಟವು ರೈತ ಚಳವಳಿಯ ಮುಖ್ಯ ತಿರುವಾಗಿದೆ. ಈ ಯೋಜನೆಯಲ್ಲಿ ನೀರಾವರಿ ಕಾಲುವೆಗಳು ಪೂರ್ಣಗೊಳ್ಳದೆ, ರೈತರ ಹೊಲಗಳಿಗೆ ನೀರು ಹರಿಯುವ ಮುಂಚೆಯೇ ರೈತರ ಮೇಲೆ ಪೂರ್ವಾನ್ವಯ ತೆರಿಗೆಯನ್ನು ಹಾಕಲಾಯಿತು. ಇದರ ಪರಿಣಾಮವೇ ೧೯೮೦ ಜುಲೈ ೨೧ ರಂದು ನಡೆದ ನರಗುಂದ ಗೋಲಿಬಾರ್ ದುರಂತ. ದುರಂತದಲ್ಲಿ ಮಡಿದವರಿಗೆ ಆಗ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾವ್ ಸರಕಾರ ಘೋಷಿಸಿದ ಪರಿಹಾರವು ಸಂಬಂಧಪಟ್ಟ ರೈತರಿಗೆ ತಲುಪಲಿಲ್ಲ.[೩] ಆದ್ದರಿಂದ ಚಳವಳಿ ಮುಂದುವರೆಯಿತು. ಇದೇ ಸಮಯಕ್ಕೆ ಶಿವಮೊಗ್ಗ ಜಿಲ್ಲಾ ಭದ್ರ ಸಹಕಾರ ಸಕ್ಕರೆ ಕಾರ್ಖಾನೆಯ ಸಮಸ್ಯೆ ತೀವ್ರಗೊಂಡಿತು. ಆಗ ಇಲ್ಲಿನ ರೈತ ಕುಟುಂಬದಿಂದ ಬಂದಂತಹ ಕಾನೂನು ಪ್ರಾಧ್ಯಾಪಕರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಹಾಗೂ ಪ್ರಗತಿಪರ ರೈತ ಎನ್.ಡಿ. ಸುಂದರೇಶ್, ಮಾಜಿ ಸಚಿವರಾದ ಎಚ್.ಎಸ್. ರುದ್ರಪ್ಪ, ರೇವಣಸಿದ್ದಯ್ಯ ಮೊದಲಾದವರ ನಾಯಕತ್ವದಲ್ಲಿ ಶಿವಮೊಗ್ಗ ಜಿಲ್ಲಾ ರೈತ ಸಭೆ ಜರುಗಿತು. ಸಮಾವೇಶದಲ್ಲಿ ಸುಮಾರು ೧೯ ಬೇಡಿಕೆಗಳನ್ನು ಸರಕಾರಕ್ಕೆ ಸಲ್ಲಿಸಲು ೧೯೮೦ ಸೆಪ್ಟೆಂಬರ್ ೧ ರಂದು ತೀರ್ಮಾನಿಸಲಾಯಿತು. ಬಂಧಿತ ರೈತರ ಬಿಡುಗಡೆ, ಬ್ಯಾಂಕ್ ಸಾಲ ಮನ್ನಾ, ಶೇ. ೪ರ ಬಡ್ಡಿ ದರದಲ್ಲಿ ಕೃಷಿ ಸಾಲ, ಬೆಳೆ ವಿಮೆ ಮುಂತಾದವು. ಅದೇ ದಿನ ರೈತ ಚಳವಳಿಗಾರರೆಲ್ಲಾ ಹಸಿರು ಟೋಪಿ, ಹಸಿರು ಶಾಲು ಧರಿಸುವಂತೆ ತೀರ್ಮಾನಿಸಲಾಯಿತು. ಅದೇ ಸಂದರ್ಭದಲ್ಲಿ ಅಧಿಕಾರ ಕಳೆದುಕೊಂಡಿದ್ದ ಡಿ. ದೇವರಾಜ ಅರಸರ ಅಧ್ಯಕ್ಷತೆಯಲ್ಲಿ ಸಿಪಿಐ., ಸಿಪಿಎಮ್ ಪಕ್ಷಗಳು ಸೇರಿಕೊಂಡು ಪ್ರಗತಿಪರ ರೈತರ ವೇದಿಕೆಯನ್ನು ಆರಂಭಿಸಿದವು. ೧೯೮೦ ಅಕ್ಟೋಬರ್ ೧೭ರಂದು ಬೆಂಗಳೂರಿನಲ್ಲಿ ಸಮಾವೇಶಗೊಂಡ ರೈತರು 'ಕರ್ನಾಟಕ ರಾಜ್ಯ ರೈತ ಸಂಘ'ವನ್ನು ಅಧಿಕೃತವಾಗಿ

ಸ್ಥಾಪಿಸಿದರು. ಕರ್ನಾಟಕ ರೈತ ಹೋರಾಟಗಳಲ್ಲಿ ಅತ್ಯಂತ ಮಹತ್ತರ ಪಾತ್ರವಹಿಸಿದ್ದು 'ಕರ್ನಾಟಕ ರಾಜ್ಯ ರೈತ ಸಂಘ'. ಶಿವಮೊಗ್ಗ ಜಿಲ್ಲೆಯ ರೈತ ಹಾಗೂ ಕಬ್ಬು ಬೆಳೆಗಾರರ ಸಂಘಟನೆಯಲ್ಲಿ ಆರಂಭಗೊಂಡ ರೈತ ಸಂಘಟನೆ ಮುಂದೆ ವಿವಿಧ ಜಿಲ್ಲೆಯ ರೈತರ ಬೇಡಿಕೆಗಳನ್ನು ಕ್ರೋಢಿಕರಿಸಿ ಸನದಿನ ರೂಪದಲ್ಲಿ ಮುಂದಿಟ್ಟಾಗ ಅದು 'ರಾಜ್ಯ ರೈತ ಸಂಘ'ವಾಗಿ ಪರಿವರ್ತಿತವಾಯಿತು.[೪]

೪.೧.೧. ಸ್ವಾತಂತ್ರ್ಯೋತ್ತರ ರೈತ ಚಳವಳಿಗಳು

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಡೆದ ಸಾಮಾಜಿಕ ಚಳವಳಿಗಳಲ್ಲಿ ರೈತ ಚಳವಳಿಯು ಅತ್ಯಂತ ಪ್ರಮುಖವಾದುದು ಮತ್ತು ವಿಭಿನ್ನವಾದುದಾಗಿದೆ. ಪ್ರದೇಶಕ್ಕೆ ಸಂಬಂಧಿಸಿದಂತೆ ಎಂಬತ್ತು ಮತ್ತು ತೊಂಬತ್ತರ ದಶಕವು ಅತ್ಯಂತ ಮಹತ್ವದ ಕಾಲಘಟ್ಟವಾಗಿದೆ. ಈ ಕಾಲಘಟ್ಟದಲ್ಲಿ ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರೈತ ಚಳವಳಿ ಒಂದು ಹೊಸ ಅಲೆಯನ್ನು ಸೃಷ್ಟಿಸಿತೆಂದರೆ ತಪ್ಪಾಗಲಾರದು. ಏಕೆಂದರೆ ಹಲವಾರು ರೈತ ಹೋರಾಟಗಳನ್ನು ಇಲ್ಲಿ ಕಾಣುತ್ತೇವೆ. ಹೈದರಾಬಾದ್ ಕರ್ನಾಟಕದಲ್ಲಿ ಇಂತಹ ಅನೇಕ ಚಳವಳಿಗಳು ನಡೆದಿರುವುದನ್ನು ಮತ್ತು ಈಗಲೂ ನಡೆಯುತ್ತಿರುವುದನ್ನು ಕಾಣಬಹುದು. ಏಕೆಂದರೆ, ಹೈದರಾಬಾದ್ ಕರ್ನಾಟಕ ಪ್ರದೇಶವು ಭೌಗೋಳಿಕವಾಗಿ ಒಣ ಹವೆಯಿಂದ ಕೂಡಿದ್ದು ಮಳೆ ಪ್ರಮಾಣ ಬಹಳ ಕಡಿಮೆ ಇದೆ. ಇದರಿಂದ ಈ ಪ್ರದೇಶವು ಪದೇ ಪದೇ ಬರಗಾಲಕ್ಕೆ ಈಡಾಗುತ್ತದೆ. ಇತ್ತೀಚಿಗೆ ಇದು ಆಗಾಗ ಅತಿವೃಷ್ಟಿ ಹಾಗೂ ಅನಾವೃಷ್ಟಿಗೆ ಒಳಗಾಗುತ್ತಿದೆ. ಒಂದು ಕಡೆ ಬರಗಾಲದ ಬೇಗೆಯಲ್ಲಿ ಬೇಯುತ್ತಿರುವ ರೈತರು, ಮತ್ತೊಂದು ಕಡೆ ಪ್ರಕೃತಿ ವಿಕೋಪಕ್ಕೆ ಬಲಿಯಾಗುತ್ತಿದ್ದಾರೆ, ಇನ್ನೊಂದು ಕಡೆ ಸರಕಾರದ ಸೌಲಭ್ಯಗಳು ಇಲ್ಲಿನ ರೈತರಿಗೆ ದೊರಕುತ್ತಿಲ್ಲ. ಇಲ್ಲಿನ ನೀರಾವರಿ ಯೋಜನೆಗಳು ದಶಕಗಳಿಂದ ನಿಧಾನಗತಿಯಲ್ಲಿ ಸಾಗಿವೆ. ಇರುವ ಸ್ವಲ್ಪ ಪ್ರಮಾಣದ ಫಲವತ್ತಾದ ಭೂಮಿಯನ್ನು ಕೈಗಾರಿಕಾ ಉದ್ದೇಶಗಳಿಗೆ ವಶಪಡಿಸಿಕೊಳ್ಳಲಾಗುತ್ತಿದೆ. ಇನ್ನು ಈ ಭಾಗದ ರೈತರು ಬೆಳೆದ ತೊಗರಿ, ಕಬ್ಬು, ಭತ್ತ, ಜೋಳ ಮುಂತಾದ ಧಾನ್ಯಗಳಿಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತಿಲ್ಲ. ಹೀಗಾಗಿ ರೈತರು ತಮ್ಮ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಪರಿಹರಿಸಿಕೊಳ್ಳಲು, ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಆರಂಭದಲ್ಲಿ ಹೋರಾಟವು ರಸ್ತೆ ತಡೆ, ಬಂದ್ ಮತ್ತು ಸತ್ಯಾಗ್ರಹಗಳನ್ನು ಅವಲಂಬಿಸಿದ್ದರೆ, ಇಂದು ಹೋರಾಟವು ರೈತನ ಆತ್ಮಹತ್ಯೆ ತನಕ ಬಂದು ನಿಂತಿದೆ.

ರಾಯಚೂರು ಪ್ರದೇಶದಲ್ಲಿ ರೈತ ಹೋರಾಟಗಳನ್ನು ೧೯೭೦-೮೦ರ ದಶಕದಿಂದಲೇ ನೋಡ ಬಹುದಾಗಿದೆ. ಇಲ್ಲಿ ರೈತರನ್ನು ಒಗ್ಗೂಡಿಸಿ, ರೈತ ಸಂಘವನ್ನು ಕಟ್ಟಿ ಹೋರಾಟ ಮಾಡಲು ಪ್ರಾರಂಭ ಮಾಡಿದ ಕೀರ್ತಿ ಚೆನ್ನಬಸಪ್ಪ ಬೆಟ್ಟದೂರು ವಕೀಲರು, ವೀರನಗೌಡ ನೀರಮಾನ್ವಿ, ಶಾಂತಯ್ಯ ಹೆಂಬೇರಾಳ ಮುಂತಾದವರಿಗೆ ಸಲ್ಲುತ್ತದೆ. ಇವರೆಲ್ಲಾ ರೈತ ಸಂಘದ ಸಂಘಟನೆಗಾಗಿ ಬೆಟ್ಟದೂರು, ಮಾನ್ವಿ, ಸಿಂಧನೂರು, ಅಮೀನಗಡ ಮುಂತಾದ ಗ್ರಾಮಗಳಿಗೆ ತೆರಳಿ ಊರ ಹೊರಗಿನ ದೇವಾಲಯಗಳಲ್ಲಿ ಸಭೆ ಸೇರಿಸಿ

ಕಾರ್ಯಕರ್ತರನ್ನು ಒಂದು ಗೂಡಿಸುವ ಕೆಲಸವನ್ನು ಆರಂಭಿಸಿದರು. ರೈತ ಸಂಘದ ಮುಖಂಡರಾದ ಪ್ರೊ. ನಂಜುಂಡಸ್ವಾಮಿಯವರನ್ನು ಈ ಪ್ರದೇಶಗಳಿಗೆ ಆಹ್ವಾನಿಸಿ ರೈತರಲ್ಲಿ ಉತ್ಸಾಹವನ್ನು, ಒಗ್ಗಟ್ಟನ್ನು ತರಲು ಪ್ರಯತ್ನಿಸಿದರು. ಇದರ ಫಲವಾಗಿ ಕ್ರಮೇಣ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ರೈತ ಸಂಘ ಪ್ರಬಲವಾಗತೊಡಗಿತು. ನಂತರ ಇಲ್ಲಿನ ಭಾಗದ ರೈತರು ಸರಕಾರದ ನೀತಿಗಳನ್ನು, ಅನ್ಯಾಯಗಳನ್ನು, ನಿರ್ಲಕ್ಷ್ಯವನ್ನು ವಿರೋಧಿಸಿ ಹೋರಾಟಕ್ಕಿಳಿದರು. ಅದರಲ್ಲಿ ಪ್ರಮುಖವಾದ ಹೋರಾಟವೆ ನಾರಾಯಣಪುರ ಬಲದಂಡೆ ಕಾಲುವೆಗಾಗಿ ನಡೆದ ಹೋರಾಟ.

ನಾರಾಯಣಪುರ ಬಲದಂಡೆ ಹೋರಾಟ

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯು ಜನರ ಪ್ರಮುಖ ಜೀವನೋಪಾಯದ ಉದ್ಯೋಗ ವಾಗಿದೆ. ಇಂದಿನ ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲೂ ಸಹ ಕೃಷಿಯು ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿದೆ. ಕೇವಲ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಹೊಂದಿದ ಭಾರತದ ದೇಶವು ಬ್ರಿಟೀಷರ ಆಗಮನದ ನಂತರ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಆಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆ, ಉಪಕಾಲುವೆಗಳ ಮೂಲಕ ಭೂಮಿಗೆ ನೀರುಣಿಸಲು ಪ್ರಯತ್ನಪಟ್ಟಿತು. ಕಾಲುವೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ಭೂಮಿಯು ಸಮತಟ್ಟಾಗಿಲ್ಲದ್ದರಿಂದ ಕೆಲವು ಪ್ರದೇಶಗಳು ನೀರಿನ ಸೌಲಭ್ಯದಿಂದ ವಂಚಿತವಾದವು. ಇದರಿಂದಾಗಿ ಆ ಪ್ರದೇಶದಲ್ಲಿ ಹೋರಾಟಗಳು ಹುಟ್ಟಿಕೊಂಡವು. ಇಂತಹ ಪರಿಣಾಮವಾಗಿ ನಾರಾಯಣಪುರ ಬಲದಂಡೆ ಹೋರಾಟವು ರಾಯಚೂರು ಪ್ರದೇಶದಲ್ಲಿ ನಡೆದ ಪ್ರಮುಖ ರೈತ ಹೋರಾಟವಾಗಿದೆ.

ಲಿಂಗಸೂಗರು, ದೇವದುರ್ಗ ಮತ್ತು ರಾಯಚೂರು ಪ್ರದೇಶದಲ್ಲಿ ನೀರಾವರಿ ಇಲ್ಲದೇ ರೈತರು ಸಂಕಷ್ಟದಲ್ಲಿದ್ದು ಭೂಮಿಗಳು ಬರಡಾಗಿದ್ದವು. ಇಂತಹ ಸಂದರ್ಭದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಗಾಗಿ ಜನರು ಸಣ್ಣಪುಟ್ಟ ಹೋರಾಟಗಳನ್ನು ಪ್ರಾರಂಭಿಸಿದರು. ನಂತರ ಚಂದ್ರಶೇಖರ ಬಾಳೆ, ಮಲ್ಲಯ್ಯ ಜಾಲಹಳ್ಳಿ, ವೈ. ರಾಮಣ್ಣ, ಆರ್. ಬಸವರಾಜ, ಇನ್ನೂ ಮುಂತಾದ ರೈತ ಮುಖಂಡರು ಹಲವಾರು ಕಾರ್ಯಕ್ರಮಗಳ ಮೂಲಕ ರೈತರಿಗೆ ಸಮಸ್ಯೆಗಳನ್ನು ಹಾಗೂ ಅವುಗಳನ್ನು ಎದುರಿಸಲು ಮಾರ್ಗೋಪಾಯ ಗಳನ್ನು ತಿಳಿಸುತ್ತಿದ್ದರು. ಇದರ ಪರಿಣಾಮವಾಗಿ, ೩ ತಾಲೂಕಿನ ಜನ ಹಲವಾರು ಸಂಘ ಸಂಸ್ಥೆಗಳೊಡನೆ ಸೇರಿ ದೊಡ್ಡ ಸಮಾವೇಶವನ್ನು ಏಪ್ರಿಲ್ ೧೦, ೧೯೯೩ರಂದು ದೇವದುರ್ಗ ತಾಲೂಕಿನ ಪ್ರದೇಶದಲ್ಲಿ ನಡೆಸಿದರು. ಸಮಾವೇಶಕ್ಕೆ ಹೆಚ್.ಡಿ. ದೇವೇಗೌಡರನ್ನು ಆಹ್ವಾನಿಸಿ ಸಮಸ್ಯೆಗಳನ್ನು ಗಮನಕ್ಕೆ ತಂದರು. ಹೀಗೆ ಸತತವಾಗಿ ೧೯೮೬ ರಿಂದ ೧೯೯೪ರವರೆಗೆ ನಡೆದ ಹೋರಾಟ ಕೊನೆಗೆ, ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ನಾರಾಯಣಪುರ ಬಲದಂಡೆ ಕಾಲುವೆ ಮಂಜೂರು ಮಾಡಿ ಕಾಲುವೆ ವ್ಯವಸ್ಥೆ ಜಾರಿಗೆ ತರಲಾಯಿತು. ನೀರನ್ನೇ ಕಾಣದೇ ಬರಡಾಗಿದ್ದ ಭೂಮಿಗಳು, ನಾರಾಯಣಪುರ ಬಲದಂಡೆ ಕಾಲುವೆಯಿಂದ ನೀರಾವರಿಗೆ ಒಳಪಟ್ಟವು. ಬಡತನದಿಂದ ಬಳಲುತ್ತಿದ್ದ ಹಿಂದುಳಿದ ಜಿಲ್ಲೆ ರಾಯಚೂರಿಗೆ

ಕಾಲುವೆಯಿಂದ ಸ್ವಲ್ಪಮಟ್ಟಿಗಾದರೂ ಅಭಿವೃದ್ಧಿ ಹೊಂದಲು, ಜನರು ಹೊಸ ಜೀವನ ಕ್ರಮವನ್ನು ಅಳವಡಿಸಿಕೊಳ್ಳಲು ಕಾರಣವಾಯಿತು.[೫] ಆದರೆ ಇತ್ತೀಚಿಗೆ ಕಾಲುವೆ ಪದೇ ಪದೇ ಒಡೆದು ಅನೇಕ ಸಮಸ್ಯೆಗಳಿಗೆ, ಹೋರಾಟಗಳಿಗೆ ಕಾರಣವಾಗುತ್ತಿದೆ.

ತುಂಗಭದ್ರಾ ಎಡದಂಡೆ ಕಾಲುವೆ ಹೋರಾಟ

ತುಂಗಭದ್ರಾ ಜಲಾಶಯದಿಂದ ರೈತರ ಭೂಮಿಗೆ ನೀರು ಹಾಯಿಸುವ ಕಾಲುವೆಗಳಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ ನೀರು ಈ ಭಾಗದ ರೈತರಿಗೆ ಪ್ರಮುಖ ಕಾಲುವೆಯಾಗಿದ್ದು, ಅವರ ಜೀವಾಳವಾಗಿದೆ ಎನ್ನಬಹುದು. ಆದರೆ ಕಾಲುವೆಗೆ ನೀರು ಹರಿಬಿಟ್ಟ ವರ್ಷದಿಂದ ಹಿಡಿದು ಇವತ್ತಿನವರೆಗೂ ಆಗಾಗ ಕಾಲುವೆಯು ಒಡೆಯುತ್ತಿರುವುದನ್ನು ಗಮನಿಸಿದರೆ ಕಾಲುವೆಯ ನಿರ್ಮಾಣದ ಗುಣಮಟ್ಟ ತಿಳಿಯುತ್ತದೆ. ಪದೇ ಪದೇ ಬರಗಾಲಕ್ಕೆ ಈಡಾಗುತ್ತಿದ್ದ ರಾಯಚೂರು ಜಿಲ್ಲೆಯ ಜನರಿಗೆ, ಕಾಲುವೆ ನಿರ್ಮಾಣ ಆರಂಭಗೊಂಡಾಗ ನಮ್ಮ ಜಿಲ್ಲೆಯಲ್ಲಿ ಭಾಗ್ಯೋದಯವಾಯಿತೆಂದು ಭಾವಿಸಿದ್ದ ರೈತರಿಗೆ ಕಾಲುವೆಯೆ ಶಾಪವಾಗಿ ಪರಿಣಮಿಸುತ್ತದೆಂದು ಯಾರೂ ಊಹಿಸಿರಲಿಲ್ಲ. ಏಕೆಂದರೆ ಇಲ್ಲಿಯವರೆಗೆ ಕಾಲುವೆ ಒಡೆದುದ್ದಕ್ಕೆ ಮತ್ತು ಆದ ನಷ್ಟಕ್ಕೆ ಲೆಕ್ಕವಿಲ್ಲ. ೧೯೭೨-೭೩ನೇ ವರ್ಷವೊಂದರಲ್ಲಿಯೇ ಇಪ್ಪತ್ತು ಸಲ ಕಾಲುವೆ ಒಡೆದಿತ್ತು. ಹೀಗಾಗಿ ಇದರ ಬಗ್ಗೆ ಲೆಕ್ಕವಿಡುವುದನ್ನು ಜನ ಮರತೇಬಿಟ್ಟರು. ಕಾಲುವೆ ಪದೇ ಪದೇ ದುರಸ್ತಿಗೆ ಒಳಗಾಗುತ್ತಿದ್ದು, ಇದರಿಂದ ರಾಜಕಾರಣಿಗಳಿಗೆ ಅಧಿಕಾರಿಗಳಿಗೆ, ಇಂಜಿನಿಯರ್‌ಗಳಿಗೆ ಸದಾ ಸುಗ್ಗಿಯೆನಿಸಿದರೆ ರೈತರ ಪಾಲಿಗೆ ಮಾತ್ರ ಮಹಾಮಾರಿಯಾಗಿ ವರವಾಗುವುದರ ಬದಲು ಶಾಪವಾಗಿ ಪರಿಣಮಿಸಿದೆ.

ಕಾಲುವೆಯ ಬಲವರ್ಧನೆಗಾಗಿ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಮತ್ತು ರಾಮಕೃಷ್ಣ ಹೆಗಡೆಯವರಿಗೆ ರೈತ ಸಂಘದಿಂದ ಕಾಲಕಾಲಕ್ಕೆ ಮನವಿಯನ್ನು ಸಲ್ಲಿಸಿದ್ದರು. ಆಗ ದೇವರಾಜ ಅರಸರ ಸರಕಾರ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ ಹೊರಮೈ ಬಲಸಂವರ್ಧನೆಗೆ ಮತ್ತು ಹೆಗಡೆ ಅವರ ಕಾಲದಲ್ಲಿ ಕಾಲುವೆಯ ಒಳಮೈ ಸಂವರ್ಧನೆಗಾಗಿ ಯೋಜನೆಗಳು ಸಿದ್ಧವಾದರೂ, ಕಾರ್ಯಗತವಾಗಲಿಲ್ಲ.

೧೯೭೮ರಲ್ಲಿ ಎಡದಂಡೆ ಮುಖ್ಯ ಕಾಲುವೆಯು ಒಡೆದಾಗ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯದಿಂದ ಯಾವ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಆಗ ರೈತ ಸಂಘದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು, ಎನ್. ಸುಂದರೇಶ್ ಮತ್ತು ಈ ಭಾಗದ ರೈತ ಸಂಘದ ಕಾರ್ಯಕರ್ತರು ಎಚ್.ಡಿ. ದೇವೇಗೌಡರನ್ನು ಭೇಟಿ ಮಾಡಿ ತತ್‌ಕ್ಷಣ ತ್ವರಿತ ಗತಿಯಲ್ಲಿ ಕಾಲುವೆಯ ದುರಸ್ತಿ ಕಾರ್ಯಕೈಗೊಳ್ಳಲು ಹಾಗೂ ಅಧಿಕಾರಿಗಳ ಮೇಲೆ ಕ್ರಮಕ್ಕೆ ಒತ್ತಾಯಿಸಿದರು. ಅದಕ್ಕೆ ಉತ್ತರವಾಗಿ ದೇವೇಗೌಡರು ಮೊದಲು ಆಗಬೇಕಾದದ್ದು ದುರಸ್ತಿ ಕಾರ್ಯ, ಮೊದಲು ಹಾಳಾಗುತ್ತಿರುವ ಬೆಳೆಯನ್ನು ಉಳಿಸೋಣ ಆಮೇಲೆ ಮುಂದಿನ ಮಾತು ಎಂದು ಹೇಳಿ ಸಮಾಧಾನಪಡಿಸಿ ಹೋದರೆ ಹೊರತು ದುರಸ್ತಿಯು ಆಗಲಿಲ್ಲ ಮತ್ತು ಅಧಿಕಾರಿಗಳ ವಿರುದ್ಧ ಕ್ರಮವೂ ಕೈಗೊಳ್ಳಲಿಲ್ಲ.[೬]

ಇದರ ಜೊತೆಗೆ ಭ್ರಷ್ಟ ಅಧಿಕಾರಿಗಳು ಆಂಧ್ರದಿಂದ ಲಂಚ ಪಡೆದು ಅವರಿಗೆ ರಾತ್ರಿ ಹೊತ್ತು ಕಾಲುವೆಯ ಮೂಲಕ ಒಪ್ಪಂದಕ್ಕಿಂತ ಹೆಚ್ಚಿನ ನೀರನ್ನು ಬಿಡುವುದು ನಡೆದೇ ಇತ್ತು. ಇದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಸುಮಾರು ಇಪ್ಪತ್ತೈದು ಸಾವಿರ ರೈತರು ಆಣೆಕಟ್ಟಿನ ಬಳಿ ಸೇರಿ ಪ್ರತಿಭಟಿಸಿದಾಗ ನೀರು ಬಿಡುವುದನ್ನು ನಿಲ್ಲಿಸಲಾಯಿತು. ರೈತರೆಲ್ಲರೂ ಸಂಭ್ರಮದಿಂದ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿದ ಕೂಡಲೇ ಮತ್ತೆ ಆಂಧ್ರಕ್ಕೆ ನೀರು ಬಿಡಲಾಯಿತು. ಇದು ಪದೇ ಪದೇ ಮುಂದುವರೆದಾಗ ರಾಜ್ಯ ರೈತ ಸಂಘದ ಬಲ್ಲಟಗಿ ಬಸವರಾಜ, ಹರ್ವಿಯ ರಾಜಶೇಖರಪ್ಪ, ಸಿಂಧನೂರಿನ ಹನುಮನಗೌಡ ಮೊದಲಾದವರು ಆಮರಣ ಉಪವಾಸ ಕೈಗೊಂಡು ಹೋರಾಟ ಮಾಡಿದ್ದರು. ಹೀಗಾಗಿ ಸ್ವಲ್ಪ ದಿನ ಆಂಧ್ರಕ್ಕೆ ಅಕ್ರಮವಾಗಿ ನೀರು ಬಿಡುವುದನ್ನು ನಿಲ್ಲಿಸಲಾಗಿತ್ತು. ಆದರೆ ಇತ್ತೀಚಿಗೆ ಮತ್ತೆ ರಾತ್ರಿ ಹೊತ್ತು ಅಧಿಕಾರಿಗಳು ಆಂಧ್ರಕ್ಕೆ ಅಕ್ರಮವಾಗಿ ನೀರು ಬಿಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ ಹಾಗೂ ಇದರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳದಿರುವುದು ರೈತರ ಪಾಲಿಗೆ ದೊಡ್ಡ ಸಮಸ್ಯೆಯಾಗಿದೆ. ಇದರ ಪರಿಣಾಮವಾಗಿ ಇಲ್ಲಿನ ರೈತರಿಗೆ ನೀರಿನ ಕೊರತೆ ಉಂಟಾಗಿ ಬೆಳೆ ಒಣಗುವುದು ಮುಂತಾದ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ತುಂಗಭದ್ರಾ ಎಡದಂಡೆ ಕಾಲುವೆಯ ಎರಡನೇ ಹಂತದ ಆಧುನೀಕರಣ ಕಾರ್ಯವು ಸಹ ಗೊಂದಲ, ಗೋಜಲುಗಳ ಗೂಡಾಗಿದೆ. ಅಚ್ಚುಕಟ್ಟು ಬಲವರ್ಧನೆ ಹಾಗೂ ರೈತರಿಗೆ ನೀರು ಖಾತರಿ ಹೆಸರಿನಲ್ಲಿ ಭ್ರಷ್ಟಾಚಾರ ನಡೆದಿರುವ ಆರೋಪ ಕೇಳಿ ಬರುತ್ತಿದೆ. ಏಕೆಂದರೆ ಕಾಮಗಾರಿ ನಡೆಯುವಾಗ ಗುಣಮಟ್ಟದ ತಪಾಸಣೆಗೆ 'ಕೋರ್‌ಟೆಸ್ಟಿಂಗ್ ರೋಲರ್' ಬಳಸದೇ ಇರುವುದು, ಕಾಮಗಾರಿ ಮುಗಿದ ಬೆನ್ನಲ್ಲೇ ೩೨ನೇ ವಿತರಣಾ ಕಾಲುವೆ ಬಿರುಕು ಬಿಟ್ಟಿರುವುದು ಕಂಡು ಬಂದಿದೆ. ಮುಖ್ಯ ವಿತರಣೆ ಮತ್ತು ಉಪ ಕಾಲುವೆಗಳ ಆಧುನೀಕರಣ ಕಾಮಗಾರಿಗೆ ೨೫೧.೪೫ ಕೋಟಿ ರೂ. ಅನುದಾನ ಮಂಜೂರಾಗಿದೆ. ಆದರೆ ಕಾಲಾವಕಾಶದ ನೆಪವೊಡ್ಡಿ ಎಲ್ಲ ನಿಯಮಗಳನ್ನು ಬದಿಗಿಟ್ಟು ಆತುರದಲ್ಲಿ ಕಾಮಗಾರಿಕೆಯನ್ನು ಮಾಡಲಾಗುತ್ತಿದೆ ಎನ್ನುವ ಆರೋಪ ಕೇಳಿ ಬಂದಿದೆ. ಇಂತಹ ಬೆಳವಣಿಗೆಯನ್ನು ನೋಡಿದಾಗ ಅಚ್ಚುಕಟ್ಟು ಪ್ರದೇಶದ ಭವಿಷ್ಯಕ್ಕಿಂತ, ರೈತರ ಹಿತರಕ್ಷಣೆಗಿಂತ ತೆರೆಮರೆ ಪ್ರಭಾವಿಗಳ ಹಿತಾಸಕ್ತಿ ಕಾಪಾಡುವುದೇ ಪ್ರಧಾನ ಉದ್ದೇಶವಾದಂತಿದೆ. ಕಾಲುವೆ ಒಡೆದರೆ ರೈತರಿಗಷ್ಟೇ ಹಾನಿಯಾಗುವುದಿಲ್ಲ ಬದಲಾಗಿ ಇಡೀ ಕರ್ನಾಟಕ ರಾಜ್ಯಕ್ಕೆ, ರಾಷ್ಟ್ರಕ್ಕೆ ಹಾನಿಯಾಗುತ್ತದೆ ಎಂಬುದು ಸರಕಾರಕ್ಕಾಗಲಿ, ಇಲ್ಲಿನ ಶಾಸಕರಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಯುತ್ತಿಲ್ಲ ಎನ್ನುವುದು ಗಂಭೀರವಾಗಿ ವಿಚಾರ ಮಾಡಬೇಕಾದ ಅಂಶವಾಗಿದೆ.

ಹಿರೇಬಗನಾಳ ರೈತ ಹೋರಾಟ

ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ೨೦೦೨ರಲ್ಲಿ ಕೊಪ್ಪಳ ತಾಲೂಕಿನ 'ಹಿರೇಬಗನಾಳ' ಗ್ರಾಮದಲ್ಲಿ ನಡೆದ ರೈತ ಹೋರಾಟ ಈ ಭಾಗದ ಅತ್ಯಂತ ಮಹತ್ವದ ಚಳವಳಿಯಾಗಿದೆ. ಚಳವಳಿಯ ನೇತೃತ್ವವನ್ನು ವಹಿಸಿದ್ದ ಆಗಿನ ಬಳ್ಳಾರಿ ಜಿಲ್ಲಾ ರೈತ ಸಂಘದ ಅಧ್ಯಕ್ಷರು ಮತ್ತು ಪ್ರಸ್ತುತ ಕರ್ನಾಟಕ

ರಾಜ್ಯ ರೈತಸಂಘ ಮತ್ತು ಹಸಿರು ಸೇನೆ ಉಪಾಧ್ಯಕ್ಷರು ಆಗಿರುವ ಜೆ.ಎಂ. ವೀರಸಂಗಯ್ಯನವರನ್ನು ಸಂದರ್ಶಿಸಿದಾಗ ಅವರು ಹೋರಾಟದ ಕಾರಣಗಳು, ಹೋರಾಟದ ಗತಿ ಮತ್ತು ಪರಿಣಾಮಗಳ ಬಗ್ಗೆ ವಿಸ್ತೃತವಾದ, ವಿಶ್ಲೇಷಣಾತ್ಮಕ ಮಾಹಿತಿಯನ್ನು ನೀಡಿದರು.

ಅವೈಜ್ಞಾನಿಕ ಆಧಾರದ ಮೇಲೆ ವಿದ್ಯುತ್ ಬಿಲ್‌ನ್ನು ನಿರ್ಧರಿಸಿ ಯಾವುದೇ ಕಾರಣ ನೀಡದೇ ರೈತರಿಂದ ಹೆಚ್ಚುವರಿ ಹಣವನ್ನು ವಸೂಲಿ ಮಾಡುತ್ತಿದ್ದುದು ಹೋರಾಟಕ್ಕೆ ಕಾರಣವಾಗಿತ್ತು. ೨೦೦೧ ಮತ್ತು ೨೦೦೨ರಲ್ಲಿ ಈ ಭಾಗದ ರೈತರು ವಿದ್ಯುತ್ ತಾರತಮ್ಯದಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ನಗರಗಳಿಗೆ ೨೪ ತಾಸು ವಿದ್ಯುತ್ ಪೂರೈಕೆಯಾದರೆ, ಗ್ರಾಮಗಳಿಗೆ ಕೇವಲ ೩ ತಾಸು ವಿದ್ಯುತ್ ಪೂರೈಕೆಯಾಗುತ್ತಿತ್ತು. ಹೀಗೆ ತಾರತಮ್ಯದ ವಿದ್ಯುತ್ ಪೂರೈಕೆ ಒಂದು ಕಡೆಯಾದರೆ, ಇನ್ನೊಂದೆಡೆ ಮನೆಗಳಿಗೆ ಸಂಪರ್ಕ ಕೊಟ್ಟಿರುವ ವಿದ್ಯುತ್‌ಗೆ ಪ್ರತಿ ತಿಂಗಳ ಬಿಲ್‌ನಲ್ಲಿ ೧೫ ರೂ.ಗಳನ್ನು ಹೆಚ್ಚಿಗೆ ಹಾಕಲಾಗುತ್ತಿತ್ತು. ಹೆಚ್ಚಿನ ಹಣವನ್ನು ವಿಧಿಸಲು ಕಾರಣವನ್ನು ಕೇಳಿದಾಗ ರಾಜ್ಯ ಸರಕಾರವಾಗಲಿ ಸಂಬಂಧಪಟ್ಟ ಅಧಿಕಾರಿಗಳಾಗಲಿ ಸಮರ್ಪಕವಾದ ಉತ್ತರವನ್ನು ಕೊಡದೆ 'ಮೆಂಟೇನೆನ್ಸ್ ಚಾರ್ಜ್' ಎಂದು ಹೇಳುತ್ತಿದ್ದರು. ಇದನ್ನು ವಿರೋಧಿಸಿ ರಾಜ್ಯ ರೈತಸಂಘ ವಿದ್ಯುತ್ ಬಿಲ್‌ನ್ನು ಪಾವತಿಸದಂತೆ ರಾಜ್ಯಾದ್ಯಂತ ಹೋರಾಟ ಆರಂಭಿಸಿತು. ಜೊತೆಗೆ ಮನೆಗಳಲ್ಲಿ ಹಾಕಿರುವ ಮೀಟರ್‌ಗಳನ್ನು ಸಹ ಕಿತ್ತು ಹಾಕಿ ಪ್ರತಿಭಟಿಸಿತು.

ಕೊಪ್ಪಳ ಜಿಲ್ಲೆಯಲ್ಲಿ ಹೋರಾಟ ಬಹಳ ತೀವ್ರವಾಗಿ ನಡೆಯಿತು. ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದ ತೊಂಬತ್ತರಷ್ಟು ರೈತರು ತಮ್ಮ ಮನೆಗಳಲ್ಲಿನ ವಿದ್ಯುತ್ ಮೀಟರ್‌ನ್ನು ಕಿತ್ತು ಹಾಕಿ ಕೆಪಿಟಿಸಿಎಲ್ ಕಚೇರಿ ಮುಂದೆ ಗುಡ್ಡೆ ಹಾಕಿ ಪ್ರತಿಭಟಿಸಿದರು. ಪ್ರತಿಭಟನೆ ಹೆಚ್ಚಾದಾಗ, ಜಿಲ್ಲೆಯ ಡಿ.ಸಿ. ಮತ್ತು ಕೆಪಿಟಿಸಿಎಲ್ ಅಧಿಕಾರಿಗಳು ಗ್ರಾಮಕ್ಕೆ ಬಂದು, ವಿದ್ಯುತ್ ಬಿಲ್‌ನ್ನು ತತಕ್ಷಣ ಪಾವತಿಸದಿದ್ದರೂ ಪರವಾಗಿಲ್ಲ ಆದರೆ ಮನೆಗಳಿಗೆ ಮೀಟರನ್ನು ಅಳವಡಿಸಿಕೊಳ್ಳುವಂತೆ ಒತ್ತಾಯ ಮಾಡತೊಡಗಿದರು. ಆದರೆ ಗ್ರಾಮದ ಜನರೆಲ್ಲಾ ಇದಕ್ಕೆ ಒಪ್ಪದಿದ್ದಾಗ ಅಧಿಕಾರಿಗಳು ಜೂನ್ ೨೭ ರಂದು ವಿದ್ಯುತ್ ಮೀಟರ್‌ಗಳನ್ನು ಪುನಃ ಮನೆಗೆ ಅಳವಡಿಸಲಾಗುವುದೆಂದು ಘೋಷಿಸಿದರು.

ಜೂನ್ ೨೭ರ ಬೆಳಿಗ್ಗೆ ಕೆಪಿಟಿಸಿಎಲ್ ಅಧಿಕಾರಿಗಳು ಹದಿನೈದು ಪೊಲೀಸ್ ವ್ಯಾನ್‌ಗಳ ಬಂದೋಬಸ್ತಿನಲ್ಲಿ ಬಂದು ಮೀಟರ್ ಅಳವಡಿಕೆಗೆ ಮುಂದಾದಾಗ, ರೈತರು ಮತ್ತು ಸಂಘಟನೆಗಳ ಮುಖ್ಯಸ್ಥರು ಇದನ್ನು ವಿರೋಧಿಸಿದಾಗ, ಪೊಲೀಸರು ಜನರ ಮೇಲೆ ವಿನಾಕಾರಣ ನಾಲ್ಕು ಗಂಟೆಗಳ ಕಾಲ ಲಾಠಿ ಚಾರ್ಜು ಮಾಡಿದರು. ರೈತ ಮುಖಂಡರಾದ ಜಿ.ಎಂ. ವೀರಸಂಗಯ್ಯ, ಗವಿಸಿದ್ಧಪ್ಪ ಹೂಗಾರ, ಪೀತಾಂಬರಪ್ಪ, ಮದ್ದಾನಯ್ಯ ಮುಂತಾದ ೭೦೦ ರೈತರನ್ನು ಬಂಧಿಸಿ ಕರೆದುಕೊಂಡು ಹೋಗಲಾಯಿತು. ಇನ್ನು ಬಗನಾಳ ಗ್ರಾಮದಲ್ಲಿ ಲಾಠಿ ಚಾರ್ಜ್ ಮಾಡಿದ್ದ ಪೊಲೀಸರು ಹೆಣ್ಣುಮಕ್ಕಳು, ವೃದ್ಧರು ಎನ್ನದೆ ಎಲ್ಲರನ್ನು ಹೊಡೆದಿದ್ದರು. ನಂತರ ರೈತ ಮುಖಂಡರನ್ನು ಒಳಗೊಂಡಂತೆ ೩೭ ಜನರ ಮೇಲೆ

ಮೊಕದ್ದಮೆಯನ್ನು ಹೂಡಲಾಯಿತು. ಬಂಧಿತರಾದ ಜೆ.ಎಂ. ವೀರಸಂಗಯ್ಯ ಮುಂತಾದವರು ಪೊಲೀಸರಿಗೆ ಸಹಕರಿಸಲಿಲ್ಲ ಎನ್ನುವ ನೆಪ ಹೇಳಿ ಠಾಣೆಯಲ್ಲಿ ಚಿತ್ರಹಿಂಸೆ ನೀಡಿ ಹೋರಾಟದಿಂದ ಹಿಂದೆ ಸರಿಯುವಂತೆ ಒತ್ತಾಯಿಸಲಾಯಿತು. ಇದಕ್ಕೆ ಇವರು ಒಪ್ಪದಿದ್ದಾಗ ಇವರನ್ನೇ ಪ್ರಮುಖ ಆರೋಪಿಯನ್ನಾಗಿ ಮಾಡಿ ಮೊಕದ್ದಮೆಯನ್ನು ದಾಖಲಿಸಿಕೊಂಡರು. ಪೊಲೀಸರ ದೌರ್ಜನ್ಯವನ್ನು ವಿರೋಧಿಸಿ ರಾಜ್ಯ ರೈತಸಂಘವು ಹೈಕೋರ್ಟ್‌ನಲ್ಲಿ ದಾವೆ ಹೂಡಿತು. ರೈತರ ಮೇಲೆ ಮಾಡಿದ ಆಪಾದನೆಗಳಲ್ಲಿ ಕೆಲವು ಖುಲಾಸೆಗೊಂಡರೆ ಕೆಲವು ಮೊಕದ್ದಮೆಗಳು ಇನ್ನೂ ಕೂಡ ನಡೆಯುತ್ತಿವೆ. ಇಂದಿಗೂ ಕೂಡ ಮೊಕದ್ದಮೆಗಳ ವಿಚಾರವಾಗಿ ನಾವು ಕೋರ್ಟ್‌ಗೆ ಹಾಜರಾಗುತ್ತಿದ್ದೇವೆಂದು ಜೆ.ಎಂ. ವೀರಸಂಗಯ್ಯ ತಮ್ಮ ಸಂದರ್ಶನ ಸಮಯದಲ್ಲಿ ತಿಳಿಸಿದರು.[೬]

ಸಿರಗುಪ್ಪ ತಾಲೂಕು ಬಾಗೇವಾಡಿ ಕಾಲುವೆ ಕೊನೆ ಭಾಗದ ರೈತರ ಹೋರಾಟ

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕು ಹಗರಿಹಳ್ಳ ಮತ್ತು ತುಂಗಭದ್ರಾ ನದಿಯ ಕಾಲುವೆಗಳಿಂದ ಸುತ್ತುವರಿಯುವ ಮೂಲಕ ಸಮೃದ್ಧ ಮತ್ತು ಭತ್ತದ ಕಣಜ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆದರೆ ತುಂಗಭದ್ರಾ ಎಡದಂಡೆಯ ಬಾಗೇವಾಡಿ ಕಾಲುವೆಯ ಪೊಪ್ಪನಾಳು, ಅರಳಿಗನೂರು, ಶ್ರೀನಗರ ಕ್ಯಾಂಪ್, ಬಗ್ಲೂರು, ಚಾಣಕನೂರು, ಕರ್ಚಿಗನೂರು, ಸಿರಗುಪ್ಪ ಗ್ರಾಮಗಳಿಗೆ ಸೇರಿದ ಸುಮಾರು ೩೨೦೦ ಎಕರೆ ಜಮೀನುಗಳಿಗೆ ಸಮರ್ಪಕ ನೀರು ದೊರೆಯದೆ ರೈತರು ದಿಕ್ಕು ತೋಚದಂತಾಗಿದೆ. ಹೊಲ ಮನೆ ಜಾನುವಾರುಗಳನ್ನು ಮಾರಾಟ ಮಾಡಿ ಜೀವನ ನಡೆಸುವ ಪರಿಸ್ಥಿತಿ ಎದುರಾಗಿದೆ. ಈ ಭಾಗದ ೩೨೦೦ ಎಕರೆ ಜಮೀನುಗಳಿಗೆ ನಿರಂತರವಾಗಿ ಸುಗ್ಗಿ ಮತ್ತು ಬೇಸಿಗೆ ಹಂಗಾಮಿಗೆ ನೀರು ಸಮರ್ಪಕವಾಗಿ ಸರಬರಾಜು ಆಗದೇ ಇರುವುದರಿಂದ ನೀರಿಗಾಗಿ ಧರಣಿ ಹಮ್ಮಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ.

ಬೇಸಿಗೆ ಬೆಳೆಗೆ ಪ್ರತಿ ವರ್ಷ ಜಿಲ್ಲಾ ನೀರಾವರಿ ಇಲಾಖೆಯ ಅಧಿಕಾರಿಗಳು ೧ ಸಾವಿರ ಎಕರೆಗೆ ಮಾತ್ರ ನಾಟಿ ಮಾಡಲು ಭರವಸೆ ನೀಡುತ್ತಾರಾದರೂ, ನಾಟಿ ಮಾಡಿದ ಬೆಳೆಗೆ ಕೊನೆ ಭಾಗದ ಭೂಮಿಗೆ ನೀರು ದೊರೆಯದೆ ರೈತನ ಮುಖದಲ್ಲಿ ಚಿಂತೆ ಕಾಣುತ್ತಿದೆ. ಸಮರ್ಪಕ ನೀರು ಪೂರೈಕೆ ಇಲ್ಲದೆ ಜಾನುವಾರುಗಳಿಗೆ ಮೇವು, ನೀರಿನ ಕೊರತೆ ಅನುಭವಿಸಿದರೆ, ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಕಾಲುವೆಯ ನೀರೇ ಶುದ್ಧ ಕುಡಿವ ನೀರು. ಆದರೆ ಬಾಗೇವಾಡಿ ಕಾಲುವೆಯ ಇಲ್ಲಿನ ರೈತರಿಗೆ ಹೊಲಗಳಿಗೂ ನೀರಿಲ್ಲ ಮತ್ತು ಕುಡಿಯಲು ನೀರಿಲ್ಲದ ಪರಿಸ್ಥಿತಿ ಎದುರಾಗಿದೆ. ಕಾಲುವೆಯ ಮೇಲ್ಭಾಗದಲ್ಲಿನ ಗ್ರಾಮಗಳಲ್ಲಿ ಬಹುತೇಕ ಪ್ರದೇಶಗಳಲ್ಲಿ ಬೆಳೆಯುವ ಅನಧಿಕೃತ ಬೆಳೆಗಳಿಗೆ ಅಲ್ಲಿನ ಜನರು ಅಕ್ರಮವಾಗಿ ಬಳಸುವ ನೀರಿನಿಂದ ಇಂತಹ ಪರಿಸ್ಥಿತಿ ಎದುರಾಗಿದೆ ಎಂದು ರೈತರು ದೂರುತ್ತಾರೆ. ಕಾಲುವೆ ಕೊನೆ ಭಾಗದ ರೈತರ ಜಮೀನುಗಳಿಗೆ ನೀರು ಪೂರೈಕೆಯಾಗದಿರುವ ಬಗ್ಗೆ ತಳಮಟ್ಟದ ಅಧಿಕಾರಿಗಳಿಂದ ಹಿಡಿದು ಮುಖ್ಯ ಅಧಿಕಾರಿಗಳಿಗೂ ತಿಳಿದಿದೆ. ಆದರೆ ಈ ಬಗ್ಗೆ ಮಾತ್ರ ಯಾರೂ ಕ್ರಮಕೈಗೊಳ್ಳಲು ಮುಂದಾಗಿಲ್ಲ. ಅಧಿಕಾರಿಗಳು ರೈತರಿಗೆ ಸದಾ ಭರವಸೆ ನೀಡುವುದೇ ಕಾಯಕವಾಗಿದೆ. ಇದರಿಂದ ಬೇಸತ್ತಿರುವ ರೈತರು

ತಾಲೂಕು ಕಚೇರಿ ಇಲ್ಲವೇ ನೀರಾವರಿ ಕಚೇರಿ ಮುಂಭಾಗದಲ್ಲಿ ಧರಣೆ ಅನಿವಾರ್ಯವಾಗಿದೆ. ಇದು ಅಧಿಕಾರಿಗಳಿಗೆ ಬಿಸಿ ತಗಲಿದಂತಾಗಿ ಕಾಲುವೆಯ ೨೩ನೇ ಕಿ.ಮೀ.ಗೆ ೩೦ ರಿಂದ ೪೦ ಕ್ಯೂಸೆಕ್ ನೀರು ಬರುತ್ತದೆ. ಆದರೆ ಇದು ನಿರಂತರವಾಗಿರುವುದಿಲ್ಲ. ಹಾಗಾಗಿ ಕಾಲುವೆಯ ಕೊನೆ ಭಾಗದ ರೈತರ ಜಮೀನುಗಳಿಗೆ ಸಮರ್ಪಕ ನೀರು ಸರಬರಾಜು ಮಾಡುವಂತೆ ಒತ್ತಾಯಿಸಿ ಧರಣೆ ಆರಂಭಿಸಿದ್ದಾರೆ. ಆದರೆ ರೈತರ ಪರವಾಗಿ ಇದುವರೆಗೆ ಜಿಲ್ಲೆಯ ಯಾವ ಮಂತ್ರಿಗಳು, ಶಾಸಕರು, ರಾಜಕೀಯ ಮುಖಂಡರು, ಈ ಬಗ್ಗೆ ಗಮನ ನೀಡಿಲ್ಲದಿರುವುದು ಗೊತ್ತಾಗುತ್ತಿದೆ.

ಬಾಗೇವಾಡಿ ಕಾಲುವೆಯ ಕೊನೆ ಭಾಗದ ರೈತ ಹೋರಾಟ ಸಮಿತಿ ಅಧ್ಯಕ್ಷರಾಗಿರುವ ಎನ್. ಮೋಹನಕುಮಾರ್ ಇಲ್ಲಿನ ಸಮಸ್ಯೆ ಬಗ್ಗೆ ಹೇಳುತ್ತಾ, ಕಾಲುವೆಯ ಕೊನೆಭಾಗದ ರೈತರು ತೊಂದರೆ ಅನುಭವಿಸುತ್ತಿರುವುದು ಇಂದಿನದಲ್ಲ. ೨೦ ವರ್ಷಗಳಿಂದಲೂ ನೀರಿಗಾಗಿ ಹೋರಾಟ ಮಾಡಿದರೂ ಫಲ ಇಲ್ಲದಾಗಿದೆ ಎನ್ನುತ್ತಾರೆ. ಆದರೆ ಕೆಲ ಸಲ ಕಾಲುವೆಯ ಮೇಲ್ಭಾಗದಲ್ಲಿ ಕಡಿಮೆ ನೀರು ಸರಬರಾಜು ಮಾಡುವುದರಿಂದ ಹಾಗೂ ಅಚ್ಚುಕಟ್ಟಲ್ಲದ ಪ್ರದೇಶದಲ್ಲಿ ರೈತರು ಹೆಚ್ಚಾಗಿ ಭತ್ತ ನಾಟಿ ಮಾಡುತ್ತಿರುವುದು ಕೊನೆ ಭಾಗದ ರೈತರಿಗೆ ತೊಂದರೆ ಆಗಲು ಕಾರಣ ಎನ್ನುವುದು ನೀರಾವರಿ ಇಲಾಖೆಯ ಸಹಾಯಕ ಇಂಜಿನಿಯರ್ ಅವರ ವಾದವಾಗಿದೆ. ಒಟ್ಟಿನಲ್ಲಿ ಬಾಗೇವಾಡಿ ಕೊನೆ ಭಾಗದ ರೈತರ ಜಮೀನುಗಳಿಗೆ ಸಮರ್ಪಕ ನೀರು ದೊರೆಯಬಹುದೇ, ನೀರಿಗಾಗಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣೆ, ಉಪವಾಸಗಳಿಗೆ ಶಾಶ್ವತ ಮುಕ್ತಿ ದೊರಕುವುದೇ ಅಥವಾ ಇವರ ಹೋರಾಟ ಮತ್ತೊಂದು ಬೃಹತ್ ಚಳುವಳಿ ಆಗಿ ಮಾರ್ಪಡುವುದೇ ಎನ್ನುವುದು ಪ್ರಸ್ತುತ ಸಮಸ್ಯೆಯಾಗಿದೆ.

ಮಲ್ಲಾಬಾದ ಏತ ನೀರಾವರಿಗಾಗಿ ಹೋರಾಟಗಳು

ಬರಗಾಲ ಹಾಗೂ ಅನಾವೃಷ್ಟಿಗೆ ಹೆಸರಾಗಿರುವ ಗುಲಬರ್ಗಾ ಜಿಲ್ಲೆಯಲ್ಲಿ ನೀರಾವರಿಗೆ ಅವಕಾಶಗಳು ಬಹಳ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಜಾರಿಯಾಗಬೇಕಾದ ನೀರಾವರಿ ಯೋಜನೆಗಳು ಸರಿಯಾಗಿ ಜಾರಿಯಾಗದೆ ಹಾಗೆ ಉಳಿದಿವೆ ಹಾಗೂ ಯೋಜನೆಗಳ ಜಾರಿಗಾಗಿ ರೈತರು ಬೀದಿಗಿಳಿದು ಹೋರಾಟ ಮಾಡಬೇಕಾದ ಪರಿಸ್ಥಿತಿ ಅನೇಕ ಬಾರಿ ಉದ್ಭವವಾಗಿದೆ. ಇಂತಹ ಹೋರಾಟಗಳಲ್ಲಿ ಅತೀ ಪ್ರಮುಖ ವಾದುದೆಂದರೆ ಮಲ್ಲಾಬಾದ ಏತ ನೀರಾವರಿಗಾಗಿ ಹೋರಾಟ.

ಕೃಷ್ಣ ಮೇಲ್ದಂಡೆ ಯೋಜನೆ ಮೂಲಕ ನೀರಾವರಿ ಪ್ರಾರಂಭವಾದಾಗ ಗುಲಬರ್ಗಾ ಜಿಲ್ಲೆಯ ಜೇವರ್ಗಿ ಸುತ್ತಮುತ್ತಲಿನ ಗ್ರಾಮಗಳ ಜನರು ತಮಗೂ ನೀರಾವರಿ ಸೌಲಭ್ಯ ದೊರಕುವುದೆಂದು ಮತ್ತು ಇದರಿಂದ ತಮ್ಮ ಜೀವನ ಬದಲಾಗುತ್ತದೆಂದು, ನೆಮ್ಮದಿಯ ಬದುಕು ಸಾಧ್ಯವೆಂದು ತಿಳಿದಿದ್ದರು. ಆದರೆ ಜೇವರ್ಗಿ ತಾಲೂಕಿನ ಸುಮಾರು ೪೦ ಹಳ್ಳಿಗಳು ಎತ್ತರ ಪ್ರದೇಶದಲ್ಲಿ ಇರುವುದರಿಂದ ನೀರಿನ ಸೌಲಭ್ಯದಿಂದ ವಂಚಿತರಾದರು. ಸಮಸ್ಯೆಯನ್ನು ಬಗೆಹರಿಸಲು ಸರಕಾರವಾಗಲಿ ಇಲ್ಲಿನ ಜನಪ್ರತಿನಿಧಿಗಳಾಗಲಿ ಯಾವುದೇ ಕ್ರಮಕೈಗೊಳ್ಳಲು ಮುಂದಾಗಲಿಲ್ಲ. ಆಗ ರಾಜಕಾರಣಿ ಹಾಗೂ ಪ್ರಗತಿಪರ ಚಿಂತಕರಾದ ಶ್ರೀಕೇದಾರಲಿಂಗಯ್ಯ

ಹಿರೇಮಠ ಎನ್ನುವವರು ಮಲ್ಲಾಬಾದ ಏತ ನೀರಾವರಿ ಬಗ್ಗೆ ಚಿಂತನೆ ಹಾಗೂ ಅಧ್ಯಯನ ಮಾಡಿ ಹಲವಾರು ಇಂಜಿನಿಯರ್‌ಗಳನ್ನು, ನೀರಾವರಿ ತಜ್ಞರನ್ನು ಭೇಟಿ ಮಾಡಿ ಅವರಿಂದ ಸಲಹೆ ಸೂಚನೆಗಳನ್ನು ಪಡೆದರು. ಮಲ್ಲಾಬಾದ ಏತ ನೀರಾವರಿಯಿಂದ ಈ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಿದೆ ಎಂದು ತಿಳಿದು ಪ್ರತಿ ಹಳ್ಳಿಗಳಿಗೆ ಹೋಗಿ ವಿಚಾರವನ್ನು ಸಂಬಂಧಪಟ್ಟ ರೈತರ ಜೊತೆ ಹಂಚಿಕೊಂಡರು. ಯೋಜನೆ ಆರಂಭವಾಗಬೇಕಾದರೆ ಸರಕಾರದ ಗಮನ ಸೆಳೆಯಲು ದೊಡ್ಡ ಹೋರಾಟ ಅನಿವಾರ್ಯ ಎಂಬುದನ್ನು ಮನದಟ್ಟುಮಾಡಿಕೊಟ್ಟು ರೈತರನ್ನು, ರೈತ ಮುಖಂಡರನ್ನು, ಹೋರಾಟಕ್ಕೆ ಸಜ್ಜುಗೊಳಿಸಿದರು. ಹೋರಾಟಕ್ಕೆ ರೈತ ಸಂಘಗಳು ಬೆಂಬಲ ನೀಡಿದ ಫಲವಾಗಿ ಮಲ್ಲಾಬಾದ ಏತ ನೀರಾವರಿ ಬೇಡಿಕೆಗೆ ಹೋರಾಟ ಆರಂಭವಾಯಿತು.

ಮಲ್ಲಾಬಾದ ಏತ ನೀರಾವರಿಗಾಗಿ ನಡೆದ ಚಳವಳಿಯು ನಾನಾ ಹಂತಗಳಲ್ಲಿ ಹಾಗೂ ನಾನಾ ರೂಪಗಳಲ್ಲಿ ನಡೆಯಿತು. ೨೦೦೩ರಲ್ಲಿ ಜೆಡಿಎಸ್ ಪಕ್ಷದ ನಾಯಕರಾಗಿದ್ದ ಶ್ರೀ ಕೇದಾರಲಿಂಗಯ್ಯ ಹಿರೇಮಠ ಅವರೊಂದಿಗೆ ಚಂದ್ರಶೇಖರ ಹೊಸಮನಿ, ಎಸ್.ಎಸ್. ಸಲಗರ ಮುಂತಾದವರ ನೇತೃತ್ವದಲ್ಲಿ, ಜನ ಜಾಗೃತಿ ಮೂಡಿಸಲು ಮತ್ತು ಸರಕಾರದ ಗಮನ ಸೆಳೆಯಲು ಜೇವರ್ಗಿ ತಾಲೂಕಿನ ೪೦ ಹಳ್ಳಿಗಳಿಗೆ ಪಾದಯಾತ್ರೆ ಕೈಗೊಂಡರು.[೮] ನಂತರ ಹೋರಾಟಕ್ಕೆ ವಿಶೇಷ ಮೆರಗು ನೀಡಲು ೨೦೦೪ರಲ್ಲಿ ಎತ್ತಿನ ಬಂಡಿಯ ಜಾಥಾ ಆರಂಭಿಸಿದ ರಾಜಕೀಯ ಮುಖಂಡರು, ರೈತರು, ಕಾರ್ಯಕರ್ತರನ್ನೊಳಗೊಂಡ ಜನರ ದಂಡು ತಹಶೀಲ್ದಾರರ ಕಚೇರಿಗೆ ಮುತ್ತಿಗೆ ಹಾಕಿ ಧರಣಿ ನಡೆಸಿದರು. ಇಂತಹ ಹೋರಾಟದ ಫಲವಾಗಿ ಆಗಿನ ಲೋಕೋಪಯೋಗಿ ಸಚಿವರಾಗಿದ್ದ ಶ್ರೀ ಧರ್ಮಸಿಂಗ್‌ರವರು ಶೀಘ್ರದಲ್ಲಿ ಮಲ್ಲಾಬಾದ ಏತ ನೀರಾವರಿ ಯೋಜನೆ ಜಾರಿಗೊಳಿಸಿ ಒಂದು ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಭರವಸೆ ನೀಡಿದರು. ಆದರೆ ಆಶ್ವಾಸನೆಯಿಂದ ತೃಪ್ತರಾಗದ ರೈತರು ನೀರಾವರಿ ಯೋಜನೆ ಜಾರಿಗಾಗಿ ಹೋರಾಟವನ್ನು ತೀವ್ರಗೊಳಿಸಿದರು. ಆಗ ೩೦.೧.೨೦೦೪ರಲ್ಲಿ ತಾಂತ್ರಿಕ ಸಮೀಕ್ಷೆ ನಡೆಸಲು ರಾಜ್ಯ ಸರಕಾರ ಆದೇಶ ಹೊರಡಿಸಿತು.[೯]

ಹೋರಾಟದ ಒತ್ತಡಕ್ಕೆ ಮಣಿದ ರಾಜ್ಯ ಸರಕಾರ ಏತ ನೀರಾವರಿಯ ತಾಂತ್ರಿಕ ಸಮೀಕ್ಷೆ ನಡೆಸಲು ಆದೇಶ ನೀಡಿ, ೨೦೦೫-೦೬ರ ಬಜೆಟ್‌ನಲ್ಲಿ ೫ ಕೋಟಿ ರೂಪಾಯಿಗಳನ್ನು ಸರ್ವೇ ಮಾಡಲು ಮಂಜೂರು ಮಾಡಿತು. ಹೀಗಾಗಿ ಸರ್ವೇ ಕಾರ್ಯ ಮುಗಿದು ವರದಿ ಸರಕಾರವನ್ನು ತಲುಪಿತು. ಆಗ ವರದಿಯ ಜಾರಿಗೆ ಜೇವರ್ಗಿ ಮತ್ತು ಗುಲಬರ್ಗಾದ ರೈತರು, ರೈತ ಸಂಘಟನೆಗಳು ವಿವಿಧ ರಾಜಕೀಯ ಮುಖಂಡರು, ಮಠಾಧೀಶರು ಜನಸಾಮಾನ್ಯರು ಉಪವಾಸ, ಪ್ರತಿಭಟನೆ ಆರಂಭಿಸಿ ಆದಷ್ಟು ಬೇಗ ಯೋಜನೆಯನ್ನು ಆರಂಭಿಸುವಂತೆ ಒತ್ತಡ ಹೇರಿದರು. ಹೋರಾಟ ತೀವ್ರ ಸ್ವರೂಪ ಪಡೆದಾಗ ಎಚ್ಚೆತ್ತ ಸರಕಾರ ೨೦೦೮-೦೯ರ ಸಾಲಿನ ಬಜೆಟ್‌ನಲ್ಲಿ ೪೨ ಕೋಟಿ ರೂಪಾಯಿಗಳ ಅಂದಾಜು ವೆಚ್ಚಕ್ಕೆ ಟೆಂಡರ್ ಕರೆಯುವ ಅವಕಾಶ ಮಾಡಿಕೊಟ್ಟಿತು. ರೈತರ ಹೋರಾಟದ ಫಲವಾಗಿ ಈಗ ನೀರಾವರಿ ಯೋಜನೆ ಕಾರ್ಯ

ಆರಂಭವಾಗಿದ್ದರೂ ತೀವ್ರಗತಿಯಲ್ಲಿ ಸಾಗುತ್ತಿಲ್ಲ ಎನ್ನುವ ಅಪವಾದ ಇದೆ. ಕಾಮಗಾರಿ ಯೋಜನೆ ಸಂಪೂರ್ಣಗೊಂಡು ಭಾಗದ ರೈತರಿಗೆ ನೀರಾವರಿ ಸೌಲಭ್ಯ ದೊರಕುವುದು ಯಾವಾಗ, ಇಲ್ಲಿನ ಜನರ, ರೈತರ ಬದುಕು ಹಸನಾಗುವುದು ಯಾವಾಗ ಎನ್ನುವ ಪ್ರಶ್ನೆಗೆ ಉತ್ತರ ದೊರಕದೇ ಪ್ರಶ್ನೆ ಮಾತ್ರ ಹಾಗೆಯೇ ಉಳಿದಿದೆ. ಒಟ್ಟಿನಲ್ಲಿ ರೈತರು ನೀರಾವರಿ ಯೋಜನೆಯ ಆರಂಭಕ್ಕಾಗಿ ಪಟ್ಟಂತ ಶ್ರಮ ಮತ್ತು ಹೋರಾಟ ಸಫಲವಾಗಿರುವುದು ಸಂತೋಷಕರ ವಿಷಯವಾಗಿದೆ.

ಹೊಸಪೇಟೆ ಕಬ್ಬು ಬೆಳೆಗಾರರ ಹೋರಾಟ

ಹೊಸಪೇಟೆ ಭಾಗದ ಸಾಮಾನ್ಯ ಮತ್ತು ವಾಣಿಜ್ಯ ಬೆಳೆಗಳ ಬಗ್ಗೆ ಅವಲೋಕಿಸಿದಾಗ ಕಬ್ಬು ತುಂಗಭದ್ರ ನದಿ ಅಚ್ಚುಕಟ್ಟು ಪ್ರದೇಶದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಪ್ರಮುಖ ಬೆಳೆಯಾಗಿದೆ. ಇಲ್ಲಿನ ಆಲಿಮನೆಗಳಲ್ಲಿ ತಯಾರಾಗುತ್ತಿದ್ದ ಬೆಲ್ಲಕ್ಕೆ ರಾಜ್ಯ ಮತ್ತು ಪಕ್ಕದ ರಾಜ್ಯಗಳಲ್ಲಿ ಹೆಚ್ಚಿನ ಬೇಡಿಕೆ ಇದ್ದ ಕಾರಣ ಒಳ್ಳೆಯ ಬೆಲೆಗೆ ವಾರದ ಸಂತೆಯಲ್ಲಿ ಹದಿನೈದರಿಂದ, ಇಪ್ಪತ್ತು ಸಾವಿರ ಚೀಲ ಬೆಲ್ಲ ಮಾರಾಟವಾಗುತ್ತಿತ್ತು. ಹಾಗೂ ಪ್ರತಿದಿನ ಸಾವಿರಾರು ಟನ್ ಕಬ್ಬು ಬೇರೆ ರಾಜ್ಯಗಳಿಗೂ ಸರಬರಾಜಾಗುತ್ತಿತ್ತು. ಹೊಸಪೇಟೆಯ ಕಬ್ಬು ಮತ್ತು ಬೆಲ್ಲ ಗುಣಮಟ್ಟದಲ್ಲಿ ರಾಜ್ಯಾದ್ಯಂತ ಹೆಸರು ಪಡೆದಿತ್ತು.

೧೯೩೨ರಲ್ಲಿ ದೇಶೀಯ ಸಕ್ಕರೆ ಉದ್ಯಮಗಳನ್ನು ವಿದೇಶಿ ಕಂಪನಿಗಳ ಪೈಪೋಟಿಯಿಂದ ರಕ್ಷಿಸಲು ಸಕ್ಕರೆ ಉದ್ಯಮ ರಕ್ಷಣಾ ಕಾನೂನನ್ನು ಜಾರಿಗೆ ತಂದಿದ್ದರ ಪರಿಣಾಮವಾಗಿ ಸಕ್ಕರೆ ಉದ್ಯಮ ಅತಿ ವೇಗದಲ್ಲಿ ಬೆಳೆಯಲಾರಂಭಿಸಿತು. ೧೯೩೪-೩೫ರಲ್ಲಿ ಹೊಸಪೇಟೆಯ ಚಿತ್ತವಾಡಿಗೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಆಗಿ ಕೆಲಸ ಆರಂಭಿಸಿತು. ಕ್ರಮೇಣ ಬಂಡವಾಳಗಾರರ ಕೈಗೆ ಸಕ್ಕರೆ ಉತ್ಪಾದನೆ ಮತ್ತು ಮಾರಾಟ ಸಿಕ್ಕ ಮೇಲೆ ರೈತರನ್ನು ಶೋಷಣೆ ಮಾಡಲು ಆರಂಭಿಸಿದರು. ಕಬ್ಬನ್ನು ಖರೀದಿಸುತ್ತಿದ್ದ ಕಾರ್ಖಾನೆಗಳು ಕಬ್ಬಿಗೆ ಯೋಗ್ಯ ಬೆಲೆ ಕೊಡದೆ ವಿಫಲವಾದವು. ಕಬ್ಬಿನ ಬೆಲೆಯನ್ನು ನಿರ್ಧರಿಸುವಲ್ಲಿ ಸ್ವಾಹಿತಾಸಕ್ತಿಯನ್ನು ಕಾಪಾಡಿಕೊಳ್ಳತೊಡಗಿದರು. ಇದನ್ನು ರೈತರು ಪ್ರತಿಭಟಿಸಿದಾಗ ಕಬ್ಬನ್ನು ಖರೀದಿಸುವುದನ್ನೇ ನಿಲ್ಲಿಸಲಾಯಿತು. ಹೀಗೆ ಬಂಡವಾಳಗಾರರ ಮತ್ತು ಕಾರ್ಖಾನೆ ಮಾಲೀಕರಿಂದ ಅನ್ಯಾಯ, ನಷ್ಟಕ್ಕೆ ಒಳಗಾದ ಕಬ್ಬು ಬೆಳೆಗಾರರು ಹೋರಾಟ ಮಾಡುವ ಮತ್ತು ಸಂಘಟನೆ ಮಾಡಿಕೊಂಡು ಅನ್ಯಾಯವನ್ನು ಪ್ರತಿಭಟಿಸುವ ಅನಿವಾರ್ಯತೆ ಉಂಟಾಯಿತು.

೧೯೫೦ ರ ಸುಮಾರಿಗೆ ಕಬ್ಬು ಬೆಳೆಗಾರರ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಸಂಘಟನೆ ಅಸ್ತಿತ್ವಕ್ಕೆ ಬರಲು ಪ್ರಮುಖ ರೂವಾರಿಗಳೆಂದರೆ ಡಾ. ನಾಗನಗೌಡ, ಪತ್ತಿಕೊಂಡ ಗುರುನಾಥಪ್ಪ ಮತ್ತು ಬೆಲ್ಲದ ಚೆನ್ನಪ್ಪ ಮುಂತಾದವರು. ಕ್ರಮೇಣ ಸಂಘಟನೆ ಹೊಸಪೇಟೆ, ಕಮಲಾಪುರ, ಹಗರಿಬೊಮ್ಮನಹಳ್ಳಿ ಮುಂತಾದ ಕಡೆ ಪ್ರಬಲವಾಗತೊಡಗಿದವು. ಕಾರ್ಖಾನೆಗಳು ಕಬ್ಬಿಗೆ ಸರಿಯಾದ ಬೆಲೆ ಕೊಡದಿದ್ದಾಗ ಹೋರಾಟ

ಮಾಡುವುದರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸುವುದರ ಮೂಲಕ, ಸರಕಾರದ ಮೇಲೆ ಒತ್ತಡ ಹೇರುವುದರ ಮೂಲಕ ನ್ಯಾಯವಾದ ಬೆಲೆ ಪಡೆಯುವಲ್ಲಿ ಯಶಸ್ವಿಯಾದರು. ಕಬ್ಬು ಬೆಳೆಗಾರ ರೈತರು ಸರಕಾರದ ಮುಂದೆ ೨೫ಕ್ಕೂ ಹೆಚ್ಚಿನ ಬೇಡಿಕೆಗಳನ್ನು ಮುಂದಿಟ್ಟಿದ್ದರು. ಕಬ್ಬಿಗೆ ಬೆಂಬಲ ಬೆಲೆ, ನೀರಾವರಿಗೋಸ್ಕರ ಕೆರೆ ನಿರ್ಮಾಣ, ಕಡಿಮೆ ಬಡ್ಡಿಯಲ್ಲಿ ಸಾಲ ಮುಂತಾದವು ಪ್ರಮುಖವಾಗಿದ್ದವು.[೧೦]

ಆದರೆ ಕಬ್ಬು ಬೆಳೆಗಾರರ ತೀವ್ರ ಸಮಸ್ಯೆಗಳು ಪ್ರಾರಂಭವಾಗಿದ್ದು, ೧೯೬೦ರಿಂದ ಎರಡು ವರ್ಷಗಳ ಅವಧಿಯಲ್ಲಿ ಕಬ್ಬಿನ ಬೆಲೆ ಪೂರ್ತಿ ಕುಸಿದಿತ್ತು. ಇದನ್ನು ವಿರೋಧಿಸಿದ ರೈತರು ಹೆಚ್ಚು ಬೆಲೆ ನೀಡುವಂತೆ ಹೋರಾಟ ಆರಂಭಿಸಿದಾಗ, ಬೆಲೆ ನಿರ್ಧಾರ ಕುರಿತು ಅಧ್ಯಯನ ಮಾಡಲು ನೇಮಕವಾಗಿದ್ದ ಏಕಸದಸ್ಯ ಆಯೋಗವು ೧೯೬೦-೬೧ ರಿಂದ ಅರೆದ ಕಬ್ಬಿಗೆ ಕಾರ್ಖಾನೆಗಳು ಕ್ವಿಂಟಾಲ್‌ಗೆ ರೂ. ೧೦.೨೫ ಹೆಚ್ಚುವರಿ ಬೆಲೆ ನೀಡಬೇಕೆಂದು ಸಲಹೆ ಮಾಡಿತು. ಆಯೋಗದ ಸಲಹೆಯಂತೆ ಕಾರ್ಖಾನೆ ಹಣ ಪಾವತಿ ಮಾಡಬೇಕೆಂದು ಕೇಂದ್ರವು ಆಜ್ಞೆ ಹೊರಡಿಸಿತು. ಆದರೆ ಕಾರ್ಖಾನೆ ಆಡಳಿತ ಮಂಡಳಿ ಆಜ್ಞೆಯನ್ನು ಮರು ಪರಿಶೀಲಿಸುವಂತೆ ಸರಕಾರವನ್ನು ಕೇಳಿಕೊಂಡಿತು. ಇದರಿಂದ ರೈತರು ಮತ್ತು ಕಾರ್ಖಾನೆ ಆಡಳಿತ ಮಂಡಳಿಯ ನಡುವೆ ಮಾತಿನ ಚಕಮಕಿ ಮತ್ತು ಘರ್ಷಣೆ ಪ್ರಾರಂಭವಾಯಿತು. ಸರಕಾರವು ರೈತರ ಹಿತಾಸಕ್ತಿಯನ್ನು ಕಾಪಾಡದೆ ೧೯೬೦-೬೧ನೇ ಸಾಲಿನ ಕಬ್ಬಿಗೆ ಕೇವಲ ಎಪ್ಪತ್ತು ಪೈಸೆ ಹೆಚ್ಚುವರಿ ಬೆಲೆ ಪಾವತಿ ಮಾಡುವಂತೆ ೧೧ ಸೆಪ್ಟೆಂಬರ್ ೧೯೬೮ ರಂದು ಆಜ್ಞೆ ಹೊರಡಿಸಿತು. ಇದನ್ನು ವಿರೋಧಿಸಿ ಹೊಸಪೇಟೆ ರೈತಸಂಘ ಹೈಕೋರ್ಟ್‌ನಲ್ಲಿ ದಾವೆ ಹೂಡಿತು. ರೈತ ಸಂಘದ ವಾದವನ್ನು ಹೈಕೋರ್ಟ್ ಎತ್ತಿ ಹಿಡಿದಾಗ ಕಾರ್ಖಾನೆ ಆಡಳಿತ ಮಂಡಳಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಯಿತು. ಸುಪ್ರಿಂಕೋರ್ಟ್ ೧೯೭೫ರಲ್ಲಿ ತೀರ್ಪನ್ನು ನೀಡುತ್ತಾ ಕಬ್ಬಿಗೆ ಹೆಚ್ಚುವರಿ ಬೆಲೆ ನಿಗದಿಪಡಿಸುವಾಗ ಅಥವಾ ಅದನ್ನು ಮನ್ನಾ ಮಾಡುವಾಗ ಸರಕಾರವು ರೈತರ ಅಭಿಪ್ರಾಯ ಕೇಳಬೇಕೆಂದು ತೀರ್ಪು ನೀಡಿತು. ಈ ತೀರ್ಪಿನ ಆಧಾರದ ಮೇಲೆ, ಕಾರ್ಖಾನೆ ಆಡಳಿತ ಮಂಡಳಿಯು ಬೆಲೆಯ ಬಗ್ಗೆ ವರದಿಗಾಗಿ ಕೇಂದ್ರ ಸರಕಾರದ ಸಕ್ಕರೆ ನಿರ್ದೇಶನಾಲಯಕ್ಕೆ ಮನವಿಯೊಂದನ್ನು ಸಲ್ಲಿಸಿತು. ನಿರ್ದೇಶನಾಲಯವು ೧೯೬೦-೬೧ನೇ ಸಾಲಿಗೆ ಕೇವಲ ೭೦ ಪೈಸೆ ಹೆಚ್ಚುವರಿ ಬೆಲೆಯನ್ನು ನೀಡಬೇಕೆಂದು ಆದೇಶ ಹೊರಡಿಸಿ ರೈತರ ಹೋರಾಟಕ್ಕೆ ತಣ್ಣೀರೆರಚಿತು. ಪರಿಣಾಮವಾಗಿ ಹೊಸಪೇಟೆ ರೈತ ಸಂಘವು ೧೯೭೯ರಲ್ಲಿ ಸುಪ್ರಿಂಕೋರ್ಟ್‌ನಲ್ಲಿ ದಾವೆ ಹೂಡಿತು (ದಾವೆ ನಂ. ೩೩೩, ೧೯೭೯).

ವಾಸ್ತವವಾಗಿ ೧೯೬೦-೬೧ ಮತ್ತು ೧೯೬೧-೬೨ರ ಸಾಲಿಗೆ ಕಬ್ಬಿನ ಹೆಚ್ಚುವರಿ ಬೆಲೆ ಪಾವತಿಗಾಗಿ ರೈತರಿಗೆ ಸುಮಾರು ೧೫ರಿಂದ ೨೦ ಲಕ್ಷ ಹಣ ಕೊಡಬೇಕಿತ್ತು. ಆದರೆ ಸುಪ್ರಿಂಕೋರ್ಟ್‌ನಲ್ಲಿ ೧೮ ವರ್ಷ ದಾವೆ ನಡೆದು ಕೊನೆಗೆ ೧೯೭೭ರಲ್ಲಿ ಟನ್‌ವೊಂದಕ್ಕೆ ಕೇವಲ ೩೭ ಪೈಸೆಯನ್ನು ಹೆಚ್ಚುವರಿ ಬೆಲೆಯಾಗಿ ನೀಡಬೇಕೆಂದು ಆದೇಶ ಬಂದಿತು. ತೀರ್ಪು ಬರುವ ಹೊತ್ತಿಗೆ ರೈತರು ಪರಿಹಾರದ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಕೋರ್ಟ್ ವೆಚ್ಚ ಮತ್ತಿತರಗಳಿಗೆ ಖರ್ಚು ಮಾಡಿದ್ದರು. ಹೀಗೆ ಸರಕಾರದ ರೈತ ವಿರೋಧಿ ನೀತಿಗಳು ಮತ್ತು ಬಂಡವಾಳಶಾಹಿಗಳ ಬಿಗಿ ಧೋರಣೆಯಿಂದ ಕಬ್ಬು ಬೆಳೆಗಾರರು ಬಲಿಯಾಗಬೇಕಾಯಿತು.

೨೦೦೯-೧೦ರಲ್ಲಿ ಕಬ್ಬಿನ ಬೆಲೆ ಮತ್ತೆ ಕುಸಿದಿದ್ದರಿಂದ ಕಬ್ಬು ಬೆಳೆಗಾರರು ಸರಕಾರದ ನೀತಿಯನ್ನು ವಿರೋಧಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದರ ಮೂಲಕ ಪ್ರತಿಭಟನೆಗೆ ಮುಂದಾಗಿದ್ದರು. ೨೦೦೯-೧೦ರಲ್ಲಿ ಸಕ್ಕರೆ ಕೆ.ಜಿ.ಗೆ ೪೪ ರೂ. ಇತ್ತು. ಆದರೆ ರೈತರಿಗೆ ಪ್ರತಿ ಟನ್ ಕಬ್ಬಿಗೆ ಕೇವಲ ರೂ. ೨೨೦೦ ನೀಡಲಾಗುತ್ತಿದೆ. ಕಾರ್ಖಾನೆಯವರು ತಮಗೆ ತೋಚಿದ ಬೆಲೆ ನಿಗದಿ ಮಾಡುತ್ತಾ, ರೈತರನ್ನು ಶೋಷಿಸುತ್ತಿವೆ. ಹೀಗಾಗಿ ಸರಕಾರ ತಕ್ಷಣವೇ ಕೆಲವು ಕಾಯ್ದೆಗಳನ್ನು ಬದಲಾಯಿಸಬೇಕೆಂದು ಬೇಡಿಕೆ ಇಟ್ಟಿವೆ. ಅದರಲ್ಲಿ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು, ಪ್ರತ್ಯೇಕ ಕಬ್ಬು ಅಭಿವೃದ್ಧಿ ಮಂಡಳಿ ರಚನೆಯಾಗಬೇಕು. ಕಬ್ಬು ಬೆಳೆಗಾರರ ಬಾಕಿ ಪಾವತಿಯಲ್ಲಿ ವಿಳಂಬ ಆಗಬಾರದು, ಕಬ್ಬಿನಿಂದ ಬರುವ ಸಕ್ಕರೆ ಹಾಗೂ ಇತರ ಉತ್ಪನ್ನಗಳನ್ನು ರೈತರಿಗೆ ಹಂಚುವ ೫(ಎ) ಕಾಯ್ದೆ ಜಾರಿಯಾಗಬೇಕೆಂದು, ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಹೊಸಪೇಟೆ ರೈತ ಸಂಘದ ಗೋಸಲ ಭರ್ಮಪ್ಪ, ಪ್ಯಾಟಿ ಜಂಬಣ್ಣ, ನಾಣಿಕೇರಿ ತಿಮ್ಮಯ್ಯ ಮುಂತಾದವರು ಹೋರಾಟಕ್ಕಿಳಿದಿದ್ದಾರೆ.

ಆದರೆ ಇಷ್ಟೆಲ್ಲಾ ಹೋರಾಟಗಳು ನಡೆದರೂ ವಾಸ್ತವ ಪರಿಸ್ಥಿತಿಯನ್ನು ಗಮನಿಸಿದರೆ ಕಬ್ಬು ಬೆಳೆಗಾರರಿಗೆ ಮಾತ್ರ ಯೋಗ್ಯ ಬೆಲೆ ಸಿಗದೆ, ನಷ್ಟ ಅನುಭವಿಸುತ್ತಿದ್ದಾರೆ. ಪರಿಣಾಮ ಎಷ್ಟೋ ರೈತರು ಕಬ್ಬು ಬೆಳೆಯುವುದನ್ನು ಕೈ ಬಿಟ್ಟಿದ್ದಾರೆ. ಇಲ್ಲಿನ ರೈತ ಸಂಘದ ಸದಸ್ಯರು ಅಂದಾಜಿಸಿರುವಂತೆ ಈ ಭಾಗದಲ್ಲಿ ಕಬ್ಬು ಬೆಳೆ ಇತ್ತೀಚಿನ ೧೦ ವರ್ಷದಲ್ಲಿ ಶೇ. ೨೫ರಷ್ಟು ಕಡಿಮೆ ಆಗಿದೆ. ಹೀಗಾಗಿ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದರೆ ಹೊಸಪೇಟೆ ಕಬ್ಬು ಬೆಳೆಗಾರರ ಹೋರಾಟ ಮತ್ತೆ ಭುಗಿಲೇಳುವ ಲಕ್ಷಣಗಳು ಕಂಡು ಬರುತ್ತಿವೆ.

ತೊಗರಿ ಬೆಂಬಲ ಬೆಲೆ ಚಳವಳಿ

ಹೈದರಾಬಾದ್ ಕರ್ನಾಟಕದ ರೈತರ ಇನ್ನೊಂದು ಪ್ರಮುಖ ಹೋರಾಟವೆಂದರೆ, ತೊಗರಿ ಬೆಂಬಲ ಬೆಲೆಗಾಗಿ ನಡೆದ ಚಳವಳಿಗಳು. ಪ್ರಮುಖವಾಗಿ ಗುಲಬರ್ಗಾ, ಬೀದರ್ ಸುತ್ತಮುತ್ತ ಸುಮಾರು ೪ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿಯನ್ನು ಬೆಳೆಯಲಾಗುತ್ತಿದೆ. ತೊಗರಿ ಕಣಜವೆಂದೇ ಖ್ಯಾತಿ ಪಡೆದ ಗುಲಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆಗಾರನಿಗೆ ಸುಖವಿಲ್ಲ. ಒಮ್ಮೆ ಅತೀವೃಷ್ಟಿ ಆದರೆ ಇನ್ನೊಮ್ಮೆ ಅನಾವೃಷ್ಟಿ. ಇನ್ನು ಬೆಳೆ ಚೆನ್ನಾಗಿ ಬಂತೆಂದರೆ ಆಗ ಬೆಲೆ ಕುಸಿತದ ಕಾಟ. ಹೀಗಾಗಿ ತೊಗರಿ ಬೆಳೆಯನ್ನು ಬೆಳೆಯುವ ರೈತ ಸರಿಯಾದ ಬೆಲೆ ಸಿಗದೇ ಸರಕಾರದ ವಿರುದ್ಧ ಬೆಂಬಲ ಬೆಲೆಗಾಗಿ ಪ್ರತಿಭಟನೆಗೆ ಇಳಿಯುವ ಸಂದರ್ಭಗಳು ಮೇಲಿಂದ ಮೇಲೆ ಒದಗಿ ಬರುತ್ತಿವೆ. ಗುಲಬರ್ಗಾದಲ್ಲಿ ತೊಗರಿ ಬೆಂಬಲ ಬೆಲೆಗಾಗಿ ಒತ್ತಾಯಿಸಿ ಸರಕಾರದ ವಿರುದ್ಧ ಅನೇಕ ಹೋರಾಟಗಳು ನಡೆದಿವೆ. ಅದರಲ್ಲೂ ೨೦೦೦ರಲ್ಲಿ ನಡೆದ ಹೋರಾಟ ಗಮನಾರ್ಹವಾಗಿದೆ.

೧೯೯೫-೯೬ ಮತ್ತು ೧೯೯೬-೯೭ನೇ ವರ್ಷಗಳಲ್ಲಿ ಗುಲಬರ್ಗಾ ಸುತ್ತಮುತ್ತಲು ಒಳ್ಳೆಯ ಮಳೆ ಬಿದ್ದ ಕಾರಣದಿಂದ ಉತ್ತೇಜಿತರಾದ ರೈತರು ಅತೀ ಹೆಚ್ಚು ತೊಗರಿಯನ್ನು ಬೆಳೆದರು. ಒಂದೇ ವರ್ಷದಲ್ಲಿ

ತೊಗರಿ ಉತ್ಪಾದನೆ ದಾಖಲೆ ಮಟ್ಟವನ್ನು ಮುಟ್ಟಿತು. ಒಳ್ಳೆಯ ಇಳುವರಿಯಿಂದ ಉತ್ಪಾದನೆ ಹೆಚ್ಚಾಗಿದ್ದರ ಪರಿಣಾಮವಾಗಿ ತೊಗರಿ ಬೆಲೆಯು ಕುಸಿಯತೊಡಗಿತು. ೧೯೯೫-೯೬ರಲ್ಲಿ ತೊಗರಿ ಬೆಲೆ ಕ್ವಿಂಟಾಲಿಗೆ ರೂ. ೧೮೦೦ರಿಂದ ೧೯೦೦ ಇದ್ದದ್ದು, ೧೯೯೭-೯೮ರಲ್ಲಿ ೧೫೦೦ ರೂಪಾಯಿಗಳಿಗೆ ಇಳಿಯಿತು. ಹಾಗೂ ಇನ್ನೂ ಇಳಿಯುವ ಸಂಭವವಿತ್ತು. ಇದರಿಂದಾಗಿ ತೊಗರಿ ಬೆಳೆದ ರೈತ ಶೋಚನೀಯ ಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಯಿತು. ಇನ್ನು ತೊಗರಿಗೆ ಬೆಂಬಲ ಬೆಲೆ ಘೋಷಿಸುವಲ್ಲಿ ಮತ್ತು ನಿರ್ದಿಷ್ಟ ಬೆಲೆಯನ್ನು ನಿರ್ಧರಿಸುವಲ್ಲಿ ಸರಕಾರವು ವಿಫಲವಾಯಿತು.

ಗುಲಬರ್ಗಾ ಪ್ರದೇಶದಲ್ಲಿ 'ತೊಗರಿ ಮಂಡಳಿ' ರಚಿಸುವಂತೆ ರೈತ ಸಂಘಗಳು ಬೇಡಿಕೆಯನ್ನಿಟ್ಟು ಸರಕಾರವನ್ನು ಒತ್ತಾಯಿಸತೊಡಗಿದವು. ಆದರೆ ಬೇಡಿಕೆಯನ್ನು ಆಗಿನ ಮಾನ್ಯ ಮುಖ್ಯಮಂತ್ರಿಗಳು ತಿರಸ್ಕರಿಸಿದರಲ್ಲದೆ ಬೆಲೆ ಕುಸಿದ ಕಾರಣ ಬೆಂಬಲ ಬೆಲೆಯಲ್ಲಿ ತೊಗರಿಯನ್ನು ಖರೀದಿಸಲು ೧೦೦ ಕೋಟಿ ರೂ.ಗಳನ್ನು ಮೀಸಲಾಗಿಡುವ ಬದಲಾಗಿ ಕೇವಲ ೨೦ ಕೋಟಿ ರೂಪಾಯಿಗಳನ್ನು ಮೀಸಲಿಡಲು ಒಪ್ಪಿದರು. ಆಗ ಸರಕಾರದ ನೀತಿಯನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ರೈತ ಸಂಘಟನೆಗಳು ತೊಗರಿಗೆ ಬೆಂಬಲ ಬೆಲೆ ಮತ್ತು ತೊಗರಿ ಮಂಡಳಿ ರಚನೆಗಾಗಿ ಹೋರಾಟಕ್ಕಿಳಿದರು. ಪ್ರಾಂತ ರೈತ ಸಂಘದ ೨೧ನೇ ರಾಜ್ಯ ಸಮಾವೇಶವನ್ನು ೨೦.೯.೨೦೦೦ ರಂದು ಗುಲಬರ್ಗಾದಲ್ಲಿ ಹಮ್ಮಿಕೊಂಡು ತೊಗರಿ ಮಂಡಳಿ ಸ್ಥಾಪನೆ ಮತ್ತು ಉತ್ತಮ ತೊಗರಿ ತಳಿಗಳ ಸಂಶೋಧನೆಗೆ ಆದ್ಯತೆ ನೀಡಬೇಕು ಹಾಗೂ ಸರಕಾರಗಳು ತೊಗರಿಯ ಆಮದು ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದು ಈ ಸಮಾವೇಶದಲ್ಲಿ ಒತ್ತಾಯಿಸಲಾಯಿತು.[೧೧] ರೈತರು ಪಾದಯಾತ್ರೆ ಮತ್ತು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರ ಫಲವಾಗಿ ತೊಗರಿ ಉತ್ಪನ್ನಗಳನ್ನು ಕ್ವಿಂಟಾಲಿಗೆ ೧೫೦೦ ರೂಪಾಯಿಗಳಿಗೆ ಖರೀದಿಸಲು ಕ್ರಮಕೈಗೊಳ್ಳಲಾಯಿತು. ಇಷ್ಟೆಲ್ಲಾ ಹೋರಾಟಗಳ ನಂತರವೂ ರೈತರ ನಿಜವಾದ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ವಿಫಲವಾಯಿತು. ಪರಿಣಾಮವಾಗಿ ಈ ಭಾಗದ ರೈತರ ಕೆಲವು ಜ್ವಲಂತ ಸಮಸ್ಯೆಗಳು ಸಮಸ್ಯೆಗಳಾಗಿ ಉಳಿದಿರುವುದು ಕೆಲವು ರೈತ ನಾಯಕರ ಸಂದರ್ಶನದ ಮೂಲಕ ತಿಳಿದುಬಂದಿದೆ.

೨೦೦೪ರಲ್ಲಿ ಗುಲಬರ್ಗಾ ಜಿಲ್ಲೆಯಾದ್ಯಂತ ಬರ, ಅನಾವೃಷ್ಟಿ ಹಾಗೂ ತೊಗರಿ ಬೆಳೆಗೆ ರೋಗ ತಗುಲಿ ಬೆಳೆ ಸಂಪೂರ್ಣ ನಾಶವಾಯಿತು. ಹಾಗಾಗಿ ತೊಗರಿಬೆಳೆ ನಷ್ಟಕ್ಕೆ ಪರಿಹಾರ ಕೊಡಬೇಕು ಮತ್ತು ಮುಂದಿನ ದಿನಗಳಲ್ಲಿ ಬೆಂಬಲ ಬೆಲೆ ನೀಡಬೇಕೆಂದು ರೈತರು, ಸಂಘಟನೆಗಳು ಪ್ರತಿಭಟನೆಗಿಳಿದರು. ಗುಲಬರ್ಗಾ, ಆಳಂದ, ಜೇವರ್ಗಿಯಲ್ಲಿ ಪ್ರತಿಭಟನೆಗಿಳಿದ ರೈತರು ತಮ್ಮ ಬೇಡಿಕೆಯ ಈಡೇರಿಕೆಗಾಗಿ ಒತ್ತಾಯಿಸಿ ರಸ್ತೆ ತಡೆ ನಡೆಸಿದರು. ನಂತರ ಸುತ್ತಮುತ್ತಲಿನ ರೈತರೆಲ್ಲಾ ಎತ್ತು, ಬಂಡಿಗಳ ಜಾಥಾ ನಡೆಸಿ ಜೇವರ್ಗಿ ತಹಸೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆಗಿಳಿದರು. ಪ್ರತಿಭಟನೆ ತೀವ್ರ ಸ್ವರೂಪ ಪಡೆದಾಗ ಜನಪ್ರತಿನಿಧಿಗಳು ಮಧ್ಯ ಪ್ರವೇಶ ಮಾಡಿ ಸಾಂಕೇತಿಕವಾಗಿ ಕೆಲವು ರೈತರಿಗೆ ಸ್ವಲ್ಪ ಹಣ

ಹಂಚಿದಂತೆ ಮಾಡಿ, ಇನ್ನೂ ಹೆಚ್ಚಿನ ಪರಿಹಾರವನ್ನು ಸರಕಾರದಿಂದ ಕೊಡಿಸುವ ಭರವಸೆ ನೀಡಿ ರೈತರನ್ನು ಸಮಾಧಾನಗೊಳಿಸಿ ಹೋರಾಟ ತಣ್ಣಗಾಗುವಂತೆ ಮಾಡಿದರು. ಹೋರಾಟದ ವಿಫಲತೆಗೆ ಸಂಘಟನಾ ಕೊರತೆ ಮತ್ತು ಸೂಕ್ತ ನಾಯಕರ ಕೊರತೆಯೆ ಕಾರಣವಾಗಿದೆ ಎನ್ನುವುದನ್ನು ಗಮನಿಸಬೇಕಾದ ಅಂಶವಾಗಿದೆ.

ಇತ್ತೀಚೆಗೆ ಈ ಭಾಗದಲ್ಲಿ ಸರಕಾರವು ತೊಗರಿ ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡಿ ಕ್ವಿಂಟಾಲ್‌ಗೆ ರೂ. ನಾಲ್ಕು ಸಾವಿರ ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ ರೈತರು ಮಾತ್ರ ಖರೀದಿ ಕೇಂದ್ರಗಳತ್ತ ಸುಳಿಯುತ್ತಿಲ್ಲ. ಕಾರಣ ಸದ್ಯ ಮುಕ್ತ ಮಾರುಕಟ್ಟೆಯಲ್ಲಿ ರೈತರಿಗೆ ಕ್ವಿಂಟಾಲ್‌ಗೆ ೪೨೦೦ ರಿಂದ ೪೩೦೦ ರೂ. ಸಿಗುತ್ತಿದೆ. ಸರಕಾರ ನಿಗದಿ ಮಾಡಿರುವ ಬೆಂಬಲ ಬೆಲೆ ಕಡಿಮೆ ಇರುವುದರ ಜೊತೆಗೆ ಕೇಂದ್ರಗಳಿಂದ ಹಣ ರೈತರಿಗೆ ಪಾವತಿಯಾಗುವುದು ವಿಳಂಬವಾಗುವುದು. ರೈತರು ಬಿತ್ತನೆ ಸಂದರ್ಭದಲ್ಲಿ ಬೀಜ, ಗೊಬ್ಬರಕ್ಕೆ ದಲ್ಲಾಳಿ ಅಂಗಡಿಯವರಿಂದ ಮುಂಗಡವಾಗಿ ಸಾಲ ಪಡೆದುಕೊಳ್ಳುವುದರಿಂದ ತಮ್ಮ ತೊಗರಿಯನ್ನು ಅವರಲ್ಲಿ ಮಾರುವುದು ಅನಿವಾರ್ಯವಾಗಿದೆ. ಹೀಗೆ ಈ ಭಾಗದ ತೊಗರಿ ಬೆಳೆವ ರೈತನಿಗೆ ಪ್ರತಿ ವರ್ಷ ಇದೇ ಸಮಸ್ಯೆ ಪುನರಾವರ್ತನೆಯಾಗುತ್ತದೆ. ಸರಕಾರ ಮಾತ್ರ ಇದುವರೆಗೆ ಶಾಶ್ವತ ಪರಿಹಾರ ರೂಪಿಸದೆ ರಾಜ್ಯವು ಕೇಂದ್ರ ಸರಕಾರದ ಮೇಲೆ ಹಾಗೂ ಕೇಂದ್ರ ಸರಕಾರ, ರಾಜ್ಯ ಸರಕಾರದ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟರೆ ಮತ್ತೇನೂ ಆಗಿಲ್ಲ.

ಕರ್ನಾಟಕ ಪ್ರಾಂತ ರೈತಸಂಘ ಮತ್ತು ರೈತ ಚಳವಳಿ

ವಿಶಾಲ ಮೈಸೂರು ರಾಜ್ಯದ ಉದಯದ ಸಂದರ್ಭದಲ್ಲೇ ಕರ್ನಾಟಕ ಪ್ರಾಂತ ರೈತ ಸಂಘದ ಉದಯವಾಯಿತು. ಭಾರತೀಯ ಕಮ್ಯುನಿಸ್ಟ್ ಪಕ್ಷದ ಅಂಗ ಸಂಸ್ಥೆಯಾದ 'ಕಿಸಾನ್ ಸಭಾ' ಕರ್ನಾಟಕ ಪ್ರಾಂತ ರೈತ ಸಂಘದ ಮೂಲವಾಗಿದೆ. ೧೯೩೬ರಲ್ಲಿ ಸ್ಥಾಪನೆ ಆಗಿದ್ದ ಕಿಸಾನ್ ಸಭಾ ಭೂಮಾಲೀಕರು ಮತ್ತು ಬಂಡವಾಳಶಾಹಿ ಪದ್ಧತಿಯನ್ನು ನಾಶ ಮಾಡಲು ಹಾಗೂ ರೈತಾಪಿ ವರ್ಗದವರನ್ನು ಒಂದುಗೂಡಿಸುವ ಉದ್ದೇಶದಿಂದ 'ಸಿದ್ಧಾಂತ-ಸಂಘಟನೆ-ಹೋರಾಟ' ಎಂಬ ಮಾದರಿ ಅಂಶಗಳನ್ನು ಇಟ್ಟುಕೊಂಡು ಶೋಷಣಾರಹಿತ ಸಮಾಜದ ಸ್ಥಾಪನೆಯ ಗುರಿಯನ್ನು ಹೊಂದಿತ್ತು. ೧೯೫೬ರಲ್ಲಿ ಏಕೀಕರಣವಾದ ಸಂದರ್ಭದಲ್ಲಿ ಕಿಸಾನ್ ಸಭಾದ ರೈತರು ತಮ್ಮ ನೂತನ ರೈತ ಸಂಘಕ್ಕೆ 'ಕರ್ನಾಟಕ ಪ್ರಾಂತ ರೈತ ಸಂಘ' ಎಂದು ಕರೆದುಕೊಂಡು, ರೈತರ ಸಂಘಟನೆ ಮಾಡಿ ಹೋರಾಟಗಳನ್ನು ಆರಂಭಿಸಿದರು. ೧೯೫೦ರಿಂದ ೧೯೭೦ರ ಕಾಲಘಟ್ಟದಲ್ಲಿ ಕರ್ನಾಟಕದ ರೈತ ಹೋರಾಟಗಳಲ್ಲಿ ಈ ಸಂಘಟನೆಯು ಪ್ರಮುಖ ಪಾತ್ರವಹಿಸಿದೆ. ಆಗಿನ ಸಂದರ್ಭ, ಪರಿಸ್ಥಿತಿಗಳನ್ನು ಅವಲೋಕಿಸಿದರೆ ಸುಮಾರು ಎರಡು ದಶಕಗಳ ಕಾಲ ಸಂಘಟನೆಯು ಹೋರಾಟಗಳ ಮೂಲಕ ತಮ್ಮ ಧ್ಯೇಯ, ಉದ್ದೇಶಗಳನ್ನು ಸ್ವಲ್ಪಮಟ್ಟಿಗೆ ನೆರವೇರಿಸಿಕೊಂಡಿವೆ ಎನ್ನಬಹುದು.

ಇನಾಂ ಭೂಮಿ ವಾಪಸ್ ಪಡೆಯುವ ಚಳವಳಿ

ಇನಾಂ ಭೂಮಿ ಒಂದು ವಿಧದಲ್ಲಿ ಸಾಗುವಳಿ ಭೂಮಿಯಾಗಿದ್ದು 'ಕಂದಾಯ ರಹಿತ ಭೂಮಿ' ಎಂದು ಕರೆಯಬಹುದು. ಹಿಂದಿನ ಕಾಲದಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಅಧಿಕಾರಿಗಳಿಗೆ ಕೊಟ್ಟಂತಹ

ಭೂಮಿಗಳು ಇವಾಗಿದ್ದವು. ಭಾರತ ಸ್ವಾತಂತ್ರ್ಯ ಪಡೆದ ನಂತರ ಉಳುವವನಿಗೇ ಭೂಮಿಯನ್ನು ನೀಡುವ ಮುಖ್ಯ ಉದ್ದೇಶದಿಂದ ದೇವಾಲಯಗಳು ಮತ್ತು ಮಠಗಳಿಗೆ ಇನಾಂ ಮತ್ತು ಜಹಗೀರ್ ಹೆಸರಿನಲ್ಲಿ ಕೊಟ್ಟಿದ್ದ ಆಸ್ತಿಯ ಒಡೆತನವನ್ನು ರದ್ದು ಮಾಡಲಾಗಿತ್ತು.

೧೯೫೬ರಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರವು ಜೋಡಿ ಇನಾಂ ರದ್ದು ಶಾಸನ ಜಾರಿಗೆ ತಂದು ರಾಜ್ಯಾದ್ಯಂತ ಗ್ರಾಮಗಳನ್ನು ಸರಕಾರ ವಶಪಡಿಸಿಕೊಂಡು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿತು. ಆಗ ರೈತರ ಬಳಿ ಭೂಮಿಯ ದಾಖಲೆಗಳು ಇಲ್ಲದ್ದರಿಂದ ಕಂದಾಯ ಅಧಿಕಾರಿಗಳು ಜಮೀನುಗಳನ್ನು ಇನಾಂದಾರರಿಗೆ ಬಿಟ್ಟರು. ಹೀಗೆ ಅನಕ್ಷರಸ್ಥ ಮುಗ್ಧ ರೈತರ ಜಮೀನುಗಳನ್ನು ದಾಖಲೆಗಳಿಲ್ಲ ಎನ್ನುವ ನೆಪದಿಂದಾಗಿ ಆ ಜಮೀನುಗಳನ್ನು ಕಂದಾಯ ಗ್ರಾಮಗಳನ್ನಾಗಿ ರೂಪಿಸಿ ಜಮೀನುದಾರರಿಗೆ ಬಿಟ್ಟು ಕೊಟ್ಟಾಗ ಜಮೀನಿನ ಒಡೆತನದ ಸಮಸ್ಯೆ ಪ್ರಾರಂಭವಾಯಿತು.[೧೨] ಇದನ್ನು ವಿರೋಧಿಸಿ ರಾಯಚೂರು, ಗುಲಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಇನಾಂ ಭೂಮಿಯನ್ನು ಹಿಂದಕ್ಕೆ ಪಡೆದು ಸಂಬಂಧಪಟ್ಟ ರೈತರಿಗೆ ನೀಡುವಂತೆ ಆ ಭಾಗದ ರೈತರು ಮತ್ತು ಪ್ರಾಂತ ರೈತ ಸಂಘದ ಮೂಲಕ ಹೋರಾಟ ಮಾಡಲು ಆರಂಭಿಸಿದರು. ಭೂಮಿಯ ದಾಖಲೆಗಳು ಅನಕ್ಷರಸ್ಥ ಬಡರೈತನ ಬಳಿ ಇರುವುದಾದರೂ ಹೇಗೆ ಎನ್ನುವ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಈ ಕಾಯ್ದೆ ಬಗ್ಗೆ ರೈತರಿಗೆ ಸರಿಯಾಗಿ ತಿಳುವಳಿಕೆ ನೀಡಿ ಇನಾಂ ಜಮೀನಿನ ಫಾರಂ ತುಂಬಿ ಹಕ್ಕನ್ನು ಪಡೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಹೋರಾಟ ಮಾಡಿ ಒತ್ತಾಯಿಸಿದರು. ಅಂದಿನ ಕಂದಾಯ ಮಂತ್ರಿಗಳಾದ ಶ್ರೀ ವಿ.ಎಲ್. ಪಾಟೀಲ್ ಅವರು ೩೦.೦೬.೧೯೮೧ರ ಒಳಗೆ ರೈತರು ಅರ್ಜಿಯನ್ನು ತುಂಬಿ ತಮ್ಮ ಹಕ್ಕನ್ನು ಪಡೆಯಬೇಕೆಂಬ ಆದೇಶವನ್ನು ಹೊರಡಿಸಿದರು. ಆದರೆ ಇನಾಂ ಭೂಮಿಯ ಪರಿಜ್ಞಾನವೇ ಇಲ್ಲದ ರೈತರು ಇಷ್ಟೊಂದು ಕಡಿಮೆ ಸಮಯದ ಒಳಗೆ ಅರ್ಜಿ ತುಂಬಿ ಕೊಡಲು ಸಾಧ್ಯವಿರಲಿಲ್ಲ ಮತ್ತು ಸಾಧ್ಯವಾಗಲೂ ಇಲ್ಲ. ಆಗ ನಿಯಮದ ಪ್ರಕಾರ ಸರಕಾರ ತಹಶೀಲ್ದಾರರ ಮೂಲಕ ಇನಾಂ ಜಮೀನನ್ನು ವಶಪಡಿಸಿಕೊಳ್ಳತೊಡಗಿತು.

ಸರಕಾರದ ಇಂತಹ ಕ್ರಮವನ್ನು ವಿರೋಧಿಸಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರೈತರು ಹಾಗೂ ಇತರ ರೈತ ಸಂಘಟನೆಗಳು ಆಯಾ ತಾಲೂಕಿನ ತಹಶೀಲ್ದಾರ ಕಛೇರಿಯ ಮುಂದೆ ಪ್ರತಿಭಟನೆ ಆರಂಭಿಸಿದರು. ಇನಾಂ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ನಿಲ್ಲಿಸಬೇಕು. ಅರ್ಜಿ ತುಂಬುವ ಕೊನೆ ದಿನಾಂಕವನ್ನು ವಿಸ್ತರಿಸಬೇಕೆಂದು ಹಾಗೂ ಗೇಣಿದಾರರನ್ನು ಒಕ್ಕಲೆಬ್ಬಿಸುವುದನ್ನು ತಡೆಯುವುದು, ಭೂಮಿಯನ್ನು ಉಳುತ್ತಿದ್ದ ಗೇಣಿದಾರರನ್ನು ಭೂಮಿಯ ಮಾಲೀಕರೆಂದು ಘೋಷಣೆ ಮಾಡಬೇಕೆನ್ನುವ ಬೇಡಿಕೆಯನ್ನಿಟ್ಟು ಹೋರಾಟಕ್ಕಿಳಿದರು. ಸರದಿ ಉಪವಾಸ, ಮುಷ್ಕರ, ಕಛೇರಿಗೆ ಮುತ್ತಿಗೆ ಹಾಕುವುದರ ಮೂಲಕ ಪ್ರತಿಭಟನೆ ಆರಂಭಿಸಿದರು. ಇವರ ಹೋರಾಟ ತೀವ್ರವಾದಾಗ, ಸರಕಾರ ಇವರ ಬೇಡಿಕೆಯನ್ನು ಒಪ್ಪಿಕೊಂಡು ಅರ್ಜಿ ತುಂಬಿ ಸ್ವಾಧೀನ ಹಕ್ಕನ್ನು ಪಡೆದುಕೊಳ್ಳುವ ದಿನಾಂಕವನ್ನು ವಿಸ್ತರಿಸಿತು. ಇದರಿಂದಾಗಿ ಅನೇಕ ಕೆಳವರ್ಗದ, ದಲಿತ ರೈತರು ಭೂಮಿ ಪಡೆಯಲು ಸಾಧ್ಯವಾಯಿತು. ಹೀಗೆ ಪ್ರಾಂತ ರೈತ ಸಂಘ ಮಾಡಿದ ಚಳವಳಿಯಲ್ಲಿ ಇದು ಅತ್ಯಂತ ಪ್ರಮುಖ ಹೋರಾಟವಾಗಿದೆ.

ಕೃಷಿ ಕೂಲಿಕಾರ ಮತ್ತು ಕಾರ್ಮಿಕರ ಪರ ಹೋರಾಟ

ರಾಯಚೂರು ಬಳಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಯೋಜನೆ ಸಿದ್ಧಪಡಿಸಿದ ಸರಕಾರವು ಯೋಜನೆಯ ಅನುಷ್ಠಾನಕ್ಕಾಗಿ ಸುಮಾರು ಮೂರು ಸಾವಿರ ಎಕರೆಯಷ್ಟು ರೈತರ ಭೂಮಿಯನ್ನು ವಶಪಡಿಸಿಕೊಂಡು ೧೯೮೫ರಲ್ಲಿ ಉದ್ಘಾಟಿಸಲ್ಪಟ್ಟಿತು. ಆದರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರ ಭೂಮಿಯನ್ನು ವಶಪಡಿಸಿಕೊಂಡ ಸರಕಾರ ಭೂಮಿಯನ್ನು ಕಳೆದುಕೊಂಡ ರೈತರಿಗೆ ಭೂಮಿ ಪರಿಹಾರವನ್ನು ಕೊಟ್ಟಿರಲಿಲ್ಲ. ಹೀಗಾಗಿ ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದ ರಾಷ್ಟ್ರಪತಿಗಳನ್ನು ಭೇಟಿಯಾಗಲು ರೈತರು ಹೋದಾಗ ಅವರಿಗೆ ಭೇಟಿಯನ್ನು ನಿರಾಕರಿಸಲಾಯಿತು. ಹಾಗಾಗಿ ಪ್ರಾಂತ ರೈತಸಂಘದ ನೇತೃತ್ವದಲ್ಲಿ ರೈತರು, ರಾಷ್ಟ್ರಪತಿಗಳು ಉದ್ಘಾಟಿಸುವ ಸಮಾರಂಭವನ್ನು ಬಹಿಷ್ಕರಿಸಿದರು. ಚಂದ್ರಶೇಖರ ಬಾಳೆ, ಪುರುಷೋತ್ತಮ ಕಲಾಲಬಂಡಿ, ಶಾಮಸುಂದರ ಮುಂತಾದವರು ಹಳ್ಳಿ ಹಳ್ಳಿಗಳಿಗೆ ಹೋಗಿ ರೈತರನ್ನು ಸಂಘಟಿಸಿ ಹೋರಾಟಕ್ಕಿಳಿದರು. ರೈತರು ಮತ್ತು ಪ್ರಾಂತ ರೈತ ಸಂಘದ ಹೋರಾಟದ ಫಲವಾಗಿ, ಭೂಮಿಯನ್ನು ಕೊಟ್ಟ ರೈತರಿಗೆ ಸರಕಾರವು ಸ್ವಲ್ಪ ಪ್ರಮಾಣದ ಪರಿಹಾರ ಧನವನ್ನು ನೀಡಿತು. ಆದರೆ ಚಿಕ್ಕ ರೈತರು ಫಲವತ್ತಾದ ಭೂಮಿಗಳನ್ನು ಕಳೆದುಕೊಂಡು, ಭೂಮಿಯು ಇಲ್ಲದೆ, ಕೈಯಲ್ಲಿ ಹಣವು ಇಲ್ಲದೇ ಅದೇ ವಿದ್ಯುತ್ ಕೇಂದ್ರದಲ್ಲಿ ಕೂಲಿಗಳಾಗಿ, ಕಾರ್ಮಿಕರಾಗಿ ಕೆಲಸಕ್ಕೆ ಸೇರಬೇಕಾಯಿತು.

ಇದೇ ಸಮಯದಲ್ಲಿ ಜಿಲ್ಲೆಯ ಅನೇಕ ಸಣ್ಣ ರೈತರು ಆದಾಯ ತೆರಿಗೆ ಲೇವಿ, ನೀರು ಕಂದಾಯ, ಭೂಕಂದಾಯಗಳನ್ನು ಕೊಡಲಾಗದೆ ತಮ್ಮ ಭೂಮಿಗಳನ್ನು ಕಡಿಮೆ ಬೆಲೆಗೆ ಮಾರಿ ಕೃಷಿ ಕೂಲಿಗಳಾದರು. ಇಂತಹ ಘಟನೆಗಳು ಪ್ರಾಂತ ರೈತ ಸಂಘದ ಕೆಲವು ನಾಯಕರಲ್ಲಿ ಹೊಸ ಚಿಂತನೆಗೆ ಕಾರಣವಾಯಿತು. ಇವರು ರೈತರ ಸಮಸ್ಯೆಗಳ ಜೊತೆ, ಕೃಷಿ ಕೂಲಿಕಾರರ ಮತ್ತು ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚು ಆದ್ಯತೆ ಕೊಟ್ಟು ಅವರ ಪರ ಹೋರಾಟವನ್ನು ಆರಂಭಿಸಿದರು.

ವಿದ್ಯುತ್ ಸಂಬಂಧ ಚಳವಳಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿದ್ಯುತ್ ಅಭಾವ ತಲೆದೋರುವುದು ಸಾಮಾನ್ಯ. ಅದರಲ್ಲೂ ೨೦೦೦ ಮತ್ತು ೨೦೦೧ರಲ್ಲಿ ಗುಲಬರ್ಗಾ ಜಿಲ್ಲೆಯಾದ್ಯಂತ ತೀವ್ರ ವಿದ್ಯುತ್ ಅಭಾವ ತಲೆದೋರಿತ್ತು. ಸರಕಾರದ ನಿರ್ಲಕ್ಷ್ಯದಿಂದ ಕೃಷಿಗೆ ನಿರಂತರ ವಿದ್ಯುತ್ ಪೂರೈಸದೇ ಗ್ರಾಮಾಂತರ ಪ್ರದೇಶಕ್ಕೆ ಎಲ್ಲಾ ರೀತಿಯ ತಾರತಮ್ಯ ನೀತಿಯನ್ನು ಅನುಸರಿಸಿದ ಪರಿಣಾಮವಾಗಿ ರೈತರ ಪಂಪ್‌ಸೆಟ್ಟುಗಳಿಗೆ ತೀವ್ರ ವಿದ್ಯುತ್ ಕೊರತೆ ತಲೆದೋರಿತ್ತು. ಎಷ್ಟೋ ರೈತರು ವಿದ್ಯುತ್‌ನ ಅಭಾವದಿಂದ ಜಮೀನುಗಳಿಗೆ ಸಮರ್ಪಕವಾಗಿ ನೀರು ಹಾಯಿಸಲು ಸಾಧ್ಯವಾಗದೇ ಸಾಕಷ್ಟು ಕಷ್ಟ ನಷ್ಟ ಅನುಭವಿಸಿದ್ದರು. ಇದನ್ನರಿತ ರೈತ ಸಂಘಟನೆಗಳು ಮತ್ತು ನಾಯಕರು ಸರಕಾರ ಮತ್ತು ಕೆಪಿಟಿಸಿಎಲ್ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದರು.

ನೀರಾವರಿ ಕೃಷಿಗೆ ನಿರಂತರ ವಿದ್ಯುತ್ ಪೂರೈಸಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕರ್ನಾಟಕ ಪ್ರಾಂತ ರೈತಸಂಘ, ರಾಜ್ಯ ರೈತಸಂಘ, ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಸಂಘ ಹಾಗೂ

ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಇತ್ಯಾದಿ ರೈತ ಸಂಘಟನೆಗಳು ೨೯.೧೨.೨೦೦೧ ರಂದು ಗುಲಬರ್ಗಾದ ಕೆಪಿಟಿಸಿಎಲ್ ಕಛೇರಿಗೆ ಮುತ್ತಿಗೆ ಹಾಕಲು ತೀರ್ಮಾನಿಸಿ ಚಳವಳಿಗೆ ಕರೆಕೊಟ್ಟಿದ್ದವು. ಬೇರೆ ಬೇರೆ ಗ್ರಾಮಗಳಿಂದ ಬಂದ ರೈತರು, ಕಾರ್ಯಕರ್ತರು ಕೆಪಿಟಿಸಿಎಲ್ ಕಛೇರಿಗೆ ನುಗ್ಗಲು ಪ್ರಯತ್ನಿಸಿದಾಗ ಅವರನ್ನು ತಡೆಯಲೆತ್ನಿಸಿದ ಪೊಲೀಸರು ಮತ್ತು ರೈತರ ಮಧ್ಯೆ ವಾದ ವಿವಾದಗಳು ಆರಂಭವಾದವು. ಆಗ ನಡೆದ ಘರ್ಷಣೆಯಲ್ಲಿ ಪೊಲೀಸರು ರೈತರನ್ನು ಚದರಿಸಲು ಲಾಠಿ ಚಾರ್ಜ್ ಆರಂಭಿಸಿದರು. ಇದನ್ನು ಲೆಕ್ಕಿಸದ ಆವೇಶಗೊಂಡ ರೈತರಿಂದ ಕಲ್ಲು ತೂರಾಟ ಆರಂಭಗೊಂಡಿತು. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ಪೊಲೀಸರು ಗುಂಪನ್ನು ಚದುರಿಸಲು ಗಾಳಿಯಲ್ಲಿ ಗುಂಡು ಹಾರಿಸಿದರು. ಇದರಿಂದ ರೊಚ್ಚಿಗೆದ್ದ ರೈತರು ಮತ್ತು ನಾಗರಿಕರು ಗುಲಬರ್ಗಾದ ಸರ್ದಾರ್ ವಲ್ಲಭಾಯಿ ಪಟೇಲ್ ವೃತ್ತದಲ್ಲಿ ಸೇರಿ ಪ್ರತಿಭಟನೆ ಆರಂಭಿಸಿ ಎಲ್ಲಾ ಅಂಗಡಿ, ರಸ್ತೆಗಳನ್ನು ಬಂದ್ ಮಾಡಿಸಿ ಪ್ರತಿಭಟನೆ ಮಾಡಿದರು. ಹೀಗೆ ಪರಿಸ್ಥಿತಿಯು ಹಿಂಸಾರೂಪಕ್ಕೆ ತಿರುಗುತ್ತಿದ್ದಂತೆ ಹಿಂಸೆಗೆ ಪ್ರಚೋದನೆ ಮಾಡಿದ ಆರೋಪದ ಮೇಲೆ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಸೇರಿದಂತೆ ४೭ ರೈತರನ್ನು ಬಂಧಿಸಲಾಯಿತು.[೧೨]

ರೈತರ ಮೇಲಿನ ಲಾಠಿ ಪ್ರಹಾರ ಮತ್ತು ಗೋಲಿಬಾರ್‌ನ್ನು ಖಂಡಿಸಿ ३೦.೧೨.೦೧ರಂದು ಕಾರ್ಮಿಕ ಮುಖಂಡ ಎಸ್.ಕೆ. ಕಾಂತಾ, ವಿಧಾನ ಪರಿಷತ್ ಮಾಜಿ ಉಪಸಭಾಪತಿ ಶ್ರೀ ವಿ.ಆರ್. ಹನಮಂತರಾವ್ ದೇಸಾಯಿ ಮುಂತಾದವರು ಬಾಯಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಮೌನ ಮೆರವಣಿಗೆ ನಡೆಸಿ ಲಾಠಿ ಪ್ರಹಾರಕ್ಕೆ ಕಾರಣರಾದ ಪೋಲೀಸರನ್ನು ಅಮಾನತು ಮಾಡಬೇಕೆಂದು ಬಂಧಿತ ರೈತರನ್ನು ಬಿಡುಗಡೆ ಮಾಡಬೇಕೆಂದು, ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಚಳವಳಿಯನ್ನು ಆರಂಭಿಸಿದರು. ನಂತರ ಸರಕಾರ ಮತ್ತು ಕೆಪಿಟಿಸಿಎಲ್ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಬೇಡಿಕೆಗಳ ಈಡೇರಿಸುವ ಭರವಸೆಗಳನ್ನು ನೀಡಲಾಯಿತು. ಆದರೆ ಇತ್ತೀಚಿಗೆ ಕ್ಷೇತ್ರಕಾರ್ಯದಲ್ಲಿ ಈ ಭಾಗದ ಮುಖಂಡರ ಸಂದರ್ಶನ ಮಾಡಿದಾಗ ಆ ಭರವಸೆಗಳು ಇಂದಿಗೂ ಈಡೇರಿಲ್ಲವೆಂದು, ವಿದ್ಯುತ್ ಸಮಸ್ಯೆಯು ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ ಎನ್ನುವ ಅಂಶವು ಗಮನಕ್ಕೆ ಬಂದಿತು.

ನಕ್ಸಲೈಟ್ ಹಿನ್ನೆಲೆಯ ರೈತ ಕೂಲಿಕಾರ್ಮಿಕರ ಸಂಘದ ಹೋರಾಟ (ರಾಯಚೂರು)

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವೆಂದು ಗುರುತಿಸಿ ಕೊಂಡಿರುವುದು ರಾಯಚೂರು ಪ್ರದೇಶ. ಈ ಜಿಲ್ಲೆಗೆ ಸೇರಿದ ದೇವದುರ್ಗ ತಾಲೂಕು ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ. ಇದಕ್ಕೆ ಕಾರಣ ಜಿಲ್ಲೆಯಲ್ಲಿ ಆರ್ಥಿಕ ಸಂಪನ್ಮೂಲಗಳ ಕೊರತೆ, ಬರ, ನೀರಿನ ಅಭಾವ, ಕಡಿಮೆ ಮಳೆ, ಅಜ್ಞಾನ, ಅನಕ್ಷರತೆ ಹೆಚ್ಚಾಗಿದೆ. ಹೀಗಾಗಿ ಇಲ್ಲಿನ ಬಡ ಜನರು, ಕೂಲಿ ಕಾರ್ಮಿಕರು ಭೂಮಾಲೀಕರನ್ನು ಅವಲಂಬಿಸಲೇಬೇಕಾದ ಅನಿವಾರ್ಯತೆ ಇದ್ದು ಭೂಮಾಲೀಕರು ತಮ್ಮ ಲಾಭಕ್ಕಾಗಿ ಕೂಲಿ ಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದು ಸಾಮಾನ್ಯವಾಗಿದೆ. ಇದರ ಜೊತೆಗೆ ಬಂಡವಾಳಗಾರರೆ ಇಲ್ಲಿನ ಆಡಳಿತಾಧಿಕಾರದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದಾರೆ. ಹೀಗಾಗಿ ಹತಾಶರಾದ ಕೂಲಿ ಕಾರ್ಮಿಕರು

ತಮ್ಮ ನೋವನ್ನು ಏಕಾಂಗಿಯಾಗಿ ವ್ಯಕ್ತಪಡಿಸಲು ಸಾಧ್ಯವಾಗದಿದ್ದಾಗ ನ್ಯಾಯ ಪಡೆಯಲು ಸಂಘಟನೆಗಳ ಕಡೆ ಒಲವು ತೋರಿದರು. ಇವರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಂಘಟನೆಗಳ ಮೂಲಕ ಪ್ರತೀಕಾರ, ಆಕ್ರಮಣ ಬೆದರಿಕೆ ಒಡ್ಡುವ ಹಾದಿಯನ್ನು ಹಿಡಿದರು. ಇಂತಹ ಹೋರಾಟಗಳ ಫಲವಾಗಿ ಪ್ರಸ್ತುತ ರಾಯಚೂರಿನಲ್ಲಿ 'ರೈತ ಕೂಲಿ ಕಾರ್ಮಿಕರ ಸಂಘ' ೧೯೯೦ರ ದಶಕದಲ್ಲಿ ಪ್ರಬಲವಾಗತೊಡಗಿತು. ಕ್ರಮೇಣ ಸಂಘಟನೆಯು ಎಡಪಂಥೀಯ ಧೋರಣೆಗಳನ್ನು ಅಳವಡಿಸಿಕೊಳ್ಳುತ್ತಾ ಸಿಪಿಐ (ಎಂ.ಎಲ್.) ಮುಂತಾದ ಸಂಘಟನೆಗಳ ಸಹಕಾರ ಪಡೆದು ರೈತರ ಸಮಸ್ಯೆಗಳಿಗೆ ತನ್ನದೇ ಆದ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಲು ಹೋರಾಟಕ್ಕಿಳಿದರು. 'ಜನವಿಮುಕ್ತಿ' ಎನ್ನುವ ಮಾಸಪತ್ರಿಕೆ ಸಂಘಟನೆಯ ಮುಖವಾಣಿಯಾಯಿತು.

ರಾಯಚೂರಿನಲ್ಲಿ ಒಂದು ಕಡೆ ಭೂಮಾಲೀಕ ಮತ್ತು ಕೃಷಿ ಕಾರ್ಮಿಕರ ನಡುವೆ ಭಿನ್ನಾಭಿಪ್ರಾಯ ಇದ್ದರೆ, ಇನ್ನೊಂದು ಕಡೆ ಸರಕಾರ ಮತ್ತು ರೈತ ಕೂಲಿಕಾರರ ಸಂಘದ ನಡುವೆ ಭಿನ್ನತೆ ಮತ್ತು ಅಂತರ ಹೆಚ್ಚುತ್ತಿತ್ತು. ಹೀಗಾಗಿ ಸರಕಾರ, ಪ್ರಜಾಪ್ರಭುತ್ವ ವಿರೋಧಿ ಸಂಘಟನೆಗಳನ್ನು ಹತ್ತಿಕ್ಕಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಶಕ್ತಿಯ ಮೂಲಕ ಕಾರ್ಯಾಚರಣೆ ಪ್ರಾರಂಭಿಸಿತು. ಕಾರ್ಯಾಚರಣೆ ಎಷ್ಟರಮಟ್ಟಿಗೆ ಚರ್ಚೆಗೆ ಗ್ರಾಸವಾಯಿತೆಂದರೆ, ದೌರ್ಜನ್ಯ ಕುರಿತು ವರದಿ ಸಲ್ಲಿಸಲು ಸತ್ಯಶೋಧಕ ಸಮಿತಿ ರಚಿಸಲಾಯಿತು.

ರಾಯಚೂರು ಪ್ರದೇಶದಲ್ಲಿ ನಕ್ಸಲೈಟ್ ಹಿನ್ನೆಲೆಯ ರೈತ ಕೂಲಿಕಾರ್ಮಿಕರ ಸಂಘಟನೆಯ ಹೋರಾಟಕ್ಕೆ ಪ್ರಮುಖ ಕಾರಣವೆಂದರೆ ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ಇಲ್ಲಿ ಗಾಢವಾಗಿವೆ. ಇಲ್ಲಿನ ಹೆಚ್ಚಿನ ಭೂಮಿಯನ್ನು ಹಾಗೂ ಇನಾಂ ಭೂಮಿಯನ್ನು ಭೂ ಮಾಲೀಕರು ಅನುಭವಿಸುತ್ತಿದ್ದಾರೆ. ರಾಯಚೂರಿನ ಜೇಗರ್‌ಕರ್‌ನಲ್ಲಿ ೧೪೦ ಎಕರೆ ಇನಾಂ ಭೂಮಿಯನ್ನು ಅಲ್ಲಿಯ ಭೂಮಾಲೀಕನೊಬ್ಬ ಅನುಭವಿಸುತ್ತಿದ್ದುದನ್ನು ಪ್ರತಿಭಟಿಸಿ ಹೋರಾಟ ಆರಂಭಿಸಲಾಗಿತ್ತು. ಹೀಗೆ ಭೂ ಮಾಲೀಕರ ಅಧೀನದಲ್ಲಿರುವ ಭೂಮಿಗಳನ್ನು ಆಕ್ರಮಿಸಿಕೊಳ್ಳಲು ರೈತ ಕೂಲಿಕಾರ್ಮಿಕರ ಸಂಘ ಪ್ರಯತ್ನ ಪಟ್ಟಾಗ ಸಮಸ್ಯೆಗಳು ಹೆಚ್ಚಾದವು. ಇದನ್ನು ಹತ್ತಿಕ್ಕಲು ಸರಕಾರ ಪೋಲೀಸರ ಸಹಾಯ ಪಡೆದು ರೈತರನ್ನು ಕಗ್ಗೊಲೆ ಮಾಡಲು ಪ್ರಯತ್ನಿಸಿತು. ಇದು ಕೊನೆಗೆ ಮುಖಂಡರನ್ನು ಹತ್ಯೆ ಮಾಡುವ ಹಂತಕ್ಕೂ ತಲುಪಿತು. ೧೯೯೭ರಲ್ಲಿ ಊರಿನ ಭೂ ಮಾಲೀಕರೆಲ್ಲಾ ಒಂದಾಗಿ ದಲಿತರೊಬ್ಬರ ಜಮೀನನ್ನು ಸಾಹುಕಾರನೊಬ್ಬನಿಗೆ ಕಸಿದುಕೊಟ್ಟ ಸಂದರ್ಭದಲ್ಲಿ ಬುಡ್ಡಣ್ಣನವರ ನೇತೃತ್ವದಲ್ಲಿ ರೈತ ಕೂಲಿಕಾರ್ಮಿಕರ ಸಂಘವು ಪ್ರತಿಭಟಿಸಿದ್ದರ ಸೇಡಿಗಾಗಿ ಭೂ ಮಾಲೀಕರು ಹಾಗೂ ಪೋಲೀಸರ ನಿರ್ದೇಶನದಂತೆ ಬುಡ್ಡಣ್ಣನವರ ಕೊಲೆ ನಡೆದಿದೆ ಎಂದು 'ಜನವಿಮುಕ್ತಿ' ಬರೆದಿದೆ.

ಹೀಗೆ ಭೂ ಮಾಲೀಕರು ಹಾಗೂ ರೈತ ಕೂಲಿ ಕಾರ್ಮಿಕರಿಗೂ ಇರುವ ಭೂ ಸಂಬಂಧ ಸಮಸ್ಯೆಗಳು ಇಂದು 'ಪ್ರಜಾಪ್ರಭುತ್ವವಾದಿಗಳ' ಹಾಗೂ ಅದರ ವಿರೋಧಿಗಳ ಸಂಘರ್ಷದ ಸ್ವರೂಪದಲ್ಲಿ

ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ರಾಯಚೂರಿನಲ್ಲಿ ನಡೆಯುತ್ತಿರುವ ಭೂ ಸಂಬಂಧೀ ಪ್ರಶ್ನೆಗಳೇ ಮುಖ್ಯ ಸಾಕ್ಷಿಗಳಾಗುತ್ತದೆ.[೧೪]

ಭೂ ಹೋರಾಟ

'ಭೂ ಹೋರಾಟ' ಎನ್ನುವ ಪದದಲ್ಲಿಯೇ, ರೈತ ಸಮಸ್ಯೆಯೂ ಅಡಗಿದೆ. ಹೀಗಾಗಿ ಭೂಮಿ ಮತ್ತು ರೈತರಿಗೆ ಸಂಬಂಧಪಟ್ಟ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ವಿಶ್ಲೇಷಿಸುವುದರ ಮೂಲಕ, ಚಿಂತನೆಗೆ ಒಳಪಡಿಸುವುದರ ಮೂಲಕ, ರೈತರು ಭೂಮಿಗಾಗಿ ನಡೆಸಿದ ಮತ್ತು ನಡೆಸುತ್ತಿರುವ ಹೋರಾಟದ ಪರಿಕಲ್ಪನೆಯ ಆಶಯಗಳನ್ನು ಮುಖ್ಯವಾಗಿಸಿಕೊಂಡು, ಇಂತಹ ಸಮಸ್ಯೆಗಳಿಗೆ ಕಾರಣವಾದ ಮೂಲವನ್ನು ಹುಡುಕುವ ಮೂಲಕ ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ. ಭೂಮಿ ರೈತನ ಬಹುಮುಖ್ಯ ಅಸ್ಮಿತೆಯಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ನೆಲದ ಬದುಕಿನೊಂದಿಗೆ ಬದುಕುತ್ತಾ ಭೂಮಿಯನ್ನು ರೈತ ತನ್ನ ಆತ್ಮ ಸಂಗಾತಿಯನ್ನಾಗಿ ಮಾಡಿಕೊಂಡಿದ್ದಾನೆ. ಹೀಗಾಗಿ ಭೂಮಿ ಎಂಬುದು ಕೇವಲ ಹಂಚಿಕೆಯ ಪ್ರಶ್ನೆಯಾಗುಳಿದಿಲ್ಲ. ಅದು ರೈತನ ಅಸ್ತಿತ್ವದ ಭದ್ರತೆಯ ಅಧಿಕಾರದ ಹಾಗೂ ಬದುಕಿನ ಪ್ರಶ್ನೆಯಾಗಿ ಉಳಿದಿದೆ.

ಭೂಮಿ ರೈತನ ಮೂಲಭೂತ ಅಗತ್ಯಗಳಲ್ಲಿ ಒಂದು ಎನ್ನುವುದನ್ನು ಒಪ್ಪಿಕೊಂಡಿರುವ, ಇಂದಿನ ಪರಿಸ್ಥಿತಿಯಲ್ಲಿ, ಭೂಮಿಯ ಸುತ್ತ ಸುತ್ತುವರಿದ ಬಂಡವಾಳಶಾಹಿಗಳ ಧೋರಣೆ, ಮೋಸ, ವಂಚನೆ ಬೆಲೆ ಕುಸಿತ, ಭೂ ಆಕ್ರಮಣಗಳಂಥ ಹತ್ತು ಹಲವು ಸಮಸ್ಯೆಗಳನ್ನು ಚರ್ಚಿಸಲು ಯತ್ನಿಸಲಾಗಿದೆ. ಸಮಕಾಲೀನ ಸಂದರ್ಭದ ಭೂ ಸಮಸ್ಯೆ ಮತ್ತು ಅದಕ್ಕೆ ಪೂರಕವಾಗಿರುವ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅಧ್ಯಯನದ ಗುರಿಯಾಗಿದೆ. ರೈತ ಮತ್ತು ಭೂ ಸಮಸ್ಯೆಗಳು ಹಿಂದೆಯೂ ಇದ್ದವು ಇಂದೂ ಇವೆ. ಹಾಗೆಯೇ ಭೂ ಪ್ರಶ್ನೆ ಮತ್ತು ರೈತ ಪ್ರಶ್ನೆ ಬೇರೆ ಬೇರೆಯಲ್ಲ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಸ್ಪಷ್ಟಪಡಿಸುವುದು ಸಂದರ್ಭಕ್ಕೆ ಔಚಿತ್ಯವೆನಿಸುತ್ತದೆ.

ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಭೂ ಸ್ವಾಧೀನ ವಿವಾದ

ಯಾವುದೇ ಹೊಸ ಯೋಜನೆಯನ್ನು ಜಾರಿಗೊಳಿಸುವಾಗ ಅದರ ಸಾಧಕ ಬಾಧಕಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ, ಚರ್ಚೆ ಸ್ವಾಭಾವಿಕ. ಇದು ಪ್ರಜಾತಂತ್ರ ವ್ಯವಸ್ಥೆಯ ಒಳ್ಳೆಯ ಲಕ್ಷಣವೂ ಹೌದು. ಆದರೆ ಬಳ್ಳಾರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಯ ವಿಷಯಕ್ಕೆ ಬಂದರೆ ಅಂತಹ ಲಕ್ಷಣಗಳಿಲ್ಲ. ಫಲಾನುಭವಿಗಳ ಸಂಭ್ರಮದಲ್ಲಿ ನೊಂದವರ ನೋವಿನ ಸದ್ದಡಗಿದೆ ಅಥವಾ ಅಡಗಿಸಲಾಗಿದೆ. ರಾಜಕಾರಣದ ಪ್ರಭಾವ, ಪೂರ್ವಗ್ರಹಪೀಡಿತ ಸಮರ್ಥನೆಗಳ ಮುಂದೆ ಚರ್ಚೆ ನಿಂತ ನೀರಾಗಿದೆ. ಸಂಘ ಸಂಸ್ಥೆಗಳು, ರೈತ ಸಂಘಟನೆಗಳು, ಪ್ರಗತಿಪರರು ಹಾಗೂ ಬುದ್ಧಿಜೀವಿಗಳ ಹೋರಾಟ ಸತ್ವಹೀನವಾಗಿದ್ದು ಹತ್ತಿಕ್ಕಲಾಗಿದೆ.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳ್ಳಾರಿ ಜಿಲ್ಲೆಯ ಭಾಗ್ಯದ ಬಾಗಿಲು ತೆರೆಯಲಿದೆ. ವಿಪುಲ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ ಎಂಬ ವಿಶ್ಲೇಷಣೆ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ

ಉಕ್ಕು ವಲಯ, ಪ್ರವಾಸಿಗರ ಹರಿವು, ತಲಾ ಆದಾಯ ವೃದ್ಧಿ, ಬಳ್ಳಾರಿ ಜಿಲ್ಲೆಯೊಂದರಲ್ಲೇ ಮುಂದಿನ ಕೆಲ ವರ್ಷಗಳಲ್ಲಿ ೨೫೦೦೦ ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದೆ, ಭೂಮಿ ಕಳೆದುಕೊಂಡವರ ಕುಟುಂಬದ ಒಬ್ಬರಿಗೆ ಉದ್ಯೋಗ ದೊರೆಯಲಿದೆ ಎನ್ನುವ ಆಶಾ ಗೋಪುರದ ಮಾತುಗಳು ಒಂದು ಕಡೆ ಕೇಳಿ ಬರುತ್ತಿದೆ.

ಇನ್ನೊಂದು ಕಡೆ, 'ಪ್ರಾಣ ಕೊಡುತ್ತೇವೆ. ಆದರೆ ನಮ್ಮ ಭೂಮಿ ಕೊಡಲ್ಲ', 'ನಿಮ್ಮ ವಿಮಾನ ಹಾರಾಡೋದಾದರೆ ಅದು ನಮ್ಮ ಹೆಣಗಳ ಮ್ಯಾಲೆಯೇ' ಎನ್ನುವ ರೈತರ ಕೂಗು ಇನ್ನೊಂದು ಕಡೆ. ಬಳ್ಳಾರಿ ಸಮೀಪದ ಸಿರಿವಾರ - ಚಾಗನೂರಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣಕ್ಕಾಗಿ ಭೂಸ್ವಾಧೀನಕ್ಕೆ ಮುಂದಾದ ಅಧಿಕಾರಿಗಳು ಹಾಗೂ ಸಚಿವರ ಮುಂದೆ ಇಲ್ಲಿನ ಗ್ರಾಮಗಳ ನೊಂದ ರೈತರು ಈಗಲೂ ಹೇಳುತ್ತಿರುವ ಮಾತುಗಳಿವು. ವಶಪಡಿಸಿಕೊಳ್ಳುತ್ತಿರುವ ೧೨೧೩ ಎಕರೆ ಭೂಮಿಯಲ್ಲಿ ಬಳ್ಳಾರಿ ತಾಲೂಕಿನ ಸಿರಿವಾರದಲ್ಲಿ ೨೫೧.೫೩ ಎಕರೆ ಹಾಗೂ ಚಾಗನೂರು ಗ್ರಾಮದ ೯೪೭.೫೭ ಎಕರೆ ಹಾಗೂ ತೆಗ್ಗಿನಬೂದಿಹಾಳ ಗ್ರಾಮದ ೧೪.೧೬ ಎಕರೆ ಸೇರಿದೆ. ಭೂಮಿಯು ಈ ಪ್ರದೇಶದಲ್ಲೇ ಅತ್ಯಂತ ಫಲವತ್ತಾದ, ನೀರಾವರಿಗೆ ಒಳಪಟ್ಟ ಭೂಮಿಯಾಗಿದ್ದು, ಇಲ್ಲಿ ಭತ್ತ, ಹತ್ತಿ, ಮೆಕ್ಕೆಜೋಳ, ಮೆಣಸಿನಕಾಯಿ, ಜೋಳ ಬೆಳೆಯಲಾಗುತ್ತದೆ. ಕೇವಲ ೧೦೦ ರಿಂದ ೧೫೦ ಎಕರೆ ಭೂಮಿ ಮಾತ್ರ ಸವಳಾಗಿದ್ದು, ಏನೂ ಬೆಳೆಯದ ಸ್ಥಿತಿ ಇದೆ.

ಇಲ್ಲಿಯವರೆಗೆ ತಾವಾಯಿತು ತಮ್ಮ ಬದುಕಾಯಿತು ಎಂದು ದುಡಿದು ಉಣ್ಣುತ್ತಿದ್ದ ರೈತರು ಈಗ ನೆಮ್ಮದಿ ಕಳೆದುಕೊಂಡಿದ್ದಾರೆ. ಭೂಮಿಯನ್ನು ವಶಪಡಿಸಿಕೊಳ್ಳುವುದರ ವಿರುದ್ಧ ಹೋರಾಟ ನಡೆಸಿದ ರೈತರು, ಗೆಜೆಟ್ ನೋಟಿಫಿಕೇಶನ್ ಹೊರಡಿಸಿದ ನಂತರ ಅಸಹಾಯಕರಾಗಿದ್ದಾರೆ. ವಿರೋಧ ಮಾಡಿದವರ ಮೇಲೆ ಪೊಲೀಸರ ಲಾಠಿ ಏಟು ಹಾಗೂ ಜೈಲಿಗೆ ತಳ್ಳಲಾಗುವುದನ್ನು ನೋಡಿದ ರೈತರು ಹೆದರಿಕೆಯಿಂದ ತಲೆಮರೆಸಿಕೊಂಡಿದ್ದಾರೆ. ಇದುವರೆಗೆ ವಿಮಾನ ನಿಲ್ದಾಣ ಸ್ಥಾಪನೆ ಹಾಗೂ ಭೂ ಆಕ್ರಮಣ ವಿರೋಧಿಸಿ ಹೋರಾಟ ನಡೆದರೆ, ಇತ್ತೀಚೆಗೆ ಇದರ ಪರವಾಗಿಯೂ, ಪ್ರತಿ ಹೋರಾಟವು ಆರಂಭವಾಗಿದೆ. ಎಲ್ಲ ಸಂಗತಿಗಳಿಂದ ರೈತರು ಕಂಗಾಲಾಗಿದ್ದಾರೆ. ರೈತರ ಕೂಗು ಯಾರಿಗೂ ಕೇಳುತ್ತಿಲ್ಲವೇಕೆ ಇವರ ಧ್ವನಿ ಕಸಿದು ಕೊಂಡವರ್‍ಯಾರು, ರೈತ ಸಂಘಟನೆಗಳು, ರೈತ ಚಳವಳಿ ಯಾವ ದಿಕ್ಕಿನಲ್ಲಿ ಹೊರಟಿವೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

ನಾಗರಿಕ ವಿಮಾನ ನಿಲ್ದಾಣಕ್ಕೆ ಬಳ್ಳಾರಿಯ ಸಂಗನಕಲ್ಲು ರಸ್ತೆಯ ಮೋಕಾ ಬಳಿಯ ನೀರಾವರಿ ಭೂಮಿಯನ್ನು ಆಯ್ದುಕೊಂಡದ್ದೇ ಕುತೂಹಲದ ವಿಷಯವಾಗಿದೆ. ಹಾಗೆ ನೋಡಿದರೆ, ಬಳ್ಳಾರಿಯಲ್ಲೊಂದು ಸುಸಜ್ಜಿತ ವಿಮಾನ ನಿಲ್ದಾಣ ಬೇಕು ಎಂಬ ನಿರ್ಧಾರವೇ ಅಸಾಮಾನ್ಯವಾದದ್ದು. ಉದ್ಯಮ, ಪ್ರವಾಸೋದ್ಯಮದ ಹಿತಚಿಂತನೆ, ಸಾಮಾಜಿಕ, ಆರ್ಥಿಕ, ರಾಜಕೀಯ ದೂರದೃಷ್ಟಿ ಏನೆಲ್ಲವೂ ಸೇರಿ 'ಅಂತಾರಾಷ್ಟ್ರೀಯ (ಸುಸಜ್ಜಿತ)ವಿಮಾನ ನಿಲ್ದಾಣ ಬೇಕು' ಎಂಬ ಆಸೆ ಹುಟ್ಟಿತು. ಸಿರಿವಾರ-ಚಾಗನೂರು ಬಳಿಯೇ ವಿಮಾನ ನಿಲ್ದಾಣವಾಗಬೇಕು ಎಂಬ ಯೋಜನೆಯ ಮೊದಲ ಹೆಜ್ಜೆಯಾಗಿ ಖಾಸಗಿ ಸಮೀಕ್ಷೆ

ಎಂಬ ವೇದಿಕೆ ಸಿದ್ಧವಾಯಿತು. ವಿಮಾನ ನಿಲ್ದಾಣ ನಿರ್ಮಾಣದ ಸ್ಥಳ ಸಮೀಕ್ಷೆಗೆಂದು ಹೈದರಾಬಾದ್‌ನಿಂದ ಬಳ್ಳಾರಿಗೆ ತಜ್ಞರ ತಂಡವೊಂದು ಬಂದಿಳಿದು ಸಮೀಕ್ಷೆ ನಡೆಸಿ ವರದಿ ನೀಡಿತು. ವಿಮಾನ ನಿಲ್ದಾಣದ ಸ್ಥಳದ ಆಯ್ಕೆ ಕಸರತ್ತಿನಲ್ಲಿ ಸರಕಾರಿ ಪಾತ್ರ ಆರಂಭವಾದದ್ದು ಆ ನಂತರದ ಬೆಳವಣಿಗೆ. ಉದ್ದೇಶಿತ ವಿಮಾನ ನಿಲ್ದಾಣ ನಿರ್ಮಾಣ ಸ್ಥಳ ನಿಗದಿಯಲ್ಲಿ 'ರಾಜ್ಯ ಮೂಲ ಸೌಕರ್ಯ ಅಭಿವೃದ್ಧಿ ನಿಗಮ' ನೋಡಲ್ ಏಜೆನ್ಸಿಯಂತೆ ಕಾರ್ಯ ನಿರ್ವಹಿಸಿದೆ. ಏಜೆನ್ಸಿಗೆ ಸಂಬಂಧಿಸಿದ ಇಲಾಖೆ, 'ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪತ್ರ ಬರೆದು ಎ-೩೨೦ ಮತ್ತು ಬಿ-೭೪೭ ಮಾದರಿಯ ವಿಮಾನಗಳಿಗೆ ಇಳಿದಾಣವಾಗಿ ಬಳ್ಳಾರಿಯಲ್ಲಿ ಸದ್ಯ ಇರುವ ನಿಲ್ದಾಣವು ಅಭಿವೃದ್ಧಿ ಅಥವಾ ವಿಸ್ತರಣೆಗೆ ಸಾಧ್ಯವಿಲ್ಲ ಹಾಗೂ ಜಾಗದ ಕೊರತೆ ಇರುವುದರಿಂದ ಹೊಸ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸ್ಥಳ ಪರಿಶೀಲಿಸಲು ತಾಂತ್ರಿಕ ಸಿಬ್ಬಂದಿ ಕಳುಹಿಸಬೇಕು ಎಂದು ಮನವಿ ಮಾಡಿತು. ಮನವಿಯನ್ನು ಪುರಸ್ಕರಿಸಿದ ಪ್ರಾಧಿಕಾರ, ೨೦೦೮, ಡಿಸೆಂಬರ್ ೩ ರಂದು ತಾಂತ್ರಿಕ ಸಿಬ್ಬಂದಿಯನ್ನು ಬಳ್ಳಾರಿಗೆ ಕಳುಹಿಸಿತು.

ಪ್ರಾಧಿಕಾರದ ವರದಿ :- ಬಳ್ಳಾರಿ ಸುತ್ತಮುತ್ತಲಿನ ೪ ಪ್ರದೇಶಗಳನ್ನು ಪರಿಶೀಲಿಸಿದ ಪ್ರಾಧಿಕಾರದ ತಾಂತ್ರಿಕ ತಂಡ, ಬಳ್ಳಾರಿ-ತಾಳೂರು ರಸ್ತೆಯ ಸೋಮಸಮುದ್ರ ಬಳಿಯ ಜಾಗವನ್ನು ಮೊದಲು ಪರಿಶೀಲಿಸಿ ಈ ಸ್ಥಳವು ರಾಜ್ಯ ಹೆದ್ದಾರಿಗೆ ತೀರಾ ಹತ್ತಿರದಲ್ಲಿದೆ, ಇಲ್ಲಿ ನಿಲ್ದಾಣಕ್ಕೆ ಅಗತ್ಯವಿರುವಷ್ಟು ಭೂಮಿ ಸಿಗುವುದಿಲ್ಲ. ಹಾಗಾಗಿ ಇಲ್ಲಿ ರನ್‌ವೇ ನಿರ್ಮಾಣ ಕಷ್ಟ ಎಂದು ವರದಿಯಲ್ಲಿ ತಿಳಿಸಿತು. ಎರಡನೇ ಪ್ರದೇಶವನ್ನು ಪರಿಶೀಲಿಸಿದ ತಂಡ, ಇಲ್ಲಿ ನೀರಾವರಿ ಕಾಲುವೆಗಳು ಹೇರಳವಾಗಿವೆ, ಹಾಗಾಗಿ ಇಲ್ಲಿನ ಭೂ ಪರಿಸರವನ್ನು ಕೈಬಿಡಲು ಮುಖ್ಯಕಾರಣ ಎಂದು ವರದಿ ನೀಡಿತು.

ಮೂರನೇ ಪ್ರದೇಶದಲ್ಲಿ ನೀರಿನ ಸರಾಗ ಹರಿವಿಗೆ ಅಡ್ಡಿ ಆತಂಕಗಳು ಇವೆ ನೀರಾವರಿ ಕಾಲುವೆಗಳನ್ನು ಇಲ್ಲಿಂದ ತಿರುಗಿಸುವುದು ಕಷ್ಟ ಸಾಧ್ಯ ಎಂದು ಪ್ರಾಧಿಕಾರದ ತಾಂತ್ರಿಕ ತಂಡ ಅಭಿಪ್ರಾಯ ತಿಳಿಸಿತು.

ಇನ್ನು ಬಳ್ಳಾರಿ - ಸಂಗನಕಲ್ ರಸ್ತೆಯ ಮೋಕಾ ಬಳಿ ಸಿರಿವಾರ ಮತ್ತು ಚಾಗನೂರು ವ್ಯಾಪ್ತಿಯ ಭೂ ಪರಿಸರವನ್ನು ತಂಡ ಪರಿಶೀಲಿಸಿ, ಸಂಗನಕಲ್ ಹಾಗೂ ಮೋಕಾ ಬಳಿಯ ವಿಸ್ತಾರವಾದ ಭೂ ಪರಿಸರವು ಎಟಿಆರ್-೭೨, ಎಬಿ-೩೨೦ ಮತ್ತು ಬಿ-೭೩೭ ಮಾದರಿ ವಿಮಾನ ಯಾನ ತಾಣವಾಗಲು ಯೋಗ್ಯವಾಗಿದೆ. ಉನ್ನತಮಟ್ಟದ ವಿಮಾನ ನಿಲ್ದಾಣ ಅಭಿವೃದ್ಧಪಡಿಸಲು ಇಲ್ಲಿ ವಿಪುಲ ಅವಕಾಶಗಳಿವೆ. ಕನಿಷ್ಟ ೩೦೦ ಮೀ. ಮತ್ತು ಅದಕ್ಕೂ ಹೆಚ್ಚಿನ ಅಗಲದ ರನ್‌ವೇ ನಿರ್ಮಾಣಕ್ಕೆ ಸ್ಥಳ ಯೋಗ್ಯವಾಗಿದೆ ಎಂದು ತಾಂತ್ರಿಕ ವರದಿಯಲ್ಲಿ ತಿಳಿಸಿತು. ಸಂಗನಕಲ್ ರಸ್ತೆಯ ಮೋಕಾ ಬಳಿಯ ಭೂಮಿ ಬಳ್ಳಾರಿಯಿಂದ ಸುಮಾರು ೧೦ ಕಿ.ಮೀ. ದೂರ ಅಷ್ಟೇ ಎಂದು ಅಂದುಕೊಂಡರೂ, ನೀರಾವರಿ ಸಮೃದ್ಧ ಭೂಮಿಯನ್ನು 'ನಿಲ್ದಾಣಕ್ಕೆ ಹೆಚ್ಚು ಯೋಗ್ಯ' ಎಂದು ಪ್ರಾಧಿಕಾರದ ತಂಡ ಅಭಿಪ್ರಾಯಪಟ್ಟದ್ದು ಸಂಶಯ ಮೂಡಿಸುತ್ತದೆ. ಪ್ರಯಾಣ ಸಾಂದ್ರತೆ ಮತ್ತು ಇತರ ಅಂಶಗಳನ್ನು ಒಳಗೊಂಡ ತಾಂತ್ರಿಕ, ಆರ್ಥಿಕ ಅಧ್ಯಯನವೂ ಅಂತಿಮ ನಿರ್ಧಾರ ಕೈಗೊಳ್ಳುವ ಮುಂಚೆಯೇ ವಿಮಾನ ನಿಲ್ದಾಣ ಅಗತ್ಯ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಆದರೆ ನೀರಾವರಿ ಜಮೀನಿನಲ್ಲಿ ನಿಲ್ದಾಣ ನಿರ್ಮಾಣದ ಸಾಧ್ಯಾಸಾಧ್ಯತೆ ಪ್ರಶ್ನೆಗಳ ಬಗ್ಗೆ ತಂಡ ಚಕಾರ ಎತ್ತದಿರುವುದು ಅಚ್ಚರಿ ಮೂಡಿಸಿತು.

ಬಳ್ಳಾರಿಯಲ್ಲಿ ಈಗಾಗಲೇ ಎರಡು ವಿಮಾನ ನಿಲ್ದಾಣಗಳಿವೆ. 'ಬಳ್ಳಾರಿ ಏರ್‌ಪೋರ್ಟ್' ಹೆಸರಿನ ನಿಲ್ದಾಣ ಇದ್ದೂ ಇಲ್ಲದ ಸ್ಥಿತಿಯಲ್ಲಿದೆ. ಬಳ್ಳಾರಿಯಿಂದ ಸುಮಾರು ೩೦ ಕಿ.ಮೀ. ದೂರದ ಜಿಂದಾಲ್ ನಿಲ್ದಾಣವೇ ಸಮರ್ಪಕವಾಗಿ ಬಳಕೆ ಆಗದಿರುವ ಪರಿಸ್ಥಿತಿಯಲ್ಲಿ, ನೀರಾವರಿ ಪ್ರದೇಶದಲ್ಲಿ ಇನ್ನೊಂದು ವಿಮಾನ ನಿಲ್ದಾಣ ಸ್ಥಾಪನೆ ವಿರುದ್ಧ ಹೋರಾಟಗಳು ಆರಂಭವಾದವು. ಈ ನಡುವೆ ನಿಲ್ದಾಣ ಸ್ಥಾಪನೆಗಾಗಿ ವಶಪಡಿಸಿಕೊಳ್ಳಲು ಉದ್ದೇಶಿತ ಭೂಮಿ ಬಗ್ಗೆ ಸೃಷ್ಟಿಯಾದ ಗೊಂದಲವೇ ಬಗೆಹರಿದಿಲ್ಲದಿರುವಾಗ 'ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ' ವಿಶೇಷ ಭೂ ಸ್ವಾಧೀನಾಧಿಕಾರಿ(೧೨.೦೬.೨೦೦೮ ರಂದು ಆದೇಶ ಹೊರಡಿಸಿ), ಅಧಿಸೂಚನೆಯಲ್ಲಿ 'ಕೈಗಾರಿಕಾ ಉದ್ದೇಶಕ್ಕೆ ಜಮೀನು ಸ್ವಾಧೀನವೆಂದು' ಉಲ್ಲೇಖಿಸಿತು. ಅಂದರೆ ರೈತರ ಭೂಮಿ ಸ್ವಾಧೀನಕ್ಕೆ ಸರಕಾರ ಹೊರಡಿಸಿರುವ ನೋಟಿಸ್‌ನಲ್ಲಿ ಕೈಗಾರಿಕೆ ಉದ್ದೇಶಕ್ಕೆ ಭೂ ಸ್ವಾಧೀನ ಎಂದು ನಮೂದಿಸಲಾಗಿದೆ.

ಇದರ ಜೊತೆಗೆ ಇಲ್ಲಿನ ರೈತರಿಗೆ ಆದ ಇನ್ನೊಂದು ಆಘಾತವೆಂದರೆ, ಸಾವಿರಾರು ಎಕರೆ ನೀರಾವರಿಗೆ ಒಳಪಟ್ಟು 'ಪಹಣಿ' ಪತ್ರಿಕೆಯಲ್ಲಿ ನೀರಾವರಿ ಮೂಲ ಎಚ್.ಎಲ್.ಸಿ. ಕಾಲುವೆ ಎಂದು ನಮೂದಿಸಿರುವ ಭೂಮಿಯನ್ನು, ಖುಷ್ಕಿ ಭೂಮಿ ಎಂದು ಸರಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿತು. ಎಚ್.ಎಲ್.ಸಿ. ಕಾಲುವೆ ಇರುವ ಭೂಮಿಯನ್ನು ಸರಕಾರದ ಮಟ್ಟದಲ್ಲಿ ಖುಷ್ಕಿ ಎಂದು ತಿದ್ದಲಾದ ಘಟನೆ ಮತ್ತು ಗೆಜೆಟ್ ನೋಟಿಫಿಕೇಶನ್‌ನಲ್ಲಿ ಇದು ಖುಷ್ಕಿ ಎಂದು ನಮೂದಾಗಿದ್ದು ಸಣ್ಣ ಲೋಪವಲ್ಲ ಮತ್ತು ಇದರ ಹಿಂದಿರುವ ಹುನ್ನಾರ ಸಣ್ಣದಲ್ಲವೆಂಬ ಅರಿವು ಮೂಡಿತು ಇದೇ ಸಮಯದಲ್ಲಿ ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದ ಜನಾರ್ಧನ ರೆಡ್ಡಿ ಮತ್ತು ಶ್ರೀ ರಾಮುಲು ವಿಮಾನ ನಿಲ್ದಾಣ ಸ್ಥಾಪನೆ ಕೈಬಿಡುವ ಪ್ರಶ್ನೆಯೇ ಇಲ್ಲವೆಂದು, ಇದೇ ಸ್ಥಳದಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಲಾಗುವುದೆಂಬ ಸಂದೇಶವನ್ನು ರವಾನಿಸಿದ್ದು, ರೈತರನ್ನು ಕಂಗೆಡಿಸುವುದರ ಜೊತೆ ಹೋರಾಟಕ್ಕಿಳಿಯುವಂತೆ ಮಾಡಿತು.

ನೀರಾವರಿ ಸಮೃದ್ಧ ಭೂಮಿಯನ್ನು ಖುಷ್ಕಿ ಭೂಮಿ ಎಂದು ಬದಲಾಯಿಸಿದ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರೈತರು ಇದರ ಬಗ್ಗೆ ಜಿಲ್ಲಾಡಳಿತಕ್ಕೆ ದೂರು ನೀಡಿದ್ದರೂ ಪ್ರಯೋಜನ ಆಗಲಿಲ್ಲ. ಕೃಷಿಯೇತರ ಭೂಮಿ ಪರಿವರ್ತನೆಗೆ ಯೋಜನಾ ಆಯೋಗ ಹಲವು ನಿರ್ಬಂಧಗಳನ್ನು ವಿಧಿಸಿದೆ. ಸಿರಿವಾರ-ಚಾಗನೂರು ಹತ್ತಿರ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಭೂಸ್ವಾಧೀನ ವಿಷಯದಲ್ಲಿ ಬಳ್ಳಾರಿ ರಾಜಕೀಯ ನಾಯಕರ ಒತ್ತಡ ಮತ್ತು ಪ್ರಭಾವದ ಮುಂದೆ ರೈತರ ಧ್ವನಿ ಅಡಗಿ ಹೋಯಿತು.

ರೈತರ ಪ್ರತಿಭಟನೆ

೨೦೦೮ ಫೆಬ್ರವರಿ ೪ ರಂದು ಪ್ರಕಟಣೆ ನೀಡಿದ ರಾಜ್ಯ ಸರಕಾರ, ಚಾಗನೂರು ಸಿರಿವಾರ, ಟಿ. ಬೂದಿಹಾಳ ಬಳಿ ವಿಮಾನ ನಿಲ್ದಾಣ ನಿರ್ಮಿಸಲು ರೈತರ ಭೂಮಿ ಸರ್ವೇ ಕಾರ್ಯ ಆರಂಭವಾಗಲಿದೆ

ಎಂದು ಘೋಷಿಸಿತು. ಆಗ ನೀರಾವರಿ ಭೂಮಿ ಬಿಟ್ಟು ಕೊಡಲು ಒಪ್ಪದ ನೂರಾರು ರೈತರು ಪ್ರತಿಭಟನೆ ಆರಂಭಿಸಿದರು.

ಚಾಗನೂರು - ಸಿರಿವಾರ ಗ್ರಾಮಗಳ ನೀರಾವರಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣವನ್ನು ಒಣಭೂಮಿ ಪ್ರದೇಶಕ್ಕೆ ತಕ್ಷಣವೇ ಸ್ಥಳಾಂತರಿಸಬೇಕೆಂದು, ೨೦೦೯ ಫೆಬ್ರವರಿ ೫ ರಂದು ಚಾಗನೂರಿನಲ್ಲಿ ೧೦೦ ಗಂಟೆ ಉಪವಾಸ ಮಾಡಿದ ರೈತರು, ವಿಮಾನ ನಿಲ್ದಾಣ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದರು. ನಂತರ ೨೦೦೯ ರ ಫೆಬ್ರವರಿ ೧೪ ರಂದು ಮೋಕಾ ಬಳ್ಳಾರಿ ರಸ್ತೆಯಲ್ಲಿ ಸುಮಾರು ೨ ಕಿ.ಮೀ. ಉರಳು ಸೇವೆ ನಡೆಸಿ ಪ್ರತಿಭಟಿಸಿದರು. ಫೆಬ್ರವರಿ ೧೫ರಂದು ಗೋಡೆಹಾಳ್ ಕ್ರಾಸ್ ಬಳಿ ಸಂಚಾರ ತಡೆಯೊಡ್ಡಿದ ರೈತರ ವಿರುದ್ಧ ಗೋಲಿಬಾರ್ ನಡೆಯಿತು. ಮಕ್ಕಳು ಹೆಣ್ಣುಮಕ್ಕಳು ಎನ್ನದೆ ಪೊಲೀಸರು ಲಾಠಿ ಚಾರ್ಜ್ ಮಾಡಿದರು. ಇಬ್ಬರು ಮಹಿಳೆಯರು ಸೇರಿದಂತೆ ೧೧ ರೈತರನ್ನು ಬಂಧಿಸಿ ಮೊಕದ್ದಮೆ ದಾಖಲಿಸಲಾಯಿತು. ಚಾಗನೂರು - ಸಿರಿವಾರ ಗ್ರಾಮಗಳಲ್ಲಿ ನಿಷೇಧಾಜ್ಞೆ ಜಾರಿಗೊಂಡಿತು. ೧೨ ದಿನಗಳ ನಂತರ ಜೈಲಿನಿಂದ ಬಿಡುಗಡೆ ಬಂದ ರೈತರು ಬಲವಂತದಿಂದ ಭೂಮಿ ವಶ ವಿರೋಧಿಸಿ ಮತ್ತೆ ಪ್ರತಿಭಟನೆಗಿಳಿದರು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ನಾಗರಿಕ ವಿಮಾನಯಾನ ಖಾತೆ ಸಚಿವರಿಗೆ ೨೦೦೯, ಫೆಬ್ರವರಿ ೨೦ರಂದು ಪತ್ರ ಬರೆದು, ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬಳ್ಳಾರಿಯಲ್ಲಿ ಆಯ್ಕೆ ಮಾಡಿದ ಸ್ಥಳ ಸೂಕ್ತವಲ್ಲ, ಈ ಕುರಿತು ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಆದರೆ ಪತ್ರದ ಫಲಿತಾಂಶ ಏನಾಯಿತೆಂಬುದು ಕೊನೆಗೂ ಗೊತ್ತಾಗಲೇ ಇಲ್ಲ.

ರಾಜ್ಯ, ರಾಷ್ಟ್ರದ ಗಮನ ಸೆಳೆದ ಭೂ ಸ್ವಾಧೀನ ವಿವಾದದಲ್ಲಿ ರೈತರ ಮೇಲೆ ಹಲ್ಲೆ, ದೌರ್ಜನ್ಯ ನಡೆದದ್ದು ದೊಡ್ಡ ಸುದ್ದಿಯಾಯಿತು. ೨೦೦೯ರ ಮಾರ್ಚ್ ೨ರಂದು 'ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಸ್.ಆರ್. ನಾಯಕ್, ಚಾಗನೂರು ಮತ್ತು ಸಿರಿವಾರ ಗ್ರಾಮಕ್ಕೆ ಭೇಟಿ ನೀಡಿ ರೈತರ ಅಹವಾಲು ಆಲಿಸಿ, ಪೊಲೀಸ್ ದೌರ್ಜನ್ಯದ ವಿರುದ್ಧ ಕಿಡಿ ಕಾರಿದರು. ರೈತರ ಸ್ಥಿತಿ ಕಂಡು ಮಮ್ಮಲ ಮರುಗಿದರು. ನೀರಾವರಿ ಸಮೃದ್ಧ ಭೂಮಿಯನ್ನು ವಶಪಡಿಸಿಕೊಳ್ಳಬಾರದು' ಎಂದು ಸರಕಾರಕ್ಕೆ ಸೂಚನೆ ನೀಡಿದರು. ೨೦೦೯ ಮಾರ್ಚ್ ೧೧ರಂದು ಚಾಗನೂರಿನಿಂದ ಬಳ್ಳಾರಿವರೆಗೆ ರೈತರು ಬಂಡಿ ಜಾಥಾ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ೨೦೦೯ ರ ಮಾರ್ಚ್ ೧೫ರಂದು ಚಾಗನೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಆರಂಭಿಸಿದ ರೈತರು ಮಾರ್ಚ್ ೨೫ರಂದು ರಾಜ್ಯಪಾಲ ರಾಮೇಶ್ವರ ಠಾಕೂರ್‌ಗೆ ಮನವಿ ಸಲ್ಲಿಸಿದರು.[೧೫]

೨೦೦೯ರ ಜುಲೈ ೨೩ರಂದು 'ಚಾಗನೂರು-ಸಿರಿವಾರ ನೀರಾವರಿ ಭೂಮಿ ಸಂರಕ್ಷಣೆ ಹೋರಾಟ ಸಮಿತಿ' ಅಸ್ತಿತ್ವಕ್ಕೆ ಬಂದು ಸಮಿತಿ ಸಂಚಾಲಕರಾಗಿ ಆಯ್ಕೆಯಾದ ಮಲ್ಲಿಕಾರ್ಜುನ ರೆಡ್ಡಿ, ಹೋರಾಟಕ್ಕೆ ಬಲ ಒದಗಿಸಿದರು. ೨೦೦೯ ಜುಲೈ ೨೪ರಂದು ಚಾಗನೂರಿನಿಂದ ಬಂಡಿ ಎಳೆದುಕೊಂಡು ಬಳ್ಳಾರಿವರೆಗೂ ಪಾದಯಾತ್ರೆ ನಡೆಸಿದ ರೈತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ೨೯ರವರೆಗೂ ಘನ ಆಹಾರ ನಿರಾಕರಣೆ

ಚಳವಳಿ ನಡೆಸಿದರು. ಮಠಾಧೀಶರು, ರಾಜಕಾರಣಿಗಳು, ರೈತಸಂಘಗಳು, ಎಡಪಕ್ಷದ ಸಿಪಿಐ ರಾಜ್ಯ ಕಾರ್ಯದರ್ಶಿ ನಾಗಭೂಷಣರಾವ್, ಎಸ್‌ಯುಸಿಐ ಮುಖಂಡ ಸೋಮಶೇಖರ್, ಪ್ರಾಂತ ರೈತ ಸಂಘದ ಕೆ. ಶಿವಶಂಕರ್ ಕೃಷಿ ಕಾರ್ಮಿಕ ಸಂಘದ ಎ. ದೇವದಾಸ್, ರೈತ ಸಂಘದ ಜಡಿಯಪ್ಪ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘದ ಮಂಜುಳಾ ಮುಂತಾದ ನಾಯಕರು ಮತ್ತು ಕಾರ್ಯಕರ್ತರು ಬೆಂಬಲ ವ್ಯಕ್ತಪಡಿಸಿ ಚಳವಳಿಯಲ್ಲಿ ಪಾಲ್ಗೊಂಡರು. ೨೦೦೯ ಜುಲೈನಲ್ಲಿ ಪಂಜಿನ ಮೆರವಣಿಗೆ, ಜುಲೈ ೧೯ರಂದು ಧಾರವಾಡದಲ್ಲಿ ಉರುಳು ಸೇವೆ ನಡೆಸಿ ಕೆಐಡಿಬಿಗೆ ಆಕ್ಷೇಪಣೆ ಸಲ್ಲಿಕೆ ರೈತ ಚಳವಳಿಯ ಭಾಗವಾಗಿದ್ದವು. ೨೦೦೯ ನವೆಂಬರ್ ೧೧ರಂದು, ಸರ್ವೆ ವಿರೋಧಿಸಿ ರೈತರು ನಡೆಸಲಿರುವ ಹೋರಾಟದಲ್ಲಿ 'ನರ್ಮದಾ ಬಚಾವೋ ಆಂದೋಲನದ ರೂವಾರಿ ಮೇಧಾ ಪಾಟ್ಕರ್ ಭಾಗವಹಿಸಿದಾಗ, ರೈತರು ದರ್ಪ ದೌರ್ಜನ್ಯಕ್ಕೆ ಹೆದರಿ ಭೂಮಿ ನೀಡಲು ಮುಂದಾಗಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.[೧೬] ಬಳ್ಳಾರಿ ಜಿಲ್ಲೆಯ ಮಂತ್ರಿಗಳು, ಜನಪ್ರತಿನಿಧಿಗಳು ಮತ್ತು ಜಿಲ್ಲಾಡಳಿತದ ಕಾರ್ಯವೈಖರಿ ಬಗ್ಗೆ ಭಾರಿ ಸಂಶಯ ಹುಟ್ಟು ಹಾಕಿತು. ೨೦೦೯, ಡಿಸೆಂಬರ್ ೮ರಂದು ಸರ್ವೆ ಅಧಿಕಾರಿಗಳು ಭೂಮಿ ವಶಕ್ಕೆ ಸರ್ವೇಗೆ ಬಂದಾಗಲೂ ಹಲವಾರು ರೈತರ ವಿರುದ್ಧ ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿದ ಹಾಗೂ ಸಿಬ್ಬಂದಿ ಅಪಹರಣದ ನೆಪದಲ್ಲಿ ೨೧ ರೈತರ ವಿರುದ್ಧ ಮೊಕದ್ದಮೆ ದಾಖಲಾಯಿತು. ಸ್ವತಃ ಸಿಬ್ಬಂದಿಯೇ ನನ್ನನ್ನು ಯಾರೂ ಅಪಹರಿಸಿಲ್ಲ ಎಂದು ಹೇಳಿದಾಗಲೂ, ಜಿಲ್ಲಾ ಪೊಲೀಸ್ ವರಿಷ್ಠರು ರೈತರ ವಿರುದ್ಧ ಪ್ರಕರಣ ದಾಖಲಿಸಿದರು. ಹೋರಾಟದ ಮಂಚೂಣಿಯಲ್ಲಿರುವ ಕೆಲವರ ವಿರುದ್ಧ ಸ್ಥಳೀಯ ಹಿಂಬಾಲಕರನ್ನು ಬಳಸಿ ಜಾತಿ ನಿಂದನೆ ಮೊಕದ್ದಮೆಗಳನ್ನು ದಾಖಲಿಸಿದರು.[೧೭]

೨೦೧೦ ಜನವರಿಯಿಂದ ರೈತ ಚಳವಳಿ ಮತ್ತೆ ಮುಂದುವರೆದಾಗ ಜಿಲ್ಲೆಯ ಸಚಿವರು ಫೆಬ್ರವರಿಯಲ್ಲಿ ಹೇಳಿಕೆ ನೀಡಿ 'ಚಳವಳಿ ನಡೆಸುತ್ತಿರುವವರೆಲ್ಲ ರೈತರಲ್ಲ ವಿಮಾನ ನಿಲ್ದಾಣಕ್ಕೆ ಭೂಮಿ ನೀಡಲು ಎಲ್ಲ ರೈತರು ಒಪ್ಪಿದ್ದಾರೆ' ಎಂದು ಹೇಳಿಕೆ ನೀಡುವುದರ ಮೂಲಕ, ರೈತರಲ್ಲಿ ಒಡಕು ಮೂಡಿಸಿ, ರೈತರ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಆದರೆ ಈಗ ನೂರಾರು ಎಕರೆಯನ್ನು ವಶಪಡಿಸಿಕೊಂಡಿರುವ ಸರಕಾರ ವಿಮಾನ ನಿಲ್ದಾಣದ ಕಾಮಗಾರಿಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ೨೦ ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಆದರೆ ಇತ್ತೀಚಿಗೆ ನ್ಯಾಯಾಲಯ ಇಲ್ಲಿನ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಕುರಿತು ತಡೆಯಾಜ್ಞೆ ನೀಡಿದ್ದು, ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ. ರೈತರು ತಮ್ಮ ಭೂಮಿಗಳನ್ನು ಮರಳಿ ಪಡೆಯಲು ಹೋರಾಟವನ್ನು ನಡೆಸುತ್ತಿದ್ದಾರೆ.

ರಾಷ್ಟ್ರಕ್ಕೆ ಆಹಾರ ಉತ್ಪಾದಿಸುವ ಫಲವತ್ತಾದ ಭೂಮಿಗಳನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಸರಕಾರದ ಯೋಜನೆಗಳು ಎಷ್ಟರಮಟ್ಟಿಗೆ ಸರಿ ಎನ್ನುವ ಚಿಂತನೆ ಈಗ ಪ್ರಾರಂಭವಾಗಿದೆ. ಅನೇಕ ರಂಗದ ಚಿಂತಕರು, ರೈತ ಮುಖಂಡರು ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಚಳವಳಿ ರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಹೀಗಾಗಿ ಸರಕಾರಗಳು, ನಿಗಮಗಳು, ಫಲವತ್ತಾದ, ಸಮೃದ್ಧವಾದ,

ನೀರಾವರಿ ಪ್ರದೇಶಗಳಲ್ಲಿ ಇಂತಹ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ, ಬರಡು ಭೂಮಿ ಹೊಂದಿರುವ ಬೀಳು, ಪ್ರದೇಶದಲ್ಲಿ ಕೈಗಾರಿಕೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರೆ, ಅದರಿಂದ ಕೃಷಿಗೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ. ಇದರಿಂದ ಆ ಪ್ರದೇಶದಲ್ಲಿನ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿ, ಆ ಪ್ರದೇಶದ ಅಭಿವೃದ್ಧಿಗೂ ಕಾರಣವಾದಂತಾಗುತ್ತದೆ.

ಇನ್ನೊಂದು ಕಡೆ ಕೆಲವು ರೈತರು ಆಸೆಆಮಿಷಗಳಿಗೆ ಬಲಿಯಾಗಿ ವಂಶಪಾರಂಪರ್ಯವಾಗಿ ಬಂದಿರುವ ಕೃಷಿ ಭೂಮಿಯನ್ನು ಮಾರಾಟ ಮಾಡುತ್ತಿರುವುದು ದೊಡ್ಡ ದುರಂತವೇ ಆಗಿದೆ. ಇದರ ಪರಿಣಾಮ ಭವಿಷ್ಯದಲ್ಲಿ ಕೃಷಿ ಭೂಮಿಯ ಕೊರತೆ ಉಂಟಾಗುವ ಅಪಾಯದ ಬಗ್ಗೆ ಯೋಚಿಸುವ ಕಾಲ ಬಂದಿದೆ. ಹಾಗಾಗಿ ಸರಕಾರ ಮತ್ತು ರೈತರ ವರ್ಗ, ಇಬ್ಬರ ಪಾತ್ರವೂ ರೈತ ಸಂಸ್ಕೃತಿಯ ಉಳಿಯುವಿಕೆಯಲ್ಲಿ ಪ್ರಮುಖವಾಗಿದೆ. ನಾವು ಮಾನವ ಹಕ್ಕುಗಳ ಬಗ್ಗೆ ಮಾತನಾಡುತ್ತೇವೆ. ಮಹಿಳೆ ಮತ್ತು ವಿದ್ಯಾರ್ಥಿಗಳ ಹಕ್ಕುಗಳ ಬಗ್ಗೆ ಮಾತನಾಡುತ್ತೇವೆ. ಆದರೆ ಒಬ್ಬ ರೈತನಿಗೆ ತನ್ನದೇ ಜಮೀನನ್ನು ಕಾಪಾಡಿಕೊಳ್ಳುವ, ಯಾರ ಹಂಗು ಇಲ್ಲದೆ ಬದುಕುತ್ತಿದ್ದ ರೈತನ ಸ್ವತಂತ್ರ ಬದುಕಿಗೆ ಧಕ್ಕೆಯಾದಾಗ ಮೌನಕ್ಕೆ ಶರಣಾಗುತ್ತೇವೆ. (ಇತರ ಭೂ ಹೋರಾಟಗಳನ್ನು ದಲಿತ ಚಳವಳಿ ಅಧ್ಯಾಯದಲ್ಲಿ ದಾಖಲಿಸಲಾಗಿದೆ.)

ಭೂ ಬ್ಯಾಂಕ್ ಯೋಜನೆ

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲೂ ಸಾವಿರಾರು ಎಕರೆ ಭೂ ಸ್ವಾಧೀನಕ್ಕೆ ಯೋಜನೆ

ಅಭಿವೃದ್ಧಿ, ಉದ್ಯಮ, ಉದ್ಯೋಗ ಅವಕಾಶಗಳ ದೃಷ್ಟಿಯಿಂದ ಹೈದರಾಬಾದ್ ಕರ್ನಾಟಕ ಪ್ರದೇಶ ನಿರೀಕ್ಷಿತ ಬೆಳವಣಿಗೆ ಸಾಧಿಸಿಲ್ಲ. ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ತೋರ್ಪಡೆಯಾದಂತಹ ಆಸಕ್ತಿ, ಅನುಷ್ಠಾನ ಹಂತದಲ್ಲಿ ಮುಗ್ಗರಿಸಿದ ನಿದರ್ಶನಗಳಿವೆ. ಆದರೂ ಕೈಗಾರಿಕೆಗಳ ಅಭಿವೃದ್ಧಿಗೆಂದು 'ಭೂ ಬ್ಯಾಂಕ್' ಯೋಜನೆಯಡಿ ಸರಕಾರ ಅಧಿಕ ಪ್ರಮಾಣದ ಭೂಮಿ ಗುರುತಿಸಿದೆ. ಮಾಹಿತಿ ಪ್ರಕಾರ ಸುಮಾರು ೧೬,೭೪೪ ಎಕರೆ ಜಮೀನು ಈ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳಲು ಉತ್ಸುಕವಾಗಿದೆ. ಫಲವತ್ತಾದ ಜಮೀನನ್ನು ಕೈಗಾರಿಕೆಗಳಿಗೆ ಬಿಟ್ಟು ಕೊಡಲು ರೈತರು ವಿರೋಧಿಸುತ್ತಿದ್ದಾರೆ. ಇದರ ನಡುವೆಯೇ ರಾಜ್ಯ ಸರಕಾರದ ಭೂ ಬ್ಯಾಂಕ್ ಯೋಜನೆ ಸದ್ದಿಲ್ಲದೇ ಪ್ರಗತಿ ಸಾಧಿಸುತ್ತಿದೆ. ಬಳ್ಳಾರಿ ಕೊಪ್ಪಳ ಜಿಲ್ಲೆಗಳನ್ನು ಉಕ್ಕು ವಲಯ(ಸ್ಟೀಲ್‌ಹಬ್)ವೆಂದು ಅಧಿಕೃತವಾಗಿ ಸಾರಿದ್ದು, ಮಿತ್ತಲ್‌ನಂತಹ ಸಹಸ್ರಾರು ಕೋಟಿ ರೂ. ಬಂಡವಾಳ ಹೂಡಿಕೆ ಮಾಡುವಂತಹ ಉದ್ಯಮಿಗಳಿಗೆ ರತ್ನಗಂಬಳಿ ಹಾಸಿ ಸ್ವಾಗತಿಸಲಾಗುತ್ತಿದೆ. ರಾಯಚೂರು, ಗುಲ್ಬರ್ಗಾ ಜಿಲ್ಲೆಗಳನ್ನು ವಿದ್ಯುತ್ ವಲಯ(ಪವರ್‌ಹಬ್)ವೆಂದು ಘೋಷಿಸುವ ಪ್ರಯತ್ನದಲ್ಲಿ ಸರಕಾರವಿದೆ.

ಔದ್ಯೋಗಿಕ ಪ್ರದೇಶಾಭಿವೃದ್ಧಿಗೆ ಹೈದರಾಬಾದ್ ಕರ್ನಾಟಕ ಪ್ರಾಂತದ ಐದು ಜಿಲ್ಲೆಗಳಲ್ಲಿ ಗುರುತಿಸಿದ ಭೂಮಿ ಪೂರ್ತಿ ಹಿಡುವಳಿದಾರರಿಗೆ ಸೇರಿದೆ. ಸ್ವಾಧೀನಕ್ಕೆ ಪಡೆಯಲಿರುವ ಒಟ್ಟು ಭೂಮಿ ಪೈಕಿ ೧೪,೫೧೫ ಎಕರೆ ಭೂಮಿಗೆ ಪ್ರಾಥಮಿಕ ಹಂತದ ಪ್ರಕ್ರಿಯೆ ಮುಗಿಸಿ ಸರಕಾರಕ್ಕೆ ಪ್ರಸ್ತಾವನೆಯನ್ನು ಇದೇ ಜನವರಿಯಲ್ಲಿ

ಸಲ್ಲಿಸಲಾಗಿದೆ. ಬಾಕಿ ೨,೨೨೯ ಎಕರೆ ಭೂಮಿ ವಶಕ್ಕೆ ಅನುಮತಿ ಕೋರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಯತ್ನಗಳು ನಡೆದಿವೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಐದು ಜಿಲ್ಲೆಗಳಲ್ಲಿ
ಭೂ ಬ್ಯಾಂಕ್ ಯೋಜನೆಯಡಿ ಗುರುತಿಸಿರುವ ಭೂಮಿಯ ವಿವರ

ಕ್ರ.ಸಂ.	ಜಿಲ್ಲೆ	ಎಕರೆ
೧.	ಬಳ್ಳಾರಿ	೬,೧೫೧
೨.	ಗುಲಬರ್ಗಾ	೪,೪೨೯
೩.	ಬೀದರ್	೨,೧೦೦
೪.	ರಾಯಚೂರು	೨,೦೬೪
೫.	ಕೊಪ್ಪಳ	೨,೦೦೦ [೧೮]

ಉದ್ಯಮಗಳ ಸ್ಥಾಪನೆಯಲ್ಲಿ ಹಿಂದುಳಿದ ಭಾಗದ ಜನರು ಇಂತಹ ಕ್ರಮ ವಿರೋಧಿಸಬೇಕೋ, ಸ್ವಾಗತಿಸಬೇಕೋ ಎಂಬ ದ್ವಂದ್ವದಲ್ಲಿದ್ದಾರೆ. ಪರ ವಿರೋಧ ಕವಲುಗಳಲ್ಲಿ ಚಳವಳಿ ನಿಶ್ಯಕ್ತವಾಗಿದೆ. ಪರಿಸರ ಹಾಗೂ ಆರೋಗ್ಯ ರಕ್ಷಣೆ ಬಗ್ಗೆ ಕಾಳಜಿ ತೋರುವ ಸಂಘಟನೆಗಳು ಬಲವಾದ ವಿರೋಧ ವ್ಯಕ್ತಪಡಿಸುತ್ತಿವೆ. ಫಲವತ್ತಾದ ನೀರಾವರಿ ಭೂಮಿ ಮಾಲೀಕರ ವಿರೋಧ, ಖುಷ್ಕಿ ಭೂಮಿಯುಳ್ಳ ಸಣ್ಣ ರೈತರು ಪರ ನಿಲುವು ತಳೆದಿರುವುದು ಪರಿಣಾಮಕಾರಿ ಹೋರಾಟಕ್ಕೆ ಅಡ್ಡಗಾಲು ಹಾಕಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಈ ರೀತಿಯ ಹೋರಾಟಗಳು ರೈತರಿಗೆ ಒಂದು ಪಾಠವಾಗಿದ್ದು ರೈತರು ಒಗ್ಗಟ್ಟಾಗಿ ಗಟ್ಟಿ ಧ್ವನಿ ಮಾಡಿ ಸತ್ಯಾಗ್ರಹ ಹಾಗೂ ಚಳವಳಿಗಳ ಮೂಲಕ ಮಾತ್ರ ಸರಕಾರವು ಎಚ್ಚೆತ್ತುಕೊಳ್ಳುತ್ತದೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸುತ್ತದೆ ಎನ್ನುವ ಅನುಭವವನ್ನು ಪಡೆದಂತಾಗಿ ಮುಂದಿನ ಹೋರಾಟಗಳಿಗೆ ಸ್ಫೂರ್ತಿ ನೀಡುತ್ತವೆ ಎನ್ನುವುದನ್ನು ರೈತರು ಹಾಗೂ ರೈತ ನಾಯಕರಿಗೆ ಮನದಟ್ಟಾಯಿತು. ಹೀಗೆ ಚಳವಳಿಗಳು ಯಶಸ್ವಿಯಾಗಿ ಫಲ ನೀಡಿದಾಗಲೆಲ್ಲಾ ನಾಯಕರಿಗೆ ಸ್ಫೂರ್ತಿ ನೀಡಿ ಮುಂದಿನ ಹೋರಾಟಕ್ಕೆ ಭರವಸೆ ನೀಡಿದರೆ ಚಳವಳಿಗಳ ವಿಫಲತೆಯು ರೈತರಲ್ಲಿ ಮತ್ತು ನಾಯಕರಲ್ಲಿ ಹೋರಾಟದ ಕಿಚ್ಚು, ಛಲ, ಒಗ್ಗಟ್ಟು ಪ್ರದರ್ಶನಕ್ಕೆ ದಾರಿ ಮಾಡಿಕೊಟ್ಟವು.

೪.೧.೨. ಸಮಕಾಲೀನ ಸಂದರ್ಭದಲ್ಲಿ ರೈತರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಭಾರತ ಜಾಗತಿಕ ಶಕ್ತಿಯಾಗಿ ಬೆಳೆಯುತ್ತಿದೆ ಎಂದು ಒಂದು ವರ್ಗ ಹೆಮ್ಮೆಪಟ್ಟುಕೊಳ್ಳುತ್ತಿರುವ ಸಮಯದಲ್ಲೇ ಇನ್ನೊಂದು ಜನವರ್ಗ(ರೈತರು) ಆತ್ಮಹತ್ಯೆಯ ಹಾದಿ ಹಿಡಿದಿದೆ ಎನ್ನುವುದು ಜಾಗತಿಕ ಶಕ್ತಿಯ ಪರಿಕಲ್ಪನೆ ಎಷ್ಟು ಅರ್ಥವಿಲ್ಲದ್ದು ಎನ್ನುವುದನ್ನು ತೋರಿಸುತ್ತದೆ. ಆದರೂ ಭಾರತವನ್ನು ಜಾಗತಿಕ ಶಕ್ತಿಯಾಗಿ ಮಾಡುವ ಹಠವನ್ನು ಮಾತ್ರ ನಮ್ಮ ಸರಕಾರಗಳು ನಿಲ್ಲಿಸಿಲ್ಲ. ದಿನೇ ದಿನೇ ನವವಸಾಹತುಶಾಹಿಯ ತೀವ್ರ ಆಕರ್ಷಣೆಗೆ ಒಳಗಾಗತೊಡಗಿದೆ. ನವವಸಾಹತುಶಾಹಿಯು

ವಸಾಹತುಶಾಹಿಗಿಂತ ಹೆಚ್ಚು ಅಪಾಯಕಾರಿಯಾಗಿದೆ. ಪ್ರಸ್ತುತ ವ್ಯವಸ್ಥೆಯು ಒಂದು ಕಡೆ ಜನರ ದಾಹವನ್ನು ನಿರಂತರವಾಗಿ ಹೆಚ್ಚಿಸುತ್ತಾ, ಮತ್ತೊಂದು ಕಡೆ ಬಡತನ ನಿವಾರಣೆಯ ಬಗ್ಗೆ ಮಾತನಾಡುವುದರ ಮೂಲಕ ಬಡತನವನ್ನು ಶಾಶ್ವತಗೊಳಿಸುವ ವ್ಯವಸ್ಥೆಯೇ ಆಗಿದೆ. ಇದು ಒಂದು ರೀತಿಯಲ್ಲಿ ರೈತ ಸಂಸ್ಕೃತಿಯನ್ನು ಅಂತಿಮವಾಗಿ ಬುಡಮೇಲುಗೊಳಿಸುವ ಕೆಲಸವೇ ಆಗಿದೆ. ರೈತರ ಆತ್ಮಹತ್ಯೆಗಳು ಪ್ರಸ್ತುತ ವ್ಯವಸ್ಥೆಯ ಜ್ವಲಂತ ಉದಾಹರಣೆಯಾಗಿದೆ.

ರೈತ ಸಂಸ್ಕೃತಿಯನ್ನು ಅವನತಿಗೊಳಿಸುವಂಥ ಪ್ರಯತ್ನಗಳನ್ನು ಮುಂದುವರೆಸಿರುವ ಸರಕಾರಗಳಿಗೆ ರೈತ ಚಳವಳಿಗಳ ಮೂಲಕ ಉತ್ತರಿಸಿ ಎಚ್ಚರಿಕೆ ನೀಡುವುದು ಅನಿವಾರ್ಯವಾಗಿದೆ ಮತ್ತು ಇಂತಹ ವ್ಯವಸ್ಥೆ ವಿರುದ್ಧ ತನ್ನದೇ ಪ್ರತಿರೋಧ ವ್ಯವಸ್ಥೆಯೊಂದನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಇಂತಹ ಪ್ರಕ್ಷುಬ್ಧ ಸಮಯದಲ್ಲಿ ಪ್ರಸಕ್ತ ಸರಕಾರಗಳು ರೈತ ಸಂಸ್ಕೃತಿಯನ್ನು ಗೌರವಿಸಿ, ಉಳಿಸಿ, ಬೆಳೆಸುವ ಜವಾಬ್ದಾರಿಯನ್ನು, ನೀತಿಗಳನ್ನು ರೂಪಿಸಬೇಕಾಗಿರುವುದು ಅತ್ಯವಶ್ಯಕವಾಗಿದೆ.

ರೈತ ಸಂಸ್ಕೃತಿಯ ಮೂಲವನ್ನು ನೋಡಿದಾಗ ಶತಮಾನಗಳಿಂದ ರೈತರು ತಮ್ಮ ಅವಶ್ಯಕತೆಗಳಾದ ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದ ವಸ್ತುಗಳಲ್ಲಿ ಸ್ವಾವಲಂಬಿಗಳಾಗಿದ್ದರು. ಆದರೆ ಕ್ರಮೇಣ ರೈತರು ಎಲ್ಲಾ ವಿಷಯದಲ್ಲಿ ಪರಾವಲಂಬಿಗಳಾಗಿದ್ದರಿಂದ ಬೀಜ, ಗೊಬ್ಬರಗಳ ಅಭಾವ ಬೆಲೆ ಏರಿಕೆಯ ವಿಚಾರಗಳೇ ಬೃಹದಾಕಾರ ತಳೆದು ಸಮಸ್ಯೆಗಳು ಸೃಷ್ಟಿಯಾಗುತ್ತಾ ಬಂದಿರುವುದನ್ನು ಗಮನಿಸಬಹುದು. ಈ ವಸ್ತುಗಳ ಉತ್ಪಾದನಾ ಕಂಪನಿಗಳಿಂದಲೂ ರೈತರ ಶೋಷಣೆ ಆರಂಭವಾಯಿತು. ರೈತರಿಗೆ ಬೀಜ, ರಸಗೊಬ್ಬರ, ಔಷಧಿಗಳನ್ನು ಉತ್ಪಾದಿಸುತ್ತಿರುವ ಕಂಪನಿಗಳು ಮತ್ತು ಮಾರಾಟ ಮಾಡುತ್ತಿರುವ ವ್ಯಾಪಾರಸ್ಥರು ಇವುಗಳ ಮಾರಾಟದಿಂದ ಕೆಲವೇ ವರ್ಷಗಳಲ್ಲಿ ಅತ್ಯಧಿಕ ಲಾಭಗಳಿಸಿ ಶ್ರೀಮಂತ ರಾಗುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಬೀಜ ಔಷಧಿಗಳ ತಯಾರಿಕೆಗೆ ಮುಗಿ ಬಿದ್ದಿದ್ದಾರೆ. ಒಂದೊಂದು ಕಂಪನಿಯು ಲಕ್ಷಗಟ್ಟಲೆ ತೆರಿಗೆ ಕಟ್ಟುತ್ತಿದೆ ಎಂದರೆ ಅದರ ಆದಾಯ ಎಷ್ಟಿರಬಹುದೆಂದು ಊಹಿಸಬಹುದಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯ ದಲ್ಲಾಳಿ ವರ್ತಕರು ಕೇವಲ ಕಮಿಷನ್ ಮೂಲಕ ಹಣಗಳಿಸಿಕೊಂಡಿದ್ದಾರೆ.

ಆದರೆ ಇವರೆಲ್ಲರನ್ನು ತನ್ನ ಮೇಲೆ ಅವಲಂಬನೆ ಆಗುವಂತೆ ಮಾಡಿರುವ ರೈತವರ್ಗ ಶ್ರೀಮಂತ ನಾಗುತ್ತಿಲ್ಲವೇಕೆ, ಬಂಗಲೆಗಳಲ್ಲಿ ವಾಸ ಮಾಡದೇ ಅದೇ ಹಳೆ ಮನೆ, ಗುಡಿಸಲಿನಲ್ಲಿ ಇರುವುದೇಕೆ, ಕಾರುಗಳಲ್ಲಿ ಓಡಾಡುತ್ತಿಲ್ಲವೇಕೆ ದಿನೇ ದಿನೇ ಸಾಲಗಾರನಾಗುತ್ತಿರುವುದೇಕೆ, ಸಾಲ ತೀರಿಸಲಾಗದೆ ಆತ್ಮಹತ್ಯೆ ದಾರಿ ಹಿಡಿದಿರುವುದೇಕೆ ಎನ್ನುವ ಮೂಲಭೂತ ಪ್ರಶ್ನೆಗಳು ಉದ್ಭವಿಸುತ್ತವೆ. ಇದಕ್ಕೆ ಸರಕಾರದ ನೀತಿಗಳು, ಪ್ರಕೃತಿ ವಿಕೋಪಗಳು, ರೈತರ ನಿಸ್ಸಾಹಯಕತೆ ಕಾರಣವೇ ಎನ್ನುವುದು ಚರ್ಚೆಗೆ ಒಳಪಡಬೇಕಾಗಿರುವ ವಿಷಯವಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಳೆಯನ್ನೇ ನಂಬಿರುವ ಹಾಗೂ ೧ ರಿಂದ ೨ ಎಕರೆ ಭೂಮಿಯನ್ನು ಮಾತ್ರ ಹೊಂದಿರುವ ಹೆಚ್ಚಿನ ರೈತರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.

ತಲತಲಾಂತರಗಳಿಂದ ಇವರ ಬದುಕು ಬಡತನದಲ್ಲೇ ಸಾಗಿದೆ. ಮಳೆಯನ್ನೇ ನಂಬಿದ ಇವರ ಕೃಷಿ ಬದುಕು, ಬರ, ಅತೀವೃಷ್ಟಿ, ವಿದ್ಯುತ್ ಅಭಾವ ಮತ್ತು ಸರಕಾರದ ನೀತಿಗಳಿಂದ ಬಾಳು ಅತಂತ್ರವಾಗಿದೆ. ಸರಕಾರ ರೈತನಿಗೆ ಸಬ್ಸಿಡಿಯ ಆಮೀಷವೊಡ್ಡಿ ರೈತನು ಸಾಲಗಾರನಾಗುವಂತೆ ಮಾಡಿದೆ."[೧೯] ಸ್ವಾತಂತ್ರ್ಯಾನಂತರದಲ್ಲಿ ದೇಶದ ರೈತರು ಸ್ವಾವಲಂಬಿಗಳಾಗಿ ಬದುಕುವ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದ್ದಾರೆ. ಸುಧಾರಿತ ಬೀಜ, ನವೀನ ತಳಿ, ಹೆಚ್ಚಿನ ಇಳುವರಿ ಎಂಬ ಕಂಪನಿಗಳ ಜಾಹೀರಾತು ಮತ್ತು ಪ್ರಚಾರಕ್ಕೆ ಒಳಗಾದ ರೈತರು ದೇಶೀ ತಳಿಗಳನ್ನೇ ಕೈ ಬಿಟ್ಟು, ಹೊಸ ತಳಿಗಳಿಗೆ ಆಕರ್ಷಿತರಾದರು. ರಸಗೊಬ್ಬರ ಬಳಕೆಯಲ್ಲಿ ವಿವೇಚನೆ ಮರೆತು ರೈತರು ಭೂಮಿಯ ಸತ್ವವನ್ನೇ ಹಾಳು ಮಾಡಿಕೊಂಡಿದ್ದಾರೆ. ರೈತರ ಮೇಲೆ ಅವಲಂಬಿತರಾದ ಉಪ ಕುಲಕಸುಬುದಾರರು ತಮ್ಮ ಕಸುಬುಗಳನ್ನು ತೊರೆದು ಇನ್ನಾವುದೋ ಕೆಲಸದಲ್ಲಿದ್ದಾರೆ. ಹೀಗಾಗಿ ಹೈದರಾಬಾದ್ ಕರ್ನಾಟಕದ ರೈತರು ಒಂದಲ್ಲಾ ಒಂದು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಬರ ಸಂದರ್ಭಗಳು

ಗುಲಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳು ಬರಗಾಲದ ಪ್ರದೇಶಗಳು ಎಂದೇ ಪ್ರಸಿದ್ಧವಾಗಿವೆ. ಹೈದರಾಬಾದ್ ಕರ್ನಾಟಕ ಎಂದಾಕ್ಷಣ ನೆನಪಿಗೆ ಬರುವುದೇ ಬರಗಾಲದ ನಾಡು ಮತ್ತು ಬಿಸಿಲಿನ ತವರೆಂದು. ಇಲ್ಲಿನ ಬಿಸಿಲಿನ ತಾಪದ ಬಗ್ಗೆ ಋತುಮಾನಗಳ ಬಗ್ಗೆ ಇಲ್ಲಿನ ಜನರ ಭಾಷೆಯಲ್ಲಿ ಹೇಳಬೇಕೆಂದರೆ ಇವರಿಗೆ ತಿಳಿದಿರುವುದು ೨ ಕಾಲಗಳು. ಒಂದು ಬೇಸಿಗೆ ಕಾಲ ಇನ್ನೊಂದು ಅತೀ ಬೇಸಿಗೆ ಕಾಲ. ಇಂತಹ ಮಾತು ಅತಿಶೋಕ್ತಿ ಎನಿಸಿದರೂ ಈ ಪ್ರದೇಶಗಳ ಬಿಸಿಲಿನ ತಾಪವನ್ನು ಅನುಭವಿಸಿದವರಿಗೆ ಇದರ ವಾಸ್ತವ ತಿಳಿಯುತ್ತದೆ. ಏಪ್ರಿಲ್, ಮೇ ತಿಂಗಳಲ್ಲಿ ಇಲ್ಲಿನ ಉಷ್ಣತೆ ೪೨ ರಿಂದ ೪೩ ಡಿಗ್ರಿ ಸೆಲ್ಸಿಯಸ್‌ನಷ್ಟಿರುತ್ತದೆ. ಇಂತಹ ಕಡು ಬೇಸಿಗೆಯಲ್ಲಿ ವಿದ್ಯುತ್ ಅಭಾವ ಮತ್ತು ನೀರಿಗೆ ಹಾಹಾಕಾರ ಉಂಟಾಗಿರುತ್ತದೆ. ಇಲ್ಲಿನ ಕೃಷಿ ಜೂನ್‌ನಿಂದ ಸೆಪ್ಟೆಂಬರ್ ನಡುವೆ ಬೀಳುವ ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿದೆ. ಇಲ್ಲಿನ ಗ್ರಾಮೀಣ ಜನತೆಯ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು ಮಳೆಯನ್ನೇ ಅವಲಂಬಿಸಿವೆ. ಶೇ. ೭೦ರಷ್ಟು ರೈತರು ಮುಂಗಾರು ಮಳೆಯನ್ನೇ ಅವಲಂಬಿಸಿರುವ ಭಾಗದಲ್ಲಿ ಮಳೆ ಮಾತ್ರ ಸಕಾಲದಲ್ಲಿ ಬಾರದಿರುವುದು ಸಾಮಾನ್ಯವಾಗಿದೆ. ಬೇಸಿಗೆಯಲ್ಲಿ ರೈತರ ಭೂಮಿ ಬಿರುಕು ಬಿಟ್ಟಿರುತ್ತದೆ. ಹುಲ್ಲು ಒಣಗಿ ಮಣ್ಣು ಸೇರಿರುತ್ತದೆ. ರೈತ ಆಕಾಶವನ್ನು ಮೋಡಗಳನ್ನು ನೋಡುತ್ತಾ ಮಳೆಗಾಗಿ ಕಾಯುತ್ತಾ ಕುಳಿತುಕೊಳ್ಳುವುದು ಮಾತ್ರ ತಪ್ಪಿಲ್ಲ. ಮುಂಗಾರು ಮಳೆ ಕೈ ಕೊಟ್ಟರೆ ಈ ಭಾಗದ ರೈತರ ಒಂದು ವರ್ಷದ ಬೆಳೆಯೆ ಕೈಕೊಟ್ಟಂತೆ.

ಮುಂಗಾರು ಮಳೆ ಪರಿಸ್ಥಿತಿ ಪ್ರತಿಸಾರಿಯೂ ಚಂಚಲವಾಗಿರುತ್ತದೆ. ೨೦೦೭ ರಿಂದ ೨೦೦೯ನೇ ವರ್ಷಗಳಲ್ಲಿ ಬಿದ್ದ ಮಳೆ ಕಳೆದ ೮೩ ವರ್ಷಗಳಲ್ಲೇ ಅತ್ಯಂತ ಕಡಿಮೆ ಎಂದು ತಿಳಿದು ಬರುತ್ತದೆ. ಆ ಸಮಯದಲ್ಲಿ ಬಿತ್ತನೆ ಕಾರ್ಯ ಶೇಕಡ ೨೫ ರಿಂದ ೩೫ರಷ್ಟು ಕುಂಠಿತವಾಗಿದೆ. ಇದರಿಂದ ಆಹಾರ ಧಾನ್ಯಗಳ ಇಳುವಳಿಯು ದಾಖಲೆ ಪ್ರಮಾಣದಲ್ಲಿ ಕುಂಠಿತವಾಗಿತ್ತು. ಹೀಗಾಗಿ ರಾಜ್ಯ ಸರಕಾರ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳನ್ನು ಬರ ಪೀಡಿತ ಜಿಲ್ಲೆಗಳೆಂದು ಘೋಷಣೆ ಮಾಡಿತ್ತು.

ಇನ್ನು ಬರ ಸ್ಥಿತಿ ಬಂದಾಗ ಸರಕಾರದ ಯೋಜನೆಗಳು ಸಿದ್ಧವಿರುತ್ತವೆ. ಆದರೆ ಯೋಜನೆಗಳು ಮತ್ತು ಸಂಬಂಧಪಟ್ಟ ಖರ್ಚು ವೆಚ್ಚಗಳು, ಘೋಷಣೆಗಳು, ಪತ್ರಿಕೆಗಳ ಮುಖಪುಟಗಳಲ್ಲಿ ಆಕರ್ಷಿತವಾಗಿರುತ್ತವೆಯೇ ಹೊರತು ಬರ ಪೀಡಿತ ಪ್ರದೇಶಗಳಿಗೆ, ಬರಕ್ಕೆ ತುತ್ತಾದ ಜನರಿಗೆ ಪರಿಹಾರ ಒದಗಿಸುವುದರಲ್ಲಿ ಬಹುತೇಕ ವಿಫಲವಾಗಿರುತ್ತವೆ. ಇಲ್ಲಿನ ಜನಪ್ರತಿನಿಧಿಗಳು ಬರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಶಾಶ್ವತ ಯೋಜನೆಗಳನ್ನು ರೂಪಿಸುವುದರಲ್ಲಿ ವಿಫಲರಾಗಿರುವುದು ಕಂಡು ಬರುತ್ತದೆ. ಇಂತಹ ನಿರ್ಲಕ್ಷ್ಯ ತೋರುವ ಬದಲಾಗಿ ಭಾಗದ ಜನಪ್ರತಿನಿಧಿಗಳು ಇಲ್ಲಿನ ಸ್ಥಿತಿಯನ್ನು ಅರ್ಥಮಾಡಿಕೊಂಡು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ಮೀಸಲಾಗಿರುವ ಹಣವನ್ನು ಚೆಕ್ ಡ್ಯಾಂಗಳ ನಿರ್ಮಾಣಕ್ಕೆ, ಏತ ನೀರಾವರಿಗಳಿಗೆ, ಶಾಶ್ವತ ಕುಡಿಯುವ ನೀರಿನ ಯೋಜನೆಗಳಿಗೆ, ಕೆರೆಗಳ ನಿರ್ಮಾಣಕ್ಕೆ, ನೀರು ಸಂಗ್ರಹಣೆಗೆ, ಸಾರ್ಥಕವಾಗಿ ಬಳಸಿಕೊಂಡರೆ ಬರಗಾಲದ ಸಮಯದಲ್ಲಿ ಸ್ವಲ್ಪಮಟ್ಟಿಗಾದರೂ ಜನರ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗಬಹುದು.

ನೆರೆ ಹಾವಳಿ

ಶತಮಾನಗಳಿಂದಲೂ ಮಳೆ ಅಭಾವದಿಂದ ಬರಗಾಲಕ್ಕೆ ತುತ್ತಾಗುತ್ತಿರುವ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಲಸೆ ಹೋಗುವುದು, ಉದ್ಯೋಗ ಅರಸಿ ಗುಳೆ ಹೋಗುವುದು ಸಾಮಾನ್ಯವಾಗಿದೆ. ೨೦೦೭ರಿಂದ ೨೦೧೦ರ ಅವಧಿಯಲ್ಲಿ ಅತ್ಯಂತ ಕಡಿಮೆ ಮಳೆ ಬಿದ್ದಿದ್ದರಿಂದ ಜನ ಕುಡಿಯುವ ನೀರಿಗೂ ಪರದಾಡಬೇಕಾದ ಸ್ಥಿತಿ ಇತ್ತು. ಆದರೆ ಆಗಾಗ ಇಲ್ಲಿ ಉಂಟಾಗುವ ಅತೀವೃಷ್ಟಿ ಜನರನ್ನೇ ತಬ್ಬಿಬ್ಬುಗೊಳಿಸಿ ಅವರ ಜೀವನವನ್ನೇ ನರಕ ಸದೃಶ್ಯವನ್ನಾಗಿ ಮಾಡಿ ಬಿಡುತ್ತದೆ. ಉದಾಹರಣೆಗೆ, ೨೦೧೦ರ ಸೆಪ್ಟೆಂಬರ್ ೨೯ ರಿಂದ ಅಕ್ಟೋಬರ್ ೨ಳರವರೆಗೆ ಈ ಭಾಗದಲ್ಲಿ ಸುರಿದ ಭಾರೀ ಮಳೆ ಇಲ್ಲಿನ ಜನರ ಜನಜೀವನವನ್ನು ತತ್ತರಗೊಳಿಸಿತು. ಶತಮಾನದಲ್ಲೇ ಕಂಡರಿಯದ ಭೀಕರ ಪ್ರವಾಹ ಹೈದರಾಬಾದ್ ಕರ್ನಾಟಕ ರಾಜ್ಯಗಳಿಗೆ ಅಪ್ಪಳಿಸಿ ಹಿಂದೆಂದೂ ಕಾಣದಂತ ಪ್ರವಾಹದ ಅಬ್ಬರಕ್ಕೆ ಸಿಲುಕಿ ಇಲ್ಲಿನ ಜಿಲ್ಲೆಗಳು ನಲುಗಿ ಹೋದವು.

ಸೆಪ್ಟೆಂಬರ್‌ನಲ್ಲಿ ಸುರಿದ ಮಳೆಗೆ ಕೃಷ್ಣ, ತುಂಗಭದ್ರಾ, ಭೀಮ ನದಿಗಳು ಮತ್ತು ಚಿಕ್ಕಪುಟ್ಟ ಹಳ್ಳಗಳೆಲ್ಲಾ ತುಂಬಿ ಉಕ್ಕಿ ಹರಿದು ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ನೆರೆಯ ಹಾವಳಿಗೆ ಸಿಲುಕಿ ನರಳಿ ಹೋದವು. ಕಳೆದ ೪೦ ವರ್ಷಗಳ ಇತಿಹಾಸದಲ್ಲಿ ದಾಖಲಾದ ಎರಡನೇ ಅತ್ಯಧಿಕ ಮಳೆ ಈ ಅವಧಿಯಲ್ಲಿ ಸುರಿದಿತ್ತು. ಮಳೆಯಿಂದಾದ ಅನಾಹುತಕ್ಕೆ ಸುಮಾರು ೧೪೧ ಜನ ಮರಣ ಹೊಂದಿದರೆ ಸುಮಾರು ೭೦೦೦ಕ್ಕಿಂತ ಹೆಚ್ಚು ಜಾನುವಾರುಗಳು ಪ್ರಾಣ ಕಳೆದುಕೊಂಡವು. ರಸ್ತೆಗಳು, ಸೇತುವೆಗಳು, ಸಣ್ಣಪುಟ್ಟ ಆಣೆಕಟ್ಟುಗಳು, ನಾಲೆಗಳು, ಮನೆಗಳು, ಪಂಪ್‌ಸೆಟ್‌ಗಳು, ಕುಡಿಯುವ ನೀರಿನ ಸಂಪರ್ಕಗಳು, ಪೈಪ್‌ಲೈನ್‌ಗಳು, ವಿದ್ಯುತ್ ಕಂಬಗಳು ಕೊಚ್ಚಿಕೊಂಡು ಹೋದವು. ಗುಲಬರ್ಗಾ ವಿಭಾಗ ಒಂದರಲ್ಲೇ ಸುಮಾರು ಎರಡೂವರೆ ಲಕ್ಷ ಮನೆಗಳು ಕುಸಿದು ಬಿದ್ದವು. ನೆರೆ ಹಾವಳಿಯಿಂದ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿತ್ತು. ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ವಾರ್ಷಿಕ ವಾಡಿಕೆ ಮಳೆ ಪ್ರಮಾಣವೇ

೨೫೦ ಮಿ.ಮೀ.ನಿಂದ ೩೫೦ ಮಿ.ಮೀ.ಗಳು. ಆದರೆ ಐದೇ ದಿನದಲ್ಲಿ ಜಿಲ್ಲೆಗಳಲ್ಲಿ ಸುಮಾರು ೮೦೦ ಮಿ.ಮೀ.ನಷ್ಟು ಮಳೆ ಸುರಿದಿದೆ. ಜಲಪ್ರಳಯದಿಂದ ಇಡೀ ಹೈದರಾಬಾದ್ ಕರ್ನಾಟಕ ಜನರು ತಲ್ಲಣಗೊಂಡರು.

ನೆರೆ ಪರಿಹಾರ ಕಾಮಗಾರಿಗಳನ್ನು ಸರಕಾರ ತತಕ್ಷಣ ಕೈಗೊಂಡು ಪರಿಹಾರ, ಪುನರ್‌ವಸತಿ ಏರ್ಪಡಿಸಲು ಪ್ರಯತ್ನಗಳನ್ನು ಆರಂಭಿಸಿತು. ಆದರೆ ಮನೆ, ಮಠ ಆಸ್ತಿ ಕಳೆದುಕೊಂಡ ಇಲ್ಲಿನ ಜನರ ನಷ್ಟ ಭರಿಸುವವರ್‍ಯಾರು, ಈ ಜನರ ಜೀವನ ಮೊದಲ ಸ್ಥಿತಿಗೆ ಬರಲು ಎಷ್ಟು ವರ್ಷಗಳು ಬೇಕಾಗಬಹುದು ಅಥವಾ ಮನೆ, ಆಸ್ತಿ, ಜಾನುವಾರುಗಳನ್ನು ಕಳೆದುಕೊಂಡು ಬದುಕಲು ಆಗದೆ, ಸಾಯಲು ಆಗದೆ ಅವರು ಅನುಭವಿಸಿದ, ಇನ್ನೂ ಅನುಭವಿಸುತ್ತಿರುವ ಸಂಕಟವನ್ನು ಕೇಳುವವರ್‍ಯಾರು, ಜಲಪ್ರಳಯದಿಂದ ವಸತಿಹೀನರಾದ ಜನರು ಶಾಲೆ, ಸಮುದಾಯ ಭವನ, ದೇವಸ್ಥಾನ, ರೈಲು ನಿಲ್ದಾಣದಲ್ಲಿ ಆಶ್ರಯ ಪಡೆಯುವಂತಾಯಿತು. ಸರಕಾರ ನವಗ್ರಾಮ ಯೋಜನೆಯಡಿಯಲ್ಲಿ ಪುನರ್‌ವಸತಿ ಕೇಂದ್ರಗಳನ್ನು ಶೆಡ್‌ಗಳನ್ನು ನಿರ್ಮಿಸುತ್ತದೆಯಾದರೂ ಇವುಗಳು ತಾತ್ಕಾಲಿಕ ಆಶ್ರಯವನ್ನು ಒದಗಿಸುತ್ತವೆ. ಮತ್ತು ತಮ್ಮ ಮನೆ, ಭೂಮಿ, ಜಾನುವಾರು, ಆಸ್ತಿಯನ್ನು ಕಳೆದುಕೊಂಡ ಜನರು ಇಲ್ಲಿ ಮಾಡುವುದಾದರೂ ಏನು, ದಿನ ಬೆಳಗಾದರೆ ಹೊಟ್ಟೆಪಾಡಿನ ಚಿಂತೆ ಕಾಡುತ್ತದೆ.

ಒಂದು ಸಮಾಧಾನಕರ ವಿಷಯವೆಂದರೆ, ನೆರೆ ಸಂದರ್ಭದಲ್ಲಿ ಇಡೀ ರಾಜ್ಯದ ಜನರು, ಶಿಕ್ಷಣ ಸಂಸ್ಥೆಗಳು, ಸಂಘ ಸಂಸ್ಥೆಗಳು, ಮಠಾಧೀಶರು, ಮಾನವೀಯತೆ ಮೆರೆದು ಸಾಕಷ್ಟು ಹಣವನ್ನು ನೆರೆ ಪರಿಹಾರಕ್ಕೆ ನೀಡುತ್ತಿದ್ದಾರೆ. ೨೦೧೦ರ ನೆರೆ ಪರಿಹಾರದ ಹಣಸಂಗ್ರಹಣಕ್ಕೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಗಳ ಪಾದಯಾತ್ರೆಯಲ್ಲಿ ಸಂಗ್ರಹವಾದ ಮೊತ್ತ ಸುಮಾರು ೭೦೦ ಕೋಟಿ ರೂ.ಗಳು. ಇಡೀ ರಾಜ್ಯದ ಸರಕಾರಿ ನೌಕರರು ಖಾಸಗಿ ನೌಕರರು ತಮ್ಮ ಒಂದು ದಿನದ ವೇತನವನ್ನು ಇದಕ್ಕೆ ನೀಡಿ ಮಾನವವೀಯತೆ ಮೆರೆದು ನೊಂದವರ ನೆರವಿಗೆ ನಿಂತರು. ಇನ್ನು ಅನೇಕ ಸಂಘ ಸಂಸ್ಥೆಗಳು, ಮಠಗಳು ಈ ಭಾಗದಲ್ಲಿ ಮನೆಗಳನ್ನು ನಿರ್ಮಿಸಿ ಜನರಿಗೆ ಪುಕ್ಕಟೆಯಾಗಿ ನೀಡಿದರು. ಸರಕಾರವು ಪುನರ್ವಸತಿ ಕೇಂದ್ರಗಳನ್ನು ತೆರೆದಿದೆ.

ನೆರೆಹಾವಳಿ ಸಮಯದಲ್ಲಿ ಮನೆಗಳನ್ನು ಕಳೆದುಕೊಂಡ ಎಷ್ಟೋ ಸಂತ್ರಸ್ಥರು ತಾತ್ಕಾಲಿಕ ಶೆಡ್‌ಗಳಲ್ಲಿ ಜೀವನ ಕಳೆಯುತ್ತಿದ್ದಾರೆ. ಆದರೂ, ಇಲ್ಲಿನ ಲಕ್ಷಾಂತರ ಜನರು ಕಳೆದುಕೊಂಡ ಆಸ್ತಿ, ಮನೆ, ಜಾನುವಾರು, ಬೆಳೆ ಶಾಂತಿಯನ್ನು, ಆ ಹಳೆಯ ನೆಮ್ಮದಿಯ ಬದುಕನ್ನು ಮತ್ತೆ ಮರಳಿ ದೊರಕಿಸಿಕೊಡಲು ಸಾಧ್ಯವೇ, ಆ ಜನರ ನೋವು, ಆಕ್ರಂದನ, ಹಸಿವು, ಭವಿಷ್ಯವನ್ನು ಬೇರೆಯವರು ಅರ್ಥ ಮಾಡಿಕೊಳ್ಳಲು ಸಾಧ್ಯವೇ. ಹೀಗೆ ಹೆದರಾಬಾದ್ ಕರ್ನಾಟಕದ ಜನರು ಅನಾವೃಷ್ಟಿಯ ಜೊತೆ ಒಮ್ಮೊಮ್ಮೆ ಕಲ್ಪನೆಯನ್ನು ಮಾಡಿಕೊಳ್ಳದಂತ ಅತೀವೃಷ್ಟಿಗೆ ಬಲಿಯಾಗುತ್ತಿರುವುದು ದೊಡ್ಡ ದುರಂತವಾಗಿದೆ.

ವಿದ್ಯುತ್ ಸಮಸ್ಯೆ

ಹೈದರಾಬಾದ್ ಕರ್ನಾಟಕದ ರೈತರು ಎದುರಿಸುತ್ತಿರುವ ಮತ್ತೊಂದು ಗಂಭೀರ ಸಮಸ್ಯೆಯೆಂದರೆ ವಿದ್ಯುತ್ ಸಮಸ್ಯೆ. ಕರ್ನಾಟಕದಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವ ರಾಯಚೂರು ಬೃಹತ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ, ತುಂಗಭದ್ರಾ ಜಲ ವಿದ್ಯುತ್ ಕೇಂದ್ರ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳು ಈ ಭಾಗದಲ್ಲಿದ್ದರೂ ದೀಪದ ಕೆಳಗೆ ಕತ್ತಲೆ ಎನ್ನುವಂತೆ, ರೈತರು ತೀವ್ರ ವಿದ್ಯುತ್ ಅಭಾವವನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣಗಳನ್ನು ಹುಡುಕಿದಾಗ ಇಲ್ಲಿ ಉತ್ಪಾದನೆ ಆಗುವ ವಿದ್ಯುತ್ ಇತರ ಜಿಲ್ಲೆಗಳಿಗೆ ಸರಬರಾಜಾಗುತ್ತಿದೆ ಮತ್ತು ಇಲ್ಲಿರುವ ಬೃಹತ್ ಕೈಗಾರಿಕೆಗಳಿಗೆ ಹೆಚ್ಚಿನ ವಿದ್ಯುತ್‌ನ್ನು ಪೂರೈಸಲಾಗುತ್ತಿದೆ ಎನ್ನುವ ಅಂಶವು ತಿಳಿದು ಬರುತ್ತದೆ.

ಇಲ್ಲಿನ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನದಲ್ಲಿ ನಿರ್ದಿಷ್ಟ ಕೆಲವೇ ಗಂಟೆಗಳು ಮಾತ್ರ ವಿದ್ಯುತ್ ಸರಬರಾಜಾಗುವುದು ಕಂಡು ಬರುತ್ತದೆ. ಬೇಸಿಗೆ ಕಾಲದಲ್ಲಂತೂ ವಿದ್ಯುತ್ ನಿಲುಗಡೆ ಮತ್ತು ಅಭಾವ ಇನ್ನೂ ಹೆಚ್ಚಾಗುವುದು ಸರ್ವೇಸಾಮಾನ್ಯವಾಗಿದೆ. ಇದರ ಜೊತೆಗೆ ಲೋಡ್‌ಶೆಡ್ಡಿಂಗ್, ಟ್ರಾನ್ಸ್‌ಫಾರ್ಮರ್‌ಗಳು ಪದೇ ಪದೇ ಕೆಟ್ಟು ಹೋಗುವುದು, ಕೆಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ತತಕ್ಷಣ ಬದಲಾಯಿಸದಿರುವುದು, ವಿದ್ಯುತ್ ಖಾಸಗೀಕರಣ, ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆಗೆ ಒತ್ತಾಯ, ವಿದ್ಯುತ್ ಸ್ಥಾವರಗಳಲ್ಲಿ ತಾಂತ್ರಿಕ ದೋಷ ಹಾಗೂ ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದನೆ ಸ್ಥಗಿತಗೊಳ್ಳುವುದು, ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಹೈದರಾಬಾದ್ ಕರ್ನಾಟಕದ ರೈತರು ವಿದ್ಯುತ್ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ ನಿರಂತರ ವಿದ್ಯುತ್ ಸರಬರಾಜಿನ ಬೇಡಿಕೆಗಾಗಿ ಪದೇ ಪದೇ ಹೋರಾಟಗಳು ಕಂಡು ಬರುತ್ತವೆ. ಕೆಲವೊಂದು ಸಲ ರೈತರ ಹೋರಾಟಗಳು ಎಷ್ಟೊಂದು ಉಗ್ರರೂಪ ತಾಳಿವೆ ಎಂದರೆ ಕ್ರೋಧಗೊಂಡ ರೈತರು ಅಧಿಕಾರಿಗಳ ಮೇಲೆ ಹಲ್ಲೆ, ವಿದ್ಯುತ್ ಕೇಂದ್ರಗಳಿಗೆ ಬೀಗ ಹಾಕುವುದು, ರಸ್ತೆ ತಡೆ, ಆತ್ಮಹತ್ಯೆ ಪ್ರಯತ್ನಗಳಿಗೆ ಮುಂದಾಗುವರು. ಪರಿಣಾಮವಾಗಿ ರೈತರ ಮೇಲೆ ಲಾಠಿ ಪ್ರಹಾರ, ಗೋಲಿಬಾರ್ ನಂತಹ ಘಟನೆಗಳು ತಲೆ ದೋರುವವು.

ಬೆಳೆಗೆ - ಕನಿಷ್ಟ ಬೆಂಬಲ ಬೆಲೆ ಸಮಸ್ಯೆ

ಹೈದರಾಬಾದ್ ಕರ್ನಾಟಕದ ರೈತರು ಬರ, ನೆರೆಹಾವಳಿ ಮುಂತಾದ ಸಮಸ್ಯೆಗಳನ್ನು ದಾಟಿ ಬೆಳೆ ಅವರ ಕೈಗೆ ಬಂದಾಗ ಅವರು ಎದುರಿಸುವ ಸಮಸ್ಯೆಯೆಂದರೆ, ಬೆಳೆಗೆ ಕನಿಷ್ಟ ಬೆಂಬಲ ಬೆಲೆ ಸಿಗದಿರುವುದು. ರೈತರು ಬೆಳೆದ ಬೆಳೆಯ ಹಿಂದೆ ಸಾಕಷ್ಟು ಬಂಡವಾಳ ಹೂಡಿಕೆ, ದಕ್ಷತೆ, ಶ್ರಮ, ವೆಚ್ಚಗಳು ಇರುತ್ತವೆ. ಹೀಗಾಗಿ ಒಂದು ಧಾನ್ಯದ ಕನಿಷ್ಟ ಬೆಂಬಲ ಬೆಲೆ ನಿರ್ಧರಿಸುವಾಗ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಬೆಲೆ ನಿರ್ಧರಿಸಬೇಕು. ಆದರೆ ಮುಂಗಾರಿನಲ್ಲಿ ಧಾನ್ಯಗಳು ಬೃಹತ್ ಪ್ರಮಾಣದಲ್ಲಿ

ಮಾರುಕಟ್ಟೆಯನ್ನು ಪ್ರವೇಶಿಸುವುದರಿಂದ ಸಾಮಾನ್ಯವಾಗಿ ಬೆಲೆಗಳು ಇಳಿಯುತ್ತವೆ. ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುತ್ತಾರೆ. ಇನ್ನು ಸರಕಾರವು ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡುವಾಗ ರೈತನ ಉತ್ಪಾದನೆಯ ಶ್ರಮ, ಖರ್ಚು, ವೆಚ್ಚ, ಲಾಭಗಳನ್ನು ಮಾನದಂಡವನ್ನಾಗಿ ಇಟ್ಟುಕೊಳ್ಳದೇ ವೈಜ್ಞಾನಿಕವಾಗಿ ಬೆಂಬಲ ಬೆಲೆ ಘೋಷಿಸದೆ ರೈತರ ಒತ್ತಾಯಕ್ಕೆ ಅವೈಜ್ಞಾನಿಕವಾಗಿ ಬೆಂಬಲ ಬೆಲೆ ಘೋಷಿಸುತ್ತವೆ. ಕೆಲವೊಮ್ಮೆ ಸರಕಾರ ಘೋಷಿಸಿದ ಕನಿಷ್ಟ ಬೆಂಬಲ ಬೆಲೆ, ಮುಕ್ತ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಇರುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವ ತೊಗರಿ, ಜೋಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಬೆಳೆಯುವ ಭತ್ತ, ಕಬ್ಬು, ಹತ್ತಿ ಬೆಳೆಗಾರರು ತಮ್ಮ ಬೆಳೆಗಳಿಗೆ ಕನಿಷ್ಟ ಬೆಲೆ ಸಿಗದೆ ಸರಕಾರದ ವಿರುದ್ಧ ಪ್ರತಿಭಟನೆ, ಹೋರಾಟ, ಚಳವಳಿ ಮಾಡುವುದು ಪದೇ ಪದೇ ಕಂಡು ಬರುತ್ತದೆ. ಕಬ್ಬು ಮತ್ತು ತೊಗರಿಗೆ ಬೆಂಬಲ ಬೆಲೆಗಾಗಿ ದೊಡ್ಡ ಚಳವಳಿಗಳೇ ನಡೆದಿವೆ. ಇತ್ತೀಚಿಗೆ ಭತ್ತಕ್ಕೆ ಬೆಂಬಲ ಬೆಲೆಗೆ ಬೇಡಿಕೆ, ಹೋರಾಟಗಳು ಪ್ರಾರಂಭವಾಗಿವೆ. ಏಕೆಂದರೆ, ಒಂದು ಕ್ವಿಂಟಾಲ್ ಭತ್ತ ಬೆಳೆಯಲು ೨೦೦೦ ರಿಂದ ೨೫೦೦ ರೂ. ಖರ್ಚಾಗುತ್ತದೆ. ಆದರೆ ಕೇಂದ್ರ ಸರಕಾರ ೧೦೫೦ ರೂ. ಬೆಂಬಲ ಬೆಲೆ ನೀಡುತ್ತಿದೆ. ಆದ್ದರಿಂದ ರೈತ ಭತ್ತ ಬೆಳೆಯಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕಳೆದ ವರ್ಷ(೨೦೧೦) ಸುರಿದ ಮಳೆಗೆ ಲಕ್ಷಾಂತರ ಎಕರೆಯಲ್ಲಿ ಬೆಳೆದ ಭತ್ತ ನಾಶವಾಗಿದೆ. ಕಾರ್ಮಿಕರ ಕೊರತೆ ಹಾಗೂ ಎತ್ತುಗಳ ಅಭಾವದಿಂದ ವರ್ಷದಿಂದ ವರ್ಷಕ್ಕೆ ಭತ್ತದ ಕೃಷಿ ಇಳಿಮುಖವಾಗುತ್ತಿದೆ. ನಾಟಿಗೆ ಯಂತ್ರೋಪಕರಣ ಬಳಸಿದರೆ ಎಕರೆಗೆ ೧೨೫೦ ರೂ. ವೆಚ್ಚವಾಗುತ್ತದೆ ಇದರಿಂದ ರೈತರು ಭತ್ತ ಬೆಳೆಯುವುದನ್ನು ತ್ಯಜಿಸುತ್ತಿದ್ದಾರೆ ಇದು ಹೀಗೆ ಮುಂದುವರಿದರೆ ಆಹಾರ ಭದ್ರತೆ ಸಮಸ್ಯೆ ತಲೆದೋರಲಿದೆ.

ಹೀಗಾಗಿ ಸರಕಾರಗಳು ಭತ್ತದ ಬೆಳೆಯ ಉತ್ಪಾದನೆ ವೆಚ್ಚ ಆಧರಿಸಿ ರೈತರಿಗೆ ಲಾಭದಾಯಕ ಬೆಲೆ ನೀಡಬೇಕು. ನೇರವಾಗಿ ಸಬ್ಸಿಡಿ ನೀಡುವ ಯೋಜನೆಯನ್ನು ಜಾರಿಗೆ ತರಬೇಕು. ರಾಜ್ಯ ಸರಕಾರಗಳೇ ಭತ್ತದ ಮಾರುಕಟ್ಟೆ ಬೆಲೆ ನಿಗದಿಪಡಿಸುವಂತೆ ಆಗಬೇಕು ಆದರೆ ಇಂದಿನವರೆಗೆ ಆಳಿದ ಯಾವ ಸರಕಾರಗಳು ಕೂಡ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ರೈತನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧರಿಸುವಂಥ ಯೋಜನೆಗಳನ್ನಾಗಲಿ ಅಥವಾ ನಿಯಮಗಳನ್ನಾಗಲಿ ಜಾರಿಗೆ ತಂದಿಲ್ಲ. ರೈತರು ಬೆಂಬಲ ಬೆಲೆಗೆ ಹೋರಾಟ ಆರಂಭಿಸಿದಾಗ, ಕಣ್ಣೊರೆಸುವ ತಂತ್ರ ಅನುಸರಿಸಿ ನಾಮಕಾವಸ್ಥೆಗೆ ಬೆಂಬಲ ಬೆಲೆ ಘೋಷಿಸಿ ಕೈತೊಳೆದುಕೊಳ್ಳುತ್ತದೆ. ಇನ್ನು ಸರಕಾರದ ನೀತಿಯನ್ನು ವಿರೋಧಿಸಿ ರೈತರು ಹೋರಾಟಕ್ಕೆ ಇಳಿದರೆ ಪೊಲೀಸರು ಗೋಲಿಬಾರ್, ಗುಂಡಿನ ದಾಳಿ ಆರಂಭಿಸುತ್ತಾರೆ. ಇದರಿಂದ ಮತ್ತೆ ನಷ್ಟಕ್ಕೆ, ಶೋಷಣೆಗೆ ಒಳಗಾಗುವುದು ರೈತನೆ. ಇನ್ನೂ ಸೋಜಿಗದ ಸಂಗತಿ ಎಂದರೆ ಹೈದರಾಬಾದ್ ಕರ್ನಾಟದಲ್ಲಿ ನಡೆದ ರೈತರ ಆತ್ಮಹತ್ಯೆಗಳಿಗೆ ಕಾರಣ ನೋಡಿದಾಗ ಬೆಳೆಗೆ ಸೂಕ್ತ ಬೆಂಬಲ ಬೆಲೆ ಸಿಗದಿರುವುದರಿಂದಾದ

ಆತ್ಮಹತ್ಯೆ ಪ್ರಕರಣಗಳು ಕಂಡು ಬರುತ್ತದೆ. ಹೀಗೆ ಬೆಳೆಗೆ ಬೆಂಬಲ ಬೆಲೆಯ ಸಮಸ್ಯೆ ಈ ಭಾಗದ ರೈತರು ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆಯಾಗಿದೆ.

ಭೂಸತ್ವಹೀನ ಸಮಸ್ಯೆ

ಬರಗಾಲ ಮತ್ತು ನೀರಿನ ಸಮಸ್ಯೆ ಎದುರಿಸುತ್ತಿರುವ ಹೈದರಾಬಾದ್ ಕರ್ನಾಟಕದ ರೈತರು, ಲಭ್ಯವಾಗುವ ಒಂದೇ ಬೆಳೆಯಲ್ಲಿ ಅತ್ಯಧಿಕ ಇಳುವರಿ ಪಡೆದು ಶ್ರೀಮಂತರಾಗಬೇಕೆಂಬ ಧಾವಂತದಲ್ಲಿ ಅತಿಯಾದ ಗೊಬ್ಬರ ಬಳಸಿ ಭೂಮಿಯ ಸತ್ವವನ್ನು ನಾಶ ಮಾಡಿಕೊಳ್ಳುತ್ತಿದ್ದಾರೆ. ಅತಿಯಾದ ರಸಗೊಬ್ಬರ ಕ್ರಿಮಿನಾಶಕ ಬಳಕೆಯಿಂದ ಮಣ್ಣಿನ ಸವಕಳಿ ಹೆಚ್ಚಿದ್ದು, ಲಘು ಪೋಷಕಾಂಶಗಳು ಕೊಚ್ಚಿ ಹೋಗುತ್ತಿವೆ. ಸಾವಯವ ಜೀವಸಾರ ಬಳಕೆ ಸದ್ಯ ಅನಿವಾರ್ಯವಾಗಿದ್ದರೂ ರೈತರು ಆ ಬಗ್ಗೆ ಗಮನ ಕೊಡುತ್ತಿಲ್ಲ. ಭತ್ತದ ಬೆಳೆಗೆ ಮಾರು ಹೋಗಿರುವ ರೈತರು ಪರ್ಯಾಯ ಬೆಳೆ ಪದ್ಧತಿಯನ್ನು ಸಂಪೂರ್ಣ ಮರೆತಿದ್ದಾರೆ. ವಿಚಿತ್ರವೆಂದರೆ ಭತ್ತ, ಕಬ್ಬು ಬೆಳೆಯುವ ಬಹುತೇಕ ಜಮೀನುಗಳಲ್ಲಿ ಸದ್ಯ ಬೇರೆ ಬೆಳೆ ಬೆಳೆಯುವುದು ಅಸಾಧ್ಯ ಎನ್ನುವಷ್ಟರಮಟ್ಟಿಗೆ ಭೂಸಾರ ಕುಂದಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕೆಲವೇ ವರ್ಷಗಳಲ್ಲಿ ಭೂಮಿ ಬರಡಾಗಲಿದೆ, ಎಂದು ಕೃಷಿ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಸವಳು ಪೀಡಿತ ಪ್ರದೇಶಗಳು ಸತ್ವಹೀನವಾಗಿ ಬೆಳೆಗಳ ಮೇಲೆ ಪರಿಣಾಮ ಬೀರಿದೆ.

ಭೂ ಸತ್ವಹೀನವನ್ನು ತಡೆಗಟ್ಟಲು ಮಣ್ಣು ಪರೀಕ್ಷೆ ಕಡ್ಡಾಯಗೊಳಿಸಬೇಕಿದ್ದು, ಫಲಿತಾಂಶದ ಅನುಗುಣವಾಗಿ ಪೋಷಕಾಂಶಗಳ ಸಮತೋಲನಗೊಳಿಸಬೇಕಿದೆ. ರಸಗೊಬ್ಬರ, ಕೀಟನಾಶಕ ಬಳಕೆಯಲ್ಲಿ ಎಚ್ಚರ ವಹಿಸಬೇಕು. ಸಾವಯವ ಗೊಬ್ಬರ ಬಳಕೆಯಿಂದ ಮಣ್ಣಿನಲ್ಲಿರುವ ರಾಸಾಯನಿಕ ಮತ್ತು ಲವಣಗಳಿಂದಾಗುವ ಹಾನಿ ತಗ್ಗಿಸಬಹುದು. ಸವಕಳಿ ತಡೆಗಟ್ಟಲು ಅಲ್ಪ ಇಳಿಜಾರು, ಅಂಚುಪಟ್ಟಿಗಳ ಬದು ನಿರ್ಮಾಣ, ತಿರುವು ಕಾಲುವೆ, ಭೂಮಿ ಸಮತಟ್ಟುಗೊಳಿಸುವುದು ಹೀಗೆ ವಿವಿಧ ಯೋಜನೆಗಳ ಕಡೆ ರೈತರು ಮತ್ತು ಸರಕಾರ ಗಮನಕೊಡಬೇಕಾಗಿದೆ. ಈಗ ರೈತರಿಗೆ ಸಲಹೆ ನೀಡಲು ಗಂಗಾವತಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಕಾರ್ಯ ನಿರ್ವಹಿಸುತ್ತಿದ್ದು, ಕೇಂದ್ರ ಇನ್ನೂ ಹೆಚ್ಚಿನ ಮಟ್ಟದಲ್ಲಿ ರೈತರೊಂದಿಗೆ ಮುಖಾಮುಖಿಯಾಗಿ ಸಲಹೆ ಸೂಚನೆಗಳನ್ನು ಕೊಡಬೇಕಾದ ಅವಶ್ಯಕತೆ ಇದೆ ಮತ್ತು ಕೇಂದ್ರದ ಸಂಪೂರ್ಣ ಸದುಪಯೋಗ ಬಳಕೆ ಪಡೆಯುವ ಜವಾಬ್ದಾರಿಯು ರೈತರ ಮೇಲಿದೆ. ಹಾಗಾದಲ್ಲಿ ಮಾತ್ರ ಇಲ್ಲಿನ ಭೂಮಿಗಳು ಪೂರ್ಣ ಬರಡಾಗುವುದನ್ನು ತಪ್ಪಿಸಲು ಸಾಧ್ಯವಾಗಬಹುದು.

ಜಲಾಶಯಗಳ ಹೂಳಿನ ಸಮಸ್ಯೆ

ಹೈದರಾಬಾದ್ ಕರ್ನಾಟಕದ ಜೀವನಾಡಿಗಳಾಗಿರುವ ಜಲಾಶಯಗಳು ಇಂದು ಹೂಳಿನಿಂದ ತುಂಬಿ ಹೋಗಿವೆ. ಭಾಗದ ಬಹುತೇಕ ಜಲಾಶಯಗಳಲ್ಲಿ ಹೂಳು ಹೆಚ್ಚು ಸಂಗ್ರಹವಾಗುತ್ತಿರುವುದರಿಂದ ಮಳೆಗಾಲದಲ್ಲಿ ಬಹಳ ಬೇಗ ತುಂಬಿಕೊಳ್ಳುವ ಇವು ಬೇಸಿಗೆ ಆರಂಭವಾಗುತ್ತಿದ್ದಂತೆ ಕುಡಿಯುವ ನೀರಿಗೂ ಕಷ್ಟ ಪಡಬೇಕಾದ ಸಮಸ್ಯೆಯನ್ನು ತಂದೊಡ್ಡಿವೆ. ಉದಾಹರಣೆಗೆ ತುಂಗಭದ್ರಾ ನದಿಗೆ ಹೊಸಪೇಟೆ

ಬಳಿ ನಿರ್ಮಿಸಿರುವ ತುಂಗಭದ್ರಾ ಜಲಾಶಯ. ೧೯೫೫ರಲ್ಲಿ ನಿರ್ಮಾಣವಾದ ತುಂಗಭದ್ರಾ ಜಲಾಶಯದ ನೀರು ಸಂಗ್ರಹದ ಒಟ್ಟು ಸಾಮರ್ಥ್ಯ ೧೩೩ ಟಿ.ಎಂ.ಸಿ. ಆದರೆ, ೨೦೦೪ರಲ್ಲಿ ನಡೆದ ಹೈಡ್ರೋಗ್ರಾಫಿಕ್ ಸರ್ವೇ ಪ್ರಕಾರ ಜಲಾಶಯದ ನೀರು ಸಂಗ್ರಹ ಸಾಮರ್ಥ್ಯ ೧೦೪. ಟಿ.ಎಂ.ಸಿ. ಮಾತ್ರ. ೨೦೧೦ರ ಸರ್ವೇ ಪ್ರಕಾರ ೧೦೧ ಟಿ.ಎಂ.ಸಿ. ಮಾತ್ರ ನೀರು ಸಂಗ್ರಹ ಸಾಮರ್ಥ್ಯ ಇದೆ. ಅಂದರೆ ಸುಮಾರು ೩೩ ಟಿ.ಎಂ.ಸಿ.ಯಷ್ಟು ಜಲಾಶಯದಲ್ಲಿ ಹೂಳು ತುಂಬಿಕೊಂಡಿದ್ದು, ಇಷ್ಟು ಪ್ರಮಾಣದ ನೀರು ಸಂಗ್ರಹ ನಷ್ಟವಾಗುತ್ತಿದೆ. ಜಲಾಶಯಕ್ಕೆ ಮುಂಗಾರು ಮತ್ತು ಹಿಂಗಾರು ಮಳೆಯಲ್ಲಿ ಹರಿದು ಬರುವ ನೀರಿನ ಪ್ರಮಾಣ ೨೩೦ ಟಿ.ಎಂ.ಸಿ.ಯಷ್ಟಿದ್ದು, ಇದರಲ್ಲಿ ೧೮ ಟಿ.ಎಂ.ಸಿ.ಯಷ್ಟು ನೀರು ಆವಿ, ಸೋರಿಕೆ ಮತ್ತಿತರೆ ಕಾರಣಗಳಿಗಾಗಿ ನಷ್ಟವಾಗಿ ೨೧೨ ಟಿ.ಎಂ.ಸಿ. ಮಾತ್ರ ಬಳಕೆಗೆ ದೊರಕುತ್ತದೆ.

ತುಂಗಭದ್ರಾ ಜಲಾಶಯದ ಹೂಳೆತ್ತಲು ಇತ್ತೀಚಿಗೆ ಸರಕಾರ ಅಂದಾಜು ಮಾಡಿರುವುದು ಒಂದು ಸಾವಿರ ಕೋಟಿ ರೂ. ಆದರೆ ಇದು ವಾಸ್ತವದ ಸ್ಥಿತಿಗೆ ತೀರಾ ಭಿನ್ನವಾಗಿದೆ. ಒಂದು ಟಿ.ಎಂ.ಸಿ. ಹೂಳೆಂದರೆ ೧೦೦ ಎಕರೆ ಪ್ರದೇಶದಲ್ಲಿ ೨೪೫ ರಿಂದ ೨೫೦ ಅಡಿ ಎತ್ತರಕ್ಕೆ ಮಣ್ಣನ್ನು ಹಾಕಿದರೆ ಎಷ್ಟಾಗುತ್ತದೆಯೋ ಅಷ್ಟು ಹೂಳು ಹಿಡಿಯುತ್ತದೆ. ಒಂದು ಟಿ.ಎಂ.ಸಿ. ಹೂಳೆಂದರೆ ಅದು ೫೦ ಲಕ್ಷ ಲಾರಿ ಲೋಡ್ ಮಣ್ಣಿಗೆ ಸಮ. ಇದರ ಪ್ರಕಾರ ತುಂಗಭದ್ರಾ ಜಲಾಶಯದಲ್ಲಿರುವ ೩೦ ಟಿ.ಎಂ.ಸಿ.ಯಷ್ಟು ಹೂಳು ತೆಗೆಯಲು ವರ್ಷಗಳೇ ಬೇಕಾಗುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಪ್ರಸ್ತುತ ಸಂದರ್ಭದಲ್ಲಿ ವಿವಿಧ ರಂಗಗಳಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಬೆಳವಳಿಗೆಗಳಿಂದಾಗಿ, ರೈತ ಹೋರಾಟಗಳು ವಿವಿಧ ಆಯಾಮಗಳನ್ನು ಪಡೆಯುತ್ತಿವೆ. ಹೀಗಾಗಿ ಹೊಸದಾಗಿ ಉದ್ಭವವಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಆಯಾರಂಗದಲ್ಲಿ ಹೊಸ ಹೊಸ ನಾಯಕರು ಹಾಗೂ ಸಂಘಟನೆಗಳ ನೇತೃತ್ವದಲ್ಲಿ ಹೋರಾಟಗಳು, ಚಳವಳಿಗಳು ನಡೆಯುತ್ತಿರುವುದನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ರೈತ ಹೋರಾಟದಲ್ಲಿ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳು ದಿನದಿಂದ ದಿನಕ್ಕೆ ಹೊಸ ಹೊಸ ಸ್ಥಳಗಳಲ್ಲಿ ಹೊಸ ರೂಪಗಳಲ್ಲಿ ಉದ್ಭವವಾಗುತ್ತಿವೆ. ರೈತರ ಸಮಸ್ಯೆಗಳ ಬಗ್ಗೆ ಇತ್ತೀಚಿಗೆ ಉದ್ಭವವಾಗಿರುವ ಸಮಸ್ಯೆಗಳನ್ನು ಪರಾಮರ್ಶಿಸಿದಾಗ ಮುಖ್ಯವಾಗಿ ರೈತರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಮಳೆ ಅಭಾವ, ಪ್ರಕೃತಿ ವಿಕೋಪಗಳು, ಸಾಲಬಾಧೆ ಭೂಮಿಗಳ ಸ್ವಾಧೀನ, ರಸಗೊಬ್ಬರ ಬೇಡಿಕೆ, ವಿದ್ಯುತ್ ಕೊರತೆ, ಅಸಮರ್ಪಕ ಬೆಲೆ ನೀತಿ ಮತ್ತು ಇವೆಲ್ಲವುಗಳಿಗಿಂತ ಮಿಗಿಲಾಗಿ ವಿಷಾದನೀಯ ಸಂಗತಿ ಎಂದರೆ ರಾಷ್ಟ್ರಕ್ಕೆ ಅನ್ನ ಕೊಡುವ ರೈತರು ವಿಭಿನ್ನ ಕಾರಣಗಳಿಗೆ ಆತ್ಮಹತ್ಯೆಗೆ ಶರಣಾಗುತ್ತಿರುವುದು. ಇಂತಹ ಒಂದೊಂದು ಸಮಸ್ಯೆಗಳು ಆಯಾ ಕಾಲಮಾನಕ್ಕೆ ತಕ್ಕಂತೆ ನಿರಂತರವಾಗಿ ರೈತರನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳಾಗಿವೆ. ಇಂತಹ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಹೋರಾಟಗಳು ತೀವ್ರವಾಗುತ್ತಿವೆ. ಹಾಗಾಗಿ ಇವುಗಳಿಗೆ ಶಾಶ್ವತ ಪರಿಹಾರವನ್ನು ಒದಗಿಸುವ ಮಾರ್ಗವನ್ನು ಹುಡುಕಬೇಕಾದ ಅವಶ್ಯಕತೆ ಇದೆ. ರೈತರ

ಸಮಸ್ಯೆ ಬಗ್ಗೆ ವಿಶೇಷವಾಗಿ ನಾವು ಗಮನಿಸಬೇಕಾದ ಅಂಶ ಎಂದರೆ ಹಿಂದಿನ ನೂರಾರು ವರ್ಷಗಳ ಇತಿಹಾಸವನ್ನು ಗಮನಿಸಿದಾಗ 'ರೈತ ಸಂಸ್ಕೃತಿಯೇ' ವಿನಾಶದ ಅಂಚಿನಲ್ಲಿದೆ ಮತ್ತು ದಿನದಿಂದ ದಿನಕ್ಕೆ ಅಭಿವೃದ್ಧಿ ಹಾದಿಯಲ್ಲಿ ಸಾಗುವ ಬದಲಾಗಿ ಅವನತಿಯ ಹಾದಿಯಲ್ಲಿದೆ.

ಕೃಷಿ ಪ್ರಧಾನವಾಗಿರುವ ಭಾರತದಲ್ಲಿ ರೈತ ಸಂಸ್ಕೃತಿಯಿಂದಲೇ ವಿಶಿಷ್ಟ ಸ್ಥಾನಮಾನ ಪಡೆದಿದೆ. ರೈತ ಸಂಸ್ಕೃತಿ ಎಂದರೆ, ರೈತ, ಅವನ ಭೂಮಿ, ವ್ಯವಸಾಯ ದನ, ಕರು, ಕೃಷಿ ಉಪಕರಣಗಳು, ಪರೋಕ್ಷವಾಗಿ ವ್ಯವಸಾಯಕ್ಕೆ ಬೆಂಬಲವಾಗಿ ಅವಲಂಬನೆ ಆಗಿರುವ ಕೃಷಿ ಕಾರ್ಮಿಕರು, ಕೂಲಿ ಆಳುಗಳು, ಬಡಗಿ, ಕಮ್ಮಾರ, ಕುಂಬಾರ, ಇತರ ಉಪವೃತ್ತಿಗಳು ಸೇರುತ್ತವೆ. ರೈತ ಸಂಸ್ಕೃತಿಯಿಂದ ರೈತನೇ ರಾಷ್ಟ್ರದ ಬೆನ್ನೆಲುಬು, ಅನ್ನದಾತ. ಪ್ರಸ್ತುತ ಶೇ. ೬೭ರಷ್ಟು ಜನತೆ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಇಷ್ಟೊಂದು ಪ್ರಮಾಣದಲ್ಲಿ ಉದ್ಯೋಗ ಒದಗಿಸಿರುವ ಮತ್ತು ರಾಷ್ಟ್ರದ ಆರ್ಥಿಕ ಚಟುವಟಿಕೆಗೆ ಕಾರಣವಾದ, ಆಹಾರ ಪೂರೈಕೆಯಲ್ಲಿ ಸ್ವಾವಲಂಬನೆಗೆ ಅವಕಾಶ ಮಾಡಿಕೊಟ್ಟ ರೈತ ಸಂಸ್ಕೃತಿ ದಿನದಿಂದ ದಿನಕ್ಕೆ ಅವನತಿಯ ಹಾದಿ ಹಿಡಿದಿದೆ. ವ್ಯವಸಾಯದ ಸಹವಾಸವೇ ಬೇಡ ಎನ್ನುವ ಮಟ್ಟಕ್ಕೆ ರೈತ ತಲುಪುತ್ತಿದ್ದಾನೆ. ಇಂತಹ ಪರಿಸ್ಥಿತಿಗೆ ರೈತರ ಮತ್ತು ಸರಕಾರದ ಇಬ್ಬರ ಧೋರಣೆಗಳು ಕಾರಣವಾಗಿರಬಹುದು. ಇತ್ತೀಚಿನ ತಲೆಮಾರಿನ ಯುವಕರು ವಂಶಪಾರಂಪಗತವಾಗಿ ಬಂದ ಭೂಮಿಯನ್ನು, ವೃತ್ತಿಯನ್ನು ಮುಂದುವರಿಸದೆ, ಇತರ ಉದ್ಯೋಗಗಳ ಕಡೆ ಆಕರ್ಷಿತರಾಗುತ್ತಿದ್ದಾರೆ.

ಇನ್ನೊಂದು ಕಡೆ ಸರಕಾರ ಅಭಿವೃದ್ಧಿ ಕಾರ್ಯ ಹಾಗೂ ಕೈಗಾರಿಕಾ ಅಭಿವೃದ್ಧಿ ನೆಪ ಮತ್ತು ಉದ್ದೇಶಗಳನ್ನು ಇಟ್ಟುಕೊಂಡು, ಹೆಚ್ಚೆಚ್ಚು ಸಾಗುವಳಿ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯ ನಿರಂತರವಾಗಿ ಸಾಗಿರುವುದರಿಂದ, ಸಾಗುವಳಿ ಭೂಮಿ ಕಡಿಮೆ ಆಗಿರುವುದರ ಜೊತೆಗೆ ಆಹಾರ ಉತ್ಪಾದನಾ ಬೆಳೆಗಳು ಕಡಿಮೆಯಾಗಿ ಆಹಾರ ಸಮಸ್ಯೆ ತಲೆದೋರಲು ಕಾರಣವಾಗುತ್ತಿದೆ. ಮತ್ತೊಂದು ಪ್ರಮುಖ ಅಂಶ ಎಂದರೆ ಆಹಾರೋತ್ಪಾದನೆ, ಸಾಗುವಳಿ ಕಡಿಮೆಯಾಗುತ್ತಿರುವುದು ಒಂದು ಕಡೆ ಆದರೆ, ಜನಸಂಖ್ಯೆ ಸ್ಫೋಟ ಇನ್ನೊಂದು ಕಡೆಯಾಗಿದೆ. ಇದು ಆಹಾರದ ಅಸಮತೋಲನೆಗೆ ಕಾರಣವಾಗುತ್ತಿದೆ. ಕೃಷಿ ಪ್ರಧಾನ ದೇಶವೆಂದು ಹೆಸರು ಗಳಿಸಿರುವ ಹಾಗೂ ಅತ್ಯಧಿಕ ಸಂಖ್ಯೆಯಲ್ಲಿ ಕೃಷಿ ವೃತ್ತಿಯಲ್ಲಿ ತೊಡಗಿರುವ ನಮ್ಮ ದೇಶದಲ್ಲಿ, ಆಹಾರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿರುವುದು ವಿಷಾದನೀಯ ಸಂಗತಿಯಾಗಿದೆ.

ರೈತ ಚಳವಳಿ ತನ್ನ ಕಾವು ಕಳೆದುಕೊಳ್ಳುತ್ತಿದೆಯೇ?

ಎಂಬತ್ತರ ದಶಕದಲ್ಲಿ ರೈತ ಚಳವಳಿ ಎಷ್ಟೊಂದು ಪ್ರಬಲವಾಗಿತ್ತೆಂದರೆ, ರೈತರು ಬೀದಿಗಿಳಿಯುತ್ತಾರೆಂದರೆ ಸರಕಾರ ಗಡಗಡ ನಡುಗುತ್ತಿತ್ತು. ರೈತ ನಾಯಕರನ್ನು ಕರೆಸಿ ಸಮಸ್ಯೆ ಬಗ್ಗೆ ಮಾತನಾಡುತ್ತಿತ್ತು. ಆದಷ್ಟು ಬೇಗ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳೂ ಕಾರ್ಯಪ್ರವೃತ್ತರಾಗುತ್ತಿದ್ದರು.

ಆದರೆ ಇವತ್ತು ಏನಾಗಿದೆ, ರೈತ ಸಂಘದ ಪ್ರತಿಭಟನೆ ಅಂದರೆ ಮಾಡಿಕೊಳ್ಳಿ ಬಿಡಿ ಎನ್ನುವ ಮಟ್ಟಕ್ಕೆ ಬಂದು ನಿಂತಿದೆ. ಸರ್ಕಾರ ಕೂಡ ನಿರ್ಲಕ್ಷ್ಯ ಮಾಡುತ್ತದೆ. ಅವರಿಗೆ ಮಾಡೋಕೆ ಕೆಲಸ ಇಲ್ಲದೆ ಹೀಗೆ ಮಾಡುತ್ತಿದ್ದಾರೆಂದು ಗೇಲಿ ಮಾಡುತ್ತಾರೆ ಇದಕ್ಕೆ ಕಾರಣ, ಇತ್ತೀಚೆಗೆ ರೈತ ಚಳವಳಿ ತನ್ನ ಬಿಗಿ ನಿಲುವುಗಳನ್ನು ಪ್ರದರ್ಶಿಸುತ್ತಿಲ್ಲ. ವೈಯಕ್ತಿಕ ಪ್ರತಿಷ್ಠೆಗಳಿಂದಾಗಿ ಅದು ತನ್ನ ವರ್ಚಸ್ಸು ಕಳೆದುಕೊಳ್ಳುತ್ತಿದೆ. ಚಳವಳಿಯಲ್ಲಿನ ಹಲವರು ಅಧಿಕಾರದ ದಾಹಕ್ಕೆ ಬಲಿಯಾಗುತ್ತಿದ್ದಾರೆ. ಇಷ್ಟಕ್ಕೂ ಬೇರೆಯವರ ಮಾತು ಸ್ವೀಕರಿಸುವ ವ್ಯವಧಾನವು ಯಾರಲ್ಲೂ ಇಲ್ಲ. ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದ್ದ ಇಂಥ ಚಳವಳಿ ಇವತ್ತು ನೆಲ ಕಚ್ಚಿದೆ. ಜನ ನಂಬುತ್ತಿಲ್ಲ ಹೀಗಾಗಿ ಚಳವಳಿ ದಾರಿ ತಪ್ಪುತ್ತಿದೆ. ಸಮಾಜದಲ್ಲಿ ರಾಜಕಾರಣ ಹೆಚ್ಚು ಪ್ರಬಲವಾಗುತ್ತಿರುವುದು ಮತ್ತು ಹೊಸ ಮುಖಗಳನ್ನು ಚಳವಳಿಗೆ ಪರಿಚಯಿಸುವಲ್ಲಿ ವಿಫಲವಾಗಿದ್ದು ಕೂಡ ಒಂದು ಕಾರಣ. ಇದರಿಂದ ಚಳವಳಿಗಳು ನಿಂತ ನೀರಾದವು.[೨೦]

ಇದರ ಜೊತೆಗೆ ಪುಟ್ಟಣ್ಣಯ್ಯ ನೇತೃತ್ವದ ರೈತ ಸಂಘದ ಬಣಕ್ಕೂ ಉತ್ತರ ಕರ್ನಾಟಕ ರೈತ ಸಂಘಕ್ಕೂ ಭಿನ್ನಾಭಿಪ್ರಾಯಗಳು ಹೆಚ್ಚುತ್ತಾ ಬಂದಿವೆ. ಅವುಗಳಲ್ಲಿ ಭೌಗೋಳಿಕ, ಜಾತೀಯ ಮತ್ತು ರಾಜಕೀಯದ ಸ್ವಾರ್ಥಗಳು ಪ್ರಮುಖವಾಗಿ ಗೋಚರಿಸುತ್ತದೆ. ಇತ್ತೀಚಿಗೆ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘಾಶರಣರು ರೈತ ಸಂಘದ ಬಣಗಳನ್ನು ಒಗ್ಗೂಡಿಸಲು ಮಾಡಿದ ಪ್ರಯತ್ನಕ್ಕೂ ಹಿನ್ನಡೆಯಾಯಿತು.

ಈಗಿರುವ ಎರಡು ಬಣಗಳು ಒಂದುಗೂಡಿ ರೈತರನ್ನು ತಿನ್ನುತ್ತಿರುವ ಸಮಸ್ಯೆಗಳತ್ತ ಗಮನ ನೀಡುವ ಸಾಧ್ಯತೆ ಕಂಡು ಬರುತ್ತಿಲ್ಲ. ಗ್ರಾಮೀಣ ಬದುಕು ಸಾಮೂಹಿಕ ದಿವಾಳಿಯತ್ತ ಸಾಗಿದೆ. ಕೃಷಿ ಸಂಕಷ್ಟದಲ್ಲಿದೆ, ವಿದ್ಯುಚ್ಛಕ್ತಿ, ನೀರಿನ ಸೌಲಭ್ಯಗಳಿಲ್ಲದೆ ಸಾಲ ತೀರಿಸಲು ಇರುವ ತುಂಡು ಭೂಮಿಗಳನ್ನು ಮಾರಾಟ ಮಾಡಿ ರೈತರು ಸಂಕಷ್ಟಗಳಿಗೀಡಾಗಿದ್ದಾರೆ. ಅದು ಸರಕಾರದ ನೀತಿಗಳಿರಬಹುದು, ಜಾಗತೀಕರಣದ ಕಾರಣಗಳಿರಬಹುದು, ಇಂತಹವುಗಳ ಕಡೆ ಗಮನ ಹರಿಸಿ, ರೈತರ ಸಂಕಷ್ಟಗಳಿಗೆ ಸ್ಪಂದಿಸಿ ಸಕ್ರಿಯವಾಗಿ ಪ್ರಾಮಾಣಿಕ ಪ್ರಯತ್ನ ಮಾಡುವ ನಾಯಕರು ಇಂದು ಇಲ್ಲವಾಗುತ್ತಿದ್ದಾರೆ. ಹೀಗೆ ರೈತರ ಜೊತೆಗೆ ರೈತ ಸಂಘದ ಭವಿಷ್ಯವೂ ಮುಸುಕಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಸಾಮಾನ್ಯವಾಗಿ ರೈತ ಚಳವಳಿ ವಿಫಲವಾಗಲು ಮುಖ್ಯ ಕಾರಣಗಳು ಅಂದರೆ,

೧. ರೈತ ಸಂಘದಲ್ಲಿ ವರ್ಚಸ್ಸಿನ ನಾಯಕರಿಲ್ಲದಿರುವುದು.

೨. ದೊಡ್ಡ ರೈತರು ಮತ್ತು ಜಮೀನ್ದಾರರು ರೈತ ಸಂಘಕ್ಕೆ ಬೆಂಬಲ ನೀಡಲಿಲ್ಲ.

೩. ರೈತ ಸಂಘದ ಪ್ರಣಾಳಿಕೆ ಸಾಮಾನ್ಯ ಜನರನ್ನು ಆಕರ್ಷಿಸಲಿಲ್ಲ.

೪. ರೈತ ಕಾರ್ಮಿಕರು ಕೂಡ ಇತರ ರಾಜಕೀಯ ಪಕ್ಷಗಳ ಪ್ರಭಾವಕ್ಕೆ ಒಳಗಾಗುತ್ತಿರುವುದು.

೫. ರೈತ ಸಂಘ, ಪಕ್ಷಗಳಿಗೆ ಧನ ಬಲದ ಕೊರತೆ.

ಕೃಷಿ ನಮ್ಮ ದೇಶದ ಬೆನ್ನೆಲುಬು. ಶೇ. ೬೭ರಷ್ಟು ಜನಜೀವನಕ್ಕೆ ಕೃಷಿಯನ್ನೇ ಅವಲಂಬಿಸಿದ್ದಾರೆ. ಹೀಗಿದ್ದೂ ೧೯೯೧ ರಿಂದ ೨೦೦೧ರ ಅವಧಿಯಲ್ಲಿ ೮ ಲಕ್ಷ ರೈತರು ಕೃಷಿ ಕ್ಷೇತ್ರ ತೊರೆದಿದ್ದಾರೆ. ಲಕ್ಷಾಂತರ ಮಂದಿ ಲಾಭವಿಲ್ಲದ ಕಾರಣ ಕೃಷಿ ಕ್ಷೇತ್ರ ತೊರೆಯುತ್ತಿದ್ದಾರೆ. ಯುವಕರಂತೂ ಕೃಷಿ ಕಡೆ ಮುಖವನ್ನೇ ಹಾಕುತ್ತಿಲ್ಲ. ೧೯೯೭ ರಿಂದ ೨೦೦೭ರ ಅವಧಿಯಲ್ಲಿ ೧.೮೨ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೃಷಿ ಬಗ್ಗೆ ಕಾಳಜಿಯ ಮಾತನಾಡುವವರೇ ನಮ್ಮ ದೇಶದಲ್ಲಿ ಒಟ್ಟು ೩೨೫ 'ವಿಶೇಷ ವಿತ್ತವಿಲಯ' (ಎಸ್ ಇ ಝೆಡ್) ಸ್ಥಾಪನೆಗೆ ಪರವಾನಿಗೆ ನೀಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೇ ೨೭ ವಿಶೇಷ ವಿತ್ತವಲಯಗಳಿಗೆ ಒಪ್ಪಿಗೆ ನೀಡಿದ್ದಾರೆ. ಇದಕ್ಕಾಗಿ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳಲು ತಯಾರಿ ನಡೆದಿದೆ.[೨೧]

ಪ್ರಸ್ತುತ ರೈತನ ಪರಿಸ್ಥಿತಿ ಹೇಗಿದೆ ಎಂದರೆ, ಒಂದೆರೆಡು ತಾಸು ವಿದ್ಯುತ್‌ಗಾಗಿ ಕಾಯುತ್ತ ಕೂರಬೇಕು ಕೇಂದ್ರ ಸರಕಾರ ಬೆಂಬಲ ಬೆಲೆ ಘೋಷಿಸುವಂತೆ ಹೋರಾಟ ನಡೆಸಬೇಕು, ರಸಗೊಬ್ಬರಕ್ಕಾಗಿ ಗುಂಡೇಟು ತಿನ್ನಬೇಕು, ಬೆಲೆ ಘೋಷಣೆಯಾದ ನಂತರ ಆ ಬೆಲೆಗೆ ಖರೀದಿಸುವ ಸರಕಾರಿ ಪ್ರತಿನಿಧಿಗಾಗಿ ಕಾಯಬೇಕು, ಇಲ್ಲವೇ ಸಿಕ್ಕಿದ ಬೆಲೆಗೆ ಮಧ್ಯವರ್ತಿಗೆ ಮಾರಬೇಕು. ಇಷ್ಟಾದ ಮೇಲೂ ಮಾಡಿದ ಸಾಲ ತೀರಿಸಲು ಸಾಧ್ಯವಾಗದಿದ್ದರೆ ನೇಣಿಗೆ ಗೋಣು ಕೊಡಬೇಕು. ಇದು ದೇಶಕ್ಕೆ ಬೆನ್ನೆಲುಬಾದ ರೈತನ ಇಂದಿನ ಸ್ಥಿತಿ.

ಅಭಿವೃದ್ಧಿ ಯಾವಾಗಲೂ ಸಮಾನವಾಗಿರಬೇಕು ಎಂದು ಹೇಳುವ ರಾಜಕಾರಣಿಗಳು, ಆರ್ಥಿಕ ತಜ್ಞರು, 'ವಿಶೇಷ ವಿತ್ತವಲಯ'ದಂತೆ 'ವಿಶೇಷ ಕೃಷಿ ವಲಯ' ಸ್ಥಾಪನೆಗೆ ಯೋಚಿಸುತ್ತಿಲ್ಲವೇಕೇ, ವಿಶೇಷ ಕೃಷಿ ವಲಯ ಎಂದು ಗುರುತಿಸಲಾದ ಕೃಷಿ ಭೂಮಿಯನ್ನು ಕೃಷಿ ಉದ್ದೇಶಕ್ಕೆ ಮಾತ್ರ ಬಳಸಲಾಗುವುದು. ಅದರ ಆಸುಪಾಸಿನಲ್ಲಿರುವ ಕೃಷಿಯೇತರ ಭೂಮಿಯಲ್ಲಿ ಕೃಷಿಗೆ ಅಗತ್ಯವಾದ ಗೋದಾಮು, ಗೊಬ್ಬರ ಶೇಖರಣಾ ಘಟಕ, ಆಹಾರ ಸಂಸ್ಕರಣಾ ಘಟಕ ಮತ್ತು ಪ್ಯಾಕಿಂಗ್ ಘಟಕ ಮುಂತಾದವುಗಳನ್ನು ಸ್ಥಾಪಿಸಬಹುದು. ಈ ಸ್ಥಳಕ್ಕೆ ಉತ್ತಮ ರಸ್ತೆ ಸಂಪರ್ಕ, ಮಾರುಕಟ್ಟೆ ಮುಂತಾದವುಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿಯಾಗಿರಬೇಕು. ಇಲ್ಲಿ ರೈತರ ಭೂಮಿಯನ್ನು ಯಾರು ವಶಪಡಿಸಿಕೊಳ್ಳುವುದೂ ಇಲ್ಲ, ರೈತರು ಕೃಷಿಯನ್ನು ತೊರೆಯುವುದೂ ಇಲ್ಲ. ಜೊತೆಗೆ, ಸರಕಾರದ ಯೋಜನೆಗಳಾದ 'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ', 'ರಾಷ್ಟ್ರೀಯ ಆಹಾರ ಭದ್ರತಾ ಆಂದೋಲನ', 'ಬೆಳೆ ವಿಮೆ' ಇವುಗಳನ್ನು ಕೂಡ ಸಮರ್ಥವಾಗಿ ಜಾರಿ ಮಾಡಬಹುದು. ಪ್ರಸ್ತುತ ಬಹುಸಂಖ್ಯಾತ ರೈತರ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಲು ರಾಜ್ಯ ಸರಕಾರ ಮುಂದಾಗಿರುವುದು ಸಮಾಧಾನಕರ ವಿಷಯವಾಗಿದೆ.

೪.೨. ದಲಿತ ಚಳವಳಿ

ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಭಾರತೀಯ ಸಮಾಜವು ಪ್ರಾಚೀನ ಕಾಲದಿಂದಲೂ ಸಮಾನತೆಯ ತಳಹದಿಯ ಮೇಲೆ ನಿರ್ಮಾಣವಾಗದೆ, ಅಸಮಾನತೆಯ ತಳಹದಿಯ

ಮೇಲೆ ನಿರ್ಮಾಣವಾಗಿದೆ. ಹೀಗಾಗಿ ಸಮಾಜದಲ್ಲಿ ದಲಿತರು, ಕೆಳವರ್ಗದವರು ಶತಮಾನಗಳಿಂದಲೂ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಅಸಮಾನತೆ ಮತ್ತು ಶೋಷಣೆಗೆ ಒಳಗಾಗಿದ್ದಾರೆ. ಇಂತಹ ಅಸಮಾನತೆಯನ್ನು ಕಿತ್ತು ಹಾಕಲು ಆಯಾ ಕಾಲಘಟ್ಟದಲ್ಲಿ ಪ್ರತಿರೋಧಗಳು ಹಾಗೂ ಹೋರಾಟಗಳು ನಡೆಯುತ್ತಾ ಬಂದಿವೆ. ೧೨ನೇ ಶತಮಾನದ ಬಸವೇಶ್ವರರಿಂದ ಹಿಡಿದು ೨೦ನೇ ಶತಮಾನದ ಡಾ. ಬಿ.ಆರ್. ಅಂಬೇಡ್ಕರ್‌ರವರೆಗೆ ಪ್ರಯತ್ನಗಳು ನಡೆದಿವೆ ಮತ್ತು ಇನ್ನೂ ನಡೆಯುತ್ತಾ ಇವೆ. ಆದರೆ ಇಂತಹ ಪ್ರಯತ್ನಗಳು ಸಂಪೂರ್ಣವಾಗಿ ಫಲಕಾರಿ ಆಗದೇ ಸಮಾಜವನ್ನು ಪರಿವರ್ತಿಸಲಾಗದೇ ತಾರತಮ್ಯ ಹಾಗೆ ಮುಂದುವರೆದಿದೆ.

ಶತಮಾನಗಳಿಂದ ದಲಿತರನ್ನು ತುಳಿದು ಕೇವಲ ದುಡಿಮೆಗೆ ಸೀಮಿತಗೊಳಿಸಿ, ಯಾವ ಆಸ್ತಿಯನ್ನು ಹೊಂದದಂತೆ ಮಾಡಿ ಅವರನ್ನು ಸಮಾಜದಿಂದಲೇ ದೂರವಿಟ್ಟಿದೆ. ತನ್ನ ಪ್ರಜೆಗಳಿಗೆ ಸಮಾನ ಅವಕಾಶಗಳನ್ನು ಒದಗಿಸದ ಯಾವುದೇ ದೇಶವು ಅಥವಾ ಸಮಾಜವು ಅಭಿವೃದ್ಧಿ ಹೊಂದಲಾರದು. ಆದರೆ ಭಾರತದಲ್ಲಿ ದಲಿತರನ್ನು ಹೊರಗಿಟ್ಟು ದೇಶ ಕಟ್ಟುವ ಕ್ರಿಯೆ ನಡೆದಿತ್ತು. ಆದರೆ ೧೨ನೇ ಶತಮಾನದ ಬಸವಣ್ಣ ಮತ್ತು ೨೦ನೇ ಶತಮಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮಾತ್ರ ದಲಿತರಿಂದಲೇ ಸಮಾಜದ ನಿರ್ಮಾಣವನ್ನು ಆರಂಭಿಸಿದ್ದರು. ಆದರೆ ಇಂದು ದಲಿತರು ಹಂಚಿ ಹೋಗಿದ್ದಾರೆ. ಅವರಲ್ಲಿ ಬಹುತೇಕರು ಭೂಹೀನ ಕೃಷಿ ಕಾರ್ಮಿಕರು ಮತ್ತು ಕೂಲಿಕಾರರಾಗಿದ್ದು ಇವರೆಲ್ಲಾ ಕೊಳಗೇರಿಗಳಲ್ಲಿ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿರುವ ಅನಕ್ಷರತೆ ಮತ್ತು ಬಡತನದಿಂದಾಗಿಯೇ ಹೆಚ್ಚಿನ ದಲಿತರು ಮೂಢನಂಬಿಕೆ ಮತ್ತು ಕಂದಾಚಾರಗಳಿಗೆ ಅಂಟಿಕೊಳ್ಳಲು ಕಾರಣವಾಗಿದೆ. ಹೀಗಾಗಿ ಶತಶತಮಾನಗಳಿಂದಲೂ ಧರ್ಮದ ಹೆಸರಿನಲ್ಲಿ ಅಸ್ಪೃಶ್ಯತೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ತಲಾತಲಾಂತರಗಳಿಂದ ಶೋಷಣೆಗೊಳಗಾದ ವರ್ಣವ್ಯವಸ್ಥೆಯಿಂದ ನಿರಂತರ ನೋವನ್ನು ಅನುಭವಿಸುತ್ತಿದ್ದ ಕೆಳವರ್ಗದರಿಗೆ ಬ್ರಿಟಿಷರ ಆಳ್ವಿಕೆ ವರದಾನವಾಗಿತ್ತು. ಬ್ರಿಟಿಷರ ಅವಧಿಯಲ್ಲಿ ಪಲ್ಲಟಗೊಂಡ ಇವರು ಹೊಸ ದಿಕ್ಕಿನತ್ತ ನಡೆದರು. ಜಾರಿಗೆ ಬಂದ ಹೊಸ ಶಿಕ್ಷಣ ನೀತಿಯಿಂದ ಆಧುನಿಕ ಶಿಕ್ಷಣದ ಸೌಲಭ್ಯ ಪಡೆದು ಮೂಕರಂತಿದ್ದ ದಲಿತರು ಮಾತನಾಡತೊಡಗಿದರು. ಬರಹ ಗೊತ್ತಿಲ್ಲದ ಅನಕ್ಷರಸ್ಥರಾಗಿದ್ದ ಇವರು ಓದು ಬರಹ ಕಲಿತು ತಮ್ಮ ಮೇಲಾಗುತ್ತಿರುವ ಶೋಷಣೆ ಬಗ್ಗೆ, ಅಸಮಾನತೆ, ಬಗ್ಗೆ ಹೋರಾಡಲು ಮುಂದಾದರು.[೨೨] ಕಾಲಕ್ರಮೇಣ ೭೦ರ ದಶಕದಲ್ಲಿ ಅಸ್ಪೃಶ್ಯತೆ ವಿರುದ್ಧ ಹೋರಾಡುವುದು ದಲಿತರಿಗೆ ಅನಿವಾರ್ಯವಾಗಿತ್ತು. ಸದಾ ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತಿದ್ದ ಡಾ. ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳು ದಲಿತರಿಗೆ ದಾರಿದೀಪವಾದವು. ಅಸ್ಪೃಶ್ಯತೆಯ ನಿರ್ಮೂಲನೆ, ದಲಿತರ ಉದ್ಧಾರ, ಸಾಮಾಜಿಕ ತಾರಮತ್ಯದ ನಿವಾರಣೆ, ಆರ್ಥಿಕ ಸಮಾನತೆ, ಶಿಕ್ಷಣ ಮುಂತಾದ ವಿಚಾರಗಳಿಂದ ದಲಿತರು ಜಾಗೃತರಾದರು. ಎಲ್ಲಾ ಅವಕಾಶಗಳಿಂದ ವಂಚಿತರಾಗಿದ್ದ ಇವರು ಸೌಕರ್ಯಗಳನ್ನು ಪಡೆಯಲು ಸಾಮಾಜಿಕ, ರಾಜಕೀಯ, ಆರ್ಥಿಕ ಸಮಾನತೆಗಾಗಿ ಹೋರಾಟದ ಹಾದಿ ಹಿಡಿದರು.

ಬದಲಾಗದ ಸಮಾಜ ಮತ್ತು ವ್ಯವಸ್ಥೆ ವಿರುದ್ಧ ಸ್ವಾಭಿಮಾನಿಗಳಾದ ದಲಿತರು ತಮ್ಮ ಸ್ಥಾನಮಾನಗಳನ್ನು ಗಟ್ಟಿಗೊಳಿಸಿಕೊಳ್ಳಲು, ಹಕ್ಕುಗಳನ್ನು ಪಡೆಯಲು ಸಂಘಟನೆಗಳ ಮೂಲಕ ಹೋರಾಟವನ್ನು ಆರಂಭಿಸಿದರು. ಇಂತಹ ಹೋರಾಟ ಕ್ರಮೇಣ ದಲಿತ ಚಳವಳಿಯಾಗಿ ಮಾರ್ಪಟ್ಟಿತು. ಈ ದಿಕ್ಕಿನಲ್ಲಿ ದಲಿತರು ಒಂದು ಶಕ್ತಿಯಾಗಿ ಬೆಳೆಯಲು ಕಾರಣವಾಯಿತು. ಇಂತಹ ಶಕ್ತಿಯ ರೂಪವೇ ಭೀಮಸೇನಾ, ದಲಿತ ಸಂಘರ್ಷ ಸಮಿತಿ ಮತ್ತು ದಲಿತರ ಒಕ್ಕೂಟಗಳು.

ದಲಿತ ಚಳವಳಿಯ ಹಿನ್ನೆಲೆ

'ದಲಿತ' ಎಂಬ ಪದದ ಪದನಿಷ್ಪತ್ತಿಯ ಕುರಿತು ಅನೇಕ ಬಗೆಯ ವ್ಯಾಖ್ಯಾನಗಳು ಅಸ್ತಿತ್ವದಲ್ಲಿವೆ. ದಲಿತ ಎಂದರೆ ಯಾರು ದಲಿತತ್ವ ಎಂದರೆ ಏನು ಎಂಬ ವಿಚಾರವನ್ನು ಅನೇಕರು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಈಡಾದ ಎಲ್ಲ ಜನರು ದಲಿತರು. ಏಕೆಂದರೆ ಶೋಷಣೆಗೆ ಜಾತಿ ಭೇದ ವಿರುವುದಿಲ್ಲ. ಬದಲಿಗೆ ಶೋಷಣೆಯ ಸ್ವರೂಪ ಜಾತಿಯನ್ನು ಮೀರಿ ನಿಂತಿರುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಇವರನ್ನು ಪಂಚಮರು, ದಾಸರು, ಬಹಿಷ್ಕೃತರು, ಚಾಂಡಾಲರು, ಅಸ್ಪೃಶ್ಯರು, ಅವರ್ಣೀಯರು, ಶೂದ್ರರು ಎಂದು ಕರೆಯಲಾಗುತ್ತದೆ. ಹೀಗೆ ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಬ್ಬ ಮನುಷ್ಯ ಸಮಾಜದೊಂದಿಗೆ ಬದುಕಲಾರದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು, ಜಾತಿ ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರು ದಲಿತರೆನಿಸಿಕೊಳ್ಳುತ್ತಾರೆ.[೨೩]

ಕರ್ನಾಟಕದಲ್ಲಿ ದಲಿತ ಪದವನ್ನು ಬಳಸಿ ಚಲಾವಣೆಗೆ ತಂದವರು ದಲಿತ ಕ್ರಿಯಾ ಸಮಿತಿಯವರು. ದಲಿತ ಎಂದರೆ ಹಿಂಸೆಗೊಳಗಾದ, ದಮನಕ್ಕೆ ಒಳಗಾದ, ಶೋಷಣೆಗೆ ಒಳಗಾದ ಎಂಬುದರಿಂದ ಹಿಡಿದು ಅದೊಂದು ಜೀವನ ಪದ್ಧತಿಯೆನ್ನುವವರೆಗೆ ಅದರ ಅರ್ಥಗಳನ್ನು ವಿಸ್ತರಿಸಲಾಗಿದೆ. 'ದಲ' ಎಂಬ ಸಂಸ್ಕೃತ ಶಬ್ದದಿಂದ ಬಂದುದು ದಲಿತ. ದಲ ಎಂದರೆ ಚೂರು, ತುಂಡು, ಭಾಗ, ಛಿದ್ರವಾದವರು, ದಲನ ಕ್ರಿಯೆಗೆ ಒಳಗಾದವರು ಎಂಬರ್ಥ ಬರುತ್ತದೆ. ಹೀಗಾಗಿ ಯಾರು ಶೋಷಿತರೋ ಅವರೇ ದಲಿತರು. ದಲಿತ ಎಂಬುದು ಎಲ್ಲಾ ಶೋಷಿತರನ್ನು ಒಳಗೊಳ್ಳುವಂತದ್ದು. ಅಸ್ಪೃಶ್ಯರು, ಶ್ರಮಜೀವಿಗಳು, ಭೂ-ಹೀನರು, ಕೃಷಿಕಾರ್ಮಿಕರು, ಆದಿವಾಸಿಗಳು, ಮುಸ್ಲಿಮರು, ಶೋಷಣೆಗೆ ಒಳಗಾದ ಮಹಿಳೆಯರು ಹೀಗೆ ತುಳಿತಕ್ಕೊಳಗಾದವರೆ ದಲಿತರು ಎಂಬುದು ದಲಿತ ಪ್ಯಾಂಥರ್ಸ್‌ನ ವ್ಯಾಖ್ಯಾನ. ಹೀಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿರಂತರವಾಗಿ ಶೋಷಣೆಗೊಳಗಾದವರೆ ದಲಿತರೆಂಬ ಭಾವನೆ ಎಲ್ಲೆಡೆ ಇರುವಂತದ್ದು.[೨೪]

ಡಾ. ಬಿ.ಆರ್. ಅಂಬೇಡ್ಕರ್ ಮತ್ತು ದಲಿತ ವಿಮೋಚನೆ

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ದಲಿತರ ಬೆಳಕಾಗಿ, ದಲಿತ ಹೋರಾಟಕ್ಕೆ ನಿಜವಾಗಿಯೂ ಜೀವ ತಂದು ಕೊಟ್ಟವರೆ ಡಾ. ಬಿ.ಆರ್. ಅಂಬೇಡ್ಕರ್‌ರವರು. ಅವರು ಆರಂಭಿಸಿದ ಹೋರಾಟ ಮತ್ತು ಅವರು ಬೀರಿದ ಪ್ರಭಾವದಿಂದ ಡಾ. ಬಿ.ಆರ್. ಅಂಬೇಡ್ಕರ್ ಹೆಸರು ಮತ್ತು ದಲಿತ ಹೋರಾಟ ಹೆಚ್ಚು ಪ್ರಚಾರ ಮತ್ತು ಪ್ರಚಲಿತವಾಗಿವೆ. ದಲಿತ ವರ್ಗದ ಜನರಿಗೆ ಶಕ್ತಿಯಾಗಿ, ಸ್ಪೂರ್ತಿಯಾಗಿ ಹೊರಹೊಮ್ಮಿದ ಕಾಲವಾಗಿದೆ, ನಾನೊಬ್ಬ ದಲಿತ ಎಂದು ಎದೆಮುಟ್ಟಿಕೊಂಡು ಹೆಮ್ಮೆಯಿಂದ ಹೇಳಿಕೊಳ್ಳುವಂತ ಧ್ವನಿಯನ್ನು ಕೆಳವರ್ಗದವರಿಗೆ ಕೊಟ್ಟ ಮಹಾನ್ ಪುರುಷ ಮತ್ತು ದಲಿತರ ಸ್ವಾಭಿಮಾನದ ಸಂಕೇತ. ತಮ್ಮ ತತ್ವ, ಚಿಂತನೆ, ಸಾಧನೆಗಳಿಂದ ಇಂದಿಗೂ ದಲಿತರ ಶಕ್ತಿಯಾಗಿ, ನೆರಳಾಗಿ, ದಾರಿ ತೋರುತ್ತಿರುವ ಮಾನವತಾವಾದಿ. ಡಾ. ಬಿ.ಆರ್. ಅಂಬೇಡ್ಕರ್ ಜಾತೀಯತೆಯ ದುರಂತವನ್ನು ಸ್ವಂತ ಅನುಭವದಿಂದ ಆಳವಾದ ಅಧ್ಯಯನದಿಂದ ಅರಿತವರು. ಶೋಷಿತ ವರ್ಗಗಳಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡಬೇಕೆಂಬ ನಿಟ್ಟಿನಲ್ಲಿ ಹಲವಾರು ವಿಚಾರಗಳ ಬಗ್ಗೆ ಗಂಭೀರವಾಗಿ ಚಿಂತಿಸಿದರು. ಅವರು ಭಾರತೀಯ ಸಮಾಜ ಮತ್ತು ರಾಷ್ಟ್ರದ ತತ್ವಹೀನತೆಯನ್ನು ನೇರವಾಗಿ ಗುರುತಿಸಿ, ಆಳವಾಗಿ ಹಾಗೂ ವಿಸ್ತಾರವಾಗಿ ಅಭ್ಯಸಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟವನ್ನು ಹುಟ್ಟು ಹಾಕಿದರು. ಸಮಾಜದ ಎಲ್ಲಾ ಸ್ಥಿತಿಗತಿಗಳಲ್ಲಿ ಕಂಡು ಬರುವ ಸವಾಲುಗಳನ್ನು ಕುರಿತು ಶಿಕ್ಷಕರಾಗಿ, ಆರ್ಥಿಕ ತಜ್ಞರಾಗಿ, ಸಮಾಜ ಸುಧಾರಕರಾಗಿ, ರಾಜಕೀಯ ನೇತಾರರಾಗಿ, ಪಾರ್ಲಿಮೆಂಟರಿಯನ್ ಆಗಿ, ಶಿಕ್ಷಣ ತಜ್ಞರಾಗಿ, ಬರಹಗಾರ ರಾಗಿ, ಭಾಷಣಕಾರರಾಗಿ, ಚಿಂತನೆಗಳನ್ನು ನಡೆಸಿದ್ದಾರೆ. ಅಸ್ಪೃಶ್ಯರನ್ನು ಉನ್ನತ ಮಟ್ಟಕ್ಕೆ ತರಲು ಅವಿರತ ಪ್ರಯತ್ನ ನಡೆಸಿದ್ದಾರೆ.

ಒಂದು ರೀತಿಯಲ್ಲಿ ಮೇಲಿನ ಎಲ್ಲಾ ಅಂಶಗಳನ್ನು, ವಾದಗಳನ್ನು ಮೀರಿದ್ದು ಅವರ ವ್ಯಕ್ತಿತ್ವ, ಅವರ ವಿಚಾರಧಾರೆ ಮತ್ತು ಅವರ ಬದುಕು ಬರಹಗಳು. ಇವುಗಳೇ ದಲಿತ ಚಳವಳಿಯ ಉದಯಕ್ಕೆ ಪ್ರೇರಣೆಯಾದವು ಎಂದರೆ ತಪ್ಪಾಗಲಿಕ್ಕಿಲ್ಲ. ತಮ್ಮ ಸಮುದಾಯಕ್ಕೆ ಆಗುತ್ತಿರುವ ಅಸಹನೀಯ ಅನ್ಯಾಯದ ವಿರುದ್ಧ ವಿಧಾಯಕ ರೀತಿಯಲ್ಲಿ ಪ್ರತಿಭಟಿಸಬೇಕೆಂದು ಅವರು ಸಂಕಲ್ಪ ಮಾಡಿದರು. ಈ ಕಾರಣಕ್ಕಾಗಿಯೇ 'ಮೂಕನಾಯಕ' ಎಂಬ ಪತ್ರಿಕೆಯನ್ನು ಹೊರಡಿಸಿದರು ಪತ್ರಿಕೆ ಅವರ ಅಭಿಪ್ರಾಯಗಳ ಮಂಡನೆಯ ವೇದಿಕೆಯಾಗಿತ್ತು. ಪತ್ರಿಕೆಯಲ್ಲಿ ಅವರು ಭಾರತದ ಸಮಾಜ ಕುರಿತು ಬರೆಯುತ್ತಾ, ಹಿಂದೂ ಸಮಾಜ ಒಂದು ಎತ್ತರವಾದ ಗೋಪುರವಿದ್ದಂತೆ, ಅದಕ್ಕೆ ಹಲವಾರು ಅಂತಸ್ತುಗಳುಂಟು, ಆದರೆ ಅದಕ್ಕೆ ಬಾಗಿಲುಗಳಾಗಲಿ, ಅದನ್ನೇರಲು ಏಣಿಯಾಗಲಿ ಇಲ್ಲ, ಒಂದು ಅಂತಸ್ತಿನಲ್ಲಿ ಹುಟ್ಟಿದ ವ್ಯಕ್ತಿ ಅದೇ ಅಂತಸ್ತಿನಲ್ಲಿ ಸಾಯಬೇಕು ಅದನ್ನು ಬಿಟ್ಟು ಅನ್ಯಮಾರ್ಗವೇ ಅವನಿಗಿಲ್ಲ ಎಂದು ಬರೆಯುತ್ತಾರೆ.

ಭಾರತದ ಸ್ವಾತಂತ್ರ್ಯದ ಬಗ್ಗೆ ಹೇಳುತ್ತಾ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರಷ್ಟೆ ಸಾಲದು, ಅದು ಎಲ್ಲ ವರ್ಗದವರಿಗೂ ಸಮಾನವಾದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು

ಒದಗಿಸುವ ಭರವಸೆಯುಂಟು ಮಾಡಬೇಕು. ಪ್ರತಿಯೊಬ್ಬನಿಗೂ ಜೀವನದಲ್ಲಿ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣ ಮಾಡಬೇಕು. ದಲಿತರ ಮೂಲಭೂತ ಹಕ್ಕುಗಳನ್ನು ಮಾನ್ಯ ಮಾಡದ ಸ್ವರಾಜ್ಯ ಸ್ವರಾಜ್ಯವೇ ಅಲ್ಲ, ಬದಲಾಗಿ ಅದು ಮತ್ತೊಂದು ಬಗೆಯ ಗುಲಾಮಗಿರಿ ಎಂದು ಅಭಿಪ್ರಾಯಪಟ್ಟರು. ಎಲ್ಲಿಯವರೆಗೆ ಅಸ್ಪೃಶ್ಯರಿಗೆ ಇತರರಿಗಿರುವಂತೆ ಸರಿ ಸಮಾನವಾದ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳಿರುವುದಿಲ್ಲವೋ, ಅಲ್ಲಿಯವರೆಗೆ ಕೇವಲ ರಾಜಕೀಯ ಸ್ವಾತಂತ್ರ್ಯದಿಂದ ಯಾವ ಪ್ರಯೋಜನವೂ ಇಲ್ಲವೆಂಬಂದು ಡಾ. ಬಿ.ಆರ್. ಅಂಬೇಡ್ಕರ್‌ರವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಅವರು 'ಬಹಿಷ್ಕೃತ ಹಿತಕಾರಿಣೀ ಸಭ'ವನ್ನು ಸ್ಥಾಪಿಸಿದರು.

ಸಾರ್ವಜನಿಕ ಸ್ಥಳವನ್ನು ಅಸ್ಪೃಶ್ಯರಿಗೆ ತೆರೆದಿಡಬೇಕು ಎಂಬ ಅವರ ಬೇಡಿಕೆಗಳು, ೧೯೨೩ರಲ್ಲಿ ಸರ್ಕಾರಿ ಆದೇಶವಾಗಿ ಪ್ರಕಟವಾಯಿತು. ಆ ಸಂದರ್ಭದಲ್ಲಿ ಅವರು ನಾವು ಪ್ರಗತಿ ಹೊಂದಬೇಕಾದರೆ ನಮ್ಮನ್ನು ನಾವು ಮೂರು ವಿಧವಾದ ಶುದ್ಧೀಕರಣಕ್ಕೆ ಒಳಪಡಿಸಿಕೊಳ್ಳಬೇಕು ನಮ್ಮ ವಿಚಾರಗಳು ವಿಕಸಿತಗೊಳ್ಳಬೇಕು ನಮ್ಮ ಮಾತು ಸುಧಾರಿಸಬೇಕು, ನಮಗೆ ಮರ್ಯಾದೆ ಕೊಡುವವರಿಗೆ ನಾವು ಮರ್ಯಾದೆ ತೋರಬೇಕು. ಪ್ರಗತಿಗೆ ವಿದ್ಯೆಯೇ ಮೂಲ, ಶೋಷಿತ ವರ್ಗಗಳು ವಿದ್ಯೆಯ ಮೂಲಕ ಉದ್ಧಾರದ ಹಾದಿ ಹಿಡಿಯಬೇಕು, ಶತಶತಮಾನಗಳ ಶಾಪದ ಸಂಕೋಲೆಯನ್ನು ಕಿತ್ತೊಗೆಯಬೇಕು ಎಂದು ಜನರನ್ನು ಬಡಿದೆಬ್ಬಿಸಿದರು. ಹೀಗೆ ಇವರ ಚಿಂತನೆಗಳು, ಹೋರಾಟಗಳು, ದಲಿತರಲ್ಲಿ, ಕೆಳವರ್ಗದವರಲ್ಲಿ, ಮಹಿಳೆಯರಲ್ಲಿ ಜಾಗೃತಿ ಉಂಟು ಮಾಡಿದವು. ಶತಮಾನಗಳಿಂದ ದಲಿತರು ಅನುಭವಿಸುತ್ತಿದ್ದ ಸಂಕಟಗಳು, ಯಾತನೆಗಳು, ನೋವುಗಳ ವಿರುದ್ಧ ಧ್ವನಿ ಎತ್ತಲು ಆರಂಭವಾಯಿತು. ಸಾಮಾಜಿಕ ನ್ಯಾಯ ಮತ್ತು ಸಮಾನತೆಯತ್ತ ದಾಪುಗಾಲು ಹಾಕಲು ಪ್ರಯತ್ನಪಡುವ ದಿಕ್ಕಿನಲ್ಲಿ ಇವರ ಹೋರಾಟ ಆರಂಭವಾಯಿತು. ಹೀಗೆ ದಲಿತರಲ್ಲಿ ಪ್ರಜ್ಞೆ, ಸ್ವಾಭಿಮಾನ ಮೂಡಿಸಿದವರೇ ಡಾ. ಬಿ.ಆರ್. ಅಂಬೇಡ್ಕರ್‌ರವರು.

೪.೨.೧. ಸ್ವಾತಂತ್ರ್ಯೋತ್ತರ ದಲಿತ ಚಳವಳಿಗಳು

ಶತಶತಮಾನಗಳಿಂದ ಭಾರತದಾದ್ಯಂತ ಪ್ರಾದೇಶಿಕ ನೆಲೆಯಲ್ಲಿ ತಮ್ಮ ಅಸ್ತಿತ್ವಕ್ಕಾಗಿ, ತಳವರ್ಗದವರ, ಹಿಂದುಳಿದ ವರ್ಗದವರ ಹೋರಾಟಗಳು ನಡೆಯುತ್ತಾ ಬಂದಿವೆ. ಹೀಗೆ ಪ್ರಾದೇಶಿಕ ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ವಿಶಿಷ್ಟವಾದ ದಲಿತ ಹೋರಾಟಗಳು ನಡೆದು ಬಂದಿರುವುದನ್ನು ಗಮನಿಸಬಹುದು. ವಾಸ್ತವವಾಗಿ ಹೈದರಾಬಾದ್ ಕರ್ನಾಟಕದ ದಲಿತ ಚಳವಳಿಯ ಮೂಲ ನೆಲೆಯನ್ನು ಬಸವಣ್ಣನವರ ಕ್ರಾಂತಿಯ ಪ್ರಣಾಳಿಕೆಯಲ್ಲಿಯೇ ಗುರುತಿಸಬಹುದು. ಧಾರ್ಮಿಕ ಗೊಡ್ಡು ಸಂಪ್ರದಾಯ, ಬ್ರಾಹ್ಮಣ್ಯ ಮತ್ತು ಜಾತಿ ವಿನಾಶಕ್ಕಾಗಿ ಬಸವಣ್ಣ ಈ ನೆಲದಲ್ಲಿ ಒಂದು ಬಹು ದೊಡ್ಡ ಸಾಂಸ್ಕೃತಿಕ ಚಳವಳಿಯ ಪರಂಪರೆಯನ್ನೇ ಹುಟ್ಟು ಹಾಕಿದ್ದಾರೆ. ತನ್ನ ಚಳವಳಿಯಲ್ಲಿ ಬಸವಣ್ಣ ಹೆಚ್ಚಾಗಿ ಕೆಳವರ್ಗದ ಜನರನ್ನೇ ತೊಡಗಿಸಿಕೊಂಡಿದ್ದರು ಹಾಗೂ ಎಲ್ಲಾ ವರ್ಗದವರನ್ನೊಳಗೊಂಡ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಮಾನವತಾವಾದಕ್ಕೆ ಪುಷ್ಟಿ ನೀಡದ್ದರು. ವಚನಗಳ ಮೂಲಕ ಅಂದಿನ ಗೊಡ್ಡು ಸಂಪ್ರದಾಯವನ್ನು

ಧಿಕ್ಕರಿಸುತ್ತ ಕೆಳವರ್ಗಗಳ ಧ್ವನಿಯನ್ನು ಗುರುತಿಸುವ ಪ್ರಯತ್ನ ಮಾಡಿದ್ದರು. ವಚನಗಳ ಮೂಲಕ ಇಡೀ ದಲಿತ ಜನಾಂಗಕ್ಕೆ ನೈತಿಕ ಸ್ಥೈರ್ಯ ಒದಗಿಸಿದರು.

ಹೀಗೆ ಜಾತಿ ವಿನಾಶದ ಹೋರಾಟದಲ್ಲಿ, ಕೆಳವರ್ಗಗಳ ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಮಡಿವಾಳರ ಮಾಚಯ್ಯ, ಮಾದಾರ ಕೇತಯ್ಯ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ ಮುಂತಾದವರು ದಲಿತ ಸಮುದಾಯವನ್ನು ಪ್ರತಿನಿಧಿಸಿ ಚಳವಳಿಯಲ್ಲಿ ಭಾಗವಹಿಸಿದರು. ಹೀಗೆ ಬಸವಣ್ಣನು ಅನುಭವ ಮಂಟಪ ಸ್ಥಾಪಿಸಿ, ವಿಚಾರ ಕ್ರಾಂತಿಗೆ ನಾಂದಿ ಹಾಡಿ ೧೨ನೇ ಶತಮಾನದಲ್ಲಿಯೇ ಅಂತರ್‌ಜಾತಿ ವಿವಾಹ ಮಾಡಿಸಿದ್ದುದು ದೇಶ ಕಂಡ ಬಹುದೊಡ್ಡ ಸಾಮಾಜಿಕ ಕ್ರಾಂತಿಯೆಂದೇ ಹೇಳಬಹುದು. ಆದುದರಿಂದಲೇ ಕರ್ನಾಟಕದಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ಇಂದಿಗೂ ಬಸವಣ್ಣನನ್ನು ಕೆಳವರ್ಗದ ಜನರು ಗೌರವಿಸುತ್ತಾರೆ ಮತ್ತು ಆರಾಧಿಸುತ್ತಾರೆ. ಬಸವಣ್ಣನ ಹೋರಾಟ ದಲಿತ ವರ್ಗದ ಜನರಲ್ಲಿ ಕ್ರಾಂತಿಯ ಬೀಜ ಮೊಳಕೆಯೊಡೆಯುವಂತೆ ಮಾಡಿತು. ಹೀಗೆ ದಲಿತ ಚಳವಳಿಯ ಮೂಲ ಬೇರುಗಳು ಗಟ್ಟಿಗೊಂಡಿದ್ದು ಈ ಹಂತದಲ್ಲಿ.

ಆದರೆ ಹೋರಾಟಗಳು ಮೊಳಕೆಯೊಡೆಯುವ ಹಂತದಲ್ಲಿ ಸಂಪ್ರದಾಯವಾದಿಗಳು ಅದನ್ನು ಮೊಳಕೆಯಲ್ಲಿಯೇ ಚಿವುಟು ಹಾಕಿದರು. ಹಾಗಾಗಿ ಮತ್ತೊಮ್ಮೆ ಸುಮಾರು ವರ್ಷಗಳ ಕಾಲ ದಲಿತರ ಧ್ವನಿ ಅಡಗಿ ಹೋಯಿತು. ಆದರೆ ದೀರ್ಘ ಅವಧಿಯ ನಂತರ ಆಗ ಸಮಾಜದಲ್ಲಿದ್ದ ಜ್ವಲಂತ ಸಮಸ್ಯೆಗಳೆಂಬ ಭಸ್ಮದ ಒಡಲಿನಿಂದಲೆ ಫೀನಿಕ್ಸ್ ಪಕ್ಷಿಯಂತೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಮಾಜಿಕ ಕ್ರಾಂತಿಯ ಪ್ರಭಾವ ಕರ್ನಾಟಕದ ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಜನರ ಮೇಲೆ ಕಂಡು ಬಂದಿತು. ಮುಂದೆ ಡಾ. ಬಿ.ಆರ್. ಅಂಬೇಡ್ಕರ್‌ರವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಒಪ್ಪಿಕೊಂಡು ಅವರ ಹಾದಿಯಲ್ಲಿ ಬದುಕಿ ಹೈದರಾಬಾದ್ ಕರ್ನಾಟಕದ ದಲಿತ ಚಳವಳಿಗೆ ಚಾಲನೆ ನೀಡಿದವರೇ ಬಿ. ಶ್ಯಾಮಸುಂದರ.

ಅಜ್ಞಾನ, ಅನಕ್ಷರತೆ, ಬಡತನದ ಜೊತೆಗೆ ಜಮೀನ್ದಾರಿಕೆ ಪದ್ಧತಿ ಜೀವಂತವಾಗಿರುವ ಹೈದರಾಬಾದ್ ಕರ್ನಾಟಕದಲ್ಲಿ ಜಮೀನ್ದಾರರ ಮತ್ತು ಮೇಲ್ವರ್ಗದವದ ದಬ್ಬಾಳಿಕೆಯಲ್ಲಿ ದಲಿತರು ನಲುಗಿ ಹೋಗಿದ್ದರು. ಇಂದಿಗೂ ಕೂಡ ಇಲ್ಲಿ ದಲಿತರ ಮೇಲೆ ದೌರ್ಜನ್ಯ, ಶೋಷಣೆ ಹಾಗೂ ಅವರ ಹಲವಾರು ನಾಗರಿಕ ಹಕ್ಕುಗಳ ಉಲ್ಲಂಘನೆ ನಡೆಯುತ್ತಲೇ ಇದೆ. ಹೀಗಾಗಿ ಅನೇಕ ಚಿಂತಕರು, ಸಂಘಟನೆಗಳು ಇಲ್ಲಿನ ವ್ಯವಸ್ಥೆಯ ಸುಧಾರಣೆಗೆ ಪ್ರಯತ್ನಗಳನ್ನು ಆರಂಭಿಸಿದರು. ಅಂತಹ ಸಮಯದಲ್ಲಿ ನಾಯಕರಾಗಿ ಹೊರಹೊಮ್ಮಿದವರೆ ಬಿ. ಶ್ಯಾಮಸುಂದರ್ ಮತ್ತು ಅವರು ಹುಟ್ಟುಹಾಕಿದ 'ಭೀಮಸೇನೆ' ಎಂಬ ಸಂಘಟನೆ.

ಡಾ. ಬಿ.ಆರ್. ಅಂಬೇಡ್ಕರೋತ್ತರ ದಲಿತ ನಾಯಕ ಬಿ. ಶ್ಯಾಮಸುಂದರ

> "ಭಾರತದ ಮೂಲನಿವಾಸಿಗಳಾದ ದಲಿತರ ಹಕ್ಕುಗಳನ್ನು ಬಲಾತ್ಕಾರದಿಂದ ಕಸಿದುಕೊಳ್ಳಲಾಗಿದೆ. ಅವುಗಳನ್ನು ಭಿಕ್ಷೆ ಬೇಡಿ ಪಡೆದುಕೊಳ್ಳಲಾಗುವುದಿಲ್ಲ. ನಾವು ಸಹ ಅವುಗಳನ್ನು ಬಲ ಪ್ರಯೋಗದಿಂದಲೇ ಪಡೆಯಬೇಕಾಗುತ್ತದೆ."
>
> - ಬಿ. ಶ್ಯಾಮಸುಂದರ[೨೫]

ಹೀಗೆ ಡಾ. ಬಿ.ಆರ್. ಅಂಬೇಡ್ಕರ್ ನಂತರದಲ್ಲಿ ಸಾಮಾಜಿಕ ಸುಧಾರಣೆಗಾಗಿ ದಲಿತ ಮತ್ತು ಸಮಗ್ರ ಶೋಷಿತ ಸಮುದಾಯದ ಪರ ಧ್ವನಿ ಎತ್ತಿ ಅವರ ಕುರಿತು ಬದುಕಿನುದ್ದಕ್ಕೂ ಚಿಂತಿಸಿದ ಮೇರು ವ್ಯಕ್ತಿತ್ವ ಶ್ಯಾಮಸುಂದರ ಅವರದು. ಖ್ಯಾತ ವಿಚಾರವಾದಿಯಾಗಿ, ವಾಗ್ಮಿಯಾಗಿ, ಸಾಹಿತಿಯಾಗಿ, ರಾಜಕಾರಣಿಯಾಗಿ, ಸಮಾಜ ಸುಧಾರಕರಾಗಿ ದಲಿತರ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಸಮಗ್ರ ವ್ಯವಸ್ಥೆಯನ್ನೇ ಬದಲಾಯಿಸಲು ಪ್ರಯತ್ನಿಸಿ 'ದಲಿತ ಚಳವಳಿಯ ಪಿತಾಮಹ', ದಕ್ಷಿಣ ಭಾರತದ ಹುಲಿ ಎಂಬ ಬಿರುದಿಗೆ ಪಾತ್ರರಾದವರು. ದೀನದಲಿತರ, ಹಿಂದುಳಿದ ಅಲ್ಪಸಂಖ್ಯಾತರ ಏಳ್ಗೆಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಹೀಗೆ ಮೂರು ರಾಜ್ಯಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ತತ್ವ, ಚಿಂತನೆಗಳನ್ನು ಪ್ರಚಾರ ಪಡಿಸಿದವರು. ಸಾಂಪ್ರದಾಯಿಕ ವ್ಯವಸ್ಥೆಯನ್ನು ಧಿಕ್ಕರಿಸುವುದರ ಮೂಲಕ ಜಾತಿ ಪದ್ಧತಿ ಹಾಗೂ ಶೋಷಣೆಯನ್ನು ನಿರ್ಮೂಲನೆ ಮಾಡಲು ತಮ್ಮ ಜೀವನದುದ್ದಕ್ಕೂ ಹೋರಾಟ ಮಾಡಿದರು. ಸಾಮಾಜಿಕ ನೆಲೆಯಲ್ಲಿ ಅಂದಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೆ ಸವಾಲಾಗಿ ನಿಂತು, ಸಮಾಜದ ಕಟ್ಟಕಡೆಯ ವ್ಯಕ್ತಿಯ ಪರವಾಗಿ ಧ್ವನಿ ಎತ್ತಿ ಅವನನ್ನು ಸಮಾಜದ ಬಹುಮುಖಿಗೆ ತರಲು ಪ್ರಯತ್ನಿಸಿ ಯಶಸ್ವಿಯಾದವರು ಬಿ. ಶ್ಯಾಮಸುಂದರ.

ಬಿ. ಶ್ಯಾಮಸುಂದರ ಅವರು ಮಹಾರಾಷ್ಟ್ರ ರಾಜ್ಯದ ಔರಂಗಾಬಾದ್‌ನಲ್ಲಿ ೧೯೦೮ ಡಿಸೆಂಬರ್ ೨೧ ರಂದು ಜನಿಸಿದರು. ಇವರ ತಂದೆ, ಆಗ ಅಸ್ಪೃಶ್ಯರೆನಿಸಿದ 'ಮಾಲಾ' ಜಾತಿಯ, ಬದುಲಾಮಾಣಿಕ್ಯಂ ಮತ್ತು ತಾಯಿ ಸುಧಾಬಾಯಿ. ಇವರ ತಂದೆ ರೈಲ್ವೆ ಇಲಾಖೆಯಲ್ಲಿ ಮುಖ್ಯ ಪೇದೆಯಾಗಿದ್ದರು. ಶ್ಯಾಮಸುಂದರರವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ೧೯೧೩ ರಿಂದ ೧೯೧೭ರ ಅವಧಿಯಲ್ಲಿ ಔರಂಗಾಬಾದ್‌ನಲ್ಲಿ ಕ್ರೈಸ್ತ ಮಿಷನರಿಯ 'ಸೆವೆನ್ ಫ್ಲವರ್ಸ್' ಶಾಲೆಯಲ್ಲಿ ಪೂರ್ಣ ಗೊಳಿಸಿದರು. ಅನಂತರ ಅವರ ತಂದೆಗೆ ಹೈದರಾಬಾದಿಗೆ ವರ್ಗಾವಣೆಯಾದ ಕಾರಣ, ಹೈದರಾಬಾದಿಗೆ ಹೋಗಿ ಅರ್ಥಶಾಸ್ತ್ರದಲ್ಲಿ ಬಿ.ಎ. ಪದವಿಯನ್ನು ರ್‍ಯಾಂಕ್‌ನೊಂದಿಗೆ ಪಡೆದರು. ಆ ಕಾಲದಲ್ಲಿ ದಲಿತ ವಿದ್ಯಾರ್ಥಿಯೊಬ್ಬ ಇಂತಹ ಸಾಧನೆ ಮಾಡಿದ ಮೊದಲಿಗರಾಗಿದ್ದರು. ಇಂತಹ ಸಾಧನೆಗಾಗಿ ಅವರಿಗೆ 'ಖುಸ್ರು-ಎ-ದಕ್ಕನ್' ಎಂಬ ಬಿರುದನ್ನು ಹಾಗೂ ಬಂಗಾರದ ಪದಕವನ್ನು ೧೯೨೪ರಲ್ಲಿ ಪ್ರದಾನ ಮಾಡಲಾಯಿತು. ನಂತರ ಎಲ್.ಎಲ್.ಬಿ. ಕಾನೂನು ಪದವಿಯನ್ನು ಪಡೆದರು.

ಶ್ಯಾಮಸುಂದರ ಅವರು ವಿದ್ಯಾರ್ಥಿ ದೆಸೆಯಿಂದಲೆ ಸಂಘಟನಾ ಸಾಮರ್ಥ್ಯ ಹೊಂದಿದ್ದು, ಅನೇಕ ಸಂಘ ಸಂಸ್ಥೆಗಳ ನೇತೃತ್ವ ವಹಿಸಿದ್ದರು. ಅನೇಕ ನೌಕರರ ಒಕ್ಕೂಟಗಳ ನೇತೃತ್ವ ಕೂಡ ಅವರು ನಿಭಾಯಿಸಿದ್ದಾರೆ. ಅವರು ಭಾರತೀಯ ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳನ್ನು ಕುರಿತಂತೆ ಆಳವಾದ ಅಧ್ಯಯನ ಮಾಡಿದ್ದರು. ಅವರ ಆಳವಾದ ಅಧ್ಯಯನದ ಫಲದಿಂದಾಗಿ ಹಿಂದಿ, ಇಂಗ್ಲೀಷ್, ಉರ್ದು ಭಾಷೆಗಳಲ್ಲಿ ಒಟ್ಟು ಹದಿನಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ದಿ ಬರ್ನ್' (ಇಂಗ್ಲಿಷ್) 'ಭೀಮಸೇನಾ ಅವರ್ ಪೋಸ್ಟ್ ಅಂಡ್ ಪ್ರೆಸೆಂಟ್' (ಇಂಗ್ಲಿಷ್), 'ಹಿಂದು ದೇವತಾವೊಂಕಾ ಮ್ಯಾನಿಫೆಸ್ಟೊ' (ಹಿಂದಿ), 'ಭಾರತೀಯ ಜಾತೀಕಾ ಪ್ರಾಚೀನ ಇತಿಹಾಸ್' (ಹಿಂದಿ) ಮುಂತಾದವು ಸೇರಿವೆ.

ಭೀಮಸೇನೆ

'ಭೀಮಸೇನೆ' ಎಂಬ ಸಂಘಟನೆಯನ್ನು ಬಿ. ಶ್ಯಾಮಸುಂದರ ೧೯೬೮ರಲ್ಲಿ ಗುಲಬರ್ಗಾದಲ್ಲಿ ಸ್ಥಾಪಿಸಿದರು. ಭೀಮಸೇನೆಯ ಇತಿಹಾಸವೆಂದರೆ ಅದು ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯದ ವಿರುದ್ಧದ ಹೋರಾಟಗಳ ಇತಿಹಾಸವಾಗಿದೆ. 'ಭೀಮಸೇನೆ' ಎಂಬ ಹೆಸರಿನಿಂದ ಪ್ರಾರಂಭವಾದ ಸಂಘಟನೆಯು ದೇಶದ ಪ್ರತಿಯೊಬ್ಬ ದಲಿತರ, ಶೋಷಿತರ, ಕಂಠದ ದನಿಯಾಗಿ ಹೊರಬಂದಿತು. ಕೆಳವರ್ಗದ ಹಾಗೂ ಗುಲಾಮಗಿರಿಯನ್ನು ಅನುಭವಿಸಿಕೊಂಡು ಬಂದ ಮುಗ್ಧ ಜನರನ್ನು ಮೇಲೆತ್ತುವ, ಕೋಟ್ಯಾನುಕೋಟಿ ಶೋಷಿತ ಸಮುದಾಯವನ್ನು ಒಂದುಗೂಡಿಸಿ ಹೊಸ ನಾಡ ಕಟ್ಟಬೇಕೆಂಬ ಆಶಯವನ್ನು ಶ್ಯಾಮಸುಂದರ್ ಹೊಂದಿದ್ದರು. ಇಂತಹ ಉದ್ದೇಶವನ್ನಿಟ್ಟುಕೊಂಡು ಡಾ. ಬಿ.ಆರ್. ಅಂಬೇಡ್ಕರ್ ಅವರ ೭೭ನೆಯ ಹುಟ್ಟುಹಬ್ಬದಂದು ಅಂದರೆ ೨೯.೪.೧೯೬೮ ರಂದು 'ಭಾರತೀಯ ಭೀಮಸೇನೆ' ಎಂಬ ಸಂಘಟನೆಯನ್ನು ಗುಲಬರ್ಗಾದ ಹೃದಯ ಭಾಗವಾದ ಜಗತ್ ಸರ್ಕಲ್‌ನಲ್ಲಿ ವಿದ್ಯುಕ್ತವಾಗಿ ಉದ್ಘಾಟನೆ ಮಾಡಲಾಯಿತು.[೨೬]

ಭೀಮಸೇನೆಯ ಅಂದಿನ ಪದಾಧಿಕಾರಿಗಳು

೧. ಶ್ರೀ ಬಿ. ಶಾಮಸುಂದರ - ಸ್ಥಾಪಕ ಅಧ್ಯಕ್ಷರು

೨. ಶ್ರೀ ಗುಂಡಪ್ಪ ಭರಣೆ - ಅಧ್ಯಕ್ಷರು

೩. ಶ್ರೀ ಜಡಪ್ಪಾ ಒಂಟಿ - ಉಪಾಧ್ಯಕ್ಷ

೪. ಶ್ರೀ ಚಂದ್ರಶೇಖರ ಬಬ್ಲಾದ - ಸಾಮಾನ್ಯ ಕಾರ್ಯದರ್ಶಿ

೫. ಶ್ರೀ ರಾಜಾರಾಮ ಗಾಜರೆ - ವ್ಯವಸ್ಥಾಪಕ ಕಾರ್ಯದರ್ಶಿ

೬. ಶ್ರೀ ಮಾರುತಿ ಮಾಲೆ - ಖಜಾಂಚಿ[೨೭]

ಬಿ. ಶ್ಯಾಮಸುಂದರ ಅವರು ಶಿಕ್ಷಣ ಮತ್ತು ಸಮಾಜಕ್ಕೆ ಎಷ್ಟು ಒತ್ತು ನೀಡಿದ್ದರೋ ಅಷ್ಟೇ ಮಹತ್ವವನ್ನು ರಾಜಕೀಯಕ್ಕೂ ನೀಡಿದರು. ಒಂದು ಸಮುದಾಯದ ವರ್ಗಗಳಿಗೆ ರಾಜಕೀಯ ಅಭಯಹಸ್ತ ಇದ್ದಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ ಎಂಬ ಸತ್ಯ ಅವರಿಗೆ ಮನವರಿಕೆಯಾಗಿದ್ದಿತು. ಹಾಗಾಗಿ ಅಂದಿನ ಕಲುಷಿತವಾದ ಭಾರತೀಯ ಧರ್ಮ ಮತ್ತು ಜಾತಿ ವ್ಯವಸ್ಥೆಯ ನಡುವೆ ಸಿಕ್ಕಿ ಹಾಕಿಕೊಂಡ

ಶೋಷಿತರು ದಲಿತರನ್ನು ಮೇಲೆತ್ತಬೇಕೆಂಬ ಹೆಬ್ಬಯಕೆಯಿಂದ ಹೈದರಾಬಾದ್ ನಿಜಾಮನ ಸಂಸ್ಥಾನದಲ್ಲಿ ಸ್ಥಾನ ಪಡೆದು, ನಿಜಾಂ ಸರಕಾರದ ಮಂತ್ರಿಮಂಡಲದಲ್ಲಿ ಸಹಾಯಕ ಹಣಕಾಸು ಮಂತ್ರಿಯಾಗಿದ್ದರು. ೧೯೪೫ರಲ್ಲಿ 'ಡಿಪ್ರೆಸ್ಡ್ ಕ್ಲಾಸ್ ಅಸೋಸಿಯೇಷನ್' ಅಧ್ಯಕ್ಷರಾಗಿ ಶೋಷಿತ ಸಮುದಾಯಕ್ಕೆ ಜೀವ ತುಂಬಿದರು. ೧೯೪೭ರಲ್ಲಿ ನಡೆದ ಹೈದರಾಬಾದ್ ವಿಧಾನಸಭೆಗೆ ಚುನಾಯಿತ ಸದಸ್ಯರಾಗಿ ಆಯ್ಕೆಗೊಂಡರು. ೧೯೪೮ರಲ್ಲಿ ಹೈದರಾಬಾದ್ ಸಂವಿಧಾನ ಸಭೆಯ ಉಪಸಭಾಪತಿಯಾಗಿ ಆಯ್ಕೆಗೊಂಡರು. ಬಿ. ಶ್ಯಾಮಸುಂದರರವರು ವಿಶ್ವಸಂಸ್ಥೆಗೆ ಪ್ರತಿನಿಧಿಯಾಗಿ ಹೋಗಿ ಅಲ್ಲಿ ಭಾಷಣ ಮಾಡಿ ಭಾರತದಲ್ಲಿಯ ೧೬೦ ಮಿಲಿಯನ್‌ದಷ್ಟಿರುವ ದಲಿತರಿಗೆ ಮಾನವ ಹಕ್ಕುಗಳ ಲಾಭ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.[೨೮] ಭಾರತದ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಗೆ ಸ್ಪರ್ಧಿಸಿ ಸೋತರು. ನಂತರ ೧೯೫೭ರಲ್ಲಿ ಮೈಸೂರು ವಿಧಾನಸಭೆಗಾಗಿ ನಡೆದ ಚುನಾವಣೆಯಲ್ಲಿ ಭಾಲ್ಕಿ ಮತಕ್ಷೇತ್ರದಿಂದ ಸ್ಪರ್ಧಿಸಿ ಜಯ ಗಳಿಸಿದರಲ್ಲದೇ ಇವರ ಎದುರಾಳಿ ಅಭ್ಯರ್ಥಿಯ ಠೇವಣಿ ಜಪ್ತಿಯಾಯಿತು. ಆದರೆ ನಂತರ ೧೯೬೧ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಆಳಂದ ಹಾಗೂ ಬೀದರ್‌ನಲ್ಲಿ ಸ್ಪರ್ಧಿಸಿ ಎರಡೂ ಕಡೆ ಸೋಲನ್ನು ಅನುಭವಿಸಿದರು.

ಭೀಮಸೇನೆಯ ಹೋರಾಟಗಳು

ಭೀಮಸೇನೆಯ ಸ್ಥಾಪನೆಯ ಹಿನ್ನೆಲೆ ಮತ್ತು ಉದ್ದೇಶಗಳನ್ನು ಅವಲೋಕಿಸಿದಾಗ, ಇಲ್ಲಿಯವರೆಗಿದ್ದ ಸುಧಾರಣಾವಾದಿ ಸಂಘಟನೆಗಳಿಗೆ ಹೋಲಿಸಿದಲ್ಲಿ ಭೀಮಸೇನಾ ಒಂದು ಕ್ರಾಂತಿಕಾರಕ ಸಂಘಟನೆಯಾಗಿ ಕಾಣುತ್ತದೆ. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿಯ ಹರಿಕಾರನಂತೆ ಭೀಮಸೇನಾ ಕೆಲಸ ಮಾಡಿದುದನ್ನು ಗುರುತಿಸಲಾಗುತ್ತದೆ. ಸಂಘಟನೆ ಸ್ಪಷ್ಟವಾಗಿ ಘೋಷಿಸಿದ್ದು, ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಬೇಕು ಹಾಗೂ ಉಗ್ರ ಹೋರಾಟಗಳಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯ ಎಂಬ ದಿಟ್ಟ ನಿಲುವಿನೊಂದಿಗೆ ಭೀಮಸೇನಾ ಹೋರಾಟಗಳನ್ನು ರೂಪಿಸುತ್ತಿತ್ತು. ಭೀಮಸೇನೆಯು ಸರ್ಕಾರದ ಮುಂದೆ ಮಂಡಿಸಿದ ಬೇಡಿಕೆಗಳೆಂದರೆ,

೧. ಪ್ರತಿ ತಾಲೂಕಿನಲ್ಲಿಯೂ ಶೇ. ೨೫ರಷ್ಟು ಹಳ್ಳಿಗಳನ್ನು ದಲಿತರಿಗೆ ಬಿಟ್ಟು ಕೊಡಬೇಕು.

೨. ಒಂದು ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ದಲಿತರಿಗೆ ಬಿಟ್ಟು ಕೊಡುವುದು.

೩. ಪ್ರತಿಯೊಂದು ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರಿಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವುದು.

೪. ಅಸ್ಪೃಶ್ಯರಿಗಾಗಿಯೇ ಒಂದು ರಾಜಕೀಯ ಸಂಘಟನೆ ಸ್ಥಾಪಿಸುವುದು.

ಅಸ್ಪೃಶ್ಯರಿಗೆ ಭೂ ಒಡೆತನಕ್ಕಾಗಿ ಹೋರಾಟ

ಹೈದರಾಬಾದ್ ನಿಜಾಮನ ಸಂಸ್ಥಾನದಲ್ಲಿದ್ದ ಗುಲಬರ್ಗಾ, ರಾಯಚೂರು, ಬೀದರ್ ಪ್ರದೇಶ ಗಳಲ್ಲಿದ್ದ ಬಹಳಷ್ಟು ದಲಿತರು ಭೂಮಿ ಇಲ್ಲದೆ ಪ್ರಬಲ ಜಾತಿಯ ಭೂ ಒಡೆಯರ ಮನೆಯಲ್ಲಿ ಜೀತದಾಳುಗಳಾಗಿ ಜೀವನ ಸಾಗಿಸುತ್ತಾ ಅವರ ದರ್ಪ, ದೌರ್ಜನ್ಯಗಳಿಗೆ ಬಲಿಯಾಗಿದ್ದರು. ದಲಿತರಿಗೆ ಅತೀ ಕಡಿಮೆ ಕೂಲಿ ಕೊಡುತ್ತಾ, ಭೂಹೀನ ಜನರನ್ನು ಜೀತದಾಳುಗಳನ್ನಾಗಿ ದುಡಿಸಿಕೊಳ್ಳುತ್ತಿದ್ದರು.

ಹೀಗಾಗಿ ದಿನದಿಂದ ದಿನಕ್ಕೆ ದಲಿತರ ಶೋಷಣೆ ಹೆಚ್ಚುತ್ತಲೇ ಇತ್ತು. ಹೀಗಾಗಿ ದಲಿತರ ಆರ್ಥಿಕ ಸಂಕಟ ನಿವಾರಣೆಯಾಗಬೇಕೆಂದರೆ ದಲಿತರಿಗೆ ಭೂ ಒಡೆತನ ಸಿಗಬೇಕೆಂಬ ಹೋರಾಟಕ್ಕೆ ನಿಂತರು. ಇಂತಹ ದೃಷ್ಟಿಯನ್ನಿಟ್ಟುಕೊಂಡು ಭೂರಹಿತ ಕೃಷಿ ಕಾರ್ಮಿಕರ ಸಮ್ಮೇಳನಗಳನ್ನು ಏರ್ಪಡಿಸುತ್ತಾ ಭೂಸುಧಾರಣೆ ಕಾಯ್ದೆಗೆ ಒತ್ತಾಯಿಸಿದರು. ಕೆಲವೊಮ್ಮೆ ಸರಕಾರದ ಅಧೀನದಲ್ಲಿರುವ ಬೀಳು ಭೂಮಿಯನ್ನು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡಲು ಪ್ರಚೋದಿಸಿದರು.

ಪ್ರಬಲ ಜಾತಿಯ ಭೂಒಡೆಯರ ಮನೆಯಲ್ಲಿ ಜೀತದಾಳುಗಳಾಗಿದ್ದ ದಲಿತರನ್ನು ವಿಮೋಚನೆ ಮಾಡುವಲ್ಲಿ, ಅಸ್ಪೃಶ್ಯರ ಪರವಾದ ವಿಶೇಷ ಕಾನೂನನ್ನು ರಚನೆ ಮಾಡಲಾಯಿತು ಹಾಗೂ ಉಳುವವನೇ ಭೂಮಿಯ ಒಡೆಯ ಎಂದು ಘೋಷಿಸಲಾಯಿತು. ಸರಕಾರದ ಅಧೀನದಲ್ಲಿದ್ದ ಭೂಮಿಯನ್ನು ಭೂಹೀನರಿಗೆ ಹಂಚುವ ಕಾರ್ಯಕ್ರಮಕ್ಕೆ ಸರಕಾರದಿಂದ ಅನುಮತಿಯನ್ನು ಪಡೆದು ನಿಜಾಂ ಆಡಳಿತಕ್ಕೊಳಪಟ್ಟ ಪ್ರದೇಶದ ಹಳ್ಳಿ ಹಳ್ಳಿಗೆ ತೆರಳಿ ಗೈರಾಣಿ ಭೂಮಿಯನ್ನು ಆಕ್ರಮಿಸಿ ಉಳಮೆ ಮಾಡಿಕೊಳ್ಳಲು ದಲಿತರಿಗೆ ಬಹಿರಂಗ ಕರೆ ನೀಡಿದ್ದರು. ಇವರ ಪ್ರಯತ್ನದಿಂದಾಗಿ ಸಾವಿರಾರು ಅಸ್ಪೃಶ್ಯರು ಭೂಮಿಯ ಒಡೆಯರಾದರು. ಹೀಗೆ ಕ್ರಾಂತಿಕಾರಿ ಭೂಹಿಡುವಳಿ ಕಾರ್ಯಕ್ರಮಕ್ಕೆ ಕೈಹಾಕಿದವರಲ್ಲಿ ಶ್ಯಾಮಸುಂದರ ಮೊದಲಿಗರು. ಇಂತಹ ಹತ್ತಾರು ಜನಪರ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಆರ್ಥಿಕವಾಗಿ ಹಿಂದುಳಿದಿದ್ದ ದಲಿತರಿಗೆ ಆರ್ಥಿಕ ಸಬಲತೆಯನ್ನು ಕಟ್ಟಿಕೊಟ್ಟರು.

ಜಾತಿವಾದಿಗಳ ವಿರುದ್ಧ ಹೋರಾಟ

ಬಿ. ಶ್ಯಾಮಸುಂದರ ಅವರು ನಾಸ್ತಿಕರಾಗಿದ್ದು ಆಸ್ತಿಕವಾದಿಗಳನ್ನು ನಂಬುತ್ತಿರಲಿಲ್ಲ ಹಾಗೂ ಅಂಥವರಿಗೆ ಪ್ರೋತ್ಸಾಹವನ್ನು ನೀಡುತ್ತಿರಲಿಲ್ಲ. ಪುರಾತನ ಕಾಲದಿಂದ ಪುರೋಹಿತ ವರ್ಗವು ನಂಬಿಸಿಕೊಂಡು ಬಂದಿದ್ದ ದೇವರು, ಪುನರ್‌ಜನ್ಮ, ಹಣೆಬರಹ ಮುಂತಾದ ಮೂಢನಂಬಿಕೆಗಳಲ್ಲಿ ಅವರಿಗೆ ನಂಬಿಕೆಯೂ ಇರಲಿಲ್ಲ. ಬದಲಾಗಿ ಶತಶತಮಾನಗಳಿಂದ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ದಲಿತರನ್ನು ಕತ್ತಲೆಗೆ ತಳ್ಳಿ ಅಸ್ಪೃಶ್ಯತೆಗೆ ಕಾರಣವಾಗಿದ್ದ ಹಿಂದೂ ದೇವತೆಗಳ ಫೋಟೊಗಳನ್ನು ಸಾಮೂಹಿಕವಾಗಿ ನಾಶ ಮಾಡುವ, ಸುಟ್ಟುಹಾಕುವ ಚಳವಳಿ ಕೈಗೊಂಡರು. ಇವರ ಇಂತಹ ಹೋರಾಟಕ್ಕೆ ಹೈದರಾಬಾದ್ ಕರ್ನಾಟಕ ಪ್ರದೇಶದ ದಲಿತರು ಅತ್ಯದ್ಭುತ ರೀತಿಯಲ್ಲಿ ಸ್ಪಂದಿಸಿದರು. ಶ್ಯಾಮಸುಂದರ ಅವರ ಹೋರಾಟಕ್ಕೆ ಬೆಂಬಲವಾಗಿ ನಿಂತ ದಲಿತರು ಎಲ್ಲ ದೇವಾನುದೇವತೆಗಳ ಫೋಟೋಗಳನ್ನು ಸುಟ್ಟು ಹಾಕುವುದರ ಮೂಲಕ ಶೋಷಣೆಯ ವಿರುದ್ಧ ಪ್ರತಿಭಟಿಸಿದರು. ಪ್ರತಿಭಟನೆಯು ಗುಲಬರ್ಗಾದಲ್ಲಿ ತೀವ್ರ ಸ್ವರೂಪ ಪಡೆದು ಗುಲಬರ್ಗಾದಲ್ಲಿದ್ದ ಸುಮಾರು ಮೂರು ಸಾವಿರ ಭೀಮಸೇನೆಯ ಸದಸ್ಯರು ಹಿಂದೂ ದೇವರುಗಳ ಚಿತ್ರಗಳನ್ನು ಸುಡುವ ಹಾಗೂ ಮನೆಯಲ್ಲಿರುವ ಫೋಟೋಗಳನ್ನು ಚರಂಡಿಗೆ ಎಸೆಯುವ ಘಟನೆಗಳು ಜರುಗಿ, ಜಾತಿವಾದಿಗಳಲ್ಲಿ ಆಶ್ಚರ್ಯವನ್ನು ಮೂಡಿಸಿದರು. ಇವರ ಕ್ರಾಂತಿಕಾರಿ ಹೋರಾಟಗಳನ್ನು ಕಂಡು ಅಂದಿನ ರಾಜ್ಯದ ನೇತಾರರಾದ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ ಇತರ ಅನೇಕ ನಾಯಕರು ದಿಗ್ಭ್ರಮೆಗೊಳಗಾದರು. ಇಂತಹ ಚಟುವಟಿಕೆಗಳು ಮುಂದೆ ರಾಯಚೂರಿನಲ್ಲಿ ಮುಂದುವರೆದವು.

ಭೀಮಸೇನೆಯ ಇಂತಹ ವಿನೂತನ ಚಳವಳಿಯನ್ನುಶೋಷಿತರು ಪ್ರಶಂಸಿಸಿ ಬೆಂಬಲಿಸಿದರೆ, ಮತ್ತೊಂದು ಕಡೆ ಹಿಂದೂವಾದಿಗಳು ಇಂತಹ ಕೃತ್ಯವನ್ನು ಖಂಡಿಸಿ ಸರಕಾರಕ್ಕೆ ಪತ್ರ ಬರೆದರು. ವೃತ್ತ ಪತ್ರಿಕೆಗಳಲ್ಲಿಯೂ ವರದಿಗಳು ಪ್ರಕಟವಾದವು. ಆಗ ಭೀಮಸೇನೆ ಮುಖಂಡರು ಮಂಡಿಸಿದ ವಾದವೇನೆಂದರೆ ದೇವರ ದರ್ಶನದ ಅವಕಾಶ ಸಿಗದಿದ್ದಾಗ ದೇವರನ್ನೇಕೆ ಪೂಜಿಸಬೇಕು. ತಮ್ಮನ್ನು ಅಸ್ಪೃಶ್ಯರೆನ್ನುವ ಧರ್ಮಗ್ರಂಥಗಳನ್ನು ನಾವೇಕೆ ಗೌರವಿಸಬೇಕು ಎನ್ನುವ ವಾದದೊಂದಿಗೆ ಭೀಮಸೇನೆಯ ಹೋರಾಟಗಳು ಮುಂದುವರೆದವು. ಅಲ್ಲದೆ "ಹಿಂದುಗಳೇ ನಾವು ಹೇಳುವುದನ್ನು ಕೇಳಿಸಿಕೊಳ್ಳಿ ಬರುತ್ತಿದೆ ಭೀಮಸೇನೆ, ನಾವು ಹಿಂದೂಗಳಲ್ಲ" ಎಂದೂ ಹಿಂದೂಗಳಾಗಿರಲಿಲ್ಲ, ನಾವು ಹಿಂದೂ ದೇವತೆಗಳ ಚಿತ್ರ ಮತ್ತು ವಿಗ್ರಹಗಳನ್ನು ಸುಡುವೆವು, ನಾವು ಹಿಂದೂ ಧರ್ಮದ ಹೆಸರುಗಳನ್ನು ಕಿತ್ತೊಗೆಯುವೆವು, ನಾವು ನಮ್ಮ ಮೊಳಕಾಲ ಮೇಲೆ ಸಾಯದೆ ಸ್ವಂತ ಕಾಲುಗಳ ಮೇಲೆ ನಿಂತು ಸಾಯುವೆವು ಎಂದು ಸಾರಿ ಸಾರಿ ಹೇಳುತ್ತಿದ್ದರು. ಇದು ಭೀಮಸೇನೆಯ ಸ್ವಯಂ ರಕ್ಷಣೆಯ ಆಂದೋಲನವಾಗಿದೆ ಎಂದು ಸಮರ್ಥಿಸಿ ಕೊಂಡರು. ಇಂತಹ ಬೆಳವಣಿಗೆಗಳು ದಲಿತ ವರ್ಗದಲ್ಲಿ ಹೊಸ ಹುರುಪು ಮೂಡಿಸಿ, ಅನೇಕ ನಗರಗಳಲ್ಲಿ, ಹಳ್ಳಿಗಳಲ್ಲಿ, ಜನರು ಸ್ವಯಂ ಪ್ರೇರಣೆಯಿಂದ ಭೀಮಸೇನೆಯ ಶಾಖೆಗಳನ್ನು ಸ್ಥಾಪಿಸಲು ಮುಂದಾದರು. ಮುಂದೆ ಭೀಮಸೇನೆಯ ಸಂಘಟನೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ದೆಹಲಿ, ಲಕ್ನೋ, ಬಿಹಾರ, ಪಂಜಾಬ್ ಮುಂತಾದಡೆ ಶಾಖೆಗಳು ಅಸ್ತಿತ್ವಕ್ಕೆ ಬಂದವು.[೨೯]

ದಲಿತ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ಹೋರಾಟ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಭೀಮಸೇನೆ ಸ್ಥಾಪನೆಯಾದ ನಂತರ ದಲಿತರ ಮೇಲೆ ಅದರಲ್ಲೂ ದಲಿತ ಮಹಿಳೆಯ ಮೇಲೆ ದೌರ್ಜನ್ಯವಾದರೆ ತತ್‌ಕ್ಷಣ ಅದರ ವಿರುದ್ಧ ಹೋರಾಟ ಕೈಗೊಳ್ಳುತ್ತಿತ್ತು. ಭೀಮಸೇನೆಯ ಹೋರಾಟದ ತೀವ್ರತೆಯ ಬಗ್ಗೆ ಹೇಳುವುದಾದರೆ, ೧೯೭೦ರಲ್ಲಿ ದಲಿತ ಮಹಿಳೆಯ ದೌರ್ಜನ್ಯದ ವಿರುದ್ಧ ನಡೆಸಿದ ಹೋರಾಟವು ರಾಷ್ಟ್ರವ್ಯಾಪ್ತಿ ಗಮನ ಸೆಳೆಯಿತು.

ಗುಲಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದ ಶಾಸಕ ಹಾಗೂ ಮುಖಂಡ ಶಂಕರಶೆಟ್ಟಿ ಪಾಟೀಲರ ಮನೆಗೆಲಸದಲ್ಲಿದ್ದ ನಿಂಗಮ್ಮ ಎಂಬ ದಲಿತ ಮಹಿಳೆ ಅಕಾಲಿಕ ಮರಣವನ್ನಪ್ಪಿದಳು. ಶವಪರೀಕ್ಷೆ ಮಾಡಿದ ವೈದ್ಯರು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪ್ರಮಾಣ ಪತ್ರ ನೀಡಿದರು. ಆದರೆ ಆಕೆಯ ಸಾವಿನ ಬಗ್ಗೆ ಸಂಶಯಗಳು ಭುಗಿಲೆದ್ದಾಗ, ಭೀಮಸೇನೆಯ ಸದಸ್ಯರು ಶ್ಯಾಮಸುಂದರ ಅವರ ನೇತೃತ್ವದಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂದು ನಿರ್ಧರಿಸಲು ಪುನಃ ಶವ ಪರೀಕ್ಷೆ ಮಾಡಬೇಕೆಂದು ಗುಲಬರ್ಗಾದಲ್ಲಿ ಬೃಹತ್ ಪ್ರತಿಭಟನೆ ಆರಂಭಿಸಿದರು. ಇದರಿಂದಾಗಿ ಆಕೆಯ ಶವವನ್ನು ಮರುಪರೀಕ್ಷೆಗೊಳಪಡಿಸಿದಾಗ ಅದು ಕೊಲೆ ಎಂದು ಸಾಬೀತಾಯಿತು. ಇದರಿಂದ ರೊಚ್ಚಿಗೆದ್ದ ನೂರಾರು ದಲಿತರು ಶಂಕರಶೆಟ್ಟಿ ಪಾಟೀಲರನ್ನು ಸಾರ್ವಜನಿಕ ವೇದಿಕೆಯಲ್ಲಿ ಹಲ್ಲೆ ಮಾಡಿ ಥಳಿಸಿದರು. ಹಾಗಾಗಿ ಸಮಸ್ಯೆ ದೊಡ್ಡ ವಿಷಯವಾಗಿ ವಿಧಾನಸಭೆಯಲ್ಲಿಯೂ ಪ್ರತಿಧ್ವನಿಸಿ ಚರ್ಚೆ

ನಡೆಯಿತು. ಆಗ ಗೃಹಮಂತ್ರಿಗಳು ಮಧ್ಯೆ ಪ್ರವೇಶಿಸಿ, ಇದು ಕೊಲೆ ಎಂಬುದನ್ನು ತಿಳಿದು, ಶಾಸಕರ ಮೇಲೆ ಕೊಲೆ ಆರೋಪ ಹೊರಿಸಲಾಯಿತು. ಹೀಗೆ ಘಟನೆ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ಭೀಮಸೇನೆಯ ಹೋರಾಟದಿಂದ ದಲಿತರ ಮೇಲಾಗುವ ಅವಮಾನಗಳನ್ನು ಸಹಿಸಿಕೊಳ್ಳಲಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸಿ, ದಲಿತ ವಿರೋಧಿಗಳಿಗೆ ಎಚ್ಚರಿಕೆಯನ್ನು ನೀಡಿತ್ತು.

ಹೀಗೆ ಬಿ. ಶ್ಯಾಮಸುಂದರ ಅವರು ಭೀಮಸೇನೆ ಸಂಘಟನೆಯನ್ನು ಸ್ಥಾಪಿಸಿ, ಅದರ ಮೂಲಕ ಹೋರಾಟ ಮಾಡುತ್ತಾ, ೭೮ ವರ್ಷಗಳ ಸಾರ್ಥಕ ಬದುಕು ನಡೆಸಿದವರು. ಬದುಕಿನುದ್ದಕ್ಕೂ ಏಕಾಂಗಿಯಾಗಿ ಜೀವಿಸಿದರು. ಸಮಾಜವೇ ನನ್ನ ಆಸ್ತಿ, ದಲಿತರ ಒಳಿತೇ ನನ್ನ ಬದುಕು ಎಂದು ತಿಳಿದು ಬದುಕಿದವರು. ಬ್ರಹ್ಮಚಾರಿಯಾದ ಅವರು ಯಾವುದೇ ರೀತಿಯ ಆಸ್ತಿಪಾಸ್ತಿ ಗಳಿಸುವತ್ತ ಗಮನ ಹರಿಸದೆ, ದಲಿತರ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಇಂದಿಗೂ ಈ ಭಾಗದಲ್ಲಿ ಇವರ ಹೋರಾಟಗಳು, ಚಿಂತನೆಗಳು, ಬರಹಗಳು ತುಂಬಾ ಮೌಲ್ಯವುಳ್ಳವುಗಳಾಗಿ ಉಳಿದಿವೆ. ಹೀಗೆ ನಿಸ್ವಾರ್ಥಿಯಾಗಿ ಬಾಳಿ ಬದುಕಿದ ಇವರು ಕೊನೆಗೆ ೧೯.೫.೧೯೭೫ರಲ್ಲಿ ಹೈದರಾಬಾದ್‌ನಲ್ಲಿ ಹೃದಯಾಘಾತದಿಂದ ನಿಧನರಾದರು.[೨೦]

ದಲಿತ ಸಂಘರ್ಷ ಸಮಿತಿಯ ಹೋರಾಟಗಳು

೧೯೭೪ ರಿಂದ ೧೯೮೫ರ ಕಾಲಘಟ್ಟವು ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಹೋರಾಟದ ಉಚ್ಛ್ರಾಯ ಕಾಲವೆನ್ನಬಹುದು. ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿಯ ಸ್ಥಾಪನೆ ಆದಾಗ ಅದರ ಒಂದು ಶಾಖೆಯು ಗುಲಬರ್ಗಾದಲ್ಲೂ ಸ್ಥಾಪನೆ ಆಯಿತು. ಪ್ರಾರಂಭದಲ್ಲಿ ಡಿ.ಜಿ. ಸಾಗರ್ ಆ ಸಂಘಟನೆಯ ನಾಯಕರಾಗಿ ಹೋರಾಟದ ನೇತೃತ್ವ ವಹಿಸಿದ್ದರು. ಹೀಗಾಗಿ ಹೈದರಾಬಾದ್ ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಹುಟ್ಟು, ಬೆಳವಣಿಗೆ ಮತ್ತು ಹೋರಾಟಗಳು ಮತ್ತು ಡಿ.ಜಿ. ಸಾಗರ್ ಅವರ ಕಾರ್ಯಚಟುವಟಿಕೆಗಳ ಇತಿಹಾಸವು ಜೊತೆ ಜೊತೆಯಾಗಿಯೇ ಸಾಗುತ್ತವೆ. ಒಂದು ಹಂತದಲ್ಲಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ದಲಿತ ಸಂಘರ್ಷ ಸಮಿತಿ ಎಂದರೆ ಡಿ.ಜಿ. ಸಾಗರ್ ಮತ್ತು ಡಿ.ಜಿ. ಸಾಗರ್ ಎಂದರೆ ದಲಿತ ಸಂಘರ್ಷ ಸಮಿತಿ ಎನ್ನುವಷ್ಟರಮಟ್ಟಿಗೆ ಇವರ ಹೆಸರು ಗುರುತಿಸಲ್ಪಟ್ಟಿತ್ತು. ಈಗಲೂ ಸಹ ಹೈದರಾಬಾದ್ ಕರ್ನಾಟಕದ ಅದರಲ್ಲೂ ಗುಲಬರ್ಗಾ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಪ್ರಮುಖ ಬಣ ಎಂದರೆ ಡಿ.ಜಿ. ಸಾಗರ್ ಬಣವಾಗಿದೆ.

ವಿದ್ಯಾರ್ಥಿ ದೆಸೆಯಿಂದಲೆ ಡಿ.ಜಿ. ಸಾಗರ್ ಅವರಲ್ಲಿದ್ದ ಹೋರಾಟದ ಗುಣಗಳು, ಸಂಘಟನಾ ಚತುರತೆ ಮುಂತಾದ ನಾಯಕತ್ವದ ಗುಣಗಳನ್ನು ಗುರುತಿಸಿದ ಪ್ರೊ. ಬಿ. ಕೃಷ್ಣಪ್ಪ ಇವರು ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿ ಸ್ಥಾನವನ್ನು ಇವರಿಗೆ ಕಲ್ಪಿಸಿದರು. ನಂತರ ಸ್ವಸಾಮರ್ಥ್ಯದಿಂದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಅಧ್ಯಕ್ಷರಾಗಿ, ಜಿಲ್ಲಾ ಸಂಘಟನಕಾರರಾಗಿ ಹಂತ ಹಂತವಾಗಿ ಮೇಲೇರುತ್ತಾ, ರಾಜ್ಯಮಟ್ಟದ ಸಂಚಾಲಕರಾಗಿ ಉನ್ನತ ಸ್ಥಾನಕ್ಕೇರಿದರು. ಈ ಎಲ್ಲಾ ಕಾರಣಗಳಿಂದಾಗಿ ಡಿ.ಜಿ. ಸಾಗರ್ ನೇತೃತ್ವದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಆಶ್ರಯದಲ್ಲಿ ನಡೆದ

ಹೋರಾಟಗಳನ್ನು ಸಾಧನೆಗಳನ್ನು ಮುಖ್ಯವಾಗಿ ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸುವ ಅಗತ್ಯವಿದೆ ಮತ್ತು ಈ ರೀತಿ ದಾಖಲಿಸದೇ ಹೋದರೆ ಹೈದರಾಬಾದ್ ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಹೋರಾಟದ ಚರಿತ್ರೆಯು ಸಂಪೂರ್ಣ ಮತ್ತು ಅರ್ಥಪೂರ್ಣವಾದಂತಾಗುವುದಿಲ್ಲ.

ಚಿಂಚನಸೂರು ದಲಿತರ ಬೆತ್ತಲ ಸೇವೆ ಮೆರವಣಿಗೆ ವಿರುದ್ಧ ಹೋರಾಟ

ಶತಶತಮಾನಗಳಿಂದ ಹಿಂದೂ ಧರ್ಮದಲ್ಲಿರುವ ಕೆಲವು ಮೂಢನಂಬಿಕೆಗಳು ಮತ್ತು ಆಚಾರ ವಿಚಾರಗಳ ಮೂಲಕ ಮುಗ್ಧ ದಲಿತ ಜನರನ್ನು ಶೋಷಣೆ ಮಾಡುವ ಕೆಲಸ ಅಹ್ವಾಹಿತವಾಗಿ ನಡೆಯುತ್ತಾ ಬಂದಿದೆ. ಸಮಾಜದ ಪಟ್ಟಭದ್ರ ಹಿತಾಸಕ್ತಿಯ ಒಂದು ವರ್ಗವು ಸಮಾಜದ ಮತ್ತೊಂದು ವರ್ಗದ ಜನರ ಶೋಷಣೆಯಲ್ಲಿ ತೊಡಗಿರುವುದು ಮತ್ತು ಧರ್ಮ ಹಾಗೂ ದೇವರ ಹೆಸರಿನಲ್ಲಿ, ತಮ್ಮ ಹಿತಾಸಕ್ತಿಯನ್ನು ತೀರಿಸಿಕೊಳ್ಳುತ್ತಾ ಬಂದಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತಲೇ ಇದೆ. ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ಮುಂತಾದ ಅಮಾನವೀಯ ಧಾರ್ಮಿಕ ಆಚರಣೆಗಳನ್ನು ಸೃಷ್ಟಿ ಮಾಡಿ ಆಚರಣೆಗೆ ತರುವ ಮೂಲಕ ಮುಗ್ಧ ಜನರನ್ನು ವಂಚಿಸುತ್ತಿರುವುದು ನಡೆದೇ ಇದೆ.

ಗುಲಬರ್ಗಾ ಜಿಲ್ಲೆಯ ಚಿಂಚನಸೂರು ಎನ್ನುವ ಹಳ್ಳಿಯಲ್ಲಿ ಒಂದು ಅಮಾನವೀಯ ಪದ್ಧತಿಯು ಜಾರಿಯಲ್ಲಿತ್ತು. ಹಳ್ಳಿಯಲ್ಲಿ ಮಹಾಪುರದೇವಿಯ ದೇವಸ್ಥಾನವಿದ್ದು, ಇಲ್ಲಿನ ದೇವಿಗೆ ಹೆಣ್ಣುಮಕ್ಕಳು ಸಲ್ಲಿಸುವ ಬೆತ್ತಲಸೇವೆ ಹರಕೆ ಈ ಭಾಗದಲ್ಲಿ ಪ್ರಸಿದ್ಧವಾಗಿತ್ತು. ಹಳ್ಳಿಯ ಮತ್ತು ಸುತ್ತಮುತ್ತಲ ಹಳ್ಳಿಗಳ ಆಗ ತಾನೆ ಮೈನೆರೆದು ಮದುವೆಯಾಗದೇ ಉಳಿದ ಹೆಣ್ಣುಮಕ್ಕಳನ್ನು ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೇರಿಯಿಂದ ಬೆತ್ತಲೆಯಾಗಿ ದೇವಸ್ಥಾನಕ್ಕೆ ಕಳಿಸುತ್ತಿದ್ದರು ಅಲ್ಲಿ ಐದು ಶುಕ್ರವಾರ ಮತ್ತು ಐದು ಮಂಗಳವಾರ ದೇವಸ್ಥಾನದಲ್ಲಿರಿಸಿ ಅವರನ್ನು ಶಾಶ್ವತವಾಗಿ ಜೋಗಿತಿಯರನ್ನಾಗಿ ಮಾಡುವ ವಿಧಿವಿಧಾನ ಗಳನ್ನು ನೆರವೇರಿಸಲಾಗುತ್ತಿತ್ತು. ಇವರು ಮನೆಗೆ ವಾಪಸ್ಸಾದ ನಂತರ ಶಾಶ್ವತವಾಗಿ ವೇಶ್ಯೆಯರಾಗಿ ಪರಿವರ್ತಿತರಾಗಿ ಊರಿನ ಮುಖಂಡರಿಗೆ ಮೈಹಾಸಬೇಕಾಗಿತ್ತು. ಹೀಗೆ ಜೋಗಿತಿಯಾಗುವವರಲ್ಲಿ ಹೆಚ್ಚಿನ ಹೆಣ್ಣುಮಕ್ಕಳು ಅಸ್ಪೃಶ್ಯ ವರ್ಗಕ್ಕೆ ಸೇರಿದವರಾಗಿರುವುದು ವಿಶೇಷವಾಗಿತ್ತು. ಹೀಗಾಗಿ ಹಳ್ಳಿಯಲ್ಲಿ ನಡೆಯುತ್ತಿದ್ದ ಅನಿಷ್ಟ ಪದ್ಧತಿಯ ವಿರುದ್ಧ ದಲಿತ ಸಂಘರ್ಷ ಸಮಿತಿಯು ಡಿ.ಜಿ. ಸಾಗರ್ ಅವರ ನೇತೃತ್ವದಲ್ಲಿ ಪ್ರತಿಭಟನೆ ಆರಂಭಿಸಿತು.

ಡಿ.ಜಿ. ಸಾಗರ್ ನೇತೃತ್ವದ ದಲಿತ ಸಂಘಟನೆ ಅಲ್ಲಿನ ಹಳ್ಳಿಗಳಿಗೆ ಹೋಗಿ ದಲಿತರಿಗೆ ಇಂತಹ ಅಮಾನವೀಯ ಆಚರಣೆ ಬಗ್ಗೆ, ಮೂಢನಂಬಿಕೆ ಬಗ್ಗೆ ಅರಿವನ್ನು ಮೂಡಿಸಲು ಪ್ರಯತ್ನಿಸಿತು. ಆದರೆ ಆ ಜನರಿಗೆ ನೀಡಿದ ತಿಳುವಳಿಕೆ, ಎಚ್ಚರಿಕೆಗಳೆಲ್ಲವು ವಿಫಲವಾದವಲ್ಲದೆ ಆ ಜನರಲ್ಲಿ ಅಧೈರ್ಯ ಮತ್ತು ಭಯ ಮಾತ್ರ ದೂರವಾಗಲಿಲ್ಲ. ಆಗ ಸಮಿತಿಯು ಸಂಬಂಧಪಟ್ಟ ಸರಕಾರಿ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಅನಿಷ್ಟ ಪದ್ಧತಿಯನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳುವಂತೆ ಒತ್ತಡ ಹೇರಿದ್ದಲ್ಲದೆ, ತತ್‌ಕ್ಷಣ ಇಲ್ಲಿನ ಅನಿಷ್ಟ ಪದ್ಧತಿಯ ನಿಲುಗಡೆಗೆ ಕ್ರಮಕೈಗೊಳ್ಳದಿದ್ದರೆ ಉಗ್ರ ಹೋರಾಟ

ನಡೆಸುವ ಎಚ್ಚರಿಕೆ ನೀಡಿತು. ಆಗ ಎಚ್ಚರಗೊಂಡ ಜಿಲ್ಲಾಡಳಿತ ಇಲ್ಲಿನ ಹಳ್ಳಿಗಳಲ್ಲಿ ನಡೆಯುತ್ತಿದ್ದ ಬೆತ್ತಲೆ ಮೆರವಣಿಗೆ ಹರಕೆ ಮುಂತಾದ ಸಾಮಾಜಿಕ, ಧಾರ್ಮಿಕ ಅನಿಷ್ಟ ಪದ್ಧತಿಗಳನ್ನು ನಿಲ್ಲಿಸಲು ಕ್ರಮಕೈಗೊಂಡಿತು. ದಲಿತ ಸಂಘರ್ಷ ಸಮಿತಿಯ ಇಂತಹ ಪ್ರತಿಭಟನೆಗಳಿಂದ ಈ ಭಾಗದಲ್ಲಿ ದಲಿತ ಹೆಣ್ಣುಮಕ್ಕಳು ಗೌರವದಿಂದ ಬಾಳಲು ದಾರಿ ಮಾಡಿಕೊಟ್ಟಾಂತಾಯಿತು. ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ಶತಶತಮಾನಗಳಿಂದ ನಡೆಯುತ್ತಿದ್ದ ದಲಿತ ಸ್ತ್ರೀಯರ ಮೇಲಿನ ದೌರ್ಜನ್ಯವನ್ನು, ಶೋಷಣೆಯನ್ನು, ತಡೆಗಟ್ಟಿದ ಸಾಧನೆ ಮತ್ತು ಕೀರ್ತಿ ಇಲ್ಲಿನ ದಲಿತ ಸಂಘರ್ಷ ಸಮಿತಿಗೆ ಸಲ್ಲುತ್ತದೆ.[೨೦]

ಅಸ್ಪೃಶ್ಯತೆ ವಿರುದ್ಧ ಹೋರಾಟ

ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಮಾಜಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇಲ್ಲಿ ಒಂದು ಕಡೆ ಎಲ್ಲಾ ಸೌಲಭ್ಯಗಳನ್ನು ಅನುಭವಿಸುತ್ತಿರುವ ಶ್ರೀಮಂತ ವರ್ಗವಿದ್ದರೆ, ಇನ್ನೊಂದು ಕಡೆ ಸೌಲಭ್ಯ ವಂಚಿತ ಅತ್ಯಂತ ಬಡ ವರ್ಗ ಇರುವುದು ಕಂಡು ಬರುತ್ತದೆ. ಬಡವರ್ಗದಲ್ಲಿ ಹೆಚ್ಚಾಗಿ ದಲಿತರೆ ಕಂಡು ಬರುತ್ತಾರೆ. ದಲಿತರು ಕೇವಲ ಜೀತದಾಳುಗಳಾಗಿ, ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದು ಇವರನ್ನು ಸಮಾಜದಲ್ಲಿ ಅತ್ಯಂತ ನಿಕೃಷ್ಟವಾಗಿ ನಡೆಸಿಕೊಳ್ಳುವ ಪದ್ಧತಿ ಇಲ್ಲಿನ ಅನೇಕ ಹಳ್ಳಿಗಳಲ್ಲಿ ನಡೆದುಕೊಂಡು ಬಂದಿತ್ತು. ದಶಕಗಳ ಹಿಂದೆ ಹಳ್ಳಿಗಳಲ್ಲಿ ಬಾವಿಗಳು, ಹಳ್ಳಗಳು, ಕೆರೆಗಳೇ, ಬಳಸುವ ನೀರಿನ ಮೂಲಗಳಾಗಿದ್ದವು. ಆದರೆ ದಲಿತರಿಗೆ ಊರಿನಲ್ಲಿರುವ ಸಾರ್ವಜನಿಕ ಬಾವಿ ನೀರನ್ನು ಬಳಸದಂತೆ, ದೇವಸ್ಥಾನದೊಳಗೆ ಪ್ರವೇಶ ಮಾಡದಂತೆ, ಹೋಟೆಲ್‌ಗಳಲ್ಲಿ ಎಲ್ಲರ ಜೊತೆ ಕುಳಿತುಕೊಳ್ಳದಂತೆ, ಮುಂತಾದ ನಿರ್ಬಂಧಗಳಿದ್ದವು. ಇಂತಹ ಅಸ್ಪೃಶ್ಯತೆ ಆಚರಣೆ ಖಂಡಿಸಿ ದಲಿತ ಸಂಘರ್ಷ ಸಮಿತಿ ಅಸ್ಪೃಶ್ಯತೆ ವಿರುದ್ಧ ಹೋರಾಟಕ್ಕಿಳಿದು ಅಸ್ಪೃಶ್ಯತಾ ನಿವಾರಣೆಗೆ ಹೋರಾಟ ಮಾಡಿರುವುದು ಮತ್ತು ಹೋರಾಟ ಮಾಡುತ್ತಿರುವುದು ಕಂಡು ಬರುತ್ತದೆ.

ಅಸ್ಪೃಶ್ಯತಾ ನಿವಾರಣೆಯಲ್ಲಿ ದಲಿತ ಸಂಘರ್ಷ ಸಮಿತಿಯ ಆಶ್ರಯದಲ್ಲಿ ನಡೆದ ಅನೇಕ ಹೋರಾಟಗಳಲ್ಲಿ, ಪ್ರಮುಖ ಹೋರಾಟಗಳನ್ನು ದಾಖಲಿಸುವುದಾದರೆ, ಅವುಗಳಲ್ಲಿ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ 'ಆಲಗೂಡ' ಹಳ್ಳಿಯಲ್ಲಿ ನಡೆದ ಹೋರಾಟವು ಅಸ್ಪೃಶ್ಯತೆ ನಿವಾರಣೆ ನಿಟ್ಟಿನಲ್ಲಿ ಪ್ರಮುಖ ಘಟನೆಯಾಗಿದೆ. ಆಲಗೂಡ ಹಳ್ಳಿಯ ಹೋಟೆಲ್‌ನಲ್ಲಿ ದಲಿತರಿಗೆ, ಎಲ್ಲರೂ ಕುಡಿಯುವ ಲೋಟದಲ್ಲಿ ಚಹ ಕೊಡದೆ ಅವರಿಗೆ ಪ್ರತ್ಯೇಕವಾಗಿ ಬೇರೆ ಲೋಟ ಇಡಲಾಗುತ್ತಿತ್ತು. ಕೆಲವು ಕಡೆ ಅವರಿಗಾಗಿ ತೆಂಗಿನ ಚಿಪ್ಪುಗಳಲ್ಲಿ ಚಹ ನೀಡಲಾಗುತ್ತಿತ್ತು. ಇದನ್ನು ಆ ಹಳ್ಳಿಯ ದಲಿತರು ಪ್ರತಿಭಟಿಸಿದಾಗ ದಲಿತರ ಮೇಲೆ ಹಲ್ಲೆ ಮಾಡಲಾಯಿತು(೧೨.೦೬.೧೯೭೮). ನಂತರ ಆ ಹೋಟೆಲ್‌ನಲ್ಲಿ ದಲಿತರಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ಆಗ ದಲಿತರು ಸಾಮಾಜಿಕ ಬಹಿಷ್ಕಾರ ಮತ್ತು ಅಸ್ಪೃಶ್ಯತೆ ಆಚರಣೆ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದರು. ಹೀಗಾಗಿ ಅಸ್ಪೃಶ್ಯತಾ ಕಾನೂನಿನ್ವಯ ಹೋಟೆಲ್ ಮಾಲೀಕನನ್ನು ಪೊಲೀಸರು ಬಂಧಿಸಿದರು. ಘಟನೆಯಿಂದ ಸಿಟ್ಟಿಗೆದ್ದ

ಸವರ್ಣೀಯರು ಹಳ್ಳಿಯಲ್ಲಿದ್ದ ಎಲ್ಲಾ ದಲಿತರಿಗೆ ಹಿಂಸೆ ನೀಡಿ ದೌರ್ಜನ್ಯವೆಸಗಿದರು. ಇವರ ಹಿಂಸೆ ಮತ್ತು ದೌರ್ಜನ್ಯವನ್ನು ತಾಳಲಾರದೆ ಎಷ್ಟೋ ದಲಿತರು ತಾವು ಹುಟ್ಟಿ ಬೆಳೆದ ಊರನ್ನು ಮನೆಯನ್ನು ಬಿಟ್ಟು ಹತ್ತಿರದ ಹೈದರಾಬಾದ್ ಮುಂತಾದ ನಗರಗಳಿಗೆ ವಲಸೆ ಹೋದರು.

ಆ ಸಮಯದಲ್ಲಿ ಘಟನೆಯನ್ನು ಖಂಡಿಸಿ, ದಲಿತ ಸಂಘರ್ಷ ಸಮಿತಿ ತೀವ್ರ ಹೋರಾಟಕ್ಕೆ ಇಳಿಯಿತಲ್ಲದೆ, ಆಲಗೂಡ ಗ್ರಾಮದ ದಲಿತರ ರಕ್ಷಣೆಗೆ ನಿಂತಿತು. ಆಲಗೂಡ ಮತ್ತು ಇತರ ಗ್ರಾಮಗಳಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆ ಆಚರಣೆಯನ್ನು ವಿರೋಧಿಸಿ ರಾಜ್ಯಾದ್ಯಂತ ಹೋರಾಟ, ಪ್ರತಿಭಟನೆ ಆರಂಭಿಸಿತು. ಪ್ರತಿಭಟನೆಯ ಆವೇಶದಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಿಂದ ಕೆಲವು ಮೇಲ್ವರ್ಗದವರ ಮೇಲೆ ದಾಳಿ, ಹಲ್ಲೆ ಮಾಡಲಾಯಿತು. ಹೀಗಾಗಿ ವಿಷಯ ಬೇರೆ ಕಡೆ ಹರಡಿ, ಇಲ್ಲಿನ ಅಸ್ಪೃಶ್ಯತೆ ಆಚರಣೆ ಬಗ್ಗೆ ಎಲ್ಲಾ ಕಡೆಯಿಂದ ವ್ಯಾಪಕ ವಿರೋಧ ವ್ಯಕ್ತವಾದಾಗ, ಹೋರಾಟ ತೀವ್ರ ಸ್ವರೂಪ ಪಡೆಯಿತು. ಆಗ ಆ ಹಳ್ಳಿಯಲ್ಲಿ ಅಸ್ಪೃಶ್ಯತೆ ಆಚರಿಸಿದ ಮತ್ತು ಅದಕ್ಕೆ ಬೆಂಬಲ ನೀಡಿದ ಎಲ್ಲರ ಮೇಲೆ ಕಾನೂನಿನ ಕ್ರಮ ಕೈಗೊಳ್ಳಲಾಯಿತು. ಹೀಗೆ ಹೋರಾಟವು ರಾಜ್ಯದಾದ್ಯಂತ ಅದರಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶದ ದಲಿತರಿಗೆ ಹೊಸ ಚೇತನವನ್ನು, ಹೊಸ ಸ್ಥಾನಮಾನವನ್ನು ದೊರಕಿಸಿಕೊಟ್ಟಿತು ಎನ್ನುವುದಕ್ಕೆ ಆ ಭಾಗದ ಹಳ್ಳಿಗಳಲ್ಲಿ ಆದ ಸಾಮಾಜಿಕ ಬದಲಾವಣೆಗಳೇ ಸಾಕ್ಷಿಯಾಗಿದೆ.[೨]

ಪೊಲೀಸ್ ದೌರ್ಜನ್ಯದ ವಿರುದ್ಧ ಹೋರಾಟ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದಲಿತ ಸಂಘಟನೆಗಳು ಪೊಲೀಸರ ದೌರ್ಜನ್ಯ ಮತ್ತು ಅವರ ಅಮಾನವೀಯ ವರ್ತನೆ ವಿರುದ್ಧವು ಹೋರಾಟ ಮಾಡಿದ ಘಟನೆಗಳು ಆಗಾಗ ನಡೆದಿವೆ. ಸವರ್ಣೀಯರು ಮತ್ತು ದಲಿತರ ನಡುವೆ ನಾನಾ ವಿಷಯಕ್ಕೆ ಸಂಬಂಧಿಸಿದಂತೆ ಆಗಾಗ ಘರ್ಷಣೆಗಳು ನಡೆಯುತ್ತಿದ್ದವು. ಇಂತಹ ಘರ್ಷಣೆಗಳು ನಡೆದಾಗ ಇವುಗಳನ್ನು ತಡೆ ಹಿಡಿಯಬೇಕಾದ ಹಾಗೂ ಹೀಗಾಗದಂತೆ ನೋಡಿಕೊಳ್ಳಬೇಕಾದ ಪೊಲೀಸರು ನಿರ್ಲಕ್ಷ್ಯ ಮಾಡುವುದು ಮತ್ತು ಪಕ್ಷಪಾತವಾಗಿ ವರ್ತಿಸುವುದು ಸಾಮಾನ್ಯವಾಗಿತ್ತು. ಪೋಲೀಸರ ಇಂತಹ ಪಕ್ಷಪಾತ ವಿರೋಧಿಸಿ ಹೋರಾಟ ಮಾಡಬೇಕಾದ ಅನಿವಾರ್ಯತೆಯೂ ದಲಿತ ಸಂಘರ್ಷ ಸಮಿತಿಗೆ ಬೀದರ್ ಜಿಲ್ಲೆಯಲ್ಲಿ ಎದುರಾಯಿತು.

ಬೀದರ್ ಜಿಲ್ಲೆಯ ನಾರಾಯಣಪುರ ಎನ್ನುವ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಸಂಬಂಧ ಮೆರವಣಿಗೆ ನಡೆಯುತ್ತಿದ್ದಾಗ, ದಲಿತರು ಮತ್ತು ಸವರ್ಣೀಯರ ಮಧ್ಯೆ ಘರ್ಷಣೆ ಆರಂಭವಾಗಿತ್ತು. ಪರಿಸ್ಥಿತಿ ತೀವ್ರ ಸ್ವರೂಪ ಪಡೆದಾಗ ಪರಿಸ್ಥಿತಿಯ ನಿಯಂತ್ರಣಕ್ಕಾಗಿ ಪೊಲೀಸರು ಅಲ್ಲಿನ ಗುಂಪಿನ ಮೇಲೆ ಗೋಲಿಬಾರ್ ಮಾಡಿದರು. ಆ ಗೋಲಿಬಾರ್‌ನಲ್ಲಿ ಮುಖಂಡರಾದ ತುಕಾರಾಂ ಕುಂಡೆ ಒಳಗೊಂಡಂತೆ ಎಂಟು ಜನ ದಲಿತರು ಗುಂಡೇಟಿನಿಂದ ಗಾಯಗೊಂಡರು ಹಾಗೂ ಇನ್ನು ಅನೇಕರನ್ನು ಬಂಧಿಸಲಾಯಿತು. ಪೊಲೀಸರ ಕೃತ್ಯವನ್ನು ವಿರೋಧಿಸಿ, ದಲಿತ ಸಂಘರ್ಷ ಸಮಿತಿಯಿಂದ ಗುಲಬರ್ಗಾದಲ್ಲಿ ೧೯೮೧ ಏಪ್ರಿಲ್ ೨೪ ರಂದು ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಪ್ರತಿಭಟನಾ

ರ್‍ಯಾಲಿಗೆ ಜಿಲ್ಲೆಯ ನಾನಾ ಭಾಗಗಳಿಂದ ದಲಿತ ಯುವಕರು, ಮುಖಂಡರು, ವಿವಿಧ ಸಂಘಟನೆಗಳು ಪಾಲ್ಗೊಂಡು ಬೆಂಬಲ ನೀಡಿದರು. ಪ್ರತಿಭಟನಾ ಮೆರವಣಿಗೆಯಲ್ಲಿ ಪೊಲೀಸ್ ದೌರ್ಜನ್ಯವನ್ನು ಖಂಡಿಸಿ, ಸಂಬಂಧಪಟ್ಟ ಪೊಲೀಸರ ಮೇಲೆ ಕಾನೂನು ಕ್ರಮ ಜರುಗಿಸುವುದು ಹಾಗೂ ಘಟನೆಯಲ್ಲಿ ಗಾಯಗೊಂಡ ದಲಿತ ಯುವಕರಿಗೆ ವೈದ್ಯಕೀಯ ನೆರವು ಮತ್ತು ಪರಿಹಾರವನ್ನು ನೀಡುವುದು ಹಾಗೂ ಬಂಧನಕ್ಕೊಳಗಾದ ದಲಿತ ಯುವಕರನ್ನು ಬಿಡುಗಡೆ ಮಾಡುವುದು ಮುಂತಾದ ಬೇಡಿಕೆಗಳನ್ನಿಟ್ಟು ಪ್ರತಿಭಟಿಸಲಾಯಿತು. ದಲಿತ ಸಂಘಟನೆಯ ಶಕ್ತಿಯನ್ನರಿತ ಸರಕಾರವು ಕೂಡಲೇ ಸ್ಪಂದಿಸಿ, ನೊಂದವರಿಗೆ ಪರಿಹಾರ ನೀಡಲು, ನ್ಯಾಯ ಒದಗಿಸಲು ಒಪ್ಪಿಕೊಂಡಿತು. ಹೀಗೆ ದಲಿತರ ಮೇಲೆ ನಡೆಯುವ ದೌರ್ಜನ್ಯ ವಿರುದ್ಧ ಹೋರಾಡಿ ದಲಿತರಿಗೆ ನ್ಯಾಯ ದೊರಕಿಸಿ ಕೊಡುವಲ್ಲಿ ಬೀದರ್ ಜಿಲ್ಲಾ ದಲಿತ ಸಂಘರ್ಷ ಸಮಿತಿ ಯಶಸ್ವಿಯಾಯಿತು.[೩೩]

ದಲಿತರ ಭೂ ಸುಧಾರಣಾ ಚಳವಳಿ

ಹೈದರಾಬಾದ್ ಕರ್ನಾಟಕ ಪ್ರದೇಶವನ್ನು, ಕರ್ನಾಟಕದ ಇತರ ಪ್ರದೇಶಗಳೊಂದಿಗೆ ಹೋಲಿಸಿ ನೋಡಿದರೆ, ಇಲ್ಲಿ ಅರೆ ಊಳಿಗಮಾನ್ಯವು ಭೂಮಾಲೀಕತ್ವದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ಸಾವಿರಾರು ಎಕರೆಗಳನ್ನು ಹೊಂದಿರುವ ಭೂಮಾಲೀಕರನ್ನು ಕಾಣಬಹುದು. ಮರಾಠರು ಮತ್ತು ಹೈದರಾಬಾದಿನ ನಿಜಾಮರುಗಳಿಂದ ಆಳಲ್ಪಟ್ಟ ಭಾಗದಲ್ಲಿ ೧೯೪೯ರಲ್ಲಿ ಜಾಗೀರುದಾರಿ ಪದ್ಧತಿಯನ್ನು ರದ್ದುಗೊಳಿಸಿದಾಗ, ಸರಕಾರದ ಅಂದಾಜಿನ ಪ್ರಕಾರ, ೧೮೩೬ ಹಳ್ಳಿಗಳು ಜಾಗೀರುದಾರರುಗಳ ಒಡೆತನದಲ್ಲಿದ್ದವು. ಕರ್ನಾಟಕದಲ್ಲಿ ಯಾವ ಭಾಗದಲ್ಲಿಯೂ ಇರದ ಊಳಿಗಮಾನ್ಯ ಪದ್ಧತಿಯು ಅಸ್ತಿತ್ವದಲ್ಲಿದ್ದು, ಇದರಿಂದ ಕೆಳವರ್ಗದವರ ಶೋಷಣೆ ಮುಂದುವರೆದಿತ್ತು.

೧೯೮೭ರಲ್ಲಿ ಜಾರಿಗೆ ಬಂದ ಭೂ ಸುಧಾರಣಾ ಕಾಯ್ದೆಯನ್ವಯ ಸರಕಾರವು ಜಮೀನ್ದಾರರಿಂದ ಭೂಮಿ ವಶಪಡಿಸಿಕೊಂಡು ಭೂ ಹೀನರಿಗೆ ಅದರಲ್ಲೂ ದಲಿತರಿಗೆ ಹಂಚಲಾಗಿತ್ತು. ಆದರೆ ದಲಿತರು ಪಡೆಯಬೇಕಾಗಿದ್ದ ಭೂ ಒಡೆತನದ ಸಂಬಂಧ ಭೂಮಾಲೀಕರು ಪದೇ ಪದೇ ನ್ಯಾಯಾಲಯದಿಂದ ತಡೆಯಾಜ್ಞೆಗಳನ್ನು ತಂದು ಅಡ್ಡಿಪಡಿಸುತ್ತಿದ್ದರಿಂದಾಗಿ ದಲಿತರಿಗೆ ದಕ್ಕಬೇಕಾಗಿದ್ದ ಭೂಮಿಯ ಒಡೆತನ ಮತ್ತು ಸಾಗುವಳಿ ಸಮಸ್ಯೆ ಬಗೆಹರಿಯದೆ ಹಾಗೆ ಮುಂದುವರಿದಿತ್ತು. ದಲಿತರ ಇಂತಹ ಸಮಸ್ಯೆಯು ದಲಿತ ಸಂಘರ್ಷ ಸಮಿತಿಯ ಗಮನಕ್ಕೆ ಬಂದಾಗ ಡಿ.ಜಿ. ಸಾಗರ್ ನೇತೃತ್ವದಲ್ಲಿ ದಲಿತ ಸಂಘರ್ಷ ಸಮಿತಿ ದಲಿತರ ಭೂಮಿಗಾಗಿ ಹೋರಾಟಕ್ಕಿಳಿಯಿತು. ೧೯೮೭ ಜನವರಿ ೧೧ ರಂದು ಡಿ.ಜಿ. ಸಾಗರ್ ಅವರ ನೇತೃತ್ವದಲ್ಲಿ ಸಮಿತಿಯು ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ಹಮ್ಮಿಕೊಂಡಿತು. ನಂತರ ದಲಿತರಿಗೆ ಭೂ ಒಡೆತನದ ಪಟ್ಟ ದೊರಕಿಸಲು ಚಿಂಚೋಳಿ ತಾಲೂಕಿನ ಕೊಂಡಂಪಲ್ಲಿ ಗ್ರಾಮದಲ್ಲಿ ೧೯೮೭ ಸೆಪ್ಟೆಂಬರ್ ೭ ರಂದು ಹೋರಾಟವನ್ನು ಆರಂಭಿಸಿದರು. ಹೋರಾಟ ಬೃಹತ್ ಮಟ್ಟದಲ್ಲಿ ಮತ್ತು ನಿರಂತರವಾಗಿ ನಡೆದ ಪರಿಣಾಮವಾಗಿ ಇಲ್ಲಿನ ಗ್ರಾಮಗಳ ದಲಿತರಿಗೆ ಭೂಮಿ ಹಂಚಿಕೆಯಾಗಿ ಸಂಬಂಧಪಟ್ಟವರಿಗೆ ಭೂಮಿಯ ಪಟ್ಟಾಗಳನ್ನು ಕೂಡ ವಿತರಿಸಲಾಯಿತು. ಕ್ರಮೇಣ ದಲಿತರ ಭೂಒಡೆತನಕ್ಕೆ

ಸಂಬಂಧಪಟ್ಟಂತ ತಡೆಯಾಜ್ಞೆಗಳು ಕೂಡ ಕಡಿಮೆಯಾಗತೊಡಗಿದವು. ಅಲ್ಲದೆ ಭೂಹೀನರಿಗೆ ಭೂಮಿ ದೊರಕಿಸಿಕೊಡಲು ಮುಂದಿನ ಭೂಹೋರಾಟಕ್ಕೆ ದಾರಿ ಮಾಡಿಕೊಟ್ಟಿತು.[೬೪]

ಮೆದಕಿನಾಳ ಭೂ ಹೋರಾಟ

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಒಂದು ಕುಗ್ರಾಮ ಮೆದಕಿನಾಳ. ಈ ಗ್ರಾಮದಲ್ಲಿ ಲಿಂಗಾಯತ ಕೋಮಿನವರು ಹಾಗೂ ಒಕ್ಕಲಿಗರು ಪ್ರಬಲವಾಗಿದ್ದು, ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಜಾತಿಯವರನ್ನು ತಮ್ಮಲ್ಲಿ ಕೂಲಿಯಾಳುಗಳನ್ನಾಗಿ ದುಡಿಸಿಕೊಂಡು ಅಲ್ಪಸ್ವಲ್ಪ ಕೂಲಿ ಕೊಟ್ಟು ಶೋಷಣೆ ಮಾಡುತ್ತಿದ್ದರು. ಮೇಲ್ವರ್ಗದವರ ಮನೆಯಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದ ಇವರು ಕೆಲವೊಮ್ಮೆ ಪುಕ್ಕಟೆ ದುಡಿಯುತ್ತಿದ್ದರಲ್ಲದೆ ಕೊಟ್ಟಷ್ಟು ಕೂಲಿ ತೆಗೆದುಕೊಳ್ಳಬೇಕಿತ್ತು. ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ ಬಹಿಷ್ಕಾರಕ್ಕೊಳಗಾಗಿ ಕೆಲಸವಿಲ್ಲದೇ ಉಪವಾಸ ಅನುಭವಿಸಬೇಕಾಗುತ್ತಿತ್ತು. ಮೇಲ್ವರ್ಗದವರ ಶೋಷಣೆಯನ್ನು ಗಮನಿಸಿದ ದಲಿತ ಸಂಘರ್ಷ ಸಮಿತಿ ಗ್ರಾಮಕ್ಕೆ ಭೇಟಿ ನೀಡಿ ದಲಿತರ ನೋವುಗಳನ್ನು ಅರ್ಥ ಮಾಡಿಕೊಂಡು ನೊಂದವರ ಪರ ಹೋರಾಟಕ್ಕಿಳಿಯಿತು. ಇಲ್ಲಿನ ದಲಿತ ಸಂಘರ್ಷ ಸಮಿತಿಯ ಹೋರಾಟದ ನೇತೃತ್ವವನ್ನು ಮಾನಸಯ್ಯ, ಸಿ. ದಾನಪ್ಪ, ಹನುಮಂತಪ್ಪ, ಆಂಜನೇಯ ಮುಂತಾದವರು ವಹಿಸಿದ್ದರು. ೧೯೮೩ರಿಂದ ಆರಂಭವಾದ ಹೋರಾಟ ೧೯೮೪ರವರೆಗೆ ನಡೆದು ಇಡೀ ಕರ್ನಾಟಕದಾದ್ಯಂತ 'ಮೆದಕಿನಾಳ ಭೂ-ಹೋರಾಟ'ವೆಂದೇ ಹೆಸರು ಗಳಿಸಿತು. ದಲಿತ ಮುಖಂಡರೆಲ್ಲಾ ಸೇರಿ ದಲಿತ ಜನರನ್ನೆಲ್ಲಾ ಸಂಘಟಿಸಿ ಹೋರಾಟಗಳನ್ನು ರೂಪಿಸಿ, ಮೆದಕಿನಾಳ ಗ್ರಾಮದ ಕೆರೆಯಂಗಳವನ್ನು ಆಕ್ರಮಿಸಿದರು. ಧರಣಿ, ಮೆರವಣಿಗೆ ಮುಂತಾದ ಪ್ರತಿಭಟನೆಗಳು ನಡೆದ ನಂತರ ೧೭.೫.೧೯೮೭ರಲ್ಲಿ ದಲಿತರಿಗೆ ಹಂಚಲು ೬೭ ಎಕರೆ ಭೂಮಿ ದಕ್ಕಿತು. ಇದನ್ನು ಸಹಿಸದ ಮೇಲ್ವರ್ಗಕ್ಕೆ ಸೇರಿದ ಭೂಮಾಲೀಕರಾದ ಮಹೇಂದ್ರಬಾಬು ಮತ್ತು ಅವನ ಸಹಚರ ರುದ್ರಮುನಿಸ್ವಾಮಿ, ಮಂಡಲ ಪ್ರಧಾನರಾದ ಲಿಂಗರಾಜು ಮುಂತಾದ ರಾಜಕೀಯ ಮುಖಂಡರು ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ನಿರ್ಧಾರಕ್ಕೆ ಬೆಂಬಲಿಸಿದರೆ ಹೊರತು ದಲಿತರಿಗೆ ರಕ್ಷಣೆ ಕೊಡಲಿಲ್ಲ. ಕನಿಷ್ಠ ಮೂಲಭೂತ ಹಕ್ಕುಗಳಾದ ಸಾರ್ವಜನಿಕ ರಸ್ತೆಯ ಬಳಕೆ ಮತ್ತು ಹಳ್ಳಿಯ ಅಂಗಡಿಯಲ್ಲಿ ವ್ಯಾಪಾರ, ವ್ಯವಹಾರಗಳಿಂದಲೂ ದಲಿತರು ವಂಚಿತರಾಗ ಬೇಕಾಯಿತು. ಆದರೆ ಇಂತಹ ಎಲ್ಲಾ ಸಾಮಾಜಿಕ ಅನ್ಯಾಯದ ವಿರುದ್ಧ ಹಳ್ಳಿಯ ಮುಖಂಡರನ್ನೆಲ್ಲಾ ಎದುರು ಹಾಕಿಕೊಂಡು ದಲಿತರು ತಮಗೆ ದಕ್ಕಬೇಕಾದ ಭೂಮಿಗಾಗಿ, ಕನಿಷ್ಟ ಕೂಲಿಗಾಗಿ, ಸಾಮಾಜಿಕ ಬಹಿಷ್ಕಾರದ ವಿರುದ್ಧವಾಗಿ ನಡೆಸಿದ ಹೋರಾಟ ಇಲ್ಲಿನ ದಲಿತರಿಗೆ ಸ್ವಾಭಿಮಾನದ ಕಿಚ್ಚು ಮೂಡಿಸುವುದರ ಜೊತೆಗೆ ಮುಂದಿನ ಹೋರಾಟಗಳಿಗೆ ಪ್ರೇರಣೆಯಾಯಿತು.[೬೫]

ಮುಹಮ್ಮದ್ ನಗರ ಭೂ ಹೋರಾಟ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಡೆದ ಭೂ ಹೋರಾಟಗಳಲ್ಲಿ ಬಂಡವಾಳಶಾಹಿಗಳ ವಿರುದ್ಧ ನಡೆದ ಮಹಮ್ಮದ್‌ನಗರ ಭೂ ಹೋರಾಟವು ಬಹಳ ಪ್ರಮುಖವಾದದ್ದೆಂದು ಪರಿಗಣಿಸಬಹುದಾಗಿದೆ.

ಕೊಪ್ಪಳ ಜಿಲ್ಲೆಯ ಮಹಮದ್‌ನಗರದಲ್ಲಿ ದಲಿತರು ನ್ಯಾಯಯುತವಾಗಿ ತಮಗೆ ದಕ್ಕಬೇಕಾಗಿದ್ದ ಭೂಮಿಗಾಗಿ ಭೂಮಾಲೀಕರ ವಿರುದ್ಧ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಹೋರಾಟ ನಡೆಸಿದರು. ೧೯೮೫ರಲ್ಲಿ ಕೊಪ್ಪಳದ ಜಮೀನುದಾರ ಸುಶೀಲ್‌ಕುಮಾರ್ ವಿರುದ್ಧ ಹೋರಾಟ ನಡೆಸಿದ ದಲಿತ ಸಂಘರ್ಷ ಸಮಿತಿಯು ಸುಮಾರು ೩೭೭ ಎಕರೆಯಷ್ಟು ಭೂಪ್ರದೇಶದಲ್ಲಿ ದಲಿತರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

ಸುಶೀಲ್‌ಬಾಬು ಮೊರಾರ್ಕ್ ಎನ್ನುವ ರಾಜಸ್ಥಾನದ ಶ್ರೀಮಂತ ಉದ್ಯಮಿಯೊಬ್ಬರು ಕೊಪ್ಪಳ ತಾಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಉದ್ದೇಶಕ್ಕಾಗಿ ಬೇಕಾದ ಭೂಮಿಯನ್ನು ಕೊಪ್ಪಳ ತಾಲೂಕಿಗೆ ಸೇರಿದ ಗ್ರಾಮಗಳಾದ ಬಸಾಪುರ, ಶಿವಪುರ, ಬಂಡಿಹರ್ಲಾಪುರ, ರಾಜರಾಮಪೇಟೆ, ನಾರಾಯಣಪೇಟೆ, ಮಹಮದ್‌ನಗರ ಪ್ರದೇಶದ ರೈತರ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿತ್ತು ಹಾಗೂ ೧೯೫೪ರಲ್ಲಿ ಇದೇ ಉದ್ದೇಶಕ್ಕೆ ಸರಕಾರದಿಂದಲೂ ಹೆಚ್ಚುವರಿ ಭೂಮಿಯನ್ನು ಪಡೆದಿದ್ದನಲ್ಲದೆ ಕೆಲವು ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿದ್ದ. ಒಟ್ಟಾಗಿ ಎಲ್ಲಾ ಸೇರಿ ಸುಮಾರು ೩೭೭ ಎಕರೆ ಜಮೀನನ್ನು ಕಾರ್ಖಾನೆ ಮೂಲಕ ಹೊಂದಿದ್ದ. ಭೂಮಿಯನ್ನು ಕಳೆದುಕೊಂಡ ಇದೇ ಗ್ರಾಮಗಳ ರೈತರು ಅವನ ಜಮೀನನಲ್ಲಿ ಕೂಲಿಗಳಾಗಿ ದುಡಿಯಬೇಕಿತ್ತು. ಇಂತಹ ಪರಿಸ್ಥಿತಿಯಲ್ಲಿ ಕಾರ್ಖಾನೆ ಮಾಲಿಕರ ಭೂ ಒತ್ತುವರಿ ಮತ್ತು ದೌರ್ಜನ್ಯ ವಿರೋಧಿಸಿ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಭೂ ಸಂತ್ರಸ್ತರ ಪರ ಚಳವಳಿ ಆರಂಭವಾಯಿತು. ಕಾರ್ಖಾನೆಗೆ ಅಗತ್ಯವಿರುವಷ್ಟು ಭೂಮಿಯನ್ನು ಹೊರತುಪಡಿಸಿ ಉಳಿದ ಭೂಮಿಯನ್ನು ಅಲ್ಲಿನ ಭೂಹೀನ ದಲಿತರು ಮತ್ತು ಕಾರ್ಮಿಕರಿಗೆ ಹಂಚುವ ಬೇಡಿಕೆಯನ್ನು ಮುಂದಿಟ್ಟು ದಲಿತ ಸಂಘರ್ಷ ಸಮಿತಿಯು ಹೋರಾಟ ಮಾಡಿತು ಹಾಗೂ ಇದರ ಬಗ್ಗೆ ಕ್ರಮಕೈಗೊಳ್ಳಲು ಸರಕಾರದ ಮೇಲೂ ಒತ್ತಡ ಹೇರಲಾಯಿತು.

ಹೋರಾಟದಲ್ಲಿ ಎಲ್ಲಾ ವರ್ಗಕ್ಕೆ ಸೇರಿದ ಕೂಲಿಕಾರರು, ಗೇಣಿದಾರರು ಒಂದಾಗಿ ಹೋರಾಟಕ್ಕಿಳಿದರು. ಹೋರಾಟದ ತೀವ್ರತೆ ಎಷ್ಟು ಗಂಭೀರವಾಗಿತ್ತೆಂದರೆ ಆಗಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ ಮತ್ತು ಸಚಿವರಾಗಿದ್ದ ಬೊಮ್ಮಾಯಿಯವರನ್ನು ಘೇರಾವ್ ಮಾಡಿ ಸರಕಾರದ ಮೇಲೆ ಒತ್ತಡ ಹೇರಲಾಯಿತು. ಹೋರಾಟದ ಸಮಯದಲ್ಲಿಯೆ ೧೯೮೭ರಲ್ಲಿ ನಡೆದ ಸ್ಫೋಟದ ಪ್ರಕರಣ ಭೂ ಹೋರಾಟಕ್ಕೆ ಹೊಸ ತಿರುವು ನೀಡಿತು. ೧೫.೧.೧೯೮೭ರಲ್ಲಿ ಭೂ ಒತ್ತುವರಿ ಮಾಡಿ ಮನೆ ಕಟ್ಟಿಕೊಂಡಿದ್ದ ಜಾಗದ ಸಮೀಪದಲ್ಲಿ ಸುಶೀಲಬಾಬು ಮೊರಾರ್ಕ್ ಭೂಮಿ ಸಮತಟ್ಟು ಮಾಡುವ ಉದ್ದೇಶದಿಂದ ಸಿಡಿಸಿದ ಸ್ಫೋಟಕದಿಂದಾಗಿ ದೊಡ್ಡ ಅನಾಹುತವೇ ಜರುಗಿತು. ಸ್ಫೋಟದಲ್ಲಿ ನೂರಾರು ಕಾರ್ಮಿಕರ ಗುಡಿಸಲುಗಳು, ಜಾನುವಾರುಗಳು, ದವಸ ಧಾನ್ಯಗಳು, ಹಣ, ಬಟ್ಟೆ ಇತರ ವಸ್ತುಗಳು ಸುಟ್ಟು ಬೂದಿಯಾದವು. ಮಲ್ಲಯ್ಯಸ್ವಾಮಿ, ಮುಗ್ದುಂಸಾಬ್ ಅವರು ಕೈಗಳನ್ನು ಕಳೆದುಕೊಂಡರಲ್ಲದೆ ಹಲವಾರು ಜನರಿಗೆ ಗಂಭೀರ ಗಾಯಗಳಾದವು. ಘಟನೆಯಿಂದ ಸಿಟ್ಟಿಗೆದ್ದ ಹೋರಾಟಗಾರರು ಕಾನೂನು ಸಲಹೆ ಪಡೆದು ಅದರ ಪ್ರಕಾರ ಭೂ ಕಾಯ್ದೆ

ಅನ್ಯಾಯ ಕಾರ್ಖಾನೆಗೆ ೫೦ ಎಕರೆ ಜಮೀನು ಮಾತ್ರ ಪಡೆಯಲು ಅವಕಾಶವಿದ್ದು ಉಳಿದ ಹೆಚ್ಚುವರಿ ಸಾಗುವಳಿ ಭೂಮಿಯನ್ನು ಸಾಗುವಳಿ ಮಾಡಲು ರೈತರಿಗೆ ಕೊಡಬೇಕೆನ್ನುವ ಬೇಡಿಕೆ ಮುಂದಿಟ್ಟು ಹೋರಾಟವನ್ನು ತೀವ್ರಗೊಳಿಸಲಾಯಿತು. ನ್ಯಾಯ ದೊರಕಿಸಿಕೊಳ್ಳಲು ಭೂನ್ಯಾಯ ಮಂಡಳಿಯ ಮೊರೆ ಹೋದರು. ೧೯೮೩ರಲ್ಲಿ ಭೂ ನ್ಯಾಯಮಂಡಳಿ ಆ ಭೂಮಿಯನ್ನು ಸರಕಾರದ್ದೆಂದು ತೀರ್ಪು ನೀಡಿತು. ಹಾಗೆಯೇ ಸುಶೀಲ್‌ಬಾಬು ರಚಿಸಿಕೊಂಡಿದ್ದ ಕೋ-ಅಪರೇಟಿವ್ ಪಾರ್ಮಿಂಗ್ ಸೊಸೈಟಿ(ಲಿ)ಯನ್ನು ಲಿಕ್ವಿಡೇಟ್ ಮಾಡಲಾಯಿತು. ಆದರೆ ಇದರ ಮಧ್ಯ ಕಾರ್ಖಾನೆಯ ಮಾಲೀಕ ಸುಶೀಲಬಾಬು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತಂದಿದ್ದರಿಂದಾಗಿ, ನ್ಯಾಯಾಲಯದ ತಡೆಯಾಜ್ಞೆ ತೆರವು ಆಗುವವರೆಗೆ ಹೋರಾಟವನ್ನು ನಿಲ್ಲಿಸಬೇಕಾಯಿತು. ಇತ್ತೀಚಿಗೆ ಇದರ ಬಗ್ಗೆ ಕೆಲವು ಹೋರಾಟಗಾರರನ್ನು ಸಂದರ್ಶಿಸಿದಾಗ, ತಿಳಿದು ಬಂದ ಮಾಹಿತಿಯೆಂದರೆ, ಕೆಲವೇ ಕೆಲವು ಜನರಿಗೆ ಸ್ವಲ್ಪಮಟ್ಟಿಗೆ ಭೂಮಿ ದೊರಕಿದೆ ಎಂದು, ಇನ್ನು ಕೆಲವರು ದೊರೆತ ಭೂಮಿಯನ್ನು ಮಾರಿಕೊಂಡಿದ್ದಾರೆಂದು ತಿಳಿದುಬಂತು. ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ದಲಿತರ ಹೋರಾಟಗಳು ನಡೆದಿವೆ ಮತ್ತು ಇನ್ನು ನಡೆಯುತ್ತಲೂ ಇವೆ.[೬೬]

ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಅನೇಕ ಜನಪರ ಚಳವಳಿಗಳಲ್ಲಿ ತಾತ್ವಿಕತೆಯ ನೆಲೆಯಿಂದ ಸ್ವಲ್ಪಮಟ್ಟಿಗೆ ಗಟ್ಟಿಯಾಗಿ ಕಾಣುವುದು ದಲಿತ ಮತ್ತು ರೈತ ಚಳವಳಿಗಳು. ಸ್ವರೂಪ, ಗಾತ್ರ ಮತ್ತು ವರ್ಗ ಪ್ರಜ್ಞೆಯ ದೃಷ್ಟಿಯಿಂದ ವಿಶ್ಲೇಷಣೆ ಮಾಡಿದಾಗ, ದಲಿತ ಸಂಘರ್ಷ ಸಮಿತಿಯ ಹೋರಾಟ ಪ್ರಮುಖವಾದುದು. ಸುಮಾರು ಎರಡು ದಶಕಗಳ ಕಾಲ ಅತ್ಯಂತ ಪ್ರಭಾವಶಾಲಿ ಸಂಘಟನೆಯಾಗಿದ್ದು ದಲಿತ ಚಳವಳಿಯನ್ನು ಮುನ್ನಡೆಸಿಕೊಂಡು ಬಂದದ್ದು ಕರ್ನಾಟಕದ ದಲಿತ ಸಂಘರ್ಷ ಸಮಿತಿ. ಹೈದರಾಬಾದ್ ಕರ್ನಾಟಕದ ಮಟ್ಟಿಗೆ ದಲಿತರಲ್ಲಿ ತೀವ್ರಗತಿಯಲ್ಲಿ ಸ್ವಾಭಿಮಾನ, ದಲಿತ ಪ್ರಜ್ಞೆಗಳು ಜಾಗೃತವಾಗಿ ದಲಿತರ ಬದುಕಿನಲ್ಲಿ ಮಹತ್ತರ ಬದಲಾವಣೆಗಳು ಉಂಟಾದದ್ದು ದಲಿತ ಚಳವಳಿಯ ಪ್ರಭಾವದಿಂದ ಎಂಬುದನ್ನು ಹಾಗೂ ದಲಿತರಿಗೆ ದೊರೆತ ಶಿಕ್ಷಣ, ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳಿಂದ ಗುರುತಿಸಬಹುದಾಗಿದೆ.

೭೦ರ ದಶಕದಲ್ಲಿ ದಲಿತ ಚಳವಳಿ ಉಂಟು ಮಾಡಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವ ಸಾಕಷ್ಟು ಪರಿಣಾಮಗಳನ್ನು ಬೀರಿದೆ. ನಿರಂತರ ಶೋಷಣೆಗೆ ಒಳಗಾಗಿದ್ದ ಸಮಾಜದ ತಳಸಮುದಾಯಗಳಲ್ಲಿ ದಲಿತ ಚಳವಳಿ ಹೊಸದೊಂದು ಅರಿವು ಮತ್ತು ಎಚ್ಚರವನ್ನು ಉಂಟು ಮಾಡಿತು. ಚಳವಳಿಯ ಫಲದಿಂದಾಗಿ ದುರ್ಬಲ ಸಮುದಾಯಗಳು ಸಮಾಜದ ಮುಖ್ಯವಾಹಿನಿಯತ್ತ ಮುಖ ಮಾಡಿದವು. ಭೂಮಿ, ಮನೆ, ಶಿಕ್ಷಣ ಮತ್ತಿತರ ಪ್ರಾಥಮಿಕ ಅಗತ್ಯತೆಗಳಿಂದ ವಂಚಿತಗೊಂಡಿದ್ದ ಸಮುದಾಯಗಳು ತಮಗೆ ದೊರೆಯಬೇಕಿದ್ದ ರಾಜ್ಯಾಂಗಬದ್ಧ ಹಕ್ಕುಗಳನ್ನು ಪಡೆಯುವ ವಾತಾವರಣವನ್ನು ದಲಿತ ಚಳವಳಿ ಸೃಷ್ಟಿಸಿತು.

೪.೨.೨. ಸಮಕಾಲೀನ ಸಂದರ್ಭದಲ್ಲಿ ದಲಿತರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಪ್ರಸ್ತುತ ದಲಿತರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳನ್ನು ಅಧ್ಯಯನ ಮಾಡುವಾಗ ಮೇಲ್ನೋಟಕ್ಕೆ ಇಂದಿನ ಸಮಾಜದಲ್ಲಿ ಎದ್ದು ಕಾಣುವ ಕೆಲವು ಅಂಶಗಳು ದಲಿತರ ಪ್ರಸ್ತುತ ಸ್ಥಿತಿಗತಿಗಳನ್ನು ಎತ್ತಿ

ತೋರಿಸುತ್ತವೆ. ಇಂದಿಗೂ ನಮ್ಮ ಸಮಾಜದಲ್ಲಿ ದಲಿತರು ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಹಿಂದುಳಿದಿದ್ದು ಸಮಾಜದ ಕಟ್ಟಕಡೆಯ ಸ್ಥಾನದಲ್ಲಿದ್ದಾರೆ. ಹೀಗಾಗಿ ಇಂತಹ ತಾರತಮ್ಯವನ್ನು ಸರಿಪಡಿಸುವ ಉದ್ದೇಶದಿಂದ ಸ್ವಾತಂತ್ರ್ಯದ ನಂತರ ನಮ್ಮ ಸಂವಿಧಾನದಲ್ಲಿ ದಲಿತರಿಗೆ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಯಿತು. ಶಾಸನಾತ್ಮಕವಾಗಿ ದಲಿತರಿಗೆ ಎಲ್ಲ ಬಗೆಯ ರಕ್ಷಣೆಗಳನ್ನು ಕೊಡಲಾಗುತ್ತಿದೆ. ರಾಜಕೀಯ ಪ್ರಾತಿನಿಧ್ಯವನ್ನು ಕಾಯ್ದುಕೊಳ್ಳಲು ಚುನಾವಣಾ ಕ್ಷೇತ್ರಗಳಲ್ಲಿ ಅವರಿಗೆ ಮೀಸಲಿಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವಿದೆ. ಸಾಮಾಜಿಕವಾಗಿ ಅವರಿಗೆ ರಕ್ಷಣೆಯನ್ನು ಒದಗಿಸುವ ಉದ್ದೇಶದಿಂದ ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಲಾಗಿದೆ. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ದಲಿತರ ಸ್ಥಿತಿಗತಿಗಳು ನಿರೀಕ್ಷಿಸಿದ ಮಟ್ಟದಲ್ಲಿ ಉತ್ತಮ ಗೊಳ್ಳದೆ ಇಂದಿಗೂ ಅವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣಗಳೂ ಇವೆ. ಏನೆಂದರೆ ಇವರಿಗೆ ಶಾಸನಾತ್ಮಕ ರಕ್ಷಣೆಯೇನೋ ದೊರೆತಿದೆ ಆದರೆ ಅವು ಆಚರಣೆಯಲ್ಲಿ ಫಲ ನೀಡುತ್ತಿಲ್ಲ. ಯಾವುದೇ ಮಾನದಂಡ ತೆಗೆದುಕೊಂಡರೂ ದಲಿತರ ಸ್ಥಿತಿಗತಿಗಳು ಹಾಗೂ ಸ್ಥಾನಮಾನಗಳು ಸಮಾಜದ ಉಳಿದೆಲ್ಲಾ ಸಮುದಾಯಗಳಿಗಿಂತ ಕೆಳಮಟ್ಟದಲ್ಲಿರುವುದು ಕಂಡು ಬರುತ್ತದೆ.

ಹೀಗೆ ಬದಲಾಗದ ಸಮಾಜ ಮತ್ತು ವ್ಯವಸ್ಥೆ ವಿರುದ್ಧ ಸ್ವಾಭಿಮಾನಿಗಳಾದ ದಲಿತರು ತಮ್ಮ ಸ್ಥಾನಮಾನಗಳನ್ನು ಗಟ್ಟಿಗೊಳಿಸಿಕೊಳ್ಳಲು ಹಕ್ಕುಗಳನ್ನು ಪಡೆಯಲು, ಸಂಘಟನೆಗಳ ಮೂಲಕ ಹೋರಾಟ ವನ್ನು ಆರಂಭಿಸಿದರು. ಆರಂಭದಲ್ಲಿ ದಲಿತ ನಾಯಕರ ದಲಿತ ಸಂಘಟನೆಗಳ ಸಾಮಾಜಿಕ ಹೋರಾಟಕ್ಕೆ ಸಾಮಾಜಿಕ ನ್ಯಾಯವೇ ಮೂಲ ಪ್ರೇರಣೆಯಾಗಿತ್ತು. ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ ತತ್ವಗಳೆ ಮೂಲ ನೆಲೆಯಾಗಿದ್ದವು. ಅವರ ತತ್ವ ಮತ್ತು ಚಿಂತನೆಗಳ ಹಿಂದೆ ಸಾಮಾಜಿಕ ನ್ಯಾಯವೇ ಅಂತಿಮವಾಗಿ ಕಾರ್ಯನಿರ್ವಹಿಸುವುದರಿಂದ ಈ ಅಂಶಗಳನ್ನು ದಲಿತ ಹೋರಾಟಗಳಲ್ಲಿ ಕಾಣಬಹುದಿತ್ತು. ಜಾತಿ ಹಿನ್ನೆಲೆಯಲ್ಲಿ ಭೂಮಿಯನ್ನು ನಿರಾಕರಿಸಲ್ಪಟ್ಟ ದಲಿತ ಸಮುದಾಯಕ್ಕೆ ಭೂಮಿ ಯನ್ನು ದೊರಕಿಸಿಕೊಡುವುದು, ಶಿಕ್ಷಣ ಕ್ಷೇತ್ರದಿಂದ ವಂಚಿತವಾಗಿರುವ ದಲಿತರಿಗೆ ಶೈಕ್ಷಣಿಕ ಅವಕಾಶದ ಬಾಗಿಲನ್ನು ತೆರೆಯುವುದು, ರಾಜಕೀಯ ನೆಲೆಯಲ್ಲಿ ವಂಚನೆಗೀಡಾದ ದಮನಿತ ಸಮಾಜಕ್ಕೆ ಅಧಿಕಾರದ ಅವಕಾಶ ಮಾಡಿ ಕೊಡುವುದು ಮುಂತಾದ ಹೋರಾಟಗಳಲ್ಲಿ ತೊಡಗಿತ್ತು. ಹೀಗೆ ತಮ್ಮ ತತ್ವ, ಹೋರಾಟಗಳಿಂದ ದಲಿತ ಸಂಘಟನೆಗಳು ಗಟ್ಟಿಯಾಗಿ ಬೆಳೆದವು. ಆದರೆ ಕಾಲಾನಂತರ ದಲಿತ ಸಂಘಟನೆ ಗಳಲ್ಲಿ ಸೃಷ್ಟಿಯಾದ ಒಡಕು, ಭಿನ್ನಾಭಿಪ್ರಾಯಗಳು ದಲಿತ ಸಂಘಟನೆಯನ್ನು ಇಬ್ಭಾಗಗೊಳಿಸಿ ಅದರ ಶಕ್ತಿಯನ್ನು ಕುಂದಿಸಿತು. ಒಳಗುಂಪು ಮತ್ತು ಭಿನ್ನಾಭಿಪ್ರಾಯಗಳು ಶೋಷಕರಿಗೆ ಅನುಕೂಲ ಮಾಡಿಕೊಟ್ಟವು. ಹೀಗಾಗಿ ಮತ್ತೆ ಎಲ್ಲಾ ಕಡೆ ದಲಿತರು ನಿರ್ಲಕ್ಷ್ಯಕ್ಕೊಳಗಾಗ ತೊಡಗಿದರು. ಇದರಿಂದ ದಲಿತರಲ್ಲಿ ಮತ್ತೆ ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಅವುಗಳಲ್ಲಿ ಅಸ್ಪೃಶ್ಯತೆ, ದಲಿತರ ಮೇಲೆ ದೌರ್ಜನ್ಯ, ದಲಿತರಲ್ಲಿ ಎಡ ಬಲ ವಿವಾದ, ದಲಿತ ಸಂಘಟನೆಗಳಲ್ಲಿ ಬಣಗಳ ಉದಯ, ಮತಾಂತರ ವಿವಾದ, ಒಳಮೀಸಲಾತಿ ಮುಂತಾದ ಅನೇಕ ಸಮಸ್ಯೆಗಳಿವೆ. ಇವುಗಳಲ್ಲಿ ಕೆಲವು ಮುಖ್ಯವಾದ ಸಮಸ್ಯೆಗಳನ್ನು ಮಾತ್ರ ಇಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ.

ಅಸ್ಪೃಶ್ಯತೆಯ ಸಮಸ್ಯೆ

ಅಸ್ಪೃಶ್ಯತೆಯು ಹಿಂದೂ ಸಮಾಜದ ವರ್ಣವ್ಯವಸ್ಥೆಯಲ್ಲಿರುವ ಒಂದು ಅನಿಷ್ಟ ಪದ್ಧತಿಯಾಗಿದೆ. ಒಂದೇ ಸಮಾಜದಲ್ಲಿಯ ಒಂದು ಜಾತಿಯು ಮತ್ತೊಂದು ಜಾತಿಯ ಮೇಲೆ ನಡೆಸಿದ ಮತ್ತು ನಡೆಸುತ್ತಿರುವ ದಬ್ಬಾಳಿಕೆ ಮತ್ತು ಶೋಷಣೆ ಅತೀ ಕ್ರೂರತನದ್ದು ಮತ್ತು ಅಸಹನೀಯವೂ ಆಗಿದೆ. ಮನುಷ್ಯ ಮನುಷ್ಯನನ್ನೇ ದ್ವೇಷಿಸುವ, ಹಿಂಸಿಸುವ ಅಸಹ್ಯ ಪದ್ಧತಿಗೆ ಸಮಾನವಾದ ಇನ್ನೊಂದು ಪದ್ಧತಿ ಎಲ್ಲೂ ಇರಲಿಕ್ಕಿಲ್ಲ. ಶತಮಾನಗಳಿಂದ ದಲಿತರನ್ನು ತುಳಿದು ಕೇವಲ ದುಡಿಮೆಗೆ ಸೀಮಿತಗೊಳಿಸಿ ಯಾವ ಆಸ್ತಿಯನ್ನು ಹೊಂದದಂತೆ ಮಾಡಿ ಅವರನ್ನು ಸಮಾಜದಿಂದಲೇ ದೂರವಿಟ್ಟಿದೆ.

ಅಸ್ಪೃಶ್ಯ ಎಂದರೆ ಮುಟ್ಟಿಸಿಕೊಳ್ಳಲು ಅನರ್ಹನಾದವನು ಎನ್ನುವ ಹಿನ್ನೆಲೆಯಲ್ಲಿ ನಾಗರಿಕ ಸಮಾಜ ದಿಂದಲೆ ದೂರವಿಟ್ಟು, ಊರ ಹೊರಗೆ ಕೆಳಗೇರಿಗಳಲ್ಲಿ, ಗುಡಿಸಲುಗಳಲ್ಲಿ ವಾಸಿಸುವಂತೆ ಮಾಡಿದೆ. ಇವರಿಗೆ ಯಾವುದೇ ರೀತಿಯಲ್ಲೂ ಆಸ್ತಿಯ ಮೇಲೆ ಹಕ್ಕು ನೀಡದಿರುವುದು, ಸಾರ್ವಜನಿಕ ಬಾವಿಗಳಿಂದ ಕೆರೆಗಳಿಂದ ನೀರನ್ನು ತರಲು ಅವಕಾಶ ಕೊಡದಿರುವುದು, ದೇವಸ್ಥಾನಗಳ ಪ್ರವೇಶವನ್ನು ನಿರಾಕರಿಸುವುದು, ಶಿಕ್ಷಣದಿಂದ ದೂರವಿಡುವುದು, ಸಾರ್ವಜನಿಕ ಸ್ಮಶಾನಗಳನ್ನು ಬಳಸದಿರುವುದು, ಮೇಲ್ಜಾತಿಯವರು ವಾಸಿಸುವ ಹಳ್ಳಿಯ ಮುಖ್ಯ ಭಾಗದಲ್ಲಿ ಇವರಿಗೆ ವಾಸಿಸಲು ಅವಕಾಶ ಇಲ್ಲದಿರುವುದು, ಹೀಗೆ ಯಾವುದೇ ಅವಕಾಶವನ್ನು ನೀಡದೆ ನಿರ್ಬಂಧ ಹೇರಿರುವುದು ಕಂಡು ಬರುತ್ತದೆ. ಅಸ್ಪೃಶ್ಯತೆ ಆಚರಣೆ ಕಾನೂನಿಗೆ ವಿರುದ್ಧವಾಗಿದೆ. ಭಾರತದ ಸಂವಿಧಾನದಲ್ಲಿ ಅಸ್ಪೃಶ್ಯತೆ ಆಚರಣೆ ವಿರುದ್ಧ ಅನೇಕ ಕಾಯ್ದೆಗಳನ್ನು ರೂಪಿಸಲಾಗಿದೆ. ಸಾರ್ವಜನಿಕ ಸ್ಥಳಗಳನ್ನು ಮುಕ್ತವಾಗಿಡಲು ಘೋಷಿಸಲಾಗಿದೆ. ಆದರೆ ಒಂದಿಲ್ಲೊಂದು ವಿಧಾನದಲ್ಲಿ ದೇಶದ ಹಲವಾರು ಭಾಗಗಳಲ್ಲಿ ಇದು ಇಂದಿಗೂ ಮುಂದುವರೆಯುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿ ನೋಡಿದರೆ, ಜಾತಿವ್ಯವಸ್ಥೆ ಇನ್ನೂ ಜೀವಂತವಾಗಿರುವ ಇಲ್ಲಿ ಅತೀ ಹೆಚ್ಚು ಅಸ್ಪೃಶ್ಯತೆ ಆಚರಣೆಯಲ್ಲಿರುವುದು ಕಂಡು ಬರುತ್ತದೆ. ಜಮೀನ್ದಾರಿಕೆ ವ್ಯವಸ್ಥೆ ಪ್ರಬಲವಾಗಿರುವ ಈ ಭಾಗದಲ್ಲಿ ಭೂರಹಿತ ದಲಿತರು ಅವರ ಆಶ್ರಯದಲ್ಲಿ ಇರುವುದರಿಂದ ಅವರ ಗುಲಾಮರಾಗಿದ್ದಾರೆ. ಇಂದಿಗೂ ಇಲ್ಲಿನ ಎಷ್ಟೋ ಹಳ್ಳಿಗಳಲ್ಲಿ ದಲಿತರನ್ನು ಕಪ್ಪು ಜನ ಎಂದು ಗುರುತಿಸಿ ಊರ ದೇವಾಲಯಗಳ ಒಳಗೆ ಹೋಗುವಂತಿಲ್ಲ, ಮೇಲ್ವರ್ಗದ ಮನೆಗಳ ಒಳಗೆ ಹೋಗುವಂತಿಲ್ಲ, ಮದುವೆ ಮುಂತಾದ ಸಮಾರಂಭಗಳಲ್ಲಿ ಸಾಮೂಹಿಕ ಭೋಜನ ಮಾಡುವಂತಿಲ್ಲ ಎನ್ನುವ ಅನೇಕ ನಿರ್ಬಂಧಗಳಿವೆ. ಒಂದು ವೇಳೆ ಇದನ್ನು ಉಲ್ಲಂಘಿಸಿದರೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುವ ಭೀತಿ ಇದೆ. ಇಂತಹ ಪರಿಸ್ಥಿತಿ ಇಂದಿಗೂ ಕೂಡ ಹೈದರಾಬಾದ್ ಕರ್ನಾಟಕದ ಗ್ರಾಮಗಳಲ್ಲಿ ಕಂಡು ಬರುತ್ತದೆ. ಕೆಲವು ಗ್ರಾಮಗಳಲ್ಲಿ ಭೂಮಾಲೀಕರು ದಲಿತರು ಒಬ್ಬರಿಗೊಬ್ಬರು ಹೊಂದಿಕೊಂಡು ಅನುಕೂಲ ಸಿಂಧು ರೀತಿ ಬಾಳುವ ವ್ಯವಸ್ಥೆಯೂ ಕಂಡು ಬರುತ್ತದೆ.

೨೧ನೇ ಶತಮಾನದಲ್ಲಿಯೂ ನಮ್ಮ ರಾಷ್ಟ್ರವನ್ನು ಕಾಡುತ್ತಿರುವ ಅಸ್ಪೃಶ್ಯತೆ ಎನ್ನುವ ಸಾಮಾಜಿಕ ಪಿಡುಗು ದೊಡ್ಡ ಸಮಸ್ಯೆಯಾಗಿದೆ. ಅಸ್ಪೃಶ್ಯತೆಯ ತಡೆಗಟ್ಟುವಿಕೆಗೆ, ನಿರ್ಮೂಲನೆಗೆ ಕಾನೂನಿನ ಮೂಲಕ

ಸಂಘಸಂಸ್ಥೆಗಳ ಮೂಲಕ ಪ್ರಯತ್ನಗಳು ಹೋರಾಟಗಳು ನಡೆಯುತ್ತಲೇ ಬಂದಿವೆ. ಆದರೆ ಇಂತಹ ಪ್ರಯತ್ನಗಳು ಮತ್ತು ಹೋರಾಟಗಳು ಸಮಾಜದಲ್ಲಿ ಎಷ್ಟರಮಟ್ಟಿಗೆ ಬದಲಾವಣೆಗಳನ್ನು ತಂದಿವೆ ಎನ್ನುವುದನ್ನು ಪ್ರಶ್ನಿಸಿಕೊಂಡರೆ ಉತ್ತರ ನಿರಾಶದಾಯಕವಾಗಿದೆ. ಏಕೆಂದರೆ ಅಸ್ಪೃಶ್ಯತೆ ನಿವಾರಣೆ ಮೇಲ್ವರ್ಗದವರ ಮನಸ್ಸಿನಲ್ಲಿ, ನಡತೆಯಲ್ಲಿ, ಕ್ರಿಯೆಯಲ್ಲಿ ಆಗಬೇಕಾದ ಅವಶ್ಯಕತೆ ಇದೆ. ಎಲ್ಲಿಯವರೆಗೆ ಇಂತಹ ಬದಲಾವಣೆ ಬರುವುದಿಲ್ಲವೋ ಅಲ್ಲಿಯವರೆಗೆ ಇದು ಸಮಾಜದಿಂದ ಕಣ್ಮರೆಯಾಗುವುದು ಅಸಾಧ್ಯ ಎನಿಸುತ್ತಿದೆ. ಶಿಕ್ಷಣವನ್ನು ಪಡೆದ ಹಳ್ಳಿಯ ದಲಿತ ಯುವಕರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಉತ್ತಮ ಸ್ಥಾನ ಪಡೆದು ಇದನ್ನು ವಿರೋಧಿಸಿ, ಸುಧಾರಿಸುವಲ್ಲಿ ಪ್ರಯತ್ನಗಳು ನಡೆಯಬೇಕಾಗಿದೆ. ಏಕೆಂದರೆ ದಲಿತ ಯುವಕರು ಶಿಕ್ಷಣ, ಉದ್ಯೋಗ ಪಡೆದು ಸ್ವಾವಲಂಬಿಯಾಗಿರುವ, ಮುಂದುವರೆದಿರುವಂತ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆ ಕಡಿಮೆಯಾಗುತ್ತಿದೆ ಹಾಗೂ ಇಬ್ಬರ ಮಧ್ಯೆ ಘರ್ಷಣೆಗಳು ಕಡಿಮೆಯಾಗಿ ಅನೋನ್ಯತೆ ಬೆಳೆಯುತ್ತಿದೆ.

ದಲಿತರ ಮೇಲಿನ ದೌರ್ಜನ್ಯ

ಇತಿಹಾಸವನ್ನು ಅವಲೋಕಿಸಿದರೆ ಶತಶತಮಾನಗಳಿಂದ ನಮ್ಮ ಸಮಾಜದಲ್ಲಿ ದಲಿತರು ಹಿಂಸೆ, ಶೋಷಣೆ ಮತ್ತು ದೌರ್ಜನ್ಯಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ಇದು ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಹುದುಗಿರುವ ತಾರತಮ್ಯ ಮತ್ತು ಅಸಮಾನತೆಯನ್ನು ತೋರಿಸಿಕೊಡುತ್ತದೆ. ಮೇಲ್ವರ್ಗದವರು ಒಂದಲ್ಲ ಒಂದು ಕಾರಣಕ್ಕಾಗಿ ದಲಿತರ ಮೇಲೆ ದೌರ್ಜನ್ಯವೆಸಗುತ್ತಿರುವುದು ಚರಿತ್ರೆಯ ಪುಟಗಳಲ್ಲಿ ಕಾಣುತ್ತೇವೆ. ಅದರಲ್ಲೂ ಈ ಕಾಲಾವಧಿಯ ಅಂಕಿ ಅಂಶಗಳನ್ನು ನೋಡಿದರೆ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವುದನ್ನು ಕಾಣುತ್ತೇವೆ. ೧೯೮೧ರಿಂದ ೧೯೯೦ರ ಅವಧಿಗೆ ಹೋಲಿಸಿದಲ್ಲಿ ೧೯೯೧ರಿಂದ ೨೦೦೦ರ ಅವಧಿಯಲ್ಲಿ ಜಾತಿ ದೌರ್ಜನ್ಯಗಳು ಹೆಚ್ಚಾಗಿದೆ. ೨೦೦೧ರಿಂದ ೨೦೦೬ರವರೆಗಿನ ಅವಧಿಯಲ್ಲೂ ದೌರ್ಜನ್ಯಗಳಲ್ಲಿ ಏರಿಕೆಯಾಗಿದೆ. ಹಿಂದಿಗಿಂತಲೂ ಈಗ ಜಾತಿ ದೌರ್ಜನ್ಯಗಳು ಒಂದು ಸಾಮೂಹಿಕ ಕಾರ್ಯಾಚರಣೆಯ ಸ್ವರೂಪ ಪಡೆದುಕೊಂಡಿದೆ. ಹಾಡು ಹಗಲೇ ಕಾನೂನು ಉಲ್ಲಂಘಿಸುವ ಘಟನೆಗಳು ನಡೆದಿವೆ.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಗಮನಿಸಬೇಕಾದ ಒಂದು ಮುಖ್ಯ ಬದಲಾವಣೆ ಮತ್ತು ಸುಧಾರಣೆ ಎಂದರೆ ಹಿಂದೆ ದಲಿತರ ಮೇಲೆ ದೌರ್ಜನ್ಯಗಳು ನಡೆದಾಗ ಅವು ಬೆಳಕಿಗೆ ಬರುತ್ತಿರಲಿಲ್ಲ ಮತ್ತು ಬೆಳಕಿಗೆ ತರುವ ಯಾವ ಶಕ್ತಿಗಳು ಇರಲಿಲ್ಲ. ಆದರೆ ಇಂದು ಸುದ್ದಿ ಮಾಧ್ಯಮಗಳ ಮೂಲಕ ಬಹುಬೇಗ ಸಾರ್ವಜನಿಕರ ಗಮನಕ್ಕೆ ಬರುತ್ತವೆ ಹಾಗೂ ದೌರ್ಜನ್ಯ ನಡೆದ ಘಟನೆಯು ರಾಜ್ಯ ಮತ್ತು ರಾಷ್ಟ್ರ ವ್ಯಾಪ್ತಿ ಚರ್ಚೆಯ, ಸಂವಾದದ, ಸಂಘರ್ಷದ ಸಂಗತಿಯಾಗುತ್ತವೆ. ಇಂತಹ ಪರಿಸ್ಥಿತಿಯ ಮಧ್ಯದಲ್ಲಿಯೂ ಆಗೋಚರ ಶಕ್ತಿಗಳ ಕೈವಾಡದಿಂದ ಇಂದಿಗೂ ದಲಿತರ ಮೇಲೆ ನಡೆಯುವ ಹಲವಾರು ದೌರ್ಜನ್ಯಗಳು ಬೆಳಕಿಗೆ ಬರದೇ ಹೋಗುತ್ತವೆ. ದಲಿತರ ಮೇಲಿನ ದೌರ್ಜನ್ಯಕ್ಕೆ ಕಾರಣಗಳನ್ನು ಪರಿಶೀಲಿಸಿದಾಗ, ಸಾಂಪ್ರದಾಯಿಕವಾಗಿ ದಲಿತರು ಕೆಲವು ನಿರ್ದಿಷ್ಟ ಕೆಲಸಗಳನ್ನು ಮಾಡಬೇಕೆಂದು ಸಮಾಜವು

ನಿಯಮ ಮಾಡಿತ್ತು. ಇಂತಹ ಅಲಿಖಿತ ನಿಯಮಗಳನ್ನು ದಲಿತರು ಪಾಲಿಸದೆ ಇದ್ದಾಗ ಅವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿತ್ತು. ಇಂತಹವುಗಳನ್ನು ಸಾಂಪ್ರದಾಯಿಕ ಮೂಲದ ದೌರ್ಜನ್ಯಗಳೆಂದು ಕರೆಯಲಾಗಿದೆ. ಇನ್ನೊಂದು ಕಾರಣವೆಂದರೆ ದಲಿತರು ಇಂದು ಒಂದು ಶಕ್ತಿಯಾಗಿ ರೂಪುಗೊಳ್ಳುತ್ತಿದ್ದಾರೆ. ಅವರಲ್ಲಿ ಈಗ ಸಾಕಷ್ಟು ಅರಿವು ಮೂಡಿದೆ. ಹೀಗಾಗಿ ಸರಕಾರದಿಂದ ತಮಗೆ ನ್ಯಾಯವಾಗಿ ಸಿಗಬೇಕಾಗಿದ್ದ ಪಾಲಿಗಾಗಿ ಸಂಘರ್ಷ ನಡೆಸುತ್ತಿದ್ದಾರೆ. ಈ ರೀತಿಯಲ್ಲಿ ದಲಿತರ ಸಂಘಟನೆ, ಪ್ರಜ್ಞೆ, ಸಂಘರ್ಷಗಳು ದೌರ್ಜನ್ಯಗಳಿಗೆ ಕಾರಣವಾಗಿವೆ.

ಇನ್ನು ಕೆಲವೊಮ್ಮೆ ದಲಿತರು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ಅವಕಾಶಕ್ಕಾಗಿ ಒತ್ತಾಯ ಮಾಡಿದಾಗ, ತಾರತಮ್ಯವಾದಿ ಆಚರಣೆಗಳ ವಿರುದ್ಧ ಆಕ್ರೋಶಗೊಂಡಾಗ ಅಂತಹ ಬೇಡಿಕೆಗಳನ್ನು ಹತ್ತಿಕ್ಕಲು ದೌರ್ಜನ್ಯಗಳು ನಡೆಯುವವು. ಇನ್ನು ಆರ್ಥಿಕವಾಗಿ ಹಿಂದುಳಿದಿರುವ ದಲಿತರು ಭೂಮಿಗಾಗಿ, ವಸತಿಗಾಗಿ, ಕೂಲಿಗಾಗಿ ಸಮಾನ ವೇತನಕ್ಕಾಗಿ ಹೋರಾಟ ಮಾಡಿದಾಗ ಅವರ ಹಕ್ಕುಗಳನ್ನು ಹತ್ತಿಕ್ಕಲು ದೌರ್ಜನ್ಯಗಳು ಜರುಗುವವು. ದಲಿತರ ಮೇಲಿನ ದೌರ್ಜನ್ಯಗಳ ಸ್ವರೂಪವು ದೇಶದ ಎಲ್ಲ ಭಾಗಗಳಲ್ಲೂ ಏಕರೂಪಿಯಾಗಿಲ್ಲ. ದೇಶದ ಕೆಲವು ಪ್ರಾಂತ್ಯಗಳಲ್ಲಿ ಅವು ಕಡಿಮೆ ಇದ್ದರೆ, ಬಡತನ, ಅಜ್ಞಾನ, ಹಿಂದುಳಿದಿರುವಿಕೆ, ಜಮೀನ್ದಾರಿಕೆ, ಊಳಿಗಮಾನ್ಯಶಾಹಿ ಇರುವಂತಹ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜಾಸ್ತಿ ಇದೆ. ಇಲ್ಲಿ ದಲಿತರ ಮೇಲಿನ ದೌರ್ಜನ್ಯ, ಹಿಂಸೆ ಕೇವಲ ಕಾನೂನು ಸುವ್ಯವಸ್ಥೆಯ ಪ್ರಶ್ನೆಯಾಗಿಲ್ಲ, ಬದಲಾಗಿ ಇಲ್ಲಿನ ಸಮಾಜದ ಮೇಲ್‌ಜಾತಿಯವರ ನಂಬಿಕೆ ಮನೋಭಾವ ಹಾಗೂ ವಿಚಾರಗಳಲ್ಲಿ ದಲಿತರು ಅಪವಿತ್ರರು, ಅಶುದ್ಧರು, ಅವರಿರುವುದು ಗುಲಾಮಗಿರಿಗೆ, ಜೀತಕ್ಕೆ ಎನ್ನುವ ಕಲ್ಪನೆಯಿದೆ. ಹೀಗಾಗಿ ಇವರು ನಡೆಸಿಕೊಂಡು ಬರುತ್ತಿರುವ ಕೃತ್ಯಗಳು ಹಿಂಸೆ ದೌರ್ಜನ್ಯ ಎಂದು ಪರಿಗಣಿಸುವುದಿಲ್ಲ. ಹಾಗೆಯೇ ದಲಿತರ ಮೇಲಿನ ದೌರ್ಜನ್ಯ ಹಾಗೂ ಅಸ್ಪೃಶ್ಯತೆಯಂತಹ ಕ್ರೂರ ಆಚರಣೆಯ ಮೂಲದಲ್ಲಿ ಧಾರ್ಮಿಕ ಸೂತ್ರಗಳು ಕೆಲಸ ಮಾಡುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ.

ಇತ್ತೀಚಿಗೆ ಸಮಾಜದಲ್ಲಿ ಆಗುತ್ತಿರುವ ಪರಿವರ್ತನೆಯನ್ನು ಗಮನಿಸಿದರೆ ದಲಿತರು ಇಂದು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮೌನವಾಗಿ ಸಹಿಸಿಕೊಳ್ಳುತ್ತಿಲ್ಲ. ಜಾತಿ ಸಂಬಂಧಿ ದೌರ್ಜನ್ಯವನ್ನು ಅವರು ಪ್ರತಿಭಟಿಸುತ್ತಿದ್ದಾರೆ. ಅವರು ಇಂದು ಅಸಹಾಯಕರಲ್ಲ ಒಂದು ರೀತಿಯಲ್ಲಿ ಅವರಿಗೆ ಸಂವಿಧಾನ ಬದ್ಧವಾದ ರಕ್ಷಣೆಯನ್ನು ಒದಗಿಸಲಾಗಿದೆ ಇನ್ನೊಂದು ಕಡೆ ಅವರು ಸಂಘಟಿತರಾಗಿ ಮತ್ತು ಪ್ರಜ್ಞಾಪೂರ್ವಕರಾಗಿ ದೌರ್ಜನ್ಯಗಳನ್ನು ಪ್ರತಿಭಟಿಸುತ್ತಿದ್ದಾರೆ. ತಮ್ಮ ಹಕ್ಕು ಅಧಿಕಾರಗಳಿಗಾಗಿ ಹೋರಾಟ ನಡೆಸಿದ್ದಾರೆ ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಒಂದು ವರ್ಗದವರ ಸ್ವಾರ್ಥಕ್ಕಾಗಿ ಎನ್ನುವ ವಿಚಾರವು ಅರ್ಥವಾಗಿದೆ. ಆದರೆ ಇನ್ನೊಂದು ಕಡೆ ಪಟ್ಟಭದ್ರ ಹಿತಾಸಕ್ತಿಗಳು ದಲಿತರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿವೆ. ಅವರಲ್ಲಿಯೇ ಭಿನ್ನಾಭಿಪ್ರಾಯಗಳನ್ನು ಮೂಡಿಸಿ, ಒಡಕನ್ನುಂಟು ಮಾಡಿ ಅವರವರೆ ಬಡಿದಾಡುವಂತೆ ಪರಸ್ಪರ ದ್ವೇಷಿಸುವಂತೆ ಮಾಡಿದೆ. ಹೀಗಾಗಿ ದಲಿತರ ಮೇಲಿನ ದೌರ್ಜನ್ಯ ಎನ್ನುವುದು ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಎಲ್ಲಿಯವರೆಗೆ ಭಾರತದ ನಾಗರಿಕ ಸಮಾಜ ದಲಿತರ ಪರವಾದ

ಸಹಾನುಭೂತಿಯನ್ನು ಹೊಂದುವುದಿಲ್ಲವೋ ಅಲ್ಲಿಯವರೆಗೂ ದಲಿತರ ಮೇಲೆ ದೌರ್ಜನ್ಯಗಳು ನಿಲ್ಲುವುದು ಬಹಳ ಕಷ್ಟವೆಂದು ತೋರುತ್ತಿದೆ.

ದಲಿತರ ಎಡಗೈ ಬಲಗೈ ವಿವಾದ

ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದ ದಲಿತರ ಸಂಬಂಧಗಳು ಎಡಗೈ ಮತ್ತು ಬಲಗೈ ಗುಂಪುಗಳ ನಡುವೆ ನಡೆಯುತ್ತಿರುವ ವಿರಸ ಮತ್ತು ವಾಗ್ವಾಳಿಗಳು ತೀವ್ರಗೊಂಡಿರುವುದು ಕಂಡುಬರುತ್ತದೆ. ಮಾದಿಗ ಜನಾಂಗದವರು ಹೇಳುವುದೇನೆಂದರೆ ತಮ್ಮ ಎಲ್ಲಾ ಮೀಸಲಾತಿ ಸೌಲಭ್ಯಗಳನ್ನು ಹೊಲೆಯ ಜನಾಂಗದವರೆ ಅನುಭವಿಸಿದ್ದಾರೆ ಹಾಗೂ ಅನುಭವಿಸುತ್ತಿದ್ದಾರೆ ಎನ್ನುವ ಆಪಾದನೆಯನ್ನು ಹೊಲೆಯರ ಮೇಲೆ ಹೊರಿಸುತ್ತಾರೆ. ಮಾದಿಗ ಜನಾಂಗದವರ ದೃಷ್ಟಿಯಲ್ಲಿ ಇದು ಸತ್ಯ ಎನಿಸಿದರೂ ಸಹ ಕ್ಷೇತ್ರಕಾರ್ಯದ ಅಧ್ಯಯನ ಫಲಿತ ಹಾಗೂ ವಾಸ್ತವದ ವಿಷಯವೇ ಭಿನ್ನವಾಗಿರುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ನೋಡುವುದಾದರೆ ಹೊಲೆಯ ಜನಾಂಗದವರು ಬೇರೆ ಉಪವೃತ್ತಿಗಳಿಲ್ಲದೆ, ಕೇವಲ ಕೃಷಿಯ ಕೆಲಸವನ್ನೇ ಆಧರಿಸಿ, ಜಮೀನ್ದಾರರ, ಬಂಡವಾಳಶಾಹಿಗಳ, ಊಳಿಗಮಾನ್ಯಶಾಹಿಗಳ, ಸವರ್ಣೀಯರ ಮನೆಗಳಲ್ಲಿ ಕೃಷಿ ಜೀತಗಾರಿಕೆಗಳಲ್ಲಿ ತೊಡಗಿದರು. ಇದನ್ನು ಹೊರತುಪಡಿಸಿ ಬೇರೆ ಯಾವುದೇ ವೃತ್ತಿಯು ಅವರಿಗೆ ತಿಳಿದಿರಲಿಲ್ಲ. ಆದರೆ ಮಾದಿಗ ಜನಾಂಗದ ಇತಿಹಾಸವನ್ನು ಅವಲೋಕಿಸಿದರೆ ಅವರಿಗೆ ಅವರದೇ ಆದ ವಂಶಪಾರಂಪರಿಕವಾದ ಚರ್ಮ ಆಧಾರಿತವಾದ ಕುಲಕಸುಬು ಉಳಿದುಕೊಂಡು ಬಂದಿತ್ತು. ಇಂತಹ ವೃತ್ತಿಯಿಂದ ಅವರು ಸ್ವಾವಲಂಬಿಗಳಾಗಿಯೇ ಬದುಕುತ್ತಿದ್ದರು. ಸಮಾಜದಲ್ಲಿ ಸ್ಥಾನಮಾನದ ವಿಷಯದಲ್ಲಿ ಅಸ್ಪೃಶ್ಯತೆ ದೃಷ್ಟಿಯಲ್ಲಿ ಎರಡೂ ವರ್ಗವು ಸಮವಾಗಿ ಪಾಲುದಾರರಾಗಿದ್ದರು ಸಹ ಆರ್ಥಿಕವಾಗಿ ಬಸವಣ್ಣನ ಕಾಲದಿಂದಲೂ ಮಾದಿಗ ಜನಾಂಗ ಶ್ರೇಷ್ಠತೆಯನ್ನು ಕಾಪಾಡಿಕೊಂಡು ಬಂದಿದೆ.

ಆದರೆ ಮೇಲೆ ತಿಳಿಸಿದಂತೆ ಕೃಷಿ ಮತ್ತು ಜೀತಗಾರಿಕೆಯಲ್ಲಿ ತಲ್ಲೀನವಾಗಿದ್ದ ಹೊಲೆಯ ಜನಾಂಗ ಕಾಲಕ್ರಮೇಣ ಬ್ರಿಟಿಷ್ ಸರ್ಕಾರದ ಮತ್ತು ಮೈಸೂರು ಒಡೆಯರ ಸರ್ಕಾರಗಳು ಮೀಸಲಾತಿ ಆಧಾರಿತ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದಾಗ ಆಯಾ ಪ್ರದೇಶದಲ್ಲಿ ಹೊಲೆಯ ಜನಾಂಗದವರು ಹೆಚ್ಚಿನ ಪ್ರಮಾಣದಲ್ಲಿ ಶಾಲೆಗೆ ಪ್ರವೇಶ ಪಡೆದರು. ಸಹಜವಾಗಿ ಇಂತಹ ಭಾಗದಲ್ಲಿ ಶಿಕ್ಷಣ ಪಡೆದ ಮೊದಲ ತಲೆಮಾರಿನ ದಲಿತರಾಗಿ ಹೊಲೆಯ ಜನಾಂಗ ಹೊರಹೊಮ್ಮಿತು. ಹೀಗಾಗಿ ಸಹಜವಾಗಿಯೇ ಸರ್ಕಾರಿ ನೌಕರಿಗಳು ಅವರಿಗೆ ಲಭ್ಯವಾದವು ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇಂದಿಗೂ ಸಹ ಹೊಲೆಯರು ಶಿಕ್ಷಣದಲ್ಲಿ ಹೆಚ್ಚಾಗಿ ಪ್ರಗತಿ ಹೊಂದಿರುವುದು ಕಂಡು ಬರುತ್ತದೆ. ಹೀಗಾಗಿ ವೃತ್ತಿ ಆಧಾರಾದ ಮೇಲೆ ವಿಶ್ಲೇಷಿಸುವುದಾದರೆ ಕರ್ನಾಟಕದ ಹೊಲೆಯ ಮತ್ತು ಮಾದಿಗ ಜನಾಂಗದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಇಪ್ಪತ್ತರಿಂದ ಮೂವತ್ತು ವರ್ಷ ಹಿರಿತನ ಮತ್ತು ಕಿರಿತನವನ್ನು ಗುರುತಿಸಬಹುದಾಗಿದೆ.

ಮೇಲಿನ ಕಾರಣಗಳನ್ನು, ಶೈಕ್ಷಣಿಕ ದೃಷ್ಟಿಕೋನವನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಸ್ಥಾನಮಾನವನ್ನು ನೋಡದಿದ್ದರೆ ಎಡಗೈ ಮತ್ತು ಬಲಗೈ ಸಮಸ್ಯೆಗೆ ಉತ್ತರ ಹುಡುಕುವುದು ಕಷ್ಟ. ಈ

ವಿಷಯದಲ್ಲಿ ಸ್ಪಷ್ಟವಾಗಿ ಗಮನಿಸಬಹುದಾದ ಅಂಶವೆಂದರೆ ಎಡಗೈ ಮತ್ತು ಬಲಗೈ ಜನಾಂಗದವರು ಯಾವುದೇ ರೀತಿಯ ವಿವಾಹ ಸಂಬಂಧವನ್ನು ಬೆಳೆಸಿರುವುದು ವಿರಳ.

ಹಾಗೆಯೇ ಎರಡೂ ವರ್ಗಗಳು ಭಾರತದ ಸಾಮಾಜಿಕ ರಚನೆಯಲ್ಲಿ ಅಸ್ಪೃಶ್ಯ ವರ್ಗವಾಗಿಯೇ ಗುರುತಿಸಿಕೊಂಡಿವೆ. ಇಂತಹ ಜಾತಿ ಅಸಮಾನತೆ ವಿರುದ್ಧ ಒಗ್ಗಟ್ಟಾಗಿ ಹೋರಾಡಿ ನ್ಯಾಯ ಪಡೆಯುವ ಯೋಚನೆಯನ್ನು ಮಾಡದೆ, ರಾಜಕೀಯ ಪಕ್ಷಗಳ, ರಾಜಕೀಯ ಮುಖಂಡರ ದಾಳಕ್ಕೆ ಬಲಿಯಾಗಿ ಮತ್ತೆ ತಮ್ಮ ಸಾಂಸ್ಕೃತಿಕ ವಿಷಯ ಕಿತ್ತಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ದಲಿತ ಸಮಾಜದ ಪರಿವರ್ತನೆ ದೃಷ್ಟಿಯಿಂದ ಹಿತಕರವಲ್ಲ. ಪ್ರಸ್ತುತ ಎಡಗೈ ಮತ್ತು ಬಲಗೈ ವಿವಾದವು ಯಾವ ಹಂತವನ್ನು ಮುಟ್ಟಿದೆ ಎಂದರೆ ಮಾದಿಗರು ಪ್ರತ್ಯೇಕ ಒಳಮೀಸಲಾತಿಗಾಗಿ ಬೇಡಿಕೆ ಸಲ್ಲಿಸಿ ಹೋರಾಟಕ್ಕಿಳಿದಿದ್ದಾರೆ.

ಹೀಗಾಗಿ ಹೊಸ ಸಾಮಾಜಿಕ ಪರಿವರ್ತನೆ ಆರಂಭಿಸಲು ಹೊಲೆಯ ಮಾದಿಗರಿಬ್ಬರು ಮುನ್ನುಡಿ ಬರೆಯಬೇಕಿದೆ. ತಮ್ಮ ಸಮುದಾಯಗಳೊಳಗೆ ಮನೆಮಾಡಿಕೊಂಡಿರುವ ಅಪ್ರಬುದ್ಧ ಸಾಮಾಜಿಕ ಅಪನಂಬಿಕೆಗಳು ಅಮೂಲಾಗ್ರವಾಗಿ ಬುಡಮೇಲಾಗಬೇಕಿದೆ. ಮಾದಿಗರು ಮತ್ತು ಹೊಲೆಯ ನಾಯಕರುಗಳು ಮುಕ್ತ ಮನಸ್ಸಿನಿಂದ ಬಹಿರ್ಮುಖಿಯಾಗಿ ಮತ್ತು ಅಂತರ್ಮುಖಿಯಾಗಿ ಆತ್ಮವಿಮರ್ಶೆಯನ್ನು ಆರಂಭಿಸಬೇಕಿದೆ. ಇವರಿಬ್ಬರ ನಡುವೆ ಇರುವ ಕ್ಷುಲ್ಲಕ ಮಾನಸಿಕ ಸ್ಥಿತಿಗಳು ಅಳಿದು ಒಂದು ಸಮುದಾಯದ ನೋವಿಗೆ ಮತ್ತೊಂದು ಸಮುದಾಯ ಮರುಗುವ, ಕರಗುವ ಮನೋಧರ್ಮಗಳನ್ನು ಬೆಳೆಸಿಕೊಳ್ಳಬೇಕಾಗಿದೆ ಆಗ ಮಾತ್ರ ದಲಿತರಲ್ಲಿ ಎಡ-ಬಲ ಮೈತ್ರಿ ಪ್ರಾಮಾಣಿಕವಾದದ್ದಾಗುತ್ತದೆ. ಜಾಗತೀಕರಣ ಉದಾರೀಕರಣ ಎನ್ನುವ ಕಲ್ಪನೆಯಲ್ಲಿ ಜಗತ್ತು ಮುಂದುವರಿಯುತ್ತಿರುವ ಸಂದರ್ಭದಲ್ಲಿ ದಲಿತರಲ್ಲಿಯೇ ಸಂಕುಚಿತ ಭಾವನೆಗಳು ಹೆಮ್ಮರವಾಗುತ್ತಾ ಎಡಗೈ, ಬಲಗೈ, ಮಾದಿಗ ಹೊಲೆಯ ಎನ್ನುವ ಅಂತರ ದಿನೇ ದಿನೇ ಹೆಚ್ಚಾಗುತ್ತಾ ಬೆಳೆಯುತ್ತಿರುವುದು ಸಮಾಜದ ದೃಷ್ಟಿಯಿಂದ ಒಳ್ಳೆಯ ಲಕ್ಷಣವಲ್ಲ. ಇಂತಹ ಅಂತರವನ್ನು ಪರಿಹರಿಸದೇ ದಲಿತ ಸಮುದಾಯವನ್ನು ಪುನಶ್ಚೇತನಗೊಳಿಸುವುದಾಗಲಿ, ಸಮಾಜದ ಬಹುಮುಖಿಗೆ ತರುವುದಾಗಲಿ ದಲಿತ ಪರ ಚಳವಳಿಗಳನ್ನು ಮುಂದುವರಿಸಿಕೊಂಡು ಹೋಗುವುದರಿಂದಾಗಲಿ ಪ್ರಯೋಜನ ವಾಗುವುದಿಲ್ಲ

ದಲಿತ ಸಂಘಟನೆಯಲ್ಲಿ ಒಡಕು

೧೯೭೦ರಲ್ಲಿ ಸ್ಥಾಪನೆಯಾದ ದಲಿತ ಸಂಘರ್ಷ ಸಮಿತಿ ಸುಮಾರು ಎರಡು ದಶಕಗಳ ಕಾಲ ಅತ್ಯಂತ ಪ್ರಭಾವಶಾಲಿ ಸಂಘಟನೆಯಾಗಿ ದಲಿತ ಚಳವಳಿಯನ್ನು ಮುನ್ನಡೆಸಿತು. ಕರ್ನಾಟಕದಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ದಲಿತರಲ್ಲಿ ತೀವ್ರವಾದ ಸ್ವಾಭಿಮಾನ ಮತ್ತು ದಲಿತ ಪ್ರಜ್ಞೆ ಮೂಡಿಸಿ, ದಲಿತರು ಜಾಗೃತರಾಗುವಂತೆ ಮಾಡಿ ಅವರ ಬದುಕಿನಲ್ಲಿ ಮಹತ್ತರ ಬದಲಾವಣೆಗಳನ್ನುಂಟು ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಯಿತು. ಆದರೆ ಇಂತಹ ಪ್ರಬಲ ಸಂಘಟನೆ ಎಂಬತ್ತರ ದಶಕದ ಕೊನೆಯಲ್ಲಿ ಇಬ್ಭಾಗವಾಗಿ ಒಡೆದು ಹೋಯಿತು. ನಂತರ ಕಾಲಕ್ರಮೇಣ ವ್ಯಕ್ತಿ ತತ್ವಕ್ಕೆ ಒಳಗಾಗಿ ಹಲವು ಸಂಘಟನೆಗಳಾಗಿ ಒಡೆದು ಛಿದ್ರವಾಯಿತು. ಹೀಗೆ ದಲಿತ ಸಂಘರ್ಷ ಸಮಿತಿಯ ತತ್ವಾಧಾರಿತ ಹೋರಾಟ ಕ್ಷೀಣಿಸಿದ ಬಗ್ಗೆ

ವಿವಿಧ ಬಣಗಳಾಗಿ ಒಡೆದು ದಲಿತ ಚಳವಳಿ ಹಿಡಿದ ಭಿನ್ನ ಮಾರ್ಗವು ಪ್ರಸ್ತುತ ಸಂದರ್ಭದ ದಲಿತರ ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಗಟ್ಟಿಯಾಗಿ ಬೆಳೆದಿರುವ ದಲಿತ ಸಂಘಟನೆಗಳು ದಲಿತರ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ಮಾಡಿಕೊಂಡು ಬಂದಿವೆ. ಆದರೆ ಇತ್ತೀಚಿನ ದಿನಗಳಲ್ಲಿ ದಲಿತ ಸಂಘಟನೆಗಳಲ್ಲಿ ಸೃಷ್ಟಿಯಾಗುತ್ತಿರುವ ಒಡಕು, ಭಿನ್ನಾಭಿಪ್ರಾಯಗಳು ದಲಿತ ಸಂಘಟನೆಗಳಿಗಿದ್ದ ಶಕ್ತಿಯನ್ನು ಕುಂದಿಸುತ್ತಿವೆ. ಈ ಒಳಗುಂಪು ಮತ್ತು ಭಿನ್ನಾಭಿಪ್ರಾಯಗಳು ಶೋಷಕರಿಗೆ ಅನುಕೂಲ ಮಾಡಿಕೊಟ್ಟಿವೆ.

೧೯೮೩-೮೪ರಲ್ಲಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿ ಆಗಿನ ಜನತಾ ಸರಕಾರವನ್ನು ಬೇಷರತ್ತಾಗಿ ಬೆಂಬಲಿಸುವುದರೊಂದಿಗೆ ಸಮಿತಿಯಲ್ಲಿ ಒಡಕು ಮೂಡಲು ಅವಕಾಶ ಕಲ್ಪಿಸಿತೆಂಬುದು ಮೊದಲನೇ ಆರೋಪ. ಇನ್ನು ಸಂಘಟನೆಗೆ ರಾಜಕೀಯ ರೂಪ ನೀಡಲು ಹೊರಟ ದಲಿತ ಸಾಹಿತಿಗಳ ಒಂದು ವರ್ಗ ಸಂಘಟನೆಯನ್ನು ಬಲಹೀನಗೊಳಿಸುವ ಕಾರ್ಯದಲ್ಲಿ ಸಫಲವಾಯಿತೆಂಬ ಅಭಿಪ್ರಾಯವು ವ್ಯಾಪಕವಾಗಿದೆ. ದಲಿತ ಸಂಘರ್ಷ ಸಮಿತಿಯ ರಾಜಕೀಯ ಪ್ರವೇಶ ಮತ್ತು ಅದರ ಪಕ್ಷ ನಿಷ್ಠೆ, ಸಮಿತಿಯ ಭವಿಷ್ಯದ ಮೇಲೆ ದುಷ್ಪರಿಣಾಮಬೀರಿತು. ಹಲವಾರು ವರ್ಷಗಳವರೆಗೆ ಸಮಿತಿ ದಲಿತರನ್ನು ರಕ್ಷಿಸುವ ಏಕೈಕ ಶಕ್ತಿ ಎಂತಲೂ, ನಾಯಕರನ್ನು ಸ್ವಾಭಿಮಾನಿಗಳೆಂದು, ಶುದ್ಧಹಸ್ತರೆಂದು ನಂಬಿದ್ದ ಕಾರ್ಯಕರ್ತರಿಗೆ ಈ ಎರಡರ ಮೇಲೂ ಅನುಮಾನಗಳು ಮೂಢಲಾರಂಬಿಸಿದವು. ರಾಜಕಾರಣಿಗಳು ಭ್ರಷ್ಟರೆಂದು ಹೇಳುತ್ತಿದ್ದ ಸಮಿತಿಯ ನಾಯಕರೇ ಈಗ ರಾಜಕಾರಣಿಗಳಾಗಿ ಹೊರಟಿದ್ದು, ಕಾರ್ಯಕರ್ತರಲ್ಲಿ ಅಸಹ್ಯ ಮೂಡಿಸಿತು. ನಾಯಕರ ವರ್ತನೆಯಿಂದ ಪ್ರಾಮಾಣಿಕ ಕಾರ್ಯಕರ್ತರಿಗೆ ಬೇಸರ, ಜಿಗುಪ್ಸೆ ಉಂಟಾಯಿತು. ರಾಜಕಾರಣಕ್ಕೆ ಬಂದ ದಲಿತ ನಾಯಕರು ಇಂತಹ ಕಾರ್ಯಕರ್ತರನ್ನು ಮೂಲೆ ಗುಂಪನ್ನಾಗಿಸಿದರು.

೧೯೮೪ರಲ್ಲಿ ದಲಿತ ಸಂಘರ್ಷ ಸಮಿತಿ ಚುನಾವಣೆಗೆ ಧುಮುಕಿದಾಗ, ಸಮಿತಿಯ ಒಳಗಿನ ಒಂದು ಗುಂಪಿನವರು ಚುನಾವಣೆಗೆ ಹೋಗುವುದನ್ನು ವಿರೋಧಿಸಿದರು. ಹೀಗೆ ರಾಜಕೀಯ ಪ್ರವೇಶ ಮಾಡಿ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದನ್ನು ವಿರೋಧಿಸಿದ ಗುಂಪಿನವರು, ತಮ್ಮ ಸಂಘಟನೆಯನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳುವ ಸಲುವಾಗಿ 'ದಲಿತ ಸಂಘರ್ಷ ಸಮಿತಿ ಸಂಯೋಜಕ' ಎಂಬ ಹೆಸರಿಟ್ಟುಕೊಂಡರು. ಇನ್ನು ಚುನಾವಣೆಗೆ ಹೋದ ಸಂಘಟನೆಯ ಬಣವನ್ನು 'ದಲಿತ ಸಂಘರ್ಷ ಸಮಿತಿ ಸಂಚಾಲಕ' ಎಂದು ಹೆಸರಿಸಲಾಯಿತು.[೨೨] ಹೀಗೆ ಇವೆರೆಡು ಪ್ರತ್ಯೇಕ ಸಂಘಟನೆಗಳಾಗಿ ೧೯೦ರ ದಶಕದ ಆರಂಭದಲ್ಲಿ ದಲಿತ ಸಂಘರ್ಷ ಸಮಿತಿ ಎಂದರೆ ಅರ್ಥವಾಗದ ವಾತಾವರಣವಿತ್ತು. ಕ್ರಮೇಣ ಈ ಎರಡೂ ಸಂಘಟನೆಗಳ ನಡುವೆ ವೈಯಕ್ತಿಕ ಭಿನ್ನಾಭಿಪ್ರಾಯ ಹುಟ್ಟಿಕೊಂಡವು ಹಾಗೂ ಪರಸ್ಪರ ವಿರೋಧದ ಮಾತುಗಳು ಎದ್ದವು. ಒಬ್ಬರ ಮೇಲೆ ಒಬ್ಬರು ಆರೋಪ ಹೊರಿಸುವ, ಬಹಿಷ್ಕಾರ ಹಾಕುವ, ಸಂಘಟನೆ ಯಿಂದ ಉಚ್ಚಾಟನೆ ಮಾಡುವ ಹಂತಕ್ಕೆ ಪರಿಸ್ಥಿತಿ ಮಿತಿ ಮೀರಿತು. ಹೀಗಾಗಿ ನಾಯಕರಿಗೆ ತಕ್ಕಂತೆ ಒಂದೊಂದು ಪ್ರತ್ಯೇಕ ಬಣಗಳು ಬೆಳೆಯತೊಡಗಿದವು.

ಹೀಗೆ ನಾಯಕತ್ವಕ್ಕಾಗಿ ಕಚ್ಚಾಟ, ಮುಖಂಡರ ಅಧಿಕಾರ ವ್ಯಾಮೋಹ, ರಾಜಕೀಯ ಪ್ರವೇಶದ ವಿಚಾರದಲ್ಲುಂಟಾದ ಭಿನ್ನಾಭಿಪ್ರಾಯ, ರಾಜಕೀಯ ಪಕ್ಷಗಳ ಮತ್ತು ಸರಕಾರಗಳ ಒಡೆದು ಆಳುವ ನೀತಿ, ನಾಯಕರ ಮೆಲಿನ ಭ್ರಷ್ಟಾಚಾರ ಆರೋಪಗಳು, ಸರಕಾರಗಳನ್ನು ಓಲೈಸುವ ದಲಿತ ಮುಖಂಡರ ನೀತಿ, ಸ್ವಾರ್ಥಕ್ಕಾಗಿ ಸಂಘಟನೆಯ ದುರ್ಬಳಕೆಯ ಯತ್ನ ಪ್ರಾರಂಭವಾಯಿತು. ಹೀಗೆ ಸ್ವತಂತ್ರವಾದ ಸಂಘಟನೆಗಳು ಬೇರೆ ಬೇರೆ ಹೆಸರುಗಳೊಂದಿಗೆ ಅಸ್ತಿತ್ವ ಪಡೆದವು. ಸ್ಥಳೀಯ ಮುಖಂಡರು ಸಂಘಟನೆಯ ಸಿದ್ಧಾಂತಗಳನ್ನು ಬದಿಗೊತ್ತಿ ಕ್ಷುಲ್ಲಕ ಚಟುವಟಿಕೆಗಳಲ್ಲಿ ತೊಡಗಿದರು. ಇವರ ಚಟುವಟಿಕೆಗಳು ಎಷ್ಟು ಮಿತಿ ಮೀರಿದವೆಂದರೆ, ಇದರ ಕಾರ್ಯಕರ್ತರನ್ನು, ಕೆಲವು ನಾಯಕರನ್ನು ಗುಂಡಾಗಳೆಂದು ಪರಿಗಣಿಸುವ ಪ್ರವೃತ್ತಿ ಬೆಳೆದು, ಸಮಾಜದಲ್ಲಿ ದಲಿತ ಸಂಘರ್ಷ ಸಮಿತಿಯ ಬಗ್ಗೆ ಇದ್ದ ನಂಬಿಕೆ, ಅಭಿಪ್ರಾಯಗಳು ಬದಲಾದವು. ಕೆಲವು ಮುಖಂಡರಂತು ಉದಾತ್ತವಾದ, ದೂರದೃಷ್ಟಿಯ ಆಲೋಚನೆಗಳನ್ನು ಬಿಟ್ಟು ಸ್ಥಳೀಯ ಸಮಸ್ಯೆಗಳನ್ನು ಕೈಗೆತ್ತಿಕೊಂಡು ತಮ್ಮ ವೈಯಕ್ತಿಕ ಪ್ರತಿಷ್ಠೆ ಬೆಳೆಸಿಕೊಳ್ಳುವಲ್ಲಿ ಕಾರ್ಯನಿರತರಾದರು. ಹೀಗೆ ಸಂಘಟನೆಗಳು ಮತ್ತು ದಲಿತ ಚಳವಳಿಗಳು ಅವನತಿಯತ್ತ ಸಾಗಲು ಕಾರಣವಾಯಿತು.

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಂತು ದಲಿತ ಸಂಘಟನೆಗಳು ವಿವಿಧ ಬಣಗಳಾಗಿ ಒಡೆದು ಹೋಗಿ ದಲಿತರ ಸಂಘಟನೆಗೆ ಹೋರಾಟಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಉದಾಹರಣೆಗೆ

ಬೀದರ್ ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಮಾರುತಿ ಬಸಪ್ಪ ಬೌದ್ಧೆ, (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಶಂಕರ್‌ಬಣ - ರಾಜಕುಮಾರ್ ಬನ್ನೇರ್ (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ಕೃಷ್ಣಪ್ಪ ಬಣ - ರವಿ ಕುದ್ರೇ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ಉಮೇಶ ಸಾರಳ್ಳಿಕರ್ (ಜಿಲ್ಲಾ ಸಂಚಾಲಕರು)

೫. ದಲಿತ ಸಂಘರ್ಷ ಸಮಿತಿ - ಭೀಮ ವಾದ - ಕಲ್ಯಾಣರಾವ್ ಬೌಂಸ್ಲೆ (ಜಿಲ್ಲಾ ಸಂಚಾಲಕರು)

೬. ದಲಿತ ಸಂಘರ್ಷ ಸಮಿತಿ - ಕರ್ನಾಟಕದ ದಲಿತ ರಕ್ಷಣಾವೇದಿಕೆ - ಅಂಬಾದಾಸ್ ಗಾಯಕವಾಡ್ (ಜಿಲ್ಲಾ ಸಂಚಾಲಕರು)[೩೮]

ಗುಲಬರ್ಗಾ ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಅರ್ಜುನ್ ಬದ್ರಿ (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಶಂಕರ್‌ಬಣ - ಅರ್ಜುನ್ ಗೊಬ್ಬೂರ್ (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ಕೃಷ್ಣಪ್ಪ ಬಣ - ಪುಂಡಲಿಕ ಗಾಯಕವಾಡ್ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ರವಿ ಮದನ್‌ಕರ್ (ಜಿಲ್ಲಾ ಸಂಚಾಲಕರು)

೫. ದಲಿತ ಸಂಘರ್ಷ ಸಮಿತಿ - ಮೂರ್ತಿ ಬಣ - ದಶರತ್ ಕಲ್‌ಗೂರ್ತಿ (ಜಿಲ್ಲಾ ಸಂಚಾಲಕರು)

೬. ದಲಿತ ಸಂಘರ್ಷ ಸಮಿತಿ - ನಾಗರಾಜ ಬಣ - ಶಿವಪ್ಪ ದಿಲಗುಂದಿ (ಜಿಲ್ಲಾ ಸಂಚಾಲಕರು)[೩೯]

ರಾಯಚೂರು ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಮಂಜುನಾಥ ಗಾಂಧಿನಗರ (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಕೃಷ್ಣಪ್ಪ ಬಣ - ಹನುಮಂತ ಕಾಕರುಗಲ್ (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ಪ್ರಭುಲಿಂಗ ಮ್ಯಾಗಲಮನಿ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ಮೂರ್ತಿ ಬಣ - ಅಶೋಕ ನಂಜಲದಿನ್ನಿ (ಜಿಲ್ಲಾ ಸಂಚಾಲಕರು)

೫. ದಲಿತ ಸಂಘರ್ಷ ಸಮಿತಿ - ಅಂಬೇಡ್ಕರ್ ವಾದ - ದುರುಗಪ್ಪ ಕವಿತಾಳ (ಜಿಲ್ಲಾ ಸಂಚಾಲಕರು)

೬. ಮಾದಿಗ ದಂಡೋರ ಸಂಘಟನೆ - ನರಸಪ್ಪ ಮಾದಿಗ (ಜಿಲ್ಲಾ ಸಂಚಾಲಕರು)[೪೦]

ಯಾದಗಿರಿ ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಮಲ್ಲಿಕಾರ್ಜುನ ಮಲ್ಲಪ್ಪ ಕ್ರಾಂತಿ (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಶಂಕರ್‌ಬಣ - ರಾಮಣ್ಣ ಕಲ್ಲದೇವನಹಳ್ಳಿ (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ಚಂದ್ರ ಚಕ್ರವರ್ತಿ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ಕಲ್ಲೂರ್ ವಾದ - (ಡಾ. ಬಿ.ಆರ್. ಅಂಬೇಡ್ಕರ್) ಭೀಮರಾಯ ಹೊಸಮನಿ (ಜಿಲ್ಲಾ ಸಂಚಾಲಕರು)

೫. ದಲಿತ ಸಂಘರ್ಷ ಸಮಿತಿ - ಭೀಮ ವಾದ - ಭೀಮರಾಯ ಸಿಂದಿಗೇರಿ (ಜಿಲ್ಲಾ ಸಂಚಾಲಕರು)

೬. ದಲಿತ ಸಂಘರ್ಷ ಸಮಿತಿ - ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ - ಮಾರುತಿ ಜಂಬುಗ (ಜಿಲ್ಲಾ ಸಂಚಾಲಕರು)

೭. ಮಾದಿಗ ದಂಡೋರ ಸಮಿತಿ - ಹನುಮಂತ ಲಿಂಗೇರಿ (ಜಿಲ್ಲಾ ಸಂಚಾಲಕರು)[೪೧]

ಕೊಪ್ಪಳ ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಮರಿಯಪ್ಪ ಕುಂಟೋಜಿ (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಶಂಕರ್‌ಬಣ - ಪುಟ್ಟರಾಜು (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ಶರಣಪ್ಪ ಹದ್ದಿಗೇರಿ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ಮೂರ್ತಿ ಬಣ - ಮರಿಯಪ್ಪ ದದೇಗಲ್ (ಜಿಲ್ಲಾ ಸಂಚಾಲಕರು)

೫. ದಲಿತ ಸಂಘರ್ಷ ಸಮಿತಿ - ದಲಿತ ಕ್ರಿಯಾ ವೇದಿಕೆ - ಮುದುಕಪ್ಪ ನರೇಗಲ್ (ಜಿಲ್ಲಾ ಸಂಚಾಲಕರು)

೬. ದಲಿತ ಸಂಘರ್ಷ ಸಮಿತಿ - ಅಂಬೇಡ್ಕರ್ ವಾದ - ರಮೇಶ್ ಬೆಲ್ಲದ (ಜಿಲ್ಲಾ ಸಂಚಾಲಕರು)

೭. ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ - ಪ್ರಭುರಾಜ (ಜಿಲ್ಲಾ ಸಂಚಾಲಕರು)[೪೨]

ಬಳ್ಳಾರಿ ಜಿಲ್ಲೆಯಲ್ಲಿ,

೧. ದಲಿತ ಸಂಘರ್ಷ ಸಮಿತಿ - ಸಾಗರ್ ಬಣ - ಕೆಂಚಪ್ಪ ಎಸ್. (ಜಿಲ್ಲಾ ಸಂಚಾಲಕರು)

೨. ದಲಿತ ಸಂಘರ್ಷ ಸಮಿತಿ - ಶಂಕರ್‌ಬಣ - ಆನಂದ ಕೆ. (ಜಿಲ್ಲಾ ಸಂಚಾಲಕರು)

೩. ದಲಿತ ಸಂಘರ್ಷ ಸಮಿತಿ - ನಾಗವರ್ ಬಣ - ವೆಂಕಟೇಶ್ ಮೂರ್ತಿ (ಜಿಲ್ಲಾ ಸಂಚಾಲಕರು)

೪. ದಲಿತ ಸಂಘರ್ಷ ಸಮಿತಿ - ಕೃಷ್ಣಪ್ಪ ಬಣ - ವಿಘ್ನೇಶ್ ಎಸ್. (ಜಿಲ್ಲಾ ಸಂಚಾಲಕರು)

೫. ದಲಿತ ಮಹಾಸಭಾ - ಹನುಮೇಶಪ್ಪ ಸಿ. (ಜಿಲ್ಲಾ ಸಂಚಾಲಕರು)

೬. ಜಿಲ್ಲಾ ಅಂಬೇಡ್ಕರ್ ಸಂಘ - ಮಾರಣ್ಣ ಎಲ್. (ಜಿಲ್ಲಾ ಸಂಚಾಲಕರು)

೭. ಚಲವಾದಿ ಮಹಾಸಭಾ - ಸೂರಿ ಡಿ. (ಜಿಲ್ಲಾ ಸಂಚಾಲಕರು)

೮. ಮಾದಿಗ ದಂಡೋರ ಸಮಿತಿ - ಗಿರಿಮಲ್ಲಪ್ಪ ಕೆ. (ಜಿಲ್ಲಾ ಸಂಚಾಲಕರು)[೪೩]

ಇವುಗಳ ಜೊತೆಗೆ ಸಮತಾ ಸೈನಿಕ ದಳ, ರೈತ ಆಂದೋಲನ ಸಮಿತಿ, ದಲಿತ ಅಭಿವೃದ್ಧಿ ಒಕ್ಕೂಟ, ಹೀಗೆ ಹತ್ತಾರು ಸಂಘಟನೆಗಳು ತಲೆ ಎತ್ತಿವೆ.

ಸದ್ಯದ ಪರಿಸ್ಥಿತಿಯಲ್ಲಿ ಈ ಸಂಘಟನೆಗಳು ಕೂಡ ತಮ್ಮ ಅಸ್ತಿತ್ವವನ್ನು, ಪ್ರಭಾವವನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಇದರ ಪ್ರತಿಯೊಬ್ಬ ಕಾರ್ಯಕರ್ತರು ನಾಯಕರಾಗುವ ಭರದಲ್ಲಿ ಅನಾವಶ್ಯಕವಾಗಿ ಚಿಕ್ಕ ಪುಟ್ಟ ಕಾರಣಗಳಿಗೂ ಮುಷ್ಕರ ಹೋರಾಟ ನಡೆಸುತ್ತಿದ್ದಾರೆ. ತಮ್ಮ ತಮ್ಮ ಸಂಘಟನೆಗಳ ಲೆಟರ್‌ಪ್ಯಾಡ್‌ಗಳನ್ನು ಮಾಡಿಸಿ, ಸರಕಾರಿ ಕಛೇರಿಗಳ ನೌಕರರಿಂದ, ಸಾರ್ವಜನಿಕರಿಂದ, ಸಭೆ ಸಮಾರಂಭಗಳ ನೆಪದಲ್ಲಿ ವಂತಿಗೆ ವಸೂಲಿ ಮಾಡುವ ಬಗ್ಗೆಯೂ ಕೇಳಿ ಬರುತ್ತಿದೆ. ಇನ್ನು ಕೆಲವು ಸಂಘಟನೆಗಳಂತು ನಿರುದ್ಯೋಗಿಗಳಿಗೆ, ರಾಜಕೀಯ ಮಾಡಿಕೊಂಡು ತಿರುಗಾಡುವವರಿಗೆ ರಕ್ಷಣಾ ಕವಚ ಗಳಾಗಿವೆ. ಇದರಿಂದ ಒಂದು ರೀತಿಯಲ್ಲಿ ಇಡೀ ಸಂಘಟನೆಗೆ ಕೆಟ್ಟ ಹೆಸರು ಬಂದಿದೆ. ದಲಿತ ಸಂಘರ್ಷ ಸಮಿತಿ ಎಂದರೆ ಭಯದಿಂದ, ಅನುಮಾನದಿಂದ ನೋಡುವ ಪ್ರವೃತ್ತಿ ಸಮಾಜದಲ್ಲಿ ಬೆಳೆದು ಬಿಟ್ಟಿದೆ. ಹೀಗಾಗಿ ಇಂದಿನ ದಲಿತ ಹೋರಾಟಗಳು ಒಂದು ಶಕ್ತಿಯಾಗಿ ಒಂದು ಸಂಘಟನೆಯಾಗಿ ಹೋರಾಡಲು ಸಾಧ್ಯವಾಗುತ್ತಿಲ್ಲ.

ದಲಿತ ಸಂಘರ್ಷ ಸಮಿತಿಯು ಅನೇಕ ನಾಯಕರ ಶ್ರಮ, ಶ್ರದ್ಧೆ, ವನವಾಸ, ಉಪವಾಸ ಅನುಭವಿಸಿ, ಕಷ್ಟಪಟ್ಟು, ಹುಟ್ಟು ಹಾಕಿದ ಸಂಘಟನೆ. ಇಂತಹ ಸಂಘಟನೆ ಒಡೆದು ಚೂರಾದರೆ ಅದು ಕೇವಲ ಸಂಘಟನೆಯ ಒಡಕಲ್ಲ, ಬದಲಾಗಿ ದಲಿತರ ಹೃದಯಗಳು ಚೂರುಚೂರಾದ ಹಾಗೆ. ಜಾತಿವಾದಿ ಮತ್ತು ಕೋಮುವಾದಿ ಶಕ್ತಿಗಳು ಒಂದಾಗಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿಕೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ

ದಲಿತರು ತಮ್ಮ ತಮ್ಮಲ್ಲಿ ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸಿಕೊಂಡು ಒಡೆದು ಹೋಗುತ್ತಿರುವುದು ನಿಜವಾಗಿಯೂ ಒಳ್ಳೆಯ ಸಂಕೇತವಲ್ಲ. ದಲಿತರು ತಮ್ಮಲ್ಲಿಯ ಸ್ವಾರ್ಥವನ್ನು ತೊರೆದು, ಭಿನ್ನಾಭಿಪ್ರಾಯ ಗಳನ್ನು ಬದಿಗೊತ್ತಿ, ದ್ವೇಷ, ದೌರ್ಜನ್ಯವನ್ನು ಬಿಟ್ಟು ದಲಿತರ ನೋವಿಗೆ ಸ್ಪಂದಿಸುತ್ತಾ ಸಹಾನುಭೂತಿ ಗಳಿಸುತ್ತಾ ಸಮಾಜದಲ್ಲಿ ಸಮಾನತೆಯನ್ನು, ಶಾಂತಿಯನ್ನು, ಏಳಿಗೆಯನ್ನು ಹುಟ್ಟು ಹಾಕುವುದು ಇಂದಿನ ಅನಿವಾರ್ಯತೆಯಾಗಿದೆ.

ಹೈದರಾಬಾದ್ ಕರ್ನಾಟಕದ ದಲಿತರ ಸಾಮಾಜಿಕ ತಲ್ಲಣ : ಮತಾಂತರ

ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆಯೆನ್ನುವುದು ಒಂದು ಅಮಾನವೀಯ ಪದ್ಧತಿಯಾಗಿದೆ. ಅಸ್ಪೃಶ್ಯತೆ ನಿವಾರಣೆಗೆ ಅಥವಾ ಅದರ ಕೀಳರಿಮೆಯಿಂದ ಹೊರಬರಲು ಅಸ್ಪೃಶ್ಯರು ಕಂಡುಕೊಂಡ ಮಾರ್ಗವೇ ಮತಾಂತರ. ಮತಾಂತರವು ಇಂದು ಭಾರತದಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ಗಂಭೀರವಾದ ಚಿಂತನೆಗೆ ಒಳಗಾಗಿರುವ ವಿಚಾರವಾಗಿದೆ. ಒಂದು ಬಗೆಯಲ್ಲಿ ಮತಾಂತರವು ಒಂದು ಸಾಮಾಜಿಕ ಪಿಡುಗು ಎನ್ನುವಷ್ಟರಮಟ್ಟಿಗೆ ತನ್ನ ಕರಾಳ ಹಸ್ತವನ್ನು ಚಾಚಿ ಎಲ್ಲೆ ಮೀರಿ ಮುಂದುವರೆ ಯುತ್ತಿದೆ. ಹೈದರಾಬಾದ್ ಕರ್ನಾಟಕದಲ್ಲಿ ದಲಿತರು ಮತ್ತು ಹಿಂದುಳಿದವರು ತಮ್ಮ ಮೂಲ ಧರ್ಮವನ್ನು ಬಿಟ್ಟು ಬೇರೆ ಧರ್ಮಗಳಿಗೆ ಮತಾಂತರಗೊಳ್ಳುತ್ತಿರುವುದನ್ನು ಗಮನಿಸಿದಾಗ ಅದಕ್ಕೆ ಮೂಲ ಕಾರಣ ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಹಾಗೂ ಅವರು ಅನುಭವಿಸುತ್ತಿರುವ ಅಭದ್ರತೆ ಮತ್ತು ಕೀಳರಿಮೆಯಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಮತಾಂತರ ಪ್ರಕ್ರಿಯೆಯು ಬಹು ಹಿಂದಿನಿಂದಲೂ ನಡೆದು ಬಂದಿದೆ ಹಾಗೂ ಇಂದೂ ಸಹ ಹೆಚ್ಚಾಗಿ ನಡೆಯುತ್ತಿರುವುದು ಕಂಡು ಬರುತ್ತಿದೆ. ಇಲ್ಲಿ ದಲಿತರು ಹೆಚ್ಚಾಗಿ ಬೌದ್ಧ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ. ಇವರಲ್ಲಿ ಹೊಲೆಯ ಮತ್ತ ಛಲವಾದಿ ಜನಾಂಗದವರು ಬೌದ್ಧಧರ್ಮದ ಕಡೆಗೆ ಆಕರ್ಷಿತರಾಗಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಹಾಗೆಯೇ ಮಾದಿಗರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಕ್ರೈಸ್ತಧರ್ಮಕ್ಕೆ ಮತಾಂತರವಾಗುತ್ತಿದ್ದರೆ ಉಳಿದವರು ತಮ್ಮ ಮೂಲ ಮತಕ್ಕೆ ಅಂಟಿಕೊಂಡಿರುವುದು ಕಂಡು ಬರುತ್ತದೆ. ಅದರಲ್ಲೂ ಗುಲಬರ್ಗಾ, ಬೀದರ್ ಹಾಗೂ ಸುತ್ತಮುತ್ತಲಿನ ಭಾಗದ ದಲಿತರು ಹೆಚ್ಚಾಗಿ ಬೌದ್ಧಧರ್ಮವನ್ನು ಸ್ವೀಕರಿಸುತ್ತಿದ್ದಾರೆ.

ಇಲ್ಲಿನ ದಲಿತರು ಹೆಚ್ಚಾಗಿ ಬೌದ್ಧ ಧರ್ಮದ ಕಡೆ ಆಕರ್ಷಿತರಾಗಲು ಕಾರಣಗಳನ್ನು ಅವಲೋಕಿಸಿದಾಗ ಡಾ. ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳು, ತತ್ವಗಳು ಹಾಗೂ ಮಾರ್ಗದರ್ಶನ ಗಳು ಅವರ ಮೇಲೆ ಬೀರಿರುವ ಪ್ರಭಾವ ಎದ್ದು ಕಾಣುತ್ತದೆ. ಇದರ ಜೊತೆಗೆ ಇತ್ತೀಚಿಗೆ ದಲಿತ ಮುಖಂಡರು ಹಾಗೂ ಪ್ರಭಾವಿ ರಾಜಕಾರಣಿಗಳಾದ ಡಾ. ಎಂ. ಮಲ್ಲಿಕಾರ್ಜುನ ಖರ್ಗೆಯವರು ಬೌದ್ಧ ಧರ್ಮದ ಬಗ್ಗೆ ಕೈಗೊಂಡಿರುವ ಚಟುವಟಿಕೆಗಳು ಹಾಗೂ ದಲಿತರ ಸ್ಥಾನಮಾನಗಳಲ್ಲಿ ಬದಲಾವಣೆ ತರಲು ಇತ್ತೀಚಿಗೆ ಗುಲಬರ್ಗಾದಲ್ಲಿ ಸ್ಥಾಪಿಸಿರುವ 'ಬುದ್ಧ ವಿಹಾರವು' ಅನೇಕ ಬದಲಾವಣೆಗಳಿಗೆ ಕಾರಣವಾಗುತ್ತಿದೆ.

'ಸಿದ್ಧಾರ್ಥ ಟ್ರಸ್ಟ್'ನ ಆಶ್ರಯದಲ್ಲಿ ಸ್ಥಾಪಿಸಿರುವ ಬುದ್ಧವಿಹಾರವು ಇಂದು ಭಾರತದಲ್ಲಿರುವ ಅನೇಕ ಪ್ರಮುಖ ಬುದ್ಧವಿಹಾರಗಳಲ್ಲಿ ಒಂದಾಗಿದೆ. ಇಲ್ಲಿರುವ ಬೃಹತ್ ಬುದ್ಧವಿಹಾರವು ಅತ್ಯಂತ ವಿಶಾಲವಾದ ಪ್ರದೇಶದಲ್ಲಿ ಅಮೃತಶಿಲೆಯಿಂದ ಅತ್ಯಾಕರ್ಷಕ ಕಲಾಶೈಲಿಯಲ್ಲಿ ನಿರ್ಮಿಸಲ್ಪಟ್ಟಿದ್ದು, ಇದರ ಒಳಭಾಗದಲ್ಲಿ ಸ್ಥಾಪಿಸಲ್ಪಟ್ಟಿರುವ ಬುದ್ಧನ ಕಂಚಿನ ಹಾಗೂ ಕಪ್ಪುಶಿಲೆಯ ವಿಗ್ರಹಗಳು, ಧ್ಯಾನಮಂದಿರವು ಜನರನ್ನು ಆಕರ್ಷಿಸುವುದರ ಜೊತೆಗೆ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆಯುತ್ತಿದೆ. ಹೀಗಾಗಿ ಈಗಾಗಲೇ ಬೌದ್ಧ ಧರ್ಮಕ್ಕೆ ಮತಾಂತರಗೊಂಡವರಿಗೆ ಒಂದು ರೀತಿಯಲ್ಲಿ ಭದ್ರತೆ ಆಶಾಭಾವನೆಯನ್ನು ಹೆಚ್ಚಿಸಿದರೆ, ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವವರಿಗೆ ಪ್ರೇರಣೆ ಆಗುತ್ತಿದೆ.

ದಲಿತರ ಸ್ಥಿತಿಗತಿಗಳು

೧೯೭೦-೮೦ರ ದಶಕವು ಕರ್ನಾಟಕದಲ್ಲಿ ದಲಿತ ಚಳವಳಿಯ ಉಚ್ಛ್ರಾಯ ಕಾಲವೆನ್ನಬಹುದು. 'ದಲಿತರು ಬರುವರು ದಾರಿ ಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಎನ್ನುವ ಘೋಷಣೆಗಳೊಂದಿಗೆ ಸುಮಾರು ಎರಡು ದಶಕಗಳ ಕಾಲ ಅತ್ಯಂತ ಪ್ರಭಾವಶಾಲಿ ಸಂಘಟನೆಯಾಗಿ ದಲಿತ ಚಳವಳಿಯನ್ನು ಮುನ್ನಡೆಸಿದ ಕೀರ್ತಿ ಹಾಗೂ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ದಲಿತ ಸಮುದಾಯಗಳನ್ನು ಒಂದುಗೂಡಿಸಿ ಅವರಲ್ಲಿ ಆತ್ಮಶಕ್ತಿ, ಆತ್ಮಸ್ಥೈರ್ಯವನ್ನು ತುಂಬಿ ಸಮಾಜದಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆಯನ್ನು ಅದರ ಅಸಮಾನತೆಯನ್ನು ಕಟುವಾಗಿ ವಿರೋಧಿಸಿ ಮೇಲು ಕೀಳು ಭಾವನೆಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದ್ದು ದಲಿತ ಚಳವಳಿಯ ಸಾಧನೆಯಾಗಿದೆ. ಆಧುನಿಕ ಶಿಕ್ಷಣ, ಪ್ರಜಾಪ್ರಭುತ್ವದ ಹಕ್ಕುಗಳು ಸಂವಿಧಾನಾತ್ಮಕ ಮೀಸಲಾತಿ, ಹೀಗೆ ಎಲ್ಲಾ ಬಗೆಯ ಪ್ರಜ್ಞೆಯನ್ನು ಕೆಳಸಮುದಾಯಗಳಲ್ಲಿ ಮೂಡಿಸಿತು. ಸಮಾಜದ ಮಡಿವಂತಿಕೆಯನ್ನು ಪ್ರಶ್ನಿಸಿ, ತನ್ನ ಸಮುದಾಯಗಳಿಗೆ ಚಳವಳಿಯ ಮೂಲಕ ಸಾಮಾಜಿಕ ಅರಿವನ್ನು ಮೂಡಿಸಲು ಪ್ರಯತ್ನಿಸಿತು. ದಲಿತರಿಗೆ ತಮ್ಮ ಹಕ್ಕನ್ನು ಕೇಳುವಲ್ಲಿ ದಲಿತ ಸಂಘರ್ಷ ಸಮಿತಿ ಒಂದು ವೇದಿಕೆಯಾಯಿತು. ಇದು ಮಾನಸಿಕವಾಗಿ, ದೈಹಿಕವಾಗಿ ದಲಿತರಲ್ಲಿ ಒಂದು ರೀತಿಯಲ್ಲಿ ಬಲವನ್ನು ತಂದುಕೊಟ್ಟಿತು. ದಲಿತರ ಶೋಷಣೆಯ ವಿರುದ್ಧ ಧ್ವನಿ ಎತ್ತುವ ಸಂಘಟನೆಯಾಯಿತು. ಜಾತಿಯ ಹೆಸರನ್ನು ಹೇಳಿಕೊಳ್ಳುವುದು ಅವಮಾನವೆಂದು ಬದುಕುತ್ತಿದ್ದ ದಲಿತರಿಗೆ ಅವರಲ್ಲಿದ್ದ ಕೀಳರಿಮೆಯನ್ನು ತೊಡೆದು ಹಾಕಲು ಸಹಾಯ ಮಾಡಿತು. ಜಾತಿನಿಂದನೆ, ಅವಮಾನ, ಕೊಲೆ, ದೌರ್ಜನ್ಯ ದಬ್ಬಾಳಿಕೆಗಳಂತಹ ಅನೇಕ ಪ್ರಕರಣಗಳು ದಲಿತ ಚಳವಳಿಯಿಂದ ಬೆಳಕಿಗೆ ಬಂದವು. ಇವುಗಳ ವಿರುದ್ಧ ಹೋರಾಡಿ ಅನ್ಯಾಯಕ್ಕೆ ಒಳಗಾದ ದಲಿತರಿಗೆ ನ್ಯಾಯವನ್ನು ಒದಗಿಸುವಲ್ಲಿ ದಲಿತ ಚಳವಳಿ ಪ್ರಮುಖ ಪಾತ್ರವಹಿಸಿತು. ದಲಿತರ ಕುರಿತು ಹೊಸ ಬಗೆಯ ಚಿಂತನೆಗೆ ನಾಂದಿ ಹಾಡಿತು.

ಸಾಮಾಜಿಕ ಅಸಮಾನತೆಯ ವಿರುದ್ಧ ಪ್ರತಿಭಟನೆಯಾಗಿ ಕರ್ನಾಟಕದಲ್ಲಿ ಉಗಮವಾದ ದಲಿತ ಚಳವಳಿಯ ಹುರುಪು, ನಂತರದ ಪ್ರಕ್ರಿಯೆಯಲ್ಲಿ ಬೆಳವಣಿಗೆಯಾಗಲಿಲ್ಲ. ದಲಿತ ಚಳವಳಿ ತನ್ನ ಹೋರಾಟದ ನಿರಂತರತೆಯಲ್ಲಿ ತನ್ನ ಸ್ಪಷ್ಟ ಗುರಿ, ಉದ್ದೇಶ ಮಾರ್ಗವನ್ನು ಒಂದು ಸೈದ್ಧಾಂತಿಕ ಚೌಕಟ್ಟಿನಲ್ಲಿಡಲಿಲ್ಲ.

ಅಸಮಾನತೆಯು ಸಮಾಜದಲ್ಲಿ ಬಹುಬೇಗ ಸವಲತ್ತುಗಳ ಕಡೆ ವಾಲಿತು. ತನ್ನ ಹೋರಾಟದ ಪ್ರಕ್ರಿಯೆಯಲ್ಲಿ ಶಕ್ತಿ ರಾಜಕಾರಣವನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಯೋಚಿಸದೆ ಮುಗ್ಗರಿಸಿತು. ಅನ್ಯಮಾರ್ಗಗಳನ್ನು ಹಿಡಿದ ದಲಿತ ಚಳವಳಿ ತನ್ನ ಸಮುದಾಯಗಳನ್ನು ಬಲಿ ಕೊಟ್ಟಿತು. ದಲಿತ ನಾಯಕರಲ್ಲಿ ಏಕಾಭಿಪ್ರಾಯ ಮೂಡದಿದ್ದುದು, ನಾಯಕತ್ವಕ್ಕಾಗಿ ಪೈಪೋಟಿ, ಅಧಿಕಾರದ ಆಸೆ, ಅವಕಾಶಗಳ ಆಕರ್ಷಣೆಯಿಂದ ಒಡಕು ಉಂಟಾಯಿತು. ಸಮುದಾಯಗಳ ಬಗೆಗಿನ ಚಿಂತನೆಗಳನ್ನು, ಸಮಸ್ಯೆಗಳನ್ನು ಅವುಗಳ ಪರಿಹಾರದ ಜವಾಬ್ದಾರಿಗಳನ್ನು ಹೊತ್ತ ನಾಯಕರ ವರ್ತನೆ ಸ್ವಾರ್ಥಕ್ಕೆ ತಿರುಗಿತು. ಹೀಗಾಗಿ ಇಂದು ದಲಿತ ಚಳವಳಿ ಅಳವಡಿಸಿಕೊಂಡ ಸಿದ್ಧಾಂತ ಯಾವುದು, ಅದರ ಗುರಿ, ಮಾರ್ಗ ಉದ್ದೇಶಗಳೇನು ಎಂಬ ಪ್ರಶ್ನೆಗಳು ಉದ್ಭವಿಸುವಂತಾಗಿದೆ.

ನಿರಂತರವಾಗಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯವನ್ನು, ಅಸ್ಪೃಶ್ಯತೆಯನ್ನು ತಡೆಗಟ್ಟಲು ಸಾಧ್ಯವಾಗದ ಸಂದರ್ಭದಲ್ಲಿ ದಲಿತ ಸಂಘಟನೆಗಳ ಜವಾಬ್ದಾರಿಯಾದರೂ ಏನು, ದಲಿತ ನಾಯಕರ ಕರ್ತವ್ಯಗಳೇನು, ದಲಿತ ವಿದ್ಯಾವಂತ ವರ್ಗಕ್ಕೆ ಜವಾಬ್ದಾರಿ ಇಲ್ಲವೇ ಎನ್ನುವ ಪ್ರಶ್ನೆಗಳು ಎದುರಾಗುತ್ತವೆ. ಪ್ರಸ್ತುತ ಪರಿಸ್ಥಿತಿಯನ್ನು ನೋಡಿದಾಗ, ದಲಿತ ಸಂಘಟನೆಗಳ ಸಮಯ ಸಾಧಕತನ, ಸ್ವಾರ್ಥ ಹೊತ್ತ ರಾಜಕೀಯ, ಅಧಿಕಾರದ ಆಸೆಗಳಿಂದ ದಲಿತ ವಿದ್ಯಾವಂತ ವರ್ಗ, ದಲಿತ ರಾಜಕಾರಣಿಗಳು, ದಲಿತ ನೌಕರ ವರ್ಗ, ದಲಿತ ಜನಾಂಗದಿಂದ ದೂರ ಸಾಗುತ್ತಿದ್ದು ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದ್ದಾರೆ, ಸಿಗುವ ಸೌಲಭ್ಯಗಳನ್ನು ಮಾತ್ರ ದೋಚುತ್ತಿದ್ದಾರೇನೋ ಎಂದು ಅನ್ನಿಸುತ್ತದೆ. ಹೀಗಾಗಿ ಪ್ರಸ್ತುತ ಸಂದರ್ಭದಲ್ಲಿ ದಲಿತ ಚಳವಳಿ ಎತ್ತ ಸಾಗುತ್ತಿದೆ ಎನ್ನುವುದೇ ತಿಳಿಯದಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ದಲಿತರ ಪರವಾಗಿ ಶೋಷಣೆಯ ವಿರುದ್ಧವಾಗಿ ಹೋರಾಡುತ್ತಾ ಬಂದ ದಲಿತ ಸಂಘರ್ಷ ಸಮಿತಿಗೆ ತಮ್ಮದೇ ಆದ ಸಮಸ್ಯೆಗಳಿವೆ. ಸ್ವಾರ್ಥ ರಾಜಕಾರಣ, ಆರ್ಥಿಕ ಅಸಮಾನತೆ ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ಶೋಷಿತ ವರ್ಗದ ಹಿರಿಯಣ್ಣನಂತಿರುವ ದಲಿತನ ಮುಂದಿರುವ ಸವಾಲು ದೊಡ್ಡದು. ದಲಿತ ಚಳವಳಿ ತಾನು ಹುಟ್ಟಿದ ಸಂದರ್ಭದಲ್ಲಿ ಯಾವ ರೀತಿಯ ಸವಾಲುಗಳನ್ನು ಎದುರಿಸಬೇಕಿತ್ತೋ ಅದಕ್ಕಿಂತ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ದಲಿತ ಚಳವಳಿಯನ್ನು ಒಂದು ನೆಲೆಗಟ್ಟಿನ ಮೇಲೆ ನಿಲ್ಲಿಸಬೇಕಾಗಿದೆ. ಇಂತಹ ಸವಾಲನ್ನು ಎದುರಿಸಲು ದಲಿತ ಸಂಘಟನೆಗಳು ಒಗ್ಗೂಡಬೇಕು ಮತ್ತು ದಲಿತ ಚಳವಳಿ ಗಟ್ಟಿಯಾಗಿರಬೇಕಿರುವುದು ಅನಿವಾರ್ಯವಾಗಿದೆ.

೪.೩. ಹಿಂದುಳಿದ ವರ್ಗಗಳ ಚಳವಳಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಡೆದಿರುವ ಮತ್ತು ನಡೆಯುತ್ತಿರುವ ವಿವಿಧ ಚಳವಳಿಗಳಲ್ಲಿ, ಹಿಂದುಳಿದ ವರ್ಗಗಳ ಚಳವಳಿಯು ಸಹ ಪ್ರಮುಖವಾದುದು. ಆದರೆ ಹಿಂದುಳಿದ ವರ್ಗಗಳ ಚಳವಳಿಯು ಈ ಭಾಗದಲ್ಲಿ ನಡೆದಂತಹ ಇತರ ಚಳವಳಿಗಳಾದ ರೈತ, ದಲಿತ, ಕಾರ್ಮಿಕ ಮತ್ತು ಮಹಿಳಾ ಚಳವಳಿಗಳಂತೆ ಕಂಡು ಬರದೆ ವಿಭಿನ್ನ ಸ್ವರೂಪದಲ್ಲಿ ಇರುವುದನ್ನು ಗಮನಿಸಬಹುದಾಗಿದೆ ಹಾಗೂ ಹಿಂದುಳಿದ ವರ್ಗಗಳ

ಚಳವಳಿಯನ್ನೇ ಪ್ರತ್ಯೇಕವಾಗಿ ಗುರುತಿಸುವಂತಹ ಹೋರಾಟವಾಗಲಿ, ಹೋರಾಟದ ಪರಿಣಾಮವಾಗಲಿ ನಡೆದಿಲ್ಲವಾದುದರಿಂದ, ಹಿಂದುಳಿದ ವರ್ಗಗಳ ಚಳವಳಿಯ ಮೇಲೆಯೇ ಪ್ರತ್ಯೇಕ ಅಧ್ಯಯನಗಳಾಗಲಿ, ದಾಖಲಾತಿ ಕಾರ್ಯಗಳಾಗಲಿ, ವಿಶ್ಲೇಷಣೆಗಳಾಗಲಿ ಹೆಚ್ಚಾಗಿ ಕಂಡು ಬರುವುದಿಲ್ಲ. ಆದರೆ ಇಲ್ಲಿ ಹಿಂದುಳಿದ ವರ್ಗಗಳ ಹೋರಾಟಗಳು ನಡೆದಿರುವುದು ಮತ್ತು ನಡೆಯುತ್ತಿರುವುದು ಮೇಲ್ನೋಟದಲ್ಲೇ ಕಂಡು ಬರುತ್ತದೆ. ಹೀಗಾಗಿ ಹಿಂದುಳಿದ ವರ್ಗಗಳ ಚಳವಳಿಗಳನ್ನು ಹೊರತುಪಡಿಸಿ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಅಧ್ಯಯನ ಪರಿಪೂರ್ಣವೆನಿಸುವುದಿಲ್ಲ. ಆದರೆ ಹಿಂದುಳಿದ ವರ್ಗಗಳ ಚಳವಳಿಯನ್ನು ನಿರ್ದಿಷ್ಟವಾಗಿ ಗುರುತಿಸಿ, ಪ್ರತ್ಯೇಕಿಸಿ, ಆಳವಾದ, ವಿವರಣಾತ್ಮಕವಾದ ಅಧ್ಯಯನ ಮಾಡಲು ಕಷ್ಟಸಾಧ್ಯವೆನಿಸುತ್ತದೆ. ಹೀಗಾಗಿ ಪ್ರಸ್ತುತ ಸಂಶೋಧನೆಯಲ್ಲಿ ಹಿಂದುಳಿದ ವರ್ಗಗಳ ಚಳವಳಿಯನ್ನು ಪೂರಕ ಅಧ್ಯಾಯವನ್ನಾಗಿ, ವಿವಿಧ ಚಳವಳಿಗಳಲ್ಲಿ ಇದನ್ನು ಒಂದು ಭಾಗವಾಗಿ, ಅಧ್ಯಯನ ಮಾಡುವ ಮತ್ತು ಇದು ಈ ಭಾಗದಲ್ಲಿ ಏಕೆ ತೀವ್ರ ಸ್ವರೂಪ ಪಡೆದುಕೊಂಡು ಬಂದಿಲ್ಲ ಎನ್ನುವ ಅಂಶಗಳ ಆಧಾರದ ಮೇಲೆ ಹಿಂದುಳಿದ ವರ್ಗಗಳ ಚಳವಳಿಯನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದುಳಿದ ವರ್ಗಗಳಲ್ಲಿ ಸಮಗ್ರ ಬದಲಾವಣೆಯನ್ನು ತರುವಂತಹ, ಹೋರಾಟಗಳು ನಡೆದಿಲ್ಲ. ಕಾಲಕಾಲಕ್ಕೆ ನೇಮಕವಾದ ವಿವಿಧ ಹಿಂದುಳಿದ ವರ್ಗಗಳ ಆಯೋಗಗಳಿಗೆ ಪ್ರತಿಕ್ರಿಯೆಯಾಗಿ ಕೆಲವೊಂದು ಹೇಳಿಕಾ ರೂಪದ ಪ್ರತಿಕ್ರಿಯೆಗಳು ಮಾತ್ರ ಕಂಡು ಬರುತ್ತವೆಯೇ ಹೊರತು, ಸಂಘಟನಾತ್ಮಕ ಪ್ರತಿಕ್ರಿಯೆಗಳಾಗಲಿ, ಹೋರಾಟಗಳಾಗಲಿ ಕಂಡು ಬರುವುದಿಲ್ಲ. ಬದಲಾಗಿ ಕರ್ನಾಟಕದಾದ್ಯಂತ ನಡೆದ ಹಿಂದುಳಿದ ವರ್ಗಗಳ ಚಳವಳಿಗಳ ಹಿನ್ನೆಲೆಯಲ್ಲಿಯೇ ಇಲ್ಲೂ ಸ್ವಲ್ಪಮಟ್ಟಿಗೆ ಹೋರಾಟಗಳು ನಡೆದಿವೆ. ವಾಸ್ತವಾಗಿ ಇಲ್ಲಿ ವಿವಿಧ ಉಪ ಜಾತಿಗಳಿಗೆ ಸೇರಿದ ಮೂಲ ನೆಲೆಯಿಲ್ಲದ, ಅಸಂಘಟಿತರಾಗಿರುವ, ಮೂಲ ಸೌಲಭ್ಯಗಳಿಂದ ವಂಚಿತರಾಗಿರುವ ಜನಾಂಗಗಳು ಹೆಚ್ಚಿವೆ. ಆದರೂ ಇಲ್ಲಿ ಹಿಂದುಳಿದ ವರ್ಗಗಳ ಹೋರಾಟಗಳು ತೀವ್ರ ಸ್ವರೂಪ ಪಡೆದುಕೊಳ್ಳದಿರಲು ತನ್ನದೇ ಆದ ಕಾರಣಗಳಿವೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಹಿಂದುಳಿದ ವರ್ಗಗಳ ಚಳವಳಿಯನ್ನು ನೋಡಿದಾಗ ಇವು ಮೇಲ್ನೋಟಕ್ಕೆ ಎದ್ದು ಕಾಣುವಂತಿದ್ದರೂ, ಅವುಗಳ ಆಳಕ್ಕೆ ಇಳಿದಾಗ ಹೋರಾಟದ ಮಜಲುಗಳನ್ನು ದಾಖಲೆ ಮಾಡುವುದು ಸುಲಭವಲ್ಲ. ಏಕೆಂದರೆ, ಕರ್ನಾಟಕದ ಇತರ ಭಾಗಗಳಲ್ಲಾದ ಹಿಂದುಳಿದ ವರ್ಗಗಳ ಚಳವಳಿಗಳಿಗೂ, ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದ ವರ್ಗಗಳ ಚಳವಳಿಗೂ ಅಜಗಜಾಂತರ ಅಂತರವಿದೆ. ಇಲ್ಲಿ ಒಂದು ಕಡೆ ಜಾತಿ ಸಂಘರ್ಷ, ಅನಕ್ಷರತೆ, ಬಡತನ, ಸಾಮಾಜಿಕ ಅಸಮಾನತೆ ಕಾಡುತ್ತಿದ್ದರೆ, ಇನ್ನೊಂದೆಡೆ ಸರಕಾರ ಮತ್ತು ಇಲ್ಲಿನ ಜನ ಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಹಿಂದುಳಿದ ವರ್ಗಗಳು ಸಂಘಟಿತರಾಗಿ ಸರಕಾರದ ಮೇಲೆ ಆಯೋಗಗಳ ಮೇಲೆ ಒತ್ತಡ ಹೇರುವಲ್ಲಿ ವಿಫಲವಾಗುತ್ತಿವೆ. ಇಂದಿಗೂ ಈ ಭಾಗದಲ್ಲಿ ಅನೇಕ ಹಿಂದುಳಿದ ವರ್ಗಗಳು ಸಂವಿಧಾನಾತ್ಮಕ

ಸೌಲಭ್ಯಗಳಿಂದ ವಂಚಿತರಾಗಿ ಹಿಂದುಳಿಯುತ್ತಾ ಸಾಗಿವೆ. ಇಂತಹ ಪ್ರದೇಶದಲ್ಲಿ, ಪ್ರಸ್ತುತ ಸನ್ನಿವೇಶದಲ್ಲಿ ಇಂತಹ ಜನಾಂಗಗಳ ಹಠಾತ್ ಬದಲಾವಣೆಯು ಸಾಧ್ಯವಿಲ್ಲ. ಹೀಗಾಗಿ ಹಿಂದುಳಿದ ವರ್ಗಗಳ ಚಳವಳಿ ಇನ್ನೂ ಒಂದು ಸ್ಪಷ್ಟ ರೂಪದಲ್ಲಿ ನಿರಂತರವಾಗಿ ನಡೆಯುತ್ತಿಲ್ಲ ಎಂದರು ತಪ್ಪಾಗಲಿಕ್ಕಿಲ್ಲ.

ಪ್ರಸ್ತುತ ಅಧ್ಯಾಯದಲ್ಲಿ, ಕರ್ನಾಟಕದ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಸಂಘಟಿತ ಕಲ್ಪನೆ, ಹೋರಾಟಗಳು, ಚಳವಳಿಯ ಆರಂಭ, ನೇಮಕವಾದ ಆಯೋಗಗಳು, ಆಯೋಗಗಳಿಗೆ ಪ್ರತಿಕ್ರಿಯೆಗಳು ಹಾಗೂ ಪ್ರಸ್ತುತ ಇಲ್ಲಿ ಹಿಂದುಳಿದ ವರ್ಗಕ್ಕೆ ಸೇರ್ಪಡೆ ಆಗದೇ ಸಂವಿಧಾನಾತ್ಮಕ ಸೌಲಭ್ಯಗಳಿಂದ ವಂಚಿತರಾಗಿರುವ ಜನಾಂಗಗಳು ಯಾವುವು ಮತ್ತು ಅವುಗಳ ಸಮಸ್ಯೆಗಳು, ಸ್ಥಿತಿಗತಿಗಳು ಏನು, ಪ್ರಸ್ತುತ ಜನಾಂಗಗಳ ಬೇಡಿಕೆಗಳು, ಹೋರಾಟಗಳು ಯಾವುವು ಎನ್ನುವ ಅಂಶಗಳಿಗೆ ಹೆಚ್ಚು ಗಮನಹರಿಸಿ ಮಾಹಿತಿಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ ಮಾಡಲಾಗಿದೆ.

ಹಿಂದುಳಿದ ವರ್ಗ ಎಂದರೆ ಯಾವುದು, ಇದರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಲಕ್ಷಣಗಳಾವುವು ಎನ್ನುವ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರ ಇಂದಿನವರೆಗೂ ನೀಡಲಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಹಿಂದುಳಿದ ವರ್ಗಗಳ ಕುರಿತಂತೆ ಮಾಡುವ ವ್ಯಾಖ್ಯಾನ ಗೊಂದಲಮಯವಾಗಿರುವುದು. ಹಾಗೆಯೇ ಹಿಂದುಳಿದ ವರ್ಗಗಳನ್ನು ಗುರುತಿಸುವ, ವ್ಯಾಖ್ಯಾನಿಸುವ ವಿಧಾನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದು. ಹಿಂದುಳಿದ ವರ್ಗ ಎನ್ನುವುದು ನಿರ್ದಿಷ್ಟಪಡಿಸಿದಂತಹ ಒಂದು ವರ್ಗವಲ್ಲ ಅದೊಂದು ಪರಿಕಲ್ಪನೆ. ಈ ಶಬ್ದವು ಭಾರತದ ಬೃಹತ್ ಜನಸಮುದಾಯಗಳನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ನೆಲೆಯಲ್ಲಿ ವಿಭಜಿಸಿ ಗುರುತಿಸುವಂತದ್ದಾಗಿದೆ. ಹಿಂದುಳಿದ ವರ್ಗಗಳೆಂದರೆ ಯಾವುದು, ಹಿಂದುಳಿದಿರುವಿಕೆಯನ್ನು ಗುರುತಿಸುವುದು ಹೇಗೆ ಎಂಬುದಕ್ಕೆ ಸಂವಿಧಾನಾತ್ಮಕ ಉತ್ತರ ದೊರೆಯುವುದಿಲ್ಲ. ಸಂವಿಧಾನವು ಹಿಂದುಳಿದ ವರ್ಗಗಳನ್ನು ನಿರ್ಧರಿಸಲು ಯಾವ ವಿಧಾನಗಳನ್ನು ಸೂಚಿಸುವುದಿಲ್ಲ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಯಾರು ಎಂಬುದನ್ನು ನಿರ್ದಿಷ್ಟಪಡಿಸುವುದಿಲ್ಲ, ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ಧರಿಸಬೇಕೆಂದು ಅದು ಸೂಚಿಸುತ್ತದೆ. ಹೀಗಾಗಿಯೇ ಡಾ. ಬಿ.ಆರ್. ಅಂಬೇಡ್ಕರ್ ಹಿಂದುಳಿದ ವರ್ಗಗಳೆಂದರೆ ಬೇರೆ ಯಾರು ಅಲ್ಲ, ಅವರೊಂದು ಅನೇಕ ಜಾತಿಗಳ ಸಮೂಹ ಎಂದೇ ಅಭಿಪ್ರಾಯ ಪಡುತ್ತಾರೆ.

೪.೩.೧. ಸ್ವಾತಂತ್ರ್ಯೋತ್ತರ ಹಿಂದುಳಿದ ವರ್ಗಗಳ ಚಳವಳಿಗಳು

೧೨ನೇ ಶತಮಾನದಲ್ಲಿ ವಚನಕಾರರಿಂದ ಪ್ರಾರಂಭವಾದ ಚಳವಳಿಯನ್ನು ಹಿಂದುಳಿದ ವರ್ಗದ ಮೊದಲ ಚಳವಳಿ ಎಂದು ಗುರುತಿಸಬಹುದಾಗಿದೆ. ಆ ಶತಮಾನದಲ್ಲಿ ಬ್ರಾಹ್ಮಣರು ಮತ್ತು ಕೆಲವು ಪಂಗಡಗಳು ಶೈಕ್ಷಣಿಕ, ಆರ್ಥಿಕ, ರಾಜಕೀಯ ಅಧಿಕಾರವನ್ನು ಹೊಂದಿ ಆಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮೊದಲನೇ ಸ್ಥಾನದಲ್ಲಿದ್ದರು. ಎಲ್ಲಾ ಸೌಲಭ್ಯಗಳಿಂದ ವಂಚಿತರಾದ, ನಿರ್ಲಕ್ಷಿತರಾದ ಮತ್ತೊಂದು ವರ್ಗದವರು ಅಸ್ಪೃಶ್ಯರೆಂದು ಕೊನೆಯ ಸ್ಥಾನದಲ್ಲಿದ್ದರು. ಬಸವಣ್ಣನು ಹಿಂದುಳಿದ ಎಲ್ಲಾ ಜಾತಿಗಳನ್ನು ಜನರನ್ನು ಒಂದುಗೂಡಿಸಿ ಏಕರೂಪದ ಸಮಾನತೆಯಿಂದ ಕೂಡಿದ ಸಮಾಜವನ್ನು ಸ್ಥಾಪಿಸಲು ಕ್ರಾಂತಿಕಾರಕ

ಹೋರಾಟವನ್ನೇ ಆರಂಭಿಸಿದ್ದನು. ಹೀಗಾಗಿ ಆ ಸಮಯದಲ್ಲಿ ಸೌಲಭ್ಯಗಳಿಂದ ವಂಚಿತರಾದವರನ್ನೆಲ್ಲಾ ಒಗ್ಗೂಡಿಸಿ, ಹಿಂದುಳಿದ ವರ್ಗಗಳ ಚಳವಳಿ ಎನ್ನುವ ಸ್ವರೂಪದಲ್ಲಿ ಶರಣರ ವಚನ ಕ್ರಾಂತಿ ಮೂಡಿಬಂದಿತ್ತು. ನಂತರ ಕಾಲ ಉರುಳಿದಂತೆ, ಸಾಮಾಜಿಕ ಬೆಳವಣಿಗೆ ಮತ್ತು ಅದರಿಂದಾದ ಬದಲಾವಣೆಯ ಪರಿಣಾಮದಿಂದಾಗಿ ವಚನಚಳವಳಿ ಕ್ರಮೇಣ ಬಲಹೀನವಾಗುತ್ತಾ ಹೋಗಿ ಮತ್ತೆ ಬ್ರಾಹ್ಮಣರ ಪ್ರಾಬಲ್ಯ ಮುಂದುವರಿದುದನ್ನು ಚರಿತ್ರೆ ತಿಳಿಸುತ್ತದೆ.

೧೯ನೇ ಶತಮಾನದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಬ್ರಿಟಿಷರ ಆಳ್ವಿಕೆಯ ಪರಿಣಾಮ ಕ್ರೈಸ್ತರ ಶಾಲಾ ಕಾಲೇಜುಗಳು ಸ್ಥಾಪನೆಯಾಗಿ, ಅವುಗಳಲ್ಲಿ ಬ್ರಾಹ್ಮಣೇತರರೂ ಶಿಕ್ಷಣದ ಸೌಲಭ್ಯ ಪಡೆದು ಅಧಿಕಾರದ ಸ್ಥಾನಗಳನ್ನು ಗಳಿಸಿದರಲ್ಲದೆ ಸಾಮಾಜಿಕ ಸಮಾನತೆಗಾಗಿ ಒತ್ತಾಯ ತಂದರು. ಬ್ರಿಟಿಷರು, ಕ್ರೈಸ್ತರು, ಬ್ರಾಹ್ಮಣ ಸಮಾಜದವರು, ಬ್ರಾಹ್ಮಣೇತರರ ಬೇಡಿಕೆಗಳನ್ನು ಬೆಂಬಲಿಸುವ ಮೂಲಕ ಮೈಸೂರು ಪ್ರಾಂತ್ಯದಲ್ಲಿ ಹಿಂದುಳಿದ ವರ್ಗಗಳ ಚಳವಳಿಯ ಆರಂಭಕ್ಕೆ ಕಾರಣವಾಯಿತು. ಜೊತೆಗೆ ಹಿಂದುಳಿದ ವರ್ಗಗಳು ಸರ್ಕಾರಿ ಸೇವೆಗಳಿಗೆ ನಿಗದಿಪಡಿಸಿದ ಅರ್ಹತೆಯನ್ನು ಸಡಿಲಿಸಬೇಕೆಂದೂ, ತಮಗೆ ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿ ಕೊಡಬೇಕೆಂದು ಒತ್ತಾಯಿಸತೊಡಗಿದರು. ಕೊನೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೀಸಲಾತಿಗೆ ಒಪ್ಪಿ ೧೯೧೬ರಲ್ಲಿ ಶೇ. ೨೫ರಷ್ಟು ಸ್ಥಾನಮಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲು ನೀಡಿದರು. ೧೯೧೭ರಲ್ಲಿ ಬೆಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ ಹಿಂದುಳಿದ ವರ್ಗಗಳ ಸಮಾವೇಶ ಜರುಗಿತು. ಅದೇ ವರ್ಷ ಎಂ. ಬಸವಯ್ಯ ಮತ್ತು ಎಚ್. ಚನ್ನಯ್ಯ ಅವರ ಪ್ರಯತ್ನದಿಂದಾಗಿ ಹಿಂದುಳಿದ ವರ್ಗಗಳ ರಾಜಕೀಯ ಪಕ್ಷವಾದ ಪ್ರಜಾಮಿತ್ರಾಮಂಡಳಿ ಸ್ಥಾಪನೆಯಾಯಿತು. ಬ್ರಾಹ್ಮಣೇತರ ಸಮುದಾಯಗಳ ಮುಖಂಡರು ೧೯೧೮ರಲ್ಲಿ ಮಹಾರಾಜರನ್ನು ಭೇಟಿ ಮಾಡಿ ನೌಕರಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಮಾನ ಅವಕಾಶ ಕಲ್ಪಿಸಿಕೊಡಬೇಕೆಂದು ಭಿನ್ನವಿಸಿ ಒತ್ತಾಯ ತಂದರು, ಇದರ ಪರಿಣಾಮವಾಗಿ ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶ ಮತ್ತು ವಿದ್ಯಾರ್ಥಿ ವೇತನಗಳು ಸಿಗುವಂತಾಯಿತು. ಹಾಗೆಯೇ ವಿದ್ಯಾರ್ಥಿ ನಿಲಯಗಳ ಸೌಲಭ್ಯಗಳು ದೊರೆತವು. ನಿಧಾನವಾಗಿ ಬ್ರಾಹ್ಮಣ, ಬ್ರಾಹ್ಮಣೇತರರ ನಡುವೆ ವಿರಸವುಂಟಾಗಿ ಅದು ಚಳವಳಿಯ ರೂಪ ಪಡೆಯಿತು. ಮುಂದೆ ಹಿಂದುಳಿದ ವರ್ಗಗಳ ಸ್ಥಿತಿಗತಿಯನ್ನು ಸಮೀಕ್ಷಿಸಲು ನ್ಯಾಯಮೂರ್ತಿ ಸರ್. ಲೆಸ್ಲಿಮಿಲ್ಲರ್ ಅಧ್ಯಕ್ಷತೆಯಲ್ಲಿ ಆರು ಜನ ಗಣ್ಯ ನಾಗರಿಕರನ್ನು ಒಳಗೊಂಡ ಮಿಲ್ಲರ್ ಸಮಿತಿ ೧೯೧೮ರಲ್ಲಿ ರಚನೆಯಾಯಿತು. ಇದು ಹಿಂದುಳಿದ ವರ್ಗಗಳ ಆಯೋಗಗಳಿಗೆ ಮುನ್ನುಡಿಯಾಯಿತು.[೪೪]

ಆದರೆ ಇದೇ ಸಮಯದಲ್ಲಿ ಮೈಸೂರು ಪ್ರಾಂತ್ಯಕ್ಕೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕದ ಸ್ಥಿತಿಗತಿ ಬೇರೆಯಾಗಿತ್ತು. ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ಗುಲಬರ್ಗಾ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಇಂತಹ ಚಳವಳಿಗೆ ಅವಕಾಶವೇ ಇರಲಿಲ್ಲ. ೧೯೪೭ ಆಗಸ್ಟ್ ೧೫ ರಂದು ಇಡೀ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಇಲ್ಲಿನ ಜನ ಮಾತ್ರ ನಿಜಾಮನ ಆಡಳಿತದಿಂದ ವಿಮೋಚನೆ

ಆಗಲು ನಿಜಾಮನ ವಿರುದ್ಧ ಹೋರಾಟಕ್ಕಿಳಿದಿದ್ದರು ಹೀಗಾಗಿ ಈ ಭಾಗದಲ್ಲಿ ಇಂತಹ ಚಳವಳಿಗಳು ಆರಂಭವಾಗಲು ಸಾಧ್ಯವೇ ಇರಲಿಲ್ಲ. ಒಂದೆರಡು ದಶಕಗಳ ನಂತರವೂ ಸಹ ಇಲ್ಲಿನವರು ತಾವು ಅನುಭವಿಸುತ್ತಿದ್ದಂತ ವಿಭಿನ್ನ ಸಮಸ್ಯೆಗಳಿಂದಾಗಿ ಹಾಗೂ ಕರ್ನಾಟಕದ ಇತರ ಪ್ರಾಂತ್ಯಗಳ ಜನರ ನಡುವಿನ ಸಂಪರ್ಕ ಕೊರತೆ, ಹೊಂದಾಣಿಕೆ ಸಮಸ್ಯೆ ಮತ್ತು ಹೈದರಾಬಾದ್ ಕರ್ನಾಟಕ ಪ್ರಾಂತ್ಯವನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಲು ಒಪ್ಪಿಕೊಳ್ಳದ ಜನರ ವಿರೋಧದಿಂದಾಗಿ ಇಲ್ಲಿನ ಹಿಂದುಳಿದ ವರ್ಗಗಳ ಕೂಗು ಯಾರಿಗೂ ಕೇಳಲೇ ಇಲ್ಲ. ಎಲ್ಲೋ ಒಂದು ಕಡೆ ಹಿಂದುಳಿದ ವರ್ಗಗಳ ಸಮಾವೇಶಗಳು ನಡೆದರೂ ಅವು ಪರಿಗಣನೆಗೆ ಬರಲೇ ಇಲ್ಲ. ಬಹಳ ಇತ್ತೀಚಿಗೆ ಅಂದರೆ ೮೦ ಮತ್ತು ೯೦ ರ ದಶಕದಲ್ಲಿ ಇಲ್ಲಿಯ ಕೆಲವು ಸಂಘಟನೆಗಳು, ನಾಯಕರುಗಳು, ವಿವಿಧ ಆಯೋಗಗಳ ವರದಿಗೆ ಪ್ರತಿಕ್ರಿಯೆ ನೀಡುತ್ತಾ, ತಮ್ಮ ಜನಾಂಗಗಳ ಪರವಾಗಿ ಹೋರಾಟ ಆರಂಭಿಸಿದರು. ಹೀಗಾಗಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಹಿಂದುಳಿದ ವರ್ಗಗಳಿಗೆ ಸೌಲಭ್ಯ ಒದಗಿಸಲು ನೇಮಕವಾದ ಆಯೋಗಗಳಾವುವು ಮತ್ತು ಅವುಗಳ ವರದಿಯ ಅಂಶಗಳೇನು ಹಾಗೂ ವರದಿಯಿಂದ ಹೈದರಾಬಾದ್ ಕರ್ನಾಟಕದ ಮೇಲಾದ ಪ್ರಭಾವ ಎಂತಹದು ಎನ್ನುವುದನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ಡಾ. ಆರ್. ನಾಗನಗೌಡ ಸಮಿತಿ - ೧೯೬೦

ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡಲು ಹಾಗೂ ಆ ವರ್ಗಗಳಿಗೆ ಸಂವಿಧಾನಾತ್ಮಕ ಮೀಸಲಾತಿ ಸೌಲಭ್ಯ ಒದಗಿಸಲು ಸರಕಾರದಿಂದ ನೇಮಕವಾದ ಆರಂಭದ ಆಯೋಗಗಳಲ್ಲಿ ಶ್ರೀ ನಾಗನಗೌಡ ಸಮಿತಿ ಪ್ರಮುಖವಾದುದಾಗಿದೆ. ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ೧೯೬೦ ಜನವರಿ ತಿಂಗಳಲ್ಲಿ ಶ್ರೀ ಡಾ. ಆರ್. ನಾಗನಗೌಡ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿದರು. ಇದನ್ನು 'ಮೈಸೂರು ಹಿಂದುಳಿದ ವರ್ಗಗಳ ಸಮಿತಿ' ಎಂದು ಕರೆಯಲಾಯಿತು. ಸಮಿತಿಗೆ ಹಿಂದುಳಿದ ವರ್ಗದ ಬಗ್ಗೆ ಸರಕಾರವು ಪಾಲಿಸಬೇಕಾದ ಮಾರ್ಗದರ್ಶನ ಸೂತ್ರಗಳು ಹಾಗೂ ಸಲಹೆ ಸೂಚನೆಗಳನ್ನು ಕೊಡುವ ಕಾರ್ಯವನ್ನು ವಹಿಸಲಾಯಿತು. ಅಲ್ಲದೆ ಸಮಿತಿಯ ಕಾರ್ಯವ್ಯಾಪ್ತಿ ಏನಾಗಿತ್ತೆಂದರೆ ಸರಕಾರವು ರಾಜ್ಯದ ಜನತೆಯ ಯಾವ ವರ್ಗ ಮತ್ತು ಜಾತಿ ಪಂಗಡದವರನ್ನು ಹಿಂದುಳಿದವರು ಎಂಬುದಾಗಿ ಪರಿಗಣಿಸಬೇಕು, ಹೀಗೆ ಪರಿಗಣಿಸಲು ಯಾವ ಮಾನದಂಡವನ್ನು ಅನುಸರಿಸಬೇಕು ಎಂಬುದನ್ನು ಸೂಚಿಸಬೇಕಿತ್ತು ಹಾಗೂ ಇಂತಹ ವರ್ಗದವರಿಗೆ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶವನ್ನು ಹಾಗೂ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯ ಧೋರಣೆ ಮತ್ತು ನಿಯಂತ್ರಿಸುವ ರೀತಿಯನ್ನು ಯಾವ ರೀತಿ ಮಾಡಬೇಕೆಂದು ಸರ್ಕಾರಕ್ಕೆ ಸೂಚಿಸಬೇಕೆಂದು ಸಮಿತಿಗೆ ತಿಳಿಸಲಾಯಿತು.

ಸಮಿತಿಯು ೧೯೬೦ರ ಫೆಬ್ರುವರಿ ತಿಂಗಳಲ್ಲಿ ತನ್ನ ಹಂಗಾಮಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆ ವರದಿಯ ಪ್ರಕಾರ ಜಾತಿಗಳ, ಸಮುದಾಯಗಳ ಆಧಾರದ ಮೇಲೆ ಒಂದು ಸಮುದಾಯದ ಸಾಕ್ಷರತಾ ಪ್ರಮಾಣ ಮಟ್ಟ ಮತ್ತು ಸರ್ಕಾರಿ ಸೇವೆಯಲ್ಲಿ ಅದರ ಪ್ರಾತಿನಿಧ್ಯದ ಶೇಕಡವಾರು ಪ್ರಮಾಣದ ಅವಲಂಬನದ ಮೇಲೆ ಹಿಂದುಳಿದಿರುವಿಕೆಯನ್ನು ನಿರ್ಧರಿಸಬೇಕು ಎಂಬುದಾಗಿ ತೀರ್ಮಾನಿಸಬೇಕಾಗುತ್ತದೆ ಎಂಬುದಾಗಿ

ನಿರ್ದೇಶನ ನೀಡಿತ್ತು. ಹಿಂದುಳಿದ ವರ್ಗಗಳ ಶೇ. ೩೫.೩೫ರಷ್ಟರ ಜನಸಂಖ್ಯೆಯ ಪ್ರಮಾಣದ ಅನ್ವಯ ಇತರ ಹಿಂದುಳಿದ ವರ್ಗಗಳೆಂಬುದಾಗಿ ತಾನು ಪಟ್ಟಿ ಮಾಡಿರುವ ಜಾತಿಗಳಿಗೆ ಸಮಿತಿ ಶೇ. ೩೬ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು. ಆ ಆಯೋಗವು ೧೯೬೧ರಲ್ಲಿ ತಾನು ಸಲ್ಲಿಸಿದ ತನ್ನ ಅಂತಿಮ ವರದಿಯಲ್ಲಿ ೧೫(೪)ರ ಅನುಚ್ಛೇದದಡಿಯಲ್ಲಿ ೨೧೪ ಜಾತಿಗಳನ್ನು ಮತ್ತು ೧೬(೪)ರ ಅನುಚ್ಛೇದದನ್ವಯ ೧೮೫ ಜಾತಿಗಳನ್ನು ಪಟ್ಟಿ ಮಾಡಿ, ಸಮುದಾಯಗಳನ್ನು ೧೫(೪)ರ ಅನುಚ್ಛೇದಕ್ಕಾಗಿ ಶೇ. ೫೭ರಷ್ಟು ಹಿಂದುಳಿದಿರುವ ಸಮುದಾಯ ಮತ್ತು ೧೬(೪) ಅನುಚ್ಛೇದದನ್ವಯ ಶೇ. ೪೭ರಷ್ಟು ಹಿಂದುಳಿದಿರುವ ಸಮುದಾಯ ಎಂಬುದಾಗಿ ವಿಭಾಗಿಸಿ ಹಿಂದುಳಿದ ಹಾಗೂ ಹೆಚ್ಚು ಹಿಂದುಳಿದ ಸಮುದಾಯಗಳಿಗೆ ಕ್ರಮವಾಗಿ ಔದ್ಯೋಗಿಕ ಸಂಸ್ಥೆಗಳಲ್ಲಿ ೧೫(೪) ಅನುಚ್ಛೇದದ ಅನ್ವಯ ಶೇ. ೨೮ ಮತ್ತು ೨೨ರಷ್ಟು ಸ್ಥಾನಗಳನ್ನು ಮತ್ತು ಸರ್ಕಾರಿ ಹುದ್ದೆಗಳಲ್ಲಿ ಶೇ. ೨೧ ಮತ್ತು ೨೪ರಷ್ಟನ್ನು ಮೀಸಲಿಡಬೇಕು ಎಂಬುದಾಗಿ ಶಿಫಾರಸ್ಸು ಮಾಡಿ ಹಿಂದುಳಿದಿದ್ದವರ ಪಟ್ಟಿಗೆ ಸೇರಿಸಿತು. ನಾಗನಗೌಡ ಸಮಿತಿಯ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಒಪ್ಪಿ ಸೂಕ್ತ ಆಜ್ಞೆಯ ಮೂಲಕ ೧೯೬೨ರಲ್ಲಿ ಅವುಗಳನ್ನು ಜಾರಿಗೆ ತಂದಿತು. ಆದರೆ ಸರ್ವೋಚ್ಛ ನ್ಯಾಯಾಲಯವು ಹಿಂದುಳಿದಿರುವಿಕೆಯನ್ನು ನಿರ್ಧರಿಸುವಲ್ಲಿ ಕೇವಲ ಜಾತಿಯೊಂದನ್ನೇ ಮಾನದಂಡವನ್ನಾಗಿ ಬಳಸಿರುವ ಕಾರಣ, ಶಿಪಾರಸ್ಸು ಮಾಡಲಾದ ಮೀಸಲಾತಿ ಪ್ರಮಾಣ ಹೆಚ್ಚಿರುವುದಾಗಿ ಅಭಿಪ್ರಾಯಪಟ್ಟು ಸರ್ಕಾರಿ ಆಜ್ಞೆಯನ್ನು ರದ್ದು ಪಡಿಸಿತು ಮತ್ತು ವಿಶೇಷ ಸವಲತ್ತು ಶೇ. ೫೦ಕ್ಕಿಂತ ಕಡಿಮೆ ಇರಬೇಕು ಎಂಬುದಾಗಿ ಆದೇಶಿಸಿತು.[೪೫]

ಶ್ರೀ ಎಲ್.ಜಿ. ಹಾವನೂರು ಆಯೋಗ - ೧೯೭೨

೧೯೬೨ರಲ್ಲಿ ನಾಗನಗೌಡ ಸಮಿತಿ ವರದಿಯಂತೆ ಜಾರಿಗೆ ಬಂದ ಮೀಸಲಾತಿ ಕಾನೂನನ್ನು ಶ್ರೇಷ್ಠ ನ್ಯಾಯಾಲಯ ೧೯೬೩ರಲ್ಲಿ ಅನೂರ್ಜಿತಗೊಳಿಸಿತು ಹಾಗೂ ೧೯೬೩ರಲ್ಲಿ ಹೊರಡಿಸಿದ ಸರ್ಕಾರಿ ಆಜ್ಞೆಯೂ ಕರ್ನಾಟಕದ ಉಚ್ಛ ನ್ಯಾಯಾಲಯದಲ್ಲಿ ನಿಲ್ಲಲಿಲ್ಲ. ಇದರ ಜೊತೆಗೆ ಇಲ್ಲಿಯವರೆಗೆ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಮಾನದಂಡವಾಗಿದ್ದ ಉದ್ಯೋಗ ಮತ್ತು ವರಮಾನದ ಆಧಾರಿತ ಪ್ರಮಾಣದಿಂದಾಗಿ ಅನೇಕರು ಅತೃಪ್ತರಾಗಿದ್ದರು. ಅಲ್ಲದೇ, ಅಸಮಾಧಾನಗೊಂಡಿದ್ದ ವರ್ಗದವರು ಪದೇ ಪದೇ ಸರಕಾರಕ್ಕೆ ಬೇಡಿಕೆ ಮಂಡಿಸುತ್ತಿದ್ದರು. ನಂತರ ೧೯೬೯ರಲ್ಲಿ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಲಿಂಗಾಯಿತರೇತರ ಹಾಗೂ ಒಕ್ಕಲಿಗರೇತರ ವರ್ಗಕ್ಕೆ ಸೇರಿದ ಶ್ರೀ ಡಿ. ದೇವರಾಜ ಅರಸ್ ಅವರು ರಾಜ್ಯದ ಮುಖ್ಯಮಂತ್ರಿಯಾದರು. ಇವರು ತಮ್ಮ ಆಡಳಿತ ಅವಧಿ ಉದ್ದಕ್ಕೂ ಹಿಂದುಳಿದ ವರ್ಗಗಳ ವಿಶ್ವಾಸವನ್ನು ಗಳಿಸಿಕೊಳ್ಳಲು ಪ್ರಯತ್ನಿಸಿದರು. ಪರಿಣಾಮವಾಗಿ ಸರ್ಕಾರವು ೧೯೭೨ರಲ್ಲಿ ಪ್ರಸಿದ್ಧ ನ್ಯಾಯವಾದಿ ಎಲ್.ಜಿ. ಹಾವನೂರ ಅವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಹಿಂದುಳಿದ ವರ್ಗದ ಆಯೋಗ'ವನ್ನು ರಚಿಸಿತು (ರಾಜ್ಯದ ಪ್ರಥಮ ಹಿಂದುಳಿದ ವರ್ಗಗಳ ಆಯೋಗ). ವಿವಿಧ ಜನಾಂಗಗಳ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡವನ್ನು ಸೂಚಿಸಬೇಕೆಂಬ ಮನವಿಯನ್ನು ಸರ್ಕಾರ ಆಯೋಗದ ಮುಂದಿಟ್ಟಿತು. ಹಾವನೂರ ಆಯೋಗ ಸುದೀರ್ಘ ಅಧ್ಯಯನ ನಡೆಸಿ ಅನೇಕ ಸಂಪುಟಗಳ ಭಾರಿ ಗಾತ್ರದ ವರದಿಯನ್ನು ಸಿದ್ಧಪಡಿಸಿ ೧೯೭೫ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು.

ಆಯೋಗವು ಒಂದು ಸಮುದಾಯ ಅಥವಾ ಜಾತಿಯ ಜನಸಂಖ್ಯೆಯಲ್ಲಿ ಸಾವಿರಕ್ಕೆ ೧೯೭೨ರ ಏಪ್ರಿಲ್ ತಿಂಗಳ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ವಿದ್ಯಾರ್ಥಿಗಳ ಶೇಕಡ ಪ್ರಮಾಣವು ರಾಜ್ಯದ ಜನಸಂಖ್ಯೆಯಲ್ಲಿ ಸಾವಿರಕ್ಕೆ ರಾಜ್ಯದ ಉತ್ತೀರ್ಣರಾದವರ ಶೇ. ೧.೬೯ರ ಪ್ರಮಾಣಕ್ಕಿಂತ ಕಡಿಮೆ ಇದ್ದಾಗ ಅಂತಹ ಸಮುದಾಯ ಅಥವಾ ಜಾತಿಯನ್ನು ಶೈಕ್ಷಣಿಕವಾಗಿ ಹಿಂದುಳಿದಿರುವ ವಿಭಾಗ ಎಂಬುದಾಗಿ ಭಾವಿಸಿ ಅನೇಕ ರೀತಿಯ ಸೂಕ್ತ ಪರಿಶೀಲನೆಗೊಳಪಡಿಸಿ, ಸಂಬಂಧಪಟ್ಟ ಸಮುದಾಯಗಳ ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ತೀರ್ಮಾನ ಕೈಗೊಂಡಿತು. ಹಾವನೂರ ಆಯೋಗವು ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿತು. ಅವುಗಳೆಂದರೆ ಹಿಂದುಳಿದ ಸಮುದಾಯಗಳು, ಹಿಂದುಳಿದ ಜಾತಿಗಳು, ಹಿಂದುಳಿದ ಬುಡಕಟ್ಟುಗಳು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. ೧೪ರಷ್ಟು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಜೊತೆಗೆ ಶೇ. ೪೪.೫೨ರಷ್ಟು ಜನಸಂಖ್ಯೆಯನ್ನು ಇತರ ಹಿಂದುಳಿದ ವರ್ಗಗಳೆಂದು ಆಯೋಗ ನಿರ್ಧರಿಸಿತು. ಆಯೋಗದ ಕೆಲವು ಮುಖ್ಯ ಶಿಫಾರಸ್ಸುಗಳೆಂದರೆ, ಭಾರತೀಯ ಸಂವಿಧಾನದ ವಿಧಿ ೧೫(೪) ಹಾಗೂ ೧೬(೪)ರ ಪ್ರಕಾರ, ಜಾತಿಗಳನ್ನು, ಸಮುದಾಯಗಳನ್ನು, ಬುಡಕಟ್ಟುಗಳನ್ನು ಹಿಂದುಳಿದ ಪಂಗಡಗಳೆಂದು ಪರಿಗಣಿಸಬೇಕು, ಅವುಗಳಿಗೆ ವಿದ್ಯಾಸಂಸ್ಥೆಗಳಲ್ಲಿ ಹಾಗೂ ಸರ್ಕಾರಿ ಹುದ್ದೆಗಳಲ್ಲಿ ಶೇ. ೩೨ರಷ್ಟು ಮೀಸಲಾತಿ ದೊರಕಿಸಬೇಕು, ಮೀಸಲಾತಿಯನ್ನು ಆಯ್ಕೆ ಹಾಗೂ ಬಡ್ತಿಗೂ ಅನ್ವಯಿಸಬೇಕು. ಹೀಗೆ ಇನ್ನು ಮುಂತಾದ ಶಿಫಾರಸ್ಸುಗಳನ್ನು ಸರ್ಕಾರ ಮಾನ್ಯ ಮಾಡಿತು.[೪೬] ಹೀಗೆ ದೇವರಾಜ ಅರಸು ಅವರ ಆಡಳಿತ ಅವಧಿಯಲ್ಲಿ ಹಿಂದುಳಿದ ವರ್ಗಗಳ ಸಂಘಟನೆ ರಾಜಕೀಯವಾಗಿಯೂ ಬಹಳ ಪ್ರಬಲವಾಗಿ ಬೆಳೆಯಿತು. ಮುಂದೆ ವರದಿಯ ವೈಜ್ಞಾನಿಕತೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ೧೯೮೧ರಲ್ಲಿ ವಸಂತಕುಮಾರ್ ಎದುರು ಕರ್ನಾಟಕ ಸರ್ಕಾರ ದಾವೆಯಲ್ಲಿ, ಸರ್ವೋಚ್ಛ ನ್ಯಾಯಾಲಯವು ಹುದ್ದೆ ಅಥವಾ ಸ್ಥಾನಗಳ ಮೀಸಲಾತಿಯ ಸಮಗ್ರ ವಿಷಯವನ್ನು ಪುನಃ ನಿರ್ಧರಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ಸರಕಾರಕ್ಕೆ ಆದೇಶಿಸಿತು. ಇದರಿಂದಾಗಿ ಸರಕಾರಕ್ಕೆ ಹೊಸ ಆಯೋಗವನ್ನು ನೇಮಿಸುವ ಅನಿವಾರ್ಯತೆ ಎದುರಾಗಿ, ಶ್ರೀ ಟಿ. ವೆಂಕಟಸ್ವಾಮಿ ಆಯೋಗವನ್ನು ನೇಮಿಸಲು ಕಾರಣವಾಯಿತು.

ಶ್ರೀ ಟಿ. ವೆಂಕಟಸ್ವಾಮಿ ಆಯೋಗ - ೧೯೮೩

೧೯೮೦ರಲ್ಲಿ ಮತ್ತು ೧೯೮೧ರಲ್ಲಿ ಹಾವನೂರು ವರದಿಯ ವೈಜ್ಞಾನಿಕತೆಯನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಕೆ.ಸಿ. ವಸಂತಕುಮಾರ್ ಎದುರು ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿ ಕರ್ನಾಟಕ ರಾಜ್ಯ ಸರಕಾರವು ಹಾವನೂರು ವರದಿಯಲ್ಲಿನ ಲೋಪ ದೋಷಗಳನ್ನು ಸರಿಪಡಿಸುವ ಮತ್ತು ವೈಜ್ಞಾನಿಕ ಆಧಾರದ ಮೇಲೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ತಯಾರಿಸುವ ಉದ್ದೇಶದಿಂದ ಬೇರೊಂದು ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸುವ ನಿರ್ಧಾರವನ್ನು ಸರ್ವೋಚ್ಛ ನ್ಯಾಯಾಲಯಕ್ಕೆ ತಿಳಿಸಿತು. ಅದರಂತೆ ೧೮ ಏಪ್ರಿಲ್ ೧೯೮೩ರಂದು ಶ್ರೀ ಟಿ. ವೆಂಕಟಸ್ವಾಮಿಯವರ ನೇತೃತ್ವದಲ್ಲಿ ದ್ವಿತೀಯ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲಾಯಿತು. ಅದು ಮುಂದೆ ವೆಂಕಟಸ್ವಾಮಿ ಆಯೋಗವೆಂದೇ

ಮತ್ತು ಆ ದರ್ಜೆಗಳಷ್ಟೇ ಸಂಬಳ ಪಡೆಯುವ ಖಾಸಗಿ ವಲಯದ ಅಧಿಕಾರಿಗಳ ಮಕ್ಕಳು ಹಾಗೂ ತಂದೆ ತಾಯಿಗಳಿಬ್ಬರು ಪದವೀಧರರಾಗಿರುವ ಆದಾಯ ತೆರಿಗೆಯನ್ನು ಕೊಡುತ್ತಿರುವ, ೮ ಹೆಕ್ಟೇರ್‌ಗಿಂತ ಜಾಸ್ತಿ ಜಮೀನು ಹೊಂದಿರುವವರ ಮಕ್ಕಳು ಹಿಂದುಳಿದ ವರ್ಗಗಳಲ್ಲಿ ಸೇರಲು ಬರುವುದಿಲ್ಲ ಎಂದು ತಿಳಿಸಿತು.

ವರದಿಯಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರನ್ನು ಮುಂದುವರೆದ ಗುಂಪಿಗೆ ಸೇರಿಸಿದ್ದು ಮತ್ತು ಹಿಂದುಳಿದ ವರ್ಗಗಳಲ್ಲಿ ಆರ್ಥಿಕವಾಗಿ ಮುಂದುವರೆದವರಿಗೆ ಮೀಸಲಾತಿಯ ಸೌಲಭ್ಯ ನೀಡಬಾರದು ಎನ್ನುವ ಚಿನ್ನಪ್ಪರೆಡ್ಡಿ ವರದಿಯ ಶಿಫಾರಸ್ಸುಗಳು ಬಹಳ ವಿವಾದಕ್ಕೆ ಒಳಗಾದವು, ವರದಿಯ ವಿರುದ್ಧ ಪ್ರತಿಭಟನೆಯೂ ನಡೆಯಿತು. ಆಗ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಹಾಗೂ ನಂತರ ಬಂದ ಮುಖ್ಯಮಂತ್ರಿ ಬಂಗಾರಪ್ಪನವರೂ ವರದಿಯ ಅನುಷ್ಠಾನವನ್ನು ಮುಂದೂಡುತ್ತಾ ಬಂದರು. ನಂತರ ವೀರಪ್ಪಮೊಯಿಲಿ ಅವರ ಸರ್ಕಾರ ಪ್ರಬಲ ಕೋಮುಗಳ ಒತ್ತಾಯಕ್ಕೆ ಮಣಿದು ಸುಮಾರು ಶೇ. ೭೦ರಷ್ಟು ಮೀಸಲಾತಿಯನ್ನು ಕೊಡುವ ಸರ್ಕಾರದ ಹೊಸ ನೀತಿಯನ್ನು ಪ್ರಕಟಗೊಳಿಸಿತು. ಆದರೆ ಇಂತಹ ಸಮಯಕ್ಕಾಗಲೇ ಭಾರತದ ಸರ್ವೋಚ್ಛ ನ್ಯಾಯಾಲಯವು ಮೀಸಲಾತಿಯ ಪ್ರಮಾಣವು ಶೇ. ೫೦ಕ್ಕೆ ಹೆಚ್ಚಿರಬಾರದೆಂದು ತೀರ್ಪು ಕೊಟ್ಟಿದ್ದರಿಂದ ಅದಕ್ಕನುಗುಣವಾಗಿ ಸರ್ಕಾರವು ಮೀಸಲಾತಿ ನೀತಿಯನ್ನು ಶೇ. ೫೦ ರ ಮಿತಿಗೆ ತಂದು ಜಾರಿಗೊಳಿಸಲಾಯಿತು. ಆದರೆ ಇಂದಿಗೂ ಕೆಲವು ವರ್ಗಗಳು ಮೀಸಲಾತಿಗಾಗಿ, ಹಿಂದುಳಿದ ವರ್ಗಗಳಲ್ಲಿ ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಹೋರಾಟವನ್ನು, ಒತ್ತಡ ತಂತ್ರವನ್ನು ಅನುಸರಿಸುತ್ತಿರುವುದನ್ನು ಕಾಣಬಹುದು.

ಆಯೋಗಗಳ ವರದಿಗೆ ಪ್ರತಿಕ್ರಿಯೆಗಳು

ಹೈದರಾಬಾದ್ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಹೋರಾಟವನ್ನು ಮತ್ತು ವಿವಿಧ ಆಯೋಗಗಳ ವರದಿಗಳಿಗೆ ಬಂದ ಪ್ರತಿಕ್ರಿಯೆಯನ್ನು ನೋಡಿದಾಗ ಈ ಭಾಗದಲ್ಲಿ ತೀವ್ರವಾದ ಪ್ರತಿಕ್ರಿಯೆ ಮತ್ತು ಹೋರಾಟ ಕಂಡು ಬಂದಿಲ್ಲ. ಹೈದರಾಬಾದ್ ಕರ್ನಾಟಕದ ಕೆಲವೊಂದು ಭಾಗಗಳಲ್ಲಿ ಮುಂಬಯಿ ಕರ್ನಾಟಕದ ಹೋರಾಟಗಳಿಂದ ಪ್ರಭಾವಿತರಾಗಿ, ಇಲ್ಲಿಯೂ ಸರ್ಕಾರದ ಮುಂದೆ ಬೇಡಿಕೆಗಳನ್ನಿಟ್ಟಿರುವುದನ್ನು ಗಮನಿಸಬಹುದು. ಉದಾಹರಣೆ ಸಿದ್ದಪ್ಪ ಕಂಬಳಿ ಅವರ ಪ್ರಭಾವದಿಂದ ೧೯೫೩ರಲ್ಲಿ ಕೊಪ್ಪಳ ಜಿಲ್ಲೆಯ ಬಿಸರಳ್ಳಿಯಲ್ಲಿ ಮೊದಲ ಬಾರಿಗೆ ಹಿಂದುಳಿದ ವರ್ಗಗಳ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಶ್ರೀನಿವಾಸ ಹಕ್ಕಿಹಳ್ಳಿಕಾರ ಎನ್ನುವವರು ಇದರ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಬೆಟಗೇರಿ ಎನ್ನುವವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಸಮ್ಮೇಳನದಲ್ಲಿ ಎಲ್ಲಾ ಹಿಂದುಳಿದ ವರ್ಗಗಳು ಒಂದಾಗಬೇಕೆಂದು, ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಸೌಲಭ್ಯಗಳು ಸಿಗಬೇಕೆಂದು, ಅದರಲ್ಲೂ ನೇಕಾರರು, ತಳವಾರರು, ಕುರುಬರು, ಗೊಲ್ಲರು ಮೊದಲಾದ ವರ್ಗಗಳಿಗೆ ಹೆಚ್ಚಿನ ಸೌಲಭ್ಯ ದೊರಕಿಸಿಕೊಡಲು ಹೋರಾಟಗಳನ್ನು ಹಮ್ಮಿಕೊಳ್ಳಬೇಕು ಎನ್ನುವ ಚರ್ಚೆ ಆಯಿತು.

ನಂತರ ೧೯೫೪ರಲ್ಲಿ ಬೀದರ್‌ನಲ್ಲಿ ಮಾಣಿಕ್‌ರಾವ್ ಪುಲೇಕರ್ ಎನ್ನುವವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಸಮ್ಮೇಳನವನ್ನು ಆಯೋಜಿಸಿ, ಹಿಂದುಳಿದ ವರ್ಗಗಳಿಗೆ ಸರಕಾರದಿಂದ ದೊರೆಯ ಬಹುದಾದ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಚರ್ಚೆ ನಡೆಯಿತು. ಕ್ರಮೇಣ ಹಿಂದುಳಿದ ವರ್ಗಗಳ

ಆಯೋಗಗಳು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸರಕಾರದ ಮೇಲೆ ಒತ್ತಡ ಹೇರಲು ಜಾತಿ ಆಧಾರಿತ ಸಂಘಟನೆಗಳನ್ನು ಆರಂಭಿಸಿದವು. ಪರಿಣಾಮವಾಗಿ ಕುರುಬರ ಸಂಘ, ಮಡಿವಾಳರ ಸಂಘ, ನಾಯಕರ ಸಂಘ ನೇವಾರರ ಸಂಘ ಮುಂತಾದ ಸಂಘಗಳು ಸ್ಥಾಪನೆಯಾದವು. ಸಂಘಗಳು ತಮ್ಮ ಸಮಾವೇಶಗಳ ಮೂಲಕ ತಮ್ಮ ಜನಾಂಗಕ್ಕೆ ಸಿಗಬೇಕಾದ ಸೌಲಭ್ಯಗಳ ಈಡೇರಿಕೆಗಾಗಿ ಸರಕಾರದ ಮೇಲೆ ಒತ್ತಡ ತಂತ್ರ ಅನುಸರಿಸಲು ಆರಂಭಿಸಿದವು. ಹೀಗಾಗಿ ಕೂಡಿ ಹೋಗಬೇಕಾದ, ಕೂಡಿ ಸ್ಪಷ್ಟ ಗುರಿ ಸಾಧನೆಗಾಗಿ ಹೋರಾಟ ಮಾಡಬೇಕಾದ ಹಿಂದುಳಿದ ವರ್ಗಗಳು ಪ್ರತ್ಯೇಕವಾಗಿ, ಸ್ವಹಿತಾಸಕ್ತಿಯಿಂದ ತಮ್ಮ ತಮ್ಮ ಜನಾಂಗಗಳ ಏಳಿಗೆಗಾಗಿ ಸ್ವಾರ್ಥ ದೃಷ್ಟಿಯಿಂದ ಹೋರಾಟಕ್ಕಿಳಿದರು. ಇಂದು ಇದು ಯಾವ ಮಟ್ಟಕ್ಕೆ ತಲುಪಿದೆ ಎಂದರೆ ಆಯಾ ಪ್ರದೇಶದ ಬಹುಸಂಖ್ಯಾತ ಜಾತಿಯವರೆ ಆ ಪ್ರದೇಶದ ರಾಜಕೀಯ ಅಧಿಕಾರವನ್ನು ಹಿಡಿಯುವ ಮಟ್ಟಕ್ಕೆ ಬೆಳೆದಿದೆ. ಹೀಗಾಗಿ ಹಿಂದುಳಿದ ವರ್ಗಗಳ ಹೋರಾಟ ಒಂದು ಚಳವಳಿಯಾಗಿ ರೂಪುಗೊಳ್ಳುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು.[೪೮]

ಹೈದರಾಬಾದ್ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಯೋಗಗಳ ವರದಿಗೆ ಪ್ರತಿಕ್ರಿಯೆಯನ್ನು ನೋಡಿದಾಗ, ಆ ಆಯೋಗಗಳ ವರದಿ ಇಲ್ಲಿನ ಹಿಂದುಳಿದ ವರ್ಗ ಮತ್ತು ದಲಿತ ಜನಾಂಗದಲ್ಲಿ ಗೊಂದಲವನ್ನೇ ಸೃಷ್ಟಿಸಿತು. ಶ್ರೀ ಮಲ್ಲಿಕಾರ್ಜುನ ಖರ್ಗೆ ಮುಂತಾದ ನಾಯಕರು ಹಾವನೂರು ಆಯೋಗದ ವರದಿಯನ್ನೇ ಸುಟ್ಟು ಹಾಕಿ ಪ್ರತಿಭಟಿಸಿದರು. ನಂತರ ಬಂದ ಮಂಡಲ್ ಆಯೋಗದ ವರದಿಯ ಬಗ್ಗೆಯೂ ಗೊಂದಲವುಂಟಾಗಿ ಇಲ್ಲಿನ ಹಿಂದುಳಿದವರು, ವರದಿಯು ಹಿಂದುಳಿದವರ ಮತ್ತು ದಲಿತರ ವಿರುದ್ಧವಾಗಿದೆ ಎಂದು ಈ ವರ್ಗದವರ ಮೀಸಲಾತಿಯನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ ಎಂದು ಭಾವಿಸಿ ವರದಿ ವಿರುದ್ಧ ದೊಡ್ಡ ಪ್ರತಿಭಟನೆಯನ್ನೇ ಕೈಗೊಂಡಿದ್ದರು. ಉದಾಹರಣೆಗೆ, ೧೯೯೦ರಲ್ಲಿ ಹೈದರಾಬಾದ್ ಕರ್ನಾಟಕವನ್ನೊಳಗೊಂಡಂತೆ ಕರ್ನಾಟಕದಾದ್ಯಂತ ಹಿಂದುಳಿದ ವರ್ಗಗಳ ಹಿತದೃಷ್ಟಿಯಿಂದ ಚಿನ್ನಪ್ಪರೆಡ್ಡಿ ಆಯೋಗದ ಜಾರಿ ವಿರುದ್ಧ ಪ್ರತಿಭಟನೆ ನಡೆಯಿತು, ಅನೇಕ ದಲಿತ, ಹಿಂದುಳಿದ, ಪ್ರಮುಖ ನಾಯಕರು ಹೋರಾಟದಲ್ಲಿ ಪಾಲ್ಗೊಂಡರು. ಇದೇ ಸಮಯದಲ್ಲಿ ಹೈದರಾಬಾದ್ ಕರ್ನಾಟಕದಾದ್ಯಂತ ಮಂಡಲ ವಿರೋಧಿ ಹೋರಾಟವು ಪ್ರಾರಂಭವಾಗಿತ್ತು.

ಮಂಡಲ ಆಯೋಗದ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ - ೧೯೯೩

೧೯೯೩ರಲ್ಲಿ ಮಂಡಲ ಆಯೋಗದ ವರದಿಯಲ್ಲಿರುವ ಅಂಶಗಳನ್ನು ದಲಿತ ನಾಯಕರು, ಹಿಂದುಳಿದವರು ಮತ್ತು ಬುದ್ಧಿ ಜೀವಿಗಳಿಗೆ ತಿಳಿಸಲು ಮತ್ತು ವಿವರಿಸಲು ರಾಜ್ಯಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ನಾಯಕಾರದ ಚಿನ್ನಪ್ಪರೆಡ್ಡಿ, ಎಲ್.ಬಿ. ಹಾವನೂರು, ಪ್ರೊ. ರವಿಕುಮಾರ್ ಮುಂತಾದವರು ಭಾಗವಹಿಸಿ ಮಂಡಲ ವರದಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವಿವರಿಸಿ ಹೇಳಿದರು. ಕಾರ್ಯಾಗಾರದ ಮೂಲಕ ದಲಿತರು ಮತ್ತು ಹಿಂದುಳಿದವರಿಗೆ ಆಯೋಗದ ವರದಿಯ ಅಂಶಗಳನ್ನು ತಿಳಿಸಲಾಯಿತು.[೪೯] ನಂತರ ಆರ್.ಕೆ. ಹುಡಗಿ ನೇತೃತ್ವದಲ್ಲಿ ಆಯೋಗಗಳ ವರದಿಯನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿ ಸುಮಾರು ೫೦೦೦ ಪ್ರತಿಗಳನ್ನು ಮುದ್ರಿಸಿ, ಪ್ರಮುಖ ನಾಯಕರಿಗೆ ಹಂಚುವ ಮೂಲಕ ಹಿಂದುಳಿದ ವರ್ಗಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯವು ನಡೆಯಿತು.

ಹಿಂದುಳಿದ ವರ್ಗಗಳ ಆಯೋಗಗಳು ಹೈದರಾಬಾದ್ ಕರ್ನಾಟಕ ಭಾಗದ ಹಿಂದುಳಿದ ವರ್ಗಗಳ ಜನರಲ್ಲಿ ರಾಜಕೀಯ ಮಹತ್ವಾಕಾಂಕ್ಷೆಯನ್ನು ಮೂಡಿಸುವಲ್ಲಿ ಮಾತ್ರ ಸಫಲವಾಗಿದೆ ಎಂದು ಎನಿಸಿದರೂ ಈ ವರ್ಗದವರಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸುವಲ್ಲಿ ವಿಫಲವಾಯಿತು ಎನ್ನುವ ಅಭಿಪ್ರಾಯವನ್ನು ಪ್ರೊ. ಆರ್.ಕೆ. ಹುಡಗಿ, ಅಧ್ಯಕ್ಷರು ಸಮುದಾಯ ವೇದಿಕೆ, ಗುಲಬರ್ಗಾ, ಇವರು ವ್ಯಕ್ತಪಡಿಸಿದ್ದಾರೆ. ಇವರ ಪ್ರಕಾರ ಆಯೋಗಗಳ ವರದಿಯನ್ವಯ ಮೀಸಲಾತಿಯ ಅವಕಾಶವನ್ನು ಪಡೆದ ಹಿಂದುಳಿದ ಜನಾಂಗಗಳ ಕೆಲವು ಶ್ರೀಮಂತ ನಾಯಕರು ಅದರ ಉಪಯೋಗವನ್ನು ತಮ್ಮ ಸ್ವ-ಏಳಿಗೆಗಾಗಿ ಪಡೆಯಲು, ತಮ್ಮ ಜನಾಂಗಗಳನ್ನು ಒಗ್ಗೂಡಿಸಿ ತಾವು ನಾಯಕರಾಗಿ ಬೆಳೆದು ರಾಜಕೀಯ ಸ್ಥಾನಮಾನಗಳನ್ನು ಪಡೆಯಲು ಆರಂಭಿಸಿದರು. ಹೀಗಾಗಿ ಈಗ ಮೊದಲಿಗಿಂತಲೂ ಹೆಚ್ಚಾಗಿ ಜಾತಿ ರಾಜಕಾರಣ ಬೆಳೆಯ ತೊಡಗಿತು. ಜೊತೆಗೆ ಬಲಾಢ್ಯರಾದವರೆ ಅಧಿಕಾರ ಅವಕಾಶಗಳನ್ನು ಪಡೆಯಲು ಕಾರಣವಾಯಿತು. ಇಂತಹ ನಾಯಕರುಗಳನ್ನು ಉಪಯೋಗಿಸಿಕೊಂಡ ರಾಜಕೀಯ ಪಕ್ಷಗಳು ಕೊನೆಗೆ ಜನಾಂಗಗಳನ್ನು ತಮ್ಮ ವೋಟ್ ಬ್ಯಾಂಕ್‌ಗಳನ್ನಾಗಿ ಮಾಡಿಕೊಳ್ಳುವಲ್ಲಿ ಸಫಲರಾದರು ಮತ್ತು ಇಂದಿಗೂ ಆ ಕಾರ್ಯವನ್ನು ಮುಂದುವರಿಸಿದ್ದಾರೆ.[೫೦]

ಳ.೩.೨. ಸಮಕಾಲೀನ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಭಾರತದ ಸಾಮಾಜಿಕ ವ್ಯವಸ್ಥೆಯು ಮೇಲ್ನೋಟಕ್ಕೆ ಒಂದೇ ಜನಸಮುದಾಯದಿಂದ ಕೂಡಿದೆಯೆಂದು ಕಂಡು ಬಂದರೂ ಲೆಕ್ಕವಿಲ್ಲದಷ್ಟು ಜಾತಿ ಉಪಜಾತಿ, ಪಂಗಡ, ಉಪಪಂಗಡ ಮತ ಪಂಥಗಳಿಂದ ತುಂಬಿ ಹೋಗಿದೆ. ಹಾಗೂ ವೈವಿಧ್ಯತೆ ಮತ್ತು ತಾರತಮ್ಯ ಇದರ ಮೂಲ ಗುಣವೂ ಆಗಿದೆ. ಒಂದೇ ಸಮಾಜದಲ್ಲಿರುವ ವಿವಿಧ ಜಾತಿಗಳ ಜನರು ಒಬ್ಬರಿಗೊಬ್ಬರು ಸಂಬಂಧವಿಲ್ಲದಂತೆ ಪ್ರತ್ಯೇಕವಾಗಿ ವಾಸಿಸುತ್ತಾ ಬಂದಿವೆ. ಪಂಗಡಗಳು ತಮ್ಮ ಸರ್ವತೋಮುಖ ಅಭಿವೃದ್ಧಿಗಾಗಿ, ಸೌಲಭ್ಯಕ್ಕಾಗಿ ಬೇಡಿಕೆಗಳನ್ನಿಟ್ಟು ಹೋರಾಟ ಮಾಡುತ್ತಾ ಬಂದಿವೆ. ಹೀಗೆ ಶತಮಾನಗಳಿಂದ ಭಾರತದಾದ್ಯಂತ ಹಿಂದುಳಿದವರ ಹೋರಾಟಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೂ ಹಿಂದುಳಿದ ವರ್ಗಗಳ ಹೋರಾಟಗಳು ಆರಂಭವಾಗಿರುವುದನ್ನು ಗುರುತಿಸಬಹುದಾಗಿದೆ. ೨೦ನೇ ಶತಮಾನದ ಆರಂಭದಲ್ಲಿ ಇವು ತೀವ್ರಗೊಂಡು ಶತಮಾನದ ಕೊನೆಗೆ ಒಂದು ನಿರ್ದಿಷ್ಟ ಹಂತಕ್ಕೆ ಬಂದು ತಲುಪಿವೆ. ಆದರೂ, ಸದ್ಯದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಹೊಸ ಸಮಸ್ಯೆಗಳನ್ನು ಹೊಸ ಅಡ್ಡಿ ಆತಂಕಗಳನ್ನು ಎದುರಿಸುತ್ತಾ ಬದಲಾದ ಮತ್ತು ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಹೊಸ ಬೇಡಿಕೆಗಳನ್ನು ಇಡುತ್ತಾ ಹೋರಾಟ ಮಾಡುತ್ತಿರುವುದು ಇದರ ವೈಶಿಷ್ಟ್ಯವಾಗಿದೆ.

ಹಿಂದುಳಿದ ವರ್ಗಗಳು ಎದುರಿಸುತ್ತಿರುವ ಸಮಸ್ಯೆಗಳು ಹಲವು ಬಗೆಯವು. ಸಂಬಂಧಪಟ್ಟ ಆಯೋಗಗಳು ಪರಿಹರಿಸದ ಅಥವಾ ಸರಿಯಾಗಿ ಅರ್ಥೈಸದ ಕಾರಣಕ್ಕಾಗಿ ಕೆಲವು ಜಾತಿಗಳು ಇನ್ನೂ ಹಿಂದಿನ ಸ್ಥಿತಿಯಲ್ಲಿಯೇ ಕಂಡು ಬರುತ್ತವೆ. ತಮಗಾದ ಅನ್ಯಾಯವನ್ನು ಸರಿಪಡಿಸುವಂತೆ ಸರಕಾರದ ಗಮನ ಸೆಳೆಯಲು ಮೆರವಣಿಗೆ, ಸಮಾವೇಶ ಏರ್ಪಡಿಸುವುದು, ಸೌಲಭ್ಯಗಳನ್ನು ಒದಗಿಸುವಂತೆ ಸಂಬಂಧಿಸಿದವರಿಗೆ ಮೇಲಿಂದ ಮೇಲೆ ಮನವಿ ಪತ್ರಗಳನ್ನು ಸಲ್ಲಿಸುವುದು, ರಾಜಕೀಯ ಪ್ರಾತಿನಿಧ್ಯಕ್ಕಾಗಿ

ಆಗ್ರಹಪಡಿಸುವುದು ಮುಂತಾದ ಪ್ರಯತ್ನಗಳು ಸಾಕಷ್ಟು ನಡೆದಿವೆ ಮತ್ತು ಇಂದಿಗೂ ನಡೆಯುತ್ತಲೇ ಇವೆ. ಹಿಂದುಳಿದ ವರ್ಗಗಳ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಸರ್ಕಾರದ ಗಮನ ಸೆಳೆಯಲು ಇಂಥಾ ಸಮಾವೇಶಗಳು ಅನಿವಾರ್ಯವೆಂಬ ಪರಿಸ್ಥಿತಿಯೂ ಇದೆ. ಆದರೆ ಇತ್ತೀಚೆಗೆ ರಾಜಕೀಯ ಪ್ರಾತಿನಿಧ್ಯ ಹಾಗೂ ಚುನಾವಣಾ ಮೀಸಲಾತಿಗಾಗಿ ಈ ವರ್ಗಗಳಿಂದ ಬೇಡಿಕೆ ಮತ್ತು ಒತ್ತಡಗಳು ಹೆಚ್ಚುತ್ತಿರುವುದು ಗಮನಾರ್ಹ. ಅದಕ್ಕಾಗಿ ಜಾತಿ ಸಮಾವೇಶಗಳನ್ನು ಅದ್ದೂರಿಯಿಂದ ಏರ್ಪಡಿಸಿ, ತಮ್ಮ ಜಾತಿ ಶಕ್ತಿಯನ್ನು ಪ್ರದರ್ಶಿಸುವುದು ಸಾಮಾನ್ಯವಾಗಿ ಬಿಟ್ಟಿದೆ.

ರಾಜ್ಯದಲ್ಲಿ ಜನಸಂಖ್ಯೆ ಆಧಾರದ ಮೇಲೆ ಮೂರನೇ ಸ್ಥಾನದಲ್ಲಿರುವ ಕುರುಬ ಜನಾಂಗಕ್ಕೆ ರಾಜಕೀಯದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂಬ ಕೂಗು ಇದ್ದೇ ಇದೆ. ರಾಜಕೀಯವಾಗಿ ತಮ್ಮನ್ನು ತೀರಾ ನಿರ್ಲಕ್ಷಿಸಲಾಗಿದೆಯೆಂದು ಕುರುಬ ಜನಾಂಗದ ನಾಯಕರು ಆರೋಪಿಸುತ್ತಲೇ ಬಂದಿದ್ದಾರೆ. ಇನ್ನು ಹಾವನೂರು, ವೆಂಕಟಸ್ವಾಮಿ, ಚಿನ್ನಪ್ಪರೆಡ್ಡಿ ಆಯೋಗಗಳು ಇತರೆ ನೇಕಾರ ಜನಾಂಗದವರನ್ನು ಹಿಂದುಳಿದ ವರ್ಗದಲ್ಲಿ ಗುರುತಿಸಿದೆಯಾದರೂ, ಪಟ್ಟುಸಾಲಿ ಜನಾಂಗದ ನೇಕಾರರನ್ನು ಗುರುತಿಸದೇ ಇರುವುದು ಆ ಜನಾಂಗದವರ ಪ್ರತಿಭಟನೆಗೆ ಕಾರಣವಾಗಿದೆ. ಹಿಂದುಳಿದ ವರ್ಗಗಳ ಎಲ್ಲ ಆಯೋಗಗಳಿಗೆ ಮನವಿ ಮಾಡಿದರೂ ಸುಮಾರು ೫ ಲಕ್ಷ ಜನಸಂಖ್ಯೆಯಿರುವ ಪಟ್ಟುಸಾಲಿ ಜನಾಂಗದವರ ಬೇಡಿಕೆಯನ್ನು ಪರಿಗಣಿಸದೇ ಅನ್ಯಾಯ ಮಾಡಲಾಗಿದೆ ಎಂಬ ಆರೋಪ ಜನಾಂಗದ ಮುಖಂಡರದಾಗಿದೆ. ಇನ್ನು ಅರಸು ಜಾತಿಯವರು ಸಾಮಾಜಿಕವಾಗಿ ಮುಂದುವರೆದಿದ್ದರೂ ಅವರ ಆರ್ಥಿಕ ಸ್ಥಿತಿ ಹೇಳಿಕೊಳ್ಳುವಂತಿಲ್ಲ. ಇವರು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಇವರಿಗೆ ಸೂಕ್ತ ರಕ್ಷಣೆಯ ಹಾಗೂ ಜಮೀನು ಒತ್ತುವರಿಯಂಥಾ ಸಮಸ್ಯೆಗಳು ಕಾಡುತ್ತಲಿವೆ. ಹೀಗಾಗಿ ಅರಸು ಸಂಘದವರು ತಮ್ಮ ಜನಾಂಗದವರನ್ನು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಬೇಕೆಂಬ ಹಾಗೂ ಸೌಲಭ್ಯಗಳನ್ನು ಒದಗಿಸಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಿದ್ದಾರೆ.

ರಾಜ್ಯದಲ್ಲಿ ಸುಮಾರು ೨೫ ಲಕ್ಷದಷ್ಟಿರುವ ಉಪ್ಪಾರ ಜನಾಂಗದವರು ಶಿಕ್ಷಣ ಮತ್ತು ಸಂಘಟನೆಯ ಕೊರತೆಯ ಕಾರಣದಿಂದಾಗಿ ನಿರಂತರ ಶೋಷಣೆಗೆ ಒಳಗಾಗಿರುವುದು ಕಂಡು ಬರುತ್ತದೆ. ಉಪ್ಪಾರ ಜನಾಂಗ ಶಿಕ್ಷಣದ ಸೌಲಭ್ಯದಿಂದ ವಂಚಿತರಾಗಿರುವುದರಿಂದ ನಿರಂತರ ಶೋಷಣೆಗೆ ಒಳಗಾಗುತ್ತಿದೆ. ಹೀಗಾಗಿ ತಮ್ಮ ಏಳಿಗೆಗಾಗಿ ಶೈಕ್ಷಣಿಕ, ಆರ್ಥಿಕ, ಸೌಲಭ್ಯಗಳನ್ನು ಒದಗಿಸಬೇಕೆಂದು ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ. ಇದೇ ರೀತಿ ರಜಪೂತ ಜನಾಂಗದವರು ಸಹ ಇಂದಿಗೂ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಯಾವುದೇ ಸೌಲಭ್ಯ ದೊರಕದೆ ಸೌಲಭ್ಯ ವಂಚಿತರಾಗಿ ಸರಕಾರದಿಂದ ತೀವ್ರ ನಿರ್ಲಕ್ಷ್ಯಕ್ಕೆ ಒಳಗಾದ ಜನಾಂಗಗಳಲ್ಲಿ ಒಂದಾಗಿದೆ. ಇದೇ ರೀತಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತೀ ಹೆಚ್ಚಿರುವ ಮಡಿವಾಳ ಜನಾಂಗದವರು ಅತೀ ಹಿಂದುಳಿದ ಜನಾಂಗವೆನಿಸಿಕೊಂಡಿದೆ. ಹೀಗಾಗಿ ಇವರು ಚುನಾವಣಾ ಮೀಸಲಾತಿ, ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂಬ ಬೇಡಿಕೆಯನ್ನು ಇಡುತ್ತಿದ್ದಾರೆ.[೫೧]

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅಲೆಮಾರಿ ಜನಾಂಗವೆಂದೇ ಗುರುತಿಸಲ್ಪಟ್ಟಿರುವ ಸುಡುಗಾಡುಸಿದ್ಧರು ಸರಕಾರದ ಎಲ್ಲಾ ಸೌಲಭ್ಯಗಳಿಂದಲೂ, ವಂಚಿತರಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಯಾವುದೇ ಸ್ಥಾನಮಾನ ಪಡೆಯದೇ ಸಂಪೂರ್ಣ ನಿರ್ಲಕ್ಷಿತರಾಗಿದ್ದಾರೆ. ಇವರಲ್ಲಿಯೇ ಹಗಲು ವೇಷಗಾರರು, ರಾಳಕೊಂಡ, ನಿರಂಜನ ಮುಂತಾದ ಉಪಪಂಗಡಗಳಿವೆ. ಅತ್ಯಂತ ಅಭದ್ರ ಸ್ಥಿತಿಯಲ್ಲಿರುವ ಇಂತಹ ಜನಾಂಗದವರು ಹೊಟ್ಟೆ ಹೊರೆಯಲು ರಾಮಾಯಣ ಮಹಾಭಾರತ ಪಾತ್ರಗಳ ವೇಷ ಧರಿಸಿ ಹೊಟ್ಟೆಪಾಡಿಗೆಗಾಗಿ ಹಳ್ಳಿಗಳಲ್ಲಿ ತಿರುಗಾಡುತ್ತಾ ದಯನೀಯ ಸ್ಥಿತಿಯಲ್ಲಿದ್ದಾರೆ. ಕೆಲವರು ಸ್ಥಳೀಯ ನಿವಾಸಿಗಳಾಗಿ ಬದುಕು ನಡೆಸುತ್ತಿದ್ದರೂ ಇವರಿಗೆ ಮತದಾನದ ಹಕ್ಕು ಸಿಕ್ಕಿಲ್ಲ, ಸರಕಾರದಿಂದ ಯಾವ ಸೌಲಭ್ಯವೂ ಇಲ್ಲ. ಬಣ್ಣ ಹಚ್ಚಿದರೆ ಮಾತ್ರ ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೆ ಉಪವಾಸ ಎಂಬ ಸ್ಥಿತಿ ಇದೆ. ನಿರಾಶ್ರಿತರಿಗಾಗಿ ಮನೆಗಳ ಹಂಚಿಕೆಯಾಗುತ್ತಿದ್ದರೂ ಇವರಿಗೆ ಮಾತ್ರ ಆ ಯೋಗ ಇಲ್ಲ. ಮನವಿ ಸಲ್ಲಿಸಿದರೂ ಆಡಳಿತವರ್ಗವು ಒಂದೇ ಒಂದು ಮನೆಯನ್ನು ಇವರಿಗೆ ಕಲ್ಪಿಸಿಲ್ಲ.[೨೨] ಇಂದಿಗೂ ಇವರು ಯಾವುದೇ ನೆಲೆ ಇಲ್ಲದೆ ಭೂಮಿ ಆಸ್ತಿ ಇಲ್ಲದೆ ತಿರುಗಾಟದಲ್ಲಿದ್ದಾರೆ. ಹೊಟ್ಟೆಪಾಡಿಗಾಗಿ ಸದಾ ತಿರುಗಾಟದಲ್ಲಿರುವುದರಿಂದ ಶಿಕ್ಷಣದಿಂದ ಸಂಪೂರ್ಣ ವಂಚಿತರಾಗಿರುವ ಇವರಿಗೆ ಸರಕಾರಿ ಉದ್ಯೋಗ ಎನ್ನುವುದು ಕನಸೇ ಆಗಿದೆ. ಹೀಗಾಗಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳದ ಇವರಿಗೆ ಸರಕಾರದ ಯಾವ ಸೌಲಭ್ಯಗಳು ಸಿಗುತ್ತಿಲ್ಲ. ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಸರ್ಕಾರಿ ಅಧಿಕಾರಿಗಳು ಕೊಡುವುದಿಲ್ಲವೆಂಬ ಕೊರಗು ಇವರದು. ಹೀಗಾಗಿ ತಮ್ಮ ಪಂಗಡಕ್ಕೆ ಸರಕಾರ ಪ್ರತ್ಯೇಕ ಯೋಜನೆಗಳನ್ನು ರೂಪಿಸಿ ಜಾರಿ ಮಾಡಬೇಕು ಉಚಿತ ಶಿಕ್ಷಣ ಮತ್ತು ನೌಕರಿ ನೀಡಬೇಕೆಂಬುದು ಇವರ ಬೇಡಿಕೆಯಾಗಿದೆ. ಆದರೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಜನಾಂಗದ ಬೇಡಿಕೆಯು ಅಷ್ಟೇ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಅಸಂಘಟಿತರಾಗಿರುವ ಇವರಿಗೆ ಸರಕಾರದ ಮೇಲೆ ಪರಿಣಾಮಕಾರಿ ಒತ್ತಡ ಹೇರುವುದು ಸಾಧ್ಯವಾಗುತ್ತಿಲ್ಲ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿರುವ ಗೌಳಿ ಜನಾಂಗದವರು ಬಹು ವಿಭಿನ್ನವಾದಂತಹ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಕಾಣಬಹುದು. ಗೌಳಿ ಜನಾಂಗದವರು ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ತಲತಲಾಂತರಗಳಿಂದ ಪಶುಪಾಲನೆ ಇವರ ಮುಖ್ಯ ವೃತ್ತಿಯಾಗಿದ್ದು, ಅದನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚಿಗೆ ಗೌಳಿ ಜನಾಂಗದವರಲ್ಲಿ ಆತಂಕ ಮೂಡಿಸಿರುವ ಸಂಗತಿಯೆಂದರೆ ಇವರಿಗಷ್ಟೇ ಸೀಮಿತವಾಗಿದ್ದ ಇವರ ಕಸುಬನ್ನು ಇತರ ಜನಾಂಗದವರೂ ಮತ್ತು ಸರ್ಕಾರವು ನಡೆಸುತ್ತಿದೆ. ಬ್ಯಾಂಕ್‌ನಿಂದ ಸಿಗುವ ಸಾಲ ಸೌಲಭ್ಯ ಪಡೆದ ಚಿಕ್ಕ ರೈತರು, ಯುವಕರು, ನಿರುದ್ಯೋಗಿಗಳು ಪಶುಪಾಲನೆಯನ್ನು ಒಂದು ಉದ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಹೀಗಾಗಿ ಮೂಲ ಜನಾಂಗಕ್ಕೆ ಇದು ಸವಾಲಾಗಿದೆಯಲ್ಲದೆ ಇವರನ್ನು ಆತಂಕಕ್ಕೀಡು ಮಾಡಿದೆ. ಇದರ ಜೊತೆಗೆ ಇಲ್ಲಿನ ಭೀಕರ ಬರಗಾಲ, ಸತತ ಬರ ಪರಿಸ್ಥಿತಿ ಎದುರಾಗುತ್ತಿರುವುದರಿಂದ ಗೌಳಿ ಕುಟುಂಬಗಳು ಬೀದಿ ಪಾಲಾಗುತ್ತಿವೆ. ಈ ಜನಾಂಗದ ಸಮಸ್ಯೆಗಳನ್ನು ಅರಿತು 'ಗೌಳಿ ಸಮಾಜ ಸೇವಾ ಸಂಘ'ವು ತನ್ನದೇ ಆದ ಬೇಡಿಕೆಗಳನ್ನು ಇಡುತ್ತಿದೆ. ಇವರ ಬೇಡಿಕೆಗಳೆಂದರೆ ಗೌಳಿ ಜನಾಂಗಕ್ಕೆ

ರಾಜ್ಯ ಹಿಂದುಳಿದ ವರ್ಗಗಳ ಇಲಾಖೆಯಿಂದ ನೇರ ಸಾಲ ಸೌಲಭ್ಯ ಸಿಗಬೇಕು, ವಿಧಾನಪರಿಷತ್ತಿಗೆ ಗೌಳಿ ಪ್ರತಿನಿಧಿಯನ್ನು ನಾಮಕರಣ ಮಾಡಬೇಕು ವರ್ಗವನ್ನು ಹಿಂದುಳಿದ ಪರಿಶಿಷ್ಟ ವರ್ಗ-I ರಿಂದ ಬದಲಾಯಿಸಿ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕು, ಜನಾಂಗದ ವಿದ್ಯಾವಂತ ನಿರುದ್ಯೋಗಿಗಳಿಗೆ ಪಶುಸಂಗೋಪನಾ ಇಲಾಖೆಯಲ್ಲಿ ಶೇ. ೨೫ರಷ್ಟು ಉದ್ಯೋಗವನ್ನು ಮೀಸಲಿಡಬೇಕು ಹೀಗೆ ಮುಂತಾದ ಬೇಡಿಕೆಗಳಿವೆ.

ಹಾಗೆಯೇ ಹೈದರಾಬಾದ್ ಕರ್ನಾಟಕದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಜಿಲ್ಲೆಗಳಲ್ಲಿರುವ ಗಂಗ ಮತಸ್ಥರು ಇನ್ನೊಂದು ರೀತಿಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇವರು ಸುಮಾರು ಏಳು ಪಂಗಡಗಳಲ್ಲಿ ಗುರುತಿಸಿಕೊಂಡಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿದ್ದರೂ ಅವರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡದೆ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ ಎಂಬ ದೂರುಗಳಿವೆ. ಗಂಗಾ ಮತಸ್ಥರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸುತ್ತಿರುವುದು ಸಮಸ್ಯೆಗೆ ಇನ್ನೊಂದು ಬಗೆಯ ಉದಾಹರಣೆ ಯನ್ನಾಗಿ ನೋಡಬಹುದು. ಪರಿಶಿಷ್ಟ ಜಾತಿಯ ವ್ಯಾಪ್ತಿಗೆ ಸೇರಬಯಸುವ ಇನ್ನೊಂದು ಸಮುದಾಯವೆಂದರೆ ಹೆಳವ ಜನಾಂಗ. ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾ ಕುಟುಂಬಗಳ ಮೂಲಗಳು ಮತ್ತು ವಂಶಾವಳಿಗಳನ್ನು ದಾಖಲೆ ಮಾಡುವ ವೃತ್ತಿಯನ್ನಾಗಿಸಿಕೊಂಡಿರುವ ಹೆಳವ ಜನಾಂಗದವರು ಸಮಾಜದ ಸಹಕಾರ ಮತ್ತು ಸಹಾನುಭೂತಿಯನ್ನು ಅವಲಂಬಿಸಿ ತಮ್ಮ ಅಸ್ತಿತ್ವ ಉಳಿಸಿಕೊಂಡಿರುವುದು ನಿಜ. ವಂಶಾವಳಿಗಳ ದಾಖಲೆ ಯುಳ್ಳ ದೊಡ್ಡ ಪುಸ್ತಕಗಳ ಗಂಟನ್ನು ಹೊತ್ತುಕೊಂಡು ಊರೂರಿಗೆ ತಿರುಗುತ್ತಲಿರುವ ಹೆಳವರು ಒಂದು ಕಡೆ ನೆಲೆಸಿ ಜೀವನ ಮಾಡುವಲ್ಲಿ ಸಾಧ್ಯವಾಗದಿದ್ದರಿಂದಾಗಿ ಅವರು ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದಿದ್ದಾರೆ. ಇವರ ಜೀವನ ಹೇಗೆ ಸಾಗಿದೆ ಎಂದರೆ ಆಯಾ ಕುಟುಂಬಗಳಲ್ಲಿ ಕೂಡು ಕುಟುಂಬ ವಿಭಜನೆಯಾದಾಗ ಅವರು ಹಂಚಿಕೊಳ್ಳುವುದು ಅವರ ಪಾಲಿನ ಆಸ್ತಿಯನ್ನಷ್ಟೇ ಅಲ್ಲ, ಜೊತೆಗೆ ತಮ್ಮಲ್ಲಿರುವ ಕುಟುಂಬಗಳ ವಂಶಾವಳಿ ದಾಖಲೆಗಳನ್ನು ಹಂಚಿಕೊಳ್ಳುತ್ತಾರೆ. ಅಲ್ಪಸಂಖ್ಯಾತರಾಗಿರುವ ಹೆಳವರ ಉದ್ಧಾರಕ್ಕೆ ಸರ್ಕಾರ ವಿಶೇಷ ಗಮನ ಕೊಡದಿರುವುದು ಮುಖ್ಯ ಸಮಸ್ಯೆಯಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅತಿ ಹಿಂದುಳಿದಿರುವ ಹೆಳವ ಸಮಾಜದ ಜನರು ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟಕ್ಕಿಳಿಯುವ ಅನಿವಾರ್ಯತೆ ಎದುರಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ನೇಮಕವಾದ ಹಿಂದುಳಿದ ವರ್ಗಗಳ ಆಯೋಗಗಳು ಕಾಲಕಾಲಕ್ಕೆ ವರದಿ ನೀಡುತ್ತಾ ಬಂದಿವೆ. ಆದರೆ ಆಯೋಗಗಳ ವರದಿಗಳಿಂದ ಸಂಪೂರ್ಣ ನ್ಯಾಯ ದೊರೆಕಿಲ್ಲ ಎಂಬುದಕ್ಕೆ ನಿರಂತರವಾಗಿ ನಡೆಯುತ್ತಿರುವ ಹೋರಾಟಗಳು ಸಾಕ್ಷಿಯಾಗಿದೆ. ಅದರಲ್ಲಿರುವ ಲೋಪದೋಷ ಗಳನ್ನು ಸರಿಪಡಿಸುವಂತೆ ನಿರಂತರ ಹೋರಾಟಗಳು ನಡೆಯುತ್ತಿವೆ. ಸಂವಿಧಾನಬದ್ಧವಾದ ಮೀಸಲಾತಿ ಹಿಂದುಳಿದ ವರ್ಗಗಳಿಗೆ ದೊರೆತಿದ್ದರೂ, ಹಿಂದುಳಿದಿರುವಿಕೆಯನ್ನು ಗುರುತಿಸುವ ಮತ್ತು ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸುವ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸುವುದು ಹೇಗೆ ಎಂಬ ಸಮಸ್ಯೆ ಯನ್ನು ಗಮನಿಸಿದ ಸರ್ವೋಚ್ಚ ನ್ಯಾಯಾಲಯ ೧೯೬೨ರ ಒಂದು ಮೊಕದ್ದಮೆಯ ತನ್ನ ತೀರ್ಪಿನಲ್ಲಿ

ಹಿಂದುಳಿದ ವರ್ಗಗಳ ನ್ಯಾಯಯುತ ಸಮಸ್ಯೆಗಳನ್ನು ಪರಿಶೀಲಿಸುವ ಸಲುವಾಗಿ ಪ್ರತಿಯೊಂದು ರಾಜ್ಯದಲ್ಲೂ ಒಂದು ಶಾಶ್ವತ ಆಯೋಗ ರಚಿಸಬೇಕೆಂದು ನಿರ್ದೇಶಿಸಿತು. ಸೂಚನೆಯಂತೆ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆಯನ್ನು ೧೯೯೫ರಲ್ಲಿ ಪಾಸು ಮಾಡಿತು. ಇದರ ಅನ್ವಯ ೧೯೯೭ರಲ್ಲಿ ಆಯೋಗ ಜಾರಿಯಾಯಿತು.

ಮೇಲಿನ ಅಂಶಗಳನ್ನು ವಿಶ್ಲೇಷಣೆ ಮಾಡಿದಾಗ ಹಿಂದುಳಿದ ವರ್ಗಗಳು ಯಾವ ನಿಟ್ಟಿನಲ್ಲಿ ಸಾಗಲೆತ್ನಿಸುತ್ತಿವೆ, ಅವುಗಳ ಅವಶ್ಯಕತೆಗಳೇನು ಎನ್ನುವುದರ ಬಗ್ಗೆ ಕಲ್ಪನೆ ಮೂಡುತ್ತದೆ. ಕೆಲವು ಜಾತಿಗಳು ಸರ್ಕಾರಿ ಆದೇಶಗಳಲ್ಲಿ ಆಗಿರುವ ಬದಲಾವಣೆಗಳಿಂದ ಸೌಲಭ್ಯ ಪಡೆಯುವಲ್ಲಿ ವಂಚಿತವಾಗಿರುವುದು ಇದೆ. ಕೆಲವೊಂದು ವ್ಯತ್ಯಾಸಗಳಿಂದ ಸಂಬಂಧಪಟ್ಟ ಜಾತಿಗಳ ವಿದ್ಯಾರ್ಥಿಗಳು ಸರಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿರುವುದನ್ನು ಸರ್ಕಾರದ ಗಮನಕ್ಕೆ ತರುವ ಕೆಲಸ ನಡೆದಿದೆ. ಹೀಗೆ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಕಾಲದಿಂದ ಕಾಲಕ್ಕೆ ಜಾತಿಗಳ ರಾಜಕೀಯ ಸಂಘಟನಾ ಸಾಮರ್ಥ್ಯ ಹಾಗೂ ರಾಜಕೀಯವಾಗಿ ಜಾತಿಗಳ ಧ್ರುವೀಕರಣವನ್ನಲಂಬಿಸಿ ರೂಪು ಪಡೆದುಕೊಳ್ಳುತ್ತಿದೆ. ಹೀಗಾಗಿ ಚಳವಳಿ ಒಂದು ಸ್ಪಷ್ಟ ರೂಪ ಪಡೆದುಕೊಳ್ಳಲು ಇತರೆ ಹಿಂದುಳಿದ ವರ್ಗಗಳು ರಾಜಕೀಯವಾಗಿ ಒಂದು ಸುಸಂಬದ್ಧ ಗುಂಪಾಗಿ ಮಾರ್ಪಾಡಾಗಬೇಕಾದ ಅವಶ್ಯಕತೆಯಿದೆ.

೪.೪. ಕಾರ್ಮಿಕ ಚಳವಳಿಗಳು

ಸ್ವಾತಂತ್ರ್ಯಪೂರ್ವ ಕರ್ನಾಟಕದ ಚರಿತ್ರೆಯನ್ನು ಅವಲೋಕಿಸಿದಾಗ ವಸಾಹತು ಕಾಲಘಟ್ಟದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಅನೇಕ ಬಗೆಯ ಗಿರಣಿಗಳು, ಮಿಲ್ಲುಗಳು, ಕಾರ್ಖಾನೆಗಳು ಸ್ಥಾಪಿತವಾಗಿದ್ದವು. ಕೈಮಗ್ಗದ ಮೂಲಕ ಹತ್ತಿ ಮತ್ತು ರೇಷ್ಮೆ ನೇಯ್ಗೆ ಉದ್ಯಮವು ಉನ್ನತ ಮಟ್ಟದಲ್ಲಿದ್ದು, ಉದ್ಯಮಗಳಲ್ಲಿ ಅಧಿಕಸಂಖ್ಯೆಯಲ್ಲಿ ಪುರುಷರು ಮತ್ತು ಸ್ತ್ರೀಯರು ಕೆಲಸ ಮಾಡುತ್ತಿದ್ದರು. ೧೮೮೪ರಲ್ಲಿ ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಆಧುನಿಕ ಬಟ್ಟೆ ಕಾರ್ಖಾನೆ ಆರಂಭವಾಯಿತು ಕ್ರಮೇಣ ಅನೇಕ ಮಿಲ್‌ಗಳು ಆರಂಭಗೊಂಡವು, ಒಂದು ಹಂತದವರೆಗೆ ಇಲ್ಲಿನ ಮಿಲ್‌ಗಳು ದೇಶದಲ್ಲೇ ಹೆಸರು ವಾಸಿಯಾಗಿದ್ದವು. ವಸಾಹತುಶಾಹಿಗಳು ಮತ್ತು ಕಾರ್ಖಾನೆಯ ಮಾಲೀಕರು ಹೆಚ್ಚು ಲಾಭದ ಆಸೆಯಿಂದಲೋ ಅಥವಾ ಹೆಚ್ಚು ಹೆಚ್ಚು ಬಂಡವಾಳ ತೊಡಗಿಸಿ ತಮ್ಮ ಕೈಗಾರಿಕೋದ್ಯವನ್ನು ವಿಸ್ತರಿಸುವ ಉದ್ದೇಶದಿಂದಲೋ ಕಾರ್ಮಿಕರಿಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ಗಂಟೆಗಳ ಕಾಲ ಕೆಲಸ ತೆಗೆದುಕೊಂಡು ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದರು. ಒಂದು ಹಂತದಲ್ಲಿ ಕಾರ್ಖಾನೆಗಳು ಸ್ವಲ್ಪಮಟ್ಟಿನ ನಷ್ಟಕ್ಕೆ ಒಳಗಾಗಿದ್ದಾಗ ಶೋಷಣೆ ಇನ್ನೂ ಹೆಚ್ಚಾಗಿತ್ತು ಆದರೆ ಬಡತನವು ಅವರ ಶೋಷಣೆಯ ಸ್ವರೂಪವನ್ನು ಗುರುತಿಸಿ ಹೋರಾಟಕ್ಕಿಳಿಯುವುದು ಕಾರ್ಮಿಕರಿಗೆ ಸಾಧ್ಯವಿರಲಿಲ್ಲ. ೧೯೨೦ರ ಸುಮಾರಿಗೆ ದೇಶಾದ್ಯಂತ ಕೆಲವು ಕಾರ್ಮಿಕ ಸಂಘಟನೆಗಳು ಆರಂಭವಾದರೂ ಅವು ಶಕ್ತಿಯುತವಾಗಿ ಬೆಳೆಯುವುದಕ್ಕೆ ಇನ್ನೂ ಸಮಯ ಬೇಕಿತ್ತು ಹಾಗೂ ಆಗ ಕಾರ್ಮಿಕ ವರ್ಗದವರಿಗಾಗಿ ಯಾವುದೇ ಹಕ್ಕುಗಳು, ಕಾಯ್ದೆ ಕಾನೂನುಗಳು ಇರಲಿಲ್ಲ. ಕಾರ್ಮಿಕರ ಸಂಘಟನೆಗಳಿಗೆ ಮತ್ತು ಮುಖಂಡರಿಗೆ ಯಾವುದೇ ರಕ್ಷಣೆ ಇರಲಿಲ್ಲ. ಹೀಗಾಗಿ

ಕಾರ್ಮಿಕರ ಸಂಘಟನೆ, ಹೋರಾಟ, ಚಳವಳಿ ಎನ್ನುವುದು ಹಂತ ಹಂತವಾಗಿ ಆರಂಭವಾದುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಹೈದರಾಬಾದ್ ಕರ್ನಾಟಕದ ರಾಜಕೀಯ, ಸಾಮಾಜಿಕ, ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಇಲ್ಲಿ ಕಂಡುಬರುವ ಕಾರ್ಖಾನೆಗಳು, ಸಂಘಟನೆಗಳು, ಕಾರ್ಮಿಕರ ಹೋರಾಟಗಳ ಪರಿಸ್ಥಿತಿಯೇ ಬೇರೆ. ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಪ್ರದೇಶಗಳು ಹೈದರಾಬಾದ್ ನಿಜಾಮನ ಅಧೀನದಲ್ಲಿದ್ದವು. ಈ ಪ್ರದೇಶಗಳಲ್ಲಿ ಕಡಿಮೆ ಮಳೆ, ಅತಿಯಾದ ಬಿಸಿಲು, ಅನಕ್ಷರತೆ ಮುಂತಾದ ಅಂಶಗಳಿಂದ ಇಲ್ಲಿಯ ಜನ ಬಡತನಕ್ಕೀಡಾಗಿದ್ದರು. ಕೃಷಿಯನ್ನು ಹೊರತುಪಡಿಸಿದರೆ ಬೇರೆ ಉದ್ಯೋಗವಕಾಶಗಳೇ ಇರಲಿಲ್ಲ ಇಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದ ಹತ್ತಿಯನ್ನು ಹೈದರಾಬಾದ್, ಮುಂಬಯಿ, ಮದ್ರಾಸ್ ಮತ್ತು ಅಹಮದಾಬಾದ್ ನಗರಗಳ ಮಿಲ್ಲುಗಳಿಗೆ ಕಳುಹಿಸಲಾಗುತ್ತಿತ್ತು. ಇಲ್ಲಿ ಅಪಾರ ನೈಸರ್ಗಿಕ ಸಂಪತ್ತಿದ್ದರೂ, ಕಾರ್ಖಾನೆಗಳ ಕೊರತೆಯಿಂದ ಇಲ್ಲಿ ದೊರೆಯುತ್ತಿದ್ದ ಅಮೂಲ್ಯ ಗುಣಮಟ್ಟದ ಸುಣ್ಣದ ಕಲ್ಲು, ಗ್ರಾನೈಟ್ ಮುಂತಾದವು ಗಳನ್ನು ಬೇರೆ ಕಡೆ ಸಾಗಿಸಲಾಗುತ್ತಿತ್ತು ಹೀಗಾಗಿ ಇಲ್ಲಿನ ಜನರಿಗೆ ನಿರುದ್ಯೋಗ ದೊಡ್ಡ ಸಮಸ್ಯೆಯಾಗಿ ಕಾಡುತ್ತಿತ್ತು. ಇಂತಹ ಅಂಶಗಳನ್ನು ಗಮನಿಸಿದ ನಿಜಾಮ ಸರಕಾರ ೧೮೮೪ರಲ್ಲಿ ಗುಲಬರ್ಗಾದಲ್ಲಿ ಎಂ.ಎಸ್.ಕೆ. ಮಿಲ್‌ನ್ನು ಆರಂಭಿಸಿದರು. ಮಿಲ್‌ನ ಕಾರ್ಮಿಕರ ಶ್ರದ್ಧೆ, ನಿಷ್ಠೆಯ ದುಡಿಮೆಯ ಫಲದಿಂದಾಗಿ ಮಿಲ್‌ನಲ್ಲಿ ತಯಾರಾದ ಉತ್ಕೃಷ್ಟ ಬಟ್ಟೆ ಬಹಳ ಬೇಗ ಹೆಸರಾಗಿ ರಷ್ಯಾ ಮುಂತಾದ ಪರ ರಾಷ್ಟ್ರಗಳಿಗೂ ರಫ್ತಾಗುವ ಹಂತಕ್ಕೂ ತಲುಪಿತ್ತು.

ನಂತರ ದಕ್ಷಿಣ ಭಾರತದಲ್ಲೇ ಮೊಟ್ಟಮೊದಲ ಸಿಮೆಂಟ್ ಉತ್ಪಾದನೆಯ ಎ.ಸಿ.ಸಿ. ಕಾರ್ಖಾನೆಯನ್ನು ೧೯೨೪ರಲ್ಲಿ ಶಹಬಾದ್‌ನಲ್ಲಿ ಆರಂಭಿಸಲಾಯಿತು. ಗುಲಬರ್ಗಾದ ಸುತ್ತಮುತ್ತ ಹೇರಳವಾಗಿ ದೊರೆಯುತ್ತಿದ್ದ ಶಹಾಬಾದ್ ಹೊಳಪು ಕಲ್ಲಿನ ಗಣಿ ಉದ್ಯಮಗಳು ಆರಂಭವಾದವು. ಹೀಗೆ ಒಂದೊಂದೆ ಕೈಗಾರಿಕೆಗಳು ಸ್ಥಾಪನೆಯಾಗುತ್ತಿದ್ದಂತೆ ಇಲ್ಲಿನ ಜನರಿಗೆ ಕೈ ತುಂಬಾ ಉದ್ಯೋಗಾವಕಾಶಗಳು ದೊರೆತವು. ಕಾರ್ಖಾನೆಗಳ ಉತ್ಪಾದನೆ, ಲಾಭ ಹೆಚ್ಚಿದ್ದರಿಂದ ಕಾರ್ಮಿಕರಿಗೂ ಆರಂಭದಲ್ಲಿ ಅಂತಹ ದೊಡ್ಡ ಸಮಸ್ಯೆಯಾಗಲಿ ಅಥವಾ ಶೋಷಣೆಯಾಗಲಿ ಇರಲಿಲ್ಲ. ಶೋಷಣೆ ಇದ್ದರೂ ನಿಜಾಮಶಾಹಿಯನ್ನು ವಿರೋಧಿಸುವ ಧೈರ್ಯ ವಾಗಲಿ, ಅವಕಾಶವಾಗಲಿ ಇರಲಿಲ್ಲ. ಒಂದು ವೇಳೆ ವಿರೋಧಿಸಿದ್ದಾದರೆ ಕೆಲಸವನ್ನೇ ಕಳೆದುಕೊಳ್ಳುವ ಅಥವಾ ಶಿಕ್ಷೆ ಅನುಭವಿಸುವ ಪರಿಸ್ಥಿತಿ ಇತ್ತು ಎನ್ನುವುದರ ಜೊತೆಗೆ ಹಿಂದಿನಿಂದ ನಿರುದ್ಯೋಗ, ಬಡತನ ಸಮಸ್ಯೆಯನ್ನು ಸಾಕಷ್ಟು ಅನುಭವಿಸಿದ್ದ ಭಾಗದ ಜನರಿಗೆ ಅಂತಹ ಅವಶ್ಯಕತೆಯೂ ಇರಲಿಲ್ಲ ಹಾಗೂ ಆಗ ಕಾರ್ಮಿಕರು ಬೃಹತ್ ಸಂಖ್ಯೆಯಲ್ಲಿರಲಿಲ್ಲ. ಹೀಗಾಗಿ ಕಾರ್ಮಿಕರ ಸಂಘಟನೆ, ಹೋರಾಟ ಚಳವಳಿ ಗಳನ್ನು ಆಗ ಯೋಚಿಸಲು ಅಥವಾ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಇಂತಹ ಹಿನ್ನೆಲೆಯನ್ನು ವಿಶ್ಲೇಷಿಸಿ ದಾಗ, ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ ನಿಜಾಮನ ಆಳ್ವಿಕೆಯಲ್ಲಿ ಯಾವುದೇ ಕಾರ್ಮಿಕ ಚಳವಳಿಗಳು ಕಂಡುಬರುವುದಿಲ್ಲ. ಆದರೆ ನಿಜಾಮನಿಂದ ಜನಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರವಾದ ನಂತರ ಆಡಳಿತದ ವಿಫಲತೆ ಹಾಗೂ ಜನಪ್ರತಿನಿಧಿಗಳು ಕಾರ್ಮಿಕರ ಸಮಸ್ಯೆಗಳಿಗೆ

ಸ್ಪಂದಿಸದಿದ್ದುದು, ಕಾರ್ಮಿಕರ ಪರಿಸ್ಥಿತಿ ಸುಧಾರಣೆ ಆಗದಿದ್ದರಿಂದ ಕ್ರಮೇಣ ಹೋರಾಟಗಳು ಆರಂಭವಾಗಲು ಕಾರಣವಾಯಿತು.

೪.೪.೧. ಸ್ವಾತಂತ್ರ್ಯೋತ್ತರ ಕಾರ್ಮಿಕ ಚಳವಳಿಗಳು

ಅವಿಭಜಿತ ಬೀದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳನ್ನೊಳಗೊಂಡ ಹೈದರಾಬಾದ್ ಕರ್ನಾಟಕ ಭಾಗವು ೧೯೪೮ ಸೆಪ್ಟೆಂಬರ್ ೧೭ ರಂದು ನಿಜಾಮನ ಆಡಳಿತದಿಂದ ಮುಕ್ತವಾಗಿ ಸ್ವಾತಂತ್ರ್ಯ ಪಡೆದ ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಆಧಾರದ ಮೇಲೆ ಈ ಭಾಗದ ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿದವು. ಆಗ ಇಲ್ಲಿಯ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಅನಕ್ಷರತೆ, ಅಜ್ಞಾನ, ಬಡತನ ಮುಂತಾದ ಸಮಸ್ಯೆಗಳಿಂದ ಅಂದಿನ ಮೈಸೂರು ರಾಜ್ಯ ಇತರ ಭಾಗಗಳ ಜನರೊಂದಿಗೆ ಸಮಾನವಾಗಿ ಪಾಲ್ಗೊಳ್ಳದೇ, ಸರ್ಕಾರದಲ್ಲಿ, ಆಡಳಿತದಲ್ಲಿ ಸ್ಥಾನಮಾನಗಳನ್ನು ಪಡೆಯುವಲ್ಲೂ ವಂಚಿತರಾದರು. ರಾಜಧಾನಿ ಬೆಂಗಳೂರಿನಿಂದ ೬೦೦ ರಿಂದ ೭೦೦ ಕಿ.ಮೀ. ದೂರದ ಈ ಭಾಗಗಳಿಗೆ ಸರಕಾರದ ಸೌಲಭ್ಯಗಳು ಶೀಘ್ರವಾಗಿ ತಲುಪಲಿಲ್ಲ ಹಾಗೂ ಇವರ ನಿಜವಾದ ಸಮಸ್ಯೆಗಳ ಅರಿವು ಅಲ್ಲಿನವರಿಗೆ ಕಾಣಲಿಲ್ಲ ಮತ್ತು ಇಲ್ಲಿನವರ ಕೂಗು ಅಲ್ಲಿಯವರೆಗೆ ತಲುಪಲಿಲ್ಲ. ಹೀಗಾಗಿ ತಮ್ಮ ಅಭಿವೃದ್ಧಿಯ ಆಶಾ ಭಾವನೆಯೊಂದಿಗೆ ಮೈಸೂರು ರಾಜ್ಯದಲ್ಲಿ ಸೇರ್ಪಡೆ ಆಗಿದ್ದ ಇಲ್ಲಿನ ಜನರು ಮತ್ತೆ ಹೊಸ ಹೊಸ ಸಮಸ್ಯೆಗಳನ್ನು ಎದುರಿಸುವಂತಾಯಿತು ಅದರಲ್ಲೂ ಕಾರ್ಮಿಕ ವರ್ಗದವರ ಸ್ಥಿತಿ ಚಿಂತಾಜನಕವಾಯಿತು.

೧೯೫೬ರಲ್ಲಿ ಸರಕಾರವು ಇನಾಂ ಭೂಮಿಯನ್ನು ವಶಪಡಿಸಿಕೊಂಡಿದ್ದರಿಂದ ಭೂಮಿ ಕಳೆದುಕೊಂಡ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹಾಗೂ ಜಮೀನ್ದಾರಿ ಪದ್ಧತಿಯ ಶೋಷಣೆಗೆ ಒಳಗಾದವರು ಉದ್ಯೋಗ ಅರಸಿ ಗುಲಬರ್ಗಾ, ಬೀದರ್, ರಾಯಚೂರು ಮುಂತಾದ ನಗರಗಳಿಗೆ ವಲಸೆ ಬರತೊಡಗಿದರು. ಹೀಗೆ ಬಂದವರು ವಸತಿ ಸಮಸ್ಯೆಯಿಂದಾಗಿ ಊರ ಹೊರಗೆ ಅಥವಾ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡಬೇಕಾಯಿತು. ಉದ್ಯೋಗ ಅರಸಿ ಬಂದವರು ಮೊದಲು ಕೆಲಸಕ್ಕೆ ಸೇರುತ್ತಿದ್ದುದು ಕಾರ್ಖಾನೆಗಳಲ್ಲಿ ಮತ್ತು ಬಂದವರು ಅನಿವಾರ್ಯತೆಯಿಂದ ಕಡಿಮೆ ಕೂಲಿಗೂ ಕೆಲಸ ಮಾಡಲು ತಯಾರಿದ್ದರು. ಕ್ರಮೇಣ ಉದ್ಯೋಗ ಅರಸಿ ನಗರಗಳಿಗೆ ವಲಸೆ ಬರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಹೋದಂತೆ ಕಾರ್ಮಿಕರ ಸಂಖ್ಯೆಯೂ ಅಧಿಕವಾಗತೊಡಗಿತು. ಆರಂಭದಲ್ಲಿ ಕಾರ್ಖಾನೆಗಳಿಗೆ ಕಾರ್ಮಿಕರ ಕೊರತೆ ಇದ್ದುದರಿಂದ ಹೆಚ್ಚು ವೇತನ, ಸೌಲಭ್ಯಗಳನ್ನು ಕೊಟ್ಟು ಕೆಲಸಕ್ಕಿಟ್ಟುಕೊಂಡಿದ್ದ ಕಾರ್ಖಾನೆ ಮಾಲೀಕರು, ಕಾರ್ಮಿಕ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಮತ್ತು ಕಡಿಮೆ ವೇತನಕ್ಕೆ ದುಡಿಯುವ ಕಾರ್ಮಿಕರು ಸಿಗುತ್ತಿದ್ದುದರಿಂದ ಕಾರ್ಮಿಕರಿಗೆ ವೇತನದಲ್ಲಿ ತಾರತಮ್ಯವನ್ನು ಅನುಸರಿಸತೊಡಗಿದರು. ಇದರ ಜೊತೆಗೆ ೭೦ ಮತ್ತು ೮೦ರ ದಶಕದಲ್ಲಿ ಬೆಂಗಳೂರು, ಮೈಸೂರು, ಮುಂಬಯಿ, ಹೈದರಾಬಾದ್ ಮುಂತಾದ ನಗರಗಳಲ್ಲಿ ಆಧುನಿಕ ಯಂತ್ರಗಳನ್ನು ಅಳವಡಿಸಿದ ಮಿಲ್‌ಗಳು, ಕಾರ್ಖಾನೆಗಳು ಆರಂಭವಾದವು. ಹೀಗಾಗಿ ಆಧುನಿಕ ಕೈಗಾರಿಕೆಗಳ ಉತ್ಪನ್ನಗಳೊಂದಿಗೆ ಹೈದರಾಬಾದ್ ಕರ್ನಾಟಕ ಭಾಗದ ಕಾರ್ಖಾನೆಗಳ ಉತ್ಪನ್ನಗಳು ಬೆಲೆಯಲ್ಲಿ ಮತ್ತು

ಗುಣಮಟ್ಟದಲ್ಲಿ ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ಉತ್ಪನ್ನಗಳ ಬೇಡಿಕೆ ಕಡಿಮೆಯಾಗತೊಡಗಿ ಉತ್ಪಾದನೆ ಮತ್ತು ಲಾಭ ಕುಂಠಿತವಾಯಿತು. ಇನ್ನೊಂದು ಕಡೆ ಕಾರ್ಖಾನೆಗಳ ಮಾಲೀಕತ್ವ ವಹಿಸಿಕೊಂಡ ಆಡಳಿತಶಾಹಿಯ ನಿರ್ಲಕ್ಷ್ಯ ಮತ್ತು ನಷ್ಟದಿಂದ ಬಿಗಿ ಧೋರಣಾ ನೀತಿಯನ್ನು ಅನುಸರಿಸತೊಡಗಿದರು. ಇದೇ ಸಮಯದಲ್ಲಿ ದೇಶಾದ್ಯಂತ ಸ್ಥಾಪಿತವಾಗಿದ್ದ ಕಾರ್ಮಿಕ ಸಂಘಟನೆಗಳು ಇವರ ಬೆಂಬಲಕ್ಕೆ ನಿಂತವು. ಹೀಗಾಗಿ ಹೆದರಾಬಾದ್ ಕರ್ನಾಟಕ ಭಾಗದಲ್ಲೂ ಕಾರ್ಮಿಕರ ನೇತೃತ್ವವನ್ನು ವಹಿಸಿ ಅನೇಕ ಕಾರ್ಮಿಕ ಸಂಘಟನೆಗಳು ಸ್ಥಾಪಿತವಾಗಿ ಹೋರಾಟವನ್ನು ಆರಂಭಿಸಿದವು.

ಆದರೆ ಇಂತಹ ಹೋರಾಟಗಳು ಅಷ್ಟೊಂದು ಯಶಸ್ವಿಯಾಗಲಿಲ್ಲ ಮತ್ತು ಯಶಸ್ವಿಯಾಗದೇ ಇರುವುದಕ್ಕೆ ಕಾರಣಗಳನ್ನು ಅಧ್ಯಯನ ಮಾಡಿದಾಗ ಇವರ ಹೋರಾಟಗಳಿಗೆ ಬಹುತೇಕರ ಬೆಂಬಲ ದೊರೆಯದಿದ್ದುದು ಕಂಡು ಬರುತ್ತದೆ. ಇಲ್ಲಿನ ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆ ಮತ್ತು ದೂರದೃಷ್ಟಿಯ ನಾಯಕತ್ವದ ಅಭಾವ ಎದ್ದು ಕಾಣುತ್ತಿತ್ತು. ಇಂತಹ ಸಂದರ್ಭ ಮತ್ತು ಪರಿಸ್ಥಿತಿಯನ್ನು ಕಮ್ಯುನಿಷ್ಟರು ಉಪಯೋಗಿಸಿಕೊಂಡಿರುವುದು ಕಂಡು ಬರುತ್ತದೆ. ಕಮ್ಯುನಿಸ್ಟ್ ತತ್ವಸಿದ್ಧಾಂತಗಳು ಪ್ರಚಾರವಾಗುತ್ತಾ ಈ ಪ್ರದೇಶದ ಕಾರ್ಮಿಕರು ಮತ್ತು ನಾಯಕರ ಮೇಲೆ ಪ್ರಭಾವ ಬೀರಿದವು. ಪರಿಣಾಮವಾಗಿ ಹೈದರಾಬಾದ್ ಕರ್ನಾಟಕದಲ್ಲಿ ಎಡಪಂಥೀಯ ಸಂಘಟನೆಗಳು ಹುಟ್ಟಿಕೊಂಡವು. ಅರವಿಂದ ಮಳೆಬೆನ್ನೂರು, ನಾರಾಯಣ, ಶ್ರೀನಿವಾಸಗುಡಿ, ಎಸ್.ಕೆ. ಕಾಂತಾ, ಮಾರುತಿ ಮಾನ್ಪಡೆ, ಆರ್.ಕೆ. ಹುಡಗಿ, ಮಲ್ಲಿಕಾರ್ಜುನ ಮಸ್ಕಿ ಮುಂತಾದವರ ನಾಯಕತ್ವದಲ್ಲಿ ಆರ್ಥಿಕ ಶೋಷಣೆ, ಸೇವಾ ಭದ್ರತೆ, ವೇತನ ಪಾವತಿ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರ್ಮಿಕ ವರ್ಗದವರ ಪರವಾಗಿ ಹೋರಾಟಕ್ಕೆ ಮುಂದಾದರು. ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ಕಾರ್ಮಿಕರ ಹೋರಾಟಗಳ ಜೊತೆ ಜೊತೆಗೆ ಕಮುನಿಸ್ಟ್ ಹೋರಾಟಗಳು ಆರಂಭವಾದವು. ಇಂದಿಗೂ ಸಹ ಇಲ್ಲಿ ಎಡಪಂಥಿಯ ಹೋರಾಟಗಳು ತನ್ನದೇ ಆದ ಸಿದ್ಧಾಂತಗಳಡಿಯಲ್ಲಿ ಹೋರಾಟ ಮಾಡುತ್ತಿರುವುದು ಕಂಡು ಬರುತ್ತದೆ. ಹೀಗೆ ಅನೇಕ ಕಾರ್ಮಿಕ ಸಂಘಟನೆಗಳಡಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅನೇಕ ಕಾರ್ಮಿಕ ಚಳವಳಿಗಳು ನಡೆದಿವೆ ಮತ್ತು ನಡೆಯುತ್ತಿವೆ.

ಗುಲಬರ್ಗಾ ಎಂ.ಎಸ್.ಕೆ. ಮಿಲ್ ಕಾರ್ಮಿಕರ ಚಳವಳಿ

ಸ್ವಾತಂತ್ರ್ಯಾನಂತರ ಹೈದರಾಬಾದ್ ಕರ್ನಾಟಕದಲ್ಲಿ ನಡೆದ ವಿವಿಧ ಕಾರ್ಮಿಕರ ಚಳವಳಿಗಳನ್ನು ಅವಲೋಕಿಸಿದರೆ ಅತ್ಯಂತ ದೀರ್ಘವು, ತೀವ್ರವು ಮತ್ತು ಪರಿಣಾಮಕಾರಿಯಾದಂತಹ ಕಾರ್ಮಿಕ ಚಳವಳಿ ಯೆಂದರೆ ಗುಲಬರ್ಗಾ ನಗರದಲ್ಲಿ ನಡೆದ ಎಂ.ಎಸ್.ಕೆ. ಮಿಲ್‌ನ ಕಾರ್ಮಿಕರ ಚಳವಳಿ. ಚಳವಳಿಯ ಸ್ವರೂಪವನ್ನು ವಿಶ್ಲೇಷಿಸಿದರೆ, ಮಿಲ್‌ನ ಕಾರ್ಮಿಕರ ಹೋರಾಟದ ಹಂತಗಳಲ್ಲಿ ಅಸ್ತಿತ್ವಕ್ಕೆ ಬಂದ ಕಾರ್ಮಿಕರ ಸಂಘಟನೆಗಳು, ಕಾರ್ಮಿಕ ಪಕ್ಷಗಳು ಮತ್ತು ನೇತೃತ್ವ ವಹಿಸಿಕೊಂಡ ಕಾರ್ಮಿಕ ಮುಖಂಡರ ಸಂಖ್ಯೆ ಮತ್ತು ಹೋರಾಟದ ಶೈಲಿ ಮುಂತಾದ ಅಂಶಗಳನ್ನು ಗಮನಿಸಿದರೆ ಇಡೀ ಉತ್ತರ ಕರ್ನಾಟಕದ ಇನ್ಯಾವ ಚಳವಳಿಗಳಲ್ಲೂ ಇಂತಹ ವಿಶೇಷ ಅಂಶಗಳು ಕಂಡುಬರುವುದಿಲ್ಲ. ಇಂದಿಗೂ ಹೈದರಾಬಾದ್

ಕರ್ನಾಟಕದಲ್ಲಿ ಕಂಡುಬರುವ ಕಾರ್ಮಿಕ ಸಂಘಟನೆಗಳು ಮತ್ತು ಮುಖಂಡರು ಇದರ ಹೋರಾಟದ ಹಿನ್ನೆಲೆಯಲ್ಲಿಯೇ ಬೆಳೆದವರು. ಸ್ವಾತಂತ್ರ್ಯೋತ್ತರ ಕಾಲದಿಂದ ಆರಂಭವಾದ ಕಾರ್ಮಿಕರ ಹೋರಾಟ ನಿರಂತರವಾಗಿ ಕಳೆದ ಒಂದು ದಶಕದವರೆಗೂ ನಡೆದು, ಕಾರ್ಮಿಕ ಚಳವಳಿಯ ಅತ್ಯುನ್ನತ ಮಟ್ಟವನ್ನು ತಲುಪಿತ್ತು. ಆದರೆ ಇತ್ತೀಚಿಗೆ ಅಂದರೆ ೨೦೦೨ರಲ್ಲಿ ಮಿಲ್‌ನ್ನು ಮುಚ್ಚುವುದರ ಮೂಲಕ ಚಳವಳಿ ಮತ್ತು ಮಿಲ್ ಇತಿಹಾಸದ ಪುಟಗಳನ್ನು ಸೇರುವಂತಾಗಿದೆ.

ಗುಲಬರ್ಗಾ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವು ಹತ್ತಿಯ ಬೆಳೆಗೆ ಅತ್ಯಂತ ಸೂಕ್ತವಾದ ಮಣ್ಣು ಮತ್ತು ಹವಾಮಾನದಿಂದ ಕೂಡಿದೆ. ಹೀಗಾಗಿ ಉತ್ತರ ಕರ್ನಾಟಕದಲ್ಲೇ ಅತೀ ಹೆಚ್ಚು ಹತ್ತಿಯನ್ನು ಬೆಳೆಯುತ್ತಿದ್ದ ಇಲ್ಲಿಂದ ಪಕ್ಕದ ಮುಂಬಯಿ, ಹೈದರಾಬಾದ್, ಅಹಮದಾಬಾದ್ ಮುಂತಾದ ಪ್ರದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಇಲ್ಲಿ ಬೆಳೆಯುತ್ತಿದ್ದ ಉತ್ಕೃಷ್ಟ ಗುಣಮಟ್ಟದ ಹತ್ತಿಯು ಬಟ್ಟೆ ತಯಾರಿಸಲು ಅತ್ಯಂತ ಗುಣಮಟ್ಟದಿಂದ ಕೂಡಿತ್ತು. ಇದನ್ನು ಗಮನಿಸಿದ ಆಗಿನ ಹೈದರಾಬಾದಿನ ನಿಜಾಮ ನವಾಬ ಮೆಹಬೂಬಅಲಿ ಬಹದ್ದೂರ್ ಹಾಗೂ ಬೆಂಗಳೂರಿನ ಐಯರ್ ನೇತೃತ್ವದಲ್ಲಿ ಎಂ.ಎಸ್.ಕೆ. (ಮೆಹಬೂಬಶಾಹಿ ಕಲಬುರ್ಗಿ) ಮಿಲ್ ಸ್ಥಾಪನೆ ಆಯಿತು.[೫೩] ಕಾರ್ಖಾನೆಯ ವ್ಯಾಪ್ತಿಯು ಸುಮಾರು ೨೩೦ ಎಕರೆಯ ವಿಶಾಲವಾದ ಪ್ರದೇಶವನ್ನು ಒಳಗೊಂಡಿದ್ದು ಸಾವಿರಾರು ಕಾರ್ಮಿಕರಿಗೆ ಉದ್ಯೋಗವನ್ನು ಕಲ್ಪಿಸಿತ್ತು. ಅದರಲ್ಲೂ ದಲಿತ ಮತ್ತು ಮುಸ್ಲಿಂ ವರ್ಗಕ್ಕೆ ಸೇರಿದವರೆ ಹೆಚ್ಚಿನ ಪ್ರಮಾಣದಲ್ಲಿ ಕಾರ್ಖಾನೆಯ ಕಾರ್ಮಿಕರಾಗಿದ್ದುದು ಒಂದು ವಿಶೇಷವಾಗಿತ್ತು. ಗುಲಬರ್ಗಾ ಅಷ್ಟೇ ಅಲ್ಲದೆ ಸುತ್ತಮುತ್ತಲಿನ ಗ್ರಾಮದ ಜನರು ವಲಸೆ ಬಂದು ಇಲ್ಲಿ ಕೆಲಸಕ್ಕೆ ಸೇರಿದ್ದರು.

೧೮೮೪ರಲ್ಲಿ ೩ ಬಾಯ್ಲರ್‌ಗಳು, ೫೦೦೦ ಕದಿರುಗಳು ಮತ್ತು ೨೦೦ ಮಗ್ಗಗಳೊಂದಿಗೆ ಕಾರ್ಯಾರಂಭ ಮಾಡಿದ ಕಾರ್ಖಾನೆ, ೧೯೨೨ರ ಹೊತ್ತಿಗೆ ಸುಮಾರು ೨೮ ಸಾವಿರ ಕದಿರುಗಳು ಮತ್ತು ೬೯೦ ಮಗ್ಗಗಳಿಂದ ಕೂಡಿದ್ದ ಬೃಹತ್ ಮಿಲ್ ಆಗಿ ಬೆಳೆಯಿತು. ೧೯೩೭ ರಿಂದ ಭೀಮಾ ಪವರ್ ಹೌಸ್‌ನಿಂದ ಮಿಲ್ಲಿಗೆ ವಿದ್ಯುತ್ತನ್ನು ಪೂರೈಸಲಾಯಿತು. ಇಲ್ಲಿ ಪಾಲಿಸ್ಟರ್, ಕಾಟನ್ ಬಟ್ಟೆಗಳ ಜೊತೆಗೆ ಹತ್ತಿಯ ನೂಲಿನ ಎಳೆಗಳನ್ನು ತಯಾರಿಸಲಾಗುತ್ತಿತ್ತು. ಮಿಲ್‌ನ ಬಟ್ಟೆಯ ಗುಣಮಟ್ಟದಿಂದಾಗಿ ಮಿಲ್‌ನ ಬಟ್ಟೆಗಳನ್ನು ರಾಜ್ಯ, ಅಂತರ್‌ರಾಜ್ಯ, ಅಂತರ್‌ರಾಷ್ಟ್ರೀಯ (ರಷ್ಯಾ) ಮಟ್ಟದಲ್ಲಿ ರಫ್ತು ಮಾಡಲಾಗುತ್ತಿತ್ತು. ಕ್ರಮೇಣ ಮಿಲ್ ಲಾಭದಲ್ಲಿ ನಡೆಯುತ್ತಾ ೧೯೬೪ರ ಸುಮಾರಿಗೆ ಮಿಲ್‌ನ ಆಸ್ತಿ ಮೌಲ್ಯ ಸುಮಾರು ೪೭,೮೦,೦೦೦, ರೂ.ಗಳಷ್ಟಿತ್ತು. ಹೀಗಾಗಿ ಹೈದರಾಬಾದ್ ಕರ್ನಾಟಕದ ಜವಳಿ ಉದ್ಯಮಯಲ್ಲಿ ಅತ್ಯಂತ ಪ್ರಸಿದ್ಧ ಹಾಗೂ ಉತ್ತರ ಕರ್ನಾಟಕದಲ್ಲೇ ಏಕೈಕ ದೊಡ್ಡ ಜವಳಿ ಗಿರಣಿಯಾಗಿ ಹೆಸರು ಪಡೆದಿತ್ತು. ಆಗಿನ ಕಾಲದಲ್ಲೇ ಸುಮಾರು ೫೦೦೦ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು.[೫೪] ಆದರೆ ಇಂತಹ ಉನ್ನತ ಮಟ್ಟದಲ್ಲಿದ್ದ ಮಿಲ್ ಮಾಲೀಕತ್ವದ ಬದಲಾವಣೆ ಮತ್ತು ಕಾಲದ ಬದಲಾವಣೆಗೆ ಸಿಲುಕಿ ಅನೇಕ ಏಳುಬೀಳಗಳನ್ನು ಕಾಣುವಂತಾಯಿತು. ೧೮೮೪ರಲ್ಲಿ ಸ್ಥಾಪನೆಯಾದ ಮಿಲ್ ೧೯೬೨ರ ಹೊತ್ತಿಗೆ ಆರ್ಥಿಕ ಮುಗ್ಗಟ್ಟನ್ನು ಎದುರಿಸಿದ ಪರಿಣಾಮವಾಗಿ ೧೯೬೩ರಲ್ಲಿ ಮಿಲ್ ಕರ್ನಾಟಕ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿತು. ೧೯೬೭ರಲ್ಲಿ ಮತ್ತೆ ಆರ್ಥಿಕ ಮುಗ್ಗಟ್ಟಿನಿಂದ ಬಾಗಿಲು ಹಾಕಿತು. ನಂತರ ೧೯೭೩-೭೪ರಲ್ಲಿ

ರಾಷ್ಟ್ರೀಯ ಬಟ್ಟೆ ನಿಗಮಕ್ಕೆ(ಎನ್.ಟಿ.ಸಿ.) ಮಿಲ್‌ನ್ನು ಹಸ್ತಾಂತರಿಸಲಾಯಿತು. ಈಗಾಗಲೇ ರೋಗಗ್ರಸ್ತವಾಗಿದ್ದ ಮಿಲ್‌ನಲ್ಲಿ ೧೯೬೭ರಿಂದಲೇ ಬಟ್ಟೆ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಹಂತ ಹಂತವಾಗಿ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿ ಕೊನೆಗೆ ೨೦೦೨ರಲ್ಲಿ ಸಂಪೂರ್ಣವಾಗಿ ಬೀಗಮುದ್ರೆ ಹಾಕಲಾಯಿತು.

ಮಿಲ್‌ಗೆ ಬೀಗ ಮುದ್ರೆ ಹಾಕಿ, ಸಾವಿರಾರು ಸಂಖ್ಯೆಯಲ್ಲಿದ್ದ ಕಾರ್ಮಿಕರನ್ನು ವಜಾಗೊಳಿಸಿದ್ದರಿಂದ ಕಾರ್ಮಿಕರು ಬೀದಿ ಪಾಲಾದರು. ನಿರಾಶ್ರಿತರಾದ ಕಾರ್ಮಿಕರು ನಿರುದ್ಯೋಗ, ಬಡತನದಿಂದ ಪರದಾಡುವಂತಾಯಿತು. ಆಗ ಕಾರ್ಮಿಕರ ಇಂತಹ ಗಂಭೀರ ಪರಿಸ್ಥಿತಿಯನ್ನು ಅರಿತ ಸಂಘಟನೆಗಳು ಸಮಸ್ಯೆಯ ಪರಿಹಾರಕ್ಕೆ ಹೋರಾಟದ ದಾರಿ ಹಿಡಿದರು. ಹೀಗೆ ಎಂ.ಎಸ್.ಕೆ. ಮಿಲ್ ಆರಂಭವಾದಾಗಿನಿಂದ ಅದರ ಕಾರ್ಮಿಕರು, ವೇತನ, ಬೋನಸ್, ವಸತಿ, ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಆಗ ಅನೇಕ ಸಂಘಗಳು ಮುಖಂಡತ್ವ ವಹಿಸಿ ಕಾರ್ಮಿಕರ ಏಳಿಗೆಗಾಗಿ ಕಲ್ಯಾಣಕ್ಕಾಗಿ ಪ್ರಮುಖವಾದ ಹೋರಾಟಗಳನ್ನು ಆರಂಭಿಸಿದರು.

ಎಂ.ಎಸ್.ಕೆ. ಮಿಲ್ ಕಾರ್ಮಿಕರ ಒಕ್ಕೂಟ

ಮಿಲ್ ಪ್ರಾರಂಭವಾದಾಗಿನಿಂದ ಕಾರ್ಮಿಕರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರಾದರೂ, ಮಾಲೀಕರು ಕಾರ್ಮಿಕರ ಎಲ್ಲಾ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿರಲಿಲ್ಲ. ಕಾರ್ಮಿಕರು ಕೇವಲ ಕೂಲಿಯಾಳುಗಳ ರೀತಿಯಲ್ಲಿ ದುಡಿಯುತ್ತಿದ್ದರು. ಕ್ರಮೇಣ ಕಾರ್ಮಿಕರ ಸಮಸ್ಯೆಗಳು ಹೆಚ್ಚಾದಾಗ ಇವರ ಸಮಸ್ಯೆಗಳಿಗೆ ಸ್ಪಂದಿಸಲು 'ಎಂ.ಎಸ್.ಕೆ. ಮಿಲ್ ಕಾರ್ಮಿಕರ ಒಕ್ಕೂಟ'ವನ್ನು ೧೯೫೩ರಲ್ಲಿ ಸ್ಥಾಪಿಸಲಾಯಿತು. ಪೀಪಲ್ಸ್ ಡೆಮೋಕ್ರೆಟಿಕ್ ಫ್ರಂಟ್‌ನ ಸದಸ್ಯರಾಗಿದ್ದ ಶ್ರೀ ಗಂಗಾಧರ ನಮೋಶಿಯವರು ಸಂಘಟನೆಯ ಮಹಾಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ನೇತೃತ್ವದಲ್ಲಿ ಒಕ್ಕೂಟ ಕಾರ್ಮಿಕರ ಪರವಾಗಿ ಬೃಹತ್ ಹೋರಾಟವನ್ನು ಆರಂಭಿಸಿ ಅನೇಕ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿತ್ತು. ಅವುಗಳಲ್ಲಿ ಮುಖ್ಯವಾಗಿ ಕಾರ್ಮಿಕರಿಗೆ ಇದುವರೆಗಿದ್ದ ವೇತನ ೩ ರೂಪಾಯಿಗಳನ್ನು ೭ ರೂಪಾಯಿಗೆ ಏರಿಸಲು ಹೋರಾಟ ಮಾಡಿ ಯಶಸ್ವಿಯಾದರು. ಕಾರ್ಖಾನೆಯು ಆರ್ಥಿಕ ತೊಂದರೆಗೆ ಒಳಗಾದಾಗ ಕಾರ್ಮಿಕರ ಸಂಬಳದಲ್ಲಿ ಶೇ. ೨೫ರಷ್ಟು ವೇತನವನ್ನು ಕಡಿತಗೊಳಿಸಲು ಸರಕಾರ ಆದೇಶ ನೀಡಿತ್ತು. ಆಗ ಕಾರ್ಮಿಕರ ಒಕ್ಕೂಟ ಆ ಆದೇಶದ ವಿರುದ್ಧ ಬೃಹತ್ ಪ್ರತಿಭಟನೆ ಕೈಗೊಂಡು ಆದೇಶ ಜಾರಿಯಾಗದಂತೆ ನೋಡಿಕೊಂಡರು.

ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಮಿಲ್‌ನ್ನು ೧೯೬೭ರಲ್ಲಿ ಬಂದ್ ಮಾಡಲಾಯಿತು. ಹೀಗಾಗಿ ಉತ್ಪಾದನೆ ನಿಂತು ಹೋಗಿ ಕಾರ್ಮಿಕರ ವೇತನಕ್ಕೂ ತೊಂದರೆಯಾಗಿತ್ತು. ಆಗ ಶ್ರೀ ಗಂಗಾಧರ ನಮೋಶಿ ಮತ್ತು ಶ್ರೀ ಎಸ್.ಕೆ. ಕಾಂತ ಅವರು ಮಿಲ್‌ನ ಪುನರಾರಂಭಕ್ಕೆ ೭೮ ದಿನಗಳ ಕಾಲ ಮುಷ್ಕರ ಕೈಗೊಂಡು ಸರಕಾರದ ಮೇಲೆ ಒತ್ತಡ ತಂದರು. ಪರಿಣಾಮವಾಗಿ ಕಾರ್ಖಾನೆಯು ಪುನಃ ತನ್ನ ಕಾರ್ಯಾರಂಭ ಮಾಡುವಂತಾಯಿತು. ಇನ್ನು ಮಿಲ್ ಲಾಭದಲ್ಲಿದ್ದಾಗಲೂ ಕಾರ್ಮಿಕರಿಗೆ ಹೆಚ್ಚಿನ ತುಟ್ಟಿಭತ್ಯೆ ನೀಡುತ್ತಿರಲಿಲ್ಲ

ಆಗ ಕಾರ್ಮಿಕ ಒಕ್ಕೂಟದ ಮೂಲಕ ಬೇಡಿಕೆ ಸಲ್ಲಿಸಿ, ತುಟ್ಟಿಭತ್ಯೆಯನ್ನು ೧೫ ರೂಪಾಯಿಗಳಿಂದ ೨೪ ರೂಪಾಯಿಗಳಿಗೆ ಹೆಚ್ಚಿಸಲು ಕಾರಣವಾಯಿತು. ಹೀಗೆ ಒಕ್ಕೂಟ ಕಾರ್ಮಿಕರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಯುತವಾದ ಬೇಡಿಕೆಗಳನ್ನಿಡುತ್ತಾ, ಅನ್ಯಾಯವನ್ನು ಖಂಡಿಸುತ್ತಾ ಕಾರ್ಮಿಕರ ಪರವಾಗಿ ಹೋರಾಟ ಮಾಡುತ್ತಾ ಬಂದಿತು.

'ಎಂ.ಎಸ್.ಕೆ. ಮಿಲ್ ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್' ಮಾಲೀಕರಿಂದ ಆಗುತ್ತಿದ್ದ ಶೋಷಣೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮಿಲ್‌ನ ಕಾರ್ಮಿಕರು ೧೯೮೭ರಲ್ಲಿ ಎಂ.ಎಸ್.ಕೆ. ಮಿಲ್ ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್‌ನ್ನು ಸ್ಥಾಪಿಸಿಕೊಂಡರು. ಶ್ರೀ ತುಳಸಿರಾಮ್ ನಾಯಕ ಅವರು ಇದರ ಅಧ್ಯಕ್ಷರಾಗಿದ್ದರು. ಇದಕ್ಕೂ ಪೂರ್ವದಲ್ಲಿ ಈ ಸಂಘಟನೆ 'ಸಂಯುಕ್ತ ಮಜದೂರು ಸಂಘ' ಎನ್ನುವ ಹೆಸರಿನಿಂದ ಕಾರ್ಯ ನಿರ್ವಹಿಸುತ್ತಿದ್ದು ಶ್ರೀ ಮಲ್ಲಿಕಾರ್ಜುನ ಖರ್ಗೆ ಮುಂತಾದವರು ಇದರ ಮುಖಂಡರಾಗಿದ್ದರು. ಖರ್ಗೆಯವರು ವಿಧಾನಸಭಾ ಸದಸ್ಯರಾದ ನಂತರ ಸಂಘದ ಹೆಸರನ್ನು ಎಂ.ಎಸ್.ಕೆ. ಮಿಲ್ಸ್ ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್ ಎಂದು ಬದಲಾವಣೆ ಮಾಡಲಾಯಿತು. ಸಂಘಟನೆಯ ಮೂಲಕ ಕಾರ್ಮಿಕರ ವೇತನ ಹೆಚ್ಚಳ, ತುಟ್ಟಿಭತ್ಯೆ ಹೆಚ್ಚಳ ಮುಂತಾದ ಬೇಡಿಕೆಗಳನ್ನಿಟ್ಟು ಹೋರಾಟ ಮಾಡಲಾಯಿತು. ಇವರ ಹೋರಾಟಕ್ಕೆ ಮಣಿದ ಆಗಿನ ಸರಕಾರ, ಕಾರ್ಮಿಕರ ವೇತನವನ್ನು ೨೫ ರೂಪಾಯಿಯಿಂದ ೭೫ ರೂಪಾಯಿಗೆ ಹೆಚ್ಚಿಸಿತು. ತುಟ್ಟಿಭತ್ಯೆಯಲ್ಲಿಯೂ ೨೫ ರಿಂದ ೪೦ ರೂಪಾಯಿಗಳಷ್ಟು ಹೆಚ್ಚಾಯಿತು. ನಂತರ ೩೦೯ ಜನ ಕಾರ್ಮಿಕರ ಬಗ್ಗೆ ಆಡಳಿತ ಮಂಡಳಿಯು ಕೈಗೊಂಡ ಮತ್ತೊಂದು ವಿವಾದಿತ ತೀರ್ಮಾನವು ಕಾರ್ಮಿಕರನ್ನು ಇಕ್ಕಟ್ಟಿಗೆ ಸಿಲುಕಿಸಿತು. ಇಂತಹ ಅನ್ಯಾಯವನ್ನು ಶ್ರೀ ತುಳಸಿರಾಮ ನಾಯಕ ಅವರ ನೇತೃತ್ವದಲ್ಲಿ ೭೨ ತಾಸು ಆಮರಣ ಉಪವಾಸ ಸತ್ಯಾಗ್ರಹ ನಡೆಸಲಾಯಿತು. ಹೋರಾಟದಲ್ಲಿ ಹಿರಿಯ ರಾಜಕಾರಣಿ ಮಾನ್ಯ ಶ್ರೀ ವೀರೇಂದ್ರ ಪಾಟೀಲ್‌ರವರು ಕೂಡ ಭಾಗವಹಿಸಿ ಸಹಕಾರ ನೀಡಿದರು. ಹೋರಾಟ ತೀವ್ರ ಸ್ವರೂಪ ಪಡೆದಾಗ ಮಣಿದ ಆಡಳಿತ ವರ್ಗ ೩೦೯ ಜನ ಕಾರ್ಮಿಕರ ಬದಲಿ ಸ್ಥಾನವನ್ನು ತೆಗೆದು ಪುನಃ ಖಾಯಂ ಮಾಡುವಲ್ಲಿ ಯಶಸ್ವಿಯಾಯಿತು.[೫೫] ಹಾಗೆಯೇ ಕಾರ್ಮಿಕರ ವೇತನ, ಕೆಲಸದ ಕ್ರಮ, ಬೋನಸ್, ಸ್ವಯಂ ನಿವೃತ್ತಿ ಯೋಜನೆ ಮುಂತಾದ ವಿಷಯಗಳನ್ನು ಮುಂದಿಟ್ಟುಕೊಂಡು ಕಾರ್ಮಿಕರ ಪರವಾಗಿ ಹೋರಾಟ ನಡೆಸಿತ್ತು.

ಎಂ.ಎಸ್.ಕೆ. ಮಿಲ್ ನೌಕರ ಸಭಾ ಕಾರ್ಮಿಕರ ಸಂಘ

ಹೈದರಾಬಾದ್ ಕರ್ನಾಟಕ ಮತ್ತು ಎಂ.ಎಸ್.ಕೆ. ಮಿಲ್‌ನ ಕಾರ್ಮಿಕ ಚಳವಳಿಗಳಲ್ಲಿ ಅತ್ಯಂತ ಪ್ರಮುಖವಾಗಿ ಕಂಡು ಬರುವ ಮುಖಂಡರೆಂದರೆ ಶ್ರೀ ಎಸ್.ಕೆ. ಕಾಂತಾ ಅವರು. ಎಂ.ಎಸ್.ಕೆ. ಮಿಲ್‌ನ ಸಾಮಾನ್ಯ ಕಾರ್ಮಿಕರಾಗಿ ಜೀವನ ಪ್ರಾರಂಭಿಸಿದ ಇವರು ಮುಂದೆ ಸಂಘದ ಮುಖಂಡರಾಗಿ ಹೋರಾಟ ಮಾಡಿದವರು. ರಾಜಕೀಯ ಪ್ರವೇಶ ಮಾಡಿದ ಇವರು ವಿಧಾನಸಭೆ ಸದಸ್ಯರಾಗಿ ಮಂತ್ರಿಗಳಾಗಿ ರಾಜಕೀಯ ರಂಗದಲ್ಲೂ ಯಶಸ್ವಿಯಾದವರು ಅತ್ಯಂತ ಸರಳ ಜೀವಿಯಾದ ಇವರು ಇಂದಿಗೂ ವಿವಿಧ ಕಾರ್ಮಿಕರ ಪರವಾಗಿ ಹೋರಾಟವನ್ನು ಮಾಡುತ್ತಿರುವವರು. ಪ್ರಾರಂಭದಲ್ಲಿ ಈ ಮಿಲ್‌ನ ನೌಕರರೇ ಆಗಿದ್ದ ಎಸ್.ಕೆ. ಕಾಂತಾ ಅವರಿಗೆ ಕಾರ್ಮಿಕರ ಸಮಸ್ಯೆಗಳು, ಅವಶ್ಯಕತೆಗಳು ಮತ್ತು ಕಾರ್ಮಿಕರಿಗೆ ಆಗುತ್ತಿದ್ದ

ಅನ್ಯಾಯಗಳ ಅರಿವಿತ್ತು ಹೀಗಾಗಿ ಎಲ್ಲಾ ಕಾರ್ಮಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಎಂ.ಎಸ್.ಕೆ. ಮಿಲ್ ನೌಕರ ಸಭಾ ಎನ್ನುವ ಕಾರ್ಮಿಕರ ಸಂಘವನ್ನು ಸ್ಥಾಪಿಸಿ ಸಂಘದ ಅಧ್ಯಕ್ಷರಾದರು. ಶ್ರೀ ದಿಲೀಪ ಡಿ. ಕೌಜಲಗಿಕರ್‌ರವರು ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸಂಘದ ಮೂಲಕ ಕಾಂತಾ ಅವರು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅನೇಕ ಹೋರಾಟಗಳನ್ನು ಕೈಗೊಂಡರು. ಆರಂಭದಲ್ಲಿ ಕಾರ್ಮಿಕರ ಸಂಬಂಳ ೫ ರೂ.ಗಳಿತ್ತು. ಆದರೆ, ಜೀವನಮಟ್ಟ ಏರುತ್ತಿದ್ದಾಗ ವೇತನ ಸಾಕಾಗುವುದಿಲ್ಲವೆಂದೂ ಮಿಲ್‌ನ ಲಾಭಾಂಶದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಬೋನಸ್ ನೀಡಬೇಕೆಂದು ಉಗ್ರ ಹೋರಾಟವನ್ನು ಕೈಗೊಂಡರು. ಇವರ ಹೋರಾಟಕ್ಕೆ ಮಣಿದ ಆಡಳಿತ ವರ್ಗ ವೇತನವನ್ನು ಹೆಚ್ಚಿಸುವುದರ ಜೊತೆಗೆ ಶೇ. ೨೦ರಷ್ಟು ಬೋನಸ್ ನೀಡಿತು. ಇದರಿಂದ ಕಾಂತಾ ಮತ್ತು ಕಾರ್ಮಿಕರಲ್ಲಿ ಅತ್ಯಂತ ಆತ್ಮಾನುಭಾವ ಬೆಳೆಯಲು ಕಾರಣವಾಯಿತು.

ನಂತರ ಕಚ್ಚಾವಸ್ತು ಪೂರೈಕೆಯಲ್ಲಿನ ವಿಳಂಬ, ಉತ್ಪಾದನಾ ವೆಚ್ಚದ ಕಾರಣ ನೀಡಿ, ೧೯೮೮ರಲ್ಲಿ ಮಿಲ್‌ನ್ನು ಮತ್ತೊಮ್ಮೆ ಮುಚ್ಚಲಾಗಿತ್ತು. ಇದನ್ನು ವಿರೋಧಿಸಿದ ಕಾಂತಾರವರು ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವುದರ ಮೂಲಕ ಚಳವಳಿ ಆರಂಭಿಸಿದರು. ಇವರ ಒತ್ತಡಕ್ಕೆ ಮಣಿದು ೧೯೮೯ರಲ್ಲಿ ಮಿಲ್‌ನ್ನು ಮತ್ತೆ ಆರಂಭಿಸಲಾಯಿತು. ಆದರೆ ಮಿಲ್ ಮುಚ್ಚಿದಾಗಿನ ೮ ತಿಂಗಳ ವೇತನವನ್ನು ಕಾರ್ಮಿಕರಿಗೆ ನೀಡಲು ನಿರಾಕರಿಸಲಾಗಿತ್ತು. ಆಗ ಕಾಂತರವರು ಲೇಬರ್ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ನ್ಯಾಯಾಂಗ ಹೋರಾಟ ಆರಂಭಿಸಿದರು. ಇವರ ಹೋರಾಟದ ಫಲವಾಗಿ ಸುಮಾರು ೨೨೦೦ ಜನ ಕಾರ್ಮಿಕರಿಗೆ ನೇರವಾಗಿ ಒಟ್ಟು ಒಂದು ಕೋಟಿ ರೂಪಾಯಿ ದೊರೆಯುವಂತೆ ಮಾಡಿದರು. ಇದು ನ್ಯಾಯಾಲಯದ ಮೊರೆ ಹೋಗಿ ಕಾನೂನಿನ ಮೂಲಕ ದೊರೆತಂಥ ದೊಡ್ಡ ವಿಜಯವಾಗಿತ್ತು.

ನಂತರ ಕಾರ್ಮಿಕರು ಕಾರ್ಖಾನೆಗಳಲ್ಲಿ ಹೆಚ್ಚುವರಿ ಕೆಲಸ ಮಾಡಿದಾಗ ಸಿಗುತ್ತಿದ್ದ ಸಿಂಗಲ್ ಓ.ಟಿ. ಸೌಲಭ್ಯವನ್ನು ಖಂಡಿಸಿ ಕಾರ್ಮಿಕರಿಗೆ ಡಬಲ್ ಓ.ಟಿ. ಸೌಲಭ್ಯಕ್ಕೆ ಆಗ್ರಹಿಸಿ, ಹೋರಾಟ ಆರಂಭಿಸಿದರು. ಹೋರಾಟಕ್ಕೆ ಮಾಲೀಕರು ಮಣಿಯದಿದ್ದಾಗ ಉಪವಾಸ ಸತ್ಯಾಗ್ರಹದ ಮೂಲಕ ಚಳವಳಿ ಆರಂಭಿಸಿ, ಸೌಲಭ್ಯವನ್ನು ಕಾರ್ಮಿಕರಿಗೆ ದೊರಕಿಸಿ ಕೊಟ್ಟರು. ಮುಂದೆ ೧೯೯೧ರಲ್ಲಿ ಕಾರ್ಮಿಕರಿಗೆ ಲೇಆಫ್ ಸಂಬಳ ವಿಚಾರವಾಗಿ ಉಗ್ರ ಚಳವಳಿಯನ್ನು ಕೈಗೊಂಡಾಗ ಇವರನ್ನು ೧೫ ದಿನಗಳ ಕಾಲ ಜೈಲಿಗೆ ಹಾಕಲಾಯಿತು ಹಾಗೂ ಒಂದು ತಿಂಗಳ ಕಾಲ ಮಿಲ್‌ನ್ನು ಬಂದ್ ಮಾಡಲಾಗಿತ್ತು. ಆಗ ಇವರ ಬಂಧನ ವಿರೋಧಿಸಿ ಎಲ್ಲಾ ಕಾರ್ಮಿಕರು ಬೃಹತ್ ಜಾಥಾ ಕೈಗೊಂಡು ಚಳವಳಿ ಆರಂಭಿಸಿದರು. ಚಳವಳಿಯಲ್ಲಿ 'ದುನಿಯಾಕೆ ಮಜ್ದೂರ್ ಏಕ್ ಹೋ', ನ್ಯಾಯ ಕೊಡಿ ಇಲ್ಲವೇ ಸೀಟು ಬಿಡಿ ಎನ್ನುವ ಘೋಷಣೆಗಳೊಂದಿಗೆ ಪ್ರತಿಭಟನೆ ಆರಂಭಿಸಿದರು. ಇವರ ಪ್ರತಿಭಟನೆ ತೀವ್ರವಾದಾಗ, ಕಾಂತಾರವರನ್ನು ಬಿಡುಗಡೆಗೊಳಿಸಲಾಯಿತಲ್ಲದೆ ಕಾರ್ಮಿಕರಿಗೆ ಸಿಗಬೇಕಾಗಿದ್ದ ಎಲ್ಲಾ ಸೌಲಭ್ಯಗಳನ್ನು ವಸತಿ ಸಮಸ್ಯೆಯನ್ನು ಬಗೆಹರಿಸುವ ಭರವಸೆ ನೀಡಲಾಯಿತು. ಹೀಗೆ ಕಾರ್ಮಿಕರ ಪರವಾಗಿ ಹೋರಾಟ ಮಾಡುತ್ತಾ, ತನ್ನ ಹಿತಾಸಕ್ತಿಯನ್ನೇ ಮರೆತ ಕಾಂತಾರವರು, ರಾಜಕೀಯ ಪ್ರವೇಶಿಸಿ, ಮಂತ್ರಿಗಳಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದನ್ನು ಇಂದಿಗೂ

ಇಲ್ಲಿನ ಜನ ಮರೆತಿಲ್ಲ. ಕಾಂತಾ ಎಂದೊಡನೆ ಕಾರ್ಮಿಕರ ಪಾಲಿನ ಸಂಜೀವಿನಿಯೆಂದೆ ಹೆಸರಾಗಿದ್ದಾರೆ. ಮಿಲ್ ೨೦೦೨ರಲ್ಲಿ ಸಂಪೂರ್ಣವಾಗಿ ಮುಚ್ಚಿ ಹೋದ ನಂತರ ಕಾರ್ಮಿಕರಿಗೆ ಬರಬೇಕಾಗಿದ್ದ ಬಾಕಿ ವೇತನ, ಸೇವಾ ಭದ್ರತೆ ಪರಿಹಾರಗಳು ಕಾರ್ಮಿಕರಿಗೆ ನಿವೇಶನಗಳ ಹಂಚಿಕೆ, ಮುಂತಾದ ಬೇಡಿಕೆಗಳನ್ನಿಟ್ಟು ಹೋರಾಟವನ್ನು ಆರಂಭಿಸಿದರು. ಬಹಳ ದಿನಗಳ, ವರ್ಷಗಳ ಹೋರಾಟದ ನಂತರ ಸ್ವಲ್ಪಮಟ್ಟಿಗೆ ಕಾರ್ಮಿಕರಿಗೆ ಪರಿಹಾರ ದೊರಕಿಸಿಕೊಡುವಲ್ಲಿ ಸಫಲರಾದರು. ಇಂದಿಗೂ ಕಾಂತಾರವರು ಕಾರ್ಮಿಕರ, ಬಡವರ, ಶೋಷಿತರ, ಪರವಾಗಿ ಕಾನೂನಾತ್ಮಕ ಹೋರಾಟ ಮಾಡುತ್ತಿದ್ದಾರೆ.[೫೬]

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಹೋರಾಟ (ರಾಯಚೂರು)

ಹೈದರಾಬಾದ್ ಕರ್ನಾಟಕ ಪ್ರದೇಶದ ಅತೀ ದೊಡ್ಡ ಮತ್ತು ಪ್ರಸಿದ್ಧವಾದ ಚಿನ್ನದ ಗಣಿ ಎಂದರೆ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನಲ್ಲಿರುವ ಹಟ್ಟಿ ಚಿನ್ನದ ಗಣಿ. ಗಣಿಯು ಕರ್ನಾಟಕ ರಾಜ್ಯದ ಎರಡನೇ ಅತಿ ದೊಡ್ಡ ಗಣಿಯೂ ಆಗಿದೆ. ಗಣಿಯ ವ್ಯಾಪ್ತಿಯಲ್ಲಿ, ಕರಡೋಣಿ, ವಂದಲಿ, ಹೊನ್ನಳ್ಳಿ ಮುಂತಾದ ಹಳ್ಳಿಗಳು ಬರುತ್ತವೆ. ಲಿಂಗಸೂಗೂರು ಹಟ್ಟಿ ಮಸ್ಕಿ ಶಿಷ್ಟ ಭೂವಲಯವೆಂದೇ ಕರೆಸಿಕೊಂಡಿರುವ ಹಟ್ಟಿಯಲ್ಲಿ ಸುಮಾರು ೨೦ಕ್ಕಿಂತ ಹೆಚ್ಚಿನ ಪ್ರಾಚೀನ ಚಿನ್ನದ ಗಣಿಗಳಿವೆ. ಪ್ರಾಚೀನ ಕಾಲದಿಂದ ಇಲ್ಲಿ ಗಣಿಗಾರಿಕೆ ನಡೆದಿರುವ ಬಗ್ಗೆ ಕುರುಹುಗಳು ಮತ್ತು ಶಾಸನಗಳಿವೆ. ೧೯೫೦ರಲ್ಲಿ ಗಣಿಗಾರಿಕೆಯಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಿದ್ದರಿಂದಾಗಿ ಗಣಿಗಾರಿಕೆ ತನ್ನ ವ್ಯಾಪ್ತಿಯನ್ನು ಹಾಗೂ ಉತ್ಪಾದನೆಯ ಪ್ರಮಾಣವನ್ನು, ವೇಗವನ್ನು ಹೆಚ್ಚಿಸಿಕೊಂಡಿತು. ಹೈದರಾಬಾದ್ ನಿಜಾಮರ ಅಧೀನದಲ್ಲಿದ್ದ ಈ ಪ್ರದೇಶ ಮೈಸೂರು ರಾಜ್ಯಕ್ಕೆ ವರ್ಗಾವಣೆಯಾದ ನಂತರ ಚಿನ್ನದ ಗಣಿಯು ಕರ್ನಾಟಕ ರಾಜ್ಯ ಸರಕಾರದ ನಿಯಂತ್ರಣಕ್ಕೆ ವರ್ಗಾಯಿತವಾಗಿ 'ಹೈದರಾಬಾದ್ ಗೋಲ್ಡ್ ಮೈನ್ಸ್' ಎಂದು ಕರೆಯಲಾಗುತ್ತಿದ್ದ ಕಂಪನಿಯ ಹೆಸರು 'ದಿ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್' ಎಂದು ಬದಲಾಯಿತು. ರಾಯಚೂರು ಜಿಲ್ಲೆಯ ಹಟ್ಟಿ, ಕಡೋನಿ, ತೋಪಲ ದೊಡ್ಡಿ ವಂದಲಿ, ಬೂದ್ದಿನ್ನಿ ಗಣಿಗಳು ಮುಖ್ಯವಾದವು. ಹಟ್ಟಿ ಗಣಿ ಪಕ್ಕದಲ್ಲಿರುವ ಊಟಿ ಗ್ರಾಮದಲ್ಲೂ ಚಿನ್ನದ ಗಣಿಗಾರಿಕೆ ಆರಂಭವಾಗಿದೆ.

ನಮ್ಮೆದುರಿಗೆ ಕಾಣುವ ಚಿನ್ನವೆಂಬ ಲೋಹ ಅನೇಕ ಹಂತಗಳಲ್ಲಿ ಸಂಸ್ಕರಿಸಿಕೊಂಡು ಶುದ್ಧ ಚಿನ್ನವಾಗಿ ಸಿದ್ಧವಾಗುವ ಹೊತ್ತಿಗೆ ಅದರ ಹಿಂದೆ ಅಡಗಿರುವ ಕಾರ್ಮಿಕರ ತ್ಯಾಗ, ಕಷ್ಟ, ನೋವು, ಸಾವುಗಳು ಹೆಚ್ಚಾಗಿ ಹೊರಗೆ ಕಂಡು ಬರುವುದಿಲ್ಲ. ಚಿನ್ನದ ಉತ್ಪಾದನೆಯ ಹಿಂದೆ ಕಾರ್ಮಿಕರ ಕರಾಳ ಜೀವನವೇ ಅಡಗಿದೆ. ಸುಮಾರು ನಾಲ್ಕು ಸಾವಿರ ವಿವಿಧ ದರ್ಜೆಯ ಕಾರ್ಮಿಕರು ಕೆಲಸ ಮಾಡುತ್ತಿರುವ ಹಟ್ಟಿ ಚಿನ್ನದ ಗಣಿಯಲ್ಲಿ ಕಾರ್ಮಿಕರು ಹಲವಾರು ಸಮಸ್ಯೆಗಳಿಗೆ ಈಡಾಗಿದ್ದಾರೆ. ಕೆಲವು ಸಮಸ್ಯೆಗಳಿಗೆ ಪರಿಹಾರ ದೊರೆತರೆ ಇನ್ನು ಕೆಲವು ಸಮಸ್ಯೆಗಳು ಜಟಿಲವಾದಾಗ ಆಡಳಿತ ವರ್ಗ ಸರಿಯಾಗಿ ಸ್ಪಂದಿಸದಿದ್ದಾಗ, ಸಂಘಟನೆಗಳ ಮೂಲಕ ಹೋರಾಟ ಆರಂಭಿಸಿದ್ದು ಕಂಡು ಬರುತ್ತದೆ. ೧೯೮೦ ರಿಂದೀಚೆಗೆ ಈ ಪ್ರದೇಶದಲ್ಲಿ

ಸಿ.ಐ.ಟಿ.ಯು, ಡಿ.ವೈ.ಎಫ್.ಐ., ಸಿ.ಪಿ.ಐ. ಸಂಘಟನೆಗಳೊಂದಿಗೆ ಜೊತೆಗೂಡಿದ ಕಾರ್ಮಿಕರು ಅನೇಕ ಹೋರಾಟಗಳನ್ನು ಕೈಗೊಂಡಿದ್ದಾರೆ. ಹಾಗಾಗಿ ಇಲ್ಲಿನ ಕಾರ್ಮಿಕ ಚಳವಳಿ ಶಕ್ತಿಯುತವಾಗಿದೆ. ಕಾರ್ಮಿಕರ ಹಿತರಕ್ಷಣೆ, ಉದ್ದೇಶಗಳನ್ನಿಟ್ಟುಕೊಂಡು, ಇಲ್ಲಿ ಅನೇಕ ಸಂಘಟನೆಗಳು ಹುಟ್ಟಿಕೊಂಡಿವೆ. ಕೆಲವೊಮ್ಮೆ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಕಾರ್ಮಿಕ ಮುಖಂಡರು ತಮ್ಮ ತಮ್ಮಲ್ಲಿಯೇ ಹೋರಾಟ ಮಾಡಿದ್ದಾರೆ. ಕೆಲವೊಮ್ಮೆ ಸಮಸ್ಯೆಗಳ ನಿವಾರಣೆಗೆ, ಕಾರ್ಮಿಕರಿಗೆ ಪರಿಹಾರ ಕೊಡಿಸುವಾಗ, ಒಮ್ಮತಕ್ಕೆ ಬಾರದ ಕಾರ್ಮಿಕ ಮುಖಂಡರುಗಳು ತಮ್ಮ ತಮ್ಮಲ್ಲಿಯೇ ಹೊಡೆದಾಟಕ್ಕಿಳಿದಿದ್ದಾರೆ. ಇಂತಹ ಸಂದರ್ಭಗಳಲ್ಲಿ ಹಟ್ಟಿ ಚಿನ್ನದ ಗಣಿಯ ಕಾರ್ಮಿಕರ ಪರವಾಗಿ ಹೋರಾಡುತ್ತಾ ನಾರಾಯಣ ಮತ್ತು ಪೈ ಎಂಬಿಬ್ಬರು ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ.[೫೨]

ಹಟ್ಟಿ ಚಿನ್ನದ ಗಣಿಯಲ್ಲಿ, ಸುತ್ತಮುತ್ತಲ ಗ್ರಾಮ ಮತ್ತು ಸ್ಥಳಗಳಿಂದ ಬರುವ ಕಾರ್ಮಿಕರು ಸೇರಿದಂತೆ, ವಿವಿಧ ದರ್ಜೆಯ ಸುಮಾರು ೪೦೦೦ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತವರ್ಗ ಕಾರ್ಮಿಕರಿಗಾಗಿ ಸುಮಾರು ೨೦೦೦ ಮನೆಗಳನ್ನು ನಿರ್ಮಿಸಿ ವಿವಿಧ ದರ್ಜೆಯ ಆಧಾರದ ಮೇಲೆ ಮನೆಗಳನ್ನು ಕಾರ್ಮಿಕರಿಗೆ ಹಂಚಿತ್ತು. ಆದರೆ ಸ್ಥಳೀಯವಾಗಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಮಾತ್ರ ಯಾವುದೇ ಮನೆಗಳನ್ನು ಹಂಚಿರಲಿಲ್ಲ. ಕಾರ್ಮಿಕರು ಇದರ ಬಗ್ಗೆ ಪ್ರಶ್ನೆ ಮಾಡಿದಾಗ ಕಂಪನಿಯ ನಿಯಮದನ್ವಯ, ಕಂಪನಿಯಿಂದ ೧೦ ಕಿ.ಮೀ. ಅಂತರದಲ್ಲಿರುವವರಿಗೆ ಮನೆಗಳನ್ನು ನೀಡಲಾಗುವುದಿಲ್ಲ ಎಂಬ ಕಾರಣ ಹೇಳುತ್ತಿತ್ತು. ಹೀಗೆ ಒಂದು ಕಡೆ ಕಾರ್ಮಿಕರ ವಸತಿ ಸಮಸ್ಯೆ, ತಮ್ಮ ಹಳ್ಳಿಗಳಿಂದ ದೂರದ ಮನೆಗಳಿಂದ ಗಣಿ ಪ್ರದೇಶಕ್ಕೆ ಬಂದು ಹೋಗಲು ಸಾರಿಗೆ ಸಮಸ್ಯೆ ಮುಂತಾದ ಖರ್ಚುಗಳನ್ನು ತಾವೇ ಭರಿಸಿಕೊಳ್ಳಬೇಕಿತ್ತು. ಇಂತಹ ಸಮಸ್ಯೆ ನಿವಾರಣೆಗೆ ಸಿ.ಐ.ಟಿ.ಯು. ಸಂಘಟನೆಯ ಕಾರ್ಮಿಕರನ್ನು ಒಗ್ಗೂಡಿಸಿ, ಆಡಳಿತ ವರ್ಗದ ವಿರುದ್ಧ ಹೋರಾಟ ಆರಂಭಿಸಿತು. ಅವರ ಬೇಡಿಕೆಗಳೆಂದರೆ, ಸುತ್ತಮುತ್ತಲಿನ ಹಳ್ಳಿಗಳಿಂದ ಬರುವ ಕಾರ್ಮಿಕರಿಗೆ ಕಂಪನಿಯ ವೆಚ್ಚದಲ್ಲಿ ಸಾರಿಗೆ ಸೌಲಭ್ಯ ಒದಗಿಸುವುದು, ಗಣಿ ಪ್ರದೇಶದಲ್ಲಿ ವಸತಿ ಸೌಲಭ್ಯ ಕಲ್ಪಿಸುವುದು ಅಥವಾ ಬೇರೆ ಪ್ರದೇಶದಲ್ಲಿ ಕಾರ್ಮಿಕರು ಮನೆಗಳನ್ನು ಕಟ್ಟಿಕೊಳ್ಳಲು ಸಾಲ ಸೌಲಭ್ಯ ಒದಗಿಸುವುದು ಮುಂತಾದವುಗಳಿದ್ದವು. ಆಡಳಿತ ವರ್ಗ ಇಂತಹ ಬೇಡಿಕೆಗಳಿಗೆ ಸರಿಯಾಗಿ ಸ್ಪಂದಿಸದಿದ್ದಾಗ, ತೀವ್ರ ಪ್ರತಿಭಟನೆ, ಮುಷ್ಕರವನ್ನು ಆರಂಭಿಸಲಾಯಿತು. ಕಾರ್ಮಿಕ ಮುಖಂಡರು ಎಲ್ಲಾ ರೀತಿಯಿಂದ ಒತ್ತಡ ಹೇರತೊಡಗಿದರು. ಕೊನೆಗೆ ಇವರ ಬೇಡಿಕೆಗಳಿಗೆ ಸ್ಪಂದಿಸಿದ ಆಡಳಿತವರ್ಗ ಕಂಪನಿಯ ಸಮೀಪದಲ್ಲಿ ಭೂಮಿಯನ್ನು ಖರೀದಿಸಿ ಅಲ್ಲಿ ಕಾರ್ಮಿಕರಿಗೆ ನಿವೇಶನಗಳನ್ನು ಹಂಚಲು, ಮನೆಗಳನ್ನು ನಿರ್ಮಿಸಲು ಗೃಹಸಾಲ ಸೌಲಭ್ಯ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸಲು ಒಪ್ಪಿ ಕಾರ್ಯೋನ್ಮುಖವಾಗಿತ್ತು.

ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗೆ ಉತ್ತಮ ವೇತನವನ್ನು ನೀಡಲಾಗುತ್ತಿತ್ತಾದರೂ ಕಾಲಕಾಲಕ್ಕೆ ಬಡ್ತಿ, ಬೋನಸ್, ಕ್ಷೇಮನಿಧಿ, ಪಿಂಚಣಿ, ವಿಮಾ ಸೌಲಭ್ಯಗಳನ್ನು ಸರಿಯಾಗಿ ನೀಡುತ್ತಿರಲಿಲ್ಲ. ಹೀಗಾಗಿ

ಶ್ರೀ ವಾಲೇಬಾಬು ಎನ್ನುವವರು ಕಾರ್ಮಿಕರ ಮುಖಂಡರಾದ ನಂತರ ತೀವ್ರವಾದ ಹೋರಾಟವನ್ನು ಕೈಗೊಂಡು ಅನೇಕ ತಿಂಗಳುಗಳಿಂದ ಕಾರ್ಮಿಕರಿಗೆ ಬರಬೇಕಾಗಿದ್ದ ಬೋನಸ್ ಹಣ, ಬಡ್ತಿ ಮತ್ತು ಇತರ ಸೌಲಭ್ಯಗಳನ್ನು ಕೊಡಿಸಿದರು ಹಾಗೂ ಪ್ರತಿ ವರ್ಷ ಆಯಾ ವರ್ಷದ ಬೋನಸ್ ಹಣವನ್ನು ನೀಡಬೇಕೆಂದು ಷರತ್ತನ್ನು ವಿಧಿಸಲಾಯಿತು. ಜೊತೆಗೆ ಕಾರ್ಮಿಕರಿಗೆ ಇದುವರೆಗೆ ಕಲ್ಪಿಸಲಾಗುತ್ತಿದ್ದ ೨೦ ದಿನದ ಸಿ.ಎಲ್. ೧೦ ದಿನ ಪಿ.ಎಲ್. ರಜೆಯ ಜೊತೆಗೆ, ಅನಾರೋಗ್ಯ ರಜೆ ಸೌಲಭ್ಯ ಕಂಪನಿಯ ಪರಿಸರದಲ್ಲಿ ಉತ್ತಮ ಆಸ್ಪತ್ರೆ ನಿರ್ಮಾಣ, ಸ್ತ್ರೀಯರಿಗೆ ಹೆರಿಗೆ ಸೌಲಭ್ಯ, ಮುಂತಾದ ಸೌಲಭ್ಯಗಳನ್ನು ದೊರಕಿಸಿಕೊಟ್ಟರು.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಇನ್ನೊಂದು ಬೃಹತ್ ಹೋರಾಟವೆಂದರೆ ಗಣಿಯನ್ನು 'ಇಂಡೋಫಿಲ್' ಕಂಪನಿಗೆ ವಹಿಸಿಕೊಡುವುದರ ವಿರುದ್ಧ ನಡೆದ ಹೋರಾಟ. ಸುಮಾರು ೨೦೦೬ರಲ್ಲಿ ಚಿನ್ನದ ಗಣಿ ಗಣಿಗಾರಿಕೆಯ ವ್ಯಾಪ್ತಿಯ ವಿಸ್ತಾರ ಹಾಗೂ ಚಿನ್ನದ ನಿಕ್ಷೇಪಗಳ ಸಂಶೋದನೆ ಅಭಿವೃದ್ಧಿಗಾಗಿ ಹಟ್ಟಿ ಗಣಿಯನ್ನು ಇಂಡೋಫಿಲ್ ಎನ್ನುವ ಕಂಪನಿಗೆ ಪರವಾನಿಗೆ ಕೊಡುವ ಕುರಿತು ಸರ್ಕಾರದ ಮಟ್ಟದಲ್ಲಿ ಚಿಂತನೆ, ಮಾತುಕತೆ ಪ್ರಾರಂಭವಾಗಿತ್ತು. ಆಗ ಇದನ್ನು ವಿರೋಧಿಸಿ ಸಂಘಟನೆಗಳ ನೇತೃತ್ವದಲ್ಲಿ ಕಾರ್ಮಿಕರು ಹೋರಾಟಗಳನ್ನು ಆರಂಭಿಸಿದರು. ಹಟ್ಟಿ ಗಣಿಯನ್ನು ಇಂಡೋಫಿಲ್ ಕಂಪನಿಯ ಸಂಶೋಧನೆಗೆ ಪರವಾನಿಗೆ ಕೊಟ್ಟರೆ, ಈ ಪ್ರದೇಶವು ಕಂಪನಿಯ ಹತೋಟಿಗೆ ಬಂದು, ಆಡಳಿತ ಹಿಡಿತ ಸಂಪೂರ್ಣ ಕಂಪನಿಯ ಮೇಲ್ವಿಚಾರಣೆಗೆ ಒಳಪಡುತ್ತದೆ. ಅಲ್ಲದೇ ಕಂಪನಿಯು ತನಗೆ ಸೂಕ್ತವೆನಿಸುವ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತದೆ. ಇಂತಹ ಕ್ರಮದಿಂದಾಗಿ ಪ್ರಸ್ತುತ ಉದ್ಯೋಗದಲ್ಲಿರುವ ಕಾರ್ಮಿಕರು ನಿರುದ್ಯೋಗಿಗಳಾಗುವ ಸಂಭವವಿದೆ. ಇದರಿಂದ ಇಲ್ಲಿನ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ, ಹಾಗಾಗಿ ಸರಕಾರದ ಆದಾಯದ ದೃಷ್ಟಿಯಿಂದ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಇಂಡೋಫಿಲ್ ಕಂಪನಿಗೆ ಗಣಿ ಪ್ರದೇಶವನ್ನು ವಹಿಸದಿರುವಂತೆ ತೀವ್ರ ಹೋರಾಟವನ್ನು ಆರಂಭಿಸಿದರು. ಒಂದು ವೇಳೆ ಆಡಳಿತ ವರ್ಗ ಇದಕ್ಕೆ ಒಪ್ಪದಿದ್ದರೆ ಉಪವಾಸ ಆರಂಭಿಸುವುದಾಗಿ ತಿಳಿಸಿ, ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಆಗ ಕಾರ್ಮಿಕರ ಸಂಘಟನೆಯ ಹೋರಾಟದ ತೀವ್ರತೆ, ವಿರೋಧ, ಪರಿಣಾಮಗಳಿಂದ ಅನಾಹುತ ಸಂಭವಿಸಬಹುದು ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಆಗ ಹಟ್ಟಿ ಗಣಿ ಕಂಪನಿಯ ಅಧ್ಯಕ್ಷರಾದ ಶ್ರೀ ಪರಾಸಮಲ್ ಸುಖಾಣಿ, ಇಂಡೋಫಿಲ್ ಕಂಪನಿಯನ್ನು ತಿರಸ್ಕರಿಸುವುದಾಗಿ ಮತ್ತು ಯಥಾಸ್ಥಿತಿ ಮುಂದುವರಿಸಿ, ಕಂಪನಿಯ ಆಡಳಿತ ಮಂಡಳಿಯೇ ಆಡಳಿತಾಂಗವನ್ನು ಮುಂದುವರಿಸಿಕೊಂಡು ಹೋಗುತ್ತದೆ ಎಂದು ಭರವಸೆ ನೀಡಿದ ನಂತರ ಹೋರಾಟ ನಿಂತಿತ್ತು.[೫೮] ಹೀಗೆ ಹಟ್ಟಿ ಚಿನ್ನದ ಗಣಿಯನ್ನು ವಿದೇಶಿ ಮೂಲದ ಕಂಪನಿಯ ಹಿಡಿತದಿಂದ ಪಾರು ಮಾಡಿದ, ಕಾರ್ಮಿಕರ ಭವಿಷ್ಯದ ಮೇಲೆ ಮೂಡಿದ ಕರಿನೆರಳನ್ನು ಹೊಡೆದೋಡಿಸಿದ ಕೀರ್ತಿ ಕಾರ್ಮಿಕ ಸಂಘಟನೆ ಮತ್ತು ಕಾರ್ಮಿಕ ಚಳವಳಿಗೆ ಸೇರುತ್ತದೆ.

ಹೀರಾ-ಬುದ್ದಿನ್ನಿ ಚಿನ್ನದ ಗಣಿ ಕಾರ್ಮಿಕರ ಚಳವಳಿ

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹೀರಾಬುದ್ದಿನ್ನಿ ಚಿನ್ನದ ಶೋಧನಾ ಗಣಿ ಕೋಟ್ಯಾಂತರ ರೂ. ಆದಾಯ ತರುವ ಗಣಿಯಾಗಿದೆ. ಈ ಶೋಧನಾ ಗಣಿಯಲ್ಲಿ ಪ್ರತಿದಿನ ೨೩ ಟನ್ ಅದಿರು ಹೊರ

ತೆಗೆದು ಹಟ್ಟಿಯಲ್ಲಿರುವ ಮುಖ್ಯ ಚಿನ್ನದ ಗಣಿಗೆ ಸಾಗಿಸಲಾಗುತ್ತದೆ. ಪ್ರತಿ ಟನ್‌ಗೆ ನಾಲ್ಕು ಗ್ರಾಂ ಚಿನ್ನ ಇಲ್ಲಿನ ಅದಿರಿನಲ್ಲಿ ದೊರೆಯುತ್ತದೆ. ಈ ದೃಷ್ಟಿಯಿಂದ ಇದು ಹೆಚ್ಚು ಆದಾಯ ತರುವ ಗಣಿ ಪ್ರದೇಶವಾಗಿದೆ. ಆದರೆ ಇಲ್ಲಿನ ಕಾರ್ಮಿಕರು ಅದರಲ್ಲೂ ಸಾಂದರ್ಭಿಕ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕಾರ್ಮಿಕರು ಅನೇಕ ಸವಲತ್ತುಗಳಿಂದ ವಂಚಿತರಾಗಿ, ಖಾಯಂ ಕಾರ್ಮಿಕರಿಗೆ ಸಿಗುವ ಅನೇಕ ಸವಲತ್ತುಗಳು ಇವರಿಗೆ ಸಿಗದೆ, ವಂಚಿತರಾಗಿ ಹೋರಾಟ ಮಾಡುತ್ತಿದ್ದಾರೆ. ಪ್ರಸ್ತುತ ಗಣಿಯಲ್ಲಿ ೪೯ ಕಾರ್ಮಿಕರು ಹಲವಾರು ವರ್ಷಗಳಿಂದ ಸಾಂದರ್ಭಿಕ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಇವರ ಸೇವೆಯನ್ನು ಖಾಯಂಗೊಳಿಸದೆ ಕಡಿಮೆ ವೇತನ ನೀಡಿ ದುಡಿಸಿಕೊಳ್ಳಲಾಗುತ್ತಿದೆ ಮತ್ತು ಯಾವುದೇ ಸೇವಾ ಭದ್ರತೆಯಾಗಲಿ, ಭವಿಷ್ಯನಿಧಿಯಾಗಲಿ ಕೊಡುತ್ತಿಲ್ಲ. ಇದನ್ನು ವಿರೋಧಿಸಿ ಸಾಂದರ್ಭಿಕ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರು ಅನಿರ್ದಿಷ್ಟ ಮುಷ್ಕರ ಆರಂಭಿಸಿದರು. ಇವರ ಬೇಡಿಕೆಗಳೇನೆಂದರೆ ಸಾಂದರ್ಭಿಕ ಸೇವೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ೪೯ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಬೇಕು, ಕಾರ್ಮಿಕರ ಮಕ್ಕಳಿಗೆ ಉದ್ಯೋಗ ನೀಡಬೇಕು, ದಿನಗೂಲಿ ಕಾರ್ಮಿಕರ ವೇತನ ಹೆಚ್ಚಿಸಬೇಕು, ಖಾಯಂ ನೌಕರರಿಗೆ ನೀಡುವಂತೆ ಫುಡ್‌ಕಿಟ್ ನೀಡಬೇಕು ಎನ್ನುವುದಾಗಿತ್ತು. ಆದರೆ ಇವರ ಬೇಡಿಕೆಗಳಿಗೆ ಕಂಪನಿಯ ಅಧ್ಯಕ್ಷರಾಗಲಿ, ಸರಕಾರವಾಗಲಿ ಗಮನ ಹರಿಸಲಿಲ್ಲ. ಹೀಗಾಗಿ ಗಣಿಯಲ್ಲಿ ಅದಿರು ತೆಗೆಯುವ, ಸಾಗಿಸುವ ಕೆಲಸವನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟ ಮುಷ್ಕರವನ್ನು ಆರಂಭಿಸಿದರು.

ಹಲವಾರು ತಿಂಗಳುಗಳಾದರೂ ಇವರ ಸಮಸ್ಯೆಗಳತ್ತ ಯಾರೂ ಗಮನಹರಿಸಲಿಲ್ಲ. ಸರಕಾರ ಎಷ್ಟು ನಿರ್ಲಕ್ಷ್ಯ ವಹಿಸಿತ್ತೆಂದರೆ, ಕಂಪನಿಗೆ ಸುಮಾರು ತಿಂಗಳಿಂದ ಖಾಯಂ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಿರಲಿಲ್ಲ. ಮೈಸೂರು ಮಿನರಲ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರೆ ಇಲ್ಲಿಯೂ ಪ್ರಭಾರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹಟ್ಟಿ ಕಂಪನಿಯ ಅಧ್ಯಕ್ಷರೂ ಇದರ ಬಗ್ಗೆ ಗಮನ ಹರಿಸಲಿಲ್ಲ. ಸರಕಾರದ ನಿರ್ಲಕ್ಷ್ಯದಿಂದಾಗಿ ಗಣಿಗೆ ಎಷ್ಟೊಂದು ನಷ್ಟವಾಗುತ್ತಿತ್ತೆಂದರೆ, ಸತತ ಒಂದು ತಿಂಗಳಿನಿಂದ ಗಣಿ ಅದಿರು ತೆಗೆಯುವ ಸಾಗಿಸುವ ಕೆಲಸ ಸ್ಥಗಿತಗೊಂಡಿದ್ದರಿಂದ ದಿನದ ಲೆಕ್ಕಾಚಾರದ ಪ್ರಕಾರ ೭೩೬ ಟನ್ ಅದಿರು ಹೊರ ತೆಗೆದು ೨೯೪೪ ಗ್ರಾಂ ಚಿನ್ನ ಉತ್ಪಾದಿಸಬಹುದಿತ್ತು. ಅಂದರೆ ಸುಮಾರು ನಾಲ್ಕು ಕೋಟಿ ರೂಪಾಯಿಗೂ ಅಧಿಕ ಹಣ ಬರುತ್ತಿತ್ತು. ಹೀಗೆ ಒಂದು ಕಡೆ ಕಂಪನಿಗೆ ನಷ್ಟ ಇನ್ನೊಂದು ಕಡೆ ಕಾರ್ಮಿಕರಿಗೆ ವೇತನವಿಲ್ಲದೆ ಅವರ ಕುಟುಂಬದ ಪರಿಸ್ಥಿತಿ ಚಿಂತಾಜನಕವಾಗಿತ್ತು. ಇಂತಹ ಸಂದರ್ಭದಲ್ಲಿ ಕಾರ್ಮಿಕರು ಒಗ್ಗಟ್ಟಾಗಿ ಬೃಹತ್ ಚಳವಳಿಯನ್ನು ಕೈಗೊಂಡ ಪರಿಣಾಮವಾಗಿ ಇಡೀ ಹೀರಾ-ಬುದ್ದಿನ್ನಿ ಚಿನ್ನದ ಗಣಿಯನ್ನೇ ಬಂದ್ ಮಾಡಲಾಯಿತು. ಆಡಳಿತ ಮಂಡಳಿಯ ಬಿಗಿಪಟ್ಟು, ಸರಕಾರದ ನಿರ್ಲಕ್ಷ್ಯ ಮತ್ತು ಕಾರ್ಮಿಕರ ಹಟಮಾರಿತನದಿಂದ ಹಲವು ದಿನಗಳವರೆಗೆ ಪರಿಸ್ಥಿತಿ ಹೀಗೆ ಸಾಗಿತ್ತು ಕೊನೆಗೆ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಿ.ವೈ. ವೆಂಕಟೇಶ ಅವರು ಮಾತುಕತೆ ನಡೆಸಿ, ಕಾರ್ಮಿಕರ ಸೇವೆ ಖಾಯಂ ಹಾಗೂ ಕಾರ್ಮಿಕರ ಮಕ್ಕಳಿಗೆ ಉದ್ಯೋಗ ಹೊರತಾಗಿ ಗುತ್ತಿಗೆ

ಕಾರ್ಮಿಕರಿಗೆ ದಿನಗೂಲಿಯನ್ನು ಏರಿಸಲಾಗುವುದು. ಅನಿಲ ಸಿಲಿಂಡರ್, ಸೀಮೆಎಣ್ಣೆ ಹಾಗೂ ಐದು ಕೆ.ಜಿ. ಅಕ್ಕಿ, ಎರಡು ಕೆ.ಜಿ. ಬೇಳೆ, ತಲಾ ಒಂದು ಕೆ.ಜಿ. ಸಕ್ಕರೆ, ಎಣ್ಣೆ ಇರುವ ಪುಡ್‌ಕಿಟ್ ನೀಡಲು ಒಪ್ಪಿಕೊಂಡರು. ಇಂತಹ ತೀರ್ಮಾನದ ಬಗ್ಗೆ ಆರಂಭದಲ್ಲಿ ಕಾರ್ಮಿಕರು ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ ವಾದರೂ ನಂತರ ತಾತ್ಕಾಲಿಕವಾಗಿ ಹೋರಾಟವನ್ನು ನಿಲ್ಲಿಸಿದರು. ಆದರೆ ಇಂದಿನವರೆಗೂ ಕಾರ್ಮಿಕರಿಗೆ ಹಟ್ಟಿ ಮುಖ್ಯ ಚಿನ್ನದ ಗಣಿ ಗುತ್ತಿಗೆ ಕಾರ್ಮಿಕರಿಗೆ ನೀಡುತ್ತಿರುವ ಸಮನಾಂತರ ಸವಲತ್ತುಗಳು ಇನ್ನೂ ಪೂರ್ಣವಾಗಿ ದೊರೆತಿಲ್ಲವೆಂದು ತಿಳಿದು ಬಂದಿದೆ.[೫೯]

ಶಹಬಾದ್ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆ ಕಾರ್ಮಿಕರ ಚಳವಳಿ

ಗುಲಬರ್ಗಾ ಜಿಲ್ಲೆಯಲ್ಲಿ ನಡೆದಿರುವ ಕಾರ್ಮಿಕ ಹೋರಾಟಗಳಲ್ಲಿ ಗುರುತಿಸಬಹುದಾದ ಇನ್ನೊಂದು ಪ್ರಮುಖವಾದ ಹೋರಾಟವೆಂದರೆ, ಶಹಬಾದ್ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆ ಕಾರ್ಮಿಕರ ಹೋರಾಟ ವಾಗಿದೆ. ಗುಲಬರ್ಗಾ ಜಿಲ್ಲೆಯು ಅಪಾರ ನೈಸರ್ಗಿಕ ಸಂಪತ್ತನ್ನು ಹೊಂದಿದೆ. ಅದರಲ್ಲೂ ಸಿಮೆಂಟ್ ತಯಾರಿಕೆಗೆ ಬೇಕಾಗುವ ಮೂಲ ಕಚ್ಚಾವಸ್ತುವಾದ ಸುಣ್ಣದ ಕಲ್ಲು ಈ ಭಾಗದ ಶಹಬಾದ್, ವಾಡಿ, ಸೇಡಂ, ಕುರುಕುಂಟಾ ಪ್ರದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ದೊರೆಯುತ್ತದೆ. ಹಾಗೂ ಇಲ್ಲಿನ ವಾತಾವರಣ ಮತ್ತು ಇತರ ಸೌಲಭ್ಯಗಳು ಸಿಮೆಂಟ್ ತಯಾರಿಕೆಗೆ, ದಾಸ್ತಾನಿಗೆ, ಸಾಗಾಣಿಕೆಗೆ ಅನುಕೂಲಕರವಾಗಿವೆ. ಹೀಗಾಗಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿಯೇ ಇಲ್ಲಿ ಸಿಮೆಂಟ್ ಕಾರ್ಖಾನೆಗಳು ಸ್ಥಾಪಿತಗೊಂಡಿದ್ದವು. ಹೀಗೆ ಸ್ಥಾಪನೆಗೊಂಡ ಸಿಮೆಂಟ್ ಕಾರ್ಖಾನೆಯಲ್ಲಿ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆ ಮೊಟ್ಟಮೊದಲದಾಗಿದೆ. ೧೯೨೪ರಲ್ಲಿ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಯನ್ನು ಶಹಬಾದಿನಲ್ಲಿ ಆರಂಭಿಸಲಾಗಿತ್ತು. ಅಂದಿನ ಕಾಲಕ್ಕೆ ದಕ್ಷಿಣ ಭಾರತದಲ್ಲೇ ಮೊಟ್ಟಮೊದಲ ಸಿಮೆಂಟ್ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಇದನ್ನು ಗಮನಿಸಿದಾಗ ಅಧ್ಯಯನದಿಂದ ತಿಳಿದು ಬರುವುದೇನೆಂದರೆ, ಆ ದಿನದಲ್ಲಿಯೇ ಇಲ್ಲಿ ಸಿಗುವ ಕಚ್ಚಾವಸ್ತು ಗಳನ್ನು ಬಂಡವಾಳಶಾಹಿಗಳು ಗುರುತಿಸಿದ್ದರು.

ಇಲ್ಲಿ ಇಂತಹ ಬೃಹತ್ ಕಾರ್ಖಾನೆಯ ಸ್ಥಾಪನೆಯಿಂದಾಗಿ, ಕಾರ್ಮಿಕರು, ತಂತ್ರಜ್ಞರು, ಹೀಗೆ ವಿವಿಧ ಶ್ರೇಣಿಯ ಉದ್ಯೋಗಸ್ಥರನ್ನೊಳಗೊಂಡ ಸುಮಾರು ಐದರಿಂದ ಆರು ಸಾವಿರದಷ್ಟು ಜನರಿಗೆ ಕಾರ್ಖಾನೆ ಉದ್ಯೋಗ ಒದಗಿಸಿತ್ತು. ಶಹಬಾದ್‌ನ ಸುತ್ತಮುತ್ತಲು ಅತ್ಯುತ್ತಮ ಗುಣಮಟ್ಟದ ಸುಣ್ಣದ ಕಲ್ಲುಗಳು ಸಿಗುವ ಕ್ವಾರೆಗಳು ಇದ್ದವು. ಸಿಮೆಂಟ್ ತಯಾರಿಕೆಗೆ ಕಚ್ಚಾವಸ್ತುವನ್ನು ದೊರಕಿಸುತ್ತಿದ್ದ ಕ್ವಾರೆಗಳು ಇಡೀ ಭಾರತದಲ್ಲೆ ಅತ್ಯುತ್ತಮ ಗುಣಮಟ್ಟದವಾಗಿದ್ದುದರಿಂದ, ಇಲ್ಲಿ ತಯಾರಾದ ಉತ್ತಮ ಗುಣಮಟ್ಟದ ಎ.ಸಿ.ಸಿ. ಸಿಮೆಂಟ್ ಬಹುಬೇಗ ರಾಜ್ಯ ಮತ್ತು ಇತರ ರಾಜ್ಯಗಳಲ್ಲಿ ಹೆಸರಾಯಿತು. ಕಾರ್ಖಾನೆಯ ಉತ್ಪಾದನೆ ಎಷ್ಟೊಂದು ದೊಡ್ಡ ಪ್ರಮಾಣದಲ್ಲಿತ್ತೆಂದರೆ ಇಡೀ ದೇಶದ ಅರ್ಧ ಭಾಗಕ್ಕೆ ಇಲ್ಲಿಯ ಸಿಮೆಂಟ್ ಪೂರೈಕೆಯಾಗುತ್ತಿತ್ತು ಹಾಗೂ ೧೯೯೦ರವರೆಗೆ ಕಾರ್ಖಾನೆಯು ಯಾವ ಸಮಸ್ಯೆಗಳಿಲ್ಲದೆ ಉತ್ಪಾದನೆಯಲ್ಲಿ ತೊಡಗಿತ್ತು. ಆದರೆ ೧೯೯೦ರಲ್ಲಿ ಎ.ಸಿ.ಸಿ. ಕಾರ್ಖಾನೆಯ ಮಾಲೀಕರು ಕಲ್ಕತ್ತ

ಮೂಲದ ಹಿರಾಲಾಲ್, ಮದನ್‌ಲಾಲ್ ಪೋದ್ದಾರ್(ಹೆಚ್.ಎಂ.ಪಿ.) ಎನ್ನುವವರಿಗೆ ಮಾರಾಟ ಮಾಡಿದರು. ಕಾರ್ಖಾನೆಯನ್ನು ಇವರಿಗೆ ಮಾರಾಟ ಮಾಡಲು ಉತ್ಪಾದನಾ ವೆಚ್ಚ ಹೆಚ್ಚಳ, ಮುಂತಾದ ಬೇರೆ ಬೇರೆ ಕಾರಣಗಳನ್ನು ನೀಡಿದ್ದರು. ಒಟ್ಟಿನಲ್ಲಿ ಕಾರ್ಖಾನೆ ಹೆಚ್.ಎಂ.ಪಿ. ಎನ್ನುವ ಹೊಸ ಹೆಸರಿನೊಂದಿಗೆ ಉತ್ಪಾದನೆಯನ್ನು ಮುಂದುವರೆಸಿತ್ತು. ಆಗ ಮಾಲೀಕತ್ವದ ಹಸ್ತಾಂತರದ ಸಮಯದಲ್ಲಿ ಕಾರ್ಮಿಕರ ಹಿತ ಕಾಪಾಡುವಂತಹ ಅನೇಕ ಷರತ್ತುಗಳಿಗೆ ಹೊಸ ಆಡಳಿತವರ್ಗ ಒಪ್ಪಿಗೆ ಸೂಚಿಸಿತ್ತು.

ಹೆಚ್.ಎಂ.ಪಿ. ಎಂಬ ಹೆಸರಿನಿಂದ ಕಾರ್ಯನಿರ್ವಹಿಸತೊಡಗಿದ ಕಾರ್ಖಾನೆಯು ಮೊದಲಿನಂತೆ ಸರಾಗವಾಗಿ ನಡೆಯಲಿಲ್ಲ. ಅದಕ್ಕೆ ಕಾರಣಗಳೇನೆಂದರೆ ಆ ಸಮಯದಲ್ಲಿ ಆ ಭಾಗದ ವಾಡಿ, ಸೇಡಂ, ಮಾಳಖೇಡದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಹೊಂದಿದ್ದ, ಅತ್ಯುನ್ನತ ತಂತ್ರಜ್ಞಾನ ಮತ್ತು ತಂತ್ರಜ್ಞರನ್ನೊಳಗೊಂಡ ಬಿರ್ಲಾ ಕಂಪನಿಯ 'ರಾಜಶ್ರೀ' ಮತ್ತು 'ವಾಸವದತ್ತಾ' ಹೆಸರಿನ ಬ್ರಾಂಡ್ ಹೊಂದಿದ್ದ ಸಿಮೆಂಟ್ ಕಾರ್ಖಾನೆಗಳು ಆರಂಭವಾಗಿ ಮಾರುಕಟ್ಟೆಯನ್ನು ಆಕ್ರಮಿಸತೊಡಗಿದ್ದವು. ಆದರೆ ಆ ಸಮಯದಲ್ಲಿ ಹೆಚ್.ಎಂ.ಪಿ. ಕಾರ್ಖಾನೆ ಮಾಲೀಕರು ಮಾತ್ರ ಕಾರ್ಖಾನೆಯನ್ನು ಆಧುನೀಕರಣ ಗೊಳಿಸದೆ, ಹೊಸ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳದೆ ಹಳೇ ತಂತ್ರಜ್ಞಾನದೊಂದಿಗೆ ಉತ್ಪಾದನೆ ಯಲ್ಲಿ ತೊಡಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಒಂದು ಕಡೆ ಹೊಸ ಸಿಮೆಂಟ್ ಕಂಪನಿಗಳೊಂದಿಗೆ ಪೈಪೋಟಿ ಮಾಡುವುದು ಕಷ್ಟವಾದರೆ ಇನ್ನೊಂದು ಕಡೆ, ಕಾರ್ಮಿಕರೆ ಹೆಚ್ಚಿದ್ದ ಮಾನವಶಕ್ತಿಯ ಮೇಲೆ ಅವಲಂಬಿತವಾಗಿದ್ದ, ಕಾರ್ಖಾನೆಯಲ್ಲಿ ಉತ್ಪಾದನಾ ವೆಚ್ಚ ಮತ್ತು ಕಾರ್ಮಿಕರ ವೇತನ ಹೆಚ್ಚಾಗತೊಡಗಿತ್ತು. ಇಂತಹ ಬೆಳವಣಿಗೆಯಿಂದಾಗಿ ಕೊನೆಗೆ ತಾಂತ್ರಿಕ ತೊಂದರೆಗಳನ್ನು ಮುಂದೊಡ್ಡಿ ಕಾರ್ಖಾನೆಯನ್ನು ಏಕಾಏಕಿ ಸ್ಥಗಿತಗೊಳಿಸಿ ಲಾಕ್‌ಔಟ್ ಘೋಷಿಸಲಾಯಿತು. ಇದರಿಂದ ತೊಂದರೆಗೆ ಸಿಲುಕಿದ ಕಾರ್ಮಿಕರು, ಕಾರ್ಖಾನೆ ಮುಚ್ಚಿದ್ದರ ವಿರುದ್ಧ ಹೋರಾಟಕ್ಕಿಳಿದರು.

ಕಾರ್ಖಾನೆಯಲ್ಲಿ ಉತ್ಪಾದನೆ ಸ್ಥಗಿತಗೊಂಡಿದ್ದರಿಂದಾಗಿ ಇಲ್ಲಿ ಕೆಲಸ ಮಾಡುತ್ತಿದ್ದ ಐದಾರು ಸಾವಿರ ಕಾರ್ಮಿಕರು ನಿರುದ್ಯೋಗಿಗಳಾಗಿ ಅವರ ಕುಟುಂಬಗಳು ನಿರ್ಗತಿಕರಾದರು. ಕಾರ್ಖಾನೆಯ ಕಾರ್ಮಿಕರು ಲಾಕ್‌ಔಟ್‌ನ್ನು ಹಿಂತೆಗೆದುಕೊಳ್ಳುವಂತೆ, ಉತ್ಪಾದನೆಯನ್ನು ಪುನರ್ ಆರಂಭಿಸುವಂತೆ, ತಮಗೆ ಸಿಗಬೇಕಾಗಿದ್ದ ಬಾಕಿ ಹಣವನ್ನು ನೀಡುವಂತೆ, ಬೋನಸ್ ಹಣವನ್ನು ಪಾವತಿಸುವಂತೆ ಹೋರಾಟ ಆರಂಭಿಸಿದರು. ಹೋರಾಟಕ್ಕೆ ಅನೇಕ ಕಾರ್ಮಿಕ ಮುಖಂಡರು, ಸಂಘಟನೆಗಳು ಬೆಂಬಲ ನೀಡಿದವು. ಹೋರಾಟದ ಸಮಯದಲ್ಲಿ ಕಾರ್ಮಿಕ ಮುಖಂಡರು ವಿರಳವಾಗಿದ್ದ ಆ ಕಾಲದಲ್ಲಿ ಸಮರ್ಥ ನಾಯಕತ್ವದ ಅವಶ್ಯಕತೆ ಇದ್ದ ಆ ಸಮಯದಲ್ಲಿ, ಕಮ್ಯುನಿಸ್ಟ್ ಪಕ್ಷದ ತತ್ವಗಳ ಸಿದ್ಧಾಂತಗಳನ್ನು ನಂಬಿದ್ದ ಗುಲಬರ್ಗಾ ಜಿಲ್ಲೆಯ ಶ್ರೀನಿವಾಸ ಗುಡಿಯವರ ನೇತೃತ್ವದ ಹೋರಾಟವನ್ನು ಇಲ್ಲಿ ವಿಶೇಷವಾಗಿ ಗುರುತಿಸಬಹುದು. ಶ್ರೀನಿವಾಸ ಗುಡಿ ಶಹಬಾದ್ ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸಿ ಕಮ್ಯುನಿಸ್ಟ್ ಸಿದ್ಧಾಂತಗಳ ಅಡಿಯಲ್ಲಿ ಕಾರ್ಮಿಕರ ಪರವಾಗಿ ಹೋರಾಟವನ್ನು ಆರಂಭಿಸಿದರು. ಅನೇಕ ತಿಂಗಳುಗಳ ಕಾಲ ನಡೆದ

ಕಾರ್ಮಿಕರ ಹೋರಾಟಕ್ಕೆ ಕಾರ್ಖಾನೆ ಮಾಲೀಕರಿಂದ ಸೂಕ್ತ ಪ್ರತಿಕ್ರಿಯೆ ಸಿಗಲಿಲ್ಲ. ನಷ್ಟದ ನೆಪ ಹೇಳಿ ಉತ್ಪಾದನೆಯ ಪುನರ್ ಆರಂಭಕ್ಕೆ ನಿರಾಕರಿಸಿದರಲ್ಲದೇ ಕಾರ್ಮಿಕರಿಗೆ ಕೊಡಬೇಕಾಗಿದ್ದ ಇತರ ಸೌಲಭ್ಯಗಳನ್ನು ನೀಡಲು ಮಾಲೀಕರು ನಿರಾಕರಿಸಿದರು. ಹೀಗಾಗಿ ಕಾರ್ಮಿಕರು ನ್ಯಾಯಾಂಗ ಹೋರಾಟಕ್ಕೆ ಮುಂದಾಗಿ ನ್ಯಾಯಾಲಯದ ಮೊರೆ ಹೋದರು. ಕಾರ್ಮಿಕರು ಹೆಚ್.ಎಂ.ಪಿ. ಮಾಲೀಕನ ವಿರುದ್ಧ ಆಪಾದನೆ ಮಾಡುತ್ತಾ, ಹೆಚ್.ಎಂ.ಪಿ. ಮಾಲೀಕರು ಎ.ಸಿ.ಸಿ. ಮಾಲೀಕತ್ವದಿಂದ ಕಾರ್ಖಾನೆಯನ್ನು ಕೊಳ್ಳುವಾಗ ಮಾಡಿಕೊಂಡಿದ್ದ ಷರತ್ತುಗಳನ್ನು ಉಲ್ಲಂಘಿಸಿರುವರೆಂದೂ(ಕಾರ್ಮಿಕರ ಹಿತರಕ್ಷಿಸುವ ಅಂಶಗಳು) ಕಾರ್ಖಾನೆಯ ಪುನರ್ ಆರಂಭವಾಗಬೇಕೆಂದು, ಕಾರ್ಮಿಕರಿಗೆ ನ್ಯಾಯಬದ್ಧವಾಗಿ ದೊರೆಯಬೇಕಿದ್ದ ಸೌಲಭ್ಯಗಳನ್ನು ದೊರಕಿಸಿಕೊಡಬೇಕೆಂದು ಮೊರೆ ಹೋದರು. ಆದರೆ ನ್ಯಾಯಾಲದಲ್ಲಿ ಮೊಕದ್ದಮೆಯು ನಿಧಾನಗತಿಯಲ್ಲಿ ಸಾಗಿದ್ದರಿಂದ ಕಾರ್ಮಿಕರ ಸ್ಥಿತಿ ಮಾತ್ರ ಚಿಂತಾಜನಕವಾಯಿತು.

ಕಾರ್ಖಾನೆಯ ಬದುಕನ್ನೇ ನಂಬಿಕೊಂಡಿದ್ದ ಸಾವಿರಾರು ಕಾರ್ಮಿಕರಿಗೆ ವೇತನವಿಲ್ಲದೆ ಜೀವನ ನಿರ್ವಹಣೆ ಕಷ್ಟವಾಯಿತು. ನ್ಯಾಯಾಲಯದಲ್ಲಿ ಖರ್ಚು ವೆಚ್ಚಕ್ಕೆ ತಮ್ಮಲ್ಲಿದ್ದ ಬಂಗಾರ, ಆಸ್ತಿಯನ್ನು ಮಾರಿಕೊಂಡಿದ್ದರು. ಜೀವನಕ್ಕೆ ಮೂಲಾಧಾರವಾದ ಆದಾಯವೇ ನಿಂತು ಹೋಗಿ ತಿಂಗಳುಗಳು ಗತಿಸುತ್ತಿದ್ದಂತೆ ಇವರು ದಾರುಣ್ಯ ಸ್ಥಿತಿ ತಲುಪಿದರು. ಇವರ ಮಕ್ಕಳ ಶಿಕ್ಷಣಕ್ಕೂ ಹಣ ಹೊಂದಿಸಲಾರದೆ ಎಷ್ಟೋ ಮಕ್ಕಳು ಶಿಕ್ಷಣವನ್ನು ತೊರೆದರು. ಕಾರ್ಮಿಕರು ಹಾಗೂ ಅವರ ಮಕ್ಕಳು ಕೂಲಿಗೆ, ಕಾಯಿಪಲ್ಲೆ ಮಾರಾಟ ಮಾಡುವ ಉದ್ಯೋಗ ಕೈಗೊಂಡರು. ಕಾರ್ಮಿಕರ ಹೆಂಡತಿಯರು, ಶ್ರೀಮಂತರ ಮನೆಯಲ್ಲಿ ಮನೆಗೆಲಸಕ್ಕೆ ಸೇರಿಕೊಂಡರು. ಇನ್ನು ಎಷ್ಟೋ ಜನ ವಯಸ್ಸಾದವರು ತಮ್ಮ ಔಷಧಿಗೂ ಹಣ ಇಲ್ಲದೆ ಸಾವನ್ನಪ್ಪಿದರು. ಕಾರ್ಮಿಕರ ಪರಿಸ್ಥಿತಿ ಚಿಂತಾಜನಕವಾಗಿದ್ದರೂ ಸರಕಾರವಾಗಲಿ ಸ್ಥಳೀಯ ಜನಪ್ರತಿನಿಧಿಗಳಾಗಲಿ ಇವರಿಗೆ ಬೆಂಬಲವನ್ನಾಗಲಿ ಬದಲಿ ವ್ಯವಸ್ಥೆಯನ್ನಾಗಲಿ ಮಾಡಲಿಲ್ಲ. ಹೀಗಾಗಿ ಎಷ್ಟೋ ಕಾರ್ಮಿಕರು ಜೀವನ ನಿರ್ವಹಣೆಗೆ ಬೇರೆ ಊರುಗಳಿಗೆ ಗುಳೆ ಹೊರಟರು. ಇನ್ನೂ ಇತರ ಎಷ್ಟೋ ಕಾರ್ಮಿಕರು ಮಾನಸಿಕ ತೊಳಲಾಟದಲ್ಲಿದ್ದು ನ್ಯಾಯಾಲಯದ ತೀರ್ಪು ಶೀಘ್ರದಲ್ಲೇ ಹೊರಬೀಳುತ್ತದೆ, ಕಾರ್ಖಾನೆ ಮತ್ತೆ ಆರಂಭವಾಗುತ್ತದೆ, ಮತ್ತೆ ನಮ್ಮ ಹೊಸ ಜೀವನ ಪ್ರಾರಂಭವಾಗುತ್ತದೆ ಎನ್ನುವ ಭರವಸೆಯಲ್ಲೇ ಕಾಲ ಕಳೆದರು. ಕೊನೆಗೆ ನ್ಯಾಯಾಲಯವು ಕಾರ್ಮಿಕರ ಪರ ತೀರ್ಪು ನೀಡಿ, ಕಾರ್ಮಿಕರಿಗೆ ಬೋನಸ್ ಹಣವನ್ನು, ವೇತನ ಬಾಕಿಯನ್ನು ನೀಡುವಂತೆ ಕಾರ್ಖಾನೆಯನ್ನು ಪುನರ್ ಆರಂಭಿಸುವಂತೆ ತೀರ್ಪು ನೀಡಿತು. ಆದರೆ ಆ ವೇಳೆಗಾಗಲೇ ಹೆಚ್.ಎಂ.ಪಿ. ಮಾಲೀಕ ಕಾರ್ಖಾನೆಯನ್ನು 'ಜುವಾಹರ್' ಎನ್ನುವ ಕಂಪನಿಗೆ ಮಾರಾಟ ಮಾಡಿದ್ದನು. ನಂತರ ಜುವಾಹರ್ ಸಿಮೆಂಟ್ ಹೆಸರಿನಲ್ಲಿ ಕಾರ್ಖಾನೆ ಆರಂಭವಾಯಿತಾದರೂ, ಆ ಹೊತ್ತಿಗಾಗಲೇ ಅನೇಕ ಕಾರ್ಮಿಕರು ಊರು ತೊರದಿದ್ದರು. ಇನ್ನೂ ಕೆಲವರು ವಯಸ್ಸು ಮಿತಿ ದಾಟಿ ಕೆಲಸಕ್ಕೆ ಅನರ್ಹರಾಗಿದ್ದರು. ಇನ್ನು ಕೆಲವರು ಕಾರ್ಖಾನೆಯ ಸಹವಾಸವೇ ಬೇಡ ಎನ್ನುವಂಥ ಸ್ಥಿತಿ ತಲುಪಿದ್ದರು. ಕೊನೆಗೆ ಹೊಸ ಕಾರ್ಖಾನೆಯಲ್ಲಿ ಮತ್ತೆ ಕೆಲಸಕ್ಕೆ

ಸೇರಿದ ಕಾರ್ಮಿಕರ ಸಂಖ್ಯೆ ಕೇವಲ ಇನ್ನೂರು ಮಾತ್ರ. ಜೊತೆಗೆ ನ್ಯಾಯಾಲಯದ ತೀರ್ಪಿನ ಅನ್ವಯ ಹಿಂದಿನ ಕಾರ್ಮಿಕರಿಗೆ ಸಲ್ಲಬೇಕಾಗಿದ್ದ ಸೌಲಭ್ಯಗಳು ದೊರೆಯಲಿಲ್ಲ. ಅಂದರೆ ಎಲ್ಲಾ ಕಾರ್ಮಿಕರಿಗೂ ನ್ಯಾಯ ದೊರೆಯಲಿಲ್ಲ.[೬೦] ಹೀಗೆ ಅನೇಕ ದಶಕಗಳವರೆಗೆ ಇಡೀ ದಕ್ಷಿಣ ಭಾರತದಲ್ಲೇ ಮೊಟ್ಟಮೊದಲ ಬೃಹತ್ ಸಿಮೆಂಟ್ ಕಾರ್ಖಾನೆ ಮುಚ್ಚಿ ಹೋಗುವುದರ ಜೊತೆಗೆ ಇಲ್ಲಿನ ಕಾರ್ಮಿಕರ ಬದುಕು, ಭವಿಷ್ಯ ಕಮರಿ ಹೋಗಿತ್ತು. ಕಾರ್ಮಿಕರು ಎಂಥ ಚಳವಳಿಯನ್ನು ಹಮ್ಮಿಕೊಂಡರೂ ಸಹ, ದೀರ್ಘಕಾಲ ಅದನ್ನು ಮುಂದುವರಿಸಲಾರದೆ, ನಿಸ್ವಾರ್ಥ ರಾಜಕಾರಣಿಗಳ ಬೆಂಬಲ ಸಿಗದೆ, ಹೊಟ್ಟೆಪಾಡಿನ ಚಿಂತೆಯಿಂದ ಹೋರಾಟ ವನ್ನೇ ಕೈಬಿಡುವಂತಾಯಿತು. ಒಟ್ಟಿನಲ್ಲಿ ಹೈದರಾಬಾದ್ ಕರ್ನಾಟಕ ಕಾರ್ಮಿಕರ ಚಳವಳಿಯಲ್ಲಿ ಬೃಹತ್ ಸಂಖ್ಯೆಯ ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳಲಾದ, ಚಿಂತಾಜನಕ ಸ್ಥಿತಿಗೆ ತಲುಪಿದ ಚಳವಳಿಗಳ ಚರಿತ್ರೆಯ ಪುಟಗಳಲ್ಲಿ, ಇಂದು ಈ ಹೋರಾಟವು ಒಂದು ದುರ್ಘಟನೆಯಾಗಿ ದಾಖಲಾಗುವಂತಾಗಿದೆ.

ಗುಲಬರ್ಗಾ ಪೌರ ಕಾರ್ಮಿಕರ ಹೋರಾಟ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಸ್ತುತ ಸಂದರ್ಭದಲ್ಲಿ ನಡೆದಂತಹ ಮತ್ತು ನಡೆಯುತ್ತಿ ರುವ ಪ್ರಮುಖ ಹೋರಾಟಗಳ ಅಧ್ಯಯನ ಕೈಗೊಂಡಾಗ ಪ್ರಮುಖವಾಗಿ ನಮ್ಮ ಗಮನಕ್ಕೆ ಬರುವ ಹೋರಾಟವೆಂದರೆ, ಗುಲಬರ್ಗಾ ಮಹಾನಗರ ಪಾಲಿಕೆ ಆಡಳಿತ ಮತ್ತು ಗುತ್ತಿಗೆ ಪೌರ ಕಾರ್ಮಿಕರ ಮಧ್ಯೆ ನಡೆಯುತ್ತಿರುವ ಹೋರಾಟವಾಗಿದೆ. ಗುಲಬರ್ಗಾ ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಆಧಾರಿತದಲ್ಲಿ ೪೭೦ ಪೌರ ಕಾರ್ಮಿಕರು ಕಳೆದ ೧೫ ವರ್ಷಗಳಿಂದ ನಗರದ ಸ್ವಚ್ಛತಾ ಕೆಲಸ ನಿರ್ವಹಿಸುತ್ತಾ ಬಂದಿದ್ದರು. ಕಳೆದ ಮೂರು ವರ್ಷಗಳವರೆಗೆ ಯಾವುದೇ ಸಮಸ್ಯೆಯಿಲ್ಲದೆ ಪೌರ ಕಾರ್ಮಿಕರು ತಮ್ಮ ಕರ್ತವ್ಯ ನಿರ್ವಹಿಸುತ್ತಾ ವೇತನ ಪಡೆಯುತ್ತಿದ್ದರು. ಆದರೆ ಇತ್ತೀಚೆಗೆ ದಿನನಿತ್ಯ ಬಳಕೆಯ ಜೀವನಗತ್ಯ ವಸ್ತುಗಳ ಬೆಲೆ ಏರುತ್ತಿರುವ ಸಮಯದಲ್ಲಿ, ಪೌರ ಕಾರ್ಮಿಕರಿಗೆ ನೀಡುತ್ತಿದ್ದ ಸದ್ಯದ ವೇತನದಲ್ಲಿ ಜೀವನ ನಿರ್ವಹಣೆ ಬಹು ಕಷ್ಟಕರವೆನಿಸಿತು. ಇಂತಹ ಕಷ್ಟ ಪರಿಸ್ಥಿತಿ ಎದುರಾದಾಗ ಪೌರ ಕಾರ್ಮಿಕರು ತಮ್ಮ ವೇತನ ಹೆಚ್ಚಿಸುವಂತೆ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಅಪೇಕ್ಷಿಸಿ ಬೇಡಿಕೆಯನ್ನಿಟ್ಟರು. ಆದರೆ ಮಹಾನಗರ ಪಾಲಿಕೆ ಆಡಳಿತ, ಇವರ ಬೇಡಿಕೆಗಳಿಗೆ ಸ್ಪಂದಿಸಲಿಲ್ಲ. ಇಂತಹ ಸಂದರ್ಭದಲ್ಲಿ ಎಲ್ಲಾ ಪೌರ ಕಾರ್ಮಿಕರು ಒಗ್ಗಟ್ಟಾಗಿ ಒಂದೆಡೆ ಸೇರಿ ತಮ್ಮ ಸಮಸ್ಯೆಗಳ ಬಗ್ಗೆ ಹಾಗೂ ಮುಂದಿನ ಹೆಜ್ಜೆಯ ಬಗ್ಗೆ ಚರ್ಚೆ ಮಾಡತೊಡಗಿದರು.

ಆಗ ಕಾರ್ಮಿಕರ ಬೆಂಬಲಿಕ್ಕೆ ನಿಂತು ಹೋರಾಟದ ನೇತೃತ್ವ ವಹಿಸಿದವರು ಎಸ್.ಕೆ. ಕಾಂತಾ ಅವರು. ಹೋರಾಟದಲ್ಲಿ ಅವರು ವಹಿಸಿದ ಪಾತ್ರವನ್ನು ಅತ್ಯವಶ್ಯಕವಾಗಿ ದಾಖಲಿಸಬೇಕಾಗಿದೆ. ಸ್ವತಃ ತಾವೇ ಸಾಮಾನ್ಯ ಕಾರ್ಮಿಕರಾಗಿ ಜೀವನ ಆರಂಭಿಸಿ, ಕಾರ್ಮಿಕರ ಸ್ಥಿತಿಗತಿಗಳನ್ನು, ಸಮಸ್ಯೆಗಳನ್ನು ಹತ್ತಿರದಿಂದ ಕಂಡವರು ಹಾಗೂ ಅನುಭವಿಸಿದವರೂ ಆದ ಕಾಂತಾ ಅವರು ಕಾರ್ಮಿಕರ ಪರವಾಗಿ ಹೋರಾಟಕ್ಕೆ ಸದಾ ಮುನ್ನುಗ್ಗುವ ಸ್ವಭಾವದವರಾಗಿದ್ದಾರೆ. ಕಾರ್ಮಿಕ ನಾಯಕರಾಗಿ ಜನಾನುರಾಗಿಯಾದ

ಇವರು ವಿಧಾನಸಭಾ ಸದಸ್ಯರಾಗಿ ಕಾರ್ಮಿಕ ಸಚಿವರಾಗಿ ಉನ್ನತ ಸ್ಥಾನಕ್ಕೇರಿದ ಇವರು ಇಂದಿಗೂ ಸದಾ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಚಿಂತಿಸುವ ಮತ್ತು ಕಾರ್ಮಿಕರಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಾಗಿದ್ದಾರೆ. ಶಾಸಕರಾಗಿ, ಸಚಿವರಾಗಿ ಉನ್ನತ ಹುದ್ದೆಗಳನ್ನು ಅನುಭವಿಸಿದ್ದರೂ ಪ್ರಸ್ತುತ ಗುಲಬರ್ಗಾದಲ್ಲಿ ಇವರು ಸರಳ ಜೀವನ ನಡೆಸುತ್ತಿದ್ದಾರೆ. ಈಗಲೂ ಹಗಲಿರುಳು ಸಾಮಾನ್ಯ ಜನರೊಂದಿಗೆ ಬೆರೆತು, ಅದರಲ್ಲೂ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ಕಾರ್ಮಿಕರ ಹಕ್ಕುರಕ್ಷಣೆ ಹಾಗೂ ಹಿತರಕ್ಷಣೆಗಾಗಿ ಅವಶ್ಯ ಕಂಡು ಬಂದಾಗ ಕಾನೂನಾತ್ಮಕವಾಗಿ ನ್ಯಾಯಾಲಯಗಳ ಮೂಲಕ ಹೋರಾಟ ಮಾಡಿದ್ದಾರೆ ಮತ್ತು ಈಗಲೂ ಇಂತಹ ಹೋರಾಟದಲ್ಲಿ ತೊಡಗಿಕೊಂಡಿದ್ದಾರೆ. ಕಾಂತಾ ಅವರ ನೇತೃತ್ವದಲ್ಲಿ ನಡೆದ ಪೌರ ಕಾರ್ಮಿಕರ ಬಗ್ಗೆ ನಡೆಸಿದ ಕೆಲವು ಮುಖ್ಯ ಹೋರಾಟಗಳನ್ನು ಅಧ್ಯಯನದಲ್ಲಿ ಗುರುತಿಸಿ ದಾಖಲಿಸಲಾಗಿದೆ. ಹಾಗೆಯೇ ಸಿಐಟಿಯು ಸಹ ಹೋರಾಟಕ್ಕೆ ಬೆಂಬಲ ನೀಡಿ, ಹೋರಾಟದ ನೇತೃತ್ವ ವಹಿಸಿದ್ದರಿಂದ ಹೋರಾಟವು ತೀವ್ರ ಸ್ವರೂಪ ಪಡೆದುಕೊಂಡದ್ದನ್ನು ಗುರುತಿಸ ಬಹುದಾಗಿದೆ.

ಪೌರ ಕಾರ್ಮಿಕರು ಗುಲಬರ್ಗಾ ಮಹಾನಗರ ಪಾಲಿಕೆಯ ಆಡಳಿತವರ್ಗದ ಗಮನ ಸೆಳೆಯಲು ವಿವಿಧ ಹಂತದ ಹೋರಾಟಗಳನ್ನು ಆರಂಭಿಸಿದರು. ರಸ್ತೆ ನಿಲುಗಡೆ ಚಳವಳಿ, ಧರಣಿ ಸತ್ಯಾಗ್ರಹಗಳ ಮೂಲಕ ಹೋರಾಟ ಮಾಡಿದರೂ, ಆಡಳಿತ ವರ್ಗ ಸರಿಯಾಗಿ ಸ್ಪಂದಿಸದಿದ್ದಾಗ, ಕಾಂತರವರಿಗೆ ಇನ್ನಷ್ಟು ತೀವ್ರ ಸ್ವರೂಪದ ಹೋರಾಟಗಳನ್ನು ಹಮ್ಮಿಕೊಳ್ಳುವ ಅನಿವಾರ್ಯತೆ ಎದುರಾಯಿತು. ಆಗ ತಿಂಗಳು ಗಟ್ಟಲೆ ಪಾಲಿಕೆ ಎದುರಿನಲ್ಲಿ ಸತ್ಯಾಗ್ರಹ ಆರಂಭಿಸಿದರು. ಆದರೆ ಅನೇಕ ತಿಂಗಳುಗಳು ಕಳೆದರೂ ಪಾಲಿಕೆ ಪ್ರತಿಕ್ರಿಯಿಸದಿದ್ದಾಗ, ಪಾಲಿಕೆಗೆ ಮುತ್ತಿಗೆ ಹಾಕುವ, ಅಧಿಕಾರಿಗಳಿಗೆ ದಿಗ್ಬಂಧನ ಹಾಕುವ ಹೋರಾಟಗಳನ್ನು ಆರಂಭಿಸಿದರು. ಆಗ ಪಾಲಿಕೆ ಸದಸ್ಯರು, ಇವರ ಮತ್ತು ಹೋರಾಟದಲ್ಲಿ ನಿರತರಾದವರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಅದೇ ಸಮಯದಲ್ಲಿ ಪಾಲಿಕೆ ಆಡಳಿತದಿಂದ ಪೌರ ಕಾರ್ಮಿಕರಿಗೆ ಬರಬೇಕಾಗಿದ್ದ ೨೫ ತಿಂಗಳ ವೇತನವನ್ನು ತಡೆಹಿಡಿದಿದ್ದರು. ಹೀಗೆ ಹೋರಾಟಗಾರರ ವಿರುದ್ಧ ದೂರು ಮತ್ತು ವೇತನ ತಡೆಹಿಡಿದ ಕ್ರಮ ವಿರೋಧಿಸಿ ಪಂಜಿನ ಮೆರವಣಿಗೆ ನಡೆಸಲು ಮುಂದಾಗಿದ್ದ, ನೇತೃತ್ವವಹಿಸಿದ್ದ ಕಾಂತಾರವರನ್ನು ಸೇರಿದಂತೆ, ೩೮೦ ಪೌರ ಕಾರ್ಮಿಕರನ್ನು ಪೊಲೀಸರು ಬಂಧಿಸಿ ಬಳ್ಳಾರಿ ಕಾರಾಗೃಹ ದಲ್ಲಿರಿಸಿದರು. ಇವರ ಬಂಧನಕ್ಕೆ ವಿರೋಧ ವ್ಯಕ್ತವಾದಾಗ, ಪೊಲೀಸರು ನೀಡಿದ ಕಾರಣವೆಂದರೆ, ಗುಲಬರ್ಗಾದಲ್ಲಿ ಸಚಿವ ಸಂಪುಟ ನಡೆಯುತ್ತಿರುವ ಹಿನ್ನೆಲೆಯಲ್ಲಿ(ಆಗಸ್ಟ್ ೨೦೦೯) ಶಾಂತಿ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತೆ ಕ್ರಮವಾಗಿ ಬಂಧಿಸಲಾಗುತ್ತಿದೆ ಎನ್ನುವ ಕಾರಣ ನೀಡಿದ್ದರು. ಹೀಗಾಗಿ ಪಾಲಿಕೆ ಹಾಗೂ ಸರ್ಕಾರದ ಕುತಂತ್ರದಿಂದ ಕಾಂತಾ ಹಾಗೂ ಕಾರ್ಮಿಕರು ಜೈಲಿನಲ್ಲಿ ಕೈದಿಗಳಂತೆ ಶಿಕ್ಷೆ ಅನುಭವಿಸಬೇಕಾಯಿತು ಮತ್ತು ಹೋರಾಟದ ಸಮಯದಲ್ಲಿ ಮಹಿಳಾ ಕಾರ್ಮಿಕೆ ಅಂಬೂಬಾಯಿ ಮೃತಪಟ್ಟರು. ಘಟನೆಯಿಂದಾಗಿ ಹೋರಾಟವು ಮತ್ತಷ್ಟು ತೀವ್ರವಾಗಲು ಹಾಗೂ ಇತರ ಪ್ರದೇಶಗಳಿಗೂ ಹರಡಲು ಕಾರಣವಾಯಿತು. ಹೀಗೆ ಹೋರಾಟಕ್ಕೆ ಕಡಿವಾಣ ಹಾಕುವ ದುರುದ್ದೇಶ ಸರ್ಕಾರದ್ದಾಗಿದ್ದರೆ,

ಛಲ ಬಿಡದ ಹೋರಾಟ ನಿಲ್ಲಿಸದ ಕಾಂತಾರವರು ನ್ಯಾಯಾಲಯದ ಮೆಟ್ಟಿಲೇರಿ ಜಾಮೀನಿನ ಮೇಲೆ ಹೊರಬಂದು ಕಾನೂನು ಸಮರ ಆರಂಭಿಸಿದರು.

ಅನೇಕ ತಿಂಗಳುಗಳು ಕಳೆದರೂ ಸರಕಾರವಾಗಲಿ, ಗುಲಬರ್ಗಾ ಪಾಲಿಕೆಯಾಗಲಿ ಕಾರ್ಮಿಕರ ಸಮಸ್ಯೆ ಕುರಿತು ಯಾವುದೇ ಚಿಂತನೆಯನ್ನಾಗಲಿ, ಪರಿಹಾರ ಕ್ರಮಗಳನ್ನಾಗಲಿ ಕೈಗೊಳ್ಳಲು ಮುಂದಾಗಲಿಲ್ಲ. ಆಗ ಕಾಂತರವರು ಕಾರ್ಮಿಕರ ಸಮಸ್ಯೆ ಬಗ್ಗೆ ಸರಕಾರದ ಗಮನ ಸೆಳೆಯಲು ಹಾಗೂ ಒತ್ತಡ ಹೇರಲು ಉಪವಾಸ ಸತ್ಯಾಗ್ರಹ ಕೈಗೊಂಡು ಪೌರಕಾರ್ಮಿಕರಿಗೆ ೩೫ ತಿಂಗಳಿಂದ ಬಾಕಿ ಇರುವ ವೇತನ ಬಿಡುಗಡೆಗೆ ಆಗ್ರಹಿಸಿದರು. ದೀರ್ಘಾವಧಿಯ ಉಪವಾಸದಿಂದ ತೀವ್ರ ಅಸ್ವಸ್ಥರಾದ ಕಾಂತಾರವರನ್ನು ರಾಯಚೂರಿನ ಒಪೆಕ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಆಸ್ಪತ್ರೆಗೆ ಸೇರಿದ ನಂತರವೂ ಇವರು ಉಪವಾಸವನ್ನು ನಿಲ್ಲಿಸದೆ ಮುಂದುವರೆಸಿದರು. ಸತತ ೧೦ ದಿನಗಳ ಉಪವಾಸದಿಂದ ಅವರ ಆರೋಗ್ಯ ಹದೆಗೆಟ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಸರಕಾರ, ಸರಕಾರದ ಪರವಾಗಿ ಸಚಿವ ಸುರೇಶ್‌ಕುಮಾರ್ ರವರನ್ನು ಕಾಂತಾರವರ ಭೇಟಿಗೆ ಕಳುಹಿಸಿಕೊಟ್ಟಿತು. ಇವರು ಕಾಂತಾರವರೊಂದಿಗೆ ಸಂಧಾನದ ಮಾತುಕತೆ ನಡೆಸಿ ಸರಕಾರದ ನಿಲುವನ್ನು, ಮುಖ್ಯಮಂತ್ರಿಗಳ ಸಂದೇಶವನ್ನು ಮುಟ್ಟಿಸಿ, ಪೌರ ಕಾರ್ಮಿಕರ ವೇತನ ಸಮಸ್ಯೆ ಬಗ್ಗೆ ಚರ್ಚಿಸಲು ಸರಕಾರ ಸಿದ್ಧವಿದೆ ಹಾಗೂ ಇದಕ್ಕಾಗಿ ಮುಖ್ಯಮಂತ್ರಿಗಳು ಕಾಂತಾರವರನ್ನು ಮೇ ೧೪(೨೦೧೦)ರಂದು ಸಭೆಗೆ ಆಹ್ವಾನ ನೀಡಿದ್ದಾರೆಂದೂ ಹಾಗೂ ಕಾರ್ಮಿಕರಿಗೆ ಅನ್ಯಾಯವಾಗದ ರೀತಿಯಲ್ಲಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ, ಹಾಗಾಗಿ ಕಾಂತಾರವರು ಈಗ ಕೈಗೊಂಡಿರುವ ಉಪವಾಸವನ್ನು ದಯವಿಟ್ಟು ಕೈಬಿಡಬೇಕು ಎಂದು ಮನವಿ ಮಾಡಿದರು. ಸಚಿವರ ಮನವಿಯನ್ನು ಒಪ್ಪಿಕೊಂಡ ಕಾಂತಾರವರು ೧೨.೦೫.೨೦೧೦ರಂದು ಉಪವಾಸ ನಿಲ್ಲಿಸಿ ಸರಕಾರದ ಜೊತೆ ಮುಂದಿನ ಮಾತುಕತೆಯ ಬಗ್ಗೆ ಪೂರ್ವಸಿದ್ಧತೆ ಮಾಡಿಕೊಂಡರು.[೮]

ಇದೇ ಸಮಯದಲ್ಲಿ ಕಾಂತಾರವರ ಉಪವಾಸ ಸತ್ಯಾಗ್ರಹ ಮತ್ತು ಪೌರ ಕಾರ್ಮಿಕರ ವೇತನ ಸಮಸ್ಯೆ ಕುರಿತಂತೆ, ಹೈದರಾಬಾದ್ ಕರ್ನಾಟಕದ ವಿವಿಧ ನಗರಗಳಲ್ಲಿ ಕಾರ್ಮಿಕರಿಗೆ ಬೆಂಬಲವಾಗಿ ಪ್ರತಿಭಟನೆಗಳು ಆರಂಭವಾದವು. ಅದರಲ್ಲೂ ಬಳ್ಳಾರಿಯಲ್ಲಿ, ಸಿಐಟಿಯು ನೇತೃತ್ವದಲ್ಲಿ ಬಳ್ಳಾರಿ ಪಾಲಿಕೆ ಮುಂಭಾಗ ನಾನಾ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ೦೧.೦೬.೨೦೧೦ರಿಂದ ಧರಣಿ ಆರಂಭಿಸಿದರು. ಧರಣಿಯಲ್ಲಿ ಸಿಐಟಿಯು ಬಳ್ಳಾರಿ ಜಿಲ್ಲಾ ಮುಖಂಡರಾದ ಹೆಚ್.ಎಂ. ವಿಶ್ವನಾಥಸ್ವಾಮಿ, ತಾಯಪ್ಪ, ದೇವಣ್ಣ, ಸಫಾಯಿ ಕರ್ಮಚಾರಿಗಳ ಸಂಘದ ಅಧ್ಯಕ್ಷೆ ಪದ್ಮಾವತಿ, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಎಂ. ಎರ್ರೆಮ್ಮ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಚಂದ್ರಕುಮಾರಿ, ಕಾರ್ಮಿಕ ಮುಖಂಡರಾದ ಆರ್.ಎಸ್. ಬಸವರಾಜ್, ಜೆ. ಸತ್ಯಬಾಬು ಸೇರಿದಂತೆ ನಾನಾ ಸಂಘಟನೆಗಳ ಮುಖಂಡರು ಕಾರ್ಮಿಕರಿಗಾಗಿರುವ ಅನ್ಯಾಯದ ಬಗ್ಗೆ ಧರಣಿ ಆರಂಭಿಸಿದರು. ರಾಜ್ಯ ಸರಕಾರದ ತಪ್ಪು ನೀತಿ ನಿಯಮಗಳಿಗೆ ಬಲಿಯಾಗಿ ವರ್ಷವಿಡೀ ದುಡಿದರೂ ಸಂಬಳ ನೀಡದ ಸರಕಾರದ ನೀತಿ ಖಂಡಿಸಿ

ಹೋರಾಟಕ್ಕಿಳಿದರು. ಕಾರ್ಮಿಕರ ಮೇಲೆ ದೌರ್ಜನ್ಯ ಎಸಗಿ ನಾನಾ ಮೊಕದ್ದಮೆ ಹಾಕುವ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟ ತೀವ್ರಗೊಳಿಸುವ ಎಚ್ಚರಿಕೆ ನೀಡಿದರು. ಅಲ್ಲದೆ ಗುಲಬರ್ಗಾದಲ್ಲಿ ಜರುಗಿದ ಪ್ರತಿಭಟನೆಯಲ್ಲಿ ಮೃತಪಟ್ಟ ಮಹಿಳಾ ಕಾರ್ಮಿಕರಾದ ಅಂಬೂಬಾಯಿ ಕುಟುಂಬದವರಿಗೆ ೫ ಲಕ್ಷ ರೂ. ಪರಿಹಾರ ನೀಡಬೇಕು, ಕಳೆದ ೩೬ ತಿಂಗಳಿನಿಂದ ಬಾಕಿ ಇರುವ ಪೌರಕಾರ್ಮಿಕರ ಸಂಬಳವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಬೇಕು ಎಂದು ಆಗ್ರಹಿಸಿದರು.[೨]

ನಂತರದ ಬೆಳವಣಿಗೆಯಲ್ಲಿ ಸರಕಾರ ಹಾಗೂ ಕಾಂತಾರವರ ನಡುವೆ ನಡೆದ ಮಾತುಕತೆಯಲ್ಲಿ ಸರಕಾರ ತಾಂತ್ರಿಕ ಸಮಸ್ಯೆ ಮುಂದೊಡ್ಡಿ ವೇತನ ಕಲ್ಪಿಸಲು ಒಂದು ಸ್ವರೂಪ ಬೇಕಿದೆ. ಹೀಗಾಗಿ 'ಸ್ವಸಹಾಯ ಗುಂಪು' ರಚನೆ ಮೂಲಕ ವೇತನ ಪಾವತಿಸುವ ಪ್ರಸ್ತಾಪ ಮುಂದಿಟ್ಟಿತು. ಅದಕ್ಕೆ ಪ್ರತಿಕ್ರಿಯೆಯಾಗಿ ಕಾಂತಾ ೩೪ ಸ್ವಸಹಾಯ ಗುಂಪು ರಚನೆ ಮಾಡಿ ಆ ಮೂಲಕ ವೇತನ ಪಾವತಿಸುವ ಸರ್ಕಾರದ ಪ್ರಸ್ತಾವನೆಯನ್ನು ತಿರಸ್ಕರಿಸಿ, ನೇರವಾಗಿ ಗುಲಬರ್ಗಾ ಮಹಾನಗರ ಪಾಲಿಕೆಯೇ ಪೌರ ಕಾರ್ಮಿಕರಿಗೆ ವೇತನ ಪಾವತಿಸಬೇಕು ಎಂಬ ಬೇಡಿಕೆ ಇಟ್ಟರು. ಇದಕ್ಕೆ ಸರಕಾರ ಒಪ್ಪದಿದ್ದಾಗ ಮಾತುಕತೆ ವಿಫಲವಾಯಿತು. ಹೀಗಾಗಿ ಕಾಂತಾ ಮತ್ತು ಕಾರ್ಮಿಕರು ನ್ಯಾಯಾಲಯದ ಮೊರೆ ಹೋದರು. ಕಾರ್ಮಿಕರ ನ್ಯಾಯಾಲಯ ಕಾರ್ಮಿಕರ ಪರ ಆದೇಶ ನೀಡಿತು. ಆದರೆ ಇಷ್ಟೆಲ್ಲವಾದರೂ ಪಾಲಿಕೆ ಆಡಳಿತ ಹಾಗೂ ಸರಕಾರ ಯಾವುದೇ ಕ್ರಮಕೈಗೊಳ್ಳಲಿಲ್ಲ. ಸರಕಾರ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲು ತಯಾರಿ ಆರಂಭಿಸಿತು.

ಇಂದಿಗೂ, ಪಾಲಿಕೆ ಮತ್ತು ಸರಕಾರದ ನೀತಿಯಿಂದಾಗಿ ೪೭೦ ಕಾರ್ಮಿಕರ ಬದುಕು ಅತಂತ್ರ ವಾಯಿತು. ಕೆಲಸವಿಲ್ಲದೆ ಸಂಬಳವಿಲ್ಲದೆ ಇವರ ಬದುಕು ದುಸ್ತರವಾಯಿತು ಇವರ ಅವಲಂಬಿತ ಕುಟುಂಬಗಳು ಬೀದಿಗೆ ಬಿದ್ದಿವೆ. ಜೀವನ ಸಾಗಿಸಲು ಪರ್ಯಾಯ ಕೆಲಸಕ್ಕೆ ಹೋಗಲು ಆಗದೆ ಬಿಡಲು ಆಗದೆ ಕಾರ್ಮಿಕರಿಗೆ ಜಿಗುಪ್ಸೆ ಉಂಟಾಗಿದೆ. ಸತತ ಪ್ರಯತ್ನದ ನಂತರವೂ ಜಯ, ನ್ಯಾಯ ಸಿಗದಿದ್ದರಿಂದ ಬೇಸರಗೊಂಡ ಕಾಂತಾರವರು ಮೌನಕ್ಕೆ ಶರಣಾಗಿದ್ದಾರೆ. ಹೀಗಾಗಿ ಕಾರ್ಮಿಕರು ಮಹಾನಗರ ಪಾಲಿಕೆಗೆ ಶಾಪ ಹಾಕುವುದನ್ನು ಬಿಟ್ಟರೆ ಬೇರೇನೂ ಮಾಡದ ಅತಂತ್ರ, ಅಸಹಾಯಕತೆ ಸ್ಥಿತಿಯಲ್ಲಿದ್ದಾರೆ. ಹೀಗೆ ೪೭೦ ಕಾರ್ಮಿಕರ ಭವಿಷ್ಯ ಅತಂತ್ರ ಸ್ಥಿತಿಯಲ್ಲಿ ಸಾಗುತ್ತಿದೆ.

ಕಾರ್ಮಿಕ ಚಳವಳಿಯಲ್ಲಿ ಕಮ್ಯುನಿಸ್ಟ್ ಪ್ರಭಾವ

ಕಮ್ಯುನಿಸ್ಟ್ ಚಳವಳಿಯ ಅಧ್ಯಯನ ಮಾಡುವಾಗ, ಕಮ್ಯುನಿಸ್ಟ್ ತತ್ವದ ಪಿತಾಮಹಾನೆಂದೇ ಹೆಸರಾದ ಕಾರ್ಲ್‌ಮಾರ್ಕ್ಸ್ ಅವರ ಹೆಸರನ್ನು ಪ್ರಸ್ತಾಪಿಸುವುದು ಅತ್ಯಂತ ಸೂಕ್ತವೆನಿಸುತ್ತದೆ. ಏಕೆಂದರೆ ಕಾರ್ಲ್‌ಮಾರ್ಕ್ಸ್ ಅವರು ಜಗತ್ತು ಕಂಡ ಅತ್ಯಂತ ಶ್ರೇಷ್ಠ ವೈಚಾರಿಕ ವ್ಯಕ್ತಿಗಳ ಮೊದಲ ಸಾಲಿನಲ್ಲಿ ಕಾಣಬರುತ್ತಾರೆ. ಮಾರ್ಕ್ಸ್‌ರವರ ತತ್ವ, ಸಿದ್ಧಾಂತ ಚಿಂತನೆಗಳು ಎಲ್ಲಾ ಕಾಲಕ್ಕೂ ಇಂದಿಗೂ ಪ್ರಸ್ತುತವಿದ್ದು,

ಇಂದಿನ ಕಮ್ಯುನಿಸ್ಟ್ ಹೋರಾಟಗಳಿಗೆ ತಹಳದಿಯಾಗಿವೆ. ಕಾರ್ಲ್‌ಮಾರ್ಕ್ಸ್ ಮತ್ತು ಮಾರ್ಕ್ಸ್ ಏಂಗೆಲ್ಸ್ ಕೂಡಿ ಬರೆದ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಕೃತಿಯಲ್ಲಿರುವ ತತ್ವ, ಸಿದ್ಧಾಂತಗಳು ಇಂದಿಗೂ ಶ್ರಮಜೀವಿ ವರ್ಗಕ್ಕೆ ಸ್ಫೂರ್ತಿಯನ್ನು ನೀಡುತ್ತವೆ. ಅಲ್ಲದೇ ಗ್ರಂಥವನ್ನು 'ಬೈಬಲ್ ಆಫ್ ಕಮ್ಯೂನಿಸ್ಟ್ ಪಾರ್ಟಿ ಎಂದು ಕರೆಯಲಾಗಿದೆ.

ಕಾರ್ಲ್‌ಮಾರ್ಕ್ಸ್‌ರವರ ಪ್ರಕಾರ ಮಾನವ ಜನಾಂಗಕ್ಕೆ ಅನ್ನ, ನೀರು, ವಸತಿ ಮತ್ತು ಬಟ್ಟೆ ಒದಗಿಸುವ ಕೆಲಸ ಮೊದಲಾಗಬೇಕು. ಜೀವನಕ್ಕೆ ಆಧಾರಪ್ರಾಯವಾಗಿರುವಂಥ ಮೂಲಭೂತ ಅನಿರ್ವಾಯತೆಗಳ ಆಧಾರದ ಮೇಲೆ ಒಂದು ರಾಷ್ಟ್ರದ, ರಾಜ್ಯದ ವಿಕಾಸ, ಕಾನೂನಿನ ಕಲ್ಪನೆಗಳು ರೂಪುಗೊಳ್ಳಬೇಕು ಎಂದು ಬಯಸಿದ್ದ ಮಾರ್ಕ್ಸ್ ಅವರ ಚಿಂತನೆಗಳು ಕ್ರಾಂತಿಕಾರಕವಾಗಿವೆ. ಸಿರಿವಂತರ ಕೋಟೆಯಾದ ಬಂಡವಾಳಶಾಹಿ ಸಮಾಜವನ್ನು ಬೇರು ಸಹಿತ ಕಿತ್ತೊಗೆಯುವುದು ಹಾಗೂ ಆಧುನಿಕ ಶ್ರಮಜೀವಿ ವರ್ಗದ ವಿಮೋಚನೆಗೆ ನೆರವಾಗುವುದು ಮಾರ್ಕ್ಸ್‌ರವರ ಜೀವನದ ನಿಜವಾದ ಧ್ಯೇಯವಾಗಿತ್ತು. ಈ ಬಗೆಯ ಶಿಸ್ತಿನ ಚಿಂತನೆಗೆ ಇವರೇ ಮೊದಲಿಗರು. ಸಂಘಟನಾತ್ಮಕ ಹೋರಾಟವೇ ಈತನ ಉಸಿರು ಆದುದರಿಂದಲೇ ೧೮೬೪ರ ಸಮಯದಲ್ಲೇ ಜಗತ್ತಿನ ಮೊಟ್ಟಮೊದಲ ಅಂತರರಾಷ್ಟ್ರೀಯ ಕಾರ್ಮಿಕ ಸಂಘವನ್ನು ಸ್ಥಾಪಿಸಲು ಆತ ಮುಂದಾಗಿದ್ದ. ಈತನ ಪ್ರಕಾರ ಕಾರ್ಮಿಕ ವರ್ಗದ ವಿಮೋಚನೆಯು ಕಾರ್ಮಿಕ ವರ್ಗದಿಂದಲೇ ಆಗಬೇಕಾಗಿದೆ. ಕಾರ್ಮಿಕ ವರ್ಗವು ವರ್ಗಭೇದವನ್ನು, ಶೋಷಣೆಯ ಪರಿಸ್ಥಿತಿಯನ್ನು ಸಂಪೂರ್ಣ ಅಳಿಸಿ ಹಾಕಲಾಗದೆ ತನ್ನ ಸ್ವಂತ ವಿಮೋಚನೆಯನ್ನು ಸಾಧಿಸಲಾರರು ಎನ್ನುವ ತತ್ವಗಳನ್ನು ಆಧಾರವಾಗಿಟ್ಟುಕೊಂಡು, ಕಾರ್ಮಿಕರ ಜೀವನ ಸುಧಾರಣೆಗಾಗಿ ಪ್ರಾರಂಭಿಸಿದ ಇವರ ಚಳವಳಿಯು ಆನಂತರ ವಿಶ್ವವ್ಯಾಪ್ತಿಯಾಯಿತು. ಬಂಡವಾಳಶಾಹಿ ಪ್ರಭುತ್ವವನ್ನು ನಾಶಗೊಳಿಸಿ ಕಾರ್ಮಿಕರ ನೇತೃತ್ವದ ಹೊಸ ಸಮಾಜದ ಸ್ಥಾಪನೆ ಇವನ ಪರಮೋದ್ದೇಶವಾಗಿತ್ತು. ಇಂತಹ ಕ್ರಾಂತಿಕಾರಿ ವಿಚಾರಗಳು, ಅತಿ ಬೇಗ ಪ್ರಪಂಚದಾದ್ಯಂತ ಅದರಲ್ಲೂ ಅತ್ಯಂತ ಶೋಷಣೆಗೆ ಬಡತನಕ್ಕೀಡಾಗಿದ್ದ ಭಾರತದಂತಹ ರಾಷ್ಟ್ರಗಳಿಗೆ, ಪ್ರದೇಶಗಳಿಗೆ ಹರಡಿದವು. ಹೀಗೆ ಶತಶತಮಾನಗಳ ಹಿಂದೆ ಮಾರ್ಕ್ಸ್‌ನು ರೂಪಿಸಿದ ಚಿಂತನೆಗಳು, ತತ್ವಸಿದ್ಧಾಂತಗಳು, ವಿಶ್ವರೂಪಿಯಾಗಿದ್ದು ಎಲ್ಲಾ ಕಾಲಕ್ಕೂ, ಎಲ್ಲಾ ಪ್ರದೇಶಗಳಿಗೂ ಅನ್ವಯವಾಗುವಂತಿವೆ. ಕ್ರಾಂತಿಕಾರಕ ಚಳವಳಿಯ ನಾಯಕರಿಗೆ ಅದರಲ್ಲೂ ಕಾರ್ಮಿಕ ಚಳವಳಿಗಳಿಗೆ ಸ್ಫೂರ್ತಿಯ ಜೊತೆಗೆ ಮಾರ್ಗಸೂಚಿಗಳಾಗಿವೆ.

ಹೈದರಾಬಾದ್ ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಹೋರಾಟಗಳ ಬಗ್ಗೆ, ಹಿನ್ನೆಲೆಯ ಬಗ್ಗೆ, ಅಧ್ಯಯನ ಮಾಡಿದಾಗ ಕರ್ನಾಟಕದಲ್ಲಿ ಹಿಂದೆ ನಡೆದ ಮತ್ತು ಪ್ರಸ್ತುತ ನಡೆಯುತ್ತಿರುವ ಕಮ್ಯುನಿಸ್ಟ್ ಹೋರಾಟಗಳಲ್ಲಿ ಇಲ್ಲಿನ ಕಮುನಿಸ್ಟ್ ಚಳವಳಿಗಳು ವಿಶೇಷವಾದವುಗಳಾಗಿದ್ದು, ಇಂತಹ ಚಳವಳಿಗಳಿಂದ ಉಂಟಾದ ಸಾಮಾಜಿಕ ಪರಿವರ್ತನೆಗಳನ್ನು ಗುರುತಿಸಬಹುದಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಇಲ್ಲಿ ಕಮ್ಯುನಿಸ್ಟ್ ಸಿದ್ಧಾಂತಗಳ ಪ್ರಭಾವವಾಗಲಿ, ತೀವ್ರತರವಾದ ಹೋರಾಟಗಳಾಗಲಿ ಕಂಡು ಬರುವುದಿಲ್ಲ. ಆದರೆ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇಲ್ಲಿ ಕಮ್ಯುನಿಸ್ಟ್ ತತ್ವಗಳ ಪ್ರಚಾರ ಮತ್ತು ಹೋರಾಟಗಳು ಬಹಳ ಬೇಗ ನೆಲೆ ಕಂಡುಕೊಂಡವು. ಇದಕ್ಕೆ ಕಾರಣವೆಂದರೆ ಸ್ವಾತಂತ್ರ್ಯದ ನಂತರವೂ ಜಮೀನ್ದಾರರ ಹಿಡಿತ ತುಂಬಾ ಇದ್ದ ಈ ಭಾಗದಲ್ಲಿ ಜಮೀನ್ದಾರಿ ಪದ್ಧತಿ ಹಾಗೆಯೇ ಮುಂದುವರೆದಿತ್ತು. ಇಂತಹ ಸಮಯದಲ್ಲಿ ನೆರೆಯ ಆಂಧ್ರದಲ್ಲಿ ನಡೆದಂತಹ ಜಮೀನ್ದಾರಿ ವಿರೋಧವಾದ ಚಳವಳಿಗಳು ವಿಶೇಷವಾಗಿ ರಾಯಚೂರು, ಗುಲಬರ್ಗಾ, ಬೀದರ್, ಬಳ್ಳಾರಿಗಳ ಮೇಲೆ ಪ್ರಭಾವ ಬೀರಿತು. ಹಾಗೆಯೇ ಇಲ್ಲಿ ಸಾಮಾನ್ಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ ದರ್ಪ ಅತ್ಯಂತ ಸಾಮಾನ್ಯವಾಗಿತ್ತು. ಇಂತಹ ಪರಿಸ್ಥಿತಿಯನ್ನು ಎದುರಿಸಲು ಹತ್ತಿಕ್ಕಲು ಬೇರೆ ಪಕ್ಷಗಳಿಗೆ ಸುಲಭ ಸಾಧ್ಯವಾಗಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಕಮ್ಯುನಿಸ್ಟ್ ಪಕ್ಷಕ್ಕೆ ಮಾತ್ರ ಸಾಧ್ಯವಿತ್ತು. ಏಕೆಂದರೆ ಶೋಷಣೆಯನ್ನು ವಿರೋಧಿಸುವುದು ಮತ್ತು ಶೋಷಣೆಗೆ ಪ್ರತಿರೋಧ ಒಡ್ಡುವುದು ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತಗಳಲ್ಲಿ ಒಂದಾಗಿತ್ತು. ಹೀಗಾಗಿ ಇದನ್ನರಿತ ದಲಿತರು, ಕಾರ್ಮಿಕರು, ರೈತರು, ಕೂಲಿಕಾರರು, ಶೋಷಣೆಗೆ ಒಳಗಾದವರು ಬಹುಬೇಗ ಪಕ್ಷದ, ಸಿದ್ಧಾಂತಗಳ ಅನುಯಾಯಿಗಳಾದರು. ಹೀಗಾಗಿ ಇಲ್ಲಿ ಪಕ್ಷವು ನೆಲೆಯೂರಲು ಸಾಧ್ಯವಾಯಿತು. ಸಮಕಾಲೀನ ಸಂದರ್ಭ ದಲ್ಲೂ ವಿಶೇಷವಾಗಿ ಕಮ್ಯೂನಿಸ್ಟ್ ಪಕ್ಷವು ದಲಿತರ, ಬಡವರ ಪರ ಹೋರಾಟ ಮಾಡುತ್ತಿದೆ ಹಾಗೂ ಇಲ್ಲಿ ಶೋಷಣೆ ಹೆಚ್ಚಿರುವುದರಿಂದ ಶೋಷಣೆಗೊಳಗಾದವರು ಇದರ ಕಡೆ ಆಕರ್ಷಿತರಾದರು. ಹೀಗಾಗಿ ಕಮ್ಯುನಿಸ್ಟ್ ತತ್ವಗಳು ಪ್ರಚಾರವಾಗಲು ವಿಸ್ತಾರಗೊಳ್ಳಲು ಮತ್ತು ತನ್ನದೇ ಆದ ನೆಲೆ ಕಂಡುಕೊಳ್ಳಲು ಸಾಧ್ಯವಾಯಿತು.

ಸ್ವಾತಂತ್ರ್ಯಪೂರ್ವದಲ್ಲಿ ನಿಜಾಮನ ಆಡಳಿತಕ್ಕೊಳಪಟ್ಟಿದ್ದ ಹೈದರಾಬಾದ್ ಕರ್ನಾಟಕದ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ ಆ ಸಮಯದಲ್ಲಿ ಯಾವುದೇ ಸಂಘಟನೆಯನ್ನು ಬೆಳೆಸುವುದು, ತತ್ವಸಿದ್ಧಾಂತಗಳನ್ನು ಬೋಧನೆ ಮಾಡುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಇಡೀ ಆಡಳಿತ ವ್ಯವಸ್ಥೆ ಊಳಿಗಮಾನ್ಯ ಪದ್ಧತಿಯಲ್ಲಿದ್ದು ಆಡಳಿತ ಸೂತ್ರವು ಗ್ರಾಮದ ಪಟೇಲರು, ಪಟವಾರಿಗಳು, ಜಮೀನುದಾರರು, ಇನಾಂದಾರರ ಮೂಲಕ ನಡೆಯುತ್ತಿತ್ತು. ಹೀಗಾಗಿ ಶೋಷಣೆ, ಬಡತನಕ್ಕೆ ತುತ್ತಾಗಿದ್ದ ಶ್ರೀಸಾಮಾನ್ಯನ ಸ್ಥಿತಿ ದುಸ್ತರವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಯಾವ ತತ್ವಸಿದ್ಧಾಂತಗಳನ್ನು ಕೇಳಿಸಿಕೊಳ್ಳಲು ಶ್ರೀಸಾಮಾನ್ಯರ ಕಿವಿಗಳು ಮುಚ್ಚಿಕೊಂಡಿದ್ದವು. ಶೋಷಣೆಯ ವಿರುದ್ಧ ಧ್ವನಿ ಎತ್ತುವ ಶಕ್ತಿ ಉಡುಗಿ ಹೋಗಿತ್ತು. ಇಂತಹ ಪರಿಸ್ಥಿತಿಯನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಳ್ಳುವ ಇಚ್ಛೆ ಹೊಂದಿದ್ದ ಕಾರ್ಮಿಕ ಮತ್ತು ಕಮ್ಯುನಿಸ್ಟ್ ನಾಯಕರಿಗೂ ಕೆಲಸ ಅಷ್ಟೊಂದು ಸುಲಭವಿರಲಿಲ್ಲ. ಇವರ ತತ್ವಸಿದ್ಧಾಂತಗಳನ್ನು ಮತ್ತು ಘೋಷಣೆಗಳನ್ನು ಆಲಿಸುವಂತೆ ಮಾಡಲು ಮತ್ತು ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿಯನ್ನು ತುಂಬುವ ಮೂಲಕ, ಜನಸಮೂಹವನ್ನು ಸಂಘಟನೆ ಮಾಡುವ ಕಾರ್ಯಕ್ಕೆ ಕಮ್ಯುನಿಸ್ಟ್ ನಾಯಕರು ಮುಂದಾದರು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಮ್ಯುನಿಸ್ಟ್ ಚಳವಳಿಯ ಹುಟ್ಟು ಮತ್ತು ಪ್ರಸಾರದ ಜೊತೆ ಜೊತೆಗೆ ಕಾರ್ಮಿಕರ ಸಂಘಟನೆ ಹಾಗೂ ಚಳವಳಿಯ ವಿಸ್ತಾರ ಬೆಳೆಯುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಬಹುದು.

ಸ್ವಾತಂತ್ರ್ಯದ ನಂತರ ಕಮ್ಯುನಿಸ್ಟ್‌ರಿಗೆ ತಮ್ಮ ಕ್ರಾಂತಿಕಾರಕ ಸಂಘಟನೆ ಮತ್ತು ತತ್ವಸಿದ್ಧಾಂತಗಳ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ಅವರಿಗೆ ಸಿದ್ಧಪಡಿಸಿದಂತೆ, ಪ್ರಯೋಗಶಾಲೆಗಳಾಗಿ ಸಿಕ್ಕಿದ್ದು ಗುಲಬರ್ಗಾದ ಎಂ.ಎಸ್.ಕೆ. ಮಿಲ್ ಕಾರ್ಮಿಕ ವರ್ಗ ಮತ್ತು ಶಹಬಾದ್‌ನ ಎಸಿಸಿ ಸಿಮೆಂಟ್ ಕಾರ್ಖಾನೆಯ ಕಾರ್ಮಿಕ ವರ್ಗದವರು. ಒಂದು ಕಡೆ ಕಮ್ಯುನಿಸ್ಟರಿಗೆ ಹೈದರಾಬಾದ್ ಕರ್ನಾಟಕದ ಆಗಿನ ಸನ್ನಿವೇಶದಲ್ಲಿ ತಮ್ಮ ತತ್ವಸಿದ್ಧಾಂತಗಳನ್ನು ಪ್ರಸಾರ ಮಾಡಲು ಮತ್ತು ಅವುಗಳನ್ನು ಕೇಳಿಸಿಕೊಂಡು, ಅನುಸರಿಸುವ ಸಮಾಜದ ಒಂದು ವರ್ಗದ ಜನರನ್ನು ತಯಾರಿ ಮಾಡಬೇಕಾಗಿತ್ತು. ಅದೇ ಸಂದರ್ಭದಲ್ಲಿ ಎಲ್ಲಾ ಜಾತಿ ವರ್ಗಕ್ಕೆ ಸೇರಿದ ಎಂ.ಎಸ್.ಕೆ. ಮಿಲ್‌ನ ಸಾವಿರಾರು ಕಾರ್ಮಿಕ ವರ್ಗಕ್ಕೆ ತಮ್ಮ ಸಮಸ್ಯೆಗಳಿಗೆ, ನೋವುಗಳಿಗೆ ಸ್ಪಂದಿಸುವ, ತಮ್ಮ ಬೇಡಿಕೆಗಳಿಗೆ ಬೆಂಬಲ ನೀಡುವ ನಾಯಕರ ಮತ್ತು ಸಂಘಟನೆಯ ಅವಶ್ಯಕತೆಯಿತ್ತು. ಇಂತಹ ಸಂದರ್ಭದಲ್ಲಿ ಕಮ್ಯುನಿಸ್ಟ್ ನಾಯಕರಿಗೆ ಸಿದ್ಧವಸ್ತುವಿನಂತೆ ಎಂ.ಎಸ್.ಕೆ. ಮಿಲ್ ಕಾರ್ಮಿಕರು ಸಿಕ್ಕಿದ್ದು, ಅವರಿಗೆ ಇವರು ಹಾಗೂ ಇವರಿಗೆ ಅವರು ಎನ್ನುವ ಅನಿವಾರ್ಯತೆ ಉಂಟಾಗಿ ಒಬ್ಬರಿಗೊಬ್ಬರಿಗೆ ಅನುಕೂಲ ಸಿಂಧುವಾಗಿ ಪರಿಣಮಿಸಿತು. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಇಂತಹ ಸನ್ನಿವೇಶಗಳು ಒದಗಿಬಂದ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕರಾದ ಎಸ್.ಎಲ್. ಉಪಾಧ್ಯಾಯ ಗುಲಬರ್ಗಾಕ್ಕೆ ಬಂದು ಕಮುನಿಸ್ಟ್ ಪಕ್ಷದ ಸಿದ್ಧಾಂತಗಳ ಅಡಿಯಲ್ಲಿ ಕಾರ್ಮಿಕರ ಸಂಘಟನೆಯ ಕಾರ್ಯ ಕೈಗೊಂಡರು.

ಹೈದರಾಬಾದ್ ಕರ್ನಾಟಕ ಭಾಗದ ರಾಜಕೀಯ ಸ್ಥಿತ್ಯಂತರಗಳಿಂದಾಗಿ ಇಲ್ಲಿನ ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ, ವಿವಿಧ ರೀತಿಯ ವಿರುದ್ಧ ಗುಣಧರ್ಮಗಳ, ಜಾತಿಯಾಧಾರಿತ ಧ್ರುವೀಕರಣಗೊಂಡ ಜನರಿಂದ ಕೂಡಿತ್ತು. ಇಂತಹ ಒಂದು ವಿಚಿತ್ರ ಸನ್ನಿವೇಶದಲ್ಲಿ, ಕಮ್ಯುನಿಸ್ಟ್ ಮುಂಚೂಣಿ ನಾಯಕರಿಗೆ ತಮ್ಮ ಎಐಟಿಯುಸಿ ಸಂಘಟನೆ ಮೂಲಕ ಕಾರ್ಮಿಕರ ಸಂಘಟನೆ ಮಾಡಲು ಎಂ.ಎಸ್.ಕೆ. ಮಿಲ್ ಒಂದು ಉತ್ತಮ ಅವಕಾಶ ಮಾಡಿಕೊಟ್ಟಿತ್ತು. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಮ್ಯುನಿಸ್ಟ್ ಹೋರಾಟಕ್ಕೆ, ಮೊದಲು ಚಾಲನೆ ನೀಡಿದವರು ಎಸ್.ಎಲ್. ಉಪಾಧ್ಯಾಯರು ಮತ್ತು ಅವರಿಗೆ ಬೆಂಬಲವಾಗಿ ಹೋರಾಟ ಕೈಗೊಂಡವರು ಉತ್ಸಾಹಿ ತರುಣರಾದ ಗಂಗಾಧರ ನಮೋಶಿಯವರು ಹಾಗೂ ಶ್ರೀನಿವಾಸ ಗುಡಿ. ಗಂಗಾಧರ ನಮೋಶಿಯವರು ಪಕ್ಷದ ಸಂಘಟನೆ ಮತ್ತು ವ್ಯೂಹ ರಚಿಸುತ್ತಾ ಚಳವಳಿಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಶ್ರೀನಿವಾಸ ಗುಡಿಯವರು ಪಕ್ಷದ ತತ್ವಸಿದ್ಧಾಂತಗಳಲ್ಲಿ ಚಾತುರ್ಯ ಹೊಂದಿದ್ದು, ಸಾಮಾನ್ಯ ಜನತೆಯಲ್ಲಿ ವಿಶೇಷವಾಗಿ ಕಾರ್ಮಿಕ ವರ್ಗಕ್ಕೆ ಬೋಧನೆ ಮೂಲಕ ಕ್ರಾಂತಿಕಾರಕ ವಿಷಯಗಳನ್ನು ಅವರಲ್ಲಿ ತುಂಬಿ ಮನಸ್ಸನ್ನು ಪ್ರಚೋದನೆಗೊಳಿಸುವಲ್ಲಿ ಚತುರತೆ ಹೊಂದಿದ್ದರು. ೧೯೫೦ರಲ್ಲಿ ಕಮ್ಯುನಿಸ್ಟ್ ತತ್ವಸಿದ್ಧಾಂತಗಳನ್ನು ನಂಬಿದ್ದ ಮಹಮದ್ ಹಸನ್‌ಖಾನ್ ಎನ್ನುವ ಮತ್ತೊಬ್ಬ ನಾಯಕ ಇವರ ಜೊತೆಗೂಡಿ ಕಮ್ಯುನಿಸ್ಟ್ ಕಾರ್ಯಚಟುವಟಿಕೆಯಲ್ಲಿ ತೊಡಗಿದನು. ಹಸನ್‌ಖಾನ್‌ರು ಪಕ್ಷಕ್ಕೆ ಸೇರಿದ್ದರಿಂದಾಗಿ, ಅನೇಕ ಮುಸ್ಲಿಂ ಯುವಕರು ಪಕ್ಷದೊಂದಿಗೆ ಗುರುತಿಸಿಕೊಳ್ಳಲು

ಪ್ರಾರಂಭವಾಯಿತು. ಇಲ್ಲಿ ವಿಶೇಷವಾಗಿ ಗುರುತಿಸುವುದೇನೆಂದರೆ ಕಮ್ಯುನಿಸ್ಟ್ ಪಕ್ಷದ ಜಾತ್ಯಾತೀತ ತತ್ವವು ಅನೇಕ ಕೆಳವರ್ಗಗಳನ್ನು ಆಕರ್ಷಿಸುವಲ್ಲಿ ಸಫಲವಾಯಿತು. ಆರಂಭದಲ್ಲಿ ನಾಯಕರು ಎಂ.ಎಸ್.ಕೆ. ಮಿಲ್‌ನ ಕಾರ್ಮಿಕರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಕ್ರಮೇಣ ಇವರ ಟ್ರೇಡ್ ಯೂನಿಯನ್ ಸಂಘಟನೆ ವಿಸ್ತಾರಗೊಂಡಂತೆ, ಸಮಾಜದಲ್ಲಿ ಇವರ ತತ್ವಸಿದ್ಧಾಂತಗಳ ಬೇರುಗಳು ಗಟ್ಟಿಗೊಳ್ಳುತ್ತಾ, ಕಮ್ಯುನಿಸ್ಟ್ ಪಕ್ಷದ ತಳಪಾಯವು ವಿಸ್ತಾರಗೊಳ್ಳುತ್ತಾ ಹೋಯಿತು. ಮುಂದೆ ಕ್ರಾಂತಿಕಾರಕ ಚಳವಳಿಗಳನ್ನು ಮಾಡಬೇಕೆಂಬ ಉದ್ದೇಶ ಹೊಂದಿದ್ದ ನಾಯಕರು ಚಳವಳಿಗೆ ಪೂರ್ವಸಿದ್ಧತೆಯಾಗಿ ಕ್ರಾಂತಿಕಾರಕ ತತ್ವಸಿದ್ಧಾಂತಗಳ ಬೋಧನೆಯಲ್ಲಿ ನಿರತರಾದರು.

ಕಮ್ಯುನಿಸ್ಟ್ ನಾಯಕರು ಜನರನ್ನು ಜಾತಿಯಾಧಾರದ ಮೇಲೆ ಸಂಘಟಿಸದೆ ಅವರ ಸಂಘಟನೆ ಜಾತ್ಯಾತೀತವಾಗಿದ್ದು, ಎಲ್ಲಾ ಜಾತಿ ವರ್ಗದ ಜನರನ್ನು ಒಳಗೊಂಡಿದ್ದಿತು. ಇಂತಹ ಜಾತ್ಯಾತೀತ ನೀತಿಯು ಜನರನ್ನು ಬಹಳ ಬೇಗ ಆಕರ್ಷಿಸಿತು. ಇದುವರೆಗೂ ಕೇವಲ ಉನ್ನತ ವರ್ಗದವರ ನಾಯಕತ್ವದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ, ಅನಾಧಾರಕ್ಕೆ ಒಳಗಾದಿದ್ದ ಕೆಳವರ್ಗದ ಜನರಿಗೆ ಇಂತಹ ಜಾತ್ಯಾತೀತ ನೀತಿಯು ಇಷ್ಟವಾಯಿತು. ಅದೇ ರೀತಿ ಬಡ ಮತ್ತು ಕಾರ್ಮಿಕ ವರ್ಗಕ್ಕೆ ಸೇರಿದ ಮುಸ್ಲಿಂರನ್ನು ಸೆಳೆಯುವಲ್ಲಿಯೂ ಸಫಲವಾಯಿತು. ಇದರಿಂದಾಗಿ ಮಿಲ್‌ನ ಕಾರ್ಮಿಕರಲ್ಲದವರೂ ಸಹ ಅದರಲ್ಲೂ ದಲಿತರು ಮತ್ತು ಮುಸ್ಲಿಂರು ಕಾರ್ಮಿಕ ಚಳವಳಿಯೊಂದಿಗೆ ಬೆರೆತರು. ಆಗ ಕಮ್ಯುನಿಸ್ಟರಿಗೆ ಒದಗಿ ಬಂದ ಮತ್ತೊಂದು ಅನುಕೂಲಕರವಾದ ಅಂಶವೆಂದರೆ ಎಂ.ಎಸ್.ಕೆ. ಮಿಲ್‌ನಲ್ಲಿ ಕಮ್ಯುನಿಸ್ಟ್ ನೇತೃತ್ವದ ಎಐಟಿಯುಸಿ ಸಂಘಟನೆ ಕಾರ್ಯನಿರ್ವಹಿಸುತ್ತಿದ್ದಾಗ ಇತರ ಬಣಗಳ ಸಂಘಟನೆಗಳು ಕಾರ್ಯಚಟುವಟಿಕೆಗಳು ಅಷ್ಟು ತೀವ್ರವಾಗಿರಲಿಲ್ಲ. ಈ ಅಂಶವು ಸಹ ಕಾರ್ಮಿಕ ಚಳವಳಿಯು ಯಾವ ಅಡ್ಡಿ ಆತಂಕವಿಲ್ಲದೆ ತನ್ನ ನೆಲೆಯನ್ನು ವಿಸ್ತಾರಗೊಳ್ಳಲು ಅನುಕೂಲವಾಗಿ ಪರಿಣಮಿಸಿತು.[೬೨]

ಕಮ್ಯುನಿಸ್ಟ್ ಪಕ್ಷ ಕಾರ್ಮಿಕರ ಪರವಾಗಿ ಹೋರಾಡುತ್ತಿರುವ ಸಮಯದಲ್ಲೇ ಪಕ್ಷವು ಸಿಪಿಐ (ಎಂ) ಮತ್ತು ಸಿಪಿಐ(ಎಂ.ಎಲ್.) ಎಂದು ಬಣಗಳಾಗಿ ಇಬ್ಭಾಗವಾಯಿತು. ಇದರಿಂದಾಗಿ ಕಾರ್ಮಿಕ ಸಂಘಟನೆಯಾಗಿದ್ದ ಎಐಟಿಯುಸಿ ಸಹ ಇಬ್ಭಾಗವಾಗಿ, ಸಿಐಟಿಯು ಎನ್ನುವ ಮತ್ತೊಂದು ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಗುಲಬರ್ಗಾದಲ್ಲಿ ನಮೋಶಿ ಮತ್ತು ಇತರರು ಸಿಐಟಿಯು, ಸಂಘಟನೆ ಮೂಲಕ ಎಂ.ಎಸ್.ಕೆ. ಮಿಲ್ ಕಾರ್ಮಿಕರ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಶಹಬಾದ್ ಸಿಮೆಂಟ್ ಕಾರ್ಖಾನೆಯ ಕಾರ್ಮಿಕರ ಹಿತರಕ್ಷಣೆಗೆ ಎಐಟಿಯುಸಿ ಹೋರಾಟ ಮುಂದುವರೆಸಿತು.

ಹೈದರಾಬಾದ್ ಕರ್ನಾಟಕ ಭಾಗದ ಕಾರ್ಮಿಕರ ಚಳವಳಿಗಳನ್ನು ಅವಲೋಕಿಸಿದಾಗ ಈ ಭಾಗದ ಹೆಚ್ಚಿನ ಕಾರ್ಮಿಕ ಚಳವಳಿಗಳೆಲ್ಲವೂ ಕಮ್ಯುನಿಸ್ಟ್ ಪಕ್ಷದ ಸಂಘಟನೆಗಳ ನೇತೃತ್ವದಲ್ಲಿ ನಡೆದಿರುವುದು ಹಾಗೂ ಆ ಚಳವಳಿಗಳಿಗೆ ಕಮ್ಯುನಿಸ್ಟ್ ನಾಯಕರು ಮುಂದಾಳತ್ವ ವಹಿಸಿರುವುದನ್ನು ಗಮನಿಸಬಹುದಾಗಿದೆ.

ಅಲ್ಲದೇ ಇಲ್ಲಿನ ಚಳವಳಿಗಳು ಅನೇಕರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿ ನಂತರ ಕಾರ್ಮಿಕ ನಾಯಕರನ್ನಾಗಿ ರೂಪಿಸುವ ಮೂಲಕ ಅನೇಕ ಯುವ ನಾಯಕರು ಕಾರ್ಮಿಕ ನಾಯಕರಾಗಿ ಹೊರಹೊಮ್ಮಿರುವುದನ್ನು ಗುರುತಿಸಬಹುದಾಗಿದೆ. ಹಾಗೆಯೇ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ, ಪ್ರಾರಂಭದಲ್ಲಿ ಹೆಚ್ಚಿನ ಕಾರ್ಮಿಕ ಚಳವಳಿಗಳು ಎಂ.ಎಸ್.ಕೆ. ಮಿಲ್ ಕಾರ್ಮಿಕರ ಸಮಸ್ಯೆ ಮತ್ತು ಹಿತರಕ್ಷಣೆ ವಿಷಯಕ್ಕೆ ಕೇಂದ್ರೀಕೃತವಾಗಿದ್ದವು. ನಂತರ ಶಾಹಬಾದ್, ವಾಡಿ, ಸೇಡಂ ಸಿಮೆಂಟ್ ಕಾರ್ಖಾನೆಗಳಿಗೆ, ಹಟ್ಟಿ ಚಿನ್ನದ ಗಣಿ, ಕಲ್ಲು ಗಣಿ, ಪೌರ ಕಾರ್ಮಿಕರು, ವಿವಿಧ ಕಾರ್ಖಾನೆಗಳ ಕಾರ್ಮಿಕರ ಹೋರಾಟಗಳಿಗೆ ವಿಸ್ತರಿಸಿತು. ಇತ್ತೀಚಿಗೆ ಹೋರಾಟ ಗಣಿ ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರು ಹೀಗೆ ಹೆಚ್ಚೆಚ್ಚು ವಿಸ್ತರಿಸುತ್ತಿದೆ. ಆಗ ಎಂ.ಎಸ್.ಕೆ. ಮಿಲ್ ಕಾರ್ಮಿಕರ ನಾಯಕರಾಗಿ ಬೆಳೆದು ಉತ್ತಮ ನಾಯಕತ್ವದ ಮೂಲಕ ಜನಾನುರಾಗಿಯಾದ ಎಸ್.ಕೆ. ಕಾಂತಾ ಅವರು ಇಂದಿಗೂ ಕಾರ್ಮಿಕ ನಾಯಕರಾಗಿ, ಸಾಮಾನ್ಯರಲ್ಲಿ ಬೆರೆತು ಕಾರ್ಮಿಕರ ಈ ಹಿಂದಿನ ಹಾಗೂ ಪ್ರಸ್ತುತ ಸಮಸ್ಯೆಗಳ ಬಗ್ಗೆ ಚಟುವಟಿಕೆಯಿಂದ ಕಾರ್ಯನಿರತರಾಗಿದ್ದಾರೆ. ಎಸ್.ಕೆ. ಕಾಂತಾರವರ ಸಂದರ್ಶನ ಕೈಗೊಂಡಾಗ, ಅವರ ಸರಳತೆ, ಸಮಾಜ ಸೇವೆ ಬಗ್ಗೆ ಅವರಿಗಿರುವ ಕಳಕಳಿ ಹಾಗೂ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಅವರ ವಿಚಾರಗಳು ಗಮನ ಸೆಳೆದವು.

೪.೪.೨. ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಕಾರ್ಮಿಕರ ಶೋಷಣೆಯ ವಿರುದ್ಧ ದನಿಯೆತ್ತಿ ಈಗಾಗಲೇ ಒಂದೂವರೆ ಶತಮಾನಗಳು ಕಳೆದಿದ್ದರೂ ಶೋಷಣೆಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗದಿರುವುದು ಬಹಳ ಆತಂಕಕಾರಿ ಹಾಗೂ ವಿಷಾದನೀಯವಾಗಿದೆ. ಕಾರ್ಮಿಕರ ಏಳ್ಗೆಯೇ ರಾಜ್ಯದ ಅಭಿವೃದ್ಧಿಗೆ ಕೈದೀವಿಗೆ ಎನ್ನುವ ಘೋಷಣೆ ಘೋಷಣೆಯಾಗಿಯೇ ಉಳಿದಿದೆಯೇ ಹೊರತು ಕಾರ್ಮಿಕರ ಸ್ಥಿತಿಗತಿಗಳು ಸುಧಾರಿಸಿಲ್ಲ. ಬದಲಾಗಿ ದಿನೇ ದಿನೇ ಕಾರ್ಮಿಕರು ಒಂದಲ್ಲಾ ಒಂದು ಸಮಸ್ಯೆಗಳಿಗೆ ಈಡಾಗುತ್ತಿದ್ದಾರೆ. ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಸೇವಾಭದ್ರತೆಗೆ ಅನೇಕ ಯೋಜನೆಗಳು ರೂಪಗೊಂಡರೂ ಅವು ಕಾರ್ಯರೂಪಕ್ಕೆ ಬರುತ್ತಿಲ್ಲ. ಬಂದರೂ ತಲುಪಬೇಕಾದವರನ್ನು ತಲುಪುತ್ತಿಲ್ಲ. ಹೀಗಾಗಿ ಕಾರ್ಮಿಕರು ದಿನೇ ದಿನೇ ಹೊಸ ಸಮಸ್ಯೆಗಳನ್ನು ಎದುರಿಸುವುದು ತಪ್ಪಿಲ್ಲ. ಬಂಡವಾಳಶಾಹಿ ಪದ್ಧತಿಯಲ್ಲಿ ಇಂದು ಉತ್ಪಾದನೆಯ ಕ್ಷೇತ್ರಗಳು ಖಾಸಗಿ ಒಡೆತನಕ್ಕೆ ಸೇರಿ, ಅದರ ಪೂರ್ತಿ ಲಾಭವನ್ನು ಖಾಸಗಿಯವರೇ ಪಡೆಯುತ್ತಿರುವುದರಿಂದ ಕಾರ್ಮಿಕ ವರ್ಗಗಳ ಬೆಳವಣಿಗೆಗೆ ಆತಂಕವನ್ನುಂಟು ಮಾಡುತ್ತಿದೆ. ಶೋಷಣೆ ಮಾಡುವ ವರ್ಗ ಯಾವುದಾದರೊಂದು ರೂಪದಲ್ಲಿ ಶೋಷಣೆಯನ್ನು ಮುಂದುವರಿಸಿದೆ. ಹೈದರಾಬಾದ್ ಕರ್ನಾಟಕದಲ್ಲಿ ಮೇಲ್ನೋಟಕ್ಕೆ ಕಂಡು ಬರುವ ಸಾಮಾಜಿಕ ಪರಿಸ್ಥಿತಿಯನ್ನು ಗಮನಿಸಿದರೆ, ದುಡಿಯುವ ವರ್ಗ ಒಂದೆಡೆಯಾದರೆ, ದುಡಿಯದೆ ತಿನ್ನುವ ವರ್ಗ ಮತ್ತೊಂದೆಡೆಯಿದೆ. ತಿನ್ನುವ ವರ್ಗವು ಹಸಿವೆಯಾಗುವುದಿಲ್ಲವೆಂದು ಅಜೀರ್ಣವಾಗಿ ವೈದ್ಯರ ಮೊರೆ ಹೋದರೆ, ದುಡಿಯುವ ವರ್ಗವು ಹಸಿವೆಯನ್ನು

ತಡೆಯಲಾಗದೆ ದೈವಕ್ಕೆ ಮೊರೆ ಇಡುತ್ತಿದೆ. ಆ ದಿನದ ಅನ್ನಕ್ಕಾಗಿ ಅಶಕ್ತರು, ಮಹಿಳೆಯರು, ಮಕ್ಕಳು, ಬಿಸಿಲು, ನೆರಳೆನ್ನದೆ, ಬೇಸರಿಕೆ ಇಲ್ಲದೆ ದುಡಿಯಲೇಬೇಕಾದ ಅನಿವಾರ್ಯತೆಯಿದೆ. ದುಡಿಯದಿದ್ದರೆ ಆವತ್ತಿನ ಊಟಕ್ಕೂ ಗತಿಯಿಲ್ಲದಂತ ಸ್ಥಿತಿ ಇದೆ. ಹೀಗಾಗಿ ದಿನೇ ದಿನೇ ಬಡತನ ಶ್ರೀಮಂತಿಕೆಯ ಅಂತರ ಹೆಚ್ಚುತ್ತಿದೆ. ಹೈದರಾಬಾದ್ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ, ಕಾರ್ಮಿಕರು ಒಂದಲ್ಲ ಒಂದು ರೀತಿಯ ವಿಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಜಾಗತೀಕರಣ ಮತ್ತು ಉದಾರೀಕರಣದ ಹಿನ್ನೆಲೆಯಲ್ಲಿ ಇಂದಿನ ಕೈಗಾರಿಕೆಗಳು ಮತ್ತು ಕಾರ್ಮಿಕರ ಸ್ಥಿತಿಗಳನ್ನು ಗಮನಿಸಿದರೆ ಸಮಸ್ಯೆ ಗಂಭೀರವಾಗಿದೆ ಎನ್ನಬಹುದು. ದಿನದಿಂದ ದಿನಕ್ಕೆ ಬದಲಾಗುತ್ತಿರುವ ಆಧುನೀಕರಣ ಹಿನ್ನೆಲೆಯಲ್ಲಿ ಹೊಸ ಹೊಸ ತಂತ್ರಜ್ಞಾನ ಬಳಕೆ, ವಿವಿಧ ಸಾಧನ ಸಾಮಾಗ್ರಿಗಳ ಆವಿಷ್ಕಾರ ಹಾಗೂ ಅವುಗಳ ಅಳವಡಿಕೆಯಿಂದಾಗಿ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಜಾಗತೀಕರಣ ಹಿನ್ನೆಲೆಯಲ್ಲಿ ಹಣದುಬ್ಬರ, ಬೆಲೆ ಏರಿಕೆ, ಜನಸಂಖ್ಯಾ ಬೆಳವಣಿಗೆ, ನಿರುದ್ಯೋಗ ಮುಂತಾದ ತೀವ್ರ ಪೈಪೋಟಿಯಿಂದ ಕಾರ್ಮಿಕರು ಕೇವಲ ತಮ್ಮ ವೃತ್ತಿಯಿಂದ ಬರುವ ಅಲ್ಪ ಗಳಿಕೆಯಲ್ಲಿ ಜೀವನಾವಶ್ಯಕ ವಸ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನೊಂದು ಕಡೆ ನಗರಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದ ಹೆಚ್ಚಿನ ಕಾರ್ಮಿಕರಿಗೆ ವಸತಿ, ಆರೋಗ್ಯ, ಕುಡಿಯುವ ನೀರು, ಮಾಲಿನ್ಯಗಳು ಕಾರ್ಮಿಕ ವರ್ಗಗಳ ಬದುಕಿಗೆ ನಿರಾಶೆಯನ್ನು ಉಂಟು ಮಾಡುತ್ತಿದ್ದವು. ದುಡಿಮೆಯಿಂದ ಬರುತ್ತಿದ್ದ ಆದಾಯ ಕಡಿಮೆ ಇದ್ದುದರಿಂದ ಪೌಷ್ಠಿಕ ಆಹಾರದ ಕೊರತೆ ಅವರ ಬಡತನವನ್ನು ಹೆಚ್ಚಿಸಿತ್ತು. ಹೀಗಾಗಿ ಕಾರ್ಮಿಕರು ಮುಷ್ಕರ, ಬಂದ್, ಪ್ರತಿಭಟನೆ, ಘೇರಾವ್ ಮುಂತಾದ ಮಾರ್ಗಗಳನ್ನು ಕಂಡುಕೊಂಡರು.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಸಮಸ್ಯೆ

ಹೈದರಾಬಾದ್ ಕರ್ನಾಟಕ ಭಾಗದಲ್ಲಿರುವ ಏಕೈಕ ಮತ್ತು ಅತ್ಯಂತ ದೊಡ್ಡ, ಹೆಚ್ಚು ಆದಾಯ ತಂದು ಕೊಡುತ್ತಿರುವ ಗಣಿ ಎಂದರೆ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ. ಸದ್ಯ ಕರ್ನಾಟಕ ರಾಜ್ಯದಲ್ಲೇ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತಿರುವ ಮತ್ತು ಅತೀ ಹೆಚ್ಚು ಆದಾಯವನ್ನು ತಂದು ಕೊಡುತ್ತಿರುವ ಗಣಿ ಇದಾಗಿದೆ. ಹಾಗೆಯೇ ಕಾರ್ಮಿಕರು ಅತೀ ಹೆಚ್ಚು ಸಮಸ್ಯೆಗಳಿಗೆ, ರೋಗಗಳಿಗೆ ಈಡಾಗುತ್ತಿರುವುದು ಇದೇ ಹಟ್ಟಿ ಚಿನ್ನದ ಗಣಿಯಲ್ಲಿ. ಗಣಿಯಲ್ಲಿ ಸುಮಾರು ೪೦೦೦ ಕಾರ್ಮಿಕರು ದುಡಿಯುತ್ತಿದ್ದಾರೆ. ಇಲ್ಲಿನ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಿದಾಗ ಅದರಲ್ಲಿ ಸಿ ಮತ್ತು ಡಿ ದರ್ಜೆಯ ಕೆಳಸ್ತರದ ಕಾರ್ಮಿಕರು ಇಂದಿಗೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿರುವುದರಿಂದ ಉನ್ನತ ಮಟ್ಟದ ಉದ್ಯೋಗಾವಕಾಶಗಳು ಸಿಗದೆ, ದೊರೆತ ಉದ್ಯೋಗ, ವೇತನದಲ್ಲಿ ಜೀವನ ನಿರ್ವಹಣೆ ಕಷ್ಟದಾಯಕವಾಗಿದೆ. ಇವರಿಗೆ ಕೆಲಸದ ಸಮಯದಲ್ಲಿ ವಿಶ್ರಾಂತಿಗೆ ಅವಕಾಶವಿಲ್ಲ. ಕಾರ್ಮಿಕರು ಭೂಮಿಯ ಆಳದಲ್ಲಿ, ಧೂಳಿನಲ್ಲಿ ಶಾಖದ ವಾತಾವರಣದಲ್ಲಿ

ಕಾರ್ಯನಿರ್ವಹಿಸಬೇಕಾಗಿರುವುದರಿಂದ ಹೆಚ್ಚಾಗಿ ಔದ್ಯೋಗಿಕ ಖಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ. ಬಹಳಷ್ಟು ಕಾರ್ಮಿಕರು ಶ್ವಾಸಕೋಶ ಬಾದೆ, ಟಿ.ಬಿ, ಕ್ಯಾನ್ಸರ್, ಅಲ್ಸರ್‌ನಂತಹ ರೋಗಗಳಿಗೆ ಬಲಿಯಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಇನ್ನು ಕೆಲವರು ಕುಡಿತ ಮುಂತಾದ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕೆಲವು ಕಾರ್ಮಿಕರು ಮದ್ಯಪಾನ ಮಾಡದೆ ಕೆಲಸ ಮಾಡಲು ಸಾಧ್ಯವೇ ಇಲ್ಲ ಎನ್ನುತ್ತಾರೆ. ಅದಕ್ಕೆ ಅವರು ನೀಡುವ ಕಾರಣವೇನೆಂದರೆ, ಭೂಮಿಯ ಆಳಕ್ಕಿಳಿದು ಸಾವಿರಾರು ಮೀಟರ್ ಆಳದಲ್ಲಿ ಕಾರ್ಯನಿರ್ವಹಿಸಲು ಧೈರ್ಯ ಬೇಕು. ಹಾಗಾಗಿ ನಾವು ಮದ್ಯಪಾನ ಮಾಡಿಯೆ ಕಾರ್ಯಕ್ಕಿಳಿಯುತ್ತೇವೆ ಎನ್ನುತ್ತಾರೆ. ಆದರೆ ಇದು ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇನ್ನು ಕೆಲವು ಕಾರ್ಮಿಕರು ತಮ್ಮ ಮೈನೋವನ್ನು ಮರೆಯಲು ಮದ್ಯಪಾನ ಮುಂತಾದ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಇತ್ತೀಚಿಗೆ ಕಾರ್ಮಿಕರ ಆರೋಗ್ಯ ತಪಾಸಣೆ ವೇಳೆಯಲ್ಲಿ ಕಂಡು ಬಂದಿರುವಂತೆ ೨೦೦೪-೦೮ರಲ್ಲಿ ರಾಯಚೂರು ಆರೋಗ್ಯ ಕೇಂದ್ರ ದಾಖಲಾತಿ ಪುಸ್ತಕ ಆಧಾರದಂತೆ, ನೂರಕ್ಕೂ ಹೆಚ್ಚು ಜನ ಏಡ್ಸ್ ರೋಗಕ್ಕೆ ಬಲಿಯಾಗಿರುವುದು ತಿಳಿದುಬರುತ್ತದೆ. ಇಂತಹ ಅಂಶಗಳು ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಸರಕಾರ, ಕಾರ್ಮಿಕ ನಾಯಕರು ಹಾಗೂ ಸಾಮಾಜಿಕ ಕಾರ್ಯಕರ್ತರು ಚಿಂತನೆ ಮಾಡಬೇಕಾದ ಅವಶ್ಯಕತೆಯಿದೆ.

ಮಹಿಳಾ ಕಾರ್ಮಿಕರ ಸಮಸ್ಯೆಗಳು

ಹಟ್ಟಿ ಚಿನ್ನದ ಗಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅದರಲ್ಲೂ ಕೆಳವರ್ಗದವರ ಮಹಿಳಾ ಕಾರ್ಮಿಕರ ಸಮಸ್ಯೆ ತೀರಾ ಭಿನ್ನ ಮತ್ತು ಗಂಭೀರವಾದುದು. ಇಲ್ಲಿ ಎಲ್ಲ ದರ್ಜೆಯ ಮಹಿಳಾ ಕಾರ್ಮಿಕರು ಸೇರಿದಂತೆ ನೂರಾರು ಮಹಿಳಾ ಕಾರ್ಮಿಕರಿದ್ದಾರೆ. ಅದರಲ್ಲಿ ಹೆಚ್ಚಿನವರು ಗಂಡ ಸತ್ತ ನಂತರ ಅನುಕಂಪದ ಆಧಾರದ ಮೇಲೆ ನೌಕರಿ ಪಡೆದವರಾಗಿದ್ದಾರೆ ಹೀಗಾಗಿ ಇವರು ಅತ್ಯಂತ ಕೆಳದರ್ಜೆಯ ಕೆಲಸದಲ್ಲಿ ತೊಡಗಿದ್ದಾರೆ. ಇವರಿಗೆ ಗಂಡ ಸತ್ತ ನಂತರ ಬರಬೇಕಾಗಿದ್ದ ವೇತನ ಬಾಕಿ ಹಣ ಶೀಘ್ರುವಾಗಿ ತಲುಪುತ್ತಿಲ್ಲ, ಇವರಿಗೆ ನೀಡುತ್ತಿರುವ ಸಂಬಳ ಅತ್ಯಲ್ಪವಾಗಿದ್ದು ಕುಟುಂಬ ನಿರ್ವಹಣೆಗೆ ಸಾಕಾಗುತ್ತಿಲ್ಲ. ಹೆಚ್ಚಿನ ಮಹಿಳಾ ಕಾರ್ಮಿಕರು ಬಂಕ್ ಮಣ್ಣು ಎತ್ತುವ ಕೆಲಸದಲ್ಲಿ, ಅಪಾಯಕಾರಿ ಬೃಹತ್ ಯಂತ್ರಗಳ ನಡುವೆ ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನು ಇವರ ಸಂಖ್ಯೆ ಅತೀ ಕಡಿಮೆ ಇರುವುದರಿಂದ ಇವರದೇ ಆದ ಪ್ರತ್ಯೇಕ ಸಂಘಗಳಿಲ್ಲ. ಹಾಗಾಗಿ ಯಾವುದೇ ಮುಷ್ಕರದಲ್ಲಿ ನೇರವಾಗಿ ಭಾಗವಹಿಸಲು ಹಿಂಜರಿಯುತ್ತಿದ್ದಾರೆ.

ಕಾರ್ಮಿಕ ವರ್ಗದಲ್ಲಿ ಮತ್ತೊಂದು ವರ್ಗಕ್ಕೆ ಸೇರಿದವರು ಎಂದರೆ ಗುತ್ತಿಗೆ ಆಧಾರಿತ ಕಾರ್ಮಿಕ ವರ್ಗ. ಇವರು ಸಹ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಟ್ಟಿ ಚಿನ್ನದ ಕಂಪನಿಯಲ್ಲಿ ಇತ್ತೀಚಿಗೆ ಕೆಲವು ಗುತ್ತಿಗೆ ಆಧಾರಿತ ಹಾಗೂ ದಿನಗೂಲಿ ನೌಕರರನ್ನು ನೇಮಿಸಿಕೊಂಡಿದೆ ಆದರೆ ಇವರಿಗೆ ಹೆಚ್ಚಿನ ಭತ್ಯೆ ಬೋನಸ್ ನೀಡುವುದಿಲ್ಲ ಹಾಗೂ ಇವರಿಗೆ ಔದ್ಯೋಗಿಕ ಭದ್ರತೆಯೂ ಇಲ್ಲ. ಒಂದೇ

ಮಾತಿನಲ್ಲಿ ಹೇಳುವುದಾದರೆ ಗುತ್ತಿಗೆ ಆಧಾರಿತ ಕಾರ್ಮಿಕನಿಗೂ ಕಂಪನಿಗೂ ನೇರ ಸಂಬಂಧವೇ ಇಲ್ಲ. ಕೆಲಸದ ಸಮಯದಲ್ಲಿ ಅಪಘಾತ ಸಂಭವಿಸಿ, ಕಾರ್ಮಿಕ ಮೃತಪಟ್ಟರೆ, ಇವರಿಗೆ ಸರಿಯಾದ ಪರಿಹಾರವೂ ಸಿಗುವುದಿಲ್ಲ. ಇನ್ನು ಇವರು ಗುತ್ತಿಗೆ ಕಾಲಮಾನ ಮುಗಿದ ನಂತರ ನಿರುದ್ಯೋಗಿಗಳಾಗುತ್ತಾರೆ. ಎಷ್ಟೋ ವೇಳೆ ಇವರಿಗೆ ನಿರಂತರವಾಗಿ ಕೆಲಸಗಳು ದೊರಕುವುದಿಲ್ಲ. ಹೀಗಾಗಿ ಕಾರ್ಮಿಕರು ಬೇರೆ ಬೇರೆ ಪ್ರದೇಶಕ್ಕೆ ಕೆಲಸ ಹುಡುಕಿಕೊಂಡು ವಲಸೆ ಹೋಗಬೇಕಾದ ಪರಿಸ್ಥಿತಿ ಇರುವುದು ಇಲ್ಲಿನ ಇಂದಿನ ಸ್ಥಿತಿಗತಿಯಾಗಿದೆ.

ಅಸಂಘಟಿತ ಕಾರ್ಮಿಕರ ಸಮಸ್ಯೆಗಳು

'ಕಾರ್ಮಿಕರ ಹೋರಾಟ ಚಿರಾಯುವಾಗಲಿ.....
ವಿಶ್ವದ ಕಾರ್ಮಿಕರೇ ಒಂದಾಗಿ.....
ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸಿ,
ಬೆಲೆ ಏರಿಕೆಗೆ ಧಿಕ್ಕಾರ....'

ವಿಶ್ವದ ಯಾವುದೇ ರಾಷ್ಟ್ರದ ಕಾರ್ಮಿಕರ ಚಳವಳಿ ಅಥವಾ ಹೋರಾಟದಲ್ಲಿ ಇಂತಹ ಘೋಷಣೆಗಳು ಇಂದು ಕೇಳಿ ಬರುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿದಾಗ, ಸಂಘಟಿತ ಕಾರ್ಮಿಕರಿಗಿಂತ ಅಸಂಘಟಿತ ಕಾರ್ಮಿಕರ ಸಮಸ್ಯೆಗಳು ಗಂಭೀರ ಸ್ವರೂಪದವುಗಳಾಗಿದ್ದು, ಇಂತಹ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗಗಳನ್ನು ಹುಡುಕುವುದು ಅವಶ್ಯವಾಗಿದೆ.

ಸಂಘಟಿತ ವಲಯದ ಕಾರ್ಮಿಕರು ಪಡೆಯುವ ಸೌಲಭ್ಯಗಳು ಇನ್ನೂ ಕೂಡ ಅಸಂಘಟಿತ ವಲಯದ ಕಾರ್ಮಿಕರಿಗೆ ಸಿಗದೆ ಅವರ ಪಾಲಿಗೆ ಕನಸಾಗೇ ಉಳಿದಿವೆ. ಸರಿಯಾದ ಕೂಲಿ, ರಜೆ, ಸೇವಾ ಭದ್ರತೆ ಮುಂತಾದ ಯಾವ ಸೌಲಭ್ಯಗಳಿಲ್ಲದೇ ಅಸಂಘಟಿತ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಸರಕಾರಗಳು ಬಂಡವಾಳಶಾಹಿಗಳ ಹಿತಾಸಕ್ತಿಗೆ ಬದ್ಧವಾಗಿದ್ದು, ಕಾರ್ಮಿಕರ ಹಿತಾಸಕ್ತಿಯನ್ನು ನಿರ್ಲಕ್ಷಿಸಿದೆ ಎನ್ನಬಹುದು. ಅಸಂಘಟಿತ ವರ್ಗಗಳ ಕಾರ್ಮಿಕರ ಹಿತ ಕಾಪಾಡಲು ಸರ್ಕಾರ ರೂಪಿಸಿರುವ ಯೋಜನೆಗಳು ಈ ವರ್ಗಗಳ ಹಲವು ಜನರಿಗೆ ಇನ್ನೂ ತಲುಪಿಲ್ಲ. ಇಂತಹ ವರ್ಗದ ಕಾರ್ಮಿಕರ ಮತ್ತೊಂದು ಮುಖ್ಯ ಸಮಸ್ಯೆಯೆಂದರೆ ಕಾರ್ಮಿಕರಿಗೆ ಸರಿಯಾದ ನೆಲೆ ಇಲ್ಲದಾಗಿದೆ. ತಾವು ಕೆಲಸ ಮಾಡುವ ಜಾಗದ ಪಕ್ಕದಲ್ಲಿಯೇ ಜೀರ್ಣಾವಸ್ಥೆ ತಲುಪಿರುವ ಕಟ್ಟಡಗಳ, ಮರಗಳ ಕೆಳಗೆ, ಪಕ್ಕದಲ್ಲಿ ಜೋಪಡಿಗಳನ್ನು ಹಾಕಿಕೊಂಡು ವಾಸಿಸುತ್ತಿದ್ದಾರೆ. ಒಂದು ನಿರ್ದಿಷ್ಟ ನೆಲೆ ಇಲ್ಲದ ಇವರಿಗೆ ರಿಯಾಯಿತಿಯಲ್ಲಿ ಆಹಾರ ವಸ್ತುಗಳನ್ನು ಪಡೆಯಲು ರೇಷನ್ ಕಾರ್ಡ್ ಕೂಡ ಲಭ್ಯವಿಲ್ಲ. ವೋಟಿಂಗ್ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿರುವುದ ರಿಂದ ಮತದಾನದಿಂದಲೂ ವಂಚಿತರಾಗಿದ್ದಾರೆ. ಹೀಗಾಗಿ ಕುಟುಂಬದ ಸದಸ್ಯರೊಂದಿಗೆ ಕೂಡಿ ಕೆಲಸ ಮಾಡಿದರೆ ದಿನಕ್ಕೆ ೫೦ ರಿಂದ ೧೦೦ ರೂ. ಸಂಪಾದನೆ. ಪ್ರತಿದಿನ ದುಡಿದರೆ ಮಾತ್ರ ಹೊಟ್ಟೆಗೆ ಅನ್ನ ಇಲ್ಲದಿದ್ದರೆ ಉಪವಾಸವೇ ಗತಿ.

ಅನೇಕ ವಲಯಗಳಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರ ಜೀವನ, ಆರೋಗ್ಯ ಮತ್ತು ಅಂಗವಿಕಲತೆ, ಹೆರಿಗೆ ಹಾಗೂ ವೃದ್ಧಾಪ್ಯಗಳಿಗೆ ಸಂಬಂಧಪಟ್ಟಂತೆ ಕನಿಷ್ಠ ಸಾಮಾಜಿಕ ಭದ್ರತೆಗಳೂ ಇಲ್ಲ. ಇದರ ಜೊತೆಗೆ ಪುರುಷ ಮತ್ತು ಮಹಿಳಾ ಕಾರ್ಮಿಕರ ನಡುವೆ ತಾರತಮ್ಯವಿದೆ. ಜಾಗತೀಕರಣ, ಖಾಸಗೀಕರಣ, ನೀತಿಗಳ ಫಲವಾಗಿ ಗುತ್ತಿಗೆ ಕಾರ್ಮಿಕ ಪದ್ಧತಿ ಇಂದು ಸಾರ್ವತ್ರಿಕವಾಗುತ್ತಿರುವುದು ಮತ್ತಷ್ಟು ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ. ಇವುಗಳ ಜೊತೆಗೆ ಬೆಲೆ ಏರಿಕೆ ಬಿಸಿಯಿಂದಾಗಿ ಕಾರ್ಮಿಕರು ತತ್ತರಿಸುತ್ತಿದ್ದಾರೆ. ನಿರುದ್ಯೋಗ, ಬಡತನ, ಅನಾರೋಗ್ಯ ಮುಂತಾದ ಸಮಸ್ಯೆಗಳಿಂದಾಗಿ ಕಾರ್ಮಿಕರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ಸರ್ಕಾರಕ್ಕೆ ಕಾರ್ಮಿಕರ ಸಮಸ್ಯೆಗಳು ಗೊತ್ತಿದ್ದರೂ ಅವರ ಹಿತಾಸಕ್ತಿ ಕಾಪಾಡಲು ಸರಕಾರ ಸೂಕ್ತವಾಗಿ ಸ್ಪಂದಿಸದೇ ಇರುವುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ. ಅಸಂಘಟಿತ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಅಥವಾ ರೂಪಿಸುವ ಸ್ಥಿತಿಯಲ್ಲಂತೂ ಇಲ್ಲವೇ ಇಲ್ಲ. ಹಾಗೆಯೇ ಕಾರ್ಮಿಕ ಪರ ಎಂದು ಹೇಳಿಕೊಂಡು ಹೋರಾಟಕ್ಕಿಳಿದು, ತಮ್ಮ ಸ್ವಾರ್ಥಕಾರ್ಯಕ್ಕಾಗಿ ಕಾರ್ಮಿಕರನ್ನು ಉಪಯೋಗಿಸಿಕೊಳ್ಳುವುದು ಪ್ರಸ್ತುತ ಪರಿಸ್ಥಿತಿಯಾಗಿದೆ.

ಕೈಗಾರಿಕಾ ಕಾರ್ಮಿಕರು ಸಂಘಟನೆಗಳನ್ನು ಕಟ್ಟಿ ನೋಂದಣಿ ಪಡೆದು ವೇತನ ಏರಿಕೆ, ಬೋನಸ್ ಇತ್ಯಾದಿ ಸವಲತ್ತುಗಳನ್ನು ಪಡೆದಿದ್ದಾರೆ. ಆದರೆ ಅಸಂಘಟಿತ ವಲಯಗಳಲ್ಲಿ ಕಾರ್ಮಿಕ ಸಂಘಟನೆಗಳು ಹುಟ್ಟಿಕೊಳ್ಳುತ್ತಿಲ್ಲ, ಎಲ್ಲಿಯೋ ಒಂದೊಂದು ಇದ್ದರೆ ಅವು ಲೆಕ್ಕಕ್ಕಿಲ್ಲ. ಅಸಂಘಟಿತ ವಲಯಗಳಲ್ಲಿ ಕಾರ್ಮಿಕ ಸಂಘಟನೆಗಳು ಬೆಳೆಯದೆ ಇರುವುದಕ್ಕೆ ಅನೇಕ ಕಾರಣಗಳಿವೆ. ಕಾರ್ಮಿಕರು ಒಬ್ಬ ಮಾಲೀಕನ ಅಥವಾ ಒಂದು ಕಾರ್ಖಾನೆಯ ಸೂರಿನಡಿ ಕೆಲಸ ಮಾಡುವವರಲ್ಲ. ಈ ವಲಯದ ಕಾರ್ಮಿಕರಲ್ಲಿ ಅನಕ್ಷರತೆ ಹಾಗೂ ಪರಿಸ್ಥಿತಿಯನ್ನು ಹಣೆಬರಹ ಎಂದು ಒಪ್ಪಿಕೊಂಡು ಪರಿಸ್ಥಿತಿಗೆ ಹೊಂದಿಕೊಂಡು ಬಿಡುವವರೇ ಹೆಚ್ಚು. ಅಲ್ಲದೇ ಕಾರ್ಮಿಕರು ನಿರಂತರವಾಗಿ ಒಂದು ಸೂರಿನಡಿಯಲ್ಲಿ ಕೆಲಸ ಮಾಡದೇ ಕೆಲಸ ಸಿಕ್ಕ ಕಡೆ ದಿನಗೂಲಿ ಕಾರ್ಮಿಕರಾಗಿರುವುದೇ ಹೆಚ್ಚು. ಹೀಗಾಗಿ ಇವರಲ್ಲಿ ಪ್ರಬಲ ಮುಖಂಡರೂ ಬೆಳೆಯಲು ಸಾಧ್ಯವಿಲ್ಲ. ನಗರಗಳಲ್ಲಿ ನಗರಪಾಲಿಕೆಗಳ ಸಫಾಯಿ ಕರ್ಮಚಾರಿಗಳನ್ನು, ಕೆಲವೊಂದು ಹೋಟೆಲ್ ಕಾರ್ಮಿಕರನ್ನು, ಸಿದ್ಧ ಉಡುಪು ಉದ್ಯೋಗಿಗಳನ್ನು, ಪ್ಲಾಂಟೇಶನ್ ಕಾರ್ಯಕರ್ತರನ್ನು ಒಗ್ಗೂಡಿಸಿ ಸಂಘಟಿಸುವ ಕೆಲಸ ಕೆಲಮಟ್ಟಿಗೆ ನಡೆದಿದೆ. ಆದರೆ ಇವರ ಹೋರಾಟ ಮತ್ತು ಫಲ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಕಾಣುತ್ತಿಲ್ಲವೆಂದು ಹೇಳಬಹುದು.[೬೪]

ಸರಕಾರವು ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ, ಅನೇಕ ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ಆದರೆ ಈ ಸೌಲಭ್ಯಗಳ ಅನುಷ್ಠಾನ ಅಸಂಘಟಿತ ಕಾರ್ಮಿಕ ವರ್ಗಕ್ಕೆ ಮರೀಚಿಕೆಯಾಗಿ ಉಳಿದಿದೆ. ಅಪಾರ ಸಂಖ್ಯೆಯಲ್ಲಿ ತುಳಿತಕ್ಕೊಳಗಾಗಿ ಯಾವುದೇ ಸೌಲಭ್ಯಗಳಿಲ್ಲದೆ ಕನಿಷ್ಠ ವೇತನಕ್ಕೆ, ಸಮಯದ ಮಿತಿಯಿಲ್ಲದೆ ದುಡಿಯುತ್ತಿರುವ ಇವರ ಬಗ್ಗೆ ಸರಕಾರ ಸೂಕ್ತ ಗಮನಹರಿಸುವ ಅವಶ್ಯಕತೆಯಿದೆ. ಕಾರ್ಮಿಕರ ಚಳವಳಿ ಹಾಗೂ ಸಂಘಟನೆಯಿಂದಾಗಿ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಕೇಂದ್ರ ಹಾಗೂ

ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು, ಕಾನೂನುಗಳನ್ನು ಕಾಲಕಾಲಕ್ಕೆ ಜಾರಿಗೊಳಿಸಿವೆ. ಕರ್ನಾಟಕದಲ್ಲಿ ಕಾರ್ಮಿಕರು ಹಾಗೂ ಅವರ ಕುಟುಂಬದವರ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ೩೬ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಆದರೆ ಒಟ್ಟು ಕಾರ್ಮಿಕ ಶಕ್ತಿಯಲ್ಲಿ ಶೇ. ೯೦ರಷ್ಟು ಕಾರ್ಮಿಕರು ಅಸಂಘಟಿತ ವಲಯದಲ್ಲಿ ಇರುವುದು ತಿಳಿದು ಬರುತ್ತದೆ.

ಹೀಗಾಗಿ ಸರ್ಕಾರ ಅಸಂಘಟಿತ ದುಡಿಮೆಯಲ್ಲಿ ತೊಡಗಿದವರಿಗೆ ಬಿಪಿಎಲ್ ಕಾರ್ಡ್‌ಗಳನ್ನು ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿದರೆ ಇಂಥವರು ಸ್ವಲ್ಪ ನೆಮ್ಮದಿಯ ಜೀವನವನ್ನು ಕಾಣಬಹುದಾಗಿದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಅಸಂಘಟಿತ ವಲಯದಲ್ಲಿ ತೊಡಗಿರುವ ಕಾರ್ಮಿಕರನ್ನು ಗುರುತಿಸಿ ಅವರಿಗೆ ಶಿಕ್ಷಣ, ವಸತಿ, ಆಹಾರ ಭದ್ರತೆ ಕಲ್ಪಿಸಿದರೆ ಅವರು ಹಾಗೂ ಅವರ ಕುಟುಂಬ ವರ್ಗದವರು ನೆಮ್ಮದಿಯ ಜೀವನ ಕಾಣಬಹುದಾಗಿದೆ. ಸರ್ಕಾರ ಹಾಗೂ ಸಮಾಜ ಸೇವಾ ಸಂಘಟನೆಗಳು ಇಂತಹ ಕಾರ್ಯಕ್ಕೆ ಮುಂದಾಗಬೇಕಾಗಿದೆ. ಸರಕಾರ ಅಸಂಘಟಿತ ವಲಯದ ಕೂಲಿಕಾರ್ಮಿಕರ ಸೇವೆಗೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಹಾಗೂ ನ್ಯಾಯಸಮ್ಮತವಾದ ನಿಯಮಗಳನ್ನು ಕಡ್ಡಾಯವಾಗಿ ಜಾರಿಗೆ ತರುವ ಅವಶ್ಯಕತೆಯಿದೆ.

ಬಾಲ ಕಾರ್ಮಿಕರ ಸಮಸ್ಯೆ

ಹೈದರಾಬಾದ್ ಕರ್ನಾಟಕದ ಕಾರ್ಮಿಕರ ಸಮಸ್ಯೆಗಳಲ್ಲಿ ಮತ್ತೊಂದು ಗಮನಾರ್ಹ, ಚಿಂತನಾರ್ಹ ಸಮಸ್ಯೆಯೆಂದರೆ ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ ಕಾರ್ಮಿಕರ ಶೋಷಣೆ. ಜೀವನದಲ್ಲಿ ಭವಿಷ್ಯದ ಕನಸುಗಳನ್ನು ಹೊತ್ತು ಶಾಲೆಯಲ್ಲಿ ಕುಳಿತು ಓದಬೇಕಾದ, ಮನೆಯ ಅಂಗಳದ ತುಂಬಾ ನಲಿದಾಡಬೇಕಾದ ಎಳೆ ವಯಸ್ಸಿನ ಮಕ್ಕಳು ಹೊಟ್ಟೆಪಾಡಿಗಾಗಿ ಕಠಿಣವಾದ ದುಡಿಮೆಯಲ್ಲಿ ನಿರತವಾಗಿರುವುದನ್ನು ನಾವಿಂದು ಕಾಣುತ್ತೇವೆ. ಬಾಲ ಕಾರ್ಮಿಕರೆಂದು ಕಾನೂನಾತ್ಮಕವಾಗಿ ಯಾರನ್ನು ಪರಿಗಣಿಸಲಾಗುತ್ತದೆ ಎಂದರೆ, ೧೪ ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗಿದ್ದು ತನ್ನ ಬೌದ್ಧಿಕ, ಮಾನಸಿಕ, ಶಾರೀರಿಕ ಮತ್ತು ಭಾಷಾ ಬೆಳವಣಿಗೆಗೆ ತೊಡಕಾಗುವ ಯಾವುದೇ ಚಟುವಟಿಕೆಯಲ್ಲಿದ್ದು ತನ್ನ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೊ ಅವರೆಲ್ಲರೂ ಬಾಲ ಕಾರ್ಮಿಕರು ಎಂದೆನಿಸಿಕೊಳ್ಳುತ್ತಾರೆ. ೨೦೧೦ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ೧೦,೫೪,೪೧೪ ಬಾಲಕಾರ್ಮಿಕರಿದ್ದಾರೆಂದು ಅದರಲ್ಲಿ ಹೈದರಾಬಾದ್ ಕರ್ನಾಟಕ ಭಾಗದಲ್ಲೇ ೧ ಲಕ್ಷಕ್ಕಿಂತ ಹೆಚ್ಚು ಬಾಲ ಕಾರ್ಮಿಕರಿರುವುದು ವರದಿಯಿಂದ ತಿಳಿದು ಬರುತ್ತದೆ. ಬಾಲಕಾರ್ಮಿಕರ ಸಂಖ್ಯೆ ಹೆಚ್ಚಿರಲು ಕಾರಣಗಳನ್ನು ಅಧ್ಯಯನ ಮಾಡಿದಾಗ, ಇಲ್ಲಿ ಬಡತನ, ಸಾಮಾಜಿಕ ಪರಿಸ್ಥಿತಿ, ಅಜ್ಞಾನ ಮುಂತಾದ ಕಾರಣಗಳಿಂದ ೧೦ ರಿಂದ ೧೪ನೇ ವಯಸ್ಸಿನ ಒಳಗಿರುವ ಮಕ್ಕಳು ಶಾಲೆಗಳನ್ನು ಬಿಟ್ಟು ಕಾರ್ಮಿಕರಾಗಿ ದಿನ ಕೂಲಿಗಾಗಿ ಕೆಲಸಕ್ಕೆ ಹೋಗುತ್ತಿರುವುದು ಕಂಡು ಬರುತ್ತದೆ. ಅದರಲ್ಲೂ ರಾಜ್ಯದಲ್ಲೇ ಶಾಲೆ ಓದುತ್ತಿರುವಾಗಲೇ ಮಧ್ಯದಲ್ಲಿ ಶಾಲೆಗಳನ್ನು ಬಿಡುತ್ತಿರುವ ಮಕ್ಕಳಲ್ಲಿ ಗುಲಬರ್ಗಾ, ಬೀದರ್, ರಾಯಚೂರು ಶಾಲೆಯ ಮಕ್ಕಳು ಮೊದಲನೇ ಸಾಲಿನಲ್ಲಿದ್ದಾರೆ.

ಬಾಲ ಕಾರ್ಮಿಕ ಪದ್ಧತಿಯು ಒಂದು ಸಾಮಾಜಿಕ ಸಮಸ್ಯೆ ಮತ್ತು ಪಿಡುಗಾಗಿ ಪರಿಣಮಿಸಿದೆ. ಈ ಬಾಲಕಾರ್ಮಿಕತನಕ್ಕೆ ನಿರ್ದಿಷ್ಟ ಕಾರಣಗಳನ್ನು ಅಧ್ಯಯನ ಮಾಡಿ ನೋಡಿದಾಗ ಕಂಡು ಬರುವ ಕೆಲವು ಮುಖ್ಯ ಅಂಶಗಳೆಂದರೆ, ಬಡತನ, ತಂದೆ ತಾಯಿಗಳ ನಿಷ್ಕಾಳಜಿ, ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಅನಾಥರಾಗುವುದು, ಅನಕ್ಷರತೆ, ವಲಸೆ, ಸಣ್ಣ ವಯಸ್ಸಿನಲ್ಲಿ ಜವಾಬ್ದಾರಿ, ಆಸ್ತಿ ಇಲ್ಲದಿರುವುದು, ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿರುವುದು ಮುಂತಾದುವುಗಳನ್ನು ಗುರುತಿಸಬಹುದು. ಕಾನೂನು ಪ್ರಕಾರ ಮಕ್ಕಳನ್ನು ಬಾಲ್ಯದಲ್ಲಿ ದುಡಿಮೆಗೆ ಹಚ್ಚುವುದನ್ನು ನಿಷೇಧಿಸಿದ್ದರೂ ಆ ಸಂಬಂಧವಾಗಿ ಅನೇಕ ಕಾನೂನುಗಳನ್ನು ಜಾರಿ ಮಾಡಿದ್ದರೂ ಸಹ ಬಾಲ ಕಾರ್ಮಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಮಕ್ಕಳನ್ನು ಇಂದು ಎಲ್ಲಾ ಕ್ಷೇತ್ರಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಅಂದರೆ ವಸತಿಗೃಹ, ರೆಸ್ಟೋರೆಂಟ್ ದಿನಪತ್ರಿಕೆ ಹಂಚುವುದು, ದಿನಕೂಲಿ, ಕಟ್ಟಡ ನಿರ್ಮಾಣ ಕಾರ್ಯ, ಕಲ್ಲಿನ ಗಣಿ, ಮ್ಯಾಂಗನೀಸ್ ಗಣಿ, ಕೈಮಗ್ಗ, ಮನೆಗೆಲಸ, ಗ್ಯಾರೇಜ್‌ಗಳು ಸಿದ್ಧ ಉಡುಪು ಕಾರ್ಖಾನೆ, ಇಟ್ಟಿಗೆ ತಯಾರಿಕೆ ಹೀಗೆ ಹಲವು ಕ್ಷೇತ್ರಗಳಲ್ಲಿ ಹೆಚ್ಚಾಗಿ ಕೆಲಸ ಮಾಡುವುದು ಕಾಣಬರುತ್ತದೆ. ಒಂದು ರೀತಿಯಲ್ಲಿ ಮಕ್ಕಳು, ಕೂಲಿ ಆಳುಗಳಾಗಿ ಕೆಲಸ ಮಾಡದ ಕ್ಷೇತ್ರಗಳೇ ಇಲ್ಲ. ಇಂದು ಎಲ್ಲಾ ವಸ್ತುಗಳ ಉತ್ಪಾದಕ ಘಟಕಗಳಲ್ಲಿ, ತಯಾರಿಕೆಯಲ್ಲಿ ಮಕ್ಕಳ ದುಡಿಮೆಯಿದೆ. ಸಾಮಾನ್ಯವಾಗಿ ಇವರು ಕಾರ್ಯನಿರ್ವಹಿಸುತ್ತಿರುವ ಪರಿಸ್ಥಿತಿ, ಪರಿಸರಗಳನ್ನು ಗಮನಿಸಿದರೆ ಗಾಳಿ, ಬೆಳಕು ಕಾಣದ ಹೊಗೆ ಧೂಳು, ಅಪಾಯಕಾರಿ ಯಂತ್ರ, ಅನಿಲ ಮುಂತಾದ ಅತಿರೇಖದ ಮಾಲಿನ್ಯದಿಂದ ಹದಗೆಟ್ಟು ಹೋಗಿರುವ ಪರಿಸ್ಥಿತಿಗಳಲ್ಲಿ ರಾತ್ರಿ ಹಗಲು ಎನ್ನದೇ ನಿರಂತರವಾಗಿ ದುಡಿಯಬೇಕಾಗುತ್ತದೆ. ಆದರೆ ಇದಕ್ಕೆ ಸಿಗುವ ಪ್ರತಿಫಲ ಅತ್ಯಲ್ಪವಾಗಿದ್ದು, ಅವರ ದೈಹಿಕ, ಮಾನಸಿಕ ಬೆಳವಣಿಗೆಯನ್ನು ಕಮರಿಸಿ ಬಿಡುತ್ತದೆ. ಸರಿಯಾದ ಊಟ ಬಟ್ಟೆ ಇಲ್ಲದೆ ಅನಾರೋಗ್ಯಕ್ಕೆ ಈಡಾಗಿ ಅನೇಕ ಕಾಯಿಲೆಗಳಿಂದ ಬಳಲುತ್ತಿರುವ ಬಾಲಕಾರ್ಮಿಕರ ಬಗ್ಗೆ ದಿನ ಬೆಳಗಾದರೆ ಪತ್ರಿಕೆಗಳು ಹಾಗೂ ಇತರೆ ಮಾಧ್ಯಮಗಳಿಂದ ತಿಳಿದುಬರುತ್ತಿದೆ. ಬಾಲಕಾರ್ಮಿಕತೆಗೀಡಾದ ಮಕ್ಕಳು ದೈಹಿಕ ಮಾನಸಿಕ, ಲೈಂಗಿಕ ಮತ್ತು ಸಾಮಾಜಿಕ ದೌರ್ಜನ್ಯಕ್ಕೊಳಗಾಗುತ್ತಾರೆ. ಮಾನವನ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ, ದೈಹಿಕ ಮಾನಸಿಕ ರಕ್ಷಣೆ ಮುಂತಾದವುಗಳಿಂದ ವಂಚಿತರಾಗುತ್ತಾರೆ. ಹೀಗೆ ಪ್ರೀತಿ, ಮಮತೆ, ಬಾಂಧವ್ಯ ಮುಂತಾದವುಗಳಿಂದ ವಂಚಿತರಾಗುವ ಮಕ್ಕಳು, ಅಸಹಾಯಕತೆ, ಶೌರ್ಯ, ಹಿಂಸೆಯಂತಹ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ಹೀಗಾಗಿ ಮುಂದೆ ಇಂತಹ ಮಕ್ಕಳು ಮಾದಕ ಜಾಲದಲ್ಲಿ ಬಿದ್ದು ಶೋಷಣೆಗೆ ಒಳಗಾಗುತ್ತಾರೆ.

ಸುಪ್ರೀಂಕೋರ್ಟ್ ನೀಡಿದ ಮಾರ್ಗದರ್ಶನದಂತೆ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕೇಂದ್ರ ಸರಕಾರ ೨೦೦೬ರಲ್ಲಿ ಹೊಸ ಕಾನೂನನ್ನು ಜಾರಿಗೊಳಿಸಿತು. ಈ ಪದ್ಧತಿಯು ೨೦೦೭ರೊಳಗೆ ಸಂಪೂರ್ಣ ನಿರ್ಮೂಲನೆ ಆಗಬೇಕೆಂದು ರಾಜ್ಯಗಳಿಗೆ ನಿರ್ದೇಶಿಸಲಾಯಿತು. ರಾಜ್ಯ ಸರಕಾರಗಳು ಹಾಗೂ ಎನ್‌ಜಿಓ ಮುಂತಾದ ಸಮಾಜ ಸೇವಾ ಸಂಸ್ಥೆಗಳು ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಪ್ರಯತ್ನಿಸುತ್ತಿವೆ. ಸಂವಿಧಾನದ ವಿಧಿ ೨೧ಳ ಪ್ರಕಾರ ೫ ರಿಂದ ೧೪ ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ನಿರ್ದೇಶಿಸಿದೆ. ಆದರೆ ಇಷ್ಟು

ಮಾತ್ರಕ್ಕೆ ಪದ್ಧತಿಯ ನಿರ್ಮೂಲನೆ ಸಾಧ್ಯವಾಗುತ್ತಿಲ್ಲ ಎನ್ನುವುದು ಪ್ರಸ್ತುತ ಪರಿಸ್ಥಿತಿಗಳಿಂದ ಗೊತ್ತಾಗುತ್ತಿದೆ. ಆದ್ದರಿಂದ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆಯಲ್ಲಿ ಕಾನೂನಿನ ಸಮರ್ಪಕ ಬಳಕೆಯಾಗಬೇಕಾಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಹಾಗೂ ಸರಕಾರದ ಜೊತೆಗೆ ಸರಕಾರೇತರ ಸಂಸ್ಥೆಗಳು ಹೆಚ್ಚೆಚ್ಚು ಇಂತಹ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಯೋಜನೆಯನ್ನು ಯಶಸ್ವಿಗೊಳಿಸಬೇಕಾಗಿದೆ ಹಾಗೂ ತಡೆಗಟ್ಟಬೇಕಾಗಿದೆ.

ಅಪಾಯಕಾರಿ ಕ್ಷೇತ್ರದಲ್ಲಿ ದುಡಿಯುವ ಮಕ್ಕಳನ್ನು ಗುರುತಿಸಿ, ಹೊರತಂದು ಅವರಿಗೆ ಶಿಕ್ಷಣ ದೊರಕುವಂತೆ ಮಾಡುವುದರ ಜೊತೆಗೆ ಊಟ, ವಸತಿ ಸೌಲಭ್ಯ ನೀಡಬೇಕು. ಅವರ ಹಕ್ಕುಗಳ ಬಗ್ಗೆ ಅವರಲ್ಲಿ ಮತ್ತು ಅವರ ಪಾಲಕರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ಪದ್ಧತಿಯ ತಡೆಗೆ ನಾನಾ ರೀತಿಯ ಪ್ರಚಾರದ ಮೂಲಕ ಹೆಚ್ಚಿನ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಆದರೆ ಇದು ಸರಕಾರದಿಂದಷ್ಟೆ ಆಗುವ ಕೆಲಸವಲ್ಲ. ಇದರ ಜೊತೆ ಸಂಘಸಂಸ್ಥೆಗಳು, ಪ್ರಜ್ಞಾವಂತರು ಕೈ ಜೋಡಿಸಬೇಕು. ಹಾಗಾದಲ್ಲಿ ಪ್ರಾದೇಶಿಕ ಅಭಿವೃದ್ಧಿ ಬಗ್ಗೆ ಕನಸು ಕಾಣುತ್ತಿರುವ ಪ್ರಗತಿ ಪಥದಲ್ಲಿ ಸಾಗುತ್ತಿರುವ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಪದ್ಧತಿಗೆ ಕಡಿವಾಣ ಹಾಕಿ ಬಾಲಕರ ಭವಿಷ್ಯ ರೂಪಿಸಬಹುದಾಗಿದೆ.

ಕಲ್ಲು-ಗಣಿ-ಕೂಲಿ ಕಾರ್ಮಿಕರ ಸಮಸ್ಯೆ

ಗುಲಬರ್ಗಾ ಜಿಲ್ಲೆಯ ನೈಸರ್ಗಿಕ ಸಂಪತ್ತಿನಲ್ಲಿ ಇನ್ನೊಂದು ಪ್ರಮುಖ ಸಂಪತ್ತೆಂದರೆ ಹೊಳಪು ಕಲ್ಲು. ಹೀಗಾಗಿ ಕಲ್ಲು ಗಣಿಗಾರಿಕೆ ಗುಲಬರ್ಗಾ ಜಿಲ್ಲೆಯ ಪ್ರಮುಖ ಉದ್ಯಮವಾಗಿ ಬೆಳೆದಿದೆ. ಇಲ್ಲಿನ ಶಹಬಾದ್, ಚಿಂಚೋಳಿ, ಸೇಡಂ, ಚಿತ್ತಾಪುರ ಮುಂತಾದ ತಾಲೂಕುಗಳಲ್ಲಿ ಅತ್ಯಂತ ಉತ್ತಮ ಗುಣಮಟ್ಟದ ಹೊಳಪು ಕಲ್ಲಿನ ಗಣಿಗಳಿವೆ. ಒಂದು ಅಂದಾಜಿನ ಪ್ರಕಾರ ಈ ಪ್ರದೇಶಗಳಲ್ಲಿ ಸುಮಾರು ೧೭೭ ಕೋಟಿ ಘನ ಮೀಟರುಗಳಷ್ಟು ಹೊಳಪು ಕಲ್ಲು(ಗ್ರಾನೈಟ್) ಸಂಪತ್ತಿದೆ. ಇಲ್ಲಿಯವರೆಗೆ ಇಲ್ಲಿ ಕೇವಲ ೬೦ ಲಕ್ಷ ಚದರ ಅಡಿಯಷ್ಟು ಕಲ್ಲುಗಳನ್ನು ಮಾತ್ರ ಗಣಿಗಳಿಂದ ತೆಗೆಯಲಾಗಿದೆ. ಶಹಬಾದು ಹೊಳಪು ಕಲ್ಲು ಎಂದೇ ಪ್ರಸಿದ್ಧಿ ಪಡೆದ ಕಲ್ಲುಗಳು ಆಂಧ್ರ, ಮಹಾರಾಷ್ಟ್ರ, ಮುಂಬಯಿ, ಗೋವಾಗಳಿಗೆ ರಫ್ತು ಮಾಡಲಾಗುತ್ತದೆ ಹಾಗೂ ಸುತ್ತಮುತ್ತಲಿನ ಭಾಗದಲ್ಲಿ ಸಾಕಷ್ಟು ಬೇಡಿಕೆಯು ಇದೆ. ಹೀಗಾಗಿ ಗುಲಬರ್ಗಾ ಜಿಲ್ಲೆಯೊಂದರಲ್ಲೇ ಸರಿಸುಮಾರು ೨,೫೦೦ ಕಲ್ಲು ಗಣಿಗಳಿದ್ದು, ಕಲ್ಲುಗಳನ್ನು ಪಾಲಿಶ್ ಮಾಡುವ ನೂರಕ್ಕೂ ಹೆಚ್ಚು ಘಟಕಗಳಿವೆ. ಕಲ್ಲು ಉದ್ಯಮದಿಂದ ಸಾವಿರಾರು ಕುಟುಂಬಗಳು ಉದ್ಯೋಗ ಪಡೆದುಕೊಂಡಿವೆ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಾವಿರಾರು ಜನರು ಹಾಗೂ ಕುಟುಂಬಗಳು ಉದ್ಯಮವನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಇತ್ತೀಚಿನ ಬೆಳವಣಿಗಳಿಂದಾಗಿ ಕಲ್ಲು ಗಣಿ ಉದ್ಯಮ ಮತ್ತು ಇಲ್ಲಿನ ಕಾರ್ಮಿಕರು ತೀವ್ರ ಸಮಸ್ಯೆಗಳಿಗೆ ಈಡಾಗಿದ್ದಾರೆ.

ಇತ್ತೀಚಿಗೆ ರಾಜಸ್ತಾನದಿಂದ ಮಾರ್ಬಲ್ ಹಾಸು ಕಲ್ಲುಗಳು ಈ ಪ್ರದೇಶಕ್ಕೆ ಹೆಚ್ಚು ಸಾಗಾಣಿಕೆ ಆಗುತ್ತಿವೆ. ಅದರಲ್ಲೂ ಕಡಿಮೆ ಬೆಲೆಗೆ ಸಿಗುವ ಹಾಗೂ ಹೆಚ್ಚು ಹೊಳಪುಳ್ಳ ಕಲ್ಲುಗಳಿಗೆ ಜನರು

ಆಕರ್ಷಿತರಾಗಿ ಅಲ್ಲಿನ ಕಲ್ಲುಗಳಿಗೆ ಬೇಡಿಕೆ ಹೆಚ್ಚಾಗಿದೆ. ಇಂತಹ ಬದಲಾದ ಮಾರುಕಟ್ಟೆಯಿಂದ ಶಹಬಾದು ಹೊಳಪು ಕಲ್ಲುಗಳಿಗೆ ಬೇಡಿಕೆ ಕಡಿಮೆಯಾಗಿ ಇಲ್ಲಿನ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಇಂತಹ ಕಾರಣ ದಿಂದಾಗಿ ಇಲ್ಲಿನ ಕಲ್ಲಿನ ಬೇಡಿಕೆ ಮತ್ತು ಬೆಲೆಯೂ ಕುಸಿದಿದೆ. ಹೀಗಾಗಿ ಇಲ್ಲಿನ ಎಷ್ಟೋ ಗಣಿಗಳು ಹಾಗೂ ಉಪ ಉದ್ಯಮಗಳಾದ ಕಲ್ಲು ಪಾಲಿಶ್ ಮಾಡುವ ಘಟಕಗಳು ಮುಚ್ಚಿವೆ ಮತ್ತು ಕೆಲವು ಮುಚ್ಚುವ ಹಂತದಲ್ಲಿವೆ. ಇದರಿಂದ ಉದ್ಯಮದಲ್ಲಿ ತೊಡಗಿದ್ದ, ಇಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಇದಕ್ಕಿಂತ ಮೊದಲು ಇಲ್ಲಿನ ಕಲ್ಲುಗಳನ್ನು ಸಾಗಿಸಲು ಎರಡು ಸಾವಿರ ಲಾರಿಗಳು ಮತ್ತು ಹತ್ತು ಸಾವಿರ ಲಾರಿ ಕಾರ್ಮಿಕರಿದ್ದರು. ಈಗ ಲಾರಿಗಳ ಸಂಖ್ಯೆ ಇನ್ನೂರಕ್ಕೆ ಇಳಿದಿದೆ. ಹೀಗಾಗಿ ಲಾರಿ ಸಾಗಾಣಿಕೆ ಉದ್ಯಮವನ್ನೇ ನಂಬಿಕೊಂಡಿದ್ದ ಚಾಲಕರು, ಕ್ಲೀನರ್‌ಗಳು, ಹಮಾಲರು, ಉದ್ಯೋಗ ಕಳೆದುಕೊಂಡಿದ್ದಾರೆ.

ಇದರ ಜೊತೆಗೆ ಇತ್ತೀಚಿಗೆ ಇಲ್ಲಿನ ಕಾರ್ಮಿಕರನ್ನು ನಿರುದ್ಯೋಗಕ್ಕೆ ತಳ್ಳಿರುವ ಅಂಶವೆಂದರೆ, ಗಣಿಗಾರಿಕೆಗೆ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗುತ್ತಿರುವುದು. ಮೊದಲು ಕಲ್ಲನ್ನು ಸಿಡಿಮದ್ದಿನಿಂದ ಸ್ಫೋಟಿಸಿದ ನಂತರ, ಕಲ್ಲನ್ನು ಒಡೆಯುವ, ಎತ್ತುವ, ಲಾರಿಗಳಿಗೆ ತುಂಬುವ ಕೆಲಸವನ್ನು ಕಾರ್ಮಿಕರೆ ಮಾಡುತ್ತಿದ್ದರು. ಆದರೆ ಈಗ ಎಲ್ಲಾ ಕೆಲಸಗಳಿಗೆ ಬೃಹತ್ ಯಂತ್ರಗಳಾದ ಜೆ.ಸಿ.ಬಿ. ಮತ್ತು ಕ್ರೇನ್ ಮತ್ತು ಲಿಫ್ಟರ್‌ಗಳನ್ನು ಹೆಚ್ಚು ಬಳಸಲಾಗುತ್ತಿದೆ. ಇದರಿಂದಾಗಿ ಒಂದು ಗಣಿಗಾರಿಕೆ ಘಟಕದಲ್ಲಿ ನೂರು ಕಾರ್ಮಿಕರು ಮಾಡುತ್ತಿದ್ದ ಕೆಲಸವನ್ನು ಒಂದು ಜಿ.ಸಿ.ಬಿ. ಮತ್ತು ಲಿಫ್ಟರ್‌ಗಳು ಮಾಡುತ್ತಿವೆ. ಇನ್ನು ಲಾರಿಗೆ ಕಲ್ಲುಗಳನ್ನು ತುಂಬಲು ಮತ್ತು ಇಳಿಸಲು ಯಂತ್ರೋಪಕರಣಗಳನ್ನೇ ಬಳಸಲಾಗುತ್ತದೆ. ಹೀಗಾಗಿ ಉದ್ದಿಮೆಯಲ್ಲಿ ಕಾರ್ಮಿಕರ ಅವಶ್ಯಕತೆ ಕಡಿಮೆ ಆಗಿದೆ. ಇದರ ಪರಿಣಾಮವಾಗಿ ನೇರವಾಗಿ ಮತ್ತು ಪರೋಕ್ಷವಾಗಿ ಉದ್ಯಮವನ್ನೇ ನಂಬಿದ್ದ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಆಧುನಿಕ ಯಂತ್ರೋಪಕರಣಗಳ ಭರಾಟೆಯಲ್ಲಿ ಇನ್ನಷ್ಟು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಮೊದಲೇ ಅನಕ್ಷರಸ್ಥರಾಗಿರುವ, ಬಡತನದಲ್ಲಿ ಬೇಯುತ್ತಿರುವ ಇವರಿಗೆ ಬೇರೆ ಉದ್ಯೋಗವು ತಿಳಿದಿಲ್ಲ. ಮತ್ತು ಇಲ್ಲಿ ಬೇರೆ ಉದ್ಯೋಗಾವಕಾಶಗಳು ಕಡಿಮೆ ಇವೆ ಹೀಗಾಗಿ ಇವರು ಬೇರೆ ಯಾವುದೇ ಕೆಲಸ ಸಿಗದೆ ನಿರುದ್ಯೋಗಿಗಳಾಗಿದ್ದಾರೆ ಮತ್ತು ಈ ಪ್ರದೇಶದಲ್ಲಿ ಇವರಿಗೆ ಉದ್ಯೋಗ ಒದಗಿಸಲು ಬೃಹತ್ ಕೈಗಾರಿಕೆಗಳಾಗಲಿ, ಕೃಷಿ ಭೂಮಿಯಾಗಲಿ ಇಲ್ಲ. ಹೀಗಾಗಿ ಕೆಲವರು ಅತೀ ಕಡಿಮೆ ಕೂಲಿಗೆ ಕೆಲಸದಲ್ಲಿ ಮುಂದುವರಿದರೆ ಇನ್ನು ಕೆಲವರು ಮುಂದಿನ ಜೀವನದ ಭವಿಷ್ಯದಿಂದ ಚಿಂತಿತರಾಗಿ ಜಿಗುಪ್ಸೆ ಹೊಂದಿರುವುದು ಇಲ್ಲಿನ ಜನರ ಸಂದರ್ಶನ ಮಾಡಿದಾಗ ತಿಳಿದು ಬರುತ್ತದೆ.

ಕ್ಷೇತ್ರಕಾರ್ಯ ಕೈಗೊಂಡ ಸಮಯದಲ್ಲಿ ಸುತ್ತಮುತ್ತಲಿನ ಜನರಿಂದ ತಿಳಿದು ಬಂದ ವಿಷಯ ವೇನೆಂದರೆ, ಹಿಂದೆ ಕಲ್ಲು ಗಣಿಗಾರಿಕೆ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಇಲ್ಲಿ ಉದ್ಯೋಗ ಕಳೆದುಕೊಂಡು, ಬೇರೆ ಉದ್ಯೋಗ ಅರಸಿ ಹೈದರಾಬಾದ್, ಮುಂಬಯಿ ನಗರಗಳಿಗೆ ಕಟ್ಟಡ ನಿರ್ಮಾಣ

ಮುಂತಾದ ಕೆಲಸಕ್ಕೆ ವಲಸೆ ಹೋಗುತ್ತಿದ್ದಾರೆನ್ನುವ ಮಾಹಿತಿ ದೊರೆಯಿತು. ಇಲ್ಲಿ ಕೆಲಸ ಕಳೆದುಕೊಂಡ ಇನ್ನು ಕೆಲವು ಕಾರ್ಮಿಕರು ರಸ್ತೆ ಕಾಮಗಾರಿ, ಕಾಲುವೆ ಕೆಲಸಕ್ಕೆ ಸೇರಿಕೊಂಡು ಅರೆ-ಉದ್ಯೋಗತನದಲ್ಲಿ ಜೀವನವನ್ನು ನಿರ್ವಹಿಸಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿರುವ ಮಾಹಿತಿ ತಿಳಿದು ಬಂತು.

ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ಕಾರ್ಮಿಕರ ಸಮಸ್ಯೆಗಳ ಕುರಿತು ಅಧ್ಯಯನ ಮಾಡಿದಾಗ, ಇಲ್ಲಿನ ಕಾರ್ಮಿಕರು ಬೇರೆ ಪ್ರದೇಶದ ಕಾರ್ಮಿಕರಿಗಿಂತ ವಿಭಿನ್ನವಾದ ಮತ್ತು ತೀವ್ರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಭಾಗದಲ್ಲಿ ಅಪಾರವಾದ ನೈಸರ್ಗಿಕ ಸಂಪನ್ಮೂಲವಿದೆ ಮತ್ತು ಮಾನವ ಸಂಪನ್ಮೂಲವಿದೆ. ಆದರೆ ಇವೆರೆಡರನ್ನು ಸದುಪಯೋಗಪಡಿಸಿಕೊಂಡು ಇಲ್ಲಿನ ಜನರ, ಅದರಲ್ಲೂ ಕಾರ್ಮಿಕರ, ಕೂಲಿಕಾರರ ಪರಿಸ್ಥಿತಿಯನ್ನು, ಜೀವನಮಟ್ಟವನ್ನು ಸುಧಾರಿಸುವಲ್ಲಿ ಸರಕಾರ, ಇಲ್ಲಿನ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎನ್ನುವ ಸ್ಥಿತಿ ಕಂಡು ಬರುತ್ತದೆ.

ಕಾರ್ಮಿಕರ ಚಳವಳಿಯ ಸ್ಥಿತಿಗತಿ

ಪ್ರಸ್ತುತ ಸಮಯದಲ್ಲಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಾರ್ಮಿಕ ಚಳವಳಿಗಳ ಸ್ಥಿತಿಗತಿಯನ್ನು, ಹೋರಾಟದ ಸ್ವರೂಪವನ್ನು, ಅವುಗಳ ಸಫಲತೆ ಮತ್ತು ವಿಫಲತೆಯನ್ನು ವಿಶ್ಲೇಷಣೆ ಮಾಡಿ ನೋಡಿದಾಗ, ಚಳವಳಿ ತನ್ನ ತೀವ್ರತೆಯನ್ನು ಕಳೆದುಕೊಂಡು ದುರ್ಬಲಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ. ಹಾಗೆಯೇ ಚಳವಳಿ ದುರ್ಬಲವಾಗಲು ಅನೇಕ ಕಾರಣಗಳನ್ನು ಗುರುತಿಸಬಹುದು. ಈ ಭಾಗದಲ್ಲಿ ಕಾರ್ಮಿಕರ ಹೋರಾಟ ನಡೆದು ಬಂದ ದಾರಿಯನ್ನು ಅವಲೋಕಿಸಿದರೆ, ಕಾರ್ಮಿಕರಿಗೆ ಬಲ ಬಂದಿದ್ದೆ ಕಮ್ಯುನಿಸ್ಟರಿಂದ ಆದರೆ ಕ್ರಮೇಣ ಜಾಗತೀಕರಣದಿಂದ ಕಮ್ಯುನಿಸ್ಟರ ಶಕ್ತಿ ಕುಂದತೊಡಗಿತು ಇದರಿಂದಾಗಿ ಕಾರ್ಮಿಕ ವರ್ಗದ ಶಕ್ತಿ ಕುಂದಲು ಕಾರಣವಾಯಿತು. ಇನ್ನು ಜಾಗತೀಕರಣ ನೀತಿಯು, ಶ್ರೀಮಂತ ರಾಷ್ಟ್ರಗಳಿಗೆ ಉದಾರವಾದವಾಗಿ ಹಾಗೂ ಬಡದೇಶಗಳಿಗೆ ನಿಯಂತ್ರಣವಾದವಾಗಿ ಬೆಳೆಯಿತು. ಹೀಗೆ ಬದಲಾದ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕಾ ರಂಗ ಮಹತ್ವ ಕಳೆದುಕೊಂಡು ಕಾರ್ಪೋರೇಟ್ ವ್ಯವಸ್ಥೆ ಪ್ರಧಾನ ಸ್ಥಾನ ಪಡೆಯುತ್ತಿರುವುದನ್ನು ಎಲ್ಲರೂ ಗುರುತಿಸುವಂತಹ ಅಂಶವಾಗಿದೆ. ನಾವು ಆಳವಾಗಿ ಈ ವ್ಯವಸ್ಥೆಯನ್ನು ಅವಲೋಕಿಸಿದಲ್ಲಿ ಕಾರ್ಪೋರೇಟ್ ವ್ಯವಸ್ಥೆಯಲ್ಲಿ ಕಾರ್ಮಿಕ ಚಳವಳಿಗಳು ದುರ್ಬಲಗೊಳ್ಳುತ್ತಿರುವುದು ಕಂಡು ಬರುತ್ತದೆ. ಕಾರಣ ಕೈಗಾರಿಕಾ ರಂಗದಲ್ಲಿ ಕಾರ್ಮಿಕ ಚಳವಳಿಯಲ್ಲಿ ಇರುವಂತಹ ಹಿನ್ನೆಲೆ ಕಾರ್ಪೋರೇಟ್ ರಂಗದಲ್ಲಿ ಇಲ್ಲ. ಅಲ್ಲದೆ ಕಾರ್ಪೋರೇಟ್ ರಂಗವು ಮುಖ್ಯವಾಗಿ ಬೌದ್ಧಿಕ ಶ್ರಮವನ್ನು ಆಪೇಕ್ಷಿಸುತ್ತದೆ ಹಾಗೂ ಇಲ್ಲಿ ಕಾರ್ಮಿಕರು ಕೇವಲ ನಿರ್ದಿಷ್ಟ ಉದ್ದೇಶಗಳಿಗಾಗಿಯೇ ಸಂಘಟಿತರಾಗುತ್ತಾರೆ. ಕಾರ್ಮಿಕರಲ್ಲಿ ಸಮೂಹ ಪ್ರಜ್ಞೆಯನ್ನು ಹುಟ್ಟು ಹಾಕುತ್ತಿದ್ದ ಔದ್ಯೋಗಿಕ ವಾತಾವರಣವು ಕಾರ್ಮಿಕರಲ್ಲಿಲ್ಲ.

ಕಾರ್ಮಿಕ ಚಳವಳಿಯ ಬಲವರ್ಧನೆಗೆ ಕಾರ್ಮಿಕ ಪರವಾದ ರಾಜಕೀಯ ಶಕ್ತಿ ಅತ್ಯವಶ್ಯಕ ಎಂಬುದನ್ನು ಹಿಂದಿನಿಂದಲೂ ಕಂಡುಕೊಂಡಿದ್ದೇವೆ. ಆದರೆ ಇತ್ತೀಚಿಗೆ ಕಾರ್ಮಿಕ ಚಳವಳಿಯ ಹಿಂದಿನ

ರಾಜಕೀಯ ಶಕ್ತಿ ಕುಂದುತ್ತಿದೆ ಹೀಗಾಗಿ ಚಳವಳಿಯೂ ದುರ್ಬಲವಾಗುತ್ತಿದೆ. ಇತ್ತೀಚಿನ ರಾಜಕೀಯ ಪಕ್ಷಗಳು ಕಾರ್ಮಿಕರ ಹಿತವನ್ನು ಮೂಲತತ್ವವಾಗಿ ಇಟ್ಟುಕೊಳ್ಳದೇ ಕಾರ್ಮಿಕರ ಹಿತಕೋಸ್ಕರ, ಉನ್ನತಿಗೋಸ್ಕರ ಕಾರ್ಮಿಕರ ಪರ ಕೆಲಸ ಮಾಡದೆ ಕಾರ್ಮಿಕರನ್ನು, ಕಾರ್ಮಿಕರ ಸಂಘಟನೆಯನ್ನು ತಮ್ಮ ಹಿತಾಸಕ್ತಿಗೆ ಒಂದು ತಂತ್ರವನ್ನಾಗಿ ಇಟ್ಟುಕೊಂಡಿವೆ. ಇನ್ನು ಕಾರ್ಮಿಕರ ಬೆಂಬಲದಿಂದ ರಾಜಕೀಯದಲ್ಲಿ ನೆಲೆಯನ್ನು ಕಂಡುಕೊಂಡು ಅಧಿಕಾರಕ್ಕೆ ಬಂದಂತಹ ಕಾರ್ಮಿಕ ಮುಖಂಡರು ಕಾರ್ಮಿಕರ ಪರವಾಗಿ ನಿಲ್ಲದೆ, ಪಕ್ಷದ ತತ್ವಗಳ ಪರ ವಾಲುತ್ತಿರುವುದು ಕಂಡು ಬರುತ್ತದೆ. ಕಾರ್ಮಿಕ ಸಂಘಟನೆಗಳ ಹಿನ್ನೆಲೆಯಿಂದ ನಾಯಕರಾಗಿ ಬೆಳೆದು ಆ ಬಲದಿಂದಲೇ ಶಾಸಕ, ಮಂತ್ರಿಗಿರಿಯಂತಹ ಸ್ಥಾನಕ್ಕೇರಿದ ಎಷ್ಟೋ ಮುಖಂಡರು ಅಧಿಕಾರಕ್ಕೆ ಬಂದ ಮೇಲೆ ತಾವು ಕಾರ್ಮಿಕ ಹಿನ್ನೆಲೆಯಿಂದ ಬಂದವರೆಂಬುದನ್ನೇ ಮರೆತು ಕಾರ್ಮಿಕರ ಹಿತರಕ್ಷಣೆ ನಿರ್ಲಕ್ಷಿಸಿ ರಾಜಕಾರಣಕ್ಕೆ ಮತ್ತು ಅಧಿಕಾರಕ್ಕೆ ತಮ್ಮ ಹೆಚ್ಚಿನ ಸಮಯವನ್ನು ಮೀಸಲಾಗಿಡುತ್ತಿದ್ದಾರೆ. ಕಾರ್ಮಿಕರ ಹಿತರಕ್ಷಣೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವ ಗುಲಬರ್ಗಾದ ಎಸ್.ಕೆ. ಕಾಂತಾ ಅವರಂತಹ ಕೆಲವು ನಿಸ್ವಾರ್ಥ ಮುಖಂಡರನ್ನು ಹೊರತುಪಡಿಸಿದರೆ ಉಳಿದ ನಾಯಕರ ಮನಸ್ಥಿತಿ ಹಾಗೆ ಇದೆ.

ಕಾರ್ಮಿಕ ಚಳವಳಿಯ ಕೆಲವೊಂದು ಸನ್ನಿವೇಶಗಳನ್ನು ಗಮನಿಸಿದಾಗ ಕಾರ್ಮಿಕ ಚಳವಳಿಯ ಹಿನ್ನಡೆಗೆ ಸ್ವತಃ ಕಾರ್ಮಿಕರೇ ಕಾರಣರಾಗಿದ್ದಾರೆ ಎನ್ನುವ ಅಂಶಗಳು ಕಾಣಬರುತ್ತವೆ. ಬಹುತೇಕ ಚಳವಳಿಗಳ ಸಂದರ್ಭಗಳಲ್ಲಿ ಕಾರ್ಮಿಕ ನಾಯಕರುಗಳೇ ಸರ್ಕಾರದ ಅಥವಾ ಕೆಲಸ ತೆಗೆದುಕೊಳ್ಳುವ ಆಡಳಿತ ಮಂಡಳಿಗಳು ನೀಡುವ ಆಮಿಷಗಳಿಗೆ ಒಳಗಾಗಿ ಕಾರ್ಮಿಕ ಶಕ್ತಿಯನ್ನು ಒಡೆಯುವ ಕೆಲಸ ಮಾಡುತ್ತಾರೆ. ಇಂತಹ ಬೆಳವಣಿಗೆಗಳು ಸಹಜವಾಗಿ ಕಾರ್ಮಿಕ ಚಳವಳಿಯ ಹಿನ್ನಡೆಗೆ ಕಾರಣವಾಗುತ್ತದೆ. ಹಾಗೆಯೇ ಕಾರ್ಮಿಕ ಚಳವಳಿಗಳು ನಡೆದಿರುವ ಕೆಲವು ಹಿಂದಿನ ಘಟನೆಗಳನ್ನು ಅವಲೋಕಿಸಿದರೆ ನಮ್ಮ ದೇಶದ ಮಾಲೀಕ ವರ್ಗವು ಮೊದಲು ಕಾರ್ಮಿಕ ನಾಯಕರನ್ನು ತನ್ನೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುವುದಲ್ಲದೆ, ಅದರಲ್ಲಿ ಯಶಸ್ವಿಯೂ ಆಗಿದೆ. ಒಂದು ವೇಳೆ ಕಾರ್ಮಿಕ ಮುಖಂಡರು ಆಮಿಷಕ್ಕೊಳಗಾಗದೆ ಮುಷ್ಕರವನ್ನು ಮುಂದುವರೆಸಿದರೆ ಮಾಲೀಕವರ್ಗ ತಕ್ಷಣದಲ್ಲಿ ಮಾತುಕತೆಗೆ ಮುಂದಾಗುವುದಿಲ್ಲ. ಏಕೆಂದರೆ ಅವರಿಗೆ ನಮ್ಮ ದೇಶದ ಕಾರ್ಮಿಕ ಶಕ್ತಿ ಏನೆಂದು ತಿಳಿದಿದೆ. ಕಾರ್ಮಿಕರು ಜಾಸ್ತಿಯೆಂದರೆ ೧೫ ದಿನ ಮುಷ್ಕರ ನಡೆಸಬಹುದು. ನಂತರ ಅವರು ಆರ್ಥಿಕ ಸಮಸ್ಯೆಗಳಿಂದಾಗಿ ಮುಷ್ಕರವನ್ನು ಮುಂದುವರೆಸಲು ಶಕ್ತರಿರುವುದಿಲ್ಲ, ಕ್ರಮೇಣ ಮಾಲೀಕರ ನೀತಿಗೆ ತಲೆ ಬಾಗುತ್ತಾರೆ. ಈ ರೀತಿ ಕಾರ್ಮಿಕ ಚಳವಳಿಗಳು ಮಾಲೀಕ ವರ್ಗದ ಮುಷ್ಠಿಯಲ್ಲಿರುತ್ತವೆ.

ಹೈದರಾಬಾದ್ ಕರ್ನಾಟಕದಲ್ಲಿ ಕಾರ್ಮಿಕ ಚಳವಳಿಗಳು ಒಗ್ಗಟ್ಟಿಲ್ಲದೆ ಒಡೆದು ಹೋಗಲು ಮತ್ತೊಂದು ಮುಖ್ಯ ಕಾರಣವೆಂದರೆ ಜಾತಿ ಆಧಾರದ ಹೋರಾಟಗಳು. ಸಾಮಾನ್ಯವಾಗಿ ತಾತ್ವಿಕ ಭಿನ್ನಾಭಿಪ್ರಾಯಗಳ ಆಧಾರದ ಮೇಲೆ ಸಂಘಟನೆಗಳು ಒಡೆಯುವುದು ಸಹಜ. ಆದರೆ ಕರ್ನಾಟಕದಲ್ಲಿ

ಜಾತಿ, ಧರ್ಮ, ಭಾಷೆಗಳ ಆಧಾರದ ಮೇಲೆ ಕಾರ್ಮಿಕ ಸಂಘಟನೆಗಳು ಒಡೆದು ಬಲಹೀನವಾಗುತ್ತಿರುವುದು ಆತಂಕಕಾರಿಯಾದ ಬೆಳವಣಿಗೆಯಾಗಿದೆ. ಈ ಭಾಗದ ಬಹಳಷ್ಟು ಕಾರ್ಖಾನೆಗಳಲ್ಲಿ ಅಥವಾ ಕಾರ್ಮಿಕರು ಹೆಚ್ಚಾಗಿ ಕೆಲಸ ಮಾಡುವ ಸ್ಥಳಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಧಾರ್ಮಿಕ ಅಲ್ಪಸಂಖ್ಯಾತರ ಗುಂಪುಗಳು ಹುಟ್ಟಿಕೊಂಡಿವೆ. ಪ್ರಾರಂಭದಲ್ಲಿ ಸಾಂಸ್ಕೃತಿಕ ಸಂಘಟನೆಗಳಾಗಿ ಹಬ್ಬ ಹರಿದಿನಗಳನ್ನು ತಮ್ಮ ನಾಯಕರ ಹುಟ್ಟು ಹಬ್ಬಗಳನ್ನು ಆಚರಿಸುವ ಮೂಲಕ ಇವು ಹುಟ್ಟಿದರೂ ನಂತರ ಇವುಗಳ ವ್ಯಾಪ್ತಿ ಬೆಳೆಯುತ್ತಾ ಹೋಗುತ್ತದೆ. ಕಾರ್ಮಿಕ ಸಂಘಟನೆಗಳ ಚುನಾವಣೆಗಳ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಚುರುಕಾಗುವ ಸಾಂಸ್ಕೃತಿಕ ಸಂಘಟನೆಗಳ ಸದಸ್ಯರು ತಮ್ಮ ಜನ ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕಾರಿ ಸಮಿತಿಯಲ್ಲಿ ಇರಬೇಕೆಂದು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ತಮ್ಮ ಜಾತಿ, ಭಾಷಾ ಪಂಗಡದ ಜನರಿಗೆ ಉದ್ಯೋಗ ಭರ್ತಿ ಮಾಡುವಾಗ ಹಾಗೂ ಬಡ್ತಿ ನೀಡುವಾಗ ಆದ್ಯತೆ ಕೊಡಬೇಕೆಂದು ಆಡಳಿತ ವರ್ಗದ ಮೇಲೆ ಒತ್ತಾಯ ತರುತ್ತಾರೆ. ಇಂತಹ ಬೆಳವಣಿಗೆಗಳು ಕಾರ್ಮಿಕ ಚಳವಳಿಯ ಒಗ್ಗಟ್ಟಿನ ಹಾಗೂ ಜಾತ್ಯಾತೀತತೆಯ ಮೂಲ ಆಶಯಕ್ಕೆ ವಿರೋಧವಾಗಿವೆ. ಇನ್ನು ಇದಲ್ಲದೇ ಜಾತಿ ಆಧಾರಿತ ರಾಜಕಾರಣ ತುಂಬ ವ್ಯಾಪಕವಾಗಿ ಬೆಳೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳು ಇಂತಹ ಬೆಳವಣಿಗೆಯಿಂದ ದೂರವಿರುವುದು ಅಸಾಧ್ಯ ಎನ್ನುವುದು ಕೇವಲ ವಾದ. ಆದರೆ ಕಾರ್ಮಿಕ ಸಂಘಟನೆಗಳ ನಾಯಕರು, ಎಲ್ಲಾ ಬೆಳವಣಿಗೆಗೆ ಸರ್ಕಾರದ ತಂತ್ರಗಳೇ ಕಾರಣವೆಂದು ಅಭಿಪ್ರಾಯಪಡುತ್ತಾರೆ. ಓಟುಗಳ ಮೆಲೆ ಕಣ್ಣಿಡುವ ರಾಜಕೀಯ ಪಕ್ಷಗಳು ಮತ ವಿಭಜನೆಗೆ ಜಾತಿ ಸಂಘಟನೆಗಳನ್ನು ಓಲೈಸುತ್ತವೆ ಎನ್ನುವುದು ಇವರ ವಾದ.[೬೫] ಈ ರೀತಿಯ ಬೆಳವಣಿಗೆಗಳು ಕಾರ್ಮಿಕರ ಐಕ್ಯತೆಯ ಮೂಲತತ್ವಕ್ಕೆ ಮಾರಕವಾಗಿವೆ. ಹೀಗೆ ಇನ್ನೂ ಹಲವಾರು ಕಾರಣಗಳಿಂದ ಇಲ್ಲಿನ ಕಾರ್ಮಿಕರ ಚಳವಳಿಯ ಒಗ್ಗಟ್ಟಿನಲ್ಲಿ ಬಿರುಕುಗಳು ಕಾಣಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿ ಬಗ್ಗೆ ಅಧ್ಯಯನ ಮಾಡುವಾಗ ಇಲ್ಲಿನ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಮೇಲ್ನೋಟಕ್ಕೆ ನಮ್ಮ ಗಮನಕ್ಕೆ ಬರುವ ಅಂಶವೆಂದರೆ ಪ್ರಸ್ತುತ ಸಮಾಜ ಎರಡು ವರ್ಗಗಳಾಗಿ, ಅಸಮಾನತೆ ಎದ್ದು ಕಾಣುತ್ತಿದೆ. ಕಿತ್ತು ತಿನ್ನುತ್ತಿರುವ ಬಡತನ ಒಂದೆಡೆಯಾದರೆ ಮತ್ತೊಂದೆಡೆ ಉಳ್ಳವರಲ್ಲಿ ತುಂಬಿ ತುಳುಕುತ್ತಿರುವ ಶ್ರೀಮಂತಿಕೆ. ದುಡಿಯುವ ವರ್ಗ ಒಂದೆಡೆಯಾದರೆ ದುಡಿಯದೆ ತಿನ್ನುವ ವರ್ಗ ಮತ್ತೊಂದೆಡೆ. ಬಿಸಿಲು, ನೆರಳೆನ್ನದೆ ಆಸರಿಕೆ ಬೇಸರಿಕೆ ಇಲ್ಲದೆ ದುಡಿಯದಿದ್ದರೆ ಇವರ ಕುಟುಂಬಗಳು ಬದುಕುವುದು ತುಂಬಾ ದುಸ್ತರವಾಗುತ್ತಿದೆ. ಬಡತನದ ಶೋಷಣೆಯ ಬೆಂಕಿಯಲ್ಲಿ ಬೇಯುತ್ತಾ, ದುಡಿತದಲ್ಲಿಯೇ ಮಗ್ನರಾಗಿ ಅಕ್ಷರ ಲೋಕದ ಪರಿಚಯವಿಲ್ಲದೆ, ತಮ್ಮ ಜೀವವನ್ನೇ ಸವೆಸುತ್ತಿದ್ದರೆ, ಬಂಡವಾಳಶಾಹಿಗಳು ಮಾತ್ರ ಶ್ರೀಮಂತರಾಗುತ್ತಾ ಬಡತನ ಶ್ರೀಮಂತಿಕೆಯ ಅಂತರವನ್ನು ಹೆಚ್ಚಿಸುತ್ತಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಶ್ರಮಸಂಸ್ಕೃತಿಗೆ ಆದ್ಯತೆಯನ್ನು ನೀಡಿದ ಶರಣರು ಇಂದಿನವರಿಗೆ ಮಾದರಿಯಾಗಿದ್ದಾರೆ. ಶರಣರ ತತ್ವಗಳು ವೈಚಾರಿಕ

ಕಾಣಿಕೆಗಳಾಗಿವೆಯಲ್ಲದೇ ಶ್ರಮಸಂಸ್ಕೃತಿಗೆ ತುಂಬಾ ಗೌರವವನ್ನು ನೀಡಿ ಕಾಯಕ ಜೀವಿಗಳ ದೊಡ್ಡ ಆಂದೋಲನವನ್ನೇ ನಡೆಸಿತು. ಇಂತಹ ಚಳವಳಿಯನ್ನು ಹೊಂದಿದ ನಾಡಿನಲ್ಲಿ ಇಂದು ಏನಾಗಿದೆ, ಪುನಃ ಬಂಡವಾಳಶಾಹಿಗಳು ಅಟ್ಟಹಾಸಗೈಯುತ್ತಾ ಫಿನಿಕ್ಸ್ ಹಕ್ಕಿಯಂತೆ ಮೇಲೇಳುತ್ತಿವೆ. ಶ್ರಮಿಕವರ್ಗ ಸದಾ ಬೆವರು ಸುರಿಸಿ ಉತ್ಪಾದನೆಯ ಕ್ಷೇತ್ರವನ್ನು ಹೆಚ್ಚಿಸುತ್ತದೆ. ಆದರೆ ಉತ್ಪಾದನೆಯ ಲಾಭ ಮಾತ್ರ ಬಂಡವಾಳಗಾರನಿಗೆ ಸೇರುತ್ತದೆ. ಶ್ರಮಜೀವಿಗಳು ಮಾತ್ರ ಸದಾ ಶೋಷಣೆಗೊಳಗಾಗುತ್ತಾರೆ.

ಕಾರ್ಮಿಕರ ಹಿತರಕ್ಷಣೆ ಬಗ್ಗೆ ಹಾಗೂ ಕಾರ್ಮಿಕರ ಬಗ್ಗೆ ಸಾಮೂಹಿಕ ಪ್ರಜ್ಞೆ ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ ಮೇ ೧ ರಂದು ಕಾರ್ಮಿಕರ ದಿನಾಚರಣೆ ಆಚರಿಸಲಾಗುತ್ತಿದೆ. ಆದರೆ ಆಚರಣೆ ಎಷ್ಟರಮಟ್ಟಿಗೆ ಅರ್ಥಪೂರ್ಣವಾಗಿದೆ. ಕಾರ್ಮಿಕರ ಹೆಸರಿನಲ್ಲಿ ರಜೆ ನೀಡಿ, ಸಂಘಟಿತ ವಲಯದ ನೌಕರರು ರಜಾದ ದಿನವನ್ನು ಮಜಾದಿನವನ್ನಾಗಿ ಆಚರಿಸುತ್ತಿದ್ದೇವೆ. ಆದರೆ ಅದೇ ದಿನ ಲಕ್ಷಾಂತರ ಕಾರ್ಮಿಕರು ಅದರ ಅರಿವೆ ಇಲ್ಲದೆ ತಮ್ಮ ಕೆಲಸದಲ್ಲಿ ತಾವು ತೊಡಗಿರುತ್ತಾರೆ. ನಮ್ಮ ಸರಕಾರಗಳು ಕಾರ್ಮಿಕರ ಹಿತರಕ್ಷಣೆಗಾಗಿ ಲೆಕ್ಕವಿಲ್ಲದಷ್ಟು ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ ಅವು ಪರಿಣಾಮಕಾರಿಯಾಗಿ ಅನುಷ್ಠಾನವಾಗದೆ, ಭ್ರಷ್ಟಾಚಾರ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವದಿಂದ ಯೋಜನೆಗಳು ಹಳ್ಳ ಹಿಡಿಯುವುದರ ಮೂಲಕ ಅನುದಾನಗಳನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಸರಕಾರದ ಉದ್ಯೋಗ ಖಾತ್ರಿ ಯೋಜನೆ. ಈ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ಭ್ರಷ್ಟಾಚಾರದ ಬಗ್ಗೆ ಆಗಾಗ ಮಾಧ್ಯಮಗಳು ಬಿತ್ತರಿಸುತ್ತಿವೆ. ಸರಕಾರ ಶ್ರಮಿಕ ವರ್ಗದವರಿಗಾಗಿ ಯೋಜನೆಯನ್ನು ರೂಪಿಸಿದ್ದರೆ ಜನಪ್ರತಿನಿಧಿಗಳು ಮತ್ತು ಅಧಿಕಾರ ವರ್ಗಗಳು, ಸ್ಥಳೀಯ ರಾಜಕಾರಣಿಗಳು ಸೇರಿ ಜೆಸಿಬಿ, ಟ್ರಾಕ್ಟರ್ ಮುಂತಾದ ಯಂತ್ರಗಳ ಮೂಲಕ ಕಾರ್ಯನಿರ್ವಹಣೆ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸರಕಾರದಿಂದ ಮಂಜೂರಾದ ಲಕ್ಷಾಂತರ ರೂಪಾಯಿಗಳ ಅನುದಾನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಯೋಜನೆಯಲ್ಲಿ ಇಷ್ಟೆಲ್ಲಾ ಭ್ರಷ್ಟಾಚಾರ ತಾಂಡವಾಡುತ್ತಿದ್ದರೂ ಕೇಂದ್ರ ಸರಕಾರ ಯೋಜನೆಗೆ ಅನುದಾನವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಲೇ ಇದೆ. ನಿಜವಾಗಿಯೂ ಯೋಜನೆಯ ಧ್ಯೇಯ ಹಸಿದವರಿಗೆ ಊಟ, ಕೆಲಸವಿಲ್ಲದವರಿಗೆ ಕೆಲಸ ಎಂಬ ಉದ್ದೇಶದೊಂದಿಗೆ ಪ್ರಾರಂಭಗೊಂಡಿತು. ಆದರೆ ಕಾರ್ಮಿಕರ ಹೆಸರಿನಲ್ಲಿ ಅನಾಯಾಸವಾಗಿ ಸಾವಿರಾರು ಕೋಟಿ ರೂ.ಗಳು ಪೋಲಾಗುತ್ತಿದೆ. ನೊಂದ ಕಾರ್ಮಿಕರು ಮಾತ್ರ ಕೆಲಸವಿಲ್ಲದೆ ಪುನಃ ನಗರ ಪ್ರದೇಶಗಳಿಗೆ ಗುಳೆ ಹೋಗುವುದು ತಪ್ಪುತ್ತಿಲ್ಲ.

ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಮಾಲೀಕರ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆ ಕ್ರೌರ್ಯ ಹಾಗೂ ದೌರ್ಜನ್ಯಗಳಿಗೆ ಬಲಿಯಾಗಿದ್ದಾರೆ. ಕೋಟ್ಯಂತರ ಗಾರ್ಮೆಂಟ್ ನೌಕರರು, ಹೋಟೆಲ್ ಕಾರ್ಮಿಕರು, ಕಟ್ಟಡ ಕಾರ್ಮಿಕರು ಹಾಗೂ ನಾನಾ ಕ್ಷೇತ್ರಗಳಲ್ಲಿ ದುಡಿಯುತ್ತಾ ಉದ್ಯಮಗಳನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಕಾರ್ಮಿಕರ ಶ್ರಮ, ಬೆವರು ಇದೆ. ಆದರೆ ಇವರು ತಮ್ಮ

ಬದುಕಿನಲ್ಲಿ ಎಷ್ಟರಮಟ್ಟಿಗೆ ತೃಪ್ತರಾಗಿದ್ದಾರೆ. ಅವರ ದುಡಿಮೆಗೆ ತಕ್ಕ ನ್ಯಾಯಬದ್ಧ ಸಂಬಳ, ಭದ್ರತೆ ಹಾಗೂ ಇತರೆ ಸೌಲಭ್ಯಗಳು ನಿಜಕ್ಕೂ ದೊರೆಯುತ್ತಿವೆಯೇ ಎಂಬ ಅನುಮಾನ ಮೂಡುತ್ತಿದೆ. ಲಕ್ಷಾಂತರ ಕಾರ್ಮಿಕರು ಮೂರು ನಾಲ್ಕು ದಶಕಗಳ ಕಾಲ ದುಡಿದರೂ ತಮ್ಮ ಆಸರೆಗೆ ಒಂದು ಮನೆಯನ್ನು ಹೊಂದಿಲ್ಲದಿರುವುದು ನಿಜಕ್ಕೂ ಶೋಚನೀಯವಾಗಿದೆ. ಇಂದು ಸಹ ಎಷ್ಟೋ ಕಾರ್ಮಿಕರು ಅರೆ ಹೊಟ್ಟೆಯಲ್ಲಿಯೇ ಜೀವ ಸವೆಸುತ್ತಿದ್ದಾರೆ. ಈ ದಿನಗಳಲ್ಲಿ ಕಾರ್ಮಿಕರ ಹಿತಾಸಕ್ತಿಗಾಗಿ ನಡೆಯುತ್ತಿರುವ ಚಳವಳಿಗಳನ್ನು ಗಮನಿಸಿದರೆ ಚಳವಳಿಗಳು ದಿಕ್ಕು ತಪ್ಪುತ್ತಿವೆ. ಖಾಸಗೀಕರಣ, ಜಾಗತೀಕರಣ ಹಾಗೂ ಸರಕಾರಗಳ ಕಾರ್ಮಿಕ ವಿರೋಧಿ ನೀತಿಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕಾರ್ಮಿಕರಿಗೆ ಎಳೆ ಎಳೆಯಾಗಿ ಅರ್ಥೈಸಿ ಕಾರ್ಮಿಕರನ್ನು ಸಂಘಟಿಸಿ ಬೃಹತ್ ಪ್ರಮಾಣದಲ್ಲಿ ಹೋರಾಟ ಮಾಡಿ, ಕಾರ್ಮಿಕರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ದೂರದೃಷ್ಟಿ ಹಾಗೂ ಕ್ರಿಯಾಶೀಲ ಹೋರಾಟಗಾರರು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಈಗಿನ ಚಳವಳಿಯ ಸ್ವರೂಪವನ್ನು ಗಮನಿಸಿದರೆ ಅತೃಪ್ತ ಅಮಾಯಕ ಕಾರ್ಮಿಕರನ್ನು ಬಳಸಿಕೊಂಡು ತಮ್ಮ ಸ್ವಾರ್ಥ ರಾಜಕೀಯ ಉದ್ದೇಶಗಳಿಗಾಗಿ ಅಥವಾ ತಮ್ಮ ಸಂಸ್ಥೆಗಳ ಲಾಭಕ್ಕಾಗಿ ಅಥವಾ ಮಧ್ಯಸ್ಥಿಕೆ ವಹಿಸಿ ನ್ಯಾಯ ದೊರಕಿಸಿಕೊಟ್ಟರೆ ಕಮಿಷನ್ ಆಧಾರದ ಮೇಲೆ ಚಳವಳಿಗಳು ನಡೆಯುತ್ತಿವೆ.

ಕೆಲವು ಸನ್ನಿವೇಶಗಳಲ್ಲಿ ಪ್ರಚಾರದ ಉದ್ದೇಶಕ್ಕಾಗಿ ಬಾಡಿಗೆ ಜನರನ್ನು ಕರೆ ತಂದು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶ ಮಾಡಿ ನಾಗರಿಕರಿಗೆ ತೊಂದರೆ ಕೊಡುವಂತಹ ನಾಟಕೀಯ ಪ್ರತಿಭಟನೆಗಳು ಹೋರಾಟದ ಅರ್ಥವನ್ನು ಕಳೆಯುತ್ತಿವೆಯಲ್ಲದೆ ಸಾರ್ವಜನಿಕರಲ್ಲಿ ಅಸಹ್ಯ ಹುಟ್ಟಿಸುತ್ತಿವೆ. ಪ್ರಸ್ತುತ ಕಾರ್ಮಿಕರು ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಎಚ್ಚೆತ್ತುಕೊಂಡು ಪ್ರಜ್ಞಾವಂತರಾಗಬೇಕಿದೆ. ಸರಕಾರಗಳು ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕರಿಗೆ ಪ್ರಸ್ತುತವಿರುವ ಹಕ್ಕುಬಾಧ್ಯತೆಗಳ ಅವರ ಕ್ಷೇಮಾಭಿವೃದ್ಧಿಗೆ ಜಾರಿಗೊಳಿಸಿರುವ ಯೋಜನೆಗಳ ಅರಿವು ಮೂಡಿಸಬೇಕಾಗಿದೆ. ಕಟ್ಟಕಡೆಯ ಕಾರ್ಮಿಕನಿಗೂ ಯೋಜನೆಯ ಫಲ ದೊರಕಿದಾಗ ಮಾತ್ರ ಕಾರ್ಮಿಕ ದಿನಾಚರಣೆ ಸಾರ್ಥಕವಾಗುತ್ತದೆ.

೪.೫. ಮಹಿಳಾ ಚಳವಳಿ

ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳ ಬಗ್ಗೆ ಅಧ್ಯಯನ ಮಾಡುವಾಗ ಕಂಡು ಬರುವ ಮತ್ತೊಂದು ವಿಶಿಷ್ಟವಾದ ಹೋರಾಟವೆಂದರೆ ಮಹಿಳಾ ಚಳವಳಿಗಳು. ಇಡೀ ಕರ್ನಾಟಕದಲ್ಲಿ ನಡೆದ ಮತ್ತು ನಡೆಯುತ್ತಿರುವ ಮಹಿಳಾ ಚಳವಳಿಗಳಿಗಿಂತ ಇಲ್ಲಿನ ಚಳವಳಿಗಳು ವಿಭಿನ್ನವಾದ ಸಾಲಿನಲ್ಲಿ ನಿಲ್ಲುತ್ತವೆ. ಏಕೆಂದರೆ ಮಹಿಳೆಯರ ಸಮಸ್ಯೆಗಳು, ಸ್ಥಾನಮಾನಗಳು ಇಲ್ಲಿನ ಭೌಗೋಳಿಕತೆ, ಸಮಾಜ, ಧರ್ಮ ಹಾಗೂ ರಾಜಕೀಯ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಬಹುಸಂಸ್ಕೃತಿಯ ಮತ್ತು ಸಾಮಾಜಿಕ ನಿರ್ಬಂಧಗಳ ನೆಲೆಗಟ್ಟಿನಲ್ಲಿ ಚಳವಳಿಗಳು ರೂಪುಗೊಳ್ಳುತ್ತಾ ಬಂದಿವೆ. ಹೀಗಾಗಿ ಇಲ್ಲಿನ ಮಹಿಳೆಯರು ತಮ್ಮ ಅಸ್ತಿತ್ವವನ್ನು ಇಂದಿಗೂ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತದ ಸ್ವಾತಂತ್ರ್ಯ ಚಳವಳಿ

ಮತ್ತು ರಜಾಕಾರರ ವಿರುದ್ಧದ ಹೋರಾಟದಲ್ಲಿ ಹೈದರಾಬಾದ್ ಕರ್ನಾಟಕದ ಮಹಿಳೆಯರು ಪಾಲ್ಗೊಂಡಿದ್ದ ರಾದರೂ, ಅದು ಸ್ವಾತಂತ್ರ್ಯದ ಕಲ್ಪನೆಯಲ್ಲಿ, ಕೇವಲ ಬೆರಳಣಿಕೆಯಷ್ಟು ಮಹಿಳೆಯರು ಮಾತ್ರ. ಆದರೆ ಮಹಿಳೆಯರ ಸಮಸ್ಯೆಗಳನ್ನೇ ಇಟ್ಟುಕೊಂಡು ಚಳವಳಿಗಳಾಗಿದ್ದು ತೀರಾ ಇತ್ತೀಚಿನ ದಶಕಗಳಲ್ಲಿ, ಅದೂ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಆರಂಭವಾದ ಮಹಿಳಾ ಚಳವಳಿಗಳ ಪ್ರಭಾವದಿಂದ. ಭಾರತ ಮತ್ತು ಕರ್ನಾಟಕದ ಇತರ ಪ್ರಾಂತ್ಯಗಳಲ್ಲೂ ಮಹಿಳಾ ಚಳವಳಿಗಳು ಆರಂಭವಾಗಿದ್ದು ೭೦ರ ದಶಕದ ನಂತರವೇ.

ಹಾಗಾಗಿಯೇ ಸ್ವಾತಂತ್ರ್ಯೋತ್ತರ ಕಾಲದ ಆರಂಭದ ದಶಕಗಳು ಕರ್ನಾಟಕದ ಮಹಿಳಾ ಚಳವಳಿಯ ದೃಷ್ಟಿಯಿಂದ ಸಾಂಘಿಕ ಚಟುವಟಿಕೆಗಳಿಂದ ಹೊರತಾದುವು ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಹೋರಾಟಗಳಲ್ಲಿ ಪಾಲ್ಗೊಂಡಿದ್ದ ಮಹಿಳಾ ಹೋರಾಟಗಾರರು, ಇವುಗಳ ಈಡೇರಿಕೆಯ ನಂತರ ಅವರ ಚಟುವಟಿಕೆಗಳನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಿಬಿಟ್ಟರು. ನಂತರ ೧೯೭೫ರ ಅಂತಾರಾಷ್ಟ್ರೀಯ ಮಹಿಳಾ ವರ್ಷಾಚರಣೆಯು ಮಹಿಳಾ ಚಳವಳಿಯ ದೃಷ್ಟಿಯಿಂದ ಮತ್ತೊಂದು ಮೈಲುಗಲ್ಲು ಎಂದು ಗುರುತಿಸಬಹುದಾಗಿದೆ. ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲೆಂದೇ ವಿಶ್ವಸಂಸ್ಥೆ ೧೯೭೫ನೇ ವರ್ಷವನ್ನು 'ಮಹಿಳಾ ವರುಷ'ವೆಂದು ಘೋಷಿಸಿತು. ಹೀಗಾಗಿ ೧೯೭೫ ರಿಂದ ೮೫ರ ದಶಕವು ಮಹಿಳಾ ದಶಕವೆಂದೇ ಪ್ರಚಾರ ಪಡೆಯಿತು. ಆಗ ಸರಕಾರವು ಅನೇಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿತು. ಇಂತಹ ಯೋಜನೆಗಳು ಸರಿಯಾಗಿ ಅನುಷ್ಠಾನಗೊಳ್ಳಲು ಹಾಗೂ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಮಹಿಳೆಯರಿಗೆ ದೊರೆಯುವಂತೆ ಮಾಡುವ ಉದ್ದೇಶದಿಂದ ಅನೇಕ ಸ್ವಾಯತ್ತ ಮಹಿಳಾ ಸಂಘಟನೆಗಳು ಸ್ಥಾಪಿತವಾಗಿ ಹೋರಾಟಕ್ಕಿಳಿದವು. ಕರ್ನಾಟಕದಲ್ಲಿಯೂ ಮಹಿಳೆಯರ ಹೋರಾಟದ ಹೊಸ ಅಲೆಯೊಂದು ಆರಂಭವಾಯಿತು. ೧೯೭೫ರಲ್ಲಿ 'ನ್ಯಾಷನಲ್ ಫೆಡರೇಶನ್ ಆಫ್ ಇಂಡಿಯನ್ ವುಮೆನ್'ನ ಕರ್ನಾಟಕ ಶಾಖೆಯಿಂದ ಬೆಂಗಳೂರಿನಲ್ಲಿ ಬೃಹತ್ ಸಮ್ಮೇಳನ ನಡೆಸಲಾಯಿತು. ಮಧ್ಯಮ ವರ್ಗದ ಉದ್ಯೋಗಸ್ಥ ಮಹಿಳೆಯರನ್ನು ಒಳಗೊಂಡಂತೆ ಕರ್ನಾಟಕದಲ್ಲಿನ ಎಲ್ಲಾ ವರ್ಗದ ದುಡಿಯುವ ಮಹಿಳೆಯರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ನಂತರ ೧೯೮೧ರಲ್ಲಿ ಬೆಂಗಳೂರಿನಲ್ಲಿ 'ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ'ಯ ಮೊದಲ ಸಮ್ಮೇಳನ ನಡೆದು ಮುಂದೆ ಇದು 'ಜನವಾದಿ ಮಹಿಳಾ ಸಂಘಟನೆ ಎಂದು ಹೆಸರಾಯಿತು.[೬] ಕಾಲಕ್ರಮೇಣ ವಿಮೋಚನಾ, ಸಮತಾ, ಮಾನಸ, ಮಹಿಳಾ ಜಾಗೃತಿ, ಮಾನನಿ, ಮಹಿಳೆಯರ ಹಕ್ಕಿನ ಸಂಘ ಹೀಗೆ ಹಲವಾರು ಸ್ವಾಯತ್ತ ಮಹಿಳಾ ಸಂಘಟನೆಗಳು ತಲೆ ಎತ್ತಲಾರಂಭಿಸಿದವು. ಈ ಸಂಘಟನೆಗಳು ಸ್ಥಳೀಯ ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಜನಜಾಗೃತಿ, ಕಾನೂನು ಹೋರಾಟ, ಕೌನ್ಸಿಲಿಂಗ್ ಇತ್ಯಾದಿಗಳ ಮೂಲಕ ಮಹಿಳಾ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಾ ಬಂದವು. ಇವುಗಳಲ್ಲಿ ಕೆಲವು ಸಂಘಟನೆಗಳು ತಮ್ಮ ಚಟುವಟಿಕೆಯ ಭಾಗವಾಗಿ ವಾರ್ತಾ ಪತ್ರಗಳನ್ನು, ಮಹಿಳಾ ಪತ್ರಿಕೆಗಳನ್ನು ಆರಂಭಿಸಿದವು. ಅವುಗಳಲ್ಲಿ ಮುಖ್ಯವಾದುವೆಂದರೆ ಸಮತಾ, ಜನವಾದಿ, ಅಚಲ, ಮಾನಸ, ಜಾಗೃತಿ ಮುಂತಾದವುಗಳನ್ನು ಹೆಸರಿಸಬಹುದಾಗಿದೆ.

ದಕ್ಷಿಣ ಕರ್ನಾಟಕದ ಮಹಿಳಾ ಚಳವಳಿಗಳಲ್ಲಿ ಸಾಂಸ್ಕೃತಿಕ ಪ್ರಭಾವ ಹೆಚ್ಚಾಗಿ ಇರುವುದು ಕಂಡು ಬಂದರೆ, ಹೈದರಾಬಾದ್ ಕರ್ನಾಟಕದ ಮಹಿಳಾ ಚಳವಳಿಗಳಲ್ಲಿ ಎಡಪಂಥೀಯ ತತ್ವಸಿದ್ಧಾಂತಗಳ ಹಿನ್ನೆಲೆ ಕಂಡು ಬರುತ್ತದೆ. ಆರಂಭದಲ್ಲಿ ಇಲ್ಲಿ ಮೇಲ್ವರ್ಗದ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನೆ, ಸಮಸ್ಯೆಗಳನ್ನೇ ಮುಖ್ಯವಾಗಿಟ್ಟುಕೊಂಡು ಹೋರಾಟಗಳಾಗಿದ್ದು, ಕೆಳವರ್ಗದ ಮಹಿಳೆಯರ ತಳಮೂಲ ಸಮಸ್ಯೆಗಳ ಬಗ್ಗೆ ಹೋರಾಟಗಳು ಹೆಚ್ಚಾಗಿ ಕಂಡು ಬಂದಿರುವುದಿಲ್ಲ. ಆದರೆ ಕ್ರಮೇಣ ಮಹಿಳಾ ಸಂಘಟನೆಗಳು, ಸಿಪಿಐ, ಸಿಪಿಎಂ, ಜನವಾದಿ, ಸಮತಾ, ಆಶಾ, ಸಮ್ಮುಖ್, ಮುಂತಾದ ವೇದಿಕೆಗಳ ಮೂಲಕ ಹೋರಾಟಕ್ಕೆ ಇಳಿದ ಮೇಲೆ ಇತ್ತೀಚಿಗೆ ಕೃಷಿ ಮಹಿಳೆಯರ, ಕೂಲಿ ಕಾರ್ಮಿಕ ಮಹಿಳೆಯರ, ಕಲ್ಲುಗಣಿ ಮಹಿಳಾ ಕಾರ್ಮಿಕರ ಹಾಗೂ ದಲಿತ, ನಿರ್ಲಕ್ಷಿತ, ದೌರ್ಜನ್ಯಕ್ಕೆ, ಅನ್ಯಾಯಕ್ಕೆ ಒಳಗಾದ ಮಹಿಳಾ ಪರ ಹೋರಾಟಗಳು ಆರಂಭವಾದವು. ಇವರು ತಮ್ಮದೇ ಆದ ತತ್ವಸಿದ್ಧಾಂತಗಳ ಮೂಲಕ ಸಂಘಟನೆ ಮೂಲಕ ಕೆಳವರ್ಗದವರನ್ನು ಪ್ರತಿನಿಧಿಸತೊಡಗಿದರು. ಆದರೆ ಕೆಲವೊಂದು ವಿಚಾರಗಳು ಮೇಲ್ವರ್ಗದ ಮಹಿಳೆಯರು ಮತ್ತು ಕೆಳವರ್ಗದ ಮಹಿಳೆಯರ ನಡುವೆ ಭಿನ್ನವಾದ ಸಮಸ್ಯೆಗಳನ್ನು ತಂದೊಡ್ಡಿವೆ. ಉದಾಹರಣೆಗೆ ಮದ್ಯಪಾನ ಮೇಲ್ವರ್ಗದವರಿಗೆ ನೈತಿಕ ಸಮಸ್ಯೆಯಾದರೆ ಕೆಳವರ್ಗದವರಿಗೆ ಆರ್ಥಿಕ ಸಮಸ್ಯೆಯಾಗಿ ಕಾಣುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಮಹಿಳಾ ಚಳವಳಿ ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದು ದಲಿತ, ಬಂಡಾಯ ಸಾಹಿತ್ಯ ಕಾಣಿಸಿಕೊಂಡ ಕಾಲದಿಂದ. ಆ ಸಮಯದಲ್ಲಿ ಮಹಿಳೆಯರಿಗೆ ಮೊದಲ ಬಾರಿಗೆ ತಮ್ಮ ಸ್ಥಾನಮಾನದ, ಹಕ್ಕು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡತೊಡಗಿತು. ಬಂಡಾಯ ಸಾಹಿತ್ಯದ ಸಾಂಸ್ಕೃತಿಕ ಸಮಾರಂಭಗಳಲ್ಲಿ, ವಿಚಾರಗೋಷ್ಠಿಗಳಲ್ಲಿ, ಇಲ್ಲಿನ ಮಹಿಳೆಯರು ಧ್ವನಿ ಎತ್ತಿ ಮಾತನಾಡಲಿಕ್ಕೆ ಆರಂಭಿಸಿದರು. ಇಂತಹ ಚಟುವಟಿಕೆಗಳು ಒಂದು ರೀತಿಯಲ್ಲಿ ಚಳವಳಿಗಳಿಗೆ ವೇದಿಕೆ ಸಿದ್ಧಗೊಳಿಸುವಂತ ಪ್ರಕ್ರಿಯೆಗಳು ಆರಂಭವಾದವು. ಕಾಲಕ್ರಮೇಣ ಇಂತಹ ಚಿಂತನೆಗಳು, ಹೋರಾಟಗಳಲ್ಲಿ ಮಠಗಳು, ಸಂಘಸಂಸ್ಥೆಗಳ ಭಾಗವಹಿಸುವಿಕೆಯಿಂದಾಗಿ ಸಾಮೂಹಿಕ ರೀತಿಯ ಮಹಿಳಾ ಪರ ಹೋರಾಟಗಳು ಕಾಣಿಸಿಕೊಳ್ಳತೊಡಗಿದವು.

ದಲಿತ ಮತ್ತು ಬಂಡಾಯ ಸಾಹಿತ್ಯ ಕಾಣಿಸಿಕೊಂಡಾಗ ಇಲ್ಲಿನ ಮಹಿಳಾ ಲೇಖಕರು ಮಹಿಳೆಯರ ಸ್ಥಿತಿಗತಿಗಳ ಕುರಿತು ಬರೆಯಲಿಕ್ಕೆ ಆರಂಭಿಸಿದರು. ಮಹಿಳೆಯರ ಮೇಲೆ ಯಾವ ರೀತಿ ಶೋಷಣೆ ಮುಂದುವರೆದಿದೆ ಎನ್ನುವುದರ ಬಗ್ಗೆ ವಿಶೇಷವಾಗಿ ದಲಿತ, ಕೆಳವರ್ಗದವರ ಮೇಲಾಗುತ್ತಿದ್ದ ದೌರ್ಜನ್ಯದ ಬಗ್ಗೆ ಬರೆದರು. ಮೊದಲ ಬಾರಿಗೆ ಮೌಢ್ಯತೆ, ಸಂಪ್ರದಾಯ, ದೇವದಾಸಿ ಕುರಿತು ಧ್ವನಿಎತ್ತತೊಡಗಿದರು. ಇತರ ಪ್ರದೇಶಗಳ ಮಹಿಳೆಯರು ಮತ್ತು ಇಲ್ಲಿನ ಮಹಿಳೆಯರ ಸ್ಥಿತಿಗತಿ ಕುರಿತು ತುಲನೆ ಮಾಡಿ ನೋಡುವ ಗುಣ ಬೆಳೆಸಿಕೊಂಡರು. ಈ ದೆಸೆಯಲ್ಲಿ ಸಂಘಟನೆ, ವಿಮೋಚನಾ, ಸಮತಾ, ಮಾನಸ,

ಮಹಿಳಾ ಜಾಗೃತಿ, ಮಾನನಿ ಮುಂತಾದ ಸಂಘಟನೆಗಳ ಜೊತೆಗೆ ವಿದ್ಯಾವಂತ ಮಹಿಳೆಯರು ಮತ್ತು ಮಹಿಳಾ ಸಂಘಟನೆಗಳು ಆರಂಭದ ಮಹಿಳಾ ಹೋರಾಟಕ್ಕೆ ಕಾರಣವಾದವು. ನಂತರ ಮಹಿಳೆಯರ ಹಕ್ಕುಗಳಿಗಾಗಿ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಟ ಮಾಡಿದ್ದು, ವಿಶೇಷವಾಗಿ ಗ್ರಾಮೀಣ ರೈತಾಪಿ ಮಹಿಳೆಯರು. ಕ್ರಮೇಣ ಮಹಿಳಾ ಕೂಲಿ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ದಿನಗೂಲಿ ನೌಕರರು, ಪ್ರಜ್ಞಾವಂತ ಮಹಿಳೆಯರು ಬೆಂಬಲ ವ್ಯಕ್ತಪಡಿಸಿದರು.

೪.೫.೧. ಸ್ವಾತಂತ್ರ್ಯೋತ್ತರ ಮಹಿಳಾ ಚಳವಳಿಗಳು

ಅಖಂಡ ಭಾರತಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕರೆ ಹೈದರಾಬಾದ್ ಕರ್ನಾಟಕಕ್ಕೆ ಒಂದು ವರ್ಷ ತಡವಾಗಿ ಸಿಕ್ಕಿತು. ಸಂಸ್ಥಾನಿಕರ ಕೈಯಿಂದ ಈ ಪ್ರದೇಶಗಳು ಬಿಡುಗಡೆ ಆಗುವ ಸಂದರ್ಭದಲ್ಲಿ ಮಹಿಳೆಯರ ಹೋರಾಟದ ಪಾತ್ರವನ್ನು ಗುರುತಿಸುವಾಗ ಪ್ರತ್ಯಕ್ಷವಾಗಿ ಹೋರಾಟದಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ ಕಂಡುಬಂದರೆ, ಅಪ್ರತ್ಯಕ್ಷವಾಗಿ ಕುಟುಂಬದಲ್ಲಿರುವಂಥ ಬಹುಪಾಲು ಮಹಿಳೆಯರು ತಮ್ಮ ತಮ್ಮ ಮನೆಯ ಗಂಡಸರಿಗೆ ಸಹಕಾರ ಕೊಟ್ಟು ಬಿಡುಗಡೆ ಆಗಲು ಕಾರಣರಾದಂತ ಸತ್ಯವನ್ನು ಮರೆಯದೇ ಚರಿತ್ರೆಯಲ್ಲಿ ದಾಖಲಿಸುವ ಅವಶ್ಯಕತೆಯಿದೆ.

ಆದರೆ ದುರಂತವೇನೆಂದರೆ ಹೀಗೆ ನೇಪಥ್ಯದಲ್ಲಿ ಇದ್ದುಕೊಂಡು ಚಳವಳಿಗಾರರಿಗೆ ಸಹಾಯ ಮಾಡಿದಂತಹ ಮಹಿಳೆಯರ ಹೆಸರುಗಳು ಮತ್ತು ಕೊಡುಗೆಗಳು ಹೆಚ್ಚಾಗಿ ಗೋಚರಿಸುವುದಿಲ್ಲ. ಹೀಗೆ ಚಾರಿತ್ರಿಕ ದಾಖಲೆಗಳಲ್ಲಿ ಮಹಿಳೆಯರ ಹೆಸರು ದಾಖಲಾಗಿಲ್ಲವೆಂದಾಕ್ಷಣ ಆಗಿನ ಹೋರಾಟಗಳಲ್ಲಿ ಮಹಿಳೆಯರ ಪಾತ್ರವೇ ಇಲ್ಲ, ಮಹಿಳೆಯರು ಭಾಗವಹಿಸಲಿಲ್ಲ ಎನ್ನುವ ಆತುರದ ನಿರ್ಧಾರಕ್ಕೆ ಬರುತ್ತೇವೆ. ಆದರೆ ವಾಸ್ತವದಲ್ಲಿ ನಿಜ ಪರಿಸ್ಥಿತಿ ಹಾಗಿಲ್ಲ. ನಿಜಾಂ ಸತ್ತೆಯ ಬಿಡುಗಡೆ ಸಂದರ್ಭದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದ್ದರು ಎನ್ನುವುದಕ್ಕೆ ಅನೇಕ ಜನಪದ ಹಾಡುಗಳಲ್ಲಿ ಉಲ್ಲೇಖವಿದೆ ಮತ್ತು ಈ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಂತ ಮಹಿಳೆಯರನ್ನು ಗುರುತಿಸಿ ನೆನೆಪಿಸುವ ಮೌಖಿಕ ಕಥನಗಳಿವೆ. ಒಬ್ಬ ಪುರುಷ ರಾಜಕೀಯ ಪ್ರೇರಿತ ಚಳವಳಿಗಳಲ್ಲಿ ಭಾಗವಹಿಸಲು ಹೋಗುತ್ತಾನೆಂದರೆ ಆ ಸಂದರ್ಭದಲ್ಲಿ ಆ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವಂತಹ ಮಹಿಳೆಯ ಕೆಲಸ ಇದೆಯಲ್ಲ ಅದು ಸಹ ಈ ಚಳವಳಿಗೆ ಪೂರಕವಾದಂತಹ ಕೆಲಸ ಎಂದು ನಾವು ಭಾವಿಸಲಿಲ್ಲ. ಹೋರಾಟದಲ್ಲಿ ಭಾಗವಹಿಸಲು ಗಂಡಸರು ಹೊರ ಹೋದಾಗ ಅವನ ಅನುಪಸ್ಥಿತಿಯಲ್ಲಿ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುವಂಥ ಈ ಮಹಿಳೆಯ ಕೆಲಸ ಇತ್ತಲ್ಲ ಇದು ಸಹ ಚಳವಳಿಯ ಒಂದು ಭಾಗ ಎಂದು ನಾವು ಭಾವಿಸಿದರೆ ಎಲ್ಲಾ ಕಾಲದಲ್ಲೂ ಎಲ್ಲಾ ಚಳವಳಿಯಲ್ಲೂ ಮಹಿಳೆಯರು ಭಾಗವಹಿಸಿದ್ದಾರೆ ಎಂದು ಹೇಳಲಿಕ್ಕೆ ಸಾಧ್ಯವಾಗುತ್ತದೆ.[೬೨]

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಹೈದರಾಬಾದ್ ಕರ್ನಾಟಕದ ಮಹಿಳೆಯರ ಪಾತ್ರ ದಾಖಲಾರ್ಹವಾಗಿದೆ. ನಿಜಾಂ ಮತ್ತು ರಜಾಕಾರರ ದೌರ್ಜನ್ಯವನ್ನು ಪ್ರತಿಭಟಿಸುವಲ್ಲಿ ಮಹಿಳೆಯರು

ಪ್ರಮುಖ ಹೋರಾಟ ಮಾಡಿದ್ದಾರೆ. ನಿಜಾಮನ ಸೈನಿಕರು ಗ್ರಾಮಗಳಿಗೆ ಮುತ್ತಿಗೆ ಹಾಕಿ ಹಿಂದೂ ಮಹಿಳೆಯರ ಮೇಲೆ ಅನ್ಯಾಯ, ಅತ್ಯಾಚಾರಗಳನ್ನು ನಡೆಸಿದ ಸಂದರ್ಭದೊಳಗೆ ಸ್ವತಃ ಮುಸ್ಲಿಂ ಮಹಿಳೆಯರು ಹಿಂದೂ ಮಹಿಳೆಯರಿಗೆ ಆಶ್ರಯ ಕೊಟ್ಟಂತಹ ಉದಾಹರಣೆಗಳಿವೆ. ಅದೇ ಸಂದರ್ಭದಲ್ಲಿ ಹಿಂದೂ ಮಹಿಳೆಯರು ಮುಸ್ಲಿಂ ಮಹಿಳೆಯರ ಮೇಲೆ ಮತೀಯವಾದಿಗಳು ಆಕ್ರಮಣ ಮಾಡಿದ ಸಂದರ್ಭದಲ್ಲಿ ಮುಸ್ಲೀಮರಿಗೆ ರಕ್ಷಣೆ ಕೊಟ್ಟಂತಹ ಉದಾಹರಣೆಗಳಿವೆ.

ಸ್ವಾತಂತ್ರ್ಯದ ನಂತರವೂ ಈ ಭಾಗದಲ್ಲಿ ಜೀವಂತ ಇದ್ದಂತಹ ಜಮೀನ್ದಾರಿಕೆ ವ್ಯವಸ್ಥೆ, ಸಮಾಜದಲ್ಲಿ ಲಿಂಗತಾರತಮ್ಯದ ಬೆಳವಣಿಗೆಗೆ ಕಾರಣವಾಗಿತ್ತು. ಇದರ ಜೊತೆಗೆ ಮಹಿಳೆಯರ ಮೇಲೆ ಅನೇಕ ಧಾರ್ಮಿಕ ಮತ್ತು ಕೌಟುಂಬಿಕ ನಿಯಂತ್ರಣಗಳು, ವಿಧಿವಿಧಾನಗಳು ಮುಂತಾದ ನಿರ್ಬಂಧಗಳು ಅತೀ ಹೆಚ್ಚಾಗಿದ್ದವು. ಹೀಗಾಗಿ ಮಹಿಳೆಯರ ಮೇಲೆ ಶೋಷಣೆಗೆ ಹಾಗೂ ಸಾಮಾಜಿಕ ನಿರ್ಲಕ್ಷತೆ ಸಾಮಾನ್ಯವಾಗಿದ್ದವು. ಇಂತಹ ಪರಿಸ್ಥಿತಿಯಲ್ಲೂ ಮಹಿಳಾ ಪರ ಹೋರಾಟಗಳು ನಡೆದಿದ್ದವು. ಉದಾಹರಣೆಗೆ ಭಾಲ್ಕೀ ಮಠದ ಸ್ವಾಮೀಜಿ ಹಾಗೂ ಗುಲಬರ್ಗಾದ ಶರಣಬಸವೇಶ್ವರ ಸಂಸ್ಥಾನದಿಂದ ಹೆಣ್ಣುಮಕ್ಕಳಿಗಾಗಿ ತೆರೆದಿದ್ದ ಶಾಲೆಗಳು ಮಹಿಳೆಯರಲ್ಲಿ ಹೊಸ ಚಿಂತನೆಗಳನ್ನು ಹುಟ್ಟು ಹಾಕುತ್ತಿದ್ದವು. ಕ್ರಮೇಣ ಕರ್ನಾಟಕದಲ್ಲಿ ಸ್ಥಾಪನೆಯಾದ ಮಹಿಳಾ ಸಂಘಟನೆಗಳ ಶಾಖೆಗಳು ಹೈದರಾಬಾದ್ ಕರ್ನಾಟಕ ಭಾಗದಲ್ಲೂ ಆರಂಭವಾಗಿ ಹೋರಾಟದಲ್ಲಿ ಇಲ್ಲಿನ ಮಹಿಳೆಯರ ಪಾಲ್ಗೊಳ್ಳುವಿಕೆ ಆರಂಭವಾಯಿತು.

೧೯೮೯ ಮಾರ್ಚ್ ೨೧ ರಂದು ಬೀದರ್ ಜಿಲ್ಲೆಯಲ್ಲಿ ೧೫೦ ಸದಸ್ಯರೊಂದಿಗೆ 'ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ಸ್ಥಾಪನೆಯಾಯಿತು. ಇದು ಅಖಿಲ ಭಾರತ ಮಟ್ಟದ ಸಂಘಟನೆಯಾಗಿತ್ತು. ಹೈದರಾಬಾದ್ ಕರ್ನಾಟಕದ ಬೀದರ್‌ನಲ್ಲಿ ಆರಂಭವಾದ ಸಂಘಟನೆಯ ಮುಂಚೂಣಿ ಸದಸ್ಯರಲ್ಲಿ ರಾಯಚೂರಿನ ಹರಿಣಿ, ಬೀದರ್‌ನ ಕೆ. ನೀಲಾ, ಶಕುಂತಲಾ, ವಿಜಯಲಕ್ಷ್ಮೀ ಗಡ್ಡೆ, ಗಂಗಮ್ಮ ಪುಲೆ (ದಲಿತ ಮಹಿಳೆ) ಸುಜಾತ, ಲೀಲಾ ಸಂಗ್ರಾಮ, ಕಲಾವತಿ ಮುಂತಾದವರು ಪ್ರಮುಖರು. ಅದೇ ರೀತಿ ೧೯೮೯ರಲ್ಲಿ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ 'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ' ಆರಂಭವಾಯಿತು. ಹೀಗಾಗಿ ವಿದ್ಯಾವಂತ ಮಹಿಳೆಯರು, ಸಂಘಟನೆಗಳು ಮಹಿಳೆಯರ ಮೇಲಿನ ಶೋಷಣೆಯನ್ನು ಗುರುತಿಸಿ ಪ್ರತಿಭಟಿಸುವಂತಹ ಹೋರಾಟಗಳು ಆರಂಭವಾದವು. ಅದೇ ಸಮಯದಲ್ಲಿ ದಲಿತ ಬಂಡಾಯ ಚಳವಳಿಯು ಮಹಿಳಾ ಪರ ಚಿಂತನೆಗೆ ಒಂದು ತಾತ್ವಿಕ ರೂಪವನ್ನು ಒದಗಿಸಿಕೊಟ್ಟಿತು. ಹೀಗಾಗಿ ಮಹಿಳೆಯ ಪರ ಅನುಕಂಪ, ಸಹಾನುಭೂತಿಗಿಂತ ಅವಳ ಬದುಕಿನ, ಹಕ್ಕಿನ ಕುರಿತಾದ ಪ್ರಜ್ಞೆ ಹುಟ್ಟಿ ಆ ಹಿನ್ನೆಲೆಯಲ್ಲಿ ಹೋರಾಟಗಳು ಆರಂಭವಾದವು.[೬೮]

ಮಹಿಳಾ ಮೀಸಲಾತಿಗಾಗಿ ಚಳವಳಿ

ಸ್ವಾತಂತ್ರ್ಯೋತ್ತರ ಆರಂಭದ ದಶಕಗಳಲ್ಲಿಯೇ ಭಾರತದ ಮತ್ತು ಕರ್ನಾಟಕದ ಮಹಿಳೆಯರು ಅವರಿಗೆ ಸಂಬಂಧಿಸಿದ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ

ವಿವಿಧ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಅಂದಿನ ಕೆಲವು ಮಹಿಳೆಯರು ತಮಗೆ ಸಿಕ್ಕಂತಹ ಅಥವಾ ಒದಗಿಬಂದಂತಹ ಅವಕಾಶಗಳನ್ನು ಸಾಕಷ್ಟು ಸಮರ್ಥವಾಗಿ ಬಳಸಿಕೊಂಡರು. ಬಹಳ ಸೀಮಿತ ಸಮಯದೊಳಗೆ ಸಿಕ್ಕ ಅವಕಾಶದೊಳಗೆ ಅಪಾರವಾದ ಅನುಭವವನ್ನು ತಮ್ಮದಾಗಿಸಿಕೊಂಡರು. ಆ ಮೂಲಕ ರಾಷ್ಟ್ರಮಟ್ಟದ ರಾಜಕಾರಣದಲ್ಲಿಯೂ ತಮ್ಮ ಗುರುತನ್ನು ಉಳಿಸಿಕೊಂಡು ಬಂದರು. ಆದರೆ ಪುರುಷ ನಿಯಂತ್ರಿತ ರಾಜಕಾರಣದೊಳಗೆ ಮಹಿಳೆಯರ ಕಡೆಗಣನೆ, ಲಿಂಗತಾರತಮ್ಯ ಹೆಚ್ಚಾಗಿತ್ತು ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತಿತ್ತು. ಗಾಂಧೀಜಿಯವರು ಇದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಮಹಿಳಾ ಸದಸ್ಯರ ಪಾಲು ಇಲ್ಲದ ಶಾಸನಸಭೆಯನ್ನು ನಾನು ಬಹಿಷ್ಕರಿಸುತ್ತೇನೆ ಎಂದಿದ್ದರು. ಇವರ ಮಾತುಗಳು ಮಹಿಳೆಯರನ್ನು ಜಾಗೃತಗೊಳ್ಳುವಂತೆ ಮಾಡಿದವು. ಆಗ ಕೆಲವು ಮಹಿಳಾ ಪರವಾದ ಬೌದ್ಧಿಕ ರಾಜಕಾರಣಿಗಳು ಮತ್ತು ಮಹಿಳೆಯರು ಸಂಸತ್ತಿನ ವಿಧೇಯಕದಲ್ಲಿ ಶೇಕಡ ೩೩.೩೩ರಷ್ಟು ಮೀಸಲಾತಿಯನ್ನು ಮತ್ತು ವಿವಿಧ ಹಂತಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಬೇಕೆಂದು ಒತ್ತಡ ಹೇರತೊಡಗಿದರು. ಎರಡು ದೊಡ್ಡ ಮತ್ತು ಸಶಕ್ತ ಪಕ್ಷಗಳಾಗಿರುವ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳು ಮಹಿಳೆಯರ ಪರ ಇರುವುದಾಗಿ ಘೋಷಣೆ ಮಾಡಿದವು.

೧೯೯೨ರಲ್ಲಿ ಭಾರತದ ಸಂವಿಧಾನಕ್ಕೆ ೭೩ ಮತ್ತು ೭೪ರ ತಿದ್ದುಪಡಿಯನ್ನು ತಂದು ಗ್ರಾಮ ಮತ್ತು ಪಟ್ಟಣಗಳಲ್ಲಿರುವ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ ೩೩ರಷ್ಟು ಸ್ಥಾನವನ್ನು ಮಹಿಳೆಯರಿಗಾಗಿ ಮೀಸಲಾಗಿಡಬೇಕೆಂಬುದನ್ನು ಜಾರಿ ಮಾಡಲಾಯಿತು. ಇದರಿಂದ ಭಾರತದ ಹತ್ತು ಲಕ್ಷಕ್ಕೂ ಹೆಚ್ಚು ಮಹಿಳೆಯರು ರಾಜಕೀಯ ಸ್ಥಾನಮಾನಗಳನ್ನು ಪಡೆದುಕೊಂಡರಲ್ಲದೇ ರಾಜಕೀಯ ಕ್ಷೇತ್ರದಲ್ಲಿ ನೇರವಾಗಿ ಪಾಲ್ಗೊಳ್ಳುವ ಅವಕಾಶಗಳನ್ನು ಪಡೆದರು. ನಂತರ ದೇಶದ ಎಲ್ಲಾ ವಿಧಾನಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಶೇಕಡ ೩೩ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡುವ ಮಸೂದೆಯನ್ನು ೧೯೯೬ ಸೆಪ್ಟೆಂಬರ್ ೪ರಂದು ಲೋಕಸಭೆಯಲ್ಲಿ ಮಂಡಿಸಲಾಯಿತು. ಪುರುಷರು ತಲ್ಲಣಗೊಂಡಿದ್ದೆ ಆಗ. ತಮ್ಮ ಸ್ಥಾನಗಳಿಗೆ ಚ್ಯುತಿ ಬರಬಹುದು ಎಂಬುದನ್ನು ತಿಳಿದ ಪುರುಷರು ಮಸೂದೆಯ ತಿದ್ದುಪಡಿಗೆ ಸುದೀರ್ಘ ಚರ್ಚೆಯಲ್ಲಿ ತೊಡಗಿ, ಸಂವಿಧಾನದ ತಿದ್ದುಪಡಿಗೆ ಹಿಂದೇಟು ಹಾಕತೊಡಗಿದರು. ಮಸೂದೆಯನ್ನು ಸಂಸದೆ ಶ್ರೀಮತಿ ಗೀತಾ ಮುಖರ್ಜಿ ಅಧ್ಯಕ್ಷತೆಯ ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಲಾಯಿತು ಜಂಟಿ ಸಂಸದೀಯ ಸಮಿತಿಯು ೧೯೯೬, ಡಿಸೆಂಬರ್ ೯ರಂದು ತನ್ನ ವರದಿಯನ್ನು ಒಪ್ಪಿಸಿತು. ಆದರೆ ಒಪ್ಪಿಗೆ ಸಿಗದೆ ಅದು ನೆನೆಗುದಿಗೆ ಬಿದ್ದಿತು. ಅಷ್ಟೇ ಅಲ್ಲದೆ ಪ್ರತಿ ವರ್ಷ ವಿಧೇಯಕವನ್ನು ಮುಂದೂಡುತ್ತಾ ಬರಲಾಯಿತು. ಹೀಗಾಗಿ ತ್ವರಿತವಾಗಿ ವಿಧೇಯಕವನ್ನು ಸದನದಲ್ಲಿ ಪಾಸು ಮಾಡುವಂತೆ ದೇಶಾದ್ಯಂತ ಪ್ರಗತಿಪರ ಮಹಿಳೆಯರು ಹಾಗೂ ವಿವಿಧ ಮಹಿಳಾ ಸಂಘಟನೆಗಳು ಬೃಹತ್ ಹೋರಾಟವನ್ನು ಆರಂಭಿಸಿದವು.

ಹೀಗೆ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗಾಗಿ ಹೈದರಾಬಾದ್ ಕರ್ನಾಟಕದಲ್ಲಿಯೂ ಸಹ ತೀವ್ರವಾದ ಹೋರಾಟ ನಡೆದುದು ಕಂಡು ಬಂದಿದೆ. ತೊಂಬತ್ತರ ದಶಕದೊಳಗೆ ಮಹಿಳಾ ರಾಜಕೀಯ

ಮೀಸಲಾತಿಗಾಗಿ ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಹೋರಾಟದಲ್ಲಿ ಬಲಪಂಥೀಯ ಮತ್ತು ಎಡಪಂಥೀಯ ಸಂಘಟನೆಯ ಮಹಿಳೆಯರು ಒಂದು ಸಮಾನ ವೇದಿಕೆಯನ್ನು ರೂಪಿಸಿಕೊಂಡು ಗುಲಬರ್ಗಾದಲ್ಲಿ ಒಂದು ದೊಡ್ಡ ಹೋರಾಟ ಮಾಡಲಾಯಿತು. ಹೀಗೆ ಹೈದರಾಬಾದ್ ಕರ್ನಾಟಕಾದದ್ಯಂತ ಮಹಿಳಾ ಮೀಸಲಾತಿ ಹೋರಾಟವು ವಿವಿಧ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತ ಬಂದಿದೆ. ಈ ನಿಟ್ಟಿನಲ್ಲಿ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆದಿರುವ ಹೋರಾಟಗಳು ಪರಿಣಾಮಕಾರಿ ಹೋರಾಟಗಳೆಂದು ಕಂಡು ಬಂದಿವೆ.

ಆರಂಭದಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಗಾಗಿ ಒತ್ತಾಯ, ಒತ್ತಡಗಳನ್ನು ಹೇರುವ ಹಿನ್ನೆಲೆಯಲ್ಲಿ ಸರಕಾರದ ಗಮನಸೆಳೆಯಲು ಪ್ರತಿಭಟನಾ ಮೆರವಣಿಗೆ, ರಸ್ತೆ ತಡೆ ನಡೆಸಲಾಯಿತು. ಪ್ರತಿಭಟನೆಗಳು ದಿನೇ ದಿನೇ ಹೆಚ್ಚಾದಾಗ ಈ ರೀತಿಯ ಹೋರಾಟಗಳನ್ನು ಕೈಬಿಡುವಂತೆ ಪೊಲೀಸರು ನೀಡಿದ ಎಚ್ಚರಿಕೆಯನ್ನು ನಿರ್ಲಕ್ಷಿಸಿದಾಗ, ಪೊಲೀಸರು ಪ್ರತಿಭಟನಾಕಾರರನ್ನು ತಡೆದು ಅವರನ್ನು ಬಂಧಿಸಲು ಮುಂದಾದರು. ಇಂತಹ ಸಂದರ್ಭಗಳಲ್ಲಿ ಸುಶಿಕ್ಷಿತ ವರ್ಗದ ಮಹಿಳೆಯರು ಕೆಲವು ಉದ್ಯೋಗಸ್ಥ ಮಹಿಳೆಯರು ಬಂಧನದಿಂದ ಪಾರಾಗಲು ಉದ್ದೇಶಪೂರ್ವಕವಾಗಿ ಹೋರಾಟದಿಂದ ಹಿಂದೆ ಸರಿದಾಗ ಹೋರಾಟ ಮುಂದುವರೆಸಿದ್ದ ಕೆಳವರ್ಗದ, ಬಡ, ಅಸುಶಿಕ್ಷಿತ ಮಹಿಳೆಯರೇ ಹೆಚ್ಚಾಗಿ ಬಂಧನಕ್ಕೆ ಒಳಗಾದರು. ಅಲ್ಲದೇ ಹೀಗೆ ಬಂಧನಕ್ಕೆ ಒಳಗಾದವರಲ್ಲಿ ಜನವಾದಿ ಮಹಿಳಾ ಸಂಘಟನೆಯ ಸದಸ್ಯರೆ ಹೆಚ್ಚಾಗಿದ್ದು ಇವರ ಮೇಲೆ ಮೊಕದ್ದಮೆಯನ್ನು ದಾಖಲಿಸಲಾಯಿತು. ನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ ಇವರು ವಿಚಾರಣಾ ದಿನದಂದು ನ್ಯಾಯಾಲಯಕ್ಕೆ ಹಾಜರಾಗಿ ಬರುತ್ತಿದ್ದರು.

ಆರಂಭದಲ್ಲಿ ಮೂರು ನಾಲ್ಕು ಸಲ ನ್ಯಾಯಾಲಯಕ್ಕೆ ಹಾಜರಾಗಿ ಬರುತ್ತಿದ್ದವರು ವಿಚಾರಣೆ ದೀರ್ಘ ಅವಧಿಗೆ ಸಾಗುತ್ತಿದ್ದಂತೆ, ನ್ಯಾಯಾಲಯಕ್ಕೆ ಹಾಜರಾಗುವುದನ್ನು ಬಿಟ್ಟು ಬಿಟ್ಟರು. ನ್ಯಾಯಾಲಯದ ವಿಚಾರಣೆಗೆ ಗೈರು ಹಾಜರಾದ ಇವರಿಗೆ ನ್ಯಾಯಾಲಯದಿಂದ ವಾರೆಂಟ್ ಜಾರಿಯಾದವು. ಎರಡೂ ಸಲ ವಾರೆಂಟ್ ಜಾರಿಯಾದಾಗಲೂ ಇವರು ನ್ಯಾಯಾಲಯಕ್ಕೆ ಹಾಜರಾಗದಿದ್ದಾಗ ಕೊನೆಗೆ ಮೂರನೇ ಬಾರಿಗೆ ಬಂಧನದ ವಾರೆಂಟ್ ಜಾರಿಯಾಯಿತು. ನ್ಯಾಯಾಲಯದಿಂದ ಬಂಧನದ ವಾರೆಂಟ್ ಜಾರಿಯಾದಾಗ, ಮೊಕದ್ದಮೆಯಲ್ಲಿ ಹೆಸರಿದ್ದ ಮಹಿಳೆಯರು ಗುಲಬರ್ಗಾದ ಪಕ್ಕದ ಹಳ್ಳಿಯೊಂದರಲ್ಲಿ ಮಹಿಳಾ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದರು. ಆಗ ವಾರೆಂಟ್‌ನೊಂದಿಗೆ ಅಲ್ಲಿಗೆ ಬಂದ ಪೊಲೀಸರು ಆ ಮಹಿಳೆಯರನ್ನು ಬಂಧಿಸಲು ಮುಂದಾದರು. ಆಗ ಆ ಮಹಿಳೆಯರಿಗೆ ಹೋರಾಟದ ಮನಸ್ಸು, ಧೈರ್ಯವಿದ್ದರೂ ಬೇರೆ ಊರಿನಲ್ಲಿದ್ದಾಗ ಇದ್ದಕ್ಕಿದ್ದಂತೆ ತಮ್ಮನ್ನು ಬಂಧಿಸಲು ಬಂದ ಪೊಲೀಸರನ್ನು ನೋಡಿ ಸ್ವಲ್ಪ ಗಾಬರಿಗೆ ಒಳಗಾದರು. ಕೊನೆಗೆ ಪೊಲೀಸರು ಇವರನ್ನು ಬಂಧಿಸಿ ಗುಲಬರ್ಗಾ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು.

ಇಂತಹ ಘುಟನೆಯಿಂದ ಮಹಿಳಾ ಹೋರಾಟಗಾರರಿಗೆ ಸ್ವಲ್ಪ ಗಾಬರಿ ಮತ್ತು ಹಿನ್ನಡೆ ಆಯಿತು. ಆಗ ಜನವಾದಿ ಮಹಿಳಾ ಸಂಘುಟನೆಯ ಸದಸ್ಯರೆಲ್ಲರೂ ಗುಲಬರ್ಗಾಕ್ಕೆ ಬಂದು ಬಂಧಿತ ಮಹಿಳೆಯರ ಪರವಾಗಿ ನ್ಯಾಯಾಲಯದಲ್ಲಿ ಜಾಮೀನು ಪಡೆಯಲು ಪ್ರಯತ್ನಿಸಿದರು. ಆದರೆ ಆ ದಿನ ಶನಿವಾರವಾಗಿದ್ದು ಜಾಮೀನು ಪಡೆಯಲು ಕಾನೂನಿನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಹೆಚ್ಚು ಸಮಯವಿರಲಿಲ್ಲ. ಆಗ ಆ ಸಂಘುಟನೆಯ ಮತ್ತು ಬಂಧಿತ ಮಹಿಳೆಯರ ಮನಸ್ಸಿನ ದುಗುಡವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಏಕೆಂದರೆ ಬಂಧಿತರಾಗಿ ಸೆರೆಮನೆಯಲ್ಲಿದ್ದಂತ ಮಹಿಳೆಯರು ಅನೇಕ ರೀತಿಯಲ್ಲಿ ಗಾಬರಿಗೊಳಗಾಗಿದ್ದರು. ಏಕೆಂದರೆ ಹೊರಗಡೆ ಮಹಿಳೆಯರು ತಿರುಗಾಡುವುದನ್ನೆ ಒಪ್ಪದ ಅಂದಿನ ಸಮಾಜದಲ್ಲಿ ಮಹಿಳೆಯರು ಸೆರೆಮನೆಯಲ್ಲಿದ್ದಾರೆಂದರೆ ಅವರನ್ನು ನೋಡಬಹುದಾದ ರೀತಿಯಿಂದ ಗಾಬರಿಗೊಳಗಾಗಿದ್ದರು. ಇನ್ನೊಂದು ಕಡೆ ಇನ್ನು ಕೆಲವು ಮಹಿಳೆಯರು ನಾವು ಜೈಲಿಗೆ ಹೋಗಿರುವ ವಿಚಾರ ನಮ್ಮ ಮನೆಯವರಿಗೆ ಮತ್ತು ನಮ್ಮ ಗಂಡಂದಿರಿಗೆ ತಿಳಿದರೆ ನಮ್ಮ ಗಂಡ ನಮ್ಮನ್ನು ಬಿಟ್ಟು ಬಿಡಬಹುದು. ನಮ್ಮ ಮನೆಯವರು ನಮ್ಮನ್ನು ಮನೆಗೆ ಸೇರಿಸುವುದಿಲ್ಲವೆಂದು ರೋಧಿಸುತ್ತಿದ್ದರು. ಇಂತಹ ಸಮಯದಲ್ಲಿ ಅವರ ಪರಿಸ್ಥಿತಿ ಹೇಗಿತ್ತೆಂದರೆ ಹೋರಾಟ, ಚಳವಳಿ ಎಂಥದ್ದೂ ಬೇಡ ಎನ್ನುವ ಹಾಗಿತ್ತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜನವಾದಿ ಮಹಿಳಾ ಸಂಘುಟನೆ ಸದಸ್ಯರು, ಬಂಧಿತರಾದ ಮಹಿಳೆಯರ ಬಗ್ಗೆ ಬಂಧನದ ವಿಷಯದ ಬಗ್ಗೆ ಎಲ್ಲೂ ಹೊರಗೆ ವಿಷಯ ತಿಳಿಸದೆ ಪ್ರಚಾರ ಆಗದಂತೆ ನೋಡಿಕೊಂಡರು. ಕೊನೆಗೆ ಎರಡು ದಿನಗಳ ನಂತರ ಇವರಿಗೆ ನ್ಯಾಯಾಲಯದಲ್ಲಿ ಜಾಮೀನು ದೊರೆತು ಜೈಲಿನಿಂದ ಹೊರಬಂದರು. ಆದರೆ ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಇಂತಹ ಸಂದಿಗ್ಧ ಪರಿಸ್ಥಿತಿ ಗಳನ್ನು ಸನ್ನಿವೇಶಗಳನ್ನು ಅವಲೋಕಿಸಿದಾಗ ಚಳವಳಿಯಲ್ಲಿ ಮಹಿಳೆ ಪಾಲ್ಗೊಂಡಾಗ ಎಂತೆಂಥಹ ಸಂಕಷ್ಟ ಪರಿಸ್ಥಿತಿಗಳನ್ನು, ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ ಎನ್ನುವ ವಾಸ್ತವಿಕತೆಯ ಅರಿವು ನಮಗಿರುವುದಿಲ್ಲ.

ನಂತರ ಬಂಧನದಿಂದ ಜಾಮೀನಿನ ಮೇಲೆ ಹೊರಬಂದ ಮಹಿಳೆಯರು ತಮ್ಮ ಸ್ಥಿತಿ ಅರಿತುಕೊಂಡು, ಮುಂದೆ ನ್ಯಾಯಾಲಯಕ್ಕೆ ಓಡಾಡಬೇಕಾದ ಪರಿಸ್ಥಿತಿ ಅರಿತು ಕೆಲವರು ಹೋರಾಟದಿಂದಲೆ ಹಿಂದೆ ಸರಿಯುವ, ಸಂಘುಟನೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಇನ್ನು ಕೆಲವರು ಕ್ರಮೇಣ ಸುಧಾರಿಸಿಕೊಂಡು ಮತ್ತೆ ಹೋರಾಟದಲ್ಲಿ ಪಾಲ್ಗೊಳ್ಳಲು ಆರಂಭಿಸಿದರು.[೬೯] ಆದರೆ ಇಲ್ಲಿಯವರೆಗೆ ಇಂತಹ ಮಹಿಳೆಯರು ಯಾರೂ ಇತಿಹಾಸದ ತೆಕ್ಕೆಗೆ ಸಿಗುವುದಿಲ್ಲ. ಇಂತಹವರನ್ನು ಕುರಿತು ಬರೆಯಲಿಕ್ಕೆ, ದಾಖಲು ಮಾಡಲಿಕ್ಕೂ ಯಾರೂ ಮನಸ್ಸು ಮಾಡುವುದಿಲ್ಲ. ಆದರೆ ಮಹಿಳಾ ಮೀಸಲಾತಿ ಜಾರಿಯಾದರೆ ಅದರ ಪ್ರಯೋಜನವನ್ನು ತತಕ್ಷಣ ಪಡೆಯುವವರು ಸುಶಿಕ್ಷಿತ, ಮೇಲ್ವರ್ಗದ, ವಿದ್ಯಾವಂತ ಮತ್ತು

ಉದ್ಯೋಗಸ್ಥ ಮಹಿಳೆಯರಾದರೆ ನಿಜವಾಗಿಯೂ ಹೋರಾಟದಲ್ಲಿ ಪಾಲ್ಗೊಂಡು ತೀವ್ರವಾಗಿ ಹೋರಾಡಿ ಜೈಲು ಸೇರಿ ನ್ಯಾಯಾಲಯಕ್ಕೆ ಅಲೆದಾಡಿ, ಕಷ್ಟಪಡುವವರು ಇನ್ನೊಂದು ವರ್ಗದ ಮಹಿಳೆಯರು. ಹೀಗಾಗಿ ಚಳವಳಿಗಳಲ್ಲಿ ಇಂತಹ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು, ಸಾಧನೆಗಳನ್ನು ಗುರುತಿಸುವ ಕೆಲಸ ಮಾಡಬೇಕಾಗಿದೆ. ಹೀಗೆ ಹೈದರಾಬಾದ್ ಕರ್ನಾಟಕದ ಮಹಿಳೆಯರು ಬಹಳ ತೀವ್ರವಾಗಿ ಮಾಡಿದಂತಹ ಚಳವಳಿ ಎಂದರೆ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಮಾಡಿದ ಚಳವಳಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಅವಕಾಶಕ್ಕಾಗಿ ದೇಶಾದ್ಯಂತ ನಡೆದಂತಹ ಮಹಿಳಾ ಚಳವಳಿಗಳ ಪ್ರಭಾವದ ಹಿನ್ನೆಲೆಯಲ್ಲಿ, ೯೦ರ ದಶಕದ ನಂತರ ಈ ಭಾಗದಲ್ಲಿಯೂ, ರಾಜಕೀಯ ಮೀಸಲಾತಿಗೆ ಸಂಬಂಧವಾಗಿ ಎಲ್ಲಾ ನೆಲೆಯ ಸಂಘಟಿತ ಮಹಿಳೆಯರು ಸೇರಿಕೊಂಡು ಬೃಹತ್ ಪ್ರಮಾಣದ ಹೋರಾಟ ಮಾಡಿದ್ದನ್ನು ಗುರುತಿಸಬಹುದಾಗಿದೆ. ಹೀಗಾಗಿಯೇ ಶೇ. ೩೩ರಷ್ಟು ರಾಜಕೀಯ ಮೀಸಲಾತಿ ಪಂಚಾಯ್ತಿ ಮಟ್ಟದೊಳಗೆ ಅಥವಾ ವಿಕೇಂದ್ರೀಕರಣ ಹಂತದೊಳಗೆ ಕೆಳಹಂತದಲ್ಲಿ ಸಿಕ್ಕಿತು. ಇದನ್ನು ಪಾರ್ಲಿಮೆಂಟ್ ಹಂತದೊಳಗೆ ನೀಡುವಂತೆ, ಇವತ್ತಿಗೂ ಮಹಿಳೆಯರು ಹೋರಾಟ ಮಾಡುತ್ತಿದ್ದಾರೆ. ಇದರ ಕುರಿತು ಇವತ್ತಿಗೂ ಚರ್ಚೆಗಳಾಗುತ್ತಿದೆ ಹಾಗೂ ಮಸೂದೆಯ ಮಂಡನೆಯ ಸಂದರ್ಭದಲ್ಲಿ ಪಕ್ಷಾತೀತವಾಗಿ ಹೆಚ್ಚಿನ ಪುರುಷ ಸದಸ್ಯರು ಅದನ್ನು ವಿರೋಧ ಮಾಡುವಂತದ್ದನ್ನು ನೋಡಬಹುದು. ಆದರೆ ಇವರ ಹೋರಾಟ ರಾಷ್ಟ್ರಮಟ್ಟದಲ್ಲಿ ಪಸರಿಸಿ ಸಂಸತ್ ಸದಸ್ಯರ ಮೇಲೆ ಒತ್ತಡ ತಂದು ಇದನ್ನು ಒಪ್ಪಿಸುವಷ್ಟರ ಮಟ್ಟಿಗೆ ಇವರು ಬಲಿಷ್ಠರಾಗಿಲ್ಲ ಎನ್ನುವುದು ಕಾಣಿಸುತ್ತಿದೆ. ಹೀಗಾಗಿ ರಾಜಕೀಯ ಪ್ರೇರಿತವಾದಂತ ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ನಡೆದಿರುವಂತ, ಮೊದಲ ಹಂತದ ಅಥವಾ ಮೊದಲ ತಲೆಮಾರಿನ ಚಳವಳಿಯೊಳಗೆ ಇವರು ಒಂದಿಷ್ಟು ಜಯಶಾಲಿಯಾಗಿದ್ದಾರೆ.

ಜಾತಿ ಸಾಮರಸ್ಯಕ್ಕಾಗಿ ಚಳವಳಿ

ಹೈದರಾಬಾದ್ ಕರ್ನಾಟಕ ಪ್ರದೇಶವು ಹಿಂದಿನಿಂದಲೂ ಉಳಿದೆಲ್ಲಾ ಪ್ರದೇಶಗಳಿಗಿಂತ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿದೆ. ಹಾಗೆಯೇ ಇಲ್ಲಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯು ಎಷ್ಟೊಂದು ವೈವಿಧ್ಯತೆಯನ್ನು ಹೊಂದಿದೆಯೋ ಅಷ್ಟೇ ಸ್ಥಿತ್ಯಂತರಗಳಿಗೂ ಒಳಗಾಗುತ್ತಾ ಬಂದಿದೆ. ಹಾಗೆಯೇ ಪರಕೀಯರ, ಮುಸ್ಲಿಂರ ಅಧಿಪತ್ಯದಲ್ಲಿ ಧರ್ಮಗಳ ಒತ್ತಡದಲ್ಲಿ ಸಂಘರ್ಷದಲ್ಲಿ ಸಿಲುಕಿದ ನಾಡು. ಪ್ರಭುತ್ವ, ಮತಧರ್ಮಗಳನ್ನು ಅಸ್ತ್ರ ಮಾಡಿಕೊಂಡು ಜನತೆಯನ್ನು ಒಡೆದು ಆಳಲು ಪ್ರಯತ್ನಿಸಿ ದಾಗಲೆಲ್ಲಾ ಇಲ್ಲಿನ ಧಾರ್ಮಿಕ ಮುಖಂಡರು ಬಹುದೊಡ್ಡ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ಮಠಗಳು, ಮಸೀದಿಗಳು ಭಾವೈಕ್ಯತೆಯ ಸಂಕೇತಗಳಾಗಿವೆ. ಈ ಭಾಗದಲ್ಲಿ ಹಿಂದುಗಳು ಮತ್ತು ಮುಸ್ಲಿಂರು ಬಹುಸಂಖ್ಯಾತರಾಗಿದ್ದರೂ, ಇವರ ನಡುವೆ ಜಾತೀಯ, ಮತೀಯ ಸಂಘರ್ಷಗಳು ನಡೆದಿರುವುದು ಬಹು ವಿರಳ. ಹಿಂದೂ ಮುಸ್ಲಿಂರು ಬಹಳ ಅನೋನ್ಯತೆಯಿಂದ ನಡೆದುಕೊಂಡು ಬಂದಿದ್ದಾರೆ.

ಆದರೆ ಕೆಲವೊಂದು ಸಂದರ್ಭಗಳಲ್ಲಿ ದುಷ್ಟ ವಿಚಾರಗಳನ್ನು ಹೊಂದಿದ ಕೆಲವು ಮತೀಯ ನಾಯಕರು, ಸಂಘಟನೆಗಳು ಇಲ್ಲಿಯ ಹಿಂದೂ ಮುಸ್ಲಿಂರ ನಡುವೆ ಹಿಂದೂ ದಲಿತರ ನಡುವೆ ಮತೀಯ

ವೈಷಮ್ಯದ ಬೀಜವನ್ನು ಬಿತ್ತಿ ಇಡೀ ಸಮಾಜವನ್ನೆ ಕಲುಷಿತಗೊಳಿಸುವ ಪ್ರಯತ್ನಗಳನ್ನು ಮಾಡಿರುವುದು ಕಂಡು ಬರುತ್ತದೆ. ರಾಜಕೀಯವಾಗಿ, ಧಾರ್ಮಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವ ಆತುರದಲ್ಲಿ ಕೆಲವರು ಜಾತೀಯ ಹೋರಾಟಗಳಿಗೆ ಬೆಂಬಲ ಕೊಡುವುದು ಕಂಡು ಬಂದಿದೆ. ಇಂತಹುದೇ ಒಂದು ಸಂದರ್ಭವೆಂದರೆ, ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಹಿಂದೂ ಮುಸ್ಲಿಂರ ನಡುವೆ ಸಂಘರ್ಷಗಳು ನಡೆಯುವಂತಹ ಪರಿಸ್ಥಿತಿಯೆ ನಿರ್ಮಾಣವಾಗಿತ್ತು. ಅಂತಹ ಸಮಯದಲ್ಲಿ ಹಿಂದೂ, ಮುಸ್ಲಿಂರ ನಡುವೆ ಸೌಹಾರ್ದತೆಯನ್ನು ರೂಪಿಸಲು ಮತೀಯ ಸಾಮರಸ್ಯವನ್ನು ಕಾಪಾಡಿದ್ದು, ಈ ಭಾಗದ ಮಹಿಳೆಯರು ಮತ್ತು ಮಹಿಳಾ ಸಂಘಟನೆಗಳು.

ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮತ್ತು ಬಾಬರಿ ಮಸೀದಿ ವಿವಾದದ ಸಂದರ್ಭದಲ್ಲಿ ಬಾಬರಿ ಮಸೀದಿಗೆ ಧಕ್ಕೆ ಮಾಡಲಾಗಿತ್ತು. ರಾಮಭಕ್ತಿಯ ನೂರಾರು, ಕಾರ್ಯಕರ್ತರು ಮಸೀದಿಯ ಕೆಲವು ಭಾಗಗಳನ್ನು ಕೆಡವಿದ್ದರು. ಆಗ ದೇಶಾದ್ಯಂತ ಹಿಂದೂ, ಮುಸ್ಲಿಂರ ನಡುವೆ ದ್ವೇಷದ ಭಾವನೆ, ಸಂಘರ್ಷದ ಪರಿಸ್ಥಿತಿಗಳು ಉದ್ಭವಿಸಿದ್ದವು. ಸಹಜವಾಗಿ ಮೊದಲಿನಿಂದಲೂ ಮುಸ್ಲಿಂರ ಜನಸಂಖ್ಯೆ, ಪ್ರಭಾವ ಹೆಚ್ಚಿರುವ ಗುಲಬರ್ಗಾ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಇದರ ಪ್ರಭಾವ ಹಬ್ಬಿ ಹಿಂದೂ ಮುಸ್ಲಿಂರ ನಡುವೆ ಪರಸ್ಪರ ಅನುಮಾನದಿಂದ ನೋಡುವ ನಡೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಗುಲಬರ್ಗಾದ ಎಂ.ಎಸ್.ಕೆ. ಮಿಲ್ ಪ್ರದೇಶದಲ್ಲಿ ಮುಸ್ಲಿಂರ ಮನೆಗಳು ಹೆಚ್ಚಾಗಿದ್ದು ಅಧಿಕಸಂಖ್ಯೆ ಯಲ್ಲಿ ಮುಸ್ಲಿಂರು ವಾಸಿಸುತ್ತಿದ್ದರು ಮತ್ತು ಇದೇ ಬಡಾವಣೆಗೆ ಹೊಂದಿಕೊಂಡು ಬ್ರಾಹ್ಮಣರ ಅಗ್ರಹಾರಗಳಿದ್ದವು. ಬ್ರಾಹ್ಮಣರ ಓಣಿಗಳ ಪಕ್ಕದಲ್ಲಿ ಮತ್ತು ಸುತ್ತಮುತ್ತಲು ಹಿಂದುಳಿದ, ದುಡಿಯುವ ಮತ್ತು ಇತರ ವರ್ಗಗಳ ಬಡಾವಣೆಗಳಿವೆ. ಹೀಗೆ ಎಲ್ಲಾ ರೀತಿಯ ವರ್ಗಗಳ ಜನರು ವಾಸಿಸುವ ಪ್ರದೇಶದಲ್ಲಿ ಜಾತಿ ವಿಚಾರಗಳಿಗಾಗಿ ಸಣ್ಣಪುಟ್ಟ ಇತರೆ ವಿಚಾರಗಳಿಗಾಗಿ ಇವರು ಎಂದೂ ಜಗಳ ಮಾಡಿದವರಲ್ಲ. ಆದರೆ ಬಾಬರಿ ಮಸೀದಿ ಘಟನೆಯ ವಿವಾದದ ಸಂದರ್ಭದಲ್ಲಿ ಕೆಲವು ಪುಡಿ ರಾಜಕಾರಣಿ ಗಳು ಬಿಸಿ ರಕ್ತದ ಯುವಕರು ಅನಾವಶ್ಯಕವಾಗಿ ಮತೀಯ ವಿಷಯಗಳನ್ನು ನೆಪ ಮಾಡಿಕೊಂಡು ಜಗಳಕ್ಕಿಳಿದಿದ್ದರು. ಹಿಂದೂ ಮತ್ತು ಮುಸ್ಲಿಂರಿಬ್ಬರು ಪರಸ್ಪರ ನಿಂದನೆಗಿಳಿದು ಒಬ್ಬರ ವಿರುದ್ಧ ಒಬ್ಬರು ಅನಗತ್ಯ ವಿಚಾರಗಳನ್ನು ಎತ್ತಿಕಟ್ಟುತ್ತಾ ಪರಸ್ಪರ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಗಳಲ್ಲಿ, ಪ್ರತಿಭಟನೆಯಲ್ಲಿ ತೊಡಗಿದ್ದರು. ಹಾಗೆಯೇ ದುಡಿಯುವ ವರ್ಗದ ಬೆಂಬಲ ಪಡೆಯಲು ಇವರ ವಿಚಾರ ಗಳನ್ನು ಘೋಷಣೆಗಳನ್ನು ದುಡಿಯುವ ವರ್ಗದ ಮನೆಗಳಿಗೆ ಜನರಿಗೆ ತಲುಪುವಂತೆ ಮಾಡಿದರು. ಆ ಪ್ರದೇಶದಲ್ಲಿದ್ದ ಅನಕ್ಷರಸ್ಥ ಯುವಕರು ಈ ವಿಚಾರವನ್ನಿಟ್ಟುಕೊಂಡು ಕೆಲವರು ಹಿಂದುಗಳ ಪರ, ಕೆಲವರು ಮುಸ್ಲಿಂರ ಪರ ಬೆಂಬಲಕ್ಕೆ ನಿಂತಿದ್ದರು. ಹೀಗಾಗಿ ಹಿಂದೂ ಮಹಿಳೆಯರನ್ನು ಮುಸ್ಲಿಂ ಯುವಕರು

ಕೆಣಕುವುದು, ಮುಸ್ಲಿಂ ಮಹಿಳೆಯರನ್ನು ಹಿಂದೂ ಯುವಕರು ಕೆಣಕುವಂತದ್ದು ಹೀಗೆ ಅನಿರೀಕ್ಷಿತ ಭಯಾನಕ ಸನ್ನಿವೇಶ ಉಂಟಾಗಿತ್ತು.

ಇಂತಹ ಸೂಕ್ಷ್ಮ ಮತ್ತು ದುಗುಡ ಪರಿಸ್ಥಿತಿಯಲ್ಲಿ ಮನಸ್ತಾಪಗಳಿಗೆ ಈಡಾಗಿದ್ದು ಮಾತ್ರ ಮಹಿಳೆಯರು. ಯಾವುದೇ ತಪ್ಪು ಮಾಡದ ತಮಗೆ ಸಂಬಂಧವೇ ಇಲ್ಲದ ವಿಷಯಕ್ಕೆ ಮಹಿಳೆಯರು ತೊಂದರೆ ಅನುಭವಿಸಬೇಕಾಯಿತು. ಎರಡೂ ವರ್ಗದ ಎಷ್ಟೋ ಬಡ ಕೂಲಿ ಕಾರ್ಮಿಕ ಮಹಿಳೆಯರು ಹೊರಗೆ ಹೋಗಬೇಕಾದರೂ ಯೋಚಿಸಬೇಕಾದ ಪರಿಸ್ಥಿತಿ ಇತ್ತು ಹಾಗೂ ಏಕಾಂಗಿಯಾಗಿ ಮಹಿಳೆಯರು ಓಡಾಡುವುದೇ ಅಪಾಯ ಎನ್ನುವ ಸ್ಥಿತಿಯಿತ್ತು. ಹೀಗಾಗಿ ಆಗ ಉದ್ಭವಿಸಿದ ವಿಚಿತ್ರವಾದ ಪರಿಸ್ಥಿತಿ ಎಂದರೆ ಹಿಂದೂ, ಮುಸ್ಲಿಂರ ಜಗಳದಲ್ಲಿ ನಿಜವಾಗಿಯೂ ಕಷ್ಟಕ್ಕೀಡಾದವರು ನೋವನ್ನು ಅನುಭವಿಸಿದವರು ಮಾತ್ರ ಅಮಾಯಕ ಮಹಿಳೆಯರು. ಹಿಂದೂ ಮಹಿಳೆಯರೇನಾದರೂ ತಮ್ಮ ಚಿರಪರಿಚಿತ ನೆರೆಹೊರೆಯ ಮುಸ್ಲಿಂರ ಮನೆಗೇನಾದರೂ ಹೋದರೆ ಆ ಮನೆಯ ಪುರುಷರು ತಮ್ಮ ಮನೆಯ ಹೆಣ್ಣುಮಕ್ಕಳನ್ನು ಬೈಯ್ಯುತ್ತಿದ್ದರು. ಅದೇ ರೀತಿ ಮುಸ್ಲಿಂ ಮಹಿಳೆಯರು ಹಿಂದೂಗಳ ಮನೆಗೆ ಬಂದರೆ ಆ ಮನೆಯ ಗಂಡಸರು ಇವರನ್ನು ಅನುಮಾನದಿಂದ ತಾತ್ಸಾರದಿಂದ ನೋಡುತ್ತಿದ್ದರು. ಹೀಗಾಗಿ ಬಾಬರಿ ಮಸೀದಿಯ ಧ್ವಂಸ ಆದ ನೋವಿಗಿಂತ ಹೆಚ್ಚು ನೋವನ್ನು, ಈ ರೀತಿಯ ಘಟನೆಗಳಿಂದ ಮಹಿಳೆಯರು ಅನುಭವಿಸಿದರು. ಪರಿಸ್ಥಿತಿ ಎಷ್ಟೊಂದು ವಿಕೋಪಕ್ಕೆ ಹೋಯಿತೆಂದರೆ ಹಿಂದೂ ಅಥವಾ ಮುಸ್ಲಿಂರ ಮನೆಗಳ ಸಮಾರಂಭ, ಕಾರ್ಯಕ್ರಮಗಳಿಗೆ ಮಹಿಳೆಯರು ಪಾಲ್ಗೊಳ್ಳದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಪರಿಸ್ಥಿತಿಯನ್ನು ಗಮನಿಸಿದ ಮಹಿಳಾ ಸಂಘಟನೆಗಳು ಎರಡೂ ಸಮುದಾಯದೊಳಗೆ ನೋವನ್ನು ಅನುಭವಿಸುವ ಯಾವುದೇ ತಪ್ಪನ್ನು ಮಾಡದ ಮಹಿಳೆಯರು ಅಪರಾಧಿಗಳ ಸ್ಥಾನದಲ್ಲಿ ನಿಂತು ಅವಮಾನಿತರಾಗಿ ಬಾಳುತ್ತಿದ್ದ ಮನಸ್ಥಿತಿಯನ್ನು ಬಹುಬೇಗ ಗ್ರಹಿಸಿದರು.

ಇಂತಹ ಸ್ಥಿತಿಯಿಂದ ಮಹಿಳೆಯರನ್ನು ಹೊರತರಲು ಹಾಗೂ ಪರಿಸ್ಥಿತಿಗೆ ಬಲಿಪಶುವಾಗುತ್ತಿದ್ದ ಮಹಿಳೆಯರನ್ನು ರಕ್ಷಿಸಲು ಪರಸ್ಪರ ಸಮಾಲೋಚನೆ, ತಿಳುವಳಿಕೆ, ಜಾಗೃತಿ ಸಭೆಗಳನ್ನು ಏರ್ಪಡಿಸಿ ಹೋರಾಟಕ್ಕಿಳಿದು ದೊಡ್ಡ ಚಳವಳಿಯನ್ನೆ ಮಾಡಿದರು. ಗುಲಬರ್ಗಾದ ವಿವಿಧ ಮಹಿಳಾ ಸಂಘಟನೆಗಳ ಸದಸ್ಯರೆಲ್ಲಾ ಒಂದೆಡೆ ಸೇರಿ ಹಿಂದೂ ಮತ್ತು ಮುಸ್ಲಿಂರ ಸ್ಥಿತಿಗತಿ ಕುರಿತು ತಾವು ಮಾಡಬೇಕಾದ ಕಾರ್ಯದ ಕುರಿತು ರೂಪುರೇಷೆಗಳನ್ನು ರಚಿಸಿಕೊಂಡರು ಮತ್ತು ಉದ್ಭವವಾಗಿರುವ ಸಮಸ್ಯೆ ಹಿಂದೆ ಬಹುಸೂಕ್ಷ್ಮವಾದ ಮತೀಯವಾದ ಇರುವುದನ್ನು ಅರಿತುಕೊಂಡು ಬಹಳ ಎಚ್ಚರಿಕೆಯಿಂದ ಹೋರಾಟಕ್ಕಿಳಿದರು. ಹಿಂದೂ ಮುಸ್ಲಿಂರಿಗೆ ನೋವಾಗದ ರೀತಿಯಲ್ಲಿ ನೇರವಾಗಿ ಆಪಾದನೆಗಳನ್ನು ಮಾಡದೇ, ಮಹಿಳೆಯರು ಹೇಗೆ ಸಮಸ್ಯೆಗಳಿಗೆ ಬಲಿಯಾಗಿದ್ದಾರೆ ಎನ್ನುವ ಜಾಗೃತಿಯನ್ನು ಎಲ್ಲರಲ್ಲೂ ಮೂಡಿಸಲು ಪ್ರಯತ್ನಿಸಿದರು. ಶಾಲಾ, ಕಾಲೇಜುಗಳಿಗೆ ಭೇಟಿ ನೀಡಿ, ಅಲ್ಲಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪರಿಸ್ಥಿತಿಯನ್ನು ತಿಳಿಸುತ್ತಾ, ವಾಸ್ತವವಾಗಿ ಇಲ್ಲಿನ ಹಿಂದೂ ಮಹಿಳೆಯರಿಗೆ ಬಾಬರಿ ಮಸೀದಿ ಧ್ವಂಸ

ಆದರೂ ಯಾವುದೇ ಲಾಭ ಇಲ್ಲ, ಹಾಗೆಯೇ ಮುಸ್ಲಿಂ ಮಹಿಳೆಯರಿಗೆ ರಾಮಮಂದಿರ ಕಟ್ಟದಿದ್ದರೂ ಲಾಭ ಆಗುವುದು ಅಷ್ಟರಲ್ಲೇ ಇದೆ. ಇದು ನಮ್ಮ ಜೀವನಕ್ಕೆ, ಮೂಲಭೂತ ಅವಶ್ಯಕತೆಗಳಿಗೆ, ಸಮಸ್ಯೆ ಗಳಿಗೆ ಸಂಬಂಧಿಸಿಲ್ಲ. ನಿಜವಾಗಿಯೂ ಮಂದಿರ ಮತ್ತು ಮಸೀದಿಗಳ ಕಟ್ಟಡಗಳಿಗಿಂತ ಮನುಷ್ಯರ ಭಾವನೆಗಳು ಮುಖ್ಯ ಎನ್ನುವುದನ್ನು ತಿಳಿಪಡಿಸಲಾಯಿತು.

ಮಂದಿರ, ಮಸೀದಿಗಳು ಮನುಷ್ಯರ ಜೀವನಕ್ಕೆ, ಏಳಿಗೆಗೆ ಸುಖಕ್ಕೆ, ನೆಮ್ಮದಿಗೆ ಕಾರಣೀಭೂತ ಗಳಾಗಿರುತ್ತವೆ ಎನ್ನುವ ವಿಚಾರವನ್ನು ತಿಳಿಸಲಾಯಿತು. ಇದಕ್ಕೆ ಉದಾಹರಣೆಯಾಗಿ ಗುಲಬರ್ಗಾ ನಗರದ ಶ್ರೀ ಶರಣಬಸವೇಶ್ವರ ಸಂಸ್ಥಾನ ಮಠ ಮತ್ತು ಸಂತ ಖ್ವಾಜಾ ಬಂದೇ ನವಾಜರ ದರ್ಗಾವನ್ನು ಉದಾಹರಿಸಲಾಯಿತು. ಅಂದರೆ ದೇವಾಲಯಕ್ಕೆ ಮುಸ್ಲಿಂರು ಹೋಗುವ, ಉತ್ಸವಗಳಲ್ಲಿ ಪಾಲ್ಗೊಳ್ಳುವ ಅದೇ ರೀತಿ ಹಿಂದೂಗಳು ದರ್ಗಾಗಳಿಗೆ ಬರುತ್ತಿರುವ ಉರುಸ್‌ನಲ್ಲಿ ಪಾಲ್ಗೊಳ್ಳುತ್ತಿರುವುದರ ವಾಸ್ತವ ಚಿತ್ರಣ ನೀಡಿದರು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದನ್ನು ಬಹುಬೇಗ ಗ್ರಹಿಸಿ, ಮಹಿಳಾ ಸಂಘಟನೆಗಳ ವಿಚಾರಗಳಿಗೆ ಬೆಂಬಲ ವ್ಯಕ್ತಪಡಿಸಿದರಲ್ಲದೆ ಅವರ ಹೋರಾಟಕ್ಕೆ ಸಂಪೂರ್ಣ ಸಹಕರಿಸತೊಡಗಿದರು. ಇದರಿಂದ ಮಹಿಳೆಯರ ಹೋರಾಟಕ್ಕೆ ನಿಜವಾಗಿಯೂ ಆನೆಬಲ ಮತ್ತು ನೈತಿಕ ಬಲವೇ ಬಂದಂತಾಗಿತ್ತು.

ನಂತರ ಮಹಿಳಾ ಹೋರಾಟದ ಹಾದಿ ಹೊರಳಿದ್ದು ಅನಕ್ಷರಸ್ಥ, ಬಡ, ಕೂಲಿಕಾರ್ಮಿಕ ಪುರುಷರ ಮತ್ತು ಮಹಿಳೆಯರ ಕಡೆಗೆ. ನಿಜವಾಗಿಯೂ ಪರಿಸ್ಥಿತಿಯ ಅರಿವೇ ಇಲ್ಲದ ಈ ವರ್ಗದ ಜನರು ಹಿಂದೂಗಳು ಅಥವಾ ಮುಸ್ಲಿಂರ ಜೊತೆ ಇರಬೇಕಾದ ಅನಿವಾರ್ಯತೆಯಿಂದಲೊ ಅಥವಾ ತಮ್ಮ ಕೆಲಸಕ್ಕೆ, ಜೀವನಾಧಾರಕ್ಕೆ ಇವರನ್ನೆ ಆಶ್ರಯಿಸಿರುವುದರಿಂದಲೋ ಏನೋ ಇವರು ಅವರಲ್ಲಿ ಯಾರೊಬ್ಬರ ಪರವಾಗಿ ನಿಲ್ಲಲೇಬೇಕಾಗಿತ್ತು ಮತ್ತು ಮಾತನಾಡಲೇ ಬೇಕಾಗಿತ್ತು. ಅಷ್ಟೇ ಅಲ್ಲ ಒಂದು ವೇಳೆ ಗಲಭೆಗಳಾದರೆ ಹೆಚ್ಚಾಗಿ ನಷ್ಟ, ನೋವನ್ನು ಅನುಭವಿಸುವವರೂ ಇವರೇ ಆಗಿದ್ದರು. ಹೀಗಾಗಿ ಈ ವರ್ಗದ ಮಹಿಳೆಯರಿಗೆ ಮತ್ತು ಪುರುಷರಿಗೆ ಒಂದು ತಿಳುವಳಿಕೆ ಕೊಡಬೇಕಾಗಿತ್ತು. ಕೆಳವರ್ಗದ ಪುರುಷ ಮತ್ತು ಮಹಿಳೆಯರಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಮಹಿಳಾ ಸಂಘಟನೆಯ ಕಾರ್ಯಕರ್ತರೆಲ್ಲಾ ಹಲವು ಗುಂಪುಗಳಾಗಿ ಪ್ರತಿ ಓಣಿಗಳಿಗೆ ಭೇಟಿ ನೀಡಲು ಆರಂಭಿಸಿದರು. ಆಯಾ ಬೀದಿಯ, ಓಣಿಯ ಮಹಿಳೆಯರನ್ನೆಲ್ಲಾ ಒಂದು ಕಡೆ ಸೇರಿಸಿ ಅವರಿಗೆಲ್ಲಾ ತಿಳುವಳಿಕೆ ಹೇಳುತ್ತಾ, ವಾಸ್ತವವನ್ನು ತಿಳಿಸುತ್ತಾ ಮುಂದಿನ ಜೀವನದ ಅಗತ್ಯತೆಗಳ ಬಗ್ಗೆ ಹೇಳಲಾಯಿತು. ಸುಮಾರು ಇಪ್ಪತ್ತು ದಿನಗಳ ಕಾಲ ಇವರು ಹಗಲು ರಾತ್ರಿಯೆನ್ನದೇ ಅಡ್ಡಾಡಿ ಕಾರ್ಯ ಕೈಗೊಂಡಿದ್ದರು. ನಿಜವಾಗಿಯೂ ಕಾರ್ಯ ನಿರೀಕ್ಷಿತ ಫಲವನ್ನೆ ಕೊಟ್ಟಿತ್ತು. ಏಕೆಂದರೆ ವಾಸ್ತವನ್ನೇ ಅರಿಯದೇ ಅಥವಾ ತಿಳಿಯಲು ಸಾಧ್ಯವಾಗದೇ, ಬೇರೆಯವರ ಮಾತನ್ನೆ ಪಾಲಿಸುತ್ತಿದ್ದ ವರ್ಗದವರಿಗೆ ನಿಜ ಸ್ಥಿತಿ ಅರಿವಾಯಿತು. ಜೊತೆಗೆ ತಮಗೆ ಸಂಬಂಧವೇ ಇಲ್ಲದ ಇಂತಹ ಕಾರಣಗಳನ್ನು ಧಿಕ್ಕರಿಸಿ, ಎಲ್ಲರ ಜೊತೆ ಬೆರೆಯಲು ಮಹಿಳಾ ಸಂಘಟನೆಗಳ ಕಾರ್ಯಕರ್ತರು ಸ್ಫೂರ್ತಿ ತುಂಬಿದ್ದರು. ಇದರಿಂದ ಈ ವರ್ಗದ ಜನರ ಮನೋಭಾವನೆಯೆ ಬದಲಾಗಿ ತಟಸ್ಥ ನೀತಿ ತಾಳಿದರಲ್ಲದೇ,

ಬಾಬರಿ ಮಸೀದಿಯ ವಿವಾದಕ್ಕೂ ತಮಗೂ ಸಂಬಂಧವೇ ಇಲ್ಲ ಎನ್ನುವಂತೆ ಅವರ ವರ್ತನೆಯಲ್ಲಿ ಬದಲಾವಣೆಯಾಯಿತು.

ಇನ್ನು ಮಸೀದಿ ವಿವಾದದಲ್ಲಿ ಮಹಿಳಾ ಸಂಘಟನೆಗಳಿಗೆ ಬಹು ದೊಡ್ಡ ಸವಾಲಾಗಿದ್ದ ಅಂಶವೆಂದರೆ ಹಿಂದೂ ಮತ್ತು ಮುಸ್ಲಿಂ ಧಾರ್ಮಿಕ ಮುಖಂಡರ ಮತ್ತು ರಾಜಕೀಯ ಮುಖಂಡರನ್ನು ಮನವೊಲಿಸುವುದಾಗಿತ್ತು. ಆದರೆ ಇದು ನಾವು ಮೇಲ್ನೋಟಕ್ಕೆ ಅಂದುಕೊಂಡಷ್ಟು ಸರಳವೂ ಸುಲಭವೂ ಆಗಿರಲಿಲ್ಲ. ಏಕೆಂದರೆ ಬಾಬರಿ ಮಸೀದಿ ವಿವಾದವು ದೇಶದ ಎರಡು ಬಲಿಷ್ಠ ಜಾತಿಗಳ, ಪಕ್ಷಗಳ ನಡುವಿನ ವಿವಾದಂತೆ ರೂಪುಗೊಂಡಿತ್ತು. ಹಾಗಾಗಿ ಇಲ್ಲಿ ಯಾರ ಪರವಾಗಿ ಅಥವಾ ವಿರುದ್ಧವಾಗಿ ಮಾತನಾಡಿದರೂ ಅದಕ್ಕೆ ರಾಜಕೀಯದ, ಮತೀಯದ ಬಣ್ಣ ಬರುವ ಸಂಭವವಿತ್ತು. ಹೀಗಾಗಿ ಇದರ ವಿಷಯದಲ್ಲಿ ಮಹಿಳಾ ಸಂಘಟನೆಗಳ ಸದಸ್ಯರು ಬಹಳ ಬುದ್ಧಿವಂತಿಕೆಯಿಂದ ಕಾರ್ಯಕ್ಕಿಳಿದರು.

ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಸೇರಿ 'ಸೌಹಾರ್ದ ವೇದಿಕೆ'ಯನ್ನು ಸ್ಥಾಪಿಸಿಕೊಂಡರು. ವೇದಿಕೆಗೆ ಮೊದಲು ಶಿಕ್ಷಣತಜ್ಞರು, ಪತ್ರಕರ್ತರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ಹಿರಿಯರನ್ನು ಬರ ಮಾಡಿಕೊಂಡು ಸಾಮರಸ್ಯದ ಕುರಿತು ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ನಂತರ ಪೊಲೀಸರು ಹಾಗೂ ಇತರ ಅಧಿಕಾರಿಗಳನ್ನು ಕರೆಸಿ ಪರಿಸ್ಥಿತಿಯ ನಿರ್ವಹಣೆ ಹೇಗೆ ಎನ್ನುವುದರ ಕುರಿತು ಹೇಳಿಕೆಗಳನ್ನು, ಅಭಿಪ್ರಾಯಗಳನ್ನು ಪಡೆಯಲಾಯಿತು. ಕ್ರಮೇಣ ಧಾರ್ಮಿಕ ಮುಖಂಡರು, ರಾಜಕೀಯ ಮುಖಂಡರನ್ನು ಕರೆಸಿ, ಮತೀಯ ಸಾಮರಸ್ಯ ಮುಂತಾದ ವಿಚಾರಗಳನ್ನು ಜನರಿಗೆ ತಿಳಿ ಹೇಳಲು ಆರಂಭಿಸಲಾಯಿತು. ಹೀಗೆ ಯಾವ ಹಿಂದೂ ಮತ್ತು ಮುಸ್ಲಿಂರು ಪರಸ್ಪರ ಎದುರಾದರೆ ದ್ವೇಷದಿಂದ ಅನುಮಾನದಿಂದ ನೋಡುತ್ತಿದ್ದರೋ, ಆ ಜನರೇ ಈಗ ಒಂದೇ ವೇದಿಕೆಯಡಿ ಕುಳಿತುಕೊಳ್ಳುವಂತಹ, ಚರ್ಚಿಸುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಸೌಹಾರ್ದ ವೇದಿಕೆಯಲ್ಲಿ ಕೆಲವು ಮುಖಂಡರುಗಳು ನಿಜವಾಗಿಯೂ ಸಾಮರಸ್ಯ ಬಯಸಿದ್ದರೊ ಇಲ್ಲವೋ ಗೊತ್ತಿಲ್ಲ, ಆದರೆ ಬಹಿರಂಗವಾಗಿ ಜಾತಿ ಪ್ರಶ್ನೆಯನ್ನು ಎತ್ತದೆ ಬಹಳ ಸೂಕ್ಷ್ಮವಾಗಿ ವರ್ತಿಸಿದರು. ಹೀಗಾಗಿ ಕ್ರಮೇಣ ಸೌಹಾರ್ದ ವೇದಿಕೆ ಎನ್ನುವುದು ಒಂದು ರೀತಿಯಲ್ಲಿ ಶಾಂತಿ ಸ್ಥಳ, ಸಭೆಯಾಗಿ ಮಾರ್ಪಟ್ಟಿತು.[೨೦]

ಹೀಗೆ ಇದುವರೆಗೆ ದಾಖಲಾಗಿರುವ ಚರಿತ್ರೆಯಲ್ಲಿ ಕೇವಲ ದೇಶದ ದೊಡ್ಡ ಸಮಸ್ಯೆಗಳ ಬಗ್ಗೆಯೇ ಹೋರಾಟ ಮಾಡಿರುವುದು ಕಂಡು ಬರುತ್ತದೆ. ಆದರೆ ಆಯಾ ಪ್ರದೇಶಗಳ ಬಹು ಸೂಕ್ಷ್ಮವಾದ ವಿಚಾರಗಳು ಹಾಗೂ ಪ್ರಾದೇಶಿಕವಾದ ಸಮಸ್ಯೆಗಳನ್ನು ಇಟ್ಟುಕೊಂಡು ಹೋರಾಟ ಮಾಡಿರುವುದು ಬಹಳ ವಿರಳ. ಇಂತಹುದರಲ್ಲಿ ಎಂಥವರನ್ನು ಧೃತಿಗೆಡೆಸುವಂತಹ ಸಂದರ್ಭದಲ್ಲಿ ಮಹಿಳೆಯರೇ ಪರಿಸ್ಥಿತಿಯ ವಾಸ್ತವತೆಯನ್ನು ಅರ್ಥ ಮಾಡಿಕೊಂಡು ಬಲಿಪಶುವಾಗುತ್ತಿದ್ದ ಮಹಿಳೆಯರ ಸ್ಥಿತಿಯನ್ನು ಅರಿತು ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ, ಶಾಂತಿ ಕದಡದಂತೆ, ಮತೀಯತೆಗೆ ಆಸ್ಪದ ಕೊಡದಂತೆ ಜಾತ್ಯಾತೀತವಾಗಿ

ಹೋರಾಟ ಮಾಡಿ ಜಾತಿ ಸಾಮರಸ್ಯವನ್ನು ಕಾಪಾಡಲು ಮಾಡಿದ ಹೋರಾಟವು ಚರಿತ್ರೆಯ ಪುಟಗಳಲ್ಲಿ ಕಂಡುಬರುವ ಯಾವುದೇ ಚಳವಳಿಗಳಿಗಿಂತಲೂ ಕಡಿಮೆಯೇನಲ್ಲ.

ಸಾಮಾನ್ಯವಾಗಿ ಕೋಮು ಗಲಭೆಗಳು ನಡೆದಾಗ ಮಹಿಳೆಯರ ಮೇಲೆ ದೌರ್ಜನ್ಯಕ್ಕೆ ಗುರಿ ಮಾಡುವುದು ಸರ್ವೇಸಾಮಾನ್ಯ. ಒಂದು ಧರ್ಮೀಯರು ಭಿನ್ನ ಧರ್ಮೀಯರ ಮೇಲೆ ದೌರ್ಜನ್ಯವೆಸಗುವುದು ಕಂಡು ಬರುತ್ತದೆ. ಪುರುಷರು ತಮ್ಮ ವಿರೋಧಿಗಳ ಮೇಲಿನ ದ್ವೇಷವನ್ನು ಅವರ ಹೆಂಡತಿಯರ, ಅಕ್ಕತಂಗಿಯರ ಮೇಲೆ ತೀರಿಸಿಕೊಳ್ಳುತ್ತಾರೆ. ಯಾವ ಗಲಭೆ, ಮತೀಯತೆಯಲ್ಲಿ ಮಹಿಳೆ ನೇರವಾಗಿ ಪಾತ್ರವಹಿಸದಿದ್ದಾಗ್ಯೂ ಅವಳ ಮೇಲೆ ದೌರ್ಜನ್ಯ ಎಸಗುವುದು ಸಮಕಾಲೀನ ಬದುಕಿನ ಒಂದು ಭಾಗವೇನೋ ಎಂಬಂತಾಗಿದೆ. ಹೀಗೆ ಮಹಿಳೆಯರನ್ನು ದೈಹಿಕ ಮತ್ತು ಮಾನಸಿಕ ಕ್ಷೋಭೆಗೆ ಗುರಿಪಡಿಸುವಂತ ಬಾಬರಿ ಮಸೀದಿ ವಿವಾದ ಉದ್ಭವಿಸಿದ ಪರಿಸ್ಥಿತಿಯಲ್ಲಿ ಹಾಗಾಗದಂತೆ ಜನರಲ್ಲಿ ಜಾಗೃತಿ ಮೂಡಿಸಿ ಹೋರಾಟ ಮಾಡಿ ಮತೀಯ ಸಾಮರಸ್ಯ ಕಾಪಾಡಿದ್ದು ಗುಲಬರ್ಗಾದ ಮಹಿಳೆಯರು ಮತ್ತು ಮಹಿಳಾ ಸಂಘಟನೆಗಳು.

ಹೆಣ್ಣು ಭ್ರೂಣ ಹತ್ಯೆ ವಿರುದ್ಧ ಹೋರಾಟ

ಭಾರತೀಯ ಸಮಾಜ ಮತ್ತು ಸಂಸ್ಕೃತಿಗೆ ಅನೇಕ ಶತಮಾನಗಳ ಇತಿಹಾಸವಿದೆ. ಅಲ್ಲಿಂದ ಇಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಅವಲೋಕನ ಮಾಡಿದಾಗ ಮುಖ್ಯವಾಗಿ ತಿಳಿದು ಬರುವುದೇನೆಂದರೆ ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ ಸಮಾನ ಅವಕಾಶಗಳನ್ನು ಕೊಟ್ಟು ಮಹಿಳೆಯನ್ನು ಸಮಾನವಾಗಿ ಪರಿಗಣಿಸಿರುವ ಸಂದರ್ಭಗಳು ಬಹಳ ಕಡಿಮೆ ಎಂದೇ ಹೇಳಬಹುದು. ಸದಾ ಆಕೆಯನ್ನು ಮಿಥ್ಯಾರೋಪಗಳಿಗೆ ಗುರಿ ಮಾಡಿ ಶೋಷಣೆಗೆ ಒಳಪಡಿಸಿ ರುವುದನ್ನು ಕಾಣಬಹುದಾಗಿದೆ. ಒಂದೇ ಮಾತಿನಲ್ಲಿ ನೇರವಾಗಿ ಹೇಳುವುದಾದರೆ ನಮ್ಮ ಸಮಾಜದಲ್ಲಿ ಹೆಣ್ಣು ಶಿಶುಗಳಿಗೆ ಜನ್ಮ ನೀಡುವ ಸ್ವಾತಂತ್ರ್ಯವೂ ಮಹಿಳೆಯರಿಗೆ ಇಲ್ಲದಾಗಿದೆ. ಸಮಾಜದಲ್ಲಿ ಹೆಣ್ಣು ಸಂತಾನದ ಬಗ್ಗೆ ಅನೇಕ ಕುಟುಂಬಗಳಲ್ಲಿ ಒಲವು ಇಲ್ಲದಿರುವುದು ಕಂಡು ಬಂದಿದೆ. ಹೀಗಾಗಿ ಗರ್ಭದಲ್ಲಿ ರುವಾಗಲೇ ಭ್ರೂಣವನ್ನು ಹತ್ಯೆ ಮಾಡುವ ಪದ್ಧತಿ ಸಹಜವಾಗಿದೆ.

ಹೆಣ್ಣು ಭ್ರೂಣ ಹತ್ಯೆ ನಮ್ಮ ಸಮಾಜದಲ್ಲಿ ಅನೇಕ ಶತಮಾನಗಳಿಂದ ನಡೆದು ಬರುತ್ತಿದೆ. ಇದು ಇಂದು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರದೆ ಕರ್ನಾಟಕದಾದ್ಯಂತ ವ್ಯಾಪಕವಾಗಿ ಹಬ್ಬುತ್ತಿದೆ. ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಂತೂ ಅದು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ಹೈದರಾಬಾದ್ ಕರ್ನಾಟಕದಲ್ಲಿ ಹೆಣ್ಣು ಭ್ರೂಣಹತ್ಯೆಗೆ ಕಂಡುಬರುವ ಕಾರಣಗಳು, ಅದರ ವಿರುದ್ಧ ಆರಂಭವಾಗಿರುವ ಚಳವಳಿಗಳು ಅವುಗಳ ಸಫಲತೆ ಮತ್ತು ವಿಫಲತೆಗಳನ್ನು ವಿಶ್ಲೇಷಿಸುವುದಕ್ಕಿಂತ ಮುಂಚೆ ಹೆಣ್ಣು ಭ್ರೂಣ ಹತ್ಯೆ ಎಂದರೆ ಏನು ಎನ್ನುವ ಸಣ್ಣ ವಿವರಣೆ ಅವಶ್ಯಕವಾಗಿದೆ. ಮಗು ಗರ್ಭದಲ್ಲಿರುವಾಗಲೇ ವೈದ್ಯಕೀಯ ಪರೀಕ್ಷೆಯ ಮೂಲಕ ಅದು ಗಂಡೋ ಹೆಣ್ಣೋ ಎಂದು ಗುರುತಿಸಿ ಮಗು ಹೆಣ್ಣಾಗಿದ್ದರೆ ಗರ್ಭವನ್ನು ತೆಗೆಸಿಹಾಕುವುದನ್ನೇ ಸಾಮಾನ್ಯವಾಗಿ ಹೆಣ್ಣುಭ್ರೂಣ ಹತ್ಯೆ ಎನಿಸಿಕೊಳ್ಳುತ್ತದೆ. ಇತ್ತೀಚಿಗೆ

ಅಲ್ಟ್ರಾಸೌಂಡ್ ಡೈಗ್ನೋಸ್ಟಿಕ್ ವಿಧಾನಗಳಂಥ ನವೀನ ತಾಂತ್ರಿಕತೆಯ ಬೆಳವಣಿಗೆಯಿಂದಾಗಿ ತಾಯಿಯ ಗರ್ಭದಲ್ಲಿ ಭ್ರೂಣವಸ್ಥೆಯಲ್ಲಿರುವಾಗಲೇ ಅದರ ಲಿಂಗಪತ್ತೆ ಹಚ್ಚುವ ಸಾಧ್ಯತೆಗಳು ಕೈಗೂಡಿರುವುದರ ಪರಿಣಾಮವಾಗಿ ಬಹುದೊಡ್ಡ ಪ್ರಮಾಣದ ಹೆಣ್ಣು ಭ್ರೂಣಹತ್ಯೆಗೆ ರಾಜಮಾರ್ಗ ತೆರೆದಂತಾಗಿದೆ.[೨೧]

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಣ್ಣು ಭ್ರೂಣಹತ್ಯೆಗೆ ಕಾರಣಗಳ ಬಗ್ಗೆ ಇಲ್ಲಿನ ಅಧ್ಯಯನದಿಂದ ತಿಳಿದು ಬರುವ ಸಂಗತಿಯೆಂದರೆ 'ಹೆಣ್ಣು ಭ್ರೂಣ ಹತ್ಯೆಗೆ ನೇರ ಮತ್ತು ಮುಖ್ಯ ಕಾರಣವೆಂದರೆ ಹೆಣ್ಣು ಮಗವನ್ನು ಕುಟುಂಬದಲ್ಲಿ ಒಂದು ಸಾಮಾಜಿಕ ಹೊರೆಯೆಂದೇ ಪರಿಗಣಿಸಲಾಗುತ್ತಿದೆ. ಹೆಣ್ಣು ಮಗು ಹುಟ್ಟಿದರೆ ಕುಟುಂಬದ ಪೋಷಕರಿಗೆ ದೊಡ್ಡ ಸಮಸ್ಯೆ ಎಂದರೆ ಅವಳನ್ನು ಮದುವೆ ಮಾಡಿ ಕೊಡುವುದು ಹಾಗೂ ವರದಕ್ಷಿಣೆ ನೀಡುವುದಾಗಿದೆ. ಹಾಗೆಯೇ ಇನ್ನೊಂದು ಕಡೆ ಹೆಣ್ಣು ಮಕ್ಕಳಾದರೆ ಅಭದ್ರತೆಯ ಭಯ, ಅವಳ ಮೇಲಾಗುವ ದೌರ್ಜನ್ಯ ಮುಂತಾದ ಸಂಗತಿಗಳು ಕುಟುಂಬದ ಹಿರಿಯರನ್ನು ಸದಾ ಕಾಡುತ್ತಲೇ ಇರುತ್ತದೆ. ಹೀಗಾಗಿ ಹೆಣ್ಣು ಮಗು ಜನಿಸುವುದು ಬೇಡ ಎನ್ನುವ ಮನೋಸ್ಥಿತಿ ಹೊಂದಿರುತ್ತಾರೆ. ಇನ್ನು ಸಮಾಜದಲ್ಲಿ ಗಂಡು ಮಗುವಿಗೆ ನೀಡುತ್ತಿರುವ ಪ್ರಾಶಸ್ತ್ಯದಿಂದ ಕುಟುಂಬದಲ್ಲಿ ಒಂದು ಗಂಡು ಮಗು ಜನಿಸಿದರೆ ಅದು ಸುದೈವದ ಸಂಕೇತವೆಂದೇ ಪರಿಗಣಿಸಲಾಗುತ್ತದೆ.[೨೨] ಇನ್ನು ಈ ಭಾಗದ ಬಡತನ ಹೆಣ್ಣನ್ನು ಕುಟುಂಬಕ್ಕೆ ಹೊರೆ ಎಂದು ಭಾವಿಸಿ ಅದನ್ನು ಹುಟ್ಟುವುದಕ್ಕಿಂತ ಮುಂಚೆ ಇಲ್ಲವಾಗಿಸಿಬಿಟ್ಟರೆ ಒಳಿತಲ್ಲವೆ ಎನ್ನುವ ಆಲೋಚನೆ ಬಹಳ ಪೋಷಕರದ್ದು. ಇಂತಹ ದುರಾಲೋಚನೆಗೆ ಬೆಂಬಲ ನೀಡುವುದು ಸ್ಕ್ಯಾನಿಂಗ್ ಸೆಂಟರ್‌ಗಳು. ಮೊದಲು ಕೇವಲ ದೊಡ್ಡ ನಗರಗಳಲ್ಲಿ ದೊರೆಯುತ್ತಿದ್ದ ಸೌಲಭ್ಯ ಇಂದು ಸಣ್ಣಸಣ್ಣ ನಗರಗಳಲ್ಲಿ ಲಭ್ಯವಿದ್ದು ಕಡಿಮೆ ಆದಾಯ ಪಡೆಯುವವರಿಗೂ ಸುಲಭವಾಗಿ ದೊರೆಯುವ ಮಾರ್ಗವಾಗಿದ್ದು ಹೆಣ್ಣು ಭ್ರೂಣಹತ್ಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

ಇಂತಹ ಹೆಣ್ಣು ಭ್ರೂಣಹತ್ಯೆಯ ವಿರುದ್ಧ ಹೈದರಾಬಾದ್ ಕರ್ನಾಟಕದಾದ್ಯಂತ ಬೃಹತ್ ಹೋರಾಟ ಗಳು ನಡೆದಿವೆ ಮತ್ತು ನಡೆಯುತ್ತಿವೆ. ಇದನ್ನು ತಡೆಗಟ್ಟಲು ಯಾವ ಸರಕಾರಗಳು, ಸರಕಾರಿ ಅಧಿಕಾರಿಗಳು ಮಾಡಲಾರದ್ದನ್ನು ಇಲ್ಲಿನ ಕೆಲವು ಮಹಿಳಾ ಸಂಘಟನೆಗಳು ಮಾಡುತ್ತಿವೆ. ಅಷ್ಟೇ ಅಲ್ಲ ಇಲ್ಲಿ ಆರಂಭವಾದ ಚಳವಳಿ ಇತರ ಭಾಗಗಳಿಗೂ ಹರಡಲು ಕಾರಣವಾಗಿದೆ. ಹೆಣ್ಣು ಭ್ರೂಣಹತ್ಯ ತಡೆ ಕುರಿತಂತೆ ಕರ್ನಾಟಕ ದಾದ್ಯಂತ ಆಂದೋಲನವನ್ನಾಗಿ, ಚಳವಳಿಯನ್ನಾಗಿ ಮಾಡಿದ್ದು ಜನವಾದಿ ಮಹಿಳಾ ಸಂಘಟನೆ. ಹೆಣ್ಣು ಭ್ರೂಣಹತ್ಯೆಯನ್ನು ತಡೆಯಲು ಅದರ ವಿರುದ್ಧ ಜಾಗೃತಿ ಮೂಡಿಸಲು ಜನಸಾಮಾನ್ಯರು ಎಚ್ಚೆತ್ತುಕೊಳ್ಳುವಂತೆ ಹೋರಾಟ ಆರಂಭವಾಗಿದ್ದು ಹೈದರಾಬಾದ್ ಕರ್ನಾಟಕದಿಂದಲೆ ಎನ್ನುವುದು ಇಲ್ಲಿ ವಿಶೇಷ.

೨೦೦೫ ರಿಂದ 'ಹೆಣ್ಣು ಭ್ರೂಣ ಹತ್ಯೆ ವಿರೋಧಿ ಆಂದೋಲನ' ಎನ್ನುವ ಘೋಷಣೆಯೊಂದಿಗೆ ಹೋರಾಟ ಹೊಸ ಸ್ವರೂಪವನ್ನು ಪಡೆದುಕೊಂಡಿತು. ಆರಂಭದಲ್ಲಿ ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾ ಕಾನೂನು ಸಲಹಾ ಸಮಿತಿ, ಗುಲಬರ್ಗಾ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮ ಗಳನ್ನು ರೂಪಿಸಿಕೊಳ್ಳಲಾಯಿತು. ಜನವಾದಿಯ ಸದಸ್ಯರು ಸೇರಿ ೨೦ ದಿನಗಳ ಕಾಲ ಗುಲಬರ್ಗಾ ಮತ್ತು

ಸುತ್ತಮುತ್ತಲಿನ ಸುಮಾರು ೨೦ ಗ್ರಾಮಗಳಿಗೆ ತೆರಳಿ ಅಲ್ಲಿನ ಜನರಲ್ಲಿ ವಿಶೇಷವಾಗಿ, ಮಹಿಳೆಯರಲ್ಲಿ ಜಾಗೃತಿ ಮೂಡಿಸಿದರು. ಅದೇ ರೀತಿ ಹೈದರಾಬಾದ್ ಕರ್ನಾಟಕದಾದ್ಯಂತ ಇರುವ ಚಿಕ್ಕಪುಟ್ಟ ಸಂಘಟನೆಗಳ ಸದಸ್ಯರಿಗೂ ಇದರ ಕುರಿತು ಮಾಹಿತಿ ನೀಡಿ ಅವರ ಮೂಲಕ ಹೆಣ್ಣುಭ್ರೂಣಹತ್ಯೆ ತಡೆ ಮತ್ತು ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಲಾಯಿತು. ಸುಮಾರು ೫ ಲಕ್ಷ ಕರಪತ್ರಗಳನ್ನು ಮುದ್ರಿಸಿ ಅದರಲ್ಲಿ ಹೆಣ್ಣು ಭ್ರೂಣಹತ್ಯೆಗೆ ಸಂಬಂಧಿಸಿದಂತೆ ಕಾನೂನು ಅರಿವು ಮೂಡಿಸಿ, ಕಾನೂನಿನಲ್ಲಿ ವಿಧಿಸುವ ಶಿಕ್ಷೆ ಬಗ್ಗೆ ವಿವರಗಳನ್ನು ಕನ್ನಡದಲ್ಲಿ ಮುದ್ರಿಸಿ, ಶಾಲೆಗಳು, ಕಾಲೇಜುಗಳು ಹಾಗೂ ಮನೆ ಮನೆಗೆ ಹಂಚಲಾಯಿತು. ಗೋಡೆ ಬರಹಗಳ ಮೂಲಕವೂ ಪ್ರಚಾರ ಕೈಗೊಂಡರು. ಕಾಲೇಜುಗಳ ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೂಲಕವೂ ಜಾಗೃತಿಗೆ ಪ್ರಯತ್ನಿಸ ಲಾಯಿತು. ಕೊನೆಗೆ ಹೆಣ್ಣು ಭ್ರೂಣಹತ್ಯೆ ಕುರಿತಂತೆ ಸಂಚಿಕೆಗಳನ್ನು ಹೊರತಂದು ಅರಿವು ಮೂಡಿಸಲು ಪ್ರಯತ್ನಿಸಲಾಯಿತು.

ಹೆಣ್ಣು ಭ್ರೂಣಹತ್ಯೆ ತಡೆ ಕುರಿತಂತೆ ಹೈದರಾಬಾದ್ ಕರ್ನಾಟಕದಲ್ಲಿ ಬೃಹತ್ ಹೋರಾಟವನ್ನು ರೂಪಿಸಿದ ಕೀರ್ತಿ ಜನವಾದಿ ಮಹಿಳಾ ಸಂಘಟನೆಗೆ ಸಲ್ಲುತ್ತದೆ ಹಾಗೂ ಸಂಘಟನೆಯು ವಹಿಸಿದ ಪಾತ್ರದ ಬಗ್ಗೆ ವಿಶೇಷವಾಗಿ ದಾಖಲಿಸುವ ಅಗತ್ಯವಿದೆ. ಅಂದು ಪ್ರಾರಂಭವಾದ ಸಂಘಟನೆಯ ಹೋರಾಟ ಇಂದಿಗೂ ಮುಂದುವರೆದಿದೆ. ಭ್ರೂಣಹತ್ಯೆ ಕುರಿತಂತೆ ಸಂಘಟನೆ ತನ್ನ ಹೋರಾಟಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಿಕೊಂಡಿದೆ. ಮೊದಲನೆಯದಾಗಿ ಹೆಣ್ಣು ಭ್ರೂಣವನ್ನು ಪತ್ತೆ ಮಾಡುವ ಸ್ಕ್ಯಾನಿಂಗ್ ಕೇಂದ್ರಗಳ ಮೇಲೆ ನಿಗಾ ಇಡುವುದು, ಕಾನೂನಿಗೆ ವಿರುದ್ಧವಾಗಿ ಮಾಡುವ ಭ್ರೂಣ ಪತ್ತೆ ಮಾಡುವ ಕೃತ್ಯದ ವಿರುದ್ಧ ಆ ಕೇಂದ್ರಗಳ, ವ್ಯಕ್ತಿಗಳ ವಿರುದ್ಧ ಮೊಕದ್ದಮೆ ದಾಖಲಿಸುವುದು ಹಾಗೂ ಮುಂಜಾಗ್ರತೆ ಕ್ರಮವಾಗಿ ಯಾರಾದರೂ ಇಂತಹ ಪ್ರಯತ್ನಗಳನ್ನು ಮಾಡಿದರೆ ಅದನ್ನು ತಡೆಗಟ್ಟುವುದಾಗಿದೆ. ಎರಡನೆಯದಾಗಿ ಶಾಲಾ ಕಾಲೇಜುಗಳಿಗೆ ತೆರಳಿ ಇದರ ಬಗ್ಗೆ ಜಾಗೃತಿ ಮೂಡಿಸುವುದು. ಮೂರನೆಯದಾಗಿ ಈ ನಿಟ್ಟಿನಲ್ಲಿ ಬಿಗಿ ಕಾನೂನುಗಳನ್ನು ಜಾರಿಗೊಳಿಸುವಂತೆ ಸರಕಾರದ ಮೇಲೆ ಒತ್ತಡ ತರುವುದು.

ಇಂತಹ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಜಾರಿ ತರಲು ಅಥವಾ ಈ ನಿಟ್ಟಿನಲ್ಲಿ ಕಾರ್ಯ ಕೈಗೊಳ್ಳಲು ಪ್ರತಿ ಜಿಲ್ಲೆ, ತಾಲೂಕು ಮತ್ತು ಹೋಬಳಿಗಳಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಯಿತು. ಇಂತಹ ಹೋರಾಟಗಳಲ್ಲಿ ಆಸಕ್ತಿ ಇರುವವರನ್ನು ಗುರುತಿಸಿ ಸದಸ್ಯರನ್ನಾಗಿ ಮಾಡಿಕೊಂಡು ಸಮಾಜದ ಕೆಳಮಟ್ಟದಿಂದ ಕೆಲಸ ಮಾಡಲು ಆರಂಭಿಸಲಾಯಿತು. ಇವತ್ತಿಗೂ ಇದರ ಸಮಿತಿಗಳು ಬಹಳ ಆಳವಾಗಿ ಕೆಲಸ ಮಾಡುತ್ತಿವೆ. ಹೋರಾಟದ ಸಮಯದಲ್ಲಿ ಇವರ ಘೋಷಣೆಗಳೆಂದರೆ,

'ಹೆಣ್ಣುಮಕ್ಕಳನ್ನು ಉಳಿಸಿ ಮಾನವ ಕುಲ ಉಳಿಸಿ'

'ವರದಕ್ಷಿಣೆ ಕೈಬಿಡಿ ಗೌರವದ ಆಸ್ತಿಹಕ್ಕು ಕೊಡಿ'.

ಇಂತಹ ಘೋಷಣೆಗಳ ಮೂಲಕ ಸಮಾಜದಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಲಾರಂಭಿಸಿದರು. ಇಂದಿಗೂ ಸಂಘಟನೆ ಇದೇ ನಿಟ್ಟಿನಲ್ಲಿ ಹೋರಾಟವನ್ನು ಮುಂದುವರೆಸಿದೆ. ಆದರೆ ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇಲ್ಲಿ ಹೆಣ್ಣು ಭ್ರೂಣಹತ್ಯೆ ಕುರಿತು ಚಳವಳಿಗೆ ಬೇಕಾದ ಪೂರಕ ವಾತಾವರಣ ಆಶಾದಾಯಕವಾಗಿ ಕಾಣುತ್ತಿಲ್ಲ ಮತ್ತು ಹೋರಾಟವನ್ನು ಅರ್ಪಣ ಮನೋಭಾವದಿಂದ ಮಾಡುವ ಜನರೂ ಕಾಣುತ್ತಿಲ್ಲ. ಜೊತೆಗೆ ಅಂತರ್ಗತವಾದ ಹೋರಾಟಗಳಲ್ಲಿ ಜನರು ತಮ್ಮನ್ನು ತೊಡಗಿಸಿಕೊಳ್ಳುವ ಅನಿವಾರ್ಯತೆ ಎದ್ದು ಕಾಣುತ್ತಿದೆ.

ಹೆಣ್ಣು ಭ್ರೂಣಹತ್ಯೆಯೆನ್ನುವುದು ವಾಸ್ತವದಲ್ಲಿ ಎರಡು ಹೆಣ್ಣುಗಳ ಮೇಲೆ ಏಕಕಾಲದಲ್ಲಿ ನಡೆಯುವ ದೌರ್ಜನ್ಯ. ಅಂದರೆ ಗರ್ಭಧರಿಸಿದ ತಾಯಿ ಹಾಗೂ ಹೆಣ್ಣು ಭ್ರೂಣ ಎರಡು ಜೀವಿಗಳ ಮೇಲೂ ನಡೆಯುವ ಆಕ್ರಮಣ ಹಿಂಸೆಯ ಒಂದು ಕರಾಳ ರೂಪ. ಇಲ್ಲಿ ಹೆಣ್ಣು ಹತ್ಯೆಗೂ, ಕೊಲೆಗೂ ವ್ಯತ್ಯಾಸವಿಲ್ಲ. ವಿಪರ್ಯಾಸವೆಂದರೆ ಇಂತಹ ಕೃತ್ಯಗಳಲ್ಲಿ ತೊಡಗಿರುವವರು ಭ್ರೂಣಹತ್ಯೆಯನ್ನು ಕೊಲೆಯೆಂದಾಗಲಿ, ಅಕ್ಷಮ್ಯವಾದ ಅಪರಾಧ ಎಂದಾಗಲೀ ಪರಿಗಣಿಸಲಿಲ್ಲ. ಈ ಕೃತ್ಯದಲ್ಲಿ ಭಾಗಿಗಳಾದವರಿಗೆ ಯಾವ ಶಿಕ್ಷೆಯೂ ಆಗುತ್ತಿಲ್ಲ. ಇಲ್ಲಿ ಸಮಾಜದ ಹಿತದೃಷ್ಟಿಯಿಂದ ಮಾನವನ ಭವಿಷ್ಯದ ದೃಷ್ಟಿಯಿಂದ ಚಿಂತನೆ ಮಾಡಿದಾಗ ಹೆಣ್ಣು ಭ್ರೂಣಹತ್ಯೆ ಮಹಿಳೆಯರ ಸಂಖ್ಯಾ ಪ್ರಮಾಣದ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.[೨೩] ಭವಿಷ್ಯದಲ್ಲಿ ಹೆಣ್ಣುಮಕ್ಕಳ ಸಂಖ್ಯೆಯ ಕುಸಿತ ಮತ್ತೊಂದು ಬೃಹತ್ ಸಮಸ್ಯೆಗೆ ಕಾರಣವಾಗುತ್ತದೆ ಎನ್ನುವುದನ್ನು ತೀವ್ರವಾಗಿ ಎಲ್ಲರೂ ಆಲೋಚಿಸಬೇಕಾದ, ಮುನ್ನಚ್ಚರಿಕೆವಹಿಸಬೇಕಾದ ಕಾಲ ಬಂದಿದೆ. ಭವಿಷ್ಯದಲ್ಲಿ ಅನುಪಾತದಲ್ಲಿ ಹೆಣ್ಣಿನ ಸಂಖ್ಯೆ ಕುಸಿಯುತ್ತಾ ಹೋಗಿ ತೀವ್ರ ಕೊರತೆ ಬಂದರೆ ಆಗುವ ಅನಾಹುತಗಳನ್ನು ಊಹಿಸಲು ಸಾಧ್ಯವಿಲ್ಲ.

ಪ್ರಸ್ತುತ ಹೈದರಾಬಾದ್ ಕರ್ನಾಟಕದಲ್ಲಿ ಅನಕ್ಷರತೆ, ನಿರುದ್ಯೋಗ, ಬಡತನ, ಕಂದಾಚಾರ ಹಾಗೂ ಮಹಿಳಾ ಸಮಾನತೆಗಾಗಿ ಲಿಂಗಭೇದ ನೀತಿಯ ವಿರುದ್ಧ ಚಳವಳಿಯನ್ನು ಸಂಘಟಿಸಬೇಕಾದ ಅನಿವಾರ್ಯತೆಯಿದೆ. ಇಡೀ ಸಮಾಜ ಈ ನಿಟ್ಟಿನಲ್ಲಿ ಸ್ವಾಭಿಮಾನಿ ಚಳವಳಿಯನ್ನು ನಡೆಸಬೇಕಾಗಿದೆ. ಆಗ ಮಾತ್ರ ಒಟ್ಟು ಸಮಾಜದ ಬದಲಾವಣೆಯೊಂದಿಗೆ ಅನಿಷ್ಟ ಪದ್ಧತಿಯೂ ತೊಲಗಲು ಸಾಧ್ಯವಾಗುತ್ತದೆ. ಜೊತಗೆ ಮಹಿಳೆಯರ, ಕುಟುಂಬದವರ ಮನೋಭಾವದಲ್ಲಿ ಬದಲಾವಣೆಯಾಗಬೇಕು. ಲಿಂಗಪತ್ತೆ, ಭ್ರೂಣಹತ್ಯೆ ಮುಂತಾದವುಗಳಿಗೆ ಬಿಗಿ ಕ್ರಮ ಮತ್ತು ತಂತ್ರಜ್ಞಾನದ ದುರ್ಬಳಕೆಗೆ ಕಠಿಣಕ್ರಮ ಜಾರಿಯಾಗ ಬೇಕು. ಇಲ್ಲದಿದ್ದರೆ ಮಹಿಳೆ ಪುರುಷರಲ್ಲಿನ ಲಿಂಗಾನುಪಾತದಲ್ಲಿ ವ್ಯತ್ಯಾಸ, ಮಹಿಳೆಯರ ಸ್ಥಾನಮಾನದಲ್ಲಿ ವ್ಯತ್ಯಾಸ ಸಾಮಾಜಿಕ ಹಕ್ಕುಗಳ ಉಲ್ಲಂಘನೆ, ಹೆಣ್ಣಿನ ಮೇಲೆ ಶೋಷಣೆ, ಹಿಂಸೆ, ದೈಹಿಕ ದುಷ್ಪರಿಣಾಮ ಹೆಚ್ಚಾಗಿ ಸ್ತ್ರೀಯನ್ನು ಪೂಜಿಸುವ ದೇವತೆಯನ್ನಾಗಿ ಆರಾಧಿಸುವ ಭಾರತದ ಸಮಾಜಕ್ಕೆ, ಕಳಂಕ ಬರುವ ಅಪಾಯ ನಮ್ಮ ಮಂದಿದೆ.

ಕುಮಾರಸ್ವಾಮಿ ದೇವಸ್ಥಾನಕ್ಕೆ ಹೆಣ್ಣು ಮಕ್ಕಳ ಪ್ರವೇಶಕ್ಕಾಗಿ ಹೋರಾಟ

ಸಮಾಜದಲ್ಲಿ ನಡೆದಿರುವ ಮತ್ತು ನಡೆಯುತ್ತಿರುವ ಕೆಲವು ಘಟನೆಗಳನ್ನು, ಚಳವಳಿಗಳನ್ನು ಗಮನಿಸಿದಾಗ ಅವು ಸಂದರ್ಭಕ್ಕೆ ತಕ್ಕಂತೆ ಉದ್ಭವಿಸಿ ಆಯಾಕಾಲದ, ಆಯಾ ಸ್ಥಳದ ಸಮಸ್ಯೆಗಳಿಗೆ ಸ್ಪಂದಿಸುವಂತೆ ರೂಪುಗೊಳ್ಳುವುದನ್ನು ನೋಡಬಹುದು. ಕೆಲವೊಂದು ಸಮಸ್ಯೆಗಳಲ್ಲಿ ಹೋರಾಟಗಳು ಚಳವಳಿಗಳ ಸ್ವರೂಪದಲ್ಲಿ ಆಗದೆ ವ್ಯಕ್ತಿಗತ ರೂಪದಲ್ಲಿ ಕಂಡು ಬರುತ್ತದೆ. ಅಂದರೆ ಹೋರಾಟಗಳಿಗೆ ವ್ಯಕ್ತಿಗಳ, ಜನರ ಬೆಂಬಲವಿದ್ದರೂ ಬಾಹ್ಯವಾಗಿ ಸಾಮೂಹಿಕವಾಗಿ ಬೆಂಬಲ ಸೂಚಿಸುವ, ಹೋರಾಟ ಕ್ಕಿಳಿಯುವ ಅಥವಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿರುತ್ತಾರೆ. ಏಕೆಂದರೆ ಎಲ್ಲೋ ಒಂದು ಕಡೆ ಪಾರಂಪರಿಕವಾಗಿ ಬಂದಂತಹ ವಿಚಾರಗಳನ್ನು, ಸಂಪ್ರದಾಯಗಳನ್ನು ವಿರೋಧಿಸಲಿಕ್ಕೆ ಸಾಧ್ಯವಾಗುವುದಿಲ್ಲ ಅಥವಾ ಇನ್ನು ಕೆಲವರು, ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಗೆ ವಿರುದ್ಧವಾಗಿ ಹೋದರೆ ನಮ್ಮ ಕುಟುಂಬಕ್ಕೆ ಕಂಟಕ ಬಂದರೆ ಏನು ಮಾಡುವುದು ಎಂಬ ಭವಿಷ್ಯದ ದೂರಾಲೋಚನೆಯಲ್ಲಿ ತಮ್ಮ ಅಭಿಪ್ರಾಯಗಳನ್ನು, ವಿರೋಧಗಳನ್ನು, ಅಸಮಾನತೆಯನ್ನು ಹತ್ತಿಟ್ಟುಕೊಳ್ಳಬೇಕಾದ ಅನಿವಾರ್ಯತೆ ಯಲ್ಲಿರುತ್ತಾರೆ. ಹೀಗಾಗಿ ಧಾರ್ಮಿಕ ನೆಲೆಯಲ್ಲಿ ಸ್ತ್ರೀಶೋಷಣೆಯ ವಿರುದ್ಧ ಬೌದ್ಧಿಕ ನೆಲೆಯ ಪ್ರತಿಭಟನೆಗಳು ನಡೆದಿವೆ. ಇದಕ್ಕೆ ಉದಾಹರಣೆ ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲೂಕಿನಲ್ಲಿರುವ ಕುಮಾರಸ್ವಾಮಿ ದೇವಾಲಯ.

ಬಳ್ಳಾರಿ ಜಿಲ್ಲೆಯ ಸಂಡೂರು ಒಂದು ಸಂಸ್ಥಾನವಾಗಿತ್ತು. ಇಲ್ಲಿನ ಬೆಟ್ಟದ ಮೇಲೆ ಪ್ರಸಿದ್ಧ ಐತಿಹಾಸಿಕ ಕುಮಾರಸ್ವಾಮಿ ದೇವಸ್ಥಾನವಿದೆ. ಆರಂಭದಲ್ಲಿ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಕುಮಾರಸ್ವಾಮಿ ದೇವಸ್ಥಾನಕ್ಕೆ ಮಹಿಳೆಯರಿಗೂ, ದಲಿತರಿಗೂ ಶತಶತಮಾನಗಳಿಂದ ಪ್ರವೇಶ ನಿರಾಕರಿಸ ಲಾಗಿತ್ತು. ಹಿಂದೊಮ್ಮೆ ಮಹಾತ್ಮಾಗಾಂಧೀಜಿಯವರು ಅಂದಿನ ಮಹಾರಾಜರ ಮೂಲಕ ದಲಿತರ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿದ್ದರು. ಆದರೆ ಮಹಿಳೆಯರಿಗೆ ಮಾತ್ರ ಪ್ರವೇಶಾವಕಾಶವನ್ನು ನಿರಾಕರಿಸಲಾಗಿತ್ತು. ಮಹಿಳೆಯರಿಗೆ ದೇವಸ್ಥಾನಕ್ಕೆ ಪ್ರವೇಶಾವಕಾಶ ನಿರಾಕರಣೆಗೆ ಬಗ್ಗೆ ಮೌಖಿಕ ಕಥನಗಳಿವೆ. ಮೌಖಿಕ ಕಥನದ ಪ್ರಕಾರ ಕುಮಾರಸ್ವಾಮಿ ತನ್ನ ತಾಯಿ ಪಾರ್ವತಿಯನ್ನು ಬಹಳ ಭಕ್ತಿ ಗೌರವದಿಂದ ಆರಾಧಿಸುತ್ತಿದ್ದು ಎಂದೂ ತಾಯಿಯ ಮಾತನ್ನು ಮೀರುತ್ತಿರಲಿಲ್ಲ. ಒಮ್ಮೆ ಅವನ ತಾಯಿ ಅವನಿಗೆ ವಿವಾಹ ಮಾಡಲು ಹುಡುಗಿಯನ್ನು ನೋಡಿಕೊಂಡು ಬಂದು, ಆ ಹುಡುಗಿ ತನ್ನಂತೆ ಇರುವಳೆಂದು, ನನ್ನ ಗುಣಲಕ್ಷಣಗಳನ್ನೆ ಹೊಂದಿದ್ದಾಳೆಂದು ಹೇಳಿದಾಗ, ಕುಮಾರಸ್ವಾಮಿ ನಿನ್ನಂತೆ ಇರುವವಳನ್ನು ಹೇಗೆ ವಿವಾಹವಾಗಲಿ ಎಂದು ಪ್ರಶ್ನಿಸಿ ವಿವಾಹವನ್ನು ನಿರಾಕರಿಸುತ್ತಾನೆ. ಆದರೆ ಅವನ ತಾಯಿ ಅದೇ ಹುಡುಗಿಯನ್ನು ವಿವಾಹವಾಗುವಂತೆ ಪಟ್ಟು ಹಿಡಿಯುತ್ತಾಳೆ. ಆಗಲೂ ಕುಮಾರಸ್ವಾಮಿ ಇದಕ್ಕೆ ಒಪ್ಪದಿದ್ದಾಗ ಅವನ ತಾಯಿ ನೀನು ನನ್ನ ಮಗನಲ್ಲ, ಯಾವತ್ತು ನನ್ನ ನೋಡಬೇಡ ಹೊರಟು ಹೋಗು ಎಂದು ಹೇಳಿದಾಗ, ಕುಮಾರಸ್ವಾಮಿಯು ನಾನು ಕೂಡ ಇನ್ನು ಮುಂದೆ ಯಾವ ಹೆಣ್ಣು ಮಕ್ಕಳನ್ನು ನೋಡುವುದಿಲ್ಲವೆಂದು, ಬೆಟ್ಟದ ಮೇಲೆ

ಹೋಗಿ ನೆಲೆಸಿ ಆಧ್ಯಾತ್ಮಿಕ ಕಾರ್ಯದಲ್ಲಿ ತೊಡಗಿ ಪವಾಡ ಪುರುಷನೆನಿಸಿಕೊಂಡ. ಈ ಹಿನ್ನೆಲೆಯಲ್ಲಿ ಆ ದೇವಸ್ಥಾನಕ್ಕೆ ಯಾವ ಹೆಣ್ಣು ಮಕ್ಕಳು ಹೋಗುತ್ತಿರಲಿಲ್ಲ.[೬೪]

ಆದರೆ ಈ ವಿಷಯಕ್ಕೆ ಹೊಸ ತಿರುವು ಬಂದಿದ್ದು ೧೯೯೪ರಲ್ಲಿ ಪ್ರೊ. ಮಲ್ಲಿಕಾ ಘಂಟಿಯವರು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಅಧ್ಯಾಪಕಿಯಾಗಿ ಬಂದ ಮೇಲೆ. ಒಮ್ಮೆ ಸಂಡೂರಿನ ಸಮುದಾಯ ಭವನದಲ್ಲಿ ಇತಿಹಾಸ ಅಕಾಡೆಮಿಯಿಂದ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಆ ಸಮ್ಮೇಳನದಲ್ಲಿ ಡಾ. ಕಲಬುರ್ಗಿ, ಮಲ್ಲಿಕಾಘಂಟಿ ಮುಂತಾದವರು ಭಾಗವಹಿಸಿದ್ದರು. ನಂತರ ಇವರೆಲ್ಲಾ ಕುಮಾರಸ್ವಾಮಿ ದೇವಸ್ಥಾನವನ್ನು ನೋಡಲು ಹೋದಾಗ ಅಲ್ಲಿ ಮಹಿಳೆಯರಿಗೆ ಪ್ರವೇಶವಕಾಶವಿಲ್ಲದಿರುವುದನ್ನು ತಿಳಿದ ಡಾ. ಕಲಬುರ್ಗಿಯವರು ಏಕೆ ಇಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ ಎಂದು ಪ್ರಶ್ನಿಸಿದರು. ಡಾ. ಮಲ್ಲಿಕಾಘಂಟಿ ಮತ್ತು ಮುಂತಾದವರಿಗೆ ಆ ಸಂದರ್ಭದೊಳಗೆ ಕಾಡತೊಡಗಿದ, ವಿಚಾರವೆಂದರೆ, ಸರಕಾರದ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯ ಇದಾಗಿದ್ದು ಇಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ ಎನ್ನುವುದು ಸರಿಯೇ, ಸರಕಾರದ ಮಟ್ಟದಲ್ಲಿ ಲಿಂಗತಾರತಮ್ಯ ಎನ್ನುವುದು ತಪ್ಪಲ್ಲವೆ ಎನ್ನುವ ಸಣ್ಣ ಪ್ರಮಾಣದ ತಿಳುವಳಿಕೆ ಮೂಡಲಾರಂಭಿಸಿತು. ಇದರ ವಿಚಾರವಾಗಿ ಸ್ಥಳೀಯರಲ್ಲಿ ಪ್ರಶ್ನಿಸಿದಾಗ ಶತಮಾನಗಳಿಂದ ನಂಬಿಕೆ ಇಟ್ಟುಕೊಂಡು ಬಂದಿದ್ದ ಸ್ಥಳೀಯರು ಮಹಿಳೆಯರು ಇದನ್ನು ಪ್ರಶ್ನಿಸುವ ಅಥವಾ ಇದರ ಕುರಿತು ಪ್ರತಿಕ್ರಿಯಿಸುವ ಸ್ಥಿತಿಯಲ್ಲಿರಲಿಲ್ಲ. ಇನ್ನು ಕೆಲವರಿಗೆ ಪ್ರಶ್ನಿಸುವ ಪ್ರತಿಭಟಿಸುವ ಚಿಂತನೆಯಿದ್ದರೂ ಧಾರ್ಮಿಕ ವಿಚಾರಕ್ಕೆ, ಸಮಾಜಕ್ಕೆ, ತಮ್ಮ ಕುಟುಂಬಕ್ಕೆ ಹೆದರಿ ಇದರ ಬಗ್ಗೆ ಧ್ವನಿ ಎತ್ತುವ ಮನೋಸ್ಥಿತಿಯಲ್ಲಿರಲಿಲ್ಲ.

ಆದರೆ, ೧೯೯೫ರಲ್ಲಿ ಗುಲಬರ್ಗಾದಲ್ಲಿ ಮಹಿಳಾ ಸಮಾವೇಶ ನಡೆದಾಗ ದೇವಸ್ಥಾನಕ್ಕೆ ಪ್ರವೇಶ ಕುರಿತು ವಿಚಾರ ಚರ್ಚೆಗೆ ಬಂದಿತು. ಇದರ ಬಗ್ಗೆ ಚರ್ಚೆ ಆದ ನಂತರ ಆ ಮಹಿಳಾ ಸಮಾವೇಶದ ಬೇಡಿಕೆಗಳಲ್ಲಿ 'ಸಂಡೂರಿನ ಕುಮಾರಸ್ವಾಮಿ' ದೇವಸ್ಥಾನಕ್ಕೆ ಮಹಿಳೆಯರಿಗೆ ಪ್ರವೇಶ ನೀಡುವ ವಿಚಾರವನ್ನು ಒಂದು ಪ್ರಮುಖ ಬೇಡಿಕೆಯನ್ನಾಗಿ ಇಡಲಾಗಿತ್ತು. ಆದರೆ ವಿಷಯ ತಿಳಿದ ಕೆಲವು ಸಂಪ್ರದಾಯವಾದಿಗಳು, ಪಟ್ಟಾಭದ್ರ ಹಿತಾಸಕ್ತಿಗಳ ಗುಂಪು ಇದನ್ನು ವಿರೋಧಿಸುವ ಕರಪತ್ರಗಳನ್ನು ಗುಲಬರ್ಗಾ, ಸಂಡೂರು, ಬಳ್ಳಾರಿ, ಬೆಂಗಳೂರು ಹೀಗೆ ಎಲ್ಲಾ ಕಡೆ ಹಂಚಿ ಭಯಾನಕವಾದ ವಾತಾವರಣವನ್ನೇ ಸೃಷ್ಟಿಸಿದ್ದರು. ಮಲ್ಲಿಕಾಘಂಟಿಯವರು ನಂದಿಹಳ್ಳಿಗೆ ವಾಪಸ್ ಬಂದಾಗ ಅವರಿಗೆ ಕೆಲವರು ಬೆದರಿಕೆ ಹಾಕತೊಡಗಿದರು. ಆಗ ಇದು ಹೊಸ ರೀತಿಯ ಬೆಳವಣಿಗೆಗೆ ಕಾರಣವಾಯಿತು.

೧೯೯೫-೯೬ರಲ್ಲಿ ಹಾಸನದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ವಿಷಯಾಧಾರಿತ ವಾಗಿ ಮಾತನಾಡುವಾಗ ಇವರು ಮಹಿಳೆಯರಿಗೆ ಕುಮಾರಸ್ವಾಮಿ ದೇವಸ್ಥಾನದ ಪ್ರವೇಶದ ನಿರಾಕರಣೆಯ ಬಗ್ಗೆ ಮಾತನಾಡಿದರು. ದೇವಸ್ಥಾನ ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು, ಅದಕ್ಕೆ ವಾರ್ಷಿಕವಾಗಿ ನೀಡುವ ಹಣ ಜನಸಾಮಾನ್ಯರು ಕಟ್ಟುವ ತೆರಿಗೆಯಿಂದ ಸಂದಾಯವಾಗುವುದು. ಜನಸಾಮಾನ್ಯರಲ್ಲಿ

ಮಹಿಳೆಯರು ಇರುವರು. ಅವರು ಸರಕಾರಕ್ಕೆ ತೆರಿಗೆ ಕಟ್ಟಿರುತ್ತಾರೆ. ಹೀಗಾಗಿ ಜನ ಸಾಮಾನ್ಯರೆಲ್ಲರೂ ಕಟ್ಟುವ ತೆರಿಗೆಯ ಹಣದ ಮೇಲೆ ಆಡಳಿತ ನಡೆಸುವ ದೇವಸ್ಥಾನದಲ್ಲಿ ಮಹಿಳೆಯರಿಗೆ ಪ್ರವೇಶ ನಿರಾಕರಿಸುವುದು ಸಂವಿಧಾನದ ಉಲ್ಲಂಘನೆಯಾಗಿದೆ ಸಂವಿಧಾನದ ಆಶಯದಂತೆ ಲಿಂಗತಾರತಮ್ಯ, ಜಾತಿ ತಾರತಮ್ಯವನ್ನು ಮಾಡಕೂಡದು ಎಂದು ಮಾತನಾಡಿದರು. ನಂತರ ಮಾರನೇ ದಿನಪತ್ರಿಕೆಗಳಲ್ಲಿ ಈ ವಿಷಯವನ್ನು ಬಹುದೊಡ್ಡ ವಿಷಯವನ್ನಾಗಿ ಪ್ರಕಟಿಸಿ, ಚರ್ಚಿಸಿ, ಎಲ್ಲಾ ಕಡೆ ಚರ್ಚೆ ನಡೆಯುವಂತಾಯಿತು. ಆಗ ವಿಷಯ ಸಂಡೂರಿನ ಮುತ್ಸದ್ಧಿ ರಾಜಕಾರಣಿ ಸನ್ಮಾನ್ಯ ಶ್ರೀ ಎಂ.ವೈ. ಘೋರ್ಪಡೆ ಅವರಿಗೂ ತಲುಪಿತು. ಇವರು ವಿಷಯದ ಬಗ್ಗೆ ಪ್ರತಿಕ್ರಿಯಿಸುತ್ತಾ, ನಾವು ಮಹಿಳೆಯರಿಗೆ ದೇವಸ್ಥಾನದ ಪ್ರವೇಶವನ್ನು ಸ್ವಾಗತಿಸುತ್ತೇವೆ, ಇಲ್ಲಿಯವರೆಗೂ ಒಂದು ನಂಬಿಕೆ ಆಧಾರದ ಮೇಲೆ ಅಲ್ಲಿಗೆ ಮಹಿಳೆಯರು ಹೋಗುತ್ತಿರಲಿಲ್ಲವೆ ಹೊರತು, ಅದು ಒಂದು ನಿಷೇಧಿತ ಪದ್ಧತಿ ಆಗಿಲ್ಲ ಮತ್ತು ಇದುವರೆಗೆ ಇಂತಹ ಬೇಡಿಕೆ, ಒತ್ತಾಯ ಬಂದಿರಲಿಲ್ಲ, ಯಾವ ಮಹಿಳೆಯರು ಪ್ರವೇಶವನ್ನು ಬಯಸಿ ಧ್ವನಿಯೆತ್ತಿರಲಿಲ್ಲ, ಆದರೆ ಈಗ ಅವರು ಬಯಸಿದ್ದಾದರೆ ಅವರು ದೇವಸ್ಥಾನವನ್ನು ಮುಕ್ತವಾಗಿ ಪ್ರವೇಶಿಸುವುದಕ್ಕೆ ನಮ್ಮ ಸಹಾಯ, ಒಪ್ಪಿಗೆ, ರಕ್ಷಣೆ ಇದೆ ಎನ್ನುವ ಅಭಿಪ್ರಾಯವನ್ನು ತಿಳಿಸಿದರು.

ಆದರೆ ಆ ಸಮಯದಲ್ಲಿ ಕೆಲವು ಸ್ಥಳೀಯರು ಈ ವಿಚಾರ ಕುರಿತು ವಿರೋಧ ವ್ಯಕ್ತಪಡಿಸಿದರಲ್ಲದೆ ಮಲ್ಲಿಕಾಘಂಟಿಯವರ ಮೇಲೆ ಹಲ್ಲೆ ಮಾಡಲಾಯಿತು. ಸ್ಥಳೀಯವಾಗಿ ಇವರಿಗೆ ಭಯ ಹೆಚ್ಚಾದಾಗ ಶ್ರೀ ಘೋರ್ಪಡೆಯವರಿಗೆ ಪತ್ರ ಬರೆದು ಇವರ ಉದ್ದೇಶ ತಿಳಿಸುವ ಅನಿವಾರ್ಯತೆ ಎದುರಾಯಿತು. ಅವರು ರಾಜಪರಂಪರೆಯಲ್ಲಿದ್ದವರು, ರಾಜಕೀಯ ಮುಖಂಡರಾಗಿದ್ದರಿಂದ ಒಮ್ಮೆಲೇ ಹೋಗಿ ಭೇಟಿ ಮಾಡಲು ಸಾಧ್ಯವಿರಲಿಲ್ಲ. ಅದಕ್ಕಾಗಿ ಭೇಟಿಗೆ ದಿನಾಂಕ, ಸಮಯ ತೆಗೆದುಕೊಳ್ಳಬೇಕಿತ್ತು. ಹಾಗಾಗಿ ಅನುಮತಿಗಾಗಿ ಪತ್ರ ಬರೆಯುತ್ತಾ, ಇದು ವ್ಯಕ್ತಿಗತವಾಗಿ ನಿಮ್ಮನ್ನು ಅಥವಾ ಯಾರನ್ನು ವಿರೋಧಿಸುವ ಸಲುವಾಗಿ ಇದನ್ನು ಕೈಗೊಂಡಿಲ್ಲ. ಸಹಜವಾದ ಸಂದರ್ಭದಲ್ಲಿ ಇಂತಹ ಧ್ವನಿ ಎತ್ತಲಾಗಿದೆ ಎಂದು ಬರೆದಿದ್ದರು. ಆ ಕಾಗದ ಮುಟ್ಟಿದ ತಕ್ಷಣ ಅವರು ಸ್ವತಃ ತಮ್ಮ ಪಿ.ಎ. ಅವರನ್ನು ಕಳುಹಿಸಿ ಅವರನ್ನು ಕರೆಸಿಕೊಂಡು ಚರ್ಚೆ ಮಾಡಿದರು.

ಶ್ರೀ ಘೋರ್ಪಡೆಯವರು ಮಾತನಾಡುತ್ತಾ, ನಮ್ಮ ತಂದೆಯವರ ಕಾಲದಲ್ಲಿ ಗಾಂಧೀಜಿಯವರು ಇಲ್ಲಿಗೆ ೧೯೩೪ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಸಂಸ್ಥಾನಕ್ಕೆ ಆಹ್ವಾನಿಸಿದಾಗ, ಗಾಂಧೀಜಿಯವರು ಕುಮಾರಸ್ವಾಮಿ ದೇವಾಲಯದ ವಿಚಾರವಾಗಿ, ಎಲ್ಲಿ ದಲಿತರಿಗೆ ಪ್ರವೇಶಕ್ಕೆ ಅವಕಾಶವಿಲ್ಲವೋ, ಅಲ್ಲಿಗೆ ನಾನು ಬರುವುದಿಲ್ಲ ಎಂದು ಹೇಳಿದಾಗ, ನಮ್ಮ ತಂದೆಯವರು ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶವನ್ನು ಅವರ ಸಮ್ಮುಖದಲ್ಲೆ ನೀಡಿದ್ದರು. ಹಾಗಾಗಿ ನಾವು ಕೂಡ ಇಂತಹ ವಿಚಾರಗಳಲ್ಲಿ ಬಹಳ ಉದಾರ ಮನೋಭಾವದವರಾಗಿದ್ದೇವೆ, ಆದರೆ ಇಂದಿನವರೆಗೂ ಇದರ ಬಗ್ಗೆ ಯಾವ ಮಹಿಳೆಯರು ಕೇಳಿರಲಿಲ್ಲ, ಈಗ ನೀವು ಇದನ್ನು ಕೇಳಿದ್ದು ನಮಗೆ ಬಹಳ ಸಂತೋಷ ಆಗಿದೆ ಇದಕ್ಕೆ ನಮ್ಮ

ಸಂಪೂರ್ಣ ಸಮ್ಮತಿ ಇದೆ ಎಂದು ತಿಳಿಸಿದರು. ಜೊತೆಗೆ ಮಲ್ಲಿಕಾಘಂಟಿಯವರಿಗೆ ಇದ್ದ ಆತಂಕವನ್ನು ನಿವಾರಿಸುತ್ತಾ, ನಿಮ್ಮ ರಕ್ಷಣೆಗೆ ನಾವಿದ್ದೇವೆ ಎಂದು ಹೇಳುವುದರ ಜೊತೆಗೆ ಪೊಲೀಸ್ ರಕ್ಷಣೆಯನ್ನು ಒದಗಿಸಿದರು ಹಾಗೂ ದೇವಸ್ಥಾನಕ್ಕೆ ಮಹಿಳೆಯರು ಹೋಗಬಹುದು ಎಂದು ಘೋಷಿಸಿದರು. ಇದು ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಹೀಗಾಗಿ ಮಲ್ಲಿಕಾಘಂಟಿಯವರ ನೇತೃತ್ವದಲ್ಲಿ ಅಪಾರಸಂಖ್ಯೆಯ ಮಹಿಳೆಯರು ದೇವಸ್ಥಾನವನ್ನು ಪ್ರವೇಶಿಸಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು.[೭೫] ಶತಮಾನಗಳಿಂದ ಪ್ರವೇಶದ ಅವಕಾಶದಿಂದ ವಂಚಿತರಾಗಿ, ಲಿಂಗತಾರತಮ್ಯತೆಗೆ ಈಡಾಗಿದ್ದ ಮಹಿಳೆಯರನ್ನು ಇದರಿಂದ ಹೊರತಂದರು.

ಆದರೆ ದುರಂತ ಏನು ಅಂದರೆ ಇವತ್ತಿಗೂ ಸ್ಥಳೀಯ ಮಹಿಳೆಯರು ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗುವುದಿಲ್ಲ ಹೊರಗಿನಿಂದ ಬಂದ ಮಹಿಳೆಯರೆಲ್ಲರೂ ಅಲ್ಲಿಗೆ ಹೋಗಿ ಬರುತ್ತಾರೆ. ಅವರಿಗೆ ಯಾರಿಗೂ ಏನೂ ಆಗಿಲ್ಲ. ಆದರೆ ಸ್ಥಳೀಯ ಮಹಿಳೆಯರು ಕೌಟುಂಬಿಕ ಪಾರಂಪರಿಕ ನಿಲುವು, ನಂಬಿಕೆಯಿಂದ ಅಲ್ಲಿಗೆ ಹೋಗುತ್ತಿಲ್ಲವೇನೋ, ಆದರೆ ಅವರ ಸೊಸೆಯಂದಿರು ಹೋಗಿ ಬರುತ್ತಾರೆ. ಅಂದರೆ ಇಲ್ಲಿ ಹುಟ್ಟಿ ಬೆಳೆದಂತ ಮಹಿಳೆಯರು ಅಲ್ಲಿಗೆ ಹೋಗುತ್ತಿಲ್ಲ. ಒಟ್ಟನಲ್ಲಿ ಕುಮಾರಸ್ವಾಮಿ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಕುರಿತು ನಡೆದ ಹೋರಾಟದ ಹಿನ್ನೆಲೆಯನ್ನು ನೋಡಿದಾಗ ಏಕವ್ಯಕ್ತಿಯ ನೆಲೆಯಲ್ಲಿ ನಡೆದಿರುವುದು ಕಂಡು ಬರುತ್ತದೆ. ಇಂದಿಗೂ ಮಲ್ಲಿಕಾಘಂಟಿಯವರು ಈ ಭಾಗದ ಬಹುದೊಡ್ಡ ಮಹಿಳಾ ಹೋರಾಟಗಾರರಾಗಿ ಕಂಡು ಬರುತ್ತಾರೆ. ಹಾಗೆಯೇ ಇಲ್ಲಿನ ಹೋರಾಟದ ಸಂದರ್ಭವನ್ನು ಅವಲೋಕಿಸಿದರೆ ನಮ್ಮ ಮಹಿಳೆಯರ ಮನೋಸ್ಥಿತಿ ಹೇಗಿದೆಯೆಂದರೆ ಒಂದಷ್ಟು ಹೊರಗಿನ ಒತ್ತಡಗಳು ಮತ್ತು ಒಂದಷ್ಟು ಒಳಗಿನ ಒತ್ತಡಗಳಿಗೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಹಾಗಾಗಿ ಇವರ ಬಿಡುಗಡೆ ಹೊರಗಿನಿಂದಲೂ ಮತ್ತು ಒಳಗಿನಿಂದಲೂ ಆಗಬೇಕಾಗಿದೆ.

ದೇವಸ್ಥಾನಕ್ಕೆ ಪ್ರವೇಶ ಮಾಡಬೇಕು ಎನ್ನುವ ಅಭಿಪ್ರಾಯ ಇವರ ಒಳಗೆ ರೂಪಗೊಳ್ಳದಿದ್ದರೆ ಪ್ರವೇಶಕ್ಕೆ ಹಾತೊರೆಯುತ್ತಿರಲಿಲ್ಲ ಮತ್ತು ಹೋಗುವ ದಾರಿಯು ಗೊತ್ತಾಗುತ್ತಿರಲಿಲ್ಲ. ಅದೇ ಸಂದರ್ಭದೊಳಗೆ ಅವಕಾಶ ಕೊಡಬೇಕು ಎನ್ನುವ ತಿಳುವಳಿಕೆ ಘೋರ್ಪಡೆಯವರಿಗೂ ಇಲ್ಲದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಅಂದರೆ ಇದು ನಮ್ಮಲ್ಲಿ ಹುಟ್ಟಿಕೊಂಡಾಗ ಮಾತ್ರ ಅದಕ್ಕೆ ಪರಿಹಾರ ಸಿಗುತ್ತದೆ.

ಪಡಿತರ ಚೀಟಿಗಾಗಿ ಹೋರಾಟ

ಕರ್ನಾಟಕದಲ್ಲಿಯೆ ಅತ್ಯಂತ ಹಿಂದುಳಿದಿರುವ ಬಡತನಕ್ಕೀಡಾಗಿರುವ ಪ್ರದೇಶಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಮೊದಲ ಸ್ಥಾನದಲ್ಲಿದೆ. ಹೀಗಾಗಿ ಇಲ್ಲಿ ಎಷ್ಟೋ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು ದಿನಗೂಲಿಕಾರರು ಬಡತನ ರೇಖೆಗಿಂತ ಕೆಳಗಿದ್ದಾರೆ ಹಾಗೂ ಇವರಿಗೆ ಸರಿಯಾದ ನಿರಂತರ ಉದ್ಯೋಗ ದೊರಕದೆ ಅರೆಉದ್ಯೋಗದಲ್ಲಿ ನಿರತರಾಗಿದ್ದು ಅತಿ ಕಡಿಮೆ ಕೂಲಿ, ಆದಾಯ ಹೊಂದಿದ್ದಾರೆ.

ಹೀಗಾಗಿ ಬಹಳಷ್ಟು ಜನರು ಸರಕಾರದಿಂದ ಸಿಗುವ ಸೌಲಭ್ಯಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ಅದರಲ್ಲೂ ಪಡಿತರ ಚೀಟಿಯ ಮೇಲೆ ಹೆಚ್ಚು ಅವಲಂಬನೆ ಆಗಿದ್ದಾರೆ. ಆದರೆ ಪಡಿತರ ಚೀಟಿಯ ವಿತರಣೆ ಮತ್ತು ಬಳಕೆಯಲ್ಲಿನ ದುರ್ಬಳಕೆ ಉಂಟಾಗಿತ್ತು. ಒಂದು ಮನೆಯವರು ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳನ್ನು ಹೊಂದಿದ್ದಾರೆ, ಅರ್ಹರಿಗಿಂತಲೂ ಅನರ್ಹರು ಇದರ ಉಪಯೋಗ ಪಡೆಯುತ್ತಿದ್ದಾರೆ ಎನ್ನುವ ಕಾರಣದಿಂದ ಸರಕಾರ ಎಲ್ಲಾ ವರ್ಗದವರ ಪಡಿತರ ಚೀಟಿಗಳನ್ನು ವಾಪಸ್ ಪಡೆದು ಹೊಸ ಪಡಿತರ ಚೀಟಿಗಳನ್ನು ನೀಡುವ ಘೋಷಣೆ ಮಾಡಿತು. ಆದರೆ ಈ ಕಾರ್ಯ ಬಹಳ ವಿಳಂಬವಾಗಿ ಪಡಿತರ ಚೀಟಿ ಬಳಕೆದಾರರು ಬಹಳ ತೊಂದರೆ ಅನುಭವಿಸಬೇಕಾಯಿತು. ಇದನ್ನು ವಿರೋಧಿಸಿ ಇಲ್ಲಿನ ಮಹಿಳೆಯರು ದೊಡ್ಡ ಹೋರಾಟವನ್ನು ಕೈಗೊಂಡರು. ಹೈದರಾಬಾದ್ ಕರ್ನಾಟಕದ ಮಹಿಳೆಯರು ತೀವ್ರವಾಗಿ ಮಾಡಿದಂಥ ಹೋರಾಟವನ್ನು ಬೇರೆ ಇನ್ಯಾವ ಭಾಗದಲ್ಲೂ ಮಾಡಿದ ಮಾಹಿತಿ ಇಲ್ಲ.

ಹೈದರಾಬಾದ್ ಕರ್ನಾಟಕದಲ್ಲಿ ಪಡಿತರ ಚೀಟಿಗಾಗಿ ನಡೆದ ಹೋರಾಟ ಮತ್ತು ಅದರ ಪರಿಣಾಮಗಳನ್ನು ನೋಡುವುದಕ್ಕಿಂತ ಮುಂಚೆ, ಪಡಿತರ ಚೀಟಿ ಎಂದರೇನು, ಅದನ್ನು ಜಾರಿಗೆ ತಂದ ಉದ್ದೇಶ ಅದರ ಸಾಧಕಬಾಧಕಗಳ ಬಗ್ಗೆ ವಿಶ್ಲೇಷಿಸುವುದು ಮುಖ್ಯವಾಗಿದೆ. ಕರ್ನಾಟಕ ಸರಕಾರವು ಕೈಗೊಂಡಿರುವ ಅನೇಕ ಜನಹಿತ ಕಾರ್ಯಕ್ರಮಗಳಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಲು ಕೈಗೊಂಡಿರುವ ಕುಟುಂಬ ಪಡಿತರ ಚೀಟಿಯ ಯೋಜನೆ ಅತ್ಯಂತ ಮಹತ್ತರವಾದ ಒಂದು ಕಾರ್ಯಕ್ರಮವಾಗಿದೆ. ಯೋಜನೆಯಲ್ಲಿ ರಾಜ್ಯದ ಪ್ರತಿಯೊಂದು ಕುಟುಂಬದ ಆದಾಯದ ತಳಹದಿಯ ಮೇಲೆ ಕುಟುಂಬಗಳನ್ನು ಎಪಿಲ್ ಮತ್ತು ಬಿಪಿಎಲ್ ಎನ್ನುವ ಎರಡು ವರ್ಗಗಳನ್ನಾಗಿ ವಿಂಗಡಿಸಿ, ಇಬ್ಬರಿಗೂ ವಿಭಿನ್ನ ರೀತಿಯ ಸೌಲಭ್ಯಗಳನ್ನು ಒದಗಿಸುವ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಈ ಮೂಲಕ ನಾಗರಿಕರಿಗೆ ಅತ್ಯಂತ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಆಯಾ ಊರಿನ ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸುವ ಏರ್ಪಾಟನ್ನು ಮಾಡಲಾಗಿದೆ. ಯೋಜನೆಯಿಂದ ಕೆಳವರ್ಗದ, ಬಡವರ್ಗದ, ಕೂಲಿ, ದಿನಕೂಲಿ ಕಾರ್ಮಿಕರಿಗೆ, ಮಧ್ಯಮವರ್ಗದ ನಾಗರಿಕರಿಗೆ ಜೀವನ ನಿರ್ವಹಣೆಗೆ ಅತ್ಯಂತ ಉಪಯೋಗವಾಗಿದೆ. ಅದರಲ್ಲೂ ಹೈದರಾಬಾದ್ ಕರ್ನಾಟಕದಂತ ಹಿಂದುಳಿದ ಬರ ಪೀಡಿತ ಪ್ರದೇಶದ ಜನರಿಗಂತೂ ಯೋಜನೆ ವರವಾಗಿ ಪರಿಣಮಿಸಿದೆ. ಯಾವುದೇ ಬೆಲೆ ಏರಿಕೆಯ ಬಿಸಿ ಆಹಾರ ಧಾನ್ಯಗಳ ಕೊರತೆ ಇವುಗಳ ಪರಿಣಾಮವಿಲ್ಲದೆ ಪ್ರತಿ ತಿಂಗಳು ಸರಕಾರ ನಿಗದಿಪಡಿಸಿದ ದರದಲ್ಲಿ ಮತ್ತು ನಿಗದಿಪಡಿಸಿದಷ್ಟು ಅಕ್ಕಿ, ಗೋಧಿ, ಸಕ್ಕರೆ ಮತ್ತು ಎಣ್ಣೆಯನ್ನು ಸರಬರಾಜು ಮಾಡಲಾಗುತ್ತದೆ. ಬಿಪಿಎಲ್ ಕಾರ್ಡುದಾರರಿಗೆ ಒಂದು ಕೆ.ಜಿ. ಅಕ್ಕಿಗೆ ರೂ. ೩.೫೦, ಗೋಧಿ ರೂ. ೪.೫೦, ಸಕ್ಕರೆ ೧೫ ರೂ.ನಂತೆ ನೀಡುತ್ತಿದೆ.

ಯೋಜನೆಯಿಂದ ಅದರಲ್ಲೂ ಬಡ ಮತ್ತು ಕೆಳವರ್ಗದವರಿಗೆ ಜೀವನ ನಿರ್ವಹಣೆಗೆ ಅತ್ಯಗತ್ಯವಾದ ಆಹಾರ ಧಾನ್ಯಗಳು ಅತೀ ಕಡಿಮೆ ಬೆಲೆಗೆ ಸಿಗುವಂತಾಗಿ, ದಿನನಿತ್ಯದ ಊಟದ ಸಮಸ್ಯೆಯಿರಲಿಲ್ಲ. ಆದರೆ

ಕ್ರಮೇಣ ಯೋಜನೆಯ ಜಾರಿಯಲ್ಲಿ ಮತ್ತು ಬಳಕೆಯಲ್ಲಿ ಅನೇಕ ದೋಷಗಳು, ಸಮಸ್ಯೆಗಳು ಉದ್ಭವವಾದವು. ಅಂದರೆ ಕುಟುಂಬಗಳಿಗಿಂತಲೂ ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಾಗಿ ನಕಲಿ ಪಡಿತರ ಚೀಟಿಗಳು ವಿತರಣೆಯಾದವು. ಮತ್ತೊಂದೆಡೆ ಅರ್ಹರಿಗಿಂತಲೂ ಅನರ್ಹವರ್ಗದವರಿಗೆ ಬಿಪಿಎಲ್ ಕಾರ್ಡುಗಳು ವಿತರಿಸಲ್ಪಟ್ಟವು. ಹೀಗಾಗಿ ಆಹಾರ ಪೂರೈಕೆ ಮತ್ತು ವಿತರಣೆಯಲ್ಲಿ ತೊಂದರೆ ಉಂಟಾಗಿ ಸಮಸ್ಯೆಗೆ ನಾಂದಿಯಾಯಿತು. ಇದರಿಂದಾಗಿ ಎಸ್.ಎಂ. ಕೃಷ್ಣರವರ ಸರಕಾರ ಸುಮಾರು ೫,೦೦,೦೦೦ ಪಡಿತರ ಚೀಟಿಗಳನ್ನು ವಾಪಸ್ ಪಡೆಯಿತು. ನಂತರ ಬಿಪಿಎಲ್ ಹಾಗೂ ಎಪಿಎಲ್ ಕುಟುಂಬದ ಅಧಿಕೃತ ಸಮೀಕ್ಷೆ ನಂತರ ಕಂಪ್ಯೂಟರ್ ಆಧಾರಿತ ಕಾರ್ಡ್‌ಗಳನ್ನು ವಿತರಿಸುವ ಯೋಜನೆ ರೂಪಿಸಿತು.

ರಾಜ್ಯಾದ್ಯಾಂತ ಪ್ರತಿಯೊಂದು ಕುಟುಂಬದ ಸದಸ್ಯರ ವಾಸ ದೃಢೀಕರಣ, ಇತರ ವಿವರಗಳನ್ನು ಗಣಕಯಂತ್ರದ ಮೂಲಕ ದಾಖಲಿಸಲು ಏಕಾಏಕಿ ಕಾರ್ಯ ಆರಂಭವಾಯಿತು. ಆದರೆ ಒಂದೇ ಸಮಯದಲ್ಲಿ ಈ ರೀತಿಯ ದಾಖಲೀಕರಣ ಕಾರ್ಯ ಕೈಗೊಂಡಿದ್ದು ಕೆಲವು ಗೊಂದಲಗಳಿಗೆ ಕಾರಣವಾಯಿತು. ಏಕೆಂದರೆ ಪ್ರತಿಯೊಂದು ಊರಿನಲ್ಲಿ ದಾಖಲಾತಿಗೆ ಸಮಯಾವಕಾಶ ನೀಡಿದ್ದು ಕೇವಲ ಮೂರರಿಂದ ನಾಲ್ಕು ದಿನ ಮಾತ್ರ. ಆ ಸಮಯದಲ್ಲಿ ಬೇರೆ ಊರಿಗೆ ಹೋದವರು, ಬೇರೆ ಊರಿಗೆ ಉದ್ಯೋಗ ಅರಸಿ ಹೋದವರಿಗೆ ನಿರ್ದಿಷ್ಟ ದಿನ ಬಂದು ತಮ್ಮ ಭಾವಚಿತ್ರ, ವಿವರ ನೀಡಲು ಕಷ್ಟವಾಯಿತು. ಇನ್ನೊಂದು ಕಡೆ ಕುಟುಂಬದ ಸದಸ್ಯರ ಸೇರ್ಪಡೆ ಬಗ್ಗೆ ಗೊಂದಲ ಸೃಷ್ಟಿಯಾಯಿತು. ಬಡತನರೇಖೆಗಿಂತ ಕೆಳಹಂತದಲ್ಲಿರುವವರು ಬಡತನರೇಖೆಗಿಂತ ಮೇಲಿರುವವರನ್ನು ಗುರುತಿಸುವ ಬಗ್ಗೆ ದಾಖಲು ಅಧಿಕಾರಿಗಳಾಗಲಿ ಅಥವಾ ಸ್ಥಳೀಯ ಪಟ್ಟಣ ಪಂಚಾಯಿತಿಗಳಾಗಲಿ ಯಾವುದೇ ವಿವರ ಮಾಹಿತಿ ಕೊಡಲಿಲ್ಲ. ಹಾಗೆಯೇ ಉದ್ಯೋಗ ನಿಮಿತ್ತ ಬೇರೆ ಊರಿಗೆ ಹೋಗಿ ಅಲ್ಲಿ ನೆಲೆಸಿದವರ, ಹೊಸದಾಗಿ ವಿವಾಹವಾಗಿ ಕುಟುಂಬಕ್ಕೆ ಸೇರ್ಪಡೆ ಆದವರು ಯಾವ ರೀತಿ ದಾಖಲಾತಿ ವಿವರ ನೀಡಬೇಕು ಎನ್ನುವ ಮಾಹಿತಿಯನ್ನೇ ಸ್ಪಷ್ಟವಾಗಿ ನೀಡಲಿಲ್ಲ. ಹೀಗಾಗಿ ಈ ಪ್ರಕ್ರಿಯೆ ಗೊಂದಲಕ್ಕೀಡಾಯಿತು.

ಇನ್ನು ಒಂಟಿ ಮಹಿಳೆ ಅಥವಾ ಪುರುಷರು ಇನ್ನೊಂದು ರೀತಿಯ ಸಮಸ್ಯೆಯನ್ನು ಎದುರಿಸಬೇಕಾಗಿತ್ತು. ಮಕ್ಕಳು ದುಡಿಯಲಿಕ್ಕೆ ಬೇರೆ ಬೇರೆ ಊರಿಗೆ ಹೋಗುವಾಗ ದೊಡ್ಡ ಅಥವಾ ಸಣ್ಣ ಮಗ ತಮ್ಮ ಜೊತೆ ಪಡಿತರ ಚೀಟಿ ತೆಗೆದುಕೊಂಡು ಹೋಗಿದ್ದರು. ಆದರೆ ಈಗ ಇವರಿಗೆ ಪಡಿತರ ಚೀಟಿ ಇಲ್ಲದ ಹಾಗಾಯಿತು. ಇಂತಹ ತೊಂದರೆಗೆ ಈಡಾದವರು ಹೈದರಾಬಾದ್ ಕರ್ನಾಟಕದಲ್ಲಿಯೇ ಬಹಳ ಸಂಖ್ಯೆಯಲ್ಲಿದ್ದರು. ಕೊನೆಗೆ ವರ್ಷಗಳ ನಂತರ ದಾಖಲಾತಿ ಪ್ರಕ್ರಿಯೆ ಮುಗಿದರೂ ಬೇರೆ ಕಾರ್ಡ್‌ಗಳನ್ನು ತ್ವರಿತವಾಗಿ ವಿತರಿಸುವಲ್ಲಿ ಸರಕಾರ ಮತ್ತು ಅಧಿಕಾರಿಗಳು ವಿಫಲರಾದರು. ಇದರಿಂದ ಪಡಿತರ ಚೀಟಿಗಳಿಲ್ಲದೆ ಬಡವರು, ಕೆಳವರ್ಗದವರು ಸಂಕಷ್ಟಕ್ಕೀಡಾದರು. ಯಾವ ಹಳ್ಳಿಗಳಿಗೆ ಹೋದರೂ ಅಲ್ಲಿನ ಮಹಿಳೆಯರು ಮೊದಲು ಕೇಳುತ್ತಿದ್ದುದು ಪಡಿತರ ಚೀಟಿಗಳನ್ನ. ಆಗ ಎಲ್ಲಾ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ಮಹಿಳೆಯರ ಒಂದೇ ಒಂದು ಬೇಡಿಕೆ, ಕೂಗು ಎಂದರೆ ಪಡಿತರ ಚೀಟಿಗಳನ್ನು ಬೇಗನೆ ಕೊಡಿ ಎನ್ನುವುದಾಗಿತ್ತು.

ಇಂತಹ ಪರಿಸ್ಥಿತಿಯನ್ನು ನೋಡಿದ ಜನವಾದಿ ಮುಂತಾದ ಮಹಿಳಾ ಸಂಘಟನೆಗಳು ಪಡಿತರ ಚೀಟಿಗಳನ್ನು ತ್ವರಿತವಾಗಿ ವಿತರಿಸುವಂತೆ ಅಧಿಕಾರಿಗಳ ಮೇಲೆ ಒತ್ತಡ ಹೇರಿದರು. ಆದರೆ ಅಧಿಕಾರಿಗಳು ಹೇಳುತ್ತಿದ್ದುದೇನೆಂದರೆ ಒಂದೊಂದು ಮನೆಯಲ್ಲಿ ಎರಡೆರಡು ಪಡಿತರ ಚೀಟಿಗಳಿವೆ. ನಾವು ಎರಡೆರಡು ಸಲ ಸರ್ವೇ ಮಾಡಿದಾಗಲೂ ಕೆಲವು ಕುಟುಂಬಗಳು ಪಡಿತರ ಚೀಟಿಗಳನ್ನು ದುರುಪಯೋಗಪಡಿಸಿ ಕೊಂಡಿರುವುದು ಕಂಡುಬಂದಿದೆ. ಹಾಗಾಗಿ ಅದು ಬಗೆಹರಿಯುವವರೆಗೆ ಚೀಟಿಗಳನ್ನು ನೀಡಲಾಗುವುದಿಲ್ಲ ಎಂದರು. ಇದರಿಂದ ಬೇಸರಗೊಂಡ ಮಹಿಳೆಯರು ಅಧಿಕಾರಿಗಳ, ಸರಕಾರಗಳ ವಿರುದ್ಧ ಪಡಿತರ ಚೀಟಿ ಪಡೆಯಲು ದೊಡ್ಡ ಹೋರಾಟವನ್ನೆ ಆರಂಭಿಸಿದರು.

ಇಲ್ಲಿ ಮುಖ್ಯವಾಗಿ, ದೊಡ್ಡಸಂಖ್ಯೆಯಲ್ಲಿ ಮಹಿಳೆಯರೆ ಹೋರಾಟ ಆರಂಭಿಸಲು ಕಾರಣವೇನೆಂದರೆ, ಬಡ ಮತ್ತು ಕೆಳವರ್ಗದ ಪುರುಷರು ಮನೆಯ, ಸಂಸಾರ ನಡೆಸುವ ಜವಾಬ್ದಾರಿಗಿಂತ, ಪ್ರತಿದಿನದ ಕೂಲಿ, ಆದಾಯ ಸಂಪಾದನೆಗಾಗಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ಮನೆಯಿಂದ ಹೊರಗಡೆಯೆ ಇರುತ್ತಾರೆ ಮತ್ತು ಆ ಬಗ್ಗೆಯೇ ಹೆಚ್ಚು ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ತಾವು ಗಳಿಸಿದ ಹಣದ ಸ್ವಲ್ಪ ಭಾಗವನ್ನು ಮನೆಯ ಖರ್ಚಿಗೆ ಕೊಟ್ಟು ಸುಮ್ಮನಾಗಿ ಬಿಡುತ್ತಾರೆ. ಆದರೆ ಇರುವ ಹಣದಲ್ಲೇ ಊಟ, ಬಟ್ಟೆ ಮುಂತಾದ ಎಲ್ಲಾ ಖರ್ಚುವೆಚ್ಚಗಳನ್ನು ನೋಡಿಕೊಳ್ಳುವವರು ಹೆಣ್ಣುಮಕ್ಕಳೆ. ಪಡಿತರ ಚೀಟಿಯಲ್ಲಿ ಕಡಿಮೆ ಹಣದಲ್ಲಿ ಆಹಾರ ಧಾನ್ಯಗಳ ಸಿಗದಿದ್ದರೆ ದುಬಾರಿ ಹಣಕೊಟ್ಟು ಆಹಾರ ಧಾನ್ಯಗಳನ್ನು ಖರೀದಿಸುವುದು ಅನಿವಾರ್ಯವಾಗುತ್ತದೆ. ಆದರೆ ದುಬಾರಿ ಬೆಲೆ ಕೊಟ್ಟುಕೊಳ್ಳುವ ಸ್ಥಿತಿಯಲ್ಲಿ ಇವರು ಇರುವುದಿಲ್ಲ. ಹೀಗಾಗಿ ಪ್ರತಿನಿತ್ಯ ಬೇಕಿರುವ ಆಹಾರಧಾನ್ಯಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ಇವರಿಗೆ ಎದುರಾಯಿತು.

ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರೆಲ್ಲಾ ಸೇರಿ ತಮಗೆ ಯಾವುದಾದರೊಂದು ದಾರಿಯನ್ನು ಮಾಡುವಂತೆ ವಿವಿಧ ಸಂಘಟನೆಗಳ, ಜನಪ್ರತಿನಿಧಿಗಳ ಮೊರೆ ಹೋದರು. ಆಗ ಇವರ ಪರವಾಗಿ ನಿಂತವರು ಮಹಿಳಾ ಸಂಘಟನೆಗಳು. ಇವರು ಪಡಿತರ ಚೀಟಿಯನ್ನು ಬೇಗನೆ ನೀಡಿ ಅಥವಾ ಅಲ್ಲಿಯವರೆಗೆ ಬೇರೆ ವ್ಯವಸ್ಥೆ ಮಾಡಿ ಎಂದು ಒತ್ತಡ ಹೇರತೊಡಗಿದರು. ಇದಕ್ಕಾಗಿ ಅನೇಕ ಸಭೆಗಳನ್ನು ಆಯೋಜಿಸಿದರು. ಸಭೆಗಳಲ್ಲಿ, ಹೋರಾಟದಲ್ಲಿ ತೊಡಗಿದ ಮಹಿಳೆಯರ ಮೊದಲ ಪ್ರಶ್ನೆ ಎಂದರೆ, ಅಧಿಕಾರಿಗಳು ಮತ್ತು ಸರಕಾರದ ದೃಷ್ಟಿಯಲ್ಲಿ ಜನ ಭ್ರಷ್ಟರಾಗಿದ್ದಾರೆ ಎನ್ನುವುದು ತುಂಬಿಕೊಂಡುಬಿಟ್ಟಿದೆ. ಆದರೆ ಜನ ಭ್ರಷ್ಟರಾಗಲು ಕಾರಣವೇನು, ಹಾಗೆ ಮಾಡಿದವರ್‍ಯಾರು, ಅದನ್ನು ಸರಕಾರ ಮೊದಲು ಆತ್ಮ ವಿಮರ್ಶೆ ಮಾಡಿಕೊಳ್ಳಲಿ ಎಂದು ಸರಕಾರದ ವಿರುದ್ಧ ಘೋಷಣೆ ಕೂಗಲಾರಂಬಿಸಿದರು. ಯಾರೋ ಕೆಲವರು ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳನ್ನು ತೆಗೆದುಕೊಂಡಿದ್ದಾರೆ. ಅವುಗಳ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಕಾರಣದಿಂದ ನಿಜವಾದ ಬಡವರ, ಊಟಕ್ಕೂ ಗತಿಯಿಲ್ಲದ ಜನರಿಗೆ ಸೌಲಭ್ಯದಿಂದ ವಂಚಿತರನ್ನಾಗಿ ಮಾಡಿರುವುದು ಎಷ್ಟು ನ್ಯಾಯ ಎನ್ನುವುದನ್ನು ಪ್ರಶ್ನಿಸಲಾಯಿತು.

ಗುಲಬರ್ಗಾದಲ್ಲಿ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಯ ಸಂದರ್ಭದಲ್ಲಿ, ಮಹಿಳೆಯರು ಮಾತನಾಡುತ್ತಾ, ಪಡಿತರ ಚೀಟಿಯಿಂದ ವಿತರಿಸುವ ಧಾನ್ಯಗಳ ಮೇಲೆ ಅವಲಂಬಿತರಾಗಿರುವ ಬಡತನ ರೇಖೆಗಿಂತ ಕೆಳಗಿರುವ, ಹೆಚ್ಚು ಆದಾಯ ಇರದ, ಹೆಚ್ಚು ಹಣ ಕೊಟ್ಟು ಧಾನ್ಯಗಳನ್ನು ಕೊಂಡುಕೊಳ್ಳಲಾರದ ಜನರ ಬಗ್ಗೆ ಸರಕಾರಕ್ಕೆ ಸ್ವಲ್ಪವೂ ಕಾಳಜಿ ಇಲ್ಲ. ನಿಜವಾಗಿ ಸೌಲಭ್ಯ ಯಾರಿಗೆ ತಲುಪಬೇಕಿತ್ತೋ ಯಾರ ಜೀವನಕ್ಕೆ ಆಧಾರವಾಗಬೇಕಿತ್ತೋ, ಅವರಿಗೆ ಅನ್ಯಾಯವಾಗಿದ್ದನ್ನು ಉದಾಹರಣೆಗಳೊಂದಿಗೆ ತಿಳಿಸುತ್ತಾ ಪ್ರತಿಭಟಿಸಲಾಯಿತು.[21]

ಇದೇ ಸಂದರ್ಭದಲ್ಲಿ ಬೌದ್ಧಿಕ ನೆಲೆಗಟ್ಟಿನಲ್ಲಿ, ವಿಚಾರವಂತ, ಪ್ರಜ್ಞಾವಂತ ಮತ್ತು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಹೊಂದಿರುವ ಮಹಿಳೆಯರ ಗುಂಪೊಂದು ಡಾ. ಮೀನಾಕ್ಷಿ ಬಾಳಿಯವರ ನೇತೃತ್ವದಲ್ಲಿ ವಿಭಿನ್ನ ರೀತಿಯಲ್ಲಿ ಹೋರಾಟಕ್ಕಿಳಿಯಿತು. ಉಪನ್ಯಾಸಕಿಯಾಗಿ, ಲೇಖಕಿಯಾಗಿ, ಜನವಾದಿ ಮಹಿಳಾ ಸಂಘಟನೆಯ ಸದಸ್ಯರಾಗಿರುವ ಡಾ. ಮೀನಾಕ್ಷಿ ಬಾಳಿ ಅವರ ವಿಚಾರಗಳು ನಿಜವಾಗಿಯೂ ಚಿಂತನೆಗೆ ಹಚ್ಚುವಂತಿದ್ದವು. ಉದಾಹರಣೆಗೆ ಅವರು ಜಿಲ್ಲಾಧಿಕಾರಿಗಳನ್ನು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ, ಸಮಸ್ಯೆಗೆ ಸಂಬಂಧಪಟ್ಟಂತೆ ತಾತ್ಕಾಲಿಕ ಪರಿಹಾರ ಕೈಗೊಳ್ಳುವಂತೆ ಒತ್ತಡ ಹೇರಿದರು. ಆದರೆ ಅಧಿಕಾರಿಗಳು ನಕಲಿ ಪಡಿತರ ಚೀಟಿಯನ್ನೇ ಎತ್ತಿಹಿಡಿದು ಮಾತನಾಡುತ್ತಾ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಆಗ ಡಾ. ಮೀನಾಕ್ಷಿ ಬಾಳಿ ಅವರ ವಾದವೇನೆಂದರೆ, ನಕಲಿ ಪಡಿತರ ಚೀಟಿಯನ್ನು ಎಷ್ಟು ಜನ ಹೊಂದಿದ್ದಾರೆ. ಒಂದು ಇಪ್ಪತ್ತು ಅಥವಾ ಶೇಕಡ ಇಪ್ಪತ್ತೈದು ಇರಬಹುದು. ಆದರೆ ಶೇಕಡ ಇಪ್ಪತ್ತೈದು ಜನರ ಕೃತ್ಯಕ್ಕೆ, ಉಳಿದ ಶೇಕಡ ಎಪ್ಪತ್ತೈದು ಜನರನ್ನು ಏಕೆ ಬಲಿ ಕೊಡುತ್ತೀರಿ. ಯಾರೋ ಸ್ವಲ್ಪ ಜನರು ಮೋಸ ಮಾಡಿದರೆಂದು ಎಲ್ಲರನ್ನು ಏಕೆ ಹಸಿವಿಗೆ, ಕಷ್ಟಕ್ಕೆ ದೂಡುತ್ತೀರಿ ಎಂದು ತಿಳಿ ಹೇಳಿದರು.

ಡಾ. ಮೀನಾಕ್ಷಿ ಬಾಳಿಯವರು ಗುಲಬರ್ಗಾದ ಒಂದು ಸಭೆಯಲ್ಲಿ ಮಾತನಾಡುತ್ತಾ, ನಕಲಿ ಪಡಿತರ ಚೀಟಿಯಿಂದ ಜನ ಮೋಸ ಮಾಡಿ ಧಾನ್ಯಗಳನ್ನು ಖರೀದಿಸಿದರೆ ಅದರಿಂದ ಅವರು ಎಷ್ಟು ಲಾಭ ಮಾಡಿಕೊಳ್ಳಬಹುದು ಅಥವಾ ಸರಕಾರಕ್ಕೆ ಎಷ್ಟು ನಷ್ಟವಾಗಬಹುದು, ಎಲ್ಲಾ ಸೇರಿದರು ಲಕ್ಷಗಳ ಲೆಕ್ಕದಲ್ಲಿ ಆಗಬಹುದು. ಆದರೆ ರಾಜ್ಯಾದ್ಯಂತ ಒಂದೊಂದು ಯೋಜನೆಗಳಲ್ಲಿ, ಕಾಮಗಾರಿಗಳಲ್ಲಿ ಕೋಟಿಗಟ್ಟಲೆ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವವರ ವಿರುದ್ಧ ಯಾವುದೇ ಕ್ರಮ ಏಕೆ ತೆಗೆದುಕೊಳ್ಳುತ್ತಿಲ್ಲ. ನಕಲಿ ಮತ್ತು ಹಣದ ದುರ್ಬಳಕೆಯ ವಿಷಯವಾಗಿ ಸರಕಾರ ಎಷ್ಟು ಯೋಜನೆಗಳನ್ನು ನಿಲ್ಲಿಸಿದೆ, ರದ್ದುಗೊಳಿಸಿದೆ ಅಥವಾ ಗುರುತಿಸಿದೆ. ಕಣ್ಣೆದುರಿಗೆ ನಡೆಯುವ ರಸ್ತೆ, ಸೇತುವೆ, ಕಟ್ಟಡಗಳ ನಿರ್ಮಾಣದ ಕಳಪೆ ಕಾಮಗಾರಿಗಳ ಬಗ್ಗೆ ಸುಮ್ಮನಿರುವ, ಹಣ ಬಿಡುಗಡೆ ಮಾಡುವ ಸರಕಾರ ಏಕಾಏಕಿ ಇಂತಹ ಯೋಜನೆಯಲ್ಲಿ ಮಾತ್ರ ಇಂತಹ ನಿರ್ಧಾರ ತೆಗೆದುಕೊಂಡಿದ್ದು ಸರಿಯಿಲ್ಲ ಎಂದು ಸರಕಾರದ ಕ್ರಮವನ್ನೆ ವಿರೋಧಿಸಿದರು.[22]

ಇದೇ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಕೆ. ನೀಲಾ ಅವರು ಬಹಳ ಸೂಕ್ಷ್ಮ ವಿಚಾರವೊಂದನ್ನು ಆಧಾರ ಸಮೇತ ತೋರಿಸಿಕೊಟ್ಟರು. ಅದೇನೆಂದರೆ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದ ಸಂದರ್ಭದಲ್ಲಿ ಗುಲಬರ್ಗಾ, ಬೀದರ್, ಮುಂತಾದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋದಾಮುಗಳಲ್ಲಿ ಸಾವಿರಾರು ಟನ್ ಅಕ್ಕಿ, ಗೋಧಿ ಉಪಯೋಗ ಆಗದೆ ಹುಳ ಬಿದ್ದಿರುವ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಎತ್ತಿ ತೋರಿಸಿದರು. ಹಾಗಾಗಿ ಸಾವಿರಾರು ಟನ್ ಧಾನ್ಯಗಳನ್ನು ಹಾಳು ಮಾಡುವುದರ ಬದಲು ಬಡವರಿಗೆ ಕೊಟ್ಟರೆ ಅವರ ಹಸಿವಾದರೂ ನೀಗುತ್ತದೆ. ಕೆಲವರು ಮಾಡುತ್ತಿರುವ ಅನ್ಯಾಯಕ್ಕೆ ಎಲ್ಲರನ್ನು ಬಲಿ ಕೊಡುವುದು ಸರಿಯಲ್ಲ ಎನ್ನುವುದನ್ನು ತಿಳಿಸಲು ಪ್ರಯತ್ನಿಸಿದರು. ಮೊದಲು ಪಡಿತರ ಚೀಟಿಯ ಸೌಲಭ್ಯವನ್ನು ಎಲ್ಲರಿಗೂ ಮುಂದುವರೆಸಿ ಕ್ರಮೇಣ ಅದರಲ್ಲಿನ ಅವ್ಯವಹಾರಗಳನ್ನು ಸರಿಪಡಿಸುತ್ತಾ ಹೋಗಿ ಎಂದು ಒತ್ತಡ ಹೇರಿದರು.[೨೮]

ಆದರೆ ಸರಕಾರವಾಗಲಿ, ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಇದರ ಬಗ್ಗೆ ಗಮನ ಹರಿಸದೆ, ಪರಿಹಾರ ದಾರಿಗಳನ್ನು ಹುಡುಕದೆ ಕೇವಲ ಸಮಾಧಾನ ಹೇಳುವುದರಲ್ಲೆ ಕಾಲ ಕಳೆದರು. ನಂತರ ಪುನಃ ಸಮೀಕ್ಷೆ ಮಾಡಿ, ಗಣಕೀಕೃತ ಕೇಂದ್ರದ ಮೂಲಕ ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಆರಂಭವಾಯಿತಾದರೂ ಇಂದಿಗೂ ಎಷ್ಟೋ ಜನರಿಗೆ ಪರಿಷ್ಕೃತ ಮತ್ತು ಕುಟುಂಬದ ನವೀಕೃತ ಪಡಿತರ ಚೀಟಿಗಳು ಸಿಕ್ಕಿಲ್ಲ. ಇನ್ನು ಕೆಲವರಿಗೆ ಸಿಕ್ಕರೂ, ಅವರ ಕುಟುಂಬದವರ ಎಲ್ಲಾ ಸದಸ್ಯರ ಹೆಸರುಗಳು ಅದರಲ್ಲಿ ಸೇರ್ಪಡೆ ಆಗಿಲ್ಲ. ಇದಕ್ಕಿಂತಲೂ ವಿಷಾದವೆಂದರೆ ಒಂಟಿ ಮಹಿಳೆಯರು ಪುರುಷರು, ವೃದ್ಧರು, ಅನಕ್ಷರಸ್ಥರು, ಮಾಹಿತಿಯ ಕೊರತೆ ಅಥವಾ ನಿರ್ದಿಷ್ಟ ದಿನಾಂಕದಂದು ಗಣಕೀಕೃತ ಕೇಂದ್ರಗಳಿಗೆ ಹಾಜರಾಗದವರು, ಪಡಿತರ ಚೀಟಿಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಇನ್ನೂ ಕೂಡ ಪ್ರಕ್ರಿಯೆ ಕುಂಟುತ್ತಾ ಸಾಗುತ್ತಲೇ ಇದೆ. ಪ್ರಸ್ತುತ ಸಮಸ್ಯೆಯು ಹಾಗೆ ಇದ್ದು ಹೋರಾಟವು ನಡೆಯುತ್ತಲೇ ಇದೆ.

ಇತರ ಸಾಮಾಜಿಕ ಚಳವಳಿಗಳಲ್ಲಿ ಮಹಿಳೆ

ಮಹಿಳೆಯರ ಸಮಸ್ಯೆ ಬಂದಾಗ ಮಾಡುವ ಚಳವಳಿಗಳು ಮಾತ್ರ ಮಹಿಳಾ ಚಳವಳಿಗಳಲ್ಲ. ಹಾಗೆ ನೋಡಿದರೆ ಸಮಾಜದ ಎಲ್ಲಾ ಸಮಸ್ಯೆಗಳು ಒಂದಲ್ಲಾ ಒಂದು ರೀತಿಯಲ್ಲಿ ಮಹಿಳೆಯರಿಗೆ ಸಂಬಂಧಪಟ್ಟವುಗಳಾಗಿರುತ್ತವೆ ಹಾಗೂ ಮಹಿಳಾ ಚಳವಳಿಗಳು ಹುಟ್ಟಿಕೊಂಡಿರುವುದೇ ಸುಧಾರಣಾವಾದಿ ನೆಲೆಯಲ್ಲಾಗಿರುವುದರಿಂದ ಇವು ಇತರ ಚಳವಳಿಗಳೊಂದಿಗೂ ಸಂಬಂಧವನ್ನು ಹೊಂದಿರುವುದನ್ನು ಅದರ ಹೋರಾಟದ ಸ್ವರೂಪಗಳಲ್ಲಿ ಗುರುತಿಸಬಹುದಾಗಿದೆ. ಮಹಿಳೆಯು ಪಿತೃಪ್ರಧಾನವಾದ ಕುಟುಂಬ ವ್ಯವಸ್ಥೆಯಲ್ಲಿದ್ದರೂ, ಕುಟುಂಬದ ಹಿತಾಸಕ್ತಿಗಾಗಿ ಆಕೆ ಹಲವು ಇತರ ಸಂಸ್ಥೆಗಳೊಡನೆ ಸಂಬಂಧವನ್ನು ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿದ್ದಾಳೆ. ಹೀಗಾಗಿ ಕೆಲವೊಮ್ಮೆ ಮಹಿಳಾ ಚಳವಳಿಯ ವ್ಯಾಪ್ತಿ ಮಹಿಳಾ ವಿಷಯಗಳಾಚೆಗೂ ಕೂಡಾ ಹರಡಬೇಕಾಗುತ್ತದೆ. ಮಹಿಳೆಯರು ಬೇರೆ ಬೇರೆ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಆ ಚಳವಳಿಗಳ ಮೇಲಿನ ಕಾಳಜಿ ಇರಬಹುದು ಅಥವಾ ಇಲ್ಲದಿರಬಹುದು.

ಆದರೆ ಒಂದಲ್ಲಾ ಒಂದು ರೀತಿಯಲ್ಲಿ ಅವು ಮಹಿಳೆಯರಿಗೂ ಸಂಬಂಧಿಸಿರುವುದನ್ನು ಕಾಣಬಹುದಾಗಿದೆ.

ಸಮಾಜದ ಎಲ್ಲ ಅಸಮಾನತೆಗಳು, ಸಂಕಷ್ಟಗಳು, ಅಂತಿಮವಾಗಿ ಮಹಿಳೆಯ ಮೇಲೆ ಹೇರಲ್ಪಡುತ್ತವೆ ಎಂಬ ನೆಲೆಯಲ್ಲಿ ನೋಡಿದಾಗ ರೈತ, ದಲಿತ, ಹಿಂದುಳಿದ, ಕಾರ್ಮಿಕ ಹೀಗೆ ಎಲ್ಲಾ ಸಮುದಾಯಗಳ ಕಷ್ಟ, ಅಸಮಾನತೆಗಳಿಗೂ ರೈತ ಮಹಿಳೆ, ದಲಿತ ಮಹಿಳೆ, ಹಿಂದುಳಿದ ಮಹಿಳೆ ಮತ್ತು ಕಾರ್ಮಿಕ ಮಹಿಳೆಗೆ ಸಂಬಂಧಪಟ್ಟಿರುತ್ತವೆ. ಕಾರಣಕ್ಕಾಗಿ ಎಲ್ಲಾ ಚಳವಳಿಗಳಲ್ಲೂ ಮಹಿಳೆ ಅತ್ಯಂತ ಸಂವೇದನಾಶೀಲಳಾಗಿ ಸ್ಪಂದಿಸಿದ್ದಾಳೆ. ಕೆಲವೊಮ್ಮೆ ಹೋರಾಟಗಳಲ್ಲಿ ಪುರುಷರು ಹಿಂಜರಿದ ಹೊತ್ತಿನಲ್ಲಿ ತಾನು ಅದರ ಹೊಣೆ ಹೊತ್ತು ಸಂಘಟಿಸಿ, ಮುನ್ನಡೆದು ಹೋರಾಟಕ್ಕಿಳಿದ್ದಾಳೆ. ಈ ಬಗೆಯ ಹೋರಾಟದಿಂದಾಗಿ ಹಲವು ಬಾರಿ ಪುರುಷರ ನಾಯಕತ್ವದಲ್ಲಿ ಆರಂಭಗೊಂಡ ಚಳವಳಿಗಳು ಅಂತಿಮವಾಗಿ ಮಹಿಳಾ ನಾಯಕತ್ವದಲ್ಲಿ ಮಹಿಳಾ ಚಳವಳಿಯಾಗಿ ಪರಿವರ್ತನೆಗೊಂಡಿವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಪಾನ ನಿಷೇಧ ಚಳವಳಿ, ವರದಕ್ಷಿಣೆ ಸಮಸ್ಯೆ, ಹೆಣ್ಣು ಭ್ರೂಣ ಹತ್ಯೆ ಮುಂತಾದವುಗಳು. ಹೀಗಾಗಿ ಇತರ ಸಾಮಾಜಿಕ ಚಳವಳಿಗಳಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಯ ವಿಧಾನ ಹಾಗೂ ಆ ವಿಷಯಗಳು ಮಹಿಳೆಯರಿಗೆ ಸಂಬಂಧಿಸಿದ ನೆಲೆಗಳನ್ನು ಗುರುತಿಸುವುದು ಅವಶ್ಯಕವಾಗಿದ್ದು, ಇಂತಹ ಅಂಶಗಳ ಮೇಲೆ ಬೆಳಕು ಚೆಲ್ಲುವ ಕಾರ್ಯವು ಚಳವಳಿಯ ಅಧ್ಯಯನದ ಪ್ರಮುಖ ಭಾಗವಾಗುತ್ತದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ನಡೆದ ರೈತ, ದಲಿತ, ಕಾರ್ಮಿಕ ಹಾಗೂ ಹಿಂದುಳಿದ ಚಳವಳಿಗಳಲ್ಲಿ ಅತ್ಯಂತ ಆಸಕ್ತಿ ಮತ್ತು ಧೈರ್ಯದಿಂದ ತೊಡಗಿದ ಮಹಿಳಾ ಸಮುದಾಯವಿದೆ. ಚಳವಳಿಯು ತೀವ್ರಗೊಂಡಾಗಲೂ ಮುಂಚೂಣಿಯಲ್ಲಿದ್ದ ಮಹಿಳೆಯರು ಪೊಲೀಸರ ಲಾಠಿ ಏಟಿಗೂ ಬಲಿಯಾಗಿದ್ದಾರೆ ಹಾಗೂ ಜೈಲಿಗೂ ಹೋಗಿ ಬಂದಿದ್ದಾರೆ. ಇತ್ತೀಚಿನ ಒಂದೆರಡು ದಶಕಗಳ ಅವಧಿಯಲ್ಲಿ ನಡೆದು ಹೋಗಿರುವ ಚಳವಳಿಗಳನ್ನು ಗಮನಿಸಿದರೆ ಅನೇಕ ಘಟನೆಗಳು ನಡೆದಿರುವುದು ಕಂಡು ಬರುತ್ತವೆ. ಇಂತಹವುಗಳನ್ನು ಹುಡುಕಿ, ವಿಶ್ಲೇಷಿಸಿ, ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ರೈತ ಚಳವಳಿ ಮತ್ತು ಮಹಿಳೆ

ರೈತ ಚಳವಳಿ ಮತ್ತು ಮಹಿಳೆಯರ ನಡುವಿನ ಸಂಬಂಧದ ಸ್ವರೂಪ ಬಹಳ ವಿಶಿಷ್ಟವಾದುದಾಗಿದೆ. ಕುಟುಂಬವನ್ನು ಪ್ರಧಾನವಾಗಿ ಹೊಂದಿದ ಹಾಗೂ ನಂಬಿದ ಸಮಾಜದಲ್ಲಿ ಮಹಿಳೆ ತನ್ನ ಪುರುಷನ ದಾರಿಯನ್ನು ಅನುಸರಿಸುವುದು ಅತ್ಯಂತ ಸಹಜ ಲಕ್ಷಣ. ಜೊತೆಗೆ ಕೃಷಿ ಕ್ಷೇತ್ರದಲ್ಲೂ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿರುವುದರಿಂದ ಕೃಷಿ ಕುಟುಂಬದ ಮಹಿಳೆಯನ್ನು ರೈತ ಮಹಿಳೆ ಎಂದೇ ಗುರುತಿಸಲಾಗುತ್ತದೆ. ರೈತ ಸಮುದಾಯದಲ್ಲಿನ ಮಹಿಳೆಯರ ಪಾಲ್ಗೊಳ್ಳುವಿಕೆಯು ಕುಟುಂಬದ ದುಡಿಮೆಯ ವ್ಯಾಪ್ತಿಯಲ್ಲಿ ಬರುವುದರಿಂದ ಸಹಜವಾಗಿಯೇ ಅಲ್ಲಿ ಅವಳ ಪಾಲ್ಗೊಳ್ಳುವಿಕೆ ಅನಿವಾರ್ಯವು ಆಗಿರುತ್ತದೆ. ಹೀಗಾಗಿ ತನ್ನ ಕುಟುಂಬದ ಸ್ಥಿತಿಗತಿಗಳು ಸುಧಾರಿಸಬಹುದೆಂಬ ಉದ್ದೇಶವನ್ನಿಟ್ಟುಕೊಂಡು ಆಕೆ ರೈತ

ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾಳೆ. ಹಾಗೆಯೇ ರೈತ ಮಹಿಳೆಯರು ತಮ್ಮ ಸಮಾನತೆಯ ಬೇಡಿಕೆಯನ್ನು ಸರಕಾರದ ನೀತಿಗಳನ್ನು ಪ್ರತಿಭಟಿಸಿದ್ದು ರೈತ ಚಳವಳಿಗಳ ಮೂಲಕವಾಗಿಯೇ. ಹೀಗಾಗಿ ರೈತ ಚಳವಳಿಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಹೋರಾಟವನ್ನು ಮಹಿಳಾ ಚಳವಳಿಯ ಭಾಗವೆಂದು ಪರಿಗಣಿಸಿಕೊಳ್ಳ ಬೇಕಾಗುತ್ತದೆ.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನಲ್ಲಿ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ನಡೆದ ಕಬ್ಬು ಬೆಳೆಗಾರರ ಹೋರಾಟದಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು. ಚಳವಳಿಯಲ್ಲಿ ಹಲವಾರು ಮಹಿಳೆಯರು ಸರದಿ ಉಪವಾಸ, ಮುಷ್ಕರ ಮುಂತಾದ ಕೆಲವು ಪ್ರತಿಭಟನೆಗಳನ್ನು ಕೈಗೊಂಡಾಗ ಪುರುಷರ ಅನುಪಸ್ಥಿತಿಯಲ್ಲಿ ಮಹಿಳೆಯರು ಮುಂದುವರೆಸಿ ಹೋರಾಟದ ತೀವ್ರತೆಯನ್ನು ಹೆಚ್ಚಿಸಿದ್ದರು. ಅವರಲ್ಲಿ ಹಲವಾರು ಮಹಿಳೆಯರು ಜೈಲು ವಾಸವನ್ನು ಅನುಭವಿಸಿದ್ದರು.

ಹಾಗೆಯೆ ಈ ಭಾಗದಲ್ಲಿ ನಡೆದ ತೊಗರಿ ಬೆಳೆಗಾರರ ಹೋರಾಟದಲ್ಲಿ ಮಹಿಳೆಯರ ಪಾತ್ರವಂತೂ ಅವಿಸ್ಮರಣೀಯವಾಗಿದೆ. ಗುಲಬರ್ಗಾ ಜಿಲ್ಲೆಯು ತೊಗರಿ ಬೆಳೆಯ ಕಣಜವೆಂದೇ ಪ್ರಸಿದ್ಧಗೊಂಡಿದೆ. ಅಂತೆಯೇ ಜಿಲ್ಲೆಯ ಮುಖ್ಯ ಆರ್ಥಿಕ ಸಂಪನ್ಮೂಲವೂ ತೊಗರಿ ಬೆಳೆಯೇ ಆಗಿದೆ. ಆದರೆ ತೊಗರಿ ಬೆಳೆಗೆ ಸೂಕ್ತ ಬೆಲೆ ಸಿಗದೆ ನಷ್ಟಕ್ಕೊಳಗಾದ, ಸಾಲಬಾಧೆಗೊಳಗಾದ ರೈತರು ಆತ್ಮಹತ್ಯೆಯ ಹಾದಿ ತುಳಿಯತೊಡಗಿದ್ದರು. ಆಗ ಕರ್ನಾಟಕ ಪ್ರಾಂತ ರೈತ ಸಂಘವು ತೊಗರಿ ಬೆಳೆಗಾರರ ರಕ್ಷಣೆಗೆ ಮುಂದಾಯಿತು. ಬೆಂಬಲ ಬೆಲೆಗಾಗಿ ಮತ್ತು 'ತೊಗರಿ ಬೋರ್ಡ್' ರಚನೆಗೆ ಒತ್ತಾಯಿಸಿ ಸುದೀರ್ಘ ಹೋರಾಟವನ್ನು ಹಮ್ಮಿಕೊಂಡಿತ್ತು. ಇದೇ ಸಂದರ್ಭದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ರೈತ ಚಳವಳಿಗಳಿಗೆ ಬೆಂಬಲಿಸಿ ಸಾವಿರಾರು ಮಹಿಳೆಯರು ಹೋರಾಟದ ಕಣಕ್ಕೆ ಧುಮುಕಿದರು. ಆ ಹೋರಾಟದಲ್ಲಿ ಪಾಲ್ಗೊಂಡ ಅನೇಕ ಮಹಿಳೆಯರು ಲಾಠಿ ಚಾರ್ಜ್ ಎದುರಿಸಿ ಜೈಲು ವಾಸವನ್ನು ಅನುಭವಿಸಿದರು.[೭೮] ಅದರಲ್ಲಿ ಜನವಾದಿ ಮಹಿಳಾ ಸಂಘಟನೆಯ ಕೆ. ನೀಲಾ ಮತ್ತು ಗಂಗಮ್ಮ ಬಿರಾದರ ಇವರು ಬಂಧಿಸಲ್ಪಟ್ಟ ಮಹಿಳೆಯರಲ್ಲಿ ಪ್ರಮುಖರಾಗಿದ್ದರು. ಇವರನ್ನು ೧೧ ದಿನಗಳ ಕಾಲ ಜೈಲಿನಲ್ಲಿ ಇರಿಸಲಾಗಿತ್ತು. ನಂತರ ಬಿಡುಗಡೆ ಮಾಡಿದರೂ ಇವರ ಹೋರಾಟ ಮುಂದುವರಿದಿತ್ತು.[೭೯] ಇಂದಿಗೂ ಇಲ್ಲಿ ತೊಗರಿಗೆ ಬೆಂಬಲ ಬೆಲೆ ಕುರಿತು ಪುರುಷ ಮತ್ತು ರೈತ ಮಹಿಳೆಯರು ಆಗಾಗ ಹೋರಾಟ ಮಾಡುತ್ತಲೇ ಇದ್ದಾರೆ.

ದಲಿತ ಚಳವಳಿ ಮತ್ತು ಮಹಿಳೆ

ಮಹಿಳೆಯರ ಮೇಲೆ ಅದರಲ್ಲೂ ದಲಿತ ಮತ್ತು ಅಲ್ಪಸಂಖ್ಯಾತ ಮಹಿಳೆಯರ ಮೇಲೆ ನಡೆಯುವ ಹಿಂಸೆ, ದೌರ್ಜನ್ಯ ತಾರತಮ್ಯ ಖಂಡಿಸಿ ಆಯಾ ಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲಿ ಮಹಿಳಾ ಚಳವಳಿಗಳು ನಡೆದಿವೆ ಮತ್ತು ನಡೆಯುತ್ತಿವೆ. ಈ ದಿಸೆಯಲ್ಲಿ ಮಹಿಳಾ ಸಂಘಟನೆಗಳು, ದಲಿತ ಸಮಿತಿಗಳು, ಸ್ವಸಹಾಯ ಗುಂಪುಗಳು, ಸ್ತ್ರೀಶಕ್ತಿ ಸಂಘಗಳು ಗಮನಾರ್ಹ ಮಟ್ಟದಲ್ಲಿ ಕಾರ್ಯನಿರತವಾಗಿವೆ. ಮಹಿಳೆಯು

ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ ದಲಿತ ಮಹಿಳೆ ಯರ್ರಮ್ಮನ ಪ್ರಕರಣವು ಪ್ರಮುಖವಾಗಿದೆ. ಬಳ್ಳಾರಿ ಜಿಲ್ಲೆಯ ವಣೇನೂರು ಎಂಬ ಗ್ರಾಮದ ದಲಿತ ಮಹಿಳೆಯೊಬ್ಬಳು ಇಬ್ಬರು ವಿಜಾತಿ ಪ್ರೇಮಿಗಳನ್ನು ಬೆಂಬಲಿಸಿದ್ದಳು. ಇದರಿಂದ ಕೆರಳಿದ ಮೇಲ್ಜಾತಿಯ ಪುರುಷರು ಅವಳನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ ದಲಿತ ಮಹಿಳೆ ಯರ್ರಮ್ಮಳನ್ನು ಗಂಟೆಗಟ್ಟಲೆ ಕಂಬಕ್ಕೆ ಕಟ್ಟಿ ಹಾಕಿದ್ದರು. ಹೀಗೆ ಇವಳ ಮೇಲೆ ಆಗುತ್ತಿದ್ದ ದೌರ್ಜನ್ಯವನ್ನು ನೋಡಿದ ಜನವಾದಿ ಮಹಿಳಾ ಸಂಘಟನೆ, ಪ್ರಕರಣವನ್ನು ಕೈಗೆತ್ತಿಕೊಂಡು ಪ್ರಜಾಸತ್ತಾತ್ಮಕ ಮಾನದಂಡಗಳಡಿ ಬಿರುಸಿನ ಹೋರಾಟ ಮಾಡಿತು. ಅದೇ ಸಮಯದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್, ವಿದ್ಯಾರ್ಥಿನಿಯರ ಉಪ ಸಮಿತಿ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಮುಂತಾದ ಸಂಘಟನೆಗಳು ಹೋರಾಟಕ್ಕಿಳಿದು ಯರ್ರಮ್ಮನ ಪರ ಹೋರಾಟಕ್ಕೆ ನಿಂತರು. ಕ್ರಮೇಣ ಕರ್ನಾಟಕದಾದ್ಯಂತ ಘಟನೆಯನ್ನು ವಿರೋಧಿಸಿ ಪರ ಹೋರಾಟ ಮಾಡಿದರು.

ಮಹಿಳೆಯ ಮೇಲಿನ ದೌರ್ಜನ್ಯದ ಮತ್ತೊಂದು ಪ್ರಕರಣವೆಂದರೆ ಶರಣವ್ವ ಎನ್ನುವ ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣ. ಶರಣವ್ವಳ ಮೇಲೆ ನಡೆದ ಅತ್ಯಾಚಾರದ ಘಟನೆ ಮಾನವ ಕುಲವೆ ತಲೆತಗ್ಗಿಸುವಂತಹುದಾಗಿದೆ. ರಾಯಚೂರು ಜಿಲ್ಲೆ ಕುಷ್ಟಗಿ ತಾಲೂಕಿಗೆ ಸೇರಿದ ಶರಣವ್ವ ಎನ್ನುವ ಮಹಿಳೆ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಳು. ಗರ್ಭಿಣಿಯಾಗಿದ್ದ ಇವಳ ಮೇಲೆ ವೈದ್ಯರು ಮತ್ತು ಅಧಿಕಾರಿಗಳು ಸೇರಿದಂತೆ ನಾಲ್ಕು ಜನರು ಅತ್ಯಾಚಾರವೆಸಗಿ ಕೊಲೆ ಮಾಡಿದರು. ಇಂತಹ ದಾರುಣ ಪ್ರಸಂಗಗಳಲ್ಲಿ ಜನವಾದಿ ಮಹಿಳಾ ಸಂಘಟನೆಯು ಇತರ ಹಲವು ಸ್ಥಳೀಯ ಸಂಘಸಂಸ್ಥೆಗಳೊಂದಿಗೆ ಸೇರಿಕೊಂಡು ಹೋರಾಟ ಮಾಡಿತು. ಜನಪರ ನಿಲುವಿನ ಸ್ತ್ರೀಪುರುಷರೆಲ್ಲಾ ಸೇರಿ ಸಮಿತಿಯೊಂದನ್ನು ರಚಿಸಿಕೊಂಡು ತಪ್ಪಿತಸ್ಥರ ವಿರುದ್ಧ ಶಿಕ್ಷೆಗಾಗಿ ತೀವ್ರ ಹೋರಾಟ ಮಾಡಿದ್ದು ಈ ಭಾಗದಲ್ಲಿ ನಡೆದ ಮರೆಯಲಾಗದ ಘಟನೆಯಾಗಿದೆ.

ರಾಯಚೂರು ಜಿಲ್ಲೆಯ ಕುದುರೆಮೋತಿ ಪ್ರಕರಣವು ರಾಜ್ಯಾದ್ಯಂತ ಗಮನ ಸೆಳೆದುದಾಗಿದೆ. ಕುದುರೆ ಮೋತಿಯೆಂಬ ಊರಿನ ಸ್ವಾಮಿಯೊಬ್ಬ ಅದೇ ಗ್ರಾಮದ ಪಾರ್ವತಮ್ಮ ಎಂಬ ಮಹಿಳೆಯ ಜೊತೆ ಅನೈತಿಕ ಸಂಬಂಧಕ್ಕೆ ಪ್ರಯತ್ನಿಸಿದಾಗ ಅದನ್ನು ತಿರಸ್ಕರಿಸಿದ ಆ ಮಹಿಳೆಯ ಮೇಲೆ ಅನೈತಿಕತೆಯ ಸುಳ್ಳು ಆರೋಪ ಹೊರಿಸಿ ಬೆತ್ತಲೆ ಮೆರವಣಿಗೆ ನಡೆಸಿದ. ಇಂತಹ ಹೃದಯ ವಿದ್ರಾವಕ ಘಟನೆಯನ್ನು ಖಂಡಿಸಿ ನಾಡಿನಾದ್ಯಂತ ಪ್ರಜ್ಞಾವಂತರು ಹೋರಾಟಕ್ಕಿಳಿದರು. ಆ ಹೊತ್ತಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಉಚ್ಛ್ರಾಯ ಹಂತದಲ್ಲಿದ್ದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಅನೇಕ ಮಹಿಳಾ ಮಂಡಳಿಗಳು ಹೋರಾಟಕ್ಕಿಳಿದರು. ಪ್ರಗತಿಪರ ಅಧ್ಯಾಪಕರ ವರ್ಗದ ಅಲ್ಲಮಪ್ರಭು ಬೆಟ್ಟದೂರು, ಗವಿಸಿದ್ಧಪ್ಪ ಮುಂತಾದವರು ನಡೆಸಿದ ಪ್ರತಿಭಟನೆಯಿಂದ ಹೋರಾಟ ತೀವ್ರ ಸ್ವರೂಪ ಪಡೆಯಿತು. ಘಟನೆ ವಿರುದ್ಧ ರಾಯಚೂರಿನಲ್ಲಿ ರಾಜ್ಯಮಟ್ಟದ ಕುದುರೆಮೋತಿ ಸಮಾವೇಶ ಜರುಗಿತು. ಸರಕಾರವು ಆಗ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದಾಗ ಸರಕಾರದ ವಿರುದ್ಧವೂ

ಘೋಷಣೆ ಕೂಗಿ ಸ್ವಾಮೀಜಿಯ ಕುತಂತ್ರವನ್ನು ಬಯಲಿಗೆಳೆದು ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡಲಾಯಿತು.[೮೧] ಈ ಪ್ರಕರಣದಲ್ಲಿ ಮಹಿಳೆಯರ ಹೋರಾಟ ಇಂದಿಗೂ ಇಲ್ಲಿ ಸ್ಮರಣೀಯವಾಗಿದೆ.

ಮಹಿಳೆಯರು ಮತ್ತು ಎಡಪಂಥೀಯ ಸಂಘಟನೆಗಳು

ಹೈದರಾಬಾದ್ ಕರ್ನಾಟಕದ ಮಹಿಳಾ ಚಳವಳಿಗಳ ಬೆಂಬಲಕ್ಕೆ ನಿಂತು ಹೋರಾಟ ಮಾಡಿದ ಮತ್ತು ಮಾಡುತ್ತಿರುವವರೆಂದರೆ ಎಡಪಂಥೀಯ ಸಂಘಟನೆಗಳು ಮತ್ತು ಪಕ್ಷಗಳು. ಸಮಾಜದಲ್ಲಿ ಮಹಿಳೆಯರಿಗೆ ಸರಿಯಾದ ಸ್ಥಾನಮಾನವಿಲ್ಲದ, ಧ್ವನಿ ಇಲ್ಲದ, ಬಲವಿಲ್ಲದ ಸಂದರ್ಭದಲ್ಲಿ ಅವರಿಗೆ ಸಮಾನ ಸ್ಥಾನ ಮತ್ತು ಅವಕಾಶ ಕೊಟ್ಟು ಧ್ವನಿಯಾಗಿ ಆಸರೆಯಾಗಿ ನಿಂತವರು ಮತ್ತು ನಿಂತಿರುವವರೆ ಎಡಪಂಥೀಯ ಸಂಘಟನೆಗಳಾದ ಸಿಪಿಐ, ಸಿಪಿಎಂ, ಸಿಐಟಿಯು ಮುಂತಾದವು. ಹೀಗಾಗಿ ಹೈದರಾಬಾದ್ ಕರ್ನಾಟಕ ಮಹಿಳಾ ಚಳವಳಿಗಳನ್ನು ಅಧ್ಯಯನ ಮಾಡುವಾಗ ಎಡಪಂಥೀಯ ಸಂಘಟನೆಗಳೇ ಮಹಿಳೆ ಯರಿಗೆ ಹೆಚ್ಚಾಗಿ ಬೆಂಬಲ ಸೂಚಿಸಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣಗಳನ್ನು ಹುಡುಕಿದಾಗ ಅನೇಕ ವಿಚಾರಗಳು ತಿಳಿದು ಬರುತ್ತವೆ.

ವಾಸ್ತವವಾಗಿ ಪ್ರತ್ಯೇಕವಾದ ಮಹಿಳಾ ಪಕ್ಷ ಎನ್ನುವುದೇ ನಮ್ಮ ವ್ಯವಸ್ಥೆಯಲ್ಲಿ ಇಲ್ಲ. ಮಹಿಳೆಯರದೆ ಆದಂತಹ ಒಂದು ಸೈದ್ಧಾಂತಿಕವಾದಂತಹ ವಿಚಾರಧಾರೆ ಇರುವಂತ ಮಹಿಳೆಯರ ಸಂಖ್ಯೆಯೂ ಯಾವುದೇ ಪಕ್ಷದಲ್ಲಿ ಕಂಡು ಬರುವುದಿಲ್ಲ. ಮಹಿಳೆಯರು ಎಷ್ಟೇ ಸಂಖ್ಯೆಯಲ್ಲಿ ಯಾವುದೇ ಪಕ್ಷದಿಂದ ಆರಿಸಿ ಬಂದರೂ, ಪಕ್ಷಾಧಾರಿತವಾದಂತಹ ಮುಖವಾಣಿಯಾಗಿ ಮಹಿಳೆಯರು ಮಾತನಾಡುತ್ತಾರೆಯೆ ಹೊರತು ಮೂಲಭೂತವಾಗಿ ಸ್ತ್ರೀ-ಪರವಾದಂತಹ ಅನನ್ಯತೆಯನ್ನು ಇಟ್ಟುಕೊಂಡು ಮಾತನಾಡುವಂತಹ ಮಹಿಳೆಯರಿಲ್ಲ. ಹೀಗಾಗಿ ಬೇರೆ ಪಕ್ಷಗಳಾಗಲಿ, ಸಂಘಟನೆಗಳಾಗಲಿ ಮಹಿಳೆಯರನ್ನೆ ಪ್ರಮುಖವಾಗಿಟ್ಟು ಕೊಂಡು ತತ್ವಗಳನ್ನು ರೂಪಿಸುವುದಾಗಲಿ, ಹೋರಾಟ ಮಾಡುವುದಾಗಲಿ ಕಂಡು ಬರುವುದಿಲ್ಲ. ಆದರೆ ಇದಕ್ಕೆ ಭಿನ್ನವಾಗಿ ಎಡಪಂಥೀಯ ಸಂಘಟನೆಗಳು ಮತ್ತು ಪಕ್ಷಗಳ ಹೋರಾಟಗಳಲ್ಲಿ ಮಹಿಳಾ ಪರವಾದ ಸಿದ್ಧಾಂತಗಳು ಕಂಡು ಬರುತ್ತವೆ.

ಎಲ್ಲಾ ಸಂಘಟನೆಗಳಿಗಿಂತ ಎಡಪಂಥೀಯ ಸಂಘಟನೆಯವರು ಮಹಿಳೆಯರನ್ನು ಬಹಳ ಗೌರವ ದಿಂದ ನೋಡುತ್ತಾರೆ. ಏಕೆಂದರೆ ಇವರು ಮಾರ್ಕ್ಸ್‌ನ ವಿಚಾರಧಾರೆಯೊಳಗೆ ಕಾರ್ಮಿಕರ ಬಿಡುಗಡೆ ಎಷ್ಟು ಮುಖ್ಯವೋ ಮಹಿಳೆಯರ ಬಿಡುಗಡೆಯು ಅಷ್ಟೇ ಮುಖ್ಯ ಎನ್ನುವ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವವರು. ಹೀಗಾಗಿ ಸಹಜವಾಗಿಯೇ ಮಹಿಳೆಯರನ್ನು ಸಮಾನವಾಗಿ ಗೌರವಿಸಿ, ಸ್ಥಾನಕೊಟ್ಟು ಒಂದು ವಿಶ್ವಾಸದೊಳಗೆ ಕೆಲಸವನ್ನು ಮಾಡುತ್ತಾರೆ. ಇನ್ನೊಂದು ಮುಖ್ಯ ಅಂಶವೆಂದರೆ ಇವರು ಕೆಳವರ್ಗದ, ಬಡವರ ನಿರ್ಲಕ್ಷಿತರ ದಲಿತರ ಸಮಸ್ಯೆಗಳನ್ನು ಮುಖ್ಯವಾಗಿ ಎತ್ತಿಹಿಡಿದು ಅವರ ಪರವಾಗಿ ಹೋರಾಟ ಮಾಡುವಂತಹ ಗುಣಗಳು ಇವರಲ್ಲಿರುವುದರಿಂದ ಬಹುಬೇಗ ಕೆಳವರ್ಗದ ಮಹಿಳೆಯರನ್ನು ಆಕರ್ಷಿಸುವಲ್ಲಿ ಸಫಲವಾಗಿವೆ.[೮೨]

ಮಹಿಳಾ ಚಳವಳಿಯ ಸಫಲತೆ ಮತ್ತು ವಿಫಲತೆ

ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ಚಳವಳಿಯ ಬಗ್ಗೆ ಅವಲೋಕಿಸಿದಾಗ ಹೈದರಾಬಾದ್ ಕರ್ನಾಟಕದ ಮಹಿಳೆಯರು ಹತ್ತಾರು ಆಯಾಮಗಳಲ್ಲಿ ಹೋರಾಟವನ್ನು ಮಾಡುತ್ತಾ ಬಂದಿದ್ದಾರೆ. ಸಮಯ ಬಂದಾಗ ಬೀದಿಗಿಳಿದು ಹೋರಾಡಿದ್ದಾರೆ. ಹೋರಾಟಗಳ ಮೂಲಕ ನಾಯಕತ್ವ ಮೆರೆದಿದ್ದಾರೆ, ತಮ್ಮ ಬದುಕು ಮತ್ತು ಜೀವ ಎರಡನ್ನೂ ಪಣಕ್ಕಿಟ್ಟು ಹೊಡೆತ, ಹಲ್ಲೆ ಸೆರೆಮನೆ ವಾಸ, ಕೊಲೆ ಬೆದರಿಕೆ ಹೀಗೆ ಎಲ್ಲವನ್ನು ಎದುರಿಸಿ ನಿಂತಿದ್ದಾರೆ. ಇದರೊಟ್ಟಿಗೆ ಶೈಕ್ಷಣಿಕ ವಲಯದಲ್ಲೂ ಮುನ್ನುಗ್ಗಿ ಚಿಂತನೆ ರೂಪದಲ್ಲೂ ತೊಡಗಿಸಿಕೊಂಡಿದ್ದಾರೆ. ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಮಹಿಳೆಯರ ಹೋರಾಟಗಳು ನಡೆದಿವೆ ಮತ್ತು ಇನ್ನೂ ನಡೆಯುತ್ತಿವೆ.

ಆದರೆ ಹೋರಾಟಗಳ ಸ್ವರೂಪವನ್ನು ಗಮನಿಸಿದರೆ ಹೋರಾಟಗಳು ತಕ್ಷಣಕ್ಕೆ ಯಾವುದೋ ಒಂದು ಸಮಸ್ಯೆ ಉದ್ಭವಿಸಿದಾಗ ಹೋರಾಟ ಮಾಡಿ ಮತ್ತೆ ಚದುರಿ ಬಿಡುವಂತಹ ಕೆಲಸ ಆಗುತ್ತಿದೆ. ಅದು ಸಂಘಟಿತ ರೂಪದಲ್ಲಿ ಹಾಗೂ ನಿರಂತರವಾಗಿ ಮುಂದುವರೆಯುತ್ತಿಲ್ಲ. ಈ ದೆಸೆಯಲ್ಲಿ ಹೋರಾಟಗಳು, ಪರಿಣಾಮಕಾರಿ ಆಗದೇ ಇರಲಿಕ್ಕೆ ಕಾರಣವೆಂದರೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು, ಮಹಿಳೆಯರ ಸಮಸ್ಯೆಗಳು ಎಡಪಂಥೀಯ ಚಳವಳಿಗಾರರಿಗೆ ಎಷ್ಟು ಮುಖ್ಯವೋ ಹಾಗೆಯೇ ಬಲಪಂಥೀಯ ಚಳವಳಿಗಾರರಿಗೂ ಅಷ್ಟೇ ಮುಖ್ಯವಾಗಿದೆ. ಆದರೆ ದುರಂತವೆಂದರೆ ಇವರಲ್ಲಿರುವ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದಾಗಿ ಎಲ್ಲರಿಗೂ ಸಂಬಂಧಪಟ್ಟಂತಹ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಲಿಕ್ಕೆ ಸಮಾನಾಂತರವಾದ ವೇದಿಕೆಯನ್ನು ಸಜ್ಜುಗೊಳಿಸಿ ಹೋರಾಟ ಮಾಡಲು ಸಾಧ್ಯವಾಗುತ್ತಿಲ್ಲ.

ಹೈದರಾಬಾದ್ ಕರ್ನಾಟಕದಲ್ಲಿ ದಲಿತ ಚಳವಳಿ ಇನ್ನೂ ಜೀವಂತವಾಗಿದೆ. ಆದರೆ ದಲಿತ ನಾಯಕರು ಮತ್ತು ಸಂಘಟನೆಗಳು ತಮ್ಮ ಜೊತೆಗಿರುವಂತಹ ದಲಿತ ಮಹಿಳೆಯರನ್ನು ಹೋರಾಟದಲ್ಲಿ ತೊಡಗಿಸಿಕೊಂಡು ಹೋಗಲು ದಲಿತ ನಾಯಕರಿಗೆ ಸಾಧ್ಯವಾಗುತ್ತಿಲ್ಲ. ದಲಿತ ಸಂಘಟನೆಗಳಲ್ಲಿ ಮಹಿಳಾ ವಿಭಾಗಗಳೇ ಕಾಣಬರುತ್ತಿಲ್ಲ. ಹೀಗಾಗಿ ದಲಿತ ಮಹಿಳೆಯರೆ ಕೈಗೊಂಡ ಪ್ರತ್ಯೇಕ ಚಳವಳಿಗಳು ಕಂಡು ಬರುತ್ತಿಲ್ಲ. ಇನ್ನು ದಲಿತರ ನಾಯಕತ್ವದಡಿಯಲ್ಲಿ ಇಡಿಯಾಗಿ ಎಲ್ಲಾ ಮಹಿಳೆಯರು ತೊಡಗಿಸಿಕೊಳ್ಳಲಿಕ್ಕೆ ಜಾತಿ ಅಡ್ಡ ಬರುತ್ತಿದೆ. ಮೇಲ್ಜಾತಿಯಲ್ಲಿರುವಂತ ಮಹಿಳೆಯರು ದಲಿತ ಮುಖಂಡರನ್ನು ನಂಬುತ್ತಿಲ್ಲ. ಹಾಗೆಯೇ ಕೆಳವರ್ಗದಲ್ಲಿರುವ ಮಹಿಳೆಯರು ಮೇಲ್ವರ್ಗದ ನಾಯಕರನ್ನು ನಂಬುತ್ತಿಲ್ಲ. ಇದರಿಂದಾಗಿ ಮಹಿಳಾ ಹೋರಾಟವೆ ವಿಫಲವಾಗುತ್ತಿದೆಯೇನೊ ಎನಿಸುತ್ತಿದೆ.

ಭಾರತದ ಇತರ ರಾಜ್ಯಗಳಲ್ಲಿ ಅದರಲ್ಲೂ ಸಾಕ್ಷರತಾ ಪ್ರಮಾಣ ಜಾಸ್ತಿ ಇರುವಂತಹ ಕೇರಳ, ಮಹಾರಾಷ್ಟ್ರ ಮುಂತಾದ ಕಡೆ ಸಾರ್ವಜನಿಕವಾಗಿ ಕೆಲವು ಸಮಸ್ಯೆಗಳ ಬಗ್ಗೆ ಅರಿವಿದೆ. ಆದರೆ ಸಾಕ್ಷರತೆ ಕಡಿಮೆಯಿರುವಂತಹ ಇಂತಹ ಪ್ರದೇಶದಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಅರಿವು ಇಲ್ಲಿನವರಿಗೆ ಮೂಡುತ್ತಿಲ್ಲ. ಅಥವಾ ಎಲ್ಲಾ ವರ್ಗದವರನ್ನೊಳಗೊಂಡು ಮಹಿಳೆಯರನ್ನು ಸಂಘಟಿಸುವಂತಹ, ಸಮಗ್ರ ಹೋರಾಟವನ್ನು

ರೂಪಿಸುವಂತಹ ಪ್ರಯತ್ನಗಳು ಆಗುತ್ತಿಲ್ಲ. ಹೀಗಾಗಿ ಅಲ್ಲಲ್ಲಿ ನಡೆಯುವ ಹೋರಾಟಗಳು ಹೆಚ್ಚು ಗಮನ ಸೆಳೆಯುತ್ತಿಲ್ಲ. ಸರಕಾರ ಹಾಗೂ ಇಡೀ ಸಮಾಜ ಗಮನಿಸುವ ಹಾಗೆ, ಅವರ ಗಮನವನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಹಾಗೆ ಸಂಘಟಿತ ರೂಪದ ಚಳವಳಿಗಳು ಇತ್ತೀಚಿಗೆ ಕಾಣುತ್ತಿಲ್ಲ.

ಇತ್ತೀಚಿನ ದಶಕಗಳಲ್ಲಿ ಅಸ್ತಿತ್ವಕ್ಕೆ ಬಂದ ಸ್ತ್ರೀ ಸ್ವಸಹಾಯ, ಸ್ತ್ರೀ-ಶಕ್ತಿ ಸಂಘಗಳು, ಮಹಿಳೆಯರ ಸಂಘಟನಾ ದೃಷ್ಟಿಯಿಂದ ಆರಂಭದಲ್ಲಿ ಭಾರೀ ಭರವಸೆ ಹುಟ್ಟಿಸಿದ್ದವು. ಪ್ರತಿ ಗ್ರಾಮಗಳಲ್ಲಿ ಮಹಿಳೆಯರು ಸಂಘಟನೆ ಆದಂತಹ ರೀತಿ ಎಲ್ಲರನ್ನು ಬೆರಗಾಗುವಂತೆ ಮಾಡಿತ್ತು. ಮುಂಚೆ ಗೃಹಕತ್ಯದಲ್ಲೇ ಇದ್ದು, ಮನೆಯ ಹೊಸಲನ್ನೇ ದಾಟದ ಎಷ್ಟೋ ಮಹಿಳೆಯರು ಮೊದಲ ಬಾರಿಗೆ ಹೊರ ಜಗತ್ತಿಗೆ ಬಂದು ಸಂಘಟನೆ, ಸಹಕಾರ, ಗೃಹ ಕೈಗಾರಿಕೆ, ಬ್ಯಾಂಕ್ ವ್ಯವಹಾರ, ಉಳಿತಾಯ, ಮಾರಾಟ ವ್ಯವಹಾರ ಮುಂತಾದ ಚಟುವಟಿಕೆಯಲ್ಲಿ ತೊಡಗಿಕೊಂಡರು. ಆರಂಭದಲ್ಲಿ ಕೆಲವು ಸಾಮಾಜಿಕ ಹೋರಾಟಗಳಲ್ಲಿ ಸ್ವಸಹಾಯ ಗುಂಪುಗಳು ಬಹುದೊಡ್ಡ ಬಲವನ್ನೇ ಒದಗಿಸಿದ್ದವು. ಆದರೆ ಕಾಲಕ್ರಮೇಣ ಸ್ವಸಹಾಯ ಗುಂಪುಗಳ ಸದಸ್ಯರು ರಾಜಕೀಯ ಪಕ್ಷಗಳ ಕಾರ್ಯಕರ್ತರಾಗಿ ಮಾರ್ಪಾಡಾಗಿದ್ದು, ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಆದ ದುರಂತವೇ ಎನ್ನಬಹುದು. ಪರಿಸ್ಥಿತಿ ಹೇಗಿದೆಯೆಂದರೆ, ಯಾವುದೇ ಸಾಮಾಜಿಕ ಅಥವಾ ಮಹಿಳೆಯರ ಸಮಸ್ಯೆ ತಲೆದೋರಿದಾಗ, ಹೋರಾಟದಲ್ಲಿ ಪಾಲ್ಗೊಳ್ಳಲು ಕರೆಕೊಟ್ಟರೆ ಮಹಿಳೆಯರ್‍ಯಾರು ಸ್ವಯಂ ಪ್ರೇರಿತರಾಗಿ ಸ್ಪಂದಿಸುವುದಿಲ್ಲ ಮತ್ತು ಪ್ರತಿಭಟನೆ, ಸತ್ಯಾಗ್ರಹ ಮುಂತಾದವುಗಳಿಗೆ ಕರೆದರೆ ದಿನಕ್ಕೆ ಎಷ್ಟು ದುಡ್ಡು ಕೊಡುತ್ತೀರಿ ಎಂದು ಕೇಳುವವರಿದ್ದಾರೆ.

ಇಂತಹ ಎಲ್ಲಾ ಕಾರಣಗಳಿಂದ, ಮಹಿಳೆಯರ ಹೋರಾಟಗಳು ಒಂದು ಚಳವಳಿಯ ರೂಪದಲ್ಲಿ, ಅಥವಾ ಇಡೀ ವ್ಯವಸ್ಥೆಯನ್ನೆ ಬದಲಾಯಿಸುವ ಪರಿಣಾಮಗಳನ್ನು ಉಂಟು ಮಾಡಿರುವುದು ಬಹು ಕಡಿಮೆ. ಹೀಗಾಗಿ ಹೈದರಾಬಾದ್ ಕರ್ನಾಟಕದಲ್ಲಿ ಮಹಿಳೆಯರು ಚಳವಳಿಯಲ್ಲಿ ಪಾಲ್ಗೊಳ್ಳುತ್ತಿಲ್ಲ, ಚಳವಳಿ ಮಾಡುವುದಿಲ್ಲ ಎನ್ನುವ ತಪ್ಪು ಕಲ್ಪನೆಯು ಇದೆ. ಆದರೆ ಪರೋಕ್ಷವಾಗಿ ದಿನನಿತ್ಯದ ಬದುಕಿಗಾಗಿ ಇಲ್ಲಿನ ಮಹಿಳೆಯರು ದಿನನಿತ್ಯ ಒಂದಲ್ಲಾ ಒಂದು ಹೋರಾಟದಲ್ಲಿ ತೊಡಗಿದ್ದಾರೆ.

ಪ್ರಸ್ತುತ ಜಾಗತಿಕ ವಿದ್ಯಮಾನಗಳಲ್ಲಿ ಎಲ್ಲಾ ರಂಗಗಳಲ್ಲಿ ಪ್ರಜ್ವಲಿಸುತ್ತಿರುವ ಮಹಿಳೆಯರು ಜಾತಿ, ವರ್ಗ ಲಿಂಗಭೇದ ವಿರುದ್ಧ, ಕೋಮುವಾದ, ಹಿಂಸಾಚಾರಗಳ ವಿರುದ್ಧ ಚಳವಳಿಗಳನ್ನು ರೂಪಿಸಿಕೊಂಡು ಹೋರಾಟ ಮಾಡಬೇಕಾಗಿದೆ. ಅಸಮಾನತೆಯ ಸಮಾಜವನ್ನು ಬದಲಾಯಿಸುವವರೆಗೂ ಚಳವಳಿಯನ್ನು ನಿಲ್ಲಿಸಬಾರದು. ಬದಲಾಗಿ, ಹೋರಾಟಗಳನ್ನು ಇನ್ನು ತೀವ್ರವಾಗಿಸಿ ಬದಲಾವಣೆಯನ್ನು ತರುವಂತಹ ಚಳವಳಿಗಳನ್ನಾಗಿ ಮಾರ್ಪಡಿಸುವ ಅಗತ್ಯತೆ ಇಂದಿನ ದಿನಗಳಲ್ಲಿದೆ.

೪.೪.೨. ಸಮಕಾಲೀನ ಸಂದರ್ಭದಲ್ಲಿ ಮಹಿಳಾ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಯಾವುದೇ ಒಂದು ಪ್ರದೇಶದ ಪ್ರಸ್ತುತ ಸ್ಥಿತಿಗತಿಗಳನ್ನು ಅವಲೋಕಿಸದಾಗ ಆ ಪ್ರದೇಶದ ಇತಿಹಾಸದ ಛಾಯೆ ಇದ್ದೇ ಇರುತ್ತದೆ. ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಯಲ್ಲಿಯೂ ಇಂತಹ

ಅಂಶವನ್ನು ಕಾಣಬಹುದಾಗಿದೆ. ಇಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಆಳವಾಗಿ ಅಧ್ಯಯನ ಮಾಡಿದಾಗ ಅವರ ನಡೆನುಡಿ, ಆಚಾರ, ಭಾಷೆ, ಸಾಮಾಜಿಕ, ಧಾರ್ಮಿಕ ನಂಬಿಕೆಗಳು, ಜೀವನ ಶೈಲಿ ಮುಂತಾದವುಗಳಲ್ಲಿ ಇತಿಹಾಸದ ದಟ್ಟ ಪ್ರಭಾವವಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ನಿಜಾಮರ ಆಳ್ವಿಕೆಗೆ, ಧರ್ಮಗಳ ತೆಕ್ಕೆಗೆ ಸಿಲುಕಿದ್ದ ಪ್ರದೇಶದಲ್ಲಿ ಮೊದಲಿನಿಂದಲೂ ಮಹಿಳೆಯರ ಮೇಲೆ ನಿರ್ಬಂಧಗಳಿದ್ದವು. ಹೈದರಾಬಾದ್ ಕರ್ನಾಟಕ ಪ್ರದೇಶ ಹೆಣ್ಣುಮಕ್ಕಳ ವಿಚಾರಗಳನ್ನು ಕುಗ್ಗಿಸಿದಂತ ನಾಡು, ಹೆಣ್ಣು ಮಕ್ಕಳು ಅಂದರೆ ಹೀಗೆ ಇರಬೇಕು ಎಂಬ ಅಲಿಖಿತ ಕಾನೂನನ್ನು ಹೇರಿತ್ತು ಹಾಗೂ ಇದನ್ನು ಒಪ್ಪಿಕೊಳ್ಳುವಂತೆ ಮಾಡಿತ್ತು. ಹೆಣ್ಣುಮಕ್ಕಳ ಬದುಕನ್ನು ನಿಯಂತ್ರಣ ಮಾಡುವಂತಹ ಮೌಲ್ಯಗಳನ್ನು ಭಯದ ಮೂಲಕ ಹೇರಲ್ಪಟ್ಟಿದ್ದರು. ಪಾಳೆಗಾರಿಕೆಯ ಮೌಲ್ಯಗಳು ಇಲ್ಲಿನ ಮಾನವೀಯ ಮೌಲ್ಯಗಳನ್ನು ಹತ್ತಿಕ್ಕಿ, ಮಹಿಳೆಯರನ್ನು ಸ್ವಇಚ್ಛಾನುಸಾರ ಬದುಕಲು ಅವಕಾಶವನ್ನೆ ಕೊಟ್ಟಿರಲಿಲ್ಲ. ಮನೆಯಿಂದ ಏಕಾಂಗಿಯಾಗಿ ಹೋಗುವುದಕ್ಕೂ ಸ್ವಾತಂತ್ರ್ಯವಿರಲಿಲ್ಲ.

ಕರ್ನಾಟಕದ ಇತರ ಭಾಗಗಳ ಮಹಿಳೆಯರ ಸಮಸ್ಯೆಗಳಿಗೂ ಹೈದರಾಬಾದ್ ಕರ್ನಾಟಕದ ಮಹಿಳೆಯರ ಸಮಸ್ಯೆಗಳಿಗೂ ಭಿನ್ನತೆಯಿದೆ. ಬೇರೆ ಭಾಗದ ಮಹಿಳೆಯರೊಂದಿಗೆ ತುಲನೆ ಮಾಡಿ ನೋಡಿದಾಗ ಹೈದರಾಬಾದ್ ಕರ್ನಾಟಕದ ಮಹಿಳೆಯರ ಸ್ಥಿತಿಗತಿ ಬಹಳ ಕೆಳಮಟ್ಟದಲ್ಲಿದೆ. ಬೇರೆ ಭಾಗದ ಮಹಿಳೆಯರಿಗೆ ಶಿಕ್ಷಣ ದೊರೆತು, ಸ್ಥಾನಮಾನ ದೊರೆತು ಸಮಾಜದ ಬಹುಮುಖಿಗೆ ಬಂದರು. ಆದರೆ ಇಲ್ಲಿನ ಮಹಿಳೆಯರು ಎಲ್ಲಾ ಅವಕಾಶಗಳಿಂದ ವಂಚಿತರಾಗಿ ಸಮಾಜಕ್ಕೆ ಒಡ್ಡಿಕೊಳ್ಳಲಾಗಲಿಲ್ಲ. ಇದಕ್ಕೆ ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳಿವೆ. ಮೊದಲಿನಿಂದಲೂ ಜಮೀನ್ದಾರಿ, ನಿಜಾಮರ ಆಡಳಿತದಲ್ಲಿ ಹೆಣ್ಣನ್ನು ಸಮಾನ ಎಂದು ಪರಿಗಣಿಸಲಿಲ್ಲ. ಹೆಣ್ಣನ್ನು ತನ್ನ ಅಧೀನವೆಂದೇ ಪರಿಗಣಿಸಿ ಅವಳನ್ನು ಕೌಟುಂಬಿಕ ವ್ಯವಹಾರದಿಂದ, ಯಜಮಾನಿಕೆಯಿಂದ ದೂರ ಇಡಲಾಗಿತ್ತು. ಹೀಗಾಗಿ ಶಿಕ್ಷಣ, ಉದ್ಯೋಗ ಅವಕಾಶಗಳಿಂದ ವಂಚಿತರಾಗಿ ಆಧುನೀಕರಣದ ಸೌಲಭ್ಯಗಳು ಸಿಗದೆ ಆಧುನಿಕತೆಗೆ ಒಳಗಾಗದೆ ತಮ್ಮನ್ನು ತಾವು ಗುರುತಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಹೀಗಾಗಿ ಇಲ್ಲಿನ ಮಹಿಳೆಯರು ದುಪ್ಪಟ್ಟು ಶೋಷಣೆಗೆ ಅನಕ್ಷರತೆಗೆ ಮತ್ತು ಮೌಢ್ಯಕ್ಕೆ ಬಲಿಯಾದರು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ಮಹಿಳೆಯರ ಸ್ಥಾನಮಾನದಲ್ಲಿ ದೊಡ್ಡ ಬದಲಾವಣೆಯೇನು ಆಗಿಲ್ಲ. ಇಂದಿಗೂ ಇಲ್ಲಿ ಭಾನುಮತಿ, ಮಾಟಮಂತ್ರದ ಹೆಸರಿನಲ್ಲಿ ಮಹಿಳೆಯರ ಬಲಿ, ಶೋಷಣೆ ನಡೆದೇ ಇದೆ.

ಹೈದರಾಬಾದ್ ಕರ್ನಾಟಕದಲ್ಲಿ ಸಮಸ್ಯೆಗಳು ಎಲ್ಲಾ ವರ್ಗದ ಮಹಿಳೆಯರಿಗೆ ಇವೆಯಾದರೂ ಅದರಲ್ಲಿ ತೀವ್ರವಾಗಿ ಬಲಿಯಾಗುತ್ತಿರುವವರ್‍ಯಾರು ಎನ್ನುವುದನ್ನು ಗುರುತಿಸಬೇಕಾಗಿದೆ. ಅದರಲ್ಲೂ ಮುಸ್ಲಿಂ, ದಲಿತ, ಹಿಂದುಳಿದ ವರ್ಗದವರನ್ನು ಮತ್ತು ಮೇಲ್ಜಾತಿ ಮಹಿಳೆಯರನ್ನು ಬೇರ್ಪಡಿಸಿ ಬೇರ ಬೇರೆ ನೋಡಬೇಕು. ಏಕೆಂದರೆ ಇವರೆಲ್ಲರೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಬೇರೆ ಬೇರೆ ರೀತಿಯಲ್ಲಿ ಬಲಿಪಶುವಾಗುತ್ತಿದ್ದಾರೆ. ಉದಾಹರಣೆಗೆ ಮುಸ್ಲಿಂ ಮಹಿಳೆ ಮೇಲೆ ಇಂದಿಗೂ ತಲಾಖ್‌ನ

ತೂಗು ಕತ್ತಿಯಿದೆ. ಅವಳ ಮೇಲೆ ಅನೇಕ ರೀತಿಯ ನಿಯಂತ್ರಣಗಳಿವೆ, ಆರ್ಥಿಕವಾಗಿ ಅಸಮರ್ಥಳಾಗಿದ್ದಾಳೆ. ಇದೇ ರೀತಿ ದಲಿತ, ಕೆಳವರ್ಗದ ಹಿಂದುಳಿದ ಮಹಿಳೆಯರು ಅನಕ್ಷರತೆ, ಬಡತನ ಹಾಗೂ ಆರ್ಥಿಕ ಬಿಕ್ಕಟ್ಟುಗಳಿಗೆ ಬಲಿಯಾಗಿದ್ದಾರೆ. ಹೀಗಾಗಿ ಇಲ್ಲಿನ ಅನೇಕ ಸಮಸ್ಯೆಗಳು ತಳವರ್ಗದ ಜನರನ್ನು ಮೊದಲು ನುಂಗುತ್ತಾ ಆಮೇಲೆ ಹಂತ ಹಂತವಾಗಿ ಮೇಲಿನ ಜನರನ್ನು ತಬ್ಬಿಕೊಳ್ಳುತ್ತಿವೆ.

ಕೃಷಿ-ಕೂಲಿ ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು

ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದೆ. ಅದೇ ರೀತಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜನತೆಯ ಮುಖ್ಯ ಉದ್ಯೋಗ ಕೃಷಿಯಾಗಿದೆ. ಅಧಿಕ ಜನರು ತಮ್ಮ ಜೀವನಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಕರ್ನಾಟಕದ ಒಟ್ಟು ದುಡಿಮೆಗಾರರಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಶೇ. ೨೮ನ್ನು ಮೀರಿಲ್ಲ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅದು ಶೇ. ೪೦ಕ್ಕಿಂತ ಅಧಿಕವಾಗಿದೆ. ಇಲ್ಲಿ ಗಮನಿಸಬಹುದಾದ ಬಹುಮುಖ್ಯ ಸಂಗತಿಯೆಂದರೆ ಕೃಷಿ ಕೂಲಿ ಕಾರ್ಮಿಕರಲ್ಲಿ ಅಧಿಕ ಪ್ರಮಾಣದಲ್ಲಿ ಇರುವವರು ಮಹಿಳೆಯರು. ಒಟ್ಟು ಕೃಷಿ ಕಾರ್ಮಿಕರಲ್ಲಿ ಶೇ. ೬೨ರಷ್ಟು ಕಾರ್ಮಿಕರು ಮಹಿಳೆಯರಾಗಿದ್ದಾರೆ. ಈ ಪ್ರಮಾಣ ಇತರ ಯಾವುದೇ ಭಾಗದಲ್ಲೂ ಕಾಣಬರುವುದಿಲ್ಲ. ಒಟ್ಟಾರೆಯಾಗಿ ನೋಡಿದಾಗ ಒಂದು ದಶಕದ ಅವಧಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ದುಡಿಮೆಗಾರ ವರ್ಗವು ಕ್ರಮೇಣ ಕೃಷಿಯಿಂದ ಕೃಷಿಯೇತರ ಚಟುವಟಿಕೆಗೆ ವರ್ಗಾಂತರಗೊಂಡಿರುವುದನ್ನು ಗಮನಿಸಬಹುದು.

ಆದರೆ ಮಹಿಳೆಯರಿಗೆ ಸಂಬಂಧಿಸಿದಂತೆ ವಾಸ್ತವ ಪರಿಸ್ಥಿತಿ ಭಿನ್ನವಾಗಿದೆ. ಈ ಪ್ರದೇಶದ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಅಧಿಕ ಇರುವುದಲ್ಲದೇ ಅದು ೧೯೯೧-೨೦೧೧ರ ಅವಧಿಯಲ್ಲಿ ಇನ್ನಷ್ಟು ಅಧಿಕಗೊಂಡಿದೆ. ಒಟ್ಟು ಕೃಷಿ ಕಾರ್ಮಿಕರಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣ ಶೇ. ೫೫.೬೫ರಷ್ಟು ಇದ್ದದ್ದು ೨೦೧೧ಕ್ಕೆ ಶೇ. ೬೫ಕ್ಕೆ ಏರಿಕೆಯಾಗಿದೆ. ಏರಿಕೆ ಪ್ರಮಾಣವನ್ನು ಗಮನಿಸಿದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ದೊರೆಯುತ್ತಿರುವ ಪಾಲು ಅತ್ಯಂತ ನಿಕೃಷ್ಟವಾಗಿದೆ ಎಂಬುದನ್ನು ಸೂಚಿಸುತ್ತದೆ. ಇಲ್ಲಿ ಮಹಿಳೆಯರಿಗೆ ದುಡಿಮೆಯು ಆಯ್ಕೆಯಾಗಿರದೆ ಅನಿವಾರ್ಯದ್ದಾಗಿದೆ. ನಾನಾ ರೀತಿಯ ಅಧ್ಯಯನಗಳಿಂದ ತಿಳಿದು ಬರುವಂತೆ, ಕುಟುಂಬ ದಲ್ಲಿಯ ವರಮಾನ ಅಧಿಕವಾದಂತೆ ಮಹಿಳೆಯ ದುಡಿಮೆಯ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತದೆ. ಬಡತನ, ಆದಾಯದ ಪ್ರಮಾಣ ಕಡಿಮೆಯಾದಂತೆಲ್ಲಾ ಸಂಸಾರದ ಹೊಣೆ, ಹೊರೆ ಮಹಿಳೆಯರ ಮೇಲೆ ನೇರ ಪರಿಣಾಮ ಬೀರುತ್ತದೆ.

ಇಂದು ಕೃಷಿ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಯಿಂದಾಗಿ, ಕೃಷಿ ಹೆಚ್ಚು ಹೆಚ್ಚು ಯಾಂತ್ರೀಕರಣಗೊಳ್ಳುತ್ತಿದೆ. ಹೀಗಾಗಿ ಮಹಿಳೆಯರಿಗೆ ಕೃಷಿ ಚಟುವಟಿಕೆಗಳಲ್ಲಿ ದೊರೆಯಬಹುದಾದ ಕೆಲಸ ಕಾರ್ಯಗಳ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ. ಇನ್ನು ಇಲ್ಲಿ ಮಳೆ ಆಧಾರಿತ ಬೇಸಾಯ ಹೆಚ್ಚಿರುವುದರಿಂದ ಅವರ ಜೀವನವು ಏರುಪೇರುಗಳನ್ನು ಆಧರಿಸಿ ಮುಂದುವರೆಯುತ್ತದೆ. ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ ಮಳೆ ಆದಾರಿತ ಬೇಸಾಯದಲ್ಲಿ ಉದ್ಯೋಗದ

ಪ್ರಮಾಣವು ತೀರ ಕಡಿಮೆ ಇದೆ, ಇಲ್ಲಿ ಉದ್ದಿಮೆಗಳ ಬೆಳವಣಿಗೆ ಸಮರ್ಪಕವಾಗಿಲ್ಲ ಹಾಗೂ ಇದಕ್ಕೆ ಬೇಕಾಗುವ ಉದ್ಯಮಶೀಲತೆ, ಇಲ್ಲಿನ ಜನರಲ್ಲಿ ಕಡಿಮೆ ಇದೆ. ಬೀದರ್‌ನ ಹಲವಾರು ಉದ್ದಿಮೆಗಳು, ಗುಲಬರ್ಗಾದ ಹತ್ತಿ ಬಟ್ಟೆಯ ಗಿರಣಿ, ಮಿನಿ ಸಿಮೆಂಟ್ ಪ್ಲ್ಯಾಂಟ್‌ಗಳು ಇಂದು ಮಾರುಕಟ್ಟೆಯ ಸ್ಪರ್ಧೆಯನ್ನು ಎದುರಿಸಲಾರದೆ ನಷ್ಟಕ್ಕೊಳಗಾಗಿ ಮುಚ್ಚಿಹೋಗಿವೆ. ಜಾಗತೀಕರಣ ಹಾಗೂ ಉದಾರೀಕರಣದ ನೀತಿಗಳು ಮುಂದುವರೆದಂತೆ ಇವರ ಮತ್ತು ಈ ಉದ್ಯೋಗವನ್ನೆ ನಂಬಿಕೊಂಡಿರುವವರ ಪರಿಸ್ಥಿತಿ ಇನ್ನು ಗಂಭೀರವಾಗುತ್ತಿದೆ. ಹೀಗೆ ಮಳೆಯ ಅಭಾವ, ಬಂಡವಾಳದ ಅಭಾವ, ಮೂಲ ಸೌಕರ್ಯಗಳ ಅಲಭ್ಯತೆ, ಮುಂತಾದವು ಮಹಿಳೆಯರ ಅಭಿವೃದ್ಧಿಯನ್ನು ಕುಂಠಿತಗೊಳಿಸಿವೆ.

ಇನ್ನು ಈ ಭಾಗದಲ್ಲಿ ತೋಟಗಾರಿಕೆ, ಹೈನುಗಾರಿಕೆ, ಕೃಷಿ ಸಂಸ್ಕರಣ ಉದ್ದಿಮೆಗಳು ಬಹಳ ಬೆಳೆದಿಲ್ಲ. ಇಲ್ಲಿರುವ ಅವಕಾಶಗಳನ್ನು ಹೊರರಾಜ್ಯದ ಉದ್ಯಮಿಗಳು ಬಳಸಿಕೊಳ್ಳುತ್ತಿದ್ದಾರೆ. ಇಲ್ಲೂ ಮಹಿಳೆಯರು ದುಡಿಮೆಯಲ್ಲಿ ತಾರತಮ್ಯಕ್ಕೆ ಒಳಗಾಗಿದ್ದಾರೆ. ಅವರಿಗೆ ಕೂಲಿ ಕಡಿಮೆ, ದುಡಿತ ಅಧಿಕವಾಗಿದೆ. ಇಂತಹ ಅಂಶವನ್ನು ಗಮನದಲ್ಲಿಟ್ಟುಕೊಂಡು ಹೈದರಾಬಾದ್ ಕರ್ನಾಟಕ ಪ್ರದೇಶದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇಲ್ಲಿಯ ಮಹಿಳಾ ಕೃಷಿ ಕಾರ್ಮಿಕರು ಮುಂದಿನ ದಿನಗಳಲ್ಲಿ ಕಷ್ಟಕರವಾದ ದಿನಗಳನ್ನು ಎದುರಿಸಬೇಕಾದ ಪರಿಸ್ಥಿತಿ ಉದ್ಭವಿಸುತ್ತಿರುವುದನ್ನು ನಿರೀಕ್ಷಿಸಬಹುದಾಗಿದೆ. ಒಂದೆಡೆ ಕೃಷಿಯಲ್ಲಿಯ ತಾಂತ್ರಿಕತೆಯಿಂದಾಗಿ ಕೃಷಿಯಲ್ಲಿ ಮಹಿಳೆಯರಿಗೆ ದೊರೆಯಬಹುದಾದ ಕೆಲಸ ಕಾರ್ಯಗಳು ಕಡಿಮೆಯಾಗುತ್ತಾ ಹೋಗುತ್ತಿದ್ದರೆ, ಮತ್ತೊಂದೆಡೆ, ಕೃಷಿಯೇತರ ಚಟುವಟಿಕೆಗಳಲ್ಲಿ ಕೆಲಸ ನಿರ್ವಹಿಸಲು ಅಗತ್ಯವಾದ ಅವಕಾಶ, ಸೌಲಭ್ಯ, ಕೌಶಲ್ಯವಿಲ್ಲದೆ ಸಮಸ್ಯೆ ಎದುರಿಸುತ್ತಿದ್ದಾರೆ.[೮೩]

ಹೈದರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಸರಕಾರ ಮಾಡಿದ ಪ್ರಯತ್ನಗಳು ಇಲ್ಲಿನ ಮಹಿಳೆಯರನ್ನು ತಲುಪುತ್ತಿಲ್ಲ. ಸತ್ಯ ಶೋಧನಾ ಸಮಿತಿ ಹಾಗೂ ೧೯೯೧ರಲ್ಲಿ ಕೇಂದ್ರ ಸರಕಾರದ ಉನ್ನತ ಅಧಿಕಾರ ಸಮಿತಿಯ ನೀಲಿ ನಕ್ಷೆಯಲ್ಲಿ ಶಿಫಾರಸ್ಸು ಮಾಡಿದ್ದಷ್ಟು ಸಂಪನ್ಮೂಲಗಳು ಈ ಭಾಗಕ್ಕೆ ಹರಿದು ಬಂದಿಲ್ಲ. ಹೀಗಾಗಿ ಸಂಪನ್ಮೂಲಗಳ ಅಭಾವ ಹಾಗೂ ನೆರವಿನ ಕೊರತೆಯಿಂದ ಅಭಿವೃದ್ಧಿ ಕುಂಠಿತವಾಗಿದೆ. ಹಳೆಯ ಸಮಸ್ಯೆಗಳು ಪರಿಹಾರವಾಗದೆ, ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಹಾಗಾಗಿ ತತಕ್ಷಣ ಸರಕಾರಗಳು ವಿಶೇಷವಾದ ಯೋಜನೆಗಳನ್ನು ರೂಪಿಸುತ್ತಾ, ಇಲ್ಲಿನ ಮಹಿಳೆಯರ ಕೌಶಲ್ಯ ವೃದ್ಧಿಗೊಳ್ಳುವಂತ ತರಬೇತಿ ಯೋಜನೆಗಳನ್ನು ಆರಂಭಿಸುವ ಅಗತ್ಯವಿದೆ. ಆಗಲಾದರೂ ಇಲ್ಲಿನ ಕೃಷಿ ಕೂಲಿ ಕಾರ್ಮಿಕರ ಸಮಸ್ಯೆಗಳು ಮತ್ತು ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಸುಧಾರಿಸಬಹುದು.

ಹಿಂದುಳಿದ ಅಲ್ಪಸಂಖ್ಯಾತರ ಮಹಿಳೆಯರ ಸಮಸ್ಯೆಗಳು

ಹೈದರಾಬಾದ್ ಕರ್ನಾಟಕದಲ್ಲಿ ಹಿಂದುಳಿದ ಅಲ್ಪಸಂಖ್ಯಾತ ಮಹಿಳೆಯರ ಸ್ಥಿತಿಗತಿ, ಉದ್ಯೋಗ ಅವಕಾಶಗಳ ಬಗ್ಗೆ ಅಧ್ಯಯನ ಮಾಡಿದಾಗ ಇಲ್ಲಿ ಪುರುಷರಿಗೇ ನಿರಂತರ ಉದ್ಯೋಗ ಅವಕಾಶ ಸಿಗುವುದೇ ಕಷ್ಟವಿರುವಾಗ ಇನ್ನು ಮಹಿಳೆಯರಿಗೆ ಉದ್ಯೋಗ ಅವಕಾಶಗಳು ವಿರಳವೆಂದೇ ಕಂಡು

ಬರುತ್ತದೆ. ಅದರಲ್ಲೂ ಅಲ್ಪಸಂಖ್ಯಾತರ, ಹಿಂದುಳಿತ, ದಲಿತ, ಕೃಷಿ ಕಾರ್ಮಿಕ ಮಹಿಳೆಯರಂತೂ ಉದ್ಯೋಗ ಅವಕಾಶವಿಲ್ಲದೆ ಸಂಕಷ್ಟದಲ್ಲಿದ್ದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶತಮಾನಗಳಿಂದಲೂ ಈ ವರ್ಗದ ಜನರು ಹೊಲಿಗೆ, ನೂಲು ನೇಯ್ಗೆ, ಬಿದರಿ ಕಲೆ, ಎಂಬ್ರಾಯ್‌ಡರಿ, ಬಟ್ಟೆಗೆ ಬಣ್ಣ ಹಾಕುವಿಕೆ, ಮುಂತಾದ ದೇಶಿಯ ಗುಡಿ ಕೈಗಾರಿಕೆಗಳನ್ನು ತಮ್ಮ ತಮ್ಮ ಮನೆಯಲ್ಲಿದ್ದುಕೊಂಡೇ ಮಾಡುತ್ತಿದ್ದರು. ಆದರೆ ಕಾಲಕ್ರಮೇಣ ಬೃಹತ್ ಕಾರ್ಖಾನೆಗಳ ಸ್ಥಾಪನೆ ಹಾಗೂ ಉತ್ಪಾದನೆಗಳಲ್ಲಿ ಯಂತ್ರಗಳ ಬಳಕೆಯಿಂದಾಗಿ ಗುಡಿ ಕೈಗಾರಿಕೆಗಳು ಮುಚ್ಚಲ್ಪಟ್ಟು ಪುರುಷರಿಗೆ ಉದ್ಯೋಗವಿಲ್ಲದಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ಹೆಣ್ಣು ಮಕ್ಕಳಿಗೂ ನಿರುದ್ಯೋಗದಂತಹ ಸಮಸ್ಯೆ ಉಂಟಾದವು.

ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ನೋಡಿದಾಗ ಇಲ್ಲಿನ ಕೃಷಿ ಮತ್ತು ಇತರ ದಿನಕೂಲಿ ಕಾರ್ಮಿಕರಿಗೆ ಅತೀ ಕಡಿಮೆ ಕೂಲಿ ಸಿಗುತ್ತಿದ್ದು, ಕುಟುಂಬದಲ್ಲಿ ಒಬ್ಬರ ದುಡಿಮೆ ಸಾಲದೆ ಸಂಸಾರ ಸಾಗಿಸಲು ಪುರುಷರು ಮಹಿಳೆಯರಿಬ್ಬರೂ ದುಡಿಯಲೇ ಬೇಕಾದ ಅನಿವಾರ್ಯತೆ ಇದೆ. ಬೆಲೆಗಳ ಹೆಚ್ಚಳದಿಂದಾಗಿ ಜೀವನ ನಿರ್ವಹಣೆ ವೆಚ್ಚ ಏರುತ್ತಿದ್ದು, ಆ ಮಟ್ಟದಲ್ಲಿ ಕೂಲಿ ದರದಲ್ಲಿ ಮಾತ್ರ ಹೆಚ್ಚಳವಾಗಿಲ್ಲ. ಇದರ ಪರಿಣಾಮ ನೇರವಾಗಿ ಮಹಿಳೆಯರ ಮೇಲೆ ಬೀಳುತ್ತದೆ. ಸ್ಥಳೀಯವಾಗಿ ಉದ್ಯೋಗ ಸಿಗದಿದ್ದಾಗ ಜೀವನ ನಿರ್ವಹಣೆಗೆ ಪುರುಷರು ಮನೆ ಬಿಟ್ಟು ದುಡಿಯಲು ತಿಂಗಳುಗಟ್ಟಲೇ ಪರ ಊರಿಗೆ ಹೋದಾಗ ಇಲ್ಲಿ ಮಹಿಳೆಯರು ಮನೆ, ಮಕ್ಕಳು ಜೀವನ ನಿರ್ವಹಣೆ, ಸಾಲಸೂಲ ಸಂಕಷ್ಟದಲ್ಲಿ ಸಿಲುಕಿ ಸಂಸಾರ ನಿಭಾಯಿಸುವ ಒತ್ತಡದಲ್ಲಿ ಬದುಕಬೇಕಾಗುತ್ತದೆ.

ಹೀಗೆ ಕೃಷಿ ಮತ್ತು ಕೂಲಿ ಕಾರ್ಮಿಕರು ನಾನಾ ಸಮಸ್ಯೆ ಕಷ್ಟಗಳಲ್ಲಿ ಮುಳುಗಿರುವಾಗ ಇವರ ಬಗ್ಗೆ ಸರಕಾರದ ಕ್ರಮ ಏನು ಎಂದು ಪರಿಶೀಲಿಸಿದರೆ, ಸರಕಾರ ಇವರ ಕಲ್ಯಾಣದ ಬಗ್ಗೆ ರೂಪಿಸಿರುವ ಅನೇಕ ಯೋಜನೆಗಳ ಬಗ್ಗೆ ಸಾಧನೆ ಬಿಂಬಿಸುವ ಜಾಹೀರಾತುಗಳು, ಘೋಷಣೆಗಳು ಕಾಣಸಿಗುತ್ತವೆ. ಸರಕಾರ ರೂಪಿಸಿರುವ ವಿಶೇಷ ಯೋಜನೆಗಳಾದ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ಸಬ್ಸಿಡಿಗಳು, ಆಶ್ರಯ ಮನೆಗಳು, ನಿವೇಶನಗಳು, ಆರೋಗ್ಯ ಯೋಜನೆಗಳು ಅರ್ಹ ವರ್ಗದವರಿಗೆ, ಫಲಾನುಭವಿಗಳಿಗೆ ತಲುಪದೆ ವಿಫಲವಾಗುವ ಸಂಭವವೇ ಹೆಚ್ಚು, ಯೋಜನೆಗಳನ್ನು ಜಾರಿಗೊಳಿಸುವ ಹಂತದಲ್ಲಾಗುವ ಗೊಂದಲಗಳು, ಮಧ್ಯವರ್ತಿಗಳ ಮತ್ತು ಅಧಿಕಾರಿಶಾಹಿಗಳ ಅಲಕ್ಷ್ಯದಿಂದಾಗಿ ಸರಕಾರ ರೂಪಿಸಿದ ಯೋಜನೆಗಳು ನಿರೀಕ್ಷಿಸಿದ ಮಟ್ಟದಲ್ಲಿ ಯಶಸ್ಸು ಕಾಣುತ್ತಿಲ್ಲ. ಹಾಗೆಯೇ ಈ ವರ್ಗದವರ ನಿಜವಾದ ಸಮಸ್ಯೆ ಏನು, ಸ್ಥಿತಿಗತಿಗಳ ಬಗ್ಗೆ ಸರಕಾರಕ್ಕೆ ಗ್ರಹಿಕೆ ಇರುವುದಿಲ್ಲ. ಮೇಲ್ನೋಟಕ್ಕೆ ಕಾಣುವ ಸಮಸ್ಯೆಗಳಿಗೆ ಮಾತ್ರ ಗಮನಹರಿಸಿ ಕಣ್ಣಿಗೆ ಬೀಳದ ಸಮಸ್ಯೆಗಳ ಅರಿವು ಇಲ್ಲದಂತಾಗಿದೆ. ಇನ್ನು ಸರಕಾರದ ಮೇಲ್ನೋಟದ ಗ್ರಹಿಕೆಗಳೇನೆಂದರೆ, ಸರಕಾರ ಇವರಿಗೆ ಬಹಳ ಸೌಲಭ್ಯಗಳನ್ನು ಕೊಟ್ಟಿದೆ. ವಿಶೇಷ ಯೋಜನೆಗಳನ್ನು ರೂಪಿಸಿದ್ದೇವೆ ಎನ್ನುವ ವಾದ ಮಂಡಿಸುತ್ತವೆ. ಆದರೆ ನಿಜವಾಗಿಯೂ ಇವರ ಸ್ಥಿತಿಗತಿ ಏನು, ಸಮಸ್ಯೆ ಏನು ಎನ್ನುವುದರ ಗ್ರಹಿಕೆಯೆ ಇರುವುದಿಲ್ಲ.

ಇನ್ನೊಂದು ಕಡೆ ಇಲ್ಲಿನ ಹಿಂದುಳಿದ, ಅಲ್ಪಸಂಖ್ಯಾತ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡಿದರೆ ಇವರ ವಾಸ್ತವ ಬದುಕಿನ ಚಿತ್ರ ದೊರೆಯುತ್ತದೆ. ಮಹಿಳೆಯರು ಅದರಲ್ಲೂ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದು ಅವರಲ್ಲಿ ಹೆಚ್ಚೆಚ್ಚು ಓದಬೇಕು, ಬರೆಯಬೇಕು, ಉದ್ಯೋಗಕ್ಕೆ ಸೇರಬೇಕು ಎನ್ನುವ ಆಸೆ ಇತ್ತೀಚಿಗೆ ಹೆಚ್ಚಾಗಿ ಕಂಡು ಬರುತ್ತಿದೆ. ಗ್ರಾಮೀಣ ಭಾಗದ ಹೆಚ್ಚಿನ ವಿದ್ಯಾರ್ಥಿನಿಯರು ಶಿಕ್ಷಕಿಯರಾಗುವ ಕನಸಿನೊಂದಿಗೆ ಡಿ.ಎಡ್, ಬಿ.ಎಡ್ ಓದುವುದು ಅವರ ಮೊದಲ ಆಯ್ಕೆ. ಆದರೆ ಸರಕಾರದ ಕೋಟಾದಲ್ಲಿ ಸಿಗುವ ಸೀಟುಗಳು ಕಡಿಮೆ ಇರುವುದರಿಂದ ದುಬಾರಿ ಶುಲ್ಕ ತೆತ್ತು ಖಾಸಗಿ ಸಂಸ್ಥೆಗಳಲ್ಲಿ ಸೇರಲು ಇವರಿಗೆ ಆರ್ಥಿಕ ಸಮಸ್ಯೆ ಅಡ್ಡ ಬರುತ್ತಿದೆ. ಸರಕಾರಿ ಕಾಲೇಜುಗಳ ಸೀಟುಗಳಿಗಿಂತ ನಾಲ್ಕುಪಟ್ಟು ಹೆಚ್ಚು ಖಾಸಗಿ ಕಾಲೇಜಿನ ಸೀಟುಗಳಿವೆ. ಆದರೆ ಖಾಸಗಿ ಕಾಲೇಜಿನಲ್ಲಿ ಡಿ.ಎಡ್. ಅಥವಾ ಬಿ.ಎಡ್. ಸೀಟಿಗೆ ೨೫ ರಿಂದ ೫೦,೦೦೦ ರೂ. ಬೇಡಿಕೆ ಇದೆ. ಆದರೆ ಇಷ್ಟು ಹಣ ಕೊಟ್ಟು ಸೇರಲು ಎಷ್ಟು ಬಡ ಹೆಣ್ಣುಮಕ್ಕಳಿಗೆ ಸಾಧ್ಯವಾಗುತ್ತದೆ. ಅದರಲ್ಲೂ ಪೋಷಕರಿಗೆ ಹುಡುಗ ಮತ್ತು ಹುಡುಗಿಯರಿಗೆ ವಿದ್ಯೆ ಕೊಡಿಸುವ ಆಯ್ಕೆಯ ಪ್ರಶ್ನೆ ಬಂದಾಗ, ಇಲ್ಲಿ ಹುಡುಗರಿಗೆ ಪ್ರಾಧ್ಯಾನತೆ ಕೊಟ್ಟು ಶಿಕ್ಷಣ ಕೊಡಿಸುತ್ತಾರೆ.

ಇನ್ನು ಈ ವರ್ಗದವರಿಗೆ ಉನ್ನತ ವ್ಯಾಸಂಗ ಮಾಡುವ ಮತ್ತು ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಶಿಕ್ಷಣ ಪಡೆಯುವುದಂತೂ ಕನಸಿನ ಮಾತು. ಏಕೆಂದರೆ ಲಕ್ಷಾಂತರ ರೂ. ಹಣ ಕೊಟ್ಟು ಸೀಟು ಕೊಡಿಸುವ, ನಾಲ್ಕಾರು ವರ್ಷ ಓದಿಸುವ ಸಾಮರ್ಥ್ಯ ಇವರ ಪೋಷಕರಿಗೆ ಇಲ್ಲ. ಇತ್ತೀಚಿಗೆ ವಿವಿಧ ಸಂಘಸಂಸ್ಥೆಗಳ ಸಹಕಾರದಿಂದ ಕೆಲವರು ಉನ್ನತ ಶಿಕ್ಷಣ ಪಡೆಯುತ್ತಿರುವುದು ಕಂಡು ಬರುತ್ತಿದೆಯಾದರೂ ಅವರ ಸಂಖ್ಯೆ ಬೆರಳಣಿಕೆಯಷ್ಟಿದೆ.

ಹೀಗೆ ಶಿಕ್ಷಣ, ಉದ್ಯೋಗದಿಂದ ವಂಚಿತರಾಗಿ ಬಡತನದಲ್ಲೇ ಉಳಿಯುವ ಈ ವರ್ಗದ ಮಹಿಳೆಯರು ಮತ್ತೆ ಅದೇ ಕೂಲಿ, ಕಾಮಗಾರಿ ಕೆಲಸಗಳಿಗೆ ಹೋಗುತ್ತಾರೆ. ಜೀವನೋಪಾಯಕ್ಕಾಗಿ ಯಾವ ಕೆಲಸವಾದರೂ ಸರಿ ಎನ್ನುವ ಸ್ಥಿತಿಗೆ ಬಂದಿರುತ್ತಾರೆ. ಸ್ಥಳೀಯವಾಗಿ ಅವಕಾಶಗಳಿಲ್ಲದಿದ್ದಾಗ, ಉದ್ಯೋಗ ಅರಸಿ ವಲಸೆ ಹೋಗುವುದು ಸಾಮಾನ್ಯವಾಗಿದೆ. ಹೀಗೆ ವಲಸೆ ಹೋದವರಿಗೆ ಪಟ್ಟಣಗಳಲ್ಲಿ ನಿರಂತರ ಕೂಲಿ ಕೆಲಸ ಸಿಗದಿದ್ದಾಗ ಜೀವನ ಸಾಗಿಸುವ ಸಂಕಷ್ಟಕ್ಕೀಡಾಗುತ್ತಾರೆ. ಆಗ ಅವರು ಅನಿವಾರ್ಯವಾಗಿ ದೇಹ ವ್ಯಾಪಾರಕ್ಕೆ ಬಲಿಯಾಗುತ್ತಾರೆ. ಕ್ರಮೇಣ ಇಂತಹ ದಂಧೆಗೆ ತಮ್ಮನ್ನು ಒಡ್ಡಿಕೊಳ್ಳುವಂತಹ ಅನಿವಾರ್ಯತೆಗೆ ಒಳಗಾಗುತ್ತಾರೆ. ಹೀಗಾಗಿ ಮುಂಬೈ, ಪೂನಾ, ಹೈದರಾಬಾದ್ ಮುಂತಾದ ವೇಶ್ಯಾವಾಟಿಕೆಗಳಲ್ಲಿ ಕಂಡು ಬರುವ ಮಹಿಳೆಯರಲ್ಲಿ ಇಲ್ಲಿಂದ ಹೋದ ಮಹಿಳೆಯರೆ ಹೆಚ್ಚಾಗಿ ಕಂಡು ಬರುತ್ತಾರೆ. ನಂತರ ಅನೇಕ ರೋಗಗಳಿಗೆ ಬಲಿಯಾಗಿ ಮಧ್ಯ ವಯಸ್ಸಿನಲ್ಲಿಯೇ ಸಾವಿಗೀಡಾಗುತ್ತಾರೆ. ಹೀಗೆ ಇಲ್ಲಿನ ಹಿಂದುಳಿದ ಅಲ್ಪಸಂಖ್ಯಾತ ಮಹಿಳೆಯರ ಸಮಸ್ಯೆಗಳು ಬೇರೆ ಭಾಗದ ಸಮಸ್ಯೆಗಳಿಗಿಂತ ಬಹಳ ವಿಭಿನ್ನವಾಗಿವೆ.

ಗಣಿಗಾರಿಕೆಯಲ್ಲಿ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹೆಚ್ಚು ವಿವಾದಕ್ಕೆ ಹಾಗೂ ನಿಷೇಧಕ್ಕೆ ಒಳಗಾಗಿರುವ ಉದ್ಯಮವೆಂದರೆ ಗಣಿಗಾರಿಕೆ. ಬಳ್ಳಾರಿ, ಹೊಸಪೇಟೆ, ಸಂಡೂರು ಸುತ್ತಮುತ್ತಲಿನ ಪ್ರದೇಶವು ದೇಶದಲ್ಲೇ ಅತ್ಯಂತ ಶ್ರೇಷ್ಠ ಗುಣಮಟ್ಟದ ಕಬ್ಬಿಣದ ಅದಿರನ್ನು ಹೊಂದಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇಲ್ಲಿನ ಅದಿರಿಗೆ ಬೇಡಿಕೆ ಇದ್ದು, ಚೀಣಾ, ಜಪಾನ್, ಕೋರಿಯಾ ಮುಂತಾದ ದೇಶಗಳಿಗ ರಫ್ತಾಗುತ್ತಿದೆ. ಇಲ್ಲಿನ ವಹಿವಾಟಿನಿಂದ ಗಣಿ ಮಾಲೀಕರು, ರಫ್ತುದಾರರು, ಸಾರಿಗೆ ಮಾಲೀಕರು ಕೋಟ್ಯಾಂತರ ರೂ. ಹಣ ಗಳಿಸಿದ್ದಾರೆ. ಹೀಗಾಗಿ ಗಣಿದಣಿಗಳು ಎನ್ನುವ ಹೊಸ ವರ್ಗವೇ ಸೃಷ್ಟಿಯಾಗಿದೆ. ಇದೇ ಸಮಯದಲ್ಲಿ ಗಣಿ ಉದ್ಯಮ ವಹಿವಾಟು ಭಾರಿ ಭರಾಟೆಯಿಂದ ನಡೆದು ಆಗಾಗ ಏರುಪೇರಾಗುತ್ತಾ ಅನೇಕ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಗಣಿಯಲ್ಲಿ ಕೆಲಸ ಮಾಡುವ ಕೂಲಿಕಾರರು ಅದರಲ್ಲೂ ಮಹಿಳಾ ಕೂಲಿಕಾರ್ಮಿಕರ ಜೀವನ ಅಭದ್ರವಾಗಿದ್ದು ಅವರ ಸ್ಥಿತಿ ಚಿಂತಾಜನಕವಾಗಿದೆ.

ಕಳೆದ ಒಂದು ದಶಕದಲ್ಲಿ ಕಬ್ಬಿಣದ ಅದಿರಿಗೆ ಬಂದ ಭಾರೀ ಬೇಡಿಕೆ ಮತ್ತು ಬೆಲೆ ಏರಿಕೆಯಿಂದ ಗಣಿಗಾರಿಕೆಯ ಚಿತ್ರಣವೇ ಬದಲಾಗಿ ಗಣಿಗಾರಿಕೆಯ ವೈಭವದ ಕಾಲ ಆರಂಭವಾಯಿತು. ಇಲ್ಲಿನ ಜನರಿಗೆ ಮೊದಲನೇ ಆಯ್ಕೆ ಗಣಿ ಕೂಲಿ ಆಗಿ ಪರಿವರ್ತನೆಗೊಂಡು ಎರಡನೇ ಆಯ್ಕೆ ಕೃಷಿ ಕೂಲಿ ಆಯಿತು. ಹೆಚ್ಚಿನ ಕೂಲಿ ಮತ್ತು ಸಂಬಳಕ್ಕೆ ಆಕರ್ಷಿತರಾಗಿ ಬೇರೆ ಪ್ರದೇಶ ಮತ್ತು ರಾಜ್ಯಗಳಿಂದ ವಲಸೆ ಬಂದು ಇಲ್ಲಿ ನೆಲೆಸಿದರು. ಹೀಗಾಗಿ ಹೊಸದಾಗಿ ಗಣಿ ಕಾರ್ಮಿಕರ ಕ್ಯಾಂಪ್‌ಗಳು ತಲೆ ಎತ್ತಿದವು. ಆದರೆ ವಸತಿ, ನೀರು, ಕಲುಷಿತ ಪರಿಸರ ಧೂಳು ಇತ್ಯಾದಿಗಳಲ್ಲಿ ಕಡಿಮೆ ಕೂಲಿಗಾಗಿ ಕೂಲಿ ಕುಟುಂಬಗಳು ದುಡಿಯ ತೊಡಗಿದರು. ೨೦೧೦-೧೧ರಲ್ಲಿ ಗಣಿಗಾರಿಕೆಯ ಮೇಲೆ ಸರಕಾರ ಮತ್ತು ಸುಪ್ರಿಂಕೋರ್ಟ್ ನಿಷೇಧ ಹೇರಿದ ಮೇಲೆ ಇವರು ಬೀದಿ ಪಾಲಾದರು ಎಂದರೂ ತಪ್ಪೇನಿಲ್ಲ. ಇನ್ನು ಸರಕಾರದ ಸ್ವಾಮೀತ್ವದಲ್ಲಿ ಇರುವ ಮತ್ತು ಇತರ ಗಣಿಗಾರಿಕೆಯಲ್ಲಿರುವ ಕಾರ್ಮಿಕರ ಗೋಳು ಮುಂದುವರೆದಿದೆ.

ಕಬ್ಬಿಣ ಗಣಿಗಾರಿಕೆಯಲ್ಲಿ ಅದಿರು ಬಗೆದು ಕಲ್ಲು ಒಡೆಯುವುದು, ಕಲ್ಲು ಪುಡಿ ಮಾಡುವುದು, ಜರಡಿ ಹಿಡಿಯುವುದು, ಕಲ್ಲು ಗ್ರೇಡ್ ಮಾಡುವುದು, ಕಲ್ಲು ಆರಿಸುವುದು, ಕಲ್ಲು ಹೋರುವುದು, ಕಸ ಗುಡಿಸುವುದು ರೆಡ್ ಆಕ್ಸೈಡ್ ಪುಡಿಯನ್ನು ಚೀಲಗಳಿಗೆ ತುಂಬುವುದು ಮುಂತಾದ ಕೆಳಹಂತದ ಕೆಲಸಗಳಲ್ಲಿ ಮಹಿಳಾ ಕೂಲಿಗಳು ದುಡಿಯುವುದನ್ನು ಕಾಣಬಹುದು. ಗಣಿಗಳಲ್ಲಿ ಕೆಲಸ ಮಾಡುವ ಶಾಶ್ವತ ಕಾರ್ಮಿಕರಿಗೆ ಮಾತ್ರ ವಾರದಲ್ಲಿ ಒಂದು ದಿನ ರಜೆ ಇದ್ದರೆ, ಗುತ್ತಿಗೆ ಮತ್ತು ದಿನಗೂಲಿ ಮಾಡುವವರಿಗೆ ಈ ರೀತಿಯ ಯಾವುದೇ ಸೌಲಭ್ಯಗಳಿರುವುದಿಲ್ಲ. ಇವರು ಬೆಳಗ್ಗೆ ೮ ರಿಂದ ಸಂಜೆ ೬ರವರೆಗೆ ಅನೇಕ ತಾಸುಗಳ ಕಾಲ ಕೆಲಸ ನಿರ್ವಹಿಸುತ್ತಾರೆ. ಮಹಿಳೆಯರು ರಾತ್ರಿ ಪಾಳೀಯದಲ್ಲಿ ಕೆಲಸ ಮಾಡಬಾರದೆಂಬ ನಿರ್ಬಂಧವಿದೆ ಯಾದರೂ ರಾತ್ರಿ ಹೊತ್ತು ಕೆಲವಡೆ ಲೋಡಿಂಗ್ ನಡೆಯುವಲ್ಲಿ ಮಹಿಳೆಯರು ಮತ್ತು ಬಾಲ ಕಾರ್ಮಿಕರನ್ನು

ಕೆಲಸಕ್ಕೆ ಬಳಸುತ್ತಿರುವ ಸಂಗತಿಗಳು ಸಾಮಾನ್ಯವಾಗಿ ಕಂಡು ಬರುತ್ತಿವೆ.

ಇನ್ನು ಗಣಿಗಾರಿಕೆ ನಡೆಯುವ ಪ್ರದೇಶಗಳಲ್ಲಿ ಗಣಿ ಮಾಲಿಕರಿಗೂ ಹಾಗೂ ಕೂಲಿ ಕಾರ್ಮಿಕರಿಗೂ ಯಾವುದೇ ನೇರ ಸಂಬಂಧವಿರುವುದಿಲ್ಲ. ಮಾಲೀಕರಿಗೆ ದಿನನಿತ್ಯ ಬೇಕಾಗುವ ಕೂಲಿಗಳನ್ನು ಸರಬರಾಜು ಮಾಡುವ ಮೇಸ್ತ್ರಿಗಳು, ಲೇಬರ್ ಕಂಟ್ರ್ಯಾಕ್ಟರ್ ಎನ್ನುವ ಒಂದು ವರ್ಗ ಸೃಷ್ಟಿಯಾಗಿದ್ದು ಕೂಲಿ ಕಾರ್ಮಿಕರು ಅವರವರ ಮೇಸ್ತ್ರೀಗಳ, ಗುತ್ತಿಗೆದಾರರ ಹಿಡಿತದಲ್ಲಿರುತ್ತಾರೆ. ಹೀಗಾಗಿ ಮೇಸ್ತ್ರೀಗಳು ಹೇಳುವಂತಹ ಎಂತಹ ಶ್ರಮದಾಯಕ ಕೆಲಸವಾದರೂ ಹೊಟ್ಟೆಪಾಡಿನ ಕಾರಣಕ್ಕಾಗಿ ಎಂತಹ ನೋವನ್ನಾದರೂ ಸಹಿಸಿಕೊಂಡು ಕೆಲಸ ಮಾಡುತ್ತಾರೆ. ಇವರು ಕೆಲಸ ಮಾಡುವ ಪರಿಸರ ಕಲುಷಿತ, ಧೂಳಿನಿಂದ ಕೂಡಿರುವುದರಿಂದ ಕಣ್ಣಿನ, ಚರ್ಮ ಸಂಬಂಧಿ ಕಾಯಿಲೆಗಳು ಬರುವುದು ಸಾಮಾನ್ಯ.[೮] ಪ್ರಸ್ತುತ ಅಧ್ಯಯನ ದಲ್ಲಿ ಕೈಗೊಂಡ ಕ್ಷೇತ್ರಕಾರ್ಯ ಪ್ರಕಾರ ಇಲ್ಲಿನ ಗಣಿ ಭಾಗಗಳಲ್ಲಿ ಬಹುಸಂಖ್ಯಾತ ಅಸಂಘಟಿತ ಗಣಿ ಕಾರ್ಮಿಕರಲ್ಲಿ ಕಾಣಿಸುವ ಕಾಯಿಲೆ ಎಂದರೆ ಕ್ಷಯ, ಶ್ವಾಸಕೋಶ ಸಂಬಂಧಿ ಕಾಯಿಲೆ, ಕ್ಯಾನ್ಸರ್, ಎದೆನೋವು, ಅಲರ್ಜಿಗಳಾಗಿವೆ. ದುರಂತವೆಂದರೆ ಗಣಿ ಕೂಲಿಯಾಳುಗಳಿಗೆ ಗಣಿ ಮಾಲೀಕರಿಂದಾಗಲಿ, ಸರಕಾರದಿಂದಾಗಲಿ ಯಾವುದೇ ವೈದ್ಯಕೀಯ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿಲ್ಲ.

ಇಂದಿನವರೆಗೆ ಮಹಿಳಾ ಕಾರ್ಮಿಕರ ಸಂಘಟನೆಗಳು ಬಲಗೊಳ್ಳದಂತೆ ಇಲ್ಲಿನ ಬಂಡವಾಳಶಾಹಿ ವರ್ಗ ನಿಗಾವಹಿಸಿಕೊಂಡು ಬಂದಿದೆ. ಮಹಿಳಾ ಕೂಲಿಗಳು ಅಸಂಘಟಿತರಾಗಿರುವುದು ಇನ್ನೊಂದು ಬಹುದೊಡ್ಡ ಸಮಸ್ಯೆಯಾಗಿದೆ. ಇವರ ಬಡತನ, ಅಸಹಾಯಕತೆಯನ್ನು ಮಧ್ಯವರ್ತಿಗಳು ದುರುಪಯೋಗ ಪಡಿಸಿಕೊಂಡು ಶೋಷಿಸುತ್ತಿದ್ದಾರೆ. ಕೆಲವೊಮ್ಮೆ ಇದು ಲೈಂಗಿಕ ಶೋಷಣೆಯ ಹಂತಕ್ಕೂ ಹೋಗಿರುವುದು ಕಂಡು ಬರುತ್ತದೆ. ಇತ್ತೀಚೆಗೆ ಗಣಿಗಾರಿಕೆಯು ಯಾಂತ್ರೀಕರಣಕ್ಕೆ ಒಳಗಾಗುತ್ತಿರುವುದರಿಂದಾಗಿ ಇವರಿಗೆ ದುಡಿಮೆಯ ಅವಕಾಶಗಳು ಕಡಿಮೆಯಾಗಿ ಹೋಗಿದೆ. ಇಡೀ ಕುಟುಂಬದ ಜವಾಬ್ದಾರಿಗಳ ಜೊತೆ ಜೊತೆಗೆ ಉತ್ಪಾದನಾ ದುಡಿಮೆಯನ್ನು ಮಹಿಳೆಯರು ನಿರ್ವಹಿಸುತ್ತಿದ್ದರೂ ಇವರ ಬದುಕುಗಳು ಮಾತ್ರ ಕಗ್ಗತ್ತಲೆಯಿಂದ ಕೂಡಿದೆ. ದಿನವಿಡೀ ದುಡಿದರೂ ಉಳಿತಾಯವೆನ್ನುವುದು ಇವರ ಪಾಲಿಗಿಲ್ಲ. ಗಂಡಸರು ಮಾಡುವ ಅವ್ಯಕ್ತ ಖರ್ಚುಗಳು ಮತ್ತು ಸಾಲಗಳಿಗೆ ಇವರೇ ಜವಾಬ್ದಾರರಾಗುತ್ತಿದ್ದಾರೆ. ಒಂದು ಕಡೆ ಬಂಡವಾಳಶಾಹಿಗಳ ಶೋಷಣೆಗೆ ಇನ್ನೊಂದು ಕಡೆ ಕೌಟುಂಬಿಕ, ಪುರುಷಶಾಹಿ ಶೋಷಣೆಯ ಸಂಕೋಲೆಯಲ್ಲಿ ಅಸಂಘಟಿತ ಮಹಿಳಾ ಕಾರ್ಮಿಕರು ನಲಗುತ್ತಿದ್ದಾರೆ.

ಇತ್ತೀಚಿಗೆ ಸುಪ್ರಿಂಕೋರ್ಟ್ ಗಣಿಗಾರಿಕೆಯ ಮೇಲೆ ನಿಷೇಧ ಹೇರಿರುವುದರಿಂದಾಗಿ ಇಡೀ ಭಾಗದ ಗಣಿಗಾರಿಕೆಯು ಸ್ಥಗಿತಗೊಂಡಿದೆ. ದಿನನಿತ್ಯ ಸಾವಿರಾರು ಲಾರಿಗಳಿಗೆ, ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ಒದಗಿಸುತ್ತಿದ್ದ ಗಣಿ ಪ್ರದೇಶವು ಸ್ತಬ್ಧಗೊಂಡಿದೆ. ಅದಿರಿಗೆ ಬೆಲೆ ಹೆಚ್ಚಿದ್ದ ಸಮಯದಲ್ಲಿ ಕೃಷಿ ಭೂಮಿಯಲ್ಲಿ ಡಿಗ್ಗಿಂಗ್ ಮಾಡಿದ ಕಾರಣ ಕೃಷಿ ಭೂಮಿಯು ಹಾಳಾಗಿ ಹೋಗಿದೆ. ಇದರಿಂದ ಮಹಿಳಾ ಕಾರ್ಮಿಕರಿಗೆ

ಗಣಿಯಲ್ಲೂ ಕೆಲಸವಿಲ್ಲದೆ, ಕೃಷಿಕೂಲಿಯೂ ಸಿಗದೇ, ಬೇರೆ ಉದ್ಯೋಗಾವಕಾಶಗಳು ಸಿಗದೆ ಬಡತನದಲ್ಲಿ ಬೇಯುತ್ತಿದ್ದಾರೆ. ಇನ್ನೂ ಕೆಲವರು ಉದ್ಯೋಗ, ಅರಸಿ ಬೇರೆ ಪ್ರದೇಶಕ್ಕೆ ವಲಸೆ ಹೋಗತೊಡಗಿದ್ದಾರೆ. ಗಣಿಗಾರಿಕೆಯ ವೈಭವದ ಕಾಲದಲ್ಲಿ ಹೇಗೋ ಜೀವನ ನಡೆಸಿದ್ದ ಇವರಿಗೆ ಈಗ ಒಂದು ಹೊತ್ತಿನ ಊಟಕ್ಕೂ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳೆಯರು ಮನೆಗೆಲಸ ಅರಸಿ ಮನೆ ಕೆಲಸಕ್ಕೆ ಇಟ್ಟುಕೊಳ್ಳಿ ಎಂದು ಅಂಗಲಾಚುವ ಸ್ಥಿತಿ ಬಂದಿದೆ. ಒಟ್ಟಿನಲ್ಲಿ ಗಣಿಗಾರಿಕೆಯ ವೈಭವದ ಕಾಲದಲ್ಲೂ ಇವರ ಸ್ಥಿತಿ ಸುಧಾರಿಸಿರಲಿಲ್ಲ. ಗಣಿಗಾರಿಕೆಯ ಸ್ಥಗಿತ ಕಾಲದಲ್ಲೂ ಇವರ ಸ್ಥಿತಿ ಸುಧಾರಿಸಿಲ್ಲ. ಒಟ್ಟಿನಲ್ಲಿ ಸಮಸ್ಯೆಗಳ ಸುಳಿಯಲ್ಲಿ ಜೀವನ ನಿರ್ವಹಿಸಬೇಕಾದ ಸ್ಥಿತಿ ಅಸಂಘಟಿತ ಕೂಲಿ ಕಾರ್ಮಿಕರ ಸ್ಥಿತಿಯಾಗಿದೆ.

ಹೆಣ್ಣು ಶಿಶುಹತ್ಯೆ ಹಾಗೂ ಮಾರಾಟ

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಂಡು ಬರುವ ಮತ್ತೊಂದು ಸಾಮಾಜಿಕ ಪಿಡುಗು ಹೆಣ್ಣು ಶಿಶು ಹತ್ಯೆಯ ಪ್ರಕರಣಗಳು. ಇವು ಇಡೀ ಮಾನವ ಕುಲವೇ ಬೆಚ್ಚಿಬೀಳುವಂತೆ ಅನಾವರಣಗೊಳ್ಳುತ್ತಿವೆ. ಈ ಭಾಗದಲ್ಲಿ ನಡೆಯುವಂತಹ ಹೆಣ್ಣು ಶಿಶುವಿನಹತ್ಯೆ, ಹೆಣ್ಣು ಶಿಶುವಿನ ಮಾರಾಟ, ಹೆಣ್ಣು ಶಿಶುಮರಣ ಪ್ರಮಾಣ ಕರ್ನಾಟಕದ ಬೇರೆಲ್ಲೂ ಕಂಡು ಬರುವುದಿಲ್ಲ. ಈಗಾಗಲೇ ಅನಕ್ಷರತೆ, ಬಡತನ, ಮೂಢನಂಬಿಕೆಗಳಿಂದ ತುಂಬಿರುವ ಈ ಪ್ರದೇಶದಲ್ಲಿ ಹುಟ್ಟಿದ ಹೆಣ್ಣು ಮಗುವನ್ನು ಆ ಕುಟುಂಬದವರೇ ಹತ್ಯೆಗೈಯುವ ಬರ್ಭರತೆ ಇಲ್ಲಿನ ಸಾಮಾಜಿಕ ಸ್ಥಿತಿಯನ್ನು ಮತ್ತಷ್ಟು ಅಂಧಕಾರದಲ್ಲಿ ಮುಳುಗಿಸಿದೆ.

ತಮ್ಮ ಕುಟುಂಬದಲ್ಲಿ ಹುಟ್ಟಿದ ಶಿಶು ಹೆಣ್ಣಾಗಿದ್ದರೆ, ಹೆಣ್ಣು ಸಂತಾನ ಬೇಡವಾಗದ ಕಾರಣಕ್ಕಾಗಿ ಅದನ್ನು ಉಸಿರುಕಟ್ಟಿಸಿಯೋ, ಹಾಲನ್ನು ಕೊಡಲು ನಿರಾಕರಿಸಿಯೋ, ವಿಷಪೂರಿತವಾದ ಆಹಾರವನ್ನು ನೀಡಿಯೋ, ಹತ್ಯೆ ಮಾಡುವುದನ್ನು ಹೆಣ್ಣು ಶಿಶು ಹತ್ಯೆ ಎನ್ನಲಾಗುವುದು. ಇಡೀ ರಾಷ್ಟ್ರವು ಪ್ರಗತಿ ಪಥದಲ್ಲಿದೆ, ವೈಜ್ಞಾನಿಕ ಕ್ರಾಂತಿ ಆಗಿದೆ, ಆಧುನಿಕತೆಯ ತುತ್ತತುದಿಗೆ ಏರುತ್ತಿದ್ದೇವೆ, ಭಾರತ ಹೊಳೆಯುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ಇಂದಿನ ಕಾಲದಲ್ಲಿಯೂ ಹೆಣ್ಣು ಶಿಶುಗಳನ್ನು ಹುಟ್ಟಿದಾಕ್ಷಣ ಹತ್ಯೆ ಮಾಡಲಾಗುತ್ತಿದೆ ಎಂದರೆ ಬಹುಜನ ನಂಬಲಾರರು. ಪುರುಷಪ್ರಧಾನ ಮೌಲ್ಯಗಳು ಹಾಗೂ ಆಚರಣೆಗಳಿಂದ ತುಂಬಿರುವ ಸಮಾಜದಲ್ಲಿ ಹೆಣ್ಣು ಶಿಶುಹತ್ಯೆಗೆ ಒಂದು ಇತಿಹಾಸವೇ ಇದೆ. ಆದರೆ ಇಂದಿನ ವೈಜ್ಞಾನಿಕತೆಯ ಯುಗದಲ್ಲಿ ಇಂತಹ ಪದ್ಧತಿ ದಿನೇ ದಿನೇ ಇನ್ನೂ ಹೆಚ್ಚಾಗುತ್ತಿರುವುದು ಆಂತಕಕ್ಕೀಡು ಮಾಡಿದೆ. ಇಲ್ಲಿನ ಜನರಲ್ಲಿ ಕಂಡು ಬರುವ ಮೌಢ್ಯತೆ, ಅಸಹಾಯಕತೆಯಿಂದಲೋ, ಆರ್ಥಿಕ, ಸಾಮಾಜಿಕ ಕಾರಣದ ಒತ್ತಡದಿಂದಲೋ, ಇಂತಹ ಕೃತ್ಯ ಎಸಗುತ್ತಿರುವ ಪೋಷಕರು ಸಾಕಷ್ಟು ಸಂಖ್ಯೆಯಲ್ಲಿದ್ದರೂ, ಇವು ಗುಪ್ತವಾಗಿ ನಡೆದು ಹೆಚ್ಚಾಗಿ ಬೆಳಕಿಗೆ ಬಾರದೇ ಹೋಗುತ್ತವೆ.

ವಿಶೇಷವಾಗಿ ಹೈದರಾಬಾದ್ ಕರ್ನಾಟಕದಲ್ಲಿ ಹೆಣ್ಣು ಶಿಶುಹತ್ಯೆಗೆ ಕಾರಣಗಳನ್ನು ಹುಡುಕುತ್ತಾ ಹೋದರೆ ಬೇರೆ ಪ್ರದೇಶದಲ್ಲಿದ್ದಂತಹ ಕಾರಣಗಳ ಜೊತೆಗೆ ಕೆಲವು ವಿಭಿನ್ನವಾದ ಕಾರಣಗಳು

ಗೋಚರಿಸುತ್ತವೆ. ಗಂಡು ಮಗು ಹುಟ್ಟಿದರೆ ವಂಶೋದ್ಧಾರವಾಗುವುದರ ಜೊತೆಗೆ ತಂದೆ ತಾಯಿಗಳಿಗೆ ಮೋಕ್ಷ ದೊರೆಯುತ್ತದೆ ಎನ್ನುವ ಗಾಢ ನಂಬಿಕೆ ಇನ್ನೂ ಇಲ್ಲಿ ಗಟ್ಟಿಯಾಗಿ ಉಳಿದುಕೊಂಡು ಬಂದಿದೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಇಲ್ಲಿನ ಬಡತನವು ಹೆಣ್ಣು ಭ್ರೂಣಹತ್ಯೆಗೆ ಒಂದು ರೀತಿಯಲ್ಲಿ ನೇರ ಕಾರಣವಾಗುತ್ತಿದೆ. ಇಲ್ಲಿನ ಬಹುತೇಕ ಬಡ ಮತ್ತು ಕೆಳವರ್ಗದವರ ಮನಸ್ಥಿತಿ ಹೇಗಿದೆಯೆಂದರೆ ಹೆಣ್ಣು ಮಗುವಾದರೆ ಅವಳು ಪ್ರಾಪ್ತಳಾಗುವವರೆಗೆ ಅವಳನ್ನು ಸಾಕಬೇಕು, ವರದಕ್ಷಿಣೆಯನ್ನು ಕೊಟ್ಟು ವಿವಾಹ ಮಾಡಬೇಕು. ಇದಕ್ಕೆಲ್ಲಾ ದುಡಿದ ಹಣ ಸಾಕಾಗದೆ ಸಾಲ ಮಾಡಬೇಕು, ಇಲ್ಲವೆ ಇರುವ ಭೂಮಿ, ಮನೆ, ಒಡವೆಗಳನ್ನು ಮಾರಬೇಕು. ಹೀಗಾಗಿ ಹೆಣ್ಣು ನಮಗೆ ಆರ್ಥಿಕ ಹೊರೆ ಎಂಬ ಭಾವನೆ ಜನರಲ್ಲಿ ಗಟ್ಟಿಯಾಗಿ ಬೇರೂರಿದೆ. ಕಾರಣವನ್ನು ಮುಂದಿಟ್ಟುಕೊಂಡು ಹೆಣ್ಣು ಶಿಶುಹತ್ಯೆಯಲ್ಲಿ ತೊಡಗಿದ್ದಾರೆ ಎನ್ನುವುದು ತಿಳಿದು ಬರುತ್ತದೆ.

ಹೆಣ್ಣು ಶಿಶುಹತ್ಯೆ ಬಗ್ಗೆ ಸಾಕಷ್ಟು ವಿರೋಧಗಳು, ಕಾನೂನುಗಳು ಉದ್ಭವವಾದ ಹಿನ್ನೆಲೆಯಲ್ಲಿ ಹೆಣ್ಣು ಶಿಶುಹತ್ಯೆ ಬದಲಾಗಿ ಹೆಣ್ಣುಶಿಶು ಮಾರಾಟದಂತಹ ಹೊಸ ರೂಪ ಪಡೆಯುತ್ತಿದೆ. ಪೋಷಕರು ಪಕ್ಕದ ಆಂಧ್ರಪ್ರದೇಶ, ಮಹಾರಾಷ್ಟ್ರಗಳ ಜನರಿಗೆ ಹಣಕ್ಕಾಗಿ ಹೆಣ್ಣು ಶಿಶುವನ್ನು ಮಾರಾಟ ಮಾಡುವ ಮಾರ್ಗವನ್ನು ಕಂಡುಕೊಂಡಿದ್ದಾರೆ. ಇಲ್ಲಿನ ಜನರ ಬಡತನವನ್ನು ದುರುಪಯೋಗಪಡಿಸಿಕೊಂಡು ಸಾವಿರಾರು ರೂಪಾಯಿ ಕೊಟ್ಟು ತಮ್ಮ ಲಾಭದಾಯಕ ದೃಷ್ಟಿಯಿಂದ, ಹೆಣ್ಣು ಶಿಶುವನ್ನು ತೆಗೆದುಕೊಳ್ಳುವ ಪ್ರಕರಣಗಳು ನಡೆಯುತ್ತಿವೆ. ಇತ್ತೀಚಿಗೆ ಶಿಶು ಮಾರಾಟದ ದೊಡ್ಡ ಜಾಲವೇ ಇಲ್ಲಿ ಹರಡಿಕೊಂಡಿರುವುದರ ಬಗ್ಗೆ ಸಾಕಷ್ಟು ಮಾಹಿತಿ ಸರಕಾರಕ್ಕೆ ಬಂದಿದೆ. ದುರಂತವೆಂದರೆ ಸರಕಾರಗಳು ಇಲ್ಲಿಯವರೆಗೆ ಈ ಭಾಗದ ಜನರಿಗೆ ಕೊಡಬೇಕಾಗಿದ್ದ ವಿಶೇಷ ಸವಲತ್ತುಗಳನ್ನು ಕೊಡದೇ ಅಗತ್ಯ ಆರ್ಥಿಕ ಮತ್ತು ಸಾಮಾಜಿಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ಇದಕ್ಕೆ ಉದಾಹರಣೆ ಎಂದರೆ, ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಕೊಂಚಾವರಂ ಪ್ರದೇಶದ ತಾಂಡಾಗಳಲ್ಲಿ ಹೆಣ್ಣು ಕೂಸುಗಳ ಮಾರಾಟದ ಪ್ರಕರಣಗಳು ನಡೆದಾಗ, ಮಹಿಳಾ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುತ್ತಿರುವ ಜನವಾದಿ ಮತ್ತು ಪ್ರಜ್ಞಾ ಸಂಘಟನೆಗಳಿಂದ ಇದರ ಬಗ್ಗೆ ಸಮೀಕ್ಷೆ ನಡೆಸಲಾಗಿತ್ತು. ಆಗ ಮಾರಾಟಕ್ಕೆ ಕಾರಣವೇನು ಎಂಬುದರ ಬಗ್ಗೆ ತಿಳಿದು ಬಂದಿದ್ದೇನೆಂದರೆ, ಗಂಡು ಮಕ್ಕಳ ಅಪೇಕ್ಷೆ, ಹೆಣ್ಣಿನ ಬಗ್ಗೆ ತಿರಸ್ಕೃತ ಭಾವನೆ, ಬಡತನ, ವರದಕ್ಷಿಣೆ, ಇಂತಹ ಕಾರಣದಿಂದ ಬಡಜನತೆಯು ತಮ್ಮ ಕರುಳ ಕುಡಿಗಳನ್ನು ಮಾರಾಟ ಮಾಡಿಕೊಂಡ ಸತ್ಯವು ವ್ಯಕ್ತವಾಗಿದೆ.[೨೫]

ಹೆಣ್ಣು ಶಿಶುಹತ್ಯೆಯ ಬಗ್ಗೆ ನಿಖರವಾದಂತಹ ಅಂಕಿ ಅಂಶಗಳನ್ನು ಒದಗಿಸುವುದು ಕಷ್ಟಕರವಾದ ಕೆಲಸ. ಏಕೆಂದರೆ ಒಂದು ಬಗೆಯ ನಿಗೂಢತೆ ಕೃತ್ಯವನ್ನು ಸುತ್ತುವರೆದಿದೆ. ದಿನನಿತ್ಯವೂ ನಡೆಯುವ ಘಟನೆಗಳಿಗೆ ಸಾರ್ವಜನಿಕರು, ವೈದ್ಯಕೀಯ ಸಿಬ್ಬಂದಿ, ಪೊಲೀಸರು, ಮೌನ ಪ್ರೇಕ್ಷಕರಾಗಿದ್ದಾರೆ. ಜೊತೆಗೆ ಒಂದು ರೀತಿಯಲ್ಲಿ ಇವರೆಲ್ಲರೂ ಆ ಕಾರ್ಯದಲ್ಲಿ ಭಾಗಿಗಳು ಹೌದು ಎನ್ನುವ ಅಭಿಪ್ರಾಯಗಳು

ಹೆಚ್ಚಾಗಿ ಕೇಳಿ ಬರುತ್ತವೆ. ಇದಕ್ಕೆ ಪುಷ್ಟಿ ನೀಡುವಂತೆ ಇದುವರೆಗೂ ಹೆಣ್ಣು ಶಿಶುಹತ್ಯೆಗೆ ಮತ್ತು ಮಾರಾಟಕ್ಕೆ ಕಾರಣರಾದವರಿಗೆ ವಿಧಿಸಿರುವ ಶಿಕ್ಷೆಯ ಬಗ್ಗೆ ವಿಚಾರಿಸಿದಾಗ ಸಿಗುವ ಉತ್ತರಗಳು ಸಮಾಧಾನಕರ ವಾಗಿಲ್ಲ ಹಾಗೂ ಕಾನೂನಿನಡಿಯಲ್ಲಿ ಕ್ರಮಗಳು ಜರುಗಿರುವುದು ವಿರಳ.

ಹೆಣ್ಣು ಶಿಶುಹತ್ಯೆಯಂತಹ ಅಮಾನವೀಯ ಪದ್ಧತಿಯನ್ನು ತಡೆಗಟ್ಟಲು ಅನೇಕ ಕ್ರಮಗಳನ್ನು ಏಕಕಾಲದಲ್ಲಿ ಜರುಗಿಸಬೇಕಾಗುತ್ತದೆ. ಮೊದಲಿಗೆ ಆಗಬೇಕಾಗಿರುವುದು ಈ ಪ್ರಕರಣಗಳಲ್ಲಿ ಭಾಗಿಗಳಾದವರಿಗೆ ಕಠಿಣ ಶಿಕ್ಷೆಯನ್ನು ವಿಧಿಸುವಂತಹದ್ದು. ಇನ್ನೊಂದೆಡೆ ಜನ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಸಮಾರೋಪಾದಿಯಲ್ಲಿ ನಡೆಯಬೇಕು. ಆಸಕ್ತ ಹಾಗೂ ಸಶಕ್ತ ಕಾರ್ಯಕರ್ತರು ಹೆಣ್ಣು ಶಿಶು ಹತ್ಯೆ ತಡೆ ಕುರಿತು ಹೆಣ್ಣು ಸಂತತಿಯ ರಕ್ಷಣೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಮುಂದೊಂದು ದಿನ ಹೆಣ್ಣು ಮಕ್ಕಳ ಸಂಖ್ಯೆಯೇ ಇಳಿಮುಖವಾಗಿ ಗಂಡಿನ ಸಂಖ್ಯೆ ಹೆಚ್ಚಾಗಿ ಲಿಂಗ ಪ್ರಮಾಣದಲ್ಲಿ ಏರುಪೇರು ಉಂಟಾಗಿ ವಿಭಿನ್ನವಾದ ಹೊಸ ಸಮಸ್ಯೆಗಳನ್ನು ಸೃಷ್ಟಿಸಬಹುದಾದ ಅಪಾಯವಿದೆ.

ಬಾಲ್ಯವಿವಾಹ

ಭಾರತೀಯ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿಯ ಆರಂಭದ ಕಾಲಮಾನವನ್ನು ನಿಖರವಾಗಿ ಹೇಳಲಾಗದಿದ್ದರೂ ಅದನ್ನು ಮಧ್ಯಕಾಲೀನ ಬೆಳವಣಿಗೆ ಎಂಬುದಾಗಿ ಒಪ್ಪಿಕೊಳ್ಳಲಾಗಿದೆ. ಬಾಲ್ಯ ವಿವಾಹದ ಬಗ್ಗೆ ಅವಲೋಕನ ಮಾಡಿದಾಗ ಬಹುಶಃ ಕಾಲದಿಂದ ಕಾಲಕ್ಕೆ ಹೆಚ್ಚುತ್ತಾ ಹೋದ ಪಾವಿತ್ರ್ಯದ ಕಲ್ಪನೆ, ಹೆಣ್ಣಿನ ಪಾವಿತ್ರ್ಯ ನಾಶವನ್ನೇ ಪೌರುಷದ ಸಂಕೇತವಾಗಿ ಪ್ರಕಟಿಸುತ್ತಾ ಬಂದ ಸಾಮಾಜಿಕ ಧೋರಣೆಗಳ ನಡುವಿನ ತಿಕ್ಕಾಟದಲ್ಲಿ ವಿವಾಹವೇ ಸ್ತ್ರೀಗೆ ಭದ್ರತೆಯನ್ನೊದಗಿಸುವ, ಪಾವಿತ್ರ್ಯವನ್ನು ರಕ್ಷಿಸುವ ಏಕೈಕ ವಿಧಿ ಎಂಬ ನಿಲುವು ಬಲಗೊಳ್ಳುತ್ತಾ ಹೋಗಿ ಅಂತಿಮವಾಗಿ ಅದು ಬಾಲ್ಯವಿವಾಹ ಹಂತವನ್ನು ತಲುಪಿತು ಎಂದು ಅಭಿಪ್ರಾಯಗಳು ವ್ಯಕ್ತವಾಗಿವೆ. ಹೆಣ್ಣಿಗೆ ವಿವಾಹವೇ ಅಂತಿಮ ಎನ್ನುವುದಾದರೆ, ಅದನ್ನು ವಿವಾಹದ ಮೂಲಕ ಆದಷ್ಟು ಬೇಗನೆ ಪೂರೈಸಿ ಬಿಡುವುದು ಸಮಯೋಚಿತ ಎಂಬಂತಹ ವಿಚಾರಗಳಿಂದ ಇದು ಗಟ್ಟಿಯಾಗ ತೊಡಗಿತು. ಹೀಗೆ ಬಾಲ್ಯ ವಿವಾಹ ಎನ್ನುವುದು ಆರ್ಥಿಕತೆಗೂ, ಸಾಮಾಜಿಕತೆಗೂ ತಳಕು ಹಾಕಿಕೊಂಡಂತಹ ವ್ಯವಸ್ಥೆಯಾಗಿದೆ. ಹೀಗೆ ಹೆಣ್ಣು ಪ್ರಾಪ್ತಳಾಗುವ ಮುಂಚೆ ಅವಳಿಗೆ ಬುದ್ಧಿ ಬರುವ ಮುಂಚೆ ೧೮ ವರ್ಷಗಳಾಗುವುದಕ್ಕಿಂತ ಮುಂಚಿತವಾಗಿ ಅವಳಿಗೆ ವಿವಾಹ ಮಾಡಿ ಅವಳನ್ನು ವಿವಾಹದ ಬಂಧನಕ್ಕೆ ದೂಡುವಂತಹ ಪದ್ಧತಿ ಇಂದು ನಮ್ಮೆದುರು ಕಾಣಬರುತ್ತಿರುವ ಸಾಮಾಜಿಕ ಪದ್ಧತಿಯಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕಂಡು ಬರುವ ಅನೇಕ ಸಾಮಾಜಿಕ ಸಮಸ್ಯೆಗಳಲ್ಲಿ ಬಾಲ್ಯವಿವಾಹ ದೊಡ್ಡ ಸಮಸ್ಯೆಯಾಗಿದೆ. ಕರ್ನಾಟಕದಲ್ಲಿಯೇ ಅತೀ ಹೆಚ್ಚು ಬಾಲ್ಯವಿವಾಹಗಳು ಜರುಗುವುದು ಹೈದರಾಬಾದ್ ಕರ್ನಾಟಕದಲ್ಲಿ. ಇಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಹೈದರಾಬಾದ್

ಕರ್ನಾಟಕ ಭಾಗದಲ್ಲಿ ಅನೇಕ ಕುಟುಂಬದಲ್ಲಿ ಬಾಲ್ಯವಿವಾಹಗಳು ಜರುಗುತ್ತಲೇ ಇರುತ್ತವೆ. ಆದರೆ ಇದರ ಕಡೆ ಗಮನಹರಿಸದೆ, ಸಾಮೂಹಿಕ ವಿವಾಹಗಳಲ್ಲಿ ಒಂದ್ಯೆದು ಅಪ್ರಾಪ್ತರನ್ನು ಹಿಡಿದು ಅದನ್ನು ಸರಕಾರಕ್ಕೆ, ಸಮಾಜಕ್ಕೆ ತೋರಿಸುವುದಷ್ಟೆ ನಡೆದಿದೆ. ಆದರೆ ಹೆಚ್ಚು ಕುಟುಂಬದಲ್ಲಿ ಬಾಲ್ಯ ವಿವಾಹ ಗಳಾಗುತ್ತಿವೆಯಲ್ಲ, ಅದನ್ನು ನಿಲ್ಲಿಸಲು ಯಾರಿಗೂ ಸಾಧ್ಯವಾಗುತ್ತಿಲ್ಲ. ಈ ಭಾಗದ ಶಹಪುರ, ಸುರಪುರಗಳನ್ನು ಮೊದಲುಗೊಂಡು ಬೀದರ್‌ನ ತುದಿಯವರೆಗೆ ಕಂಡು ಬರುವ ಸ್ಥಿತಿ ಎಂಥವರನ್ನು ಬೆಚ್ಚಿ ಬೀಳಿಸುತ್ತದೆ. ಅದರಲ್ಲೂ ರಾಯಚೂರು, ಯಾದಗಿರಿಯ ಹಳ್ಳಿಗಳಿಗೆ ಹೋಗಿ ನೋಡಿದ್ದಾದರೆ ಎಂಟು, ಹತ್ತು ವರ್ಷದ ಹೆಚ್ಚಿನ ಹೆಣ್ಣುಮಕ್ಕಳ ಕುತ್ತಿಗೆಯಲ್ಲಿ ತಾಳಿ ಇರುತ್ತದೆ. ಸುಮಾರು ೧೦೦ಕ್ಕೆ ೪೦ ಮಕ್ಕಳಲ್ಲಿ ತಾಳಿಗಳು ಕಂಡು ಬರುತ್ತದೆ. ಮೇಲ್ಜಾತಿಯಲ್ಲಿರುವ ಅಥವಾ ಸ್ವಲ್ಪ ಸುಶಿಕ್ಷಿತರನ್ನು ಹೊರತುಪಡಿಸಿದರೆ ಹೆಚ್ಚು ಕಡಿಮೆ ಎಲ್ಲಾ ಬಡವರ ಮಕ್ಕಳ ಹೆಣ್ಣು ಶಿಶುವಿನ ಕೊರಳಲ್ಲಿ ತಾಳಿ ಇರುವುದನ್ನು ನೋಡುತ್ತೇವೆ. ಹೀಗೆ ಸಾಮೂಹಿಕವಾಗಿ ಆ ಸಮಸ್ಯೆಗೆ ನಮ್ಮ ಸರಕಾರಗಳಿಂದ ಪರಿಹಾರಗಳನ್ನು ರೂಪಿಸಲಿಕ್ಕೆ ಸಾಧ್ಯವಾಗುತ್ತಿಲ್ಲ.

ಇದನ್ನು ಹೋರಾಟದ ರೂಪದಲ್ಲಿ ನಿಲ್ಲಿಸಲು ಹೊರಟರೆ ಆ ತಂದೆ ತಾಯಿಗಳು ಹಾಕುವಂತ ಪ್ರಶ್ನೆಗಳಿಗೆ ಉತ್ತರವಿರುವುದಿಲ್ಲ. ನಮ್ಮ ಮಗಳನ್ನು ಪ್ರಾಪ್ತವಯಸ್ಸಿಗೆ ಬಂದ ನಂತರ ಮದುವೆ ಮಾಡಿ ಅಂತ ನೀವೇನೋ ಹೇಳುತ್ತೀರಿ, ಆದರೆ ಈಗ ಬಾಲ್ಯದೊಳಗೆ ಏನೂ ವರದಕ್ಷಿಣೆ ಇಲ್ಲದೆ ಹೆಚ್ಚು ಆಡಂಬರವಿಲ್ಲದೆ, ಹೆಚ್ಚು ಖರ್ಚಿಲ್ಲದೆ, ಹೇಗೋ ಮದುವೆ ನಡೆದು ಹೋಗುತ್ತದೆ. ಆದರೆ ದೊಡ್ಡವರಾದ ಮೇಲೆ ವರದಕ್ಷಿಣೆ ಅಂತ ಕೊಡಬೇಕು, ಖರ್ಚು ಮಾಡಿ ಮದುವೆ ಮಾಡಬೇಕು, ಅದಕ್ಕಿಂತ ಹೆಚ್ಚಾಗಿ ಅವರು ಹದಿನೆಂಟು ವರ್ಷದವರಾಗುವವರೆಗೂ ಅವರನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕು, ಇದು ನಮ್ಮ ಕಡೆಯಿಂದ ಸಾಧ್ಯವಿಲ್ಲ. ಹಾಗಾಗಿ ಈಗಲೇ ನಾವು ಬಾಲ್ಯ ವಿವಾಹ ಮಾಡಿ ಮುಗಿಸುತ್ತೇವೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅಂದರೆ ಹೆಣ್ಣನ್ನು ಕಾಯಬೇಕಲ್ಲ ಎನ್ನುವ ವಿಚಾರಧಾರೆ ಕೆಳವರ್ಗದವರಲ್ಲಿ ಭಯಾನಕವಾಗಿ ಬೇರೂರಿದೆ. ಒಂದು ಕಡೆ ಮೇಲ್ಜಾತಿಯವರು ಹೆಣ್ಣಿನ ಭದ್ರತೆ ಬಗ್ಗೆ ಅಷ್ಟಾಗಿ ಚಿಂತಿತರಾಗಿಲ್ಲ. ಅವರು ಹುಡುಗಿಯರನ್ನು ಕಾಯುವುದಲ್ಲ, ಅವರನ್ನು ಜಗತ್ತಿಗೆ ಮುಖಾಮುಖಿಯಾಗುವ ರೀತಿಯೊಳಗೆ ಬೆಳೆಸುತ್ತಿದ್ದಾರೆ. ತಮ್ಮ ಹುಡುಗಿಯರನ್ನು ವಿಶ್ವಸುಂದರಿಯರನ್ನಾಗಿ, ನಟಿಯರನ್ನಾಗಿ, ವೈದ್ಯರು ಇಂಜಿನಿಯರ್‌ಗಳನ್ನಾಗಿ ಮಾಡಬೇಕು ಎನ್ನುವಂತಹ ರೀತಿಯಲ್ಲಿ ಅವರಿಗೆ ತರಬೇತಿಯನ್ನು ಕೊಡಿಸುತ್ತಿದ್ದಾರೆ. ಇದು ಮೇಲ್ವರ್ಗದ ಮತ್ತು ಕೆಳವರ್ಗದ ಕುಟುಂಬದ ವಿಚಾರಗಳಲ್ಲಿರುವ ದ್ವಂದಗಳಾಗಿವೆ.

ಇನ್ನು ಹೆಣ್ಣನ್ನು ಬಾಲ್ಯದಲ್ಲೆ ವಿವಾಹಕ್ಕೆ ತಳ್ಳುವುದರಿಂದ ಅವಳಿಗೆ ಜೀವನದಲ್ಲಿ ತನ್ನ ಆಯ್ಕೆಯ, ತನ್ನ ಇಚ್ಛೆಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾಳೆ. ತನಗೆ ಬುದ್ಧಿ, ಅರಿವು ಬರುವ ಮುಂಚೆಯೇ ಬೇರೊಬ್ಬನನ್ನು ಬೇರೊಂದು ಕುಟುಂಬವನ್ನು ತನ್ನ ಸರ್ವಸ್ವವನ್ನಾಗಿ ಸ್ವೀಕರಿಸಬೇಕಾದ ಅನಿವಾರ್ಯತೆ ಗಿಳಿಯುತ್ತಾಳೆ. ಇನ್ನು ಚಿಕ್ಕಂದಿನಿಂದಲೇ ವಿವಾಹದ ಬಂಧನಕ್ಕೆ ಒಳಗಾಗುವುದರಿಂದ ಇತರ ಹೆಣ್ಣು ಮಕ್ಕಳಂತೆ ತನ್ನ ಬಾಲ್ಯವನ್ನು ಅನುಭವಿಸುವ ತನ್ನಿಷ್ಟದಂತೆ ಬದುಕುವ, ಭವಿಷ್ಯದ ಜೀವನವನ್ನು

ರೂಪಿಸಿಕೊಳ್ಳುವ ಅವಕಾಶದಿಂದ ವಂಚಿತಳಾಗುತ್ತಿದ್ದಾಳೆ. ಇವಳಿಗೆ ಈಗಾಗಲೇ ವಿವಾಹವಾಗಿದೆ ಎನ್ನುವ ಕಾರಣದಿಂದ ಸರಿಯಾದ ಶಿಕ್ಷಣವನ್ನು ನೀಡದೇ ಶಾಲೆಗೆ ಕಳುಹಿಸದೆ ಅವಳನ್ನು ಅನಕ್ಷರತೆಗೆ, ಮೌಢ್ಯಕ್ಕೆ ತಳ್ಳಲಾಗುತ್ತದೆ.

ಇನ್ನು ಸಣ್ಣ ವಯಸ್ಸಿನಲ್ಲಿ ವಿವಾಹವಾಗುವ ಇವಳು ಪ್ರಾಪ್ತಳಾದ ನಂತರ ಒಂದು ವೇಳೆ ಪತಿಯನ್ನು ಕಳೆದುಕೊಂಡಳೆಂದರೆ ಅವಳ ಜೀವನ ನರಕಯಾತನೆಯಾಗುತ್ತದೆ. ಒಂದು ಕಡೆ ಅವಳ ಪುನರ್‌ವಿವಾಹಕ್ಕೆ ನಮ್ಮ ಸಮಾಜ ಅಷ್ಟು ಸುಲಭವಾಗಿ ಸಮ್ಮತಿ ನೀಡುವುದಿಲ್ಲ. ಇನ್ನು ಸ್ವತಂತ್ರಳಾಗಿ ಬದುಕುವ ವಿದ್ಯೆ, ಬುದ್ಧಿ, ಸಾಮರ್ಥ್ಯ ಅವಳಿಗಿರುವುದಿಲ್ಲ. ಹಾಗಾಗಿ ಅವಳು ಸಾಮಾಜಿಕ ಸ್ಥಾನಮಾನ, ಆರ್ಥಿಕ ಅಭದ್ರತೆಯ ಜೊತೆಗೆ ಲೈಂಗಿಕ ಶೋಷಣೆಗಳಿಗೂ ಒಳಪಡಬಹುದಾದ ಸ್ಥಿತಿಗೆ ಬರುತ್ತಾಳೆ. ವಿವಾಹ ಬಂಧನದಲ್ಲಿ ಗಂಡನ ಅಧೀನದಲ್ಲಿದ್ದವಳು ನೇರವಾಗಿ ಕುಟುಂಬದ ಅಥವಾ ಸಮಾಜದ ಅಧೀನಕ್ಕೆ ಒಳಪಡುತ್ತಾಳೆ. ಕೆಲವೊಮ್ಮೆ ಸುತ್ತಮುತ್ತಲಿನ ಕೆಲವರು ಆಕೆಯ ಮೇಲೆ ಒಡೆತನವನ್ನು ಹೊಂದಲು ಹವಣಿಸುತ್ತಾರೆ. ಅಂತಿಮವಾಗಿ ಇದು ಅವಳ ಆತ್ಮಹತ್ಯೆಗೂ ಕಾರಣವಾಗುತ್ತದೆ. ಹೀಗಾಗಿ ಬಾಲ್ಯವಿವಾಹ ಎನ್ನುವುದು ಒಂದೆಡೆ ಪಾವಿತ್ರ್ಯವನ್ನು ಅವಳ ಮೆಲೆ ಹೇರುತ್ತಲೇ, ಜೊತೆ ಜೊತೆಗೆ ಅದನ್ನು ಕಳೆದುಕೊಳ್ಳುವ ಭಯ ಅಸಹಾಯಕತೆಯನ್ನು ಏರ್ಪಡಿಸುತ್ತದೆ.

ಸ್ವಾತಂತ್ರ್ಯದ ನಂತರದ ಹಲವು ದಶಕಗಳವರೆಗೂ ಬಾಲ್ಯ ವಿವಾಹವನ್ನು ತಡೆಗಟ್ಟುವ ಯಾವ ಪರಿಣಾಮಕಾರಿ ಕಾನೂನುಗಳು ಪ್ರಯತ್ನಗಳು ನಡೆಯಲಿಲ್ಲ. ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಅದು ಕಾನೂನಿನ ಪುಸ್ತಕಕ್ಕೆ ಹೇಳಿಕೆಗೆ ಮಾತ್ರ ಸೀಮಿತವಾಗಿತ್ತು. ಅದರಲ್ಲೂ ವಿವಾಹವೆಂಬುದು ಕೌಟುಂಬಿಕ, ಧಾರ್ಮಿಕ ಆಚರಣೆಯ ಸ್ವರೂಪದಾದ್ದರಿಂದ ಅದನ್ನು ಕಾನೂನಿನ ಮೂಲಕ ನಿಷೇಧದ ಮೂಲಕ ಹಿಡಿತವನ್ನು ಹೊಂದುವುದು ಸುಲಭದ್ದಾಗಿರಲಿಲ್ಲ. ೧೯೭೮ರಲ್ಲಿ ಸರಕಾರ ಕಾನೂನಿಗೆ ತಿದ್ದುಪಡಿ ತಂದು ಮದುವೆಯಾಗುವ ಹೆಣ್ಣುಗಂಡಿನ ವಯಸ್ಸು ೧೮-೨೧ ಎಂದು ನಿರ್ಧರಿಸಿದೆ. ಅದರಲ್ಲೂ ಬಾಲ್ಯ ವಿವಾಹ ನಿಷೇಧವು, ಮಹಿಳಾ ಸುಧಾರಣೆಯೊಂದಿಗೆ ಹಲವಾರು ಭಿನ್ನ ಸಾಮಾಜಿಕ ಸಮಸ್ಯೆಗಳಿಂದ ಬಿಡುಗಡೆ ನೀಡುವ ಅಂಶವಾಗಿರುವುದರಿಂದ ಸರಕಾರ ಹಲವಾರು ಪ್ರಯತ್ನಗಳನ್ನು ಕೈಗೊಂಡಿದೆ. ಹಲವಾರು ಮಹಿಳಾ ಸಂಘಟನೆಗಳು, ಸಾಮೂಹಿಕ ವಿವಾಹಗಳ ಮೇಲೆ ಹದ್ದಿನ ಕಣ್ಣಿಟ್ಟಿವೆ.

ಬಾಲ್ಯವಿವಾಹ ಸಮಾಜಕ್ಕೆ ಅಂಟಿಕೊಂಡಿರುವ ಅನಿಷ್ಟ ಪದ್ಧತಿ. ಇದರ ನಿರ್ಮೂಲನೆಗೆ ಪಾಲಕರು, ಪೋಷಕರು, ಪ್ರಜ್ಞಾವಂತ ಯುವಕರು, ನಾಗರಿಕರು ಮುಂದಾಗಬೇಕು. ಗ್ರಾಮೀಣ ಭಾಗದಲ್ಲಿ ಮೂಢನಂಬಿಕೆಯೇ ಬಾಲ್ಯ ವಿವಾಹಕ್ಕೆ ಕಾರಣವಾಗಿದೆ. ಹೀಗಾಗಿ ಇವರು ಮಕ್ಕಳಿಗೆ ಮೊದಲು ಶಿಕ್ಷಣ ನೀಡಬೇಕು. ಸರಕಾರಗಳು ಅಗತ್ಯ ಯೋಜನೆಗಳನ್ನು ರೂಪಿಸಿ ಅವರ ಮುಂದಿನ ಉತ್ತಮ ಭವಿಷ್ಯಕ್ಕೆ ದಾರಿ ಮಾಡಿ ಕೊಡಬೇಕು. ಈ ಪದ್ಧತಿ ಆಚರಿಸುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಮಹಿಳಾ ಸಂಘಟನೆಗಳು, ಸಂಘಸಂಸ್ಥೆಗಳು ಗ್ರಾಮೀಣ ಪ್ರದೇಶದ ಜನರಿಗೆ ಇದರ ಬಗ್ಗೆ ತಿಳುವಳಿಕೆ ನೀಡಬೇಕು. ಆಗ ಮಾತ್ರ ಪದ್ಧತಿ ನಿಯಂತ್ರಣಕ್ಕೆ ಬರಲು, ನಿರ್ಮೂಲನೆ ಆಗಲು ಸಾಧ್ಯವಾಗುತ್ತದೆ. ಇತ್ತೀಚೆಗೆ ಸರಕಾರ ಮತ್ತು

ಸಂಘ ಸಂಸ್ಥೆಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಬಾಲ್ಯ ವಿವಾಹ ನಿಷೇಧ ಅರಿವು ಆಂದೋಲನಗಳು, ಬಾಲ್ಯ ವಿವಾಹ ನಿಷೇಧ ಲಾಂಛನಗಳ ಬಿಡುಗಡೆಯೊಂದಿಗೆ ಆರಂಭವಾಗಿರುವುದು ಉತ್ತಮ ಬೆಳವಣಿಗೆಯಾಗಿದೆ.

ದೇವದಾಸಿ ಪದ್ಧತಿ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರೂಢಿಯಲ್ಲಿರುವ ಮತ್ತೊಂದು ಸಾಮಾಜಿಕ ಪಿಡುಗು ಎಂದರೆ ದೇವದಾಸಿ ಪದ್ಧತಿ. ಇತಿಹಾಸವನ್ನು ಅವಲೋಕಿಸಿದಾಗ ದೇವದಾಸಿ ಪದ್ಧತಿಯು ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೂಪದಲ್ಲಿ ರೂಢಿಯಲ್ಲಿದ್ದುದನ್ನು ಗುರುತಿಸಬಹುದು. ಆದರೆ ಒಂದು ಕಾಲದಲ್ಲಿ ಸಾಂಸ್ಕೃತಿಕ ಕೇಂದ್ರಗಳಾಗಿದ್ದ ದೇವದಾಸಿ ವಠಾರಗಳು ಕಾಲಕ್ರಮೇಣ ವೇಶ್ಯಾವಾಟಿಕೆಯ ಕೇಂದ್ರಗಳಾಗಿ ಮಾರ್ಪಾಟಾಗಿದ್ದು, ಸಮಾಜಕ್ಕೆ ಎದುರಾದ ಬೃಹತ್ ಸಮಸ್ಯೆಯಾಗಿದೆ. ಸ್ವಾತಂತ್ರ್ಯನಂತರ ದಲ್ಲೂ ದೇವದಾಸಿ ಪದ್ಧತಿ ಇಲ್ಲಿ ರೂಢಿಯಲ್ಲಿದ್ದು ಕೆಳವರ್ಗದ ಮತ್ತು ಬಡ ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆಗೆ ದಾರಿಯಾಗಿದೆ. ಒಂದು ರೀತಿಯಲ್ಲಿ ಬಡತನ ಮತ್ತು ದೇವದಾಸಿ ಒಂದಕ್ಕೊಂದು ತಳಕು ಹಾಕಿಕೊಂಡಿದೆ ಎನ್ನಬಹುದು.

ದೇವದಾಸಿ ಪದ್ಧತಿಯ ಮೂಲವನ್ನು ನೋಡಿದಾಗ ಇದು ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಿದ್ದಾಗಿದೆ. ಸಮಾಜದ ಮಹಿಳೆಯರು ಮಾತೃಪೂಜೆ ಅಥವಾ ತಂತ್ರವಿದ್ಯೆಯಿಂದ ಪ್ರಭಾವಿತರಾಗಿ ಆದಿಶಕ್ತಿಯಾದ ಪಾರ್ವತಿಯ ಅಂಶವಾದ ರೇಣುಕಾ ಅಥವಾ ಯಲ್ಲಮ್ಮನೊಂದಿಗೆ ತಮ್ಮನ್ನು ಗುರುತಿಸಿ ಕೊಂಡರು. ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗಗಳಲ್ಲಿ ದೇವಿಯ ದೇವಾಲಯಗಳು ಹೆಚ್ಚೆಚ್ಚು ಸ್ಥಾಪನೆಯಾಗುತ್ತಾ ಹೋದಂತೆ ಧರ್ಮ ಹಾಗೂ ದೇವದಾಸಿ ಪದ್ಧತಿ ಮಧ್ಯೆ ಸಂಪರ್ಕ ಬೆಳೆದು ಇವರು ಗಣನೀಯ ಪ್ರಮಾಣದಲ್ಲಿ ಹೆಚ್ಚಾದರು. ಹೀಗಾಗಿ ದೇವದಾಸಿ ಪದ್ಧತಿಯನ್ನು ತಮ್ಮ ಸಮಾಜದ ಸಂಸ್ಕೃತಿಯ ಭಾಗವಾಗಿ ನಾವು ಒಪ್ಪಿಕೊಂಡೆವು. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಶಿಷ್ಟ ಸಂಸ್ಕೃತಿ ಮತ್ತು ಅನಿಷ್ಟ ಸಂಸ್ಕೃತಿಗಳು ಬೆಳೆದುಕೊಂಡು ಬಂದಿವೆ. ಅನಿಷ್ಟ ಸಂಸ್ಕೃತಿಯ ಪರಂಪರೆಯಲ್ಲಿ ಇದನ್ನು ಒಪ್ಪಿಕೊಂಡು, ಮಾನಸಿಕವಾಗಿ ಬಲಹೀನರನ್ನು ಒಪ್ಪುವಂತೆ ಮಾಡಿ ಇಂದಿಗೂ ಆಚರಿಸಿಕೊಂಡು ಬಂದರು. ತಾಂತ್ರಿಕರು ಅನುಸರಿಸಿದ ಪಂಚತಂತ್ರ ಪೂಜಾಪದ್ಧತಿಯಲ್ಲಿ ಲೈಂಗಿಕ ಸಂಪರ್ಕ ಹೊಂದುವುದು ಪೂಜಾವಿಧಿಯ ಒಂದು ಭಾಗವಾಗಿದ್ದರಿಂದಾಗಿ ಶಕ್ತಿ ಪೂಜೆಯ ಕೇಂದ್ರಗಳಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಹೀಗಾಗಿ ಅನೇಕ ಬಾಲಕಿಯರನ್ನು ಹಲವಾರು ಕಾರಣಗಳಿಂದಾಗಿ ಎಲ್ಲಮ್ಮನಿಗಾಗಿ ಮೀಸಲಿಡುವ ಪದ್ಧತಿ ಹೆಚ್ಚಾಗುತ್ತಾ ಹೋಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ದೇವದಾಸಿ ಪದ್ಧತಿಗೆ ಹೆಚ್ಚು ಬೆಂಬಲ ಸಿಕ್ಕಿತು. ಪರಿಣಾಮವಾಗಿ ಬಾಲಕಿಯರು ಗ್ರಾಮಗಳಿಂದ ನಗರಕ್ಕೆ ವಲಸೆ ಹೋಗಿ ಬ್ರಿಟೀಷರ ಮಿಲಿಟರಿ ಸಿಬ್ಬಂದಿಗಳ ಕಾಮ ಪೂರೈಕೆಯ ಸರಕುಗಳಾದರು. ಕ್ರಮೇಣ ಇದು ವೇಶ್ಯಾವಾಟಿಕೆಗೆ ದಾರಿಯಾಯಿತು.[೮೬] ಹೀಗೆ ಆಧುನಿಕ ಪರಿಕಲ್ಪನೆಯಲ್ಲಿ ದೇವದಾಸಿಯರೆಂದರೆ ವೇಶ್ಯೆಯರು ಎನ್ನುವ ಹಂತಕ್ಕೆ ಬಂದು ತಲುಪಿದೆ.

ಸರಕಾರದ ಸಮೀಕ್ಷೆ ಪ್ರಕಾರ ಸುಮಾರು ೬೦,೦೦೦ಕ್ಕಿಂತ ಹೆಚ್ಚು ದೇವದಾಸಿಯರು ಕರ್ನಾಟಕ ವೊಂದರಲ್ಲೇ ಇದ್ದಾರೆ. ಅದರಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಇವರ ಸಂಖ್ಯೆ ಹೆಚ್ಚಾಗಿ ಇದೆ. ಈ ಪದ್ಧತಿಯನ್ನು ಅನುಸರಿಸುವ ಮಹಿಳೆಯರಲ್ಲಿ ಕೃಷಿ ಕೂಲಿ ಕಾರ್ಮಿಕರು, ಭೂಹೀನರು, ಅನಕ್ಷರಸ್ಥರು, ದಲಿತರೆ ಹೆಚ್ಚಿನವರಾಗಿದ್ದಾರೆ. ದೇವದಾಸಿ ಪದ್ಧತಿಗೆ ಒಳಪಡುವ ಹೆಣ್ಣಿಗೆ ಮುತ್ತುಕಟ್ಟಿ, ಗೆಜ್ಜೆಪೂಜೆ ಮಾಡಿ ದೇವರ ಜತೆ ಮದುವೆ ಶಾಸ್ತ್ರ ಮಾಡುತ್ತಾರೆ. ಈ ವರ್ಗದ ಕುಟುಂಬದಲ್ಲಿ ಹುಟ್ಟಿದ ಹೆಣ್ಣನ್ನು ದೇವರಿಗೆ ಮೀಸಲು ಬಿಡದೆ ಹೋದರೆ, ಆ ಸಂಪ್ರದಾಯ ಮುರಿದರೆ ಆ ಕುಟುಂಬವೇ ಸರ್ವನಾಶವಾಗುತ್ತದೆ ಎನ್ನುವ ಧಾರ್ಮಿಕ ನಂಬಿಕೆಯನ್ನು ಅವರ ಮನದಲ್ಲಿ ತುಂಬಿರುತ್ತಾರೆ. ದೇವದಾಸಿ ಪದ್ಧತಿಗೆ ಒಳಗಾಗುವ ವರಲ್ಲಿ ಹೆಚ್ಚಿನವರು ಸ್ವಇಚ್ಛೆಯಿಂದ ಆದವರಲ್ಲ, ಆ ಹೆಣ್ಣಿಗೆ ತಿಳುವಳಿಕೆ ಬರುವ ಪೂರ್ವದಲ್ಲಿಯೇ ಇವರನ್ನು ಪದ್ಧತಿಗೆ ನೂಕಲಾಗುತ್ತದೆ. ಸಂಪ್ರದಾಯ, ಧಾರ್ಮಿಕ ನಂಬಿಕೆಯಿಂದ ದೇವದಾಸಿಯರಾದ ಇವರನ್ನು ಕ್ರಮೇಣ ದುಡಿಮೆಯ ಸರಕನ್ನಾಗಿ ಬಳಸಿಕೊಳ್ಳುತ್ತಾರೆ.

ಗುಲಬರ್ಗಾ ಜಿಲ್ಲೆಯ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಹೆಣ್ಣು ದೇವತೆಗಳ ದೇವಾಲಯಗಳು ದೇವದಾಸಿ ಪದ್ಧತಿಯ ದೀಕ್ಷೆಯ ಕೇಂದ್ರಗಳಾಗಿವೆ. ಗುಲಬರ್ಗಾ ಜಿಲ್ಲೆಯ ಚಿಂಚೋಳಿ ಹತ್ತಿರದ 'ಮಾಪುರ ತಾಯಿ' ಎನ್ನುವ ಹೆಣ್ಣು ದೇವತೆ, ಬಳ್ಳಾರಿ ಜಿಲ್ಲೆಯ ಮುನಿರಾಬಾದ್ ಸಮೀಪದ ಹುಲಗಿ ದೇವಾಲಯದಲ್ಲಿ, ಹೆಣ್ಣು ಮಕ್ಕಳನ್ನು ದೇವರ ಹೆಸರಿನಲ್ಲಿ ದೇವದಾಸಿ ಪದ್ಧತಿಗೆ ಒಳಪಡಿಸುವ ವಿಧಿ ವಿಧಾನಗಳು ನಡೆಯುತ್ತವೆ. ಅದರಲ್ಲೂ ಗುಲಬರ್ಗಾ ಬಳಿಯ 'ಮಾಪುರ ತಾಯಿ' ಎನ್ನುವ ದೇವರ ಹೆಸರಿನಲ್ಲಿ ಹೆಚ್ಚಾಗಿ ಕೆಳಜಾತಿಯವರ ಎಲ್ಲಾ ಹೆಣ್ಣು ಮಕ್ಕಳನ್ನು ಒಂದು ರೀತಿಯಾಗಿ ಬೆತ್ತಲೆ ಮೆರವಣಿಗೆ ಮಾಡಿ ದೇವದಾಸಿಯರನ್ನಾಗಿ ಮಾಡಿ, ಅವರನ್ನು ಈ ಪದ್ಧತಿಗೆ ಒಳಪಡಿಸಿ ಕೆಲವು ಅವಧಿಯ ನಂತರ ಅವರನ್ನು ಮುಂಬಯಿನಂತಹ ದೊಡ್ಡ ಪಟ್ಟಣಗಳಿಗೆ ರವಾನೆ ಮಾಡುವ ದಂಧೆ ಇಲ್ಲಿ ಜೀವಂತ ಇರುವಂತಹ ಸಂಗತಿಯಾಗಿದೆ.

ಇಂದು ಹೈದರಾಬಾದ್ ಕರ್ನಾಟಕದಲ್ಲಿ ಇರುವಂತ ಒಂದಲ್ಲಾ ಒಂದು ಹೆಣ್ಣು ದೇವತೆಗಳಿಗೆ ಸಂಬಂಧಪಟ್ಟಂತೆ, ಕೆಳಜಾತಿ, ಕೆಳವರ್ಗದ ಜನರು ಬಹಳ ನಿಷ್ಠೆಯಿಂದ ನಡೆದುಕೊಳ್ಳುತ್ತಿರುವುದರಿಂದ ತಮ್ಮ ಮನೆಯಲ್ಲಿ ಹಿರಿಯವಳಾಗಿ ಹುಟ್ಟಿದ ಮಗುವನ್ನು ದೇವರಿಗೆ ಬಿಡಬೇಕು ಎನ್ನುವಂಥ ನಂಬಿಕೆಯನ್ನು ಇಟ್ಟುಕೊಂಡು ಬಂದಿದ್ದಾರೆ. ತಮ್ಮ ಹಿರಿಯ ಹೆಣ್ಣು ಮಗಳನ್ನು ದೇವರಿಗೆ ಬಿಡಬೇಕು, ಬಿಡದೆ ಇದ್ದರೆ ತಮಗೆ ಕೆಟ್ಟದ್ದಾಗುತ್ತದೆ ಅಥವಾ ಕುಟುಂಬಕ್ಕೆ ಸಂಬಂಧಪಟ್ಟಂತೆ ಅವಘಡ ಸಂಭವಿಸುತ್ತದೆ ಎನ್ನುವ ಮೂಢನಂಬಿಕೆ ಬೆಳೆದು ಬಿಟ್ಟಿದೆ. ಇವರಿಗೆ ಏನಾದರೂ ಆದರೆ ನಾವು ನಮ್ಮ ಮಕ್ಕಳನ್ನು ದೇವರಿಗೆ ಬಿಟ್ಟಿಲ್ಲ ಅದಕ್ಕೆ ಹೀಗಾಗುತ್ತಿದೆ ಎನ್ನುವ ಮೌಢ್ಯ ಆವರಿಸಿ ಬಿಟ್ಟಿದೆ. ಹೀಗಾಗಿ ಪದ್ಧತಿ ಇನ್ನೂ ಜೀವಂತವಾಗಿ ಇರಲು ಕಾರಣವಾಗಿದೆ. ಇನ್ನು ದೇವದಾಸಿ ಪದ್ಧತಿಯ ಬಗ್ಗೆ ವಿಶ್ಲೇಷಣೆ ಮಾಡಿದಾಗ ಈ ಪದ್ಧತಿಗೆ ಒಳಪಡುವವರ ಮನಸ್ಥಿತಿಯ ಸ್ವರೂಪವನ್ನು ಗಮನಿಸಿದರೆ ದೇವದಾಸಿಯರು ತಾವು ಮಾಡುತ್ತಿರುವ ಕೆಲಸದ ಸ್ವರೂಪದ ಬಗ್ಗೆ ಸ್ವಲ್ಪವೂ ಅಳುಕಿಲ್ಲದೆ ಅದನ್ನು ದೇವಿ ಯಲ್ಲಮ್ಮನ ಪೂಜೆಯೆಂದೆ ಭಾವಿಸಿದ್ದಾರೆ.

ಹೀಗಾಗಿ ಈ ವೃತ್ತಿ ಅವರಿಗೆ ಯಾವ ರೀತಿಯ ಸಾಮಾಜಿಕ ಕಳಂಕವನ್ನು ತಂದಿಲ್ಲ. ಹಳ್ಳಿಯ ಎಲ್ಲಾ ಶುಭ ಸಮಾರಂಭಗಳಿಗೆ ಇವರಿಗೆ ಆಹ್ವಾನವಿರುವುದಲ್ಲದೆ ಇವರ ಭಾಗವಹಿಸುವಿಕೆಯು ಶುಭದ ಸಂಕೇತವೆಂದು ಪರಿಗಣಿಸಲಾಗುತ್ತದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ದೇವದಾಸಿ ಪದ್ಧತಿ ಹೆಚ್ಚಾಗಿ ಕಂಡು ಬರಲು ಕಾರಣಗಳನ್ನು ಅಧ್ಯಯನ ಮಾಡಿದಾಗ ತಿಳಿದು ಬರುವುದೇನೆಂದರೆ, ಇಲ್ಲಿನ ಭೌಗೋಳಿಕ ಪರಿಸ್ಥಿತಿ, ಪ್ರಕೃತಿ ವಿಕೋಪ, ಬರಗಾಲ, ಬಡತನ, ಅಜ್ಞಾನ, ಮೂಢನಂಬಿಕೆ, ಬಂಡವಾಳಶಾಹಿಗಳ ಪ್ರಭಾವ, ಅವಿಭಕ್ತ ಕುಟುಂಬ ಹೀಗೆ ಅನೇಕ ಕಾರಣಗಳು ಕಂಡು ಬರುತ್ತವೆ. ಅತ್ಯಂತ ಹಿಂದುಳಿದಿರುವ, ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇಲ್ಲಿ ಕೃಷಿ ಉದ್ಯೋಗವು ಅವರಿಗೆ ಭದ್ರತೆಯನ್ನು ಒದಗಿಸಿಲ್ಲ ಹಾಗೂ ಬೇರೆ ಉದ್ಯೋಗಾವಕಾಶಗಳು ಕಡಿಮೆ ಇವೆ. ಹೀಗಾಗಿ ಕಿತ್ತು ತಿನ್ನುವ ಬಡತನ ಸಮಸ್ಯೆಯು ಮೂಲ ಕಾರಣವಾಗಿದೆ. ತಮ್ಮದೆನ್ನುವ ನೆಲ ಇಲ್ಲದೆ ಬೇರೆ ದಾರಿ ಕಾಣದೆ ಇಲ್ಲಿಯ ಜನರಿಗೆ ಉಳಿಯುವ ಕೊನೆಯ ಮಾರ್ಗವಾಗಿ ಈ ಪದ್ಧತಿಗೆ ನೂಕಲ್ಪಡುತ್ತದೆ. ಹೀಗಾಗಿ ಇದೊಂದು ದುಡಿಮೆಯ ಹಕ್ಕು ಎಂದೇ ಒಪ್ಪಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಪೂರಕವಾಗಿ ಇಲ್ಲಿರುವ ಮೇಲ್ವರ್ಗದ ಜನರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷ ವಾಗಿ ಧರ್ಮದ ಮಾನ್ಯತೆ ಕೊಟ್ಟು ವೇಶ್ಯಾ ಪದ್ಧತಿಯನ್ನು ಕಾಪಾಡಿಕೊಂಡಿದ್ದಾರೆ. ಇದರ ಮೂಲಕ ಕೆಳಜಾತಿಯ ಹೆಣ್ಣಿನೊಂದಿಗೆ ತಾವು ಸಂಪರ್ಕವಿಟ್ಟುಕೊಳ್ಳಲು ಪರವಾನಿಗೆ ಪಡೆದಂತಾಗಿದೆ. ಇಂತಹ ವ್ಯವಸ್ಥೆಯೊಂದನ್ನು ರೂಡಿಸಿಕೊಂಡಿರುವ ಮೂಲಕ ಕೆಳಜಾತಿಯ ಮತ್ತು ಕೆಳವರ್ಗದ ಹೆಣ್ಣುಮಕ್ಕಳು ತಮ್ಮ ಆತ್ಮಗೌರವವನ್ನು ಮಾರಿಕೊಂಡಂತಾಗಿದೆ.

ಇನ್ನು ದೇವದಾಸಿ ಪದ್ಧತಿಗೆ ಹೆಚ್ಚು ಬಲಿಯಾಗಿರುವ ವರ್ಗ ಯಾವುದು ಎನ್ನುವ ಪ್ರಶ್ನೆ ಬಂದಾಗ ದೇವದಾಸಿ ಪದ್ಧತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗಿರುವವರು ಕೆಳವರ್ಗದವರು. ಅದರಲ್ಲೂ ಹೊಲೆಯ, ಮಾದಿಗ, ಬೇಡ, ಲಂಬಾಣಿ, ಬೋವಿ ಜನಾಂಗದವರೆ ಹೆಚ್ಚಾಗಿ ಕಂಡು ಬರುತ್ತಾರೆ. ಇವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಈ ಪದ್ಧತಿಗೆ ಬಲಿಯಾಗಿದ್ದಾರೆ. ಕೆಲವರು ಧಾರ್ಮಿಕ ಮೌಢ್ಯದಿಂದ ಇದನ್ನು ಒಪ್ಪಿಕೊಂಡು ಬಂದಿದ್ದಾರೆ. ಇನ್ನು ಹಲವರು ತಮ್ಮ ಆರ್ಥಿಕ ಪರಿಸ್ಥಿತಿಗಳಿಂದ ಇದಕ್ಕೆ ಬಲಿಯಾಗಿದ್ದಾರೆ.

ದೇವದಾಸಿ ಪದ್ಧತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಅನೇಕ ಕಾನೂನುಗಳನ್ನು ಜಾರಿಗೆ ತಂದಿದೆ ಹಾಗೂ ದೇವದಾಸಿ ಪದ್ಧತಿ ನಿರ್ಮೂಲನೆಗೆ, ಪುನರ್ವಸತಿಗೆ ಸರಕಾರ ಮತ್ತು ಸಂಘಸಂಸ್ಥೆಗಳು ಅನೇಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ೧೯೮೫ರಲ್ಲಿ ಅಥಣಿಯಲ್ಲಿ ದೇವದಾಸಿ ಪುನರ್ವಸತಿ ಸಂಘ ಈ ಪದ್ಧತಿಯ ನಿರ್ಮೂಲನೆಗೆ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಾಕಿಕೊಂಡು ದೊಡ್ಡ ಹೋರಾಟ ಆರಂಭಿಸಿದೆ. ದೇವದಾಸಿಯೊಬ್ಬಳಿಂದಲೇ ಈ ಕಾರ್ಯಕ್ರಮ ಆರಂಭವಾಗಿರುವುದು ಹಾಗೂ ಇದರ

ಹೋರಾಟಗಳನ್ನು ಮತ್ತು ಸಂಘಟನೆಯ ಕಾರ್ಯವನ್ನು ಮೆಚ್ಚಿ ಕರ್ನಾಟಕ ಸರಕಾರ ೧೯೯೦ರಲ್ಲಿ ಅದಕ್ಕೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಹಾಗೆಯೇ ಇತ್ತೀಚೆಗೆ ದೇವದಾಸಿಯರಿಗೆ ಮಾಸಿಕ ಪಿಂಚಣಿಯನ್ನು ನೀಡಬೇಕು. ದೇವದಾಸಿಯರ ಮಕ್ಕಳಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿನ ಒಳ ಮೀಸಲು ಸೌಲಭ್ಯ ಕಲ್ಪಿಸುವಂತೆ 'ದೇವದಾಸಿ ವಿಮೋಚನೆ ಸಂಘ'ದ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ದಿನಾಂಕ ೦೫.೦೧.೧೨ರಂದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ದೇವದಾಸಿಯರು ಹಾಗೂ ಅವರ ಮಕ್ಕಳ ಸಮಾವೇಶದಲ್ಲಿ ದೇವದಾಸಿ ಸಂಘದ ರಾಜ್ಯಾಧ್ಯಕ್ಷೆ ಬಿ. ಮಾಳಮ್ಮ ಮತ್ತು ದೇವದಾಸಿ ವಿಮೋಚನಾ ಸಂಘದ ರಾಜ್ಯ ಗೌರವ ಸಲಹೆಗಾರ ಯು. ಬಸವರಾಜ ಮಾತನಾಡುತ್ತಾ ದೇವದಾಸಿಯರಿಗೆ ಸರಕಾರ ಕೂಡಲೇ ತಲಾ ೨ ಎಕರೆ ಭೂಮಿ ನೀಡಬೇಕು, ಶೋಷಿತರ ಬದುಕಿಗೆ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಯೋಜನೆಗಳನ್ನು ರೂಪಿಸಬೇಕು. ದೇವದಾಸಿಯರ ಮಕ್ಕಳಿಗೆ ಸ್ವಯಂ ಉದ್ಯೋಗ ಒದಗಿಸಲು ಹೊಲಿಗೆ, ಕಂಪ್ಯೂಟರ್ ಸೇರಿ ನಾನಾ ತರಬೇತಿ ನೀಡಬೇಕು. ರಿಯಾಯಿತಿ ಬಡ್ಡಿಯಲ್ಲಿ ಸಾಲ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು.[೮೭]

ಹೈದರಾಬಾದ್ ಕರ್ನಾಟಕದ ಧಾರ್ಮಿಕ ನಂಬಿಕೆಗೆ, ಮೌಢ್ಯಕ್ಕೆ, ಪಾಳೇಗಾರಿಕೆ ವ್ಯವಸ್ಥೆಗೆ ಬಲಿಯಾಗಿ ತಳ ಸಮುದಾಯದ ಜನತೆ ದೇವದಾಸಿ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇಂಥ ಅನಿಷ್ಟಕಾರಿ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಕ್ರಿಯಾಶೀಲ ಸಂಘಟನೆಗಳು ಕೆಲವು ಅರ್ಥಪೂರ್ಣ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ದೇವದಾಸಿ ಮಹಿಳೆಯರನ್ನು ಪ್ರಮುಖವಾಹಿನಿಗೆ ತರುವ ಪ್ರಯತ್ನ ಮಾಡುತ್ತಿದೆ. ಗುಲಬರ್ಗಾ ಜಿಲ್ಲೆಯ ಚಿಂಚನೂರಿನಲ್ಲಿ ದೇವದಾಸಿ ಮಹಿಳೆಯರ ಅಭಿವೃದ್ಧಿಗಾಗಿ ಜನವಾದಿ ಮಹಿಳಾ ಸಂಘಟನೆ ಸಹ ಕೆಲಸ ಮಾಡುತ್ತಿದೆ. ಆದರೆ ಎಲ್ಲ ಚಟುವಟಿಕೆಗಳು ದೇವದಾಸಿ ಪದ್ಧತಿಯನ್ನು ಹಿಮ್ಮೆಟ್ಟಿಸುವಿಕೆಗೆ ಏನೇನೂ ಸಾಕಾಗುತ್ತಿಲ್ಲ ಎಂಬುದೆ ನೋವಿನ ಸಂಗತಿ. ಎಲ್ಲಾ ಸಮಸ್ಯೆಗಳ ಜೊತೆಗೆ ಇತರ ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ, ಅನಕ್ಷರತೆ, ಜಾತೀಯತೆ, ಅತ್ಯಾಚಾರ, ಮಹಿಳೆಯ ಮೇಲೆ ದೌರ್ಜನ್ಯ, ಲಿಂಗ ಅಸಮಾನತೆ, ವೇತನ ತಾರತಮ್ಯ, ಹೀಗೆ ಅನೇಕ ರೀತಿಯಲ್ಲಿ ಈ ಭಾಗದ ಮಹಿಳೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಹಾಗೆಯೇ ಮಹಿಳೆಯರ ಇಂತಹ ಸಮಸ್ಯೆಗಳನ್ನು ಅರಿತುಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ, ನಿವಾರಿಸುವಲ್ಲಿ ಅನೇಕ ಮಹಿಳಾ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಕೆಲವು ಹೀಗಿವೆ.

ಬೀದರ್ ಜಿಲ್ಲೆಯಲ್ಲಿರುವ ಮಹಿಳಾ ಸಂಘಟನೆ

೧. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ - ಅಂಬುಬಾಯಿ ಮಾಳಗೆ (ಜಿಲ್ಲಾ ಅಧ್ಯಕ್ಷರು)[೮೮]

ಗುಲಬರ್ಗಾ ಜಿಲ್ಲೆಯಲ್ಲಿರುವ ಮಹಿಳಾ ಸಂಘಟನೆಗಳು

೧. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ - ಶಶಿಕಲಾ ಕಡಗಂಚಿ (ಜಿಲ್ಲಾ ಅಧ್ಯಕ್ಷರು)

೨. ಪ್ರಜ್ಞಾ ಕಾನೂನು ಸಲಹಾ ಸಮಿತಿ - ಡಾ. ಮೀನಾಕ್ಷಿಬಾಳಿ

೩. ಮಹಿಳಾ ಸಮ್ಮುಖ್ - ಜ್ಯೋತಿ ಕುಲಕರ್ಣಿ

೪. ಮಹಿಳಾ ಸಾಂಸ್ಕೃತಿಕ ಸಂಘ - ನಾಗಮ್ಮ

೫. ಜೈನ್ ಮಹಿಳಾ ಮಂಡಳಿ - ಸಿಂಧೂತಾಯಿ

೬. ಸಂಗಮೇಶ್ವರ ಮಹಿಳಾ ಮಂಡಳಿ - ಇಂದಿರಾ ಮಾನವೀಕರ್.[೫೯]

ರಾಯಚೂರು ಜಿಲ್ಲೆಯಲ್ಲಿರುವ ಮಹಿಳಾ ಸಂಘಟನೆಗಳು

೧. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ - ಹೆಚ್. ಪದ್ಮ (ಜಿಲ್ಲಾ ಅಧ್ಯಕ್ಷರು)

೨. ಆಶಾ ಕಾರ್ಯಕರ್ತೆಯರ ಸಂಘ - ಶಕುಂತಲಾ

೩. ದೇವದಾಸಿ ಮಹಿಳೆಯರ ವಿಮೋಚನಾ ಸಂಘ - ಹೆಚ್. ಪದ್ಮ.[೬೦]

ಬಳ್ಳಾರಿ ಜಿಲ್ಲೆಯಲ್ಲಿರುವ ಮಹಿಳಾ ಸಂಘಟನೆಗಳು

೧. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ - ಮಂಜುಳಾ ಹವಲ್ದಾರ್ (ಜಿಲ್ಲಾ ಅಧ್ಯಕ್ಷರು)

೨. ಮಹಿಳಾ ಸಾಂಸ್ಕೃತಿಕ ಸಂಘ - ನಾಗಲಕ್ಷ್ಮೀ

೩. ದೇವದಾಸಿ ಮಹಿಳೆಯರ ವಿಮೋಚನಾ ಸಂಘ - ನಾಗರತ್ನಮ್ಮ.[೬೧]

ಪ್ರಸ್ತುತ, ಹೈದರಾಬಾದ್ ಕರ್ನಾಟಕದ ಮಹಿಳೆಯರಿಗೆ ಕಳೆದ ಶತಮಾನಕ್ಕಿಂತ ಬಹಳ ಸೂಕ್ಷ್ಮವಾದ, ಗಂಭೀರವಾದ ಸಮಸ್ಯೆಗಳು ಮತ್ತು ಸವಾಲುಗಳಿವೆ. ದಲಿತ ಪುರುಷರಿಗೆ ಹೋಲಿಸಿದರೆ ದಲಿತ ಮಹಿಳೆಯರ ಸಮಸ್ಯೆಗಳು ಮಹಿಳಾ ಕೃಷಿ-ಕೂಲಿ ಕಾರ್ಮಿಕರ ಸಮಸ್ಯೆಗಳು ಬಹಳ ಗಂಭೀರವಾಗಿವೆ. ಮಹಿಳಾ ಕಾರ್ಮಿಕರು ವೇತನ ತಾರತಮ್ಯ, ಲೈಂಗಿಕ ದೌರ್ಜನ್ಯ ಮುಂತಾದ ಅಭದ್ರತೆಗಳನ್ನು ಎದುರಿಸಿ ನಿಲ್ಲಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಇಲ್ಲಿ ತಿಳಿದುಕೊಳ್ಳಬೇಕಾದ ಅಂಶವೆಂದರೆ ಮಹಿಳಾ ಚಳವಳಿ ಎಂದರೆ ಪುರುಷ ವಿರೋಧಿ ಚಳವಳಿ ಎಂದಲ್ಲ. ಪ್ರಸ್ತುತ ಚಳವಳಿಗಳು ಆ ಸ್ವರೂಪದಲ್ಲಿ ಇಲ್ಲ ಮತ್ತು ಹಾಗೆ ಆಗಲೂಬಾರದು. ಮಹಿಳೆ ಎಲ್ಲರೊಡನೆ ಸೇರಿ, ಎಲ್ಲರ ಬೆಂಬಲ ಗಳಿಸಿ, ಹೋರಾಟಕ್ಕಿಳಿಯಬೇಕು. ಅದರಲ್ಲೂ ತನ್ನ ಮೇಲಾಗುತ್ತಿರುವ ಶೋಷಣೆಯನ್ನು ಅರಿತುಕೊಳ್ಳಬೇಕು, ಗ್ರಹಿಸಬೇಕು. ಆ ನಂತರ ಅದರ ವಿರುದ್ಧ ಸಮಾನ ಮನಸ್ಸಿನ ಮಹಿಳೆಯರನ್ನು ಸೇರಿಸಿಕೊಂಡು ಸಂಘಟಿತರಾಗಿ ಚಳವಳಿಯನ್ನು ಕಟ್ಟಬೇಕಾಗಿದೆ.

ಅಡಿಟಿಪ್ಪಣಿಗಳು

೧. ಮುಜಾಫರ್ ಅಸ್ಸಾದಿ, ರೈತ, ರೈತ ಹೋರಾಟ, ರೈತ ಚಳವಳಿ, ಪುಟ ೧೧.

೨. ರಾಮಮೂರ್ತಿ ಪೋಲಂಕಿ, ರುಮಾಲು ಬಾರುಕೋಲು ನಂಜುಂಡಸ್ವಾಮಿ ಒಂದು ವ್ಯಕ್ತಿ ಚಿತ್ರ, ಪುಟ ೪.

೩. ಯಶವಂತ ಡೋಂಗೆ (ಸಂ), ಅರಿವು ಬರಹ, ಸಂಚಿಕೆ, ೧೯೮೮, ಪುಟ ೨೬.

೪. ತಂಬಂಡ ವಿಜಯ್ ಪೂಣಚ್ಚ, ಚರಿತ್ರೆ ವಿಶ್ವಕೋಶ-೪, ಪುಟ ೮೫೪.

೫. ಸಂದರ್ಶನ : ಚಾಮರಸ ಮಾಲೀ ಪಾಟೀಲ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ದಿನಾಂಕ ೧೫.೦೫.೨೦೧೧, ರಾಯಚೂರು.

೬. ಚೆನ್ನಬಸವಪ್ಪ ಬೆಟ್ಟದೂರು, ನನ್ನ ಜೀವನಾನುಭವಗಳು, ಪುಟ ೧೧೮ ಮತ್ತು ೧೧೯.

೭. ಸಂದರ್ಶನ : ವೀರಸಂಗಯ್ಯ ಜಿ.ಎಂ., ಮಹಾ ಪ್ರಧಾನಕಾರ್ಯದರ್ಶಿ, ಕರ್ನಾಟಕ ರಾಜ್ಯ ರೈತ ಸಂಘ, ದಿನಾಂಕ ೩೦.೧೨.೨೦೧೦.

೮. ಕಲಬುರ್ಗಿವಾಣಿ ಪತ್ರಿಕೆ, ೦೧.೦೧.೨೦೦೪, ಪುಟ ೭.

೯. ಹಣಮಂತ್ರಾಯ, ಗುಲಬರ್ಗಾ ಜಿಲ್ಲೆಯ ರೈತ ಚಳವಳಿಗಳು, ಅಪ್ರಕಟಿತ ಎಂ.ಫಿಲ್ ನಿಬಂಧ, ಪುಟ ೪೬.

೧೦. ಜಿಲ್ಲಾ ರೈತ ಸಮಾವೇಶದ ನಿರ್ಣಯಗಳು, ಬಳ್ಳಾರಿ, ೨೪.೧೦.೧೯೭೭.

೧೧. ಸಂದರ್ಶನ : ಮಾರುತಿ ಮಾನ್ಪಡೆ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ, ದಿನಾಂಕ ೦೫.೦೬.೨೦೧೧, ಹಗರಿಬೊಮ್ಮನಹಳ್ಳಿ.

೧೨. ನಾಗರಾಜ್ ಎಂ.ಜಿ., ಕರ್ನಾಟಕ ರೈತ ಚಳವಳಿ ಸತ್ಯಾಗ್ರಹಗಳು, ಸಂ.-೨, ಪು. ೧೯೦, ೧೯೧.

೧೩. ಸಂದರ್ಶನ : ಮಾರುತಿ ಮಾನ್ಪಡೆ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ, ದಿನಾಂಕ ೦೫.೦೬.೨೦೧೧, ಹಗರಿಬೊಮ್ಮನಹಳ್ಳಿ.

೧೪. ತಂಬಂಡ ವಿಜಯ್ ಪೂಣಚ್ಚ, ರೈತ ಚಳವಳಿಗಳು, ಪುಟ ೬೧.

೧೫. ದಿ ಹಿಂದು, ದಿನಪತ್ರಿಕೆ, ೧೬.೦೩.೨೦೦೯.

೧೬. ಮೇಲಿನದೆ.

೧೭. ಲೇಖನ : ತುರುವೀರಾಳ ಚಂದ್ರು, ವಿಜಯ ಕರ್ನಾಟಕ ೨೫.೧೨.೨೦೦೯.

೧೮. ಮಾಹಿತಿ : ನಿರ್ದೇಶಕರು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಗುಲಬರ್ಗಾ.

೧೯. ಲೇಖನ : ಗೋಪಾಲಕೃಷ್ಣ, ಹೊಸತು ವಿಶೇಷ ಸಂಚಿಕೆ, ೨೦೦೭, ಜನವರಿ, ಪುಟ ೧೨೩.

೨೦. ದಿ ಹಿಂದು, ದಿನಪತ್ರಿಕೆ, ೨೦.೦೪.೨೦೦೯.

೨೧. ವಿನಾಯಕ ಭಟ್, ವಿಜಯ ಕರ್ನಾಟಕ, ೦೫.೦೮.೨೦೦೯.

೨೨. ಮುನಿವೆಂಕಟಪ್ಪ ವಿ. (ಸಂ), ದಲಿತ ಚಳವಳಿ ಚರಿತ್ರೆ, ಪುಟ ೫೪೭.

೨೩. ಅರವಿಂದ ಮಾಲಗತ್ತಿ (ಸಂ), ದಲಿತ ಮಾರ್ಗ, ಪುಟ ೬.

೨೪. ಮುನಿವೆಂಕಟಪ್ಪ ವಿ., ದಲಿತ ಚಳವಳಿ ಮತ್ತು ಸಾಹಿತ್ಯ, ಪುಟ ೨೩.

೨೫. ಜಗನ್ನಾಥ ಸಿಂಧೆ, ದಲಿತ ಚಿಂತಕ ಬಿ. ಶ್ಯಾಮಸುಂದರ, ಪುಟ ೩.

೨೬. ಕವಿತಾ ಮಲ್ಲಪ್ಪ, ಬಿ. ಶ್ಯಾಮಸುಂದರ, ಪುಟ ೩೧.

೨೭. ಜಗನ್ನಾಥ ಸಿಂಧೆ, ದಲಿತ ಚಿಂತಕ ಬಿ. ಶ್ಯಾಮಸುಂದರ, ಪುಟ ೫೮.

೨೮. ಪೋತೆ ಹೆಚ್.ಟಿ., ಜಗನ್ನಾಥ ಸಿಂಧೆ, ಬಿ. ಶ್ಯಾಮಸುಂದರ, ಪುಟ ೫೭.

೨೯. ಸಂದರ್ಶನ : ದೇವೇಂದ್ರಪ್ಪ, ಲೇಖಕರು, ಗುಲಬರ್ಗಾ, ದಿನಾಂಕ ೧೦.೦೫.೨೦೧೧.

೩೦. ಸಂದರ್ಶನ : ಶಿವರಾಜ ಪಾಟಿಲ್, ಲೇಖಕರು, ಗುಲಬರ್ಗಾ, ದಿನಾಂಕ ೧೮.೦೧.೨೦೧೧.

೩೧. ಸಂದರ್ಶನ : ಸಾಗರ್ ಡಿ.ಜಿ, ರಾಜ್ಯ ಸಂಚಾಲಕರು, ದಲಿತ ಸಂಘರ್ಷ ಸಮಿತಿ, ಗುಲಬರ್ಗಾ, ದಿನಾಂಕ ೧೩.೧೧.೨೦೦೯.

೩೨. ಮೇಲಿನದೆ.

೩೩. ಸಂದರ್ಶನ : ಮಾರುತಿ ಚೌದ್ದೆ, ಜಿಲ್ಲಾ ಸಂಚಾಲಕರು, ದಲಿತ ಸಂಘರ್ಷ ಸಮಿತಿ, ಬೀದರ್, ದಿನಾಂಕ ೧೧.೧೧.೨೦೦೯.

೩೪. ಸಂದರ್ಶನ : ಸುರೇಶ್ ಹಾದಿಮನಿ, ಜಿಲ್ಲಾ ಸಂಚಾಲಕರು, ದಲಿತ ಸಂಘರ್ಷ ಸಮಿತಿ, ಗುಲಬರ್ಗಾ, ದಿನಾಂಕ ೨೩.೧೧.೨೦೦೯.

೩೫ ಚಂಡಾಳ, ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಪ್ರಭಾವ, ಪುಟ ೮೦.

೩೬. ಸಂದರ್ಶನ : ಅಲ್ಲಮಪ್ರಭು ಬೆಟ್ಟದೂರ, ಪ್ರಾಚಾರ್ಯರು, ಸಾಹಿತಿಗಳು ಹಾಗೂ ಸಾಮಾಜಿಕ ಜನಪರ ಹೋರಾಟಗಾರರು, ಕೊಪ್ಪಳ ದಿನಾಂಕ ೧೨.೦೫.೨೦೧೦.

೩೭. ವಿಜಯ ಪೂಣಚ್ಚ ತಂಬಂಡ, (ಪ್ರ.ಸಂ), ಚಿನ್ನಸ್ವಾಮಿ ಸೋಸಲೆ ಎನ್. (ಸಂ.ಸಂ.), ಸಮಕಾಲೀನ ಕರ್ನಾಟಕ, ಪುಟ ೩೫೦.

೩೮. ಮಾರುತಿ ಬಸಪ್ಪ ಚೌದ್ದೆ, ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಬೀದರ್, ದಿನಾಂಕ ೧೪.೦೫.೨೦೧೨.

೩೯. ಸಂದರ್ಶನ : ಅರ್ಜುನ್ ಬದ್ರಿ, ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಗುಲಬರ್ಗಾ, ದಿನಾಂಕ ೧೦.೦೨.೨೦೧೨.

೪೦. ಸಂದರ್ಶನ : ಮಂಜುನಾಥ ಗಾಂಧೀನಗರ, ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ರಾಯಚೂರು, ದಿನಾಂಕ ೧೭.೦೫.೨೦೧೨.

೪೧. ಸಂದರ್ಶನ : ಮಲ್ಲಿಕಾರ್ಜುನ ಮಲ್ಲಪ್ಪ ಕ್ರಾಂತಿ, ಜಿಲ್ಲಾ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಯಾದಗಿರಿ, ದಿನಾಂಕ ೧೮.೦೫.೨೦೧೨.

೪೨. ಸಂದರ್ಶನ : ಮರಿಯಪ್ಪ ಕುಂಟೋಜಿ, ದಲಿತ ಮುಖಂಡರು, ಕೊಪ್ಪಳ, ದಿನಾಂಕ ೧೨.೦೪.೨೦೧೨.

೪೩. ಮಾನಯ್ಯ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ರಾಜ್ಯ ಮುಖಂಡರು, ಬಳ್ಳಾರಿ, ದಿನಾಂಕ ೨೦.೦೫.೨೦೧೨.

೪೪. ನಾಗೇಶ್ ಹೆಚ್.ವಿ., ಸಾಮಾಜಿಕ ಚಳವಳಿಗಳು, ಪುಟ ೫೮.

೪೫. ನಾಗರಾಜು ಟಿ., ಸಾಮಾಜಿಕ ಚಳವಳಿಗಳು, ಪುಟ ೧೧೮.

೪೬. ಸೂರ್ಯನಾಥ ಯು. ಕಾಮತ್ (ಮು.ಸಂ.), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ಪುಟ ೨೦೫.

೪೭. ತಂಬಂಡ ವಿಜಯ ಪೂಣಚ್ಚ (ಪ್ರ.ಸಂ.), ಚಿನ್ನಸ್ವಾಮಿ ಸೋಸಲೆ ಎನ್., (ಸಂ.ಸಂ.) ಸಮಕಾಲೀನ ಕರ್ನಾಟಕ, ಪುಟ ೩೨೮ ಮತ್ತು ೩೨೯.

೪೮. ಸಂದರ್ಶನ : ಪಾಟೀಲ್ ಹೆಚ್.ಎಸ್., ನಿವೃತ್ತ ಪ್ರಾಚಾರ್ಯರು, ಸಾಹಿತಿಗಳು ಹಾಗೂ ಸಾಮಾಜಿಕ ಜನಪರ ಹೋರಾಟಗಾರರು, ಕೊಪ್ಪಳ, ದಿನಾಂಕ ೧೪.೦೮.೨೦೧೦.

೪೯. ವಿಷ್ಣುವರ್ಧನ, ದ ರೋಲ್ ಆಫ್ ಡಿ.ಎಸ್.ಎಸ್. ಇನ್ ಕರ್ನಾಟಕ ಅಂಡರ್ ದಿ ಲೀಡರ್‌ಶಿಪ್ ಆಫ್ ಶ್ರೀ ಡಿ.ಜಿ. ಸಾಗರ್, ಅಪ್ರಕಟಿತ ಎಂ.ಫಿಲ್ ನಿಬಂಧ, ಪುಟ ೭೭.

೫೦. ಸಂದರ್ಶನ : ಹುಡಗಿ, ಆರ್.ಕೆ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸಮನ್ವಯ ಸಮಿತಿ, ದಿನಾಂಕ ೩೧.೦೮.೨೦೧೧, ಗುಲಬರ್ಗಾ.

೫೧. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪುಟ ೧೨೬.

೫೨. ವಿಜಯ ಕರ್ನಾಟಕ, ದಿನಪತ್ರಿಕೆ, ದಿನಾಂಕ ೧೭.೧೦.೨೦೧೧, ಪುಟ ೦೨.

೫೩. ಎಂ.ಎಸ್.ಕೆ. ಮಿಲ್., ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಪುಟ ೦೬.

೫೪. ಸಂದರ್ಶನ : ಕಾಂತಾ ಎಸ್.ಕೆ., ಮಾಜಿ ಕಾರ್ಮಿಕರ ಸಚಿವರು, ದಿನಾಂಕ ೨೭.೧೧.೨೦೧೦, ಗುಲಬರ್ಗಾ.

೫೫. ಮಹೇಶ್‌ಕುಮಾರ್ ಎಸ್. ಸಂಕನೂರು, ಗುಲ್ಬರ್ಗಾ ಎಂ.ಎಸ್.ಕೆ. ಮಿಲ್ : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ಪುಟ ೭೧.

೫೬. ಸಂದರ್ಶನ : ಕಾಂತಾ ಎಸ್.ಕೆ., ಮಾಜಿ ಕಾರ್ಮಿಕರ ಸಚಿವರು, ದಿನಾಂಕ ೨೭.೧೧.೨೦೧೦, ಗುಲಬರ್ಗಾ.

೫೭. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪ್ಪಿಮಠ (ಸಂ), ರಾಯಚೂರು ಜಿಲ್ಲಾ ದರ್ಶನ, ಪುಟ ೪೧.

೫೮. ವಿಜಯಲಕ್ಷ್ಮೀ, ಹಟ್ಟಿ ಚಿನ್ನದ ಗಣಿ : ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ಪುಟ ೩೧.

೫೯. ವಿಜಯಕರ್ನಾಟಕ, ದಿನಾಂಕ ೧೬.೦೮.೨೦೦೯, ಪುಟ ೫,.

೬೦. ಸಂದರ್ಶನ : ಹುಡಗಿ ಆರ್.ಕೆ., ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸಮನ್ವಯ ಸಮಿತಿ, ದಿನಾಂಕ ೨೦.೧೦.೨೦೧೧, ಗುಲಬರ್ಗಾ.

೬೧. ಸಂದರ್ಶನ : ಕಾಂತಾ ಎಸ್.ಕೆ., ಮಾಜಿ ಕಾರ್ಮಿಕರ ಸಚಿವರು, ದಿನಾಂಕ ೨೭.೧೧.೨೦೧೦, ಗುಲಬರ್ಗಾ.

೬೨. ವಿಜಯಕರ್ನಾಟಕ, ದಿನಾಂಕ ೦.೨೦೬.೨೦೧೦, ಪುಟ ೦೨.

೬೩. ಗೀತಾ ಅಣ್ಣೆಪ್ಪ, ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಗುಲಬರ್ಗಾ ಡಿಸ್ಟ್ರಿಕ್ಟ್, ಅಪ್ರಕಟಿತ ಎಂ.ಫಿಲ್ ನಿಬಂಧ, ಪುಟ ೧೧೯.

೬೪. ತಂಬಂಡ ವಿಜಯ್ ಪೂಣಚ್ಚ (ಸಂ) ಚರಿತ್ರೆ ವಿಶ್ವಕೋಶ ೪, ಪುಟ ೮೪೪.

೬೫. ತಂಬಂಡ ವಿಜಯ್ ಪೂಣಚ್ಚ (ಪ್ರ.ಸಂ.), ಚಿನ್ನಸ್ವಾಮಿ ಸೋಸಲೆ ಎನ್. (ಸಂ.ಸಂ.), ಸಮಕಾಲೀನ ಕರ್ನಾಟಕ, ಸಂಪುಟ ೬, ಪುಟ ೩೯೩.

೬೬. ಚಿನ್ನಸ್ವಾಮಿ ಸೋಸಲೆ ಎನ್.(ಸಂ.ಸಂ.), ಸಮಕಾಲೀನ ಕರ್ನಾಟಕ, ಪುಟ ೬೩೧.

೬೭. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳವಳಿಗಳು, ಪುಟ ೨೭೫.

೬೮. ಸಂದರ್ಶನ : ನೀಲಾ ಕೆ., ರಾಜ್ಯ ಉಪಾಧ್ಯಾಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಗುಲಬರ್ಗಾ.

೬೯. ಮೇಲಿನದೆ.

೭೦. ಸಂದರ್ಶನ : ಮಲ್ಲಿಕಾ ಘಂಟಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ (ಸೂಂಡೂರು).

೭೧. ಮೀನಾಕ್ಷಿ ಬಾಳಿ: 'ಚಿವುಟದಿರಿ ಚಿಗುರು'(ಹೆಣ್ಣು ಭ್ರೂಣ ಹತ್ಯೆ ಕುರಿತು ಲೇಖನಗಳು), ಪುಟ ೦೧.

೭೨. ಮೇಲಿನದೆ., ಪುಟ ೦೮.

೭೩. ವಿಜಯಕುಮಾರಿ ಎಸ್. ಕರಿಕಲ್, ಮಹಿಳೆ ಮತ್ತು ಸಮಾಜ, ಪುಟ ೦೩.

೭೪. ಸಂದರ್ಶನ : ಮಲ್ಲಿಕಾರ್ಜುನ, 'ಸಮಾಜ ಸೇವಕರು', ಸಂಡೂರು.

೭೫. ಸಂದರ್ಶನ : ಮಲ್ಲಿಕಾ ಘಂಟಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ (ಸಂಡೂರು).

೭೬. ಸಂದರ್ಶನ : ಫಾತೀಮಾ ಬಿ., ಜನವಾದಿ ಮಹಿಳಾ ಸಂಘಟನೆ ಸದಸ್ಯೆ.

೭೭. ಸಂದರ್ಶನ : ಮೀನಾಕ್ಷಿ ಬಾಳಿ, ಕನ್ನಡ ಉಪನ್ಯಾಸಕರು, ಗುಲಬರ್ಗಾ.

೭೮. ಸಂದರ್ಶನ : ನೀಲಾ ಕೆ., ರಾಜ್ಯ ಉಪಾಧ್ಯಕ್ಷರು, 'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ', ಗುಲಬರ್ಗಾ.

೭೯. ರಂಗರಾಜ ವನದುರ್ಗ (ಸಂ), ಕನ್ನಡ ಸಾಹಿತ್ಯ ಮತ್ತು ಜನಪರ ಚಳವಳಿ, ಪುಟ ೧೪೦.

೮೦. ಸಂದರ್ಶನ : ನೀಲಾ ಕೆ., ರಾಜ್ಯ ಉಪಾಧ್ಯಕ್ಷರು, 'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ', ಗುಲಬರ್ಗಾ.

೮೧. ಸಂದರ್ಶನ : ಅಲ್ಲಮಪ್ರಭು ಬೆಟ್ಟದೂರು, ಪ್ರಾಚಾರ್ಯರು, ಸಾಹಿತಿಗಳು ಹಾಗೂ ಸಾಮಾಜಿಕ ಜನಪರ ಹೋರಾಟಗಾರರು, ದಿನಾಂಕ ೧೩.೦೫.೨೦೧೦, ಕೊಪ್ಪಳ.

೮೨. ಸಂದರ್ಶನ : ಮಾರುತಿ ಮಾನ್ಪಡೆ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ, ದಿನಾಂಕ ೦೫.೦೬.೨೦೧೧, ಹಗರಿಬೊಮ್ಮನಹಳ್ಳಿ.

೮೩. ಸಂದರ್ಶನ : ಚಂದ್ರಕಾಂತ, ಕಾರ್ಮಿಕ ಮುಖಂಡರು, ದಿನಾಂಕ ೨೫.೦೫.೨೦೧೧, ಗುಲಬರ್ಗಾ.

೮೪. ವೆಂಕಟೇಶ್ ಕೆ., ಸರೋಜಾ ಬಿ., ಹೈದರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು, ಪುಟ ೫೯.

೮೫. ಮೀನಾಕ್ಷಿ ಬಾಳಿ (ಸಂ), ಚಿವುಟದಿರಿ ಚಿಗುರ (ಹೆಣ್ಣು ಭ್ರೂಣ ಹತ್ಯೆ ಕುರಿತು ಲೇಖನಗಳು), ಪುಟ ೪೧.

೮೬. ಸಂದರ್ಶನ : ಮಾಳಮ್ಮ, ದೇವದಾಸಿ ಮಹಿಳೆ, ದಿನಾಂಕ ೧೧.೦೭.೨೦೧೧, ಹುಲಗಿ.

೮೭. ಸಮಾವೇಶ : ದೇವದಾಸಿಯರ ಮಕ್ಕಳ ಸಮಾವೇಶ, ಹಗರಿಬೊಮ್ಮನಹಳ್ಳಿ, ದಿನಾಂಕ ೦೫.೦೧.೨೦೧೨.

೮೮. ಸಂದರ್ಶನ : ಅಂಬೂಬಾಯಿ ಮಾಳಗೆ, ಜಿಲ್ಲಾ ಅಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬೀದರ್.

೮೯. ಸಂದರ್ಶನ : ಕೆ. ನೀಲಾ, ರಾಜ್ಯ ಉಪಾಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಗುಲಬರ್ಗಾ.

೯೦. ಸಂದರ್ಶನ : ಹೆಚ್. ಪದ್ಮ, ಜಿಲ್ಲಾ ಅಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ರಾಯಚೂರು.

೯೧. ಸಂದರ್ಶನ : ಚಂದ್ರಕುಮಾರಿ, ಕಾರ್ಯದರ್ಶಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಿನಾಂಕ ೦೫.೦೬.೨೦೧೨, ಬಳ್ಳಾರಿ.

❑❑❑

ಅಧ್ಯಾಯ ಐದು

ಸಾಮಾಜಿಕ ಚಳವಳಿಗಳಲ್ಲಿ ಧರ್ಮ ಮತ್ತು ಸರಕಾರಗಳ ಪಾತ್ರ

ಅಧ್ಯಾಯ ಐದು

ಸಾಮಾಜಿಕ ಚಳವಳಿಗಳಲ್ಲಿ ಧರ್ಮ ಮತ್ತು ಸರಕಾರಗಳ ಪಾತ್ರ

ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಅಥವಾ ಸಮಾಜ ಪರಿವರ್ತನೆಗಾಗಿ ನಡೆದು ಬಂದಿರುವ ಮತ್ತು ಪ್ರಸ್ತುತ ನಡೆಯುತ್ತಿರುವ ಸಾಮಾಜಿಕ ಚಳವಳಿಗಳನ್ನು ಅಧ್ಯಯನ ಮಾಡುತ್ತಾ ಹಾಗೂ ವಿಶ್ಲೇಷಣೆಗೆ ಒಳಪಡಿಸುತ್ತಾ ಹೋದಾಗ ಮುಖ್ಯವಾಗಿ ನಮ್ಮ ಗಮನಕ್ಕೆ ಬರುವ ಮತ್ತೊಂದು ಅಂಶವೆಂದರೆ ಸಾಮಾಜಿಕ ಚಳವಳಿಗಳಲ್ಲಿ ಮಠ ಮಾನ್ಯಗಳು, ಮಸೀದಿಗಳು, ಚರ್ಚ್‌ಗಳು ಅಪಾರ ಕೊಡುಗೆಯನ್ನು ನೀಡಿವೆ. ಅದರಲ್ಲೂ ವಿಶೇಷವಾಗಿ ಮಠಮಾನ್ಯಗಳು ಜಾತ್ಯಾತೀತವಾಗಿ ಸಮಾಜ ಪರಿವರ್ತನೆಯಲ್ಲಿ ತೊಡಗಿಕೊಂಡಿರುವುದು ಗಮನಾರ್ಹವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶ ಅನೇಕ ಧರ್ಮಗಳ ನೆಲೆವೀಡಾಗಿದೆ. ಇಲ್ಲಿ ಹಿಂದುಗಳು, ಮುಸ್ಲಿಮರು, ಕ್ರೈಸ್ತರು ಧಾರ್ಮಿಕ ಕ್ಷೇತ್ರಕ್ಕೆ, ಸಮಾಜಕ್ಕೆ ಅಪಾರ ಕೊಡುಗೆ ಸಲ್ಲಿಸಿದ್ದಾರೆ. ಹಾಗೆಯೇ ಇಲ್ಲಿನ ಜನರ ಬಾಳನ್ನು ರೂಪಿಸುವಲ್ಲಿ, ಚಟುವಟಿಕೆಗಳನ್ನು ಸಂಘಟಿಸುವಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಸಾಮಾಜಿಕ ಸುಧಾರಣೆಯಲ್ಲಿ ಮತೀಯ ಸಾಮರಸ್ಯ ಕಾಪಾಡುವಲ್ಲಿ ಪ್ರತಿಯೊಂದು ಧರ್ಮವು ತನ್ನದೇ ಆದ ರೀತಿಯಲ್ಲಿ ಸಮಾಜದ ಸುಧಾರಣೆಯಲ್ಲಿ, ಬೆಳವಣಿಗೆಯಲ್ಲಿ ನೆರವು ನೀಡಿದೆ ಮತ್ತು ನೀಡುತ್ತಿದೆ.

೫.೧. ಸಾಮಾಜಿಕ ಚಳವಳಿಗಳಲ್ಲಿ ಮಠ, ಮಸೀದಿ ಹಾಗೂ ಚರ್ಚ್‌ಗಳ ಪಾತ್ರ

ಸರಕಾರಗಳು ಮಾಡಲಾರದಂತಹ ಅಥವಾ ಸುಲಭ ಸಾಧ್ಯವಾಗದಂತಹ ಎಷ್ಟೋ ಸಾಮಾಜಿಕ ಸುಧಾರಣೆಗಳನ್ನು ಮಠಗಳು, ಮಸೀದಿಗಳು, ಚರ್ಚ್‌ಗಳು ಕೈಗೊಂಡಿವೆ. ಇವು ಹಿಂದಿನಿಂದಲೂ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ತಮ್ಮನ್ನು ವಿಭಿನ್ನ ರೀತಿಯಲ್ಲಿ ತೊಡಗಿಸಿಕೊಂಡು ಇಂದಿಗೂ ಸಮಾಜದ ಏಳಿಗೆಯಲ್ಲಿ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇಂದಿನ ಪರಿಸ್ಥಿತಿಯಲ್ಲಿ ಇದು ಅವಶ್ಯಕವು ಆಗಿದೆ. ಏಕೆಂದರೆ ಪ್ರತಿಯೊಂದು ಸಮಾಜವು ಸಹ ತನ್ನದೇ ಆದ ಸಾಮಾಜಿಕ ಸಮಸ್ಯೆಗಳನ್ನು ಹೊಂದಿರುತ್ತದೆ. ಸಮಸ್ಯೆಗಳಿಲ್ಲದ ಸಮಾಜವಿಲ್ಲ ಹೀಗಾಗಿ ಮನುಷ್ಯನು ಸಮಾಜವು ಉದಯವಾದಾಗಿನಿಂದಲೂ ಹಲವಾರು ಬಗೆಯ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಾ

ಬಂದಿದ್ದಾನೆ. ಅದರಲ್ಲೂ ಆಧುನಿಕ ಸಮಾಜವು ಸಾಕಷ್ಟು ವಿಘಟನೆಗೆ ಗುರಿಯಾಗಿರುವ ಸಂದರ್ಭದಲ್ಲಿ ಅದು ಎಷ್ಟರಮಟ್ಟಿಗೆ ವಿಘಟನೆಗೊಂಡಿರುವುದೋ ಅಷ್ಟೇ ಪ್ರಮಾಣದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಾ ನಡೆದಿದ್ದಾನೆ. ಹಾಗೆಯೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಸ್ಯೆಗಳ ಕುರಿತು, ಅದರ ಪರಿಹಾರೋಪಾಯಗಳನ್ನು ಕುರಿತು ವಿವಿಧ ರೀತಿಯಲ್ಲಿ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಈ ದಿಸೆಯಲ್ಲಿ ಕೆಲವು ವ್ಯಕ್ತಿಗಳು, ಸಂಘಟನೆಗಳು, ಸರಕಾರಗಳು ಪರಿಹಾರೋಪಾಯಗಳನ್ನು ಕಂಡುಕೊಳ್ಳುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆದರೆ ಇಷ್ಟರಿಂದಲೇ ಸಮಾಜದ ಸುಧಾರಣೆ ಆದುದು ಬಹಳ ಕಡಿಮೆ. ಇಂತಹ ಪ್ರಯತ್ನಗಳ ಜೊತೆಗೆ ಸಮಾಜದ ಭಾಗವಾಗಿರುವ ಮಠಗಳು, ಮಸೀದಿಗಳ, ಚರ್ಚ್‌ಗಳ ಪಾತ್ರ ಬಹಳ ದೊಡ್ಡದು.[೧]

ಮಠಗಳ ಪಾತ್ರ

ಹೈದರಾಬಾದ್ ಕರ್ನಾಟಕವು ಶತಶತಮಾನಗಳಿಂದಲೂ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಮಹತ್ವದ ಸ್ಥಾನಮಾನವನ್ನು ಪಡೆದಿದೆ. ಹನ್ನೆರಡನೆಯ ಶತಮಾನದಲ್ಲಿ ಬಾಳಿ ಬದುಕಿದ ಬಸವಾದಿ ಶಿವಶರಣರ ಕರ್ಮಭೂಮಿಯಾಗಿದೆ. ವಚನ ಸಾಹಿತ್ಯದ ಜನ್ಮ ಭೂಮಿಯಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ರಾಂತಿಯ ಯಶೋಭೂಮಿಯಾಗಿ ವಿಶಿಷ್ಟವಾದ ಮಹಾನ್ ಪರಂಪರೆಯನ್ನು ನಡೆಸಿಕೊಂಡು ಬಂದಿರುವ ಪ್ರದೇಶವಾಗಿದೆ. ೧೨ನೇ ಶತಮಾನದ ಶಿವಶರಣರು ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದ ನಂತರ ಅವರ ಪ್ರಭಾವ ಇಂದಿಗೂ ಈ ಭಾಗದ ಜನಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿದೆ. ಇಂತಹ ಬಸವಾದಿ ಶರಣರ ಪರಂಪರೆಯನ್ನು ತಮ್ಮ ಜೀವನದುದ್ದಕ್ಕೂ ನಡೆನುಡಿಗಳಲ್ಲಿ ಅಳವಡಿಸಿಕೊಂಡು ಸಮಾಜದ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಂತಹ ಮಹಾನ್ ಸುಧಾರಕರು ಇಲ್ಲಿ ಬಾಳಿ ಬದುಕಿದ್ದಾರೆ ಮತ್ತು ಈಗಲೂ ಆ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಶ್ರೀ ಶರಣಬಸವೇಶ್ವರ ಸಂಸ್ಥಾನ - ಗುಲಬರ್ಗಾ

ಹೈದರಾಬಾದ್ ಕರ್ನಾಟಕ ಭಾಗದ ಸಮಾಜ ಸುಧಾರಣೆಯಲ್ಲಿ ಗುಲಬರ್ಗಾದ ಶ್ರೀಶರಣಬಸವೇಶ್ವರ ಸಂಸ್ಥಾನ ಮಠದ ಪಾತ್ರವು ಬಹುಪ್ರಮುಖ ಪಾತ್ರವಹಿಸಿದೆ. ಮಠವು ಜಾತ್ಯಾತೀತ ಸಿದ್ಧಾಂತವನ್ನಿಟ್ಟುಕೊಂಡು, ಸಹಭೋಜನ, ಭ್ರಾತೃತ್ವ ತತ್ವಕ್ಕೆ ಒತ್ತುಕೊಟ್ಟು ಆದರ್ಶ ತತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಧರ್ಮ, ಸಮಾಜ ಸುಧಾರಣೆ ಕಾರ್ಯದಲ್ಲಿ ತೊಡಗಿಕೊಂಡಿದೆ. ಮಹಾದಾಸೋಹಿ ಶರಣಬಸವರು ೧೮೨೨ರಲ್ಲಿ ಲಿಂಗೈಕ್ಯರಾದ ನಂತರ ಅವರ ಸಮಾಧಿಯ ಮೇಲೆ ಪ್ರಸ್ತುತ ದೇವಾಲಯವು ನಿರ್ಮಾಣವಾಯಿತು. ಇದು ಈ ಭಾಗದ ಜನರ ಭಕ್ತಿ ಮತ್ತು ನಂಬಿಕೆಗೆ ಪಾತ್ರವಾಗಿದ್ದು ಎಲ್ಲಾ ವರ್ಗದ ಜನರಿಗೆ ಆಶ್ರಯ ನೀಡುತ್ತಾ, ಜನರನ್ನು ಆಕರ್ಷಿಸುತ್ತಾ ಜಾಗೃತ ಕೇಂದ್ರವಾಗಿದೆ. ಅಲ್ಲಿಂದ ಇಲ್ಲಿಯವರೆಗೆ ೮ ಜನ ಮಹಾದಾಸೋಹ ಪೀಠಾಧಿಪತಿಗಳಾಗಿ ಇಲ್ಲಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸುಧಾರಣೆಯಲ್ಲಿ

ನಿರತರಾಗಿದ್ದಾರೆ. ಸುಮಾರು ೨ ಶತಮಾನಗಳಿಂದ ಇಲ್ಲಿ ಅನ್ನ ದಾಸೋಹವನ್ನು ಪ್ರಾರಂಭಿಸಿ ಅನಾಥರ, ಬಡವರ ಪಾಲಿಗೆ ಆಶ್ರಯದಾತರಾಗಿದ್ದಾರೆ. ಇಂದಿಗೂ ಸಾವಿರಾರರು ವಿದ್ಯಾರ್ಥಿಗಳು ಪ್ರಸಾದ ನಿಲಯದಲ್ಲಿ ಆಶ್ರಯ ಪಡೆದು ಉಚಿತ ಊಟ, ವಸತಿ, ಶಿಕ್ಷಣ ಪಡೆಯುತ್ತಿದ್ದಾರೆ.[೨]

ಶೈಕ್ಷಣಿಕವಾಗಿ ಅತೀ ಹಿಂದುಳಿದಿದ್ದ ಈ ಭಾಗದಲ್ಲಿ ಕ್ರಿ.ಶ. ೧೯೦೩ರಲ್ಲಿ ಕನ್ನಡ ಶಾಲೆಯನ್ನು ಆರಂಭಿಸುವುದರ ಮೂಲಕ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಗೆ ಅಸ್ತಿಭಾರ ಹಾಕಲಾಯಿತು. ಕ್ರಿ.ಶ. ೧೯೧೮ರಲ್ಲಿ ಪೂಜ್ಯಶ್ರೀ ದೊಡ್ಡಪ್ಪ ಅಪ್ಪ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಸ್ಥಾಪಿಸಿ, ಆ ಮೂಲಕ ಹಲವಾರು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸುವುದರ ಜೊತೆಗೆ, ಇಂಗ್ಲೀಷ್ ಹಾಗೂ ಉರ್ದು ಭಾಷೆಗಳು ಆಡಳಿತ ಮತ್ತು ಶಿಕ್ಷಣ ಮಾಧ್ಯಮಗಳಾಗಿದ್ದ ಕಾಲದಲ್ಲಿ ಹಾಗೂ ಪುರುಷರಿಗೇ ಶಿಕ್ಷಣ ಸಿಗುವುದು ದುರ್ಲಭವಾಗಿದ್ದ ಆ ಕಾಲದಲ್ಲಿ ಮಹಿಳೆಯರು ಪರದೆಯ ಹಿಂದೆ ಇರುತ್ತಿದ್ದ ಆ ಸಂದರ್ಭದಲ್ಲಿ ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿಸಲು ೧೯೩೪ರಲ್ಲಿ ಪ್ರಥಮವಾಗಿ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ತೆರೆದು ಅವರಿಗೆಲ್ಲ ಉಚಿತ ಶಿಕ್ಷಣ ನೀಡಿದರು.[೩] ಇಂದು ಸಂಸ್ಥೆಯು ಬೆಳೆದು ಈ ಭಾಗದ ಪ್ರತಿಷ್ಠಿತ ಸಂಸ್ಥೆಯಾಗಿ ಸುಮಾರು ೪೨ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ೧೬,೦೦೦ ವಿದ್ಯಾರ್ಥಿಗಳನ್ನು ಹೊಂದಿದೆ.

೧೯೮೩ರಲ್ಲಿ ೮ನೇ ಮಹಾದಾಸೋಹ ಪೀಠಾಧಿಪತಿಗಳಾಗಿ ಪೀಠ ಅಲಂಕರಿಸಿರುವ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಅನೇಕ ಶಾಲೆ, ಕಾಲೇಜುಗಳ ಜೊತೆಗೆ ಉನ್ನತವಾದಂತ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳ ಮೂಲಕ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಇಲ್ಲಿನ ಜನರ ಜ್ಞಾನದ ಹಸಿವು ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸಂಸ್ಥೆಯ ಶಿಕ್ಷಣ ಸೌಲಭ್ಯಗಳು ಜನರ ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಟ್ಟಿವೆ. ಇದರ ಜೊತೆ ವಿಜ್ಞಾನ ದಾಸೋಹ, ಜ್ಞಾನ ದಾಸೋಹ, ಕಲಾದಾಸೋಹ ಎಂಬಂತಹ ಹೊಸ ತತ್ವಗಳ ದರ್ಶನ ಮಾಡಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಗಳು ಇಂದಿನ ಜನತೆಗೆ ಏನು ಬೇಕು ಹಾಗೂ ಮುಂದಿನ ಕಾಲಮಾನವನ್ನು ಕಟ್ಟಲು ಏನು ಮಾಡಬೇಕಾಗಿದೆ ಎಂಬುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸುತ್ತ ಮುಂದುವರೆದಿವೆ. ದಾಸೋಹ ಧರ್ಮವನ್ನು ಎಲ್ಲ ವರ್ಗದ ಜನಾಂಗಕ್ಕೆ ಶರಣಬಸವಪ್ಪ ಅಪ್ಪ ಅವರು ಸಾರ್ವತ್ರೀಕಗೊಳಿಸಿದ್ದಾರೆ. ಇದು ವೀರಶೈವರಿಗಷ್ಟೇ ಆಗಿರದೆ ವಿಶ್ವಮಾನವೀಯ ವೈಶಾಲ್ಯವನ್ನು ಪಡೆದಿದೆ. ಮತೀಯ ಭಾವೈಕ್ಯ ರೂಪಿಸುವಲ್ಲಿ ಮಹತ್ವದ ಪವಿತ್ರ ತಾಣವಾಗಿರುವ ಶರಣ ಬಸವೇಶ್ವರ ಮಹಾದಾಸೋಹ ಸಂಸ್ಥಾನದಲ್ಲಿ ಮುಸ್ಲೀಮರನ್ನೊಳಗೊಂಡು ಎಲ್ಲ ಜನಾಂಗದವರಿಗೆ ದರ್ಶನಕ್ಕೆ ಪ್ರಸಾದಕ್ಕೆ, ಶಿಕ್ಷಣಕ್ಕೆ ಮುಕ್ತ ಅವಕಾಶವಿದೆ.

ಜನೈಕ್ಯಮತ ಭಾವೈಕ್ಯದ ಪ್ರತೀಕವಾಗಿ ಗುಲಬರ್ಗಾ ಮಹಾನಗರ ಪಾಲಿಕೆಯು ಶರಣಬಸವೇಶ್ವರ ಹಾಗೂ ಹಜರತ್ ಖಾಜಾ ಬಂದೇ ನವಾಜರ ಪೀಠಗಳ ಸಂಯೋಜಿತ ಲಾಂಛನ ಹೊಂದಿದೆ. ಇದು

ಗುಲಬರ್ಗಾ ಸಮಾಜದ ಮೇಲೆ ಶರಣ ಬಸವೇಶ್ವರರು ಬೀರಿರುವ ಪ್ರಭಾವವನ್ನು ತೋರಿಸುತ್ತದೆ. ಹೀಗೆ ಸ್ತ್ರೀ ಪುರುಷರು ಸಮಾನರೆಂದು ಮಹಿಳೆಗೆ ಪ್ರಪ್ರಥಮವಾಗಿ ಅಭೂತಪೂರ್ವ ಸ್ಥಾನಮಾನ, ಸ್ವಾತಂತ್ರ್ಯ ಕೊಟ್ಟು, ಯಾವ ಧರ್ಮವನ್ನು ಮೇಲುಕೀಳು ಎನ್ನದೆ ಅಸ್ಪೃಶ್ಯತೆಯನ್ನು ಹೋಗಲಾಡಿಸಲು, ಸಾಮಾಜಿಕ ಸಾಮರಸ್ಯವನ್ನು ಉಂಟು ಮಾಡಲು ತನ್ನದೇ ಆದ ರೀತಿಯಲ್ಲಿ ಸಾಮಾಜಿಕ ಸುಧಾರಣೆಗೆ ಶ್ರೀಶರಣಬಸವೇಶ್ವರ ಸಂಸ್ಥಾನವು ಮಾಡುತ್ತಿರುವ ಕಾರ್ಯವನ್ನು ಗುರುತಿಸಬಹುದು.

ಚನ್ನಬಸವ ಪಟ್ಟದೇವರು ಹಿರೇಮಠ ಭಾಲ್ಕಿ

ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಾಲ್ಕಿಯ ಹಿರೇಮಠದ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ವಿಶೇಷ ಗಮನ ಸೆಳೆಯುತ್ತಾರೆ. ಡಾ. ಚನ್ನಬಸವ ಪಟ್ಟದೇವರು ಅವರು ಇಪ್ಪತ್ತನೆಯ ಶತಮಾನದಲ್ಲಿ ಬಸವಾದಿ ಶರಣರ ಪರಂಪರೆಯನ್ನು ತಮ್ಮ ಜೀವನದುದ್ದಕ್ಕೂ ನಡೆನುಡಿಗಳಲ್ಲಿ ಅಳವಡಿಸಿಕೊಂಡು ಶರಣರ ಕಾಯಕ ಮತ್ತು ದಾಸೋಹ ತತ್ವಗಳನ್ನು ಮುಂದುವರೆಸಿಕೊಂಡು ಬೀದರ್ ಜಿಲ್ಲೆಯಲ್ಲಿ ನಡೆದಾಡುವ ದೇವರೆಂದೇ ಹೆಸರಾಗಿದ್ದಾರೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಇವರು ತಮ್ಮ ೧೦೮ ವರ್ಷಗಳ ಜೀವಿತ ಕಾಲದಲ್ಲಿ ಮಾಡಿದ(೧೮೯೦ರಿಂದ ೧೯೯೯) ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸುಧಾರಣೆಗಳು ಅಪೂರ್ವವಾದವುಗಳಾಗಿವೆ. ಇವರು ಬಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರಾಗಿ, ಮಾಡಿದ ಕಾರ್ಯಗಳು, ಸುಧಾರಣೆಗಳು ಒಂದು ಕ್ಷೇತ್ರಕ್ಕೆ ಮೀಸಲಾಗಿರದೆ ಎಲ್ಲಾ ಕ್ಷೇತ್ರಗಳಲ್ಲಿ ಇವರ ಸಾಧನೆಗಳು ಕಂಡು ಬರುತ್ತವೆ. ಭಾಲ್ಕಿ ಮಠದ ಪ್ರಸ್ತುತ ಪೀಠಾಧಿಪತಿಗಳು ಶರಣರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಬೀದರ್ ಜಿಲ್ಲೆ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದಾಗ ಸರ್ವಾಧಿಕಾರದ ಮತಾಂಧತೆಯಿಂದ ಕೂಡಿದ್ದ ಹಿಂದುಳಿದಂತ ಪ್ರದೇಶವಾಗಿತ್ತು. ದಬ್ಬಾಳಿಕೆಯಿಂದ ನಶಿಸಿ ಹೋಗುತ್ತಿರುವ ಕನ್ನಡವನ್ನು ಉಳಿಸಬೇಕು ಎಂಬ ಆಶಯವನ್ನು ಇಟ್ಟುಕೊಂಡು ಕನ್ನಡ ಶಾಲೆಗಳಿಗೆ ಅನುಮತಿ ಇರದ ಆ ಸಮಯದಲ್ಲಿ ಹೊರಗಡೆ ಉರ್ದು ಫಲಕ ಹಾಕಿ ಒಳಗಡೆ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಿದರು. ಬಡ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಂತಾಗಬೇಕು ಎನ್ನುವ ಉದ್ದೇಶದೊಂದಿಗೆ ಸ್ವಾತಂತ್ರ್ಯಪೂರ್ವದಲ್ಲಿಯೇ ಅಂದರೆ ೧೯೩೬ರಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಬಾಲ್ಕಿಯ ಹಿರೇಮಠದ ಶಾಖಾಮಠವಾದ 'ಮೋರಗಿ'ಯಲ್ಲಿ ಕನ್ನಡ ಶಾಲೆಯನ್ನು ತೆರೆದರು. ಬಡಮಕ್ಕಳಿಗೆ ಶಿಕ್ಷಣ ಕೊಟ್ಟು, ಅವರ ಬಾಳು ಹಸನಗೊಳಿಸಲು ಉಚಿತ ಪ್ರಸಾದ ನಿಲಯ ತೆರೆಯಲು ನಿರ್ಧರಿಸಿದರು. ಅದಕ್ಕಾಗಿ ಹಣ ಧಾನ್ಯ ಸಂಗ್ರಹಿಸಲು 'ಮುಷ್ಟಿಫಂಡ' ಎನ್ನುವ ಯೋಜನೆ ಮೂಲಕ ಜೋಳಿಗೆ ತೂಗು ಹಾಕಿಕೊಂಡು ಹಳ್ಳಿ ಹಳ್ಳಿಗಳನ್ನು ಸುತ್ತಿ ಕಂತಿ ಭಿಕ್ಷೆ ಮೂಲಕ ಧನ ಧಾನ್ಯ ಸಂಗ್ರಹಿಸಿ ಇದರ ಮೂಲಕ 'ಶ್ರೀ ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯ'ವನ್ನು ತೆರೆದರು. ಅನೇಕ ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ

ಶಿಕ್ಷಣ ಕೊಟ್ಟರು. ಪ್ರಸಾದ ನಿಲಯದಲ್ಲಿ ಆಶ್ರಯ ಪಡೆದ ಅನೇಕರು ಮುಂದೆ ಸಮಾಜದಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಾಗಿದ್ದು, ದೊಡ್ಡ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಸಲ್ಲಿಸುತ್ತಿದ್ದಾರೆ.[೪]

ಇವರ ಮುಂದಾಲೋಚನೆ ಮತ್ತು ಪರಿಶ್ರಮದಿಂದಾಗಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಇಂದು ಸಾಕಷ್ಟು ದೊಡ್ಡದಾಗಿ ಬೆಳೆದು ಹೊಸ ರೂಪ ತಾಳಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹೀಗೆ ೧೨ಕ್ಕೂ ಹೆಚ್ಚು ವಿವಿಧ ಶಾಲೆ, ಕಾಲೇಜು, ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳನ್ನು ಒಳಗೊಂಡು ಹೈದರಾಬಾದ್ ಕರ್ನಾಟಕ ಪ್ರದೇಶದ ಮಹತ್ತರ ಶಿಕ್ಷಣ ಸಂಸ್ಥೆಯಾಗಿ ಬೆಳೆದು ನಿಂತಿದೆ. ಶ್ರೀ ಪಟ್ಟದೇವರು ಅವರು ಸ್ತ್ರೀಸ್ವಾತಂತ್ರ್ಯ ಮತ್ತು ಸ್ತ್ರೀ ಸಮಾನತೆಗಾಗಿ ಶ್ರಮಿಸಿದ್ದಾರೆ. ಬೀದರ್ ಜಿಲ್ಲೆಯ ಸಂಗ್ರಾಮ ಗ್ರಾಮದಲ್ಲಿ ಸ್ಥಾಪಿಸಿರುವ ಶಿವಶರಣೆ ನೀಲಾಂಬಿಕೆಯ ಹೆಸರಿನ ಆಶ್ರಮವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಬಡ ಮತ್ತು ಅನಾಥ ವಿದ್ಯಾರ್ಥಿನಿಯರು ಇಲ್ಲಿ ಉಚಿತ ಊಟ ವಸತಿ ಪಡೆದಿದ್ದಾರೆ. ಇವರ ಸಂಸ್ಥೆಯ ಆಶ್ರಯದಲ್ಲಿ ಅಕ್ಕಮಹಾದೇವಿ ಹೆಸರಿನ ಬಾಲಕಿಯರ ಶಾಲೆ ಕಾಲೇಜುಗಳನ್ನು ತೆರೆದು ಅಲ್ಲಿ ಸ್ತ್ರೀಯರಿಗೆ ಸ್ಥಾನಮಾನ ಕಲ್ಪಿಸಿದ್ದಾರೆ.

ಭಾಲ್ಕಿ ಮಠ ಮತ್ತು ಚನ್ನಬಸವಪಟ್ಟದೇವರ ಅವಿಸ್ಮರಣೀಯ ಸುಧಾರಣೆಗಳೆಂದರೆ ಅಸ್ಪೃಶ್ಯತಾ ನಿವಾರಣಾ ಕಾರ್ಯಗಳು. ಸಾಮಾಜಿಕ ಸಮಾನತೆಯಲ್ಲಿ ನಂಬಿಕೆ ಇಟ್ಟು ಜಾತೀಯತೆಯನ್ನು ತೊಡೆದು ಹಾಕುವಲ್ಲಿ ಅವರ ಪಾತ್ರ ಬಹಳ ದೊಡ್ಡದು. ಸಾಂಪ್ರದಾಯಿಕ ಸಮಾಜದಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯ ಕೈಗೊಂಡಾಗ ಅವರಿಗೆ ಅನೇಕ ತೊಂದರೆಗಳು ಎದುರಾದವು. ಆದರೆ ಕೆಲವು ಭಕ್ತರ ವಿರೋಧವನ್ನು ಲೆಕ್ಕಿಸದೆ ಸಾವಿರಾರು ಜನ ಕೆಳವರ್ಗದವರಿಗೆ ಮಠದ ಒಳಗೆ ಪ್ರವೇಶ ನೀಡಿ ಪ್ರಸಾದ ನಿಲಯದಲ್ಲಿ ಆಶ್ರಯ ನೀಡಿ ಲಿಂಗದೀಕ್ಷೆ ನೀಡಿದರು. ಜಾತಿ ನಿರ್ಮೂಲನಾ ಕಾರ್ಯವನ್ನು ಹಳ್ಳಿ ಹಳ್ಳಿಗಳಲ್ಲಿ ಕೈಗೊಂಡರು. ಇವರ ಅಸ್ಪೃಶ್ಯತಾ ನಿವಾರಣೆ ಕಾರ್ಯದಿಂದ ಬೀದರ್ ಜಿಲ್ಲೆಯ ವಿಠಲ ಎನ್ನುವ ದಲಿತ ಲಿಂಗದೀಕ್ಷೆ ಪಡೆದುಕೊಂಡು ಶಿವಶರಣರಾಗಿ ಸಿದ್ಧರಾಮೇಶ್ವರ ಶರಣರು ಎಂದು ಪರಿವರ್ತನೆಗೊಂಡರು. ಇವರು ಇಂದಿಗೂ ಬಸವ ಧರ್ಮದ ಪ್ರವರ್ತಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.[೫]

ಬೀದರ್ ಜಿಲ್ಲೆಯು ಮೂಢನಂಬಿಕೆಗಳ ತಾಣವಾಗಿತ್ತು. ಇಲ್ಲಿಯ ಜನರು ಮೂಢನಂಬಿಕೆಗಳನ್ನು ಒಪ್ಪಿಕೊಂಡು ಬಂದವರು. ಆದರೆ ಚನ್ನಬಸವಪಟ್ಟದೇವರು ಪಂಚಾಂಗ, ಜೋತಿಷ್ಯ, ವಾರ, ತಿಥಿಗಳನ್ನು ಧಿಕ್ಕರಿಸಿದವರು. ಮಾಟ, ಮಂತ್ರಗಳನ್ನು ವಿರೋಧಿಸಿ ಮೂಢನಂಬಿಕೆಯಿಂದ ಜನರನ್ನು ಹೊರತರಲು ಪ್ರಯತ್ನಿಸಿದರು. ಹಾಗೆಯೇ ವರದಕ್ಷಿಣೆ, ಸರಳ ವಿವಾಹ, ಅಂತರ್ಜಾತಿ ವಿವಾಹ ಮುಂತಾದ ಪ್ರಗತಿಪರ ಯೋಜನೆಗಳನ್ನು ಸಮಾಜದಲ್ಲಿ ರೂಢಿಗೆ ತರಲು ಪ್ರಯತ್ನಿಸಿದರು. ಹೀಗೆ ಚನ್ನಬಸವ ಪಟ್ಟದೇವರು ಬಹುದೊಡ್ಡ ಮಾನವತಾವಾದಿಗಳು, ಜಾತಿಯೇ ಇಲ್ಲದಿರುವ ಸರ್ವ ಸಮಾನತೆ ಇರುವಂಥ ಸಮಾಜ ನಿರ್ಮಾಣ ಮಾಡುವುದು ಅವರ ಹಂಬಲವಾಗಿತ್ತು. ಇವರು ಬೀದರ್ ಜಿಲ್ಲೆಯ ಕಮಲನಗರದಲ್ಲಿ ಜನಿಸಿ ಶಿವಯೋಗ ಮಂದಿರದಲ್ಲಿ ಶಿಕ್ಷಣ ಪಡೆದು ಭಾಲ್ಕಿಯ ಹಿರೇಮಠದ ಪಟ್ಟಾಧ್ಯಕ್ಷರಾಗಿ ಶಾಂತಿವರ್ಧಕ

ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾಗಿ ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡದ ರಕ್ಷಕರಾಗಿ, ಸಮಾಜ ಸುಧಾರಕರಾಗಿ ಅಸ್ಪೃಶ್ಯತೆ ನಿವಾರಣೆಯ ಹರಿಕಾರರಾಗಿ, ಧಾರ್ಮಿಕ, ಸಾಮಾಜಿಕ ಜಾಗೃತಿಯನ್ನುಂಟು ಮಾಡಿದರು. ಇದರಿಂದಾಗಿ ಇಪ್ಪತ್ತನೆಯ ಶತಮಾನದ ಬೀದರ್ ಜಿಲ್ಲೆಯ ಇತಿಹಾಸದ ಕಾಲವನ್ನು ಚೆನ್ನಬಸವಯುಗವೆಂದು ಕರೆಯಲಾಗಿದೆ.

ಭಾಲ್ಕಿ ಹಿರೇಮಠ ಸಂಸ್ಥಾನದ ಉತ್ತರಾಧಿಕಾರಿಗಳಾಗಿ ಬಂದ ಹಾಗೂ ಹಾಲಿ ಯತಿಗಳಾದ ಬಸವಲಿಂಗ ಪಟ್ಟದೇವರು ೧೯೭೨ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠದ ಸ್ಥಾಪನೆ ಮಾಡಿ ಕಾರ್ಯಪ್ರವೃತ್ತರಾದರು. ಈಗ ಸಂಸ್ಥೆಯ ಆಶ್ರಯದಲ್ಲಿ ೧೭ ಪ್ರಾಥಮಿಕ ಶಾಲೆಗಳು, ೧೦ ಪ್ರೌಢಶಾಲೆಗಳು, ೧೨ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ೪೦೦ಕ್ಕೂ ಹೆಚ್ಚು ಬಡ, ನಿರ್ಗತಿಕ ಅನಾಥ ಮಕ್ಕಳಿಗೆ ಉಚಿತ ಊಟ, ವಸತಿ, ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹೀಗೆ ಕರ್ನಾಟಕದ ಒಂದು ಮೂಲೆಯಲ್ಲಿರುವ ಬೀದರ್‌ನಲ್ಲಿ, ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಹಾಗೂ ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿರುವ ಭಾಲ್ಕಿ ಸಂಸ್ಥಾನವು ಒಂದು ಸರಕಾರ ಮಾಡಬೇಕಾದ ಕೆಲಸವನ್ನು ಮಾಡುತ್ತಿದೆ ಹಾಗೂ ಇಂದಿಗೂ ಈ ಭಾಗದ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ. ಇಂತಹ ಮಠ ಹಾಗೂ ಸಂಸ್ಥೆಯು ಸ್ಥಾಪನೆಯಾಗಿ ಕಾರ್ಯನಿರ್ವಹಿಸದೇ ಹೋಗಿದ್ದರೆ ಆ ಕಾಲದಲ್ಲಿ ಅನೇಕರು ವಿದ್ಯೆಯಿಂದ ಸಾಮಾಜಿಕ ಸ್ಥಾನಮಾನದಿಂದ ವಂಚಿತರಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯದೇ ಹೋಗಬೇಕಾಗುತ್ತಿತ್ತು ಎಂದರೆ ತಪ್ಪಾಗಲಾರದು.

ಕೊಪ್ಪಳದ ಗವಿಮಠ

ಹೈದರಾಬಾದ್ ಕರ್ನಾಟಕದ ಹಿಂದುಳಿದ ಭಾಗವಾಗಿರುವ ಕೊಪ್ಪಳ ಜಿಲ್ಲೆಯು ಅನೇಕ ಪುಣ್ಯಕ್ಷೇತ್ರಗಳನ್ನು ಹೊಂದಿದ್ದು, ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಅಂತಹ ಪುಣ್ಯಕ್ಷೇತ್ರಗಳಲ್ಲಿ ಜೈನಕಾಶಿ ಎಂದೇ ಹೆಸರಾದ ಕೊಪ್ಪಳದ ಶ್ರೀಗವಿಮಠವು ಪ್ರಮುಖವಾದುದು. ಸಾವಿರ ವರ್ಷಗಳಿಗೂ ಮೀರಿದ ಇತಿಹಾಸ ಹೊಂದಿರುವ ಹಾಗೂ ಆಧ್ಯಾತ್ಮದ ನೆಲೆಗಟ್ಟಿನ ಸಂಸ್ಥಾನವಾಗಿರುವ ಶ್ರೀ ಗವಿಮಠವು ಸಮಾಜದ ಅಭಿವೃದ್ಧಿಯಲ್ಲಿ ಹಾಗೂ ಏಳಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಬರದ ನಾಡಿನಲ್ಲಿ ಜಾತಿ ಭೇದವಿಲ್ಲದೆ ಅನ್ನ ದಾಸೋಹ ಮತ್ತು ಜ್ಞಾನ ದಾಸೋಹದ ಮೂಲಕ ಬಡವ, ಅನಾಥ ಮಕ್ಕಳಿಗೆ ಆಶ್ರಯ ತಾಣವಾಗಿದೆ. ಪ್ರತಿವರ್ಷ ೧೫ ದಿನಗಳ ಕಾಲ ನಡೆಯುವ ಶ್ರೀಗವಿಸಿದ್ಧೇಶ್ವರ ರಥೋತ್ಸವ ಮತ್ತು ಜಾತ್ರಾ ಮಹೋತ್ಸವದಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡು ಭಕ್ತಿ ಪರವಶರಾಗುತ್ತಾರೆ. ಇಲ್ಲಿನ ಜಾತ್ರೆಯು ದಕ್ಷಿಣ ಭಾರತದ ಕುಂಭಮೇಳವೆಂದೇ ಪ್ರಸಿದ್ಧವಾಗಿದೆ.

ಮಠದ ಪರಂಪರೆಯು ೧೧ನೇ ಶತಮಾನದಿಂದ ಪೂಜ್ಯಶ್ರೀ ರುದ್ರಮುನಿ ಶಿವಾಚಾರ್ಯರಿಂದ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೆ ತ್ರಿವಿಧ ದಾಸೋಹ, ಅನನ್ಯ ಗುರುಭಕ್ತಿ, ಶಿಕ್ಷಣ ಪ್ರಸಾರ ಆಯುರ್ವೇದದ ಸಂರಕ್ಷಣೆ ಹಾಗೂ ಬಲವರ್ಧನೆ, ಭಾವೈಕ್ಯತೆ ಆಧ್ಯಾತ್ಮ ಸಿರಿ ಮುಂತಾದವು ಮಠದ

ಮೌಲ್ಯಗಳಾಗಿವೆ. ಆ ಕಾಲದಿಂದಲೂ ಇಂದಿನವರೆಗೆ ಎಲ್ಲಾ ವರ್ಗದ ಜನರ ಶಾಂತಿ, ಸಮೃದ್ಧಿ ಹಾಗೂ ಸಾತ್ವಿಕ ಬದುಕನ್ನು ಕರುಣಿಸುವ ಭಕ್ತರ ಮತ್ತು ಸಮಾಜದ ಬೇಡಿಕೆಗಳಿಗೆ ಸ್ಪಂದಿಸುವ ಚಾರಿತ್ರಿಕ ಬೀಡಾಗಿದೆ. ಧಾರ್ಮಿಕ ಕ್ಷೇತ್ರ ಹಾಗೂ ವಿದ್ಯಾಕೇಂದ್ರವಾಗಿದೆ. ಗವಿಮಠದ ೧೮ನೇ ಪೀಠಾಧಿಪತಿಗಳಾಗಿ (೨೦೦೨). ಬಂದಿರುವ ಪೂಜ್ಯ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯವರು ಒಬ್ಬ ವಿದ್ವಾಂಸ, ವಾಗ್ಮಿ, ವಾಕ್‌ಚತುರ, ಚಿಂತಕ, ಸೃಜನಾತ್ಮಕ ಕೆಲಸಗಾರರಾಗಿದ್ದು, ದೊಡ್ಡ ಶಿಕ್ಷಣತಜ್ಞ ಮತ್ತು ಸುಧಾರಕರಾಗಿದ್ದಾರೆ.[೬] ಇವರು ಪೀಠಾಧಿಪತಿಯಾಗಿ ಗುರುಭಕ್ತಿ ಮತ್ತು ಕ್ರಿಯಾಶಕ್ತಿಯನ್ನು ಮುಂದುವರಿಸಿ ಕೊಂಡು ಹೋಗುತ್ತಿದ್ದಾರೆ. 'ಶ್ರೀಗವಿಸಿದ್ಧೇಶ್ವರ ವಿದ್ಯಾವರ್ಧಕ ಟ್ರಸ್ಟ್'ನ ಆಶ್ರಯದಲ್ಲಿ ೨೩ ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು ವಿದ್ಯಾ ಪ್ರಸಾರ ಮಾಡುತ್ತಿವೆ.

ಅನಕ್ಷರತೆ ಎನ್ನುವ ಕಗ್ಗತ್ತಲು ಆವರಿಸಿದ್ದ ನಾಡಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಮಸ್ತ ಜನಕೋಟಿಯನ್ನು ಕತ್ತಲೆಯಿಂದ ಬೆಳಕಿನತ್ತ ಮುನ್ನಡೆಸುವ ಹಾಗೂ ಮಕ್ಕಳು ಬಡತನದಿಂದಾಗಿ ವಿದ್ಯೆಯಿಂದ ವಂಚಿತವಾಗಬಾರದು ಎನ್ನುವ ಕಳಕಳಿಯಿಂದ ಶ್ರೀಗವಿಮಠವು ಬಡಮಕ್ಕಳಿಗೆ ಉಚಿತ ಊಟ, ವಸತಿ ಜೊತೆಗೆ ಅಕ್ಷರ ದಾಸೋಹವನ್ನು ನೀಡುತ್ತಿದೆ. ಯಾವ ಜಾತಿಯನ್ನು ಪರಿಗಣಿಸದೆ ಕೇವಲ ನೀತಿಯನ್ನು, ಮಾನವೀಯತೆಯನ್ನು ಪರಿಗಣಿಸಿ ಮಕ್ಕಳ ಭವಿಷ್ಯವನ್ನು ರೂಪಿಸುವ ಮಹಾನ್ ಕಾರ್ಯದಲ್ಲಿ ತೊಡಗಿದೆ. ಇಂದಿಗೂ ಮಠದಲ್ಲಿ ಹಿಂದು, ದಲಿತ, ಮುಸ್ಲಿಂ ಯುವಕರು ಆಶ್ರಮ ಪಡೆದಿದ್ದಾರೆ. ವಿವಿಧ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪನೆ ಮಾಡುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡುತ್ತಿದೆ. ಸದ್ಯ ೨೦೦೦ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡುವ ಉದ್ದೇಶದಿಂದ ೬ ಕೋಟಿ ರೂ. ವೆಚ್ಚದಲ್ಲಿ ವಸತಿ ನಿಲಯದ ನಿರ್ಮಾಣ ಕಾರ್ಯವನ್ನು ಆರಂಭಿಸಲಾಗಿದೆ.

ಸಾಮಾಜಿಕ ಆರೋಗ್ಯಕ್ಕೆ ಹೆಚ್ಚು ಗಮನ ಕೊಟ್ಟಿರುವ ಸಂಸ್ಥೆಯಲ್ಲಿ ಉತ್ತಮ ಗುಣಮಟ್ಟದ ಆಯುರ್ವೇದದ ಆಸ್ಪತ್ರೆಯನ್ನು ಸ್ಥಾಪಿಸಲಾಗಿದ್ದು, ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆಯು ಉತ್ತಮ ಸಮಾಜ ಸೇವಾ ಕಾರ್ಯವಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ ರೋಗಿಗಳು ಚಿಕಿತ್ಸೆಗಾಗಿ ಇಲ್ಲಿಗೆ ಬರುತ್ತಿದ್ದಾರೆ. ಗವಿಮಠವು ಕೇವಲ ಧಾರ್ಮಿಕ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿರದೆ, ಅನ್ನದಾಸೋಹದ ಜೊತೆಗೆ ಶೈಕ್ಷಣಿಕ, ಆಧ್ಯಾತ್ಮಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.[೭] ತ್ರಿವಿಧ ದಾಸೋಹದ ಶ್ರೇಷ್ಠತ್ವದಿಂದ, ಶಿಕ್ಷಣ ಹಾಗೂ ಆಧ್ಯಾತ್ಮದ ನೆಲೆಗಟ್ಟಿನಲ್ಲಿ ಎಲ್ಲಾ ವರ್ಗದ ಜನರನ್ನು ಒಂದು ತತ್ವಗಳ ಅಡಿಯಲ್ಲಿ ಶಾಂತಿ, ಸಹಬಾಳ್ವೆ, ಸಹಕಾರದ ಅಡಿ ಜೀವಿಸುವಂತೆ ಮಾಡುತ್ತಾ ಸಮಾಜದ ಏಳಿಗೆಯಲ್ಲಿ ತೊಡಗಿರುವುದು ಮಠದ ಬಹುದೊಡ್ಡ ಕೊಡುಗೆ ಎಂದೇ ಹೇಳಬಹುದು.

ಮಸೀದಿಗಳ ಪಾತ್ರ

ಹೈದರಾಬಾದ್ ಕರ್ನಾಟಕ ಪ್ರದೇಶವು ವಿಶಿಷ್ಟವಾದ ಭೌಗೋಳಿಕತೆಯನ್ನು, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ಹೊಂದಿದೆ. ಅನೇಕ ಶತಮಾನಗಳ ಕಾಲ ಮುಸ್ಲಿಂರ ಆಳ್ವಿಕೆಗೆ ಒಳಪಟ್ಟಿದ್ದ ರಿಂದಾಗಿ ಇಲ್ಲಿ ಮುಸ್ಲಿಂರ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ. ಈ ಪ್ರದೇಶವು ಸುಮಾರು

ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲ ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ನಿಜಾಮರ ಆಳ್ವಿಕೆಯಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ವ್ಯವಸ್ಥೆಗಳ ಮೇಲೆ ಇಸ್ಲಾಂ ಧರ್ಮದ ಪ್ರಭಾವ ಎದ್ದು ಕಾಣುತ್ತಿತ್ತು. ಪ್ರಭುತ್ವ ಯಾರದೋ ಅವರ ಭಾಷೆಯೇ ಆಡಳಿತ ಭಾಷೆಯಾಗಿರುವುದು ಸಾಮಾನ್ಯ. ಹೀಗಾಗಿ ಇಲ್ಲಿ ಕನ್ನಡಕ್ಕೆ ಬದಲಾಗಿ ಉರ್ದು ಆಡಳಿತ ಭಾಷೆಯಾಗಿತ್ತು. ಇಸ್ಲಾಂ ಪ್ರಭುತ್ವದಡಿಯಲ್ಲಿ ಮುಸ್ಲಿಂರು ಆರ್ಥಿಕವಾಗಿ, ರಾಜಕೀಯವಾಗಿ ಉನ್ನತ ಸ್ಥಾನದಲ್ಲಿದ್ದರು. ಹೀಗಾಗಿ ಸಮಾಜದ ಮೇಲೆ ಮುಸ್ಲಿಂರ ಮತ್ತು ಮಸೀದಿಗಳ ಪ್ರಭಾವ ಪ್ರಮುಖವಾಗಿತ್ತು.

ಬಹುಹಿಂದಿನಿಂದಲೂ ಮಸೀದಿಗಳು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಇದರಿಂದಾಗಿ ಇಂದಿಗೂ ಮುಸ್ಲಿಂ ಸಮುದಾಯದ ಮೇಲೆ ಸಾಕಷ್ಟು ನಿಯಂತ್ರಣ ಇಟ್ಟುಕೊಂಡಿರುವ ಸಂಸ್ಥೆ ಎಂದರೆ ಮಸೀದಿಗಳು. ಇವು ಸಮಾಜದ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಾ ಬಂದಿವೆ. ಮಸೀದಿಗಳಲ್ಲಿ ಮೂರು ವಾಸ್ತುರಚನೆಗಳಿವೆ. ದಿನನಿತ್ಯ ನಮಾಜು ಮಾಡುವ ಸ್ಥಳವೇ ಮಸೀದಿ. ಅಲ್ಲದೆ ವರ್ಷದಲ್ಲಿ ಎರಡು ಸಲ ಮಾತ್ರ ಅಂದರೆ ರಂಜಾನ್ ಮತ್ತು ಬಕ್ರೀದ್ ಹಬ್ಬಗಳಲ್ಲಿ ಇಡೀ ಊರಿನ ಮುಸ್ಲಿಮರು ಸೇರಿ ನಮಾಜು ಮಾಡುವ ಸ್ಥಳ ಈದ್ಗಾ. ಇವು ಸಾಮಾನ್ಯವಾಗಿ ಊರ ಹೊರಗಿರುತ್ತವೆ. ಇನ್ನು ಸೂಫಿ ಸಂತರ ಸಮಾಧಿಗಳಿರುವ ಸ್ಥಳಗಳನ್ನೆ ದರ್ಗಾಗಳು ಎನ್ನಲಾಗುತ್ತದೆ. ಹೀಗೆ ಮಸೀದಿಗಳು ಮೂಲಭೂತ ಇಸ್ಲಾಮಿನ ನಮಾಜು ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ.

ಸಾಮಾಜಿಕ ಸುಧಾರಣೆಯಲ್ಲಿ ಮಸೀದಿಗಳು ಬಹುಮುಖ್ಯವಾದ ಪಾತ್ರ ನಿರ್ವಹಿಸುತ್ತವೆ. ಮಸೀದಿಗಳು ಮುಖ್ಯವಾಗಿ ಅಲ್ಲಾಹುವಿನ ಧ್ಯಾನ ಮತ್ತು ಪ್ರಾರ್ಥನೆಯನ್ನು ಆಚರಿಸಲು ನಿರ್ಮಾಣವಾಗಿರುತ್ತವೆ. ಇಲ್ಲಿ ಖುರಾನ್ ಮತ್ತು ಹದೀಸ್‌ನ ಸಹಾಯದಿಂದ ಧಾರ್ಮಿಕ ಬೋಧನೆಯ ಜೊತೆಗೆ ಉತ್ತಮ ಸಮಾಜವನ್ನು ನಿರ್ಮಿಸುವ ವಿಚಾರಗಳನ್ನು ಬೋಧಿಸಲಾಗುತ್ತದೆ. ಮಸೀದಿಗಳು ಪ್ರತಿಯೊಬ್ಬ ಮುಸ್ಲಿಂನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹಾಗೂ ಅವನನ್ನು ಸಮಾಜದ ಒಳ್ಳೆಯ ವ್ಯಕ್ತಿಯನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಮಾನವ ಮಾನವರ ಮಧ್ಯೆ ಪ್ರೀತಿ, ಸ್ನೇಹ, ಶಾಂತಿ, ಕ್ಷಮಾಗುಣ, ಸಹನೆ, ಸಹಕಾರ ಮನೋಭಾವನೆ, ದಾನ ಧರ್ಮ ಮುಂತಾದ ಅನೇಕ ಮಾನವೀಯ ಗುಣಗಳನ್ನು ಮನುಷ್ಯರ ಮನದಲ್ಲಿ ಅಂಕುರಿಸುತ್ತಾ, ಮಾನವನನ್ನು ಒಂದು ರಾಷ್ಟ್ರದ ಸತ್ಪ್ರಜೆಯಾಗಿ ರೂಪುಗೊಳಿಸುವಲ್ಲಿ ಮಸೀದಿಗಳು ಮುಖ್ಯ ಪಾತ್ರವನ್ನು ನಿರ್ವಹಿಸುತ್ತವೆ.

ಕೆಲವು ಮಸೀದಿಗಳು ಧಾರ್ಮಿಕ ಕೇಂದ್ರಗಳಾಗಿರುವುದರ ಜೊತೆಗೆ ಶೈಕ್ಷಣಿಕ ಕೇಂದ್ರಗಳೂ ಆಗಿವೆ. ಮಸೀದಿಗಳಲ್ಲಿ ಉರ್ದು, ಪರ್ಶಿಯ, ಅರೇಬಿಕ್ ಭಾಷೆಯ ಶಿಕ್ಷಣವನ್ನು ನೀಡುತ್ತಾ ಬಡ ಮತ್ತು ಅನಾಥ ಮಕ್ಕಳಿಗೆ ದಾರಿ ದೀಪಗಳಾಗಿವೆ. ಮಸೀದಿಗಳಲ್ಲಿ ಉಚಿತ ವಸತಿ, ಊಟ, ಬಟ್ಟೆ ನೀಡಿ ಆಶ್ರಯ ಕೊಟ್ಟು ಮಕ್ಕಳು ದಾರಿ ತಪ್ಪಿ ಹೋಗದಂತೆ ನೋಡಿಕೊಳ್ಳುತ್ತಾರೆ. ಇನ್ನು ಮುಸ್ಲಿಂ ವಿದ್ಯಾರ್ಥಿಗಳು

ಬೇರೆ ರೀತಿಯ ಶಿಕ್ಷಣದಲ್ಲಿ ಆಸಕ್ತಿ ಇದ್ದು ವಿದ್ಯಾಭ್ಯಾಸ ಕೈಗೊಂಡರೆ ಬಾಲಕ ಮತ್ತು ಬಾಲಕಿಯರಿಬ್ಬರಿಗೂ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುತ್ತಿವೆ. ಮಸೀದಿಗಳು ನೀಡುವ ಸಹಾಯಧನದಿಂದ ಇಂದು ಎಷ್ಟೋ ಬಡ ಮತ್ತು ಅನಾಥ ಮಕ್ಕಳು ಶಾಲಾಕಾಲೇಜುಗಳಿಗೆ ಸೇರಿಕೊಂಡು ವಿದ್ಯಾಭ್ಯಾಸ ಮಾಡಿ ಉನ್ನತ ಅಧಿಕಾರದಲ್ಲಿದ್ದಾರೆ. ಇಂದು ವಿದ್ಯಾಭ್ಯಾಸ ಮಾಡುತ್ತಿರುವ ಮುಸ್ಲಿಂ ವಿದ್ಯಾರ್ಥಿಗಳನ್ನು ನೋಡಿದರೆ ಶ್ರೀಮಂತ ಕುಟುಂಬದಿಂದ ಬಂದ ಮುಸ್ಲಿಂ ವಿದ್ಯಾರ್ಥಿಗಳಿಗಿಂತ ಮಸೀದಿಗಳಿಂದ ಸಹಾಯ ಧನ ಪಡೆದು ಬದುಕುತ್ತಿರುವ ವಿದ್ಯಾರ್ಥಿಗಳೇ ಹೆಚ್ಚಾಗಿ ಕಂಡು ಬರುತ್ತಾರೆ.

ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಕ್ಷೇತ್ರಕ್ಕೆ ಅಲ್ಪಸಂಖ್ಯಾತ ಸಮುದಾಯಗಳೂ ಕೂಡ ತಮ್ಮ ಕೊಡುಗೆ ಸಲ್ಲಿಸುತ್ತಿವೆ. ಈ ಭಾಗದಲ್ಲಿ ಅನೇಕ ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಿಂದಾಗಿ ಇಲ್ಲಿನ ಮುಸ್ಲಿಮರ ಜೊತೆಗೆ ಇತರ ವರ್ಗಗಳ ಶೈಕ್ಷಣಿಕ ಬೆಳವಣಿಗೆಗೂ ಪ್ರಮುಖ ಪಾತ್ರವಹಿಸುತ್ತಾ ಬಂದಿವೆ. ಗುಲಬರ್ಗಾ ಜಿಲ್ಲೆಯ ದೊಡ್ಡ ಶಿಕ್ಷಣ ಸಂಸ್ಥೆ ಎಂದರೆ 'ಖಾಜಾ ಎಜ್ಯುಕೇಶನ್ ಸೊಸೈಟಿ'. ೧೯೬೦ರ ಸುಮಾರಿನಲ್ಲಿ ಸ್ಥಾಪನೆಯಾದ ಸಂಸ್ಥೆಯು ಕೆ.ಬಿ.ಎನ್. ಇಂಜಿನಿಯರಿಂಗ್ ಕಾಲೇಜ್, ಕೆ.ಬಿ.ಎನ್. ಡೆಂಟಲ್ ಕಾಲೇಜ್, ಕೆ.ಬಿ.ಎನ್. ಆಸ್ಪತ್ರೆಗಳನ್ನು ನಡೆಸುತ್ತಿದೆ. ಹಾಗೆಯೆ ಮಹಿಳೆಯರಿಗಾಗಿ ಉನ್ನತ ಶಿಕ್ಷಣ ಒದಗಿಸಲು ಬೀಬಿ ಈರ್ಘಾ ಪದವಿಪೂರ್ವ ಮತ್ತು ಪದವಿ ಮಹಾವಿದ್ಯಾಲಯ ದೊಡ್ಡದಾಗಿ ಬೆಳೆದಿವೆ. ಗುಲಬರ್ಗಾ ಅಲ್ಲದೇ ಇತರ ಜಿಲ್ಲೆ ಹಾಗೂ ಸ್ಥಳಗಳಲ್ಲಿ ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗೆ ಮುಸ್ಲಿಂ ಶಿಕ್ಷಣ ಸಂಸ್ಥೆಗಳು ಪ್ರಾರಂಭಗೊಂಡಿದ್ದರಿಂದಾಗಿ ಆ ಸಮುದಾಯದವರಿಗೆ ಜಾಗೃತಿಯುಂಟಾಗಿ ಅವರಿಗೆ ಪ್ರೇರಣೆ ಮತ್ತು ಪ್ರೋತ್ಸಾಹದ ಜೊತೆಗೆ ಸಹಾಯ ಸೌಲಭ್ಯಗಳು ದೊರೆತು ಶಿಕ್ಷಣ ಪ್ರಸಾರವಾಗಿ ಸಮಾಜವು ಅಭಿವೃದ್ಧಿಯಾಗಲು ಕಾರಣವಾಗಿದೆ.[೮]

ಮಸೀದಿಗಳು ಸಾಮಾಜಿಕ ಸಾಮರಸ್ಯ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಮಾಜದಲ್ಲಿ ಮುಸ್ಲಿಂ ಮತ್ತು ಮುಸ್ಲಿಂಮೇತರರ ನಡುವೆ ಯಾವುದೇ ಭಿನ್ನಾಭಿಪ್ರಾಯ ಹುಟ್ಟಿಕೊಂಡಾಗ, ಅದು ಕೋಮುವಾರು ವಿಷಯವಾಗಿ ಮಾರ್ಪಾಡುವ ಸಂಭವವಿದ್ದಾಗ ಮಸೀದಿಗಳಲ್ಲಿ ಆ ವಿಷಯ ಚರ್ಚಿಸಿ ಅದಕ್ಕೆ ಯಾವ ರೀತಿ ಸ್ಪಂದಿಸಬೇಕು, ನಮ್ಮ ಸ್ಪಂದನೆಯ ರೀತಿಯಿಂದ ಆಗುವ ಉಪಯೋಗಗಳೇನು ಎನ್ನುವ ತಿಳುವಳಿಕೆಯನ್ನು ನೀಡಿ, ಮತೀಯ ಸಾಮರಸ್ಯವನ್ನು ಕಾಪಾಡುತ್ತವೆ.

ಆದರೆ ಜನಸಂಸ್ಕೃತಿಗೆ ಸಂಬಂಧಿಸಿದಂತೆ ಸಾಮಾಜಿಕ ಕೊಡುಗೆಗೆ ಸಂಬಂಧಿಸಿದಂತೆ ಧರ್ಮವನ್ನು ಹೊರತುಪಡಿಸಿ ಸಾಮಾಜಿಕ ಕಳಕಳಿಯ ಮೇಲೆ ಸಾಮಾಜಿಕ ಮೇಲು, ಕೀಳು ಇಕ್ಕಟ್ಟುಗಳ ನಡುವೆ ಮಸೀದಿಗಳು ತಮ್ಮನ್ನು ತೊಡಗಿಸಿಕೊಂಡಿದ್ದು ಕಡಿಮೆ ಎನ್ನುವುದು ಪ್ರಸ್ತುತ ಅಧ್ಯಯನದ ಮಿತಿಯಲ್ಲಿ ಕಂಡು ಬರುತ್ತದೆ. ಹಾಗೆಯೇ ಭಾರತೀಯ ಶಿಕ್ಷಣ ವ್ಯವಸ್ಥೆಗೆ ಹೋಲಿಸಿದರೆ ಬೇರೆ ಧರ್ಮಗಳು, ಮಠಗಳು ಸಾರ್ವತ್ರಿಕ ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆಗೆ ಹೋಲಿಸಿಕೊಂಡರೆ ಇಲ್ಲಿ ಅಂದರೆ ಮಸೀದಿ ಮತ್ತು ಮದರಸಗಳಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಒಟ್ಟಿನಲ್ಲಿ ಮುಸ್ಲಿಂ

ಎನ್ನುವ ಸಮುದಾಯವನ್ನು ನಮ್ಮ ಸಮಾಜದೊಳಗೆ ಸೇರಿಸಿಕೊಂಡು ಮಸೀದಿಗಳನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸುಧಾರಣೆಯ ತಾಣಗಳಾಗಿ ಒಪ್ಪಿಕೊಳ್ಳಬೇಕು. ಇಂದು ಮಸೀದಿಗಳಿಂದಲೇ ಅಲ್ಲಿನ ಧಾರ್ಮಿಕ ಗುರುಗಳ ಉಪದೇಶದಿಂದಲೇ ಸಹಬಾಳ್ವೆ, ಸಹಕಾರ ಪರೋಪಕಾರದ ತತ್ವಗಳ ಮೇಲೆ ಸಾಮರಸ್ಯದ ಜೀವನಕ್ಕೆ ದಾರಿಯಾಗುತ್ತಿದೆ.

ದರ್ಗಾಗಳು

ಸೂಫಿ ಪಂಥದ ಅನುಯಾಯಿಗಳ ಪ್ರಕಾರ ಸೂಫಿಗಳು ದೇವದೂತರಾಗಿದ್ದು, ದೇವರ ಪ್ರತಿನಿಧಿಗಳಾಗಿದ್ದು ಇವರ ಮೂಲಕವೇ ದೇವರನ್ನು ಕಾಣಲು ಸಾಧ್ಯವೆಂದು ನಂಬಿಕೆಯುಳ್ಳವರಾಗಿದ್ದಾರೆ. ಸೂಫಿಗಳು ದೇಹ ತ್ಯಾಗ ಮಾಡಿದರೂ ಇಹಲೋಕ ತ್ಯಜಿಸಿದರೂ ಅವರ ದೇಹ ಮಾತ್ರ ನಾಶವಾಗಿ ಆತ್ಮವು ಹಾಗೆಯೇ ಇರುತ್ತದೆ. ಹೀಗಾಗಿ ನಮ್ಮ ಕಷ್ಟ ನೋವುಗಳನ್ನು ಕೇಳಿಸಿಕೊಂಡು ಅವರು ದೇವರಿಗೆ ತಿಳಿಸುತ್ತಾರೆ. ಇವರ ಮೂಲಕವೇ ದೇವರು ತಮ್ಮ ಬೇಡಿಕೆಗಳನ್ನು ಈಡೇರಿಸುತ್ತಾನೆ ಹಾಗೂ ಕಷ್ಟಗಳನ್ನು ಪರಿಹರಿಸುತ್ತಾನೆ ಎನ್ನುವ ನಂಬಿಕೆಯಿಂದ ದರ್ಗಾಕ್ಕೆ ಭೇಟಿ ನೀಡುತ್ತಾರೆ. ದರ್ಗಾಗಳ ವಿಶೇಷತೆ ಕಾಣುವುದು ಪ್ರತಿ ವರ್ಷ ಆಚರಿಸುವ ದರ್ಗಾದ ಉರುಸ್ ಉತ್ಸವದಲ್ಲಿ. ಉರುಸ್‌ಗಳಲ್ಲಿ ಎಲ್ಲಾ ವರ್ಗದ ಎಲ್ಲಾ ಜಾತಿಯ ಜನರು ಭಾಗವಹಿಸುವುದು ವಿಶೇಷವಾಗಿದೆ.

ಹೈದರಬಾದ್ ಕರ್ನಾಟಕ ಭಾಗದ ದರ್ಗಾಗಳಲ್ಲಿ ಗುಲಬರ್ಗಾದ ಖಾಜಾ ಬಂದೇ ನವಾಜ್‌ರ ದರ್ಗಾ, ಬೀದರ್‌ನ ಅಷ್ಟೂರಿನ ಅಹಮದ್‌ಶಾಹಾವಲಿ ದರ್ಗಾ, ಮುಂತಾದ ದರ್ಗಾಗಳು ವಿಶೇಷವಾಗಿ ನಮ್ಮ ಗಮನ ಸೆಳೆಯುತ್ತವೆ. ದರ್ಗಾಗಳು ಜಾತಿ ಸಾಮರಸ್ಯ ಹಾಗೂ ಸಾಮಾಜಿಕ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ದರ್ಗಾಗಳ ಪ್ರಭಾವದಿಂದಾಗಿ ಇಂದು ಗುಲಬರ್ಗಾ, ಬೀದರ್, ಜಿಲ್ಲೆಗಳು ಸೇರಿದಂತೆ ಇಲ್ಲಿನ ಕೆಲವು ಹಬ್ಬಗಳು, ಧಾರ್ಮಿಕ ಆಚರಣೆಗಳು ಒಂದು ಧರ್ಮಕ್ಕೆ ಸೀಮಿತವಾಗಿರದೆ ಎಲ್ಲಾ ಜನ ಸಮುದಾಯಕ್ಕೆ ವಿಸ್ತರಿಸಿಕೊಂಡಿವೆ ಹಾಗೂ ಕೂಡಿಬಾಳಲು ಕಲಿಸಿವೆ. ಇಲ್ಲಿನ ಮುಸ್ಲಿಮರು ಲಕ್ಷ್ಮೀಪೂಜೆಯಲ್ಲಿ ಹಾಗೂ ಗಣಪತಿ ಪೂಜೆಯಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದಾಗಿದೆ. ಹಬ್ಬಹರಿದಿನಗಳಲ್ಲಿ ಹಿಂದುಗಳು ಪೂಜೆ ಮಾಡುವ ಗಣಪತಿ, ಲಕ್ಷ್ಮಿ, ಶಿವ ಮುಂತಾದ ಮೂರ್ತಿಗಳನ್ನು ತಯಾರಿಸುವವರು ಮುಸ್ಲಿಮರಾಗಿದ್ದಾರೆ. ಅದೇ ರೀತಿ ಮುಸ್ಲಿಮರು ಆಚರಿಸುವ ಮೊಹರಂ ಹಬ್ಬದಲ್ಲಿ ಹಿಂದುಗಳು ಭಾಗವಹಿಸುತ್ತಾರೆ. ಬಂದೇ ನವಾಜರ ಉರಸ್‌ನ್ನು ಎಲ್ಲರೂ ಹಬ್ಬದಂತೆಯೇ ಆಚರಿಸುತ್ತಾರೆ. ಗುಲಬರ್ಗಾದಲ್ಲಿರುವ ಬಂದೇ ನವಾಜರ ದರ್ಗಾದ ಸುತ್ತಮುತ್ತಲಿನ ಪರಿಸರ, ಸಮುದಾಯವನ್ನು ನೋಡಿದರೆ ಅಲ್ಲಿನ ಗಲ್ಲಿಗಳಲ್ಲಿ ಮುಸ್ಲಿಮರೆ ಹೆಚ್ಚಾಗಿ ವಾಸಿಸುತ್ತಿದ್ದರೂ ಜೊತೆ ಜೊತೆಗೆ ಹಿಂದೂ ಕುಟುಂಬಗಳು ನೆಲೆಸಿವೆ. ಈ ಭಾಗದ ಕೆಲವು ಜನರ ಹೆಸರುಗಳಲ್ಲಿಯೂ ಹಿಂದು ಮುಸ್ಲಿಂ ಎಂಬ ಭೇದವನ್ನು ಗುರುತಿಸಲು ಸಾಧ್ಯವಿಲ್ಲ. ಮಸ್ತಾನಪ್ಪ, ಹುಸೇನಪ್ಪ, ಲಾಲಪ್ಪ, ಲಾಲ್‌ಸಾಬ್, ಪೀರಪ್ಪ, ದಾವಲಪ್ಪ ಹೀಗೆ ಹೆಸರುಗಳಿವೆ.[೮]

ಜಾತಿ, ಧರ್ಮ ಭಾಷೆಗಳ ಹೆಸರಿನಲ್ಲಿ ದೇಶವನ್ನು ಜನ ಸಮುದಾಯವನ್ನು ಒಡೆಯಲು ಹವಣಿಸುತ್ತಿರುವ ಶಕ್ತಿಗಳೇ ವಿಜೃಂಭಿಸುತ್ತಿರುವ ಇಂದಿನ ದಿನಗಳಲ್ಲಿ ಗುಲಬರ್ಗಾ ಭಾಗದ

ಜನಸಮುದಾಯವು ಒಂದು ವಿಶೇಷವಾಗಿ ಕಾಣಬರುತ್ತದೆ. ಇಲ್ಲಿನ ಸಮಾಜದ ಎಲ್ಲಾ ವರ್ಗದ ಜನರು ಬಂದೇ ನವಾಜರನ್ನು ಮಹಾಸಂತನೆಂದು ಪರಿಗಣಿಸಿದ್ದಾರೆ. ಗುಲಬರ್ಗಾದಲ್ಲಿ ನಡೆಯುವ ಬಂದೇ ನವಾಜರ ಉರುಸ್ ಉತ್ಸವ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ಇದು ಸಹಬಾಳ್ವೆ ಮತ್ತು ಸೌಹಾರ್ದತೆಗೆ ಅತ್ಯಂತ ಉತ್ತಮ ಉದಾಹರಣೆಯಾಗಿದೆ. ಹೀಗೆ ದರ್ಗಾಗಳು ಕೂಡ ಈ ಭಾಗದ ಸಾಮಾಜಿಕ ಸುಧಾರಣೆಯಲ್ಲಿ ತಮ್ಮದೇ ಪಾತ್ರವಹಿಸುತ್ತಿವೆ.

ಚರ್ಚ್‌ಗಳ ಪಾತ್ರ

ಪ್ರಪಂಚದ ಪ್ರಾಚೀನ ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದಾಗಿದೆ. ಧರ್ಮದ ವೈಶಿಷ್ಟ್ಯತೆ ಹಾಗೂ ಸರಳ ತತ್ವಗಳಿಂದಾಗಿ ಬಹುಬೇಗ ಇದು ಪ್ರಪಂಚದಾದ್ಯಂತ ಹರಡಿ ವಿಶ್ವದ ಅತೀ ಹೆಚ್ಚು ಅನುಯಾಯಿಗಳನ್ನು ಪಡೆದ ಧರ್ಮಗಳಲ್ಲಿ ಒಂದಾಗಿದೆ. ವಿಶ್ವದ ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿದೆ. ಹಾಗೆಯೇ ಕ್ರೈಸ್ತರ ಧಾರ್ಮಿಕ ಕೇಂದ್ರಗಳಾದ ಚರ್ಚ್‌ಗಳಿಂದ ಭಾರತೀಯ ಸಮಾಜಕ್ಕೆ ಹಲವಾರು ಬಗೆಯ ಪ್ರಯೋಜನಗಳು ದೊರೆತಿವೆ ಎಂಬುದನ್ನು ಯಾರೂ ಮರೆಯುವಂತಿಲ್ಲ. ಶಿಕ್ಷಣ, ಸಾಹಿತ್ಯ, ವೈದ್ಯಕೀಯ ತಂತ್ರಜ್ಞಾನ, ಹೀಗೆ ಹಲವಾರು ರಂಗಗಳಲ್ಲಿ ಕ್ರೈಸ್ತ ಧರ್ಮೀಯರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಹೈದರಾಬಾದ್ ಕರ್ನಾಟಕದಲ್ಲೂ ಕೂಡ ಚರ್ಚ್‌ಗಳು ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಕೆಳವರ್ಗದವರ ಹಾಗೂ ಬಡವರ್ಗದವರ ಬದುಕಿನಲ್ಲಿ ಬದಲಾವಣೆ ತರುವಲ್ಲಿ ಪ್ರಯತ್ನಿಸುತ್ತಿದೆ.

ಚರ್ಚ್‌ಗಳು ಪ್ರಾರ್ಥನಾ ಸ್ಥಳಗಳಾಗಿದ್ದು, ಅಲ್ಲಿ ಪಾದ್ರಿಗಳು ಧರ್ಮ ಉಪದೇಶ ಹಾಗೂ ಸಮಾಜ ಸೇವಾ ಕಾರ್ಯದ ಜೊತೆಗೆ ಧರ್ಮ ಪ್ರಸಾರದಲ್ಲಿಯೂ ತೊಡಗಿದ್ದಾರೆ. ಚರ್ಚ್‌ಗಳ ಆಶ್ರಯದಲ್ಲಿ ನಡೆಸುತ್ತಿರುವ ಆಸ್ಪತ್ರೆಗಳು ವಸತಿ ನಿಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳು ಸಾಕಷ್ಟು ಸೇವೆ ಮಾಡುತ್ತಿವೆ. ಅವರ ಕಾನ್ವೆಂಟ್‌ಗಳು, ಶಾಲಾ, ಕಾಲೇಜುಗಳು, ಗುಣಮಟ್ಟದ ಹಾಗೂ ಸೇವಾ ಮನೋಭಾವವುಳ್ಳ ಆಸ್ಪತ್ರೆಗಳು, ವಸತಿ ನಿಲಯಗಳು, ಅನಾಥಾಶ್ರಮಗಳು ಮುಂತಾದ ಸಂಸ್ಥೆಗಳ ಮೂಲಕ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಈ ಭಾಗದ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಜೀವನ ಶೈಲಿಯಲ್ಲಿ ಹಾಗೂ ಇತರ ರಂಗಗಳಲ್ಲಿ ಕ್ರೈಸ್ತಧರ್ಮ ಹಾಗೂ ಚರ್ಚ್‌ಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಹಾಗೆಯೇ ಸಮಾಜದಲ್ಲಿ ಎಲ್ಲರಿಂದ ತ್ಯಜಿಸಲ್ಪಟ್ಟ, ನಿರ್ಲಕ್ಷಿಸಲ್ಪಟ್ಟ ಅನಾಥರು, ನಿರ್ಗತಿಕರು, ಅಲೆಮಾರಿಗಳು, ದಲಿತರು, ಸ್ತ್ರೀಯರು, ರೋಗಿಗಳು ಮುಂತಾದವರಿಗೆ ಅನ್ನ, ಆರೋಗ್ಯ, ಸ್ಥಾನಮಾನ ನೀಡುವ ಕಾರ್ಯದಲ್ಲೂ ತೊಡಗಿವೆ.

ಹೈದರಾಬಾದ್ ಕರ್ನಾಟಕದಲ್ಲಿ ಸ್ಥಾಪನೆಯಾದ ಚರ್ಚ್‌ಗಳಲ್ಲಿ ಬಳ್ಳಾರಿಯಲ್ಲಿ ಕ್ರಿ.ಶ. ೧೮೧೧ರಲ್ಲಿ ಬ್ರಿಟಿಷ್ ಆಡಳಿತದ ಅವಧಿಯಲ್ಲಿ ನಿರ್ಮಾಣಗೊಂಡಿರುವ 'ಹೋಲಿ ಟ್ರಿನಿಟಿ ಚರ್ಚ್' ಅತ್ಯಂತ ಪುರಾತನ ಚರ್ಚ್ ಆಗಿದೆ. ಈ ಚರ್ಚ್‌ನಿಂದ ಮೊದಲು ಮುದ್ರಣ ಘಟಕ ಆರಂಭವಾಗಿ ಜಾನ್ ಹ್ಯಾಡ್ಸ್ ಅವರ ಶ್ರಮದಿಂದ ಕನ್ನಡದ ಮೊದಲ ಬೈಬಲ್ ಗ್ರಂಥ ಹಾಗೂ ಕನ್ನಡದ ಮೊದಲ ಪತ್ರಿಕೆ

ಮಂಗಳೂರು ಸಮಾಚಾರ ಕೂಡ ಇಲ್ಲಿಯೇ ಮುದ್ರಣಗೊಂಡಿತ್ತು.[೧೦] ನಂತರ ಚರ್ಚ್‌ನ ಆಶ್ರಯದಲ್ಲಿ ಇಂಗ್ಲೀಷ್ ಶಾಲೆಗಳು ಆರಂಭಗೊಂಡವು. ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲು, ಪದವಿ ಪೂರ್ವ ಕಾಲೇಜು, ಸಂತ ಜೋಸೆಫರ ಶಾಲೆ, ಸಂತ ಫಿಲೋಮಿನಾ ಮಾಧ್ಯಮಿಕ ಶಾಲೆ ಮುಂತಾದವು ಇಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಅದೇ ರೀತಿ ರಾಯಚೂರಿನ ಮೆಥೋಡಿಸ್ಟ್ ಸಂಸ್ಥೆ ಸಹ ಪ್ರಮುಖ ಕಾರ್ಯ ನಿರ್ವಹಿಸುತ್ತಿದೆ. ಉತ್ತಮವಾದ ಶೈಕ್ಷಣಿಕ ತಳಹದಿಯ ಮೇಲೆ ಬೇರು ಬಿಟ್ಟ ಕ್ರೈಸ್ತ ಶಿಕ್ಷಣ ಸಂಸ್ಥೆಗಳು ಇಂದು ಹೆಮ್ಮರವಾಗಿ ಬೆಳೆದು ಈ ಭಾಗದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಹಸನುಮಾಡಿವೆ. ಚರ್ಚ್‌ಗಳು ದಲಿತ, ಕೆಳವರ್ಗದವರಿಗೆ ಉಚಿತ ಊಟ, ವಸತಿ ಸಹಿತ ಶಿಕ್ಷಣ ನೀಡುವುದರ ಮೂಲಕ ಅವರ ಏಳಿಗೆಯಲ್ಲಿ ಹಾಗೂ ಅವರ ಸಾಮಾಜಿಕ, ರಾಜಕೀಯ, ದೃಷ್ಟಿಕೋನಗಳಲ್ಲಿ ಬದಲಾವಣೆಯನ್ನು ಉಂಟು ಮಾಡುತ್ತಿವೆ.

ಚರ್ಚ್‌ಗಳು ಶಿಕ್ಷಣ ಕ್ಷೇತ್ರವಲ್ಲದೆ ತನ್ನ ಎಲ್ಲೆಯನ್ನು ಕೈಗಾರಿಕಾ ಕ್ಷೇತ್ರಕ್ಕೂ ವಿಸ್ತರಿಸಿಕೊಂಡಿವೆ. ಬಡವರ ಜೀವನೋಪಾಯಕ್ಕಾಗಿ ಸ್ವಉದ್ಯೋಗಗಳಾದ ಕಮ್ಮಾರಿಕೆ, ಚಾಪೆ ಹೆಣೆಯುವುದು ಮುಂತಾದ ಗೃಹ ಕೈಗಾರಿಕೆ ಕಾರ್ಖಾನೆಗಳನ್ನು ಆರಂಭಿಸಿ ಉದ್ಯೋಗ ಒದಗಿಸಿವೆ. ಈ ಭಾಗದ ಕೆಲವು ಸ್ಥಳಗಳಲ್ಲಿ ಕೃಷಿ ಕ್ಷೇತ್ರದಿಂದ ಹೆಚ್ಚಿನ ಜನರಿಗೆ ಉದ್ಯೋಗ ಸಿಗದಿರುವ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಚರ್ಚ್‌ಗಳ ಸಹಯೋಗ ಮತ್ತು ಪ್ರೇರಣೆಯಿಂದ ನೇಕಾರಿಕೆ, ಕುಶಲ ಕೈಗಾರಿಕೆಯಂತಹ ಅನೇಕ ಉಪಕಸುಬುಗಳಿಗೆ ಅವಕಾಶ ಒದಗಿಸಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ದಲಿತರಿಗೆ, ಕೆಳವರ್ಗದವರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಆರೋಗ್ಯ ಸೇವಾ ಕೇಂದ್ರಗಳನ್ನು ಆರಂಭಿಸಿದ್ದಾರೆ. ೨೧ನೇ ಶತಮಾನದಲ್ಲಿ ಸರಕಾರಗಳು ಮಾಡದಂತಹ ಕಾರ್ಯವನ್ನು ಚರ್ಚ್‌ಗಳು ಮತ್ತು ಮಿಶನರಿಗಳು ಮಾಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದ ಬಹುತೇಕ ಕಡೆ ಮಹಿಳೆಯರಿಗೆ ಆರೋಗ್ಯ ಸೇವೆಗಳನ್ನು ಆರಂಭಿಸಿದ ಕೀರ್ತಿ ಕ್ರೈಸ್ತ ಮಿಶನರಿಗಳು ಮತ್ತು ಚರ್ಚ್‌ಗಳದ್ದಾಗಿದೆ. ಆಸ್ಪತ್ರೆಗಳ ಜೊತೆಗೆ ವೈದ್ಯಕೀಯ ನರ್ಸ್ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿ ಈ ಭಾಗದ ಅನೇಕ ಹೆಣ್ಣುಮಕ್ಕಳಿಗೆ ನರ್ಸ್‌ಗಳಾಗುವ ಅವಕಾಶವನ್ನು ಮಾಡಿಕೊಟ್ಟಿವೆ.[೧೧]

ಹೈದರಾಬಾದ್ ಕರ್ನಾಟಕ ಚರ್ಚ್‌ಗಳು ಸ್ಥಾಪನೆಯಾದ ನಂತರ ಸಮಾಜದಲ್ಲಿ ಮಡುಗಟ್ಟಿದ್ದ ಮೂಢನಂಬಿಕೆಗಳು, ಅಮಾನವೀಯ ಸಂಪ್ರದಾಯಗಳನ್ನು ತೊಡೆದು ಹಾಕಿ ಸಮಾಜ ಪರಿವರ್ತನೆಯಾಗಿರುವುದನ್ನು ಗುರುತಿಸಬಹುದಾಗಿದೆ. ಚರ್ಚ್‌ಗಳ ಬೋಧನೆಯಿಂದಾಗಿ ಜನರ ಬೌದ್ಧಿಕ ವಿಕಾಸವಾಗಿ ಜನರು ಹೊಸ ಜಾಡಿನತ್ತ ಸಾಗುತ್ತಿರುವುದು ಹಾಗೂ ಅವರ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನಗಳಲ್ಲಿ ಪರಿವರ್ತನೆಗಳಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಚರ್ಚ್‌ನ ನೀತಿಯಿಂದ ಅಸಮಾನತೆಗೆ ಜಾತೀಯತೆಗೆ ಒಳಗಾದ ಹಾಗೂ ಈ ಪ್ರದೇಶದಲ್ಲಿ ನಿರ್ಲಕ್ಷ್ಯತೆಗೆ ಒಳಗಾದ ಅನೇಕ ಜನಾಂಗಗಳು ಅದರಲ್ಲೂ ಹೆಚ್ಚಾಗಿ ಮಾದಿಗರು, ಕೊರಚರು, ವಡ್ಡರು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುತ್ತಿದ್ದಾರೆ. ಇವರ ಸಂಖ್ಯೆ ಇಂದು ಎಷ್ಟು ಹೆಚ್ಚಾಗಿದೆ ಅಂದರೆ, ಹೀಗೆ ಮತಾಂತರವಾದ ಇವರನ್ನು ದಲಿತ ಕ್ರೈಸ್ತ ಎಂದೇ ಗುರುತಿಸುವಂತಾಗಿದೆ.

ಸಾಮಾಜಿಕ ಚಳವಳಿಗಳಲ್ಲಿ ಚರ್ಚಿನ ಪಾತ್ರ ಕುರಿತು ಅಧ್ಯಯನ ಹಾಗೂ ಚರ್ಚೆ ಮಾಡುವಾಗ ಎದುರಾಗುವ ಬಹುಮುಖ್ಯವಾದ ಅಂಶವೆಂದರೆ ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಮತಾಂತರ ಪ್ರಕ್ರಿಯೆಗಳು. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳು ಮತಾಂತರ ಪ್ರಕ್ರಿಯೆಗೆ ಹೆಚ್ಚಾಗಿ ಸ್ಪಂದಿಸಿ ಆಮಿಷಗಳಿಗೆ ಒಳಗಾಗುತ್ತಿರುವುದು ಕಂಡು ಬರುತ್ತದೆ. ಚರ್ಚ್‌ಗಳು ಹಳ್ಳಿಗಳಲ್ಲಿ ನಿರುದ್ಯೋಗಿಗಳಿಗೆ, ಬಡವರಿಗೆ, ನಿರ್ಲಕ್ಷಿತರಿಗೆ ಅನ್ನದ, ಹಣದ ಉದ್ಯೋಗದ ಸ್ಥಾನಮಾನದ ಸಹಾಯದ ಆಮೀಷ ಒಡ್ಡಿ ಕ್ರೈಸ್ತ ಧರ್ಮಕ್ಕೆ ಮತಾಂತರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ ಎನ್ನುವ ದೂರುಗಳು ಮೇಲಿಂದ ಮೇಲೆ ಕೇಳಿ ಬರುತ್ತಿವೆ. ಇದು ಸರಿ ಅಥವಾ ತಪ್ಪು ಎನ್ನುವುದಕ್ಕಿಂತ ಮೊದಲು ಇಂದಿನ ಸಮಾಜದ ಸಾಮಾಜಿಕ ರಚನೆಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಸೂಕ್ತ ಎನಿಸುತ್ತಿದೆ. ಸಮಾಜದಲ್ಲಿ ನಿರ್ಲಕ್ಷಕ್ಕೆ ಒಳಗಾಗಿ, ಬಹಿಷ್ಕೃತಗೊಂಡು ಸಮಾನ ಸ್ಥಾನಮಾನ ಊಟ, ಉದ್ಯೋಗ ಶಿಕ್ಷಣದಿಂದ ವಂಚಿತರಾದ ವರ್ಗದವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವ ಚರ್ಚ್‌ಗಳು, ಮಿಶನರಿಗಳು ಆಶಾಕಿರಣವಾಗಿ ಕಂಡುಬರುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. ಅಲ್ಲದೇ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಸ್ಥಳೀಯರು ಶಿಕ್ಷಣ, ಆರೋಗ್ಯ, ಉದ್ಯೋಗ ಸ್ಥಾನಮಾನದ ಸೌಲಭ್ಯಗಳನ್ನು ಪಡೆದು ಅವರ ಜೀವನದಲ್ಲಿ ಬದಲಾವಣೆಯನ್ನು ತಂದುಕೊಳ್ಳುತ್ತಿದ್ದಾರೆ ಎನ್ನುವುದು ಸತ್ಯ. ದಲಿತ ಎನ್ನುವುದಕ್ಕಿಂತ ಕ್ರೈಸ್ತ ಎಂದು ಹೇಳಿಕೊಳ್ಳುವ ಇವರಿಗೆ ಸಮಾಜದಲ್ಲೂ ಸ್ಥಾನಮಾನ ಹೆಚ್ಚಾಗಿರುವುದು ಮತಾಂತರ ಹೆಚ್ಚಳಕ್ಕೆ ಕಾರಣವಾಗುತ್ತಿದೆ.[೨೨] ಒಟ್ಟಿನಲ್ಲಿ ಚರ್ಚ್‌ಗಳು ಮತ್ತು ಮಿಶನರಿಗಳು ಈ ಭಾಗದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಬಡತನವನ್ನು ತಮ್ಮ ಚಟುವಟಿಕೆಗಳ ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಒಟ್ಟಿನಲ್ಲಿ ಸಮಾಜ ಸುಧಾರಣೆ ದೃಷ್ಟಿಯಿಂದ ನೋಡುವುದಾದರೆ ಚರ್ಚ್‌ಗಳು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸುತ್ತಿವೆ.

ಹೀಗೆ ಯಾವುದೇ ಒಂದು ಸಮಾಜದ ಅಭಿವೃದ್ಧಿ, ಬೆಳವಣಿಗೆ ಸುಧಾರಣೆ ಮತ್ತು ನಿಯಂತ್ರಣದಲ್ಲಿ ಬಹಳ ಪ್ರಮುಖವಾದ ಅಂಗ ಅಂದರೆ ಧಾರ್ಮಿಕ ಕೇಂದ್ರಗಳು. ಯಾವುದೇ ವ್ಯಕ್ತಿಗಳು, ಸಂಘಗಳು, ಸರಕಾರಗಳು ಮಾಡಲಾರದಂತ ಕೆಲಸವನ್ನು ಮಠ, ಮಸೀದಿ ಚರ್ಚ್‌ಗಳು ಕೈಗೊಳ್ಳುತ್ತವೆ. ಕೆಲವೊಮ್ಮೆ ಯಾವುದೇ ಕಾನೂನಿನಿಂದ ನಿಯಂತ್ರಿಸಲಾಗದ, ಸರಿಪಡಿಸಲಾಗದ ಸಮಾಜದ ವ್ಯಕ್ತಿಗಳನ್ನು, ದೋಷಗಳನ್ನು ಇವುಗಳಿಂದ ಸರಿಪಡಿಸಲು ಸಾಧ್ಯವಾಗುತ್ತದೆ. ಹೀಗಾಗಿ ಯಾವುದೇ ಒಂದು ಸಾಮಾಜಿಕ ಚಳವಳಿಯಲ್ಲಿ ಮಠ, ಮಸೀದಿ, ಚರ್ಚ್‌ಗಳ ಪಾತ್ರವನ್ನು ಗುರುತಿಸಲೇಬೇಕಾಗುತ್ತದೆ. ಅದರಲ್ಲೂ ಹೈದರಾಬಾದ್ ಕರ್ನಾಟಕದಂತಹ ವಿಭಿನ್ನ ಸಾಂಪ್ರದಾಯಿಕ ಆಚರಣೆಗಳು, ನಂಬಿಕೆಗಳು ಹಲವು ಧರ್ಮಗಳಿದ್ದರೂ ಸಮನ್ವಯತೆ, ಸಹಿಷ್ಣುತೆ ಭಾವನೆ ಹೀಗೆ ಹತ್ತು ಹಲವಾರು ವಿಶಿಷ್ಟ ಅಂಶಗಳು ಗಮನಕ್ಕೆ ಬರುತ್ತವೆ. ಇಂತಹ ಎಲ್ಲಾ ವಿಭಿನ್ನತೆಗಳನ್ನು ಸರಿದೂಗಿಸಿಕೊಂಡು ಬಹುತೇಕ ಸರಳ, ಶಾಂತ ಸಮಾಧಾನ ಮನಸ್ಸಿನ ಜನಜೀವನವೇ ಹೈದರಾಬಾದ್ ಕರ್ನಾಟಕ ಪ್ರದೇಶದ ವೈಶಿಷ್ಟ್ಯವಾಗಿದೆ.

ಇಲ್ಲಿ ಮಠ, ಮಸೀದಿಗಳು ಮತ್ತು ಹಿಂದೂ ಮುಸ್ಲಿಂರ ನಡುವೆ ಎಂತಹ ಅನೋನ್ಯತೆ ಬೆಳೆದು ಬಂದಿದೆಯೆಂದರೆ ಗುಲಬರ್ಗಾ, ಬೀದರ್‌ನ ಮಠಗಳಲ್ಲಿ ಪೂಜೆಗೆ ಬಳಸುವ ಗಂಧ ಬರುವುದು ದರ್ಗಾಗಳಿಂದ. ಹಾಗೆಯೇ ದರ್ಗಾಗಳಿಗೆ ನೈವೇದ್ಯ ಹೋಗುವುದು ಹಿಂದೂ ದೇವಾಲಯಗಳಿಂದ. ಮಠವಾಗಲಿ, ದೇವಾಲಯವಾಗಲಿ, ದರ್ಗಾ ಮಸೀದಿಗಳಾಗಲಿ ಇಲ್ಲಿ ಎಲ್ಲ ಧರ್ಮದವರ ಭಕ್ತಿಯ ಕೇಂದ್ರಗಳಾಗಿವೆ. ಹೀಗಾಗಿಯೇ ಬಾಬ್ರಿ ಮಸೀದಿ ಧ್ವಂಸವಾದಾಗ ರಾಷ್ಟ್ರಾದ್ಯಂತ ಹಿಂದು ಮುಸ್ಲಿಂ ನಡುವಣ ಕೋಮು ಸಾಮರಸ್ಯ ಕದಡಿದ ದಿನಗಳಲ್ಲಿಯೂ ಇಲ್ಲಿ ಧರ್ಮ ಕಾರಣದಿಂದ ಜನ ಬಡಿದಾಡಲಿಲ್ಲ, ಮನೆಗಳಿಗೆ ಬೆಂಕಿಯನ್ನು ಹಚ್ಚಲಿಲ್ಲ. ಬದಲಾಗಿ ಹಿಂದೂಗಳ ರಕ್ಷಣೆಯಲ್ಲಿ ಮುಸ್ಲಿಮರು, ಮುಸ್ಲಿಮರ ರಕ್ಷಣೆಯಲ್ಲಿ ಹಿಂದುಗಳು ಬದುಕಿ ಈ ಭಾಗದ ವೈಶಿಷ್ಟ್ಯವನ್ನು, ಪರಂಪರೆಯನ್ನು ಕಾಯ್ದುಕೊಂಡರು. ಹೀಗೆ ಹೈದರಾಬಾದ್ ಕರ್ನಾಟಕ ಭಾಗದ ಸಾಮಾಜಿಕ ಸುಧಾರಣೆಯಲ್ಲಿ ಮಠ, ಮಸೀದಿ, ಚರ್ಚ್‌ಗಳು ತಮ್ಮದೇ ಆದ ಪಾತ್ರವನ್ನು ವಹಿಸುತ್ತಿವೆ.

ಪ್ರಸ್ತುತ ಮಠಮಾನ್ಯಗಳ ಬಗ್ಗೆ ರಾಜಕೀಯ ಪಕ್ಷಗಳ ಮತ್ತು ನಾಯಕರ ದೃಷ್ಟಿಕೋನವನ್ನು ನೋಡಿದರೆ, ಧಾರ್ಮಿಕ ಕೇಂದ್ರಗಳನ್ನು, ಶಕ್ತಿಗಳನ್ನು ಓಲೈಸುವುದರಿಂದಲೇ ಇಡೀ ಸಮುದಾಯದ ವಿಶ್ವಾಸ ಬೆಂಬಲಗಳಿಸಬಹುದು ಎಂಬ ಭ್ರಮೆ ಹೆಚ್ಚಾಗುತ್ತಿದೆ. ಹೀಗಾಗಿ ರಾಜಕೀಯ ಪಕ್ಷಗಳು ಮಠಮಾನ್ಯಗಳಿಗೆ ಅತೀ ಹೆಚ್ಚು ಹಣವನ್ನು ದೇಣಿಗೆ ರೂಪದಲ್ಲಿ ನೀಡುತ್ತಿದ್ದಾರೆ. ಎಲ್ಲಾ ರಾಜಕೀಯ ಪಕ್ಷದವರು ಮಠಮಾನ್ಯಗಳನ್ನು ಓಲೈಸಿ ತಮ್ಮ ಮತ ಬ್ಯಾಂಕ್‌ಗಳನ್ನು ಮಾಡಿಕೊಳ್ಳುವ ಹುನ್ನಾರ ನಡೆಸಿದ್ದಾರೆ. ಅದಕ್ಕಾಗಿ ಮಠ ಮಾನ್ಯಗಳಿಗೆ ಉದಾರವಾಗಿ ದೊಡ್ಡ ಮೊತ್ತದ ಹಣವನ್ನು, ಭೂಮಿಯನ್ನು ದೇಣಿಗೆ ರೂಪದಲ್ಲಿ ನೀಡುವುದು ಕಂಡು ಬರುತ್ತಿದೆ. ಮಠಮಾನ್ಯಗಳ ಮುಖ್ಯಸ್ಥರು ಕೂಡ ಪರೋಕ್ಷವಾಗಿ ರಾಜಕೀಯ ಒಲವು ನಿಲುವುಗಳನ್ನು ವ್ಯಕ್ತಪಡಿಸುತ್ತಿರುವುದು ಕಂಡು ಬರುತ್ತಿದೆ. ಹೀಗಾಗಿ ಇದು ಎಲ್ಲೋ ಒಂದು ಕಡೆ ರಾಜಕೀಯ ಅಪಮೈತ್ರಿ ಎಂದೆನಿಸಿಕೊಳ್ಳುವಂತಾಗಿದೆ. ಹೀಗಾಗಿ ಕೆಲವು ಮಸೀದಿಗಳು, ಚರ್ಚ್‌ಗಳು ರಾಜಕೀಯ ಭ್ರಷ್ಟತೆಯನ್ನು ನೇರವಾಗಿ ವಿರೋಧ ಮಾಡುವುದು ಕಂಡು ಬರುತ್ತಿಲ್ಲ.

೫.೨. ಸಾಮಾಜಿಕ ಚಳವಳಿಗಳು ಮತ್ತು ಸರಕಾರ

ನಾವು ಬಾಳಿ ಬದುಕುತ್ತಿರುವ ಇಂದಿನ ಸಮಾಜ ಹಾಗೂ ವ್ಯವಸ್ಥೆಯನ್ನು ಅವಲೋಕಿಸಿದಾಗ ಶತಶತಮಾನಗಳಿಂದಲೂ ಇಲ್ಲಿಯವರೆಗೆ ಗೋಚರಿಸುತ್ತಿರುವ ಪ್ರಮುಖ ಅಂಶಗಳೆಂದರೆ ಅಸಮಾನತೆ, ಶೋಷಣೆ, ಹಿಂದುಳಿದಿರುವಿಕೆ ಹಾಗೂ ಪ್ರಾದೇಶಿಕ ಅಸಮಾನತೆ. ಹಿಂದುಳಿದಿರುವಿಕೆಗೆ ಪ್ರಾದೇಶಿಕ ಅಸಮಾನತೆಗೆ ಹಾಗೂ ಅಭಿವೃದ್ಧಿಗೆ ಅಡ್ಡಿಯಾಗಿರುವ ಕಾರಣಗಳೇನು ಎನ್ನುವ ಪ್ರಶ್ನೆ ಕಾಡುತ್ತಿದೆ. ಅದರಲ್ಲೂ ಹೈದರಾಬಾದ್ ಕರ್ನಾಟಕವೆಂದರೆ ತಕ್ಷಣ ಮೊದಲಿಗೆ ಗೋಚರಿಸುವುದೇ ಅಸಮಾನತೆ ಮತ್ತು ಹಿಂದುಳಿದಿರುವಿಕೆ. ಈ ಭಾಗದ ಇಂತಹ ಸ್ಥಿತಿಗೆ ಭೌಗೋಳಿಕ, ರಾಜಕೀಯ, ಆರ್ಥಿಕ ಹೀಗೆ ಅನೇಕ ಕಾರಣಗಳಿವೆ. ಆದರೆ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲೂ ಇಲ್ಲಿನ ದುಸ್ಥಿತಿಯ ನಿವಾರಣೆಗೆ

ಸರಕಾರಗಳು ಯಾವುದೇ ಪ್ರಯತ್ನಗಳನ್ನು ಮಾಡುತ್ತಿಲ್ಲವೆ ಅಥವಾ ಮಾಡಿದ್ದರೆ ಅವು ಎಷ್ಟರಮಟ್ಟಿಗೆ ಸಫಲವಾಗಿವೆ ಮತ್ತು ವಿಫಲವಾಗಿವೆ ಎನ್ನುವ ಪ್ರಶ್ನೆ ಕಾಡುತ್ತದೆ. ಹೀಗಾಗಿ ಈ ಪ್ರದೇಶದ ಅಭಿವೃದ್ಧಿಗೆ ಸರಕಾರಗಳು ಇಲ್ಲಿಯವರೆಗೆ ಯಾವ ಯೋಜನೆಗಳನ್ನು ಜಾರಿಗೆ ತಂದಿವೆ, ಪ್ರಯತ್ನಗಳನ್ನು ಕೈಗೊಳ್ಳುತ್ತಿವೆ ಎನ್ನುವುದರ ಅಧ್ಯಯನ ಮತ್ತು ವಿಶ್ಲೇಷಣೆ ಅಗತ್ಯವಾಗಿದೆ.

ಸ್ವಾತಂತ್ರ್ಯದ ನಂತರ ಆಡಳಿತ ಮಾಡಿದ ಸರಕಾರಗಳು ೮೦ರ ದಶಕದವರೆಗೂ ಪ್ರತ್ಯೇಕವಾಗಿ ಹೈದರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಯಾವುದೇ ಸೂಕ್ತಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಅಥವಾ ಈ ಪ್ರದೇಶದ ಅಭಿವೃದ್ಧಿಗೆ, ಅಸಮಾನತೆ ನಿವಾರಣೆಗೆ ವಿಶೇಷ ಯೋಜನೆಗಳನ್ನು ರೂಪಿಸಿರಲಿಲ್ಲ. ಆದರೆ ಕ್ರಮೇಣ ಇಲ್ಲಿನ ಜನರಿಗೆ ತಾವು ಇದುವರೆಗೆ ಆಳಿದ ಎಲ್ಲಾ ಸರಕಾರಗಳ ಯೋಜನೆಗಳು, ಶಿಕ್ಷಣ, ಉದ್ಯೋಗ ಮುಂತಾದವುಗಳಿಂದ ವಂಚಿತರಾಗುತ್ತಿದ್ದೇವೆ ಎನ್ನುವ ಅರಿವು ಮೂಡತೊಡಗಿ ಇದರ ವಿರುದ್ಧ ಪ್ರತಿಭಟನೆಗಳು ಆರಂಭವಾದವು. ಆಗ ಎಚ್ಚೆತ್ತುಕೊಂಡ ಸರಕಾರ ೯೦ರ ದಶಕದ ಆರಂಭದಲ್ಲಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯೋಜನೆಗಳನ್ನು ರೂಪಿಸಿ ಹೆಚ್ಚಿನ ಹಣಕಾಸಿನ ನೆರವನ್ನು ನೀಡಲು ಆರಂಭಿಸಿತು. ಇದರ ಫಲವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸ್ಥಾಪನೆ ಮಾಡಿತು. ನಂತರ ಪ್ರಾದೇಶಿಕ ಅಸಮಾನತೆಯನ್ನು ಅಧ್ಯಯನ ಮಾಡಲು ಮತ್ತು ಅದರ ನಿವಾರಣೆಗೆ ಪರಿಹಾರೋಪಾಯಗಳನ್ನು ಸೂಚಿಸಲು, ಡಾ. ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ 'ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರಿಗಳ ಸಮಿತಿ'ಯ ರಚನೆಯಾಯಿತು.

೫.೨.೧. ಡಾ. ಡಿ.ಎಂ. ನಂಜುಂಡಪ್ಪ ವರದಿ

ಕರ್ನಾಟಕದ ಒಂದು ಭಾಗವಾಗಿರುವ ಹೈದರಾಬಾದ್ ಕರ್ನಾಟಕ ಪ್ರದೇಶವು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಚರ್ಚೆಗೆ, ವಿಮರ್ಶೆಗೆ ಒಳಪಟ್ಟಿರುವ ಪ್ರದೇಶವಾಗಿದೆ. ಯಾವುದನ್ನು ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯಲಾಗುತ್ತದೆಯೋ ಅದರಲ್ಲಿ ಗುಲಬರ್ಗಾ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಮಾತ್ರ ಸೇರುತ್ತವೆ. ಆಡಳಿತದ ಅನುಕೂಲಕ್ಕೆ ಏಕೀಕರಣದ ಸಂದರ್ಭದಲ್ಲಿ ಮದರಾಸು ಪ್ರಾಂತದಿಂದ ವರ್ಗಾವಣೆಯಾಗಿ ಕರ್ನಾಟಕವನ್ನು ಸೇರಿದ ಬಳ್ಳಾರಿ ಜಿಲ್ಲೆಯನ್ನು ಗುಲಬರ್ಗಾ ವಿಭಾಗಕ್ಕೆ ಸೇರಿಸಲಾಯಿತು. ಹೈದರಾಬಾದ್ ನಿಜಾಮನ ಪ್ರಾಂತದಿಂದ ಕರ್ನಾಟಕಕ್ಕೆ ವರ್ಗಾವಣೆಯಾದ ಬೀದರ್, ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು, ಹಿಂದುಳಿದ ಪ್ರದೇಶಗಳಾಗಿದ್ದವು. ಏಕೀಕರಣದ ನಂತರವೂ ಆಳುವ ಸರಕಾರಗಳು, ನಾಯಕರು ಈ ಪ್ರದೇಶವನ್ನು ನಿರ್ಲಕ್ಷಿಸುತ್ತಾ ಬಂದಿವೆ ಎನ್ನುವ ಕೂಗನ್ನು ಎಬ್ಬಿಸಿದ ನಂತರ 'ಪ್ರತ್ಯೇಕ ರಾಜ್ಯದ' ಬೇಡಿಕೆಯ ಧ್ವನಿಗೆ ನಾಂದಿಯಾಯಿತು. ಹಾಗಾಗಿ ಸರಕಾರವು ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಲು 'ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ'(೧೯೯೧)ಯನ್ನು ಸ್ಥಾಪಿಸಿತು. ನಂತರ ಅಸಮಾನತೆಯ ಅಧ್ಯಯನಕ್ಕಾಗಿ ಎಸ್.ಎಂ. ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಗಳಿದ್ದಾಗ ೨೦೦೦ರಲ್ಲಿ 'ಪ್ರಾದೇಶಿಕ ಅಸಮತೋಲನ

ನಿವಾರಣಾ ಉನ್ನತಾಧಿಕಾರಿಗಳ ಸಮಿತಿ'ಯನ್ನು ರಚಿಸಿ, ಡಾ. ಡಿ.ಎಂ. ನಂಜುಂಡಪ್ಪ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಸಮಿತಿಯು ಎರಡು ವರ್ಷಗಳ ಕಾಲ ಅಭಿವೃದ್ಧಿ ಸಂಬಂಧ ಪ್ರಾದೇಶಿಕ ಅಸಮಾನತೆ ಸಮಸ್ಯೆಯನ್ನು ಅಧ್ಯಯನ ಮಾಡಿ ೨೦೦೨ರಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ವರದಿಯು ಏಳು ಭಾಗಗಳನ್ನು ಹೊಂದಿದ್ದು, ಮೂವತ್ನಾಲ್ಕು ಅಧ್ಯಾಯಗಳಲ್ಲಿ, ಸಾವಿರ ಪುಟಗಳಲ್ಲಿ ವರದಿ ಇದೆ.[೧೩]

'ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರಿಗಳ ಸಮಿತಿ' ರಾಜ್ಯದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ, ಜಿಲ್ಲೆಯೊಳಗೆ, ಪ್ರದೇಶದೊಳಗೆ ಹಾಗೂ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಡುವೆ ಇರುವ ಅಸಮತೋಲನವನ್ನು ಪರಿಹರಿಸುವುದಕ್ಕೆ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ.

ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಬಹುಮುಖ್ಯ ಶಿಫಾರಸ್ಸೆಂದರೆ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ಮಾಪನ ಮಾಡಲು ಸಮಿತಿಯು ರೂಪಿಸಿದ್ದು, ಐದು ವಲಯಗಳನ್ನು ಒಳಗೊಂಡ ೩೫ ಸೂಚಿಗಳ 'ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ'. ಈ ಸೂಚ್ಯಂಕ ಮಾಪನವನ್ನು ಬಳಸಿಕೊಂಡು ತನ್ನ ವರದಿಯಲ್ಲಿ ರಾಜ್ಯದಲ್ಲಿರುವ ೧೭೫ ತಾಲೂಕುಗಳ ಪೈಕಿ ೧೧೪ ತಾಲೂಕುಗಳು ಹಿಂದುಳಿದಿದ್ದಾವೆಂದು ಗುರುತಿಸಿತು. ೧೧೪ ತಾಲೂಕುಗಳಲ್ಲಿ ೩೯ ಅತ್ಯಂತ ಹಿಂದುಳಿದ, ೪೦ ಅತಿ ಹಿಂದುಳಿದ ಮತ್ತು ೩೫ ಹಿಂದುಳಿದ ತಾಲೂಕುಗಳೆಂದು ವರ್ಗೀಕರಿಸಿತು ಹಾಗೂ ೧೧೪ ತಾಲೂಕುಗಳಲ್ಲಿ ೫೫ ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ, ೫೯ ಉತ್ತರ ಕರ್ನಾಟಕಕ್ಕೆ ಸೇರಿದ್ದವು.[೧೪] ವರದಿಯು ಗುಲಬರ್ಗಾ ವಿಭಾಗದ ಜಿಲ್ಲೆಗಳು ಹಾಗೂ ತಾಲೂಕುಗಳಲ್ಲಿನ ಅಸಮಾನತೆಯನ್ನು ಎತ್ತಿಹಿಡಿಯಿತು. ಗುಲಬರ್ಗಾ ವಿಭಾಗದ ಎಲ್ಲಾ ತಾಲೂಕುಗಳು ಹಿಂದುಳಿದವಾಗಿದ್ದವು. ವಿಭಾಗದಲ್ಲಿನ ಒಟ್ಟು ೩೧ ತಾಲೂಕುಗಳ ಪೈಕಿ ೨೮ ಹಿಂದುಳಿದ ತಾಲೂಕುಗಳಾಗಿದ್ದವು. ಅಂದರೆ ವಿಭಾಗದಲ್ಲಿನ ಒಟ್ಟು ತಾಲೂಕುಗಳಲ್ಲಿ ಶೇ. ೯೦.೩೨ ತಾಲೂಕುಗಳು ಹಿಂದುಳಿದಿದ್ದವೆಂದು ಅದೇ ಮೈಸೂರು ವಿಭಾಗದಲ್ಲಿನ ಒಟ್ಟು ತಾಲೂಕುಗಳಲ್ಲಿ ಶೇ. ೫೦ ತಾಲೂಕುಗಳು ಹಿಂದುಳಿದಿದ್ದಾವೆಂದು ತಿಳಿಸಿತು. ವರದಿಯ ಪ್ರಕಾರ, ಅಭಿವೃದ್ಧಿಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ನೆಲೆಗೊಂಡಿದ್ದರೆ ದುಃಸ್ಥಿತಿಯು ಉತ್ತರ ಕರ್ನಾಟಕದಲ್ಲಿ ಮಡುಗಟ್ಟಿಕೊಂಡಿರುವುದನ್ನು ವರದಿಯು ಸ್ಪಷ್ಟವಾಗಿ ಎತ್ತಿ ತೋರಿಸಿತು.

ಪ್ರಾದೇಶಿಕ ಅಸಮತೋಲನ ನಿವಾರಣೆಯ ಶಿಫಾರಸ್ಸುಗಳಲ್ಲಿ 'ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ'ಯು, ವರದಿಯ ಮುಖ್ಯ ಶಿಫಾರಸು ಆಗಿದೆ. ಇದು ರಾಜ್ಯದ ೧೧೪ ಹಿಂದುಳಿದ ತಾಲೂಕುಗಳನ್ನು ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯಮಟ್ಟದ ಸರಾಸರಿಗೆ ಒಯ್ಯುವ ಗುರಿ ಹೊಂದಿರುವ ವಿಶೇಷ ಯೋಜನೆಯಾಗಿದೆ. ಯೋಜನೆ ಅಡಿಯಲ್ಲಿ ರಾಜ್ಯದ ಹಿಂದುಳಿದ ೧೧೪ ತಾಲೂಕುಗಳ ಅಭಿವೃದ್ಧಿಗಾಗಿ ವಿಶೇಷವಾಗಿ ರೂ. ೧೬,೦೦೦ ಕೋಟಿ ಹಣವನ್ನು ವಿನಿಯೋಜನೆ ಮಾಡಬೇಕಾಗುತ್ತದೆ. ಅನುದಾನವನ್ನು ತಾಲೂಕುಗಳ ಹಿಂದುಳಿದಿರುವಿಕೆಗೆ ಅನುಗುಣವಾಗಿ ಹಂಚಬೇಕು ಎಂಬುದಾಗಿದೆ.

ಇಲ್ಲಿ ಅತ್ಯಂತ ಹಿಂದುಳಿದ ತಾಲೂಕು ಅತ್ಯಂತ ಅಧಿಕ ಅನುದಾನವನ್ನು ಮತ್ತು ಹಿಂದುಳಿದ ತಾಲೂಕು ಕಡಿಮೆ ಅನುದಾನವನ್ನು ಪಡೆಯುತ್ತವೆ. ಅನುದಾನ ಹಂಚಿಕೆಗೂ ಸಮಿತಿಯು 'ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ' ಮಾಪನವನ್ನು ಸೂಚಿಸಿತು. ಈ ಮಾಪನವನ್ನು ಬಳಸಿಕೊಂಡು ರಾಜ್ಯದ ತಾಲೂಕು ಅಭಿವೃದ್ಧಿ ಮಟ್ಟವನ್ನು ಆಧರಿಸಿ ೨ ಗುಂಪುಗಳಾಗಿ ವರ್ಗೀಕರಿಸಿದೆ. ಅಭಿವೃದ್ಧಿ ಹೊಂದದ ತಾಲೂಕುಗಳನ್ನು ೧೬ ಮತ್ತು ಅಭಿವೃದ್ಧಿ ಹೊಂದದ ತಾಲೂಕುಗಳು ೧೧೪. ಅಭಿವೃದ್ಧಿ ಹೊಂದದ ತಾಲೂಕುಗಳನ್ನು ಮತ್ತೆ ಮೂರು ಗುಂಪುಗಳನ್ನಾಗಿ ವರ್ಗೀಕರಿಸಿದೆ. ಅದು ೩೯ ಅತ್ಯಂತ ಹಿಂದುಳಿದ ತಾಲೂಕುಗಳು, ೪೦ ಅತಿ ಹಿಂದುಳಿದ ತಾಲೂಕುಗಳು, ೩೫ ಹಿಂದುಳಿದ ತಾಲೂಕುಗಳು.

ಸಮಿತಿಯ ವರದಿಯ ಪ್ರಕಾರ ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನವನ್ನು ವಿಭಾಗಗಳ ನಡುವೆ ಅವುಗಳ ದುಸ್ಥಿತಿಗೆ ಅನುಗುಣವಾಗಿ ಹಂಚಬೇಕು. ಅಂದರೆ, ರಾಜ್ಯ ಸರಕಾರವು ೨೦೦೭-೦೮ರಲ್ಲಿ ಈ ಯೋಜನೆಗಾಗಿ ಮೀಸಲಾಗಿಟ್ಟ ರೂ. ೧೫೭೧.೫೦ ಕೋಟಿಯನ್ನು ನಾಲ್ಕು ವಿಭಾಗಗಳಿಗೆ ಹಂಚಿದರೆ ಗುಲಬರ್ಗಾ ವಿಭಾಗಕ್ಕೆ ರೂ. ೬೨೮.೬೦ ಕೋಟಿ, ಬೆಳಗಾವಿ ವಿಭಾಗಕ್ಕೆ ರೂ. ೩೧೪.೩೦ ಕೋಟಿ, ಬೆಂಗಳೂರು ವಿಭಾಗಕ್ಕೆ ರೂ. ೩೯೨.೮೭ ಕೋಟಿ ಮೈಸೂರು ವಿಭಾಗಕ್ಕೆ ರೂ. ೨೩೫.೭೩ ಕೋಟಿ ದೊರೆಯುತ್ತದೆ. ಸಮಿತಿಯು ಅನುದಾನ ಹಂಚಿಕೆಯ ಸೂತ್ರವನ್ನು ವಿಭಾಗಗಳ ಮಟ್ಟಕ್ಕೆ ಮಾತ್ರ ನಿಲ್ಲಿಸಿಲ್ಲ. ವಿಭಾಗಗಳೊಳಗೆ ಜಿಲ್ಲೆಗಳ ನಡುವೆ ಹಾಗೂ ಜಿಲ್ಲೆಗಳೊಳಗೆ ತಾಲೂಕುಗಳ ನಡುವೆ ಅನುದಾನ ಹಂಚಿಕೆಯನ್ನು ತಿಳಿಸಿದೆ. ಉದಾ. ಗುಲಬರ್ಗಾ ವಿಭಾಗದ ಅನುದಾನದ ಮೊತ್ತ ರೂ. ೬೨೮.೬೦ ಕೋಟಿಯಲ್ಲಿ ಕೊಪ್ಪಳ ಜಿಲ್ಲೆಯ ಪಾಲು ರೂ. ೭೭.೧೯ ಕೋಟಿ. ಕೊಪ್ಪಳ ಜಿಲ್ಲೆಯ ಪಾಲಾದ ರೂ. ೭೭.೧೯ ಕೋಟಿಯಲ್ಲಿ ಯಲಬುರ್ಗಾ ತಾಲೂಕಿನ ಪಾಲು ರೂ. ೨೮.೮೪ ಕೋಟಿ.[೧೫]

ಇತರ ಶಿಫಾರಸ್ಸುಗಳಲ್ಲಿ

೧. ರಾಜ್ಯದಲ್ಲಿ ಅತ್ಯಧಿಕ ಅಭಿವೃದ್ಧಿಯ ಪ್ರಮಾಣವನ್ನು ಸಾಧಿಸಬೇಕಾದರೆ ಮತ್ತು ಉಳಿಸಿಕೊಂಡು ಬರಬೇಕಾದರೆ, ಸಾಮಾಜಿಕ ನ್ಯಾಯ ಸಮ್ಮತತೆಯೊಂದಿಗಿನ ಬೆಳವಣಿಗೆ ಹಾಗೂ ಸಮತೋಲನ ಬೆಳವಣಿಗೆಯನ್ನು ಯಾವ ರೀತಿಯಲ್ಲಿಯೂ ಕಡೆಗಣಿಸಬಾರದು.

೨. ಯೋಜನೆಗಳನ್ನು ಸಿದ್ಧಗೊಳಿಸುವಾಗ ಪ್ರಸ್ತಾವನೆಗಳ ಪರಿಕಲ್ಪನೆ ಹಾಗೂ ಸುಧಾರಣೆ ಎರಡರ ದೃಷ್ಟಿಯಿಂದಲೂ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವ ಬಗ್ಗೆ ಸೂಕ್ತ ಗಮನ ನೀಡಬೇಕು.

೩. ಉತ್ತರ ಕರ್ನಾಟಕ ಪ್ರದೇಶದ ಪರವಾಗಿ ಅತ್ಯಂತ ಸೂಕ್ತವಾದ ೬೦:೪೦ ಪ್ರಮಾಣವನ್ನು ಸಂಪನ್ಮೂಲ ಹಂಚಿಕೆಯ ಆಧಾರವಾಗಿ ಅನುಷ್ಠಾನಗೊಳಿಸಬೇಕು.

೪. ಉದ್ಯೋಗ ಖಾತರಿ ಯೋಜನೆಗಳು ಮತ್ತು ಶಿಕ್ಷಣ ಖಾತರಿ ಯೋಜನೆಯನ್ನು ಎಲ್ಲಾ ೧೧೪ ಹಿಂದುಳಿದ ತಾಲೂಕುಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.

೫. ಗುಲಬರ್ಗಾದಲ್ಲಿ ಕೇಂದ್ರ ಸ್ಥಾನವಿರುವಂತೆ ಉತ್ತರ ಕರ್ನಾಟಕದಲ್ಲಿ ಒಂದು ಪ್ರತ್ಯೇಕ ಕೃಷಿ ಹಣಕಾಸು ಮತ್ತು ಅಭಿವೃದ್ಧಿ ಕಂಪನಿಯನ್ನು ಸ್ಥಾಪಿಸಬೇಕು.

೬. ಪ್ರಾಥಮಿಕ ಶಿಕ್ಷಣ ವಿಷಯದಲ್ಲಿ, ಪ್ರಾಥಮಿಕ ಶಾಲೆಯಿಲ್ಲದ ಯಾವುದೇ ಹಳ್ಳಿ ಇರಬಾರದು.

೭. ಉತ್ತರ ಕರ್ನಾಟಕ ಪ್ರದೇಶದಲ್ಲಿ ಸರಕಾರಿ ಪಾಲಿಟೆಕ್ನಿಕ್, ಐ.ಟಿ.ಐ. ಕಾಲೇಜು ಮುಂತಾದವುಗಳನ್ನು ಪ್ರಾರಂಭಿಸಬೇಕು. ಹೊಸ ಸಂಸ್ಥೆಗಳನ್ನು ಪ್ರಾರಂಭಿಸಲು ಖಾಸಗಿ ಆಡಳಿತ ಮಂಡಳಿಗಳಿಗೆ ಅನುದಾನದ ಸೌಲಭ್ಯ ವಿತರಿಸಬೇಕು.[೨೬]

ಹೀಗೆ ಪ್ರಾದೇಶಿಕ ಅಸಮಾನತೆ ನಿವಾರಣೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಡಿ.ಎಂ. ನಂಜುಂಡಪ್ಪ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿಯು ವೈಜ್ಞಾನಿಕವಾದ ಹಾಗೂ ಪ್ರಾದೇಶಿಕ ಆಯಾಮದಿಂದ ಕೂಡಿದ ಸಲಹೆ ಶಿಫಾರಸ್ಸುಗಳನ್ನು ಮಾಡಿದೆ. ಸಮಿತಿಯು ಮಾಡಿರುವ ಶಿಫಾರಸ್ಸುಗಳಲ್ಲಿ ಅತೀ ಮುಖ್ಯ ಅಂಶವೆಂದರೆ ಅಭಿವೃದ್ಧಿ ಹೊಂದದ ತಾಲೂಕುಗಳಿಗೆ ಸಂಬಂಧಿಸಿದಂತೆ ಅನುದಾನ ಹಂಚಿಕೆ ಸೂತ್ರ. ಇದರ ಮೂಲಕ ಪ್ರಾದೇಶಿಕ ಅಸಮಾನತೆಯನ್ನು ತಿಳಿ ಹರವುಗಳನ್ನು, ನೆಲೆ, ಬೆಲೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಡಿ.ಎಂ. ನಂಜುಂಡಪ್ಪ ವರದಿಯ ಜಾರಿಗಾಗಿ ಸರಕಾರವು 'ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿ'ಯನ್ನು ರಚಿಸಿದೆ. ವರದಿಯ ಶಿಫಾರಸ್ಸುಗಳಂತೆ ಯೋಜನೆಗಳನ್ನು ಕೈಗೊಳ್ಳಲು ಅನುದಾನವನ್ನು ನೀಡುತ್ತಿದೆ. ಆದರೆ ವಾಗ್ದಾನ ಮಾಡಿದ ಅನುದಾನಕ್ಕಿಂತಲು, ಬಿಡುಗಡೆ ಯಾಗುವ ಅನುದಾನದಲ್ಲಿ ಕಡಿತ ಕಾಣುತ್ತಿದೆ. ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಸರಕಾರವು ಉದಾರವಾಗಿ ಅನುದಾನ ಬಿಡುಗಡೆ ಮಾಡಬೇಕು, ಪ್ರಾದೇಶಿಕ ಅಸಮಾನತೆಯನ್ನು ಸರಕಾರವು ಗಂಭೀರವಾಗಿ ಪರಿಗಣಿಸಬೇಕು. ಈ ಮೂಲಕ ದಿಟ್ಟ ಕ್ರಮ ತೆಗೆದುಕೊಂಡರೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅಂಟಿಕೊಂಡಿರುವ ಹಿಂದುಳಿದಿರುವ ಪ್ರದೇಶ ಎಂಬ ಕಳಂಕವನ್ನು ನಿವಾರಿಸಬಹುದಾಗಿದೆ.

೫.೨.೨. ಹೈದರಾಬಾದ್ ಕರ್ನಾಟಕ ಮತ್ತು ಸಂವಿಧಾನದ ೩೭೧ನೇ ಕಲಂ

ಪ್ರಾದೇಶಿಕ ಅಸಮಾನತೆಯಿಂದ, ಹಿಂದುಳಿದಿರುವಿಕೆಯಿಂದ ತನ್ನ ಅಸ್ತಿತ್ವವನ್ನೇ ವಿಭಿನ್ನವಾಗಿ ಗುರುತಿಸಿಕೊಂಡಿರುವಂತ ಕರ್ನಾಟಕದ ಒಂದು ಭಾಗವೇ ಹೈದರಾಬಾದ್ ಕರ್ನಾಟಕ. ಹೈದರಾಬಾದ್ ನಿಜಾಮನ ಪ್ರಭುತ್ವದಿಂದ ಪ್ರಜಾಪ್ರಭುತ್ವದ ಜನ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರಗೊಂಡಾಗ ಅಖಂಡ ಕರ್ನಾಟಕ ಮತ್ತು ಅದರ ಸಮೃದ್ಧಿಯ ಕನಸು ಕಂಡ ಈ ಭಾಗದ ಜನರಿಗೆ ಬದಲಾವಣೆಯ ಬದುಕು ಸುಧಾರಣೆ ತರಲಿಲ್ಲ. ನಿಜಾಂ ಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ನಡೆದು ಬಂದ ದಾರಿ ಅಸಮಾನತೆಯ ದಾರಿಯಾಯಿತು. ಇಲ್ಲಿಯ ಜನರ ಬದುಕು ಅಭಿವೃದ್ಧಿಯ ಚಲನೆಗೆ ಒಳಪಡದೆ ನಿಂತ ನೀರಾಯಿತು. ನಿಜಾಮನ ಆಳ್ವಿಕೆಗೆ ಒಳಪಟ್ಟಾಗಲೇ ನಿರ್ಲಕ್ಷ್ಯಕ್ಕೆ, ಅಸಮಾನತೆಗೆ ಈಡಾಗಿದ್ದ ಪ್ರದೇಶ ಸ್ವಾತಂತ್ರ್ಯದ ನಂತರ ಆಳಿದ ಸರಕಾರಗಳ, ಜನಪ್ರತಿನಿಧಿಗಳ ಪ್ರಾಮಾಣಿಕ ಕಾಳಜಿ ಹಾಗೂ ಸಂಕಲ್ಪದ

ಕೊರತೆಯಿಂದ ಸಂವಿಧಾನಬದ್ಧವಾಗಿ ದೊರಕಬಹುದಾದ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲವಾಯಿತು. ಇಂತಹ ವಿಫಲತೆಯ ಗಂಭೀರ ಪರಿಣಾಮವೇ ಇಂದು 'ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ನಡೆಯುತ್ತಿರುವ ಹೋರಾಟವಾಗಿದೆ.

ಸ್ವಾತಂತ್ರ್ಯ ಬಂದು ೬೫ ವರ್ಷಗಳು ಕಳೆದರೂ ಹೊಸ ಶತಮಾನದ ಹೊತ್ತಿನಲ್ಲಿ ಮಾನವನ ಚಿಂತನೆಯು ಮಾನವತಾವಾದ, ಆದರ್ಶವಾದ, ಸಮತಾವಾದ, ಸ್ವಾತಂತ್ರ್ಯವಾದದಂತಹ ವಿಚಾರಗಳ ಕಡೆಗೆ ಪರಿವರ್ತನೆಗೊಂಡರೂ, ಸಮಾಜದಲ್ಲಿ ಶ್ರೀಮಂತರು ಬಡವರು, ಹಿಂದುಳಿದವರು ಮುಂದುವರಿದವರು ಎನ್ನುವ ವಿಚಾರ ಇನ್ನೂ ಜೀವಂತವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಗಳು ಕರ್ನಾಟಕ ರಾಜ್ಯಕ್ಕೆ ಸೇರಿ ೫೪ ವರ್ಷಗಳು ಕಳೆದರೂ ನಾಡಿನ ಅಭಿವೃದ್ಧಿಯ ವಿಷಯದಲ್ಲಿ ತಾರತಮ್ಯವಾಗುತ್ತಿದೆ ಎಂಬ ಆರೋಪ ಹೆಚ್ಚಾಗುತ್ತಿದೆ. ಬೀದರ್, ಗುಲಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಭಾಗಗಳು ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯಿಂದ ಹೊರಬರಲು ಹೆಣಗಾಡಬೇಕಾಗಿದೆ. ಇವು ಹಿಂದುಳಿಯಲು ಇರುವ ಕಾರಣಗಳು ಸ್ಪಷ್ಟವಾಗಿದ್ದರೂ ಅಭಿವೃದ್ಧಿಯಲ್ಲಿನ ತಾರತಮ್ಯ ನಿವಾರಿಸಲು ಕೈಗೊಂಡ ಕಾರ್ಯಗಳು ನಿರೀಕ್ಷಿತ ಯಶಸ್ಸು ಕಾಣದಿರುವುದಕ್ಕೆ ರಾಜಕೀಯ ಇಚ್ಛಾಶಕ್ತಿಯೇ ಪ್ರಮುಖ ಕೊರತೆ ಎನ್ನುವಂತಾಗಿದೆ. ಹೀಗಾಗಿ ರಾಜ್ಯದ ಒಂದು ಭಾಗ ಮುಂದುವರೆದ ಭಾಗವೆಂದು, ಅದೇ ರಾಜ್ಯದ ಇನ್ನೊಂದು ಭೂಭಾಗ ಹಿಂದುಳಿದ ಭಾಗವೆಂದು ವಿಭಾಗ ಮಾಡಿ ಅಸಮಾನತೆಗೆ ನೂಕಿದೆ. ಸಾಮಾಜಿಕ ಅಂತರಗಳಾದ 'ಮುಂದುವರೆದ ಹಿಂದುಳಿದ' ಅಂತರಗಳನ್ನು ಕಡಿಮೆ ಮಾಡಲು ಸಂವಿಧಾನದ ೩೭೧ನೇ ಕಲಂನ ತಿದ್ದುಪಡಿ ಕುರಿತು ಒಂದು ಅವಲೋಕನ, ಚಿಂತನೆ ಅವಶ್ಯಕವಾಗಿದೆ. ಇಂತಹ ಒಂದು ಪ್ರಯತ್ನವನ್ನು ಪ್ರಸ್ತುತ ಸಂಶೋಧನೆಯಲ್ಲಿ ಕೈಗೊಳ್ಳಲಾಗಿದೆ.

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೊಂಡ ಸಂದರ್ಭದಲ್ಲಿ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಹಂಚಿ ಹೋದ ನಿಜಾಮನ ಆಡಳಿತದ ಪ್ರದೇಶಗಳಿಗೆ ಅನ್ವಯವಾಗುವಂತೆ ಸಂವಿಧಾನದ ೩೭೧ನೇ ಕಲಂನ ಅನ್ವಯ ವಿಶೇಷ ಸ್ಥಾನಮಾನಗಳನ್ನು ನೀಡಲಾಯಿತು. ಹೀಗಾಗಿ ವಿದರ್ಭ ಮತ್ತು ತೆಲಂಗಾಣ ಪ್ರದೇಶಗಳು ಆ ವಿಶೇಷ ಸವಲತ್ತುಗಳನ್ನು ಪಡೆದವು. ಆದರೆ ಅದೇ ನಿಜಾಮ ಪ್ರದೇಶದ ವ್ಯಾಪ್ತಿಯಿಂದ ಮೈಸೂರು ಪ್ರದೇಶವನ್ನು ಸೇರಿದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡ ಪ್ರದೇಶ ಮಾತ್ರ ೩೭೧ನೇ ಕಲಂನ ಪ್ರಯೋಜನ ಪಡೆಯುವಲ್ಲಿ ವಂಚಿತವಾಯಿತು. ಸಂವಿಧಾನದ ೩೭೧ನೇ ಕಲಮಿನ ವಿಶೇಷ ಸವಲತ್ತುಗಳು ಕರ್ನಾಟಕಕ್ಕೆ ಸೇರಿದ ಹೈದರಾಬಾದ್ ನಿಜಾಮನ ಆಡಳಿತ ಪ್ರದೇಶಕ್ಕೆ ಒಳಪಟ್ಟಿದ್ದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಪ್ರದೇಶಗಳಿಗೆ ಸಿಗಲಿಲ್ಲವೇಕೆ, ಅದರ ಹಿನ್ನೆಲೆಯಾದರೂ ಏನು, ೩೭೧ನೇ ಕಲಂ ಏನು ಹೇಳುತ್ತದೆ, ಯಾವ ಯಾವ ರಾಜ್ಯಗಳು ಈ ಸವಲತ್ತನ್ನು ಪಡೆದುಕೊಂಡಿವೆ ಮತ್ತು ಪ್ರಸ್ತುತ ಹೈದರಾಬಾದ್ ಕರ್ನಾಟಕಕ್ಕೆ ಕಲಂನ ಅವಶ್ಯಕತೆ ಏನಿದೆ, ೩೭೧ ಕಲಂನ ತಿದ್ದುಪಡಿಯಿಂದ ಈ

ಪ್ರದೇಶಕ್ಕೆ ಸಿಗುವ ಸೌಲಭ್ಯಗಳೇನು, ಇದರ ಪ್ರಯೋಜನ ಪಡೆಯುವವರು ಯಾರು, ಇದರಿಂದಾಗುವ ಬದಲಾವಣೆಗಳೇನು, ಪರಿಣಾಮಗಳೇನು ಎಂಬುದರ ವಿಶ್ಲೇಷಣೆ ಅವಶ್ಯಕವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗಗಳು ನಿಜಾಮನ ಆಳ್ವಿಕೆಗೆ ಒಳಪಟ್ಟಾಗಿನಿಂದಲೂ ಅತ್ಯಂತ ಹಿಂದುಳಿದ ಭಾಗಗಳಾಗಿದ್ದವು. ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿದ್ದವು. ದುರ್ದೈವದ ಸಂಗತಿ ಎಂದರೆ ಸ್ವಾತಂತ್ರ್ಯದ ನಂತರವೂ ಈ ಪ್ರದೇಶಗಳ ಸ್ಥಿತಿಗತಿ ಹಾಗೇ ಮುಂದುವರೆದಿದೆ. ಡಾ. ಡಿ.ಎಂ. ನಂಜುಂಡಪ್ಪ ವರದಿಯು ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಆದರೆ ನೆರೆಯ 'ತೆಲಂಗಾಣ' ಮತ್ತು 'ವಿದರ್ಭ' ಪ್ರಾಂತ್ಯಗಳು ಆಡಳಿತರೂಢ ಸರಕಾರಗಳ ಪ್ರಯತ್ನದಿಂದ ಸಂವಿಧಾನದ ೩೭೧ನೇ ಕಲಂನ ಪ್ರಯೋಜನ ಪಡೆದು, ಶಿಕ್ಷಣ ಹಾಗೂ ಉದ್ಯೋಗದಲ್ಲಿ ಸ್ಥಳೀಯರಿಗೆ ಮೀಸಲಾತಿಯನ್ನು ಹಾಗೂ ಕೇಂದ್ರದ ಹಣಕಾಸಿನ ನೆರವನ್ನು ಪಡೆದು ಅಭಿವೃದ್ಧಿ ಪಥದಲ್ಲಿ ಸಾಗಿದವು. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಇಂತಹ ಸೌಲಭ್ಯ ಲಭ್ಯವಾಗಲಿಲ್ಲ. ಯಾವ ಸರಕಾರಗಳು ಹಾಗೂ ರಾಜಕೀಯ ಮುಖಂಡರು ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಿಲ್ಲ. ೨೦೦೨ರಲ್ಲಿ ಸೌಲಭ್ಯ ಪಡೆಯಲು ಜನತೆಯ ಒತ್ತಾಯಕ್ಕೆ ಮಣಿದ ಸರಕಾರ ಪ್ರಯತ್ನಿಸಿದರೂ ಕೇಂದ್ರ ಸರಕಾರ ಇದನ್ನು ತಿರಸ್ಕರಿಸಿತು. ತಮ್ಮ ಹಕ್ಕೋತ್ತಾಯ ಮಾಡಿ ಅಗತ್ಯವಾದದ್ದನ್ನು ಪಡೆಯುವ ಅರಿವು ಇಲ್ಲಿನ ಜನಸಮುದಾಯಗಳಲ್ಲಿ ಬೇಗ ಬರಲಿಲ್ಲ. ಆದರೆ ಇತ್ತೀಚಿಗೆ ಮೂಲಭೂತ ಅವಕಾಶಗಳಿಂದ ವಂಚಿತರಾದ, ತಮ್ಮ ಸ್ಥಿತಿಗತಿಯ ಬಗ್ಗೆ ಅರಿವು ಪಡೆದ, ವಿದ್ಯಾರ್ಥಿಗಳು, ಮುಖಂಡರು, ಸುಧಾರಕರ ಚಿಂತನೆಯ ಫಲವಾಗಿ, ಸಂವಿಧಾನದ ೨೭೧ನೇ ಕಲಂಗೆ ತಿದ್ದುಪಡಿ ಮಾಡಿ ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿ ಎನ್ನುವ ಹೋರಾಟಕ್ಕೆ ಇದೀಗ ಪ್ರತಿಫಲ ದೊರೆಯುವ ಹಂತದಲ್ಲಿದೆ.

ಸಂವಿಧಾನದ ೩೭೧ನೇ ಕಲಂ

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ವಿಭಿನ್ನ ಸ್ಥಿತಿಗತಿಗಳನ್ನು ಅರಿತ ಸಂವಿಧಾನದ ಕರ್ತೃಗಳು, ಒಕ್ಕೂಟ ವ್ಯವಸ್ಥೆಯಲ್ಲಿ ಸರ್ವರಿಗೂ ಸಮಪಾಲು, ಸಮಬಾಳು ನೀಡುವ ಆಶಯದೊಂದಿಗೆ, ಯಾವುದೇ ರಾಜ್ಯದ ಭೂಭಾಗವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಿಂದುಳಿದ ಭಾಗಗಳಿಗೆ ನ್ಯಾಯ ದೊರಕಿಸಲು ಮತ್ತು ದೇಶದಲ್ಲಿನ ಬುಡಕಟ್ಟು ಹಾಗೂ ಗುಡ್ಡಗಾಡು ಪ್ರದೇಶ ಮತ್ತು ಬೇರೆ ಬೇರೆ ಕಾರಣಗಳಿಂದ ಹಿಂದುಳಿದಿರುವ ಪ್ರದೇಶಗಳನ್ನು ಪ್ರಗತಿವಾಹನಿಗೆ ತರುವ ನಿಟ್ಟಿನಲ್ಲಿ, ಅಸಮಾನತೆಯ ನಿವಾರಣೆಗಾಗಿ ಸಂವಿಧಾನದಲ್ಲಿ ವಿಶೇಷ ಸವಲತ್ತುಗಳನ್ನು ನೀಡುವ ಕಲಮುಗಳನ್ನು ಅಳವಡಿಸಿದ್ದಾರೆ.[೨] ಒಕ್ಕೂಟ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ಗತಿ ಪ್ರದೇಶದಿಂದ ಪ್ರದೇಶಕ್ಕೆ ತಾರತಮ್ಯದಿಂದ ಕೂಡಿರಬಾರದು ಒಂದು ಪ್ರದೇಶ ಸಮೃದ್ಧಿಯಿಂದ ಕೂಡಿದ್ದು ಮತ್ತೊಂದು ತೀರಾ ಹಿಂದುಳಿದು ಅಲ್ಲಿನ ಜನ ಹಲವು ಸೌಲಭ್ಯಗಳಿಂದ ವಂಚಿತರಾಗಿರಬಾರದು ಎನ್ನುವ ಸದುದ್ದೇಶದಿಂದ

ಅಸಮಾನತೆ ನಿವಾರಣೆಗೆ ವಿಶೇಷ ಸವಲತ್ತುಗಳನ್ನು ನೀಡಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದ್ದಾರೆ. 'ಈ ಪ್ರಕಾರ ಸಂವಿಧಾನದ ೩೭೧ನೇ ಕಲಂ ಒಕ್ಕೂಟ ವ್ಯವಸ್ಥೆಯಲ್ಲಿ ಹಿಂದುಳಿದ ಮತ್ತು ಅಸಮಾನತೆಗೆ ಒಳಗಾದ ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡುವ ಮೂಲಕ ಅಲ್ಲಿನ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗುವಂತೆ ಮಾಡಿದರು.

೩೭೧ನೇ ಕಲಂ ಅನ್ವಯ ಭಾರತದ ಬೇರೆ ಬೇರೆ ರಾಜ್ಯಗಳ ವಿಭಿನ್ನ ಪ್ರದೇಶಗಳ ಧಾರ್ಮಿಕ ಕಟ್ಟಳೆ ಮತ್ತು ವಿಶಿಷ್ಠ ಸಂಪ್ರದಾಯಗಳ ರಕ್ಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಲ್ಲಿ ಯಾವುದೇ ರೀತಿಯ ವಿಶಿಷ್ಟ ಕಾನೂನು, ಸವಲತ್ತು, ವಿಶೇಷ ಅನುದಾನ ನೀಡಿದರೆ ಅದನ್ನು ದೇಶದ ಪ್ರಜೆಗಳು ನ್ಯಾಯಾಲಯದಲ್ಲಿ ಪ್ರಶ್ನಿಸಲು ಬರುವುದಿಲ್ಲ. ಇದರ ಅನ್ವಯ ಸಂವಿಧಾನದ ತಿದ್ದುಪಡಿಯ ಮೂಲಕ ಕೇಂದ್ರ ಸರಕಾರ ಈಗಾಗಲೇ ಅರುಣಾಚಲ ಪ್ರದೇಶ, ಆಂಧ್ರ, ಅಸ್ಸಾಂ, ಗುಜರಾತ್, ಗೋವಾ, ನಾಗಾಲ್ಯಾಂಡ್, ಮಣಿಪುರ, ಮಹಾರಾಷ್ಟ್ರ, ಮಿಜೋರಾಂ, ಸಿಕ್ಕಿಂ ರಾಜ್ಯಗಳಿಗೆ ೩೭೧ನೇ ಕಲಂನಡಿ ವಿವಿಧ ಉಪಬಂಧಗಳಿಂದ ವಿಶೇಷ ಸೌಲಭ್ಯ ನೀಡಿದೆ.[೧೮]

ಸಂವಿಧಾನದ ೩೭೧ನೇ ಕಲಂನ ಉಪಬಂಧಗಳು

೩೭೧ನೇ ಕಲಮಿನ 'ಎ' ಉಪಬಂಧವು, ತೆಲಂಗಾಣ, ವಿದರ್ಭ, ಮರಾಠವಾಡ, ಸೌರಾಷ್ಟ್ರ, ಕಚ್ ಮತ್ತು ಆಗತ್ಯವೆನಿಸಿದರೆ, ಉಳಿದ ಭಾಗಗಳ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಗಳನ್ನು ರಚಿಸಬೇಕು, ಅವುಗಳ ಪ್ರತಿಯೊಂದು ಕಾರ್ಯವೈಖರಿ ಕುರಿತು ಪ್ರತಿ ವರ್ಷ ವಿಧಾನಸಭೆ ಮುಂದೆ ವರದಿ ಮಂಡಿಸಬೇಕು ಎನ್ನುವ ವಿವರ ಒಳಗೊಂಡಿದೆ. ೩೭೧ನೇ ಕಲಮಿನ 'ಬಿ' ಉಪಬಂಧವು, ಇಡೀ ರಾಜ್ಯದ ಅವಶ್ಯಕತೆ ಗಮನಿಸಿ, ಸೂಚಿತ ಪ್ರದೇಶಗಳ ಅಭಿವೃದ್ಧಿಗಾಗಿ ನ್ಯಾಯಸಮ್ಮತ ನಿಧಿ ಹಂಚಬೇಕು ಎಂದು ಹೇಳುತ್ತದೆ. ೩೭೧ನೇ ಕಲಂನ 'ಸಿ' ಉಪಬಂಧವು, ರಾಜ್ಯದ ಅಗತ್ಯಕ್ಕೆ ಎಲ್ಲ ಸೂಚಿತ ಪ್ರದೇಶಗಳಲ್ಲಿ ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿ ತರಬೇತಿಗಾಗಿ ವಿಶೇಷ ಸೌಲಭ್ಯ ನೀಡಬೇಕು ಮತ್ತು ರಾಜ್ಯ ಸರಕಾರಿ ಅಧೀನದ ಸೇವೆಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ನ್ಯಾಯಸಮ್ಮತ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುತ್ತದೆ. ೩೭೧ನೇ ಕಲಂನ 'ಡಿ' ಉಪಬಂಧವು ಆಂಧ್ರಪ್ರದೇಶಕ್ಕೆ ಸಂಬಂಧಪಟ್ಟಂತೆ ಇಡೀ ರಾಜ್ಯದ ಅಗತ್ಯತೆಗಳನ್ನು ಗಮನದಲ್ಲಿರಿಸಿ ಸರ್ಕಾರಿ ಉದ್ಯೋಗದ ವಿಷಯದಲ್ಲಿ ಮತ್ತು ಶಿಕ್ಷಣದ ವಿಷಯದಲ್ಲಿ ಆ ರಾಜ್ಯದ ವಿಭಿನ್ನ ಭಾಗಗಳಿಗೆ ಸೇರಿದ ಜನರಿಗೆ ನ್ಯಾಯಸಮ್ಮತವಾದ ಅವಕಾಶಗಳು ಹಾಗೂ ಸೌಲಭ್ಯಗಳು ದೊರೆಯುವಂತೆ ಆದೇಶದ ಮೂಲಕ ಉಪಬಂಧಿಸಿದೆ.[೧೯] ೩೧೭(೨)ಅ ಉಪಬಂಧವು: ವಿದರ್ಭ ಮಾದರಿಯಲ್ಲಿ ನೀಡಿರುವ ಸೌಲಭ್ಯವೆಂದರೆ ಕೇಂದ್ರದಿಂದ ನಿರ್ದಿಷ್ಟ ಪ್ರದೇಶಕ್ಕೆ ಅಭಿವೃದ್ಧಿ ಪ್ರಾಧಿಕಾರ ರಚನೆ, ಸುಮಾರು ೧೦೦೦ ಕೋಟಿ ರೂ. ಪ್ಯಾಕೇಜ್, ಕೇಂದ್ರದಿಂದ ಪ್ರಾಧಿಕಾರದ ಕೆಲಸಕ್ಕೆ ಶೇ. ೪೦ ರಿಂದ ೯೦ರಷ್ಟು ಅನುದಾನ ನೀಡುವುದಾಗಿದೆ.

ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿಗಳು

ಇದುವರೆಗೆ ಸಂವಿಧಾನದ ೩೭೧ನೇ ಕಲಂಗೆ ಒಟ್ಟು ಎಂಟು ಬಾರಿ ತಿದ್ದುಪಡಿಗಳಾಗಿವೆ. ಹೈದರಾಬಾದ್ ಕರ್ನಾಟಕಕ್ಕೆ ಮಾಡುವುದು ೯ನೇ ತಿದ್ದುಪಡಿಯಾಗಿದೆ. ೧೯೫೬ ಏಪ್ರಿಲ್ ೧೪ರಂದು ಕೇಂದ್ರ ಗೃಹಸಚಿವ ಗೋವಿಂದ ಪಲ್ಲಭಪಂತ್ ಅವರು ಸಂವಿಧಾನದ ೭ನೇ ತಿದ್ದುಪಡಿ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿದ್ದರು. ಇದರಲ್ಲಿ ಸಂವಿಧಾನದ ವಿವಿಧ ಕಲಂಗಳ ತಿದ್ದುಪಡಿ ಜೊತೆಗೆ ಕಲಂ ೩೭೧ಕ್ಕೆ ತಿದ್ದುಪಡಿ ಮಾಡಿ ಆಗಿನ ಮುಂಬೈ ರಾಜ್ಯ ಹಾಗೂ ಹೊಸದಾಗಿ ಅಸ್ತಿತ್ವಕ್ಕೆ ಬರುವ ಆಂಧ್ರಪ್ರದೇಶ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ವಿಷಯವೂ ಸೇರಿತ್ತು.

೧೯೬೯ರಲ್ಲಿ ಅಸ್ಸಾಂಗಾಗಿ 'ಬಿ' - (೨೨ನೇ ತಿದ್ದುಪಡಿ)

೧೯೭೨ರಲ್ಲಿ ಮಿಜೋರಾಂಗಾಗಿ 'ಸಿ' - (೨೭ನೇ ತಿದ್ದುಪಡಿ)

೧೯೭೪ರಲ್ಲಿ ತೆಲಂಗಾಣ ಮತ್ತು
ಆಂಧ್ರಪ್ರದೇಶಕ್ಕಾಗಿ 'ಡಿ' ಮತ್ತು 'ಇ' - (೩೩ನೇ ತಿದ್ದುಪಡಿ)

೧೯೭೫ರಲ್ಲಿ ಸಿಕ್ಕಿಂಗಾಗಿ 'ಎಫ್' - (೩೭ನೇ ತಿದ್ದುಪಡಿ)

೧೯೮೭ರಲ್ಲಿ ಮಿಜೋರಾಂಗಾಗಿ 'ಜಿ' - (೫೪ನೇ ತಿದ್ದುಪಡಿ)

೧೯೮೭ರಲ್ಲಿ ಅರುಣಾಚಲ ಪ್ರದೇಶಕ್ಕಾಗಿ 'ಎಚ್' - (೫೬ನೇ ತಿದ್ದುಪಡಿ)

೧೯೮೭ರಲ್ಲಿ ಗೋವಾ ರಾಜ್ಯಕ್ಕಾಗಿ 'ಐಚ್' - (೫೭ನೇ ತಿದ್ದುಪಡಿ)[೨] ಮಾಡಲಾಗಿದೆ.

ಆಂಧ್ರಪ್ರದೇಶಕ್ಕೆ ನೀಡಿದ ವಿಶೇಷ ಸ್ಥಾನಮಾನ

ಸಂವಿಧಾನದ ೩೭೧ನೇ 'ಡಿ' ಉಪಬಂಧವು ತುಂಬಾ ಗಮನಾರ್ಹ ಅಂಶವಾಗಿದೆ. ಕಲಂನಡಿಯಲ್ಲಿ ಆಂಧ್ರಪ್ರದೇಶವು ವಿಶೇಷ ಸವಲತ್ತು ಪಡೆದುಕೊಂಡಿದೆ. ವಿಶೇಷವಾಗಿ ಆಂಧ್ರಪ್ರದೇಶವನ್ನೇ ದೃಷ್ಟಿಯಲ್ಲಿಟ್ಟು ಕೊಂಡು ರಚನೆಯಾದ 'ಡಿ' ಉಪಬಂಧವು ಸಂವಿಧಾನದ ೩೭೧ನೇ ಕಲಂನಲ್ಲಿ ಸೇರಬೇಕಾದ ಹಿನ್ನೆಲೆ ಏನೆಂಬುದು ಇಲ್ಲಿ ತುಂಬಾ ಮಹತ್ವವಾಗಿದೆ. ೩೭೧ನೇ 'ಏ' ಉಪಬಂಧ ಪ್ರಕಾರ ೧೯೫೬ರಲ್ಲಿ ಆಂಧ್ರಪ್ರದೇಶಕ್ಕೆ ಸೇರಿದ ತೆಲಂಗಾಣದ ಪ್ರದೇಶಕ್ಕೆ ವಿಶೇಷ ಸ್ಥಾನಮಾನದ ಸೌಲಭ್ಯ ಸಿಗುತ್ತಿದ್ದಂತೆಯೇ ಉಳಿದ ಭಾಗಗಳಲ್ಲಿ ಅತೃಪ್ತಿಯ ಅಲೆಗಳೆದ್ದವು.

ತೆಲಂಗಾಣ ಪ್ರದೇಶಕ್ಕೆ ಸಿಕ್ಕಂತಹ ವಿಶೇಷ ಸ್ಥಾನಮಾನ ಇಡೀ ಆಂಧ್ರಪ್ರದೇಶಕ್ಕೆ ಜಾರಿಯಾಗಬೇಕು ಎನ್ನುವ ಬೇಡಿಕೆಯನ್ನಿಟ್ಟು ದೆಹಲಿ ರಾಜಕೀಯ ವಲಯದಲ್ಲಿ ತುಂಬಾ ಪ್ರಭಾವಿತರಾಗಿದ್ದ ಮತ್ತು ರಾಜಕೀಯ ಮುತ್ಸದ್ಧಿಗಳಾಗಿದ್ದ ನೀಲಂ ಸಂಜೀವರೆಡ್ಡಿ, ಪಿ.ವಿ. ನರಸಿಂಹರಾವ್, ಚೆನ್ನಾರೆಡ್ಡಿ, ರಂಗಾರೆಡ್ಡಿ ಮುಂತಾದವರು ಹೋರಾಟಕ್ಕಿಳಿದರು. ಅದರಲ್ಲೂ ಚೆನ್ನಾರೆಡ್ಡಿ ನೇತೃತ್ವದ 'ಪ್ರಜಾಪರಿಷತ್' ಹೋರಾಟವು ೧೯೭೦ರ ದಶಕದಲ್ಲಿ ಆಂಧ್ರದಾದ್ಯಂತ ಬಿರುಗಾಳಿ ಎಬ್ಬಿಸಿತು. ತೆಲಂಗಾಣಕ್ಕೆ ನೀಡಿದ ೩೭೧ನೇ ಕಲಮಿನ

ವಿಶೇಷ ಸ್ಥಾನಮಾನವನ್ನು ಸಂಪೂರ್ಣವಾಗಿ ಆಂಧ್ರಪ್ರದೇಶಕ್ಕೆ ನೀಡಬೇಕು ಎಂಬುದೇ ಪ್ರಜಾಪರಿಷತ್ತಿನ ಆಂದೋಲನದ ಬೇಡಿಕೆಯಾಗಿತ್ತು. ಹೋರಾಟ ಹಿಂಸಾರೂಪಕ್ಕೆ ತಿರುಗಿದಾಗ ಪರಿಸ್ಥಿತಿಯ ಗಂಭೀರತೆಯನ್ನು ತಿಳಿದ ಆಗಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ, ಇಡೀ ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಒಪ್ಪಿದರು. ಇಡೀ ಆಂಧ್ರಪ್ರದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ೩೭೧ನೇ ಕಲಂನಡಿಯಲ್ಲಿ 'ಡಿ' ಉಪಬಂಧದ ಹಿನ್ನೆಲೆಯಲ್ಲಿ ಅವಲೋಕಿಸಿ ೧೯೭೩ರಲ್ಲಿ ಸಂವಿಧಾನದ ೩೨ನೇ ತಿದ್ದುಪಡಿ ತರುವ ಮೂಲಕ ತೆಲಂಗಾಣಕ್ಕೆ ನೀಡಿದ ವಿಶೇಷ ಸ್ಥಾನಮಾನ ಪೂರ್ಣ ಆಂಧ್ರಪ್ರದೇಶಕ್ಕೆ ವಿಸ್ತರಿಸಲಾಯಿತು.[೨೧] ಆಗ ೩೭೧ನೇ ಕಲಮಿಗೆ 'ಡಿ' ಉಪಬಂಧವನ್ನು ಸೇರಿಸಲಾಯಿತು.

೩೭೧ನೇ ಕಲಂ 'ಡಿ' ಉಪಬಂಧದ ಪ್ರಕಾರ, ರಾಷ್ಟ್ರಪತಿಯು ಆಂಧ್ರಪ್ರದೇಶಕ್ಕೆ ಸಂಬಂಧಪಟ್ಟಂತೆ ಇಡೀ ರಾಜ್ಯದ ಅಗತ್ಯತೆಗಳನ್ನು ಗಮನದಲ್ಲಿರಿಸಿ ಸರ್ಕಾರಿ ಉದ್ಯೋಗದ ವಿಷಯದಲ್ಲಿ ಮತ್ತು ಶಿಕ್ಷಣದ ವಿಷಯದಲ್ಲಿ ಆ ರಾಜ್ಯದ ವಿಭಿನ್ನ ಭಾಗಗಳಿಗೆ ಸೇರಿದ ಜನರಿಗೆ ನ್ಯಾಯಸಮ್ಮತವಾದ ಅವಕಾಶಗಳು ಹಾಗೂ ಸೌಲಭ್ಯಗಳು ದೊರೆಯುವಂತೆ ಆದೇಶಗಳನ್ನು ಹೊರಡಿಸಬಹುದು. ಹೀಗೆ 'ಡಿ' ಉಪಬಂಧಕ್ಕೆ ೧೦ ನಿಯಮಾವಳಿ ಹಾಗೂ ಉಪ ನಿಯಮಾವಳಿ ಸೇರಿಸಿ ವಿಶೇಷ ಸ್ಥಾನಮಾನ ನೀಡಲಾಯಿತು. ಇದರಿಂದಾಗಿ ಆ ಪ್ರದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೂ ಮುನ್ನ ಅಸ್ತಿತ್ವದಲ್ಲಿದ್ದ ಮುಲ್ಕಿ ನಿಯಮಾವಳಿಗಳು ಮತ್ತೆ ಮುಂದುವರಿಯುವಂತಾಯಿತು.[೨೨]

ನಿಜಾಮರ ಮುಲ್ಕಿ ಕಾನೂನು

ನಿಜಾಮರ ಆಡಳಿತಕ್ಕೊಳಪಟ್ಟಿದ್ದ 'ಹೈದರಾಬಾದ್ ಸಂಸ್ಥಾನವು' ಬಹುಭಾಷಾ ಸಂಸ್ಕೃತಿಯಿಂದ ಕೂಡಿತ್ತು. ಇಲ್ಲಿ ಮರಾಠಿ, ತೆಲಗು, ಕನ್ನಡ ಭಾಷಿಕರು ಬಹುಸಂಖ್ಯಾತರಾಗಿದ್ದರು. ಕೇವಲ ಶೇ. ೧೨ರಷ್ಟು ಜನಸಂಖ್ಯೆ ಮುಸ್ಲಿಂರದಾಗಿತ್ತು.[೨೩] ಹಾಗಿದ್ದರೂ ಆಡಳಿತ ಭಾಷೆ ಹಾಗೂ ಶಿಕ್ಷಣ ಮಾಧ್ಯಮ 'ಉರ್ದು' ಭಾಷೆಯಾಗಿತ್ತು. ಪ್ರಭುತ್ವ ಯಾರದೋ ಅವರ ಭಾಷೆಯಲ್ಲಿ ಆಡಳಿತ, ಶಿಕ್ಷಣ ನಡೆಯುವುದು ರೂಢಿಯಾಗಿತ್ತು. ಇತರ ಭಾಷಿಕರನ್ನು ಪ್ರೋತ್ಸಾಹಿಸುವ ಶಿಕ್ಷಣ ಸಂಸ್ಥೆಗಳು ಬಹಳ ವಿರಳವಾಗಿದ್ದವು, ಹೀಗಾಗಿ ಉರ್ದು ಭಾಷೆಯಲ್ಲಿ ಶಿಕ್ಷಣ ಪಡೆದವರಿಗೆ ಸರಕಾರಿ ಉದ್ಯೋಗಗಳು ಸಿಗುತ್ತಿದ್ದವು, ಅದರಲ್ಲೂ ಉತ್ತರ ಭಾರತದ 'ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ' ಉರ್ದು ಮಾಧ್ಯಮದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸರಕಾರಿ ಹುದ್ದೆಗೆ ನೇಮಕಗೊಳ್ಳುತ್ತಿದ್ದರು. ಇದರಿಂದ ಸ್ಥಳೀಯರು ಶಿಕ್ಷಣ ಹಾಗೂ ಉದ್ಯೋಗದಿಂದ ವಂಚಿತರಾಗುತ್ತಿದ್ದರು. ಇದನ್ನು ಮನಗಂಡು ಹೈದರಾಬಾದ್ ನಿಜಾಮರು ೧೯೧೯ರಲ್ಲಿ ರಾಜ್ಯದ ನೌಕರಿಗಳು ಇದೇ ರಾಜ್ಯದಲ್ಲಿನ ಅಭ್ಯರ್ಥಿಗಳಿಗೆ ಸಿಗಬೇಕೆಂದು 'ಮುಲ್ಕಿ' ಕಾನೂನು ಜಾರಿಗೆ ತಂದರು.

'ಮುಲ್ಕಿ' ಎಂದರೆ ಉರ್ದುವಿನಲ್ಲಿ ಸ್ಥಳೀಯರು ಎಂದರ್ಥ. ಮುಲ್ಕಿ ಕಾನೂನು ಎಂದರೆ ಹೈದರಾಬಾದ್ ಸಂಸ್ಥಾನದಲ್ಲಿ ೧೫ ವರ್ಷಗಳಿಂದ ಸ್ಥಳೀಯರಾಗಿ ವಾಸಿಸುವವರಿಗೆ ಎಲ್ಲಾ ಸರಕಾರಿ ಹುದ್ದೆಗಳ ನೇಮಕಾತಿ ಮತ್ತು ಶಿಕ್ಷಣದಲ್ಲಿ ಶೇ. ೭೦ ರಿಂದ ಶೇ. ೮೦ ಸ್ಥಾನಗಳನ್ನು ಸ್ಥಳೀಯರಿಗೆ

ಮೀಸಲು ನೀಡುವುದು.[೨೪] ಆಂಧ್ರಪ್ರದೇಶದ ತೆಲಂಗಾಣದಲ್ಲಿ ಈಗಲೂ ಈ ವಿಧಿಗಳ ಪ್ರಕಾರ 'ಮುಲ್ಕಿ ಕಾನೂನು' ಜಾರಿಯಲ್ಲಿದೆ. ಆದರೆ ಕರ್ನಾಟಕಕ್ಕೆ ಸೇರ್ಪಡೆಗೊಂಡ ಬೀದರ್, ಗುಲಬರ್ಗಾ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳನ್ನೊಳಗೊಂಡ ಪ್ರದೇಶಕ್ಕೆ ಮುಲ್ಕಿ ನಿಯಮವನ್ನು ಕೈ ಬಿಡಲಾಯಿತು. ಇದನ್ನು ಪ್ರಶ್ನಿಸಿ ಆಗ ಕೋರ್ಟ್ ಮೆಟ್ಟಿಲೇರಿದ್ದಾಗ ೭೦ರ ದಶಕದಲ್ಲಿ ಸುಪ್ರೀಂಕೋರ್ಟ್ ನಿಯಮವನ್ನು ಎತ್ತಿ ಹಿಡಿದಿದೆ, ಆದರೆ ಇದುವರೆಗೆ ನಿಯಮದ ಪಾಲನೆ ಆಗಲಿಲ್ಲ. ಇತ್ತೀಚೆಗೆ ನಿಯಮದ ಜಾರಿಗೆ ಕೋರಿ ಮಾಜಿ ಮಂತ್ರಿಗಳು ಹಾಗೂ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ಅಧ್ಯಕ್ಷರಾದ ವೈಜನಾಥ ಪಾಟೀಲ ಅವರು ನಿಯಮದ ಜಾರಿಗೆ ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಕರ್ನಾಟಕದ ನಾಯಕರಿಗೆ ಇವೆಲ್ಲ ಬೆಳವಣಿಗೆಗಳ ಅರಿವು ಇಲ್ಲದಿರುವುದು ದುರಂತ.

೩೭೧ನೇ ಕಲಂ ಹೈದರಾಬಾದ್ ಕರ್ನಾಟಕಕ್ಕೆ ಏಕೆ ಅನ್ವಯವಾಗಲಿಲ್ಲ

ಸಂವಿಧಾನದ ೩೭೧ನೇ ಕಲಂನ ಸವಲತ್ತುಗಳನ್ನು ಯಾರಿಗೆ ಕೊಡಬೇಕು, ಯಾವ ಮಾನದಂಡಗಳನ್ನು ಆಧರಿಸಿ ಕೊಡಬೇಕು, ಯಾರಿಗೆ ಕೊಡಬಾರದು ಎನ್ನುವ ವಿಷಯ ಚರ್ಚಿಸಲ್ಪಟ್ಟಾಗ ಅದೇ ಸಮಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ೩೭೧ನೇ ಕಲಂನ ಸವಲತ್ತುಗಳನ್ನು ನೀಡಬೇಕೋ ಬೇಡವೋ ಎನ್ನುವ ವಿಷಯವು ಸಂವಿಧಾನದ ಅಂಗರಚನಾ ಸಮಿತಿ ಸಭೆಯಲ್ಲಿನ ಪ್ರಮುಖ ನಡಾವಳಿಗಳಲ್ಲಿ ಚರ್ಚೆಗೆ ಬಂತು. ಆಗ ಮೈಸೂರು ಸಂಸ್ಥಾನದ ಪ್ರದೇಶಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿದ ಪ್ರಗತಿಶೀಲ ಪ್ರದೇಶಗಳಾಗಿವೆ. ಹೀಗಾಗಿ ಆ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಿಕೆಯ ಅಗತ್ಯವಿಲ್ಲವೆನ್ನುವ ನಿರ್ಧಾರವನ್ನು ಪ್ರಕಟಿಸಿತು. ಆದರೆ ಸಮೃದ್ಧ ಪ್ರದೇಶಗಳಿಗೆ ಸೇರಿದ ಅದರ ಅವಿಭಾಜ್ಯ ಅಂಗವಾಗುವ ಅತಿ ಹಿಂದುಳಿದ ಪ್ರದೇಶಗಳಿಗೆ ಏನು ಮಾಡಬೇಕು ಎಂಬುದರ ಬಗ್ಗೆ ಏನನ್ನೂ ಹೇಳಿಲ್ಲ.

ಅಭಿವೃದ್ಧಿ ಹಿನ್ನೆಲೆಯನ್ನು ಅವಲೋಕಿಸಿದಾಗ ಪ್ರತ್ಯೇಕ ಅಭಿವೃದ್ಧಿ ಮಂಡಳಿಗಳ ಹಿನ್ನೆಲೆಯ ಚರ್ಚೆಯಲ್ಲಿ ಕರ್ನಾಟಕ ಕುರಿತು ದಿವಂಗತ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಉಲ್ಲೇಖಿಸಿದ ಸಂಗತಿಗಳು ಇಲ್ಲಿ ಅತೀ ಮಹತ್ವದವುಗಳಾಗುತ್ತವೆ. ನೆಹರೂ ಅವರು ಕನ್ನಡ ಭಾಷಿಕ ಪ್ರದೇಶಗಳನ್ನು ಎರಡು ರಾಜ್ಯಗಳನ್ನಾಗಿ ವಿಂಗಡಿಸಬೇಕೆಂದು ಪ್ರತಿಪಾದಿಸಿದ್ದರು. ಭೌಗೋಳಿಕವಾಗಿ ವಿಶಾಲವಾದ ಪ್ರದೇಶದಿಂದ ಅಭಿವೃದ್ಧ್ಯಾತ್ಮಕ ಕಾರ್ಯಗಳು ಹಿನ್ನಡೆಯಾಗಬಹುದು ಹಾಗೂ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳ ಹಿನ್ನೆಲೆಯ ವಿಚಾರದಲ್ಲಿ ಹೀಗೆ ಹೇಳಿರಬಹುದು. ಆದರೆ ಫಜಲ್‌ಅಲಿ ಆಯೋಗ ಮೈಸೂರು ರಾಜ್ಯ ಮತ್ತು ಅದಕ್ಕೆ ಸೇರಬೇಕಾದ ಕನ್ನಡ ಭಾಷಿಕ ಪ್ರದೇಶಗಳನ್ನು ಎರಡು ರಾಜ್ಯಗಳನ್ನಾಗಿ ಮಾಡಬೇಕಾದಂತಹ ಅಗತ್ಯ ಇದೀಗ ಕಾಣುತ್ತಿಲ್ಲವೆಂದು ಹೇಳಿದರು. ಆದರೆ ಆಯೋಗವು ನಿಜಾಮರ ಆಡಳಿತ ಕನ್ನಡ ಭಾಷಿಕ ಪ್ರದೇಶಗಳನ್ನು ವಿಶೇಷ ಅಭಿವೃದ್ಧಿಗೆ ಅಲ್ಲಿನ ಸರಕಾರ ಹೆಚ್ಚಿನ ಆದ್ಯತೆ ನೀಡಬೇಕೆಂದು ಪ್ರತಿಪಾದಿಸಿದರು. ಆದರೆ ಅಧಿಕಾರಕ್ಕೆ ಬಂದ ಸರಕಾರಗಳು ಹಾಗೂ ಈ ಪ್ರಾಂತ್ಯದ ಪ್ರಮುಖರು ಹೈದರಾಬಾದ್ ಕರ್ನಾಟಕದ ವಿಶೇಷ ಸವಲತ್ತಿನ ಬೇಡಿಕೆ ಬಗ್ಗೆ ಉದಾಸೀನ ತೋರಿದ್ದೇ ದೊಡ್ಡ ಶಾಪವಾಯಿತು. ಆ ಪ್ರದೇಶದಲ್ಲಿನ ಕೆಲವರು ಇದರ ಬಗ್ಗೆ ಕೂಗೆಬ್ಬಿಸಿದರೂ ಅದು

ಸರಕಾರದ ಕಿವಿಗೆ ಮುಟ್ಟಲೇ ಇಲ್ಲ. ಹೀಗಾಗಿ ಹಿಂದಿನ ಸರಕಾರಗಳು, ರಾಜಕೀಯ ನಾಯಕರು ಹಾಗೂ ಪ್ರಾಂತ್ಯದ ಇತರ ಕ್ಷೇತ್ರಗಳ ಮುಖಂಡರು ತಳೆದ ನಿರ್ಲಕ್ಷ್ಯವು ಪ್ರಸ್ತುತ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ.

ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ಕೂಗು

ನಿಜಾಮರ ಆಳ್ವಿಕೆಯಲ್ಲಿ ಉದಾಸೀನಕ್ಕೊಳಗಾದ ಹೈದರಾಬಾದ್ ಕರ್ನಾಟಕ ಇಂದು ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ದಕ್ಷಿಣ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ನಡುವೆ ೫೦ ವರ್ಷಗಳಷ್ಟು ಹಿರಿತನ, ಕಿರಿತನ ಕಂಡುಬರುತ್ತದೆ. ಹೀಗಿದ್ದೂ ಸರಕಾರವು ಕರ್ನಾಟಕದ ಇತರ ಪ್ರದೇಶಗಳ ಅಭಿವೃದ್ಧಿಗೆ ಮಾಡಿದ ವೆಚ್ಚಕ್ಕೆ ಹೋಲಿಸಿದಾಗ, ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಮಾಡಿರುವ ವೆಚ್ಚ ಬಹಳ ಕಡಿಮೆ. ಹೀಗಾಗಿ ಈ ಪ್ರದೇಶದ ಅಭಿವೃದ್ಧಿಗೆ ವಿಶೇಷ ಸ್ಥಾನಮಾನದ ತಿದ್ದುಪಡಿಗೆ ಕೂಗು ಹೆಚ್ಚಾಗತೊಡಗಿತು.[೨೫] ಆರಂಭದಲ್ಲಿ ಸರಕಾರ, ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ವಿಷಯ ಮರೆತೇ ಹೋಗಿತ್ತು. ಆದರೆ ೯೦ರ ದಶಕದ ನಂತರ ಇದು ಮರುಜೀವ ಪಡೆಯಿತು.

ಆರಂಭದಲ್ಲಿ ಹೈದರಾಬಾದ್ ಕರ್ನಾಟಕದ ನಾಯಕರಾಗಿದ್ದ ಶ್ರೀ ವೀರೇಂದ್ರ ಪಾಟೀಲ, ಮಹಾದೇವಪ್ಪ ರಾಂಪುರೆ, ಬಾಪುಗೌಡ ದರ್ಶನಾಪುರ, ಚಂದ್ರಶೇಖರ ಪಾಟೀಲ, ಕಲ್ಯಾಣರಾವ್ ಮರಗುತ್ತಿ, ಸರ್ದಾರ ಶರಣಗೌಡ ಇನಾಮದಾರ, ಮುಕ್ತಿದಾರ, ದಾಸ್ ವಕೀಲರು, ಇನ್ನಿತರರು ಈ ಪ್ರದೇಶದ ಅಭಿವೃದ್ಧಿಗೆ ಅನೇಕ ಬೇಡಿಕೆಗಳನ್ನು, ಒತ್ತಡಗಳನ್ನು ಸರಕಾರದ ಮೇಲೆ ಹೇರಿದರು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಸರಕಾರ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಸ್ಥಿತಿಗತಿಗಳ ಅಧ್ಯಯನಕ್ಕೆ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿಯನ್ನು ನೇಮಕ ಮಾಡಿತ್ತು. ಇಡೀ ಪ್ರದೇಶವನ್ನು ಸಂಚರಿಸಿದ ಸಮಿತಿ, ಮೂಲಭೂತ ಸೌಕರ್ಯಗಳು, ಸಣ್ಣ ನೀರಾವರಿ, ಕೈಗಾರಿಕೆಗಳು, ಶಿಕ್ಷಣ, ಆರೋಗ್ಯ ಹೀಗೆ ಹಲವಾರು ಸೌಲಭ್ಯಗಳಿಂದ ಪ್ರದೇಶ ವಂಚಿತವಾಗಿರುವುದನ್ನು ಮನಗಂಡಿತು. ತೀರ ಹಿಂದುಳಿದಿರುವ ಈ ಪ್ರದೇಶದ ಪ್ರಗತಿಯಾಗಬೇಕು ಎಂದಾದರೆ ಪ್ರತ್ಯೇಕ ಅಭಿವೃದ್ಧಿ ಮಂಡಳಿ ಇರಬೇಕು ಅದಕ್ಕಾಗಿ ಸರಕಾರ ತಕ್ಷಣವೇ ನಿಜಾಮ ಆಡಳಿತ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಮಂಡಳಿಯನ್ನು ರಚಿಸಿ ಆ ಮೂಲಕ ಸಮರೋಪಾದಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಧರ್ಮಸಿಂಗ್ ಸಮಿತಿ ಶಿಫಾರಸು ಮಾಡಿತ್ತು.[೨೬]

ಧರ್ಮಸಿಂಗ್ ಸಮಿತಿ ನೀಡಿದ್ದ ಶಿಫಾರಸಿನಂತೆ ೧೯೯೨ರ ಅಂತ್ಯದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕಾರ್ಯಾರಂಭ ಮಾಡಿತು. ಮಂಡಳಿ ಕಾರ್ಯಾರಂಭ ಮಾಡಿದಾಗ ಇಡೀ ಪ್ರದೇಶದ ಜೊತೆ ಜೊತೆಯಲ್ಲಿಯೇ ತಮ್ಮ ಅದೃಷ್ಟವೇ ಖುಲಾಯಿಸಬಹುದು ಎಂದು ಜನ ಭಾವಿಸಿದ್ದರು. ಆದರೆ ಮಂಡಳಿ ಆ ಪ್ರದೇಶದ ಸರ್ವಾಂಗೀಣ ಪ್ರಗತಿಗೆ ಸೂಕ್ತ ವೇದಿಕೆಯಾಗಲಿಲ್ಲ. ಹಾಗೆಂದ ಮಾತ್ರಕ್ಕೆ ಮಂಡಳಿಯ ಕಾರ್ಯ ವೈಖರಿ ಅತೃಪ್ತಿಕರವಾಗೇನೂ ಇಲ್ಲ. ಆದರೆ ಮಂಡಳಿಗೆ ಸಾಕಾಗುವಷ್ಟು ಹಣ ಬಿಡುಗಡೆಯಾಗಿಲ್ಲ ಎಂಬ ಕೊರಗು ಆರಂಭದಿಂದಲೂ ಇದೆ. ಹೀಗಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯೊಂದರಿಂದಲೇ ಹಿಂದುಳಿದ ಪ್ರದೇಶದ ಪ್ರಗತಿ ಅಸಾಧ್ಯ ಎಂಬುದನ್ನು ಮನಗಂಡ

ಶ್ರೀ ವೈಜನಾಥ ಪಾಟೀಲ ಅವರು ೧೯೯೫ರಲ್ಲಿ ಸಚಿವರಾಗಿದ್ದರೂ, ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನದ ಬೇಡಿಕೆಯ ಕೂಗೆಬ್ಬಿಸಿದರು. ಮೂರು ವರ್ಷಗಳ ನಿರಂತರ ಒತ್ತಾಯದ ಮಧ್ಯೆಯೂ ಅವರ ಸ್ವಪಕ್ಷೀಯ ಸರಕಾರ, ಬೇಡಿಕೆಗೆ ಸ್ಪಂದಿಸದೇ ಹೋಯಿತು. ನಂತರ ಶ್ರೀ ವೈಜನಾಥ ಪಾಟೀಲ ಅವರು 'ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ' ಸ್ಥಾಪಿಸಿ ಹೋರಾಟಕ್ಕಿಳಿದರು.

ಪ್ರಸ್ತುತ ಸ್ಥಿತಿಗತಿಗಳು

ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಸೇರಿದ ನಿಜಾಮ್ ಪ್ರದೇಶದ ಜನತೆಗೆ ಸಿಕ್ಕ ಭಾವನಾತ್ಮಕ ಹಾಗೂ ಶಾಸನಾತ್ಮಕ ಗೌರವಗಳು, ಅದೇ ಪ್ರದೇಶದಿಂದ ನವ ಮೈಸೂರು ರಾಜ್ಯಕ್ಕೆ ಸೇರಿದ ಜನತೆಗೆ ಸಿಗಲಿಲ್ಲ. ಈ ಪ್ರದೇಶದ ಜಿಲ್ಲೆಗಳಲ್ಲಿನ ನಿರುದ್ಯೋಗ ಮತ್ತು ಶೈಕ್ಷಣಿಕ ಸಮಸ್ಯೆಗಳ ಕುರಿತು ಎಷ್ಟು ಹೇಳಿದರೂ ಸಾಲದು. ೩೭೧ನೇ ಕಲಮಿನ ಅನ್ವಯ ಆಂಧ್ರಪ್ರದೇಶ ವಿದರ್ಭ, ಸೌರಾಷ್ಟ್ರದ ಸ್ಥಳೀಯ ವಿದ್ಯಾರ್ಥಿ ಸಮೂಹ ವೈದ್ಯಕೀಯವೂ ಸೇರಿದಂತೆ ಇತರ ವೃತ್ತಿಶಿಕ್ಷಣ ತರಗತಿಗಳಲ್ಲಿ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿಯೇ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುತ್ತಾರೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಲಭ್ಯವಿರುವ ಒಟ್ಟು ಸ್ಥಾನಗಳಲ್ಲಿ ಶೇ. ೭೦ರಷ್ಟು ಸ್ಥಳೀಯ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತವೆ. ಸರಕಾರದ ನಾಗರಿಕ ಸೇವೆಗಳ ಹುದ್ದೆಗಳಲ್ಲಿ ಸ್ಥಳೀಯವಾಗಿ ಶೇಕಡ ೮೦ರಷ್ಟು ಮೀಸಲು ಸೌಲಭ್ಯ ಪಡೆಯುತ್ತಾರೆ. ಆದರೆ ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ವಿದ್ಯಾರ್ಥಿಗಳು ಹೊರ ರಾಜ್ಯದ ವಿದ್ಯಾರ್ಥಿಗಳೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗದೆ, ಶಿಕ್ಷಣದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಈ ಭಾಗದ ವಿದ್ಯಾರ್ಥಿಗಳು ಶೇ. ೭೫ಕ್ಕೂ ಹೆಚ್ಚು ಅಂಕ ಪಡೆದರೂ ಅವರಿಗೆ ವೈದ್ಯ ಮತ್ತು ಇಂಜಿನಿಯರಿಂಗ್ ಸೀಟುಗಳು ಸಿಗುತ್ತಿಲ್ಲ. ಶೇ. ೭೫ಕ್ಕೂ ಹೆಚ್ಚು ಅಂಕ ಗಳಿಸಿದ ಗುಲಬರ್ಗಾದ ವಿದ್ಯಾರ್ಥಿಗೆ ಕರ್ನಾಟಕದ ಯಾವ ವೈದ್ಯ ಕಾಲೇಜಿನಲ್ಲೂ ಉಚಿತ ಸೀಟು ಸಿಗಲಿಲ್ಲ.[೨೨]

ರೈತರ ಹೊಲಗಳಿಗೆ ನೀರು ಹಾಯಿಸಬೇಕಾಗಿರುವ ಕೃಷ್ಣಾ, ಆಲಮಟ್ಟಿ, ತುಂಗಾಭದ್ರ, ಭೀಮಾ, ಮಸ್ಕಿನಾಲಾ, ಮುಂತಾದ ನೀರಾವರಿ ಯೋಜನೆಗಳು ಇಂದಿಗೂ ಅಪೂರ್ಣವಾಗಿದ್ದು ರೈತರನ್ನು ಚಿಂತೆಯಲ್ಲಿ ಮುಳುಗಿಸಿವೆ. ಹೈದರಾಬಾದ್ ಕರ್ನಾಟಕ ಪ್ರದೇಶದ ರೈತರಿಗಿಂತ ಆಂಧ್ರ ಮತ್ತು ಮಹಾರಾಷ್ಟ್ರ ರೈತರು ಈ ನದಿಗಳ ನೀರಿನ ಉಪಯೋಗ ಪಡೆಯಲು ಹವಣಿಸುತ್ತಿದ್ದಾರೆ. ಇಲ್ಲಿನ ಬಡ ರೈತರ ಜಮೀನುಗಳನ್ನು ಇವರು ಕಡಿಮೆ ಬೆಲೆಗೆ ಖರೀದಿಸಿ ಭೂ ಒಡೆಯರಾಗಿದ್ದಾರೆ. ಕಾವೇರಿ ನದಿ ನೀರಿನ ಹಂಚಿಕೆ ವಿವಾದ ಸೃಷ್ಟಿಯಾದಾಗ ಸರಕಾರ ಕಾಳಜಿವಹಿಸಿ, ಜನರ ಜೊತೆ ಹೋರಾಟಕ್ಕೆ ಧುಮುಕುತ್ತದೆ. ಆದರೆ ಈ ಭಾಗದ ನದಿಗಳ ನೀರಿನ ಹಂಚಿಕೆಯಿಂದ ರೈತರಿಗೆ ಅನ್ಯಾಯವಾದಾಗ ಜಾಣಕಿವುಡನಂತೆ ವರ್ತಿಸುತ್ತದೆ ಎಂಬುದು ಜನರ ಅಸಮಾಧಾನವಾಗಿದೆ. ಇನ್ನೊಂದು ಕಡೆ ಇಲ್ಲಿನ ಭೂ ಒಡೆತನವು ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ನಿಯಂತ್ರಣದಲ್ಲಿದೆ. ಶೇ. ೪೫ರಷ್ಟು ಕೃಷಿಕರು ಇವರ ಗುಲಾಮರಾಗಿ ಜೀವಿಸುತ್ತಿದ್ದಾರೆ. ಇದರ ಜೊತೆಗೆ ಬರಗಾಲ, ಬೀಜ, ಗೊಬ್ಬರದ ಅಭಾವ, ಬೆಂಬಲ ಬೆಲೆ ಸಿಗದಿರುವುದು ಮುಂತಾದ ಕಾರಣಗಳಿಂದ ಇಲ್ಲಿನ ಕೃಷಿಕನ ಬದುಕು ದುಸ್ತರವಾಗಿದೆ. ತಲೆಮಾರುಗಳಿಂದ ಭೂಮಿಯೊಂದಿಗೆ

ಭಾವನಾತ್ಮಕ ಸಂಬಂಧ ಇಟ್ಟುಕೊಂಡಿದ್ದ ರೈತ ತನಗಿರುವ ಅಂಗುಲದ ನೆಲವನ್ನೇ ಮಾರುತ್ತಿದ್ದಾನೆ, ಭೂಮಿಗಳು ಬೀಳು ಬಿದ್ದಿವೆ. ಬಡವರು ಮತ್ತು ಕೆಳವರ್ಗದ ಕೃಷಿಕರು ದುಡಿಮೆಗಾಗಿ ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಆಳುವ ವ್ಯವಸ್ಥೆ ಸೃಷ್ಟಿಸಿರುವ ಅಂತರಗಳು ಮತ್ತು ಬಡತನ ರೈತರು ಆತ್ಮಹತ್ಯೆಗೆ ಶರಣಾಗಲು ಕಾರಣವಾಗಿವೆ. ನಿರುದ್ಯೋಗ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ಈ ಭಾಗದಿಂದ ಜನರು ಕುಟುಂಬ ಪರಿವಾರ ಸಮೇತ ಗುಳೆ ಹೋಗುವ ಅಲಿಖಿತ ಪದ್ಧತಿ ನಿರ್ಮಾಣವಾಗಿ ಬಿಟ್ಟಿದೆ.

ಕರ್ನಾಟಕ ರಾಜ್ಯದಲ್ಲಿಯೇ ಅಪೌಷ್ಟಿಕಾಂಶದ ಪರಾಕಷ್ಟೆ ಹೈದರಾಬಾದ್ ಕರ್ನಾಟಕದಲ್ಲಿದೆ. ಸಾವಿರಾರು ತಾಯಂದಿರು ಅಪೌಷ್ಟಿಕಾಂಶದಿಂದ ಬಳಲುತ್ತಿರುವುದರಿಂದ ಅತೀ ಹೆಚ್ಚು ಅಸುರಕ್ಷಿತ ಹೆರಿಗೆಗಳು ನಡೆದು ಸಾಕಷ್ಟು ಬಾರಿ ತಾಯಿ ಅಥವಾ ಮಗು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಇಲ್ಲಿರುವ ಶೇ. ೩೨ರಷ್ಟು ದಲಿತರು ಮತ್ತು ಶೇ. ೨೩ರಷ್ಟು ಅಲ್ಪಸಂಖ್ಯಾತರು ಹಾಗೂ ಇತರ ಕೆಳವರ್ಗದವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ : ಒಂದು ವಿಶ್ಲೇಷಣೆ

ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ಈಗ ಕಾಲ ಕೂಡಿ ಬಂದಿದೆ. ಅನೇಕ ದಶಕಗಳ ಜನರ, ಸಂಘಟನೆಗಳ, ವಿವಿಧ ನಾಯಕರ ನಿರಂತರ ಹೋರಾಟ ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರಿದೆ. ಅದರಲ್ಲೂ ಇತ್ತೀಚಿಗೆ ಹೈದರಾಬಾದ್ ಕರ್ನಾಟಕಕ್ಕೆ ೩೭೧ನೇ ಕಲಂ ತಿದ್ದುಪಡಿಗೆ ಒತ್ತಾಯಿಸಿ ಸರ್ವಪಕ್ಷಗಳ ನಿಯೋಗವು ದೆಹಲಿಗೆ ಭೇಟಿ ನೀಡಿ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿದ್ದವು. ಹಾಗೆಯೇ ೩೭೧ನೇ ಕಲಂ ತಿದ್ದುಪಡಿ ಆಗಬೇಕು ಎನ್ನುವ ನಿರ್ಣಯವನ್ನು ವಿಧಾನಸಭೆಯಲ್ಲಿ ಅಂಗೀಕರಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿತ್ತು. ಇಂತಹ ಪ್ರಯತ್ನಗಳ ಫಲವಾಗಿ ಈಗ ಕೇಂದ್ರ ಸರಕಾರವು ತಿದ್ದುಪಡಿ ಕುರಿತು ಮಹತ್ವದ ಹೆಜ್ಜೆ ಇಟ್ಟಿದೆ. ಅಂದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಬೀದರ್, ಗುಲಬರ್ಗಾ, ರಾಯಚೂರು, ಯಾದಗಿರಿ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಾದೇಶಿಕ ಮೀಸಲು ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿ ದಿನಾಂಕ ೦೩.೦೮.೨೦೧೨ರಂದು ಒಪ್ಪಿಗೆ ನೀಡಿದೆ.

ಆದರೆ ಸಂವಿಧಾನದ ತಿದ್ದುಪಡಿಯ ಅಂಶ ಇದರಲ್ಲಿ ಅಡಕವಾಗಿರುವ ಕಾರಣ ಈ ಪ್ರಸ್ತಾಪವನ್ನು ಕೇಂದ್ರದ ಸಚಿವ ಸಂಪುಟ ಸಭೆಯ ಮುಂದೆಯೂ ಮಂಡಿಸಿ ಒಪ್ಪಿಗೆ ಪಡೆಯಬೇಕು. ನಂತರ ಮಸೂದೆ ತಯಾರಿಸಿ ಸಂಸತ್ತಿನ ಮುಂದೆ ಮಂಡಿಸುವುದು ಆನಂತರದ ಹೆಜ್ಜೆಯಾಗಿದೆ. ಸಂವಿಧಾನ ತಿದ್ದುಪಡಿಯ ಅಗತ್ಯವಿರುವ ಕಾರಣ ಮೂರನೆಯ ಎರಡರಷ್ಟು ಬಹುಮತದಿಂದ ಈ ಮಸೂದೆ ಅಂಗೀಕಾರವಾಗಬೇಕಿದೆ. ನಂತರ ಸಂಸತ್ತಿನ ಒಪ್ಪಿಗೆಯ ನಂತರ ರಾಷ್ಟ್ರಪತಿಯವರು ಅಂಗೀಕಾರ ನೀಡಬೇಕು. ಅದನ್ನು ಕೇಂದ್ರ ಸರಕಾರ ಗೆಜೆಟ್‌ನಲ್ಲಿ ಪ್ರಕಟಿಸಬೇಕು. ನಂತರ ರಾಜ್ಯಪಾಲರು ರಾಜ್ಯ ಸರಕಾರಕ್ಕೆ ಸಂವಿಧಾನದ ೩೭೧ನೇ

ಕಲಂ ಅಡಿಯಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಕಾನೂನು ರೂಪಿಸಲು ಆದೇಶ ನೀಡಬೇಕು. ಈ ಆದೇಶದ ಅನುಗುಣವಾಗಿ ರಾಜ್ಯ ಸರಕಾರ ಸೂಕ್ತ ಕಾನೂನು ರೂಪಿಸಬೇಕು. ನಂತರ ಕರ್ನಾಟಕ ಸರಕಾರ, ಅಸ್ತಿತ್ವದಲ್ಲಿರುವ ಹಲವಾರು ಕಾನೂನು ಮತ್ತು ನಿಯಮಾವಳಿಗಳನ್ನು ಬದಲಾಯಿಸಬೇಕಾಗುತ್ತದೆ. ಒಟ್ಟಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮತ್ತು ಜಾರಿಯ ಹೆಜ್ಜೆಯು ಇಂದು ಆಶಾದಾಯಕ ಹಾದಿಯಲ್ಲಿದೆ.

ತಿದ್ದುಪಡಿಯಿಂದಾಗುವ ಪ್ರಯೋಜನಗಳು :

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನ ಕಲ್ಪಿಸುವ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯಿಂದ ಈ ಭಾಗಕ್ಕೆ ಇಲ್ಲಿನ ಜನರಿಗೆ ಅನೇಕ ಪ್ರಯೋಜನಗಳು ಆಗುತ್ತವೆ. ಸರಕಾರಿ ನೇಮಕಾತಿ ಮತ್ತು ಶೈಕ್ಷಣಿಕ ವ್ಯವಸ್ಥೆಯಲ್ಲಿ ಮೀಸಲಾತಿ ಕಲ್ಪಿಸುವ ಅಂಶಗಳು ಸಂವಿಧಾನದ ೩೭೧ನೇ ಪರಿಚ್ಛೇದದ ತಿದ್ದುಪಡಿ ಕರಿಡಿನ ಪ್ರಮುಖ ಅಂಶಗಳಾಗಬಹುದು. ಹೀಗಾದಲ್ಲಿ, ನೇಮಕಾತಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ದೊರಕುವ ಪ್ರಾದೇಶಿಕ ಮೀಸಲಾತಿಯಿಂದ ಸರ್ಕಾರಿ ನೌಕರರಲ್ಲಿ ಹೈದರಾಬಾದ್ ಕರ್ನಾಟಕದವರ ಸಂಖ್ಯೆ ಹೆಚ್ಚಾಗುತ್ತದೆ. ಅಂದರೆ ಈ ಪ್ರದೇಶದಲ್ಲಿರುವ ಸರಕಾರಿ ಹುದ್ದೆಗಳಲ್ಲಿ ಶೇ. ೭೦ರಷ್ಟು ಭಾಗ ಸ್ಥಳೀಯರಿಗೆ ಮೀಸಲಾಗಿರುತ್ತದೆ. ಉಳಿದ ಶೇ. ೩೦ರಷ್ಟು ಹುದ್ದೆಗಳ ನೇಮಕಾತಿ ರಾಜ್ಯಮಟ್ಟದಲ್ಲಿ ನಡೆಯುತ್ತದೆ. ಇದೇ ನಿಯಮ ವರ್ಗಾವಣೆಗೂ ಅನ್ವಯಿಸುತ್ತದೆ.

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿರುವ ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಇಲ್ಲಿ ಪ್ರದೇಶದ ವಿದ್ಯಾರ್ಥಿಗಳಿಗೆ ಶೇ. ೭೦ರಷ್ಟು ಸೀಟುಗಳು ಸಿಗುವುದು ಇಲ್ಲಿನ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ. ಪ್ರತಿ ವರ್ಷ ಸರಿಸುಮಾರು ೪೦೦ಕ್ಕಿಂತ ಹೆಚ್ಚು ವೈದ್ಯಕೀಯ ಸೀಟುಗಳು ಹೈದರಾಬಾದ್ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ದೊರೆಯಲಿದೆ. ಹಾಗೆಯೇ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣದ ಪ್ರವೇಶದಲ್ಲಿ ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಈ ಭಾಗದವರಿಗೆ ಪ್ರವೇಶ ನೀಡಲು ವಿಶೇಷ ಮೀಸಲು ಸಿಗಲಿದೆ.

ಇನ್ನು ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ, ಸರಕಾರದ ಎಲ್ಲಾ ಹುದ್ದೆಗಳಿಗೆ ಗುಲಬರ್ಗಾ ವಿಭಾಗ ಮತ್ತು ಈ ವಿಭಾಗದಡಿ ಬರುವ ಎಲ್ಲಾ ಜಿಲ್ಲೆಗಳಿಗೆ ವಿಶೇಷ ಮೀಸಲು ಸೌಲಭ್ಯ ಸಿಗುತ್ತದೆ. ವಿಧಾನಸೌಧದಲ್ಲಿಯೂ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗಲೂ ಈ ಭಾಗದ ಜಿಲ್ಲೆಗಳಿಗೆ ವಿಶೇಷ ಮೀಸಲು ಲಭ್ಯವಾಗುತ್ತದೆ. ಹೈದರಾಬಾದ್ ಕರ್ನಾಟಕ ವಿಭಾಗದ ಜಿಲ್ಲೆಗಳ ಸರಕಾರಿ ಕಚೇರಿಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅದೇ ಜಿಲ್ಲೆಯವರು ಭರ್ತಿಯಾಗಲು ಅವಕಾಶ ಇರುತ್ತದೆ. ವೃತ್ತಿಪರ ಕಾಲೇಜುಗಳು ಸೇರಿದಂತೆ ಎಲ್ಲ ಹಂತದ ಶಿಕ್ಷಣಕ್ಕೆ ಈ ಭಾಗದ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ವಿಶೇಷ ಮೀಸಲು ಸಿಗುತ್ತದೆ.

ಸಂವಿಧಾನದ ತಿದ್ದುಪಡಿ ಮೂಲಕ ದೊರೆಯುವ ವಿಶೇಷ ಸ್ಥಾನಮಾನದ ಕಾರಣದಿಂದ ಕೈಗಾರಿಕೆ, ಕೃಷಿ, ಸಂಪರ್ಕ ವ್ಯವಸ್ಥೆ ಹಾಗೂ ಆರೋಗ್ಯ ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ವಿಶೇಷ ಅಭಿವೃದ್ಧಿ

ಯೋಜನೆಗಳು ರೂಪುಗೊಳ್ಳುತ್ತವೆ. ಯೋಜನೆಗಳ ಜಾರಿಗಾಗಿ, ಉಸ್ತುವಾರಿಗಾಗಿ, ಪ್ರತ್ಯೇಕ ಮಂಡಳಿಗಳು ರಚನೆಯಾಗುತ್ತವೆ. ಹೈದರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿಗೆ ಸ್ಥಾಪನೆಯಾಗುವ ಪ್ರತ್ಯೇಕ ಅಭಿವೃದ್ಧಿ ಮಂಡಳಿ ತನ್ನದೇ ಚುನಾಯಿತ ಪ್ರತಿನಿಧಿಗಳು ಹಾಗೂ ಬಜೆಟ್ ಒಳಗೊಳ್ಳಲಿದೆ. ಮಂಡಳಿಗೆ ನೇರವಾಗಿ ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಆರ್ಥಿಕ ನೆರವು ದೊರೆಯುತ್ತದೆ. ಅಸಮಾನತೆ ನಿವಾರಣೆಗಾಗಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಅನುದಾನ ದೊರೆಯುತ್ತವೆ. ಬಹಳಷ್ಟು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಕೇಂದ್ರ ಸರಕಾರ ವಿಶೇಷ ಅನುದಾನ ನೀಡುತ್ತದೆ. ಈ ಪ್ರದೇಶದ ಅಭಿವೃದ್ಧಿಗಾಗಿಯೇ ಯೋಜನಾ ಆಯೋಗವು ವಿಶೇಷ ಯೋಜನೆಗಳನ್ನು ರೂಪಿಸುತ್ತದೆ. ಹಾಗೆಯೇ ಈ ಪ್ರದೇಶಗಳ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ರಾಜ್ಯ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣದ ಹಂಚಿಕೆಯ ವ್ಯವಸ್ಥೆ ಮಾಡಲಾಗುವುದು.

ಹೀಗೆ ಕೇಂದ್ರ ಸರಕಾರ ಈಗ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ನೀಡಿರುವ ಒಪ್ಪಿಗೆಯಂತೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಮತ್ತು ಭೌತಿಕ ಅಭಿವೃದ್ಧಿಗಾಗಿ, ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದಾಗಿದೆ ಎನ್ನುವುದು ಇಲ್ಲಿ ವಿಶೇಷವಾಗಿದೆ. ಇಂತಹ ಗೆಲುವಿನಿಂದಾಗಿ ಎರಡು ದಶಕಗಳಿಂದ ಈ ಭಾಗದಲ್ಲಿ ಹೋರಾಟ ಮಾಡುತ್ತಾ ಬಂದ ಹೋರಾಟಗಾರರಿಗೆ ಹಲವಾರು ವರ್ಷಗಳ ವನವಾಸ ಹಾಗೂ ಅಜ್ಞಾತವಾಸ ಮುಗಿಯುತ್ತಾ ಬರುತ್ತಿದೆ ಎಂದೆನಿಸುತ್ತಿದೆ.

ಇತ್ತೀಚಿನ ಇನ್ನೊಂದು ಬೆಳವಣಿಗೆಯಲ್ಲಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯ ಎಲ್ಲ ಪ್ರಕ್ರಿಯೆ ಪೂರ್ಣಗೊಂಡು ಜಾರಿಯಾಗುವವರೆಗೂ ನೇಮಕಾತಿಯ ಪದ್ಧತಿ ಬದಲಾಯಿಸಿ ಹೊರಗುತ್ತಿಗೆ ನೇಮಕ ಪದ್ಧತಿ ಅನುಸರಿಸಬೇಕೆಂದು, ಗುಲಬರ್ಗಾದಲ್ಲಿ ದಿನಾಂಕ ೧೪.೦೮.೨೦೧೨ರಂದು ಶ್ರೀ ವೈಜನಾಥ ಪಾಟೀಲರವರ ಅಧ್ಯಕ್ಷತೆಯಲ್ಲಿ ನಡೆದ 'ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ' ಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ. ೧೯೫೮ರಿಂದ ಈ ಭಾಗಕ್ಕೆ ನೇಮಕಾತಿಯಲ್ಲಿ ಆದ ಅನ್ಯಾಯ ಸರಿಪಡಿಸಲು ಅಲ್ಲಿಂದಲೇ ಈ ಭಾಗದವರಿಗೆ ಬ್ಯಾಕ್‌ಲಾಗ್ ಮೂಲಕ ಹುದ್ದೆಗಳನ್ನು ಭರ್ತಿ ಮಾಡಬೇಕು, ಈಗ ಹೊಸ ನೇಮಕ ಮಾಡಿದರೆ ಗುತ್ತಿಗೆ ಆಧಾರದಲ್ಲಿರಬೇಕು ಕೇಂದ್ರ ಸರಕಾರ ೩೭೧ನೇ ಕಲಂ ತಿದ್ದುಪಡಿಗೆ ಅಂತಿಮ ರೂಪ ನೀಡಿ ಅಗತ್ಯ ಸೌಲಭ್ಯ ಕಲ್ಪಿಸಲು ಮುಂದಾಗಿ, ಅದಕ್ಕೆ ಸಮಿತಿ ರಚಿಸಿದರೆ ಆ ಸಮಿತಿಯಲ್ಲಿ ವೈಜನಾಥ ಪಾಟೀಲರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಬೇಕು, ಇದಕ್ಕೆ ರಾಜ್ಯ ಸರಕಾರ ಶಿಫಾರಸ್ಸು ಮಾಡಬೇಕು ಎಂದು ಸಭೆ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತು. ಒಟ್ಟಿನಲ್ಲಿ ೩೭೧ನೇ ಕಲಂ ತಿದ್ದುಪಡಿ ಹೈದರಾಬಾದ್ ಕರ್ನಾಟಕದ ಜನರಿಗೆ ಉದ್ಯೋಗವಕಾಶಗಳನ್ನು ಹೆಚ್ಚಿಸುವುದರ ಜೊತೆಗೆ, ವಿವಿಧ ಯೋಜನೆಗಳ ಲಾಭ ದೊರಕಿಸಿ ಕೊಡುವುದರೊಂದಿಗೆ ಇಲ್ಲಿನ ಜನರ ಬದುಕಿನಲ್ಲಿ ಹೊಸ ಬದಲಾವಣೆ ತರುವ, ಇಲ್ಲಿನ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಫಲವಾಗುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ತಿದ್ದುಪಡಿ ನಂತರದ ಹೆಜ್ಜೆ

ಗುಲಬರ್ಗಾ ವಿಭಾಗದ ಆರು ಜಿಲ್ಲೆಗಳ ಹಿಂದುಳಿದಿರುವ ಸಂಗತಿಯನ್ನು ಗಮನಿಸಿ ಕೇಂದ್ರ ಸರಕಾರವು ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿ ತಂದು ಈ ಪ್ರದೇಶದ ಅಭಿವೃದ್ಧಿಗೆ ವಿಶೇಷ ಸ್ಥಾನಮಾನ ನೀಡುವ ತೀರ್ಮಾನ ತೆಗೆದುಕೊಂಡಿರುವುದು ಸ್ವಾಗತಾರ್ಹ. ಏಕೆಂದರೆ ಈ ವಿಭಾಗದ ಆರು ಜಿಲ್ಲೆಗಳು ರಾಜ್ಯದ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿರುವುದು ಎಲ್ಲರಿಗೂ ತಿಳಿದಿದೆ. ಆರು ಜಿಲ್ಲೆಗಳ ಹಿಂದುಳಿದಿರುವಿಕೆಗೆ ಬಹುಮುಖಗಳಿವೆ. ಅವು ಜನಸಂಖ್ಯೆಯ ಬೆಳವಣಿಗೆ, ವರಮಾನ ಅಭಿವೃದ್ಧಿ ಸೂಚ್ಯಂಕ, ಆಧುನೀಕರಣ, ಕೈಗಾರಿಕೀಕರಣ ಹೀಗೆ ಎಲ್ಲ ದೃಷ್ಟಿಯಿಂದ ಹಿಂದುಳಿದಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವುದಕ್ಕಾಗಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ತರಲು ಕೇಂದ್ರ ಸರಕಾರವು ತಾತ್ವಿಕ ಒಪ್ಪಿಗೆ ನೀಡಿದ್ದು, ತಿದ್ದುಪಡಿಯ ಕರಡು ಸಿದ್ಧವಾಗುತ್ತಿದೆ. ಇದು ಸಂಸತ್ತಿನಲ್ಲಿ ಮಂಡನೆಯಾಗಿ ಚರ್ಚೆಯ ನಂತರ ತಿದ್ದುಪಡಿ ಜಾರಿಗೆ ಬರಲಿದೆ. ಇದೇ ಸಮಯದಲ್ಲಿ ಸಂವಿಧಾನದ ತಿದ್ದುಪಡಿ ಮೂಲಕ ದೊರೆಯುವ ಸೌಲಭ್ಯಗಳಿಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಎಲ್ಲ ಸಮಸ್ಯೆಗಳು ಬಗೆಹರಿಯಲಿವೆ ಎಂದೇ ಬಿಂಬಿಸಲಾಗುತ್ತಿದೆ. ಹಾಗೆಯೇ ತಮ್ಮ ಭಾಗ್ಯದ ಬಾಗಿಲು ತೆರೆಯಬಹುದೆಂಬ ನಿರೀಕ್ಷೆಯಲ್ಲಿ ಇಲ್ಲಿನ ಜನರಿದ್ದಾರೆ. ಇಲ್ಲಿನ ಎಲ್ಲ ಸಮಸ್ಯೆಗಳಿಗೂ ೩೭೧ನೇ ಕಲಂಗೆ ತಿದ್ದುಪಡಿಯೇ ಉತ್ತರ ಎಂದು ನಂಬಿಸಲಾಗುತ್ತಿದೆ.

ಆದರೆ ಇಲ್ಲಿ ಉದ್ಭವವಾಗುವ ಪ್ರಶ್ನೆಯೆಂದರೆ ೩೭೧ನೆಯ ಕಲಂನ ಜಾರಿಯಿಂದಲೇ ಹೈದರಾಬಾದ್ ಕರ್ನಾಟಕದ ಪ್ರಾದೇಶಿಕ ಅಸಮಾನತೆಯ ಸಮಸ್ಯೆ ನಿವಾರಣೆಯಾಗುತ್ತದೆಯೆ, ಇಲ್ಲಿನ ಜನರ ಬಾಳು ಹಸನವಾಗುತ್ತದೆಯೆ, ಜನರ ಆಶೋತ್ತರಗಳು ಎಷ್ಟರಮಟ್ಟಿಗೆ ಈಡೇರಬಲ್ಲವು, ಯಾವ ವರ್ಗಕ್ಕೆ ಯಾವ ಮಟ್ಟದಲ್ಲಿ ಅನುಕೂಲ ಆಗುತ್ತದೆ, ನಿಜವಾದ ಹಿಂದುಳಿದ ಮತ್ತು ಸೌಲಭ್ಯ ವಂಚಿತ ವರ್ಗದವರಿಗೆ ನ್ಯಾಯ ಸಿಗಬಹುದೆ ಎನ್ನುವುದನ್ನು ಯೋಚಿಸಬೇಕಾಗಿದೆ. ಏಕೆಂದರೆ ಈಗಾಗಲೇ ೩೭೧ನೇ ಕಲಂನ ಸೌಲಭ್ಯಗಳನ್ನು ಪಡೆದ ವಿದರ್ಭ, ತೆಲಂಗಾಣ ಪ್ರದೇಶಗಳ ಪರಿಸ್ಥಿತಿಯನ್ನು ಅವಲೋಕಿಸಿದಾಗ ಆ ಪ್ರದೇಶದ ಜನರಲ್ಲಿ ನೆಮ್ಮದಿ, ತೃಪ್ತಿ ಇದೆಯೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಪಕ್ಕದ ತೆಲಂಗಾಣ ಪ್ರದೇಶದತ್ತ ಕಣ್ಣು ಹಾಯಿಸಿದರೆ ವಾಸ್ತವದ ಅರಿವಾಗುತ್ತದೆ. ಸರಿಯಾಗಿ ಐವತ್ತಾರು ವರ್ಷಗಳ ಹಿಂದೆ ೩೭೧ನೇ ಕಲಂಗೆ ತಿದ್ದುಪಡಿ ಮೂಲಕ ವಿಶೇಷ ಸ್ಥಾನಮಾನ ಪಡೆದಿದ್ದ, ಆಂಧ್ರದ ತೆಲಂಗಾಣದಲ್ಲಿ ಅಸಮಾಧಾನದ ಹೊಗೆಯಾಡುತ್ತಿದ್ದು ತೆಲಂಗಾಣ ಹೋರಾಟದ ಸಮಿತಿಯಿಂದ ಪ್ರತ್ಯೇಕ ರಾಜ್ಯದ ಕೂಗು ಕೇಳಿ ಬಂದಿದ್ದು ಆ ಪ್ರದೇಶದಲ್ಲಿ ಗಂಭೀರ ಪರಿಸ್ಥಿತಿ ಇದೆ. ಮಹಾರಾಷ್ಟ್ರದ ವಿದರ್ಭದಲ್ಲಿಯೂ ತೃಪ್ತಿಯಿಲ್ಲ, ಅಂದರೆ ೩೭೧ರ ಕಲಂನಿಂದ ಪಡೆದಿರುವ ಸೌಲಭ್ಯಗಳಿಂದ ಮಾತ್ರಕ್ಕೆ ಅಲ್ಲಿನ ಸಮಸ್ಯೆಗಳು ಪೂರ್ಣ ನಿವಾರಣೆಯಾದಂತೆ ಕಾಣುವುದಿಲ್ಲ. ಇದರಿಂದ ನಾವು ಪಾಠ ಕಲಿಯಬೇಕಾಗಿದ್ದು, ಮುಂದಿಡುವ ಪ್ರತಿ ಹೆಜ್ಜೆಯ ಬಗ್ಗೆಯೂ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ.

ಪ್ರಸ್ತುತ ಹೈದರಾಬಾದ್ ಕರ್ನಾಟಕದ ಸ್ಥಿತಿಗತಿಗಳನ್ನು ನೋಡಿದಾಗ ಈಗಾಗಲೇ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಸಂಬಂಧಿಸಿದಂತೆ ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯ ಬಹುಮುಖ್ಯ

ಶಿಫಾರಸ್ಸಾದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನ ಕಾರ್ಯ ೨೦೦೭-೦೮ರಿಂದ ಜಾರಿಯಾಗಿದೆ. ಅದರಲ್ಲೂ ಗುಲಬರ್ಗಾ ವಿಭಾಗದ ಜಿಲ್ಲೆಗಳ ಅಭಿವೃದ್ಧಿಗಾಗಿ ರೂ. ೩೬೬೪ ಕೋಟಿಯಷ್ಟು ಹಣವನ್ನು ತೆಗೆದಿರಿಸಲಾಗಿದೆ. ಆದರೆ ಹಣದ ಸದ್ಬಳಕೆ ಆಗುತ್ತಿದೆಯೆ ಎನ್ನುವ ಅನುಮಾನ ಕಾಡುತ್ತಿದೆ. ಏಕೆಂದರೆ ಈ ಬಗ್ಗೆ ಇತ್ತೀಚಿಗೆ ನಡೆದ ಪ್ರಗತಿ ಪರಿಶೀಲನೆಯ ಸಂದರ್ಭದಲ್ಲಿ ಕಂಡು ಬಂದ ನಿಜಾಂಶವೆಂದರೆ ಹಣದಲ್ಲಿ ಶೇ. ೫೭.೩೮ರಷ್ಟನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದೆ. ಅಲ್ಲದೇ ಇನ್ನೂ ಆತಂಕದ ಸಂಗತಿಯೆಂದರೆ ೨೦೧೦-೧೧ನೆಯ ಸಾಲಿನಲ್ಲಿ ಮಂಜೂರಾದ ೨೪೯೪ ಕೋಟಿ ರೂ.ಗಳಲ್ಲಿ ಅಕ್ಟೋಬರ್‌ರವರೆಗೆ ವಿನಿಯೋಜನೆಯಾಗಿರುವ ಮೊತ್ತ ಕೇವಲ ೬೪೬ ಕೋಟಿ ರೂ.(ಶೇ. ೨೬.೨೨) ಮಾತ್ರ.

ಗುಲಬರ್ಗಾ ವಿಭಾಗಕ್ಕೆ ೨೦೧೦-೧೧ನೇ ಸಾಲಿನಲ್ಲಿ ಸರಕಾರ ಒದಗಿಸಿದ ಒಟ್ಟು ಮೊತ್ತ ೩೭೦೬ ಕೋಟಿ ರೂ.ಗಳಷ್ಟು, ಎಂದರೆ ಇದು ಸಣ್ಣ ಮೊತ್ತವೇನಲ್ಲ. ಆದರೆ ಇದನ್ನು ಪೂರ್ಣವಾಗಿ ಬಳಸಿಕೊಳ್ಳಲು ನಮಗೆ ಸಾಧ್ಯವಾಗುತ್ತಿಲ್ಲ. ಈ ವಿಭಾಗದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅರ್ಥಶಾಸ್ತ್ರ ತಜ್ಞರ ಅಭಿಪ್ರಾಯವೇನೆಂದರೆ ಗುಲಬರ್ಗಾ ವಿಭಾಗದಲ್ಲಿ ಸಂಪನ್ಮೂಲವನ್ನು ಹೀರಿಕೊಳ್ಳುವ ಗುಣ ಕಡಿಮೆ ಇದೆ. ಅಪಾರ ಪ್ರಮಾಣದಲ್ಲಿ ಹಣ ವಿಭಾಗಕ್ಕೆ ಬರುತ್ತಿದೆಯಾದರೂ ಅದಕ್ಕೆ ತಕ್ಕಂತೆ ವಿಭಾಗದ ಜಿಲ್ಲೆಗಳಲ್ಲಿ ಅದಕ್ಕೆ ಸೂಕ್ತವಾದ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಜನರನ್ನು ಅದರಲ್ಲಿ ತೊಡಗಿಸಿಕೊಂಡು ಅಭಿವೃದ್ಧಿಯನ್ನು ಮಾಡಿಕೊಳ್ಳುವುದು ಇಲ್ಲಿನವರಿಗೆ ಸಾಧ್ಯವಾಗಿಲ್ಲ.

ಇನ್ನೊಂದು ವಿಷಾದದ ಸಂಗತಿಯೆಂದರೆ ಈ ವಿಭಾಗದ ಮೂಲ ಸಮಸ್ಯೆಯನ್ನು ನಾವು ಇದುವರೆಗೂ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ. ಇಲ್ಲಿನ ಅನಕ್ಷರತೆ, ಅತ್ಯಧಿಕ ಪ್ರಮಾಣದಲ್ಲಿರುವ ಭೂರಹಿತ ದಿನಗೂಲಿಗಳ ಪ್ರಮಾಣ ಆತಂಕಕಾರಿ ಪ್ರಮಾಣದಲ್ಲಿರುವ ಶಾಲೆ ಬಿಡುವ ಮಕ್ಕಳ ಪ್ರಮಾಣ, ಮಹಿಳಾ ದಿನಗೂಲಿ ದುಡಿಮೆಗಾರರ ಬವಣೆ, ವಲಸೆ ಸಮಸ್ಯೆ, ಭೂ ಮಾಲೀಕತ್ವದಲ್ಲಿ ತೀವ್ರ ಅಸಮಾನತೆ, ಸವಾಲಿಗೆ ತಕ್ಕಂತಹ ಸಾಮರ್ಥ್ಯವಿಲ್ಲದ ಸರಕಾರಿ ಅಧಿಕಾರಿವರ್ಗ, ಅಭಿವೃದ್ಧಿಯೆಂದರೆ ಬೆಂಗಳೂರು ಮಾತ್ರವೇ ಎಂದು ನಂಬಿರುವ ಜನಪ್ರತಿನಿಧಿಗಳ ಮನೋಭಾವ ಮುಂತಾದ ಸಂಗತಿಗಳು ಇರುವಾಗ ಸಂವಿಧಾನದ ಪರಿಚ್ಛೇದ ೩೭೧ರ ಚೌಕಟ್ಟಿಗೆ ಗುಲಬರ್ಗಾ ವಿಭಾಗವನ್ನು ತರುವುದರಿಂದ ಎಲ್ಲಾ ಸಮಸ್ಯೆ ಬಗೆಹರಿದು ಬಿಡುತ್ತವೆಯೇ ಎನ್ನುವುದು ಚಿಂತನೆ ಮಾಡಬೇಕಾದ ಗಂಭೀರ ವಿಷಯವಾಗಿದೆ. ಈ ಕಲಂ ಅನ್ವಯ ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಭಾಗದ ಅಭ್ಯರ್ಥಿಗಳಿಗೆ ಮೀಸಲು ನೀಡುವುದರಿಂದ ಎಲ್ಲಾ ಸಮಸ್ಯೆ ಬಗೆಹರಿಯುವುದಿಲ್ಲ ಅಥವಾ ಬಡತನ ಅನಕ್ಷರತೆ, ಬಾಲ್ಯವಿವಾಹಗಳು, ವಲಸೆ ಹೋಗುವುದು, ಹಸಿವು, ಅಪೌಷ್ಟಿಕತೆಯ ಸಮಸ್ಯೆ ನಿವಾರಣೆಯಾಗುವುದಿಲ್ಲ. ಪ್ರಾದೇಶಿಕ ಅಸಮತೋಲನವೆಂದರೆ ಅದು ಹಿಂದುಳಿದ ಪ್ರದೇಶದಲ್ಲಿನ ಹಿಂದುಳಿದ ಜನರ ಪರಿಶಿಷ್ಟ ಜನಸಮುದಾಯ ಗಳ, ಬಡವರ ಶೋಷಿತರ ಹಿಂದುಳಿದವರ ಪ್ರಶ್ನೆಯಾಗಿದೆ.

ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ನೂರಾರು ಎಕರೆ ಜಮೀನು ಹೊಂದಿರುವ ರೈತ ಒಂದು ಕಡೆಯಾದರೆ, ಒಂದೂ ಎಕರೆ ಜಮೀನು ಇಲ್ಲದ ರೈತ ಇನ್ನೊಂದು ಕಡೆ ಇದ್ದಾನೆ. ಇಂತಹ

ಪ್ರದೇಶದಲ್ಲಿ ೩೭೧ನೇ ಕಲಂ ತಿದ್ದುಪಡಿಯಿಂದ ಜಮೀನ್ದಾರಿಕೆ ಪದ್ಧತಿ ಹೋಗಿ, ಬಡವರಿಗೆ ಭೂರಹಿತರಿಗೆ ಹಂಚುವುದಾದರೆ, ಅಸಮಾನತೆಯ ನಿವಾರಣೆಗೆ ಸಹಾಯಕವಾಗುವುದಾದರೆ ಇದು ಸ್ವಾಗತಾರ್ಹ. ಕಲಂನಿಂದ ಸಿಗುವ ರಾಜಕೀಯ ಮೀಸಲಾತಿ ಬಡವರಿಗೆ, ನಿರ್ಲಕ್ಷಿತ ವರ್ಗದವರಿಗೆ, ಕೆಳವರ್ಗದವರಿಗೆ, ಬಡ ಕೂಲಿ ಕಾರ್ಮಿಕರಿಗೆ ಸಿಗುವುದಾದರೆ ಸ್ವಾಗತಾರ್ಹ. ಆದರೆ ಮೀಸಲಾತಿ ಮುಂತಾದ ಸೌಲಭ್ಯಗಳು ಮತ್ತೆ ಶ್ರೀಮಂತರಿಗೆ, ಜಮೀನ್ದಾರರಿಗೆ, ಉಳ್ಳವರಿಗೆ ದೊರೆತು ಶ್ರೀಮಂತರು ಶ್ರೀಮಂತರಾಗುತ್ತಾ, ಬಡವರು ಬಡವರಾಗುತ್ತಾ ಉಳಿದರೆ ಕಲಂನ ಪ್ರಯೋಜನವಾದರು ಏನು ಎನ್ನುವ ಪ್ರಶ್ನೆಗೆ ಉತ್ತರ ಕಂಡು ಕೊಳ್ಳಬೇಕು.

ಹೀಗಾಗಿ ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಭೌಗೋಳಿಕ, ಔದ್ಯೋಗಿಕ ಸ್ಥಿತಿಗತಿನುಗುಣವಾಗಿ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಈ ಭಾಗದಿಂದ ಗುಳೆ ಹೋಗುವುದನ್ನು ತಪ್ಪಿಸಲು ನಿರಂತರ ಉದ್ಯೋಗ ಸಿಗುವ ಹಾಗೆ ಸಣ್ಣ ಹಾಗೂ ಭಾರೀ ಉದ್ಯಮಗಳನ್ನು ಸ್ಥಾಪಿಸಬೇಕು. ಸಾಕಷ್ಟು ನೀರಿನ ಲಭ್ಯತೆಯಿರುವುದರಿಂದಲೇ ತ್ವರಿತವಾಗಿ ಕಾಲಮಿತಿಯೊಳಗೆ ನೀರಾವರಿ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದು ರೈತಾಪಿ ಜನ ಗುಳೆ ಹೋಗುವುದನ್ನು ತಪ್ಪಿಸಬೇಕು. ಇಲ್ಲಿನ ಶೇ. ೩೨ರಷ್ಟು ದಲಿತರು ಮತ್ತು ಶೇ. ೨೩ರಷ್ಟು ಅಲ್ಪಸಂಖ್ಯಾತರಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಬೇಕು. ಜನಸಂಖ್ಯೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಅದರ ರಕ್ಷಣೆಗೆ ಮುಂದಾಗ ಬೇಕಾಗಿದೆ. ಒಂದು ವೇಳೆ ಹೀಗಾಗದಿದ್ದರೆ, ಮುಂದೊಂದು ದಿನ ಇವುಗಳನ್ನು ಜಾರಿಗೆ ತರಲು ಇನ್ನೊಂದು ಜನಾಂದೋಲನ ರೂಪಿಸುವ ಅಗತ್ಯ ಬೀಳಲೂಬಹುದು. ಏಕೆಂದರೆ ನಂಜುಂಡಪ್ಪ ವರದಿ ಅನುಷ್ಠಾನಕ್ಕಾಗಿ ಕೋಟ್ಯಾಂತರ ರೂಪಾಯಿ ಬಿಡುಗಡೆ ಮಾಡುತ್ತಿರುವುದಾಗಿ ತಿಳಿಸುವ ರಾಜ್ಯ ಸರಕಾರವು ಈಗಾಗಲೇ ಜಾರಿಯಲ್ಲಿದ್ದ ಯೋಜನೆಗಳ ಅನುಷ್ಠಾನ ಮಾಡುವುದಕ್ಕೆ ಆ ಹಣ ಬಳಸುತ್ತಿದೆ. ಅಂದರೆ ಚಾಲ್ತಿಯಲ್ಲಿರುವ ಯೋಜನೆಗಳ ಜೊತೆಯಲ್ಲಿ ಹೆಚ್ಚುವರಿ ಅನುದಾನ ನೀಡುವ ಬದಲು ಶೀರ್ಷಿಕೆ ಬದಲು ಮಾಡಿ ದಿಕ್ಕು ತಪ್ಪಿಸಲಾಯಿತು. ಇದೇ ರೀತಿಯ ಕ್ರಮಗಳು ತೆಲಂಗಾಣ ಪ್ರದೇಶದಲ್ಲಿ ನಡೆದಿವೆ. ಅದು ತೆಲಂಗಾಣ ನಿವಾಸಿಗಳ ಅಸಹನೆ ಮತ್ತು ಬೇಸರಕ್ಕೂ ಕಾರಣವಾಗಿವೆ. ಅಭಿವೃದ್ಧಿಯ ಹೆಸರಿನಲ್ಲಿ ಹಣ ಹರಿದು ಬಂದರೆ ಮಾತ್ರ ಸಾಲದು, ಅದು ಸದ್ವಿನಿಯೋಗ ಆಗುವಂತೆ ನೋಡಿಕೊಳ್ಳುವ ಅಗತ್ಯವಿದೆ. ದೂರದೃಷ್ಟಿ ಇರುವ ಮುಖ್ಯಮಂತ್ರಿ ಮತ್ತು ಜನಪ್ರತಿನಿಧಿಗಳು ಕಾಳಜಿ ವಹಿಸಿ ಯೋಜನೆ ರೂಪಿಸಿದರೆ ಮಾತ್ರ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಲಾಭ ಆಗುತ್ತದೆ. ವಿಶೇಷವಾಗಿ ಇಲ್ಲಿನ ಜನಪ್ರತಿನಿಧಿಗಳು ಇಚ್ಛಾಶಕ್ತಿ ತೋರಿಸಿ ವಿಭಿನ್ನ ವಿಶಿಷ್ಟ ಯೋಜನೆ ರೂಪಿಸಿ ಅವುಗಳನ್ನು ಜಾರಿಗೆ ತಂದರೆ ಮಾತ್ರ ಪ್ರಗತಿ ಸಾಧ್ಯ ಇಲ್ಲದಿದ್ದರೆ ಅದು ಮತ್ತೆ ಕನ್ನಡಿಯೊಳಗಿನ ಗಂಟಾಗಿಯೇ ಉಳಿಯಲಿದೆ.

ಹೀಗಾಗಿ ಮೊದಲು ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸುಗಳು ಸರಿಯಾಗಿ ಅನುಷ್ಠಾನಗೊಳ್ಳುವುದರ ಬಗ್ಗೆ, ಈಗಾಗಲೇ ಇರುವ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು

ಪರಿಣಾಮಕಾರಿಯಾಗಿ ಮತ್ತು ಪೂರ್ಣವಾಗಿ ಬಳಸಿಕೊಳ್ಳುವುದು ಏಕೆ ಸಾಧ್ಯವಾಗಿಲ್ಲ ಎನ್ನುವುದಕ್ಕೆ ಉತ್ತರ ಕಂಡುಕೊಳ್ಳುವುದರ ಬಗ್ಗೆ ಯೋಚಿಸಬೇಕಾಗಿದೆ. ಅದನ್ನು ಬಿಟ್ಟು ೩೭೧ನೇ ಕಲಂನ್ನೇ ನಂಬಿಕೊಂಡು ಸುಮ್ಮನೆ ಕೂರುವುದು ಸರಿಯಲ್ಲ. ಇದು ಈ ಪ್ರದೇಶದ ಎಲ್ಲಾ ಸಮಸ್ಯೆಗಳಿಗೂ ಸಿದ್ಧೌಷದವಲ್ಲ. ಅದು ಹೇಗೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡಿದೆ ಎಂಬುದು ವಿದರ್ಭ ಮತ್ತು ತೆಲಂಗಾಣಗಳಲ್ಲಿನ ವಸ್ತುಸ್ಥಿತಿಯಿಂದ ತಿಳಿಯುತ್ತದೆ. ಹೀಗಾಗಿ ಕೇವಲ ೩೭೧ನೇ ಕಲಂಗೆ ತಿದ್ದುಪಡಿ ಆದ ಮಾತ್ರಕ್ಕೆ ಯಾವ ಪವಾಡವೂ ಸಂಭವಿಸುವುದಿಲ್ಲ. ಆದ್ದರಿಂದ ಅದರ ಬಗ್ಗೆ ತುಂಬಾ ನಿರೀಕ್ಷೆಯಿಟ್ಟು ಕೊಳ್ಳುವುದರ ಬದಲಾಗಿ ಅಭಿವೃದ್ಧಿಯ ಆಶಾಭಾವನೆ ಇರಲಿ.

ಒಟ್ಟಿನಲ್ಲಿ ಸಂವಿಧಾನದ ೩೭೧ನೇ ಕಲಂನ ತಿದ್ದುಪಡಿಯಿಂದ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಿಗುವ ವಿಶೇಷ ಸೌಲಭ್ಯಗಳ ಬಗ್ಗೆ ಚಿಂತನೆ ಮಾಡುವಾಗ ಲಾಭ ನಷ್ಟದ ಪ್ರಶ್ನೆ ಬರುವುದಿಲ್ಲ. ಈಗ ಈ ಭಾಗಕ್ಕೆ ಸರಕಾರದಿಂದ ದೊರೆಯುವ ಅನುದಾನದ ಜೊತೆಗೆ ವಿಶೇಷ ಅನುದಾನಗಳೂ ಲಭ್ಯವಾಗುವುದ ರಿಂದ ಇಲ್ಲಿನ ಅಭಿವೃದ್ಧಿಯ ಜೊತೆಗೆ ಇಲ್ಲಿನ ಜನರಿಗೂ ಸೌಲಭ್ಯಗಳು, ಅವಕಾಶಗಳು ದೊರೆತು ಹಿಂದುಳಿದ ಮತ್ತು ಅಸಮಾನತೆಯ ಕೂಗು ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದು ಹಾಗೂ ಕಡಿಮೆಯಾಗಬಹುದೆನ್ನುವ ಆಶಾಭಾವನೆ ಇಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲ. ಯಾವ ವರ್ಗಕ್ಕೂ ಯಾವ ಕ್ಷೇತ್ರಕ್ಕೂ ಇದರಿಂದ ಅಡ್ಡ ಪರಿಣಾಮವಾಗುವುದಿಲ್ಲ. ಹಾಗೆಯೇ ಈ ಭಾಗಕ್ಕೆ ೩೭೧ನೇ ಕಲಂನ ತಿದ್ದುಪಡಿ ಮಾಡುವಾಗ ತೆಲಂಗಾಣ ಮಾದರಿ, ವಿದರ್ಭ ಮಾದರಿ ಎನ್ನುವ ವಿಚಾರಗಳ ಕಡೆ ಗಮನ ಕೊಡದೆ, ಚರ್ಚೆ ಮಾಡದೇ, ಹೈದರಾಬಾದ್ ಕರ್ನಾಟಕದ ಮಾದರಿ ಎನ್ನುವ ರೀತಿಯಲ್ಲಿ ತಿದ್ದುಪಡಿಯಾಗ ಬೇಕು. ಏಕೆಂದರೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ತನ್ನದೇ ಆದ ಜ್ವಲಂತ ಸಮಸ್ಯೆಗಳಿವೆ, ಸವಾಲುಗಳಿವೆ, ಹೀಗಾಗಿ ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ಇನ್ನಾದರೂ ಹೈದರಾಬಾದ್ ಕರ್ನಾಟಕ ಪ್ರದೇಶವು ಹಿಂದುಳಿದ ಅಸಮಾನತೆಗೀಡಾದ ಪ್ರದೇಶ ಎನ್ನುವ ಹಣೆಪಟ್ಟಿಯನ್ನು ಕಳಚಿ ಹಾಕಿ ಹೊಸ ಆಶಾಭಾವನೆಗಳೊಂದಿಗೆ ಹೊಸ ದಿಕ್ಕಿನಲ್ಲಿ ಸಾಗಲಿ ಎನ್ನವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಅಡಿಟಿಪ್ಪಣಿಗಳು

೧. ಭೈರಪ್ಪ ಕೆ., ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಮಾಜಿಕ ಚಿಂತನೆ, ಪುಟ ೦೧.

೨. ಸಂದರ್ಶನ : ಡಾ. ಶರಣಬಸವಪ್ಪ ಅಪ್ಪ, ಮಹಾದಾಸೋಹ ಪೀಠಾಧಿಪತಿಗಳು, ಶ್ರೀ ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ.

೩. ಶಿವರಾಜ ಪಾಟೀಲ, ಪೂಜ್ಯಶ್ರೀ ದೊಡ್ಡಪ್ಪ ಅಪ್ಪ, ಪುಟ ೨೭.

೪. ಮೀನಾಕುಮಾರಿ ಪಾಟೀಲ, ಡಾ. ಚನ್ನಬಸವಪ್ಪ ಪಟ್ಟದ್ದೇವರು, ಪುಟ ೩೭.

೫. ಮೇಲಿನದೆ., ಪುಟ ೫೪.

೬. ಪಾಟೀಲ ಹೆಚ್.ಎಸ್., ಕೊಪ್ಪಳ ಶ್ರೀ ಗವಿಸಿದ್ದೇಶ್ವರರು, ಪುಟ ೪೨.

೭. ಸಂದರ್ಶನ : ಅಲ್ಲಮಪ್ರಭು ಬೆಟ್ಟದೂರ, ಕೊಪ್ಪಳ.

೮. ಸಂದರ್ಶನ : ಅಮೀನಾ ಬೇಗಂ, ಗುಲಬರ್ಗಾ.

೯. ಸಂದರ್ಶನ : ಶೇಕ್ ನೂರುಲ್ಲಾ, ಉಪನ್ಯಾಸಕರು, ಗುಡೇಕೋಟೆ.

೧೦. ಸಂದರ್ಶನ : ಫಾದರ್ ಆಂತೋಣಿ ಫರ್ನಾಂಡೀಸ್, ಸೇಕ್ರೇಡ್ ಹಾರ್ಟ್ ಚರ್ಚ್, ಹೊಸಪೇಟೆ.

೧೧. ಮೇಲಿನದೆ.

೧೨. ಮೋಹನ್‌ಕೃಷ್ಣ ರೈ, ಚರಿತ್ರೆ ಎಂ.ಎ., ಪತ್ರಿಕೆ ೪, ಪುಟ ೧೫೪.

೧೩. ಚಂದ್ರಶೇಖರ ಟಿ.ಆರ್., ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರ ಸಮಿತಿ ವರದಿ, ಪುಟ ೧೦.

೧೪. ಲೇಖನ : ಚಂದ್ರಶೇಖರ ಟಿ.ಆರ್., ಹೊಸತು, ಪುಟ ೨೧.

೧೫. ಅಂಕಿ-ಅಂಶಗಳು : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲ ಕೇಂದ್ರ, ಗುಲಬರ್ಗಾ.

೧೬. ಬಸವರಾಜ ಟಿ. ಕುಮ್ನೂರ, ಡಾ. ನಂಜುಂಡಪ್ಪ ವರದಿ ಮತ್ತು ಅನುಷ್ಠಾನ, ಗುಲಬರ್ಗಾ, ಪುಟ ೪೭-೪೮.

೧೭. ಪಾಲೇಕರ್ ಎಸ್.ಎ., ಇಂಡಿಯನ್ ಕಾನ್‌ಸ್ಟಿಟೂಷನ್, ಪುಟ ೧೩೧.

೧೮. ಈರಣ್ಣ ಜೆ.ಎಲ್., ಹೈದರಾಬಾದ್ ಕರ್ನಾಟಕದ ಅಸಮಾನತೆ, ಸಂವಿಧಾನದ ೩೭೧ನೇ ಕಲಂ ಜಾರಿ: ಸವಾಲು, ಪುಟ ೭.

೧೯. ನೋಶಿರ್‌ವಾನ್ ಹೆಚ್., ಜಾಬ್‌ವಾಲಾ, ದ ಕಾನ್‌ಸ್ಟಿಟ್ಯೂಶನ್ ಆಫ್ ಇಂಡಿಯಾ, ಪು. ೨೬೯.

೨೦. ಪ್ರಜಾವಾಣಿ, ೧೮.೦೮.೨೦೧೨.

೨೧. ಪೈಲೀ ಎಂ.ವಿ., ಇಂಡಿಯನ್ ಕಾನ್‌ಸ್ಟಿಟ್ಯೂಶನ್, ಪುಟ ೩೭೫.

೨೨. ವೆಂಕಟೇಶ್ ಕೆ., ಸರೋಜಾ ಬಿ. (ಸಂ), ಹೈದರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು, ಪುಟ ೮೨.

೨೩. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕ ಹಾಡು-ಪಾಡು, ಪುಟ ೪೭.

೨೪. ಬಸವರಾಜ ಟಿ. ಕುಮ್ನೂರ, ಡಾ. ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ, ಪುಟ ೪೭.

೨೫. ಮಹಾಬಲೇಶ್ವರಪ್ಪ ಬಿ.ಸಿ., ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು, ಪುಟ ೧೪೭.

೨೬. ಸಂದರ್ಶನ : ಸುರೇಶ್ ಜಂಗ್ಲಿ, ನಿರ್ದೇಶಕರು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲ ಕೇಂದ್ರ, ಗುಲಬರ್ಗಾ.

೨೭. ವೆಂಕಟೇಶ್ ಕೆ., ಸರೋಜ ಬಿ. (ಸಂ), ಹೈದರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು, ಪುಟ ೮೫.

❑❑❑

ಅಧ್ಯಾಯ ಆರು

ಉಪಸಂಹಾರ

ಅಧ್ಯಾಯ ಆರು

ಉಪಸಂಹಾರ

ಭಾರತದ ನಕಾಶೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ದಖನ್ ಪ್ರಸ್ಥಭೂಮಿಯಲ್ಲಿ ಸಮಾವೇಶಗೊಂಡಿದೆ. ಶಿಲಾಯುಗ ಕಾಲದಿಂದಲೂ ಮಾನವನ ಚಟುವಟಿಕೆಯ ನೆಲೆಯಾದ ಈ ಪ್ರದೇಶವು ಕರ್ನಾಟಕದ ಅನೇಕ ರಾಜಮನೆತನಗಳ ಉಗಮ ಮತ್ತು ವಿಕಾಸಕ್ಕೆ ಸಾಕ್ಷಿಯಾಗಿದೆ. ವಸಾಹತುಶಾಹಿಗಳ ಮತ್ತು ದೇಶೀಯ ಅರಸರ ಸಂಘರ್ಷಗಳ ನಂತರ ಮುಸ್ಲಿಂರ ಆಡಳಿತಕ್ಕೆ ಒಳಪಟ್ಟು ಮೊಗಲೈ ಪ್ರದೇಶ ಎಂದೇ ಕರೆಯಲ್ಪಟ್ಟಿತು. ನಂತರ ಹೈದರಾಬಾದ್ ನಿಜಾಮರ ಆಡಳಿತಕ್ಕೊಳಪಟ್ಟಿದ್ದ ಇದು ಸುಮಾರು ಎರಡೂವರೆ ಶತಮಾನಗಳ ಕಾಲ ಇವರ ಆಡಳಿತಕ್ಕೊಳಪಟ್ಟಿದ್ದರಿಂದಾಗಿ ಹೈದರಾಬಾದ್ ಕರ್ನಾಟಕ ಎಂದೇ ಕರೆಸಿಕೊಳ್ಳುತ್ತಿದ್ದ ಈ ಭಾಗವು ಇಂದಿಗೂ ಅದೇ ಹೆಸರಿನಿಂದ ಕರೆಯಲ್ಪಡುತ್ತಿದೆ. ಇದು ಭೌಗೋಳಿಕತೆ, ಭಾಷೆ, ಸಂಪ್ರದಾಯ ಮುಂತಾದವುಗಳಲ್ಲಿ ಬಹಳ ವಿಭಿನ್ನತೆಯನ್ನು ಹೊಂದಿರುವ ಪ್ರದೇಶವಾಗಿದ್ದು ಚಾರಿತ್ರಿಕ ದೃಷ್ಟಿಯಿಂದ ಸಮಾಜಶಾಸ್ತ್ರಜ್ಞರು ನಿರಂತರವಾಗಿ ಅಧ್ಯಯನ ಮಾಡ ಬೇಕಾದಂತಹ ಒಂದು ಪ್ರದೇಶವಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶ ಮೊಗಲರಿಂದ, ಬಿಜಾಪುರದ ಆದಿಲ್‌ಶಾಹಿಗಳಿಂದ, ಹೈದರಾಬಾದಿನ ನಿಜಾಮರಿಂದ ಪದೇ ಪದೇ ಆಕ್ರಮಣಕ್ಕೆ ತುತ್ತಾದಂತಹ ಪ್ರದೇಶವಾಗಿದೆ. ಒಂದು ಕಡೆ ಆಕ್ರಮಣಗಳು ಮತ್ತು ನಿರಂತರ ಲೂಟಿಯಿಂದ ಇಲ್ಲಿನ ಸಂಪತ್ತು ಬರಿದಾಗುತ್ತಿದ್ದರೆ, ಇನ್ನೊಂದೆಡೆ ಪ್ರಕೃತಿ ವಿಕೋಪಗಳಿಂದ ಬರಡಾಗುತ್ತಾ, ಬಡತನಕ್ಕೀಡಾಗುತ್ತಾ, ಅಭಿವೃದ್ಧಿ ಕುಂಟಿತಗೊಳ್ಳುತ್ತಾ ಸಾಗಿತು. ಹೀಗಾಗಿ ಇಲ್ಲಿನ ಜನ ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ನಂತರ ನಿಜಾಮನ ಆಳ್ವಿಕೆಯಿಂದ ಬಿಡುಗಡೆ ಹೊಂದಲು ವಿಮೋಚನಾ ಹೋರಾಟವನ್ನು ಆರಂಭಿಸಿ ನಂತರ ವಿಶಾಲ ಕರ್ನಾಟಕ ರಾಜ್ಯಕ್ಕೆ ಬಹು ಆಶಾಭಾವನೆಯಿಂದ ಸೇರಿಕೊಂಡರು. ಆಗ ಅವರಿಗೆ ತಾವು ಸ್ವತಂತ್ರಗೊಂಡ ಬಗ್ಗೆ ಬಹಳ ಹೆಮ್ಮೆ ಮತ್ತು ಸಮಾಧಾನ ಇತ್ತು. ಏಕೆಂದರೆ ಸ್ವಾತಂತ್ರ್ಯದ ಪರಿಕಲ್ಪನೆ ಸತತವಾಗಿ ಹಾನಿಗೊಳಗಾದ ಜನರಿಗೆ ಬಹಳ ದಟ್ಟವಾಗಿರುತ್ತೆ. ಇದು ಇತರ ಕರ್ನಾಟಕದ ಜನರಿಗೆ

ಅಷ್ಟಾಗಿ ಇಲ್ಲ. ಆದರೆ ಈ ಭಾಗದವರಿಗೆ ಸ್ವಾತಂತ್ರ್ಯದ ಅರ್ಥ ಮತ್ತು ಲಭ್ಯತೆ ಬಹಳ ಭಾವನಾತ್ಮಕವಾದುದು.

ಆದರೆ ದುರ್ದೈವದ ಸಂಗತಿ ಏನೆಂದರೆ, ಸ್ವಾತಂತ್ರ್ಯದ ನಂತರವೂ ಇಲ್ಲಿನ ಜನರ ಬದುಕು ಬದಲಾಗಲಿಲ್ಲ. ನೈಸರ್ಗಿಕ ವಿಕೋಪಗಳಿಂದ, ಜಮೀನ್ದಾರಿ ವ್ಯವಸ್ಥೆಯಿಂದ, ಸರಕಾರಗಳ ನಿರ್ಲಕ್ಷ್ಯದಿಂದ, ಇವರಿಗೆ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿ, ಅಭಿವೃದ್ಧಿ ಕಾರ್ಯಗಳು ಕುಂಟಿತಗೊಂಡು ಜನರು ಹತಾಶರಾಗತೊಡಗಿದರು. ಇದುವರೆಗೂ ಆಡಳಿತ ಮಾಡಿಕೊಂಡು ಬಂದಿರುವ ಹೆಚ್ಚು ಕಡಿಮೆ ಎಲ್ಲಾ ಸರಕಾರಗಳ ಆಡಳಿತ ನೀತಿ ಮನೋಸ್ಥಿತಿಯನ್ನು ಅವಲೋಕಿಸಿದರೆ ಅವರ ದೃಷ್ಟಿಯಲ್ಲಿ ಕರ್ನಾಟಕವೆಂದರೆ ಬೆಂಗಳೂರು ಹಾಗೂ ಅಭಿವೃದ್ಧಿ ಎಂದರೆ ಬೆಂಗಳೂರಿನ ಅಭಿವೃದ್ಧಿ ಎನ್ನುವ ಭಾವನೆಗಳನ್ನು ಹೊಂದಿದವರಾಗಿದ್ದುದು ಕಂಡು ಬರುತ್ತದೆ. ಇಂತಹ ಸಂಕುಚಿತ ಮನೋಭಾವನೆಯು ಈ ಭಾಗದ ನಿರ್ಲಕ್ಷ್ಯಕ್ಕೆ, ಅನಭಿವೃದ್ಧಿಗೆ ಕಾರಣವಾಗಿ ಇದು ಎಲ್ಲರ ದೃಷ್ಟಿಯಲ್ಲಿ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಟ್ಟಿಕೊಳ್ಳುವಂತಾಯಿತು.

ಈಗಾಗಲೇ ಶತಮಾನಗಳಿಂದ ಸತತ ಹಲ್ಲೆಗೊಳಗಾಗಿರುವಂತಹ, ಶೋಷಣೆಗೊಳಗಾಗಿರುವಂತಹ ನೊಂದ ಇಲ್ಲಿನ ಜನರ ಮನಸ್ಸು ಬಹಳ ಸೂಕ್ಷ್ಮವಾಗಿತ್ತು. ಹತಾಶೆಗೊಂಡ ಅವಮಾನಗೊಂಡ ಜನರು ಸಿಟ್ಟನ್ನು ಹತ್ತಿಟ್ಟುಕೊಳ್ಳಲಾಗದೆ ಕ್ರಮೇಣ ಇದನ್ನು ಹೊರಹಾಕತೊಡಗಿದರು. ಇದರ ಫಲವಾಗಿ ನಾನಾ ರೀತಿಯ ಪ್ರತಿಭಟನೆ, ಹೋರಾಟ ಚಳವಳಿಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಇಂತಹ ಪ್ರದೇಶದ ಸ್ವಾತಂತ್ರ್ಯೋತ್ತರ ಕಾಲದಿಂದ ಇಂದಿನವರೆಗಿನ ಸ್ಥಿತಿಗತಿಗಳು, ಹೋರಾಟಗಳು ಅವುಗಳ ಸಫಲತೆ, ವಿಫಲತೆಗಳನ್ನು ಅಧ್ಯಯನ ಮಾಡಿ ವಿಶ್ಲೇಷಣೆಗೆ ಒಳಪಡಿಸಿ ದಾಖಲು ಮಾಡುವಂತಹ ಒಂದು ಪ್ರಯತ್ನದ ಫಲವೇ ಈ ಮಹಾಪ್ರಬಂಧವಾಗಿದೆ. ಇಂತಹ ವಿಭಿನ್ನ ಪ್ರದೇಶವಾದ ಹೈದರಾಬಾದ್ ಕರ್ನಾಟಕದ ಮೇಲೆ ಅಧ್ಯಯನ ಕೈಗೊಂಡು ಹೈದರಾಬಾದ್ ಕರ್ನಾಟಕದ ಭೌಗೋಳಿಕತೆ ರಾಜಕೀಯ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅಲ್ಲಿನ ಸಾಮಾಜಿಕ ಸ್ಥಿತಿಗತಿಗಳು ಇಲ್ಲಿ ನಡೆದಂತಹ ಹೋರಾಟಗಳು ಅದರ ಪರಿಣಾಮಗಳು ಮತ್ತು ಪ್ರಸ್ತುತ ಹೋರಾಟಗಳ ದಿಕ್ಕು, ದೆಸೆ ಸಾಧಕ-ಬಾಧಕಗಳನ್ನು ಕಲೆ ಹಾಕುತ್ತಾ ವಿಶ್ಲೇಷಣೆಗೆ ಒಳಪಡಿಸಿ ದಾಖಲು ಮಾಡಲು ಪ್ರಯತ್ನಿಸಲಾಗಿದೆ.

ಇನ್ನು ಅಧ್ಯಯನದ ವಿಷಯ ಮತ್ತು ಅಧ್ಯಯನದ ವ್ಯಾಪ್ತಿ ವಿಶಾಲವಾಗಿದ್ದು ಕ್ಷೇತ್ರಕಾರ್ಯದ ಮೇಲೆ ಅವಲಂಬನೆಯಾಗಿರುವುದರಿಂದ ಮಾರ್ಗದರ್ಶಕರ ಸಹಾಯ ಮತ್ತು ಅನುಮತಿ ತೆಗೆದುಕೊಂಡು ಹೈದರಾಬಾದ್ ಕರ್ನಾಟಕದ ಅನೇಕ ಸಂಘಟನೆಗಳು, ಮುಖಂಡರು, ಹೋರಾಟಗಾರರು, ಸಾಹಿತಿಗಳು, ಪತ್ರಕರ್ತರು, ರಾಜಕಾರಣಿಗಳು, ಧಾರ್ಮಿಕ ಮುಖಂಡರು, ಮಹಿಳಾ ಹೋರಾಟಗಾರರು ಹಾಗೂ ಈ ಭಾಗದ ಚಳವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ತಮ್ಮನ್ನೇ ಅರ್ಪಿಸಿಕೊಂಡವರು ಮುಂತಾದವರ ಸಂದರ್ಶನ ತೆಗೆದುಕೊಳ್ಳಲಾಗಿದೆ. ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ, ಆಯಾ ವಲಯದ

ತಜ್ಞರೊಂದಿಗೆ, ಅನುಭವ ಹೊಂದಿದವರ ಸಂದರ್ಶನ ಕೈಗೊಂಡು ಅವರಿಂದ ಮಾಹಿತಿ ಪಡೆದು ದಾಖಲು ಮಾಡಲಾಗಿದೆ. ಸಂದರ್ಶನಗಳಲ್ಲಿ ಅವರು ಕೊಟ್ಟ ಮಾಹಿತಿಗಳು, ದಾಖಲೆಗಳು, ಅಭಿಪ್ರಾಯಗಳು ಬಹಳ ಉಪಯುಕ್ತವಾಗಿದ್ದು, ಇಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಬಹಳ ಸಹಾಯವಾಯಿತು. ಹೋರಾಟಗಳಲ್ಲಿ ಅರ್ಪಣಾ ಮನೋಭಾವದಿಂದ ಪಾಲ್ಗೊಂಡವರನ್ನು ಹಾಗೂ ಈ ಭಾಗದಲ್ಲಿ ಹುಟ್ಟಿ ಬೆಳೆದು ಇಲ್ಲಿನ ಸಮಸ್ಯೆಗಳನ್ನು ಅನುಭವಿಸಿದವರನ್ನೆ ಪ್ರಶ್ನೆ ಮಾಡಿ ಅವರಿಂದ ಪಡೆದ ಉತ್ತರಗಳಿಂದ ಸಾಕಷ್ಟು ಮಾಹಿತಿ ದೊರಕಿತು. ಅಲ್ಲದೆ ಇವರೆಲ್ಲಾ ಸಂದರ್ಶನಕ್ಕೆ ಒಪ್ಪಿಗೆ ಕೊಟ್ಟು, ಸಹಕರಿಸಿ ಪ್ರಸ್ತುತ ಅಧ್ಯಯನಕ್ಕೆ ಪ್ರೋತ್ಸಾಹ, ಹುರುಪು ನೀಡಿದ್ದು ಸಂಶೋಧನೆಗೆ ಹೆಚ್ಚಿನ ಬೆಲೆ ಬಂದಿತು.

ಆದರೆ ಇದೇ ಸಂದರ್ಭದಲ್ಲಿ ಕ್ಷೇತ್ರಕಾರ್ಯ ಮತ್ತು ಸಂದರ್ಶನದ ಸಮಯದಲ್ಲಿ ಅನೇಕ ತೊಂದರೆಗಳನ್ನು, ಸಮಸ್ಯೆಗಳನ್ನು, ಅಸಮಾಧಾನವನ್ನು, ಅಸಹಕಾರವನ್ನು ಅನುಭವಿಸಬೇಕಾಯಿತು. ಕೆಲವರು ಪೂರ್ವಗ್ರಹ ಪೀಡಿತರಾಗಿ ಮಾತನಾಡಿದರೆ ಇನ್ನು ಕೆಲವರು ನಿಷ್ಠುರವಾಗಿ ಯಾವುದನ್ನು ಹೇಳದೆ ಸುರಕ್ಷತಾ ವಲಯದೊಳಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಕೆಲವು ಮುಖಂಡರಂತೂ ಸಂದರ್ಶನ ನೀಡಲು ಮಾಹಿತಿ ನೀಡಲು ಮುಕ್ತವಾಗಿ ಸಹಕರಿಸಲಿಲ್ಲ. ಇದಕ್ಕೆ ಅವರ ವೈಯಕ್ತಿಕ ಸ್ವಾರ್ಥ, ತಿಳುವಳಿಕೆಯ ಕೊರತೆ, ಜಾತೀಯತೆ, ಪಕ್ಷ ಸಿದ್ಧಾಂತಗಳು, ಪಕ್ಷ ನಿಷ್ಠೆ, ಹೀಗೆ ಇನ್ನು ಅನೇಕ ಕಾರಣಗಳಿರಬಹುದು ಎನ್ನುವುದು ಅಧ್ಯಯನದ ಅನಿಸಿಕೆಯಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿ ವಿಸ್ತೃತವಾಗಿರುವುದರಿಂದ ಲಿಖಿತ ಮತ್ತು ಅಲಿಖಿತ ಮಾಹಿತಿಗಳಿಂದ ಇಡೀ ಪ್ರಬಂಧವನ್ನು ಕಟ್ಟುತ್ತಾ ಹೋಗಲಾಯಿತು. ಲಿಖಿತ ಮತ್ತು ಅಲಿಖಿತವಾಗಿ ಸಿಕ್ಕಂತಹ ಮಾಹಿತಿಗಳಿಂದ ಅಧ್ಯಯನ ಮಾಡುತ್ತಾ ಹೋದಾಗಲು ಅನೇಕ ಸಮಸ್ಯೆಗಳು ಎದುರಾದವು. ಉದಾಹರಣೆಗೆ ಲಿಖಿತ ದಾಖಲೆಗಳು ಸತ್ಯವಾಗಿದ್ದಾವೆಯೇ, ಶುದ್ಧವಾಗಿದ್ದಾವೆಯೇ ಎನ್ನುವುದನ್ನು ಪರಿಶೀಲಿಸುವುದು ಅತ್ಯಗತ್ಯ ಎನಿಸಿತು. ಉದಾಹರಣೆಗೆ ರಜಾಕಾರರ ವಿರುದ್ಧ ಹೋರಾಟ ಎಂದರೆ ಹಿಂದೂ ಮುಸ್ಲಿಂರ ನಡುವಿನ ಹೋರಾಟವೆಂದೇ ಅನೇಕ ದಾಖಲೆಗಳಲ್ಲಿ ದಾಖಲಿಸಲಾಗಿದೆ. ಇನ್ನು ಮೌಖಿಕವಾಗಿ ಸಿಕ್ಕಂತಹ ಆಧಾರಗಳು, ಉತ್ಪ್ರೇಕ್ಷೆಯಿಂದ, ವೈಭವೋಪೇತವಾಗಿ ಅಥವಾ ಯಾವುದೇ ದ್ವೇಷ ಮನೋಭಾವನೆಯಿಂದ ಇವೆಯೆ, ತಪ್ಪು ಗ್ರಹಿಕೆಗಳಿಂದ ಕೂಡಿದ್ದಾವೆಯೆ ಎನ್ನುವುದನ್ನು ಪರಿಶೀಲಿಸುವುದು ಇನ್ನೊಂದು ಕಡೆ ಆಗಿತ್ತು. ಇಂತಹ ಎಲ್ಲಾ ಅಂಶಗಳಿಗೆ ನಿರಂತರ ಅಧ್ಯಯನ, ಮುಖತಹ ಭೇಟಿ, ಮಾರ್ಗದರ್ಶಕರೊಂದಿಗೆ ಚರ್ಚೆ, ದಾಖಲೆಗಳ ವಿಶ್ಲೇಷಣೆ ಹಾಗೂ ತುಲನಾತ್ಮಕ ಅಧ್ಯಯನದಿಂದ ಉತ್ತರ ಸಿಗುತ್ತಾ ಬಂದಿತು. ಹೀಗೆ ವಾಸ್ತವಿಕತೆಯನ್ನು ದಾಖಲಿಸುವ ಉದ್ದೇಶದಿಂದ ವಿವಿಧ ರೀತಿಯಲ್ಲಿ ಮಾಹಿತಿಗಳನ್ನು ಅಧ್ಯಯನ ಮಾಡಿ ಒಂದು ಅಭಿಪ್ರಾಯಕ್ಕೆ ಬರಲು ಪ್ರಯತ್ನಿಸಲಾಗಿದೆ.

ಸಂಶೋಧನಾ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಿಗದಿತ ಕಾಲಾವಧಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಮಿತಿಗಳಿವೆ. ಈ ಮಿತಿಗಳಲ್ಲಿ ಅಧ್ಯಯನ

ಮಾಡಲಾಗಿದೆ. ಇದುವರೆಗೂ ದಾಖಲಾಗದ, ಬೆಳಕಿಗೆ ಬಾರದ, ಇಲ್ಲಿನ ಜನರಿಗೆ ತಿಳಿಯದೆ ಇರುವ ಹೊಸ ಅಂಶಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಆದರೂ ಇನ್ನು ಸಂಪೂರ್ಣ ತೃಪ್ತಿ ಇಲ್ಲ. ಇನ್ನೂ ಇದರ ಕುರಿತು ಅಧ್ಯಯನ ಕೈಗೊಳ್ಳುವ ವಿಷಯಗಳು ಸಾಕಷ್ಟು ಇವೆ. ಆದರೆ ಪ್ರಸ್ತುತ ಅಧ್ಯಯನಕ್ಕೆ ಕಾಲಮಿತಿ ಇರುವುದರಿಂದ ಇನ್ನು ಹೆಚ್ಚಿನ ವಿಷಯಗಳ ಕಡೆ ಗಮನಹರಿಸಲು ಸಾಧ್ಯವಾಗಿಲ್ಲ, ಹೀಗಾಗಿ ಪ್ರಸ್ತುತ ಅಧ್ಯಯನ ಮುಂದಿನ ಸಂಶೋಧನೆಗೆ ಒಂದು ಪುಟ್ಟ ಹೆಜ್ಜೆಯಾಗಿದೆ ಎನ್ನುವ ನಂಬಿಕೆ ಹೊಂದಲಾಗಿದೆ.

ಅಧ್ಯಯನ ಅವಧಿಯಲ್ಲಿ ಅರಿವಿಗೆ ಬಂದಿದ್ದೇನೆಂದರೆ ನೂರು, ಇನ್ನೂರು ವರ್ಷಗಳ ಹಿಂದಿನ ಹೈದರಾಬಾದ್ ಕರ್ನಾಟಕದ ಚಿತ್ರಣ ಮತ್ತು ಪರಿಸ್ಥಿತಿ ಈಗಿಲ್ಲ. ಇಂದು ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿಗಳಾಗಿವೆ. ಹೊಸ ನೀರಾವರಿ ಯೋಜನೆಗಳು, ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಹೆಚ್ಚಿವೆ. ಈ ಮೂಲಕ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಜನರು ವಿವಿಧ ರೀತಿಯ ಯೋಜನೆಗಳ ಲಾಭ ಪಡೆಯುತ್ತಿದ್ದಾರೆ. ರಸ್ತೆ, ರೇಲ್ವೆ, ದೂರಸಂಪರ್ಕ ವ್ಯವಸ್ಥೆಗಳಿಂದ ಈ ಪ್ರದೇಶವು ರಾಜ್ಯದ ಎಲ್ಲೋ ಒಂದು ಮೂಲೆಯಲ್ಲಿದೆ ಎನ್ನುವ ಭಾವನೆಯಿಂದ ಹೊರಬರುತ್ತಿದೆ. ಇಲ್ಲಿಯ ಜನರು ಬೇರೆ ಬೇರೆ ಭಾಗಗಳಿಗೆ ಹೋಗಿ ಬಂದು ಹೊಸ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಹೀಗಾಗಿ ನೂರು ವರ್ಷದ ಹಿಂದಿನ ಹೈದರಾಬಾದ್ ಕರ್ನಾಟಕದ ಚಿತ್ರಣದ ದೃಷ್ಟಿಯನ್ನಿಟ್ಟುಕೊಂಡು ನಾವಿಂದು ಈ ಭಾಗವನ್ನು ನೋಡುವಂತಿಲ್ಲ ಮತ್ತು ಅಧ್ಯಯನ ಮಾಡುವಂತಿಲ್ಲ. ಬದಲಾದ, ಬದಲಾಗುತ್ತಿರುವ, ನಿಧಾನವಾಗಿ ಅಭಿವೃದ್ಧಿ ಹೊಂದುತ್ತಿರುವ ಚಿತ್ರಣವನ್ನು, ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡುವ ಪಯತ್ನ ಮಾಡಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೂ, ಚಳವಳಿಗಳಿಗೂ ಅವಿನಾಭಾವ ಸಂಬಂಧವಿದೆ. ಹೀಗಾಗಿ ಜನ ಚಳವಳಿಯ ಭಾಗವಾಗಿಯೇ ಹೈದರಾಬಾದ್ ಕರ್ನಾಟಕ ಅಸ್ತಿತ್ವಕ್ಕೆ ಬಂದಿದೆ ಮತ್ತು ಗುರುತಿಸಿಕೊಂಡಿದೆ. ಕರ್ನಾಟಕದ ಇತರ ಭಾಗಗಳಲ್ಲಿ ನಡೆದ ಹೋರಾಟಗಳಿಗಿಂತ ಮುಂಚೆಯೇ ತಮ್ಮ ಹಕ್ಕಿಗಾಗಿ ಹೋರಾಟ ಮಾಡಿದ ದೊಡ್ಡ ಪರಂಪರೆ ಇಲ್ಲಿದೆ. ಆದರೆ ಸ್ವಾತಂತ್ರ್ಯ ಪಡೆದ ನಂತರವೂ ಊಳಿಗಮಾನ್ಯ, ಜಮೀನ್ದಾರಿ ವ್ಯವಸ್ಥೆ ಜೀವಂತ ಇರುವುದು ಈ ಭಾಗದ ದುಸ್ಥಿತಿಗೆ ಕಾರಣವಾಗಿ ಅನೇಕ ರೀತಿಯ ಹೋರಾಟಗಳು ರೂಪುಗೊಂಡವು. ಆರಂಭದಲ್ಲಿ ಚುನಾವಣೆ ವ್ಯವಸ್ಥೆ ಮೂಲಕ ನಂತರ ಶಸ್ತ್ರಾಸ್ತ್ರ ಬಳಕೆಯಿಂದ ಕ್ರಾಂತಿಕಾರಕ ಹೋರಾಟಗಳಾದವು. ಮಾರ್ಕ್ಸ್‌ವಾದಿ, ಲೆನಿನ್‌ವಾದಿ ರಾಜಕೀಯ ಸಂಘಟನೆಗಳು ಇಲ್ಲಿ ಜನ ಚಳವಳಿಯನ್ನು ರೂಪಿಸಿದವು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಭೂ ಸುಧಾರಣ ಕಾಯ್ದೆ ಜಾರಿ ಬಂದಾಗ ಊಳುವವನಿಗೆ ಭೂಮಿಯನ್ನು ಹಂಚಿಕೆ ಮಾಡಬೇಕಾಗಿತ್ತು ಆದರೆ ಹಾಗೆ ಆಗಲಿಲ್ಲ. ಈ ಭಾಗದಲ್ಲಿರುವಂತಹ ಜಮೀನ್ದಾರರು ಭೂಮಿಯನ್ನು ತಮ್ಮಲ್ಲೇ ಇಟ್ಟುಕೊಂಡರು. ಚುನಾವಣೆಗಳಲ್ಲಿ ಸ್ಪರ್ಧಿಸಿ ಪಟ್ಟಣ

ಪ್ರದೇಶಗಳಲ್ಲಿ ಗೆದ್ದು ಬರುತ್ತಿದ್ದರು, ಹಣಕಾಸಿನ ಸಂಪನ್ಮೂಲಕ್ಕೆ ಇವರದೇ ಆದ ಸಂಸ್ಥೆಗಳಿದ್ದವು. ಹೀಗಾಗಿ ರೈತರು ಮತ್ತಿತರರು ಮತ್ತೆ ಇವರ ನಿಯಂತ್ರಣದಲ್ಲೇ ಉಳಿಯಬೇಕಾಗಿ ಬಂತು. ಇದರಿಂದಾಗಿ ಜೀತದಾಳುಗಳು, ಕೂಲಿಕಾರರು, ಬಡವರು ಬಡವರಾಗುತ್ತಾ ಅದೇ ಸ್ಥಾನಮಾನದಲ್ಲಿ ಉಳಿದರು. ಇಡೀ ನಮ್ಮ ಒಟ್ಟು ಅಭಿವೃದ್ಧಿಯ ಮೂಲ, ನೆಲ ಮತ್ತು ನೀರು ಇವು ಮೂಲ ಸಂಪನ್ಮೂಲಗಳಾಗಿದ್ದು, ಇವುಗಳು ಯಾರೊಂದಿಗೆ ಇರುತ್ತವೆಯೋ ಅವರು ಆಳ್ವಿಕೆ ಮಾಡುತ್ತಾರೆ. ಆದರೆ ಈ ಭಾಗದಲ್ಲಿ ಇವೆರೆಡು ಸಹಿತ ದುಡಿಯುವವರ ಕೈಯಲ್ಲಿ ಇಲ್ಲ, ಹೆಚ್ಚು ಭೂಮಿ ಸಾಮಾನ್ಯ ಜನರ ಕೈಯಲ್ಲಿ ಇಲ್ಲ. ನೀರು ಸಾಮಾನ್ಯ ಬಡ ಜನರ ಅಭಿವೃದ್ಧಿಗೆ ಬಳಕೆ ಆಗುತ್ತಿಲ್ಲ, ಇವೆರಡೂ ಸಹಿತ ಕೆಲವೇ ಜನರ ಕಪಿಮುಷ್ಠಿಯಲ್ಲಿವೆ ಅವರು ಆ ಇಡೀ ಸಂಪತ್ತನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವ ಸಲುವಾಗಿ ಸಮಾಜದಲ್ಲಿ ಅಸಮಾನತೆಯ ಪರಿಸ್ಥಿತಿಯನ್ನು ಹುಟ್ಟುಹಾಕಿದ್ದಾರೆ. ಹೀಗಾಗಿ ಇಲ್ಲಿ ಶೋಷಣೆ ಮತ್ತು ಅಸಮಾನತೆ ಹೆಚ್ಚಾಗಿ ಆರ್ಥಿಕ, ಸಾಮಾಜಿಕ ಹೋರಾಟಗಳು ದೊಡ್ಡ ಮಟ್ಟದಲ್ಲಿ ನಡೆಯಲು ಕಾರಣವಾದವು.

೭೦ರ ದಶಕದಲ್ಲಿ ಹುಟ್ಟಿಕೊಂಡು ಪ್ರಚಾರ ಪಡೆದ ನವೋದಯ ಸಾಹಿತ್ಯ ಅಥವಾ ಬಂಡಾಯ ನವ್ಯ ಪ್ರಗತಿಪರ ಸಾಹಿತ್ಯವು ಹೈದರಾಬಾದ್ ಕರ್ನಾಟಕದ ಜನಸಾಮಾನ್ಯರ ಮೇಲೆ ಹೆಚ್ಚಾಗಿ ಪ್ರಭಾವ ಬೀರಲಿಲ್ಲ ಎನ್ನುವುದು ಸತ್ಯ. ಏಕೆಂದರೆ ಯಾರ ಉದ್ಧಾರಕ್ಕೆ ಸಾಹಿತ್ಯ ಹುಟ್ಟಿತ್ತೋ ಯಾರ ಪರವಾಗಿ ಬರೆದಿದ್ದರೋ, ಅವರಿಗೆ ಅದು ತಲುಪಲಿಲ್ಲ. ಯಾರ ವಿರುದ್ಧವಾಗಿ ಹುಟ್ಟಿಕೊಂಡಿತೊ ಅವರು ಅದನ್ನು ಓದಿ ಹೇಳಲಿಲ್ಲ. ಇಂತಹ ಜಂಜಾಟದಲ್ಲಿ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿ ಬಿಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಂತಾಗಿತ್ತು.

ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳು

ಹೈದರಾಬಾದ್ ಕರ್ನಾಟಕದ ಪ್ರಸ್ತುತ ಸ್ಥಿಗತಿಗಳನ್ನು ಗಮನಿಸಿದಾಗ, ಈ ಭಾಗದಲ್ಲಿ ಮೇಲ್ನೋಟಕ್ಕೆ ಕಂಡು ಬರುವ ಅಂಶವೆಂದರೆ ಇಲ್ಲಿ ಶಿಕ್ಷಣ ಸಂಘಟನೆ ಮತ್ತು ಹೋರಾಟದ ಕೊರತೆ ಎದ್ದು ಕಾಣುತ್ತಿದೆ. ಇಲ್ಲಿ ಹುಟ್ಟಿ ನಡೆದು ಹೋಗಿರುವ ಚಳವಳಿಗಳನ್ನು ಅವಲೋಕಿಸಿದಾಗ ಇಲ್ಲಿನ ಚಳವಳಿಗಳ ವಿಶಿಷ್ಟ ಲಕ್ಷಣವೆಂದರೆ, ಇಲ್ಲಿ ಚಳವಳಿಗಳು ಭರಾಟೆಯಿಂದ ಉಜ್ವಲವಾಗಿ ಹುಟ್ಟುತ್ತವೆ ಆದರೆ ಕೆಲ ಕಾಲದಲ್ಲಿಯೇ ಅವು ಜೀವಂತವಾಗಿಲ್ಲ ಎನ್ನುವಷ್ಟರಮಟ್ಟಿಗೆ ಸ್ಥಗಿತಗೊಂಡು ಬಿಟ್ಟಿರುತ್ತವೆ. ಇದಕ್ಕೆ ಸಂಬಂಧಪಟ್ಟ ಕಾರಣಗಳನ್ನು ನೋಡಿದಾಗ ಇಲ್ಲಿರುವ ಪ್ರತಿಯೊಂದು ಸಂಘಟನೆಗಳ ತತ್ವಸಿದ್ಧಾಂತಗಳಲ್ಲಿ ಭಿನ್ನತೆ ಇರುವುದು ಕಂಡು ಬರುತ್ತದೆ. ಇಲ್ಲಿ ಯಾವ ಸಂಘಟನೆಗಳೂ ಶಾಶ್ವತವಾಗಿ ಉಳಿದಿರುವುದು ಕಂಡು ಬಂದಿಲ್ಲ. ಏಕೆಂದರೆ ಇವುಗಳು ಶಿಸ್ತುಬದ್ಧವಾಗಿ ಒಂದು ಚೌಕಟ್ಟಿನಡಿಯಲ್ಲಿ, ತತ್ವಗಳಡಿಯಲ್ಲಿ ಹೋರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಬದಲಾಗಿ ಯಾವ ಸಂಘಟನೆಗಳು ಸ್ಪಷ್ಟ ದೃಷ್ಟಿಕೋನ ಹೊಂದಿ ಹೋರಾಟ ಮಾಡಿವೆಯೋ ಅಂತಹ ಸಂಘಟನೆಗಳು ಒಡೆಯಲಿಲ್ಲ ಎನ್ನುವುದನ್ನು ಗಮನಿಸಬಹುದು. ಅಂದರೆ

ಯಾವ ಸಂಘಟನೆಗೆ ಸ್ಪಷ್ಟವಾದ ಸೈದ್ಧಾಂತಿಕ ದೃಷ್ಟಿಕೋನ ಇರುತ್ತದೆಯೋ, ಒಂದು ಮುಂದಾಲೋಚನೆಯ ಕಣ್ಣೋಟ ಇರುತ್ತದೋ ಆ ಸಂಘಟನೆಗಳು ಒಡೆಯುವುದಿಲ್ಲ ಎನ್ನುವುದನ್ನು ಗಮನಿಸಬಹುದು.

ಹಾಗೆಯೇ ಕಾಲಕ್ರಮೇಣ ಸಾಮಾಜಿಕ, ಆರ್ಥಿಕ ಮತ್ತು ಇತರ ಕ್ಷೇತ್ರಗಳಲ್ಲಿ ಬದಲಾವಣೆಗಳಾದಂತೆ ಹಾಗೂ ವೈಜ್ಞಾನಿಕತೆ ಬೆಳೆದಂತೆಲ್ಲಾ ಚಳವಳಗಳ ಸ್ವರೂಪದಲ್ಲಿಯೂ ಬದಲಾವಣೆ ಕಾಣಬಹುದು. ಮೊದಲು ಚಳವಳಿ ಎಂದರೆ ವ್ಯಕ್ತಿಗಳ ಗುಂಪು ಸೇರಿ ಮಾಡುವ ಹೋರಾಟ ಆಗಿತ್ತು. ಆದರೆ ಈಗ ಕಾಲ ಬದಲಾಗಿದೆ. ವಿಶ್ವದ ಯಾವುದೋ ಮೂಲೆಯಲ್ಲಿ ಕುಳಿತು ಫೇಸ್‌ಬುಕ್, ಇಂಟರ್‌ನೆಟ್, ಟ್ವಿಟರ್, ಮೊಬೈಲ್-ಮೆಸೇಜ್ ಮೂಲಕ ಚಳವಳಿಗಳಲ್ಲಿ ಪಾಲ್ಗೊಳ್ಳಬಹುದು ಮತ್ತು ಅವರವರ ಅಭಿಪ್ರಾಯ, ಬೆಂಬಲವನ್ನು ವ್ಯಕ್ತಪಡಿಸಬಹುದು. ಇತ್ತೀಚೆಗೆ ನಮ್ಮ ರಾಜ್ಯದ ಕನ್ನಡ ಚಳವಳಿ ಹಾಗೂ ರಾಷ್ಟ್ರದ ಭ್ರಷ್ಟಾಚಾರ ಹಾಗೂ ಕೆಲವು ಗಂಭೀರ ಸಮಸ್ಯೆಗಳ ವಿರುದ್ಧ ಭಾಷಾಭಿಮಾನಿಗಳು, ಸಾಮಾಜಿಕ ಹೋರಾಟಗಾರರು ನಡೆಸಿದ ಹೋರಾಟಗಳಿಗೆ ಮಾಧ್ಯಮಗಳ ಮೂಲಕ ವ್ಯಕ್ತವಾದ, ರಾಷ್ಟ್ರವ್ಯಾಪ್ತಿ ಜನ ಬೆಂಬಲ ನೋಡಿದರೆ ಚಳವಳಿಯ ಸ್ವರೂಪ ಮತ್ತು ವ್ಯಾಪ್ತಿಯು ತಿಳಿಯುತ್ತದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿರುವ ಭೂಮಾಲೀಕತ್ವದ ವ್ಯವಸ್ಥೆ ಮತ್ತು ಕೃಷಿಯಿಂದಾಗಿ ರೈತ ಚಳವಳಿ ಅಥವಾ ರೈತ ಹೋರಾಟಗಳಲ್ಲಿ ನೆಲೆಕಂಡುಕೊಳ್ಳಲು ಸಾಧ್ಯವಾಗಿದೆ. ಈ ಭಾಗದ ರೈತರ ಸ್ಥಿತಿಗತಿಗಳನ್ನು ಗಮನಿಸಿದಾಗ, ಇಲ್ಲಿರುವಂತಹ ರೈತರ ಶೋಚನೀಯ ಅತಂತ್ರ ಸ್ಥಿತಿ ರಾಜ್ಯದ ಇತರ ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ. ಇಲ್ಲಿ ಬಹಳಷ್ಟು ರೈತರಿಗೆ ಸ್ವಂತ ಭೂಮಿ ಇಲ್ಲ, ಅಲ್ಪ ಸ್ವಲ್ಪ ಭೂಮಿ ಇರುವ ರೈತರಿಗೆ ಕೃಷಿ ಮಾಡಲು ಬಂಡವಾಳವಿಲ್ಲ, ಇನ್ನು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಮತ್ತು ಸೂಕ್ತ ಬೆಲೆ ಸಮಸ್ಯೆಯಿದೆ. ಹೀಗಾಗಿ ರೈತರು ಸಾಲದಿಂದ ತತ್ತರಿಸಿ ಭೂಮಿಯನ್ನು ಮಾರಾಟ ಮಾಡುವುದು ಅಥವಾ ಆತ್ಮಹತ್ಯೆಗೆ ಶರಣಾಗುವುದರ ಬಗ್ಗೆ ಆಗಾಗ ಕೇಳುತ್ತಿದ್ದೇವೆ.

ಕೃಷಿ ಸಂಬಂಧಿಸಿದಂತೆ ಇಲ್ಲಿ ಕಂಡು ಬರುವ ವಿಚಿತ್ರ ಸಂಗತಿ ಏನೆಂದರೆ ನೂರಾರು ಎಕರೆ ಭೂಮಿ ಹೊಂದಿರುವ ಶ್ರೀಮಂತ ರೈತ ಒಂದು ಕಡೆಯಾದರೆ, ಒಂದೆರಡು ಎಕರೆ ಭೂಮಿ ಹೊಂದಿರುವ ಬಡ ರೈತ ಇನ್ನೊಂದು ಕಡೆ. ಹೀಗಾಗಿ ರೈತರಲ್ಲೆ ಅಂತರ ಬಹಳ ಇದೆ. ಶ್ರೀಮಂತ ರೈತರು ಅಥವಾ ಜಮೀನ್ದಾರರು ಉತ್ಪದನಾಂಗಗಳ ಮೇಲೆ ಹತೋಟಿ ಮತ್ತು ಪೂರ್ಣ ನಿಯಂತ್ರಣ ಹೊಂದಿದ್ದಾರೆ. ಹೀಗಾಗಿ ಹಳೇ ಭೂಮಾಲೀಕರು ಇಂದಿನ ಬಂಡವಾಳಗಾರರಾಗಿ ಪರಿವರ್ತನೆ ಆಗುತ್ತಿದ್ದಾರೆ. ಇದರಿಂದಾಗಿ ಇಂದು ನಿಜವಾದ ಉಳುಮೆದಾರನ ಕೈಯಲ್ಲಿ ಭೂಮಿ ಇಲ್ಲ. ಬದಲಾಗಿ ಹೆಚ್ಚಿನ ಭೂಮಿಯು ಬಂಡವಾಳಶಾಹಿಗಳ, ಶ್ರೀಮಂತರ ಬಹುರಾಷ್ಟ್ರೀಯ ಕಂಪನಿಗಳ ಪಾಲಾಗಿದೆ. ಯಾರು ನಿಜವಾಗಿ ಉಳುಮೆಯನ್ನು ಮಾಡುತ್ತಾರೋ ಅವರಿಗೆ ಭೂಮಿ ದೊರಕಬೇಕಿರುವುದು ಇಂದಿನ ಅವಶ್ಯಕವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ರೈತರ ಸ್ಥಿತಿಗತಿಗಳನ್ನು ಮತ್ತು ಕೃಷಿ ಚಟುವಟಿಕೆಗಳನ್ನು ಗಮನಿಸಿದಾಗ ಆರ್ಥಿಕ ಉತ್ಪನ್ನಗಳಿಗೆ ಸಂಬಂಧಪಟ್ಟ ಹಾಗೆ ಸಾಂಪ್ರದಾಯಿಕ ಕೃಷಿ ಮುಂದುವರೆದಿದೆ.

ದೊಡ್ಡ ಜಮೀನ್ದಾರರು ಮಾತ್ರ ಆಧುನಿಕ ಕೃಷಿ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆದು ಸಬಲರಾಗುತ್ತಿದ್ದಾರೆ. ಆದರೆ ಸಣ್ಣ ರೈತರು ಮಾತ್ರ ಅದೇ ಸ್ಥಿತಿಯಲ್ಲಿದ್ದಾರೆ. ಇದಕ್ಕೆ ಕಂಡು ಬಂದ ಕಾರಣಗಳೆಂದರೆ, ಸಣ್ಣ ರೈತರಿಗೆ ಹಣದ ಕೊರತೆ, ಸಾಲದ ಬಾಧೆ ಬೆಳೆಗೆ ಸರಿಯಾದ ಬೆಂಬಲ ಬೆಲೆ ಸಿಗದಿರುವುದು, ಸರಕಾರದ ಸೌಲಭ್ಯಗಳ ಮಾಹಿತಿಯ ಕೊರತೆ ಇನ್ನು ಮುಂತಾದವುಗಳು ಇರುವುದು ತಿಳಿದುಬರುತ್ತದೆ. ಮೊದಲು ಗ್ರಾಮೀಣ ಹಾಗೂ ಸಣ್ಣ ರೈತರು ಬೀಜ, ಗೊಬ್ಬರ ಔಷಧ ಕೃಷಿ ಉಪಕರಣಗಳಲ್ಲಿ ಸ್ವಾವಲಂಬಿ ಗಳಾಗಿದ್ದರು. ಆದರೆ ಕ್ರಮೇಣ ರೈತ ಸಂಸ್ಕೃತಿ ಬದಲಾದಂತೆ ಇಂದು ಬೀಜ, ಗೊಬ್ಬರ, ಕ್ರಿಮಿನಾಶಕಗಳು ಮುಂತಾದ ಅವಶ್ಯಕತೆಗಳಿಗೆ ಬೇರೆಯವರ ಮೇಲೆ ಅವಲಂಬಿತನಾಗಿರುವುದೇ ರೈತರ ಪ್ರಮುಖ ಸಮಸ್ಯೆಗಳಾಗಿವೆ.

ಇನ್ನು ಇಲ್ಲಿನ ರೈತರಿಗೆ ಕಳೆದ ದಶಕದವರೆಗೆ ನೀರಿನ ಹಂಚಿಕೆಯ ಪ್ರಶ್ನೆ ಬಂದಿರಲಿಲ್ಲ. ನೀರಿನ ಹಂಚಿಕೆಯ ಬಗ್ಗೆ ತಕರಾರುಗಳು ಇರಲಿಲ್ಲ. ಆದರೆ ಇತ್ತೀಚೆಗೆ ನೀರಿನ ಹಂಚಿಕೆ ಎನ್ನುವ ಪ್ರಶ್ನೆ ರೈತ ಚಳವಳಿಯ ಮುಖ್ಯ ಅಜೆಂಡಾ ಆಗಿ ರೂಪಗೊಳ್ಳುತ್ತಿರುವುದು ಗಮನಕ್ಕೆ ಬಂದಿದೆ ಹಾಗೂ ಗಂಭೀರ ಸಮಸ್ಯೆಯಾಗುತ್ತಿದೆ. ಇದೇ ರೀತಿ ಕಳೆದ ದಶಕದವರೆಗೆ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕೈಗಾರೀಕರಣಕ್ಕಾಗಿ ಭೂಸ್ವಾಧೀನದ, ಭೂಆಕ್ರಮಣದ ಪ್ರಶ್ನೆ ಇರಲಿಲ್ಲ. ಆದರೆ ಈಗ ಕೈಗಾರೀಕರಣದ ನೆಪದಲ್ಲಿ ಕೃಷಿ ಭೂಮಿಯ ಭೂಕಬಳಿಕೆ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಅದರಲ್ಲೂ ಈಗ ಉಳಿದಿರುವ ಸ್ವಲ್ಪವೇ ಫಲವತ್ತಾದ ಸಮೃದ್ಧವಾದ ಭೂಮಿಯನ್ನು ಕೈಗಾರಿಕಾ ಮತ್ತಿತರ ಉದ್ದೇಶಕ್ಕೆ ವಶಪಡಿಸಿಕೊಳ್ಳುತ್ತಿರುವುದು ರೈತರಿಗೆ ದೊಡ್ಡ ಸವಾಲಾಗಿದೆ. ಇನ್ನು ೮೦ರ ದಶಕದವರೆಗೆ ಜಾಗತೀಕರಣದ ಪ್ರಭಾವದಲ್ಲಿ ಹೆಚ್ಚಿನ ಬಂಡವಾಳ ಹೂಡುತ್ತಿದ್ದುದು ಯಂತ್ರಗಳ ಮೇಲೆ. ಆಗ ಭೂಮಿಗೆ ಮತ್ತು ಭೂಮಿಯ ಮೇಲಿನ ಹೂಡಿಕೆಗೆ ಪ್ರಾಮುಖ್ಯತೆಯ ಇರಲಿಲ್ಲ. ಆದರೆ ಈಗ ಬಂಡವಾಳ ಹೂಡಿಕೆ ಅಂದರೆ ಅದು ಭೂಮಿಯ ಮೇಲೆಯೆ ಎನ್ನುವ ಪರಿಸ್ಥಿತಿ ಬಂದೊದಗಿದೆ. ಹೀಗಾಗಿ ಈ ಭಾಗದಲ್ಲಿ ನೀರು ಹಂಚಿಕೆಯ ಭೂ-ಕಬಳಿಕೆಯ, ವಿದ್ಯುತ್ತಿನ, ಬೆಂಬಲ ಬೆಲೆಯ ಸಮಸ್ಯೆಗಳು ಜ್ವಲಂತ ಸಮಸ್ಯೆಗಳಾಗಿ ರೈತರನ್ನು ಕಾಡುತ್ತಿವೆ.

ಹೈದರಾಬಾದ್ ಕರ್ನಾಟಕದಲ್ಲಿ ನಡೆದಿರುವ ದಲಿತ ಚಳವಳಿಗಳು ಅದರ ಪರಿಣಾಮಗಳು ಹಾಗೂ ಪ್ರಸ್ತುತ ದಲಿತರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ ನಂತರ ಪ್ರಸ್ತುತ ಅನಿಸುತ್ತಿರುವುದೇನೆಂದರೆ, ಪ್ರಾರಂಭದಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಳಲ್ಲಿ ದಲಿತ ಚಳವಳಿಗಳು ರೂಪ ತಳೆದವು. ಹಾಗೆಯೇ ಆರಂಭದಲ್ಲಿ ದಲಿತ ಸಂಘಟನೆಗಳು ತಮ್ಮ ಅಸ್ತಿತ್ವವನ್ನು ಹಾಗೂ ಶಕ್ತಿಯನ್ನು ಹೆಚ್ಚಿಸಿ ಕೊಂಡಿದ್ದೆ, ಭೂ ಹೋರಾಟಗಳಿಂದ. ದಲಿತರಿಗೆ ಭೂಮಿಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಬಹುದೊಡ್ಡ ಹೋರಾಟವನ್ನು ಕೈಗೊಂಡಿದ್ದರು. ಆದರೆ ಕ್ರಮೇಣ ಅಧಿಕಾರಶಾಹಿ ವ್ಯವಸ್ಥೆಗೆ ಸಿಲುಕಿ ದಲಿತ ಸಂಘಟನೆಗಳು ಭೂಮಿಯ ಪ್ರಶ್ನೆಯನ್ನು ತಮ್ಮ ಅಜೆಂಡಾದಿಂದ ಕೈ ಬಿಟ್ಟಿದ್ದಾರೆ ಎನಿಸುತ್ತಿದೆ. ಇವರಿಗೆ ಭೂರಹಿತರಿಗೆ

ಭೂಮಿ ಕೊಡಿಸುವ ಹೋರಾಟಕ್ಕಿಂತ, ದಲಿತರನ್ನು ಸಮಾಜದ ಬಹುಮುಖಿಗೆ ತರುವಂತಹ ವಿಚಾರಗಳಿಗಿಂತ ಅಧಿಕಾರ ಪಡೆಯುವ, ತಮ್ಮ ಸಂಘಟನೆಗಳನ್ನು ಬಲಪಡಿಸಿಕೊಳ್ಳುವ ಇಚ್ಛೆ ಕಂಡು ಬರುತ್ತಿದೆ. ಇದು ದಲಿತ ಚಳವಳಿಯ ವಿಫಲತೆಗೆ ಒಂದು ಕಾರಣವೇನೋ ಎಂದು ಅನಿಸುತ್ತಿದೆ.

ದಲಿತರ ಬಗ್ಗೆ ಅವರ ಸುಧಾರಣೆ ಬಗ್ಗೆ ಇಂದಿಗೂ ಹೋರಾಟಗಳು ನಡೆಯುತ್ತಿವೆ. ಅದಕ್ಕಾಗಿ ಅನೇಕ ತತ್ವಸಿದ್ಧಾಂತಗಳು ಘೋಷಣೆಗಳು ರೂಪುಗೊಂಡಿವೆ. ಆದರೆ ಇಂತಹ ತತ್ವಸಿದ್ಧಾಂತಗಳನ್ನು ಎಷ್ಟರಮಟ್ಟಿಗೆ ದಲಿತ ನಾಯಕರು ಅವರ ಜೀವನದಲ್ಲಿ ಹೋರಾಟದಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುದನ್ನು ನೋಡಿದಾಗ ನಿಜಾಂಶ ಬಹಳ ನಿರಾಸೆಯನ್ನುಂಟು ಮಾಡುತ್ತದೆ. ಕೆಲವು ದಲಿತ ನಾಯಕರ ವ್ಯಕ್ತಿತ್ವ, ಉದ್ದೇಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅನಿಸುವುದೇನೆಂದರೆ ಸಂಘಟನೆಯ ತತ್ವಗಳು ಸಿದ್ಧಾಂತಗಳು ಅವರ ಜೀವನದ ಭಾಗಗಳಾಗುತ್ತಿಲ್ಲ. ಒಂದರ್ಥದಲ್ಲಿ ದಲಿತ ಚಳವಳಿ ಸೋಲುತ್ತಿರುವುದೇ ಇಲ್ಲಿ. ಎಲ್ಲಿಯವರೆಗೆ ಇವು ಅವರ ಜೀವನದಲ್ಲಿ ಅಳವಡಿಕೆ ಆಗುವುದಿಲ್ಲವೋ ಅಲ್ಲಿಯವರೆಗೆ ಹೋರಾಟಗಳು ಯಶಸ್ವಿಯಾಗುವುದಿಲ್ಲ.

ಇನ್ನು ಎಡಗೈ ಮತ್ತು ಬಲಗೈ ಎಂದು ಗುರುತಿಸಿಕೊಂಡಿರುವ ಮಾದಿಗರು ಮತ್ತು ಹೊಲೆಯರ ನಡುವಿನ ಅಂತರ ಹೆಚ್ಚಾಗುತ್ತಿದೆ. ಹೈದರಾಬಾದ್ ಕರ್ನಾಟಕದ ಗಡಿ ಭಾಗಗಳಲ್ಲಿ ಮಾದಿಗರು ಹೆಚ್ಚಾಗಿದ್ದರೆ ಈ ಭಾಗದ ಒಳಭಾಗಗಳಲ್ಲಿ ಹೊಲೆಯರು ಹೆಚ್ಚಾಗಿದ್ದಾರೆ. ಪ್ರಸ್ತುತ ಇವರಿಬ್ಬರ ಸ್ಥಾನಮಾನಗಳನ್ನು ಅವಲೋಕಿಸಿದಾಗ ಒಂದು ಕಡೆ ಕೃಷಿ, ಶಿಕ್ಷಣ ವ್ಯಾಪಾರದಲ್ಲಿ ಹೆಚ್ಚೆಚ್ಚು ಪಾಲು ಪಡೆದಿರುವ ಮತ್ತು ಪಡೆಯುತ್ತಿರುವ ಹೊಲೆಯರ ಸ್ಥಿತಿ ಬದಲಾಗಿರುವುದು ಗೋಚರಿಸುತ್ತದೆ. ಸರಕಾರಿ ಉದ್ಯೋಗದಲ್ಲಿ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಬಹುಪಾಲು ಇವರಿದ್ದಾರೆ. ಆರ್ಥಿಕವಾಗಿ ಸದೃಢರಾಗಿ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆದಿದ್ದಾರೆ. ಆದರೆ ಇನ್ನೊಂದು ಕಡೆ ಮಾದಿಗರು ಮೂಲ ಕಸುಬನ್ನು ಮುಂದುವರೆಸಿಕೊಂಡು ಬರುತ್ತಿರುವುದರಿಂದ ಅವರ ಜೀವನಮಟ್ಟ ಮತ್ತು ಸ್ಥಾನಮಾನ ಸುಧಾರಿಸಿಲ್ಲ. ಹೀಗಾಗಿ ಮಾದಿಗರು ಮತ್ತು ಹೊಲೆಯರ ನಡುವೆಯೆ ಒಂದು ರೀತಿಯ ಅಸಮಾನತೆ ಬೆಳೆದು ದಲಿತರು ಒಗ್ಗೂಡಲು ಸಾಧ್ಯವಾಗದೆ ದಲಿತ ಸಂಘಟನೆಗಳು ಅನೇಕ ಬಣಗಳಾಗಿ ಒಡೆದು ಹೋಗಿವೆ. ಮಾದಿಗರು ತಮ್ಮದೇ ಆದ ಪ್ರತ್ಯೇಕ ಬಣಗಳನ್ನು ಮಾಡಿಕೊಂಡು ಮಾದಿಗ ಜನಾಂಗದ ಏಳಿಗೆಗಾಗಿ ದಲಿತರ ಮೀಸಲಾತಿಯಲ್ಲೇ ಒಳಮೀಸಲಾತಿಗಾಗಿ ಬೇಡಿಕೆ ಇಟ್ಟು ತೀವ್ರವಾದ ಹೋರಾಟ ಆರಂಭಿಸಿದ್ದಾರೆ. ಇದನ್ನು ಇಲ್ಲಿನ ಕೆಲವು ವ್ಯಕ್ತಿಗಳು, ರಾಜಕೀಯ ಪಕ್ಷಗಳು ಮತ್ತು ಸ್ವಹಿತಾಶಕ್ತಿಗಳು ಪೋಷಿಸುತ್ತಿವೆ. ಇದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇಂದಿನ ದಲಿತರು ಇಲ್ಲ. ಇಂತಹ ಬೆಳವಣಿಗೆಗಳು, ದಲಿತ ಚಳವಳಿಗಳ ಶಕ್ತಿಯನ್ನು ಕುಗ್ಗಿಸುತ್ತಿರುವುದು, ಚಳವಳಿಯ ಧ್ಯೇಯ ಉದ್ದೇಶ ಸ್ವರೂಪಗಳಲ್ಲಿ ಬದಲಾವಣೆಗಳಾಗುತ್ತಿರುವುದರಿಂದಾಗಿ ಚಳವಳಿಗೆ ಹಿನ್ನಡೆಯಾಗುತ್ತಿದೆ ಎನಿಸುತ್ತಿದೆ.

ಹೈದರಾಬಾದ್ ಕರ್ನಾಟಕ ಭಾಗದ ಸಾಮಾಜಿಕ ಚಳವಳಿಗಳ ಬಗ್ಗೆ ಅಧ್ಯಯನ ಕೈಗೊಂಡಾಗ ವಿವಿಧ ವರ್ಗಗಳು ತಮ್ಮದೇ ಆದ ಬೇಡಿಕೆಗಳನ್ನಿಟ್ಟುಕೊಂಡು ಚಳವಳಿ ರೂಪಿಸಿರುವುದು ಕಂಡು ಬರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಹಿಂದುಳಿದ ವರ್ಗಗಳ ಚಳವಳಿಗಳ ಬಗ್ಗೆ ಅಧ್ಯಯನ ಮಾಡಿದಾಗ ತಿಳಿದು ಬಂದಿದ್ದೇನೆಂದರೆ ಸಾಮಾಜಿಕವಾಗಿ ಹಿಂದುಳಿದಿರುವ ಅನೇಕ ಸವಲತ್ತುಗಳಿಂದ ವಂಚಿತರಾದ ಇವರು ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಇಂದಿನವರೆಗೆ ಒಂದು ಶಕ್ತಿಯಾಗಿ ಒಂದು ಸಂಘಟನೆಯಾಗಿ ಹೋರಾಟ ಮಾಡಿರುವುದೇ ಬಹಳ ವಿರಳ. ವಾಸ್ತವವಾಗಿ ಇಲ್ಲಿ ಹಿಂದುಳಿದ ಜಾತಿಗೆ ಸೇರಿದ ಅನೇಕ ವರ್ಗಗಳಿವೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಇವರು ಬಹಳ ಅಶಕ್ತರಾಗಿದ್ದಾರೆ. ಈ ನಿಟ್ಟಿನಲ್ಲಿ ಆಲೋಚನೆ ಮಾಡಿದಾಗ ನಿಜವಾಗಿಯೂ ಇವರು ತೀವ್ರವಾಗಿ ಹೋರಾಟವನ್ನು ಮಾಡಬೇಕಿತ್ತು. ಆದರೆ ಆ ರೀತಿಯ ಹೋರಾಟಗಳು ಇಲ್ಲಿ ನಡೆದಿಲ್ಲ. ಈ ವರ್ಗಗಳು ಅನೇಕ ಕಡೆ ಚದುರಿ ಹೋಗಿರುವುದರಿಂದಾಗಿ ಒಂದೆಡೆ ಸೇರಿ ನಿರ್ದಿಷ್ಟ ಗುರಿ ಉದ್ದೇಶಗಳನ್ನಿಟ್ಟುಕೊಂಡು ಹೋರಾಡುವಲ್ಲಿ ವಿಫಲರಾಗುತ್ತಿದ್ದಾರೆ. ಹೀಗಾಗಿ ಈ ಭಾಗದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಅಂದರೆ ಯಾವುವು ಎನ್ನುವುದನ್ನೆ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಗುರುತಿಸಲು ಕಷ್ಟವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಆಗಿ ಹೋಗಿರುವ ಕಾರ್ಮಿಕ ಚಳವಳಿಗಳು ಮತ್ತು ಅದರಿಂದಾಗಿರುವ ಪರಿಣಾಮಗಳು ಹಾಗೂ ಪ್ರಸ್ತುತ ಕಾರ್ಮಿಕರ ಸ್ಥಿತಿಗತಿಗಳನ್ನು ನೋಡಿದಾಗ ಕಂಡು ಬಂದಿರುವುದೇನೆಂದರೆ ಇಲ್ಲಿ ಕಾರ್ಮಿಕ ವರ್ಗ ಅತೀ ಹೆಚ್ಚಿನ ಸಂಖ್ಯೆಯಲ್ಲಿದೆ ಎಂಬುವುದು. ಇಲ್ಲಿರುವಷ್ಟು ಕಾರ್ಮಿಕರು ಬೇರೆ ಯಾವುದೇ ಭಾಗದಲ್ಲಿ ಇರಲಿಕ್ಕಿಲ್ಲ. ಅದರಲ್ಲೂ ಕೃಷಿ, ಕೈಗಾರಿಕಾ ಮತ್ತು ದಿನಕೂಲಿ ಕಾರ್ಮಿಕರ ಸಂಖ್ಯೆ ಬಹಳಷ್ಟು ಇದೆ. ಇಲ್ಲಿನ ಭೌಗೋಳಿಕತೆಯ ವಿಭಿನ್ನತೆ, ಅನಕ್ಷರತೆ, ಬಡತನ, ನಿರುದ್ಯೋಗ, ಕೃಷಿಯಲ್ಲಿ ಹೆಚ್ಚಿನ ಪಾಲಿಲ್ಲದಿರುವುದು, ಬೇರೆ ಉದ್ಯೋಗಾವಕಾಶಗಳ ಕೊರತೆಯಿಂದ ಕೂಲಿ ಕೆಲಸ ಇವರಿಗೆ ಅನಿವಾರ್ಯವಾದಂತಿದೆ. ಹೀಗಾಗಿ ಬೃಹತ್ ಸಂಖ್ಯೆಯಲ್ಲಿ ಕಾರ್ಮಿಕರು ಇಲ್ಲಿರುವುದರಿಂದ ಇಂದು ಕಾರ್ಮಿಕ ಸಂಘಟನೆಗಳು ಎಷ್ಟು ಪ್ರಬಲವಾಗಿವೆ ಎಂದರೆ ಇಲ್ಲಿ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಲು ಎಡಪಂಥೀಯ ಸಂಘಟನೆಗಳು ತಲೆ ಎತ್ತಿವೆ. ಇಲ್ಲಿರುವಷ್ಟು ಎಡಪಂಥೀಯ ಸಂಘಟನೆಗಳು ಕರ್ನಾಟಕದ ಬೇರೆ ಯಾವುದೇ ಪ್ರದೇಶದಲ್ಲಿ ಇಲ್ಲ. ಒಂದು ರೀತಿಯಲ್ಲಿ, ಕರ್ನಾಟಕದಲ್ಲಿ ಎಡಪಂಥೀಯ ಸಂಘಟನೆಗಳು ಮೊದಲು ಹುಟ್ಟಿಕೊಂಡಿದ್ದೇ ಈ ಭಾಗದಲ್ಲಿ. ಇಂದಿಗೂ ಇಲ್ಲಿ ಸಿಪಿಐ, ಸಿಪಿಎಂ ಮುಂತಾದ ಪಕ್ಷಗಳ ಹೋರಾಟ ಬಹಳ ಗಮನಾರ್ಹವಾಗಿವೆ. ಅಧ್ಯಯನದ ದೃಷ್ಟಿಯಲ್ಲಿ ಹೇಳುವುದಾದರೆ ಎಡಪಂಥೀಯ ಸಂಘಟನೆಗಳು ಸ್ವಾರ್ಥರಹಿತವಾಗಿ ಹೋರಾಟ ಮಾಡುತ್ತಿವೆ ಎಂದೆನಿಸುತ್ತಿದೆ.

ಇನ್ನು ಈ ಭಾಗದ ಕಾರ್ಮಿಕ ನಾಯಕರ ಬಗ್ಗೆ ಹೇಳುವುದಾದರೆ ಕಾರ್ಮಿಕ ಹೋರಾಟಗಳನ್ನು ತಮ್ಮ ಅನನ್ಯ ವಿಧಾನಗಳ ಮೂಲಕ ಕಟ್ಟಿ ಬೆಳೆಸಿದವರೆ ಎಸ್.ಕೆ. ಕಾಂತಾ. ಇವರು ಶಾಸಕರಾಗಿದ್ದಾಗಲೂ,

ಸಚಿವರಾಗಿದ್ದಾಗಲೂ ಕಾರ್ಮಿಕರಿಗಾಗಿ ದುಡಿದು ಕಾರ್ಮಿಕ ಹೋರಾಟವನ್ನು ಮುನ್ನಡೆಸಿದರು. ಕಾರ್ಮಿಕ ಮಂತ್ರಿಯಾಗಿ ಜನಕಾಳಜಿ ಉಳಿಸಿಕೊಂಡ ಅಪರೂಪದ ಹೋರಾಟಗಾರರು. ಇಂದಿಗೂ ಕಾರ್ಮಿಕರ ಪರವಾಗಿ ನಿಂತು ಅವರ ಹಿತರಕ್ಷಣೆಗಾಗಿ ಹೋರಾಡುತ್ತಾ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು ಹೋರಾಟ ಮಾಡುತ್ತಿರುವುದನ್ನು ಗಮನಿಸಿ, ಈ ಭಾಗದ ರಾಜಕಾರಣಿಗಳಿಂದ ಇವರನ್ನು ವಿಭಿನ್ನ ಸ್ಥಾನದಲ್ಲಿ ಗುರುತಿಸುವಂತಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ಪ್ರಸಕ್ತ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ನೋಡಿದಾಗ ಇಲ್ಲಿನ ಬಡತನ ಅನಕ್ಷರತೆ ಬೃಹತ್ ಕೈಗಾರಿಕೆಗಳ ಅಭಾವ ಮುಂತಾದ ಕಾರಣಗಳಿಂದ ಹೆಚ್ಚು ಉದ್ಯೋಗಾವಕಾಶಗಳು ಇಲ್ಲದೆ ಕಾರ್ಮಿಕರು ಸಾಮಾಜಿಕವಾಗಿ, ಆರ್ಥಿಕವಾಗಿ ತೀರಾ ಕೆಳಮಟ್ಟದಲ್ಲಿದ್ದಾರೆ. ಇಲ್ಲಿರುವ ಕೆಲವೇ ಕೈಗಾರಿಕೆಗಳು ಹೆಚ್ಚು ಶ್ರಮವನ್ನು ಕೇಳುವಂತಹವು. ಹೀಗಾಗಿ ಇಲ್ಲಿನ ಕಾರ್ಮಿಕರೆಂದರೆ ಒಂದು ರೀತಿಯಲ್ಲಿ ಆಳುಗಳ ರೀತಿ ಕೆಲಸ ನಿರ್ವಹಿಸಬೇಕಾಗಿದೆ. ಬೇರೆ ಉದ್ಯೋಗಾವಕಾಶಗಳಿಲ್ಲದೆ ಹೊಟ್ಟೆಪಾಡಿಗಾಗಿ ಅತೀ ಕಡಿಮೆ ಕೂಲಿಗೆ ಹೆಚ್ಚು ಶ್ರಮವಹಿಸಬೇಕಾಗಿದೆ. ಹಾಗಾಗಿ ಇವರಿಗೆ ಹೋರಾಟ ಮಾಡುವ ಪ್ರತಿರೋಧಿಸುವ ಕಲ್ಪನೆಯಾಗಲಿ, ಶಕ್ತಿಯಾಗಲಿ ಇಲ್ಲ. ಅಸಮರ್ಥತೆಯಿಂದ ಇವರ ಶ್ರಮಕ್ಕೆ ತಕ್ಕ ವೇತನ, ಉತ್ಪಾದನೆಗೆ ತಕ್ಕಷ್ಟು ಪ್ರತಿಫಲ ದೊರೆಯುತ್ತಿಲ್ಲ.

ಇಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಬದುಕಂತು ತೀರಾ ಶೋಚನೀಯವಾಗಿದೆ. ಇವರಿಗೆ ವರ್ಷದಲ್ಲಿ ೧೦೦ ದಿನವೂ ಉದ್ಯೋಗದ ಖಾತರಿ ಇಲ್ಲ. ಹೀಗಾಗಿ ಗುಳೆ ಹೋಗುವುದು ಇವರಿಗೆ ಅನಿವಾರ್ಯವಾಗಿದೆ. ಈ ಭಾಗದಲ್ಲಿ ಸುಮಾರು ೧೦ ಲಕ್ಷಕ್ಕೂ ಹೆಚ್ಚು ಜನ ಗುಳೆ ಹೋಗಿರುವುದು ತಿಳಿದು ಬರುತ್ತದೆ. ಇನ್ನು ಇಲ್ಲಿನ ಕಾರ್ಮಿಕರು ಮತ್ತು ಸಂಘಟನೆಗಳು ಸಂಘಟನಾ ಕೊರತೆಯಿಂದ ಸಂಘಟಿತರಾಗಿ ರಾಜಕೀಯ ಸ್ಥಾನಮಾನಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ರಾಜಕೀಯ ಪಕ್ಷಗಳು ಇವರ ಅಸಹಾಯಕ ಪರಿಸ್ಥಿತಿಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಹೀಗಾಗಿ ಕಾರ್ಮಿಕ ಹೋರಾಟಗಳು ನಿರೀಕ್ಷಿತ ಫಲವನ್ನು ನೀಡುತ್ತಿಲ್ಲ. ಸದ್ಯಕ್ಕೆ ಕಾರ್ಮಿಕರ ಹಿತರಕ್ಷಣೆಗೆ, ತತ್‌ಕ್ಷಣ ಸರಕಾರ ಕೈಗೊಳ್ಳಬೇಕಾಗಿರುವ ಕಾರ್ಯವೆಂದರೆ, ಕೃಷಿ, ಕೂಲಿ ಕಾರ್ಮಿಕರ ವಲಸೆಗೆ ಕಾರಣ ಕಂಡುಕೊಂಡು ಅಕ್ಷರದಿಂದ ವಂಚಿತರಾದವರ ಕಲಿಕೆಗೆ ವ್ಯವಸ್ಥೆ ಕಲ್ಪಿಸಬೇಕು. ಹಣವಿಲ್ಲದೆ ಶಿಕ್ಷಣದಿಂದ ದೂರ ಉಳಿದವರಿಗೆ ವಿಶೇಷ ಯೋಜನೆ ರೂಪಿಸಬೇಕು, ಉದ್ಯೋಗ ಖಾತರಿ ಯೋಜನೆಗಳು ಸಾರ್ಥಕವಾಗಿ ಕಾರ್ಯರೂಪಕ್ಕೆ ಬರಬೇಕು. ಹೊಟ್ಟೆಪಾಡಿಗಾಗಿ ಕೆಲಸ ಹುಡುಕಿಕೊಂಡು ದೊಡ್ಡ ದೊಡ್ಡ ನಗರಗಳಿಗೆ ಅಲೆದಾಡುವುದನ್ನು ತಪ್ಪಿಸಲು ಸ್ಥಳೀಯವಾಗಿ ಸಹಸ್ರಾರು ಜನರಿಗೆ ಉದ್ಯೋಗ ನೀಡುವ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಹಾಗಾದಾಗ ಮಾತ್ರ ಕಾರ್ಮಿಕರ ಕೆಲ ಸಮಸ್ಯೆಗಳಿಗಾದರೂ ಉತ್ತರ ದೊರೆತು ಅವರ ಸ್ಥಿತಿ ಸ್ವಲ್ಪವಾದರೂ ಸುಧಾರಿಸಬಹುದು. ಈ ನಿಟ್ಟಿನಲ್ಲಿ ಸರಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಜೊತೆ ಜೊತೆಯಾಗಿ ಕಾರ್ಯ ಪ್ರವೃತ್ತರಾಗಬೇಕು.

ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಮಹಿಳಾ ಚಳವಳಿಗಳ ಪ್ರಭಾವವನ್ನು ಗಮನಿಸಿದರೆ ಮಹಿಳಾ ಚಳವಳಿಗಳು ತಮ್ಮ ಛಾಪು ಮೂಡಿಸುತ್ತಿಲ್ಲ ಎನಿಸುತ್ತದೆ. ಈ ಭಾಗದ ಪರಿಸ್ಥಿತಿ, ಹಿನ್ನೆಲೆಯನ್ನು ಅವಲೋಕಿಸಿದರೆ ಎಲ್ಲಕ್ಕಿಂತಲೂ ಪ್ರಬಲವಾದಂತಹ ಮಹಿಳಾ ಚಳವಳಿ ಹುಟ್ಟಬೇಕಾಗಿದ್ದೇ ಗುಲಬರ್ಗಾ ಅಥವಾ ಹೈದರಾಬಾದ್ ಕರ್ನಾಟಕದಿಂದ. ಏಕೆಂದರೆ ಈ ಭಾಗದ ಹಿನ್ನೆಲೆಯನ್ನು ತೆಗೆದುಕೊಂಡರೆ ಇಲ್ಲಿ ಮುಸ್ಲಿಂ ಸಂಸ್ಕೃತಿ ಮತ್ತು ಹಿಂದೂ ಸಂಸ್ಕೃತಿ ಹಾಗೂ ಜಾತೀಯತೆ, ಲಿಂಗಭೇದ, ತಾರತಮ್ಯ ಶೋಷಣೆ, ದೌರ್ಜನ್ಯ, ಸಾಮಾಜಿಕ ಕಟ್ಟುಪಾಡುಗಳು ಹಾಗೂ ಇಷ್ಟೆಲ್ಲಾ ಸಮಸ್ಯೆ ಸಂಕಷ್ಟ ಇಕ್ಕಟ್ಟಿನ ನಡುವೆ ಏಕಕಾಲದಲ್ಲಿಯೇ ನಲುಗುತ್ತಿರುವವರೆಂದರೆ ಮಹಿಳೆಯರು. ಇಂತಹ ಪರಿಸ್ಥಿತಿಯಿಂದ ಬಿಡುಗಡೆ ಹೊಂದುವ ಸಲುವಾಗಿ ದೊಡ್ಡ ಹೋರಾಟ ರೂಪಿಸಬೇಕಾದ ಅಗತ್ಯತೆ ಇತ್ತು. ಆದರೆ ಕ್ಷೇತ್ರಕಾರ್ಯ ಹಾಗೂ ಅಧ್ಯಯನದ ದೃಷ್ಟಿಯಲ್ಲಿ, ಇಲ್ಲಿ ಗಮನಿಸಿದಂತೆ ಇಂತಹ ಹೋರಾಟಗಳನ್ನು ಇವತ್ತಿನವರೆಗೂ ಕಟ್ಟಲಿಕ್ಕಾಗಿಲ್ಲ.

ಮಹಿಳೆಯರ ಸಬಲೀಕರಣಕ್ಕಾಗಿ ಸರಕಾರ ಸ್ತ್ರೀಶಕ್ತಿ ಸ್ವಸಹಾಯ ಯೋಜನೆಯನ್ನು ಜಾರಿಗೊಳಿಸಿತು. ಆರಂಭದಲ್ಲಿ ಭಾರೀ ಭರವಸೆ ಮೂಡಿಸಿದ್ದ ಸ್ತ್ರೀಶಕ್ತಿ ಸಂಘಗಳು ಸ್ವಸಹಾಯ ಗುಂಪುಗಳು ಇಂದು ರಾಜಕೀಯ ಪಕ್ಷಗಳ ಕಾರ್ಯಕರ್ತರಾಗಿ ರೂಪುಗೊಳ್ಳುತ್ತಿದ್ದಾರೆ ಎನಿಸುತ್ತಿದೆ. ಸಂಘಗಳ ಮೂಲಕ ಆರ್ಥಿಕ ಸುಧಾರಣೆ ಮಾಡಿಕೊಂಡು ಮಹಿಳಾ ಸಬಲೀಕರಣದ ಹಾದಿಯಲ್ಲಿ ಸಾಗಬೇಕಾಗಿದ್ದ ಈ ಸಂಸ್ಥೆಗಳು ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳ ವೋಟ್ ಬ್ಯಾಂಕ್‌ಗಳಾಗಿರುವುದು ಮಹಿಳಾ ಹೋರಾಟಕ್ಕೆ ದೊಡ್ಡ ಹಿನ್ನಡೆ ಎನ್ನಬಹುದು. ಏಕೆಂದರೆ ಈ ಹಿಂದೆ ನೋಡುತ್ತಿದ್ದ ಮಹಿಳಾ ಸಂಘಟನೆಗಳ ಸ್ವಯಂ ಉದ್ಯೋಗ, ವ್ಯಾಪಾರ ಚಟುವಟಿಕೆಗಳು, ಬ್ಯಾಂಕ್ ವ್ಯವಹಾರಗಳಲ್ಲಿ ಮೊದಲಷ್ಟು ಚಟುವಟಿಕೆ ಕಾಣಬರುವುದಿಲ್ಲ. ಇನ್ನು ಕೆಲವಂತು ಸ್ಥಗಿತಗೊಂಡಂತಿವೆ ಅಥವಾ ಹೆಸರಿಗಷ್ಟೆ ಇವೆ.

ಹೈದರಾಬಾದ್ ಕರ್ನಾಟಕದ ಮಹಿಳೆಯರ ಸಾಕ್ಷರತಾ ಪ್ರಮಾಣ ಬಹಳ ಕೆಳಮಟ್ಟದಲ್ಲಿದೆ. ಅನಕ್ಷರತೆಯಿಂದಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ಮಹಿಳೆಯರು ಭಾಗಿಯಾಗಲು ಸಾಧ್ಯವಾಗುತ್ತಿಲ್ಲ. ಸಮಾಜದ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಗಳಾಗುತ್ತಿಲ್ಲ. ಇದರಿಂದ ಅಭಿವೃದ್ಧಿ ಫಲಗಳು ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯರಿಗೆ ದೊರೆಯುತ್ತಿಲ್ಲ ಹಾಗೂ ಇಲ್ಲಿಯ ಬಡತನ ಮತ್ತು ನಿರುದ್ಯೋಗವು ಮಹಿಳೆಯರನ್ನು ಎಲ್ಲಾ ರೀತಿಯಿಂದಲೂ ಕಟ್ಟಿ ಹಾಕಿದೆ. ಕರ್ನಾಟಕದಲ್ಲಿಯೆ ಅತೀ ಹೆಚ್ಚು ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುವಿನ ಮಾರಾಟ, ದೇವದಾಸಿ ಪದ್ಧತಿ ಮಹಿಳೆಯರ ಶೋಷಣೆ ಈ ಭಾಗದಲ್ಲಿ ಕಂಡು ಬರುತ್ತದೆ ಹಾಗೂ ದಿನೇ ದಿನೇ ಹೆಚ್ಚುತ್ತಿದೆ ಎಂದು ಸರಕಾರದ ದಾಖಲೆಗಳೇ ಸ್ಪಷ್ಟಪಡಿಸುತ್ತಿವೆ. ಇದು ಇಲ್ಲಿನ ಮಹಿಳೆಯರ ಜೀವನದ ಮೇಲೆ ಸ್ಥಾನಮಾನದ ಮೇಲೆ ಭೀಕರ ಪರಿಣಾಮವನ್ನುಂಟು ಮಾಡುತ್ತಿದೆ.

ಪ್ರಸ್ತುತ ಮಹಿಳಾ ಪರ ಹೋರಾಟದ ವಿಷಯಕ್ಕೆ ಬಂದರೆ, ಒಂದು ಸಮಾಧಾನಕರವಾದ ಅಂಶವೆಂದರೆ ಈ ಎಲ್ಲಾ ವಿಫಲತೆಗಳ ನಡುವೆಯೂ ಸ್ಥಳೀಯ ಮಹಿಳೆಯರ ಸಮಸ್ಯೆಗಳ ವಿರುದ್ಧ

'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ'ಯು ನಡೆಸುತ್ತಿರುವ ಹೋರಾಟವು ದಾಖಲಾರ್ಹವಾಗಿದೆ. ಸಂಘಟನೆಯ ರಾಜ್ಯ ಉಪಾಧ್ಯಕ್ಷೆಯಾಗಿರುವ ಕೆ. ನೀಲಾ ಹಾಗೂ ಸದಸ್ಯರಾದ ಮೀನಾಕ್ಷಿ ಬಾಳಿ, ಪ್ರಾಧ್ಯಾಪಕಿ ಮತ್ತು ಮಹಿಳಾ ಹೋರಾಟಗಾರರಾದ ಡಾ. ಮಲ್ಲಿಕಾ ಘಂಟಿ ಮುಂತಾದವರು ಮಹಿಳಾ ಹೋರಾಟಕ್ಕೆ ಒಂದು ಸ್ಪಷ್ಟ ಸ್ವರೂಪ ನೀಡುತ್ತಿರುವುದು ಕಂಡು ಬರುತ್ತದೆ. ಇವರ ಮಹಿಳಾ ಪರ ಹೋರಾಟಗಳು ಮಹಿಳೆಯರ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಒಂದು ಆಶಾಭಾವನೆಯನ್ನು ಮೂಡಿಸುತ್ತಿದೆ. ಆದರೆ ಇದಕ್ಕೆ ಪೂರಕವಾಗಿ, ಇತರರ ಅದರಲ್ಲೂ ಜನಪ್ರತಿನಿಧಿಗಳ ಪುರುಷ ಸಂಘಟನೆಗಳ ಬೆಂಬಲ ಅತೀ ಅವಶ್ಯಕವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಮಹಿಳೆಯರು ಅನೇಕ ಸಾಮಾಜಿಕ ಪಿಡುಗಗಳಿಂದ ನರಳುತ್ತಿದ್ದಾರೆ. ಅಜ್ಞಾನ, ಅನಕ್ಷರತೆ, ಮೌಢ್ಯತೆ, ಲಿಂಗ ಅಸಮಾನತೆಗಳಿಂದ ಅವರ ಸ್ಥಾನಮಾನಕ್ಕೆ ಧಕ್ಕೆಯಾಗುತ್ತಿದೆಯೇನೋ ಎಂದೆನಿಸುತ್ತದೆ. ಆದರೆ ಇಷ್ಟೆಲ್ಲಾ ಪರಿಸ್ಥಿತಿಯ ಮಧ್ಯೆಯೂ ಎಲ್ಲಾ ವರ್ಗದ ಮಹಿಳೆಯರಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶದ ಮಹಿಳೆಯರು ಸರಕಾರದ ಕೆಲವು ಸೌಲಭ್ಯಗಳನ್ನು ಪಡೆದು ಸ್ವ-ಉದ್ಯೋಗದಲ್ಲಿ ತೊಡಗಿಕೊಂಡಿರುವುದು ಸ್ವಲ್ಪ ಸಮಾಧಾನ ತರುವಂತಿದೆ.

ಹೈದರಾಬಾದ್ ಕರ್ನಾಟಕ ಭಾಗದ ಮಠಗಳು, ಮಸೀದಿಗಳು, ಚರ್ಚ್‌ಗಳ ಬಗ್ಗೆ ಅಧ್ಯಯನ ಮಾಡಿದಾಗ ತಿಳಿದುಬಂದುದೇನೆಂದರೆ, ಸಮಾಜದ ಸುಧಾರಣೆಗೆ ಇವು ನಿರ್ವಹಿಸುತ್ತಿರುವ ಪಾತ್ರ ತುಂಬಾ ಪ್ರಶಂಸನೀಯವಾಗಿದೆ. ಕರ್ನಾಟಕದ ಬೇರೆ ಭಾಗಗಳಿಗಿಂತ ಭಿನ್ನ ಭಾಷೆ, ಧರ್ಮ, ಸಂಸ್ಕೃತಿಯನ್ನು ಒಳಗೊಂಡಿರುವ ಈ ಪ್ರದೇಶದಲ್ಲಿ ಹಿಂದೂ, ಮುಸ್ಲಿಂ, ದಲಿತ, ಕ್ರೈಸ್ತರ ನಡುವೆ ಸಾಮರಸ್ಯ ಮೂಡಿಸುವಲ್ಲಿ ಇವು ಸಫಲವಾಗಿವೆ. ಹಿಂದೂ-ಮುಸ್ಲಿಮರು ಸೇರಿ ಜಾತ್ರೆಯನ್ನು, ಉರಸ್‌ನ್ನು ಆಚರಿಸುತ್ತಿರುವುದು ಶಾಂತಿ ಸಹಬಾಳ್ವೆಗೆ, ಸಾಮರಸ್ಯಕ್ಕೆ, ಸಮಾಜದ ಏಳಿಗೆಗೆ ಪೂರಕವಾದುದಾಗಿದೆ. ಹಾಗೆಯೇ ಬಡವರಿಗೆ, ಕೆಳವರ್ಗದವರಿಗೆ, ಅನಾಥರಿಗೆ, ಅನ್ನ ಆಶ್ರಯ ಶಿಕ್ಷಣ ಸ್ಥಾನಮಾನ ಕೊಟ್ಟು ಅವರನ್ನು ಸಮಾಜದಲ್ಲಿ ಬದುಕುವಂತೆ ಮಾಡುತ್ತಿವೆ. ಧರ್ಮ, ನೀತಿ ಬೋಧನೆಯ ಜೊತೆಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಅವಕಾಶ ವಂಚಿತರಿಗೆ, ನಿರ್ಗತಿಕರಿಗೆ ಅವಕಾಶ ನೀಡುತ್ತಾ ವಿದ್ಯಾ ದಾನ ಮಾಡುತ್ತಾ ಅನಕ್ಷರತೆಯನ್ನು, ಮೌಢ್ಯತೆಯನ್ನು ಹೋಗಲಾಡಿಸುತ್ತಾ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಸಮಾಜದ ಬಹುಮುಖಿಗೆ ತರುವ ಪ್ರಯತ್ನ ಕಡಿಮೆ ಸಾಧನೆಯಲ್ಲ. ಸರಕಾರಗಳು ಮಾಡಬೇಕಾದ ಎಷ್ಟೋ ಕಾರ್ಯಗಳನ್ನು ಇಲ್ಲಿಯ ಮಠಗಳು, ಮಸೀದಿಗಳು, ಚರ್ಚ್‌ಗಳು ಮಾಡುತ್ತಿವೆ. ಹೀಗೆ ಇಲ್ಲಿನ ಮಠಮಾನ್ಯಗಳು ಸಾಮಾಜಿಕ ಸುಧಾರಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿವೆ ಎಂದೆನಿಸುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಚಳವಳಿಗಳ ಮತ್ತು ಪ್ರಸ್ತುತ ಹೋರಾಟಗಳ ಸ್ಥಿತಿಗತಿಗಳು ಹೀಗಿದ್ದರೆ, ಇನ್ನು ಈ ಭಾಗದ ಜಿಲ್ಲೆಗಳು ಶೈಕ್ಷಣಿಕವಾಗಿ ಸಾಕಷ್ಟು ಗೊಂದಲದಲ್ಲಿದ್ದು, ಅಗತ್ಯ

ಸೌಲಭ್ಯಗಳಿಂದ ವಂಚಿತವಾಗಿವೆ. ಶಿಕ್ಷಣ ಮನುಷ್ಯರ ಮೂಲ ಅವಶ್ಯಕತೆಗಳಲ್ಲಿ ಒಂದು. ಯಾವ ಪ್ರದೇಶ ಶಿಕ್ಷಣದಿಂದ ಸಮೃದ್ಧವಾಗಿರುತ್ತದೋ ಅಲ್ಲಿನ ಅಭಿವೃದ್ಧಿಯ ವೇಗ ಹೆಚ್ಚುತ್ತದೆ. ಆದರೆ ಬದುಕಿನ ಭಾಗವಾಗಿ ಹೊಟ್ಟೆಗೆ ಅನ್ನ ನೀಡುವ ಮತ್ತು ಔದ್ಯೋಗಿಕ ನೆಲೆಗೆ ದಾರಿ ಮಾಡುವ ಆಧುನಿಕ ಶಿಕ್ಷಣದ ಕೊರತೆ ಈ ಭಾಗದಲ್ಲಿ ಎದ್ದು ಕಾಣುತ್ತದೆ. ೨೦೧೧ರ ಸಮೀಕ್ಷೆಯಂತೆ ಹೈದರಾಬಾದ್ ಕರ್ನಾಟಕದ ಸಾಕ್ಷರತೆಯ ಪ್ರಮಾಣ ಕೇವಲ ಶೇ. ೬೦. ಅದರಲ್ಲಿಯೂ ಯಾದಗಿರಿ ಜಿಲ್ಲೆಯದು ಶೇ. ೫೨.೩೬ ಎಂಬುದನ್ನು ಗುರುತಿಸಿದರೆ ಗಂಭೀರವಾಗಿ ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಅಷ್ಟೇ ಅಲ್ಲ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಣ್ಣು ಮಕ್ಕಳ ಸಾಕ್ಷರತೆ ಪ್ರಮಾಣ ಆತಂಕ ಹುಟ್ಟಿಸಿದೆ. ಎಷ್ಟೋ ಕುಟುಂಬಗಳಿಗೆ ಹೊಟ್ಟೆ ಹೊರೆಯುವುದೇ ದುಸ್ತರವಾಗಿರುವಾಗ ಉನ್ನತ ಶಿಕ್ಷಣ ಇಲ್ಲಿನ ಮಕ್ಕಳಿಗೆ ಕನಸಾಗಿದೆ. ಹೀಗಾಗಿ ನಿರಂತರ ಬಡತನದಿಂದ ನಲುಗುತ್ತಿರುವ ಈ ಪ್ರದೇಶದ ಶೈಕ್ಷಣಿಕ ವಲಯದ ಏಳಿಗೆಗೆ ಪ್ರತ್ಯೇಕ ಅನುದಾನ ಮಂಜೂರು ಮಾಡುವುದು ಹಾಗೂ ಇಲ್ಲಿನ ಜನರ ಮುಖದಲ್ಲಿ ಅಕ್ಷರದ ಗೆರೆ ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಹೈದರಾಬಾದ್ ಕರ್ನಾಟಕದ ಜಾತಿ ಆಧಾರಿತ ರಾಜಕಾರಣದಿಂದಾಗಿ ಇಲ್ಲಿನ ಸಾಮಾಜಿಕ ಚಳವಳಿಗಳು ಮುಂಚೂಣಿಗೆ ಬರಲು ಸಾಧ್ಯವಾಗುತ್ತಿಲ್ಲವೇನೋ ಎನ್ನಬಹುದಾಗಿದೆ. ಏಕೆಂದರೆ ಮೂರು ನಾಲ್ಕು ದಶಕಗಳಿಂದ ರಾಜಕೀಯ ಮಾಡುತ್ತಾ ನಿರಂತರವಾಗಿ ಆಯ್ಕೆಯಾಗುತ್ತಾ ಬಂದು ಅಧಿಕಾರ ಅನುಭವಿಸುತ್ತಿರುವ, ಈ ಪ್ರದೇಶಕ್ಕೆ ನ್ಯಾಯಯುತವಾಗಿ ಏನನ್ನು ದೊರಕಿಸಿಕೊಡಬೇಕಿತ್ತೋ, ಯೋಜನೆಗಳನ್ನು ಜಾರಿ ಮಾಡಬೇಕಿತ್ತೋ ಅದನ್ನು ಮಾಡಲು ಇಲ್ಲಿನ ಜನ ಪ್ರತಿನಿಧಿಗಳಿಗೆ ಸಾಧ್ಯವಾಗಿಲ್ಲ. ಅಭಿವೃದ್ಧಿಯ ಮಾತೆತ್ತಿದರೆ ಸಾಕು ಸಂವಿಧಾನದ ೩೭೧ನೇ ಕಲಂ ಜಾರಿಯಾಗಬೇಕು ಎನ್ನುವ ನೆಪ ಹೇಳಿ ಜಾರಿಕೊಳ್ಳುತ್ತಿದ್ದಾರೆ.

ಹೈದರಾಬಾದ್ ಕರ್ನಾಟಕದಿಂದ ಇದುವರೆಗೆ ಆಯ್ಕೆಯಾದ ರಾಜಕೀಯ ನಾಯಕರಲ್ಲಿ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಪ್ರತಿಯೊಬ್ಬ ರಾಜಕೀಯ ಮುಖಂಡರಿಗೆ ತಮ್ಮ ರಾಜಕೀಯ ಭವಿಷ್ಯದ ಪ್ರಶ್ನೆ ಎದುರಾದಾಗ, ಸಾಮಾಜಿಕ ಸಿದ್ಧಾಂತಗಳಿಗಿಂತ ತಮ್ಮ ರಾಜಕೀಯ ಪಕ್ಷಗಳ ಸಿದ್ಧಾಂತಗಳ ಕಡೆಯೇ ವಾಲುತ್ತಾರೆ. ಹೀಗೆ ರಾಜಕೀಯ ಪಕ್ಷಗಳ ಕಾರ್ಯವೈಖರಿ ರಾಜಕಾರಣಿಗಳ ಸ್ವಹಿತಾಸಕ್ತಿ, ಜಾತಿ ರಾಜಕಾರಣ, ಈ ಭಾಗದ ಹಿಂದುಳಿದಿರುವಿಕೆಗೆ ಮತ್ತಷ್ಟು ಕಾರಣವಾಗಿದೆ. ಈ ಭಾಗದ ಅನೇಕ ನಾಯಕರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಭಾವಿ ಹುದ್ದೆಗಳನ್ನು ಅಧಿಕಾರವನ್ನು ಪಡೆದಿದ್ದರೂ ಇವರಿಂದ ಇಲ್ಲಿನ ಸ್ಥಿತಿ ಬದಲಾಗಿಲ್ಲ. ಕೊನೆಗೆ ಅಭಿವೃದ್ಧಿಯಿರಲಿ ಅವರವರ ಕ್ಷೇತ್ರ ಮತ್ತು ಅವರ ಸ್ವಂತ ಊರುಗಳೂ ಅಭಿವೃದ್ಧಿ ಆಗದೇ ಇಂದಿಗೂ ಅತ್ಯಂತ ಹಿಂದುಳಿದ ಪ್ರದೇಶಗಳೆಂದು ಗುರುತಿಸಿಕೊಳ್ಳುವಂತಾಗಿದೆ. ಇದು ನಾಯಕರ ಅಸಮರ್ಥತೆಯೋ ಅಥವಾ ಇಂತಹ ನಾಯಕರನ್ನೇ ಮತ್ತೆ ಮತ್ತೆ ಚುನಾವಣೆಗಳಲ್ಲಿ ಗೆಲ್ಲಿಸಿ ಕಳುಹಿಸುತ್ತಿರುವ ಜನರ ಅಸಮರ್ಥತೆಯೋ, ಅನಿವಾರ್ಯತೆಯೋ ಎಂಬುದು ಮತ್ತೊಂದು ಪ್ರಶ್ನೆಯಾಗಿದೆ. ಏಕೆಂದರೆ ಇಲ್ಲಿಯವರೆಗೂ ತಾವು ಚುನಾವಣೆಗಳಲ್ಲಿ ಗೆಲ್ಲಿಸಿ ಕಳುಹಿಸಿದ ನಾಯಕರ

ಕಾರ್ಯವೈಖರಿಯನ್ನು ಪ್ರಶ್ನಿಸುವ ಮನೋಭಾವವಾಗಲಿ, ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಇಚ್ಛಾಶಕ್ತಿ ಹೊಂದಿರುವ ನಾಯಕರನ್ನು ಮಾತ್ರ ಆರಿಸಿ ಕಳುಹಿಸುವ ಮನೋಭಾವವಾಗಲಿ ಇಲ್ಲಿನ ಜನರಲ್ಲಿ ಕಂಡುಬರುತ್ತಿಲ್ಲ. ಒಟ್ಟಿನಲ್ಲಿ ಅಧಿಕಾರ, ಅವಕಾಶ ಸಹಕಾರ, ಎಲ್ಲಾ ದೊರೆತರೂ ಅಭಿವೃದ್ಧಿಯ ದೃಷ್ಟಿಯಿಂದ ಪರಿಸ್ಥಿತಿ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಬದಲಾಗುತ್ತಿಲ್ಲ ಹಾಗೂ ಕೆಲವು ಪ್ರಶ್ನೆಗಳಿಗೆ ಉತ್ತರವೂ ದೊರಕುತ್ತಿಲ್ಲ.

ಇನ್ನು ಇಲ್ಲಿಯವರೆಗೆ ಆಳಿದ ಸರಕಾರಗಳು ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಕೆಲವು ಒತ್ತಡಗಳಿಗೆ ಮಣಿದು ಆಗಾಗ ಕೆಲವೊಂದು ಯೋಜನೆಗಳನ್ನು ರೂಪಿಸಿವೆ. ಈ ಭಾಗದ ಅಭಿವೃದ್ಧಿಗಾಗಿ 'ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಿದೆ. ಮಂಡಳಿಯನ್ನು ಸ್ಥಾಪಿಸಿದಾಗ ಇಲ್ಲಿನ ಜನರು ನಮ್ಮ ಶತ ಶತಮಾನಗಳ ಶಾಪ ಅಳಿಸಿ ಹೋಗುತ್ತದೆಯೆಂದು, ಅಭಿವೃದ್ಧಿ ಮಂಡಳಿ ಮುಖಾಂತರ ಇಡೀ ಪ್ರದೇಶವೇ ನಂದನವನವಾಗಿ ಕಂಗೊಳಿಸುತ್ತದೆಯೆಂದು ಕನಸು ಕಂಡಿದ್ದರು. ಆದರೆ ಈಗ ಮಂಡಳಿಗೆ ಸರಕಾರ ಬಿಡುಗಡೆ ಮಾಡುತ್ತಿರುವ ಅನುದಾನದ ಮೊತ್ತವನ್ನು ಮತ್ತು ಮಂಡಳಿಯ ಕಾರ್ಯ ವೈಖರಿಯನ್ನು ನೋಡಿದಾಗ ಇಲ್ಲಿನ ಜನತೆ ನಿರಾಸೆಗೊಳಗಾಗಿದ್ದಾರೆ. ಏಕೆಂದರೆ ಸರಕಾರ ಅಭಿವೃದ್ಧಿ ಮಂಡಳಿಗೆ ಅಗತ್ಯವಾದಷ್ಟು ಹಣ ಮಂಜೂರು ಮಾಡುತ್ತಿಲ್ಲ ಎನ್ನುವುದಷ್ಟೇ ಅಲ್ಲ, ಅಭಿವೃದ್ಧಿ ಮಂಡಳಿ ರಚಿಸಿದ್ದೇವೆಯೆಂಬ ಕಾರಣ ಒಡ್ಡಿ ಇತರ ಅನುದಾನಗಳಲ್ಲಿ ಇಲ್ಲಿನ ಜಿಲ್ಲೆಗಳಿಗೆ ಅನುದಾನವನ್ನು ಕಡಿತಗೊಳಿಸಲಾಗುತ್ತಿದೆ. ಹೀಗಾಗಿ ಒಂದು ರೀತಿಯಲ್ಲಿ ಅಭಿವೃದ್ಧಿ ಮಂಡಳಿ ಈ ಭಾಗದವರಿಗೆ ವರವೋ, ಶಾಪವೋ ಎನ್ನುವಂತಾಗಿದೆ.

ಇನ್ನು ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿ ಮತ್ತು ಅನುಷ್ಠಾನ ಹಾಗೂ ಅದರಿಂದಾದ ಸುಧಾರಣೆಗಳನ್ನು, ಬದಲಾವಣೆಗಳನ್ನು ನೋಡಿದಾಗ, ಹೈದರಾಬಾದ್ ಕರ್ನಾಟಕದ ಯಾವ ಸ್ಥಿತಿಗತಿಗಳು ಸುಧಾರಿಸದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ತನ್ನ ವರದಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಮೈಸೂರು ಕರ್ನಾಟಕ ಮತ್ತು ಮುಂಬಯಿ ಕರ್ನಾಟಕಕ್ಕೆ ಹೋಲಿಸಿದಾಗ ನೂರು ವರ್ಷದಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಿತು. ಆದರೂ ಸರಕಾರಗಳು ಡಾ. ಡಿ.ಎಂ. ನಂಜುಂಡಪ್ಪ ಅವರ ವರದಿಯನ್ನು ಜಾರಿ ಮಾಡುವಲ್ಲಿ ವಿಫಲವಾಗಿರುವುದು ಕಂಡು ಬರುತ್ತದೆ. ಒಂದು ರೀತಿಯಲ್ಲಿ ವರದಿ ಜಾರಿಯೂ ಆಗಲಿಲ್ಲ, ತಿರಸ್ಕಾರವೂ ಆಗಲಿಲ್ಲ. ಹಾಗೆಯೇ ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ವರದಿಯ ಅನುಷ್ಠಾನ ಸಮಿತಿ ರಚನೆಯಾಗಿ, ಆ ಸಮಿತಿಯು ೪ ವರ್ಷಗಳಲ್ಲಿ ಲಭ್ಯವಿದ್ದ ೯,೧೬೧ ಕೋಟಿ ರೂ.ಗಳ ಅನುದಾನದಲ್ಲಿ ಕೇವಲ ೩,೯೭೮ ಕೋಟಿ ರೂ.ಗಳನ್ನಷ್ಟೆ ಬಳಸಿದೆ. ಅನುದಾನವನ್ನು ಪರಿಣಾಮಕಾರಿಯಾಗಿ ಬಳಸದೇ ಇರುವುದರಿಂದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಹಾಗೆಯೇ ಅನುದಾನವು ಸರಿಯಾಗಿ ಬಿಡುಗಡೆ ಆಗುತ್ತಿಲ್ಲ.

ಆದರೂ ಅಭಿವೃದ್ಧಿಯೆಂಬುದಕ್ಕೆ ರಸ್ತೆಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣವಾಗಲಿ ಅಳತೆಗೋಲಲ್ಲ. ಬದಲಾಗಿ ಅಭಿವೃದ್ಧಿಯು ಈ ಭಾಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಶಿಕ್ಷಣ ಸಂಸ್ಥೆಗಳಲ್ಲಿ ಸುಲಭ ಪ್ರವೇಶಾವಕಾಶವನ್ನು ಕಲ್ಪಿಸುವ, ಸರಕಾರಿ ನೌಕರಿಗಳಲ್ಲಿ ಮೀಸಲಾತಿ ಮೂಲಕ ಉದ್ಯೋಗವನ್ನು ದೊರಕಿಸಿ, ಇಲ್ಲಿನ ಜನರ ಸ್ಥಾನಮಾನದಲ್ಲಿ ಬದಲಾವಣೆಯನ್ನು ತರುವುದರಲ್ಲಿ ಅರ್ಥವಿದೆ.

ಇನ್ನು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಅನ್ವಯವಾಗುವಂತೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ಒತ್ತಾಯಿಸಿ ಇಲ್ಲಿಯ ಜನರು ಹಲವಾರು ದಶಕಗಳಿಂದ ಬೀದಿಗಿಳಿದು ಹೋರಾಟ ನಡೆಸಿದ್ದರು. ಅನೇಕ ಸಂಘಟನೆಗಳು, ವಿವಿಧ ನಾಯಕರು, ಜನರು ನಡೆಸಿದ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರಕಾರ, ಇವರ ಹೋರಾಟಕ್ಕೆ, ಬೇಡಿಕೆಗೆ ಕೊನೆಗೂ ಸ್ಪಂದಿಸಿ, ಗೃಹ ಸಚಿವರಾದ ಶ್ರೀ ಸುಶೀಲ್ ಕುಮಾರ್ ಶಿಂದೆ ಅವರ ಒಪ್ಪಿಗೆಯ ನಂತರ ಇತ್ತೀಚಿಗೆ ೩೭೧ನೇ ಕಲಂ ತಿದ್ದುಪಡಿಗೆ ಮುಂದಾಗಿರುವುದು ಇಲ್ಲಿನ ಜನರಲ್ಲಿ ಹರ್ಷ ಮೂಡಿಸಿದೆ.

ಪ್ರಸ್ತುತ ನಿಬಂಧವನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಕೇಂದ್ರ ಸರಕಾರ ಶ್ರೀ ಮನಮೋಹನ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಷ್ಟು ವರ್ಷಗಳ ಇಲ್ಲಿನ ಜನರ ಹೋರಾಟದ ಕೂಗಿಗೆ ಸ್ಪಂದಿಸಿದೆ. ೩೭೧ನೇ ಕಲಂ ತಿದ್ದುಪಡಿಗೆ ಒಪ್ಪಿಗೆ ನೀಡಿರುತ್ತದೆ. ಮೊದಲ ಹಂತವಾಗಿ ದಿನಾಂಕ ೦೩.೦೪.೨೦೧೨ರಂದು ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಾದೇಶಿಕ ಮೀಸಲು ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿ ಶುಕ್ರವಾರ ರಾತ್ರಿ ಒಪ್ಪಿಗೆ ನೀಡಿದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸಿರುವುದು ಬಹಳ ಮುಖ್ಯವಾದ ಮತ್ತು ಸ್ವಾಗತಾರ್ಹ ಅಂಶವಾಗಿದೆ. ಎಲ್ಲಾ ಚಾರಿತ್ರಿಕ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದ ಜನತೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯ ಹಕ್ಕುಳ್ಳವರಾಗಿದ್ದಾರೆ. ಇದರಿಂದ ಸುಮಾರು ದಶಕದಿಂದ ಹೋರಾಟ ಮಾಡುತ್ತಾ ಬಂದ ಹೋರಾಟಗಾರರಿಗೆ ಗೆಲುವು ಸಿಕ್ಕಂತಾಗಿದೆ. ಆದರೆ ಇಲ್ಲಿನ ಜನರ, ಹೋರಾಟಗಾರರ ಜವಾಬ್ದಾರಿ ಇಲ್ಲಿಗೆ ಮುಗಿದಿಲ್ಲ ಹಾಗೂ ಮೈಮರೆತು ಕೂಡುವ ಹಾಗಿಲ್ಲ. ಏಕೆಂದರೆ ತಿದ್ದುಪಡಿ ಕರಡು ಮಸೂದೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಂಗೀಕಾರವಾಗಿ ರಾಷ್ಟ್ರಪತಿಯವರ ಅಂಗೀಕಾರ ಪಡೆದು ಸರಕಾರದ ಗೆಜೆಟ್‌ನಲ್ಲಿ ಪ್ರಕಟಿಸಬೇಕಾಗಿದೆ. ಆನಂತರವೇ ೩೭೧ನೇ ಕಲಂನ ಸೌಲಭ್ಯಗಳು ಇಲ್ಲಿನವರಿಗೆ ದೊರಕುತ್ತವೆ.

ಹೀಗಾಗಿ ಸಂವಿಧಾನದ ೩೭೧ನೇ ಕಲಂ ಹೈದರಾಬಾದ್ ಕರ್ನಾಟಕಕ್ಕೆ ಎಂದಿನಿಂದ ಜಾರಿಯಾಗುತ್ತದೆ, ಇದರಿಂದ ಸಿಗುವ ಸೌಲಭ್ಯಗಳೇನು ಎನ್ನುವುದನ್ನು ಬದಿಗಿಟ್ಟು ಈಗಾಗಲೇ ಇಲ್ಲಿರುವ ವಿವಿಧ ಯೋಜನೆಗಳಿಗೆ ಬೇಡಿಕೆಗಳಿಗೆ ಸರಕಾರ ಮತ್ತು ಇಲ್ಲಿನ ಜನ ಪ್ರತಿನಿಧಿಗಳು ಸ್ಪಂದಿಸಬೇಕು.

ಇಲ್ಲಿನ ಅಭಿವೃದ್ಧಿಗೆ ಮತ್ತು ಯೋಜನೆಗಳ ಅನುಷ್ಠಾನಕ್ಕೆ ವಿವಿಧ ಸಮಿತಿಗಳನ್ನು ನೇಮಿಸುವುದರ ಮೂಲಕ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯ ಕೆಲಸ ಆಗಬೇಕು. ಒಂದು ವೇಳೆ ಸರಕಾರ ಇದನ್ನು ಗಮನಿಸದೆ ಹೋದರೆ ಪರಿಸ್ಥಿತಿ ಹೀಗೆ ಮುಂದುವರಿದುಕೊಂಡು ಹೋದರೆ ಪ್ರಸಕ್ತ ಪಕ್ಕದ ತೆಲಂಗಾಣದಲ್ಲಿ ಉದ್ಭವಿಸಿರುವಂತಹ ಪರಿಸ್ಥಿತಿ ಇಲ್ಲೂ ಉದ್ಭವಿಸಿದರೆ ಆಶ್ಚರ್ಯವೇನಿಲ್ಲ. ಹೀಗಾಗಿ ಸರಕಾರ ಮತ್ತು ಸ್ಥಳೀಯ ಜನಪ್ರತಿನಿಧಿಗಳು ತತಕ್ಷಣ ಇಲ್ಲಿನ ಮೂಲಭೂತ ಅವಶ್ಯಕತೆಗಳಾದ ರಸ್ತೆ, ನೀರು, ಶಿಕ್ಷಣ, ಉದ್ಯೋಗ, ಕೃಷಿಗೆ ಒತ್ತು ನೀಡಬೇಕಾಗಿದೆ. ಇದರ ಮೂಲಕ ಜನರ ಬದುಕಿನಲ್ಲಿ ಈ ಭಾಗದಲ್ಲಿ ಬದಲಾವಣೆಯನ್ನು ತರಬೇಕಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಹೈದರಾಬಾದ್ ಕರ್ನಾಟಕ ಪ್ರದೇಶ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿರುವುದು ಒಂದು ಕಡೆ ಆದರೆ ಮಾನಸಿಕವಾಗಿಯೂ ಬಹಳ ಎಚ್ಚರ ತಪ್ಪಿದೆ. ತಮ್ಮ ಮೇಲೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳುವ ಆತ್ಮಪ್ರಜ್ಞೆಯೂ ಇಲ್ಲವಾಗಿದೆ. ಏಕೆಂದರೆ ಇಲ್ಲಿನ ಅನಕ್ಷರತೆಗೆ, ಬಡತನಕ್ಕೆ ಅನಭಿವೃದ್ಧಿಗೆ ಹಿಂದುಳಿದಿರುವಿಕೆಗೆ ಬೇರೆಯುವರು ಎಷ್ಟು ಕಾರಣರಾಗಿದ್ದಾರೋ ಅದಕ್ಕಿಂತ ಹೆಚ್ಚು ಕಾರಣಕರ್ತರು ಈ ಭಾಗದವರೇ ಆಗಿದ್ದಾರೆ. ಏಕೆಂದರೆ ಹೈದರಾಬಾದ್ ನಿಜಾಮನ ಕಾಲದಲ್ಲಿದ್ದ ಮುಲ್ಕಿ ಕಾನೂನಿನ ಅನ್ವಯ ನೌಕರಿ ಪಡೆಯುತ್ತಿದ್ದ ಜನರು, ಸ್ವಾತಂತ್ರ್ಯದ ನಂತರ ಮುಲ್ಕಿ ಕಾನೂನನ್ನು ಉಳಿಸಿಕೊಳ್ಳುವುದು ಇವರಿಗೆ ಸಾಧ್ಯವಾಗಿಲ್ಲ. ಇದೇ ಭಾಗದ ಜೊತೆಗಿದ್ದ ಮರಾಠವಾಡದವರು ಮತ್ತು ತೆಲಂಗಾಣದವರು ಮುಲ್ಕಿ ಕಾನೂನಿನ ಪ್ರಯೋಜನ ಪಡೆದಿರುವಾಗ ಆ ಸೌಲಭ್ಯ ನಮಗೇಕೆ ಇಲ್ಲವೆಂದು ಇಲ್ಲಿನ ಜನರೂ ಆಲೋಚಿಸಲಿಲ್ಲ ಹಾಗೂ ಜನನಾಯಕರೂ ಪ್ರಶ್ನಿಸಲಿಲ್ಲ. ಸಮಯ ಮಿಂಚಿದ ಬಳಿಕ ಈಗ ವಿಶೇಷ ಸವಲತ್ತುಗಳಿಗಾಗಿ ಹೋರಾಡುತ್ತಿದ್ದಾರೆ. ಹೋರಾಟಗಳೂ ಕೂಡ ಎಲ್ಲಾ ಜನತೆಯ ಹೋರಾಟಗಳಾಗಿ ಕಂಡುಬರದೇ, ರಾಜಕೀಯ ಬಣ್ಣ ಪಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಬದಲಾಗಿ ಪಕ್ಷಭೇದ, ಜಾತಿಭೇದ ಮರೆತು ಎಲ್ಲರೂ ಒಗ್ಗೂಡಿ ಇನ್ನಾದರೂ ಈ ಭಾಗದ ಅಭಿವೃದ್ಧಿಯ ಬಗ್ಗೆ ಯೋಚಿಸುವ ಅಗತ್ಯ ಪ್ರಸ್ತುತ ತುರ್ತಾಗಿ ಆಗಬೇಕಾಗಿದೆ.

ಏಕೆಂದರೆ ಈ ಭಾಗದಲ್ಲಿ ನೈಸರ್ಗಿಕ ಸಂಪತ್ತಿನ ಜೊತೆಗೆ ಮಾನವ ಸಂಪತ್ತಿನ ಅಭಾವ ಕೂಡ ಕಂಡು ಬರುತ್ತದೆ. ಜನಸಂಖ್ಯೆಯ ಪ್ರಮಾಣ ಅಧಿಕ ಇದ್ದರೂ ಜನರಲ್ಲಿ ಅಭಿವೃದ್ಧಿಪರ ಮನೋಭಾವ ಚಿಂತನೆ ಕಾಣುವುದಿಲ್ಲ. ವ್ಯಕ್ತಿನಿಷ್ಠತೆ ಹಾಗೂ ಸ್ವಾರ್ಥ ಭಾವನೆ ಪ್ರಬಲವಾಗಿದೆ, ಉದ್ಯಮ ಸಾಹಸಿಗಳ ಪ್ರಮಾಣ ಕಡಿಮೆ ಇದೆ, ಕೃಷಿಯಲ್ಲಿ ಉತ್ಪಾದನೆ ಹಾಗೂ ಉತ್ಪಾದನಾ ಶಕ್ತಿ ಕಡಿಮೆ ಇದೆ, ಉದ್ದಿಮೆಗಳನ್ನು ಬೆಳೆಸಲು ಸಂಪನ್ಮೂಲಗಳು ಲಭ್ಯವಿರುವುದಿಲ್ಲ. ಹೀಗಾಗಿ ಅಭಿವೃದ್ಧಿಯ ಮಾರ್ಗದಲ್ಲಿ ಹಲವಾರು ಅಡೆತಡೆಗಳು ಕಂಡು ಬರುತ್ತವೆ. ಮಾನವ ಅಭಿವೃದ್ಧಿಗೆ ಆರ್ಥಿಕ ಅಭಿವೃದ್ಧಿ ಅವಶ್ಯಕವಾಗಿದೆ, ಇಲ್ಲಿನ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಪ್ರಯತ್ನಗಳು ನಡೆದಿವೆ. ಆದರೆ ಇವುಗಳಿಗೆ ಸರಿಯಾದ ಶಕ್ತಿ

ಹಾಗೂ ಚಾಲನೆ ಸಿಕ್ಕಿರುವುದಿಲ್ಲ. ಶತಶತಮಾನಗಳಿಂದ ಆರ್ಥಿಕ ಸ್ಥಗಿತತೆಗೆ ಒಳಗಾದ ಈ ಭಾಗದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಮೂಡಿಸಬೇಕಾದರೆ, ಒಂದು ಸಮಗ್ರ ಅಭಿವೃದ್ಧಿಯ ಮಾದರಿ ಬೇಕು. ಈ ಮಾದರಿಯ ಸ್ಥೂಲ ನಕ್ಷೆಯನ್ನು ತಯಾರಿಸುವ ಪ್ರಯತ್ನ ಇಲ್ಲಿ ಮಾಡಬೇಕಾಗುತ್ತದೆ.

ಒಟ್ಟಿನಲ್ಲಿ ವ್ಯವಸ್ಥೆಯಲ್ಲಿ ಅಸಮಾನತೆ, ಶೋಷಣೆ, ತಾರತಮ್ಯ ಹಾಗೂ ಅನ್ಯಾಯಗಳು ನಡೆಯುತ್ತಿದ್ದರೆ ಅವುಗಳ ವಿರುದ್ಧ ಪ್ರತಿಭಟನೆ ಹೋರಾಟ ಚಳವಳಿಗಳು ಸಾಮಾನ್ಯ. ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಮತ್ತು ಶೋಷಣೆಗಳಿರುತ್ತವೆಯೋ ಅಲ್ಲಿಯವರೆಗೆ ಹೋರಾಟ ಮತ್ತು ಚಳವಳಿಗಳು ನಡೆಯುತ್ತಿರುತ್ತವೆ. ಅವುಗಳನ್ನು ನಿಲ್ಲಿಸಲು ತಡೆಹಿಡಿಯಲು ಸಾಧ್ಯವಿಲ್ಲ. ಹೋರಾಟ ಮತ್ತು ಚಳವಳಿಯೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಬೇಕು ಎನ್ನುವುದಾದರೆ ಅಸಮಾನತೆ ಮತ್ತು ಶೋಷಣೆ ಇಲ್ಲದ ವ್ಯವಸ್ಥೆ ನಿರ್ಮಾಣವಾಗಬೇಕು ಅಲ್ಲಿಯವರೆಗೆ ಹೋರಾಟ ಮುಂದುವರಿಯುತ್ತವೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಭೂಸಂಪತ್ತು, ಜಲಸಂಪತ್ತು, ಮಾನವ ಸಂಪನ್ಮೂಲ ಎಲ್ಲಾ ಇದೆ. ಆದರೆ ಇಲ್ಲಿನ ಬಡತನಕ್ಕೆ, ನಿರುದ್ಯೋಗಕ್ಕೆ, ಜನ ಹೊಟ್ಟೆಪಾಡಿಗಾಗಿ ಗುಳೆ ಹೋಗುತ್ತಿರುವುದಕ್ಕೆ, ಅನಭಿವೃದ್ಧಿಗೆ, ಅಸಮಾನತೆಗೆ ಈಡಾಗಿರುವುದಕ್ಕೆ ಮೂಲ ಕಾರಣವಾದರೂ ಏನು ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ಇದಕ್ಕೆ ಕಾರಣ ಇದುವರೆಗೆ ಆಳಿದ ಸರಕಾರಗಳ ನಿರ್ಲಕ್ಷ್ಯವೋ, ಇಲ್ಲಿನ ಜನಪ್ರತಿನಿಧಿಗಳ ನಿರ್ಲಕ್ಷ್ಯವೋ, ಯಾವುದನ್ನು ಪ್ರಶ್ನಿಸದೇ ಎಲ್ಲವನ್ನು ಒಪ್ಪಿಕೊಳ್ಳುವ, ಸಹಿಸಿಕೊಳ್ಳುವ ಇಲ್ಲಿಯ ಜನರ ಮುಗ್ಧತೆಯೋ ಎನ್ನುವುದಕ್ಕೆ ಸ್ಪಷ್ಟವಾಗಿ ಉತ್ತರಿಸುವುದು ಸುಲಭವಲ್ಲ. ಅಷ್ಟೇ ಅಲ್ಲ ಇಂದಿಗೂ ಈ ಭಾಗ ಸಮಗ್ರ ಅಭಿವೃದ್ಧಿಯಿಂದ ಇನ್ನೂ ದೂರ ಇದ್ದು, ನಾಗರಿಕ ಪ್ರಗತಿಯಲ್ಲಿ ಸತತ ಹಿಂದುಳಿಯುತ್ತಾ ಬಂದಿರುವುದು ಇಲ್ಲಿನ ಜನರನ್ನು ಚಿಂತೆಗೀಡು ಮಾಡಿದೆ. ರಸ್ತೆ, ಸಾರಿಗೆ, ಶಿಕ್ಷಣ, ಉದ್ಯೋಗ, ತಲಾವರಮಾನ, ಆರೋಗ್ಯ ಮುಂತಾದ ಹಲವಾರು ವಿಷಯಗಳಲ್ಲಿ ಈ ಭಾಗವು ಎಷ್ಟು ಹಿಂದುಳಿದಿದೆ ಎನ್ನುವುದನ್ನು ಸರಕಾರದ ವರದಿಗಳೇ ಘಂಟಾ ಘೋಷವಾಗಿ ಸಾರುತ್ತಿವೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಮೂಲಭೂತ ಸೌಕರ್ಯಗಳಿಂದ ಇಲ್ಲಿಯ ಜನ ವಂಚಿತರಾಗಿದ್ದು, ಪ್ರತಿಯೊಂದಕ್ಕೂ ಬೇಡಿಕೆಯಿಟ್ಟು ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಇಂತಹ ಪ್ರದೇಶದಲ್ಲಿ ಬದಲಾವಣೆ ಆಗುವುದು ಯಾವಾಗ, ಇದಕ್ಕೆಲ್ಲಾ ಪರಿಹಾರ ಏನು, ಇದಕ್ಕಾಗಿ ಇಲ್ಲಿನ ರಾಜಕೀಯ ನಾಯಕರುಗಳು ಇಚ್ಛಾಶಕ್ತಿ ಪ್ರದರ್ಶಿಸುವುದು ಯಾವಾಗ, ಈ ಭಾಗದ ಅಭಿವೃದ್ಧಿಗಾಗಿ ಎಲ್ಲರೂ ಒಂದುಗೂಡಿ ಹೋರಾಡುವುದು ಯಾವಾಗ ಎನ್ನುವುದು ಎಲ್ಲರ ಮುಂದಿರುವ ಪ್ರಶ್ನೆ ಮತ್ತು ಸವಾಲಾಗಿದೆ.

ಇಂತಹ ಪ್ರಶ್ನೆಗಳು, ಸಮಸ್ಯೆಗಳು ಏನೇ ಇರಲಿ, ಪ್ರಸ್ತುತ ಸಂದರ್ಭದಲ್ಲಿ ಈ ಪ್ರದೇಶದ ಸುಧಾರಣೆಗಾಗಿ, ಬದಲಾವಣೆಗಾಗಿ, ಕೆಲವೊಂದು ತುರ್ತು ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ನೀಡಿರುವ ವರದಿಯನ್ನು ತೀವ್ರವಾಗಿ, ಅರ್ಥಪೂರ್ಣವಾಗಿ ಜಾರಿ ಮಾಡಬೇಕಾಗಿದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು

ದೂರದೃಷ್ಟಿಯ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ಕಾಮಗಾರಿಗಳನ್ನು, ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕಾಗಿದೆ. ಇಲ್ಲಿನ ಶಾಸಕರು, ಮಂತ್ರಿಗಳು, ವ್ಯಾಪಾರ, ವಾಣಿಜ್ಯಕ್ಕೆ ಅವಶ್ಯವಾಗಿರುವ ರಸ್ತೆ, ರೇಲ್ವೆ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಸರಕಾರದ ವತಿಯಿಂದ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ಹೊಸ ನೀರಾವರಿ ಯೋಜನೆಗಳನ್ನು ರೂಪಿಸಿ, ಹೊಸ ವೃತ್ತಿಪರ ಕೋರ್ಸ್‌ಗಳ ಕಾಲೇಜುಗಳನ್ನು ಸ್ಥಾಪಿಸಿ ಇಲ್ಲಿನ ಜನರಿಗೆ ಅನ್ನ, ಶಿಕ್ಷಣ, ಉದ್ಯೋಗ, ಆಶ್ರಯಗಳನ್ನು ನೀಡಬೇಕಾಗಿದೆ. ಈ ಪ್ರದೇಶದ ಎಲ್ಲಾ ಕ್ಷೇತ್ರಗಳ ಪ್ರತಿಭೆಗಳನ್ನು ಗುರುತಿಸಿ, ಅವಕಾಶಕೊಟ್ಟು, ಪ್ರೋತ್ಸಾಹಿಸಿ ಆಧುನಿಕತೆಯ ಸಮಾಜಕ್ಕೆ ಮುಖಾಮುಖಿಯಾಗಿ ನಿಲ್ಲಿಸಬೇಕಾಗಿದೆ. ಈ ಮೂಲಕ ಇಲ್ಲಿಯ ಕೆಳವರ್ಗದ, ಮಧ್ಯಮವರ್ಗದ, ನಿರ್ಲಕ್ಷಿತ ವರ್ಗದ ಜನರನ್ನು ಮೇಲೆ ತಂದು ಹೊಸ ಬದುಕನ್ನು ನೀಡಬೇಕಾಗಿದೆ.

ಈ ನಿಟ್ಟಿನಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ೩೭೧ನೇ ಕಲಂ ಆದಷ್ಟು ಬೇಗ ಜಾರಿ ಆಗಿ ಇದರಿಂದ ಸಿಗುವ ಸೌಲಭ್ಯಗಳು ದೊರಕಿ, ವಿಶೇಷ ಅನುದಾನ ದೊರಕಿ, ಇಲ್ಲಿ ಹಲವಾರು ದಶಕಗಳಿಂದ ತಾಂಡವಾಡುತ್ತಿರುವ ಸಮಸ್ಯೆಗಳು ನಿವಾರಣೆ ಆಗಿ ಇಲ್ಲಿನ ಜನರ ಬದುಕು ಹಸನಾಗಲಿ ಎನ್ನುವುದು ಎಲ್ಲರ ಆಸೆಯಾಗಿದೆ. ಆಗಲಾದರೂ ಈ ಪ್ರದೇಶಕ್ಕೆ ಅಂಟಿಕೊಂಡಿರುವ ಹಿಂದುಳಿದಿರುವಿಕೆಯ, ಅಸಮಾನತೆಯ ಶಾಪ ತೊಲಗಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿ, ಸಮಾನತೆ ಬಂದು, ಪ್ರತ್ಯೇಕತೆಯ ಕಲ್ಪನೆಯಿಂದ ಹೊರಬಂದು, ಅಖಂಡ ಕರ್ನಾಟಕದ ಬೇರು ಇನ್ನೂ ಗಟ್ಟಿಯಾಗಿ ಬೆಳೆದು ಬರಲಿ ಎನ್ನುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

□□□

ಅನುಬಂಧಗಳು

೧. ಸಂದರ್ಶನಾಧಾರಿತ ಮಾಹಿತಿ

೨. ಗ್ರಂಥಋಣ

೩. ಭೂಪಟಗಳು

೪. ಛಾಯಾಚಿತ್ರಗಳು

ಅನುಬಂಧಗಳು

೧. ಸಂದರ್ಶನಾಧಾರಿತ ಮಾಹಿತಿ

'ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳು' (ಸಮಕಾಲೀನ ಹಿನ್ನೆಲೆಯ ಅಧ್ಯಯನ) ಎನ್ನುವ ಪಿಎಚ್.ಡಿ. ಸಂಶೋಧನಾ ವಿಷಯ ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಪ್ರಸ್ತುತದವರೆಗಿನ ಘಟನೆಗಳು ಮತ್ತು ಬೆಳವಣಿಗೆಗಳಿಗೆ ಸಂಬಂಧಪಟ್ಟಿರುವುದರಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಡೆದ ಮತ್ತು ನಡೆಯುತ್ತಿರುವ ಚಳವಳಿಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿರುವಂತಹ ಈ ಭಾಗದ ಅನೇಕ ವ್ಯಕ್ತಿಗಳ ಸಂದರ್ಶನವನ್ನು ಕೈಗೊಂಡು ಅವರ ಅನುಭವಗಳನ್ನು ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಮತ್ತು ಅವರ ಯೋಜನೆಗಳು ರಚನಾತ್ಮಕ ಸಲಹೆ ಸೂಚನೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅವರಲ್ಲಿ ಪ್ರಗತಿಪರ ಹೋರಾಟಗಾರರು, ರೈತ, ದಲಿತ, ಕಾರ್ಮಿಕ ಮತ್ತು ಮಹಿಳಾ ಮುಖಂಡರು, ಸಾಹಿತಿಗಳು, ಪತ್ರಕರ್ತರು, ಚಿಂತಕರು, ಮಾಜಿ ಸಚಿವರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸದಸ್ಯರು, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಮಠಮಾನ್ಯಗಳ ಮುಖಂಡರುಗಳು, ಅಭಿವೃದ್ಧಿ ಮಂಡಳಿಯ ಪದಾಧಿಕಾರಿಗಳು, ಜನಸಾಮಾನ್ಯರು ಈ ರೀತಿ ವಿವಿಧ ಕ್ಷೇತ್ರಕ್ಕೆ, ವರ್ಗಕ್ಕೆ ಸಂಬಂಧಪಟ್ಟಂತೆ ಅನೇಕ ಗಣ್ಯರು ಸೇರಿದ್ದಾರೆ.

ಸಂದರ್ಶನದ ಸಮಯದಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಹಿಂದುಳಿದಿರುವಿಕೆ, ಪ್ರಾದೇಶಿಕ ಅಸಮಾನತೆ, ಇಲ್ಲಿನ ರೈತರ, ದಲಿತರ, ಮಹಿಳೆಯರ, ಕಾರ್ಮಿಕರ ಹೋರಾಟಗಳು ಪ್ರಸ್ತುತ ಅವರ ಸ್ಥಿತಿಗತಿಗಳು, ಸಮಸ್ಯೆಗಳು, ಸವಾಲುಗಳು, ಡಾ. ಡಿ.ಎಂ. ನಂಜುಂಡಪ್ಪ ವರದಿಯ ಅಂಶಗಳು, ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಹೀಗೆ ವಿಭಿನ್ನ ಬಗೆಯ ವಿಭಿನ್ನ ದೃಷ್ಟಿಕೋನದ ಪ್ರಶ್ನೆಗಳನ್ನು ಕೇಳಿ ಅವರ ಅಭಿಪ್ರಾಯಗಳನ್ನು, ಸಲಹೆಗಳನ್ನು ವಾಸ್ತವ ಸ್ಥಿತಿಗತಿಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ಹಾಗೂ ಸಂಶೋಧನಾ ಅಧ್ಯಾಯಗಳಲ್ಲಿ ಇವುಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಹಾಗೆಯೇ ಇಲ್ಲಿ ಕೆಲವು ಆಯ್ದ ವ್ಯಕ್ತಿಗಳ ಸಂದರ್ಶನ ವರದಿಯನ್ನು ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.

೧. ಶ್ರೀ ವೈಜನಾಥ ಪಾಟೀಲ

ಮಾಜಿ ಸಚಿವರು ಮತ್ತು ಅಧ್ಯಕ್ಷರು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ

ಸಂದರ್ಶನ ದಿನಾಂಕ : ೨೩.೧೦.೨೦೧೦, ಗುಲಬರ್ಗಾ

ನಿರಂತರ ಶೋಷಣೆ ಮತ್ತು ದಾಸ್ಯದಲ್ಲಿ ಕೊಳೆಯುತ್ತಿರುವ ಅಭಾಗ್ಯನಾಡು ಹೈದರಾಬಾದ್ ಕರ್ನಾಟಕ ಪ್ರದೇಶ ಎಂದು ಹೇಳಿದರೆ ತಪ್ಪಾಗಲಾರದು. ನಾವು ಹೆಸರಿಗೆ ಮಾತ್ರ ನಿಜಾಮರ ರಾಜಶಾಹಿ ಆಡಳಿತದಿಂದ ಮುಕ್ತರಾದೆವು. ಆದರೆ ಅಂದಿನಿಂದ ಇಂದಿನವರೆಗೂ ಒಂದಿಲ್ಲೊಂದು ಸ್ವರೂಪದ ದಾಸ್ಯಕ್ಕೆ ಶೋಷಣೆಗೆ ತುತ್ತಾಗುತ್ತಾ ಬಂದಿರುವುದು ವಾಸ್ತವಿಕ ಸತ್ಯ. ಭಾಷಾವಾರು ರಾಜ್ಯ ರಚನೆಯಾಗಿ ಐವತ್ತೈದು ವರ್ಷಗಳಾದ ನಂತರವೂ ಇಂದು ರಾಜ್ಯದ ಒಂದು ಭಾಗ ಪ್ರಗತಿ ಹೊಂದಿ ಸಮರ್ಥವಾಗಿದ್ದರೆ ಇದೇ ರಾಜ್ಯದ ಇನ್ನೊಂದು ಭಾಗ ಪ್ರಗತಿಯಿಂದ ವಂಚಿತವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಅತೀ ಹಿಂದುಳಿದು ಇನ್ನೂ ಮೂಲಭೂತ ಸೌಲಭ್ಯಗಳನ್ನು ಹೊಂದದೆ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಭಾಷಾವಾರು ರಾಜ್ಯ ರಚನೆಯಾಗಿ ಹೈದರಾಬಾದ್ ಕರ್ನಾಟಕ ವಿಭಾಗ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದಾಗ ಈ ಭಾಗದ ಜನರು ಬಹಳ ಸಂತೋಷಪಟ್ಟಿದ್ದರು. ಇಲ್ಲಿನ ಜನರಲ್ಲಿ ಒಂದು ಹೊಸ ಆಶಾಕಿರಣ ಮೂಡಿದಂತಾಗಿತ್ತು. ನಮ್ಮ ಪ್ರದೇಶ ಬದಲಾಗುವುದೆಂಬ, ಅಭಿವೃದ್ಧಿ ಆಗುವುದೆಂಬ ಹಿರಿದಾಸೆಯನ್ನು ಮನದಲ್ಲಿ ತುಂಬಿಕೊಂಡು ಸಂತೋಷದಿಂದ ವಿಲೀನವನ್ನು ಆಚರಿಸಿದ್ದೆವು. ಆದರೆ ರಾಜ್ಯದಲ್ಲಿ ಇಲ್ಲಿಯವರೆಗೆ ಅಧಿಕಾರ ನಡೆಸುತ್ತಾ ಬಂದ ಪ್ರತಿಯೊಂದು ಸರಕಾರವೂ ಈ ಭಾಗವನ್ನು ಅತ್ಯಂತ ನಿರ್ಲಕ್ಷ್ಯ ಮತ್ತು ತಾತ್ಸಾರದಿಂದಲೆ ನೋಡುತ್ತಾ ಬಂದಿವೆ. .

ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಶೈಕ್ಷಣಿಕ ಸಮಸ್ಯೆ ಮತ್ತು ನಿರುದ್ಯೋಗ ಕುರಿತು ಎಷ್ಟು ಹೇಳಿದರೂ ಸಾಲದು. ಇಲ್ಲಿನ ಸಾಕ್ಷರತೆಯ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಅಷ್ಟೇ ಅಲ್ಲ ಉಪ ಸಹಾರಾ ಆಫ್ರಿಕನ್ ದೇಶಗಳಿಗಿಂತ ಕಡಿಮೆ ಮಹಿಳಾ ಮತ್ತು ಪುರುಷ ಸಾಕ್ಷರತಾ ದರಗಳನ್ನು ಹೊಂದಿರುವ ಪ್ರದೇಶಗಳೆಂದರೆ ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಾಗಿವೆ. ಇಲ್ಲಿನ ಶೈಕ್ಷಣಿಕ ಮಟ್ಟ ಕೆಳಗಿರುವುದರಿಂದ ರಾಜ್ಯಮಟ್ಟದ ಯಾವುದೇ ಸ್ಪರ್ಧೆಗಳಲ್ಲಿ ಸ್ಪರ್ಧಿಸುವುದು ಇಲ್ಲಿನ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಯಾವುದೇ ನೇಮಕಾತಿಯಲ್ಲೂ ಈ ಭಾಗದ ವಿದ್ಯಾರ್ಥಿಗಳು ನೇಮಕ ಆಗುತ್ತಿರುವುದು ಬಹಳ ಕಡಿಮೆ. ಎಲ್ಲಾ ನೇಮಕಾತಿಗಳಲ್ಲೂ ರಾಜ್ಯಮಟ್ಟದ ಮೆರಿಟ್ ಪದ್ಧತಿ ಇರುವುದರಿಂದ ಇಲ್ಲಿ ಬೆರಳೆಣಿಕೆಯಷ್ಟು ಮೆಡಿಕಲ್, ಡೆಂಟಲ್, ವೆಟರ್ನರಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿದ್ದರೂ ಸಹ ಈ ಕಾಲೇಜುಗಳಲ್ಲಿ ಶೇ. ೯೦ಕ್ಕಿಂತ ಮೇಲ್ಪಟ್ಟು ಹೊರಗಿನವರಿಗೆ ಪ್ರವೇಶ ಸಿಗುತ್ತದೆ. ಒಟ್ಟಾರೆ ಹೈದರಾಬಾದ್ ಕರ್ನಾಟಕ ಪ್ರದೇಶದ ವಾಸ್ತವ ಪರಿಸ್ಥಿತಿ ಹೇಗಿದೆಯೆಂದರೆ ಇಲ್ಲಿ ವೃತ್ತಿಪರ ಶಿಕ್ಷಣ ಸಂಸ್ಥೆಗಳಿವೆ. ಆದರೆ ಲಾಭ ಪಡೆಯುವವರು ಮಾತ್ರ ಹೊರ ಜಿಲ್ಲೆಯ ಮತ್ತು ಹೊರ ರಾಜ್ಯದ ವಿದ್ಯಾರ್ಥಿಗಳು.

ಈ ಭಾಗದಲ್ಲಿ ನೀರಾವರಿಯಿರಲಿ, ಪ್ರಕೃತಿದತ್ತವಾದ ಮಳೆ ಕೂಡ ಸರಿಯಾಗಿ ಬೀಳದೆ ರೈತ ಕಂಗಾಲಾಗಿದ್ದಾನೆ. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದ ಕೂಡಲೇ ತುಂಗಭದ್ರಾ ನದಿಯ ಉತ್ತರ ಭಾಗದಲ್ಲಿರುವ ಎಲ್ಲ ನೀರಾವರಿ ಯೋಜನೆಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ಆಡಳಿತ ನಡೆಸಿದ ಸರಕಾರಗಳು ಕೇವಲ ಕಾವೇರಿ ಕಣಿವೆ ಪ್ರದೇಶಕ್ಕೆ ಮಾತ್ರ ಮಹತ್ವ ಕೊಟ್ಟು ಹೈದರಾಬಾದ್ ಕರ್ನಾಟಕದ ನೀರಾವರಿ ಯೋಜನೆಗಳಿಗೆ ಮಹತ್ವವನ್ನೇ ನೀಡಲಿಲ್ಲ. ನೀರಾವರಿ ದೃಷ್ಟಿಯಿಂದ ಹಿಂದುಳಿದ ಈ ಪ್ರಾಂತ್ಯದ ಅಭಿವೃದ್ಧಿಗೆ ನಮ್ಮ ಸರಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ. ಮೊದಲಿಗೆ ಕೃಷ್ಣಾ ಕಣಿವೆಯ ನೀರಾವರಿ ಯೋಜನೆಗಳಿಗೆ ಬೇಕಾದ ನದಿಗಳ ಮೇಲಿನ ಹಕ್ಕುಗಳನ್ನು ಬಚಾವತ್ ಆಯೋಗದ ಮುಂದೆ ಸರಿಯಾಗಿ ಮಂಡಿಸಲಿಲ್ಲ. ನಂತರ ಬಚಾವತ್ ಆಯೋಗ ನೀಡಿದ ಪಾಲನ್ನು ತ್ವರಿತ ಗತಿಯಲ್ಲಿ ಬಳಸಿಕೊಳ್ಳಲು ಶೀಘ್ರ ಕ್ರಮಗಳನ್ನು ಕೈಗೊಳ್ಳಲಿಲ್ಲ. ಹೀಗಾಗಿ ಇಲ್ಲಿ ನೀರಾವರಿ ಸೌಲಭ್ಯವು ಕಡಿಮೆ. ಮಳೆಯು ಕಡಿಮೆ, ಪದೇ ಪದೇ ಬರಗಾಲಕ್ಕೆ ಈಡಾಗುತ್ತಿದೆ ಮತ್ತು ಇದರ ಜೊತೆಗೆ ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ರೈತ ಆತ್ಮಹತ್ಯೆಗೆ ಶರಣಾಗುತ್ತಾನೆ. ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾದ ನಂತರ ಸರಕಾರ ಮತ್ತು ಜನಪ್ರತಿನಿಧಿಗಳು ಕೇವಲ ಕಣ್ಣೊರೆಸುವ ನಾಟಕ ಮಾಡುತ್ತಾರೆ. ಬೇರೆ ಭಾಗದ ರೈತರ ಸಂಕಷ್ಟಕ್ಕೆ ತಕ್ಷಣವೇ ಸ್ಪಂದಿಸುವ ಸರಕಾರ, ಹೈದರಾಬಾದ್ ಕರ್ನಾಟಕದಲ್ಲಿ ಕಬ್ಬು, ಭತ್ತ, ತೊಗರಿ ಬೆಳೆದು ನಷ್ಟ ಅನುಭವಿಸಿದ ರೈತರನ್ನು ಗಮನಿಸುವುದೇ ಇಲ್ಲ. ಇಲ್ಲಿನ ತೊಗರಿ ಮಂಡಳಿಯಂತೂ ನಾಮಕಾವಸ್ಥೆಗಿದೆ. ಸರಕಾರದ ಇಂತಹ ಬಹಿರಂಗ ತಾರತಮ್ಯವು ಪ್ರಾದೇಶಿಕ ಅಸಮಾನತೆ ಹೆಚ್ಚಾಗಲು ಕಾರಣವಾಗಿದೆ.

ಕರ್ನಾಟಕ ಸರಕಾರ ರೂಪಿಸುವ ಬಹಳಷ್ಟು ನೀತಿಗಳು ಹಮ್ಮಿಕೊಳ್ಳುವ ಕಾರ್ಯಗತಗೊಳಿಸುವ ಕಾರ್ಯಕ್ರಮಗಳು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ದಕ್ಕುವುದೇ ಇಲ್ಲ. ಈ ಪ್ರದೇಶದ ಅಭಿವೃದ್ಧಿಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ರಚಿಸಲಾಯಿತು. ಆಗ ನಮ್ಮ ಕನಸು ಏನಾಗಿತ್ತೆಂದರೆ ಮಂಡಳಿಯ ರಚನೆಯಿಂದ ನಮ್ಮ ಶತಮಾನಗಳ ಶಾಪ ಅಳಿಸಿ ಹೋಗುತ್ತದೆಯೆಂದು ಭ್ರಮಿಸಿದ್ದೆವು. ಈಗ ಅಭಿವೃದ್ಧಿ ಮಂಡಳಿ ಮೂಲಕ ಇಡೀ ಪ್ರದೇಶವೇ ನಂದನವನವಾಗಿ ಕಂಗೊಳಿಸುತ್ತದೆಯೆಂದು ಕನಸು ಕಂಡಿದ್ದೆವು. ಆದರೆ ಇದರ ಕಾರ್ಯವೈಖರಿಯನ್ನು ನೋಡಿದಾಗ ಇದು ಒಂದು ಬಿಳಿಯಾನೆಯಂತಾಗಿದೆ. ಇನ್ನು ಮಂಡಳಿಗೆ ಅಗತ್ಯವಾದಷ್ಟು ಹಣ ಸರಕಾರದಿಂದ ಮಂಜೂರಾಗುತ್ತಿಲ್ಲ ಎನ್ನುವುದು ಒಂದು ಕಡೆಯಾದರೆ, ಅಭಿವೃದ್ಧಿ ಮಂಡಳಿ ರಚಿಸಿದ್ದೇವೆಯೆಂಬ ಕಾರಣ ಒಡ್ಡಿ ಇತರ ಅನುದಾನಗಳಲ್ಲಿ ಈ ಭಾಗದ ಜಿಲ್ಲೆಗಳಿಗೆ ಹಣವನ್ನು ಕಡಿತಗೊಳಿಸಲಾಗುತ್ತಿದೆ.

ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಹೇಳುವುದಾದರೆ, ಇಂದಿನ ಸ್ಥಿತಿಗೆ, ಅನಕ್ಷರತೆಗೆ, ಬಡತನಕ್ಕೆ, ಅನಭಿವೃದ್ಧಿಗೆ ಹಿಂದುಳಿದಿರುವಿಕೆಗೆ ಬೇರೆಯವರು ಎಷ್ಟು ಕಾರಣರಾಗಿದ್ದಾರೋ ಅದಕ್ಕಿಂತ ಹೆಚ್ಚು ಕಾರಣಕರ್ತರು ಈ ಭಾಗದವರೇ ಆಗಿದ್ದಾರೆ. ನಿಜಾಮನ ರಾಜ್ಯದಲ್ಲಿ ೧೯೧೯ರಿಂದ ಜಾರಿಯಲ್ಲಿದ್ದ ಮುಲ್ಕಿ ಕಾನೂನನ್ನು ಉಳಿಸಿಕೊಳ್ಳುವುದು ಇಲ್ಲಿನವರಿಗೆ ಸಾಧ್ಯವಾಗಲಿಲ್ಲ. ನಮ್ಮ ಜೊತೆಯಲ್ಲಿಯೇ ಇದ್ದ ಮರಾಠವಾಡದವರು ಮತ್ತು ತೆಲಂಗಾಣದವರು ಆ ಮುಲ್ಕಿ ಕಾನೂನಿಂದ ಸಂರಕ್ಷಿತವಾಗಿರುವಾಗ

ನಮಗೇಕೆ ಇಲ್ಲವೆಂದು ಜನರೂ ವಿಚಾರಿಸಲಿಲ್ಲ, ಜನನಾಯಕರೂ ಆಲೋಚಿಸಲಿಲ್ಲ. ತೆಲಂಗಾಣದವರು ಹೊಸ ಆಂಧ್ರಪ್ರದೇಶಕ್ಕೆ ಸೇರಲು ವಿರೋಧ ಮಾಡಿದ್ದರು. ತಮಗೆ ಮುಲ್ಕಿ ಕಾನೂನನ್ನು ಮುಂದುವರೆಸುವ ಷರತ್ತು ಹಾಕಿದ್ದರು. ಆಗ ಇವರಿಗೆ ಮುಲ್ಕಿ ಕಾನೂನಿನ ಸೌಲಭ್ಯ ಮುಂದುವರಿಸಲು ಸಂವಿಧಾನದ ೩೭೧ನೇ ವಿಧಿಗೆ ತಿದ್ದುಪಡಿ ಮಾಡುವ ಮಾತುಕತೆಯ ನಂತರ ಅವರು ಹೊಸ ಆಂಧ್ರಪ್ರದೇಶಕ್ಕೆ ಸೇರಿದ್ದರು. ಆದರೆ ಹೈದರಾಬಾದ್ ಕರ್ನಾಟಕದವರು ಈ ರೀತಿಯ ಯಾವುದೇ ಷರತ್ತು ಹಾಕದೆ ಬೇಷರತ್ತಾಗಿ ಕರ್ನಾಟಕಕ್ಕೆ ಸೇರಲು ಒಪ್ಪಿಕೊಂಡಿದ್ದು ಇಂದಿನ ದುಸ್ಥಿತಿಗೆ ಕಾರಣವಾಗಿದೆ.

ನಿಜವಾಗಿ ಮುಲ್ಕಿ ಕಾನೂನು ಈ ಭಾಗಕ್ಕೂ ಅನ್ವಯ ಆಗಬೇಕಿತ್ತು. ಇದನ್ನು ಪ್ರಶ್ನಿಸಿ ಈಗ ನಾನು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಹಾಕಿದ್ದೇನೆ ತೀರ್ಪಿಗಾಗಿ ಕಾಯುತ್ತಿದ್ದೇವೆ. ನ್ಯಾಯಾಲಯದ ತೀರ್ಪಿನ ಮೇಲೆ ಮುಂದಿನ ಬೆಳವಣಿಗೆಗಳನ್ನು ನೋಡಿಕೊಂಡು ಹೋರಾಟಗಳನ್ನು ನಿರ್ಧಾರ ಮಾಡುತ್ತೇವೆ. ಏಕೆಂದರೆ ಈ ಭಾಗಕ್ಕೆ ೩೭೧ನೇ ಕಲಂ ತಿದ್ದುಪಡಿ ಅನಿವಾರ್ಯವಾಗಿದೆ ಇಲ್ಲದಿದ್ದರೆ ನಮ್ಮ ಪಾಲು ನಮಗೆ ಸಿಗುವುದಿಲ್ಲ ಉದ್ಯೋಗದಲ್ಲಿ, ಶಿಕ್ಷಣದಲ್ಲಿ ನಮ್ಮ ಭಾಗದವರಿಗೆ ಪ್ರಾತಿನಿಧ್ಯವೇ ಇರುವುದಿಲ್ಲ. ಹೀಗಾಗಿ ಎಲ್ಲರೂ ಈ ನಿಟ್ಟಿನಲ್ಲಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿ ಆಗಬೇಕು, ಇದರ ಮೂಲಕ ಈ ಭಾಗದವರಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ದೊರಕಬೇಕು. ಅದಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹಳ್ಳಿ ಹಳ್ಳಿಗಳಿಗೆ ಹೋಗಿ ಇದರ ಬಗ್ಗೆ ಜನರಲ್ಲಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸುತ್ತಿವೆ. ಇದರಿಂದ ಹೋರಾಟ ಮೊದಲಿಗಿಂತ ತೀವ್ರವಾಗಿದೆ ಮತ್ತು ಇತ್ತೀಚಿಗೆ ಕೇಂದ್ರ ಸರಕಾರವು ತಿದ್ದುಪಡಿಗೆ ಒಲವು ತೋರಿಸುತ್ತಿರುವುದು ನಮ್ಮನ್ನು ಆಶಾಭಾವನೆಯಲ್ಲಿರುವಂತೆ ಮಾಡಿದೆ. ಎಲ್ಲಿಯವರೆಗೆ ವಿಧಿ ತಿದ್ದುಪಡಿ ಆಗುವುದಿಲ್ಲವೋ ಅಲ್ಲಿಯವರೆಗೆ ನಿರಂತರ ಹೋರಾಟ ಮಾಡುತ್ತೇವೆ. ಒಟ್ಟಿನಲ್ಲಿ ನಮ್ಮ ಭಾಗ ಹಿಂದುಳಿಯುವಿಕೆಯಿಂದ ಪರಿಹಾರ ಕಾಣಬೇಕು ಮತ್ತು ಪ್ರಗತಿ ಹೊಂದಬೇಕು ಎನ್ನುವುದಾಗಿದೆ.

೨. ಶ್ರೀ ಬಸವರಾಜ ಪಾಟೀಲ್ ಸೇಡಂ

ಅಧ್ಯಕ್ಷರು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ

ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ

ಸಂದರ್ಶನ ದಿನಾಂಕ : ೨೩.೧೦.೨೦೦೯, ಸೇಡಂ

ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಭೌಗೋಳಿಕತೆಯನ್ನು ಆಧರಿಸಿರುತ್ತದೆ. ಅದೇ ರೀತಿ ಹೈದರಾಬಾದ್ ಕರ್ನಾಟಕದ ಭೌಗೋಳಿಕತೆಯನ್ನು ನೋಡಿದಾಗ ಕಡಿಮೆ

ಮಳೆ, ಅತಿಯಾದ ಬಿಸಿಲು, ಒಣಹವೆ, ನೀರಿನ ಅಭಾವ ಫಲವತ್ತಾಗಿರದ ಭೂಮಿ, ಬೃಹತ್ ಕೈಗಾರಿಕೆಗಳು ಇಲ್ಲದಿರುವುದು, ಶಿಕ್ಷಣದ ಕೊರತೆ ಕನ್ನಡ ಭಾಷೆಗೆ ಆದ್ಯತೆ ಇಲ್ಲದಿರುವುದು ಕಂಡು ಬರುತ್ತದೆ. ಇದರ ಜೊತೆಗೆ ಕೃಷಿಯೇತರ ಉದ್ಯೋಗವಕಾಶಗಳು ಬಹಳ ಕಡಿಮೆ ಇವೆ. ಹೀಗಾಗಿ ಈ ಭಾಗದ ಬಹಳಷ್ಟು ಜನರು ಕೃಷಿಯ ಮೇಲೆ ಅವಲಂಬಿತರಾಗುವುದು ಅನಿವಾರ್ಯವಾಗಿದೆ. ಸ್ವಾತಂತ್ರ್ಯದ ನಂತರ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮತ್ತು ಇಲ್ಲಿನ ಜನರ ಮನಸ್ಸು ಬದಲಾಗದಿರುವುದರಿಂದ ಅಜ್ಞಾನ, ಬಡತನ, ನಿರುದ್ಯೋಗಕ್ಕೆ ದಾರಿ ಮಾಡಿಕೊಟ್ಟಿದೆ.

ನಿಜಾಮನ ಆಳ್ವಿಕೆಗೆ ಒಳಪಟ್ಟ ಇಲ್ಲಿನ ಭಾಗಗಳ ಪರಿಸ್ಥಿತಿಯನ್ನು ನೋಡಿದಾಗ ಹೈದರಾಬಾದ್ ಕರ್ನಾಟಕದ ಹಿಂದುಳಿದಿರುವಿಕೆಗೆ ನಿಜಾಮನ ಆಳ್ವಿಕೆ ಮತ್ತು ಅವನು ಈ ಪ್ರದೇಶದ ಬಗ್ಗೆ ತೋರಿದ ನಿರ್ಲಕ್ಷ್ಯವೇ ಕಾರಣ ಎಂಬ ಭಾವನೆ ಮೂಡುವುದು ಸಹಜ. ಅಂದ ಮಾತ್ರಕ್ಕೆ ಅಥವಾ ಹಾಗಂತ ನಿಜಾಮನ ಆಳ್ವಿಕೆಗೆ ಒಳಪಡುವ ಮುನ್ನ ಈ ಭಾಗ ಸಂಪತ್ತು, ಸಮೃದ್ಧಿಯಿಂದ, ಅಭಿವೃದ್ಧಿಯಿಂದೇನೂ ಕೂಡಿರಲಿಲ್ಲ. ಆದರೆ ಬೇರೆ ಪ್ರದೇಶಗಳಿಗಿಂತ ಸ್ವಲ್ಪಮಟ್ಟಿನ ವೈಚಾರಿಕತೆಯನ್ನು ಬೆಳೆಸಿಕೊಂಡಿತ್ತು. ಆದರೆ ನಿಜಾಮರ ಆಳ್ವಿಕೆಗೆ ಒಳಪಟ್ಟ ನಂತರ ಇದು ಜಡವಾಗಿ ಹೋಯಿತು ಎನ್ನುವುದು ಸತ್ಯವಾಗಿದೆ. ಈ ಭಾಗದ ಬಗ್ಗೆ ನಿಜಾಮನ ನಿರುತ್ಸಾಹ, ನಿರಾಸಕ್ತಿ ದೌರ್ಜನ್ಯಗಳು ಇದರ ಬೆಳವಣಿಗೆಗೆ ಅಡೆತಡೆ ಆಗಿರಬಹುದು. ಬ್ರಿಟಿಷರ ಪ್ರಭಾವಕ್ಕೆ ಒಳಗಾಗಿದ್ದ ಪ್ರದೇಶಗಳಲ್ಲಿ ಯಾವ ರೀತಿಯ ಬೌದ್ಧಿಕ, ಆರ್ಥಿಕ, ಸಾಮಾಜಿಕ ಬದಲಾವಣೆಗಳಾದವೋ, ಅಂತಹ ಬದಲಾವಣೆಗೆ ನಿಜಾಮನು ಆಸಕ್ತಿ ವಹಿಸಲಿಲ್ಲ ಮತ್ತು ಬೆಂಬಲವನ್ನು ನೀಡಲಿಲ್ಲ ಎನ್ನುವುದು ಸತ್ಯ. ಹಾಗಾಗಿ ನಿಜಾಮನ ಆಳ್ವಿಕೆಯು ಸ್ವಲ್ಪಮಟ್ಟಿಗೆ ಈ ಪ್ರದೇಶದ ಇಂದಿನ ಸ್ಥಿತಿಗೆ ಕಾರಣವಾಗಿದೆ ಎಂಬ ಭಾವನೆ ಸಹಜವಾಗಿ ಮೂಡುತ್ತದೆ.

ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ಹೈದರಾಬಾದ್ ಕರ್ನಾಟಕ ಪ್ರದೇಶದ ಬದಲಾಗದ ಪರಿಸ್ಥಿತಿಗಳು ಮತ್ತು ಉಲ್ಬಣವಾಗುತ್ತಿರುವ ಸಮಸ್ಯೆಗಳು ಎಂಥವರನ್ನು ತಬ್ಬಿಬ್ಬು ಮಾಡುವಂತಿವೆ. ಮೂಲಭೂತವಾಗಿ ಒಂದು ಪ್ರದೇಶ ಅಭಿವೃದ್ಧಿ ಹೊಂದಲು ಬಾಹ್ಯ ಮೂಲಗಳಿಂದ ಬರುವ ಧನರಾಶಿ ಮತ್ತು ಪ್ರಯತ್ನಗಳು ಎಷ್ಟು ಮುಖ್ಯವೋ ಸ್ಥಳೀಯ ಜನರ ತುಡಿತ ಪರಿಶ್ರಮವು ಅಷ್ಟೇ ಮುಖ್ಯ. ತಾವು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕು, ಸ್ವಾವಲಂಬಿಗಳಾಗಬೇಕು ಎಂಬ ಮಾನಸಿಕ ತುಡಿತ ಎಲ್ಲಿಯವರೆಗೆ ಜಾಗೃತವಾಗುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗುವುದು. ಹೀಗಾಗಿ ಕೇವಲ ಬೇಡುವ ಮನಃಸ್ಥಿತಿಯನ್ನು ಕೈಬಿಟ್ಟು ನೀಡುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಇಂತಹ ಮಾನಸಿಕ ಪರಿವರ್ತನೆ ಇಲ್ಲಿನ ಜನರಲ್ಲಿ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಇಚ್ಛಾಶಕ್ತಿ ಬರಲು ಸಾಧ್ಯವಿಲ್ಲ.

ಹೀಗೆ ದೃಷ್ಟಿ ಬದಲಾದರೆ ದೃಶ್ಯ ಬದಲಾಗುವುದು ಎಂಬ ಆಶೋತ್ತರಗಳೊಂದಿಗೆ, ಜನಾಂಗ ವೊಂದರ, ಪ್ರದೇಶವೊಂದರ ಮೇಲ್ಮುಖ ನಡಿಗೆಗೆ ಸ್ವಾವಲಂಬನಾ ಚಿಂತನೆಯ ಮನೋಭೂಮಿಕೆಯನ್ನು

ಆಧಾರವಾಗಿರಿಸಿಕೊಂಡು 'ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ'ಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ೨೮ ಶಿಕ್ಷಣ ಸಂಸ್ಥೆಗಳು ಸಮಿತಿಯ ಆಶ್ರಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ನಂತರ ೨೦೦೪ರಲ್ಲಿ 'ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ'ವನ್ನು ಸ್ಥಾಪಿಸಲಾಗಿದೆ. ಇದೊಂದು ಸ್ವಯಂ ಪ್ರೇರಿತ, ಸ್ಫೂರ್ತಿದಾಯಕ ವಿಭಾಗವಾಗಿದ್ದು, ಅಪೇಕ್ಷಿತ ಸಮಾಜಕ್ಕೆ ಬೇಕಾದ ವ್ಯಕ್ತಿಗಳ ನಿರ್ಮಾಣ ಮಾಡುವುದರ ಮೂಲಕ ಈ ಪ್ರದೇಶದ ಮತ್ತು ರಾಜ್ಯದ ದಾರಿದ್ರ್ಯವನ್ನು ತೊಲಗಿಸುವ ನಿರ್ದಿಷ್ಟ ಗುರಿ ಮತ್ತು ಉದ್ದೇಶವನ್ನು ಹೊಂದಲಾಗಿದೆ. ನಮ್ಮ ಅವಶ್ಯಕತೆಯ ಎಲ್ಲಾ ಸಂಪನ್ಮೂಲಗಳನ್ನು ನಾವೇ ಭರಿಸುತ್ತೇವೆ. ಸರಕಾರದ ಮೇಲೆ ಅವಲಂಬನೆ ಆಗದೆ, ನಮ್ಮ ಶಕ್ತಿ, ವ್ಯಾಪ್ತಿ ಸಂಪನ್ಮೂಲಗಳ ಮೂಲಕ ಸುಧಾರಣೆಗೆ, ಸಮಾಜದ ಪರಿವರ್ತನೆಗೆ ಪ್ರಯತ್ನಿಸುವುದಾಗಿದೆ. ಹಾಗೆಯೇ ಸರಕಾರದ ಜೊತೆ ಸಂಘರ್ಷವೂ ಇಲ್ಲ. ಇದು ಒಂದು ರೀತಿಯಲ್ಲಿ ಮೌನಕ್ರಾಂತಿ.

ಆದರೆ ಕೇವಲ ಶಿಕ್ಷಣದಿಂದ ಸಮಾಜದ ಸರ್ವಾಂಗೀಣ ಉನ್ನತಿ ಸಾಧ್ಯವಿಲ್ಲ ಎಂಬ ಅರಿವು ಸಮಿತಿಗಾಯಿತು. ಜನ ಸಾಕ್ಷರರಾಗುವುದರ ಜೊತೆಗೆ ಕೌಶಲ್ಯ ವರ್ಧನೆ, ಶ್ರಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಾಗ ಮಾತ್ರ ಜನಾಂಗ ನಳನಳಿಸಿ ಅರಳಲು ಸಾಧ್ಯ ಎಂಬ ವಿಚಾರಗಳು ಮೂಡಿದವು. ಈ ಪ್ರದೇಶದ ಜನರಲ್ಲಿ ಅದರಲ್ಲೂ ನಿರ್ಲಕ್ಷಿತರಿಗೆ, ಬಡವರಿಗೆ ನಿರುದ್ಯೋಗಿಗಳಿಗೆ ಸ್ವಾವಲಂಬಿ ಬದುಕಿಗೆ ಬೇಕಾದ ತಿಳುವಳಿಕೆ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ಕಾರ್ಯ ಆರಂಭಿಸಲಾಗಿದೆ.

ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಂವಿಧಾನದ ೩೭೧ನೇ ಕಲಂ ಯಾವಾಗಲೋ ಜಾರಿ ಯಾಗಬೇಕಿತ್ತು. ಆದರೆ ಯಾವ ನಾಯಕರು ಮತ್ತು ರಾಜಕೀಯ ಪಕ್ಷಗಳು ಇದರ ಬಗ್ಗೆ ಇಚ್ಛಾಶಕ್ತಿಯನ್ನು ತೋರಿಸುತ್ತಿಲ್ಲ. ಬದಲಾಗಿ ಒಬ್ಬರು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದರಲ್ಲಿ ಕಾಲ ಕಳೆದಿದ್ದಾರೆ. ಈ ವಿಧಿ ಜಾರಿಯಾದರೆ ಖಂಡಿತವಾಗಿಯೂ ನಮ್ಮ ಭಾಗಕ್ಕೆ ಸಹಾಯವಾಗುತ್ತದೆ ಮತ್ತು ಈಗಾಗಲೇ ಇರುವ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯ ಸ್ವರೂಪವನ್ನೇ ಸರಕಾರ ಬದಲಾಯಿಸಬೇಕು. ಹಾಗೆಯೇ ನಮ್ಮ ದಾರಿದ್ರ್ಯವನ್ನು ದೂರ ಮಾಡಿಕೊಳ್ಳುವುದಕ್ಕೆ ಈ ಭಾಗದ ಜನ ಮೊದಲು ಮುಂದೆ ಬರಬೇಕು. ಮೊದಲು ನಮ್ಮ ಮಾನಸಿಕತೆಯಲ್ಲಿ, ಇಚ್ಛಾಶಕ್ತಿಯಲ್ಲಿ ಪರಿವರ್ತನೆ ಆಗಬೇಕು. ಇಲ್ಲದಿದ್ದರೆ ಯಾವುದೇ ಯೋಜನೆಗಳು, ಬೋರ್ಡ್‌ಗಳು ೩೭೧ನೇ ಕಲಂ ಹೀಗೆ ಯಾವುದರಿಂದಲೂ ಬದಲಾವಣೆ ಸಾಧ್ಯವಾಗುವುದಿಲ್ಲ.

ಇಂದು ಸಾಮಾಜಿಕ ಚಳವಳಿಗಳ ಜೊತೆಗೆ ಎಲ್ಲಾ ಜನಪರ ಚಳವಳಿಗಳು ಸ್ತಬ್ಧವಾಗಿವೆ. ಉದಾಹರಣೆಗೆ, ರೈತ, ಕಾರ್ಮಿಕ ಚಳವಳಿಗಳನ್ನು ನೋಡಿ ಈ ಚಳವಳಿಗಳಿಂದ ಬದಲಾದದ್ದೇನು, ಪಡೆದದ್ದೇನು ಎಂದು ನಮ್ಮನ್ನು ನಾವೇ ಪ್ರಶ್ನೆ ಹಾಕಿಕೊಳ್ಳುವಂತೆ ಮಾಡಿದೆ. ಇಂತಹ ಸ್ಥಿತಿಗೆ ಕಾರಣವೇ ತಿಳಿಯುತ್ತಿಲ್ಲ. ಹಿಂದೆ ಸಾಂಸ್ಕೃತಿಕ ಚಾರಿತ್ರಿಕ ಒತ್ತಡಗಳ ಕಾರಣದಿಂದ ಚಳವಳಿಗಳು ರೂಪುಗೊಳ್ಳುತ್ತಿದ್ದವು. ಆದರೆ ಈಗಿನ ಚಳವಳಿಗಳು ರಾಷ್ಟ್ರೀಯತೆಯ ಕಲ್ಪನೆಗಿಂತ, ಜಾತೀಯತೆ, ಸಾಮೂಹಿಕ ಬದುಕಿಗಿಂತ

ವಿಶಿಷ್ಟ ಬದುಕಿನ ಹಂಬಲ, ಅಧಿಕಾರ ಸ್ಥಾನಮಾನದ ಹಂಬಲ, ಎಲ್ಲವೂ ತನಗೆ ತನ್ನ ಜಾತಿಗೆ ಬೇಕು ಎನ್ನುವ ಹಂಬಲ, ಅತಿಯಾದ ವಿಮರ್ಶನ ಪ್ರಜ್ಞೆ ಹೀಗೆ ಗೊಂದಲಗಳು ಅನಾವರಣಗೊಂಡು ಜನರನ್ನು, ಸಮಾಜವನ್ನು ದಿಕ್ಕು ತಪ್ಪಿಸುವಂತಾಗಿವೆ. ವೈಯಕ್ತಿಕ ಹಿತಾಸಕ್ತಿಯನ್ನು ಬದಿಗಿಟ್ಟು ಸಮಾಜವನ್ನು ಒಂದುಗೂಡಿಸುವ ಸುಧಾರಣಾ ಹೋರಾಟಗಳು ನಡೆಯುವವರೆಗೆ ಇವು ತಮ್ಮ ಹೋರಾಟದ ಅರ್ಥವನ್ನು ಕಳೆದುಕೊಳ್ಳುತ್ತಿರುತ್ತದೆ. ಎಲ್ಲಾ ಕಾಲಕ್ಕೂ ಎಲ್ಲಾ ಕಾರ್ಯಕ್ಕೂ ಮನಸ್ಸು ಮುಖ್ಯ, ಸಮಾಜದ ಸಾಗುವಿಕೆಯ ಹಾದಿ ಮುಖ್ಯ. ಇವೆರೆಡು ಸರಿ ಇರದಿದ್ದರೆ ಯಾವ ಹೋರಾಟಗಳು ಕ್ರಾಂತಿಗಳು ಸೌಲಭ್ಯಗಳು ಏನು ಪ್ರಯೋಜನವಾಗರಲಾರವು.

೩. ಶ್ರೀ ಎಸ್.ಕೆ. ಕಾಂತಾ

ಮಾಜಿ ಸಚಿವರು, ಕಾರ್ಮಿಕ ಮುಖಂಡರು, ಗುಲಬರ್ಗಾ

ಸಂದರ್ಶನ ದಿನಾಂಕ : ೨೭.೧೧.೨೦೧೦, ಗುಲಬರ್ಗಾ

ಹೈದರಾಬಾದ್ ನಿಜಾಮರ ರಾಜ್ಯದಲ್ಲಿದ್ದು ಸ್ವಾತಂತ್ರ್ಯದ ನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಆದಾಗ ಕರ್ನಾಟಕಕ್ಕೆ ಸೇರಿದ ಭಾಗಗಳನ್ನೇ ಹೈದರಾಬಾದ್ ಕರ್ನಾಟಕ ಪ್ರದೇಶ ಎಂದು ಕರೆಯುತ್ತಾರೆ. ಹೀಗೆ ಇಂದು ಈ ಪ್ರದೇಶ ಆರು ಜಿಲ್ಲೆಗಳನ್ನು ಒಳಗೊಂಡು ಗುಲಬರ್ಗಾ ವಿಭಾಗವೆನಿಸಿದೆ. ಹೈದರಾಬಾದ್ ಕರ್ನಾಟಕ ಎಂದರೆ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ ಅಂಟಿಬಿಟ್ಟಿದೆ ಇಂದಿಗೂ ಹಿಂದುಳಿದ ಪ್ರದೇಶವೆಂದು ಕರೆಸಿಕೊಳ್ಳುತ್ತಿದೆ. ಈ ಭಾಗದಲ್ಲಿದ್ದ ಏಕೈಕ ದೊಡ್ಡ ಮಿಲ್ ಎಂಎಸ್‌ಕೆ ಮಿಲ್ ರಾಜ್ಯ ಸರಕಾರದ ನಿರ್ಲಕ್ಷ್ಯ ನೀತಿಯಿಂದ ಮುಚ್ಚಿ ಹೋಗಿದೆ. ಇಲ್ಲಿನ ಖನಿಜ ಸಂಪತ್ತಿನಿಂದ ಖಾಸಗಿ ಒಡೆತನದ ಸಿಮೆಂಟ್ ಮತ್ತಿತರ ಕಾರ್ಖಾನೆಗಳಿವೆ. ಆದರೆ ಕಾರ್ಖಾನೆಗಳಲ್ಲಿ ಇಂದು ಕಾರ್ಮಿಕರ ಜಾಗದಲ್ಲಿ ಯಂತ್ರಗಳು ಬಂದು ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಇನ್ನು ಎಷ್ಟೋ ಕಾರ್ಖಾನೆಗಳು ಮುಚ್ಚಿ ಹೋಗಿರುವುದರಿಂದ ಈ ಭಾಗದಲ್ಲಿ ನಿರುದ್ಯೋಗ ತಾಂಡವಾಡುತ್ತಿದೆ. ಹೀಗಾಗಿ ದುಡಿಯುವವರೆ ನಮ್ಮ ಭಾಗದಲ್ಲಿ ಬಡವರಾಗಿದ್ದಾರೆ. ಬಡವರು ಎಂದು ಯಾರನ್ನು ಕರೆಯುತ್ತೇವೆಯೋ ಅವರಲ್ಲಿ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು ಹೆಚ್ಚಾಗಿದ್ದಾರೆ.

ದಿನೇ ದಿನೇ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಿರುವುದರಿಂದ ಸಂಘಟಿತ ಹೋರಾಟಗಳಿಗೆ ಅಡ್ಡಿಯಾಗಿದೆ. ಹಿಂದೆ ನಮ್ಮ ಮತ್ತು ಸರಕಾರಗಳ ನಡುವೆ ಸಂಘರ್ಷ ಇತ್ತು. ಆದರೆ ಅದು ಬಗೆಹರಿಸುವ ಮತ್ತು ಸಮಾಧಾನಕರವಾದ ರೀತಿಯಲ್ಲಿತ್ತು. ಆದರೆ ಈಗ ಸಂಘಟಿತ ವಲಯದಲ್ಲಿ ಕೆಲಸ ಮಾಡುವವರು ಇಲ್ಲದೆ ಇರುವ ಕಾರಣ ಇವತ್ತು ಚಳವಳಿಗಳು ನಾಶ ಆಗಿವೆ. ಜನ ಇವತ್ತು ವೈಟ್ ಕಾಲರ್ ಜಾಬ್ ಮಾಡುವುದಕ್ಕೆ ಸೀಮಿತವಾಗಿದ್ದಾರೆ. ೨೦೦೧ರ ಸೆನ್ಸೆಸ್ ಪ್ರಕಾರ ಸಂಘಟಿತ ವಲಯದಲ್ಲಿ ಬಹಳ ಕಡಿಮೆ ಜನ ಕೆಲಸ ಮಾಡುತ್ತಿದ್ದಾರೆ. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಸಂಘಟಿತ ವಲಯ ಪೂರ್ಣ ನಾಶ ಆಗಿದೆ.

ಇವತ್ತು ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿಗತಿಯಂತು ಚಿಂತಾಜನಕವಾಗಿದೆ. ಈ ವಲಯದಲ್ಲಿ ವಲಸೆ, ಗುಳೆ ಹೋಗುವುದು ದೊಡ್ಡ ಪ್ರಮಾಣದಲ್ಲಿದೆ. ಹೀಗೆ ವಲಸೆ ಹೋಗುವ ಕಾರ್ಮಿಕರು ಸಂಘಟಿತರಾಗಲು ಹೋರಾಟ ಮಾಡಲು ಬಹಳ ಕಷ್ಟ ಇದೆ. ಇನ್ನು ಕೆಲವರು ದಿನಗೂಲಿಗಳಾಗಿ ಬದಲಾಗಿದ್ದಾರೆ. ಇವರಿಗೆ ದಿನನಿತ್ಯ ಮೂರು ಹೊತ್ತಿನ ಊಟದ್ದೆ ಚಿಂತೆಯಾಗಿರುವಾಗ, ಅದೇ ಸಿಗುವುದು ಕಷ್ಟವಿರುವಾಗ ಇನ್ನು ಹೋರಾಟ ಮಾಡುವ ಮನೋಭಾವವಾದರೂ ಎಲ್ಲಿ ಬರಬೇಕು. ಒಟ್ಟಿನಲ್ಲಿ ನಮ್ಮಲ್ಲಿ ಸಾಮಾಜಿಕ ಸಮಾನತೆ ಎನ್ನುವುದು ಬರುತ್ತಾ ಇಲ್ಲ. ನಮಗೆ ಸ್ವಾತಂತ್ರ್ಯ ಬಂದಿದೆ. ಆದರೆ ಶೋಷಣೆ ಮಾತ್ರ ಮುಂದುವರೆದಿದೆ. ಇಂದು ಉದ್ಯೋಗದ ಗ್ಯಾರೆಂಟಿ ಇಲ್ಲ, ರಕ್ಷಣೆ ಇಲ್ಲ, ಗುತ್ತಿಗೆ ಉದ್ಯೋಗದ ಪದ್ಧತಿ ಜಾಸ್ತಿ ಆಗುತ್ತಿದೆ. ಒಂದು ಕಾಲದಲ್ಲಿ ಅಸೆಂಬ್ಲಿಯಲ್ಲಿ ಕಾರ್ಮಿಕರ ಬಗ್ಗೆ ರೈತರ ಬಗ್ಗೆ ದೊಡ್ಡ ಮತ್ತು ಗಂಭೀರವಾದ ಚರ್ಚೆ ಆಗುತ್ತಿತ್ತು. ಆದರೆ ಇಂದು ಇವರ ಬಗ್ಗೆ ಚರ್ಚೆ ಇರಲಿ ಅವರ ವಿಷಯವೇ ಪ್ರಸ್ತಾಪ ಆಗುವುದಿಲ್ಲ.

ಮಹಾತ್ಮಾ ಗಾಂಧೀಜಿಯವರ ಸ್ವಾತಂತ್ರ್ಯದ ಉದ್ದೇಶ ಎಲ್ಲರ ಕೈಗೂ ಕೆಲಸ ಎಲ್ಲರಲ್ಲೂ ಸಮಾನತೆ ಎಲ್ಲರ ಬಾಳು ಒಂದೇ ಆಗಿರಬೇಕು ಎನ್ನುವುದಾಗಿತ್ತು. ಆದರೆ ಆ ಕಲ್ಪನೆ ಸಾಕಾರಗೊಳ್ಳಲಿಲ್ಲ. ಸಮಾಜದಲ್ಲಿ ಶ್ರೀಮಂತರು, ಬಡವರು ಇರುವುದು ಸಹಜ. ಆದರೆ ಹಣದ ಶಕ್ತಿ ಮತ್ತು ರಾಜಕೀಯ ಶಕ್ತಿ ಒಂದೇ ಕಡೆ ಆದರೆ ಶೋಷಣೆ ಜಾಸ್ತಿ ಆಗುತ್ತೆ ಇಲ್ಲಿ ಆಗುತ್ತಿರುವುದು ಇದೇ ಆಗಿದೆ. ಯಾರೋ ಬರುತ್ತಾರೆ ನಮ್ಮ ಜೀವನವನ್ನು ಸುಧಾರಿಸುತ್ತಾರೆ, ಸರಿ ಮಾಡುತ್ತಾರೆ ಎನ್ನುವ ಧೋರಣೆಯಿಂದ ಹೊರಬಂದು, ನಮ್ಮ ಹಕ್ಕನ್ನು ನಾವೇ ಪಡೆಯಬೇಕು ಎನ್ನುವ ಅರಿವನ್ನು ಹೊಂದಬೇಕಾದ ಪರಿಸ್ಥಿತಿ ಬಂದಿದೆ. ಅಜ್ಞಾನ, ಜಾತಿ ಭಾಷೆ ಹೀಗೆ ಸಂಕುಚಿತ ವಿಚಾರಗಳಿಂದ ಜನ ಹಾಳಾಗುತ್ತಿದ್ದಾರೆ. ಜನರು ನಾಯಕರನ್ನು ಆರಿಸುತ್ತಾರೆ ಆದರೆ ಹಣ, ಹೆಂಡದ ಆಸೆಗೆ ಜನ ಕೆಟ್ಟರೆ ನಾಯಕರು ಕೆಡುತ್ತಾರೆ. ಹೀಗಾಗಿಯೇ ಅಧಿಕಾರಿಗಳು, ರಾಜಕಾರಣಿಗಳು ಹಣ ಮಾಡಲು ನಿಂತಿದ್ದಾರೆ.

ಈ ಭಾಗದಲ್ಲಿ ಬಾಳು ಒಂದು ಕಡೆ ಸುಖ ಸುಪ್ಪತ್ತಿಗೆಯಿಂದ ಇದ್ದರೆ ಇನ್ನೊಂದು ಕಡೆ ಊಟಕ್ಕೂ ಪರದಾಡಬೇಕಾದ ಸ್ಥಿತಿ ಇದೆ. ಇಲ್ಲಿನ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಾಗುತ್ತಿಲ್ಲ. ಬದಲಾಗಿ ಜಾಗತೀಕರಣದ ಪ್ರಭಾವದಿಂದಾಗಿ ಜೀವನದ ಶೈಲಿ ಬದಲಾಗಿ ಹೆಚ್ಚು ಖರ್ಚು ಮಾಡಲಿಕ್ಕೆ ಕಾರಣವಾಗಿದೆ. ಮುಂಚೆ ಚಳವಳಿ ಮಾಡುತ್ತಿದ್ದವರಲ್ಲಿ ಹೆಚ್ಚಾಗಿ ಮಧ್ಯಮ ವರ್ಗದವರಿರುತ್ತಿದ್ದರು. ಆದರೆ ಇಂದು ಅವರ ಕನಸು ಏನೆಂದರೆ ನಾವು ಮೇಲ್ವರ್ಗಕ್ಕೆ ಏರಬೇಕು ಎನ್ನುವುದಾಗಿದೆ. ಹೀಗಾಗಿ ಹೋರಾಟ ಮಾಡುವವರ್‍ಯಾರು ಎನ್ನುವ ಪ್ರಶ್ನೆ ಎದುರಾಗಿದೆ. ಇವರು ಹೋರಾಟ ಮಾಡಲು ತಯಾರಿಲ್ಲ, ಕೆಳವರ್ಗ ದವರಿಗೆ ಹೋರಾಟ ಮಾಡುವ ಶಕ್ತಿ ಇಲ್ಲ, ಇದರಿಂದ ಇಲ್ಲಿನ ಕೆಳವರ್ಗದವರ ಸ್ಥಿತಿ ಇನ್ನೂ ಚಿಂತಾಜನಕವಾಗಿದೆ.

ಆದರೆ ಇಂದು ಅಧಿಕಾರಿಗಳು, ಆಳುವವರು ಏನು ಹೇಳುತ್ತಾರೆಂದರೆ, ಕೆಳವರ್ಗದವರ ಸ್ಥಿತಿ, ಜೀವನ ಸುಧಾರಿಸುತ್ತಿದೆ. ಹೀಗಾಗಿ ಇಂದು ಗುಡಿಸಲುಗಳು, ಜೋಪಡಿಗಳು ಹೋಗುತ್ತಿವೆ ಅದರ ಜಾಗದಲ್ಲಿ ಮನೆಗಳು ಬಂದಿವೆ ಎನ್ನುವ ಉದಾಹರಣೆ ನೀಡುತ್ತಾರೆ. ಆದರೆ ಅಧಿಕಾರಿಗಳ ಆಡಳಿತವರ್ಗದ,

ಶ್ರೀಮಂತರ ಮನೆಗಳು ಇಂದು ಅರಮನೆಗಳಾಗಿ ಬದಲಾಗಿವೆ. ಇದಕ್ಕೆ ಕಾರಣ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಯಾವ ತತ್ವಗಳು, ಸಿದ್ಧಾಂತಗಳು ಪರಿಪೂರ್ಣತೆಯನ್ನು ನೆಲೆಗೊಳಿಸಲಾಗುತ್ತಿಲ್ಲ. ಇಲ್ಲಿ ಪ್ರಜಾಪ್ರಭುತ್ವವು ನೆಲೆಗೊಳ್ಳಲಿಲ್ಲ, ಕಮುನಿಸ್ಟ್ ನೆಲೆಗೊಳ್ಳಲಿಲ್ಲ, ಸಮತಾವಾದ ನೆಲೆಗೊಳ್ಳಲಿಲ್ಲ. ಹೀಗಾಗಿ ಶ್ರೀಮಂತ ಮತ್ತು ಬಡವ, ಉತ್ಪನ್ನಗಾರ ಮತ್ತು ಬಳಕೆದಾರನ ನಡುವೆ ಒಂದು ದೊಡ್ಡ ಅಂತರ ಏರ್ಪಡುತ್ತಿದೆ ಇದರಿಂದ ಮಧ್ಯವರ್ತಿಗಳು ಲಾಭ ಪಡೆಯುತ್ತಿದ್ದಾರೆ.

ಈ ಭಾಗದಲ್ಲಿ ನಿಜಾಮನ ಕಾಲದಿಂದಲೂ ಚಳವಳಿಗಳಾಗುತ್ತಿವೆ. ರಜಾಕಾರರ ವಿರುದ್ಧ, ಊಳಿಗಮಾನ್ಯಶಾಹಿ ವಿರುದ್ಧ, ಈಗ ಅಸಮಾನತೆ ವಿರುದ್ಧ ಹೋರಾಟಗಳಾಗುತ್ತಿವೆ ಮತ್ತು ಎಲ್ಲಿಯವರೆಗೆ ಮೇಲು-ಕೀಳು ಎನ್ನುವ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೆ ಹೋರಾಟಗಳು ನಡೆಯುತ್ತಿರುತ್ತವೆ ಹಾಗೂ ಪ್ರತಿಯೊಂದು ಹೋರಾಟದಿಂದ ಲಾಭ ಅಥವಾ ನಷ್ಟ ಹಾಗೇ ಆಗುತ್ತದೆ. ಚಳವಳಿಗಳು ನಡೆಯುತ್ತಿರುವುದರಿಂದಲೆ ಸಾಮಾಜಿಕ ಬದಲಾವಣೆಗಳು ಆಗುತ್ತಿವೆ. ಕೆಲವೊಮ್ಮೆ ಇವು ತಪ್ಪು ದಾರಿಯಲ್ಲಿ ಸಾಗುತ್ತವೆ ಆಗ ಸೋಲುತ್ತವೆ. ಮತ್ತೆ ಸ್ವಲ್ಪ ದಿನದ ನಂತರ ಬೇರೆ ರೂಪದಲ್ಲಿ ಹುಟ್ಟುತ್ತವೆ. ಹೀಗೆ ಚಳವಳಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಆದರೆ ಇತ್ತೀಚೆಗೆ ಚಳವಳಿ ನಿರತ ಕಾರ್ಮಿಕರನ್ನು ಅನಗತ್ಯವಾಗಿ ಬಂಧಿಸಲಾಗುತ್ತಿದೆ. ನ್ಯಾಯಯುತ ಹೋರಾಟ ನಡೆಸುವ ಕಾರ್ಮಿಕರ ಮೇಲೆ ಪೊಲೀಸ್ ದೌರ್ಜನ್ಯ ನಿರಂತರವಾಗಿದೆ. ಪೊಲೀಸ್ ವ್ಯವಸ್ಥೆಯನ್ನು ಬಳಸಿಕೊಂಡು ಜನಪರ ಚಳವಳಿಗಳನ್ನು ಹತ್ತಿಕ್ಕುವ ಕೆಲಸವನ್ನು ಸರಕಾರ ವ್ಯವಸ್ಥಿತವಾಗಿ ಮಾಡುತ್ತಿದೆ.

ಇಲ್ಲಿನ ಬಹುತೇಕ ಕಾರ್ಮಿಕರು ರಾಜ್ಯ ಸರಕಾರದ ದುರಾಡಳಿತ ನೀತಿಗೆ ಬಲಿಯಾಗಿದ್ದಾರೆ. ವರ್ಷವಿಡೀ ದುಡಿದರೂ ಸಂಬಳ ನೀಡದ ಸರಕಾರದ ನೀತಿ, ಖಂಡಿಸಿ ಹೋರಾಟಕ್ಕಿಳಿದ ಕಾರ್ಮಿಕರ ಮೇಲೆ ದೌರ್ಜನ್ಯ ಎಸಗಿ ನಾನಾ ಮೊಕದ್ದಮೆ ಹಾಕುವ ಸರಕಾರದ ವಿರುದ್ಧ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲಾಗುವುದು. ಇದೇ ಸಮಯದಲ್ಲಿ ಸರಕಾರಗಳು ಕೂಡ ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಟ್ಟು, ಕಾರ್ಮಿಕರ ಪರಿಸ್ಥಿತಿಯನ್ನು ಅವರ ಸಂಸಾರದ ಸ್ಥಿತಿಗತಿಯನ್ನು, ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ವಿವಿಧ ಯೋಜನೆಗಳನ್ನು ಜಾರಿ ಮಾಡುವುದರ ಮೂಲಕ ಇಲ್ಲಿನ ಕಾರ್ಮಿಕರ ಹಿತಕಾಯುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಈ ಭಾಗದಲ್ಲಿ ಇನ್ನು ಮುಂದೆ ರೈತರ ಆತ್ಮಹತ್ಯೆ ಜೊತೆಗೆ ಕಾರ್ಮಿಕರ ಆತ್ಮಹತ್ಯೆ ಪ್ರಕರಣಗಳು ಆರಂಭವಾದರೂ ಆಶ್ಚರ್ಯವೇನಿಲ್ಲ. ಆದರೆ ಹಾಗಾಗದೆ, ಕಾರ್ಮಿಕರಿಗೆ ಊಟ, ಬಟ್ಟೆ ಆಶ್ರಯಗಳನ್ನು ಒದಗಿಸಿಕೊಡುವ ಪ್ರಯತ್ನಗಳಾಗಿ ಅವರು ಎಲ್ಲರಂತೆ ಬದುಕಲಿ ಎನ್ನುವುದು ನನ್ನ ಆಶಯವಾಗಿದೆ.

೪. ಶ್ರೀ ಮಾರುತಿ ಮಾನ್ಪಡೆ

ರಾಜ್ಯಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ಸಂದರ್ಶನ ದಿನಾಂಕ : ೦೫.೦೬.೨೦೧೧, ಗುಲಬರ್ಗಾ

ಸ್ವಾತಂತ್ರ್ಯಪೂರ್ವದಿಂದಲೇ ಈ ಭಾಗದಲ್ಲಿ ಕಮುನಿಸ್ಟ್ ಹೋರಾಟಗಳನ್ನು ಗುರುತಿಸಬಹುದಾಗಿದೆ. ಪ್ರಮುಖವಾಗಿ ಎಂಎಸ್‌ಕೆ ಮಿಲ್ ಹೋರಾಟ ದೊಡ್ಡ ಪ್ರಮಾಣದಲ್ಲಿತ್ತು. ವಿಶೇಷವಾಗಿ

ಗುಲಬರ್ಗಾ ಸುತ್ತಮುತ್ತ ಅನೇಕ ಚಿಕ್ಕ ಸಂಘಟನೆಗಳಿದ್ದವು. ಕ್ರಮೇಣ ಇವು ಸುತ್ತಮುತ್ತಲಿನ ಜಿಲ್ಲೆಗಳಿಗೆ ವ್ಯಾಪಿಸಿದವು. ಹೈದರಾಬಾದ್ ಕರ್ನಾಟಕದಲ್ಲಿ ಕಮುನಿಸ್ಟ್ ಹೋರಾಟಗಳು ಹೆಚ್ಚಾಗಿ ಆರಂಭವಾಗಲು ಕಾರಣವೆಂದರೆ, ಸ್ವಾತಂತ್ರ್ಯನಂತರ ಇಲ್ಲಿ ಜಮೀನ್ದಾರರ ಹಿಡಿತ ಬಹಳ ಇತ್ತು. ಇಲ್ಲಿ ಶೋಷಣೆ ಅತ್ಯಂತ ಮುಕ್ತವಾಗಿತ್ತು, ದೌರ್ಜನ್ಯ ಅತ್ಯಂತ ಮುಕ್ತವಾಗಿ ನಡೆಯುತ್ತಿದ್ದದರಿಂದ ಇದನ್ನು ಕಮುನಿಸ್ಟರು ಬಿಟ್ಟರೆ ಬೇರೆ ಯಾರೂ ಎದುರಿಸಲು ಸಾಧ್ಯವಿದ್ದಿಲ್ಲ. ಪ್ರಸ್ತುತ ಇಲ್ಲಿನ ಎಲ್ಲಾ ಜಿಲ್ಲೆಗಳಲ್ಲಿ ಕಮುನಿಸ್ಟ್ ಚಳವಳಿ ಸಕಾರಾತ್ಮಕವಾಗಿ ನಡೆಯುತ್ತಿದೆ. ಇಂದು ಶೋಷಣೆಗೆ ಪ್ರತಿರೋಧವನ್ನು ಒಡ್ಡಲು ನಾವು ಅನೇಕ ಘಟಕಗಳನ್ನು ಮಾಡಿಕೊಂಡು ಹೋರಾಟ ಮಾಡುತ್ತಿದ್ದೇವೆ. ಅದರಲ್ಲೂ ಮಹಿಳಾ ತಾರತಮ್ಯ, ದಲಿತರ ಮೇಲಿನ ದೌರ್ಜನ್ಯ, ಬಡರೈತ ಕೂಲಿಕಾರರ ಪರ ಕೆಲಸ ಮಾಡುತ್ತಿದ್ದಾರೆ.

ವಿಶೇಷವಾಗಿ ಇಲ್ಲಿ ರೈತರ ಸಮಸ್ಯೆಯೆಂದರೆ ಭೂಸುಧಾರಣಾ ಸಮಸ್ಯೆ. ಬಡರೈತರನ್ನು ಇಲ್ಲಿಂದ ಓಡಿಸುತ್ತಿದ್ದಾರೆ, ಅವರ ಭೂಮಿಯನ್ನು ಕಿತ್ತುಕೊಳ್ಳುತ್ತಿದ್ದಾರೆ, ಭೂಮಿ ಬಡವರಿಂದ ಶ್ರೀಮಂತರ ಕಡೆಗೆ ಹೋಗುತ್ತಿದೆ. ಇದರಿಂದ ಶೋಷಣೆ ಹೆಚ್ಚಾಗಿ ಜನ ದೊಡ್ಡ ಪ್ರಮಾಣದಲ್ಲಿ ಗುಳೆ ಹೋಗುತ್ತಿದ್ದಾರೆ. ಇಲ್ಲಿನ ರೈತರು ಎದುರಿಸುತ್ತಿರುವ ಭೀಕರ ಸಮಸ್ಯೆಯೆಂದರೆ ನೀರಾವರಿ ಸಮಸ್ಯೆಯಾಗಿದೆ. ಕೃಷ್ಣ, ಭೀಮ, ತುಂಗಭದ್ರಾ ಈ ಭಾಗದಲ್ಲಿನ ದೊಡ್ಡ ನದಿಗಳಾಗಿವೆ ಆದರೆ ಈ ನದಿಗಳ ನೀರನ್ನು ಪ್ರಭಾವಯುತವಾಗಿ ರಾಜ್ಯ ಸರಕಾರಗಳು ಬಳಸಿಕೊಳ್ಳಲು ಹಿಂದೇಟು ಹಾಕುತ್ತಿರುವುದರಿಂದ ಇಲ್ಲಿ ಪ್ರಮುಖವಾಗಿ ರೈತರಿಗೆ ಎಷ್ಟು ನೀರು ಸಿಗಬೇಕಿತ್ತೋ ಅಷ್ಟು ಸಿಗುತ್ತಿಲ್ಲ. ಇನ್ನು ಈ ಭಾಗದ ಬೆಣ್ಣೆತೊರಾ, ಕಾರಂಜಾ, ಮಾಂಜಾ ಮುಂತಾದ ಯೋಜನೆಗಳು ಪೂರ್ಣಗೊಳ್ಳುತ್ತಿಲ್ಲ. ಇನ್ನು ಪೂರ್ಣಗೊಂಡಿರುವ ಯೋಜನೆಗಳು ಸುಮಾರು ೨೦೦೦ ಎಕರೆ ಜಮೀನುಗಳಿಗೆ ನೀರೊದಗಿಸಲು ಶಕ್ತವಾಗಿದೆ ಆದರೆ ಕಾಲುವೆಗಳು ಮಾತ್ರ ಮುಕ್ತಾಯವಾಗಿಲ್ಲ. ಹೀಗಾಗಿ ಕೊಪ್ಪಳ, ಯಲಬರ್ಗಾ ಮುಂತಾದ ಭಾಗಗಳಿಗೆ ನೀರು ಸಿಗುತ್ತಿಲ್ಲ. ಕೃಷ್ಣ, ತುಂಗಭದ್ರ, ಭೀಮದಿಂದ ಇನ್ನಷ್ಟು ನೀರು ರಾಯಚೂರಿನ ದೇವದುರ್ಗ, ಲಿಂಗಸೂಗೂರು ಮುಂತಾದ ಭಾಗಗಳಿಗೆ ಹರಿಯಬೇಕು ಆಗ ಸಮಸ್ಯೆ ಬಗೆಹರಿಯಲಿಕ್ಕೆ ಸಾಧ್ಯವಾಗುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಈಗ ಬೃಹತ್ ಕೈಗಾರಿಕೆಗಳೇ ಇಲ್ಲ ಇದ್ದಂತಹವು ಮುಚ್ಚಿ ಹೋಗಿವೆ. ಹಿಂದೆ ಏಷ್ಯಾಖಂಡದಲ್ಲೇ ಹೆಚ್ಚು ಹತ್ತಿ ಬೆಳೆಯುತ್ತಿದ್ದ ಈ ಪ್ರದೇಶದಲ್ಲಿ ಇಂದು ಬೆಳೆ ಇಲ್ಲದಾಗಿದೆ. ಹೀಗಾಗಿ ಕೈಗಾರಿಕೆಗಳನ್ನು ನಾವು ವಿರೋಧಿಸುತ್ತಿಲ್ಲ, ಕೈಗಾರಿಕೆಗಳಿಗೆ ಬೇಕಾದ ಭೂಸ್ವಾಧೀನ ವನ್ನು ನಾವು ವಿರೋಧಿಸುತ್ತಿಲ್ಲ, ಆದರೆ ಭೂಮಿಯನ್ನು ಎಷ್ಟು ಕೊಡಬೇಕು, ಯಾವ ಭೂಮಿಯನ್ನು ಕೊಡಬೇಕು, ಎನ್ನುವ ಭಿನ್ನಾಭಿಪ್ರಾಯ ಇಂದು ನಮಗೂ ಸರಕಾರಕ್ಕೂ ಬಂದಿದೆ. ವಾಸ್ತವವಾಗಿ ಭೂಮಿಯನ್ನು ತೆಗೆದುಕೊಂಡ ಇವರು ರಿಯಲ್ ಎಸ್ಟೇಟ್ ದಂದೆ ಆರಂಭಿಸಿದ್ದಾರೆ. ಹಾಗಾಗಿಯೇ ಇಲ್ಲಿ ಗಣಿ, ಭೂ ಮಾಫಿಯ ಬೆಳೆದಿದೆ. ಸರಕಾರದಲ್ಲಿರುವ ಜನರೆ ಗಣಿ ಮತ್ತು ಭೂ ಮಾಫಿಯದಲ್ಲಿದ್ದಾರೆ. ಇವರು ಹೆಚ್ಚು ಬೆಲೆಗೆ ಭೂಮಿ ಕೊಂಡುಕೊಳ್ಳುವುದಾಗಿ ರೈತರಲ್ಲಿ ಆಸೆ ಮೂಡಿಸುತ್ತಿದ್ದಾರೆ. ಇನ್ನು ಕೃಷಿ ಲಾಭದಾಯಕ ಅಲ್ಲದಿರುವುದರಿಂದ ಭೂಮಿಗೆ ಹೆಚ್ಚು ಬೆಲೆ ಬಂದರೆ ಮಾರಾಟ ಮಾಡಲು ರೈತರು

ತಯಾರಾಗುತ್ತಿದ್ದಾರೆ, ಹೀಗಾಗಿ ಭೂ ಸುಧಾರಣೆ ಕಾಯಿದೆ ಪುನಃ ಜಾರಿಗೊಳಿಸಬೇಕು. ಯಾವ ಕಂಪನಿಗಳಿಗೆ ರೈತ ಜಮೀನು ನೀಡುತ್ತಾನೋ ಆ ಕಂಪನಿಯಲ್ಲಿ ರೈತರಿಗೆ ಷೇರು ನೀಡಬೇಕು, ಆ ರೈತನ ಕುಟುಂಬದ ಸದಸ್ಯರಿಗೆ ಉದ್ಯೋಗ ಒದಗಿಸಬೇಕು ಎನ್ನುವ ಬೇಡಿಕೆಗಳನ್ನು ನಮ್ಮ ಅಜೆಂಡಾದಲ್ಲಿ ಸೇರ್ಪಡೆ ಮಾಡಿಕೊಂಡಿದ್ದೇವೆ.

ಇತ್ತೀಚಿಗೆ ರೈತರ ಮೇಲೆ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗುತ್ತಿವೆ. ಇದಕ್ಕೆ ಕಾರಣ ಸರಕಾರ ಮತ್ತು ಬಂಡವಾಳಶಾಹಿಗಳು. ಇಂದು ಶ್ರೀಮಂತ ರೈತರಿಗೆ ಜಮೀನ್ದಾರರಿಗೆ ಸರಕಾರದಿಂದ ಸಹಾಯ ಸಿಗುತ್ತಿದೆ ಈ ಬಂಡವಾಳಶಾಹಿಗಳು ಸರಕಾರದಲ್ಲಿದ್ದಾರೆ. ಇನ್ನು ಉದಾರೀಕರಣದ ನೀತಿಗಳು ರೈತರನ್ನು ಇಬ್ಭಾಗ ಮಾಡುತ್ತಿವೆ. ಶೇ. ಐದರಿಂದ ಹತ್ತರಷ್ಟು ರೈತರು ಸುಲಿಗೆ ನೀತಿಗೆ ಬೆಂಬಲ ಮಾಡುತ್ತಿದ್ದಾರೆ. ಬೀಜ, ಗೊಬ್ಬರ ಕ್ರಿಮಿನಾಶಕಗಳನ್ನು ಖಾಸಗೀಕರಣ ಮಾಡಿರುವುದರಿಂದಾಗಿ ಇವುಗಳ ಬೆಲೆ ಹೆಚ್ಚಾಗಿ ಸಂಘರ್ಷ ನಡೆಯುತ್ತಿದೆ. ಇದನ್ನು ನಾವು ಪ್ರತಿಭಟಿಸಲು ಹೋದಾಗ ಲಾಠಿಚಾರ್ಜ್, ಗೋಲಿಬಾರ್, ಬಂಧನ ನಡೆಯುತ್ತಿವೆ. ಹಾಗೆಯೇ ಶೇ. ಹತ್ತರಿಂದ ಇಪ್ಪತ್ತರಷ್ಟು ರೈತರಿಗೆ ಉದಾರೀಕರಣದಿಂದ ಲಾಭ ಇದೆ ಹಾಗೂ ಇತ್ತೀಚೆಗೆ ಸರಕಾರಗಳು ಘೋಷಣೆ ಮಾಡಿದ ಸಾಲದ ಯೋಜನೆಗಳಾದ ಟ್ರಾಕ್ಟರ್ ಸಾಲ, ಬ್ಯಾಂಕ್‌ಸಾಲ, ಉಚಿತ ಬೀಜ, ವಿದ್ಯುತ್ ಸಬ್ಸಿಡಿ ಹೀಗೆ ಅನೇಕ ರೀತಿಯ ಲಾಭವನ್ನು ಈ ವರ್ಗದವರು ಪಡೆಯುತ್ತಿದ್ದಾರೆ. ಹೀಗಾಗಿ ಇವರು ಆಳವು ವರ್ಗಗಳ ಕಟ್ಟಾ ಬೆಂಬಲಿಗರಾಗಿ ನಿಂತಿದ್ದಾರೆ.

ಇಂದು ಚಳವಳಿಗಳು ಸ್ವಲ್ಪ ಹಿನ್ನಡೆ ಸಾಧಿಸಿವೆ ಎಂಬುದೇನೋ ನಿಜ. ಇದಕ್ಕೆ ಅನೇಕ ಕಾರಣಗಳಿವೆ ಅದರಲ್ಲೂ ಮಾಧ್ಯಮದ ಪಾತ್ರ ಬಹಳ ಇದೆ. ಈ ೨೦ ವರ್ಷದ ಹಿಂದೆ ಒಂದು ಚಳವಳಿ ಆಗುತ್ತಿದ್ದರೆ ಇಡೀ ಮಾಧ್ಯಮ ಅವರ ಹಿಂದೆ ನಿಂತಿರುತಿತ್ತು. ಆದರೆ ಇವತ್ತು ಮಾಧ್ಯಮಗಳು ರೈತ, ಮಹಿಳಾ ಅಥವಾ ಇನ್ಯಾವುದೇ ಚಳವಳಿಗಳನ್ನು ಮರೆಮಾಚುವ ಕೆಲಸ ಮಾಡುತ್ತಿವೆ. ಕಾರ್ಪೋರೇಟ್ ವಲಯಕ್ಕೆ ಮಾಧ್ಯಮ ಬಂದಿದ್ದರಿಂದ ರೈತರ ಹೋರಾಟಗಳನ್ನು ಬಿತ್ತರಿಸಲು ಬಾಹ್ಯಗೊಳಿಸಲು ಅವರು ತಯಾರಿಲ್ಲ ಹೀಗಾಗಿ ಇಲ್ಲಿ ನಡೆಯುತ್ತಿರುವ ಚಳವಳಿಗಳು ಇಂದು ಬಯಲಿಗೆ ಬರುತ್ತಿಲ್ಲ ಮತ್ತು ಜನರನ್ನು ತಲುಪುತ್ತಿಲ್ಲ. ಇಂದು ಮಾಧ್ಯಮಗಳು ರಾಜಕೀಯಕ್ಕೆ, ರಾಜಕಾರಣಿಗಳಿಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಸಾಮಾಜಿಕ ಸಮಸ್ಯೆಗಳಿಗೆ ನೀಡುತ್ತಿಲ್ಲ.

ಪ್ರಸ್ತುತ ಈ ಭಾಗದಲ್ಲಿನ ಸಮಸ್ಯೆಗಳು, ಸವಾಲುಗಳು ಹೇಗಿವೆಯೆಂದರೆ, ಭೂಮಿ ಇದ್ದವರು ದುಡಿಯುತ್ತಿಲ್ಲ, ದುಡಿಯುವವರ ಕೈಗೆ ಭೂಮಿ ಇಲ್ಲ. ಹೀಗಾಗಿ ಭೂಸುಧಾರಣೆ ಕಾಯ್ದೆ ಜಾರಿ ಆಗುವವರೆಗೆ ಈ ಪ್ರದೇಶ ಬೆಳವಣಿಗೆ ಆಗಲು ಸಾಧ್ಯವಿಲ್ಲ. ಜೊತೆಗೆ ನೀರು, ವಿದ್ಯುತ್, ಬೆಳೆಗೆ ಸೂಕ್ತ ಬೆಲೆ, ಕೂಲಿ ಸಮಸ್ಯೆಗಳಿವೆ. ಇವು ಸಾಧ್ಯವಾದಷ್ಟು ನಿವಾರಣೆಯಾಗಬೇಕು. ಒಬ್ಬ ಬಡವನಿಗೆ ಅಂಗಲಾಚುವ ಪರಿಸ್ಥಿತಿ ಬರಬಾರದು, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಬರಬೇಕು. ಸ್ವಾವಲಂಬಿ ಬದುಕು ಸಾಧ್ಯವಾಗಬೇಕು, ಶೋಷಣೆರಹಿತ ಸಮಾಜ ನಿರ್ಮಾಣ ಆಗಬೇಕು, ಸುಲಿಗೆ ಇಲ್ಲದಂತಾಗಬೇಕು. ಕಾರ್ಮಿಕರು, ರೈತರು ಬೇರೆಯವರ ಮೇಲೆ ಅವಲಂಬಿತರಾಗಿರುವುದು ಕಡಿಮೆ ಆಗಿ ತಮ್ಮ ಕಾಲ ಮೇಲೆ ತಾವು ನಿಂತು ಬದುಕು ಸಾಗಿಸಬೇಕು. ಈ ಗುರಿ ಉದ್ದೇಶಗಳನ್ನು ಇಟ್ಟುಕೊಂಡು ಕರ್ನಾಟಕ ರೈತ ಸಂಘ ಹೋರಾಟ ಮಾಡುತ್ತಿದೆ.

೫. ಪ್ರೊ. ಹುಡಗಿ ಆರ್.ಕೆ.

ರಾಜ್ಯಾಧ್ಯಕ್ಷರು

ಕರ್ನಾಟಕ ರಾಜ್ಯ ಸಮನ್ವಯ ಸಮಿತಿ

ಸಂದರ್ಶನ ದಿನಾಂಕ : ೧೫.೦೧.೨೦೧೨, ಗುಲಬರ್ಗಾ

ಕರ್ನಾಟಕದಲ್ಲಿಯೇ ಅತ್ಯಂತ ಹೆಚ್ಚು ಶೋಷಣೆ, ಬಡತನ, ಅನಕ್ಷರತೆ, ದೌರ್ಜನ್ಯ, ಅಸಮಾನತೆ ಅನಭಿವೃದ್ಧಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೊನೆಯ ಸ್ಥಾನದಲ್ಲಿರುವಂತಹ ಪ್ರದೇಶವೇ ಹೈದರಾಬಾದ್ ಕರ್ನಾಟಕ ಪ್ರದೇಶವಾಗಿದೆ. ಶಿಕ್ಷಣ, ಉದ್ಯೋಗ ಹಾಗೂ ವಿವಿಧ ಅವಕಾಶಗಳಿಂದ ವಂಚಿತವಾಗಿ ಬೇರೆ ಭಾಗದವರೊಡನೆ ಸ್ಪರ್ಧಿಸಲಾರದೆ ಹಿಂದುಳಿದಿರುವುದು ಒಂದೆಡೆ ಯಾದರೆ, ಬಡತನ, ಮೌಢ್ಯ, ಜಾತಿಭೇದಕ್ಕೆ ಒಳಗಾಗಿ ಸರಕಾರದ ನಿರ್ಲಕ್ಷ್ಯಕ್ಕೆ ಬಲಿಯಾಗಿ ಸತ್ವಹೀನ ಬದುಕನ್ನು ಮಾಡುತ್ತಿರುವುದು ಇನ್ನೊಂದು ಕಡೆ. ಹೀಗಾಗಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಔದ್ಯೋಗಿಕವಾಗಿ, ಸಾಹಿತ್ಯಿಕವಾಗಿ, ಎಲ್ಲಾ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಹಿಂದುಳಿದಿದೆ ಮತ್ತು ಇದಕ್ಕೆ ಅನೇಕ ಕಾರಣಗಳು ಇವೆ.

ಸ್ವಾತಂತ್ರ್ಯಪೂರ್ವ ಹೈದರಾಬಾದ್ ಕರ್ನಾಟಕದಲ್ಲಿ ಆಳುವವರು ಮುಸ್ಲಿಮರಾಗಿದ್ದರಾದರೂ ರಾಜ್ಯ ಇಸ್ಲಾಮಿಕ್ ರಾಜ್ಯವಾಗಿರಲಿಲ್ಲ. ನಿಜಾಂ ರಾಜ್ಯದಲ್ಲಿ ಶೇ. ೮೫ ಭಾಗ ಮುಸ್ಲಿಮೇತರರಿದ್ದರೆ ಕೇವಲ ಶೇ. ೧೪ರಷ್ಟು ಮಾತ್ರ ಮುಸ್ಲಿಂರಿದ್ದರು. ಹೀಗಾಗಿ ಸ್ವಾತಂತ್ರ್ಯಪೂರ್ವದಿಂದಲೇ ಇಲ್ಲಿ ಕೆಲವು ಭಿನ್ನತೆಗಳು ಭಿನ್ನಾಭಿಪ್ರಾಯಗಳು ವೈಶಿಷ್ಟ್ಯತೆಗಳು ಇದ್ದವು. ಇದರ ಜೊತೆಗೆ ರಜಾಕಾರರ ವಿರುದ್ಧದ ಹೋರಾಟದ ಸಮಯದಲ್ಲಿ ಕೆಲವರು ಇದನ್ನು ಹಿಂದೂ-ಮುಸ್ಲಿಂಮರ ನಡುವಿನ ಹೋರಾಟ ಎಂದೇ ಗುರುತಿಸಿಬಿಟ್ಟರು. ಹೀಗಾಗಿ ಹಿಂದೂ-ಮುಸ್ಲಿಂರ ನಡುವೆ ಒಂದು ಸಂಶಯಾತ್ಮಕ ಕಂದಕ ಏರ್ಪಟ್ಟಿತು. ಹಾಗೆಯೇ ಸ್ವಾತಂತ್ರ್ಯ ದೊರೆತ ನಂತರವೂ ಜಮೀನ್ದಾರರ, ಊಳಿಗಮಾನ್ಯಶಾಹಿಗಳ, ಬಂಡವಾಳಶಾಹಿಗಳ ಕೈಗೆ ಅಧಿಕಾರ ದೊರೆತು ಶೋಷಣೆ ದೌರ್ಜನ್ಯ ಮುಂದುವರೆದವು. ಹೀಗಾಗಿ ಇಲ್ಲಿ ವಿವಿಧ ಹೋರಾಟಗಳು, ಕಮುನಿಸ್ಟ್ ಹೋರಾಟಗಳು ತೀವ್ರವಾಗಿ ಆರಂಭವಾದವು.

ಸ್ವಾತಂತ್ರ್ಯೋತ್ತರ ಕಾಲದಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರೈತರು, ದಲಿತರು, ಕಾರ್ಮಿಕರು, ಮಹಿಳೆಯರು ಒಂದಲ್ಲಾ ಒಂದು ರೀತಿಯ ಶೋಷಣೆಗೆ, ಅನ್ಯಾಯಕ್ಕೆ ಬಲಿಯಾಗುತ್ತಿದ್ದರು. ಇದನ್ನು ವಿರೋಧಿಸಿ ಅನೇಕ ಪ್ರತಿಭಟನೆಗಳು, ಚಳವಳಿಗಳು ಬಹಳ ಪರಿಣಾಮಕಾರಿಯಾಗಿ ಆರಂಭ ವಾದರೂ ಕ್ರಮೇಣ ತಮ್ಮ ಶಕ್ತಿಯನ್ನು ಕಳೆದುಕೊಳ್ಳತೊಡಗಿದವು. ಅದರಲ್ಲೂ ಇತ್ತೀಚಿಗಂತೂ ಸಾಮಾಜಿಕ ಚಳವಳಿ ಸ್ಥಗಿತಗೊಂಡಿವೆಯೇನೋ ಎನ್ನುವ ಸ್ಥಿತಿಗೆ ಬಂದಿವೆ. ಬಂಡಾಯ ಸಾಹಿತ್ಯ ತನ್ನ ಚಟುವಟಿಕೆಯನ್ನು ನಿಧಾನಗೊಳಿಸಿದೆ. ರೈತ ಮತ್ತು ದಲಿತ ಸಂಘಟನೆಗಳು ಒಡೆದು ತಮ್ಮ ಶಕ್ತಿಯನ್ನು ಕಳೆದುಕೊಂಡು ಬಿಟ್ಟಿವೆ. ಜಾತೀಯತೆ ಸಮಾಜದಲ್ಲಿ ದೊಡ್ಡ ಕಂದಕವನ್ನು ನಿರ್ಮಿಸುತ್ತಿದೆ. ಹೋರಾಟಗಳು ಜಾತಿ ಸ್ವರೂಪವನ್ನು ಪಡೆಯುತ್ತಿವೆ. ಇಲ್ಲಿ ಹೋರಾಟ ಮಾಡುತ್ತೇವೆಂದರೆ ಜನರು ಜಾತಿ, ವರ್ಗ ಬಿಟ್ಟು

ಮುಕ್ತವಾಗಿ ಹೋರಾಟಕ್ಕೆ ಬರದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಇದು ಚಳವಳಿಗಳ ಹಿನ್ನಡೆಗೆ ಕಾರಣವಾಗಿದೆ.

ಇಂತಹ ಸ್ಥಿತಿಯಲ್ಲೂ ಇಂದು ಗುಲಬರ್ಗಾ, ಬೀದರ್, ರಾಯಚೂರುಗಳಲ್ಲಿ ಕಮುನಿಸ್ಟ್ ಹೋರಾಟಗಳು ತಮ್ಮದೇ ನೆಲೆಯನ್ನು ಕಂಡುಕೊಂಡಿವೆ. ಕಾರಣ ಕಮುನಿಸ್ಟ್ ಪಕ್ಷ ಜಾತ್ಯಾತೀತ ನಿಲುವನ್ನು ತಾಳಿದ್ದು, ಶ್ರೀಮಂತರ, ಅಧಿಕಾರಿಗಳ ರಾಜಕೀಯ ಪಕ್ಷಗಳ ನೀತಿಗಳನ್ನು ವಿರೋಧಿಸುವ ಗುಣ, ಬಡವರನ್ನು, ಕೆಳವರ್ಗದವರನ್ನು, ಮುಸ್ಲಿಂರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿ ಬಹುಶಕ್ತಿಯುತವಾದ ಹೋರಾಟ ಆರಂಭವಾಯಿತು ಹಾಗೂ ತಮ್ಮ ಹೋರಾಟಗಳಲ್ಲಿ ಕೃಷಿ ಕೂಲಿಕಾರರ, ರೈತರ, ಮಹಿಳೆಯರ ದಲಿತರ ಸಮಸ್ಯೆಗಳನ್ನು ಹಾಗೂ ಭೂಮಿಯ ಹೋರಾಟಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡಿ ಯಶಸ್ಸುಗಳಿಸಿತ್ತು. ಆದರೆ ಇತ್ತೀಚಿಗೆ ಮೂಲಭೂತವಾದ ಪ್ರಶ್ನೆಗಳನ್ನು, ಸಮಸ್ಯೆಗಳನ್ನು, ಇಟ್ಟುಕೊಂಡು ಹೋರಾಟ ಮಾಡುತ್ತಿರುವುದರ ಜೊತೆಗೆ ಭೂ ಹೋರಾಟಗಳನ್ನು ಇಟ್ಟುಕೊಂಡು ಹೋರಾಟ ಮಾಡುತ್ತಿದೆ ಯಾದರೂ, ಭೂ ಹೋರಾಟಗಳನ್ನು ನಿರ್ಲಕ್ಷಿಸುತ್ತದೆಯೇನೋ ಎಂದು ಅನ್ನಿಸುತ್ತಿದೆ.

ಹೈದರಾಬಾದ್ ಕರ್ನಾಟಕದ ಹಿಂದುಳಿದಿರುವಿಕೆಗೆ, ಅಸಮಾನತೆಗೆ ಇಲ್ಲಿನ ಜನಪ್ರತಿನಿಧಿಗಳ ನಿರ್ಲಕ್ಷ್ಯ ಹಾಗೂ ಇಚ್ಛಾಶಕ್ತಿಯ ಕೊರತೆ ಕಾರಣ ಎನ್ನುವ ಹಾಗೂ ಸುಮಾರು ದಶಕಗಳಿಂದ ಅಧಿಕಾರದಲ್ಲಿರುವ ಇಲ್ಲಿನ ರಾಜಕಾರಣಿಗಳು ಏನು ಮಾಡುತ್ತಿದ್ದಾರೆ ಎನ್ನುವ ಹಾಗೂ ಇಲ್ಲಿನ ಜನರು ಇಂತಹ ರಾಜಕಾರಣಿಗಳನ್ನು ಈ ಕುರಿತು ಪ್ರಶ್ನಿಸುತ್ತಿಲ್ಲವೇಕೇ ಎನ್ನುವ ಕೂಗು ಸಹಜ. ಆದರೆ ವಾಸ್ತವವೇನೆಂದರೆ ನಾಲ್ಕೈದು ದಶಕಗಳಿಂದ ಇಲ್ಲಿನ ರಾಜಕಾರಣಿಗಳು ಕುರ್ಚಿಯಲ್ಲಿದ್ದಾರೆಯೇ ಹೊರತು, ಸ್ವತಂತ್ರ ಅಧಿಕಾರ ಅವರ ಕೈಯಲ್ಲಿಲ್ಲ. ಅಂದರೆ ತಮ್ಮ ಪಕ್ಷದ ತತ್ವಗಳನ್ನು ಬೇರೆ ಭಾಗದ ನಾಯಕರನ್ನು ಎದುರು ಹಾಕಿಕೊಂಡು ನಿರ್ಧಾರ ಕೈಗೊಳ್ಳುವ ಅಥವಾ ಅವರಿಗೆ ಇಲ್ಲಿನ ಸ್ಥಿತಿಗತಿಗಳನ್ನು, ಸಮಸ್ಯೆಗಳನ್ನು ತಿಳಿ ಹೇಳುವ, ಹೈದರಾಬಾದ್ ಕರ್ನಾಟಕದ ಹೊಸ ಯೋಜನೆಗಳಿಗೆ ಒಪ್ಪಿಗೆ ಪಡೆಯುವ, ಹೆಚ್ಚಿನ ಅನುದಾನವನ್ನು ದೊರಕಿಸಿಕೊಳ್ಳುವ, ಗಟ್ಟಿ ನಿರ್ಧಾರಗಳನ್ನು ಕೈಗೊಳ್ಳುವ ಧೀಮಂತಿಕೆ ಇವರಲ್ಲಿ ಇಲ್ಲದಾಗಿದೆ. ಹೀಗಾಗಿ ಇಲ್ಲಿಗೆ ನ್ಯಾಯವಾಗಿ ಏನು ದೊರಕಬೇಕಿತ್ತೋ ಅದು ದೊರಕುತ್ತಿಲ್ಲ, ಸಾರ್ವಜನಿಕ ಕೆಲಸಗಳೂ ಆಗುತ್ತಿಲ್ಲ. ಬದಲಾಗಿ ಇವರ ಹಿಂಬಾಲಕರ, ಬೆಂಬಲಿತರ ಹಾಗೂ ವೈಯಕ್ತಿಕ ಕೆಲಸಗಳು ಹೆಚ್ಚಾಗಿ ಆಗುತ್ತಿವೆ. ಒಟ್ಟಾರೆಯಾಗಿ ಇಲ್ಲಿನ ರಾಜಕಾರಣಿಗಳಿಗೆ ಒಂದು ಸ್ಪಷ್ಟ ದೃಷ್ಟಿಕೋನ (ವಿಸನ್) ಇಲ್ಲ. ಅದು ಇದ್ದರೆ ರಾಜಕೀಯ ಇಚ್ಛಾಶಕ್ತಿ ತಾನೇ ಹುಟ್ಟಿಕೊಳ್ಳುತ್ತದೆ. ಬೇರೆ ನಗರಗಳನ್ನ, ದೇಶಗಳನ್ನ ಸುತ್ತಿ ಬರುವ ಇಲ್ಲಿನ ನಾಯಕರಿಗೆ ಇವರಿಗೆ ನಮ್ಮ ಭಾಗ ಅದೇ ರೀತಿ ಬೆಳೆಯಬೇಕು, ಬದಲಾಗಬೇಕು, ಅಭಿವೃದ್ಧಿಯಾಗಬೇಕು, ನಮ್ಮ ಜನ ಬೇರೆ ಜನರಂತೆ ಬದುಕಬೇಕು ಎನ್ನುವ ಇಚ್ಛೆ ಇವರಲ್ಲಿ ಬೆಳೆಯುತ್ತಿಲ್ಲ.

ಹೈದರಾಬಾದ್‌ನ್ನು ನಿರ್ಲಕ್ಷಿಸಿದ ಜನಪ್ರತಿನಿಧಿಗಳೇ ಮತ್ತೆ ಮತ್ತೆ ಆರಿಸಿ ಬರುತ್ತಾರೆ ಏಕೆ ಎನ್ನುವಂತಹ ಪ್ರಶ್ನೆಯು ಹೇಳುತ್ತದೆ. ಇದಕ್ಕೆ ಕಾರಣ, ನಮ್ಮ ಚುನಾವಣಾ ವ್ಯವಸ್ಥೆ. ವ್ಯಕ್ತಿಯ

ವ್ಯಕ್ತಿತ್ವ, ಸಮರ್ಥತೆ, ಅವನ ತತ್ವ, ಉದ್ದೇಶಗಳನ್ನು ನೋಡಿ ಮತ ಚಲಾಸುವವರ ಸಂಖ್ಯೆ ಬಹಳ ಕಡಿಮೆ ಇದೆ. ಚುನಾವಣೆಯಲ್ಲಿ ಜಾತಿ, ಹಣ, ಹೆಂಡ, ಪ್ರಚಾರಗಳೇ ಅಭ್ಯರ್ಥಿಯ ಗೆಲುವನ್ನು ನಿರ್ಧರಿಸುವ ಸಾಧನಗಳಾಗಿವೆ. ಹೀಗಾಗಿ ಇಂತಹ ವ್ಯಕ್ತಿಗಳೇ ಆರಿಸಿ ಬರುತ್ತಾರೆಯೇ ಹೊರತು, ತತ್ವ ಉದ್ದೇಶ, ನ್ಯಾಯ ನೀತಿ, ಶುದ್ಧ ಚಾರಿತ್ರ್ಯ ಶುದ್ಧ ಹಸ್ತದ ವ್ಯಕ್ತಿಗಳಲ್ಲ.

ಪ್ರಸ್ತುತ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸರಕಾರಗಳು ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಸಂಪೂರ್ಣಗೊಳಿಸಬೇಕು, ಜನರಿಗೆ ರಸ್ತೆ, ಕುಡಿಯುವ ನೀರು, ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು, ಖುಷ್ಕಿ ಜಮೀನುಗಳ ಅಭಿವೃದ್ಧಿಪಡಿಸಬೇಕು. ಹೊಸ ಕಾರ್ಖಾನೆಗಳ ಸ್ಥಾಪನೆಗೆ ಪ್ರೋತ್ಸಾಹ ಮಾಡಬೇಕು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹೆಚ್ಚು ಕ್ರಿಯಾಶೀಲವಾಗಬೇಕು, ಭ್ರಷ್ಟಾಚಾರ ಕಡಿಮೆಯಾಗಬೇಕು, ಆಗ ಇಲ್ಲಿನ ಸ್ಥಿತಿಗತಿಯಲ್ಲಿ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಂವಿಧಾನ ೩೭೧ನೇ ವಿಧಿ ತತಕ್ಷಣ ಜಾರಿಯಾಗಬೇಕು. ಇದರ ಮೂಲಕ ಇಲ್ಲಿನ ಕೆಲವು ಸಮಸ್ಯೆಗಳು ಬಗೆಹರಿಯಬೇಕು. ಹಾಗೆಯೇ ಇಲ್ಲಿನ ಜನರು, ಸಂಘಸಂಸ್ಥೆಗಳು, ವಿವಿಧ ಸಂಘಟನೆಗಳು ಜಾತೀಯತೆ, ವೈಯಕ್ತಿಕ ಹಿತಾಸಕ್ತಿಗಳನ್ನು ಬಿಟ್ಟು, ಆಳುವವರ ಗಮನಕ್ಕೆ ತರಲು ಒಂದು (ಪ್ರೆಸರ್ ಗ್ರೂಪ್) ಆಗಿ ಒತ್ತಡ ಗುಂಪುಗಳಾಗಿ, ಒತ್ತಡ ತಂತ್ರಗಳಾಗಿ ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆಯಿದೆ.

೬. ಶ್ರೀ ಲಕ್ಷ್ಮಣ ದಸ್ತಿ
ಕಾರ್ಯದರ್ಶಿಗಳು
ಹೈದರಾಬಾದ್ ಕರ್ನಾಟಕ ಜನಪರ ಸಂಘರ್ಷ ಸಮಿತಿ (ರಿ)
ಸಂದರ್ಶನ ದಿನಾಂಕ : ೨೩.೧೦.೨೦೧೦, ಗುಲಬರ್ಗಾ

ಭಾರತ ೧೯೪೭ ಆಗಸ್ಟ್ ೧೫ರಂದು ಸ್ವತಂತ್ರವಾದರೆ ಹೈದರಾಬಾದ್ ಕರ್ನಾಟಕ ಮಾತ್ರ ಒಂದು ವರ್ಷ ಒಂದು ತಿಂಗಳು ಹಾಗೂ ಎರಡು ದಿವಸ ತಡವಾಗಿ ಅಂದರೆ ೧೯೪೮ನೇ ಸೆಪ್ಟೆಂಬರ್ ೧೭ರಂದು ಭಾರತದ ಒಕ್ಕೂಟದಲ್ಲಿ ಸೇರಿತು. ನಿಜಾಮನ ಹೈದರಾಬಾದ್ ರಾಜ್ಯದ ರಾಜಸತ್ತೆಯಿಂದ ಭಾರತದ ಪ್ರಜಾಸತ್ತೆಗೆ ಸೇರಿದ ನಂತರ ೧೯೫೬ರವರೆಗೆ ೮ ವರ್ಷ ಯಥಾವತ್ತಾಗಿ ಈ ರಾಜ್ಯದಲ್ಲಿ ಈಗಿನ ಈ ಭಾಗದ ರಾಜ್ಯಗಳು ಮುಂದುವರೆದವು. ಆದರೆ ಫಜಲ್‌ಆಲಿ ವರದಿ ಪ್ರಕಾರ ನಾವು ೧೯೫೬ರಲ್ಲಿ ಅಖಂಡ ಕರ್ನಾಟಕಕ್ಕೆ ಸೇರಿದೆವು. ಒಂದೇ ಭಾಷೆ ಆಡುವ ಜನ ಒಂದು ಕಡೆ ಇದ್ದರೆ ನಮ್ಮ ಸಮಸ್ಯೆಗಳಿಗೆ ಒಬ್ಬರಿಗೊಬ್ಬರು ಸ್ಪಂದಿಸುತ್ತಾರೆ ಎಂದು ಯಾವ ಷರತ್ತುಗಳಿಲ್ಲದೆ ನಮ್ಮ ಹಿರಿಯರು ಮೈಸೂರು ಪ್ರಾಂತ್ಯಕ್ಕೆ ಸೇರಿದರು. ಆಗ ಈ ಭಾಗದವರಿಗೆ ಇದ್ದ ಆಸೆಯೆಂದರೆ ಆಗಿನ ಸರಕಾರ ಮತ್ತು ಮುಖ್ಯಮಂತ್ರಿಗಳು ಇಲ್ಲಿನ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ, ಏನಾದರೂ ಪ್ರಗತಿ ಮಾಡುತ್ತಾರೆ ಅಂತ ಬಯಸಿದ್ದರು. ಏಕೆಂದರೆ ಫಜಲ್‌ಆಲಿ ವರದಿಯ ೮೩೫ರಿಂದ ೮೪೦ನೇ ಪ್ಯಾರದವರೆಗೆ

ತುಂಗಭದ್ರ ಮೇಲಿನ ಪ್ರದೇಶವು ಕೃಷಿ, ಕೈಗಾರಿಕೆ, ಶಿಕ್ಷಣ, ಉದ್ಯೋಗ, ಸಾರಿಗೆ, ಸಾಹಿತ್ಯ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಹಿಂದೆ ಬಿದ್ದಿದೆ, ಅದಕ್ಕಾಗಿ ಈ ಪ್ರದೇಶದ ಅಭಿವೃದ್ಧಿಗೆ ರಾಜ್ಯ ಸರಕಾರ ವಿಶೇಷ ಪ್ರಗತಿ ಮಾಡಬೇಕು ಅಂತ ಹೇಳಿ ಫಜಲ್‌ಅಲಿಯವರು ತಮ್ಮ ವರದಿಯಲ್ಲಿ ಬರೆದಿದ್ದರು. ಆದರೆ ಯಾವ ಸರಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸದೆ ಇದನ್ನು ಗಾಳಿಗೆ ತೂರಿವೆ. ಇಂತಹ ಒಂದು ಪರಿಸ್ಥಿತಿಯಿಂದ ಎಲ್ಲಾ ಸರಕಾರಗಳು ಈ ಪ್ರದೇಶವನ್ನು ನಿರ್ಲಕ್ಷಿಸಿವೆ. ಒಂದು ರೀತಿಯಲ್ಲಿ ಇದು ಗುಲಾಮಗಿರಿ ತರಹದ ಭಾವನೆಗೆ ಒಳಗಾಯಿತು. ಹೀಗಾಗಿ ಈ ಭಾಗ ಎಲ್ಲಾ ರೀತಿಯಲ್ಲಿ ಹಿಂದುಳಿದಿದೆ.

ರಾಜ್ಯ ಸರಕಾರ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ವಿಶೇಷ ಒತ್ತು ನೀಡಿ ಶೇ. ೯೯ರಷ್ಟು ಯೋಜನೆಗಳನ್ನು ಪೂರ್ತಿಗೊಳಿಸಿ ಆ ಭಾಗದ ರೈತರಿಗೆ ಸಮರ್ಪಕ ನೀರು ನೀಡಿ ಹಸಿರು ಕ್ರಾಂತಿ ಮಾಡಿದ್ದಾರೆ. ಆದರೆ ಕೃಷ್ಣ ಜಲಾನಯನ ಪ್ರದೇಶದ ಈ ಭಾಗದ ಪಾಲಿನ ನೀರನ್ನು ಇನ್ನೂ ಬಳಸಿಕೊಳ್ಳಲಾಗಿಲ್ಲ. ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣದ ೧೦ ನೀರಾವರಿ ಯೋಜನೆಗಳು ೪೦ ವರ್ಷವಾದರೂ ಮುಗಿದಿಲ್ಲ. ಅನೇಕ ಯೋಜನೆಗಳು ಮಂದಗತಿಯಲ್ಲಿ ಸಾಗಿವೆ. ಇದರಿಂದ ಈ ಭಾಗದ ರೈತರು ಬದುಕುವುದೇ ದುಸ್ತರವಾಗಿದೆ. ಇನ್ನು ಇಲ್ಲಿ ಹೇಳಿಕೊಳ್ಳುವಂತಹ ಬೃಹತ್ ಕೈಗಾರಿಕೆಗಳಿಲ್ಲ. ಇಲ್ಲಿ ಸಿಗುವ ಖನಿಜ, ಕಲ್ಲು, ಗ್ರಾನೈಟ್ ಸಂಪತ್ತಿನ ಕಾರಣದಿಂದ ಕೆಲವು ಕಾರ್ಖಾನೆಗಳಿವೆ. ಆದರೆ ಇವು ಖಾಸಗಿಯವರ ಒಡೆತನದಲ್ಲಿರುವುದರಿಂದ ಸಂಪತ್ತು ಇವರ ಪಾಲಾಗುತ್ತಿದೆ. ಅನೇಕ ಚಿಕ್ಕ ಕೈಗಾರಿಕೆಗಳು, ಗುಡಿಕೈಗಾರಿಕೆಗಳು ಮುಚ್ಚಿಹೋಗಿವೆ. ಶಿಕ್ಷಣದಲ್ಲಂತೂ ಈ ಭಾಗ ಕರ್ನಾಟಕದಲ್ಲಿಯೆ ಕೊನೆಯ ಸ್ಥಾನದಲ್ಲಿ ನಿಂತಿದೆ. ಇಲ್ಲಿನ ರಸ್ತೆ, ಸಾರಿಗೆ, ಸಂಪರ್ಕಗಳು ಸರಿ ಇಲ್ಲ, ಕ್ರೀಡಾ ಕ್ಷೇತ್ರದಲ್ಲಿ ಆದ್ಯತೆ ಇಲ್ಲ. ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಹೈದರಾಬಾದ್ ಕರ್ನಾಟಕದ ದೇವದುರ್ಗ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಭಾಗ ಎಂಬುದನ್ನು ಸಾಬೀತುಮಾಡಿದೆ.

ಅಭಿವೃದ್ಧಿ ಯಾಕೆ ಆಗುತ್ತಿಲ್ಲವೆಂದರೆ ಸಿಮೆಂಟ್ ಉತ್ಪಾದನೆಯಿಂದ ಬರುವ ಅತ್ಯಧಿಕ ಸೆಸ್ ಕೇಂದ್ರಕ್ಕೆ ಹೋಗುತ್ತೆ, ಗಣಿ ಆದಾಯ ಕೇಂದ್ರೀಕೃತವಾಗುತ್ತಿದೆ. ಕೃಷಿಯಿಂದ ಬರುವ ಆದಾಯ ಕಡಿಮೆಯಿದೆ, ವಿದ್ಯುತ್ ಉತ್ಪಾದನೆ ಹೆಚ್ಚಿದೆ ಆದರೆ ಅದರ ಬಳಕೆ ಬೇರೆ ಕಡೆ ಆಗುತ್ತಿದೆ. ಅಂದರೆ ಆದಾಯವೆಲ್ಲಾ ಬೇರೆ ಕಡೆ ಹೋಗುತ್ತಿದೆ. ಇನ್ನು ಸರಕಾರಕ್ಕೆ ರಾಜಕೀಯ ಇಚ್ಛಾಶಕ್ತಿಯಂತೂ ಇಲ್ಲವೇ ಇಲ್ಲ. ಹೀಗಾಗಿಯೇ ಇಂದು ಈ ಭಾಗದವರು ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೆ ಹೋರಾಟ ಆರಂಭಿಸಿದ್ದಾರೆ ಮತ್ತು ಇದನ್ನು ಕೇಳುವುದು ನಮ್ಮ ಹಕ್ಕಾಗಿದೆ. ಹೈದರಾಬಾದ್ ಕರ್ನಾಟಕದ ಸಮಗ್ರ ಪ್ರಗತಿ, ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಹೀಗೆ ಇಲ್ಲಿನ ಅನೇಕ ಸಮಸ್ಯೆಗಳನ್ನು ಇಟ್ಟುಕೊಂಡು ಇದರ ಬದಲಾವಣೆಗೆ ಕೇಂದ್ರ ಸರಕಾರ ಅವಶ್ಯಕ ತಿದ್ದುಪಡಿ ಮಾಡಬೇಕು ಹಾಗೂ ಇದು ತತಕ್ಷಣದಿಂದ ಪ್ರತಿಫಲ ನೀಡುವಂತಾಗಬೇಕು. ಆಗಾದಾಗ ಮಾತ್ರ ೩೭೧ನೇ ವಿಧಿ ಉಪಯೋಗ ಆಗುತ್ತದೆ. ಇಲ್ಲದಿದ್ದರೆ ಮತ್ತೆ ೩೭೧ನೇ ವಿಧಿಯಿಂದ ಈ ಭಾಗದ ಅಭಿವೃದ್ಧಿ ಆಗಿಲ್ಲ ಎಂದು ಪ್ರತ್ಯೇಕ ರಾಜ್ಯದ ಕೂಗು ಏಳುತ್ತದೆ.

ಇಲ್ಲಿನ ಜನರಿಗೆ ತಮ್ಮ ಸ್ಥಿತಿಗತಿಯ ಬಗ್ಗೆ ಅರಿವಿಲ್ಲ ಅಥವಾ ತಮ್ಮ ಇಂತಹ ಬದುಕಿನ ಬಗ್ಗೆ ಸಿಟ್ಟು ಬರುವುದಿಲ್ಲ. ಮೊದಲಿನಿಂದ(ರಾಜರ) ನಿಜಾಮರ ಆಳ್ವಿಕೆಯಲ್ಲಿ ಧ್ವನಿ ಅಡಗಿ ಹೋಗಿತ್ತು. ನಂತರ ಈ ಭಾಗದ ಇತಿಹಾಸ ನಮ್ಮ ಪಠ್ಯಕ್ರಮದಲ್ಲಿಲ್ಲ. ಸುಮಾರು ವರ್ಷಗಳ ಕಾಲ ಕರ್ನಾಟಕದ ಬಹಳಷ್ಟು ಪ್ರದೇಶವನ್ನು ಆಳಿದವರು ಈ ಭಾಗದವರೇ, ಆದರೆ ಇವರಿಗೆ ತಮ್ಮ ಇತಿಹಾಸವೇ ಗೊತ್ತಿಲ್ಲ. ಇತಿಹಾಸ ತಿಳಿದವನು ಮಾತ್ರ ಇತಿಹಾಸವನ್ನು ನಿರ್ಮಿಸುತ್ತಾನೆ. ತೆಲಂಗಾಣ ಹೋರಾಟದಲ್ಲಿ ವಿದ್ಯಾರ್ಥಿಗಳೇ ಪ್ರಮುಖ ಪಾತ್ರ ವಹಿಸಿದ್ದರು, ಆದರೆ ಇಲ್ಲಿ ಹಾಗುತ್ತಿಲ್ಲ. ಏಕೆಂದರೆ ಈ ಭಾಗದ ವಿದ್ಯಾರ್ಥಿಗಳಿಗಂತೂ ಇಲ್ಲಿನ ಇತಿಹಾಸವೇ ತಿಳಿದಿಲ್ಲ. ಎಲ್ಲಿಯವರೆಗೆ ನಮ್ಮ ಭಾಗದ ವಿದ್ಯಾರ್ಥಿಗಳು ತಮ್ಮನ್ನು ಸಂಪೂರ್ಣವಾಗಿ ಹೋರಾಟದಲ್ಲಿ ತೊಡಗಿಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಸಂವಿಧಾನದ ೩೭೧ನೇ ವಿಧಿ ಜಾರಿಯೂ ಆಗುವುದಿಲ್ಲ ಮತ್ತು ಇಲ್ಲಿ ವಿಶೇಷ ಪ್ರಗತಿಯೂ ಆಗುವುದಿಲ್ಲ. ಇನ್ನು ನಮ್ಮ ರಾಜಕೀಯ ನಾಯಕರಿಂದ ಇದಾಗುತ್ತೆ ಅಂತ ಆಸೆ ಇಟ್ಟುಕೊಳ್ಳುವುದು ಬಹಳ ಮೂರ್ಖತನವಾಗಿದೆ.

ಇಲ್ಲಿರುವ ರಾಜಕೀಯ ಸಂಘಟನೆಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಜೀವಂತವಾಗಿವೆಯೇ ಹೊರತು ಈ ಭಾಗದ ಸಮಗ್ರ ಅಭಿವೃದ್ಧಿಗೆ ಎಂದೂ ಚಿಂತನೆ ನಡೆಸಿಲ್ಲ. ಚುನಾವಣೆ ಸಮಯದಲ್ಲಿ ಅಷ್ಟೇ ಅವರ ಹೋರಾಟ ತೀವ್ರವಾಗಿರುತ್ತೆ, ನಂತರ ತಣ್ಣಗಾಗಿ ಬಿಡುತ್ತಾರೆ. ಇನ್ನು ಕೆಲವು ಅಸಂಘಟಿತ ಸಂಘಟನೆಗಳೇ ತಮ್ಮದೇ ಆದ ಕ್ಷೇತ್ರದಲ್ಲಿ, ತಮ್ಮದೇ ಆದ ಶಕ್ತಿಗನುಗುಣವಾಗಿ ಹೋರಾಟ ಮಾಡುತ್ತಿವೆ. ಇವುಗಳನ್ನೆಲ್ಲಾ ನಾವು ಒಂದು ಕಡೆ ಸೇರಿಸಿ ಒಂದು ಸಮನ್ವಯ ಒಕ್ಕೂಟ ಮಾಡಿಕೊಂಡು ಹೋರಾಟ ಆರಂಭಿಸಿದರೆ ಖಂಡಿತವಾಗಿಯೂ ಇಲ್ಲಿ ಒಂದು ದೊಡ್ಡ ಸಾಮಾಜಿಕ ಚಳವಳಿಯಾಗಲು ಸಾಧ್ಯವಾಗುತ್ತದೆ.

೭. ಶ್ರೀ ಆರ್. ಮಾನಸಯ್ಯ

ರಾಜ್ಯಾಧ್ಯಕ್ಷರು

ಕರ್ನಾಟಕ ರೈತ ಸಂಘ, (ಎಐಕೆಕೆಎಸ್)

ಸಂದರ್ಶನ ದಿನಾಂಕ : ೧೬.೦೨.೨೦೧೨, ರಾಯಚೂರು

ಹೈದರಾಬಾದ್ ಕರ್ನಾಟಕದಲ್ಲಿ ದಲಿತ ಚಳವಳಿಯ ಆರಂಭಕ್ಕೆ ಸೈದ್ಧಾಂತಿಕವಾಗಿ ಪ್ರಭಾವ ಬೀರಿದ್ದು, ಕೆಲಸ ಮಾಡಿದ್ದು ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಗತಿಪರ ಆಲೋಚನೆಗಳು ಮತ್ತು ಲೋಹಿಯಾರವರ ವಿಚಾರವಾದಗಳು. ಇವರಿಬ್ಬರ ಆಲೋಚನೆಗಳನ್ನು, ವಿಚಾರಗಳನ್ನು ಸಮೀಕರಿಸಿಕೊಂಡು ದಲಿತ ಹೋರಾಟಗಳು ಆರಂಭವಾದವು. ಹೈದರಾಬಾದ್ ಕರ್ನಾಟಕದ ದಲಿತ ಚಳವಳಿಯ ವಿಶೇಷತೆ ಯೇನೆಂದರೆ ತಮ್ಮ ಹೋರಾಟದಲ್ಲಿ ಭೂ-ಹೋರಾಟಗಳನ್ನು ಕೈಗೆತ್ತಿಕೊಂಡಿರುವುದು. ಆದರೆ ಇದು ಬೇರೆ ಭಾಗದ ದಲಿತ ಚಳವಳಿಗಳಲ್ಲಿ ಕಂಡು ಬರುವುದಿಲ್ಲ. ಅಷ್ಟೇ ಅಲ್ಲ, ಈ ರೀತಿಯ ಭೂಹೋರಾಟ ಬೇರೆ ಭಾಗದಲ್ಲಿ ಇಂದಿಗೂ ನಡೆಯುತ್ತಿಲ್ಲ.

ಹೈದರಾಬಾದ್ ಕರ್ನಾಟಕದಲ್ಲಿ ರೈತ ಚಳವಳಿಗಳು ತೀವ್ರವಾಗಿ ಬೆಳೆದು ಬಂದಿಲ್ಲ. ಇಲ್ಲಿ ಜಮೀನ್ದಾರಿ ಪದ್ಧತಿ ಬಲಿಷ್ಟವಾಗಿ ಬೆಳೆದುಬಂದಿದ್ದರಿಂದಾಗಿ ಇವರೆ ಉತ್ಪಾದನಾಂಗಗಳ ಮೇಲೆ ಹತೋಟಿ

ಹೊಂದಿದವರಾಗಿರುವುದರಿಂದ ಇವರ ವಿರುದ್ಧ ಹೋರಾಟ ಅಷ್ಟು ಸುಲಭವಲ್ಲ. ಹಾಗೆಯೇ ಈ ಭಾಗದಲ್ಲಿ ನೂರಾರು ಎಕರೆ ಇರುವ ಶ್ರೀಮಂತ ರೈತ ಒಂದು ಕಡೆಯಾದರೆ ಒಂದೆರೆಡು ಎಕರೆ ಇರುವ ಬಡ ರೈತ ಇನ್ನೊಂದು ಕಡೆ ಇದ್ದಾನೆ. ಹೀಗಾಗಿ ರೈತರಲ್ಲೆ ಅಂತರ ಬಹಳ ಇದೆ. ಹಾಗಾಗಿ ಇಲ್ಲಿ ರೈತರ ಸಂಘಟನೆಗಳು ಮತ್ತು ಅದರ ಹೋರಾಟ ಆರಂಭವಾಗಿದ್ದು ಇತ್ತೀಚಿನ ದಶಕಗಳಲ್ಲಿ. ಇಂತಹ ಸನ್ನಿವೇಶಗಳಲ್ಲಿ ಇಲ್ಲಿ ಎಡಪಂಥೀಯ ಹೋರಾಟಗಳು ಆರಂಭವಾಗಿದ್ದನ್ನು ನೋಡಬಹುದು.

ಸಾಮಾಜಿಕ ಪರಿಸ್ಥಿತಿಗಳ ಬದಲಾವಣೆಯನ್ನು ಗಮನಿಸಿದಾಗ, ಇವು ಸಕರಾತ್ಮಕವಾಗಿಯೂ ಬದಲಾಗಿವೆ ಮತ್ತು ನಕರಾತ್ಮಕವಾಗಿಯೂ ಬದಲಾಗಿವೆ. ಹಳೇ ಭೂಮಾಲೀಕರು ಹೊಸ ಬಂಡವಾಳಗಾರ ರಾಗಿ ಪರಿವರ್ತನೆ ಆಗಿದ್ದಾರೆ. ಊಳಿಗಮಾನ್ಯಶಾಹಿ ಪದ್ಧತಿ ಬದಲಾಗಿ ಕಾರ್ಪೋರೇಟ್ ವ್ಯವಸ್ಥೆ ಜಾರಿಯಾಗಿದೆ, ಜಮೀನ್ದಾರಿಕಾ ಶೋಷಣಾ ಪದ್ಧತಿ ಬದಲಾಗಿ ಜಾಗತೀಕರಣ ಉದಾರೀಕರಣದ ನವವಸಾಹತುವಾದದ ಪ್ರಭಾವ ಪ್ರಾರಂಭವಾಗಿದೆ. ಹೀಗಾಗಿ ಚಳವಳಿಗಳ ಸ್ವರೂಪದಲ್ಲೂ ಬದಲಾವಣೆ ಆಗಿದೆ. ಹಳೇ ಹೋರಾಟ ಊಳಿಗಮಾನ್ಯಶಾಹಿಯ ವಿರುದ್ಧವಾಗಿದ್ದರೆ ಹೊಸ ಹೋರಾಟ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವಾಗಿದೆ. ಹಾಗೆಯೇ ಊಳಿಗಮಾನ್ಯ ಪದ್ಧತಿಯ ಸಾಮಾಜಿಕ ಮೌಲ್ಯಗಳು ಹಳೇ ರೂಪದಲ್ಲಿರದೆ ಹೊಸ ರೂಪದಲ್ಲಿ ಬದಲಾಗಿದೆ.

ಇತ್ತೀಚಿನ ದಶಕಗಳಲ್ಲಿ ಇಲ್ಲಿನ ರೈತ ಹೋರಾಟಗಳಲ್ಲಿ ಕರ್ನಾಟಕ ರೈತಸಂಘ, ಎಡಪಂಥಿಯ ರೈತ ಸಂಘಟನೆಗಳು ಭೂಹೋರಾಟವನ್ನು ಇಟ್ಟುಕೊಂಡು ಹೋರಾಟ ಮಾಡುತ್ತಿವೆ. ಇವರ ಬೇಡಿಕೆಯೇನೆಂದರೆ ಎಲ್ಲಾ ಗ್ರಾಮಗಳಲ್ಲೂ ರೈತರಿಗೆ ಭೂಮಿ ದೊರಕಬೇಕು ಎಂಬುದಾಗಿದೆ. ಇಲ್ಲಿ ಭೂ ಸುಧಾರಣಾ ಕಾಯ್ದೆ ಯಶಸ್ವಿಯಾಗಿ ಜಾರಿಯಾಗದೆ ಇರುವುದರಿಂದ, ಎಡಪಂಥೀಯ ಸಂಘಟನೆಗಳು ಗ್ರಾಮಗಳಲ್ಲಿ ಸಾಗುವಳಿ ಮಾಡಲು ಕೃಷಿ ಕಾರ್ಮಿಕರಿಗೆ ಭೂಮಿ ಹಂಚಬೇಕು, ಹಾಗೆಯೇ ನಗರಗಳಲ್ಲಿ, ಕೊಳಗೇರಿಗಳಲ್ಲಿರುವ ಜನರಿಗೆ ವಸತಿಗಾಗಿ ಭೂಮಿಯನ್ನು ಹಂಚಬೇಕು ಎಂಬ ಧ್ಯೇಯವನ್ನಿಟ್ಟುಕೊಂಡು ಹೋರಾಟವನ್ನು ಆರಂಭಿಸಿದ್ದಾರೆ. ಹೋರಾಟದ ಪರಿಣಾಮವಾಗಿ ಕಳೆದ ದಶಕದ ಅವಧಿಯಲ್ಲಿ ಸುಮಾರು ೧೦,೬೦೦ ಎಕರೆ ಭೂಮಿ ರೈತ ಸಂಘಟನೆಗಳ ಮೂಲಕ ರೈತರಿಗೆ ವಿತರಣೆ ಆಗಿದೆ. ೨೦೧೧ರಲ್ಲಿ ಸುಮಾರು ೬,೩೦೦ ಎಕರೆ ಭೂಮಿಯನ್ನು ಸರಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಹಂಚಲು ಯೋಜನೆಗಳನ್ನು ರೂಪಿಸಿತ್ತು. ಅದನ್ನು ವಿರೋಧಿಸಿ ಭೂಮಿಯನ್ನು ಬಿಟ್ಟುಕೊಡದ ರೈತರು ಸಾಗುವಳಿ ಮಾಡುತ್ತಿರುವುದು ಭೂಹೋರಾಟಗಳಲ್ಲಿನ ಒಂದು ಯಶಸ್ವಿ ಹೆಜ್ಜೆ ಎಂದೇ ಹೇಳಬಹುದು. ಇಂತಹ ಹೋರಾಟಗಳು ಹೆಚ್ಚಾಗಿ ಕೊಪ್ಪಳ, ರಾಯಚೂರು ಜಿಲ್ಲೆಯಲ್ಲಿ ಕಂಡು ಬರುತ್ತವೆ.

ಆದರೂ ಈ ಭಾಗದಲ್ಲಿರುವಂತಹ ರೈತರ ಅತಂತ್ರ ಮತ್ತು ಶೋಚನೀಯ ಸ್ಥಿತಿಯನ್ನು ರಾಜ್ಯದ ಇನ್ನಾವ ಭಾಗದಲ್ಲೂ ನೋಡಲು ಸಾಧ್ಯವಿಲ್ಲ. ಮೊದಲನೆಯದಾಗಿ, ಈ ಭಾಗದ ಬಹಳಷ್ಟು ರೈತರಿಗೆ ಸ್ವಂತ ಭೂಮಿಯಿಲ್ಲ, ಇನ್ನೂ ಅಲ್ಪ ಸ್ವಲ್ಪ ಭೂಮಿ ಇರುವ ರೈತರಿಗೆ ಕೃಷಿ ಮಾಡಲು ಬಂಡವಾಳ ಇಲ್ಲ. ಇನ್ನೂ ಬೆಳೆದ ಬೆಳೆಗೆ ಮಾರುಕಟ್ಟೆ ಸಮಸ್ಯೆ ಮತ್ತು ಬೆಲೆ ಸಮಸ್ಯೆಯಿದೆ. ಇಲ್ಲಿರುವ ಬಹುಭಾಗ

ರೈತರು ಬಡ ಮತ್ತು ಕೆಳವರ್ಗದವರಾಗಿದ್ದು, ಬೀಜ, ಗೊಬ್ಬರ, ಔಷಧಿ ಇವುಗಳಿಗೆ ಖರ್ಚು ಮಾಡಲು ತಮ್ಮಲ್ಲಿ ಹಣ ಇಲ್ಲದೆ ಮತ್ತೆ ಶ್ರೀಮಂತ ಜಮೀನ್ದಾರರನ್ನೇ ಆಶ್ರಯಿಸಬೇಕಾದ ಅನಿವಾರ್ಯತೆಯಿದೆ. ಹೀಗಾಗಿ ಇಂದು ಇಲ್ಲಿನ ರೈತರಿಗೆ ಸ್ವಂತ ಭೂಮಿಯ ಸ್ವಂತ ಬಂಡವಾಳದ, ಸೂಕ್ತ ಬೆಲೆಯ, ಭೂಮಿ ವಶದಂಥ ಸಮಸ್ಯೆಗಳು ಕಾಡುತ್ತಿವೆ.

ಈ ಭಾಗದ ಸಂಘಟಿತ ವಲಯದ ಕಾರ್ಮಿಕರ ಸಮಸ್ಯೆಗಳನ್ನು ಗಮನಿಸಿದಾಗ ಇಲ್ಲಿನ ಉದ್ದಿಮೆಗಳಲ್ಲಿ, ಕಾರ್ಖಾನೆಗಳಲ್ಲಿ ಗಣಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರ ಶ್ರಮಕ್ಕೆ ತಕ್ಕಷ್ಟು, ಉತ್ಪಾದನೆಗೆ ತಕ್ಕಷ್ಟು ವೇತನ ದೊರಕುತ್ತಿಲ್ಲ. ಶಾಶ್ವತವಾಗಿ ಉದ್ಯೋಗವಿರದೆ ಇವರನ್ನು ಅಭದ್ರತೆ ಆವರಿಸಿದೆ. ಸಂಘಟಿತ ವಲಯದ ಕಾರ್ಮಿಕರಿಗೆ ಕೊಡಬೇಕಾದ ಆರೋಗ್ಯ ಸೌಲಭ್ಯ, ಅಪಘಾತ ವಿಮೆ, ಶಿಕ್ಷಣ ಸೌಲಭ್ಯ, ಕಡಿಮೆ ದರದಲ್ಲಿ ಸಾಲ ಸೌಲಭ್ಯ ಮುಂತಾದವುಗಳು ಎಲ್ಲಾ ಕಾರ್ಮಿಕರಿಗೆ ಸಿಗುತ್ತಿಲ್ಲ. ಇನ್ನು ಅಸಂಘಟಿತ ವಲಯದ ಕಾರ್ಮಿಕರ ಬದುಕಂತೂ ತೀರಾ ಶೋಚನೀಯವಾಗಿದೆ. ಕೃಷಿ ಕಾರ್ಮಿಕರು ಸೇವಾ ವಲಯದಲ್ಲಿರುವ ಇವರಿಗೆ ಕೂಲಿ ನಿಗದಿಯಾಗಿಲ್ಲ, ಕಡಿಮೆ ವೇತನಕ್ಕೆ ಹೆಚ್ಚು ಶ್ರಮಕ್ಕೆ ತಯಾರಾಗಿರಬೇಕು. ಇನ್ನು ವರ್ಷವಿಡಿ ಕೆಲಸವಿಲ್ಲದೆ ಗುಳೆ ಹೋಗುವುದು ಸಾಮಾನ್ಯವಾಗಿದೆ. ಕಾರ್ಮಿಕರಿಗೆ ವರ್ಷದಲ್ಲಿ ೧೦೦ ದಿನವೂ ಉದ್ಯೋಗದ ಖಾತರಿ ಇಲ್ಲ. ಹೀಗಾಗಿ ಇಲ್ಲಿಂದ ಸುಮಾರು ೧೦ ಲಕ್ಷಕ್ಕೂ ಹೆಚ್ಚು ಜನ ಗುಳೆ ಹೋಗಿದ್ದಾರೆ.

ಸಿಪಿಐ (ಎಂ.ಎಲ್.) ಹಾಗೂ ಏಐಕೆಕೆಎಸ್(ಆಲ್ ಇಂಡಿಯಾ ಕರ್ನಾಟಕ ಕಿಸಾನ್ ಸಭಾ)ನಂತಹ ಪಕ್ಷಗಳು ಬಡವರ, ಕೆಳವರ್ಗದವರ, ಶೋಷಣೆಗೆ ಬಲಿಯಾದವರ, ನಿರ್ಗತಿಕರಾಗಿರುವವರ ಪರ ಹೋರಾಟ ಮಾಡುವ ಸಂಘಟನೆಗಳಾಗಿವೆ. ಇವು ಹಳೇ ಜಮೀನ್ದಾರಿ ಪದ್ಧತಿ ಮತ್ತು ಹೊಸ ಜಾಗತೀಕರಣವನ್ನು ಅರ್ಥಮಾಡಿಕೊಂಡು ಅದರ ವಿರುದ್ಧ ಸೆಡ್ಡು ಹೊಡೆದು ಮೂಲ ಜನರ ರಕ್ಷಣೆಗೆ ನಿಂತಿವೆ. ದುಡಿಯುವ ವರ್ಗಕ್ಕೆ ಅಧಿಕಾರ ಅಂತಸ್ತು ಇಲ್ಲ. ಹೀಗಾಗಿ ಇವುಗಳು ಈ ವರ್ಗದವರಿಗೆ ಸಿಗಬೇಕು ಎನ್ನುವ ತತ್ವವನ್ನು ಒಳಗೊಂಡಿವೆ, ಹೀಗಾಗಿ ಈ ಭಾಗದಲ್ಲಿ ಕಮುನಿಸ್ಟ್ ಮತ್ತು ಎಡಪಂಥೀಯ ಹೋರಾಟಗಳು ಹೆಚ್ಚು ಬೆಂಬಲವನ್ನು ತೀವ್ರತೆಯನ್ನು ಪಡೆದುಕೊಳ್ಳುತ್ತಿವೆ.

ಇಂದು ಜಾಗತೀಕರಣವು ಶ್ರೀಮಂತಿಕೆಯನ್ನು ಕೇಂದ್ರೀಕರಣ ಮಾಡಿದೆ. ಜಾಗತೀಕರಣಕ್ಕೆ ಒಳಪಟ್ಟ ಪ್ರದೇಶಗಳು ದಾರಿದ್ರ್ಯಕ್ಕೆ ಒಳಗಾಗುತ್ತಿವೆ. ಹೀಗಾಗಿ ತಮ್ಮ ಏಳಿಗೆಗೆ, ಸ್ವಹಿತಾಸಕ್ತಿಗೆ ಅನುಗುಣವಾದಂತ ಯೋಜನೆಗಳನ್ನು ರೂಪಿಸುವ, ಭೂಮಿಯನ್ನು ವಶಪಡಿಸಿಕೊಳ್ಳುವ ಸಂಸ್ಥೆಗಳನ್ನು ಇಲ್ಲಿಂದ ಓಡಿಸ ಬೇಕಾಗಿದೆ. ಹಾಗೆಯೇ ಇಂತಹ ಯೋಜನೆಗಳನ್ನು, ಸಂಸ್ಥೆಗಳನ್ನು, ಬೆಂಬಲಿಸುವ ಸರಕಾರಗಳನ್ನು ಕಿತ್ತು ಹಾಕಬೇಕಾಗಿದೆ ಜೊತೆಗೆ ಇಂದು ನಮ್ಮನ್ನಾಳುವ ಪ್ರಭುತ್ವಗಳು ಮೇಲ್ನೋಟಕ್ಕೆ ಪ್ರಜಾಪ್ರಭುತ್ವದ ಮಾದರಿಯಲ್ಲಿದ್ದರೂ ಒಳಗಡೆ ಅವುಗಳ ತತ್ವಗಳಲ್ಲಿ ಕಾರ್ಯವೈಖರಿಯಲ್ಲಿ ಫ್ಯಾಸಿಸಂನಂತಹ, ನಿರಂಕುಶಾಧಿಕಾರದ, ಸರ್ವಾಧಿಕಾರದ ತತ್ವಗಳು ಕಂಡುಬರುತ್ತವೆ. ಇಂತಹ ಪ್ರಭುತ್ವವನ್ನು ವ್ಯವಸ್ಥೆಯನ್ನು ಕಿತ್ತು ಹಾಕಬೇಕು, ದುಡಿಯುವ ವರ್ಗದ ಕೈಗೆ ಅಧಿಕಾರ ಕೊಡಬೇಕು, ದುಡಿಯುವ ವರ್ಗ ಸರಕಾರದಲ್ಲಿ

ಪ್ರಮುಖ ಪಾತ್ರ ವಹಿಸಬೇಕು. ಇಂತಹ ವ್ಯವಸ್ಥೆ ಮತ್ತು ಹೋರಾಟ ಬರಬೇಕೆಂಬುದು ನಮ್ಮ ಆಶಯವಾಗಿದೆ.

೮. ಶ್ರೀ ಡಿ.ಜಿ. ಸಾಗರ್

ರಾಜ್ಯ ಸಂಚಾಲಕರು

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ

ಸಂದರ್ಶನ ದಿನಾಂಕ : ೧೩.೧೧.೨೦೦೯, ಗುಲಬರ್ಗಾ

ನಮ್ಮ ಸಮಾಜದ ಮೇಲೆ ಹಿಂದಿನಿಂದಲೂ ಹಿಂದುತ್ವವು ಪ್ರಭುತ್ವವನ್ನು ಸಾಧಿಸಿದೆ. ಭಾರತದ ಸಮಾಜವು ಹಿಂದೂ ಸಮಾಜ ಎನ್ನುವ ಅಲಿಖಿತ ನಿಯಮವನ್ನು ಮೂಡಿಸಿಬಿಟ್ಟಿದ್ದಾರೆ. ಇದರಿಂದ ಮೇಲ್ವರ್ಗದವರು ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದಾರೆ. ಇನ್ನು ಈ ಭಾಗದಲ್ಲಿ ಹಿಂದಿನಿಂದ ಇದ್ದಂತಹ ಊಳಿಗಮಾನ್ಯ, ಜಮೀನ್ದಾರಿ ವ್ಯವಸ್ಥೆಯಲ್ಲಿ ಇವರು ದಲಿತರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಹಂಬಲ ಉಳ್ಳವರಾಗಿದ್ದಾರೆ. ಹೀಗಾಗಿ ದಲಿತರು ತಮಗಾದ ಅನ್ಯಾಯವನ್ನು ಪ್ರಶ್ನೆ ಮಾಡಿದರೆ ಇವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ, ಅಂದರೆ ದಲಿತರು ಗುಲಾಮರಾಗಿಯೇ ಇರಬೇಕು ಎಂದು ಇವರು ಬಯಸುತ್ತಾರೆ. ಇದರ ಜೊತೆಗೆ ಒಬ್ಬ ಅಸ್ಪೃಶ್ಯ ಇನ್ನೊಬ್ಬ ಅಸ್ಪೃಶ್ಯನನ್ನು ತುಳಿದು ತಾನು ಬೆಳೆಯಬೇಕು ಎಲ್ಲಾ ಸೌಲಭ್ಯಗಳು ತನಗೆ ಸೇರಬೇಕು ಎನ್ನುವ ಭಾವನೆ ಬೆಳೆದು ಬಂದು ಬಿಟ್ಟಿದೆ ಒಬ್ಬ ದಲಿತನ ಏಳಿಗೆಯನ್ನು ಇನ್ನೊಬ್ಬ ದಲಿತ ಸಹಿಸದಂತಾಗಿದ್ದಾನೆ.

ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಹೇಳುವುದಾದರೆ ಹತ್ತಿಪ್ಪತ್ತು ವರುಷಗಳ ಹಿಂದಿನ ಸ್ಥಿತಿಗೂ ಇವತ್ತಿನ ಸ್ಥಿತಿಗೂ ಹೋಲಿಸಿದರೆ ದಲಿತರ ಮೇಲಿನ ದೌರ್ಜನ್ಯಗಳ ಪ್ರಕರಣಗಳು ಕಡಿಮೆ ಆಗಿದೆ ಎಂದೇ ಹೇಳಬಹುದು. ಇಂದು ಮೇಲ್ನೋಟಕ್ಕೆ ದೌರ್ಜನ್ಯಗಳ ಸಂಖ್ಯೆ ಹೆಚ್ಚಿವೆ ಎನಿಸುತ್ತದೆ. ಕಾರಣ ಮುಂಚೆ ದಲಿತರ ಮೇಲೆ ದೌರ್ಜನ್ಯಗಳು ಬೆಳಕಿಗೆ ಬರುತ್ತಿದ್ದುದು ಕಡಿಮೆ. ಆದರೆ ಇಂದು ಪತ್ರಿಕೆ ಮತ್ತು ಮಾಧ್ಯಮಗಳ ಪ್ರಭಾವದಿಂದಾಗಿ ಬಹುಬೇಗ ಬಹು ಜನರನ್ನು ತಲುಪುತ್ತಿವೆ. ಚಿಕ್ಕ ಘಟನೆಗಳೂ ಬೆಳಕಿಗೆ ಬರುತ್ತವೆ. ಎಲ್ಲೋ ಮೂಲೆಯಲ್ಲಿನ ಘಟನೆಗಳು ಬೆಳಕಿಗೆ ಬರುತ್ತಿರುವುದರಿಂದ ದೌರ್ಜನ್ಯಗಳ ಸಂಖ್ಯೆ ಹೆಚ್ಚುತ್ತಿವೆಯೇನೋ ಎಂಬ ಭಾವನೆ ಬರುವುದು ಸಹಜವಾಗಿದೆ. ಇತ್ತೀಚಿನವರೆಗೆ ದೌರ್ಜನ್ಯವನ್ನು ಪ್ರತಿರೋಧಿಸುವ ಶಕ್ತಿ ದಲಿತರಿಗೆ ಇರಲಿಲ್ಲ. ಆದರೆ ದೌರ್ಜನ್ಯವನ್ನು ಪ್ರತಿರೋಧಿಸುವ ಸಾಮರ್ಥ್ಯ ಬೆಳೆದಿದೆ ಹಾಗೂ ಕಾನೂನಿನ ಭಯದಿಂದಲೋ, ಡಿಎಸ್‌ಎಸ್‌ನಂತಹ ಸಂಘಟನೆಗಳ ಪ್ರಭಾವದಿಂದಲೋ ದಲಿತರ ಮೇಲೆ ದೌರ್ಜನ್ಯ ಎಸಗಲು ಹಿಂಜರಿಯುವುದು ಕಂಡು ಬರುತ್ತದೆ.

ಉದಾಹರಣೆಗೆ, ಈ ಭಾಗದಲ್ಲಿದ್ದ ಬೆತ್ತಲ ಸೇವೆಯನ್ನು ವಿರೋಧಿಸಲು ಡಿಎಸ್‌ಎಸ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಯನ್ನು ಮಾಡಿ, ಸಂಬಂಧಪಟ್ಟ ಸರಕಾರಿ ಅಧಿಕಾರಿಗಳನ್ನು ಭೇಟಿ ಮಾಡಿ ಅನಿಷ್ಟ ಪದ್ಧತಿಯನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳುವಂತೆ ಒತ್ತಡ ಹೇರಿದ್ದಲ್ಲದೆ, ತತ್‌ಕ್ಷಣ ಈ ಅನಿಷ್ಟ ಪದ್ಧತಿಯ ನಿಲುಗಡೆಗೆ ಕ್ರಮಕೈಗೊಳ್ಳದಿದ್ದರೆ ಉಗ್ರ ಹೋರಾಟ ನಡೆಸುವ ಎಚ್ಚರಿಕೆ

ನೀಡಿತು. ಆಗ ಎಚ್ಚರಗೊಂಡ ಜಿಲ್ಲಾ ದಲಿತ ಇಲ್ಲಿನ ಹಳ್ಳಿಗಳಲ್ಲಿ ನಡೆಯುತ್ತಿದ್ದ ಬೆತ್ತಲೆ ಮೆರವಣಿಗೆ ಹರಕೆ ಮುಂತಾದ ಸಾಮಾಜಿಕ, ಧಾರ್ಮಿಕ ಅನಿಷ್ಟ ಪದ್ಧತಿಗಳನ್ನು ನಿಲ್ಲಿಸಲು ಕ್ರಮಕೈಗೊಂಡಿತು. ದಲಿತ ಸಂಘರ್ಷ ಸಮಿತಿಯ ಇಂತಹ ಪ್ರತಿಭಟನೆಗಳಿಂದ ಈ ಭಾಗದಲ್ಲಿ ದಲಿತ ಹೆಣ್ಣು ಮಕ್ಕಳು ಗೌರವದಿಂದ ಬಾಳಲು ದಾರಿ ಮಾಡಿಕೊಟ್ಟಂತಾಗಿದೆ.

ಜಾಗತೀಕರಣದ ಸಂದರ್ಭದಲ್ಲಿ ದಲಿತ ಸಾಕಷ್ಟು ಗೊಂದಲಕ್ಕೆ ಒಳಗಾಗಿದ್ದಾನೆ. ಮುಂದುವರೆದ ರಾಷ್ಟ್ರಗಳು ಮತ್ತು ಜನಾಂಗದವರಿಗೆ ಇದು ಕಾಮಧೇನು ಎಂಬುದು ಸತ್ಯ. ಇದು ದಲಿತರ ಮೇಲೆ ಇನ್ನು ಯಾವುದೇ ಪ್ರಭಾವ ಬೀರಿಲ್ಲ, ಆದರೆ ಆ ವಿದ್ಯಮಾನಗಳನ್ನು ಅರಿತು ದಲಿತರು ಎಚ್ಚರಿಕೆಯ ಹೆಜ್ಜೆಯನ್ನಿಡುವುದು ಅವಶ್ಯಕವಾಗಿದೆ.

ದಲಿತರ ದೌರ್ಬಲ್ಯ ಎಂದರೆ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಶೋಷಣೆಗೆ ಒಳಗಾಗಿರುವುದು. ಜಾತಿಪದ್ಧತಿ ಎನ್ನುವುದು ನೀರಿನಲ್ಲಿನ ಮೀನಿನ ಹೆಜ್ಜೆಗಳು ಇದ್ದ ಹಾಗೆ. ಹಾಗಾಗಿ ಜಾತಿಯನ್ನು ಹೊಡೆದೊಡಿಸುವುದು ಮಾತನಾಡಿದಷ್ಟು ಸುಲಭವಲ್ಲ. ಜಾತಿ ಎನ್ನುವುದನ್ನು ಮೊದಲು ಮನಸ್ಸಿನಿಂದ ತೆಗೆದು ಹಾಕಬೇಕು ಪ್ರತಿಯೊಬ್ಬರ ಮನಸ್ಸಿನಿಂದ ಇದು ಹೊರ ಹೋದಾಗ ಮಾತ್ರ ಸಮಾಜದಿಂದ ಅದನ್ನು ಹೊರಹಾಕಲು ಸಾಧ್ಯವಾಗುತ್ತದೆ. ಹಾಗೆಯೇ ಜಾತಿ ಎನ್ನುವುದು ಮರದ ಬೇರು ಇದ್ದ ಹಾಗೆ ಅಸ್ಪೃಶ್ಯತೆ ಮರದ ಟೊಂಗೆಗಳಿದ್ದ ಹಾಗೆ. ಹಾಗಾಗಿ ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡಲು ಎಷ್ಟೇ ಪ್ರಯತ್ನಿಸಿದರೂ ಅವು ಮತ್ತೆ ಮತ್ತೆ ಚಿಗುರೊಡೆಯುತ್ತವೆ ಮತ್ತು ಹೊಸ ರೂಪ ಪಡೆಯುತ್ತಿವೆ. ನಾವು ಇಲ್ಲಿಯವರೆಗೆ ಟೊಂಗೆಗಳನ್ನು ಕಡಿಯುತ್ತಿದ್ದೇವೆಯೇ ಹೊರತು ಬೇರುಗಳನ್ನಲ್ಲ. ಆದರೆ ಪ್ರಸ್ತುತ ಸಮಾಜದ ಸ್ಥಿತಿಗತಿಗಳಲ್ಲಿ ಇದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದು ಪ್ರಶ್ನೆಯಾಗಿದೆ. ಡಾ. ಬಿ.ಆರ್. ಅಂಬೇಡ್ಕರ್‌ರವರ ಕಲ್ಪನೆಯಲ್ಲಿ ದಲಿತರು ಸಮಾಜದಲ್ಲಿ ಬೆರೆಯಬೇಕು, ಊರ ಮಧ್ಯೆ ದಲಿತನೊಬ್ಬ ಸಿಹಿ ಮಾರುವಂತವನಾಗಬೇಕು ಎನ್ನುವುದಾಗಿತ್ತು. ಆದರೆ ಇಂದು ಡಾ. ಬಿ.ಆರ್. ಅಂಬೇಡ್ಕರ್ ಕಾಲೋನಿಯನ್ನು ಊರ ಹೊರಗೆ ನಿರ್ಮಿಸಿ ಅವರನ್ನು ಸಮಾಜದಿಂದಲೇ ಪ್ರತ್ಯೇಕಿಸಲಾಗುತ್ತಿದೆ. ಇದರಿಂದ ದಲಿತರ ವಿಮೋಚನೆ ಆಗಲು ಹೇಗೆ ಸಾಧ್ಯ, ಇದು ಸರಕಾರದ ತಪ್ಪೋ ಅಥವಾ ನಮ್ಮ ತಪ್ಪೋ ತಿಳಿಯುತ್ತಿಲ್ಲ, ಇಂತಹ ಆತ್ಮವಿಮರ್ಶೆ ದಲಿತ ಚಳವಳಿಗಳಲ್ಲಿ ಮೂಡಬೇಕು.

ದಲಿತರಲ್ಲಿ ಎಡ, ಬಲ ಎಂಬ ಬಣಗಳ ಏಳಿಗೆಗೆ ಕಾರಣವೇನೆಂದರೆ, ಅವಕಾಶಗಳು ಕೆಲವರಿಗೆ ಮಾತ್ರ ದೊರಕಿದಾಗ ಉಳಿದವರು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ತಮ್ಮನ್ನು ಗುರುತಿಸಿಕೊಳ್ಳಲು ತಾವೂ ನಾಯಕರಾಗಲು ಅವಕಾಶಗಳನ್ನು ಪಡೆಯಲು ಹಾತೊರೆಯುತ್ತಿದ್ದಾರೆ. ಇಂತವರು ತಮ್ಮದೇ ಬೆಂಬಲಿಗರೊಡನೆ ವಿವಿಧ ಪಂಥಗಳನ್ನು ಸ್ಥಾಪಿಸಿಕೊಂಡು ತಮ್ಮದೇ ಪ್ರತ್ಯೇಕ ಸಂಘಟನೆಯನ್ನಾಗಿ ಗುರುತಿಸಿಕೊಳ್ಳುತ್ತಾರೆ. ತಮ್ಮದೇ ಆದ ತತ್ವಗಳ ಮೂಲಕ ಎಡ ಬಲ ಎಂದು ಹೆಸರಾಗಿದ್ದಾರೆ. ಆದರೆ ಇಂತಹ ಬೆಳವಣಿಗೆ ದಲಿತರ ಒಗ್ಗಟ್ಟಿನ ದೃಷ್ಟಿಯಿಂದ ಉತ್ತಮವಾದ ಬೆಳವಣಿಗೆ ಅಲ್ಲ. ಇತ್ತೀಚಿಗಂತೂ ಅಜಾಗೃತಿಯ ಕೊರತೆಯಿಂದ ಕ್ಷಣಿಕ ಹಿತಾಸಕ್ತಿಗಾಗಿ ಇವರಿಬ್ಬರ ವಿಭಜನೆ

ಅನಿವಾರ್ಯವಾಗಿ ಮಾರ್ಪಟ್ಟಿದೆ. ಇದು ಸಂಘಟನೆಗಳ ಒಡಕಿಗೂ, ಐಕ್ಯತೆಗೂ, ಹೋರಾಟಗಳ ವಿಫಲತೆಗೂ ಕಾರಣವಾಗಿದೆ.

ದಲಿತ ಚಳವಳಿ ಎನ್ನುವುದು ಒಂದು 'ಮಾಸ್' ಚಳವಳಿಯಾಗಿದೆ. ಪ್ರತಿದಿನ ಅನೇಕ ಸದಸ್ಯರು ಬರುತ್ತಾರೆ, ಹೋಗುತ್ತಾರೆ ಆದರೆ ನಿಲುಗಡೆ ಇಲ್ಲ. ದಲಿತ ಚಳವಳಿಯು ತುಳಿತಕ್ಕೆ ಒಳಗಾಗಿರುವ ಸಮೂಹಕ್ಕೆ ಪುನರ್‌ಸ್ಥಿತಿ ಒದಗಿಸುವ ಒಂದು ನಿರಂತರ ಪ್ರಕ್ರಿಯೆ. ಇಂತಹ ಕ್ರಿಯೆಯಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಹಾಗೂ ಆಪಾದನೆಗಳು ಮೂಡುವುದು ಸಹಜ. ಆದರೆ ಇವು ಏನೇ ಇರಲಿ, ದಲಿತರಲ್ಲಿ ಭಾವನಾತ್ಮಕ ಸಂಬಂಧ ಎಳೆಗಳು ಮಾತ್ರ ಗಟ್ಟಿ ಆಗಿವೆ ಅವರ ಗೌರವಕ್ಕೆ ಧಕ್ಕೆ ಬಂದಾಗ ಮಾತ್ರ ಒಟ್ಟಾಗಿ ಪ್ರತಿರೋಧ ಮೂಡುವುದಂತು ಸತ್ಯ. ಅನ್ಯಾಯವಾದ ಸಮಯದಲ್ಲಿ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ನಾಯಕರು ಮರೆತು, ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿದ್ದಾರೆ. ಈ ವಿಚಾರವೇ ಇಂದು ದಲಿತ ಚಳವಳಿ ಯಶಸ್ವಿಯಾಗುತ್ತಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಪ್ರಸ್ತುತ ಕೆಲವು ದಲಿತ ಮುಖಂಡರ ವೈಯಕ್ತಿಕ ಸ್ವಾರ್ಥದಿಂದ ದಲಿತ ಚಳವಳಿ ಛಿದ್ರಗೊಂಡಿದೆ. ಮೂಲ ದಲಿತ ಚಳವಳಿಯನ್ನು ಆರಂಭಿಸಿದ ಉದ್ದೇಶನ್ನೇ ಮರೆತು ಪ್ರತಿಷ್ಟೆ ಮುಖ್ಯವಾಗುತ್ತಿದೆ. ಈ ಕಾರಣಗಳಿಗಾಗಿ ಚಳವಳಿ ಇಂದು ತನ್ನ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ಹೀಗಾಗಿ ತತಕ್ಷಣ ಆಗಬೇಕಾದ ಕಾರ್ಯವೆಂದರೆ ದಲಿತರೆಲ್ಲಾ ಒಂದಾಗಬೇಕು. ಎಲ್ಲವನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಾವು ಎಲ್ಲಾ ಶೋಷಣೆಯಿಂದ ದೌರ್ಜನ್ಯದಿಂದ ಹೊರಬರಲು ಸಾಧ್ಯವಾಗುತ್ತದೆ.

೯. ಡಾ. ಕುಂ. ವೀರಭದ್ರಪ್ಪ
ನಿವೃತ್ತ ಶಿಕ್ಷಕರು ಮತ್ತು ಸಾಹಿತಿಗಳು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು
ಸಂದರ್ಶನ ದಿನಾಂಕ : ೧೬.೦೩.೨೦೧೨, ಕೊಟ್ಟೂರು

ಹೈದರಾಬಾದ್ ಕರ್ನಾಟಕ ಪ್ರದೇಶವು ಭೌಗೋಳಿಕವಾಗಿ ತೀವ್ರ ಭಿನ್ನವಾಗಿರುವಂತಹ ಪ್ರದೇಶ. ತುಂಗಭಾದ್ರ ನದಿ ಮತ್ತು ಕೃಷ್ಣ ನದಿ ನಡುವೆ ಇರುತಕ್ಕಂತಹ ಪ್ರದೇಶವು ದೋಅಬ್ ಎಂದೇ ಗುರುತಿಸಿಕೊಂಡಿತ್ತು. ಫಲವತ್ತಾದ ಇಂತಹ ಪ್ರದೇಶದಲ್ಲಿ ಹತ್ತಿ, ತೊಗರಿ, ಭತ್ತ ಮುಂತಾದ ಬೆಳೆಗಳನ್ನು ಬೆಳೆಯಲು ಬೇಕಾದ ಮಣ್ಣು ಮತ್ತು ವಾತಾವರಣ ಇಲ್ಲಿದೆ. ಜೊತೆಗೆ ಕೆಲವೊಂದು ನೈಸರ್ಗಿಕ ಸಂಪನ್ಮೂಲ ಗಳನ್ನು ಹೊಂದಿದೆ. ಹೀಗಾಗಿ ಈ ಪ್ರದೇಶ ಮೊಗಲರಿಂದ ಬಿಜಾಪುರದ ಅದಿಲ್‌ಶಾಹಿಗಳಿಂದ ನಂತರ ಹೈದರಾಬಾದಿನ ನಿಜಾಮನಿಂದ ಪದೇ ಪದೇ ಆಕ್ರಮಣಕ್ಕೊಳಗಾಗುತ್ತಾ ಬಂದಿತು. ಜೊತೆಗೆ ಭೂಮಧ್ಯರೇಖೆಗೆ ಹತ್ತಿರವಿರುವಂತಹ ಪ್ರದೇಶ ೪೦ ರಿಂದ ೪೪ ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣತೆಯನ್ನು ಹೊಂದಿದೆ. ಜೊತೆಗೆ ಸತತವಾಗಿ ನೈಸರ್ಗಿಕ ವಿಕೋಪಗಳಿಗೆ ತುತ್ತಾಗುತ್ತಿರುವುದರಿಂದ, ಬಡತನ, ನಿರುದ್ಯೋಗ, ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಇದರ ಜೊತೆಗೆ ಆಳಿದ ಸರಕಾರಗಳ

ನಿರ್ಲಕ್ಷ್ಯದಿಂದಾಗಿ, ರಸ್ತೆ, ನೀರು, ಕೃಷಿ, ಕೈಗಾರಿಕೆ, ಶಿಕ್ಷಣಗಳು ಹಿಂದುಳಿಯಲು ಕಾರಣವಾಗಿ ಇಂದು ಹೈದರಾಬಾದ್ ಕರ್ನಾಟಕ ಎಂದರೆ ನಿರ್ಲಕ್ಷ್ಯದಿಂದ ನೋಡುವಂತಹ ಪ್ರದೇಶವಾಗಿ ಮಾರ್ಪಟ್ಟಿದೆ.

ಹೀಗಾಗಿ ಜಮೀನ್ದಾರಿ ವ್ಯವಸ್ಥೆಯಿಂದ ಹಾಗೂ ಸದಾಕಾಲ ಒಂದಲ್ಲಾ ಒಂದು ರೀತಿಯಲ್ಲಿ ಜನರು ಹತಾಶರಾಗುತ್ತಿದ್ದಾರೆ. ಹೀಗಾಗಿ ಇತ್ತೀಚಿಗೆ ಈ ಭಾಗದಲ್ಲಿ ನಕ್ಸಲೈಟ್ ಹಾಗೂ ಎಡಪಂಥೀಯ ಉಗ್ರ ಚಳವಳಿಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ. ಏಕೆಂದರೆ ಇಲ್ಲಿನ ಹಳ್ಳಿಗಳ ಪರಿಸ್ಥಿತಿಯೆ ಆ ತರಹ ಇದೆ. ಇಲ್ಲಿ ಸಾಮಾಜಿಕ ನ್ಯಾಯ ಎನ್ನುವುದು ಗಗನ ಕುಸುಮವಾಗಿ ಬಿಟ್ಟಿದೆ. ಅದನ್ನು ಪಡೆಯಲಿಕ್ಕೆ ಬೇರೆ ದಾರಿ ಕಾಣದೆ ಅನಿವಾರ್ಯವಾಗಿ ಇಲ್ಲಿನ ಯುವಕರು, ತುಳಿತಕ್ಕೊಳಗಾದವರು, ಯಾರೂ ಒಪ್ಪದ ದಾರಿಗಳನ್ನು ತುಳಿಯುತ್ತಿದ್ದಾರೆ. ಗಾಂಧೀತತ್ವಗಳು ಇರಬೇಕಾದ ಕಡೆ ಮಾವೋ ತತ್ವಗಳು ಪ್ರವೇಶ ಪಡೆಯುತ್ತಿವೆ. ಅದರಲ್ಲೂ ಈ ತತ್ವಗಳು ವಿದ್ಯಾವಂತ ಮತ್ತು ಸುಶಿಕ್ಷಿತ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿರುವುದು ಬಹಳ ಅಪಾಯಕಾರಿ ಆಗಿರುವಂತಹವುದಾಗಿದೆ.

ಇಂದು ಈ ಪ್ರದೇಶದಲ್ಲಿ ಬಡತನ, ನಿರುದ್ಯೋಗ ಮುಂತಾದ ಕಾರಣಗಳಿಂದ ಜನರಿಗೆ ಉದ್ಯೋಗ, ಮತ್ತಿತರ ಆಸೆಗಳನ್ನು ತೋರಿಸಿ ನಗರ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಅವರನ್ನು ದುಡಿಸಿಕೊಂಡು ತಮ್ಮ ಕೆಲಸವಾದ ನಂತರ ಅವರನ್ನು ಬೀದಿಗೆ ಬಿಟ್ಟು ಬಿಡುತ್ತಾರೆ. ಇದರಿಂದ ವಯಸ್ಸಾದವರು ಭಿಕ್ಷಾಟನೆಗೆ ಇಳಿದರೆ, ಯುವತಿಯರು ವೇಶ್ಯಾವಾಟಿಕೆಗೆ ಇಳಿಯುತ್ತಿದ್ದಾರೆ, ಇನ್ನು ಯುವಕರು ಅಪರಾಧಿ ಜಗತ್ತನ್ನು ಪ್ರವೇಶ ಮಾಡುತ್ತಿದ್ದಾರೆ. ಹೀಗಾಗಿ ಇಂತಹ ಅವಗಡಗಳು ನಡೆಯದಂತೆ ತಡೆಗಟ್ಟಬೇಕಾದರೆ, ಸರಕಾರ ಡಾ. ಡಿ.ಎಂ. ನಂಜುಂಡಪ್ಪ ವರದಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ. ಹಾಗೆಯೇ ಸಂವಿಧಾನದ ೩೭೧ನೇ ವಿಧಿಯನ್ನು ಜಾರಿ ಮಾಡುವದರ ಮೂಲಕ ಇಲ್ಲಿನ ಬದಲಾವಣೆಗೆ, ಅಭಿವೃದ್ಧಿಗೆ ನಾಂದಿ ಹಾಡಬೇಕಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಕುರಿತು, ಇಲ್ಲಿನ ಸ್ಥಿತಿಗತಿಗಳ ಕುರಿತು ಹೆಚ್ಚು ಅಧ್ಯಯನಗಳು ಆಗುತ್ತಿಲ್ಲ. ಅಧ್ಯಯನಕಾರರು ಎಲ್ಲಾ ವ್ಯವಸ್ಥೆ ಇರುವಂತಹ ಭಾಗಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಒಂದು ಸುರಕ್ಷಿತ ವಲಯಗಳ ಬಗ್ಗೆಯೇ ಅಧ್ಯಯನ ಮಾಡುತ್ತಾರೆ. ಈ ಪ್ರದೇಶಕ್ಕೆ ಬಂದು, ಇಲ್ಲಿಯೇ ಕೂತು, ವಾಸ ಮಾಡಿ ಇಲ್ಲಿನವರ ಜೊತೆ ಬೆರೆತು, ಪ್ರಾಮಾಣಿಕವಾಗಿ ಅಧ್ಯಯನ ಮಾಡಬೇಕಾದ ಕೆಲಸ ಆಗುತ್ತಿಲ್ಲ. ಬದಲಾಗಿ ಇದರೊಳಗೆ ಹೊಕ್ಕು, ಅನುಭವಿಸಿ ಅಧ್ಯಯನ ಮಾಡಬೇಕಾದ ಅವಶ್ಯಕತೆಯಿದೆ. ಇಂತಹ ಎದೆಗಾರಿಕೆ ಬಹಳಷ್ಟು ಸಂಶೋಧಕರಿಗೆ, ಲೇಖಕರಿಗೆ ಇಲ್ಲ. ಇನ್ನು ಈ ಭಾಗದ ಲೇಖಕರ ಬರಹಗಳು, ಸಂಶೋಧನೆಗಳು, ಬೆಳಕಿಗೆ ಬಾರದೆ, ಅನ್ಯಾಯಕ್ಕೊಳಗಾಗುತ್ತಿವೆ. ಹೀಗಾಗಿ ನಾವೆಲ್ಲಾ ಈ ಭಾಗದ ಕುರಿತಂತೆ ಅಧ್ಯಯನ ಮಾಡಬೇಕು ಹಾಗೂ ಸರಕಾರಗಳು ಲೇಖಕರು, ವಿದ್ವಾಂಸರನ್ನು ಅಧ್ಯಯನ ಮಾಡಲು ವಿದೇಶಕ್ಕೆ ಕಳುಹಿಸುವ ಬದಲು ಹೈದರಾಬಾದ್ ಕರ್ನಾಟಕದ ಹಳ್ಳಿಗಳಿಗೆ ಕಳುಹಿಸಿ ಅಧ್ಯಯನಕ್ಕೆ ಹಚ್ಚಬೇಕು. ಆಗ ಇಲ್ಲಿನ ವಾಸ್ತವ ಏನಿದೆ ಎನ್ನುವುದು ತಿಳಿಯುತ್ತದೆ. ಈ ಭಾಗದ ಮೇಲೆ ನಡೆಯುವ ಸಂಶೋಧನೆಗಳು ಎಲ್ಲರಿಗೂ ಒಂದು ರೀತಿಯ ಆಕರ ಗ್ರಂಥವಾಗುವ ರೀತಿಯಲ್ಲಿ ಅಧ್ಯಯನಗಳಾಗಬೇಕು. ಈ ನಿಟ್ಟಿನಲ್ಲಿ ಇತ್ತೀಚಿಗೆ ಅಸಂಖ್ಯಾತ ಲೇಖಕರು ಹೈದರಾಬಾದ್ ಕರ್ನಾಟಕ ಕುರಿತು ತಮ್ಮ

ಅನುಭವಗಳನ್ನು ಬರೆಯುತ್ತಿದ್ದಾರೆ ಮತ್ತು ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ಇತ್ತೀಚಿಗೆ ಗಂಗಾವತಿಯಲ್ಲಿ ನಡೆದ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೩೭೧ನೇ ವಿಧಿ ಕುರಿತು ದೊಡ್ಡ ಮಟ್ಟದ ಚರ್ಚೆ ನಡೆಯಿತು.

ನನ್ನನ್ನು ಒಳಗೊಂಡಂತೆ ಈ ಭಾಗದ ಲೇಖಕರು ರೋಮಾಂಚನಕಾರಿಯಾದಂತ, ಅದ್ಭುತವಾದಂತ ಕೃತಿಗಳನ್ನು ಬರೆಯುತ್ತಿಲ್ಲ, ಬದಲಾಗಿ ಇಲ್ಲಿನ ವಾಸ್ತವ ಸತ್ಯಗಳನ್ನು ಹೊರಹಾಕುವ, ದಟ್ಟವಾದ ಕಣ್ಣೀರು ಭರಿಸುವಂತ ದಲಿತ, ಶೂದ್ರ ಜಗತ್ತನ್ನೆ ಕುರಿತು ಬರೆಯುತ್ತಿದ್ದೇವೆಯೆ ಹೊರತು ರಮ್ಯವಾಗಿರುವಂತ ಪ್ರಪಂಚದ ಬಗ್ಗೆ ನಮ್ಮ ಕೈಯಲ್ಲಿ ಬರೆಯಲಿಕ್ಕೆ ಆಗುವುದಿಲ್ಲ. ಕಳೆದ ದಶಕದಲ್ಲಿ ಬಹಳ ಪ್ರಖರವಾದ ಸಾಹಿತ್ಯದ ಸೃಷ್ಟಿ ನಡೆಯುತ್ತಿದೆ. ಈ ಪ್ರದೇಶದ ಸಮಸ್ಯೆಗಳನ್ನು, ಅನುಭವಗಳನ್ನು ಅಕ್ಷರಗಳ ಮೂಲಕ ಕಟ್ಟಿಕೊಡುವಂತಹ, ಸತ್ಯವನ್ನು ಅನಾವರಣಗೊಳಿಸುವಂತಹ ಕೆಲಸ ನಿರಂತರವಾಗಿ ನಡೆಯುತ್ತಿದೆ. ಈ ರೀತಿ ಸಾಹಿತ್ಯವನ್ನು ಅರ್ಥಮಾಡಿಕೊಂಡು ಅದರ ಪರಿಭಾಷೆಯ ಮೂಲಕ ಇತರ ಅಂತರ್‌ಶಿಸ್ತೀಯ ಅಧ್ಯಯನಗಳನ್ನು ಅರ್ಥಮಾಡಿಕೊಳ್ಳಬೇಕು. ಆಗ ಮಾತ್ರ ಹೈದರಾಬಾದ್ ಕರ್ನಾಟಕವನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಹಿಂದಿನಿಂದಲೂ ಚಳವಳಿಗಳು ನಡೆದಿವೆ ಮತ್ತು ನಡೆಯುತ್ತಿವೆ. ಆದರೆ ಅನೇಕ ಚಳವಳಿಗಳು ಹೈದರಾಬಾದ್ ಕರ್ನಾಟಕದಲ್ಲಿ ಸೃಷ್ಟಿಯಾಗಿ ಬೆಂಗಳೂರನ್ನು ಸಮೀಪಿಸುತ್ತಿದ್ದಂತೆ ಅಸ್ತಂಗತವಾಗುತ್ತವೆ ಇದು ಬಹಳ ಅಪಾಯಕಾರಿಯಾದುದು. ಹಾಗಂತ ಹೋರಾಟಗಳು ಆಗುತ್ತಿಲ್ಲ ಎಂದು ಹೇಳುವಂತಿಲ್ಲ. ಹೋರಾಟಗಳು ಜೀವಂತ ಇವೆ. ಆದರೆ ಅವು ಹೀಗೆ ನಡೆಯಬೇಕು ಎಂದು ಹೇಳುವುದು, ಬಯಸುವುದು ಸರಿ ಅಲ್ಲ. ಇಲ್ಲಿನ ಹೋರಾಟಗಳಲ್ಲಿ ಎಡಪಂಥೀಯ ಸಂಘಟನೆಗಳು ಬಹಳ ಸಶಕ್ತವಾಗಿವೆ. ಇಂದು ಕೆಳಮುಖದಲ್ಲೂ ಹೋರಾಟಗಳು ನಡೆಯುತ್ತಿವೆ, ಇದು ಮುಂದೆ ಬೇರೆ ಬೇರೆ ರೂಪ ಪಡೆಯುವ ಸಾಧ್ಯತೆಗಳಿವೆ. ಇದು ಯಾವಾಗ ಬೇಕಾದರೂ ತೀವ್ರ ರೂಪ ಪಡೆಯಬಹುದು. ಸಿಟ್ಟು, ತಳಮಳ ಜ್ವಾಲಾಮುಖಿ ಎನ್ನುವುದು ಒಂದು ಅವಧಿಯವರೆಗೆ ಕಾಯುತ್ತಿರುತ್ತದೆ, ನಂತರ ಅದು ಸ್ಫೋಟಗೊಳ್ಳುತ್ತದೆ. ಇಂತಹ ಒಂದು ಸ್ಫೋಟಕದ ಕ್ಷಣದ ನಿರೀಕ್ಷೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಇದೆ.

೧೦. ಪ್ರೊ. ಅಲ್ಲಮಪ್ರಭು ಬೆಟ್ಟದೂರ
ಪ್ರಾಚಾರ್ಯರು, ಸಾಹಿತಿಗಳು ಹಾಗೂ
ಸಾಮಾಜಿಕ ಜನಪರ ಹೋರಾಟಗಾರರು
ಸಂದರ್ಶನ ದಿನಾಂಕ : ೧೨.೦೫.೨೦೧೧, ಕೊಪ್ಪಳ

ಹೈದರಾಬಾದ್ ಕರ್ನಾಟಕ ಎಂದು ವಿಚಿತ್ರವಾಗಿ ಕರೆಸಿಕೊಳ್ಳುತ್ತಿರುವ ಈ ಪ್ರದೇಶವು ನಿಜಾಮರ ಆಳ್ವಿಕೆಯಿಂದ ಇಲ್ಲಿನ ರಾಜಕೀಯ, ಸಮಾಜದ ಮುಖಂಡರ ಹಾಗೂ ಇದುವರೆಗೆ ಆಳಿದ ಮತ್ತು ಆಳುತ್ತಿರುವ ಸರಕಾರಗಳ ನಿರ್ಲಕ್ಷ್ಯದ ಕಾರಣದಿಂದಾಗಿ, ಇಂದು ಕರ್ನಾಟಕದ ಅತ್ಯಂತ ಹಿಂದುಳಿದ

ಪ್ರದೇಶವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡು ಪ್ರಗತಿಪರ ಸಮಾಜ ವ್ಯವಸ್ಥೆ ವಿರುದ್ಧ ಮೌನವಾಗಿ ತಲೆತಗ್ಗಿಸಿ ನಿಂತುಕೊಂಡಿದೆ. ಅನಕ್ಷರತೆ, ಬಡತನ ಮುಗ್ಧತೆಯಿಂದ ಇಲ್ಲಿನ ಜನರು ಪ್ರತಿರೋಧಿಸುವ ಶಕ್ತಿಯನ್ನು ಕಳೆದುಕೊಂಡು ಎಲ್ಲಾ ಸೌಲಭ್ಯಗಳಿಂದ ವಂಚಿತವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ನಿಜಾಮರ ಕಾಲದ ಕ್ರೂರ ದಬ್ಬಾಳಿಕೆ, ದೌರ್ಜನ್ಯಗಳು ಇಲ್ಲಿನ ಜನರ ಬದುಕನ್ನು ನೆಲಸಮಗೊಳಿಸಿದೆ. ಸ್ವಾತಂತ್ರ್ಯದ ನಂತರವೂ ಬದುಕು ಸುಧಾರಿಸದೆ ಜಮೀನ್ದಾರಿಕ ವ್ಯವಸ್ಥೆ ಜೀವಂತವಾಗಿದ್ದು ಅತಿಯಾದ ಶೋಷಣೆಯಿಂದ ಅಭಿವೃದ್ಧಿ ಸಾಧ್ಯವಾಗದೇ ಚಿಂತಾರ್ಹವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಪ್ರದೇಶದಲ್ಲಿ ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ ಸುಧಾರಣೆಗಾಗಿ ಚಳವಳಿಗಳು ಹುಟ್ಟಲು ಕಾರಣವಾಗಿವೆ. ಪ್ರಸ್ತುತ ಡಾ. ಡಿ.ಎಂ. ನಂಜುಂಡಪ್ಪ ಅವರ ವರದಿ ಆಧಾರದ ಮೇಲೆ ರಚಿತವಾಗಿರುವ ಅನುಷ್ಠಾನ ಸಮಿತಿಯ ಕಾರ್ಯಚಟುವಟಿಕೆ ಕುರಿತು ಹಾಗೂ ಈ ಭಾಗಕ್ಕೆ ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿ ಕುರಿತು ಹೋರಾಟ ನಡೆಯುತ್ತಿದ್ದು, ಇದು ಯಶಸ್ವಿಯಾಗುವ ಅಂಚಿನಲ್ಲಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಚಳವಳಿಗಳ ಪ್ರಬುದ್ಧಮಾನ ಅವಧಿ ಎಂದು ಗುರುತಿಸುವುದು ಕಷ್ಟ. ಏಕೆಂದರೆ ಈಗಾಗಲೇ ಹೇಳಿರುವಂತೆ, ಸ್ವಾತಂತ್ರ್ಯಪೂರ್ವ ಕಾಲದಿಂದ ಇಂದಿನವರೆಗೂ ವಿಭಿನ್ನವಾಗಿ ಗುರುತಿಸಿಕೊಂಡಿರುವುದು ಒಂದು ಕಡೆಯಾದರೆ, ಕಾಲ ಕಾಲಕ್ಕೆ ರಾಜಕೀಯ, ರೈತ ದಲಿತ ಕಾರ್ಮಿಕ ಮಹಿಳಾ ಪರಿಸರ ಚಳವಳಿಗಳ ಸ್ವರೂಪವು ಬದಲಾಗುತ್ತಾ ಸಾಗಿದೆ. ಹಾಗೆಯೇ ಶೈಕ್ಷಣಿಕ ಪ್ರಗತಿಗಿಂತ ಪೂರ್ವದಲ್ಲಿನ ಚಳವಳಿಗಳು ಕಡಿಮೆ ಮತ್ತು ಅದರ ಸ್ವರೂಪವು ಸೀಮಿತವಾಗಿತ್ತು. ಆದರೆ ಇಂದು ಶೈಕ್ಷಣಿಕ ಪ್ರಗತಿಯ ಹಾದಿಯಲ್ಲಿ ಚಳವಳಿಗಳ ಗುರಿ, ಉದ್ದೇಶಗಳ ಸ್ವರೂಪದಲ್ಲಿಯೂ ಬದಲಾವಣೆ ಆಗಿದೆ. ರಾಜಕೀಯ ಚಳವಳಿಗಳಿಗಿಂತ ಸಾಮಾಜಿಕ ಚಳವಳಿಗಳು ಪ್ರಾಧಾನ್ಯತೆ ಪಡೆದುಕೊಂಡಿವೆ. ರೈತ, ದಲಿತ, ಕಾರ್ಮಿಕ ಹಾಗೂ ನಿರ್ಲಕ್ಷಿತರ ಪರವಾದ ಚಳವಳಿಗಳು ಸಮಾಜದ ಬಹುಮುಖಿಯಲ್ಲಿವೆ. ಇದಕ್ಕೆ ಕಾರಣ ಶೈಕ್ಷಣಿಕ ಪ್ರಗತಿ, ವ್ಯಕ್ತಿ ವಿದ್ಯಾವಂತನಾದಂತೆ ಪ್ರಜ್ಞಾವಂತನಾಗುತ್ತಾನೆ, ಆಗ ತನ್ನ ಮತ್ತು ತನ್ನ ವರ್ಗದ, ಸಮಾಜದ ಏಳಿಗೆಗಾಗಿ ಸಮಾನತೆಗೆ ಹಕ್ಕುಗಳಿಗೆ ಸ್ಥಾನಮಾನಗಳಿಗೆ ಹೋರಾಟ ನಡೆಸುವ ಅನ್ಯಾಯವನ್ನು ಧಿಕ್ಕರಿಸುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾನೆ. ಹೀಗಾಗಿ ಇಂದು ಕೆಳವರ್ಗದವರ ಶೋಷಿತರ ಹೋರಾಟಗಳು, ಸ್ಥಳೀಯ ಹೋರಾಟಗಳು ಹೆಚ್ಚಾಗುತ್ತಿವೆ.

ಸಾಮಾಜಿಕ ಚಳವಳಿಗಳು ಮೂಲತಃ ಒಂದು ವರ್ಗ ಒಂದು ಪ್ರದೇಶ ಮತ್ತು ಸಮಾಜದ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ. ಚಳವಳಿಯ ಉದ್ದೇಶವೇ ಸುಧಾರಣೆಗಾಗಿ, ಬದಲಾವಣೆಗಾಗಿ ಹಾಗೂ ಹೊಸ ದಾರಿಯನ್ನು ಕಂಡುಕೊಳ್ಳುವುದಕ್ಕಾಗಿ. ೭೦ ಮತ್ತು ೮೦ರ ದಶಕದಲ್ಲಾದ ಚಳವಳಿಗಳು ಸಂಪೂರ್ಣವಾಗಿ ಸ್ವಹಿತಾಸಕ್ತಿ ಮತ್ತು ಲಾಭದ ಉದ್ದೇಶ ಹೊಂದಿರಲಿಲ್ಲ. ಅವು ಬಹುಹಿತಾಯಿ ಗುರಿಯನ್ನು ಇಟ್ಟುಕೊಂಡಿದ್ದವು. ಆದರೆ ಇತ್ತೀಚಿನ ಹೋರಾಟಗಳು ಅವುಗಳ ಗುರಿ ಉದ್ದೇಶ ಹಾದಿಯನ್ನು ನೋಡಿದಾಗ ಚಳವಳಿಗಳು ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕಾಗಿಯೇ ಹುಟ್ಟಿಕೊಂಡಿವೆಯೇನೋ ಎನ್ನುವ ಸಂಶಯ ಹುಟ್ಟುತ್ತದೆ. ಹೀಗಾಗಿ ಯಾವ ಚಳವಳಿಗಳು ತನ್ನ ಮೂಲ ಗುರಿ ಉದ್ದೇಶಗಳನ್ನು ಕೈಬಿಡುತ್ತವೆಯೋ ಅಂತಹ ಚಳವಳಿಗಳು ವಿಫಲವಾಗುತ್ತವೆ.

ಇಂದಿನ ಸಾಮಾಜಿಕ ಚಳವಳಿಗಳು ತಕ್ಷಣ ಸ್ಥಗಿತಗೊಳಿಸಬಹುದಾದ ಚಳವಳಿಗಳು ಎನಿಸುವುದು ಸಹಜ. ಆದರೆ ಚಳವಳಿಗಳು ನಿರಂತರ ಆಗಲು ಹೇಗೆ ಸಾಧ್ಯ ಏಕೆಂದರೆ ಚಳವಳಿಗಳೇ ಬದುಕಲ್ಲ. ಬದುಕನ್ನು ರೂಪಿಸಲು ತಿದ್ದಿಕೊಳ್ಳಲು ನಡೆಸುವ ಹೋರಾಟವಾಗಿವೆ. ಆ ಸಮಸ್ಯೆ ನಿವಾರಣೆ ಆದ ನಂತರ ಚಳವಳಿಯನ್ನು ಸ್ಥಗಿತಗೊಳಿಸಬೇಕಾಗುತ್ತದೆ ಮತ್ತು ಅಂತ್ಯವಾಗಲೇಬೇಕು ಅದು ನಿರಂತರ ಆದರೆ ಅದೊಂದು ವೃತ್ತಿ ಆಗುತ್ತದೆ. ಆದರೆ ಚಳವಳಿಗಳು ಯಾವತ್ತೂ ವೃತ್ತಿ ಆಗಬಾರದು ಒಂದು ವೇಳೆ ಅವು ವೃತ್ತಿ ಆಗಿದ್ದೇ ಆದರೆ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತದೆ ಹಾಗೂ ತನ್ನಷ್ಟಕ್ಕೆ ತಾನು ದ್ವಂಧದಲ್ಲಿ ಸಿಲುಕುತ್ತದೆ.

ಇನ್ನು ಸಾಮಾಜಿಕ ಸಂಘಟನೆಗಳ ಬಗ್ಗೆ ಹೇಳಬೇಕೆಂದರೆ ವ್ಯಕ್ತಿ ಪ್ರಜ್ಞಾವಂತನಾದಂತೆ ಸುಧಾರಣೆಗಾಗಿ ಬೆಳವಣಿಗೆಗಾಗಿ ಹಾತೊರೆಯುವುದು ಸಹಜ. ಈ ನಿಟ್ಟಿನಲ್ಲಿ ವ್ಯಕ್ತಿಗಳೆಲ್ಲಾ ಸೇರಿ ತಮ್ಮ ಗುರಿ, ಉದ್ದೇಶ ಈಡೇರಿಸಿಕೊಳ್ಳಲು ಸಾಮೂಹಿಕವಾಗಿ ಬೇಡಿಕೆ ಸಲ್ಲಿಸಲು ಹೋರಾಟ ಮಾಡಲು ಮಾನಸಿಕ ಮತ್ತು ಸಂಖ್ಯಾ ಬೆಂಬಲಕ್ಕಾಗಿ ಸಂಘಟನೆಗಳನ್ನು ಸ್ಥಾಪಿಸಿಕೊಂಡರು ಮತ್ತು ಈಗಲೂ ಸ್ಥಾಪನೆ ಆಗುತ್ತಿವೆ. ಅದರಲ್ಲಿ ಕೆಲವು ಸಂಘಟನೆಗಳು ತಮ್ಮ ಮತ್ತು ಸಮಾಜದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹೋರಾಟ ಮಾಡಿವೆ. ಆದರೆ ಇಂದು ಕೆಲವು ಸಂಘಟನೆಗಳ ಕಾರ್ಯವೈಖರಿ ಸ್ಥಿತಿಗತಿಯನ್ನು ನೋಡಿದಾಗ ಅವು ದಿಕ್ಕು ತಪ್ಪಿರುವುದು ಎದ್ದು ಕಾಣುತ್ತದೆ. ಇಂತಹ ಸಂಘಟನೆಗಳು ತುರ್ತಾಗಿ ಮರುಚಿಂತನೆ ಮಾಡಿಕೊಳ್ಳಬೇಕಾಗಿದೆ. ಹಾಗೆಯೇ ಒಂದು ರೀತಿಯಲ್ಲಿ ಚಳವಳಿಗಳ ಹಿನ್ನಡೆಗೆ ರಾಜಕೀಯ ಪಕ್ಷಗಳು ಕಾರಣವಾಗಿವೆ. ಅದರಲ್ಲೂ ದಲಿತ ಮತ್ತು ರೈತ ಚಳವಳಿಗಳು ಹಿನ್ನಡೆ ಆರಂಭಿಸಿದ್ದೇ ಇವು ರಾಜಕೀಯಕ್ಕೆ ಮತ್ತು ಚುನಾವಣೆಗೆ ಪ್ರವೇಶ ಪಡೆದಾಗಿನಿಂದ.

ಚಳವಳಿ ಎನ್ನುವುದು ಸದ್ಯದ ಸ್ಥಿತಿಯಲ್ಲಿ ಅನಿವಾರ್ಯವಾಗಿದೆ. ಏಕೆಂದರೆ ಇಂದು ಹೋರಾಟ ಮಾಡುವುದು ಬದುಕಿನ ಪ್ರಶ್ನೆ, ಅಳಿವು ಉಳಿವಿನ ಪ್ರಶ್ನೆಯಾಗಿದೆ. ಜಾಗತೀಕರಣದ ಕಲ್ಪನೆಯಲ್ಲಿ ಗುತ್ತಿಗೆ ಪದ್ಧತಿ ವ್ಯವಸ್ಥೆಯಲ್ಲಿ ಬಡವರ ಕೆಳವರ್ಗದ ರೈತರ ಬದುಕು ಚಿಂತನಾರ್ಹವಾಗಿದೆ. ಯಾವ ಸಮಯದಲ್ಲಿ ಯಾವ ದಿನ ಅವರು ನಂಬಿರುವ ಭೂಮಿ, ಮನೆ ಅಭಿವೃದ್ಧಿ ನೆಪದಲ್ಲಿ ಬಲಿಯಾಗುವುದೋ ತಿಳಿಯದು. ಹಾಗಾಗಿ ಚಳವಳಿ ಎನ್ನುವುದು ಬದುಕಿನ ಪ್ರಶ್ನೆಯಾಗಿದೆ. ಆದರೆ ಸದ್ಯದ ಕೆಲವು ಚಳವಳಿಗಳು ಸಾಮಾಜಕವಾಗಿಲ್ಲ, ಚಳವಳಿಗಳು ಸಾಮಾಜಿಕವಾಗಿದ್ದಾಗ ಮಾತ್ರ ಯಶಸ್ವಿಯಾಗುತ್ತವೆ ಹಾಗೂ ಸ್ವಹಿತಾಸಕ್ತಿ ಇಲ್ಲದಿದ್ದಾಗ ಮಾತ್ರ ಇವು ಸಾರ್ಥಕವಾಗುತ್ತವೆ. ಆದರೆ ಇಂದು ಚಳವಳಿ ಎನ್ನುವುದು ವ್ಯಕ್ತಿಗತವಾಗುತ್ತಿವೆ ಮತ್ತು ವೃತ್ತಿ ನಿರತೆ ಆಗಿವೆ ವ್ಯಕ್ತಿ ಪ್ರತಿಷ್ಟೆ ಹೆಚ್ಚಾಗಿದೆ ರಾಜಕೀಯತೆ ತನ್ನ ಪ್ರಾಬಲ್ಯ ಸಾಧಿಸುತ್ತಿದೆ. ಹೀಗಾಗಿ ಜನರು ಹೋರಾಟಗಳಿಂದ ಸ್ವಲ್ಪ ದೂರವುಳಿಯುತ್ತಿದ್ದಾರೆ. ಕೆಲವು ನಾಯಕರ ಸರ್ವಾಧಿಕಾರಿ ಧೋರಣೆಯಿಂದಲೇ ಚಳವಳಿಗಳು ಇಬ್ಭಾಗವಾಗುತ್ತಿವೆ.

೧೧. ಶ್ರೀ ಧರ್ಮಸಿಂಗ್

ಮಾಜಿ ಮುಖ್ಯಮಂತ್ರಿಗಳು, ಗುಲಬರ್ಗಾ

ಸಂದರ್ಶನ ದಿನಾಂಕ : ೨೫.೧೧.೨೦೧೦, ಗುಲಬರ್ಗಾ

ಕೃಪೆ : ಶ್ರೀ ಶಿವರಾಜ ಪಾಟೀಲ

ಹೈದರಾಬಾದ್ ಕರ್ನಾಟಕ ಎನ್ನುವುದು ಕರ್ನಾಟಕದ ಕೊನೆಯ ಭಾಗದಲ್ಲಿದ್ದು, ಮಹಾರಾಷ್ಟ್ರ ಮತ್ತು ಆಂಧ್ರದ ಗಡಿಗಳಿಗೆ ಹೊಂದಿಕೊಂಡಿದೆ. ನಿಜಾಮನ ಆಳ್ವಿಕೆಯಲ್ಲೇ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಇಲ್ಲಿ ಅಭಿವೃದ್ಧಿ ಕಾರ್ಯಗಳಾಗಲಿಲ್ಲ. ನಂತರವೂ ಈ ಪ್ರದೇಶದ ಮೇಲೆ ಆಸಕ್ತಿ ಕಡಿಮೆ ಇದ್ದಿರಬಹುದು ಮತ್ತು ಯೋಜನೆಗಳನ್ನು ಇಲ್ಲಿಗೆ ತಲುಪಿಸಲು ನಿಧಾನವಾಗಿರಬಹುದು ಹಾಗೂ ಬೆಂಗಳೂರು ರಾಜಧಾನಿ ಆಗಿದ್ದರಿಂದ ಬಹುದೂರದ ಈ ಪ್ರದೇಶದ ಕಡೆ ಗಮನವೇ ಬರಲಿಲ್ಲ ಇಲ್ಲಿನ ಸಮಸ್ಯೆಗಳು ಬೇರೆಯವರಿಗೆ ತಿಳಿಯಲಿಲ್ಲ. ಹಾಗಾಗಿ ಈ ಭಾಗಕ್ಕೆ ಹೆಚ್ಚು ಒತ್ತು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಹೀಗಾಗಿ ಹೈದರಾಬಾದ್ ಕರ್ನಾಟಕ ಪ್ರದೇಶ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿಯಲು ಕಾರಣವಾಯಿತು. ಜೊತೆಗೆ ಬೇರೆ ಭಾಗಗಳಲ್ಲಿ ಆದಂತೆ ಇಲ್ಲಿ ಶಿಕ್ಷಣ ಸಂಸ್ಥೆಗಳಾಗಲಿ, ನೀರಾವರಿ ಯೋಜನೆಗಳಾಗಲಿ ಸ್ಥಾಪನೆ ಆಗಲಿಲ್ಲ. ಬರಗಾಲ, ಬಿಸಿಲು, ನೀರಿನ ಸಮಸ್ಯೆಯಿಂದಾಗಿ ಬಡತನ ಹೆಚ್ಚಾಗಿ ಹಿಂದುಳಿಯಲು ಕಾರಣವಾಗಿದೆ.

ಆದರೂ ಇತ್ತೀಚಿನ ಒಂದು ಹತ್ತು ವರ್ಷಗಳಲ್ಲಿ ಇಲ್ಲಿನ ಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆ ಕಾಣಲು ಪ್ರಾರಂಭವಾಗಿದೆ. ಕೃಷಿಯೇತರ ಉದ್ಯೋಗಗಳಲ್ಲಿ ಜನರು ನಿರತರಾಗಿದ್ದಾರೆ ಜನ ಪ್ರಜ್ಞಾವಂತರಾಗುತ್ತಿದ್ದಾರೆ. ಸಮಾನತೆಗಾಗಿ, ಅವಕಾಶಕ್ಕಾಗಿ, ಹಕ್ಕುಗಳಿಗಾಗಿ ಹೋರಾಟಗಳು ಹೆಚ್ಚುತ್ತಾ ಇವೆ. ಹೀಗಾಗಿ ಹಿಂದೆ ಇದ್ದಂತಹ ಪರಿಸ್ಥಿತಿ ಈಗ ಇಲ್ಲ, ಬಹಳ ವೇಗವಾಗಿ ಅಲ್ಲದಿದ್ದರೂ ಸ್ವಲ್ಪಮಟ್ಟಿಗೆ ಬದಲಾವಣೆ ಕಡೆ ಹೊರಟಿದೆ ಎನ್ನುವುದಂತು ಸತ್ಯವಾಗಿದೆ.

ಹೈದರಾಬಾದ್ ಕರ್ನಾಟಕದ ಹಿಂದುಳಿದಿರುವಿಕೆಗೆ, ಅಸಮಾನತೆಗೆ, ರಾಜಕೀಯ ನಾಯಕರು ಮತ್ತು ಇಲ್ಲಿನ ಜನ ಪ್ರತಿನಿಧಿಗಳ ನಿರ್ಲಕ್ಷ್ಯ, ಇಚ್ಛಾಶಕ್ತಿಯ ಕೊರತೆಯೆ ಕಾರಣ ಎನ್ನುವ ಮಾತುಗಳು ಕೇಳಿ ಬರುವುದು ಸಹಜ. ಆದರೆ ಈಗ ಇಲ್ಲಿನ ಜನಪ್ರತಿನಿಧಿಗಳು ಎಷ್ಟರಮಟ್ಟಿಗೆ ಇದಕ್ಕೆ ಕಾರಣ ಎನ್ನುವುದನ್ನು ಹುಡುಕಿಕೊಂಡು ಹೋಗುವುದು ಚರ್ಚೆ ಮಾಡುವುದು ಅಷ್ಟು ಸರಿ ಅಲ್ಲ. ಈಗಾಗಲೇ ಈ ಭಾಗದ ಪರಿಸ್ಥಿತಿ ಬಗ್ಗೆ ಹೇಳಿದ್ದೇವೆ ಯಾವುದೋ ಒಂದೆರಡು ಕಾರಣಗಳನ್ನು ಇಟ್ಟುಕೊಂಡು ಇಂತಹ ಅಭಿಪ್ರಾಯಕ್ಕೆ ಬರುವುದು ಸರಿ ಅಲ್ಲ, ಅದಕ್ಕಿಂತ ಮೇಲಾಗಿ, ಈಗ ನಾವು ಈ ಪ್ರದೇಶದ ಅಭಿವೃದ್ಧಿಗೆ ಸುಧಾರಣೆಗೆ ಏನು ಮಾಡುತ್ತಿದ್ದೇವೆ ಮತ್ತು ಏನು ಮಾಡಬೇಕು ಎನ್ನುವುದರ ಬಗ್ಗೆ ಚಿಂತಿಸಬೇಕಾಗಿದೆ. ಹೀಗೆ ಮಾಡುವುದರಿಂದ ಉಪಯೋಗ ಆಗುತ್ತದೆ, ಅದನ್ನು ಬಿಟ್ಟು ಒಬ್ಬರಮೇಲೊಬ್ಬರು ಆರೋಪ ಮಾಡುತ್ತಾ ಕೂತರೆ ಈ ಪ್ರದೇಶದ ಸ್ಥಿತಿ ಬದಲಾಗುವುದಿಲ್ಲ ಬದಲಾಗಿ ಈಗ ಏನು ಮಾಡಬೇಕು ಎನ್ನುವುದನ್ನು ಎಲ್ಲರೂ ಸೇರಿ ಚರ್ಚೆ ಮಾಡಿ ಕಾರ್ಯೋನ್ಮುಖರಾಗುವುದು ಇಂದಿನ ಅವಶ್ಯವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಂವಿಧಾನದ ೩೭೧ನೇ ವಿಧಿ ಜಾರಿಗಾಗಿ ತೀವ್ರ ಹೋರಾಟ ನಡೆಯುತ್ತಿದೆ. ಆದರೆ ತೆಲಂಗಾಣದಲ್ಲಿ ನಡೆದಂತ ತೀವ್ರತೆ ಇಲ್ಲಿ ಕಂಡು ಬರುತ್ತಿಲ್ಲ ಎನ್ನುವುದು ಸರಿ. ಏಕೆಂದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯ ಮತ್ತು ತೆಲಂಗಾಣದ ಪ್ರಾಂತ್ಯದ ಪರಿಸ್ಥಿತಿಗೂ ಬಹಳ ಭಿನ್ನತೆಯಿದೆ. ತೆಲಂಗಾಣದಲ್ಲಿ ಜನರ ಧರ್ಮ ಮತ್ತು ಭಾಷೆ ಒಂದೇ ಆಗಿತ್ತು ಹಾಗೂ ಆಳುವ ವರ್ಗದವರು ಹೆಚ್ಚಾಗಿ ಪಾಲ್ಗೊಂಡಿದ್ದರು. ಹಾಗಾಗಿ ಅವರು ಪ್ರತ್ಯೇಕ ಆದ ತಕ್ಷಣ ತಮಗೆ ಏನು ಬೇಕು ಅನ್ನುವುದನ್ನು ತಕ್ಷಣ ಅರಿಯಲಿಕ್ಕೆ ಸಾಧ್ಯವಾಯಿತು. ಹೀಗಾಗಿ ಎಲ್ಲರೂ ಸೇರಿ ತೀವ್ರ ಹೋರಾಟ ಮಾಡಿ ಸೌಲಭ್ಯವನ್ನು ಪಡೆದರು. ಆದರೆ ನಮ್ಮ ಜನರ ಪರಿಸ್ಥಿತಿ ಏನಾಗಿತ್ತೆಂದರೆ ನಿಜಾಮನ ಆಳ್ವಿಕೆಯಿಂದ ಬಿಡುಗಡೆ ಹೊಂದಿದ ಮೇಲೂ ಒಂದು ಕಡೆ ಮರಾಠಿಗರ ಪ್ರಭಾವ ಇನ್ನೊಂದು ಕಡೆ ಆಂಧ್ರದ ಪ್ರಭಾವ ಇತ್ತು. ಇವರೆಲ್ಲರೂ ಇಲ್ಲಿದ್ದರೂ ಇವರ ಭಾಷೆ, ಧರ್ಮ, ಒಲವು ಬೇರೆ ಬೇರೆಯಾಗಿತ್ತು. ಅವರಲ್ಲೇ ಗೊಂದಲ ಇತ್ತು. ನಾವೆಲ್ಲಾ ಒಂದು ಎನ್ನುವ ಭಾವನೆ ಬರುವುದಕ್ಕೇನೇ ಎಷ್ಟೋ ಸಮಯ ಬೇಕಾಗಿತ್ತು. ಹೀಗಾಗಿ ಇವರೆಲ್ಲಾ ಒಂದೆಡೆ ಸೇರಿ ತಮ್ಮ ಸಮಸ್ಯೆಗಳನ್ನು ಕಂಡುಕೊಂಡು ಹೋರಾಟ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಕ್ರಮೇಣ ಈ ಭಾಗದ ಜನರಿಗೆ ತಮ್ಮ ಸ್ಥಿತಿ ತಿಳಿದ ನಂತರ, ಸಮಸ್ಯೆಗಳು ಅವರ ಅರಿವಿಗೆ ಬಂದ ನಂತರ ಅವರು ನಾವು ಸುಮ್ಮನಿದ್ದರೆ ನಮ್ಮ ಪರಿಸ್ಥಿತಿ ಬದಲಾಗುವುದಿಲ್ಲ ಎನ್ನುವುದನ್ನರಿತು ಸಂಘಟಿತರಾಗಿ ಹೋರಾಟ ಮಾಡಲಿಕ್ಕೆ ಆರಂಭಿಸಿದರು. ಆರಂಭದಲ್ಲಿ ಎಲ್ಲರೂ ಒಂದೇ ಸಂಘಟನೆ ಅಡಿ ಹೋರಾಟ ಮಾಡಲಿಕ್ಕೆ ಸಾಧ್ಯವಾಗದಿರಬಹುದು. ಆದರೆ ಈಗ ಎಲ್ಲರೂ ಒಂದೇ ವಿಚಾರದ ಅಡಿ ಹೋರಾಟಕ್ಕೆ ಇಳಿದಿದ್ದೇವೆ ಮತ್ತು ಅದರಲ್ಲಿ ಯಶಸ್ಸು ಗಳಿಸುತ್ತೇವೆ.

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿಯು ಅನಿವಾರ್ಯವಾಗಿದೆ. ಏಕೆಂದರೆ ಈ ಪ್ರದೇಶದಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಸಮಾಜದಲ್ಲಿ ಒಂದು ಕಡೆ ಶ್ರೀಮಂತರು, ಇನ್ನೊಂದು ಕಡೆ ಕಡುಬಡವರು ಹಾಗೂ ಕೂಲಿಕಾರ್ಮಿಕರಿದ್ದಾರೆ. ಇನ್ನು ಬೇರೆ ಕಡೆಯಿಂದ ಇಲ್ಲಿಗೆ ಬಂದು ಶಿಕ್ಷಣ ಕಲಿತು ಉದ್ಯೋಗವನ್ನು ಪಡೆಯುತ್ತಾರೆ. ಇದರಿಂದ ಇಲ್ಲಿಯವರಿಗೆ ಅನ್ಯಾಯ ಆಗುತ್ತಿದೆ, ಇಲ್ಲಿನ ವಿದ್ಯಾರ್ಥಿಗಳು ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ, ಹೀಗಾಗಿ ಈ ಭಾಗಕ್ಕೆ ೩೭೧ನೇ ಕಲಂ ತಿದ್ದುಪಡಿ ಆಗುವುದು ಬಹಳ ಅವಶ್ಯಕವಾಗಿದೆ.

ಇನ್ನು ಈ ಕಲಂ ಜಾರಿ ಆದರೆ ಇಲ್ಲಿನ ಜನರಿಗೆ ಮೀಸಲಾತಿ ಸಿಗುತ್ತದೆ, ಈಗ ರಾಜ್ಯಮಟ್ಟದಲ್ಲಿ ಸ್ಪರ್ಧೆ ಮಾಡಬೇಕಾದ ವಿದ್ಯಾರ್ಥಿ ಸ್ಥಳೀಯವಾಗಿ ಸ್ಪರ್ಧೆ ಮಾಡುತ್ತಾನೆ ಹಾಗೂ ಸ್ಥಳೀಯರಿಗೆ ಉದ್ಯೋಗ ದೊರಕುತ್ತದೆ. ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಸಿಗುವುದರಿಂದ ದೀನ-ದಲಿತರು ಮತ್ತು ಬಡವರಿಗೆ ಖಂಡಿತ ಅವಕಾಶ ಹೆಚ್ಚಾಗುತ್ತದೆ. ಹಾಗೆಯೇ ಈ ಪ್ರದೇಶಕ್ಕೆ ಹೆಚ್ಚಿನ ಹಣಕಾಸಿನ ನೆರವು ದೊರೆಯುವುದರಿಂದ ಉದ್ಯೋಗವಕಾಶಗಳು ಹೆಚ್ಚಾಗುತ್ತವೆ. ಹೊಸ ಹೊಸ ಯೋಜನೆಗಳು ಜಾರಿಗೆ ಬರುತ್ತವೆ. ಕೃಷಿ, ವ್ಯಾಪಾರ ಕೈಗಾರಿಕೆಗಳು ಬೆಳವಣಿಗೆ ಆಗುತ್ತವೆ. ಒಟ್ಟಿನಲ್ಲಿ ಈ ಪ್ರದೇಶದ

ಅಭಿವೃದ್ಧಿಗೆ ಬೇಕಾದ ಕಾರ್ಯಗಳು ಆರಂಭವಾಗುತ್ತವೆ. ಈ ದೃಷ್ಟಿಯಲ್ಲಿ ನಾವು ಕೂಡ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಿದ್ದೇವೆ. ಕೇಂದ್ರದ ಸಚಿವರೊಂದಿಗೆ ಮಾತುಕಡೆ ನಡೆಸಿದ್ದೇವೆ. ಅವರು ಸಹ ಇದರ ಬಗ್ಗೆ ಚಿಂತನೆ ನಡೆಸಿದ್ದಾರೆ. ಇಂದಲ್ಲಾ ನಾಳೆ ಈ ವಿಧಿ ಜಾರಿಯಾಗುತ್ತದೆ ಅಲ್ಲಿಯವರೆಗೆ ಕಾಯಬೇಕು ಮತ್ತು ಅವಶ್ಯಕವಾದ ಕೆಲಸ ಮಾಡಬೇಕು.

೧೨. ಶ್ರೀ ಚಾಮರಸ ಮಾಲಿ ಪಾಟೀಲ್

ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ಸಂದರ್ಶನ ದಿನಾಂಕ : ೧೫.೦೫.೨೦೧೧, ರಾಯಚೂರು

ಹೈದರಾಬಾದ್ ಕರ್ನಾಟಕದ ರೈತ ಚಳವಳಿಗಳು ದಕ್ಷಿಣ ಕರ್ನಾಟಕದ ರೈತ ಚಳವಳಿಗಳಿಗಿಂತ ಸಾಕಷ್ಟು ಭಿನ್ನವಾಗಿವೆ. ಈ ಎರಡು ಪ್ರದೇಶಗಳ ನಡುವೆ ಸಾಕಷ್ಟು ಭಿನ್ನತೆಯಿದೆ ಹಾಗೂ ಉತ್ತರ ಕರ್ನಾಟಕದ ರೈತರ ಸಮಸ್ಯೆಗಳೇ ಬೇರೆ ದಕ್ಷಿಣ ಕರ್ನಾಟಕದ ರೈತರ ಸಮಸ್ಯೆಗಳೇ ಬೇರೆ. ದಕ್ಷಿಣ ಕರ್ನಾಟಕದಲ್ಲಿ ಮಧ್ಯಮ ಮತ್ತು ಮೇಲ್ವರ್ಗದ ರೈತ ಹೋರಾಟಗಳು ಹೆಚ್ಚಾಗಿ ಕಂಡು ಬಂದರೆ, ಹೈದರಾಬಾದ್ ಕರ್ನಾಟಕದಲ್ಲಿ ಬಡವರ ಮಧ್ಯಮವರ್ಗದವರ ಹೋರಾಟ ಹೆಚ್ಚಾಗಿದೆ. ಆದರೆ ಬಹಳ ದುಃಖಕರವಾದ ಸಂಗತಿಯೆಂದರೆ, ದಕ್ಷಿಣ ಕರ್ನಾಟಕದ ರೈತರ ಸಮಸ್ಯೆಗಳಿಗೆ ರಾಜ್ಯಾದ್ಯಂತ ಸ್ಪಂದಿಸುತ್ತಾರೆ. ಆ ಭಾಗದ ರೈತರ ಸಮಸ್ಯೆಯನ್ನು ಇಡೀ ಕರ್ನಾಟಕದ ರೈತರ ಸಮಸ್ಯೆಯೆಂದೇ ಬಿಂಬಿಸುತ್ತಾರೆ. ಇವರ ಸಮಸ್ಯೆಗಳಿಗೆ ರಾಜಕೀಯ ಮುಖಂಡರು ಧಾವಿಸಿ ಬರುತ್ತಾರೆ, ಸರಕಾರವೇ ಇವರ ಬೆಂಬಲಕ್ಕೆ ನಿಲ್ಲುತ್ತದೆ. ಉದಾಹರಣೆಗೆ ಕಾವೇರಿ ನದಿ ನೀರಿನ ಹಂಚಿಕೆ ಸಮಸ್ಯೆ. ಕಾವೇರಿ ನದಿ ನೀರಿನ ಹಂಚಿಕೆ ಸಮಸ್ಯೆಯನ್ನು ಕರ್ನಾಟಕ ರಾಜ್ಯದ ಸಮಸ್ಯೆಯನ್ನಾಗಿ ಗುರುತಿಸಿಬಿಟ್ಟಿದ್ದಾರೆ ಹಾಗೂ ಇವರ ಪರವಾಗಿ ಮುಖ್ಯಮಂತ್ರಿಗಳು, ಮಂತ್ರಿಗಳು ಪಾದಯಾತ್ರೆ ಕೈಗೊಂಡಿದ್ದಾರೆ.

ಆದರೆ ಹೈದರಾಬಾದ್ ಕರ್ನಾಟಕದ ರೈತರ ಸಮಸ್ಯೆಗಳಿಗೆ ಹೋರಾಟಕ್ಕೆ ಇವರು ಬೆಂಬಲಿಸುವುದಿಲ್ಲ ಹಾಗೂ ಸ್ಪಂದಿಸುವುದೂ ಇಲ್ಲ. ಕಾವೇರಿ ನದಿ ನೀರಿನ ಸಮಸ್ಯೆಯಂತೆ ಕೃಷ್ಣ, ತುಂಗಭದ್ರ ನದಿ ನೀರಿನ ಹಂಚಿಕೆ ಸಮಸ್ಯೆಯೂ ಇದೆ, ಆದರೆ ಇವು ಕಾವೇರಿ ಸಮಸ್ಯೆಯಂತೆ ಕಾಣುವುದೇ ಇಲ್ಲ. ಕೇವಲ ಒಂದು ವರ್ಗದ ಪ್ರದೇಶದ ಸಮಸ್ಯೆಯನ್ನಾಗಿ ನೋಡುತ್ತಾರೆ. ಈ ಭಾಗದ ರೈತರ ನಡುವೆ ಸಮಸ್ಯೆ ಉದ್ಭವಿಸಿದಾಗ ಯಾವ ರಾಜಕೀಯ ನಾಯಕರು ಇವರ ಸಹಾಯಕ್ಕೆ ಧಾವಿಸುವುದಿಲ್ಲ ಹಾಗೂ ಯಾವ ಮುಖಂಡರು ಬೆಂಬಲಕ್ಕೆ ನಿಂತಿಲ್ಲ. ರೈತರು ಚಳವಳಿ ಮಾಡುತ್ತಾರೆಂದರೆ ಮಾಡಿದರೆ ಮಾಡಲಿ ಬಿಡು ಎನ್ನುವ ಧೋರಣೆ ಬಂದು ಬಿಟ್ಟಿದೆ. ದಕ್ಷಿಣ ಕರ್ನಾಟಕದ ರೈತರ ಸಮಸ್ಯೆಯಿದ್ದಾಗ ನಾವೆಲ್ಲರೂ ಬೆಂಬಲಿಸಿ ಹೋರಾಡಿದ್ದೇವೆ. ಆದರೆ ಅದೇ ಹೈದರಾಬಾದ್ ಕರ್ನಾಟಕದ ರೈತರ ಪರವಾಗಿ ಇವರು ಬೆಂಬಲ ಕೊಡುವುದಿರಲಿ ಅದರ ಬಗ್ಗೆ ಅನುಕಂಪದ ಮಾತನ್ನು ಆಡಿಲ್ಲ. ಉದಾಹರಣೆಗೆ, ಬಳ್ಳಾರಿ ವಿಮಾನ ನಿಲ್ದಾಣಕ್ಕಾಗಿ ರೈತರ ಭೂಸ್ವಾಧೀನ ಹೋರಾಟ.

ಇನ್ನು ಹೈದರಾಬಾದ್ ಕರ್ನಾಟಕದ ರೈತರು ಯಾರೂ ಅನುಭವಿಸದಂತಹ, ಎದುರಿಸಲಾರದಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಒಂದು ಕಡೆ ಬರಗಾಲ ಇನ್ನೊಂದು ಕಡೆ ಬರಡು ಭೂಮಿ, ನೀರಿನ

ಸಮಸ್ಯೆ, ಅತಿಯಾದ ಬಿಸಿಲು, ವಿದ್ಯುತ್ ಸಮಸ್ಯೆ, ಬೆಳೆಗೆ ಬೆಲೆ ಸಮಸ್ಯೆ ನೆರೆ ಹಾವಳಿ, ಭೂ ಅತಿಕ್ರಮಣ ಬಡತನ ಹಾಗೂ ಸಾಲ ತೀರಿಸಲಾಗದೆ ರೈತರ ಆತ್ಮಹತ್ಯೆ ಹೀಗೆ ಸಾಕಷ್ಟಿವೆ.

ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ಜಲಾಶಯಗಳು, ನೀರಾವರಿ ಯೋಜನೆಗಳು ಜಾರಿಯಲ್ಲಿದ್ದರೂ ಅವುಗಳ ಸಮರ್ಪಕವಾದ ಉಪಯೋಗ ಆಗುತ್ತಿಲ್ಲ. ಇನ್ನೊಂದು ಕಡೆ ಆಣೆಕಟ್ಟುಗಳ ನೀರನ್ನು ರೈತರ ಜಮೀನುಗಳಿಗೆ ಹಾಯಿಸಲು ಕಾಲುವೆಗಳಿಲ್ಲ. ಅವು ಇದ್ದರೂ ಪದೇ ಪದೇ ಒಡೆದು ಹೋಗುತ್ತವೆ. ಉದಾಹರಣೆಗೆ ತುಂಗಭದ್ರಾ ಜಲಾಶಯದಿಂದ ಕೊಪ್ಪಳ, ಸಿಂಧನೂರು, ಮಾನ್ವಿ, ರಾಯಚೂರು ಪ್ರದೇಶಗಳ ಭೂಮಿಯನ್ನು ನೀರಾವರಿಗೆ ಒಳಪಡಿಸಲು ತುಂಗಭದ್ರಾ ಎಡದಂಡೆ ನಾಲೆಯ ಮೂಲಕ ಕಾಲುವೆ ಸೌಲಭ್ಯವನ್ನು ಒದಗಿಸಲಾಯಿತು. ಆದರೆ ನಾಲೆ ನಿರ್ಮಾಣವಾದ ಕೆಲವೇ ವರ್ಷಗಳಲ್ಲಿ ಆಗಾಗ ಒಡೆದು ಹೋಗಲು ಪ್ರಾರಂಭವಾಯಿತು. ಇದುವರೆಗೆ ಒಟ್ಟು ೨೦೦ ಸಲ ನಾಲೆ ಒಡೆದು ಹೋಗಿದೆ. ನಾಲೆ ಒಡೆದು ಹೋದಾಗಲೆಲ್ಲಾ ನಾಲೆಯ ನೀರು ಜಮೀನುಗಳಿಗೆ, ಗ್ರಾಮಗಳಿಗೆ ನುಗ್ಗಿ ಅಪಾರ ಬೆಳೆ, ದವಸ ಧಾನ್ಯ, ಮನೆ ಆಸ್ತಿ, ಉಪಕರಣಗಳು, ಜಾನುವಾರುಗಳಿಗೆ ಹಾನಿಯಾಗಿ ನಷ್ಟ ಉಂಟಾಗಿದೆ. ನಾಲೆಯ ಸಮಗ್ರ ದುರಸ್ತಿಗಾಗಿ ಪ್ರತಿ ಸಲ ಹೋರಾಟ ಮಾಡಿದಾಗಲೂ ಸರಿ ಮಾಡುವ ಭರವಸೆ ಸಿಗುತ್ತದೆಯಾದರೂ ಇದುವರೆಗೆ ಸಮಸ್ಯೆ ಬಗೆಹರಿದಿಲ್ಲ. ಹೀಗೆ ಈ ಭಾಗದ ಇನ್ನೂ ಅನೇಕ ಕಡೆ ನಾಲೆಯ ಸಮಸ್ಯೆಗಳು ಕಾಡುತ್ತಿವೆ.

ನಮ್ಮ ದೇಶದಲ್ಲಿ ರಸಗೊಬ್ಬರ ಮತ್ತು ಬೀಜಗಳ ಉತ್ಪಾದನೆ, ಮಾರಾಟ ಹಾಗೂ ಬೆಲೆ ನಿರ್ಧಾರದ ಹಕ್ಕು ಬಹುರಾಷ್ಟ್ರೀಯ ಕಂಪನಿಗಳ ಮತ್ತು ಖಾಸಗಿ ಮಾಲೀಕತ್ವ ಕಂಪನಿಗಳ ಕೈಯಲ್ಲಿವೆ. ಇವರು ತಮ್ಮ ಲಾಭಕ್ಕಾಗಿ ಬೆಲೆಗಳನ್ನು ಏರಿಸುತ್ತಲೇ ಇದ್ದಾರೆ. ಇನ್ನು ಸ್ಥಳೀಯ ಮಾರಾಟಗಾರರು ರಸಗೊಬ್ಬರದ ಬೇಡಿಕೆ ಬಂದಾಗ ಕೃತಕ ಅಭಾವವನ್ನು ಸೃಷ್ಟಿಸಿ ದುಪ್ಪಟ್ಟು ಬೆಲೆಗೆ ಮಾರಾಟ ಮಾಡುತ್ತಾರೆ. ಪ್ರತಿ ಸಲ ಮುಂಗಾರು ಸಮಯದಲ್ಲಿ ರಸಗೊಬ್ಬರಕ್ಕಾಗಿಯೇ ಗಲಾಟೆ, ಗೋಲಿಬಾರ್‌ಗಳು ನಡೆಯುತ್ತಿವೆ.

೮೦ರ ದಶಕದ ರೈತ ಚಳವಳಿಗಳು ಬಹಳ ಭಾವನಾತ್ಮಕವಾಗಿದ್ದವು. ಇಡೀ ರಾಜ್ಯದಾದ್ಯಂತ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿತ್ತು. ರೈತ ಚಳವಳಿ ಕಾವು ಪಡೆದಂತೆ ಹಳ್ಳಿ, ಹೋಬಳಿಗಳವರೆಗೆ ಪ್ರಚಾರವಾಯಿತು. ಜೊತೆಗೆ ಪ್ರಾದೇಶಿಕ ಮಟ್ಟದಲ್ಲಿ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಂಡಿದ್ದವು. ರೈತ ಸಂಘ ರಾಜಕೀಯ ಪ್ರವೇಶ ಮಾಡಬೇಕೋ ಬೇಡವೋ ಎನ್ನುವ ದ್ವಂಧಕ್ಕೆ ಸಿಲುಕಿದ್ದವು. ಕೊನೆಗೆ ಎರಡು ಬಣಗಳಾಗಿ ಒಡೆದು ಹೋಗಿತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ರೈತ ಸಂಘಕ್ಕೆ ರಾಜಕೀಯ ಪಕ್ಷಗಳು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಫಲವಾಗಿವೆ ಹಾಗೂ ಅವು ರೈತರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿಲ್ಲ. ಹಾಗಾಗಿ ರಾಜಕೀಯ ಪ್ರವೇಶ ಅನಿವಾರ್ಯ ಆಗುತ್ತದೆ. ಆದರೆ ನಮಗೆ ಸರಕಾರದ ಚುಕ್ಕಾಣಿ ಹಿಡಿಯಬೇಕೆಂಬ ಆಸೆ ಉದ್ದೇಶ ಇಲ್ಲ. ಕನಿಷ್ಟ ವಿಧಾನಮಂಡದಲ್ಲಿ

ನಮ್ಮ ಪ್ರತಿನಿಧಿ ಇದ್ದು ರೈತರ ಸಮಸ್ಯೆಗಳನ್ನು ತಿಳಿಸಿಕೊಡುವ ಎತ್ತಿ ತೋರಿಸುವ ಅವರ ಪರಿಸ್ಥಿತಿಯನ್ನು ಉತ್ತಮ ಪಡಿಸುವ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಮಾಡುವ ಕೆಲಸ ಸರಕಾರದಲ್ಲಿ ಭಾಗವಹಿಸುವುದರ ಮೂಲಕ ಆಗಬೇಕು ಎನ್ನುವುದಾಗಿದೆ.

೧೩. ಶ್ರೀ ಜೆ.ಎಂ. ವೀರಸಂಗಯ್ಯ

ಮಹಾಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ರೈತ ಸಂಘ

ಸಂದರ್ಶನ ದಿನಾಂಕ : ೩೦.೧೨.೨೦೧೦, ಹಗರಿಬೊಮ್ಮನಹಳ್ಳಿ

ಹೈದರಾಬಾದ್ ಕರ್ನಾಟಕದ ಮೂಲ ಸಮಸ್ಯೆಗಳಿಗೂ ಮತ್ತು ರಾಜ್ಯ ಕೇಂದ್ರ ಸರಕಾರಗಳ ನೀತಿಗಳಿಗೂ ನೇರ ಸಂಬಂಧವಿದೆ. ಈ ಭಾಗದಲ್ಲಿ ಜನರ ಬಹಳ ಮುಖ್ಯವಾಗಿರುವ ವೃತ್ತಿ ಕೃಷಿಯಾಗಿದೆ. ನೂರಕ್ಕೆ ಶೇಕಡ ಅರವತ್ತೈದರಷ್ಟು ಜನ ಇದನ್ನೇ ಅವಲಂಬಿಸಿದ್ದಾರೆ. ಬೇರೆ ಉದ್ಯೋಗದ ಅವಕಾಶಗಳಿಲ್ಲ ಆದರೆ ಈ ಭಾಗದ ಕೃಷಿ ಅಭಿವೃದ್ಧಿಗೆ ವಿಶೇಷ ಯೋಜನೆಗಳೂ ಇಲ್ಲ ಹಾಗೂ ಕೃಷಿಗೆ ಪ್ರತ್ಯೇಕ ಬಂಡವಾಳವನ್ನು ಮೀಸಲಾಗಿರಿಸಿಲ್ಲ. ಬೇರೆ ಎಲ್ಲದಕ್ಕೂ ಬಂಡವಾಳವಿದೆ, ಆದರೆ ಕೃಷಿಗೆ ಇಲ್ಲ. ಕೃಷಿಗೆ ಬಂಡವಾಳ ಒದಗಿಸಲಾರದ, ಮೀಸಲಾಗಿರಿಸಲಾರದ ಏಕೈಕ ದೇಶ ನಮ್ಮದಾಗಿದೆ. ಕೆಲವು ರಾಜ್ಯಗಳು ಕೇಂದ್ರದಲ್ಲಿ ಲಾಬಿ ಮಾಡಿ ಕೃಷಿ ಮತ್ತಿತರ ಯೋಜನೆಗಳಿಗೆ ಬೇಕಾದ ಸೌಲಭ್ಯ ಪಡೆಯುವಲ್ಲಿ ಸಫಲವಾಗಿವೆ. ಆದರೆ ಇದುವರೆಗೆ ಕರ್ನಾಟಕದಲ್ಲಿ ಆಳಿದ ಸರಕಾರಗಳು ನೀರಾವರಿ ಯೋಜನೆಗಳನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿಲ್ಲ ಇದು ದುರ್ದೈವದ ಸಂಗತಿಯಾಗಿದೆ. ಕರ್ನಾಟಕದಲ್ಲಿ ರಾಜಧಾನಿ ಪಕ್ಕದಲ್ಲಿರುವ ಐದಾರು ಜಿಲ್ಲೆಗಳು ಮಾತ್ರ ಕೃಷಿಗೆ ಬೇಕಾದ ಯೋಜನೆಗಳನ್ನು ದಕ್ಕಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಆದರೆ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ಇಂದಿಗೂ ಇಂತಹ ಯೋಜನೆಗಳಿಂದ ವಂಚಿತವಾಗಿವೆ.

ಇತ್ತೀಚಿಗೆ ಹೈದರಾಬಾದ್ ಕರ್ನಾಟಕ ಐದು ಜಿಲ್ಲೆಗಳು ನೆರೆ ಹಾವಳಿಗೆ ತುತ್ತಾದಾಗ ಲಕ್ಷಾಂತರ ಹೆಕ್ಟೇರ್ ಬೆಳೆ, ಆಸ್ತಿ, ಮನೆ, ಮಠ, ಜಾನುವಾರುಗಳ ನಾಶವಾದವು. ಕೆಲವು ಭಾಗದಲ್ಲಂತು ಕೆಲವರಿಗೆ ನಮ್ಮ ಹೊಲ ಯಾವುದು ಎನ್ನುವುದನ್ನು ಕಂಡುಹಿಡಿಯಲಾರದ ಪರಿಸ್ಥಿತಿ ಬಂತು. ಆಗ ಕೇಂದ್ರ ಸರಕಾರ ತತಕ್ಷಣ ನೆರವಿಗೆ ಬರಲಿಲ್ಲ. ರಾಜ್ಯ ಸರಕಾರ ನೆರವು ನೀಡುವ ನೆಪದಲ್ಲಿ ಸುಮಾರು ಹಣವನ್ನು ಪಟ್ಟಿ ಎತ್ತಿದರು ಮುಖ್ಯಮಂತ್ರಿಗಳ ನಿಧಿಗೆ ಸುಮಾರು ೩೦೦೦ ಕೋಟಿ ಹಣ ಸಂದಾಯವಾಯಿತು. ಆದರೆ ಆ ಹಣದ ಬಳಕೆ ಮಾತ್ರ ಸರಿಯಾಗಿ ಆಗದೆ ಇಂದಿಗೂ ಆ ಜನರು ನರಕಯಾತನೆ ಅನುಭವಿಸುವಂತಾಗಿದೆ. ಇಂತಹ ಸಮಯದಲ್ಲಿ ಸಾಲ ಮನ್ನಾ, ಬಡ್ಡಿ ಮನ್ನಾ, ಸಬ್ಸಿಡಿ ನೀಡಿ, ಉಚಿತ ವಿದ್ಯುತ್ ನೀಡಿ ಎಂದು ಈ ಭಾಗದ ರೈತರು ಬೇಡಿದಾಗ ಸರಕಾರ ಮತ್ತಿತರು ಸಬ್ಸಿಡಿ ನೀಡಲು ಹಿಂಜರಿದರು. ವಾಸ್ತವವಾಗಿ ರೈತರು ಸಾಲ ತೆಗೆದುಕೊಂಡು, ವಿದ್ಯುತ್ ತೆಗೆದುಕೊಂಡು ಬೇರೇನೂ ಉತ್ಪಾದನೆ ಮಾಡುತ್ತಿಲ್ಲ ಬದಲಾಗಿ

ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ, ನಮ್ಮ ಜನರಿಗೆ ಬೇಕಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದೇವೆಯೆ ಹೊರತು ಬೇರೆಯದನ್ನಲ್ಲ. ಇದನ್ನು ಸರಕಾರಗಳು ಅರ್ಥಮಾಡಿಕೊಳ್ಳಬೇಕು.

ಈ ಭಾಗದಲ್ಲಿ ತುಂಗಭದ್ರಾ ನದಿಯ ಸುತ್ತಮುತ್ತ ಶ್ರೇಷ್ಠ ದರ್ಜೆಯ ಸೋನಾ ಮಸೂರಿ ಅಕ್ಕಿಯನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಾರೆ. ಆದರೆ ಅದಕ್ಕೆ ಸರಿಯಾದ ಬೆಲೆ ಇಲ್ಲದೆ, ತೆಗೆದುಕೊಳ್ಳುವವರಿಲ್ಲದೆ ಎಷ್ಟೋ ಲಕ್ಷ ಕ್ವಿಂಟಾಲ್ ನೆಲ್ಲು ಗೋದಾಮುಗಳಲ್ಲಿ, ಹೊಲದಲ್ಲಿ ಇದೆ. ಅದೇ ರೀತಿ ಗುಲಬರ್ಗಾ, ಬೀದರ್ ತೊಗರಿ ಕಣಜ ಎಂದೇ ಪ್ರಸಿದ್ಧವಾಗಿದೆ. ಆದರೆ ತೊಗರಿಗೂ ಬೆಂಬಲ ಬೆಲೆ ಸಿಗದೆ ಕ್ವಿಂಟಲ್‌ಗಟ್ಟಲೆ ತೊಗರಿ ಬೀದಿಯಲ್ಲಿ ಬಿದ್ದಿದೆ. ಇದಕ್ಕೆಲ್ಲಾ ಕಾರಣ ಸರಕಾರದ ನೀತಿಗಳು. ಇದಕ್ಕೆ ಏನು ಮಾಡಬೇಕು ಎನ್ನುವುದೇ ದೊಡ್ಡ ಸವಾಲಾಗಿ ಬಿಟ್ಟಿದೆ ಇದು ಕೊನೆಗೆ ರೈತರ ಆತ್ಮಹತ್ಯೆ ಹಂತಕ್ಕೆ ಬಂದು ನಿಂತಿದೆ.

ರೈತರ ಆತ್ಮಹತ್ಯೆ ಪ್ರಕರಣಗಳು ಈ ಭಾಗದಲ್ಲಿ ಬಹಳ ನಡೆಯುತ್ತಿದೆ. ಒಂದು ಕಡೆ ಬರಗಾಲ, ನೆರೆಹಾವಳಿ ಬೆಂಬಲ ಬೆಲೆ ಸಮಸ್ಯೆ ಮುಂತಾದ ಕಾರಣಗಳಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಒಂದೆಡೆಯಾದರೆ, ಭ್ರಷ್ಟಾಚಾರ ರೈತರ ನೈತಿಕತೆ, ಪ್ರಾಮಾಣಿಕತೆಯನ್ನು ಕುಸಿಯುವಂತೆ ಮಾಡಿದೆ. ಚುನಾವಣೆ ಸಮಯದಲ್ಲಿ ರೈತ ನೂರು, ಇನ್ನೂರು ರೂಪಾಯಿಗಳನ್ನು ತೆಗೆದುಕೊಂಡು ಓಟು ಹಾಕುತ್ತಾನೆ. ಹೀಗಾಗಿ ರಾಜಕಾರಣಿಗಳನ್ನು ಪ್ರಶ್ನಿಸುವ ನೈತಿಕತೆ ಇರುವುದಿಲ್ಲ, ಇನ್ನೊಂದು ಕಡೆ ತಡೆದುಕೊಳ್ಳುವ ಶಕ್ತಿ ಇಲ್ಲ. ಹೀಗಾಗಿ ರೈತ ಅನಿವಾರ್ಯವಾಗಿ ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾನೆ. ಆದರೆ ಸಮಸ್ಯೆಗೆ ಪರಿಹಾರ ಆತ್ಮಹತ್ಯೆಯಲ್ಲ, ಇದು ಒಂದು ಸವಾಲಾಗಿದೆ. ಆದರೆ ರಾಜಕಾರಣಿಗಳು ಇದನ್ನು ಬಗೆಹರಿಸದೆ ಆತ್ಮಹತ್ಯೆ ಮಾಡಿಕೊಂಡ ಕುಟುಂಬದವರ ಬಳಿ ಹೋಗಿ ಸ್ವಲ್ಪ ಹಣ ಕೊಟ್ಟು ಫೋಟೋ ತೆಗೆಸಿಕೊಂಡು ಪ್ರಚಾರ ಪಡೆದು ವಾಪಾಸಾಗುತ್ತಾರೆ. ಆದರೆ ಮೂಲಭೂತವಾಗಿ ಆತ್ಮಹತ್ಯೆಗೆ ಕಾರಣ ಏನು, ಅದಕ್ಕೆ ಪರಿಹಾರ ಏನು ಎಂದು ಅವರು ಯೋಜನೆ ಮಾಡುವುದಿಲ್ಲ. ಅದರ ಅವಶ್ಯಕತೆಯೂ ಅವರಿಗೆ ಇಲ್ಲ ಹಾಗೂ ನಾವು ಅದನ್ನು ಕೇಳುವುದಿಲ್ಲ. ಕೇಳಿದರು ಪ್ರಯೋಜನ ಮಾತ್ರ ಆಗುತ್ತಿಲ್ಲ, ಅದು ಅವರ ಕಿವಿಗೆ ಮುಟ್ಟುತ್ತಿಲ್ಲ.

ಇಂದು ರೈತ ಚಳವಳಿಗಳು ವಿಫಲವಾಗುತ್ತಿವೆ, ತಮ್ಮ ತೀವ್ರತೆಯನ್ನು ಕಳೆದುಕೊಳ್ಳುತ್ತಿವೆ ಎನ್ನುವುದನ್ನು ನಾವು ಒಪ್ಪಿಕೊಳ್ಳಲೇಬೇಕಾಗಿದೆ. ಅದಕ್ಕೆ ಅನೇಕ ಕಾರಣಗಳಿವೆ, ಇಂದಿನ ಭ್ರಷ್ಟಾಚಾರ, ಸ್ವಜನಪಕ್ಷಪಾತ ಜಾತಿ ಹಣ ಇವುಗಳ ಮುಂದೆ ಒಂದು ಪ್ರಾಮಾಣಿಕ ಚಳವಳಿಯನ್ನು ಮಾಡುವುದಿರಲಿ ಅವುಗಳನ್ನು ಉಳಿಸಿಕೊಂಡು ಬರುವುದೇ ದೊಡ್ಡ ಸವಾಲಾಗಿದೆ. ಜೊತೆಗೆ ನಾವು ಕೆಲವು ವಿಚಾರಗಳಲ್ಲಿ, ಹೋರಾಟಗಳಲ್ಲಿ ವಿಫಲವಾಗಿದ್ದೇವೆ. ಚುನಾವಣಾ ಸಮಯದಲ್ಲಿ ಪ್ರಮುಖ ಪಾತ್ರವಹಿಸುವ ಜಾತಿ, ಹಣ, ಹೆಂಡಗಳು ರೈತ ಸಂಘಟನೆಗಳನ್ನು ಒಡೆಯುತ್ತವೆ ಮತ್ತು ಕುಸಿಯುವಂತೆ ಮಾಡುತ್ತವೆ. ಇದನ್ನು ನಿಭಾಯಿಸುವ ಶಕ್ತಿ, ಸಂಘಟನೆ ಹೆಚ್ಚಾಗಬೇಕಾಗಿದೆ. ಅದನ್ನು ಮಾಡಿಕೊಂಡರೆ ಮಾತ್ರ ನಾವು ಉಳಿಯಲು ಸಾಧ್ಯವಾಗುತ್ತದೆ.

೧೪. ಶ್ರೀಮತಿ ಕೆ. ನೀಲಾ

ರಾಜ್ಯ ಉಪಾಧ್ಯಕ್ಷರು

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಸಂದರ್ಶನ ದಿನಾಂಕ : ೨೪.೧೧.೨೦೧೦, ಗುಲಬರ್ಗಾ

ಹೈದರಾಬಾದ್ ಕರ್ನಾಟಕದಲ್ಲಿನ ಮಹಿಳೆಯರು ಬೇರೆ ಭಾಗದ ಮಹಿಳೆಯರಿಗಿಂತ ಬಹಳ ವಿಭಿನ್ನವಾದ ಪರಿಸ್ಥಿತಿಯಲ್ಲಿ ಬೆಳೆದು ಬಂದಿದ್ದಾರೆ. ಈ ಪ್ರದೇಶ ಹೆಣ್ಣುಮಕ್ಕಳ ವಿಚಾರಗಳನ್ನು ಕುಗ್ಗಿಸಿದಂತ ನಾಡು. ಹೆಣ್ಣು ಮಕ್ಕಳು ಅಂದರೆ ಹೀಗೆ ಇರಬೇಕು ಎಂಬ ಅಲಿಖಿತ ಕಾನೂನನ್ನು ಹೇರಿತ್ತು ಅಥವಾ ಹೇರಲ್ಪಟ್ಟಿತ್ತು ಹಾಗೂ ಇದನ್ನು ಒಪ್ಪಿಕೊಳ್ಳುವಂತೆ ಮಾಡಿತ್ತು. ಹೆಣ್ಣುಮಕ್ಕಳ ಬದುಕನ್ನು ನಿಯಂತ್ರಣ ಮಾಡುವಂತ ಮೌಲ್ಯಗಳನ್ನು ಭಯದ ಮೂಲಕ ಒಪ್ಪಿಸಲ್ಪಟ್ಟಿದ್ದರು. ಪಾಳೆಯಗಾರಿಕೆಯ ಮೌಲ್ಯಗಳು ಇಲ್ಲಿನ ಮಾನವೀಯ ಮೌಲ್ಯಗಳನ್ನು ಹತ್ತಿಕ್ಕಿ ಮಹಿಳೆಯರನ್ನು ಸ್ವ-ಇಚ್ಛಾನುಸಾರ ಬದುಕಲು ಬಿಡಲಿಲ್ಲ. ಇತ್ತೀಚಿನವರೆಗೆ ಇಲ್ಲಿ ಉದ್ಯೋಗ ಮಾಡುವ ಮಹಿಳೆಯರ ಚಾರಿತ್ರ್ಯ ಸರಿಯಿರುವುದಿಲ್ಲ ಎನ್ನುವ ಭಾವನೆಯನ್ನು ಬಿತ್ತಲಾಗಿತ್ತು. ಆದರೆ ಯಾವಾಗ ಆರ್ಥಿಕ ಬಿಕ್ಕಟ್ಟು ಎದುರಾಯಿತೋ ಜೀವನಾವಶ್ಯಕ ವಸ್ತುಗಳ ಬೆಲೆ ಏರಿ ಪುರುಷನ ವೇತನದಿಂದಲೇ ಜೀವನ ನಿರ್ವಹಣೆ ಕಷ್ಟವಾಯಿತೋ ಆಗ ಮಹಿಳೆ ಹೊರಹೋಗಲು ಉದ್ಯೋಗ ಮಾಡಲು ದಾರಿಯಾಯಿತು. ಹೀಗೆ ಸಮಾಜದಲ್ಲಿ ಬದುಕಬೇಕಾಗಿ ಬಂದ ಮಹಿಳೆಯರು ತಮ್ಮ ಮೂಲಭೂತ ಅವಶ್ಯಕತೆಗಳನ್ನು, ಹಕ್ಕುಗಳನ್ನು, ಪಡೆಯಲು ಹೋರಾಟ ಆರಂಭಿಸಿದರು.

ಈ ಭಾಗದಲ್ಲಿ ಅಸಮಾನತೆ ಹೆಚ್ಚಾಗಲು ಪ್ರಮುಖ ಕಾರಣ ಭೂಮಿ ಸಮಾನವಾಗಿ ಹಂಚಿಕೆ ಯಾಗಿಲ್ಲ. ಜಮೀನ್ದಾರಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವರ್ಗಗಳು ಸೇರಿಕೊಂಡು ಇವತ್ತು ಪ್ರಭುತ್ವ ಆಗಿವೆ. ಇಂತಹ ಪ್ರಭುತ್ವವೇ ಇವತ್ತು ನಮ್ಮನ್ನು ಆಳುವ ಸರಕಾರವಾಗಿದೆ. ಹಾಗಾಗಿ ಇವರುಗಳು ಇಂದು ಇಡೀ ಸಂಪತ್ತಿನ ಮೇಲೆ ತಮ್ಮ ಹಿಡಿತವೇ ಇರಬೇಕು ಎನ್ನುವ ಸಲುವಾಗಿ, ಸಂಪತ್ತನ್ನು ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳುವ ಸಲುವಾಗಿ ಅನಕ್ಷರತೆ, ಬಡತನ, ನಿರುದ್ಯೋಗ ಸೃಷ್ಟಿಯಾಗಲಿಕ್ಕೆ ಪರೋಕ್ಷ ಕಾರಣರಾಗಿದ್ದಾರೆ. ಇದು ಇಂದಿನ ಪರಿಸ್ಥಿತಿಗೆ ಮೂಲ ಕಾರಣವಾಗಿದೆ.

ಮಹಿಳೆಯರ ಸಮಸ್ಯೆಗಳನ್ನು ಇಡಿಯಾಗಿ ನೋಡಲಿಕ್ಕಾಗುವುದಿಲ್ಲ ಬದಲಾಗಿ ಮಹಿಳೆಯರ ಸಮಸ್ಯೆಯನ್ನು ಪ್ರದೇಶಕ್ಕನುಗುಣವಾಗಿ ನೋಡಬೇಕು. ಆ ಪ್ರದೇಶದಲ್ಲೂ ಬೇರೆ ಬೇರೆ ವರ್ಗದ ಮಹಿಳೆಯರನ್ನು ಬಿಡಿಯಾಗಿ ನೋಡಬೇಕು. ಅಂದರೆ ಮುಸ್ಲಿಂ ಮಹಿಳೆಯನ್ನು, ದಲಿತ, ಹಿಂದುಳಿದ ಮತ್ತು ಮೇಲ್ಜಾತಿ ಮಹಿಳೆಯರನ್ನು ಬೇರ್ಪಡಿಸಿ ನೋಡಬೇಕು. ಇವರೆಲ್ಲಾ ಆರ್ಥಿಕವಾಗಿ ಹೇಗೆ ಬೇರೆ ಬೇರೆ ರೀತಿಯಲ್ಲಿ ಬಲಿಯಾಗುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಸಮಸ್ಯೆಗಳು ಎಲ್ಲರಿಗೂ ಇದ್ದಾವೆ. ಅದರಲ್ಲಿ ತೀವ್ರವಾಗಿ ಬಲಿಯಾಗುತ್ತಿರುವವರು ಯಾರು ಎನ್ನುವುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಉದಾಹರಣೆಗೆ ಮುಸ್ಲಿಂ ಮಹಿಳೆ ಮೇಲೆ ಇಂದಿಗೂ ತಲಾಖ್‌ನ ತೂಗು

ಕತ್ತಿಯಿದೆ ಇವಳ ಮೇಲೆ ಅತಿಯಾದ ಧಾರ್ಮಿಕ ಮತ್ತು ಕೌಟುಂಬಿಕ ನಿಯಂತ್ರಣವಿದೆ ಹಾಗೂ ಇವಳು ಆರ್ಥಿಕವಾಗಿ ಬಹಳ ಅಸಮರ್ಥಳಿದ್ದಾಳೆ. ಹೀಗಾಗಿ ಇವೆಲ್ಲವುಗಳನ್ನು ಇಟ್ಟುಕೊಂಡು ನಾವು ಹೋರಾಟ ಮಾಡಿದಾಗ ಮಾತ್ರ ಎಲ್ಲಾ ವರ್ಗದ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುತ್ತದೆ.

ಇನ್ನು ಹೈದರಾಬಾದ್ ಕರ್ನಾಟಕ ಪಾಳೇಗಾರರ ಹಿಡಿತದಲ್ಲಿದ್ದ ಪ್ರದೇಶ. ವಿಭಿನ್ನ ಸಂಸ್ಕೃತಿಗೆ ಒಳಪಟ್ಟಿದ್ದ ಪ್ರದೇಶ. ಹೀಗಾಗಿ ಮಹಿಳೆಯರು ಬೇರೆ ಕಡೆಗಿಂತ ಇಲ್ಲಿ ದುಪ್ಪಟ್ಟು ಶೋಷಣೆಗೆ, ಮೌಢ್ಯತೆಗೆ ಅನಕ್ಷರತೆಗೆ ಬಲಿಯಾಗಿದ್ದಾರೆ. ಹಾಗಾಗಿ ಇಂದಿಗೂ ಇಲ್ಲಿ ಭಾನುಮತಿ ಮಾಟ ಮಂತ್ರದ ಹೆಸರಿನಲ್ಲಿ ಮಹಿಳೆಯರನ್ನೇ ಬಲಿ ಕೊಡುತ್ತಿದ್ದಾರೆ. ೨೦೧೦ರಲ್ಲಿ ಹುಮಾನಬಾದ್‌ನಲ್ಲಿ ಹೆಣ್ಣು ಮಗಳೊಬ್ಬಳು ಭಾನುಮತಿ ಮಾಡುತ್ತಿದ್ದಾಳೆ ಅಂತ ಶಂಕಿಸಿ ಅವಳನ್ನು ಜೀವಂತ ಕೊಲೆ ಮಾಡಿದರು, ೬೫ ವರ್ಷದ ಒಬ್ಬ ಅಜ್ಜಿಯನ್ನು ಸುಟ್ಟು ಹಾಕಿದರು, ಮತ್ತೊಬ್ಬ ಹೆಣ್ಣು ಮಗಳನ್ನು ಬೆತ್ತಲೆ ಮಾಡಿ ದೌರ್ಜನ್ಯ ಎಸಗಿ ಸಾಯಿಸಲಾಯಿತು. ಇಂತಹ ಮೌಢ್ಯದ ಪರಾಕಾಷ್ಟತೆಯನ್ನು ಬೇರೆ ಕಡೆ ನೋಡ ಲಾಗುವುದಿಲ್ಲ. ಇನ್ನು ನಿಧಿಗಾಗಿ ಕುಟುಂಬದ ಒಳಿತಿಗಾಗಿ ಹೆಣ್ಣು ಶಿಶುವನ್ನು ಬಲಿ ಕೊಡುವಂತ ಮೌಢ್ಯತೆ ಈ ಭಾಗದಲ್ಲಿ ಇನ್ನು ನಡೆಯುತ್ತಿರುವುದು ಬಹಳ ಆತಂಕಕಾರಿಯಾದ ಸಂಗತಿಯಾಗಿದೆ. ಹಾಗೆಯೇ ಈ ಪ್ರದೇಶದಲ್ಲಿ ಮಹಿಳೆಯರ ಸಮಸ್ಯೆಗಳು ಬಹಳ ಇವೆ. ದಲಿತ ಪುರುಷನಿಗಿಂತ, ದಲಿತ ಮಹಿಳೆಯ ಸಮಸ್ಯೆಗಳು ಬಹಳ ಇವೆ. ಕೃಷಿ ಕಾರ್ಮಿಕ ಪುರುಷನಿಗಿಂತ ವೇತನ ತಾರತಮ್ಯ, ಲೈಂಗಿಕ ದೌರ್ಜನ್ಯಗಳು ಬಹಳ ಇವೆ.

ಇಲ್ಲಿನ ಮಹಿಳೆಯರ ಮುಂದಿರುವ ಸವಾಲೆಂದರೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ತೆರೆದ ಕಣ್ಣಿನಿಂದ ನೋಡುವಂತಹದ್ದು ಮತ್ತು ತಿಳುವಳಿಕೆಯಿಂದ ಗ್ರಹಿಸುವಂತ ಮತ್ತು ಅದರ ವಿರುದ್ಧ ತಿರುಗಿಬೀಳುವ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಸಮಾನ ಮನಸ್ಸಿನವರೆಲ್ಲಾ ಕೂಡಿ ಸಂಘಟಿತರಾಗಿ ಇಂತಹ ಹೋರಾಟಗಳನ್ನು ಆರಂಭಿಸಬೇಕು. ಯಾವ ಕಾರಣಕ್ಕೂ ಯಾವುದೇ ರೀತಿಯ ಸೀಮಿತ ದೃಷ್ಟಿಕೋನಕ್ಕೆ ಒಳಗಾಗಬಾರದು. ಅವಳ ಅಂತಿಮ ಗುರಿ ಎಲ್ಲಾ ರೀತಿಯ ಅಸಮಾನತೆಯ ವಿರುದ್ಧ ಚಳವಳಿಯನ್ನು ಕಟ್ಟುವುದಾಗಬೇಕು. ಆರ್ಥಿಕ, ರಾಜಕೀಯ, ಸಾಮಾಜಿಕ ಇವೆಲ್ಲವುಗಳನ್ನು ತೊಡೆದು ಹಾಕಿ ಒಂದು ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಕೆಲಸ ಮಾಡಬೇಕು ಎನ್ನುವ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಅದರಲ್ಲೂ ಅವಳು ಹೆಚ್ಚು ಶೋಷಣೆಗೆ ಒಳಗಾಗಿರುವ ಮಹಿಳೆಯನ್ನು ಮೊದಲ ಪ್ರಾಶಸ್ತ್ಯವಾಗಿ ತೆಗೆದುಕೊಳ್ಳಬೇಕು. ಈ ಮೂಲಕ ಎಲ್ಲಾ ರೀತಿಯ ಶೋಷಣೆಯಲ್ಲೂ ಮಹಿಳೆಯರ ಬಿಡುಗಡೆ ಆಗಬೇಕು.

ಯಾವುದೇ ಚಳವಳಿಗೆ ಸಫಲತೆ ಮತ್ತು ವಿಫಲತೆ ಎನ್ನುವುದಿರುವುದಿಲ್ಲ. ಚಳವಳಿ ಎನ್ನುವುದು ಒಂದು ಪ್ರಕ್ರಿಯೆ. ಅದೊಂದು ಹರಿವ ನೀರು, ನಾವು ನೋಡಬೇಕಾದದ್ದು ಹರಿಯಬೇಕಾದ ನೀರು ಹರಿಯದೆ ನಿಂತಿದೆಯಲ್ಲ ಎನ್ನುವುದನ್ನು ಹಾಗೂ ಅದು ಹರಿಯುತ್ತಿರುವ ಹಾಗೆ ಮಾಡುವುದನ್ನು, ಯಾವ ಚಳವಳಿಗಳು ಶೂನ್ಯದ ಕಡೆ ಹೋಗುವುದಿಲ್ಲ, ಕೆಲವು ಚಳವಳಿಗಳು ದೀರ್ಘ ಇರಬಹುದು ಅಥವಾ ಕಡಿಮೆ ಕಾಲ ಇರಬಹುದು. ಒಟ್ಟಿನಲ್ಲಿ ಆ ನೆಲೆಯಲ್ಲಿ ನಡೆಯುತ್ತಿರುತ್ತವೆ. ಒಂದು ರೀತಿಯಲ್ಲಿ

ಹೇಳುವುದಾದರೆ ಚಳವಳಿಗಾರರು ಹಿಂದಿಗಿಂತಲೂ ಇಂದು ಹೆಚ್ಚು ಜನ ಸಂಘಟಿತರಾಗುತ್ತಿದ್ದಾರೆ. ಉದಾಹರಣೆಗೆ ೩೦ ವರ್ಷದ ಹಿಂದೆ ಸ್ತ್ರೀ-ಶಕ್ತಿ ಸಂಘಗಳೇ ಇರಲಿಲ್ಲ. ಆದರೆ ಇಂದು ಮಹಿಳೆಯರು ಇವುಗಳ ಮೂಲಕ ಸಂಘಟಿತರಾಗಿ ಹಳ್ಳಿಗಳಲ್ಲಿ ಹೋರಾಟ ಮಾಡುವುದನ್ನು, ಬ್ಯಾಂಕಿಗೆ ಹೋಗುವುದನ್ನು, ಪಂಚಾಯಿತಿಗಳಿಗೆ ಹೋಗುವುದನ್ನು ಇವತ್ತು ನೋಡುತ್ತಿದ್ದೇವೆ. ಆದರೆ ಏನಾಗಿದೆಯೆಂದರೆ ನಮ್ಮ ಸಮಾಜದಲ್ಲಿ ಎಲ್ಲಾ ಚಳವಳಿಗಳು ಮುಗಿದವು ಎಂಬ ಸಿನಿಕತನವನ್ನು ಮೂಡಿಸುವ ಶಕ್ತಿಗಳಿವೆ. ಅನ್ಯಾಯ ಇರುವವರೆಗೆ, ಅಸಮಾನತೆ ಶೋಷಣೆ ಇರುವವರೆಗೆ ಚಳವಳಿಗಳು ಇರುತ್ತವೆ. ಕೆಲವೊಮ್ಮೆ ಕಡಿಮೆ ಆಯ್ತು ಅನಿಸಿದರೂ ಮತ್ತೇ ಅವು ನೆಗೆದು ಬರುತ್ತವೆ. ಆದರೂ ಚಳವಳಿಗಳು ಇಂದಿನ ದಿನದಲ್ಲಿ ತಮ್ಮ ತಮ್ಮ ನೆಲಗಟ್ಟಿನಲ್ಲಿ ಸಂಚಲನೆಗೆ ಒಳಗಾಗುತ್ತಿವೆ. ಅದಕ್ಕೊಂದು ತೀವ್ರ ಸ್ವರೂಪ ಬರಬೇಕು, ಸಮಗ್ರ ಸ್ವರೂಪ ಬರಬೇಕು, ಇನ್ನಷ್ಟು ಐಕ್ಯತೆಯಿಂದ ಹೋರಾಟಗಳಾಗಬೇಕು. ಈ ನಿಟ್ಟಿನಲ್ಲಿ ದೊಡ್ಡ ಅಲೆಗಳನ್ನು ಎಬ್ಬಿಸಬೇಕಾಗಿದೆ. ಇಂದು ಈ ಕಾರ್ಯ ತುರ್ತಾಗಿ ಆಗಬೇಕಾಗಿದೆ.

೧೫. ಡಾ. ಮೀನಾಕ್ಷಿ ಬಾಳಿ

ಸಹ ಪ್ರಾಧ್ಯಾಪಕರು

ಎಂ.ಎಸ್.ಇ. ಪದವಿ ಕಾಲೇಜು

ಸಂದರ್ಶನ ದಿನಾಂಕ : ೨೪.೧೦.೨೦೧೧, ಗುಲಬರ್ಗಾ

ಹೈದರಾಬಾದ್ ಕರ್ನಾಟಕ ಭಾಗವು ಮೊಗಲರ ಅಧೀನದಲ್ಲಿದ್ದುದರಿಂದ ಈ ಪ್ರದೇಶವನ್ನು ಮೊಗಲೈ ಎಂದೇ ಕರೆಯಲಾಗಿತ್ತು. ನಂತರ ಇದು ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತು. ಹೈದರಾಬಾದಿನ ನಿಜಾಮ ಸಹಾಯಕ ಸೈನ್ಯಪದ್ಧತಿಗೆ ಸಹಿ ಹಾಕಿದ್ದರಿಂದ ಇದು ಒಂದು ರೀತಿಯಲ್ಲಿ ಬ್ರಿಟೀಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿತ್ತು, ಆದರೆ ಬ್ರಿಟಿಷರ ನೇರ ಮತ್ತು ಪರೋಕ್ಷ ಆಳ್ವಿಕೆಗೆ ಒಳಪಟ್ಟಂತಹ ಪ್ರದೇಶಗಳಲ್ಲಿ ಕಂಡು ಬಂದಂತಹ ಸುಧಾರಣೆಗಳು ಇಲ್ಲಿ ಕಂಡುಬರಲಿಲ್ಲ. ಹೀಗಾಗಿ ಅಭಿವೃದ್ಧಿ ಎನ್ನುವುದು ಈ ಭಾಗದಲ್ಲಿ ಹಿಮ್ಮುಖವಾಗಿ ಚಲಿಸತೊಡಗಿತು. ಹೀಗಾಗಿ ಸ್ವಾತಂತ್ರ್ಯದ ಸಮಯದಲ್ಲಿ ಬೇರೆ ಪ್ರದೇಶದಲ್ಲಿದ್ದಂತ ಪರಿಸ್ಥಿತಿ ಇಲ್ಲಿರದೆ ಬೇರೆಯದೇ ಆದಂತಹ ವಾತಾವರಣವಿತ್ತು. ಸ್ವಾತಂತ್ರ್ಯ ನಂತರವೂ ಈ ಭಾಗದಲ್ಲಿ ಯಾವುದೇ ಬದಲಾವಣೆಗಳಾಗದೇ ಪರಿಸ್ಥಿತಿ ಹಾಗೆ ಮುಂದುವರೆದಿದ್ದರಿಂದ ಇದು ಇತರ ಭಾಗಗಳಿಗಿಂತ ೧೦೦ ವರ್ಷದಷ್ಟು ಕಿರಿತನದ ಸ್ಥಾನ ಪಡೆಯುವಂತಾಯಿತು.

ಈ ಭಾಗದಲ್ಲಿ ಮಹಿಳಾ ಚಳವಳಿಗಳು ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದು ದಲಿತ ಬಂಡಾಯ ಸಾಹಿತ್ಯ ಕಾಣಿಸಿಕೊಂಡಾಗ, ಇದರಿಂದ ಮಹಿಳೆಯರಿಗೆ ಒಂದು ರೀತಿಯಲ್ಲಿ ತಿಳುವಳಿಕೆ (ಪ್ರಜ್ಞೆ) ಬಂತು. ಬಂಡಾಯ ಸಾಹಿತ್ಯ ಚಳವಳಿ ಸಂದರ್ಭದಲ್ಲಿ ಇಲ್ಲಿನ ಮಹಿಳೆಯರು ಮಾತನಾಡಲಿಕ್ಕೆ, ಬರೆಯಲಿಕ್ಕೆ, ಓದಲಿಕ್ಕೆ ಪ್ರಾರಂಭಿಸಿದರು. ಅದರಲ್ಲೂ ಮುಖ್ಯವಾಗಿ ಈ ಭಾಗದ ಮಹಿಳೆಯರನ್ನು ಕುರಿತು ಬರೆಯಲಿಕ್ಕೆ, ಈ ಭಾಗದ ಮಹಿಳೆಯರ ಮೇಲಿನ ಶೋಷಣೆಗಳ ಕುರಿತು ಬರೆಯಲಿಕ್ಕೆ, ದಲಿತ ಮಹಿಳೆಯರ ಮೇಲಾಗುತ್ತಿದ್ದ ಶೋಷಣೆಗಳ ವಿರುದ್ಧ, ದೇವದಾಸಿ ಪದ್ಧತಿ ವಿರುದ್ಧ ಮಾತನಾಡತೊಡಗಿದರು.

ಭಾಷಣ, ಬರವಣಿಗೆ ಮೂಲಕ ತಮ್ಮ ಪ್ರತಿಭಟನೆಯನ್ನ ವ್ಯಕ್ತಪಡಿಸತೊಡಗಿದರು. ಹೀಗೆ ಮಹಿಳಾ ಚಳವಳಿಗಳಿಗೆ ವೇದಿಕೆ ಸಿದ್ಧಗೊಳಿಸುವಂತ ಚಟುವಟಿಕೆಗಳು ಆರಂಭವಾದವು.

ಆಗ ಇಲ್ಲಿ ಕೆಲವು ಮಹಿಳಾ ಸಂಘಟನೆಗಳು ಕಾಣಿಸಿಕೊಂಡವು. ಅದರಲ್ಲಿ ಮುಖ್ಯವಾಗಿ 'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ'. ೧೯೮೩ರಲ್ಲಿ ಪ್ರಾರಂಭವಾದ ಸಂಘಟನೆಯ ಶಾಖೆಗಳು ಈ ಭಾಗದಲ್ಲೆಲ್ಲಾ ಸ್ಥಾಪನೆಯಾಗಿ ತನ್ನ ಚಟುವಟಿಕೆಯನ್ನು ಆರಂಭಿಸಿತು.

ಈ ಭಾಗದ ಮಹಿಳೆಯರು ದುಡಿಮೆಗಾರರು ಆದರೆ ಆರ್ಥಿಕವಾಗಿ ಸಬಲರಾಗುವಂತ ಅವಕಾಶಗಳು ಮಾತ್ರ ಅವರಿಗೆ ಇರಲಿಲ್ಲ. ಇನ್ನು ಜಮೀನ್ದಾರಿ ವ್ಯವಸ್ಥೆ ತಾರತಮ್ಯದ ಮೇಲೆ ಬೆಳವಣಿಗೆ ಆಗಿದ್ದರಿಂದ ಲಿಂಗತಾರತಮ್ಯ ವರ್ಗ ಸಂಘರ್ಷದ ಲಕ್ಷಣಗಳು ಇಲ್ಲಿ ಅತೀ ಹೆಚ್ಚಾಗಿದ್ದವು. ಇಂತಹ ಸಮಯದಲ್ಲಿ ಸಾಮೂಹಿಕ ಅನ್ಯಾಯದ ವಿರುದ್ಧ ಹಾಗೂ ವೈಯಕ್ತಿಕ ನೆಲೆಯಲ್ಲಿ, ಮಹಿಳೆಯರ ಹಕ್ಕುಗಳಾಗಿ ಹೋರಾಟ ಮಾಡಿದ್ದು ಇಲ್ಲಿನ ಗ್ರಾಮೀಣ ರೈತಾಪಿ ಮಹಿಳೆಯರು. ಏಕೆಂದರೆ ಆಗ ಮಧ್ಯಮವರ್ಗ ಮತ್ತು ಮೇಲ್ಜಾತಿ ಮಹಿಳೆಯರು ಬಂಗಾರದ ಪಂಜರದಲ್ಲಿದ್ದ ಹಾಗಿದ್ದರು. ಅವರು ಹೊರಬರಲಿಕ್ಕೆ ಸಾಧ್ಯವೇ ಇರಲಿಲ್ಲ ಹೀಗಾಗಿ ಅವರು ಹೋರಾಟದಿಂದ ದೂರನೇ ಇದ್ದರು. ಆದರೆ ಹಳ್ಳಿ ಒಳಗಿದ್ದ ರೈತಾಪಿ ವರ್ಗದ, ಕೂಲಿ ಕಾರ್ಮಿಕ ಮಹಳೆಯರು ಕೆಲಸ ಮಾಡಿ ಕುಟುಂಬವನ್ನು ನಿರ್ವಹಿಸುವವರಾಗಿದ್ದರು. ಹೀಗಾಗಿ ವೈಯಕ್ತಿಕ ನೆಲೆಯಲ್ಲಿ, ಕೌಟುಂಬಿಕ ನೆಲೆಯಲ್ಲಿ, ಸಾಮೂಹಿಕ ನೆಲೆಯಲ್ಲಿ ಅನ್ಯಾಯವಾದಾಗ ಜಗಳ ಆಡಿ, ಬಡಿದಾಡಿ ಹೋರಾಟ ಆರಂಭಿಸಿದರು.

ಆರಂಭದಲ್ಲಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಬಹಳ ಪ್ರಮುಖವಾದ ಹೋರಾಟವೆಂದರೆ ದಲಿತ ಮಹಿಳೆ ವಣೇನೂರು ಎರ್ರೆಮ್ಮನ ಮೇಲೆ ಬಲತ್ಕಾರ ಆದಾಗ, ಮೊದಲ ಬಾರಿ ಸಂಘಟನೆಗಳು ದೊಡ್ಡ ಮಟ್ಟದ ಹೋರಾಟ ಮಾಡಿ ಅನ್ಯಾಯದ ವಿರುದ್ಧ ಎದುರು ನಿಂತಿದ್ದರು. ಕುದುರೆಮೋತಿ ಪ್ರಕರಣದಲ್ಲಿ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಬಂಡೆದ್ದರು. ಮಹಿಳಾ ಮೀಸಲಾತಿ, ರೇಶನ್ ಕಾರ್ಡ್‌ಗಾಗಿ ಇನ್ನು ಅನೇಕ ರೀತಿಯ ಹೋರಾಟಗಳನ್ನು ಆರಂಭಿಸಿದ್ದರು. ಹೆಣ್ಣು ಭ್ರೂಣಹತ್ಯೆ ಕುರಿತು, ಇಡೀ ದೇಶವ್ಯಾಪ್ತಿ ಅದನ್ನು ದೊಡ್ಡ ಆಂದೋಲನವನ್ನಾಗಿ ಮಾಡಿದ್ದು ಇಲ್ಲಿನ ಮಹಿಳಾ ಹೋರಾಟಗಾರರು. ಆದರೆ ಇನ್ನು ಈ ಭಾಗದಲ್ಲಿ ಬಗೆಹರಿಯಲಾರದಂತಹ ಸಮಸ್ಯೆಗಳಿವೆ. ಅವುಗಳಲ್ಲಿ, ಒಂಟಿ ಮಹಿಳೆಯರ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ದೇವದಾಸಿ, ಶೌಚಾಲಯ, ಶಿಕ್ಷಣ ದುಬಾರೀಕರಣ, ಗುಳೆ ಹೋಗುವುದು ಹೀಗೆ ಅನೇಕ ಸಮಸ್ಯೆಗಳಿವೆ. ಇನ್ನೂ ದಲಿತ ಕೃಷಿ ಕೂಲಿ ಕಾರ್ಮಿಕ ಮಹಿಳೆಯರ ಸಮಸ್ಯೆಯಂತು ಬಹಳ ಶೋಚನೀಯವಾಗಿದೆ. ಇವುಗಳ ನಿವಾರಣೆಗೆ ಬಹುದೊಡ್ಡ ಹೋರಾಟಗಳು ಎಲ್ಲಾ ವರ್ಗದ ನಡುವೆ ಆಗಬೇಕಾದ ಅನಿವಾರ್ಯತೆಯಿದೆ.

ಇದೇ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಬೇಕಾದ ಇನ್ನೊಂದು ವಿಷಯವೆಂದರೆ ಮಹಿಳಾವಾದ. ಮಹಿಳಾವಾದ ಎಂದರೆ ಪುರುಷ ವಿರೋಧಿ ಎಂದರ್ಥವಲ್ಲ, ಬದಲಾಗಿ ಜೀವಪರವಾದ. ಯಾರು ಅಂಚಿನಲ್ಲಿದ್ದಾರೆ, ಅವಕಾಶದಿಂದ ವಂಚಿತರಾಗಿದ್ದರೆ ಅವರ ಪರವಾಗಿರುವುದು ಮತ್ತು ಅಂತವರನ್ನು

ಸಮಾಜದ ಬಹುಮುಖಿಗೆ ತರುವುದು ಎಂದರ್ಥ. ಇದಕ್ಕೆ ಪೂರಕವಾಗಿ ಮಹಿಳಾ ಸಬಲೀಕರಣವಾದರೆ ಮಹಿಳೆ ಸ್ಥಿತಿವಂತಳಾದರೆ ಇಡೀ ನಾಗರಿಕ ಸಮಾಜವೇ ಉನ್ನತ ಸ್ಥಿತಿಗೆ ತಲುಪುತ್ತದೆ ಎನ್ನುವುದು ತಾತ್ವಿಕವಾಗಿರುತ್ತದೆ ಮತ್ತು ವೈಜ್ಞಾನಿಕವಾಗಿರುತ್ತದೆ ಎನ್ನುವುದು ಸತ್ಯ. ಆ ಸತ್ಯದ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಮಹಿಳೆಯರು ಅನೇಕ ಹೋರಾಟಗಳನ್ನು ಕೈಗೊಂಡಿದ್ದಾರೆ. ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಮತ್ತು ಮಾಡುತ್ತಿದಾರೆ. ಆದರೆ ಆ ಹೋರಾಟಗಳ ದಾಖಲೀಕರಣ ಎಲ್ಲೋ ಒಂದು ಕಡೆ ಸಾಧ್ಯವಾಗುತ್ತಿಲ್ಲ. ಉದ್ದೇಶಪೂರ್ವಕವಾಗಿಯೇ ಈ ತರಹದ ಅಂಶಗಳನ್ನು ನೇಪಥ್ಯಕ್ಕೆ ಸರಿಸುತ್ತಾರೆ. ಇದು ಮುಂದಿನ ಹೋರಾಟಗಳಿಗೆ ಸ್ಫೂರ್ತಿ ಆಗಲು ದಾರಿ ಆಗಲು ಸಾಧ್ಯವಾಗುತ್ತಿಲ್ಲ.

ಇತ್ತೀಚಿನ ದಿನದಲ್ಲಿ ಹೈದರಾಬಾದ್ ಕರ್ನಾಟಕದ ಯಾವುದೇ ಜಿಲ್ಲೆಗಳ ಸ್ಥಿತಿಯನ್ನು ಚಟುವಟಿಕೆಯನ್ನು ನೋಡಿದಾಗ ಚಳವಳಿಗೆ ಪೂರಕವಾದಂತಹ ವಾತಾವರಣ ಇಲ್ಲ ಮತ್ತು ಚಳವಳಿಯನ್ನು ಹಚ್ಚಿಕೊಂಡು ಹೋರಾಟ ಮಾಡುವಂತ ನಿಸ್ವಾರ್ಥ ಜನರಿಲ್ಲ. ಇದು ಚಳವಳಿಗೆ ದೊಡ್ಡ ಹಿನ್ನಡೆಯಾಗಿದೆ. ಏಕೆಂದರೆ ಚಳವಳಿ ಎನ್ನುವುದು ಒಂದು ಮನೋರಂಜನಾ ಕಾರ್ಯಕ್ರಮವಲ್ಲ. ಸ್ಟೇಜ್ ಕಾರ್ಯಕ್ರಮ ಮಾಡಿದರೆ ಅದು ಚಳವಳಿ ಆಗಲ್ಲ, ಚಳವಳಿಯು ನಿಸ್ವಾರ್ಥ, ರಕ್ತ, ಕಣ್ಣೀರು, ಆತ್ಮ, ಬೆವರನ್ನು ಕೇಳುವಂತಹದ್ದು. ಹೀಗಾಗಿ ಈ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಮಾತ್ರ ಅದು ಫಲಕಾರಿ ಆಗಲಿಕ್ಕೆ ಸಾಧ್ಯವಾಗುತ್ತದೆ ಹಾಗೂ ಇಲ್ಲಿಯವರೆಗೆ ನಡೆದಂತಹ ಚಳವಳಿಗಳಿಂದ ಮಹಿಳೆಯರ ಸ್ಥಾನಮಾನದಲ್ಲಿ ಸಂಪೂರ್ಣ ಬದಲಾವಣೆ ಆಗಿದೆಯೆಂದು ಅಥವಾ ಶೋಷಣೆ ನಿಂತಿದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಆದರೆ ಇಲ್ಲಿ ಅಂತಹ ಒಂದು ಪ್ರಜ್ಞೆಯನ್ನು ಮೂಡಿಸುವಲ್ಲಂತು ಸಫಲವಾಗಿದೆ ಎಂದು ಖಂಡಿತವಾಗಿ ಹೇಳಬಹುದು.

೧೬. ಡಾ. ಮಲ್ಲಿಕಾ ಘಂಟಿ

ಸಹಪ್ರಾಧ್ಯಾಪಕರು

ಸ್ನಾತಕೋತ್ತರ ಕೇಂದ್ರ

ಸಂದರ್ಶನ ದಿನಾಂಕ : ೦೬.೧೨.೨೦೧೧, ನಂದಿಹಳ್ಳಿ

ಹೈದರಾಬಾದ್ ಕರ್ನಾಟಕದ ಮಹಿಳಾ ಚಳವಳಿಗಳ ಹಿನ್ನೆಲೆಯನ್ನು ಅವಲೋಕಿಸಿದಾಗ ಕಂಡು ಬರುವುದೇನೆಂದರೆ, ೭೦ರ ದಶಕದಲ್ಲಿ ಶ್ರೀ ದೇವರಾಜ ಅರಸ್ ಅವರು ಜಾರಿಗೆ ತಂದ ಸಾಮಾಜಿಕ ಸುಧಾರಣೆಗಳಿಂದ ಎಲ್ಲಾ ಭಾಗದಲ್ಲೂ ಬದಲಾವಣೆಗಳು ಆರಂಭವಾದವು. ಒಂದು ರೀತಿಯೊಳಗೆ ಈ ಕಾಲವನ್ನು ದಲಿತರ, ಮಹಿಳೆಯರ, ಕಾರ್ಮಿಕರ ಮತ್ತು ಹಿಂದುಳಿದವರ ಬಿಡುಗಡೆಯ ಕಾಲ ಎಂದೇ ಕರೆಯಬಹುದು. ಅಂದರೆ ಅವರ ರಾಜಕೀಯ ಪ್ರೇರಿತವಾದಂತಹ ನೆಲೆಯಲ್ಲಿ ಅನೇಕ ವರ್ಗಗಳು ಅದರಲ್ಲೂ ವಿಶೇಷವಾಗಿ ಮಹಿಳೆಯರು ನಿರ್ಬಂಧಗಳ ಚೌಕಟ್ಟಿನಿಂದ ಹೊರಬರಲು ಆರಂಭವಾಗಿದ್ದನ್ನು ಗಮನಿಸಬೇಕಾಗುತ್ತದೆ. ಈ ಭಾಗದಲ್ಲಿ ಮಹಿಳಾ ಸಮಸ್ಯೆಗಳನ್ನೇ ಇಟ್ಟುಕೊಂಡು ಮಹಿಳಾ ಚಳವಳಿಗಳು ರೂಪಗೊಂಡಿದ್ದು, ಕಾಣಿಸಿಕೊಂಡಿದ್ದು ೮೦ರ ದಶಕದ ನಂತರವೆ. ಆಗ ಕುಟುಂಬಕ್ಕೆ

ಸಂಬಂಧಿಸಿದ ಸಮಸ್ಯೆಗಳನ್ನು ಪ್ರತಿಭಟಿಸುವ ಸಲುವಾಗಿ ಕೆಲವು ಮಹಿಳೆಯರು ಆರಂಭಿಸಿದ ಹೋರಾಟಗಳು ಕ್ರಮೇಣ ವಿಶಾಲಗೊಳ್ಳುತ್ತಾ ಗಟ್ಟಿಯಾಗುತ್ತಾ ನಡೆದವು. ಹಾಗೆ ನೋಡಿದರೆ ಇಡೀ ಕರ್ನಾಟಕದಲ್ಲಿಯೆ ಎಲ್ಲಾ ಕಡೆಗಿಂತ ಬಲಿಷ್ಠವಾದಂತಹ ತೀವ್ರವಾದಂತಹ ಮಹಿಳಾ ಚಳವಳಿಗಳು ಹುಟ್ಟಬೇಕಾಗಿದ್ದೆ ಗುಲಬರ್ಗಾ ಮತ್ತು ಈ ಭಾಗಗಳಿಂದ. ಏಕೆಂದರೆ ಇಲ್ಲಿ ಬೇರೆ ಯಾವ ಭಾಗದಲ್ಲೂ ಇಲ್ಲದಂತಹ ಮಹಿಳಾ ಸಮಸ್ಯೆಗಳು ಮತ್ತು ಸವಾಲುಗಳು ಇವೆ. ಹಾಗಾಗಿ ದೊಡ್ಡ ಹೋರಾಟ ರೂಪಿಸಬೇಕಾದಂತಹ ಅಗತ್ಯತೆ ಇತ್ತು ಆದರೆ ಯಾಕೋ ಆ ರೀತಿಯಾದಂತಹ, ಶಕ್ತಿಶಾಲಿಯಾದಂತಹ ಚಳವಳಿಗಳನ್ನು ಕಟ್ಟಲಿಕ್ಕೆ, ನಡೆಸಲಿಕ್ಕೆ ಸಾಧ್ಯ ಆಗಿಲ್ಲ. ಇದಕ್ಕೆ ಕಾರಣಗಳು ಅನೇಕ ಇವೆ.

ಹೈದರಾಬಾದ್ ಕರ್ನಾಟಕದ ದುರಂತ ಅಂದರೆ ಇಲ್ಲಿ ಔದ್ಯಮಿಕ ನೆಲೆ ಅಷ್ಟು ಶಕ್ತಿಶಾಲಿಯಾಗಿಲ್ಲ. ಯಾವುದೇ ದೊಡ್ಡ ಉದ್ದಿಮೆಗಳು ಇಲ್ಲ, ಇವತ್ತಿಗೂ ಜಮೀನ್ದಾರಿಕೆ ಮತ್ತು ಭೂಮಿಯನ್ನೇ ನಂಬಿಕೊಂಡು ಬದುಕುವ ಜನರು ಇಲ್ಲಿದ್ದಾರೆ. ಹೀಗಾಗಿ ಇವರ ಬದುಕು ಇಲ್ಲಿನ ಭೂ ಸಂಸ್ಕೃತಿ ಮತ್ತು ಇಲ್ಲಿನ ಸಾಮಾಜಿಕ ವ್ಯವಹಾರಗಳಿಗೆ ಸಂಬಂಧಿಸಿರುವುದರಿಂದ ಮಹಿಳೆಯರಿಗೆ ತಮ್ಮ ಮೇಲಾಗುವ ದೌರ್ಜನ್ಯಗಳನ್ನು ಪ್ರತಿಭಟನೆ ಮಾಡುವಂತಹ ಸ್ವಾತಂತ್ರ್ಯ ಶೈಕ್ಷಣಿಕವಾದಂತಹ ತಿಳುವಳಿಕೆಗಳು ಇನ್ನೂ ಇಲ್ಲಿ ಬೆಳೆದಿಲ್ಲ. ಆದರೆ ಇತ್ತೀಚಿನ ದಶಕಗಳಲ್ಲಿ ಮಹಿಳಾ ಸಂಘಟನೆಗಳು ಮತ್ತು ಮಹಿಳಾ ಧ್ವನಿಗಳು ಗಟ್ಟಿಯಾಗಿ ಮಹಿಳಾ ಸಂಬಂಧಿತ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೋರಾಟಗಳಲ್ಲಿ ನಿರತರಾಗಿದ್ದಾರೆ. ಬಹಳ ಸೀಮಿತ ಸಮಯದೊಳಗೆ, ಅವಕಾಶದೊಳಗೆ ಹೋರಾಟವನ್ನು ಕೈಗೊಂಡಿದ್ದಾರೆ. ಆದರೆ, ಪುರುಷ ನಿಯಂತ್ರಿತ ರಾಜಕಾರಣದೊಳಗೆ ಮಹಿಳೆಯರ ಕಡಗಣನೆ, ಲಿಂಗತಾರತಮ್ಯ, ಅಜ್ಞಾನ, ಬಡತನ ಅನಕ್ಷರತೆ, ಮೂಢನಂಬಿಕೆಗಳು ಆವರಿಸಿಕೊಂಡಿರುವಂತಹ ಪ್ರದೇಶದಲ್ಲಿ ಇದರಿಂದ ಬಿಡುಗಡೆ ಆಗಲು ಇನ್ನು ಕಾಲಾವಕಾಶ ಬೇಕಾಗುತ್ತದೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಆರಂಭದಿಂದಲೂ ಮಹಿಳೆಯರು ಮನೆಯಿಂದ ಹೊರಗಡೆ ಹೋಗುವುದು ಎಂದರೆ ದೊಡ್ಡ ಅಪರಾಧ ಎನ್ನುವ ಭಾವನೆಯಿತ್ತು. ಹೀಗಾಗಿ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದು ಸಾಧ್ಯವಾಗಲಿಲ್ಲ. ಆದರೆ ೮೦ರ ದಶಕದ ನಂತರ ಶಿಕ್ಷಣ ಪಡೆಯುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಾ ಬಂದಿದೆ. ಆದರೆ ವೈಜ್ಞಾನಿಕವಾದ ಮತ್ತು ವೈಚಾರಿಕವಾದ ತಿಳುವಳಿಕೆಯನ್ನು ಕೊಡುವಂತ ಶಿಕ್ಷಣ ಇಲ್ಲದೇ ಇರುವುದರಿಂದ ಈ ಮಹಿಳೆಯರು ಮತ್ತೆ ಕುಟುಂಬದ ವರ್ತುಲದಲ್ಲೇ ಸುತ್ತಬೇಕಾಗಿದೆ. ಶಿಕ್ಷಣ ಎನ್ನುವುದು ಸ್ವತಂತ್ರವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಹ ಸಂಗತಿ ಆಗದೇ ಇರುವುದರಿಂದ ಮಹಿಳೆಯರಿಗೆ ತಮ್ಮದೇ ಆದಂತಹ ತಮ್ಮ ಬದುಕಿಗೆ ಸಂಬಂಧಪಟ್ಟ ಆಗುಹೋಗುಗಳನ್ನು, ಸಮಸ್ಯೆಗಳನ್ನು, ಆಲೋಚನೆ ಮಾಡುವಂತಹ ತಿಳುವಳಿಕೆ ಈ ಭಾಗದ ಮಹಿಳೆಯರಿಗೆ ಕಡಿಮೆ ಇದೆ. ಅದೇ ಮೈಸೂರು, ಬೆಂಗಳೂರು, ಮಂಗಳೂರಿನ ಶೈಕ್ಷಣಿಕ ಪರಿಸರವನ್ನು ನೋಡಿದೆವೆಂದರೆ ಸಹಜವಾಗಿ ಅಲ್ಲಿಯ ಮಕ್ಕಳು ಜಗತ್ತಿನ ವಿದ್ಯಮಾನಗಳಿಗೆ ಈಗಾಗಲೇ ತಮ್ಮನ್ನು ಸಹಜವಾಗಿ ಸಿದ್ಧಪಡಿಸಿಕೊಂಡು ಸ್ಪರ್ಧೆಯೊಳಗೆ ನಿಂತಿದ್ದಾರೆ. ಆದರೆ ಈ ಭಾಗದ ಮಕ್ಕಳು ಆ ಮಟ್ಟದಲ್ಲಿ ಬೆಳೆದಿಲ್ಲ.

ಹೀಗಾಗಿ ಇವರಿಬ್ಬರ ನಡುವಿನ ಸ್ಪರ್ಧೆಯೆಂದರೆ ಪ್ರಬಲರು ಮತ್ತು ಅಂಗವಿಕಲರ ನಡುವೆ ಏರ್ಪಡಿಸಿದಂತಾಗಿದೆ. ಇದಕ್ಕಾಗಿ ಈ ಭಾಗದಲ್ಲಿ ಮಕ್ಕಳಿಗೆ ಸಂಖ್ಯಾತ್ಮಕ ಶಿಕ್ಷಣಕ್ಕಿಂತ ಗುಣಾತ್ಮಕವಾದ ಶಿಕ್ಷಣವನ್ನು ನೀಡಬೇಕು.

ಇದೇ ಸಂದರ್ಭದಲ್ಲಿ ನಾವು ಇನ್ನೂ ಒಂದು ಪ್ರಶ್ನೆಯನ್ನು ಎದುರಿಸುತ್ತಿರುತ್ತೇವೆ. ಅದೇನೆಂದರೆ, ಈ ಭಾಗದಿಂದ ಇಷ್ಟೊಂದು ಜನ ರಾಜಕಾರಣಿಗಳು ಆರಿಸಿ ಹೋಗಿದ್ದಾರೆ. ಆದರೆ ಇವರು ಏಕೆ ತಮ್ಮ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಕೆಲಸ ಮಾಡಿಲ್ಲ, ಅಭಿವೃದ್ಧಿ ಮಾಡುವುದು ನಮ್ಮ ಕರ್ತವ್ಯ ಎನ್ನುವ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಇವರಿಂದ ಸಾಧ್ಯವಾಗಿಲ್ಲ ಎನ್ನುವುದಾಗಿದೆ. ಇದಕ್ಕೆ ಮುಕ್ತವಾಗಿ ನಮಗೆ ಕಂಡುಬರುವುದೇನೆಂದರೆ, ಇಲ್ಲಿನ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆ ಇದೆ. ಈ ಪ್ರದೇಶದ ಹಿಂದುಳಿದಿರುವಿಕೆಗೆ ಮೂಲಭೂತ ಕಾರಣ ಇದೇ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ನಮ್ಮ ರಾಜಕಾರಣಿಗಳು ಆಯ್ಕೆಯಾದ ಸಂದರ್ಭದಲ್ಲಿ ಯಾವ ಆರ್ಥಿಕ ಸ್ಥಿತಿಯೊಳಗೆ ಇರುತ್ತಾರೆ, ೫ ವರ್ಷದ ನಂತರ ಅವರ ಆರ್ಥಿಕ ಸ್ಥಿತಿ ಹೇಗಿರುತ್ತದೆ ಅನ್ನುವುದನ್ನು ನೋಡಿದರೆ ಪರಿಸ್ಥಿತಿ ಅರ್ಥವಾಗುತ್ತದೆ. ಇನ್ನಾದರೂ ಸರಕಾರಗಳು ಈ ಭಾಗದ ಜನರಿಗೆ ವಿಶೇಷವಾದಂತಹ ಉಪಯುಕ್ತವಾಗುವಂತಹ ಪ್ಯಾಕೇಜ್‌ಗಳನ್ನು ರೂಪಿಸುವುದರ ಮೂಲಕ ಇತರ ಭಾಗಗಳಿಗೆ ಸರಿದೂಗಿಸುವಂತಹ ಕೆಲಸ ಮಾಡಬೇಕು.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಮಹಿಳಾ ಚಳವಳಿಗಳು ಹಿಂದಿನಿಂದ ನಡೆದುಕೊಂಡು ಬಂದಿವೆ ಮತ್ತು ಇಂದಿಗೂ ನಡೆಯುತ್ತಿವೆ. ದಲಿತ ಮಹಿಳೆಯರ ಮೇಲೆ ದೌರ್ಜನ್ಯವಾದಾಗ, ದಲಿತ ಮಹಿಳೆಯರಿಗೆ ಅನ್ಯಾಯವಾದಾಗ ರಾಜ್ಯದ ಗಮನವನ್ನೇ ಸೆಳೆಯುವಂತಹ ಹೋರಾಟಗಳಾಗಿವೆ ಮತ್ತು ಇಂತಹ ಹೋರಾಟಗಳ ಮೂಲಕ ನ್ಯಾಯ ದೊರಕಿಸಿಕೊಟ್ಟಿವೆ. ಇಂದಿಗೂ, ಅಸ್ಪೃಶ್ಯತೆ, ವರದಕ್ಷಿಣೆ, ಲಿಂಗತಾರತಮ್ಯ, ಹೆಣ್ಣು ಭ್ರೂಣಹತ್ಯೆ, ರಾಜಕೀಯ ಮೀಸಲಾತಿ, ಹೆಣ್ಣು ಮಕ್ಕಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಹೀಗೆ ಅನೇಕ ಹೋರಾಟಗಳು ನಡೆಯುತ್ತಿವೆ. ಆದರೆ ದುರಂತ ಏನೆಂದರೆ ನೇಪಥ್ಯದಲ್ಲಿ ಇದ್ದುಕೊಂಡು ಹೋರಾಟ ಮಾಡಿದಂತಹ ಮಹಿಳೆಯರನ್ನು ದಾಖಲಿಸುವಂಥ ಔದಾರ್ಯ ನಮ್ಮ ಚರಿತ್ರೆಕಾರರಲ್ಲಿ ಇಲ್ಲದೇ ಇರುವುದರಿಂದ ಇವತ್ತು ನಾವು ಕೆಲವು ಚರಿತ್ರೆಯ ಪುಟಗಳನ್ನು ತಿರುವಿ ನೋಡುವಾಗ ಮಹಿಳೆಯರ ಹೆಸರುಗಳು ಮೊದಲು ಗೋಚರಿಸುವುದಿಲ್ಲ. ಹೀಗಾಗಿ ಮಹಿಳೆಯರ ಹೆಸರು ಇಲ್ಲ ಅಂದ ತಕ್ಷಣ ನಾವು ಏನು ಹೇಳುತ್ತೇವೆಂದರೆ, ಚಳವಳಿಗಳಲ್ಲಿ ಮಹಿಳೆಯರು ಭಾಗವಹಿಸಲಿಲ್ಲ ಎನ್ನುವಂಥ ತೀರ್ಮಾನಕ್ಕೆ ಬರುತ್ತೇವೆ, ಆದರೆ ವಾಸ್ತವ ಪರಿಸ್ಥಿತಿ ಹೀಗಿಲ್ಲ.

ಇಲ್ಲಿನ ಕೃಷಿ-ಕೂಲಿ ಕಾರ್ಮಿಕ ಮಹಿಳೆಯರಿಗೆ ಸಂಬಂಧಪಟ್ಟ ಹಾಗೆ, ಸಮಾಜದೊಳಗೆ ಇರಬಹುದಾದ ವರದಕ್ಷಿಣೆ ಸಮಸ್ಯೆ, ಶಿಶುಹತ್ಯೆ, ಶಿಶುಮಾರಾಟ, ಲೈಂಗಿಕ ದೌರ್ಜನ್ಯ, ಉದ್ಯೋಗಸ್ಥ ಮಹಿಳೆಯರಿಗೆ ಸಂಬಂಧಪಟ್ಟ ಹಾಗೆ ಮತ್ತು ಶೈಕ್ಷಣಿಕ ನೆಲೆಯೊಳಗೆ ನಮಗೆ ಬೇಕಾದಂತಹ ಅವಕಾಶಗಳನ್ನು ಪಡೆಯಲು ಸಮಸ್ಯೆಗಳನ್ನು ಬಗೆಹರಿಸುವಂಥ ಪ್ರಶ್ನೆಗಳನ್ನು ಇಟ್ಟುಕೊಂಡು ಹೋರಾಟ ಮಾಡಿದಾಗ ಮಾತ್ರ ಮಹಿಳಾ ಪರಂಪರೆಯನ್ನು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಮಹಿಳಾ ಚಳವಳಿಗಳಿಗೆ ಅರ್ಥ ಬರುತ್ತದೆ.

೧೭. ಶ್ರೀಮತಿ ಅಮೀನಾ ಬೇಗಂ

ಸಹ ಕಾರ್ಯದರ್ಶಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಸಂದರ್ಶನ ದಿನಾಂಕ : ೧೮.೦೫.೨೦೧೨, ಗುಲಬರ್ಗಾ

ಹೈದರಾಬಾದ್ ಕರ್ನಾಟಕ ಪ್ರಾಂತ್ಯ ಬಹಳ ಹಿಂದಿನಿಂದ ಇಸ್ಲಾಂನ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶವಾಗಿದೆ. ಇಂದಿಗೂ ಅತೀ ಹೆಚ್ಚು ಮುಸ್ಲೀಮರು ಇಲ್ಲಿದ್ದಾರೆ. ಇಲ್ಲಿನ ಪ್ರತಿ ಹಳ್ಳಿಗಳಲ್ಲೂ ಹೆಚ್ಚು ಕಡಿಮೆ ಮುಸ್ಲೀಮರು ನೆಲೆಸಿದ್ದಾರೆ. ಆದರೆ ಇಲ್ಲಿನ ನಿಜಾಮನ ಆಳ್ವಿಕೆ ಮತ್ತು ನಂತರ ಆದಂತಹ ರಾಜಕೀಯ ಬದಲಾವಣೆಗಳು ಹಿಂದೂ ಮತ್ತು ಮುಸ್ಲೀಮರಲ್ಲಿ ಕೆಲವು ಭಿನ್ನಾಭಿಪ್ರಾಯ, ಕೋಮುವಾದ ಬೆಳೆಯಲು ಕಾರಣವಾಯಿತು. ಹೀಗಾಗಿ ಇಲ್ಲಿ ಬುರ್ಕಾ ಸಂಸ್ಕೃತಿ ಬಹಳ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿದೆ ಹಾಗೂ ಧಾರ್ಮಿಕ ಸಾಂಪ್ರದಾಯಿಕ ಮುಸ್ಲೀಮರು ಹೆಚ್ಚಿರುವುದರಿಂದ ಮುಸ್ಲಿಂ ಮಹಿಳೆಯರ ಮೇಲಿನ ಕಟ್ಟುಪಾಡುಗಳು ಹೆಚ್ಚಿವೆ.

ಹೈದರಾಬಾದ್ ಕರ್ನಾಟಕದ ಮುಸ್ಲಿಂ ಮಹಿಳೆಯರ ಮೇಲೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ನಿರ್ಬಂಧಗಳಿರುವಂತಹ ಪ್ರದೇಶವಾಗಿದೆ. ಹೀಗಾಗಿ ಒಬ್ಬ ಮುಸ್ಲಿಂ ಮಹಿಳೆ ಸಾಮಾಜಿಕ ಹೋರಾಟಗಳಲ್ಲಿ ಪಾಲ್ಗೊಳ್ಳುವುದು, ಹೋರಾಡುವುದು ಅಷ್ಟು ಸುಲಭವಲ್ಲ. ಬಹಳಷ್ಟು ಮೇಲ್ವರ್ಗದ ಮತ್ತು ಮಧ್ಯಮವರ್ಗದ ಮುಸ್ಲೀಮರ ಮನೆಗಳಲ್ಲಿ ಮಹಿಳೆಯರನ್ನು ಹೊರಗಡೆ ಕಳುಹಿಸುವುದೇ ಕಡಿಮೆ. ಒಂದು ವೇಳೆ ಹೊರಗೆ ಹೋಗುವುದಾದರೆ ತನ್ನ ಕುಟುಂಬದವರ ಜೊತೆಯಲ್ಲಿಯೇ ಹೋಗಬೇಕು. ಅಂದರೆ ಇವಳು ಮನೆಯ ಒಳಗಿನ ಕೆಲಸಕ್ಕೆ, ಅಡುಗೆಗೆ ಸೀಮಿತ ಎನ್ನುವ ಭಾವನೆಯಿದೆ. ಕೆಳ ಮತ್ತು ಬಡವರ್ಗದ ಮುಸ್ಲಿಂ ಮಹಿಳೆಯರು ಮಾತ್ರ ಹೊರಗಡೆ ಕೂಲಿ, ತರಕಾರಿ ಮಾರಾಟ, ಮುಂತಾದ ಕೆಲಸಗಳಿಗೆ ಹೋಗುತ್ತಾರೆ. ಮೇಲ್ವರ್ಗ ಮತ್ತು ಮಧ್ಯಮವರ್ಗದ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿರುವರಾದರೂ ಇವರ ಸಂಖ್ಯೆ ಬಹಳ ಕಡಿಮೆಯಿದೆ. ಇತ್ತೀಚೆಗೆ ಮುಸ್ಲಿಂ ಪೋಷಕರು ಸಹ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ವಿದ್ಯೆ ಕೊಟ್ಟು ಸಮಾಜದಲ್ಲಿ ಉತ್ತಮ ಸ್ಥಿತಿಗತಿಗೆ ಅವರನ್ನು ತರುವ ನಿಟ್ಟಿನಲ್ಲಿ ಪ್ರೋತ್ಸಾಹಿಸುತ್ತಿದ್ದಾರೆ. ಹೀಗಾಗಿ ಯುವತಿಯರು ಬುರ್ಕಾದ ಚೌಕಟ್ಟಿನಿಂದ ಹೊರಬರದಿದ್ದರೂ ಅದರ ಹಿಂದಿರುವಂತಹ ಒಳಗಿರುವಂತಹ ಕೆಲವು ಕಟ್ಟುಪಾಡುಗಳಿಂದ ಹೊರಬಂದು ಬದುಕುತ್ತಿದ್ದಾರೆ.

ಹೈದರಾಬಾದ್ ಕರ್ನಾಟಕದ ಮುಸ್ಲಿಂ ಮಹಿಳೆಯರು ಇತರ ಮಹಿಳೆಯರಂತೆ ಅನಕ್ಷರತೆ, ಮೌಢ್ಯ, ಬಡತನಕ್ಕೆ ಒಳಗಾಗಿದ್ದಾರೆ. ಅದರಲ್ಲೂ ಮಧ್ಯಮ ಮತ್ತು ಬಡವರ್ಗದ ಮುಸ್ಲಿಂ ಮಹಿಳೆಯರಂತೂ, ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ಶೌಚಾಲಯ, ಉರುವಲು, ಸೀಮೆಎಣ್ಣೆ, ರೇಶನ್‌ಕಾರ್ಡ್ ಮುಂತಾದ ಸೌಲಭ್ಯಗಳಿಲ್ಲದೆ ತೀರಾ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಬಹಳಷ್ಟು

ಗಂಡಸರು ದಿನನಿತ್ಯದ ಕೆಲಸಗಳಿಗೆ ಹೊರಗಡೆ ಹೋಗುವುದರಿಂದ ಕುಟುಂಬದ ಅನೇಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಹಿಳೆಯರೆ ರಸ್ತೆಗಳಿದು ಪ್ರತಿಭಟನೆ, ಮುಷ್ಕರ, ಹೋರಾಟ ಮಾಡಬೇಕಾದ ಅನಿವಾರ್ಯತೆಯಿದೆ. ಆರ್ಥಿಕವಾಗಿ ಇವರು ಬಹಳ ಕೆಳಮಟ್ಟದಲ್ಲಿದ್ದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಆರೋಗ್ಯ, ಊಟ, ಕೊಡಲು ವಿಫಲರಾಗುತ್ತಿದ್ದಾರೆ. ಇದರ ಜೊತೆಗೆ ತಲಾಖ್ ಪಡೆದ ಮುಸ್ಲಿಂ ಮಹಿಳೆಯರಿಗೆ ಯಾರ ಆಶ್ರಯ ದೊರೆಯದೆ, ಅಭದ್ರತೆಯ ಬಡತನದ ಜೀವನ ನಡೆಸಬೇಕಾಗಿದೆ. ಹೀಗಾಗಿ ಇವರು ಸರಕಾರದಿಂದ ಸಿಗುವ ಸೌಲಭ್ಯಗಳನ್ನೆ ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿಯಿದೆ. ತಲಾಖ್ ಪಡೆದಂತಹ ಅಥವಾ ವಿಧವೆಯರು ಮರು ವಿವಾಹವಾದ ಸಂಖ್ಯಾ ಪ್ರಮಾಣ ತುಂಬಾ ಕಡಿಮೆಯಿದೆ.

ಮುಸ್ಲಿಂ ಮಹಿಳೆಯರು ಧಾರ್ಮಿಕವಾಗಿ ಹೆಚ್ಚು ಸಂಕುಚಿತರಾಗಿದ್ದಾರೆ. ಮಹಿಳೆ ಎನ್ನುವ ಕಾರಣಕ್ಕೆ ಅವಳ ಮೇಲೆ ಕಟ್ಟುಪಾಡುಗಳಿರುವುದು ಒಂದೆಡೆಯಾದರೆ ಮುಸ್ಲಿಂ ಪುರುಷರು ತಮ್ಮ ಮಹಿಳೆಯರಿಗೆ ರಕ್ಷಣೆ ಕೊಡುವ ನೆಪದಲ್ಲಿ ಅತಿಯಾದ ನಿಯಂತ್ರಣ ಹೊಂದಿದ್ದಾರೆ. ಧಾರ್ಮಿಕವಾಗಿ, ಮುಕ್ತವಾಗಿ ಮಸೀದಿಗಳಿಗೆ, ಸಮಾರಂಭಗಳಿಗೆ ಹೋಗದೆ ಮನೆಯಲ್ಲಿಯೇ ನಮಾಜ್ ಮಾಡಬೇಕಾಗಿದೆ. ಧಾರ್ಮಿಕ ಶಿಕ್ಷಣದ ಒತ್ತಡವೂ ಜಾಸ್ತಿಯಿದೆ. ಕೌಟುಂಬಿಕವಾಗಿ ಮುಸ್ಲಿಂ ಮಹಿಳೆಯರ ಮೇಲೆ ಕೆಲವು ನಿರ್ಬಂಧಗಳಿವೆ. ಮುಸ್ಲೀಮರ ಶಿಕ್ಷಣ ಸಂಸ್ಥೆಗಳಲ್ಲಿಯೇ ಹೆಚ್ಚಾಗಿ ಶಿಕ್ಷಣ ಪಡೆಯಲು ಇಷ್ಟಪಡುತ್ತಾರೆ. ಹೀಗೆ ವಿವಿಧ ರೀತಿಯಲ್ಲಿ ಕೆಲವು ನಿಯಂತ್ರಣಕ್ಕೆ ಮುಸ್ಲಿಂ ಮಹಿಳೆ ಒಳಗಾಗಿದ್ದಾಳೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇಷ್ಟೊಂದು ಕಟ್ಟುಪಾಡುಗಳು ಕಂಡು ಬರುವುದಿಲ್ಲ. ಒಟ್ಟಿನಲ್ಲಿ ಮುಸ್ಲಿಂ ಧರ್ಮದಲ್ಲಿ ಇರುವಂತಹ ಸಂಪ್ರದಾಯಗಳು ಹಾಗೂ ಮುಸ್ಲೀಮೇತರರಲ್ಲಿ ಮುಸ್ಲೀಮರ ಬಗೆಗಿರುವ ನಕಾರಾತ್ಮಕ ಭಾವನೆಗಳು, ಹೀಗೆ ಇಬ್ಬಗೆಯ ಖಡ್ಗದಧಾರೆಗೆ ಸಿಲುಕಿ ನಲುಗುತ್ತಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಮುಸ್ಲಿಂ ಮಹಿಳೆಯರ ಭಾಗವಹಿಸುವಿಕೆ ತೀರಾ ಕಡಿಮೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಇಲ್ಲಿ ಮುಸ್ಲಿಂ ಮಹಿಳೆಯರು ಬಹಿರಂಗವಾಗಿ, ಮುಕ್ತವಾಗಿ ಬೆರೆಯಲು ಕೆಲವು ನಿರ್ಬಂಧಗಳಿವೆ. ಮುಸ್ಲಿಂ ಮಹಿಳೆಯರು ಬಹಿರಂಗವಾಗಿ, ಹೊರಗಡೆ ಬೆರೆಯುವುದನ್ನು ಸಂಪ್ರದಾಯವಾದಿಗಳು ಇಷ್ಟಪಡುವುದಿಲ್ಲ. ಹೀಗಾಗಿ ರಾಜಕೀಯದಲ್ಲಿ ಮೀಸಲಾಗಿರುವ ಕ್ಷೇತ್ರದಲ್ಲಿ ಅನಿವಾರ್ಯ ಎನ್ನುವ ಸಂದರ್ಭದಲ್ಲಿ ಮಾತ್ರ ಭಾಗವಹಿಸುತ್ತಾರೆ. ಇತ್ತೀಚಿಗೆ ಇವರ ಭಾಗವಹಿಸುವಿಕೆ ಹೆಚ್ಚುತ್ತಿದೆ. ಮುಸ್ಲಿಂ ಮಹಿಳೆಯರು ಅನೇಕ ಸಂಘಟನೆಗಳ ಸದಸ್ಯತ್ವವನ್ನು ಪಡೆದುಕೊಂಡು ವಿವಿಧ ಸಮಸ್ಯೆಗಳ ನಿವಾರಣೆಗೆ ಹೋರಾಟ ಮಾಡುತ್ತಿದ್ದಾರೆ. ಕೆಲವೊಂದು ಸೌಲಭ್ಯಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಸ್ಲಿಂ ಮಹಿಳೆ ಇನ್ನಷ್ಟು ಉನ್ನತ ಸ್ಥಾನಮಾನಗಳಿಗೆ ಏರಬೇಕಾಗಿದೆ.

೧೮. ಡಾ. ಶ್ರೀ ಶರಣ ಬಸವಪ್ಪ ಅಪ್ಪ

ಮಹಾದಾಸೋಹ ಪೀಠಾಧಿಪತಿಗಳು

ಶ್ರೀ ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ

ಸಂದರ್ಶನ ದಿನಾಂಕ : ೧೨.೧೧.೨೦೦೯, ಗುಲಬರ್ಗಾ

ಹೈದರಾಬಾದ್ ಕರ್ನಾಟಕ ಎನ್ನುವುದು ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿರುವುದರ ಜೊತೆಗೆ ಮಾನಸಿಕವಾಗಿ ಇದನ್ನು ಒಪ್ಪಿಕೊಳ್ಳುವಂತೆ ಮಾಡಲಾಗಿದೆ. ಇಲ್ಲಿನ ಹಿಂದುಳಿದಿದೆ ಎನ್ನಲು ಭೌಗೋಳಿಕ ಕಾರಣಗಳು ಇವೆ. ಇವಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯದ ನಂತರ ಆಳಿದ ಸರಕಾರಗಳು ಇಲ್ಲಿನ ಕೃಷಿ, ಕೈಗಾರಿಕೆಗೆ, ವ್ಯಾಪಾರ ಮುಂತಾದವುಗಳಿಗೆ ಪ್ರಾಮುಖ್ಯತೆ ನೀಡಿಲ್ಲ. ಇನ್ನು ಇಲ್ಲಿನ ರಾಜಕೀಯ ನಾಯಕರು ಒಂದಾಗಿ ಹೋರಾಟ ಮಾಡಿ ಈ ಪ್ರದೇಶದ ಅಭಿವೃದ್ಧಿಗೆ ಇಚ್ಛಾಶಕ್ತಿ ತೋರಿಸದಿರುವುದು ವಿಫಲತೆಗೆ ಇನ್ನೊಂದು ಕಾರಣವಾಗಿದೆ. ಈ ಪ್ರದೇಶಕ್ಕೆ ಬರುವ ಯಾವುದೇ ಕಾಮಗಾರಿಯ ಅನುಷ್ಠಾನಕ್ಕೆ ಸರಕಾರ ಮಂಜೂರು ಮಾಡುವ ಹಣವನ್ನು ಉಪಯೋಗಿಸದೆ ವಾಪಸ್ಸು ಹೋದ ಉದಾಹರಣೆಗಳಿವೆ. ಯಾರೇ ಮುಖ್ಯಮಂತ್ರಿಯಾದರೂ ಒಟ್ಟಾರೆ ರಾಜ್ಯದ ಎಲ್ಲಾ ಪ್ರದೇಶದ ಮೇಲೆ ದೃಷ್ಟಿಕೋನ ಹರಿಸಿ ಸಮಾನತೆ ಕಾಪಾಡಿಕೊಳ್ಳಬೇಕಾಗುತ್ತದೆ. ನಮ್ಮ ಜನಪ್ರತಿನಿಧಿಗಳು ಸಂಸತ್‌ನಲ್ಲಿ ಅಸೆಂಬ್ಲಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಇಲ್ಲಿಂದ ಆರಿಸಿ ಹೋದವರು ಈ ಭಾಗಕ್ಕಾಗಿ, ಇಲ್ಲಿನ ಜನರಿಗಾಗಿ ಕೆಲಸ ಮಾಡಬೇಕು.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶಿಕ್ಷಣದ ಸೌಲಭ್ಯದ ಕೊರತೆಯಿದೆ. ಸರಕಾರ ಮಾಡಬೇಕಿದ್ದ ಶಿಕ್ಷಣ ವ್ಯವಸ್ಥೆಯನ್ನು ಇಂದು ಖಾಸಗಿ ಸಂಸ್ಥೆಗಳು ಮಾಡುತ್ತಿವೆ. ಹೀಗಾಗಿ ಈ ಪ್ರದೇಶ ಸ್ವಲ್ಪಮಟ್ಟಿಗೆ ಶೈಕ್ಷಣಿಕವಾಗಿ ಬೆಳೆಯಲು ಕಾರಣವಾಗಿದೆ. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ನರ್ಸರಿಯಿಂದ ಪೋಸ್ಟ್ ಗ್ರಾಜುಯೇಟ್‌ವರೆಗೆ ಶಿಕ್ಷಣ ನೀಡಲಾಗುತ್ತಿದೆ. ಒಟ್ಟಾರೆ ೪೮ ಸಂಸ್ಥೆಗಳನ್ನು ನಾವು ನಡೆಸುತ್ತಿದ್ದೇವೆ. ಇಲ್ಲಿ ವಿದ್ಯಾಭ್ಯಾಸ ಪಡೆದು ಹೋದವರು ರಾಜ್ಯದ ಉನ್ನತ ಅಧಿಕಾರದಲ್ಲಿದ್ದಾರೆ. ಅನೇಕರು ವಿದೇಶಗಳಲ್ಲಿ ನೆಲೆಸಿದ್ದಾರೆ. ನಮ್ಮ ಇಚ್ಛೆ ಏನೆಂದರೆ, ಇಲ್ಲಿ ಕಲಿತವರು ಈ ಭಾಗದಲ್ಲೇ ಸೇವೆ ಸಲ್ಲಿಸಿದರೆ ಈ ಭಾಗ ಸ್ವಲ್ಪವಾದರೂ ಅಭಿವೃದ್ಧಿ ಆಗಲು ಸಾಧ್ಯವಾಗುತ್ತದೆ.

ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಸಮಾನತೆಗಳಿರುವುದು ಸಹಜ. ಈ ಅಸಮಾನತೆಯ ನಿವಾರಣೆಗೆ ಚಳವಳಿಗಳು ಆರಂಭವಾಗುತ್ತವೆ. ಆದರೆ, ಚಳವಳಿಯ ಉದ್ದೇಶ, ಗುರಿಗಳಲ್ಲಿ ಮೊದಲು ವಾಸ್ತವ ಜೀವನವನ್ನು, ಪ್ರಪಂಚವನ್ನು ಗ್ರಹಿಸಿಕೊಳ್ಳಬೇಕು. ನಾವು ನಡೆಯುತ್ತಿರುವ ಸಾಗುತ್ತಿರುವ, ಸಾಗಬೇಕಾದ ಹಾದಿಯು ಇನ್ನೊಬ್ಬರನ್ನು ತುಳಿದು ಅಥವಾ ಅವರಿಗೆ ನೋವುಂಟು ಮಾಡಿ ಸಾಗುವುದಲ್ಲ. ನಾವು ಸಮಾಜಕ್ಕೆ ಕೊಟ್ಟಿರುವುದು ಏನು ಎನ್ನುವುದು ಮೊದಲು, ಸಮಾಜದಿಂದ ನಾವು ಪಡೆಯಬೇಕಾಗಿರುವುದು ಏನು ಎನ್ನುವುದು ನಂತರದ ವಿಚಾರ. ಹಾಗಾಗಿ ಮೊದಲು ನೀವು ಸುಶಿಕ್ಷಿತರಾಗಿ, ಉತ್ತಮ ಶಿಕ್ಷಣ ಪಡೆಯಿರಿ, ಸುಸಂಸ್ಕೃತರಾಗಿ, ಇತರರಿಗೆ ಮಾದರಿಯಾಗಿ ನಿಮ್ಮನ್ನು ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬದಲಾಯಿಸಿಕೊಳ್ಳಿ. ಆಗ ಇದೇ ಸಮಾಜವೇ ನಿಮ್ಮನ್ನು

ಅನುಸರಿಸುತ್ತದೆ. ಆದರೆ ಇಂತಹ ಕಾರ್ಯ, ಪ್ರಕ್ರಿಯೆ ಇಂದಿನ ಚಳವಳಿಗಳಲ್ಲಿ ಆಗುತ್ತಿಲ್ಲ, ಕೇವಲ, ಟೀಕೆ, ದೋಷಾರೋಪ, ಒಬ್ಬರನ್ನು, ಒಂದು ವರ್ಗವನ್ನು ದೂಷಿಸುವದು ಚಳವಳಿಗಳ ಮಾರ್ಗವಾಗಿ ಬಿಟ್ಟಿದೆ.

ದಲಿತ, ಮಹಿಳಾ, ಕಾರ್ಮಿಕ, ರೈತ, ಹಿಂದುಳಿದ ಹೀಗೆ ಪ್ರತ್ಯೇಕವಾಗಿ ಚಳವಳಿಗಳು ನಡೆದರೂ ಇವುಗಳ ಫಲಿತಾಂಶ, ಆ ವರ್ಗಕ್ಕೆ ಮತ್ತು ಸಮಾನತೆ, ನ್ಯಾಯ, ಬದಲಾವಣೆ ತಂದುಕೊಡುವುದಾಗಿರದೆ, ಇಡೀ ಸಮಾಜದ ಎಲ್ಲಾ ವರ್ಗದ ಮಾನವ ಕುಲಕ್ಕೆ ಸತ್ಯ, ನ್ಯಾಯ ಅವಕಾಶಗಳು ತಂದು ಕೊಡುವಂತಿರಬೇಕು. ಅದೇ ನಿಜವಾದ ಸಾಮಾಜಿಕ ಚಳವಳಿ. ಪ್ರಸ್ತುತ ಸಾಮಾಜಿಕ ಚಳವಳಿಗಳು ತೀವ್ರವಾಗಿ ನಡೆಯುತ್ತಿಲ್ಲ ಮತ್ತು ಯಶಸ್ವಿಯಾಗುತ್ತಿಲ್ಲ ಎನ್ನುವುದು ನಿಜ. ಇದಕ್ಕೆ ಕಾರಣಗಳು ನಿರ್ದಿಷ್ಟವಾಗಿ ಇವು ಎಂದು ಗುರುತಿಸಲು ಆಗುವುದಿಲ್ಲ. ಬದಲಾಗಿ ಕೆಲವನ್ನು ಹೇಳಬಹುದು. ಇಂದು ಸಾಮಾಜಿಕ ಚಳವಳಿಗಳು ಸಾಮೂಹಿಕ ಅರ್ಥವನ್ನು ಕಳೆದುಕೊಂಡು, ಸಮಾಜದ ಹಿತಾಸಕ್ತಿಯ ಗುರಿಗಳನ್ನು ಈಡೇರಿಸುವಲ್ಲಿ ವಿಫಲವಾಗುತ್ತಿವೆ. ಒಂದು ಸಮೂಹದ ಬದಲಾಗಿ, ಜಾತಿಯ ಸಮಾಜವಾಗಿ ಬದಲಾಗುತ್ತಿದೆ. ಪ್ರತಿಯೊಂದು ಜಾತಿ ವರ್ಗಗಳು ಸಮಾಜದ ಹಿತಾಸಕ್ತಿಗಿಂತ ತಮ್ಮ ಹಿತಾಸಕ್ತಿಗೆ ಪ್ರಾಮುಖ್ಯತೆ ಕೊಡುತ್ತಿವೆ. ಹೀಗಾಗಿ ಆಯಾ ಜಾತಿ, ಜನಾಂಗದ ಸಮಸ್ಯೆಗಳು, ಹೋರಾಟಗಳು ಮುಖ್ಯವಾಗುತ್ತಿವೆಯೇ ಹೊರತು ಸಮಾಜದ ಸಮಸ್ಯೆಗಳು ಮುಖ್ಯವಾಗುತ್ತಿಲ್ಲ. ಎಲ್ಲಿಯವರೆಗೆ ಒಂದು ಸಮಾಜದ ಒಂದು ಹಿತಾಸಕ್ತಿಯ ಒಂದು ಉದ್ದೇಶದ ಕಲ್ಪನೆ ಬರುವುದಿಲ್ಲವೋ ಅಲ್ಲಿಯವರೆಗೆ ಸಾಮಾಜಿಕ ಚಳವಳಿಗಳು ಯಶಸ್ವಿಯಾಗುವುದಿಲ್ಲ ಮತ್ತು ಅದರ ಗುರಿ ಉದ್ದೇಶಗಳು ಈಡೇರುವುದಿಲ್ಲ.

ಆದರೂ ಹೈದರಾಬಾದ್ ಕರ್ನಾಟಕದ ವಿಶೇಷ ಗುಣವೇನೆಂದರೆ ಎಲ್ಲಾ ಜಾತಿಮತಗಳ ನಡುವೆ ಭಾವೈಕ್ಯತೆಯನ್ನು ಕಾಪಾಡಿಕೊಂಡು ಬಂದಿರುವ ನಾಡಿದು. ವಚನಕಾರರ ಕಾಲದಿಂದಲೂ ಭಾವೈಕ್ಯತಾ ಪರಂಪರೆ ಬಹಳ ವಿಶಿಷ್ಟವಾದುದು ಮತ್ತು ಬಲಿಷ್ಟವಾದುದು. ರಜಾಕಾರರ ವಿರುದ್ಧದ ಹೋರಾಟದ ಸಮಯದಲ್ಲಿ ಹಿಂದುಗಳು ಮತ್ತು ಮುಸ್ಲಿಂರು ಬಹಳ ಅನ್ಯೋನ್ಯವಾಗಿ ಒಬ್ಬರಿಗೊಬ್ಬರು ಸಹಾಯ ಮಾಡಿದ್ದಾರೆ ಮತ್ತು ಜೀವ ಉಳಿಸಿದ್ದಾರೆ. ಈ ಭಾಗದಲ್ಲಿ ಜಾತಿ ಮತ, ಮೇಲು ಕೀಳು ಎನ್ನುವ ಭಾವನೆಗಳನ್ನು ದಿಕ್ಕರಿಸಿ, ದೇವರ ಧರ್ಮದ ಹೆಸರಿನಲ್ಲಿ ಅಟ್ಟಹಾಸಗೈಯುತ್ತಾ ಶೋಷಣೆಗೆ ಕೈಹಾಕಿ ಸಮಾಜವನ್ನು ಕಲ್ಮಶಗೊಳಿಸಿದ್ದ ಶಕ್ತಿಗಳ ವಿರುದ್ಧ ಸೆಟೆದು ನಿಂತಿದ್ದು ಮಠಮಾನ್ಯಗಳು. ಧರ್ಮಗಳ ಒತ್ತಡದಲ್ಲಿ ಪರಕೀಯರ, ಮುಸ್ಲಿಂರ ಆಡಳಿತದಲ್ಲಿ ಜಾತಿಗಳ ಸಂಘರ್ಷದಲ್ಲಿ ಸಿಲುಕಿದ್ದಾಗ, ಪ್ರಭುತ್ವವು ಮತಧರ್ಮಗಳನ್ನು ಅಸ್ತ್ರ ಮಾಡಿಕೊಂಡು ಜನತೆಯನ್ನು ಒಡೆದು ಆಳಲು ಪ್ರಯತ್ನಿಸಿದಾಗಲೆಲ್ಲಾ ಈ ಭಾಗದ ಧಾರ್ಮಿಕ ಮುಖಂಡರು ಬಹು ದೊಡ್ಡ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ದೇವರು ಮತ್ತು ಧರ್ಮಗಳು ಪರಸ್ಪರ ಮನುಷ್ಯರನ್ನು ಜೋಡಿಸುವ ಭಾವಬಿಂದುಗಳೆಂದೂ, ಧರ್ಮ ಎಂದರೆ ಅಖಂಡ ಪ್ರೀತಿ ಎಂದು ಸಾರುವ ಮೂಲಕ ಇತರ ಮತೀಯರೊಂದಿಗೆ ಕೂಡಿ ಬದುಕುವ ಮೂಲಕ ಈ ಭಾಗದ ಜನತೆಯು ಧಾರ್ಮಿಕ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಂಡಿದ್ದಾರೆ. ಇಲ್ಲಿನ ಮಠಗಳು, ಮಸೀದಿಗಳು ಭಾವೈಕ್ಯಕತೆಯ ಜೀವಂತ ಸ್ಮಾರಕಗಳಾಗಿವೆ.

೧೯. ವೆನ್ನ ಆಂಧ್ರ ಅನಾಲಿಯೋ (ಬೌದ್ಧ ಗುರುಗಳು)

ಸಿದ್ಧಾರ್ಥ ಬುದ್ಧ ವಿಹಾರ, ಗುಲಬರ್ಗಾ

ಸಂದರ್ಶನ ದಿನಾಂಕ : ೨೫.೧೦.೨೦೦೯, ಗುಲಬರ್ಗಾ

ಬುದ್ಧವಿಹಾರದ ನಿರ್ಮಾಣವು ಡಾ. ಮಲ್ಲಿಕಾರ್ಜುನ ಖರ್ಗೆಯವರ ಒಂದು ಕನಸು. ಖರ್ಗೆಯವರ ಪ್ರಭಾವ ಅವರ ಆಸೆ-ಆಕಾಂಕ್ಷೆಗಳನ್ನು ಸಾಕಾರಗೊಳಿಸಲು ಗುಲಬರ್ಗಾವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಏಕೆಂದರೆ ಈ ಪ್ರದೇಶ ಅತೀ ಹೆಚ್ಚು ಶೋಷಿತರು, ನಿರ್ಲಕ್ಷಿತರು, ಬಡವರು, ನಿರಕ್ಷರಸ್ಥರು ಇರುವ ಪ್ರದೇಶವಾಗಿದೆ. ಹಾಗಾಗಿ ಅಸ್ಥಿರತೆಯ ಅಸಮಾನತೆ, ತಾರತಮ್ಯದ ನಿರ್ಲಕ್ಷ್ಯದ ಸ್ಥಾನಮಾನದಿಂದ ಇಲ್ಲಿನ ಜನರನ್ನು ಹೊರತರುವುದರ ನೆಮ್ಮದಿ ಬದುಕಿನ ಪ್ರಯತ್ನವಾಗಿ ಸ್ಥಾಪಿಸಲಾಗಿದೆ. ಹಾಗೆಯೇ ಬುದ್ಧನ ತತ್ವ, ಉದ್ದೇಶಗಳನ್ನು ಜನರಲ್ಲಿ ಮೂಡಿಸಿ ಅವರನ್ನು ಜಾತಿ ವರ್ಗದ ಸಂಕೋಲೆಗಳಿಂದ ಬಿಡುಗಡೆಗೊಳಿಸಿ ಶಾಂತಿಯ, ನೆಮ್ಮದಿಯ ಬದುಕನ್ನು ಇಲ್ಲಿನ ಜನರಲ್ಲಿ ಬೆಳೆಸಬೇಕು ಎನ್ನುವುದಾಗಿದೆ.

ಬುದ್ಧವಿಹಾರ ಎನ್ನುವುದು ಬೇರೆ ಧಾರ್ಮಿಕ ಸಂಸ್ಥೆ, ದೇವಾಲಯಗಳಿಗಿಂತ ಬಹಳ ಭಿನ್ನವಾಗಿದೆ. ಬುದ್ಧವಿಹಾರ ಎಂದರೆ ಇದು ಒಂದು ದೇವಾಲಯವು ಹೌದು, ಪವಿತ್ರ ಸ್ಥಳ, ಪ್ರಾರ್ಥನಾ ಮತ್ತು ಧ್ಯಾನ್ಯ ಮಂದಿರ ಹಾಗೂ ಭಿಕ್ಷುಗಳ ವಾಸಸ್ಥಳ ಮತ್ತು ಆಧ್ಯಾತ್ಮಿಕ ಅಧ್ಯಯನ ಕೇಂದ್ರವು ಆಗಿದೆ. ಇಲ್ಲಿ ಬೌದ್ಧ ಭಿಕ್ಷುಗಳಿಗಾಗಿ ವಿವಿಧ ರೀತಿಯ ಆಧ್ಯಾತ್ಮಕ ಶಿಬಿರಗಳನ್ನು, ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಹಾಗೆಯೇ ಜನಸಾಮಾನ್ಯರಿಗಾಗಿ ಕೆಲವೊಂದು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಬೌದ್ಧ ಧರ್ಮವಾಗಿರಲಿ, ಬುದ್ಧ ವಿಹಾರವಾಗಿರಲಿ ಅಥವಾ ಯಾವುದೇ ಧರ್ಮ ಸಂಸ್ಥೆಗಳ ಮೂಲ ಉದ್ದೇಶ, ಧರ್ಮ ಮತ್ತು ಸಮಾಜದ ಸುಧಾರಣೆ. ಧರ್ಮವನ್ನು ಬಿಟ್ಟು ಸಮಾಜವಿಲ್ಲ, ಸಮಾಜವನ್ನು ಬಿಟ್ಟು ಧರ್ಮವಿಲ್ಲ. ಹಾಗಾಗಿ ಎಲ್ಲಿ ಧಾರ್ಮಿಕ ಸುಧಾರಣಾ ಕಾರ್ಯ ನಡೆಯುತ್ತದೆಯೋ ಅಲ್ಲಿ ಪರೋಕ್ಷವಾಗಿ ಸಮಾಜದ ಸುಧಾರಣಾ ಕಾರ್ಯ ನಡೆದಿರುತ್ತದೆ. ಪ್ರತಿಯೊಂದು ಧರ್ಮ ಸಂಸ್ಥೆಗಳು ಸಮಾಜದ ಅಸಮಾನತೆ, ಶೋಷಣೆ ದೌರ್ಜನ್ಯ ದಾರಿದ್ರ್ಯಗಳನ್ನು ಕಿತ್ತುಹಾಕಿ ಆರೋಗ್ಯಯುತವಾದ, ಶಾಂತಿಯುತವಾದ ಸಹಬಾಳ್ವೆಯ ಸಮಾಜವನ್ನು ರೂಪಿಸುವ ಗುರಿ ಹೊಂದಿರುತ್ತವೆ. ಹಾಗಾಗಿಯೇ ಅನೇಕ ಸಂದರ್ಭಗಳಲ್ಲಿ ಧಾರ್ಮಿಕ-ಸಾಮಾಜಿಕ ಸುಧಾರಣಾ ಚಳವಳಿ ಎಂದು ಒಟ್ಟಾಗಿಯೇ ಹೇಳಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಕಂಡು ಬರುತ್ತಿರುವ ಮತಾಂತರದ ಬಗ್ಗೆ ಹೇಳಬೇಕೆಂದರೆ ಇದು ಶತಶತಮಾನಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿರುವ ಪ್ರಕ್ರಿಯೆಯಾಗಿದೆ. ಇಂದು ಮತಾಂತರವು ಕೆಲವು ಕಡೆ ಸ್ವಹಿತಾಸಕ್ತಿಯಿಂದ ಆದರೆ ಇನ್ನು ಕೆಲವು ಕಡೆ ಒತ್ತಾಯ ಪೂರ್ವಕವಾಗಿ, ಆಸೆ ಆಮಿಷಗಳಿಗೆ ಬಲಿಯಾಗಿ, ಅಧಿಕಾರ ಸ್ಥಾನಮಾನದ ಆಸೆಯಿಂದ ಆಗುತ್ತಿರುವುದು ಕಂಡು ಬರುತ್ತದೆ. ಆದರೆ ಇತ್ತೀಚಿನ ಶತಮಾನದಲ್ಲಿ ಆಗುತ್ತಿರುವ ಮತಾಂತರವು ಆರೋಗ್ಯಪೂರ್ಣ ಮತ್ತು ಅರ್ಥಪೂರ್ಣವಾಗಿಲ್ಲ. ನನ್ನ ಅನುಭವದಂತೆ ಈ ಪ್ರದೇಶದಲ್ಲಿ ಕೆಳವರ್ಗದ ಅನೇಕರು ಕ್ರೈಸ್ತಧರ್ಮ

ಮತ್ತು ಬೌದ್ಧಧರ್ಮಕ್ಕೆ ಮತಾಂತರವಾಗುತ್ತಿದ್ದಾರೆ. ಅವರ ಉದ್ದೇಶ ಏನಾಗಿದೆಯೆಂದರೆ ತಮ್ಮ ಕೆಳಜಾತಿಯ ಐಡೆಂಟಿಟಿಯನ್ನು ಕಳೆದುಕೊಂಡು ಸ್ವಲ್ಪ ಉನ್ನತ ಜಾತಿಯ ಐಡೆಂಟಿಟಿಯನ್ನು ಪಡೆಯುವುದಾಗಿದೆ. ಇವತ್ತಿಗೂ ಅನೇಕರು ಬೇರೆ ಧರ್ಮಗಳಿಗೆ ಮತಾಂತರವಾಗುತ್ತಿರುವುದು ಇದೇ ಕಾರಣಕ್ಕೆ. ಸಮಾಜದಲ್ಲಿ ಕೆಳಜಾತಿಯವನೆಂದು ಗುರುತಿಸಿಕೊಳ್ಳಲು ಹಿಂಜರಿದು ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯುವ ಉದ್ದೇಶದಿಂದ ಮೂಲ ಜಾತಿಯನ್ನು ಬಿಟ್ಟು ಬೇರೆ ಉನ್ನತಿ ಜಾತಿಗೆ ಮತಾಂತರವಾಗುತ್ತಿದ್ದಾರೆ.

ಸಾಮಾಜಿಕ ಸಮಾನತೆ ಎನ್ನುವುದು ಪ್ರಾಚೀನ ಕಾಲದಿಂದ ಮಾನವರು ಎದುರಿಸುತ್ತಿರುವ ಒಂದು ಮೂಲಭೂತ ಸಮಸ್ಯೆ. ಮಾನವನ ಹೋರಾಟಗಳು ನಡೆಯುತ್ತಿರುವುದೇ ಈ ಸಾಮಾಜಿಕ ಸಮಾನತೆಗಾಗಿ. ಅಸಮಾನತೆಯ ಸಮಾಜವನ್ನು ಕಿತ್ತುಹಾಕಲು ನಾನಾ ವಿಧವಾದ ಹೋರಾಟಗಳು, ಪ್ರಯತ್ನಗಳು ನಡೆಯುತ್ತಿವೆ. ಅಂತಹ ಪ್ರಯತ್ನಗಳಲ್ಲಿ ಬುದ್ಧವಿಹಾರದ ಪ್ರಯತ್ನವು ಒಂದು. ಇನ್ನು ಸಾಮಾಜಿಕ ಅಸಮಾನತೆ ಎನ್ನುವುದು ಸಮುದ್ರ ಇದ್ದ ಹಾಗೆ. ಅದು ಎಲ್ಲಿದೆ ಯಾವ ಪ್ರಮಾಣದಲ್ಲಿದೆ ಎನ್ನುವುದನ್ನು ಪತ್ತೆ ಹಚ್ಚುವುದು ಕಷ್ಟ. ಹಾಗಾಗಿ ಕೆಲವೊಂದು ವ್ಯಾಪ್ತಿಯೊಳಗೆ ಕೆಲವೊಂದು ಕಾರ್ಯಕ್ರಮಗಳು, ಯೋಜನೆಗಳ ಮೂಲಕ ಸಾಮಾಜಿಕ ಸಮಾನತೆಯನ್ನು ಸ್ಥಾಪಿಸಲು ಕಾರ್ಯತತ್ಪರವಾಗಿದ್ದೇವೆ.

೨೦. ಶ್ರೀ ಫಾದರ್ ಆಂತೋನಿ ಫರ್ನಾಂಡೀಸ್

'ಸೇಕ್ರೆಡ್ ಹಾರ್ಟ್ ಚರ್ಚ್'

ಸಂದರ್ಶನ ದಿನಾಂಕ : ೨೦.೦೫.೨೦೧೨, ಹೊಸಪೇಟೆ

ಹೈದರಾಬಾದ್ ಕರ್ನಾಟಕ ಭಾಗದ ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿಯ ಚರ್ಚ್‌ಗಳಲ್ಲಿ ಸುಮಾರು ೨೫ ವರ್ಷಗಳಿಂದ ಧಾರ್ಮಿಕ ಕೆಲಸ ಮಾಡುತ್ತಾ ಪ್ರಸ್ತುತ ಹೊಸಪೇಟೆಯ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಈಗ ೨ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನನ್ನ ಎಲ್ಲಾ ಸೇವೆಯನ್ನು ಈ ಭಾಗದಲ್ಲಿ ಮಾಡಿರುವುದರಿಂದ ನನ್ನ ಅನುಭವಕ್ಕೆ ಬಂದಂತೆ ನಾನು ನೋಡಿದಂತೆ ಇಡೀ ಕರ್ನಾಟಕದಲ್ಲಿಯೇ ಬಹಳ ಹಿಂದುಳಿದಿರುವಂತಹ, ಅಸಮಾನತೆಗೆ ಒಳಗಾಗಿರುವಂತಹ ಭಿನ್ನವಾಗಿ ರುವಂತ ಪ್ರದೇಶ ಹೈದರಾಬಾದ್ ಕರ್ನಾಟಕವಾಗಿದೆ. ಇಲ್ಲಿನ ಜನರು ಅನುಭವಿಸುತ್ತಿರುವ ಬಡತನ ಅನಕ್ಷರತೆ ಇನ್ನೂ ಅನೇಕ ರೀತಿಯ ಸಮಸ್ಯೆಗಳನ್ನು ಬೇರೆ ಇನ್ಯಾವ ಪ್ರದೇಶಗಳು ಅನುಭವಿಸುತ್ತಿಲ್ಲ ಎಂದೇ ಹೇಳಬಹುದು. ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಜನರು ಒಂದು ಹೊತ್ತಿನ ಊಟಕ್ಕೂ ಪರದಾಡಬೇಕಾದ ಸ್ಥಿತಿಯಿದೆ. ಇಲ್ಲಿನ ಭೌಗೋಳಿಕತೆ, ರಾಜಕಾರಣಿಗಳ ನಿರ್ಲಕ್ಷ್ಯದಿಂದ ಜನ ತೀರಾ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅವರ ನೋವುಗಳನ್ನು, ಸಂಕಟಗಳನ್ನು, ಕಷ್ಟಗಳನ್ನು ಅವರ ಕಣ್ಣುಗಳು ಮತ್ತು ನಿಶ್ಯಕ್ತ ದೇಹಗಳು ಹೇಳುತ್ತವೆ. ಇಲ್ಲಿನ ಮಕ್ಕಳು ಶಾಲೆಗಳಿಗೆ ಹೋಗದೆ ಹೊಟ್ಟೆಪಾಡಿಗಾಗಿ ಕೂಲಿ ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿಯಿದೆ. ಪ್ರತಿದಿನ ಈ ಭಾಗದಿಂದ ನೂರಾರು ಜನ ಗುಳೆ ಹೋಗುವುದು ದಿನನಿತ್ಯ ಕಂಡು ಬರುತ್ತದೆ. ಇಲ್ಲಿನ ಸ್ಥಿತಿಗತಿಗಳು ಇಲ್ಲಿನವರಿಗೆ ಮತ್ತು ಅನುಭವಿಸಿದವರಿಗೆ ಮಾತ್ರ ಅರಿವಾಗುತ್ತದೆಯೆ ಹೊರತು ಅದನ್ನು ಹೇಳುವುದು ಬಹಳ ಕಷ್ಟ ಮತ್ತು ಹೇಳುತ್ತಾ ಹೋದರೆ

ಅವು ಮುಗಿಯುವುದೇ ಇಲ್ಲ. ಇತ್ತೀಚಿಗಂತೂ ಜಾತೀಯತೆ ರಾಜಕೀಯ ಸ್ವಹಿತಾಸಕ್ತಿ, ವ್ಯಕ್ತಿಗಳ ಸ್ವಹಿತಾಸಕ್ತಿಯಿಂದ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ.

ಇಂತಹ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಜನರನ್ನು ಅವರ ಸ್ಥಿತಿಗತಿಗಳನ್ನು ಸುಧಾರಿಸಲು ಅವರಲ್ಲಿ ಸಾಮರಸ್ಯದ ತತ್ವಗಳನ್ನು ಬೋಧಿಸುತ್ತಾ ಅವರಲ್ಲಿ ಪರಿವರ್ತನೆ ತರಲು ಮಠಗಳು, ಮಸೀದಿಗಳು, ಚರ್ಚ್‌ಗಳು ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ಸಾಮಾಜಿಕ ಸುಧಾರಣೆಯಲ್ಲಿ ಚರ್ಚ್‌ಗಳ ಪಾತ್ರ ಹೇಳಬೇಕೆಂದರೆ, ಚರ್ಚ್‌ಗಳು ಮನುಷ್ಯ ಮನುಷ್ಯನನ್ನು ಪ್ರೀತಿಸುವ, ಗೌರವಿಸುವ, ಸಹಕರಿಸುವ ರೀತಿಯಲ್ಲಿ ನೀತಿಬೋಧನೆಯ ಜೊತೆಗೆ ಶಿಕ್ಷಣ ನೀಡುವಲ್ಲಿ ನಿರತವಾಗಿವೆ. ಹಾಗೆಯೇ ಪ್ರತಿಯೊಬ್ಬರು ಅಭಿವೃದ್ಧಿಯಾಗಬೇಕು ತಮಗಿಂತ ಕನಿಷ್ಟ ಮಟ್ಟದಲ್ಲಿ ಯಾರಿದ್ದಾರೋ ಅವರನ್ನು ಮೇಲಕ್ಕೆತ್ತಬೇಕು, ನಾವು ಮಾಡುವ ಎಲ್ಲಾ ಕಾರ್ಯಗಳು ಅಂದರೆ ಅಭಿವೃದ್ಧಿ, ಸಮಾಜ ಸೇವೆ, ಬಡವರ ಸೇವೆ, ರೋಗಿಗಳ ಶುಶ್ರೂಷೆ, ಕಷ್ಟದಲ್ಲಿದ್ದವರನ್ನು, ಕೆಳಮಟ್ಟದಲ್ಲಿದ್ದವರನ್ನು ಮೇಲಕ್ಕೆತ್ತಬೇಕೆಂಬ ಉದ್ದೇಶ ಇಟ್ಟುಕೊಂಡು ಚರ್ಚ್‌ಗಳು ಕಾರ್ಯನಿರ್ವಹಿಸುತ್ತಿವೆ.

ಚರ್ಚ್‌ಗಳು ಬಡವರ ಬಗ್ಗೆ ಕೆಳವರ್ಗದವರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತವೆ. ಬಡವರನ್ನು ಮೇಲೆತ್ತಿದರೆ ಅದು ದೇವರ ಸೇವೆ ಮಾಡಿದ ಹಾಗೆ. ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಅತೀ ಹೆಚ್ಚು ಬಡವರಿದ್ದಾರೆ, ಅನಕ್ಷರಸ್ಥರಿದ್ದಾರೆ ಹಾಗೆಯೇ ಹೆಚ್ಚು ಜಾತಿ ಭೇದ ಇದೆ. ನಾವು ನಮ್ಮ ಸೇವೆಯನ್ನು ಹೆಚ್ಚಾಗಿ ಸಮಾಜದಲ್ಲಿ ಯಾರು ಕೆಳಮಟ್ಟದಲ್ಲಿದ್ದಾರೆ, ಶಿಕ್ಷಣದಲ್ಲಿ ಹಿಂದುಳಿದಿದ್ದಾರೆಯೋ ಅವರಿಗೆ ನಾವು ಹೆಚ್ಚಿನ ಮಹತ್ವ ಕೊಟ್ಟಿದ್ದೇವೆ. ನಮ್ಮ ಶಾಲೆಗಳಲ್ಲಿ ನಲವತ್ತರಿಂದ ಐವತ್ತರಷ್ಟು ಸೀಟುಗಳನ್ನು ಇವರಿಗೆ ನೀಡುತ್ತೇವೆ ಮತ್ತು ಇಂತವರು ಇದರ ಅನುಕೂಲ ಪಡೆದು ಒಳ್ಳೆಯ ಸ್ಥಿತಿಗತಿಗಳಿಗೆ ತಲುಪಿದ್ದಾರೆ.

ಹೈದರಾಬಾದ್ ಕರ್ನಾಟಕದ ಬಡತನ, ಹಿಂದುಳಿದಿರುವಿಕೆ ಅಸಮಾನತೆ ಮುಂತಾದ ಸಮಸ್ಯೆಗಳನ್ನು ಬದಲಾಯಿಸಲು ಸರಕಾರಗಳು ಪ್ರಯತ್ನ ಮಾಡುತ್ತಿವೆ. ಆದರೆ ಇದರಿಂದಲೇ ಏಕಾಏಕಿ ಅಭಿವೃದ್ಧಿ ಸಾಧ್ಯವಿಲ್ಲ. ಹೀಗಾಗಿ ಮಠಗಳು, ಚರ್ಚ್‌ಗಳು, ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು. ಆದರೆ 'ಬೇಡುವ ಕೈಗಳಿಗಿಂತ ನೀಡುವ ಕೈಗಳು ಶ್ರೇಷ್ಠ'. ಒಬ್ಬರು ಕೊಡುತ್ತಾ ಹೋದರೆ ಇನ್ನೊಬ್ಬರು ಕೈಚಾಚುತ್ತಾ ಹೋಗುತ್ತಾರೆ, ಇದು ನಿಲ್ಲಬೇಕು. ಉದಾಹರಣೆಗೆ ಸರಕಾರದ ಯೋಜನೆಗಳು ಬಹಳಷ್ಟಿವೆ. ಅದು ಕೊಡುತ್ತಾ ಹೋದಂತೆ ಜನ ಅದಕ್ಕೆ ಒಗ್ಗಿಕೊಂಡು ಬಿಟ್ಟಿದ್ದಾರೆ ಮತ್ತು ಇದು ಯಾವಾಗಲೂ ಸಿಗುತ್ತಿರಬೇಕು ಎಂದು ಬಯಸುತ್ತಾರೆ. ಈ ರೀತಿ ದುರುಪಯೋಗ ಆಗಬಾರದು. ಜನರಿಗೆ ಕೊಡುವುದನ್ನು ಕಲಿಸಿದರೆ ಅವರು ಬೇಡುವುದನ್ನೇ ಕಲಿಯುತ್ತಾರೆ. ಬದಲಾಗಿ ಇದು ಒಂದು ಹಂತದವರೆಗೆ ಮಾತ್ರ ಆಗಬೇಕು.

ಒಟ್ಟಿನಲ್ಲಿ ಪ್ರಸ್ತುತ ಸಮಾಜದಲ್ಲಿ ಬಡವರ, ದಲಿತರ, ಕೆಳವರ್ಗದವರ, ಅನಾಥರ ಬದುಕಿನಲ್ಲಿ ಬದಲಾವಣೆ ತರುವ ಹಾಗೂ ಸತ್ತಂತೆ ಜೀವಿಸುತ್ತಿರುವ ಅವರನ್ನು ಸಮಾಜದ ಬಹುಮುಖಿಗೆ ತರುವ,

ಜೀವನದ ಸಂತಸವನ್ನು ಅನುಭವಿಸುವ ರೀತಿಯಲ್ಲಿ ಅವರಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಿರುವುದು ಚರ್ಚ್‌ಗಳು ಮತ್ತು ಇತರ ಧರ್ಮ ಸಂಸ್ಥೆಗಳು. ನಿಜವಾಗಿಯೂ ಇವು ನಿಸ್ವಾರ್ಥತೆಯಿಂದ ಕಾರ್ಯ ನಿರ್ವಹಿಸುತ್ತಿವೆ. ಇಂದಿನ ಸಂದರ್ಭದಲ್ಲಂತೂ ಹೆಚ್ಚಿನ ರೀತಿಯಲ್ಲಿ ಈ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕಾಗಿದೆ. ಅಂದರೆ ಸಮಾಜದ ಪರಿವರ್ತನೆಯ ಹಾದಿಯಲ್ಲಿ ಇವು ಕಾರ್ಯನಿರ್ವಹಿಸಬೇಕೇ ಹೊರತು ರಾಜಕೀಯ, ಜಾತಿ ಧರ್ಮಗಳಿಗೆ ಸೀಮಿತವಾಗಬಾರದು. ಸಮಾಜದ ಓರೆಕೋರೆಗಳನ್ನು ತಿದ್ದುವ ಮಹತ್ಕಾರ್ಯಕ್ಕೆ ಇವು ಮುಂದಾಗಬೇಕು. ಏಕೆಂದರೆ ಇಂತಹ ಕಾರ್ಯವನ್ನು ಮಾಡಲು ಬೇರೆಯವರಿಂದ ಸಾಧ್ಯವಿಲ್ಲ.

ಇದೇ ಸಮಯದಲ್ಲಿ ಸರಕಾರವು ಸಮಾಜದಲ್ಲಿ ಸಮಾನತೆ ನೆಲೆಸಬೇಕಾದಂತ, ದುಡಿಯುವ ಜನರಿಗೆ ಸೌಲಭ್ಯ ಒದಗಿಸುವ ರೈತರಿಗೆ, ದೀನ ದಲಿತರಿಗೆ, ಕಾರ್ಮಿಕರಿಗೆ ಒಂದು ಭದ್ರತೆ, ಸಮಾನ ಕೂಲಿ ಸೌಕರ್ಯ ಆಶ್ರಯ ನೀಡಲು ಕ್ರಮಕೈಗೊಳ್ಳಬೇಕು. ಶ್ರೀಮಂತ ಮತ್ತು ಬಡವರ ನಡುವಿನ ತಾರತಮ್ಯ ಹೋಗಬೇಕು ಆಗ ಮಾತ್ರ ಸಮಾಜ ಅಭಿವೃದ್ಧಿ ಆಗಲು ಸಾಧ್ಯವಾಗುತ್ತದೆ.

೨೧. ಶ್ರೀ ರಾಜು ಜೈನ್

ಜೈನ ಸಮುದಾಯ ಮುಖಂಡರು

ಸಂದರ್ಶನ ದಿನಾಂಕ : ೨೨.೦೧.೨೦೧೨ ಕೊಟ್ಟೂರು

ಹೈದರಾಬಾದ್ ಕರ್ನಾಟಕ ಪ್ರದೇಶವು ಕರ್ನಾಟಕದಲ್ಲಿಯೇ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪ್ರದೇಶವಾಗಿದೆ. ಹೀಗಾಗಿ ಇಲ್ಲಿ ಬಡತನ, ಹಿಂದುಳಿದಿರುವಿಕೆ ಸಾಮಾನ್ಯವಾಗಿದೆ. ಪ್ರತಿಯೊಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಭೌಗೋಳಿಕತೆ ಮತ್ತು ರಾಜಕೀಯ ಬೆಳವಣಿಗೆಗಳನ್ನು ಅವಲಂಬಿಸಿರುತ್ತದೆ. ಹಾಗೆಯೇ ಹೈದರಾಬಾದ್ ಕರ್ನಾಟಕದ ಸ್ಥಿತಿಗತಿಗಳಿಗೆ ಇಲ್ಲಿನ ಭೌಗೋಳಿಕತೆ ಪ್ರಧಾನ ಪಾತ್ರ ವಹಿಸುತ್ತದೆ. ಇಲ್ಲಿನ ರಾಜಕೀಯ ಬದಲಾವಣೆಗಳು ವಿವಿಧ ಭಾಷೆ, ಸಂಸ್ಕೃತಿ ಹಾಗೂ ಧರ್ಮಗಳ ಪ್ರಭಾವದಿಂದ ಬಹಳ ವಿಭಿನ್ನವಾದ ಸಂಸ್ಕೃತಿ ಇಲ್ಲಿ ಕಂಡು ಬರುತ್ತದೆ. ಆದರೆ ಇಷ್ಟೆಲ್ಲಾ ವಿಭಿನ್ನತೆ ಇದ್ದರೂ ಈ ಪ್ರದೇಶ ಇಂದಿಗೂ ಸಾಮಾಜಿಕ ಮತ್ತು ಧಾರ್ಮಿಕ ಸಾಮರಸ್ಯಕ್ಕೆ ಹೆಸರಾಗಿದೆ. ಅದರಲ್ಲೂ ಇಲ್ಲಿನ ಮಠಗಳು, ಮಸೀದಿಗಳು, ಚರ್ಚ್‌ಗಳು ಈ ನಿಟ್ಟಿನಲ್ಲಿ ಬಹಳ ಕ್ರಿಯಾಶೀಲವಾಗಿವೆ. ಇಂದಿಗೂ ಈ ಭಾಗದಲ್ಲಿ ಶಾಂತಿ, ಸಾಮರಸ್ಯ ನೆಲೆಗೊಂಡಿದ್ದರೆ ಅದಕ್ಕೆ ಕಾರಣವೇ ಧಾರ್ಮಿಕ ಸಂಸ್ಥೆಗಳು.

ಈ ಪ್ರದೇಶದಲ್ಲಿ ಬಹಳ ಹಿಂದಿನಿಂದ ಯಾದಗಿರಿ, ಸೇಡಂ ಸುತ್ತಮುತ್ತ ಜೈನ ಕೇಂದ್ರಗಳು ನೆಲೆಗೊಂಡಿದ್ದವು. ಹಾಗಾಗಿ ಇಲ್ಲಿನ ಎಲ್ಲಾ ಪಟ್ಟಣಗಳಲ್ಲಿ ಇಂದು ಜೈನರು ನೆಲೆಸಿದ್ದಾರೆ. ಜೈನರು ತಮ್ಮದೇ ಆದ ಭಾಷೆ, ಸಂಸ್ಕೃತಿ ಹೊಂದಿದ್ದರೂ, ಅಲ್ಪಸಂಖ್ಯಾತರಾದರೂ ಎಂದಿಗೂ ಅವರು ಸಮಾಜಕ್ಕೆ

ಸಮಸ್ಯೆಯಾಗಿಲ್ಲ ಮತ್ತು ಜಾತಿ ಕಲಹಕ್ಕೆ ಕಾರಣವಾಗಿಲ್ಲ. ಬದಲಾಗಿ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ಸಮನ್ವಯತೆ ಮತ್ತು ಏಳಿಗೆಯಲ್ಲಿ ಜೈನರು ಮತ್ತು ಜೈನ ದೇವಾಲಯಗಳು ಬಹು ಪ್ರಮುಖ ಪಾತ್ರವಹಿಸುತ್ತಿವೆ. ಜೈನರು ಅಹಿಂಸಾವಾದಿಗಳು, ಶಾಂತಿ ಪ್ರಿಯರು ಹಾಗೂ ಇವುಗಳನ್ನು ಕಡ್ಡಾಯವಾಗಿ ಅನುಸರಿಸುತ್ತಿರುವವರಾಗಿದ್ದಾರೆ. ಜೈನರು ಪ್ರತಿಯೊಂದು ಪಟ್ಟಣಗಳಲ್ಲೂ ವಾಸಿಸುತ್ತಿದ್ದು ಸತತ ದುಡಿಮೆ, ಸ್ವಪ್ರಯತ್ನದಿಂದ ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ ಇವರಿಂದ ಎಂದಿಗೂ ಅಶಾಂತಿ, ಗಲಾಟೆ ತಲೆದೋರಿಲ್ಲ. ನಮ್ಮ ಸಮುದಾಯವು ಹೆಚ್ಚಾಗಿ ಸರಕಾರದ ಯೋಜನೆಗಳ ಮೇಲೆ ಸಹಾಯದ ಮೇಲೆ ಅವಲಂಬಿತರಾಗದೆ, ತಮ್ಮ ಸ್ವಸಾಮರ್ಥ್ಯ ವೃತ್ತಿನಿರತೆಯಿಂದ ಏಳಿಗೆ ಹೊಂದುತ್ತಿದ್ದಾರೆ. ಇದರ ಜೊತೆಗೆ ಜೈನ ದೇವಾಲಯಗಳು ಕೇವಲ ಧರ್ಮ, ನೀತಿ ಬೋಧನೆಗೆ ಸೀಮಿತವಾಗದೆ, ಸಮಾಜದ ಏಳಿಗೆಗೆ ಬೇಕಾದ ದಾನ ಧರ್ಮ ಮಾಡುತ್ತಾ, ವಿವಿಧ ವರ್ಗಗಳಿಗೆ ಆರ್ಥಿಕ ಸಹಾಯ ಮಾಡುತ್ತಾ, ಬಡವರಿಗಾಗಿ ಉಚಿತ ಚಿಕಿತ್ಸಾ ಶಿಬಿರಗಳು, ನೇತ್ರ ಶಸ್ತ್ರ ಚಿಕಿತ್ಸೆ, ರಕ್ತದಾನ ಮುಂತಾದ ಕಾರ್ಯಗಳನ್ನು ಮಾಡುತ್ತಾ ಸಮಾಜದ ಮತ್ತು ಬಡವರ್ಗದ ಏಳಿಗೆಗೆ ಕೈ ಜೋಡಿಸುತ್ತಿವೆ.

ಸಮಾಜದ ಅಭಿವೃದ್ಧಿ ಎಂದರೆ ಅದು ಕೇವಲ ಒಬ್ಬ ವ್ಯಕ್ತಿ ಅಥವಾ ಸರಕಾರ, ಸಂಸ್ಥೆಯಿಂದ ಆಗುವಂತದ್ದಲ್ಲ. ಅದಕ್ಕೆ ಎಲ್ಲರ ಸಹಕಾರ ಪ್ರಯತ್ನ ಬೇಕು. ಅದರಲ್ಲೂ ಮಠಮಾನ್ಯಗಳ ಕೊಡುಗೆ ಮತ್ತು ಪ್ರಭಾವ ಬಹಳ ಮುಖ್ಯವಾಗಿದೆ. ಏಕೆಂದರೆ ಇಡೀ ಸಮಾಜದ ಜನರನ್ನು ನಿಯಂತ್ರಿಸುವ ಅವರನ್ನು ಬದಲಾಯಿಸುವ ಸಾಮರ್ಥ್ಯ ಇವುಗಳಿಗಿದೆ. ಸರಕಾರದಿಂದ, ಕಾನೂನಿನಿಂದ ನಿಯಂತ್ರಿಸಲಾಗದ, ಬದಲಾಯಿಸಲಾಗದ ಕೆಲವು ಪದ್ಧತಿಗಳನ್ನು ಮಠಮಾನ್ಯಗಳು ಬದಲಾಯಿಸುವ ನಿಯಂತ್ರಿಸುವ ಶಕ್ತಿ ಹೊಂದಿವೆ. ಹೀಗಾಗಿ ಸಮಾಜದ ಎಲ್ಲಾ ವರ್ಗದವರನ್ನು ಸಮಾನವಾಗಿ ಕಾಣುತ್ತಾ, ಎಲ್ಲರನ್ನು ಗಣನೆಗೆ ತೆಗೆದುಕೊಂಡು ಎಲ್ಲರ ಅಭಿವೃದ್ಧಿಗೆ ಪೂರಕವಾದಂತಹ ಕಾರ್ಯಗಳನ್ನು ಇವು ನಿರ್ವಹಿಸಬೇಕು ಮತ್ತು ನಿರ್ವಹಿಸುತ್ತಿವೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಡಿಮೆ ಮಳೆ, ಅತಿಯಾದ ಬಿಸಿಲು ಇರುವುದರಿಂದ ಕೃಷಿ ಅಭಿವೃದ್ಧಿ ಆಗುತ್ತಿಲ್ಲ, ಜನ ಬಡತನದಿಂದ ತಮ್ಮ ಭೂಮಿಗಳನ್ನು ಮಾರಿ ಬೇರೆ ಕಡೆ ವಲಸೆ ಹೋಗುತ್ತಿದ್ದಾರೆ. ಹೀಗಾಗಿ ಕೃಷಿಗೆ ಹಿನ್ನಡೆಯಾಗುತ್ತಿದೆ. ಬೇರೆ ಸ್ವಂತ ಉದ್ಯೋಗ ಮಾಡುವಷ್ಟು ಶ್ರೀಮಂತರು ಇವರಲ್ಲ. ಇಲ್ಲಿನ ಜನರಿಗೆ ಒಂದು ರೀತಿಯ ಅಭದ್ರತೆ ಸದಾ ಕಾಡುತ್ತಿದೆ. ಅತೀ ಹೆಚ್ಚು ರೈತರು ತಮ್ಮ ಭೂಮಿಗಳನ್ನು ಮಾರಿಕೊಂಡು ಬೇರೆ ಕಡೆ ವಲಸೆ ಹೋಗುತ್ತಾರೆ. ಕೃಷಿ ಜಮೀನುಗಳು ಮನೆಗಳ ನಿವೇಶನಗಳಾಗಿ ಬದಲಾಗುತ್ತಿವೆ ಮತ್ತು ಸರಕಾರ ಜಾರಿಗೆ ತರುತ್ತಿರುವ ಯಾವುದೇ ಯೋಜನೆಗಳು ಪರಿಣಾಮಕಾರಿಯಾಗಿ ಜನರಿಗೆ ತಲುಪುತ್ತಿಲ್ಲ. ಈ ನಿಟ್ಟಿನಲ್ಲಿ ಇಲ್ಲಿನ ಜನ ಪ್ರತಿನಿಧಿಗಳು ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳಬೇಕು, ಮಠಗಳು, ಸಂಘಸಂಸ್ಥೆಗಳು ಇನ್ನು ಹೆಚ್ಚು ಕ್ರಿಯಾಶೀಲವಾಗಬೇಕು

ಜೊತೆಗೆ ಜನರು ಸ್ವಲ್ಪ ಬದಲಾವಣೆಯ ದಾರಿಯನ್ನು ತುಳಿದು ತಮ್ಮ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ ಕೈಜೋಡಿಸಬೇಕು. ಆಗ ಮಾತ್ರ ಈ ಪ್ರದೇಶದ ಜನರ ಬದುಕಿನಲ್ಲಿ ಬದಲಾವಣೆಯಾಗಿ ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ.

೨೨. ಡಾ. ಅಮರೇಶ ನುಗಡೋಣಿ

ಸಹಪ್ರಾಧ್ಯಾಪಕರು, ಕಥೆಗಾರರು ಹಾಗೂ ಸಾಂಸ್ಕೃತಿಕ ಚಿಂತಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸಂದರ್ಶನ ದಿನಾಂಕ : ೨೦.೦೯೨೦೧೧, ಹೊಸಪೇಟೆ

ಸ್ವಾತಂತ್ರ್ಯಪೂರ್ವದ ಕೊನೆಯ ಎರಡೂವರೆ ದಶಕಗಳ ಅವಧಿಯಲ್ಲಿ ಆಳಿದ ನಿಜಾಮರ ಅಧೀನದ ಕರ್ನಾಟಕ ಪ್ರದೇಶವು 'ಹೈದರಾಬಾದ್ ಕರ್ನಾಟಕ' ಎಂದು ಕರೆಸಿಕೊಂಡಿದೆ. 'ಹೈದರಾಬಾದ್ ಕರ್ನಾಟಕ' ಎಂಬ ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿ ರೂಪಗೊಂಡದ್ದು ನಿಜಾಮರ ಆಳ್ವಿಕೆಯ ಕೊನೆಯ ಶತಮಾನದಲ್ಲಿ. ಈ ಪ್ರದೇಶ ಹೈದರಾಬಾದಿನೊಡನೆ ಹೊಂದಿದ್ದ ಸಂಬಂಧ ಕಣ್ಮರೆಯಾಗುತ್ತಿದ್ದರೂ ಇಂದಿಗೂ ಅದೇ ಹೆಸರನ್ನು ಉಳಿಸಿಕೊಂಡಿದೆ. ಇಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಹಿತ್ಯಿಕ ಸ್ಥಿತ್ಯಂತರಗಳು ಈ ಪ್ರದೇಶದ ವಿಭಿನ್ನತೆಗೆ, ಹಿಂದುಳಿದಿರುವಿಕೆಗೆ ಕಾರಣವಾಗಿವೆ. ಆದರೂ ಪ್ರಾದೇಶಿಕ ಅಸಮಾನತೆಗೆ ಕಾರಣ ಯಾರು ಮತ್ತು ಸ್ಪಷ್ಟವಾಗಿ ಎಲ್ಲಿಂದ ಗುರುತಿಸಬಹುದು ಎನ್ನುವುದನ್ನು ಅಧ್ಯಯನ ಮಾಡಿದಂತೆ ತಿಳಿಯುತ್ತಾ ಹೋಗುತ್ತದೆ. ಅದರಲ್ಲಿ ಪ್ರಮುಖವಾಗಿರುವುದೇನೆಂದರೆ ಇಲ್ಲಿನ ಜನ ಪ್ರತಿನಿಧಿಗಳು, ನಾಯಕರುಗಳು ಮುಂತಾದವರ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ಇದರ ಜೊತೆಗೆ ಅನಕ್ಷರತೆ, ಬಡತನ, ಇದನ್ನು ಅತ್ಯಂತ ಹಿಂದುಳಿದ ಪ್ರದೇಶದ ಸಾಲಿಗೆ ತಂದು ನಿಲ್ಲಿಸಿದೆ.

ಇವತ್ತು ಪಕ್ಕದ ರಾಜ್ಯಗಳಿಂದ ಬರುತ್ತಿರುವ ಜಮೀನ್ದಾರರು, ಕೈಗಾರಿಕೋದ್ಯಮಿಗಳು ಇಲ್ಲಿನ ಭೂಮಿಯನ್ನು, ಅವಕಾಶವನ್ನು ಬಾಚಿಕೊಂಡು ಜನರ ಬದುಕನ್ನು ಅಸ್ಥಿರಗೊಳಿಸುತ್ತಿದ್ದಾರೆ. ಹೀಗಾಗಿ ಈ ಜನರು ತಮ್ಮ ಭೂಮಿಗಳಲ್ಲಿ ತಾವೇ ಕೂಲಿಗಳಾಗಿ ದುಡಿಯಬೇಕಾದ ಹಾಗೂ ಊರನ್ನೇ ಬಿಟ್ಟು ಗುಳೆ ಹೋಗಬೇಕಾದ ಪರಿಸ್ಥಿತಿ ಒದಗಿದೆ. ಬಡತನ ಎನ್ನುವುದು ಈ ಪ್ರದೇಶಕ್ಕೆ ಅಂಟಿಕೊಂಡು ಬಿಟ್ಟಿದೆ. ಇಲ್ಲಿಯವರೆಗೆ ಇಲ್ಲಿ ಆಳ್ವಿಕೆ ಮಾಡಿದ ಸರಕಾರಗಳು ಈ ಪ್ರದೇಶವನ್ನು ನಿರ್ಲಕ್ಷಿಸುತ್ತ ಬಂದಿವೆಯೆಂದು ಜನ ಪ್ರತಿಭಟನೆಗಿಳಿದಾಗ, ಪ್ರಾಂತ್ಯದ ಅಭಿವೃದ್ಧಿಗಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿತು. ಆದರೆ ಇದರಿಂದ ಹೆಚ್ಚಿನ ಬದಲಾವಣೆಯೇನೂ ಆಗದಿದ್ದಾಗ, ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಲು ಸರಕಾರವು ಡಾ. ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ, ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡಿದೆ. ಆದರೆ ಇದರಿಂದಲೂ ಸಮಾಧಾನವಾಗದ ಇಲ್ಲಿನ ಜನರು ಈಗ ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿಗೆ ಹೋರಾಟ ಆರಂಭಿಸಿ ಅದರ ಫಲದ ನಿರೀಕ್ಷೆಯಲ್ಲಿದ್ದಾರೆ.

ಹೈದರಾಬಾದ್ ಕರ್ನಾಟಕ ಪ್ರದೇಶ ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಪೂರ್ಣ ಹಿಂದುಳಿದಿದೆ. ಶಿಕ್ಷಣ ಹಿಂದುಳಿಯಲು ಬಡತನ ಪರೋಕ್ಷವಾಗಿ ಕಾರಣವಾಗಿದೆ. ಈ ಪ್ರಾಂತ್ಯದಲ್ಲಿ ಬಡತನ ಹೆಚ್ಚಾಗಿದ್ದು ಬಡವರು, ಕೆಳವರ್ಗದವರು ದುಡಿಮೆಗಾಗಿ ಪಕ್ಕದ ರಾಜ್ಯಗಳಿಗೆ, ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹೀಗಾಗಿ ವಲಸಿಗರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇನ್ನು ಕೆಳವರ್ಗದವರು, ಬಡತನದಿಂದ ಚಿಕ್ಕವಯಸ್ಸಿನಲ್ಲೆ ದುಡಿಮೆಗೆ ಒಳಗಾಗುವುದರಿಂದ ಶಾಲೆಗೆ ಹೋಗುವುದು ಸಾಧ್ಯವಾಗುತ್ತಿಲ್ಲ. ಸರಕಾರದ ಅಂಕಿ ಅಂಶಗಳ ಪ್ರಕಾರ, ೭ನೇ ತರಗತಿ ನಂತರ ಅತೀ ಹೆಚ್ಚು ಮಕ್ಕಳು ಶಾಲೆ ಬಿಡುತ್ತಿರುವುದು ಈ ಭಾಗದಲ್ಲಿಯೇ. ಬಡತನದಿಂದಾಗಿ ಮಕ್ಕಳು ಶಾಲೆಯನ್ನು ಬಿಟ್ಟು ದುಡಿಮೆಗೆ ಹೋಗುತ್ತಿರುವುದು ಮತ್ತೆ ಅನಕ್ಷರತೆ, ಮೌಢ್ಯತೆ, ಹಿಂದುಳಿದಿರುವಿಕೆಗೆ ಕಾರಣ ವಾಗುತ್ತಿದೆ.

ಶತಶತಮಾನಗಳಿಂದಲೂ ಈ ಪ್ರದೇಶ ಪದೇ ಪದೇ ಬರಗಾಲಕ್ಕೆ ಈಡಾಗುತ್ತಿದೆ. ಆದರೆ ಸರಕಾರ ಮಾತ್ರ ಯಾವ ಯೋಜನೆಗಳನ್ನು ಸರಿಯಾಗಿ ಕೈಗೊಂಡಿಲ್ಲ. ಸುಮಾರು ವರ್ಷಗಳಿಂದ ಅಪಾರ ಸಂಪತ್ತಿದ್ದರೂ ಬಡತನ ತುಂಬಿ ತುಳುಕುತ್ತಿದೆ. ಕೃಷ್ಣಾ, ಭೀಮಾ, ತುಂಗಭದ್ರ, ಕಾಗಿಣ, ಬೆಣ್ಣೆತೊರೆ, ಅಮರ್ಜಾ, ಮುಲ್ಲಾಮಾರಿ ಮುಂತಾದ ನದಿಗಳಿದ್ದರೂ, ಅವುಗಳ ಸರಿಯಾದ ಉಪಯೋಗ ಮಾಡಿಕೊಳ್ಳದ ಕಾರಣ ಕುಡಿಯುವ ನೀರಿಗೂ ಪರದಾಡುವಂತಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಾದಿಯಾಗಿ ಹತ್ತಾರು ನೀರಾವರಿ ಯೋಜನೆಗಳು ಹಲವಾರು ವರ್ಷಗಳಿಂದ ಕುಂಟುತ್ತಾ ಸಾಗುತ್ತಿವೆ. ಇನ್ನು ತುಂಗಭದ್ರಾ ಆಣೆಕಟ್ಟು ಹೂಳಿನಿಂದ ತುಂಬಿದೆ. ಇದರ ನೀರಿನ ಶೇಖರಣೆಯ ಸಾಮರ್ಥ್ಯ ಆರಂಭದಲ್ಲಿ ೧೩೨ ಟಿ.ಎಂ.ಸಿ. ಇತ್ತು. ಆದರೆ ಇತ್ತೀಚಿನ ಸಮೀಕ್ಷೆಯ ಪ್ರಕಾರ ಸುಮಾರು ೩೦ ಟಿ.ಎಂ.ಸಿ.ಯಷ್ಟು ಹೂಳು ತುಂಬಿಕೊಂಡಿದೆ. ಆದರೂ ಸರಕಾರ ಹೂಳು ತೆಗೆಸುವ ಬಗ್ಗೆ ಗಂಭೀರವಾಗಿ ಆಲೋಚನೆ ನಡೆಸಿಲ್ಲ ಹೀಗಾಗಿ ವರ್ಷದ ಎರಡನೆಯ ಬೆಳೆಗೆ ನೀರು ಸಿಗದೆ ಕೃಷಿ ಸಮಸ್ಯೆಯಾಗಿ ಮಾರ್ಪಾಡಾಗುತ್ತಿದೆ.

ಇಲ್ಲಿನ ರೈತರಿಗೆ ತಮ್ಮ ಭೂಮಿಯನ್ನು ಸಾಗುವಳಿ ಮಾಡಿಕೊಳ್ಳಲು ಆರ್ಥಿಕ ಬಲ ಇಲ್ಲದಂತಾಗಿದೆ. ಹೀಗಾಗಿ ರೈತರು ತಮ್ಮ ಫಲವತ್ತಾದ ಭೂಮಿಯನ್ನು ಮಾರಿಕೊಳ್ಳುತ್ತಿದ್ದಾರೆ. ಆಂಧ್ರದಿಂದ ಬಂದ ರೈತರು, ಭೂಮಿಯನ್ನು ಕೊಂಡು ಭೂಮಾಲೀಕರಾಗಿ ಬೆಳೆದಿದ್ದಾರೆ. ಇಲ್ಲಿನ ಬಹುಸಂಖ್ಯಾತ ಬಡವರು, ಕೆಳವರ್ಗದವರು ಆಂಧ್ರ ಭೂಮಾಲೀಕರ ಅಧೀನದಲ್ಲಿ ದುಡಿಯುತ್ತಿದ್ದಾರೆ. ಇನ್ನೊಂದು ಕಡೆ ಈ ಭಾಗದಲ್ಲಿ ಕೈಗಾರಿಕೆಗಳು ಮುಚ್ಚುತ್ತಿರುವುದರಿಂದ ಕಾರ್ಮಿಕರು ನಿರ್ಗತಿಕರಾಗುತ್ತಿದ್ದಾರೆ. ಗುಲಬರ್ಗಾದ ಎಂ.ಎಸ್.ಕೆ. ಮಿಲ್ ಹಾಗೂ ಇನ್ನಿತರ ಕಾರ್ಖಾನೆಗಳು ಮುಚ್ಚಿರುವುದರಿಂದ ಸಾವಿರಾರು ಕಾರ್ಮಿಕರು ನಿರ್ಗತಿಕರಾಗಿದ್ದಾರೆ. ದಲಿತರು, ಮಹಿಳೆಯರು ಆರ್ಥಿಕವಾಗಿ ಸಬಲರಾಗುವಷ್ಟು, ಸಮಾಜದಲ್ಲಿ ತಮ್ಮದೇ ಆದ ಸ್ಥಾನಮಾನ ಪಡೆದುಕೊಳ್ಳುವಷ್ಟು ಸಬಲರಾಗಿಲ್ಲ, ಹೀಗಾಗಿ ಅಭಿವೃದ್ಧಿ ನಿಂತ ನೀರಾಗಿದೆ.

ಅಭಿವೃದ್ಧಿ ದೃಷ್ಟಿಯಿಂದ ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕದ ಗುಲಬರ್ಗಾ, ರಾಯಚೂರು, ಬೀದರ್, ಕೊಪ್ಪಳ ಜಿಲ್ಲೆಗಳು ತೀರಾ ಹಿಂದುಳಿದಿವೆ. ಅದರಲ್ಲೂ

ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕು ರಾಜ್ಯದಲ್ಲಿಯೇ ೧೭೪ನೆಯ ಸ್ಥಾನದಲ್ಲಿದ್ದರೆ ರಾಯಚೂರು ಜಿಲ್ಲೆಯ ದೇವದುರ್ಗ ೧೭೫ನೆಯ ಅಂದರೆ ಕೊನೆಯ ಸ್ಥಾನದಲ್ಲಿದೆ. ಹೀಗಾಗಿ ಸರಕಾರದ ಮುಂದೆ ದೊಡ್ಡ ಸವಾಲಿದ್ದು, ನಿಧಾನಗತಿಯಲ್ಲಿ ಸಾಗುತ್ತಿರುವ ಎಲ್ಲ ನೀರಾವರಿ ಯೋಜನೆಗಳನ್ನು ತೀವ್ರವಾಗಿ ಪೂರ್ಣಗೊಳಿಸಬೇಕು. ದುಡಿಯುವ ವರ್ಗವು ವಲಸೆ ಹೋಗುವುದನ್ನು ತಡೆಯಬೇಕು. ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕು. ಹೊಸ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸ ಬೇಕು, ಹಿಂದುಳಿದವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು, ಜನರಿಗೆ ಆರೋಗ್ಯ, ಶಿಕ್ಷಣ, ಉದ್ಯೋಗಾವಕಾಶ ಒದಗಿಸುವ ಮೂಲಕ ಅಸಮಾನತೆಯನ್ನು ಕಡಿಮೆ ಮಾಡಲು ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

೨೩. ಶ್ರೀ ಯಲ್ಲಪ್ಪ ಬಳಗನೂರು

ಗುಲಬರ್ಗಾ ವಿಭಾಗ ಸಂಚಾಲಕರು

ದಲಿತ ಸಂಘರ್ಷ ಸಮಿತಿ

ಸಂದರ್ಶನ ದಿನಾಂಕ : ೧೩.೦೫.೨೦೧೦, ಕೊಪ್ಪಳ

ಹೈದರಾಬಾದ್ ಕರ್ನಾಟಕದಲ್ಲಾದ ಅನೇಕ ಚಳವಳಿಗಳಲ್ಲಿ ಅತ್ಯಂತ ಆಕರ್ಷಣೀಯವಾದ, ತೀವ್ರವಾದ ಪರಿಣಾಮಕಾರಿಯಾದ ಚಳವಳಿ ಎಂದರೆ ದಲಿತ ಚಳವಳಿ. ಈ ಭಾಗದಲ್ಲಿ ಕೆಳವರ್ಗದವರು ತಮ್ಮ ಉಸಿರನ್ನೆ ಕಳೆದುಕೊಂಡಂತಹ ಸಂದರ್ಭದಲ್ಲಿ, ಬದುಕಿದ್ದು ಸತ್ತಂತೆ ಜೀವನ ನಡೆಸುತ್ತಿದ್ದ ಸಮಾಜದಲ್ಲಿ ಅಸ್ಪೃಶ್ಯತೆಯ ಹೆಸರಲ್ಲಿ ಸಮಾಜದಿಂದ ಬಹಿಷ್ಕಾರಕ್ಕೆ ಒಳಗಾಗಿದ್ದ ಪರಿಸ್ಥಿತಿಯಲ್ಲಿ ಈ ವರ್ಗದವರಿಗೆ ಉಸಿರನ್ನು ನೀಡಿದ್ದೇ ದಲಿತ ಚಳವಳಿ. ಇಲ್ಲಿನ ದಲಿತರು ಮನುಷ್ಯರಾಗಿ ಬದುಕಲು ಪ್ರಾರಂಭಿಸಿದ್ದೇ ದಲಿತ ಚಳವಳಿ ನಂತರ. ಸಂವಿಧಾನದಲ್ಲಿ ದಲಿತರ ಉದ್ಧಾರಕ್ಕಾಗಿ ಅವಕಾಶ ಕಲ್ಪಿಸಿದ್ದರೂ, ಅಜ್ಞಾನ ಅನಕ್ಷರತೆಯಿಂದ ಎಲ್ಲದರಿಂದ ವಂಚಿತರಾಗಿದ್ದ ದಲಿತರಿಗೆ ಸಂವಿಧಾನದಲ್ಲಿ ನೀಡಿದ ಸೌಲಭ್ಯ ಸಮಾನತೆ ನ್ಯಾಯದ ಅರಿವನ್ನು ಉಂಟು ಮಾಡಿ ಅವುಗಳನ್ನು ದೊರಕಿಸಿಕೊಟ್ಟಿದ್ದು ಇಲ್ಲಿನ ದಲಿತ ಹೋರಾಟಗಳು.

ಆದರೆ ಗುಲಬರ್ಗಾ, ರಾಯಚೂರು, ಬೀದರ್ ಜಿಲ್ಲೆಗಳಿಗೆ ಹೋಲಿಸಿದರೆ ಕೊಪ್ಪಳ ಜಿಲ್ಲೆಯಲ್ಲಿ ದಲಿತ ಸಂಘಟನೆಗಳು ಮತ್ತು ದಲಿತ ಹೋರಾಟಗಳು ಅಷ್ಟೊಂದು ತೀವ್ರವಾಗಿಲ್ಲ ನಿಜ. ಅಷ್ಟೇ ಅಲ್ಲ ಇತ್ತೀಚೆಗೆ ಇವು ಬಹಳಷ್ಟು ಗೊಂದಲಕ್ಕೆ ಸಿಲುಕಿರುವುದು ಸತ್ಯ. ಇದಕ್ಕೆ ಅನೇಕ ಕಾರಣಗಳಿವೆ. ಅದರಲ್ಲೂ ಕೊಪ್ಪಳ ಜಿಲ್ಲೆಯಲ್ಲಿ ದಲಿತ ಸಂಘಟನೆಗಳು ಒಡೆದು ವಿವಿಧ ಬಣಗಳಾಗಿರುವುದು ದಲಿತರ ಸಂಘಟನೆಗೆ ಹೋರಾಟಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಸದ್ಯ ನಮ್ಮ ಹೈದರಾಬಾದ್ ಕರ್ನಾಟಕದ ಯಾವ ಜಿಲ್ಲೆಯಲ್ಲೂ ಇಲ್ಲದಷ್ಟು ಬಣಗಳು ಕೊಪ್ಪಳ ಜಿಲ್ಲೆಯಲ್ಲಿ ಹುಟ್ಟಿಕೊಂಡಿವೆ. ಉದಾಹರಣೆಗೆ ಸದ್ಯ ಕೊಪ್ಪಳ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ಆರು ಬಣಗಳಾಗಿ ಒಡೆದು ಹೋಗಿದೆ. ಇನ್ನು ಕೆಲವು ಮುಖಂಡರಂತೂ ಅನಾವಶ್ಯಕವಾಗಿ ಚಿಕ್ಕಪುಟ್ಟ ಕಾರಣಗಳಿಗೂ ಮುಷ್ಕರ ಪ್ರತಿಭಟನೆ ಮಾಡುತ್ತಿದ್ದಾರೆ. ಇದರಿಂದ ಒಂದು

ರೀತಿಯಲ್ಲಿ ಇಡೀ ಸಂಘಟನೆಗೆ ಕೆಟ್ಟ ಹೆಸರು ಬಂದಿದೆ. ಹೀಗಾಗಿ ಇಲ್ಲಿ ದಲಿತ ಹೋರಾಟ ಒಂದು ಶಕ್ತಿಯಾಗಿ ಒಂದು ಸಂಘಟನೆಯಾಗಿ ಒಬ್ಬ ನಾಯಕನ ನೇತೃತ್ವದಲ್ಲಿ ಹೋರಾಡಲು ಸಾಧ್ಯವಾಗುತ್ತಿಲ್ಲ.

ಆರಂಭದಲ್ಲಿ ಇಲ್ಲಿನ ದಲಿತರ ಹೋರಾಟಗಳಲ್ಲಿ ಬಿ. ಶ್ಯಾಮಸುಂದರ್‌ರಂತಹ ಘಟಾನುಘಟಾಯಿ ನಾಯಕರು ನೇತೃತ್ವವಹಿಸಿದ್ದರು. ಇವರ ಒಂದೇ ಒಂದು ಕರೆಗೆ ಇಡೀ ರಾಜ್ಯದ ದಲಿತರು ಹೋರಾಟಕ್ಕಿಳಿಯುತ್ತಿದ್ದರು. ಇವರ ಮಾತುಗಳೆ ಘೋಷಣೆಗಳಾಗುತ್ತಿದ್ದವು, ಆದರೆ ಇಂದು ಸಂಘಟನೆ ಒಡೆದು ಶಕ್ತಿಹೀನವಾಗುತ್ತಿದೆ. ಇಂದು ಏನಾಗಿದೆಯೆಂದರೆ ದಲಿತ ಸಂಘರ್ಷ ಸಮಿತಿಯ ಮುಖಂಡರು ರಾಜಕೀಯ ಪ್ರವೇಶಿಸಿದ ನಂತರ ಜಿಲ್ಲಾ, ತಾಲೂಕು, ಗ್ರಾಮ ಮಟ್ಟದಲ್ಲಿ ಹಲವರು ತಮ್ಮನ್ನು ನಾಯಕರಾಗಿ ಗುರುತಿಸಿಕೊಳ್ಳುವ ಆತುರದಲ್ಲಿ ವಿವಿಧ ಪಕ್ಷಗಳನ್ನು ಸೇರತೊಡಗಿದರು ಹಾಗೂ ತಮ್ಮನ್ನು ಮುಖಂಡರನ್ನಾಗಿ ಮಾಡುವಂತೆ ಬೇಡಿಕೆ ಇಡತೊಡಗಿದರು. ಅಧಿಕಾರ ಸಿಗದವರು ಬೇರೆ ಬೇರೆ ಪಕ್ಷ ಸೇರತೊಡಗಿದರು ಹಾಗೂ ತಮ್ಮದೇ ಆದ ಬಣಗಳನ್ನು ಸ್ಥಾಪಿಸಿಕೊಳ್ಳತೊಡಗಿದರು. ಹೀಗೆ ದಲಿತ ಸಂಘಟನೆಗಳು ವಿವಿಧ ಬಣಗಳಾಗಿ ಒಡೆದು ಹೋಗಲು ರಾಜಕೀಯ ಕುತಂತ್ರವೇ ನೇರ ಕಾರಣ ಎಂದು ಹೇಳಬಹುದು. ಇಂದಂತೂ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಮುಖಂಡರು ತಮ್ಮ ಸ್ವಹಿತಾಸಕ್ತಿಗಾಗಿ ದಲಿತ ಸಂಘಟನೆಗಳನ್ನು ಮತ್ತು ಅದರ ನಾಯಕರನ್ನು ಬಳಸಿಕೊಳ್ಳುತ್ತಿದ್ದಾರೆ. ಹಾಗೆಯೇ ದಲಿತ ಸಂಘಟನೆಯ ಪ್ರತಿಯೊಂದು ಬಣಗಳು ಒಂದಲ್ಲಾ ಒಂದು ರಾಜಕೀಯ ಪಕ್ಷಗಳೊಂದಿಗೆ ಕೈಜೋಡಿಸಿ ಅವರಿಗೆ ಬೆಂಬಲ ನೀಡಿ ಅವುಗಳೊಂದಿಗೆ ಗುರುತಿಸಿಕೊಂಡು ಬಿಟ್ಟಿವೆ. ತಾವು ಗುರುತಿಸಿಕೊಂಡಿರುವ ರಾಜಕೀಯ ಪಕ್ಷಗಳ ತತ್ವ ಉದ್ದೇಶ ಗುರಿಗಳೊಡನೆ ಕೆಲವೊಂದು ಸಲ ರಾಜಿಯನ್ನು ಮಾಡಿಕೊಂಡಿದ್ದಾರೆ. ಇದು ದಲಿತ ಹೋರಾಟಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಈ ಭಾಗದಲ್ಲಿ ದಲಿತ ಸಂಘಟನೆಗಳು ದಲಿತರ ಪರವಾಗಿ ಮಹಮ್ಮದ್‌ನಗರ ಭೂ ಹೋರಾಟದಲ್ಲಿ, ಹಿರೇಬಗನಾಳ ರೈತ ಹೋರಾಟ, ಮೆದಕಿನಾಳ ಭೂ ಹೋರಾಟದಲ್ಲಿ, ಕೊಪ್ಪಳ ಪೌರ ಕಾರ್ಮಿಕರ ಪರ ಹೋರಾಟಗಳನ್ನು ಮಾಡಿ ದಲಿತರಿಗೆ ಸಾಕಷ್ಟು ನ್ಯಾಯ ಒದಗಿಸಿದೆ. ಜೊತೆಗೆ ಅಸ್ಪೃಶ್ಯತಾ ನಿವಾರಣೆ, ಕೂಲಿಗಾಗಿ ಕಾಳು ಯೋಜನೆ ಮುಂತಾದ ಕಾರ್ಯಗಳಲ್ಲಿ ನ್ಯಾಯ ದೊರಕಿಸಿಕೊಡಲು ಹೋರಾಡುತ್ತಿದೆ. ಆದರೆ ಇಂದು ದಲಿತ ಸಂಘಟನೆಗಳು ಮತ್ತು ಅವುಗಳ ಹೋರಾಟಗಳು ಸಮಾಜದಲ್ಲಿ ದಲಿತರಲ್ಲಿ ಪರಿವರ್ತನೆ ತರುವ ಪ್ರಯತ್ನದಲ್ಲಿ ತೊಡಗಿವೆಯಾದರೂ ದಲಿತೇತರರ ಬೆಂಬಲ, ಪ್ರೀತಿ ವಿಶ್ವಾಸ ಗಳಿಸುವಲ್ಲಿ ವಿಫಲರಾಗುತ್ತಿದ್ದೇವೆ.

ಇದಕ್ಕೆ ಬದಲಾಗಿ ದಲಿತ ಚಳವಳಿಯೆಂದರೆ ಸಾಮಾಜಿಕ ಚಳವಳಿಯಾಗಿ, ನ್ಯಾಯದ ಚಳವಳಿಯಾಗಿ ಹೆಸರನ್ನು ಪಡೆಯುವಂತಾಗಬೇಕು. ಇಡೀ ವ್ಯವಸ್ಥೆಯನ್ನೇ ಬದಲಾಯಿಸುವಂತಹ ಹೋರಾಟ ಮಾಡಬೇಕು. ಪ್ರತಿಯೊಬ್ಬ ನಿರ್ಲಕ್ಷಿತನಿಗೂ ನ್ಯಾಯ ಸಿಗುವಂತಹ ಅವಕಾಶಗಳು ಸಿಗುವಂತಹ ರೂಪ ರೇಷೆಗಳನ್ನು ಅಳವಡಿಸಿಕೊಳ್ಳಬೇಕು. ಆದರೆ ಇಂತಹ ಕಾರ್ಯ ಒಬ್ಬರಿಂದ ಒಂದು ಸಂಘಟನೆಯಿಂದ ಸಾಧ್ಯವಿಲ್ಲ. ಇನ್ನೊಂದು ಮುಖ್ಯವಾದ ಅಂಶವೆಂದರೆ ದಲಿತ ಚಳವಳಿ ಮೊದಲು ದಲಿತರ ಹಸಿವು ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಕಾರ್ಯೋನ್ಮುಖವಾಗಬೇಕು. ಹಸಿವು ಮತ್ತು ಅಸ್ಪೃಶ್ಯತೆ ತೊಲಗಬೇಕು

ಎನ್ನುವುದು ದಲಿತ ಚಳವಳಿಯ ಘೋಷಣೆ ಆಗಬೇಕು. ಆಗ ಮಾತ್ರ, ದಲಿತ ಚಳವಳಿ ಸಾರ್ಥಕವಾಗುತ್ತದೆ ಮತ್ತು ಯಶಸ್ವಿಯಾಗುತ್ತದೆ.

೨೪. ಶ್ರೀ ಶೇಕ್ ನೂರುಲ್ಲಾ

ಉಪನ್ಯಾಸಕರು

ಸಂದರ್ಶನ ದಿನಾಂಕ : ೨೦.೧೨.೨೦೧೧, ಗುಡೇಕೋಟೆ

ಹೈದರಾಬಾದ್ ಕರ್ನಾಟಕ ಪ್ರದೇಶವು ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಇತ್ತೀಚಿಗೆ ಅಸ್ತಿತ್ವಕ್ಕೆ ಬಂದಿರುವ ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಿದೆ. ಹೈದರಾಬಾದ್ ಕರ್ನಾಟಕ ಎಂದು ಗುರುತಿಸಿಕೊಳ್ಳುವ ಈ ಪ್ರದೇಶದ ವ್ಯಾಪ್ತಿಯನ್ನು ಕ್ರಿ.ಶ. ೧೭೨೪ರಿಂದ ೧೯೪೮ರವರೆಗೆ ಗುರುತಿಸಬಹುದಾಗಿದೆ. ಸುಮಾರು ೨೨೪ ವರ್ಷಗಳ ಕಾಲ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದರಿಂದ ಇಂದಿಗೂ ಸಹ ಈ ಭಾಗಗಳನ್ನು ಹೈದರಾಬಾದ್ ಕರ್ನಾಟಕ ಎಂದು ಗುರುತಿಸಲಾಗುತ್ತಿದೆ. ಈ ಪ್ರದೇಶ ತನ್ನದೇ ಆದ ನೆಲ ಜಲ ಸಂಸ್ಕೃತಿಯಿಂದ ಅತೀ ಶ್ರೀಮಂತ ಇತಿಹಾಸವನ್ನು ಹೊಂದಿದ ನಾಡಾಗಿದೆ. ಹಾಗೆಯೇ ಧಾರ್ಮಿಕ ಸಾಮರಸ್ಯದ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಈ ಪ್ರದೇಶ ವಹಿಸಿದ ಪಾತ್ರ ಅತಿ ಮುಖ್ಯವಾಗಿದೆ. ಬೀದರ್ ಜಿಲ್ಲೆ ಶಿವಶರಣರ ಪವಿತ್ರ ನಾಡಾದರೆ ರಾಯಚೂರು ಜಿಲ್ಲೆ ದಾಸರ ಪುಣ್ಯ ಬೀಡಾಗಿದೆ. ರಾಯಚೂರು, ಗುಲಬರ್ಗಾ ಸೂಫಿಗಳ ಪವಿತ್ರ ಸ್ಥಳಗಳಾಗಿವೆ. ಹನ್ನೆರಡನೆಯ ಶತಮಾನವು ಸುವರ್ಣಾಕ್ಷರಗಳಿಂದ ಬರೆದಿಡುವ ಶರಣರ ಯುಗವಾಗಿ ಪರಿಣಮಿಸಿತು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ ಸಾಮಾಜಿಕ, ಸಾಹಿತ್ಯಿಕ ಕ್ರಾಂತಿ ಜನರಲ್ಲಿ ಹೊಸ ಬದುಕನ್ನು ತಂದುಕೊಟ್ಟಿತು. ನಂತರ ಖಾಜಾ ಬಂದೇ ನವಾಜರು ಮೊಟ್ಟಮೊದಲಿಗೆ ಖಡೀ ಬೋಲಿ ಉರ್ದುವಿನಲ್ಲಿ ಗದ್ಯದಲ್ಲಿ ಕೃತಿ ರಚಿಸಿದರು. ಇವರು ಕವಿಗಳು ಪವಾಡ ಪುರುಷರು ಸಂತರು ಎಂದು ಖ್ಯಾತಿ ಪಡೆದವರು.

ಇಂತಹ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಎಲ್ಲಾ ಧರ್ಮಗಳು ಎಲ್ಲಾ ಜನಾಂಗದವರ ಸಾಮಾಜಿಕ ಸಾಮರಸ್ಯ ಬಹಳ ಅನೋನ್ಯವಾಗಿತ್ತು. ಆರಂಭದಿಂದಲೂ ಇಲ್ಲಿಯವರೆಗೆ ವಿವಿಧ ಪಂಥ ಭಾಷೆಗಳ ಜನರು ಸಮಾಜದ ಎಲ್ಲಾ ಕಾರ್ಯಗಳಲ್ಲಿ ಅನೋನ್ಯವಾಗಿ ಬೆರೆತಿರುವುದನ್ನು ಕಾಣುತ್ತೇವೆ. ನಿಜಾಮರ ಆಡಳಿತದಲ್ಲಿ ಹಿಂದೂ ಮುಸ್ಲಿಂರು ಸೋದರರಂತೆ ಬಾಳಿರುವುದು ಕಂಡು ಬರುತ್ತದೆ. ಇಲ್ಲಿನ ಸಾಮಾಜಿಕ ಸಾಮರಸ್ಯ ಜಗತ್ತಿಗೆ ಮಾದರಿಯಾಗಿದೆ. ಇಲ್ಲಿನ ಮಠಗಳು, ಮಸೀದಿಗಳು, ದರ್ಗಾಗಳು ಜನರಿಗೆ ದಾರಿದೀಪಗಳಾಗಿವೆ. ಊಟ, ವಸತಿ, ಆಶ್ರಯ, ಶಿಕ್ಷಣ ಆಧ್ಯಾತ್ಮಿಕತೆಯನ್ನು ಜನರಿಗೆ ನೀಡುತ್ತಾ ಆಯಾ ವರ್ಗಗಳ ಏಳಿಗೆಗೆ ಹಾಗೂ ಸಮಾಜದ ಏಳಿಗೆಗೆ ಕಾರಣಭೂತವಾಗಿವೆ. ಈ ಭಾಗದಲ್ಲಿರುವಂತ ಹಿಂದೂ ಮುಸ್ಲಿಂರ ನಡುವಿನ ಅನೋನ್ಯತೆ ಬಹಳ ಆರೋಗ್ಯಕರವಾದುದು. ಮುಸ್ಲಿಮರು ಶ್ರೀಶರಣ ಬಸವೇಶ್ವರರ ದೇವಸ್ಥಾನಕ್ಕೆ ಭಕ್ತಿಯಿಂದ ನಡೆದುಕೊಳ್ಳುವುದು ಹಾಗೆಯೇ ಹಿಂದುಗಳು ದರ್ಗಾಗಳಿಗೆ ಭಕ್ತಿಯಿಂದ ನಡೆದುಕೊಳ್ಳುವುದು ನಡೆದು ಬಂದಿದೆ. ಸಮಾನತೆ, ಏಕತೆ ಹಾಗೂ ಬಂಧುತ್ವದ ವಿಚಾರಧಾರೆಯನ್ನು ಮಾನವ ಸಮಾಜದಲ್ಲಿ ಕಾರ್ಯರೂಪಕ್ಕೆ ತರುವ ದಿಶೆಯಲ್ಲಿ ಮಠ ಮಸೀದಿಗಳು ಕಾರ್ಯತತ್ಪರವಾಗಿವೆ.

ಸಾಮಾಜಿಕ ಸುಧಾರಣೆಯಲ್ಲಿ ಮತಮಾನ್ಯಗಳು, ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ನಿಟ್ಟಿನಲ್ಲಿ, ಮಾರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸಾಮಾಜಿಕ ಚಳವಳಿಯಲ್ಲಿ ಇವುಗಳ ಪಾತ್ರ ಹೀಗೆಯೇ ಎಂದು ಅಥವಾ ಇಷ್ಟೇ ಎಂದು ಅಳತೆಗೋಲಿನಲ್ಲಿ ಹೇಳಲಿಕ್ಕಾಗದು. ಅದಕ್ಕಿಂತ ಹೆಚ್ಚಾಗಿ ಇವುಗಳಿಂದ ಸಾಮಾಜಿಕ ಬದಲಾವಣೆ ಆಗುತ್ತದೆ ಎನ್ನುವುದಕ್ಕಿಂತ ಸಾಮಾಜಿಕ ಬದಲಾವಣೆಯನ್ನು ಇವು ಗ್ರಹಿಸುತ್ತವೆ ಎನ್ನುವುದು ಹೆಚ್ಚು ಸೂಕ್ತ. ಸಮಾಜದ ವಾಸ್ತವಿಕ ಅಂಶಗಳನ್ನು ಗ್ರಹಿಸಿ, ಅವುಗಳನ್ನು ನಿವಾರಿಸುವ ಮೂಲಕ ಸಮಾಜವನ್ನು ಬದಲಿಸಬೇಕು, ಸುಧಾರಿಸಬೇಕು ಎನ್ನುವ ಉದ್ದೇಶವನ್ನು ಇವು ಹೊಂದಿರುತ್ತವೆ. ಇದರಿಂದ ಸಮಾಜವನ್ನು ಒಗ್ಗೂಡಿಸುವ ಸಮಾನತೆ ಸಾಧಿಸುವ ಅಭಿವೃದ್ಧಿಯತ್ತ ಸಾಗುವ ಪ್ರಯತ್ನ ನಡೆಯುತ್ತದೆ.

ಸಾಮಾಜಿಕ ಚಳವಳಿಗಳು ಎನ್ನುವುದು ಒಂದು ಗ್ರೇಟ್ ಈವೆಂಟ್. ಪ್ರತಿಯೊಬ್ಬರು ಪ್ರತಿಯೊಬ್ಬರ ಬದುಕನ್ನು ಗ್ರಹಿಸುವುದಾಗಿದೆ. ಪ್ರತಿಯೊಬ್ಬರಲ್ಲಿ ಸಾಮಾಜಿಕ ಪ್ರಜ್ಞೆ, ಆದರ್ಶ, ಉದಾರವಾದ, ಮಾನವತಾವಾದದ ನಿಲುವುಗಳನ್ನು ಗ್ರಹಿಸುವಂತೆ ಮಾಡುವುದಾಗಿದೆ. ಹಾಗಾಗಿ ಸಾಮಾಜಿಕ ಚಳವಳಿಗಳು ಎನ್ನುವುದು ಆರೋಗ್ಯಯುತ, ಸಮಾನಯುತವಾದ ಸಮಾಜದ ಬೆಳವಣಿಗೆಗೆ ದಾರಿದೀಪದಂತಿರಬೇಕು. ಜಡ ಸಮಾಜವನ್ನು, ನಿಶ್ಚಲ ಜನತೆಯನ್ನು, ಚಲನಶೀಲವಾಗುವಂತೆ ಮಾಡುವ ಶಕ್ತಿ ಅದಾಗಬೇಕು. ಈಗ ಬದುಕನ್ನು ತಲ್ಲಣಗೊಳಿಸುವ ಬೇರೆ ಬೇರೆ ವಿದ್ಯಮಾನಗಳು ಸಂಭವಿಸುತ್ತಿವೆ. ಉದಾಹರಣೆಗೆ, ಕೋಮುವಾದ, ಭಯೋತ್ಪಾದನೆ, ನಕ್ಸಲ್‌ವಾದ, ಖನಿಜಗಳ ಲೂಟಿ ಒಂದು ಕಡೆ ಆದರೆ, ರೈತರ, ಕಾರ್ಮಿಕರ, ದಲಿತರ, ಮಹಿಳೆಯರ ಹೋರಾಟಗಳು ಇನ್ನೊಂದು ಕಡೆ. ಹೀಗಾಗಿ ನಮ್ಮನ್ನು ಸಮರ್ಪಕವಾಗಿ ಗ್ರಹಿಸಿ, ಅಭಿವ್ಯಕ್ತಿಗೊಳಿಸಲು ನಮ್ಮ ಸಮಾಜಕ್ಕೆ ಸಾಧ್ಯವಾಗುತ್ತಿಲ್ಲ. ಇದು ಬದಲಾಗಿ, ಸಮಾಜದ, ರಾಷ್ಟ್ರದ, ಏಳಿಗೆಗೆ, ಸಮಾನತೆಗೆ ಮಾರಕವಾಗುವ, ಸಮಾಜದ ಏಳಿಗೆಗೆ ಸಹಾಯಕವಾಗುವ ಅಂಶಗಳನ್ನು ಗ್ರಹಿಸುವ ಶಕ್ತಿ ಬೆಳೆಸಿಕೊಳ್ಳಬೇಕು. ಇಂತಹ ಗ್ರಹಿಕೆಯಿಂದ, ಬದುಕಿನ, ಸಮಾಜದ ನಿರ್ಮಾಣದ ಹೋರಾಟ ಆರಂಭವಾಗಬೇಕು.

೨೫. ಶ್ರೀ ಸುರೇಶ್ ಜಂಗ್ಲಿ

ನಿರ್ದೇಶಕರು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲ ಕೇಂದ್ರ

ಗುಲಬರ್ಗಾ ವಿಶ್ವವಿದ್ಯಾಲಯ

ಸಂದರ್ಶನ ದಿನಾಂಕ : ೨೪.೧೦.೨೦೦೯, ಗುಲಬರ್ಗಾ

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲ ಕೇಂದ್ರವನ್ನು ಇತ್ತೀಚಿಗಷ್ಟೇ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಒಂದು ವಿಭಾಗವಾಗಿ ಆರಂಭಿಸಲಾಗಿದೆ. ಇತ್ತೀಚಿಗೆ ಬಹು ಚರ್ಚೆಗೆ ಗ್ರಾಸವಾಗಿರುವ ಹಾಗೂ ಅಸಮಾನತೆಗೆ ಕಾರಣವಾಗಿರುವ ಈ ಪ್ರದೇಶದ ಬಗ್ಗೆ ಸಮಗ್ರ ಮಾಹಿತಿಯನ್ನು

ಕಲೆ ಹಾಕುವ, ಅಧ್ಯಯನ ಮಾಡುವ ಹಾಗೂ ಸಂಶೋಧನೆಗೆ ಪ್ರೋತ್ಸಾಹ, ಬೆಂಬಲ ನೀಡುವ ಉದ್ದೇಶದಿಂದ ಆರಂಭಿಸಲಾಗಿದೆ. ನಮ್ಮ ಕೇಂದ್ರದ ಮುಖ್ಯ ಕಾರ್ಯ ಉದ್ದೇಶವೇ ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಅದರ ಯೋಜನೆಗಳಿಗೆ, ಅಭಿವೃದ್ಧಿಗೆ, ಅಸಮಾನತೆ ನಿವಾರಣೆಗೆ, ಸಂಬಂಧಪಟ್ಟ ಹಾಗೂ ಸರಕಾರದ ಮತ್ತು ಸಂಘಟನೆಗಳ ವರದಿ ಮಾಹಿತಿಯನ್ನು ಸಂಗ್ರಹಿಸುವುದಾಗಿದೆ.

ಇದಕ್ಕೆ ಸಂಬಂಧಪಟ್ಟಂತೆ ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಇದುವರೆಗೆ ಸಂಗ್ರಹಿಸಿದ ಕೃತಿಗಳು, ದಾಖಲೆಗಳು, ವರದಿಗಳು, ನಿಬಂಧಗಳನ್ನು ಇಲ್ಲಿ ಇಟ್ಟಿದ್ದೇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಪ್ರಕಟಿಸುವ ವರದಿಗಳನ್ನು ಸಂಗ್ರಹಿಸುತ್ತೇವೆ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಪ್ರಕಟಣೆಗಳನ್ನು, ಪತ್ರಿಕೆಗಳನ್ನು, ಸಂಗ್ರಹಿಸಿದ್ದೇವೆ, ಡಾ. ಡಿ.ಎಂ. ನಂಜುಂಡಪ್ಪ ವರದಿ ಮತ್ತು ಅನುಷ್ಠಾನ ಸಮಿತಿಯ ವರದಿಗಳನ್ನು ಸಂಗ್ರಹಿಸುತ್ತಿದ್ದೇವೆ. ಇದರ ಜೊತೆಗೆ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳ ಬಗ್ಗೆ, ಅಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಪರಿಸ್ಥಿತಿಗಳ, ಶಿಕ್ಷಣ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡುವ ಬಿಡಿ ಬಿಡಿಯಾದ ಕೃತಿಗಳನ್ನು ಸಂಗ್ರಹಿಸಿ ಇಡಲಾಗಿದೆ ಮತ್ತು ಈ ಭಾಗದಲ್ಲಿ ನಡೆದಿರುವ, ನಡೆಯುತ್ತಿರುವ ಚಳವಳಿಗಳು, ಹೋರಾಟಗಳಿಗೆ ಸಂಬಂಧಪಟ್ಟಂತಹ ದಾಖಲೆಗಳನ್ನು, ಪ್ರತಿಗಳನ್ನು, ಕೃತಿಗಳನ್ನು ಸಂಗ್ರಹಿಸಿ ಇಡುತ್ತಿದ್ದೇವೆ.

ಈ ಕೇಂದ್ರದ ಕಾರ್ಯವೈಖರಿ ಬಗ್ಗೆ ಹೇಳುವುದಾದರೆ, ಮೊದಲ ಹಂತದಲ್ಲಿ ನಾವು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲವನ್ನು ತೆರೆಯುವುದರ ಮೂಲಕ ನಮ್ಮ ಕಾರ್ಯವನ್ನು ಆರಂಭಿಸಿದ್ದೇವೆ. ಇತ್ತೀಚಿಗಷ್ಟೇ ಆರಂಭವಾಗಿ ಇರುವ ಈ ಕೇಂದ್ರದ ಕನಸುಗಳು ಬಹಳಷ್ಟಿವೆ ಹಾಗೂ ಸ್ಪಷ್ಟವಾಗಿವೆ. ಇದುವರೆಗೆ ಸರಕಾರದಿಂದ ಆಗುವ ಯೋಜನೆಗಳ, ಅನುಷ್ಠಾನಗಳ, ಸಫಲ, ವಿಫಲತೆಯ ಬಗ್ಗೆ ವಿಮರ್ಶನಾ ಕಾರ್ಯವನ್ನು ಆರಂಭಿಸಿದ್ದೇವೆ. ಕ್ರಮೇಣ ನಮ್ಮ ಕೇಂದ್ರದಿಂದಲೇ ಸರ್ವೇ, ವರದಿ ರಚನೆ, ಹೀಗೆ ವಿಭಿನ್ನ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಯಾವುದೇ ಪ್ರದೇಶದ ಅಭಿವೃದ್ಧಿ ಅಥವಾ ಬದಲಾವಣೆ ಕೇವಲ ಒಂದು ಸಾಧನದಿಂದ, ಸರಕಾರದಿಂದ, ಸಂಘಗಳಿಂದ ಮಾತ್ರ ಸಾಧ್ಯವಾಗುವುದಿಲ್ಲ. ಅಭಿವೃದ್ಧಿ ಮತ್ತು ಬದಲಾವಣೆ ಎನ್ನುವುದು ವಿಶಾಲವ್ಯಾಪ್ತಿ, ಆಳವಾದ ಆಸಕ್ತಿ, ಬಲವಾದ ಪ್ರಯತ್ನ, ನಿರಂತರ ಹೋರಾಟಗಳಿಂದ ಮಾತ್ರ ಸಾಧ್ಯ. ಸಾಮಾಜಿಕ ಸುಧಾರಣೆಯನ್ನೇ ಗುರಿ ಮತ್ತು ಉದ್ದೇಶವಾಗಿರಿಸಿಕೊಂಡಿರುವ ಸಾಮಾಜಿಕ ಚಳವಳಿಗಳ ಕೊಡುಗೆ ಅಪಾರವಾಗಿದೆ. ಸಮಾಜದ, ಸಮುದಾಯದ ಅಭಿವೃದ್ಧಿಯಾದರೆ, ಆ ಪ್ರದೇಶ ತನ್ನಿಂತಾನೇ ಅಭಿವೃದ್ಧಿ ಬದಲಾವಣೆ ಆಗುತ್ತದೆ. ಸಾಮಾಜಿಕ ಚಳವಳಿಯಿಂದ ಸಾಮಾಜಿಕ, ಬೌದ್ಧಿಕ ಬದಲಾವಣೆ ಉಂಟಾಗುತ್ತದೆ. ಇಂತಹ ಬದಲಾವಣೆ ನೇರವಾಗಿ ಆ ಪ್ರದೇಶದ ಮೇಲೆ ಬೀರುತ್ತದೆ. ಎಲ್ಲಾ ವರ್ಗದ, ಸಮೂಹದವರಲ್ಲಿ ಜಾಗೃತಿ ಮೂಡಿಸುವಲ್ಲಿ ಇವುಗಳ ಪ್ರಭಾವ ಮುಖ್ಯವಾಗಿದೆ ಹಾಗೂ ಇಂತಹ ಸಾಮಾಜಿಕ ಚಳವಳಿಗಳು ಈ ಪ್ರದೇಶದಲ್ಲಿ ಜರುಗುತ್ತಿವೆ. ಹೀಗೆ ಹೈದರಾಬಾದ್ ಕರ್ನಾಟಕದ ಅಸಮಾನತೆ

ನಿವಾರಣೆಗೆ, ಸಾಮಾಜಿಕ ಚಳವಳಿಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ ಎಂದೇ ಹೇಳಬಹುದು.

ಪ್ರಸ್ತುತ ಹೈದರಾಬಾದ್ ಕರ್ನಾಟಕದ ಪರಿಸ್ಥಿತಿ ಬದಲಾಗುತ್ತಿದೆ ಅನಿಸುತ್ತದೆ. ಏಕೆಂದರೆ, ಸ್ವಾತಂತ್ರ್ಯಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ಬಂದು ಬಹಳ ವರ್ಷಗಳವರೆಗೆ ಈ ಪ್ರದೇಶವು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಸರಕಾರವಾಗಲಿ, ಸಂಘಗಳಾಗಲಿ ಇಲ್ಲಿನ ಏಳಿಗೆಗೆ ಎಷ್ಟು ಪ್ರಯತ್ನ, ಆಸಕ್ತಿ ವಹಿಸಬೇಕಿತ್ತೋ ಅಷ್ಟು ಪ್ರಯತ್ನ ವಹಿಸಲಿಲ್ಲ. ಇತ್ತೀಚಿಗೆ ಅಂದರೆ ಕಳೆದ ೧೦-೧೫ ವರ್ಷಗಳಿಂದ ಈಚೆಗೆ, ಈ ಭಾಗದ ಜನರಲ್ಲಿ, ಚಿಂತಕರಲ್ಲಿ, ಸಮಾಜ ಸೇವಕರಲ್ಲಿ, ಜಾಗೃತಿ ಮೂಡಿದಂತೆ, ಸರಕಾರದ ಮೇಲೆ ಒತ್ತಡಗಳು ಹೆಚ್ಚಾದವು. ಇದೇ ಸಮಯಕ್ಕೆ ಸ್ವಯಂ ಪ್ರೇರಿತ ಸಂಘಗಳು ಸರಕಾರವನ್ನು ಮೀರಿಸಿ ಕಾರ್ಯೋನ್ಮುಖವಾದವು. ಇದಕ್ಕೆ ಅನೇಕ ಶಿಕ್ಷಣ ಸಂಸ್ಥೆಗಳು ಕೈಜೋಡಿಸಿದವು. ಹೀಗಾಗಿ ಬೌದ್ಧಿಕ ಬದಲಾವಣೆ ಆರಂಭವಾಯಿತು. ಸರಕಾರವು ಅಸಮಾನತೆ ನಿವಾರಣೆಗೆ ಡಾ. ಡಿ.ಎಂ. ನಂಜುಂಡಪ್ಪ ಅವರ ನೇತೃತ್ವದಲ್ಲಿ ಸಮಿತಿ ನೇಮಿಸಿತು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿತವಾಯಿತು. ಹೀಗಾಗಿ ಇಲ್ಲಿನ ವಾಸ್ತವ ಪರಿಸ್ಥಿತಿಗಳ, ಸಮಸ್ಯೆಗಳ, ನಿರ್ಲಕ್ಷ್ಯದ ಅಂಶಗಳು ಬೆಳಕಿಗೆ ಬಂದವು. ಇದರ ನಿವಾರಣೆಗೆ ಹೊಸ ಯೋಜನೆಗಳು ರೂಪುಗೊಂಡವು.

ಶ್ರೀ ಬಸವರಾಜ ಪಾಟೀಲ ಸೇಡಂ, ಅಧ್ಯಕ್ಷತೆಯಲ್ಲಿ ಹೈದಬಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೆಯೇ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ವಿವಿಧ ಸಂಘಟನೆಗಳ, ಶಿಕ್ಷಣ ಸಂಸ್ಥೆಗಳ, ಸರಕಾರದಿಂದ ನೇಮಕವಾದ ಮಂಡಳಿಗಳ ಕಾರ್ಯಗಳು, ಯೋಜನೆಗಳು, ಈ ಪ್ರದೇಶದ ಸಾಮಾಜಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಬದಲಾವಣೆಗೆ ಕಾರಣವಾಗುತ್ತಿವೆ. ಹೀಗಾಗಿ ಹೈದರಾಬಾದ್ ಕರ್ನಾಟಕದ ಮೂಲ ಚಿತ್ರಣ ಬದಲಾಗುತ್ತಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ, ವಿಶಾಲವಾದ ಜಿಲ್ಲೆಗಳನ್ನು ಒಳಗೊಂಡಿರುವ ಈ ಪ್ರದೇಶದ ಅಭಿವೃದ್ಧಿಗೆ ಇಷ್ಟೇ ಸಾಲದಾಗಿದೆ. ಸರಕಾರದ ಮಟ್ಟದಲ್ಲಿ, ಸಂಘ ಸಂಸ್ಥೆಗಳ ನೇತೃತ್ವದಲ್ಲಿ ಬೃಹತ್ ಪ್ರಮಾಣದಲ್ಲಿ ಹೋರಾಟಗಳು ಹಾಗೂ ಕಾರ್ಯಗಳು ಆಗಬೇಕಾಗಿವೆ.

□□□

೨. ಗ್ರಂಥಋಣ

೧. ಅಮರೇಶ ನುಗಡೋಣಿ, ಹೈದರಾಬಾದು ಕರ್ನಾಟಕ ಹಾಡು ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೨. ಅಮರೇಶ ನುಗಡೋಣಿ, ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩. ಅಮರೇಶ ನುಗಡೋಣಿ(ಸಂ), ಬಸವಣ್ಣನ ವಚನಗಳು : ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೪. ಅರವಿಂದ ಮಾಲಗತ್ತಿ(ಸಂ), ದಲಿತ ಮಾರ್ಗ, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೫. ಅಲ್ಲಮಪ್ರಭು ಸ್ವಾಮೀಜಿ(ಸಂ), ವಚನ ಸಂಚಯ, ಬಸವ ಯೋಗ ಟ್ರಸ್ಟ್, ಬೆಂಗಳೂರು, ೨೦೦೮.

೬. ಈರಣ್ಣ ಜೆ.ಎಲ್., ಹೈದರಾಬಾದ್ ಕರ್ನಾಟಕದ ಅಸಮಾನತೆ ಸಂವಿಧಾನದ ೩೭೧ನೇ ಕಲಂ ಜಾರಿ : ಸವಾಲು, ಶ್ರೀ ಜಲ ಸೇವಾ ಸಂಸ್ಥೆ, ರಾಯಚೂರು, ೨೦೧೦.

೭. ಉಷಾ ಎಂ., ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮. ಕವಿತಾ ಮಲ್ಲಪ್ಪ, ಬಿ. ಶ್ಯಾಮಸುಂದರ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೮.

೯. ಕೃಷ್ಣೇಗೌಡ ಟಿ.ಎಲ್., ಆಳುವ ಯೋಗಿಯ ನೋಡಿಲ್ಲಿ, ಚಿಂತನ ಪುಸ್ತಕ, ಬೆಂಗಳೂರು, ೨೦೦೯.

೧೦. ಗಂಗಾರಾಮ್ ಚಾಂಡಾಳ, ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್, ಚೈತ್ರ ಪ್ರಕಾಶನ, ಚಿಕ್ಕ ತಿರುಪತಿ, ೧೯೯೨.

೧೧. ಗಾಯಿತ್ರಿ ಎನ್., ಮಹಿಳಾ ಚಳವಳಿಯ ಮಜಲುಗಳು, ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭.

೧೨. ಗೋಪಾಲ್ ಆರ್.(ಸಂ), ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು, ೨೦೦೭.

೧೩. ಗೋಪಾಲರಾವ್ ಹೆಚ್.ಎಸ್., ಇತಿಹಾಸದ ಅಧ್ಯಯನ ಅಂದು ಇಂದು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೧೯೯೭.

೧೪. ಗೋಪಾಲರಾವ್ ಹೆಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೧೯೯೬.

೧೫. ಗೋಪಾಲರಾವ್ ಹೇಜೀಬ್, ಹೈದರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು, ೨೦೦೧.

೧೬. ಗೋವಿಂದರಾಜು ಸಿ.ಆರ್., ಕರ್ನಾಟಕ ಏಕೀಕರಣ ಚಳವಳಿ ಮತ್ತು ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೮.

೧೭. ಗೋವಿಂದರಾಜು ಸಿ.ಆರ್.(ಸಂ), ಚಾರಿತ್ರಿಕ ಕರ್ನಾಟಕ, ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನಮಂಡಲ, ವಿಧಾನಸೌಧ, ಬೆಂಗಳೂರು, ೨೦೧೦.

೧೮. ಚಂದ್ರಶೇಖರ ಟಿ.ಆರ್., ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೧೯. ಚಂದ್ರಶೇಖರ ಟಿ.ಆರ್., ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮತ್ತು ಉನ್ನತಾಧಿಕಾರ ಸಮಿತಿ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೦. ಚಂದ್ರಶೇಖರ ಟಿ.ಆರ್., ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೨೧. ಚಂದ್ರಶೇಖರ ಟಿ.ಆರ್.(ಸಂ), ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೨೨. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ ತಿಪಟೂರು, ೨೦೦೩.

೨೩. ಚಂದ್ರ ಪೂಜಾರಿ ಎಂ., ಸಂಶೋಧನ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೪. ಚಂದ್ರ ಪೂಜಾರಿ ಎಂ.(ಸಂ), ಜನಾಯೋಜನೆ, ಹೈದರಾಬಾದ್ ಕರ್ನಾಟಕ ಅನುಭವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೫. ಚಾಂದಕವಟೆ ಎಂ.ಎಸ್., ಕಾರ್ಮಿಕ ಚಳುವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨.

೨೬. ಚಿನ್ನಸ್ವಾಮಿ ಸೋಸಲೆ ಎನ್., ಗಡಿ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೭. ಚಿನ್ನಸ್ವಾಮಿ ಸೋಸಲೆ ಎನ್., ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೨೮. ಚಿನ್ನಸ್ವಾಮಿ ಸೋಸಲೆ ಎನ್., ದಲಿತರ ಮೇಲೆ ದಾರ್ಜನ್ಯ ಒಂದು ನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೯. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೩೦. ಚಿನ್ನಸ್ವಾಮಿ ಸೋಸಲೆ ಎನ್., ದಲಿತರು ಮತ್ತು ಮತಾಂತರ : ಒಂದು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೧. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೩೨. ಚಿನ್ನಸ್ವಾಮಿ ಸೋಸಲೆ ಎನ್., ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೩೩. ಚಿನ್ನಸ್ವಾಮಿ ಸೋಸಲೆ ಎನ್., ದಲಿತರ ಬದುಕು-ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೩೪. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಚರಿತ್ರೆ ಅಧ್ಯಯನ, ಸಂಚಿಕೆ-೦೫, ಸಂಪುಟ-೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೫. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಚರಿತ್ರೆ ಅಧ್ಯಯನ, ಸಂಚಿಕೆ-೦೫, ಸಂಪುಟ-೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೩೬. ಚುರ್ಚಿಹಾಳಮಠ ಸಿ.ಎಮ್., ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹೈದರಾಬಾದ್ ವಿಮೋಚನಾ ಹೋರಾಟ, ಮುಂಡರಗಿ ತಾಲೂಕು, ಸ್ವಾತಂತ್ರ್ಯ ಯೋಧರ ಸಂಘ, ಮುಂಡರಗಿ, ೧೯೯೯.

೩೭. ಚೆನ್ನಣ್ಣ ವಾಲೀಕಾರ, ಜಾನಪದ ಲೋಕ, ದಲಿತ ಬಂಡಾಯ ವಿಚಾರ ಪ್ರಚಾರ, ಗುಲಬರ್ಗಾ, ೧೯೯೩.

೩೮. ಚೆನ್ನಣ್ಣ ವಾಲೀಕಾರ, ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೯೮.

೩೯. ಚೆನ್ನಬಸವಪ್ಪ ಬೆಟ್ಟದೂರು, ನನ್ನ ಜೀವನಾನುಭವಗಳು, ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ, ೨೦೦೯.

೪೦. ಜಗನ್ನಾಥ ಸಿಂಧೆ, ದಲಿತ ಚಿಂತಕ ಬಿ. ಶ್ಯಾಮಸುಂದರ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೨೦೦೫.

೪೧. ಜಯತೀರ್ಥ ರಾಜಪುರೋಹಿತ, ಖಾಜಾ ಬಂದೇ ನವಾಜ್, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦.

೪೨. ಜಾಗೀರ್‌ದಾರ್ ಆರ್.ಜೆ., ಲಿಂಗಸೂಗೂರು ವಿಠಲರಾವ್, ಹೈದರಾಬಾದ್ ಕರ್ನಾಟಕ, ಪ್ರೇಮಸಾಗರ ಮುದ್ರಣಾಲಯ, ಹೈದರಾಬಾದ್, ೧೯೪೭.

೪೩. ತಂಬಂಡ ವಿಜಯ್ ಪೂಣಚ್ಚ(ಸಂ), ಚರಿತ್ರೆ ವಿಶ್ವಕೋಶ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೪೪. ತಂಬಂಡ ವಿಜಯ್ ಪೂಣಚ್ಚ, ರೈತ ಚಳವಳಿಗಳು (ಏಕೀಕರಣೋತ್ತರ ಕರ್ನಾಟಕದ ಚಳವಳಿ) ಸಂಪುಟ ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೪೫. ನಾಗಲಕ್ಷ್ಮೀಬಾಯಿ ಕೆ.ಜಿ., ಮಕ್ಕಳಿಲ್ಲಿ ಮಾರಾಟಕ್ಕಿವೆ, ಅನುರಾಗ ಪ್ರಿಂಟರ್ಸ್, ಬೆಂಗಳೂರು, ೨೦೦೨.

೪೬. ನಾಗರಾಜ ಟಿ., ಸಾಮಾಜಿಕ ಚಳವಳಿಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೯.

೪೭. ನಾಗರಾಜ ಎಂ.ಜಿ., ಕರ್ನಾಟಕ ರೈತ ಚಳವಳಿ ಸತ್ಯಾಗ್ರಹಗಳು, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ ವಿಧಾನಸೌಧ, ಬೆಂಗಳೂರು, ೨೦೦೬.

೪೮. ನಾಗರತ್ನ ಟಿ.ಎನ್., ಕನಕದಾಸ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦.

೪೯. ನಾಗಭೂಷಣ ಡಿ.ಎಸ್., ರೈತ ಭಾರತ : ಅವಸಾನದ ಅಂಚಿನಲ್ಲಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೨.

೫೦. ನಾಗೇಶ ಚಡಗ, ಹೈದರಾಬಾದ್-ಕರ್ನಾಟಕ (ವಿಶೇಷ ಸಂಚಿಕೆ), ರೋಹಿತ್ ಪ್ರಕಾಶನ, ಬೆಂಗಳೂರು, ೨೦೦೮.

೫೧. ನಾಗೇಶ್ ಹೆಚ್.ವಿ., ಸಾಮಾಜಿಕ ಚಳವಳಿಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೫೨. ನಿಂಗಣ್ಣ ಸಣ್ಣಕ್ಕಿ, ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೫೩. ಪಾಟೀಲ ಎಂ.ಬಿ.(ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲಬರ್ಗಾ ಜಿಲ್ಲೆ, ಬೆಂಗಳೂರು, ೧೯೯೭.

೫೪. ಪಾಟೀಲ ಎಚ್.ಎಸ್., ಅಲ್ಲಮಪ್ರಭು ಬೆಟ್ಟದೂರು, ವಿಮೋಚನೆ, ಜಿಲ್ಲಾ ಆಡಳಿತ, ಕೊಪ್ಪಳ, ೧೯೯೯.

೫೫. ಪಾಟೀಲ ಹೆಚ್.ಎಸ್., ಕೊಪ್ಪಳ ಶ್ರೀ ಗವಿಸಿದ್ಧೇಶ್ವರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫೬. ಪಾಟೀಲ ಎಂ.ಎಸ್.(ಸಂ), ವಿಕಾಸ (ಕಲಬುರ್ಗಿ ಕಂಪು ೨೦೧೦), ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಗುಲಬರ್ಗಾ, ೨೦೧೦.

೫೭. ಪಾಟೀಲ ಸಿ.ಡಿ., ದ್ರವ ಬಂಗಾರ ನೀರು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೭.

೫೮. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೫೯. ಪುಟ್ಟಯ್ಯ ಬಿ.ಎಂ., ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೬೦. ಪುಟ್ಟಪ್ಪ ಕೆ.ವಿ.(ಪ್ರ.ಸಂ.), ನಾಗೇಗೌಡ ಹೆಚ್.ಎಲ್.(ಸಂ.ಸಂ.), ಪ್ರವಾಸಿ ಕಂಡ ಇಂಡಿಯಾ, ಸಂಪುಟ-೫, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬.

೬೧. ಪೋತೆ ಹೆಚ್.ಟಿ., ಜಗನ್ನಾಥ ಸಿಂಧೆ, ಬಿ. ಶ್ಯಾಮಸುಂದರ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೬೨. ಫಕೀರ್ ಮಹಮ್ಮದ್ ಕಟ್ಪಾಡಿ, ಸೂಫಿ ಮಹಿಳೆಯರು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೨೦೧೦.

೬೩. ಬಸವರಾಜ ಎಲ್. ಸಂ), ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪಾವರ ಮಹಾದಾಸೋಹ ಸೂತ್ರಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೮.

೬೪. ಬಸವರಾಜ ಸಬರದ, ವಚನ ಚಳವಳಿ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೧೯೯೨.

೬೫. ಬಸವರಾಜ ಸಬರದ(ಸಂ), ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೬೬. ಬಸವರಾಜ ಸಬರದ, ವಚನಕಾರರು ಮತ್ತು ದಲಿತ ಸಂವೇದನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೬೭. ಬಸವರಾಜ ಪೊಲೀಸ ಪಾಟೀಲ(ಸಂ), ಗವಿಸಿದ್ಧಪ್ಪ ಎಚ್. ಪಾಟೀಲ(ಸಹ ಸಂ), ಬಿಡುಗಡೆ ಅಮರ ಪ್ರಕಾಶನ, ಗುಲಬರ್ಗಾ, ೨೦೦೨.

೬೮. ಬಸವರಾಜ ಮಲಶೆಟ್ಟಿ, ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೬೯. ಬಾಡಿಯಾಲ ದೇವೇಂದ್ರಪ್ಪ(ಪ್ರ.ಸಂ), ಕರ್ಮಯೋಗಿ (ಶ್ರೀ ಮಲ್ಲಿಕಾರ್ಜುನ ಖರ್ಗೆ ಅಭಿನಂದನಾ ಗ್ರಂಥ) ಪ್ರಾರ್ಥನಾ ಪ್ರಕಾಶನ, ಗುಲಬರ್ಗಾ, ೨೦೦೫.

೭೦. ಬಾಲಚಂದ್ರ ಜಯಶೆಟ್ಟಿ, ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳವಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೭೧. ಬಾಲಚಂದ್ರ ಜಯಶೆಟ್ಟಿ, ಹೈದರಾಬಾದ ಕರ್ನಾಟಕ ವಿಮೋಚನಾ ಚಳವಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೭೨. ಬಾಬುರಾವ್ ಮುಡಬಿ, ಮಹಿಳಾ ಸಬಲೀಕರಣ, ಅಂಬೇಡ್ಕರ್ ದೃಷ್ಟಿಕೋನ, ಲಕ್ಷ್ಮೀ ಪ್ರಕಾಶ, ಬೆಂಗಳೂರು, ೨೦೦೫.

೭೩. ಭಾಸ್ಕರ್ ಟಿ.ಎಂ., ರಾಜಶೇಖರ ಹತಗುಂದಿ(ಸಂ), ಕಲುಬರ್ಗಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೭೪. ಭೈರಪ್ಪ ಕೆ., ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಮಾಜಿಕ ಚಿಂತನೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೧.

೭೫. ಮಲ್ಲಿಕಾರ್ಜುನ ಜೆ. ಅಮ್ಮೆ, ದಲಿತ ತತ್ವಪದಕಾರ ಕಾಶೀನಾಥ ಪಂಚಶೀಲ ಗವಾಯಿ, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೭೬. ಮಣೂರು ಎಸ್.ಆರ್., ಹೈದರಾಬಾದ್ ಕರ್ನಾಟಕ ವಿಮೋಚನೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೬.

೭೭. ಮಹಾದೇವಯ್ಯ ಪಿ.(ಸಂ), ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೭೮. ಮಹಾಬಲೇಶ್ವರಪ್ಪ ಬಿ.ಸಿ., ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

೭೯. ಮೀನಾಕ್ಷಿ ಬಾಳಿ(ಸಂ), ಚಿವುಟದಿರಿ ಚಿಗುರು (ಹೆಣ್ಣು ಭ್ರೂಣ ಹತ್ಯೆ ಕುರಿತು ಲೇಖನಗಳು), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಗುಲಬರ್ಗಾ, ೨೦೦೫.

೮೦ ಮೀನಾಕುಮಾರಿ ಪಾಟೀಲ, ಡಾ. ಚನ್ನಬಸವ ಪಟ್ಟದ್ದೇವರು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೮೧. ಮುಜಾಫರ್ ಅಸ್ಸಾದಿ, ರೈತ ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೬.

೮೨. ಮುನಿವೆಂಕಟಪ್ಪ ವಿ.(ಸಂ), ದಲಿತ ಚಳವಳಿ ಚರಿತ್ರೆ, ತನು-ಮನು ಪ್ರಕಾಶನ, ಮೈಸೂರು, ೨೦೦೯.

೮೩. ಮುನಿವೆಂಕಟಪ್ಪ ವಿ., ದಲಿತ ಚಳವಳಿ ಒಂದು ಅವಲೋಕನ, ವಿಚಾರವಾದಿ ಪ್ರಕಾಶನ, ಮೈಸೂರು, ೧೯೯೮.

೮೪. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪ್ಪಿಮಠ(ಸಂ), ರಾಯಚೂರು ಜಿಲ್ಲಾದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೪.

೮೫. ಮೊಗಳ್ಳಿ ಗಣೇಶ್, ದಲಿತ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೮೬. ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೮೭. ಮೋಹನ್‌ಕೃಷ್ಣ ರೈ ಕೆ., ಪರಿಸರ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೮೮. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮೯. ರಘುನಾಥರಾವ್ ಡಿ., ತತ್ವಪದಕಾರರು ಮತ್ತು ವಸಾಹತು ವ್ಯವಸ್ಥೆ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು, ೨೦೦೮.

೯೦. ರಝಾಕ ಉಸ್ತಾದ, ಹೈದರಾಬಾದ ಕರ್ನಾಟಕ ಕಥೆ-ವ್ಯಥೆ,(ಸಂವಿಧಾನದ ೩೭೧ ಕಲಂ ತಿದ್ದುಪಡಿ ಹೋರಾಟದ ಇತಿಹಾಸ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧.

೯೧. ರವೀಂದ್ರನಾಥ ಕೆ.(ಸಂ), ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೪.

೯೨. ರವೀಂದ್ರನಾಥ ಕೆ.(ಸಂ), ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೯೩. ರಹಮತ್ ತರೀಕೆರೆ, ಕರ್ನಾಟಕದಲ್ಲಿ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೯೪. ರಹಮತ್ ತರೀಕೆರೆ, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೯೫. ರಹಮತ್ ತರೀಕೆರೆ(ಸಂ), ಧರ್ಮ, ವಿಶ್ವಕೋಶ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೯೬. ರಕ್ಷಿತ್ ಎಂ.ಆರ್.(ಅನು), ರೋಮಿಲಾ ಥಾಪರ್(ಮೂಲ), ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಸಮಾಜದ ಧರ್ಮ ನಿರಪೇಕ್ಷೀಕರಣ ವಿಸ್ತಾರ, ಬೆಂಗಳೂರು, ೧೯೯೯.

೯೭. ರಾಮಕೃಷ್ಣ ಜಿ. (ಪ್ರ.ಸಂ.), ಮಣಿಪಾಲ ಆರ್ಕೆ (ಸಂ.ಸಂ), ಸಾಮಾಜಿಕ ಚಳವಳಿಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯.

೯೮. ರಾಜ್ ಎಂ.ಸಿ., ದಲಿತತ್ವ ದಲಿತ ಧರ್ಮ ಗ್ರಂಥ, ಅಂಬೇಡ್ಕರ್ ಸಂಪನ್ಮೂಲ ಕೇಂದ್ರ, ತುಮಕೂರು, ೨೦೦೨.

೯೯. ರೂಪಾ ಹಾಸನ, ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೦೦. ರಂಗರಾಜ ವನದುರ್ಗ, ದಲಿತ ಸಂವೇದನೆ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೧೦೧. ರಂಜಾನ್ ದರ್ಗಾ, ಬಸವ ಧರ್ಮದ ವಿಶ್ವಸಂದೇಶ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೭.

೧೦೨. ಲಕ್ಷ್ಮಣ ದಸ್ತಿ, ನಮ್ಮ ಇತಿಹಾಸ ಕೈಫಿಯತ್, ಹೈದರಾಬಾದ್ ಕರ್ನಾಟಕ ವಿಮೋಚನಾ ಮತ್ತು ಅಭಿವೃದ್ಧಿ ಸಮಿತಿ, ಗುಲಬರ್ಗಾ, ೨೦೦೯.

೧೦೩. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೦೪. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೦೫. ವರದರಾಜರಾವ್ ಜಿ., ಪುರಂದರದಾಸರು, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬.

೧೦೬. ವಾಸುದೇವ ಅಗ್ನಿಹೋತ್ರಿ(ಸಂ), ಕೀರ್ತನೆ ತತ್ವಪದಗಳ ಸಂಗ್ರಹ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

೧೦೭. ವಿರೂಪಾಕ್ಷಿ ಪೂಜಾರಹಳ್ಳಿ, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೦೮. ವಿಠಲಮೂರ್ತಿ ಆರ್.ಟಿ., ದಲಿತ ಚಳವಳಿಯ ನಾಳೆಗಳು, ಪ್ರಭೆ ಪ್ರಕಾಶನ, ಬೆಂಗಳೂರು, ೨೦೦೫.

೧೦೯. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.), ಚಿನ್ನಸ್ವಾಮಿ ಸೋಸಲೆ ಎನ್. (ಸಂ.ಸಂ.), ಸಮಕಾಲೀನ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೧೦. ವಿಜಯ್ ಪೂಣಚ್ಚ ತಂಬಂಡ, ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೧೧. ವಿಜಯಕುಮಾರಿ ಎಸ್. ಕರಿಕಲ್, ಮಹಿಳೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೧೨. ವಿರೂಪಾಕ್ಷಿ ಪೂಜಾರಹಳ್ಳಿ, ಜಲಸಂಬಂಧಿ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೧೩. ವೀರಸಂಗಯ್ಯ ಜೆ.ಎಂ., ರೈತರ ಆತ್ಮಹತ್ಯೆ ತಡೆ ಹೇಗೆ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಹಗರಿಬೊಮ್ಮನಹಳ್ಳಿ, ೨೦೦೭.

೧೧೪. ವೆಂಕಟರತ್ನಂ ಎಂ.ಬಿ., ಪದ್ಮಾ ಎಂ.ಬಿ., ಇತಿಹಾಸ ಸಂಶೋಧನಾ ಮಾರ್ಗ, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂ.ಲಿ., ಬೆಂಗಳೂರು, ೧೯೮೫.

೧೧೫. ವೆಂಕಟೇಶ್ ಕೆ., ಸರೋಜಾ ಬಿ.(ಸಂ), ಹೈದರಾಬಾದ್ ಕರ್ನಾಟಕ ವರ್ತಮಾನದ ತಲ್ಲಣಗಳು, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೬.

೧೧೬. ವೈಜನಾಥ ಪಾಟೀಲ, ಹೈದರಾಬಾದ್ ಕರ್ನಾಟಕ ಅಸಮಾನತೆಯ ಒಂದು ನೋಟ, ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು, ಕಲಬುರ್ಗಿ, ೨೦೦೫.

೧೧೭. ವೈಜನಾಥ ಪಾಟೀಲ(ಸಂ), ಹೈದರಾಬಾದ್ ಕರ್ನಾಟಕ ಪರ ಹೋರಾಟ ಏಕೆ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೭.

೧೧೮. ಶರ್ಮಾ ಎ.ಆರ್., ಸಾಮಾಜಿಕ ಬದಲಾವಣೆ ಮತ್ತು ಚಳವಳಿ, ಅಖಿಲಾ ಏಜನ್ಸೀಸ್, ಮೈಸೂರು, ೨೦೦೭.

೧೧೯. ಶರಭಯ್ಯ ಎಂ., ಮಾನವ ಮಹಾದೇವ ಬಸವಣ್ಣ, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹಂಪಿ, ೧೯೯೧.

೧೨೦. ಶಿವರಾಜ ಪಾಟೀಲ, ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ, ಮಹಾಂತೇಶ ಪ್ರಕಾಶನ ಸಂಸ್ಥೆ, ಗುಲಬರ್ಗಾ, ೨೦೦೫.

೧೨೧. ಶಿವು ಎಸ್. ಕಾಲೇಭಾಗ, ಕನ್ನಡ ನಾಡಿನ ಕಣ್ಮಣಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ, ಸಹನ ಪ್ರಕಾಶನ, ಸಿಂದಗಿ, ೨೦೦೩.

೧೨೨. ಶೇಷಾದ್ರಿ ಬಿ., ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೀಕರಣ ಮತ್ತು ಜನಾಂದೋಲನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೨೩. ಷೇಕ್‌ಅಲಿ ಬಿ.(ಪ್ರ.ಸಂ.), ಸೆಬಾಸ್ಟಿಯನ್ ಜೋಸೆಫ್(ಸಂ.ಸಂ) ಕರ್ನಾಟಕ ಚರಿತ್ರೆ, ಮಾಲೆ-೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೧೨೪. ಸಿದ್ಧಲಿಂಗಪ್ಪ ಕೊಟ್ನೆಕಲ್, ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಮೇಘನಾ ಪ್ರಕಾಶನ, ಕೊಪ್ಪಳ, ೨೦೧೦.

೧೨೫. ಸುಬ್ರಮಣ್ಯ ಜಿ., ಸಾಮಾಜಿಕ ಸಮಸ್ಯೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೩.

೧೨೬. ಸೂರ್ಯನಾಥ ಯು. ಕಾಮತ್(ಸಂ), ಕರ್ನಾಟಕ ಸ್ಟೇಟ್ ಗೆಝೆಟಿಯರ್, ಗೌವರ್ನ್‌ಮೆಂಟ್ ಆಫ್ ಕರ್ನಾಟಕ, ಬೆಂಗಳೂರು, ೧೯೮೨.

೧೨೭. ಸೋಮನಾಥ ಯಳವಾರ, ಪ್ರೇಮಾ ಸಿರ್ಶೆ(ಸಂ), ಬೀದರ್ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೧೨೮. ಹಾಲತಿ ಸೋಮಶೇಖರ್, ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಮೈಸೂರು, ೨೦೦೭.

೨. ಇಂಗ್ಲೀಷ್ ಗ್ರಂಥಗಳು

೧. ಅನಿಲ್ ಸಕ್ಸೇನಾ, ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಹಿಸ್ಟರಿ, ಸಂಪುಟ-೨೯, ಅನಮೋಲ್ ಪಬ್ಲಿಕೇಶನ್ ಪ್ರೈ.ಲಿ., ನ್ಯೂ ಡೆಲ್ಲಿ, ೨೦೦೬.

೨. ಅಂಬೇಡ್ಕರ್ ಬಿ.ಆರ್., ದಿ ಬುದ್ಧ ಅಂಡ್ ಹಿಸ್ ದಮ್ಮ, ಸಿದ್ದಾರ್ಥ ಪಬ್ಲಿಕೇಷನ್, ಬಾಂಬೆ, ೧೯೭೫.

೩. ಅಹಿರ್ ಡಿ.ಸಿ., ಡಾ. ಅಂಬೇಡ್ಕರ್ ಅಂಡ್ ದಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್, ಬುದ್ಧವಿಹಾರ, ಲಕ್ನೋ, ೧೯೭೩.

೪. ಅರ್ಥರ್ ಜೆ. ಅರ್‌ಬೆರ್ರಿ, ಹಿಸ್ಟರಿ ಆಫ್ ಸೂಫಿಸಂ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೭೫.

೫. ಬಿಪಿನ್‌ಚಂದ್ರ, ಅಮಲೇಶ್ ತ್ರಿಪಾಠಿ, ಬರುನ್ ಡೇ, ಫ್ರೀಡಂ ಸ್ಟ್ರಗಲ್, ನ್ಯಾಷನಲ್ ಬುಕ್ ಟ್ರಸ್ಟ್, ನ್ಯೂ ಡೆಲ್ಲಿ, ೧೯೭೪.

೬. ಬಿಪಿನ್ ಚಂದ್ರ, ಇಂಡಿಯ ಆಫ್ಟರ್ ಇಂಡಿಪೆಂಡೆನ್ಸ್, ಪೆಂಗ್ವಿನ್ಸ್ ಬುಕ್ಸ್ ಇಂಡಿಯ ಪ್ರೈ.ಲಿ., ನ್ಯೂ ಡೆಲ್ಲಿ, ೧೯೯೯.

೭. ಕಾರ್ಲ್‌ಮಾರ್ಕ್ಸ್, ನೋಟ್ಸ್ ಆನ್ ಇಂಡಿಯನ್ ಹಿಸ್ಟರಿ, ಮಾಸ್ಕೋ, ೧೯೬೦.

೮. ಡೇವಿಡ್ ಅರ್ನಾಲ್ಡ್, ಡೇವಿಡ್ ಹಾರ್ಡಿಮ್ಯಾನ್, ಸಬಾಲ್ಟರ್ನ್ ಸ್ಟಡೀಸ್, ಸಂಪುಟ-VIII, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ, ೧೯೯೨.

೯. ದೇವಲ್ಗಾಂವಕರ್ ವಿ.ಪಿ., ಸ್ವಾಮಿ ರಮಾನಂದ್ ತೀರ್ಥ ಆ್ಯನ್ ಎಪೋಚ್‌ಮೇಕರ್, ಪ್ರಸಾರಾಂಗ, ಗುಲಬರ್ಗಾ ಯೂನಿವರ್ಸಿಟಿ, ಗುಲಬರ್ಗಾ, ೧೯೮೫.

೧೦. ಇರ್ಫಾನ್ ಹಬೀಬ್, ಎಸ್ಸೇಸ್ ಆನ್ ಇಂಡಿಯನ್ ಹಿಸ್ಟರಿ, ಟುಲಿಕಾ, ನ್ಯೂ ಡೆಲ್ಲಿ, ೧೯೯೫.

೧೧. ಗೌರಿ ವಿಶ್ವನಾಥನ್, ಜಾಟ್‌ಸೈಡ್ ದಿ ಪೋಲ್ಡ್: ಕನ್‌ವರ್‌ಶನ್, ಮಾಡರ್‌ನಿಟಿ ಅಂಡ್ ಬಿಲೀಫ್ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ, ೧೯೯೮.

೧೨. ಹರ್ಬರ್ಟ್ ಬ್ಲೂಮರ್, ಸೋಷಿಯಲ್ ಮೂವ್‌ಮೆಂಟ್ಸ್ ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ, ಲಿಬಾರ್‌ನೆಸ್ ನೋಬಲ್, ನ್ಯೂಯಾರ್ಕ್, ೧೯೫೫.

೧೩. ಹರೀಶ್ ಕೆ. ಪುರಿ(ಸಂ), ದಲಿತ್ಸ್ ಇನ್ ರೀಜನಲ್ ಕಂಟೆಕ್ಸ್‌ಟ್, ರಾವತ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, ೨೦೦೪.

೧೪. ಹರೀಶ್ ಕೆ. ಪುರಿ., ಪರಮಜಿತ್ ಎಸ್. ಜಡ್ಜ್, ಸೋಷಿಯಲ್ ಅಂಡ್ ಪೊಲಿಟಿಕಲ್ ಮೂವ್‌ಮೆಂಟ್, ರಾವತ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ೧೯೬೫.

೧೫. ಹಿರೇಮಠ ಆರ್.ಸಿ., ಬುದ್ಧಿಸಂ ಇನ್ ಕರ್ನಾಟಕ, ಡಿ.ಕೆ. ಪ್ರಿಂಟ್ ವರ್ಲ್ಡ್ ಲಿ., ನ್ಯೂ ಡೆಲ್ಲಿ, ೧೯೯೪.

೧೬. ಜಾತವ ಡಿ.ಆರ್., ದಿ ಬುದ್ಧ ಅಂಡ್ ಕಾರ್ಲ್‌ಮಾರ್ಕ್ಸ್, ಫಿಯೋನಿಕ್ಸ್ ಪಬ್ಲಿಷಿಂಗ್ ಹೌಸ್, ಆಗ್ರ, ೧೯೬೮.

೧೭. ಕರಣ್‌ಸಿಂಗ್, ದಿ ಇಂಟರ್‌ಫೇತ್ ಮೂವ್‌ಮೆಂಟ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್, ಬೆಂಗಳೂರು, ೨೦೦೨.

೧೮. ಕಾಶೀನಾಥ ಕೆ. ಕವಲೇಕರ್., ನಾನ್ ಬ್ರಾಹ್ಮೀನ್ ಮೂವ್‌ಮೆಂಟ್ ಇನ್ ಸದರ್ನ್ ಇಂಡಿಯ, ಶಿವಾಜಿ ಯೂನಿವರ್ಸಿಟಿ, ಕೊಲ್ಹಾಪುರ, ೧೯೭೯.

೧೯. ಮನೋಹರ ಯಾದವ, ಸೋಶಿಯೋ-ಎಕಾನಾಮಿಕ್ ಸರ್ವೇ ಆಫ್ ಶೆಡ್ಯೂಲ್ ಕಾಸ್ಟ್ಸ್ ಅಂಡ್ ಶೆಡ್ಯೂಲ್ ಟ್ರೈಬ್ಸ್ ಇನ್ ಕರ್ನಾಟಕ: ಎ ಕ್ರಿಟಿಕಲ್ ಅನಾಲಿಸಿಸ್, ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಎಕಾನಾಮಿಕ್ ಚೇಂಜ್, ಬೆಂಗಳೂರು, ೨೦೦೩.

೨೦. ಮುನ್ಷೀ ಕೆ.ಎನ್., ದಿ ಎಂಡ್ ಆಫ್ ಆ್ಯನ್ ಎರ, ಭಾರತೀಯ ವಿದ್ಯಾಭವನ್, ಬಾಂಬೆ, ೧೯೫೭.

೨೧. ಮ್ಯಾಕ್ಸ್‌ವೆಲ್ ರಿಚರ್ಡ್ ಈಟನ್, ಸೂಫೀಸ್ ಆಫ್ ಬಿಜಾಪುರ, ಯೂನಿವರ್ಸಿಟಿ ಪ್ರೆಸ್, ಪ್ರಿನ್ಸಟನ್, ೧೯೭೮.

೨೨. ನರೈನ್ ಎ.ಕೆ., ಅಹೀರ್ ಡಿ.ಸಿ., ಡಾ. ಅಂಬೇಡ್ಕರ್ ಬುದ್ಧಿಸಂ ಅಂಡ್ ಸೋಶಿಯಲ್ ಚೇಂಜ್, ಬಿ.ಆರ್. ಪಬ್ಲಿಷಿಂಗ್ ಕಾರ್ಪೋರೇಶನ್, ದೆಹಲಿ, ೧೯೯೪.

೨೩. ಓಂವೆಡ್ಸ್ ಗಾಲಿ, ದಲಿತ್ಸ್ ಅಂಡ್ ಡೆಮೊಕ್ರೆಟಿಕ್ ರೆವೋಲುಶನ್ಸ್, ಸಾಗಾ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, ೧೯೯೪.

೨೪. ಪಾರ್ಥ ಚಟರ್ಜಿ, ಜ್ಞಾನೇಂದ್ರ ಪಾಂಡೆ(ಸಂ), ಸಬಾಲ್ಟರ್ನ್ ಸ್ಟಡೀಸ್, ಸಂಪುಟ-VII, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ, ೧೯೯೨.

೨೫. ಪಾಲೇಕರ್ ಎಸ್.ಎ., ಇಂಡಿಯನ್ ಕಾನ್ಸ್ಟಿಟ್ಯೂಷನ್, ಸುಹಾಸ್ ಪಬ್ಲಿಕೇಶನ್, ಬೆಂಗಳೂರು, ೨೦೦೫.

೨೬. ಪಾರ್ಥಸಾರಥಿ ಗುಪ್ತಾ, ಇಂಪೀರಿಯಾಲಿಸಂ ಅಂಡ್ ದಿ ಬ್ರಿಟಿಷ್ ಲೇಬರ್ ಮೂವ್‌ಮೆಂಟ್, ಸಾಗಾ ಪಬ್ಲಿಕೇಷನ್, ನ್ಯೂ ಡೆಲ್ಲಿ, ೨೦೦೨.

೨೭. ಪೈಲೀ ಎಂ.ವಿ., ಇಂಡಿಯನ್ ಕಾನ್ಸ್ಟಿಟ್ಯೂಶನ್, ಎಸ್. ಚಾಂದ್ ಅಂಡ್ ಕಂ, ನ್ಯೂ ಡೆಲ್ಲಿ, ೨೦೦೩.

೨೮. ರಣಜಿತ್ ಗುಹಾ (ಸಂ), ಸಬಾಲ್ಟರ್ನ್ ಸ್ಟಡೀಸ್, ಸಂಪುಟಗಳು I ರಿಂದ VI, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೈಸ್, ನ್ಯೂ ಡೆಲ್ಲಿ.

೨೯. ರಾವ್ ಎಂ.ಎಸ್.ಎ. (ಸಂ), ಸೋಷಿಯಲ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, ಮನೋಹರ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ೧೯೮೪.

೩೦. ರಾಜಶೇಖರ್ ವಿ.ಟಿ., ದಲಿತ್ ಮೂವ್‌ಮೆಂಟ್ ಇನ್ ಕರ್ನಾಟಕ, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮದ್ರಾಸ್, ೧೯೭೮.

೩೧. ಸಜಲ್ ಬಸು, ರೀಜನಲ್ ಮೂವ್‌ಮೆಂಟ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡಿ, ಮನೋಹರ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, ೧೯೯೨.

೩೨. ಸರಫ್ ಡಿ. ಅನ್ಸರಿ, ಸೂಫಿ ಸೇಂಟ್ಸ್ ಅಂಡ್ ಸ್ಟೇಟ್ ಪವರ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ೧೯೯೨.

೩೩. ಸರೋಜಾ ಬಿ, ರಿಟ್ರಾಸ್ಪೆಕ್ಟ್ ಅಂಡ್ ಪ್ರಾಸ್ಪೆಕ್ಟ್, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೫.

೩೪. ಸಯ್ಯದ್ ಅತ್ತರ್ ಅಬ್ಬಾಸ್ ರಿಜ್ವಿ, ಎ ಹಿಸ್ಟರಿ ಆಫ್ ಸೂಫಿಸಂ ಇನ್ ಇಂಡಿಯಾ, ಸಂಪುಟ-II, ಮುನ್ಷೀರಾಂ ಮೋಹನಲಾಲ್ ಪ್ರೈ.ಲಿ., ನ್ಯೂ ಡೆಲ್ಲಿ, ೧೯೮೩.

೩೫. ಸೂರ್ಯನಾಥ್ ಕಾಮತ್(ಮು.ಸಂ.), ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್, ಪಾರ್ಟ್-I, ಗೌರ್ನ್‌ಮೆಂಟ್ ಆಫ್ ಕರ್ನಾಟಕ, ಬೆಂಗಳೂರು, ೧೯೮೨.

೩೬. ಶಹ ಗ್ಯಾನ್‌ಶಾಮ್(ಸಂ), ಕಲ್ಚರಲ್ ಸಬಾರ್ಡಿನೇಶನ್ ಅಂಡ್ ದಿ ದಲಿತ್ ಚಾಲೆಂಜಸ್, ಸಾಗ ಪಬ್ಲಿಕೇಶನ್, ನ್ಯೂ ಡೆಲ್ಲಿ, ೨೦೦೦.

೩೭. ಶಾಲೀನಿ ರಜನೀಶ್, ಛಾಯಾ ದೇವಾಂಕರ್, ಸಂಗೀತ ಎನ್. ಕಟ್ಟಿಮನಿ, ಇನ್‌ಕ್ಲೂಸಿವ್ ಗ್ರೋತ್-ಆರ್ಟಿಕಲ್-೩೭೧ ಇನ್ ಹೈದರಾಬಾದ್ ಕರ್ನಾಟಕ ರೀಜನ್, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೨೦೧೧.

೩೮. ಶಾಹೀದ್ ಅಮೀನ್, ದಿಪೇಶ್ ಚಕ್ರಬೋರ್ತಿ(ಸಂ), ಸಬಾಲ್ಟರ್ನ್ ಸ್ಟಡೀಸ್, ಸಂಪುಟ-IX, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೬.

೩೯. ಶೌತನ್ ಜಿ.ಪಿ., ರೆವಲ್ಯೂಷನ್ ಆಫ್ ಮಿಸ್ಟೀಕ್ಸ್ : ಆನ್ ಸಮ್ ಸೋಷಿಯಲ್ ಆಸ್ಪೆಕ್ಟ್ಸ್ ಆಫ್ ವೀರಶೈವಿಸಂ, ಎಂಬಿಡಿ, ನ್ಯೂ ಡೆಲ್ಲಿ, ೧೯೯೫.

೪೦. ಸಿಂಗ್ ಕೆ.ಎಸ್., ಟ್ರೈಬಲ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, ಮನೋಹರ್ ಪಬ್ಲಿಕೇಷನ್ಸ್, ದೆಹಲಿ, ೨೦೦೬.

೪೧. ವಾಲ್ಟರ್ ಫರ್ನಾಂಡೀಸ್, ದಿ ಎಮರ್ಜಿಂಗ್ ದಲಿತ್ ಐಡಿಂಟಿಟಿ, ದಿ ರಿಅಸರ್ಷನ್ ಆಫ್ ದಿ ಸಬಾಲ್ಟರ್ನ್ಸ್, ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್, ನ್ಯೂ ಡೆಲ್ಲಿ, ೧೯೯೬.

೪೨. ವಿಲ್ಕಿನ್‌ಸನ್ ಟಿ.ಎಸ್. ಅಂಡ್ ಥಾಮಸ್, ಅಂಬೇಡ್ಕರ್ ಅಂಡ್ ದಿ ನಿಯೋ-ಬುದ್ದಿಸ್ಟ್ ಮೂವ್‌ಮೆಂಟ್, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮದ್ರಾಸಾ, ೧೯೭೨.

೪೩. ಯಾಜ್ದಾನಿ ಜಿ., ಬೀದರ್ ಇಟ್ಸ್ ಹಿಸ್ಟರಿ ಅಂಡ್ ಮಾನುಮೆಂಟ್ಸ್, ಆಕ್ಸ್‌ಫರ್ಡ್ ಯೂನಿವರ್ಸಿಟಿ, ಲಂಡನ್, ೧೯೪೭.

೩. ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು

೧. ಅಕ್ಕಮ್ಮ ಟಿ., ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು : ಒಂದು ಅಧ್ಯಯನ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯-೧೦.

೨. ಅಜ್ಜಯ್ಯ ಸಿ., ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩. ಅನುಸೂಯ ಕಾಂಬಳೆ, ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨೦೦೨.

೪. ಅಶ್ವಥ್ ಡಿ.ಎಸ್., ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೫. ಉಷಾ ದೇಸಾಯಿ, ಫ್ರೀಡಂ ಮೂವ್‌ಮೆಂಟ್ ಇನ್ ರಾಯಚೂರ್ ಡಿಸ್ಟ್ರೀಕ್ಟ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೪.

೬ ಕರಿಬಸಪ್ಪ ಎ., ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೭. ಕುಮಾರ್‌ಸ್ವಾಮಿ ಹೆಚ್., ದಲಿತ ಚಳವಳಿ ಮತ್ತು ಸಾಮಾಜಿಕ ನ್ಯಾಯ, ಕನ್ನಡ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೬.

೮. ಕುಮಾರ್ ಬಿ.ಪಿ., ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಚಳವಳಿಗಳು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೯. ಗಾಂಧೀಜಿ ಚಂದ್ರಪ್ಪಾ, ಡಾ. ಬಿ.ಆರ್. ಅಂಬೇಡ್ಕರ್ ಅಂಡ್ ವುಮೆನ್ ಎಂಪ್ಲಾಯ್‌ಮೆಂಟ್, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೭.

೧೦. ತುಕರಾಮ, ಸ್ವಾತಂತ್ರ್ಯಪೂರ್ವ ಹೈದರಾಬಾದ್ ಕರ್ನಾಟಕದ ಸಾಹಿತ್ಯ ಅಧ್ಯಯನ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೧. ನಾಗಭೂಷಣ ಗೌಡ, ಪ್ರಿನ್ಸ್‌ಲಿ ಸ್ಟೇಟ್ಸ್ ಆಫ್ ಹೈದರಾಬಾದ್ ಅಂಡ್ ಮೈಸೂರು : ಪೊಲಿಟಿಕಲ್ ಮೂಮೆಂಟ್ಸ್ ಫಾರ್ ಇಂಟಿಗ್ರೇಶನ್ ಇನ್ ಟು ದಿ ಯೂನಿಯನ್ ಅಂಡ್ ದಿ ಸ್ಟೇಟ್, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯.

೧೨. ಪ್ರಭಾತ್ ಪದ್ಮಾ ಸೈನಾ, ಫ್ರೀಡಂ ಮೂವ್‌ಮೆಂಟ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೨.

೧೩. ಮಲ್ಲಿಕಾರ್ಜುನ ನ. ಜಾಬಾ, ಗುಲಬರ್ಗಾ ಜಿಲ್ಲೆಯ ದಲಿತ ತತ್ವಪದಕಾರರು : ಒಂದು ಅಧ್ಯಯನ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೨.

೧೪. ಮಹಾಬಲೇಶ್ವರಪ್ಪ ಬಿ.ಸಿ., ಇಂಟಿಗ್ರೇಶನ್ ಆಫ್ ಹೈದರಾಬಾದ್ ಕರ್ನಾಟಕ, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೨.

೧೫. ರಾಜಶೇಖರ ವಿ. ಬೀರನಹಳ್ಳಿ, ಇಂಪ್ಯಾಕ್ಟ್ ಆಫ್ ಟ್ಯಾಂಕ್ ಇರಿಗೇಷನ್ ಆನ್ ಅಗ್ರೀಕಲ್ಚರ್: ಎ ಕೇಸ್ ಸ್ಟಡೀ ಆಫ್ ಗುಲಬರ್ಗಾ ಡಿಸ್ಟ್ರಿಕ್ಟ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೦.

೧೬. ರಾಜಾ ಎಂ., ಫ್ರೀಡಂ ಫೈಟರ್ಸ್ ಆಫ್ ಗುಲಬರ್ಗಾ ಡಿಸ್ಟ್ರಿಕ್ಟ್, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೬.

೧೭. ವಿಜಯಕುಮಾರ ಹೆಚ್. ಸಾಲಿಮನಿ, ಇರ್‍ಯಾಡಿಕೇಶನ್ ಆಫ್ ಅನ್‌ಟಚ್ಚಬಿಲಿಟಿ ಇನ್ ಪೋಸ್ಟ್ ಇಂಡಿಪೆಂಡೆನ್ಸ್ ಕರ್ನಾಟಕ, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೪.

೧೮. ವೆಂಕಟರಾವ್ ಪಾಲಟಿ, ರೋಲ್ ಆಫ್ ಫ್ರೀಡಂ ಫೈಟರ್ಸ್ ಇನ್ ಬೀದರ್ ಡಿಸ್ಟ್ರಿಕ್ಟ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೨.

೧೯. ವೆಂಕಟೇಶಮೂರ್ತಿ, ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳವಳಿ ಮತ್ತು ಸಾಹಿತ್ಯ, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೦. ಶರಣಬಸವೇಶ್ವರ ವೀರಭದ್ರಪ್ಪ ಡಾಣಿ, ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೧. ಶಿವರಾಮು, ದಲಿತ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಲೋಕ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೪.

೨೨. ಸಂಘ ಸೇನಾವರ್ಧನ್, ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ) ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೩. ಸುಮಿತ್ರಾಬಾಯಿ ಎಸ್. ನಿರ್ಣಿ, ವುಮೆನ್ಸ್ ರೋಲ್ ಇನ್ ಕರ್ನಾಟಕ ಫ್ರೀಡಮ್ ಸ್ಟ್ರಗಲ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೨.

೨೪. ಹುಚ್ಚೂಸಾಬ್ ಪಿ., ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಸಮಾಜೋ-ಆರ್ಥಿಕ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪. ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು

೧. ಜಗನ್ನಾಥ ಸಿಂಧೆ, ಆರ್ಗನೈಸೇಷನ್ಸ್ ಆಫ್ ಸೆಡ್ಯೂಲ್ ಕಾಸ್ಟ್ ಅಂಡ್ ಸೋಷಿಯಲ್ ಚೇನ್ಜ್: ಎ ಶೋಷಿಯಲಾಜಿಕಲ್ ಸ್ಟಡಿ ಆಫ್ ಗುಲಬರ್ಗಾ, ಸಮಾಜಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೨.

೨. ಮಂಜುಳಾ ಬಿ. ಚಿಂಚೋಳಿ, ಡಿಪ್ರೆಸ್ಡ್ ಕ್ಲಾಸಸ್ ಇನ್ ಹೈದರಾಬಾದ್ ಕರ್ನಾಟಕ ಏರಿಯಾ ಅಂಡರ್ ನಿಜಾಂ ಡಾಮಿನಿಯನ್ಸ್, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೧೯೮೯.

೩. ಮೀನಾಕ್ಷಿ ಬಾಳಿ, ಅನುಭಾವಿ ಕವಿ ಕಡಕೋಳ ಮಡಿವಾಳಪ್ಪ ಮತ್ತು ಅವರ ಶಿಷ್ಯರು : ಒಂದು ಅಧ್ಯಯನ, ಕನ್ನಡ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೫.

೫. ಅಪ್ರಕಟಿತ ಎಂ.ಫಿಲ್. ನಿಬಂಧಗಳು

೧. ಆಶಾಬಾಬು ಯಂಕಪ್ಪಗೋಳ, ಬಾಗಲಕೋಟೆ ಜಿಲ್ಲೆಯ ದಲಿತ ಚಳವಳಿ : ಒಂದು ಅವಲೋಕನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨. ಉಮಾದೇವಿ, ದಲಿತ ಚಿಂತನೆಗಳ ವಿಶ್ಲೇಷಣೆ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬-೦೭.

೩. ಗೀತಾ ಅಣ್ಣೆಪ್ಪ, ಕಮ್ಯುನಿಸ್ಟ್ ಮೂವ್‌ಮೆಂಟ್ ಇನ್ ಗುಲಬರ್ಗಾ ಡಿಸ್ಟ್ರಿಕ್ಟ್, ರಾಜ್ಯಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೦.

೪. ಜೋಗಿನಕಟ್ಟಿ ವಿಠಲ, ಹೊಸಪೇಟೆ ತಾಲೂಕಿನ ಬಾಲಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು, ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವವಾದ್ಯಾಲಯ, ಹಂಪಿ, ೨೦೦೮-೦೯.

೫. ದೇಶಮಾನ್ಯ ಜಗ್ರಾತಿ ಬಿ., ಎ ಸ್ಟಡೀ ಆಫ್ ಫಿಮೇಲ್ ಅಗ್ರಿಕಲ್ಚರಲ್ ಲೇಬರರ್ಸ್ ಇನ್ ಗುಲಬರ್ಗಾ ಡಿಸ್ಟ್ರಿಕ್ಟ್, ಅರ್ಥಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೧.

೬. ನಾನಾಗೌಡ ಜಿ. ಮಾಲಿಪಾಟೀಲ್, ಗುಲಬರ್ಗಾ ಜಿಲ್ಲೆಯ ಜನಪದ ವೃತ್ತಿಗಾರರು : ಒಂದು ಅಧ್ಯಯನ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೪-೯೫.

೭. ನಿವೇದಿತಾ ಎಸ್. ಸ್ವಾಮಿ, ಚಿತ್ತಾಪುರ ತಾಲೂಕಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಾದ್ಯಾಲಯ, ಹಂಪಿ, ೨೦೦೭.

೮. ಪ್ರಹ್ಲಾದ್ ರೆಡ್ಡಿ ಬಿ., ಹೈದ್ರಾಬಾದ್ ಕರ್ನಾಟಕ ಜೈನ ಕೇಂದ್ರಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯.

೯. ಬಿರಾದಾರ ಸರೋಜಾ ವಿಶ್ವನಾಥ, ಬೀದರ್ ಜಿಲ್ಲೆಯ ಪುಣ್ಯಕ್ಷೇತ್ರಗಳು, ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನಾ ಕೇಂದ್ರ, ಬೀದರ್, ೨೦೦೯.

೧೦. ಮಹಾಬಲೇಶ್ವರಪ್ಪ ಬಿ.ಸಿ., ಪ್ರೊಫೈಲ್ ಆಫ್ ಚಂದ್ರಶೇಖರ ಪಾಟೀಲ, ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೮.

೧೧. ಮಹೇಶ ಕುಮಾರ್ ಎಸ್. ಸಂಕನೂರು, ಗುಲ್ಬರ್ಗಾ ಎಂ.ಎಸ್.ಕೆ. ಮಿಲ್ : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೨. ರಾಜಶೇಖರ, ಚರಿತ್ರೆ ಲೇಖನಶಾಸ್ತ್ರ : ಗುಲಬರ್ಗಾ ಪ್ರದೇಶದ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯-೧೦.

೧೩. ವಿಜಯಲಕ್ಷ್ಮೀ, ಹಟ್ಟಿ ಚಿನ್ನದ ಗಣಿ : ಚಾರಿತ್ರಿಕ ಹಾಗೂ ಸಮಾಜೋ-ಆರ್ಥಿಕ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೪. ವಿಷ್ಣುವರ್ಧನ ಅರ್ಜುನ್ ಎಂ., ದಿ ರೋಲ್ ಆಫ್ ಡಿಎಸ್‌ಎಸ್ ಇನ್ ಕರ್ನಾಟಕ ಅಂಡರ್ ದಿ ಲೀಡರ್‌ಶಿಪ್ ಆಫ್ ಡಿ.ಜಿ. ಸಾಗರ್, ರಾಜ್ಯಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೭.

೧೫. ಶರಣಪ್ಪ ಉಮಚಗಿ, ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಕೊಪ್ಪಳ ಜಿಲ್ಲೆ ಶಿಬಿರಗಳು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೬. ಶಶಿಕಾಂತ ಅಮಲಪ್ಪ ಬಿಲ್ಲವ, ರಾಯಚೂರು ಪ್ರದೇಶದ ಸಾಮಾಜಿಕ ಚಳವಳಿಗಳು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೭. ಶ್ರೀದೇವಿ ಎಸ್. ಹರ್‌ವಾಲ, ಅಗ್ರೀಕಲ್ಚರಲ್ ಡೆವಲಪ್‌ಮೆಂಟ್ ಇನ್ ಗುಲಬರ್ಗಾ ಡಿಸ್ಟ್ರಿಕ್ಟ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೪.

೧೮. ಸವಿತ ಬಿ.ಸಿ., ರೈತ ಹೋರಾಟಗಾರ ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಚಿಂತನೆಗಳ ವಿಶ್ಲೇಷಣೆ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮-೦೯.

೧೯. ಸುರೇಶಗೌಡ ಹೆಚ್., ವರದಕ್ಷಿಣೆ : ಒಂದು ಅಧ್ಯಯನ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೦. ಸುಭಾಷಚಂದ್ರ ದೊಡ್ಡಮನಿ, ಹೈದರಾಬಾದ್ ವಿಮೋಚನಾ ಹೋರಾಟದಲ್ಲಿ ಕಲಬುರ್ಗಿ ಶಿಬಿರಗಳ ಪಾತ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೨೧. ಹಣಮಂತ್ರಾಯ, ಗುಲಬರ್ಗಾ ಜಿಲ್ಲೆಯ ರೈತ ಚಳವಳಿಗಳು : ಚಾರಿತ್ರಿಕ ಅಧ್ಯಯನ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯-೧೦.

೬. ಲೇಖನಗಳು

೧. ಉಡುಪಿರಾವ್ ತಿಳಿಗೊಳ, ತುಂಗಭದ್ರಾ ಯೋಜನೆ ರೈತರ ಪಾಲಿಗೆ ಅಭದ್ರ, ಹೈದರಾಬಾದ್ ಕರ್ನಾಟಕ ವಿಶೇಷ ಪುರವಣಿ, ಸಂಯುಕ್ತ ಕರ್ನಾಟಕ, ೧೯.೧೧.೨೦೧೧.

೨. ಓಂಕಾರ ಕಾಕಡೆ, ಸ್ತ್ರೀ-ಶಕ್ತಿ-ಸ್ವಸಹಾಯ ಗುಂಪುಗಳು-ಮಹಿಳಾ ಸಬಲೀಕರಣದತ್ತ ದಾಪುಗಾಲು, ಜನಪದ, ಮಾರ್ಚ್ ೨೦೧೦.

೩. ಕಿವುಡನವರ ಜಗದೀಶ, ಅಂಬೇಡ್ಕರ್ ಮತ್ತು ದಲಿತ ಚಳವಳಿ ಸ್ವಾಭಿಮಾನ ಶಿಲ್ಪಸ್ಮರಣ ಸಂಚಿಕೆ, ಬಿ. ಬಸವಲಿಂಗಪ್ಪನವರ ಮೂರ್ತಿ ಪ್ರತಿಷ್ಠಾಪನಾ ಸಮಿತಿ, ಹುಬ್ಬಳ್ಳಿ, ಧಾರವಾಡ, ೨೦೦೨.

೪. ಕುಮಾರಸ್ವಾಮಿ ಬಿ.ಎಂ., ಜನಪರ ಚಳವಳಿಗಳು, ಸುಧಾ, ಯುಗಾದಿ ವಿಶೇಷಾಂಕ, ೨೦೦೬.

೫. ಕೃಷ್ಣಪ್ಪ ಬಿ., ಮಾನವತಾವಾದಿ ಅಂಬೇಡ್ಕರ್, ಅಂಬೇಡ್ಕರ್‌ವಾದ, ಬೆಂಗಳೂರು, ಅಕ್ಟೋಬರ್-೨೦೦೩.

೬. ಕೌಸಲ್ಯ ಆರ್., ಮಹಿಳಾ ಸಶಕ್ತೀಕರಣಕ್ಕಾಗಿ ದಿಟ್ಟಹೆಜ್ಜೆ-ಸ್ತ್ರೀಶಕ್ತಿ, ಮಹಿಳಾ ವಿಜಯ, ಫೆಬ್ರವರಿ ೨೦೧೦.

೭. ಗಾಣದಾಳು ಶ್ರೀಕಂಠ, ಬಜೆಟ್ ೨೦೧೦-೨೦೧೧, ಕೃಷಿಗೆಷ್ಟು ಪಾಲು, ಯೋಜನಾ, ಮಾರ್ಚ್ ೨೦೧೦.

೮. ಚಂದ್ರಶೇಖರ ಟಿ.ಆರ್., ಪ್ರಾದೇಶಿಕ ಅಸಮಾನತೆ ಮತ್ತು ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿ, ಹೊಸತು, ಡಿಸೆಂಬರ್ ೨೦೦೮.

೯. ಚಂದ್ರಶೇಖರ ಟಿ.ಆರ್., ಅಲಕ್ಷಿತರ ಪದತನದಿಂದ ಅಭಿವೃದ್ಧಿ ಆರಂಭ : ಸಂವಾದ, ಸಂಪುಟ-೨, ಸಂಚಿಕೆ-೩, ಜನವರಿ-೨೦೦೪.

೧೦. ಚಂದ್ರಶೇಖರ ಪಾಟೀಲ, ಮತಾಂತರ ಮತ್ತು ಮೇರಾ ಭಾರತ್ ಮಹಾನ್, ಸಂಕ್ರಮಣ, ಸಂಪುಟ-೩೪, ಸಂಚಿಕೆ-೬, ೧೯೯೯.

೧೧. ಚಿನ್ನಸ್ವಾಮಿ ಸೋಸಲೆ ಎನ್., ದಲಿತರ ಮೇಲೆ ದೌರ್ಜನ್ಯ: ಒಂದು ಚಿಂತನೆ, ಸಂಕ್ರಮಣ-೩೫೧, ೨೦೦೩.

೧೨. ಚಿನ್ನಸ್ವಾಮಿ ಸೋಸಲೆ ಎನ್., ಪ್ರಸ್ತುತ ದಲಿತರ ಸಮಸ್ಯೆಗೆ ಇವರೆಷ್ಟು ಪ್ರಸ್ತುತ, ಚರಿತ್ರೆ ಅಧ್ಯಯನ, ಸಂಪುಟ-೪, ಸಂಚಿಕೆ-೨, ೨೦೦೯.

೧೩. ಚಿನ್ನಸ್ವಾಮಿ ಸೋಸಲೆ ಎನ್., ದಲಿತ ಸಂಸ್ಕೃತಿ : ಚಾರಿತ್ರಿಕ ವಿಶ್ಲೇಷಣೆ, ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೪. ಜಯತೀರ್ಥ ಕಾಗಲಕರ, ಸಪ್ತನದಿಗಳ ನಾಡಲ್ಲಿ ಬರಗಾಲದ ಕರಿನೆರಳು ಯಾಕೆ, ಹೈದರಾಬಾದ್ ಕರ್ನಾಟಕ ವಿಶೇಷ ಪುರವಣಿ, ಸಂಯುಕ್ತ ಕರ್ನಾಟಕ, ೨೫.೦೫.೨೦೦೨.

೧೫. ಜಯಪ್ರಕಾಶ ಮಾವಿನಕುಳಿ, ಮಹಿಳಾ ಮೀಸಲಾತಿ ಮಸೂದೆ; ವಾದ-ವಿವಾದ, ಹೊಸತು, ಸೆಪ್ಟೆಂಬರ್ ೨೦೦೯.

೧೬. ದಾಸನೂರು ಕೂಸಣ್ಣ, ದಲಿತರಲ್ಲಿ ಎಡ-ಬಲ ಮೈತ್ರಿ ಪ್ರಾಮಾಣಿಕವಾದದ್ದೆ, ಸಂವಾದ, ಮೇ ೨೦೧೦.

೧೭. ದಿವಾಕರ ನಾ., ದಲಿತ ಚಳವಳಿ : ಐಕ್ಯತೆಯ ಸವಾಲುಗಳು, ಸಂವಾದ, ಜೂನ್ ೨೦೧೦.

೧೮. ದೇವನೂರು ಮಹಾದೇವ, ಕಾಲಕ್ಕೆ ತಕ್ಕಂತೆ ಹೊಸ ನಡಿಗೆ ನುಡಿಗಟ್ಟು ಬೇಕು, ಸುಧಾ - ಯುಗಾದಿ ವಿಶೇಷಾಂಕ, ೨೦೦೬.

೧೯. ಧನವಂತ ಹಾಜವಗೋಳ, ಕರ್ನಾಟಕದ ಸಾಮಾಜಿಕ ಸ್ಥಿತ್ಯಂತರಗಳು, ಹೊಸತು, ನವೆಂಬರ್ ೨೦೦೯.

೨೦. ನಟೇಶಬಾಬು ಹ.ಚ, ಚಳವಳಿಗೆ ನೆಟ್ ಸಾಥ್, ವಿಜಯ ಕರ್ನಾಟಕ, ಬೋಧಿವೃಕ್ಷ ವಿಶೇಷ ಸಂಚಿಕೆ, ೧೮.೦೯.೨೦೧೧.

೨೧. ನಾಡಕರ್ಣಿ, ಎಂ.ಬಿ., ಜಾತಿ ಪದ್ಧತಿಯ ಹಿಂದೂ ಧರ್ಮದ ಸ್ವಭಾವ, ಜನ್ಯ ಭಾಗವೇ, ಹೊಸತು, ಜನವರಿ ೨೦೦೪.

೨೨. ಬಾಲಗೋಪಾಲ್ ಕೆ.(ಮೂಲ), ಡೊಮಿನಿಕ್(ಅನು), ಒಳಮೀಸಲಾತಿ : ದಲಿತರಿಂದ ದಲಿತರಿಗೆ ನ್ಯಾಯ, ಸಂವಾದ, ಏಪ್ರಿಲ್ ೨೦೦೮.

೨೩. ಮಲ್ಲಿಕಾರ್ಜುನ ಕಂಬಾರ, ಶ್ರಮಿಕರು ಜಗತ್ತಿನ ಇತಿಹಾಸವನ್ನೇ ಬದಲಿಸಬಲ್ಲರು, ಹೊಸತು, ಜುಲೈ ೨೦೧೦.

೨೪. ಮಹೇಶಕುಮಾರ ಎಂ. ಜೋಶಿ, ಹೈದರಾಬಾದ ಕರ್ನಾಟಕ ಪ್ರತ್ಯೇಕ ರಾಜ್ಯ ಎಷ್ಟು ಸಮಂಜಸ, ಹೈದರಾಬಾದ ಕರ್ನಾಟಕ ವಿಶೇಷ ಪುರವಣಿ, ಸಂಯುಕ್ತ ಕರ್ನಾಟಕ, ೩೧.೦೧.೨೦೦೧.

೨೫. ಮೀರಾ ಚಕ್ರವರ್ತಿ, ಮಹಿಳಾ ಚಳವಳಿಯು ತನ್ನ ಮಿತಿಗಳಿಂದ ಮುಕ್ತವಲ್ಲ, ಸುಧಾ, ಯುಗಾದಿ ವಿಶೇಷಾಂಕ, ೨೦೦೬.

೨೬. ಮೂಡ್ನಾಕೂಡು ಚಿನ್ನಸ್ವಾಮಿ, ಬುದ್ಧನೆಡೆಗೆ ಮರಳಿ ಮನೆಗೆ, ಸುಧಾ, ಬೆಂಗಳೂರು, ಡಿಸೆಂಬರ್, ೨೦೦೬.

೨೭. ಮೂಡ್ನಾಕೂಡು ಚಿನ್ನಸ್ವಾಮಿ, ಬೌದ್ಧಧರ್ಮ ಮತ್ತು ಅದರ ಪ್ರಸ್ತುತತೆ, ಹೊಸತು, ಸಂಪುಟ-೭, ಸಂಚಿಕೆ ೧೦, ೨೦೦೬.

೨೮. ಯತಿರಾಜ ಸಿ., ರೈತರ ಸಾಲ ಮನ್ನಾದ ಸುತ್ತಮುತ್ತ, ಹೊಸತು, ಮೇ ೨೦೦೮.

೨೯. ಯಮುನಾ ಎ. ಕೋಣೇಸರ, ರೈತ ಮಹಿಳೆಯ ಮುಂದಿರುವ ಸವಾಲುಗಳು, ಯೋಜನಾ, ಮಾರ್ಚ್ ೨೦೧೦.

೩೦. ರವೀಂದ್ರನಾಥ ಶಾನುಭಾಗ, ಚಳವಳಿಗಳು ಕಾವು ಹೆಚ್ಚಿಸಿಕೊಂಡಿವೆ, ಸುಧಾ, ಯುಗಾದಿ ವಿಶೇಷಾಂಕ, ೨೦೦೬.

೩೧. ರಹಮತ್ ತರೀಕೆರೆ, ನಮ್ಮ ರಾಜಕೀಯ ಸಂಸ್ಕೃತಿ ಮತ್ತು ಮಹಿಳೆಯರು, ಸಂವಾದ, ಜೂನ್ ೨೦೦೮.

೩೨. ವೆಂಕಟೇಶ್ ಹೆಚ್.ಕೆ., ಸಾಮಾಜಿಕ ಚಿಂತನೆ : ಲೋಹಿಯಾ, ಅಂಬೇಡ್ಕರ್ ಮತ್ತು ಗಾಂಧಿ, ಸಂವಾದ, ಜುಲೈ ೨೦೦೭.

೩೩. ಶಿವರುದ್ರಪ್ಪ ಜಿ.ಎಸ್., ದಲಿತ ಚಳವಳಿ : ಉರಿಯುವ ನೆನಪುಗಳ ಚರಿತ್ರೆ, ಸಂವಾದ, ಜೂನ್ ೨೦೦೯.

೩೪. ಶಿವಾನಂದ ಟಿ.ವಿ., ಗೌವರ್ನಮೆಂಟ್ ಸ್ಕೂಲ್ಸ್ ಲ್ಯಾಕ್ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್, ದಿ ಹಿಂದು, ೦೨.೧೧.೨೦೦೮.

೩೫. ಶಿವಾನಂದ ಎಸ್., ವರ್ಣವ್ಯವಸ್ಥೆಯ ಕರಾಳ ಮುಖಗಳು ಸಂಕ್ರಮಣ, ಸಾಹಿತ್ಯ ಸಂಪುಟ-೩, ಸಂಕ್ರಮಣ ಪ್ರಕಾಶನ, ಧಾರವಾಡ, ೧೯೭೬.

೩೬. ಸಣ್ಣರಾಮ, ಜಾಗತೀಕರಣ ಜಾಲ : ರೈತರ ಆತ್ಮಹತ್ಯೆ ಮತ್ತು ಹಣದುಬ್ಬರ, ಸಂವಾದ, ಜನವರಿ, ೨೦೦೯.

೩೭. ಸದಾಶಿವ ಮರ್ಜಿ, ದಲಿತರ ಮೇಲೆ ದೌರ್ಜನ್ಯ ಒಂದು ಸಮೀಕ್ಷೆ, ಸಂಕ್ರಮಣ, ಸಂಪುಟ-೨೪, ಸಂಚಿಕೆ-೨, ಫೆಬ್ರವರಿ ೧೯೯೮.

೩೮. ಸಂತೋಷ ಕುಮಾರ್ ಹೆಚ್.ಬಿ., ಹೈದರಾಬಾದ್ ಕರ್ನಾಟಕದ ಸಾಮಾಜಿಕ ಚಳವಳಿಗಳು: ತಾತ್ವಿಕ ನೋಟ, ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೯. ಸಂತೋಷ ಕುಮಾರ್ ಹೆಚ್.ಬಿ., ಹೈದರಾಬಾದ್ ಕರ್ನಾಟಕ ಮತ್ತು ಸಂವಿಧಾನದ ೩೭೧ನೇ ವಿಧಿ: ತಾತ್ವಿಕ ಅಧ್ಯಯನ, ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೪೦. ಸಂತೋಷ ಕುಮಾರ್ ಹೆಚ್.ಬಿ., ಹೈದರಾಬಾದ್ ಕರ್ನಾಟಕ ಮತ್ತು ಡಾ. ಡಿ.ಎಂ. ನಂಜುಂಡಪ್ಪ ವರದಿ, ಇತಿಹಾಸ ದರ್ಪಣ, ಸಂಪುಟ-೨, ಸಂಚಿಕೆ-೨, ಬೆಂಗಳೂರು, ೨೦೧೦.

೪೧. ಸೀತಾರಾಂ ಇ.ಆರ್., ಪಂಡಿತ್ ತಾರಾನಾಥ ಎ ರೆವಲ್ಯೂಷನರಿ ಎ ರಿಫಾರ್ಮರ್, ಇಂಡಿಯನ್ ಎಕ್ಸ್‌ಪ್ರೆಸ್, ೨೯.೦೬.೧೯೯೧.

೪೨. ಸಿದ್ಧಲಿಂಗಸ್ವಾಮಿ, ಕರ್ನಾಟಕದ ಶ್ರಮಜೀವಿ ವರ್ಗದ ಉಗಮ ಹಾಗೂ ವಿಕಾಸ, ಹೊಸತು, ಜನವರಿ ೨೦೧೦.

೭. ವರದಿಗಳು

೧. ರಾಜ್ಯಪತ್ರಗಾರ ದಾಖಲೆಗಳು, ಹೈದರಾಬಾದ್.

೨. ದಾಖಲೆಗಳು, ಐ.ಸಿ.ಹೆಚ್.ಆರ್. ಶಾಖೆ, ಬೆಂಗಳೂರು.

೩. ವರದಿಗಳು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಗುಲಬರ್ಗಾ.

೪. ವರದಿಗಳು, ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀ, ಗುಲಬರ್ಗಾ.

೫. ಹಾವನೂರು ಎಲ್.ಜಿ., ಕರ್ನಾಟಕ ಬ್ಯಾಕ್ ವರ್ಡ್ ಕ್ಲಾಸಸ್ ಕಮೀಶನ್ ರಿಪೋರ್ಟ್, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೭೫.

೬. ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿ, ಸರಕಾರಿ ಮುದ್ರಣಾಲಯ, ಬೆಂಗಳೂರು, ೨೦೦೨-೨೦೦೩.

೭. ವರದಿಗಳು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಪನ್ಮೂಲ ಕೇಂದ್ರ, ಗುಲಬರ್ಗಾ.

೮. ಜಿಲ್ಲಾ ರೈತ ಸಮಾವೇಶದ ನಿರ್ಣಯಗಳು, ಬಳ್ಳಾರಿ, ಅಕ್ಟೋಬರ್ ೧೯೭೭.

೯. ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳು, ೧೯೯೯-೨೦೦೦, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.

೧೦. ಜಿಲ್ಲಾ ಕಮುನಿಸ್ಟ್ ಪಕ್ಷದ ಸಮಾವೇಶದ ವರದಿಗಳು, ಹಗರಿಬೊಮ್ಮನಹಳ್ಳಿ, ೨೦೧೧.

೧೧. ನಿರ್ಣಯಗಳು, ದೇವದಾಸಿಯರ ರಾಜ್ಯ ಸಮ್ಮೇಳನ, ಬಳ್ಳಾರಿ.


೮. ನಿಯತಕಾಲಿಕೆಗಳು

೧. ಅರಿವು ಬರಹ
೨. ಕನ್ನಡ ನಡಿ
೩. ಜನಪದ
೪. ರುಜುವಾತು
೫. ಸಂವಾದ
೬. ಸಂಕ್ರಮಣ
೭. ಹೊಸತು
೮. ಯೋಜನಾ
೯. ಸಂಯುಕ್ತ ಕರ್ನಾಟಕ, ದಿನಪತ್ರಿಕೆ
೧೦. ಪ್ರಜಾವಾಣಿ, ದಿನಪತ್ರಿಕೆ
೧೧. ಕನ್ನಡ ಪ್ರಭ, ದಿನಪತ್ರಿಕೆ
೧೨. ವಿಜಯ ಕರ್ನಾಟಕ, ದಿನಪತ್ರಿಕೆ
೧೩. ದಿ ಹಿಂದು, ದಿನಪತ್ರಿಕೆ
೧೪. ಡೆಕ್ಕನ್ ಹೆರಾಲ್ಡ್, ದಿನಪತ್ರಿಕೆ

❑❑❑

ಭೂಪಟಗಳು


ಬ್ರಿಟಿಷ್ ಕರ್ನಾಟಕ ಮತ್ತು ಸಂಸ್ಥಾನಗಳು



ಕೃಪೆ : ಗೋಪಾಲರಾವ್ ಹೆಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪುಟ ೪೦೨.



ನಿಜಾಮರ ಕಾಲದ ಹೈದರಾಬಾದ್ ಕರ್ನಾಟಕ



ಕೃಪೆ : ಅಮರೇಶ ನುಗಡೋಣಿ, ಹೈದರಾಬಾದು ಕರ್ನಾಟಕ ಹಾಡು ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩



ಕ್ರಿ.ಶ. ೧೮೨೬ರಲ್ಲಿ ಸೂಚಿತವಾದ ಏಕೀಕೃತ ಕರ್ನಾಟಕ


(ಸರ್ ಥಾಮಸ್ ಮನ್ರೋ ಉದ್ದೇಶಿಸಿದ್ದುದು)



ಕೃಪೆ : ಗೋಪಾಲರಾವ್ ಹೆಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪುಟ ೪೦೪.



ಕರ್ನಾಟಕ ರಾಜ್ಯದ ಜಿಲ್ಲೆಗಳು



ಕೃಪೆ : ಡಬ್ಲ್ಯೂಡಬ್ಲ್ಯೂಡಬ್ಲ್ಯೂ. ಮ್ಯಾಪ್ ಆಫ್ ಇಂಡಿಯಾ.ಕಾಮ್



ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು



ಕೃಪೆ : ಡಬ್ಲ್ಯೂಡಬ್ಲ್ಯೂಡಬ್ಲ್ಯೂ. ಮ್ಯಾಫ್ ಆಫ್ ಇಂಡಿಯಾ.ಕಾಮ್



ಛಾಯಾಚಿತ್ರಗಳು



ಬೆಳೆ ವಿಮೆ ಬಿಡುಗಡೆಗೆ ಒತ್ತಾಯಿಸಿ, ರೈತ ಹೋರಾಟ ಸಮಿತಿಯಿಂದ
ಗುಲಬರ್ಗಾದಲ್ಲಿ ಧರಣಿ (ದಿನಾಂಕ : ೩೧.೦೧.೨೦೦೮)



ಭೂ ಸ್ವಾಧೀನ ವಿರೋಧಿಸಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷ
ಚಾಮರಸ ಮಾಲಿಪಾಟೀಲರ ನೇತೃತ್ವದಲ್ಲಿ ಪ್ರತಿಭಟನೆ (ದಿನಾಂಕ : ೦೯.೦೬.೨೦೧೦)



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಗುಲಬರ್ಗಾದ
ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ರೈತರ ಚಳವಳಿ



ಕೃಷಿಗೆ ೧೨ ಗಂಟೆಗಳ ವಿದ್ಯುತ್‌ಗಾಗಿ ಹಾಗೂ ತೊಗರಿ ಬೋರ್ಡ್
ರಚನೆಗಾಗಿ ಗುಲಬರ್ಗಾದಲ್ಲಿ ನಡೆದ ಸಮಾವೇಶ



ಗುಲಬರ್ಗಾದಲ್ಲಿ ತೊಗರಿ ಬೆಳೆಗಾರರ ಬೋರ್ಡ್ ರಚನೆಗೆ
ಆಗ್ರಹಿಸಿ ರೈತರ ಸತ್ಯಾಗ್ರಹ ಚಳವಳಿ (ದಿನಾಂಕ : ೧೮.೧೨.೧೯೯೫)



ಕಬ್ಬಿನ ಬೆಲೆ ಕುಸಿತ ವಿರೋಧಿಸಿ ಗುಲಬರ್ಗಾದಲ್ಲಿ
ಕಬ್ಬಿನ ಬೆಳೆಗೆ ಬೆಂಕಿ ಹಚ್ಚುತ್ತಿರುವ ರೈತರು (ದಿನಾಂಕ : ೩೧.೦೧.೨೦೦೮)



ಭತ್ತಕ್ಕೆ ವೈಜ್ಞಾನಿಕ ಬೆಂಬಲ ನೀಡುವಂತೆ ಒತ್ತಾಯಿಸಿ
ಸಿರುಗುಪ್ಪದಲ್ಲಿ ನಡೆದ ಪ್ರತಿಭಟನಾ ರ್ಯಾಲಿ (ಚಿತ್ರ ೧) (ದಿನಾಂಕ : ೨೮.೧೦.೨೦೧೦)



ಭತ್ತಕ್ಕೆ ವೈಜ್ಞಾನಿಕ ಬೆಂಬಲ ನೀಡುವಂತೆ ಒತ್ತಾಯಿಸಿ
ಸಿರುಗುಪ್ಪದಲ್ಲಿ ನಡೆದ ಪ್ರತಿಭಟನಾ ರ್ಯಾಲಿ (ಚಿತ್ರ ೨) (ದಿನಾಂಕ : ೨೮.೧೦.೨೦೧೦)



ವಿವಿಧ ಬೇಡಿಕೆಗೆ ಆಗ್ರಹಿಸಿ ಜೇವರ್ಗಿಯಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ
ಎತ್ತಿನಬಂಡಿಗಳೊಂದಿಗೆ ರೈತರು (ದಿನಾಂಕ : ೦೭.೦೧.೨೦೦೪)



ನೇಗಿಲಿಗೆ ತಾನೇ ಹೆಗಲು ಕೊಟ್ಟಿರುವ
ಕೊಪ್ಪಳ ಸಮೀಪದ ಕುಕ್ಕನೂರು ಬಡ ರೈತ



ತುಂಗಭದ್ರ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲು ಒತ್ತಾಯಿಸಿ ಮಾನ್ವಿ ಹಾಗೂ ರಾಯಚೂರು ತಾಲೂಕುಗಳ ರೈತರ ಧರಣಿ ಹಾಗೂ ಆತ್ಮಹತ್ಯೆ ಯತ್ನ



ಬೆಳೆ ನಷ್ಟ ಮತ್ತು ಬ್ಯಾಂಕ್ ಸಾಲದಿಂದಾಗಿ ನೊಂದ ಅಂಕಲಗಿ ಗ್ರಾಮದ ರೈತ ಶಿವಲಿಂಗಪ್ಪ ನೇಣು ಹಾಕಿಕೊಂಡಿರುವ ದೃಶ್ಯ




ಸಮರ್ಪಕ ಗೊಬ್ಬರ ಪೂರೈಕೆಗೆ ಒತ್ತಾಯಿಸಿ
ಹೂವಿನಹಡಗಲಿಯಲ್ಲಿ ರೈತರು ನಡೆಸಿದ ಪ್ರತಿಭಟನೆ



ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಕೃಷಿ ಭೂಮಿ ವಶಪಡಿಸಿಕೊಳ್ಳುವುದನ್ನು ವಿರೋಧಿಸಿದ ರೈತರ
ಮೇಲೆ ಲಾಠಿ ಪ್ರಹಾರ ಬಂಧನ ಹಾಗೂ ಗಾಳಿಯಲ್ಲಿ ಗುಂಡು (ದಿನಾಂಕ : ೧೫.೦೨.೨೦೦೯)




ಸಮರ್ಪಕ ಗೊಬ್ಬರ ಪೂರೈಕೆಗೆ ಒತ್ತಾಯಿಸಿ
ಹೂವಿನಹಡಗಲಿಯಲ್ಲಿ ರೈತರು ನಡೆಸಿದ ಪ್ರತಿಭಟನೆ




ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಭೂ ಸ್ವಾಧೀನ ವಿರೋಧಿಸಿ
ರೈತರಿಂದ ಚಳ್ಳಗುರ್ಕಿ ಮತ್ತು ಬಳ್ಳಾರಿಯಲ್ಲಿ ಉರುಳುಸೇವೆ



ಭೂಮಿ ಉಳುವಿಗಾಗಿ ಕುರುಗೋಡಿನಲ್ಲಿ ನಡೆದ ರೈತರ ಜಾಗೃತಿ ಜಾಥಾ



ಮಲ್ಲಾಬಾದ ಏತ ನೀರಾವರಿ ಸಂಬಂಧ ರೈತರನ್ನು ಉದ್ದೇಶಿಸಿ
ಮಾತನಾಡುತ್ತಿರುವ ಶ್ರೀ ಕೇದಾರಲಿಂಗಯ್ಯ ಹಿರೇಮಠರವರು



ರಾಜ್ಯದ ಹೆಚ್ಚುವರಿ ಭೂಮಿಯನ್ನು ದಲಿತರಿಗೆ ಹಂಚುವಂತೆ ಒತ್ತಾಯಿಸಿ
ಬಳ್ಳಾರಿಯಲ್ಲಿ ದಲಿತರ ಪ್ರತಿಭಟನಾ ಧರಣಿ



ಚಿಂಚೋಳಿಯ ದಲಿತ ಜಾಗೃತಿ ಮಹಾ ಸಮಾವೇಶದಲ್ಲಿ
ಕ್ರಾಂತಿ ಗೀತೆ ಹಾಡುತ್ತಿರುವ ಕ್ರಾಂತಿಕಾರಿ ಕವಿ ಗದ್ದರ್



ನ್ಯಾಯವಾದಿ ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಮಾದಿಗ-ಚಲುವಾದಿ
ಹೋರಾಟ ಸಮಿತಿಯಿಂದ ಬಳ್ಳಾರಿಯಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ (ದಿನಾಂಕ : ೨೭.೦೮.೨೦೧೨)



ನ್ಯಾಯವಾದಿ ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಮಾದಿಗ-ಚಲುವಾದಿ
ಹೋರಾಟ ಸಮಿತಿಯಿಂದ ಬಳ್ಳಾರಿಯಲ್ಲಿ ನಡೆದ ಪ್ರತಿಭಟನೆ (ದಿನಾಂಕ : ೨೭.೦೮.೨೦೧೨)



ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ, ಗುಲಬರ್ಗಾದಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿದ್ದ ರೈತ ಮಹಿಳೆಯರು (ದಿನಾಂಕ : ೦೪.೧೨.೨೦೦೭)



ಭೂಸ್ವಾಧೀನ ಕಾಯ್ದೆ ತಿದ್ದುಪಡಿ ವಿರೋಧಿಸಿ ಗುಲಬರ್ಗಾದಲ್ಲಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಮಾತನಾಡುತ್ತಿರುವ ಶ್ರೀ ಮಾರುತಿ ಮಾನ್ಪಡೆ (ದಿನಾಂಕ : ೩೦.೦೬.೨೦೦೯)




ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಸಿರುಗುಪ್ಪದಲ್ಲಿ ಸಿಪಿಐ(ಎಂ)
ಕಾರ್ಯಕರ್ತರ ಪ್ರತಿಭಟನಾ ಮೆರವಣಿಗೆ (ದಿನಾಂಕ : ೦೭.೦೩.೨೦೧೨)




ಸಿಐಟಿಯು ಕಾರ್ಯಕರ್ತರು ಕಾರ್ಮಿಕರ ಅಗತ್ಯ ಮೂಲ ಸೌಲಭ್ಯಕ್ಕೆ ಆಗ್ರಹಿಸಿ,
ರಾಯಚೂರಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ (ದಿನಾಂಕ : ೦೧.೦೫.೨೦೧೨)



ಭೂ ಕಬಳಿಕೆ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಲು ಒತ್ತಾಯಿಸಿ
ನಾನಾ ಸಂಘಟನೆಗಳಿಂದ ಸಿಂಧನೂರಿನಲ್ಲಿ ಧರಣೆ (ದಿನಾಂಕ : ೦೫.೦೧.೨೦೧೨)



ಗುಲಬರ್ಗಾ ಪೌರ ಕಾರ್ಮಿಕರ ವೇತನ ಸಮಸ್ಯೆ ಸಂಬಂಧ
ಎಸ್.ಕೆ. ಕಾಂತಾ ಕೈಗೊಂಡಿದ್ದ ಉಪವಾಸ ಸತ್ಯಾಗ್ರಹ




ರೈತರ ಹೋರಾಟದಲ್ಲಿ ಭಾಗವಹಿಸಿದ ಕೆ. ನೀಲಾ ಮತ್ತು
ಗೌರಮ್ಮ ಪಿ. ಪಾಟೀಲ್ (ದಿನಾಂಕ : ೧೪.೦೬.೨೦೦೨)



ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ, ರಸ್ತೆ ತಡೆ ಚಳವಳಿಯಲ್ಲಿ ಭಾಗವಹಿಸಿದ
ರೈತ ಮಹಿಳೆಯರು (ಗುಲಬರ್ಗಾ ದಿನಾಂಕ : ೧೨.೦೪.೨೦೦೬)




ದೇವದಾಸಿ ಪುನರ್‌ವಸತಿ ಯೋಜನೆ ಸ್ವಯಂ ಸೇವಕಿಯರಿಗೆ ಹೆಚ್ಚಿನ ಗೌರವ ಧನ,
ಭದ್ರತೆ ಮುಂತಾದ ಸೌಲಭ್ಯಗಳಿಗಾಗಿ ಬಳ್ಳಾರಿಯಲ್ಲಿ ನಡೆದ ಪ್ರತಿಭಟನೆ




ದೇವದಾಸಿಯರ ಮಕ್ಕಳಿಗೆ ವಿವಿಧ ಸೌಲಭ್ಯಗಳಿಗೆ ಒತ್ತಾಯಿಸಿ
ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ದೇವದಾಸಿಯರ ಸಮಾವೇಶ



ಬಳ್ಳಾರಿಯಲ್ಲಿ ಕಾರ್ಮಿಕರ ದಿನಾಚರಣೆ ಅಂಗವಾಗಿ
ಆಶಾ ಕಾರ್ಯಕರ್ತೆಯರು ಹಮ್ಮಿಕೊಂಡಿದ್ದ ಬಹಿರಂಗ ಸಭೆ




ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಲಿತ ವಿಮೋಚನೆಯ
ಮಾನವ ಹಕ್ಕುಗಳ ವೇದಿಕೆಯ ಸದಸ್ಯರಿಂದ ಹೊಸಪೇಟೆಯಲ್ಲಿ ಧರಣಿ



1.ರಾಯಚೂರಿನ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಪ್ರತಿಭಟನಾ ಮೆರವಣಿಗೆ ಮುಖ್ಯ ರಸ್ತೆಯಲ್ಲಿ ಸಾಗಿ ಜಿಲ್ಲಾಧಿಕಾರಿ ಕಚೇರಿ ತಲುಪಿತು. 2. ಮುಖಂಡರು ಸಲ್ಲಿಸಿದ ಮನವಿಪತ್ರ ರಾಯಚೂರು ಹೆಚ್ಚುವರಿ ಜಿಲ್ಲಾಧಿಕಾರಿ ಶನಿವಾರ ಸ್ವೀಕರಿಸಿದರು.

ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿಗೆ ಆಗ್ರಹಿಸಿ ರಾಯಚೂರಿನಲ್ಲಿ ಸಂಘಟನೆಗಳಿಂದ, ಮುಖಂಡರಿಂದ, ವಿದ್ಯಾರ್ಥಿಗಳಿಂದ ನಡೆದ ಪ್ರತಿಭಟನೆ (ಚಿತ್ರ ೧)



ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿಗೆ ಆಗ್ರಹಿಸಿ ರಾಯಚೂರಿನಲ್ಲಿ ಸಂಘಟನೆಗಳಿಂದ, ಮುಖಂಡರಿಂದ, ವಿದ್ಯಾರ್ಥಿಗಳಿಂದ ನಡೆದ ಪ್ರತಿಭಟನೆ (ಚಿತ್ರ ೨)



‘ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ’ಯ ಅಧ್ಯಕ್ಷರು ಹಾಗೂ
ಮಾಜಿ ಸಚಿವರಾದ ಶ್ರೀ ವೈಜನಾಥ ಪಾಟೀಲ, ಗುಲಬರ್ಗಾ ಇವರ ಸಂದರ್ಶನ



‘ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ’ದ ಅಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ
ಶ್ರೀ ಬಸವರಾಜ ಪಾಟೀಲ, ಸೇಡಂ (ಸೇಡಂ) ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕ ಭಾಗದ ಕಾರ್ಮಿಕ ಮುಖಂಡರು ಹಾಗೂ
ಮಾಜಿ ಸಚಿವರಾದ ಶ್ರೀ ಎಸ್.ಕೆ. ಕಾಂತಾ, ಗುಲಬರ್ಗಾ ಇವರ ಸಂದರ್ಶನ



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯಾಧ್ಯಕ್ಷರಾದ
ಶ್ರೀ ಮಾರುತಿ ಮಾನ್ಪಡೆ, ಗುಲಬರ್ಗಾ ಇವರ ಸಂದರ್ಶನ




'ಹೈದರಾಬಾದ್ ಕರ್ನಾಟಕ ಜನಪರ ಸಂಘರ್ಷ ಸಮಿತಿ (ರಿ)', ಕಾರ್ಯದರ್ಶಿಗಳಾಗಿರುವ ಶ್ರೀ ಲಕ್ಷ್ಮಣ ದಸ್ತಿ, ಗುಲಬರ್ಗಾ ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕ ಭಾಗದ ದಲಿತ ನಾಯಕರು ಹಾಗೂ 'ದಲಿತ ಸಂಘರ್ಷ ಸಮಿತಿಯ, ರಾಜ್ಯ ಸಂಚಾಲಕರು' ಆಗಿರುವ ಶ್ರೀ ಡಿ.ಜಿ. ಸಾಗರ್, ಗುಲಬರ್ಗಾ ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕ ಭಾಗದ ಖ್ಯಾತಿ ಸಾಹಿತಿಗಳಾದ
ಡಾ. ಕುಂ. ವೀರಭದ್ರಪ್ಪ, ಕೊಟ್ಟೂರು ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕದ ಜನಪರ ಸಾಮಾಜಿಕ ಹೋರಾಟಗಾರರು ಹಾಗೂ
ನಿವೃತ್ತ ಪ್ರಾಚಾರ್ಯರಾದ ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ ಇವರ ಸಂದರ್ಶನ




ಹೈದರಾಬಾದ್ ಕರ್ನಾಟಕದ ರೈತಪರ ಹೋರಾಟಗಾರರು ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ
ಉಪಾಧ್ಯಕ್ಷರಾದ ಶ್ರೀ ಜೆ.ಎಂ. ವೀರಸಂಗಯ್ಯ, ಹಗರಿಬೊಮ್ಮನಹಳ್ಳಿ ಇವರ ಸಂದರ್ಶನ



'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ' ರಾಜ್ಯ ಉಪಾಧ್ಯಕ್ಷೆಯಾಗಿರುವ
ಶ್ರೀಮತಿ ಕೆ. ನೀಲಾ, ಗುಲಬರ್ಗಾ ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕದ ಖ್ಯಾತ ಮಹಿಳಾ ಹೋರಾಟಗಾರರಾಗಿರುವ
ಡಾ. ಮೀನಾಕ್ಷಿ ಬಾಳಿ, ಗುಲಬರ್ಗಾ ಇವರ ಸಂದರ್ಶನ



ಹೈದರಾಬಾದ್ ಕರ್ನಾಟಕದ ಮಹಿಳಾ ಮತ್ತು ಪ್ರಗತಿಪರ ಚಿಂತಕರಾಗಿರುವ
ಡಾ. ಮಲ್ಲಿಕಾ ಘಂಟಿ, ಸಂಡೂರು-ನಂದಿಹಳ್ಳಿ ಇವರ ಸಂದರ್ಶನ



ಪೂಜ್ಯ ಶ್ರೀ ಡಾ. ಶರಣಬಸವಪ್ಪ ಅಪ್ಪ ಮಹಾದಾಸೋಹ ಪೀಠಾಧಿಪತಿಗಳು,
ಶ್ರೀ ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ ಇವರ ಸಂದರ್ಶನ



ಗುಲಬರ್ಗಾ ಬೌದ್ಧ ವಿಹಾರದ 'ಬೌದ್ಧ ಗುರುಗಳಾದ
ಆಂಧ್ರ - ವಿನಾಲಿಯೋ' ಇವರ ಸಂದರ್ಶನ



ಗುಲಬರ್ಗಾ ನಗರದ ಹೊರವಲಯದಲ್ಲಿ ನಿರ್ಮಾಣಗೊಂಡಿರುವ
'ಬೌದ್ಧ ವಿಹಾರ'ದ ವಿಹಂಗಮ ನೋಟ



'ಸೇಕ್ರೆಡ್ ಹಾರ್ಟ್ ಚರ್ಚ್'ನ ಫಾದರ್ ಶ್ರೀ ಆಂತೋಣಿ ಫರ್ನಾಂಡೀಸ್,
ಹೊಸಪೇಟೆ ಇವರ ಸಂದರ್ಶನ